# ರಾಮಕಥಾರಸ ವಾಹಿನಿ


ತೆಲುಗು ಮೂಲ

**ಭಗವಾನ್ ಶ್ರೀ ಸತ್ಯಸಾಯಿ ಬಾಬಾ**

ಕನ್ನಡ ಅನುವಾದ

**ಹೆಚ್. ಎಂ. ಶಿವರಾಂ**



**ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ (ರಿ)**
'ಸುಧಾಮ ಹೌಸ್', ಚಿಕ್ಕಪೇಟೆ, ಬೆಂಗಳೂರು ೫೬೦೦೫೩
೨೦೧೮

*Ramakatharasa Vahini*—Translation of Telugu book written by Bhagavan Sri Sathya Sai Baba into Kannada by H.M. Shivaram. Published by Sri Sathya Sai Publications Society (R), 'Sudhama House', Chickpet, Bengaluru 560 053, India. Demy octavo, Pages xii+492.

© 2018
Sri Sathya Sai Publications Society, Bengaluru, India

೦೬/೨೦೧೮ (೩೦೦೦ ಪ್ರತಿಗಳು)

ಪುಟಗಳು : ೫೦೪

**ಬೆಲೆ : ₹ 120**

ಮುದ್ರಣ : ಪದ್ಮ ಶೇಖರ್ ಪ್ರಿಂಟರ್ಸ್, ಮೈಸೂರು; ✆ 98865 05878

ಬೇರೆ ಬೇರೆ ಧರ್ಮಗಳೆಲ್ಲ ಇರಲಿ,
ಎಲ್ಲ ಧರ್ಮಗಳೂ ವರ್ಧಿಸಲಿ,
ಭಗವಂತನ ಮಹಿಮೆಯನ್ನು ಎಲ್ಲ ಭಾಷೆಗಳಲ್ಲೂ
ವಿವಿಧ ರಾಗಗಳಲ್ಲೂ ಹಾಡಲಿ.
ಧರ್ಮ ಧರ್ಮಗಳ ವ್ಯತ್ಯಾಸ ವೈಶಿಷ್ಟ್ಯಗಳನ್ನು ಗೌರವಿಸಿ.
ಭಾವೈಕ್ಯತೆಯ ಬೆಳಕನ್ನು ನಂದಿಸದಿರುವ
ಧರ್ಮಗಳೆಲ್ಲ ಸತ್ವಯುತ ಎಂದು ಮನ್ನಿಸಿ.

**ಶ್ರೀ ಸತ್ಯಸಾಯಿ ಬಾಬಾ**

ಓಂ ಬ್ರಹ್ಮಾಂಡಕ್ಕೆ ಮೂಲವಾದ ಆದಿಮ ಶಬ್ದ. ಓಂಕಾರವು ಅನಾಹತ ಶಬ್ದ. ನಿಮ್ಮ ಹೃದಯದಲ್ಲೂ ವಿಶ್ವದ ಹೃದಯದಲ್ಲೂ ಸದಾ ನಿನದಿಸುತ್ತಿರುವ ಅದನ್ನು ಆಲಿಸಿರಿ.

ಅಹಂಕಾರವನ್ನು ಕತ್ತರಿಸಿ. ಅದು ಶಿಲುಬೆಯ ಮೇಲೆ ಅಳಿದು ಹೋಗಲಿ. ನಮಗೆ ಅಮರತ್ವವನ್ನು ತರಲಿ.

ಕಾರಣ–ಪರಿಣಾಮ, ಕಾರ್ಯ–ಅದರ ಫಲ—ಇವುಗಳ ಚಕ್ರವನ್ನು ಸದಾ ನೆನಪಿನಲ್ಲಿಡಿ.

ಚಂದ್ರನಿಂದ ದೂರ ಸರಿಯದ ನಕ್ಷತ್ರದ ಹಾಗೆ ನೀವೂ ಭಗವಂತನಿಂದ ಅತ್ತಿತ್ತ ಅಲುಗದೆ ಸ್ಥಿರವಾದ ಶ್ರದ್ಧೆಯನ್ನು ಬೆಳೆಸಿಕೊಳ್ಳಿರಿ.

ಬದುಕಿನ ಕಹಿಯೆಲ್ಲವನ್ನು ಈ ಪವಿತ್ರಾಗ್ನಿಯಲ್ಲಿ ಸಮರ್ಪಿಸಿ ಭವ್ಯರಾಗಿ, ಮಹಾನ್ ಆಗಿ ಪರಿಣಮಿಸಿರಿ.

# ಪರಿವಿಡಿ


ಪ್ರಧಾನ ಸಂಪಾದಕರ ಮಾತು . . . . . . . . . . . . . . . . . . . . vii
ಮುನ್ನರಿಕೆ . . . . . . . . . . . . . . . . . . . . . . . . . . . ix
ಅಂತರಾರ್ಥ . . . . . . . . . . . . . . . . . . . . . . . . . . xi
೧ ರಾಮ—ರಾಜಕುಮಾರ ಮತ್ತು ಧರ್ಮ . . . . . . . . . . . ೧
೨ ರಾಜ ವಂಶ . . . . . . . . . . . . . . . . . . . . . . . . ೬
೩ ಪುತ್ರಕಾಮೇಷ್ಟಿ ಯಾಗ . . . . . . . . . . . . . . . . . . . ೧೫
೪ ಪುತ್ರರು . . . . . . . . . . . . . . . . . . . . . . . . . ೨೨
೫ ಗುರು ಶಿಷ್ಯರು . . . . . . . . . . . . . . . . . . . . . . ೩೪
೬ ಯಾಗ ರಕ್ಷಣೆ, ಮೊದಲ ಗೆಲುವು . . . . . . . . . . . . . ೪೭
೭ ಸೀತಾ ಪರಿಣಯ . . . . . . . . . . . . . . . . . . . . . ೭೨
೮ ಮತ್ತೊಂದು ಪಂಥಾಹ್ವಾನ . . . . . . . . . . . . . . . . . ೧೨೦
೯ ಪಟ್ಟಾಭಿಷೇಕಕ್ಕೆ ಸಿದ್ಧತೆ . . . . . . . . . . . . . . . . . ೧೨೯
೧೦ ಕೈಕೆಯ ಎರಡು ವರ . . . . . . . . . . . . . . . . . . ೧೩೮
೧೧ ಲಕ್ಷ್ಮಣ ಸಹಿತ . . . . . . . . . . . . . . . . . . . . . ೧೬೨
೧೨ ಒತ್ತಾಯಿಸಿ ಗೆದ್ದ ಸೀತೆ . . . . . . . . . . . . . . . . . ೧೮೫
೧೩ ಕಾಡಿಗೆ . . . . . . . . . . . . . . . . . . . . . . . . . ೧೯೫
೧೪ ಅರಣ್ಯ ಪ್ರವೇಶ . . . . . . . . . . . . . . . . . . . . . ೨೦೧
೧೫ ಆಶ್ರಮಗಳಲ್ಲಿ . . . . . . . . . . . . . . . . . . . . . . ೨೨೦
೧೬ ಅಂಧಕಾರದಲ್ಲಿ ಅಯೋಧ್ಯೆ . . . . . . . . . . . . . . . ೨೩೧
೧೭ ಭರತ ಮಿಲನ . . . . . . . . . . . . . . . . . . . . . . ೨೫೩
೧೮ ಪಾದುಕಾ ಪಟ್ಟಾಭಿಷೇಕ . . . . . . . . . . . . . . . . . ೨೮೨
೧೯ ದಂಡಕಾರಣ್ಯ . . . . . . . . . . . . . . . . . . . . . . ೨೯೦
೨೦ ಪಂಚವಟಿ . . . . . . . . . . . . . . . . . . . . . . . . ೩೦೧
೨೧ ಮಾಯಾವಿ . . . . . . . . . . . . . . . . . . . . . . . . ೩೧೪

೨೨ ಸುಗ್ರೀವ ಸಖ್ಯ . . . . . . . . . . . . . . . . . . . . . . . . ೩೩೫
೨೩ ಅನ್ವೇಷಣೆ ಸಫಲ . . . . . . . . . . . . . . . . . . . . . . ೩೫೫
೨೪ ಲಂಕಾ ದಹನ . . . . . . . . . . . . . . . . . . . . . . . . ೩೭೫
೨೫ ಲಂಕೆಗೆ ಸೇತುವೆ . . . . . . . . . . . . . . . . . . . . . . ೩೯೧
೨೬ ಮುತ್ತಿಗೆ . . . . . . . . . . . . . . . . . . . . . . . . . . ೪೦೯
೨೭ ಪಾತಾಳ ಲೋಕ . . . . . . . . . . . . . . . . . . . . . . ೪೨೮
೨೮ ರಾವಣ ವಧೆ . . . . . . . . . . . . . . . . . . . . . . . ೪೩೭
೨೯ ಆನಂದದಲ್ಲಿ ಅಯೋಧ್ಯೆ . . . . . . . . . . . . . . . . . . . ೪೫೦
೩೦ ಪಟ್ಟಾಭಿಷೇಕ . . . . . . . . . . . . . . . . . . . . . . . ೪೫೬
೩೧ ಸೀತಾ ಪರಿತ್ಯಾಗ . . . . . . . . . . . . . . . . . . . . . ೪೭೦
೩೨ ಮುಗಿದ ನಾಟಕ . . . . . . . . . . . . . . . . . . . . . . ೪೮೬

# ಪ್ರಧಾನ ಸಂಪಾದಕರ ಮಾತು

ಪರಮ ಪವಿತ್ರವೂ ಶ್ರೇಷ್ಠವೂ ಆದ ರಾಮಾಯಣ ಮಹಾಕಾವ್ಯವನ್ನು ಕೇಳುವುದೇ ಇಲ್ಲವೆ ಓದುವುದೇ ಒಂದು ರಸಾನುಭವ. ಹೃದಯ ಶುದ್ಧವಾಗುತ್ತದೆ, ವೈಚಾರಿಕವಾಗಿ ಬುದ್ಧಿ ಉದಾತ್ತವಾಗುತ್ತದೆ, ಮನಸ್ಸು ಆನಂದದಲ್ಲಿ ಮಿಂದು ಅಚಂಚಲವಾಗುತ್ತದೆ. ಈ ಪುಣ್ಯಕಥೆಯನ್ನು ಭಗವಾನ್ ಶ್ರೀ ಸತ್ಯಸಾಯಿ ಬಾಬಾ ತಮ್ಮ ದಿವ್ಯ ಹಸ್ತದಿಂದ, ವಿಶೇಷವಾದ ದಿವ್ಯದೃಷ್ಟಿಯಿಂದ ರಸವಾಹಿನಿಯಾಗಿ ಮಾಡಿದ್ದಾರೆ. ಅವರ ಸರಳ ಸುಂದರ ಸುಮಧುರ ಗದ್ಯ ಹೃದ್ಯವಾಗಿದೆ. ರಾಮಾಯಣದ ರಸಸ್ಥಾನಗಳನ್ನೂ ಅಂತರಾರ್ಥವನ್ನೂ ಬಹುಕಾಲ ಮೆಲುಕು ಹಾಕುತ್ತ, ಪರಿಭಾವಿಸುತ್ತ, ರಾಮಕಥೆಯ ಸಂದೇಶವನ್ನೂ ಆದರ್ಶ ಮೌಲ್ಯಗಳನ್ನೂ ಮೈಗೂಡಿಸಿಕೊಳ್ಳಲು ಪ್ರಯತ್ನ ಮಾಡುವ ಸ್ಫೂರ್ತಿಯನ್ನುಂಟುಮಾಡುತ್ತದೆ. ಪುಸ್ತಕದ ಮೊದಲಲ್ಲಿ ಬಾಬಾ ಅವರು ರಾಮಾಯಣದ ಅಂತರಾರ್ಥವನ್ನು ಕೆಲವೇ ಮಾತುಗಳಲ್ಲಿ—ಅರ್ಥಪೂರ್ಣವೂ ಬಹುಕಾಲ ಮನನ ಮಾಡುವಂತಹವೂ ಆಚರಣ ಮುಖ್ಯವೂ ಆದ ಮಾತುಗಳಲ್ಲಿ—ಹೇಳಿದ್ದಾರೆ. ತ್ಯಾಗದಿಂದ ಆನಂದ; ಮೋಹದಿಂದ, ಆಸೆಯಿಂದ ದುಃಖ. ಸೀತಾದೇವಿಯೆ ಆತ್ಮದ ಪ್ರತೀಕ.

ಮತ್ತೆ ಮತ್ತೆ ಕೇಳಿದ ಅದೇ ಕಥೆಯಾದರೂ ಶ್ರೀ ಸತ್ಯಸಾಯಿಯ ಲೇಖನಿಯಲ್ಲಿ ಅದು ಹೊಸ ದೃಷ್ಟಿಯನ್ನು ಮೂಡಿಸುವ, ಹೊಸ ದರ್ಶನವನ್ನು ಮೂಡಿಸುವ ರಸ ಕೃತಿಯಾಗಿದೆ. ಈ ಬರೆಹ ಮೊದಲು ಫೆಬ್ರವರಿ ೧೯೭೦ರಿಂದ ಆಗಸ್ಟ್ ೧೯೭೭ರವರೆಗೆ ೯೧ ಸಂಚಿಕೆಗಳಲ್ಲಿ 'ಸನಾತನ ಸಾರಥಿ' ಮಾಸಿಕದಲ್ಲಿ ಧಾರಾವಾಹಿಯಾಗಿ ಬಂದಿತು. ನಂತರ ಅದೇ ಹೆಸರಿನಲ್ಲಿ ಪುಸ್ತಕವಾಗಿ ಪ್ರಕಟಾಯಿತು. ವಾಹಿನಿಗಳ ಸರಣಿಯ ಪುಸ್ತಕಗಳಲ್ಲಿ ಗಾತ್ರ ಮತ್ತು ಗುಣ ಎರಡರಲ್ಲೂ ದೊಡ್ಡದು.

ಮೂಲ ತೆಲುಗು ಕೃತಿಯನ್ನು ನಮ್ಮವರೇ ಆದ ಶ್ರೀ. ಎಚ್.ಎಂ. ಶಿವರಾಂ ಸೊಗಸಾಗಿ ಕನ್ನಡಕ್ಕೆ ಅನುವಾದ ಮಾಡಿ ಶ್ರೀ ಸತ್ಯಸಾಯಿ ಬುಕ್ಸ್ ಆ್ಯಂಡ್ ಪಬ್ಲಿಕೇಷನ್ಸ್ ಟ್ರಸ್ಟ್, ಪ್ರಶಾಂತಿ ನಿಲಯಂ ಇವರ ಅನುಮತಿ ಪಡೆದು ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ, ಕರ್ನಾಟಕ ಮೂಲಕ ಪ್ರಕಟಿಸಿದರು. ಪುಸ್ತಕ ಬಹು ಜನಪ್ರಿಯವಾಗಿದೆ. ಶ್ರೀ. ಶಿವರಾಂ ನುರಿತ ಲೇಖಕರು. ಪರಮ ಸಾಯಿ ಭಕ್ತರು ಎಂದರೆ ಸಾಕು, ಅವರ ಭಕ್ತಿ, ವಿನಯ, ಸರಳ ಸಜ್ಜನಿಕೆಯ ಸ್ವಭಾವಗಳ ಬಗ್ಗೆ ಹೆಚ್ಚು ಹೇಳಬೇಕಾಗಿಯೆ ಇಲ್ಲ. ಕನ್ನಡ ಅವತರಣಿಕೆಯ 'ಸನಾತನ ಸಾರಥಿ' ಪತ್ರಿಕೆಯನ್ನು ಸಂಪಾದಕರಾಗಿ ಬಹುಕಾಲ ನಡೆಸಿಕೊಂಡು ಬಂದರು. ಅನೇಕ ಸಾಯಿ ಪುಸ್ತಕಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಈಗ ನಮ್ಮ ಸಂಪಾದಕ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಮೊದಲು ಮೂಲ ಕೃತಿಯನ್ನು ಬರೆದುಕೊಟ್ಟ ಪರಮ ಕೃಪಾಳು ಶ್ರೀ ಸತ್ಯಸಾಯಿ ಬಾಬಾರವರ ಚರಣಗಳಿಗೆ ನಮಿಸುವ ಮೂಲಕ ಕೃತಜ್ಞತೆಯನ್ನರ್ಪಿಸುತ್ತೇವೆ. ಕನ್ನಡಕ್ಕೆ ಅನುವಾದ ಮಾಡಿರುವ ಸಾಯಿಬಂಧು ಶ್ರೀ. ಶಿವರಾಂ ಅವರಿಗೆ ಹಾರ್ದಿಕ ಧನ್ಯವಾದಗಳ ಮೂಲಕ ಕೃತಜ್ಞತೆ ವ್ಯಕ್ತಮಾಡುತ್ತೇವೆ. ಈ ಪುಸ್ತಕದ ಪ್ರಕಟನೆಗೆ ಅನುಮತಿ ನೀಡಿರುವ ಶ್ರೀ ಸತ್ಯಸಾಯಿ ಬುಕ್ಸ್ ಆ್ಯಂಡ್ ಪಬ್ಲಿಕೇಷನ್ಸ್ ಟ್ರಸ್ಟ್, ಪ್ರಶಾಂತಿ ನಿಲಯಂ ಇವರಿಗೆ ನಮ್ಮ ಧನ್ಯವಾದಗಳು.

ಸರ್ವದಾ ಪ್ರೋತ್ಸಾಹ–ನೆರವು–ಸಹಕಾರ ನೀಡುತ್ತಿರುವ ಕರ್ನಾಟಕ ರಾಜ್ಯದ ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿಯ ಗೌರವಾನ್ವಿತ ಪದಾಧಿಕಾರಿಗಳೆಲ್ಲರಿಗೂ ಸಂಪಾದಕ ಮಂಡಳಿಯ ಮತ್ತು ಸಲಹಾ ಮಂಡಳಿಯ ಸದಸ್ಯರೆಲ್ಲರಿಗೂ ಅನಂತ ವಂದನೆಗಳು.

ಮುಖಪುಟವನ್ನು ಸುಂದರವಾಗಿ ವಿನ್ಯಾಸ ಮಾಡಿರುವ ಬೆಂಗಳೂರಿನ ಕ್ಯಾನ್ವಾಸ್‌ನ ಮಿತ್ರರಿಗೂ ಪುಸ್ತಕವನ್ನು ಶೀಘ್ರವಾಗಿ, ಸುಂದರವಾಗಿ ಮುದ್ರಿಸಿರುವ ಬೆಂಗಳೂರಿನ ಓಂಕಾರ್ ಆಫ್ಸೆಟ್ ಪ್ರೆಸ್‌ನ ಮಿತ್ರರಿಗೂ ಧನ್ಯವಾದಗಳು.

ನವೆಂಬರ್, ೨೦೦೫
ಮೈಸೂರು

**ಕೆ.ಬಿ. ಪ್ರಭುಪ್ರಸಾದ್**
ಪ್ರಧಾನ ಸಂಪಾದಕ

# ಮುನ್ನುಡಿ

ರಾಮಕಥೆ ಸುಧಾರಸವಾಹಿನಿ, ಯುಗಯುಗಾಂತರಗಳಿಂದ ಈ ಕಥೆ ಸಹಸ್ರಾರು ಪುರುಷರು, ಸ್ತ್ರೀಯರು ಮತ್ತು ಬಾಲಕರುಗಳಿಗೆ ದುಃಖ ಸಮಯದಲ್ಲಿ ಉಪಶಾಂತಿಯನ್ನೂ, ಚಾಂಚಲ್ಯ ದಲ್ಲಿ ಸ್ಥಿರ ಚಿತ್ತವನ್ನೂ ನಿರುತ್ಸಾಹದಲ್ಲಿ ಉತ್ಸಾಹವನ್ನೂ ಸಂದಿಗ್ಧದಲ್ಲಿ ಮಾರ್ಗದರ್ಶನವನ್ನೂ ಪ್ರಸಾದಿಸುತ್ತಿದೆ. ಇದೊಂದು ಉತ್ತೇಜಕರವಾದ ಮಹಾ ಮಾನವ ನಾಟಕ. ಭಗವಂತ ಈ ನಾಟಕದಲ್ಲಿ ಪ್ರಧಾನ ಪಾತ್ರವಾಗಿ ಅವತರಿಸಿ, ವಿಶ್ವನಾಟಕ ರಂಗದಲ್ಲಿ ನಟಿಸಿದ್ದಾನೆ. ನರರೂ ವಾನರರೂ ಜಂತುಗಳೂ ರಾಕ್ಷಸರೂ ಪವಿತ್ರರೂ ಅಪವಿತ್ರರೂ ಈ ನಾಟಕದಲ್ಲಿ ಪಾತ್ರ ಧರಿಸಿದ್ದಾರೆ. ಈ ನಾಟಕದಲ್ಲಿ ತನ್ನ ಸಂದೇಶದ ಮೂಲಕ, ಆಚರಣೆಯ ಮೂಲಕ ದಿವ್ಯ ಪುರುಷನು ನಮಗೆ ಉತ್ತಮ ವಿವೇಕವನ್ನು ಪ್ರಸಾದಿಸುತ್ತಿದ್ದಾನೆ. ಈ ಕಥೆ ಮಾನವ ಹೃದಯ ವೀಣೆಯ ತಂತಿಗಳನ್ನು ಮೀಟಿ ಕರುಣೆ, ವಿಷಾದ, ಆನಂದ, ಆರಾಧನೆ, ಪಾರವಶ್ಯ, ಶರಣಾಗತಿಯಂಥ ರಸಾವೇಶಗಳನ್ನು ಉಂಟುಮಾಡಿ ಜಂತುತ್ವದಲ್ಲೂ ಮಾನವತ್ವದಲ್ಲೂ ನಿಗೂಢವಾಗಿರುವ ದಿವ್ಯತ್ವವನ್ನು ಅರಳುವಂತೆ ಮಾಡುತ್ತದೆ.

ರಾಮಕಥೆ ಲಾಲಿ ಹಾಡಾಗಿ, ಜೋಗುಳವಾಗಿ, ಕಥೆಯಾಗಿ, ಗಾದೆಯಾಗಿ, ನೃತ್ಯವಾಗಿ, ನಾಟಕವಾಗಿ, ಶಿಲ್ಪವಾಗಿ, ಚಿತ್ರವಾಗಿ, ಸಂಗೀತವಾಗಿ, ಕವಿತ್ವವಾಗಿ, ಉತ್ಸವವಾಗಿ, ಸಂಕೇತ ವಾಗಿ, ವಿವಿಧ ರೂಪಗಳಿಂದ ಪ್ರವಹಿಸುತ್ತಾ ಬಂದಿದೆ. ಅಸಂಖ್ಯಾತ ಸಾಧಕರಿಗೂ ಶೋಧಕ ರಿಗೂ ಪ್ರಾಣಸಮಾನವಾಗಿ, ಆನಂದ ನಿದಾನವಾಗಿ ಪ್ರಕಾಶಿಸುತ್ತಿದೆ. ರಾಮಾಯಣದ ಒಳಗಿನ ಪಾತ್ರಗಳನ್ನು ಆದರ್ಶವಾಗಿಟ್ಟುಕೊಂಡು ಎಷ್ಟೋ ಜನ ಉದ್ಧಾರವಾಗಿದ್ದಾರೆ. ಉತ್ತಮ ಸಾಹಸವನ್ನೂ ಉನ್ನತ ಫಲಸಿದ್ಧಿಯನ್ನೂ ರಾಮಯಣದ ಪಾತ್ರಗಳಲ್ಲಿ ದರ್ಶನ ಮಾಡಿದ್ದಾರೆ. ಉಜ್ವಲ ನಿದರ್ಶನಗಳಾದ ಆ ಪಾತ್ರಗಳು, ಹಿಂಸಾಪ್ರವೃತ್ತಿಯನ್ನೂ ದುಷ್ಟತನ ವನ್ನೂ ಗರ್ವವನ್ನೂ ನೀಚತ್ವವನ್ನೂ ದೂರ ಮಾಡಿಕೊಳ್ಳುವ ದಾರಿ ತೋರಿಸಬಲ್ಲವು. ಚಂಚಲ ಮನಸ್ಕರಿಗೆ ಸ್ಥಿರ ವಿಶ್ವಾಸವನ್ನೂ ಸಹನಶೀಲತೆಯನ್ನೂ ನೀಡಬಲ್ಲವು. ಮಾನವರೂ ತಮ್ಮ ಉನ್ನತ ಆಶಯಗಳನ್ನು ಪ್ರಕಟಿಸುವುದಕ್ಕಾಗಿ ಎಷ್ಟೋ ಭಾಷೆಗಳನ್ನೂ ಮಾಂಡಲಿಕ ನುಡಿಕಟ್ಟುಗಳನ್ನೂ ನಿರ್ಮಿಸಿಕೊಂಡಿದ್ದಾರೆ. ರಾಮಕಥೆಯಿಂದಾಗಿ ಅವುಗಳಿಗೆ ಅಸಾಧಾರಣ ವಾದ ಮತ್ತು ಅವ್ಯಯವಾದ ಮಾಧುರ್ಯವು ಉಂಟಾಗಿದೆ.

ಸಾಯಿ ಸಂಕಲ್ಪವೇ ಈ ವಿಶ್ವಕ್ಕೂ ಅದರ ಪರಿಣಾಮಗಳಿಗೂ ಕಾರಣಭೂತವು. ದೇಶಕಾಲಗಳೆ ನ್ನುವ ರಂಗಭೂಮಿಯ ಮೇಲೆ ನಡೆಯುವ ಈ ಮಹಾನಾಟಕಕ್ಕೆ ಆ ದಿವ್ಯ ಮೂರ್ತಿಯೇ ಪ್ರಣೀತ, ನಟ, ಸೂತ್ರಧಾರಿ, ಪ್ರೇಕ್ಷಕ, ಪರೀಕ್ಷಕ. ಈ ಮಹಾನಾಟಕದಲ್ಲಿ ಒಂದು ವೀರಗಾಥೆ ಯನ್ನು ಅವನೇ ಸ್ವತಃ ನಮಗೆ ತಿಳಿಸುತ್ತಿದ್ದಾನೆ. ಆ ದಿವ್ಯ ಮೂರ್ತಿ, ಅವನೇ ರಾಮಪಾತ್ರಧಾರಿ. ತ್ರೇತಾಯುಗದಲ್ಲಿ ಸಾಯಿಯೇ ರಾಮಚಂದ್ರನಾಗಿ, ಆ ಕಾಲದಲ್ಲಿ ಹುಟ್ಟಿದವರಿಗೆ ಸನ್ಮಾರ್ಗ ವನ್ನು ತೋರಿಸಿ, ಉತ್ತೇಜಿಸಿ, ಸಾಂತ್ವನವಿತ್ತು, ಸಂಸ್ಕರಿಸಿದ್ದಾರೆ. ಈಗ, ಸಾಯಿರಾಮ ರೂಪಧಾರಿಯಾಗಿ ಅದೇ ಮಹಾ ಕಾರ್ಯವನ್ನೇ ನಿರ್ವಹಿಸುತ್ತಿದ್ದಾರೆ. ಸನಾತನ ಸಾರಥಿ ಪತ್ರಿಕೆಯಲ್ಲಿ ಸುಮಾರು ಏಳು ವರ್ಷಗಳವರಗೆ ಪ್ರತಿ ತಿಂಗಳೂ ರಾಮಕಥಾ ರಸವಾಹಿನಿ ಧಾರಾವಾಹಿಯಾಗಿ ಪ್ರಕಟವಾಗಿ ಓದುಗರಿಗೆ ಆಸಕ್ತಿಯನ್ನೂ ಆನಂದವನ್ನೂ ನೀಡಿದೆ. ಅದನ್ನು ಓದುವಾಗ, ಸಮಕಾಲಿಕ ಸಂಘಟನೆಗಳನ್ನೂ ಅನುಭವಗಳನ್ನೂ ಓದುತ್ತಿರುವಂತೆ, ಪ್ರಸ್ತುತ ಕಾಲದ ಕ್ಲಿಷ್ಟ ಸಮಸ್ಯೆಗಳಿಗೆ ಅವಶ್ಯಕವಾದ ಪರಿಹಾರವನ್ನು ಆದೇಶಿಸುತ್ತಿರುವಂತೆ ಭಾಸವಾಗುತ್ತದೆ. ಈ ಕಥೆಯನ್ನು ಓದುತ್ತಿರುವ ಸಮಯದಲ್ಲಿ ಆ ಕಾಲದ ಅಯೋಧ್ಯಾ

ರಾಮನೂ ಈಗ ನಮ್ಮ ಕಣ್ಣ ಮುಂದಿರುವ ಸಾಯಿರಾಮನೂ ಒಬ್ಬನೇ ಎನ್ನುವ ಅಭಿಪ್ರಾಯ ಬಂದು ಆನಂದ ಅತಿಶಯವಾಗುತ್ತದೆ.

ವಿಜ್ಞಾನಶಾಸ್ತ್ರ ಇಂದು ಭೂಗೋಳವನ್ನು ಒಂದು ಸಣ್ಣ ವ್ಯೋಮನೌಕೆಯನ್ನಾಗಿ ಮಾಡಿದೆ. ಸಂಕುಚಿತವಾದ ಆ ಪರಿಧಿಯಲ್ಲೇ ಮಾನವ ಜಾತಿ ತನ್ನ ಭವಿತವ್ಯದ ರೂಪರೇಖೆಗಳನ್ನು ನಿರ್ಮಿಸಿಕೊಳ್ಳುವ ಪರಿಸ್ಥಿಯನ್ನುಂಟುಮಾಡಿದೆ. ಸಾಯಿತತ್ತ್ವ ಈ ವ್ಯೋಮಗಾಮಿ ನೌಕೆಯನ್ನು ಸುಖಶಾಂತಿಗಳಿಗೆ ಆಗರವಾದ ಪ್ರೇಮಾನುರಾಗವಾಗಿ ಪರಿವರ್ತಿಸುತ್ತಿದೆ. ಇಂಥ ವಿಶ್ವ ಪ್ರೇಮ ವಿಕಾಸಕ್ಕೆ ಅಡಚಣೆಗಳನ್ನು ಕಲ್ಪಿಸುತ್ತಿರುವ ದುಷ್ಟ ಶಕ್ತಿಗಳ ನಿರ್ಮೂಲನೆಗೆ ಪರಿಹಾರೋಪಾಯವನ್ನು ತೋರಿಸುವುದಕ್ಕಾಗಿಯೇ ಸಾಯಿ ಪ್ರಭು ಈ ಗ್ರಂಥ ರಚನೆಯನ್ನು ಸಂಕಲ್ಪಿಸಿದ್ದಾರೇನೋ ಎನಿಸುತ್ತದೆ. ಭಯಂಕರವಾದ ಇಂದ್ರಿಯ ಸುಖ ಲಾಲಸೆ, ತಂದೆ ತಾಯಿಗಳನ್ನೂ ಗುರುಹಿರಿಯರನ್ನೂ ಆಧ್ಯಾತ್ಮಿಕ ಮಾಗದರ್ಶಕರಾದ ಸಾಧು ಪುರುಷರನ್ನೂ ಅಗೌರವದಿಂದ ಕಾಣುವ ರೀತಿ, ದಾಂಪತ್ಯ ಧರ್ಮವನ್ನೂ ಕುಟುಂಬ ಜೀವನವನ್ನೂ ಬಾಂಧವ್ಯಗಳನ್ನೂ ಸಾಂಘಿಕ ಮರ್ಯಾದೆಗಳನ್ನೂ ನಾಶ ಮಾಡುವ ಶೋಚನೀಯ ಪ್ರವೃತ್ತಿಯ ರಾಕ್ಷಸತ್ವ, ಇತರರನ್ನು ಬೆದರಿಸಿ, ಪೀಡಿಸಿ, ತಮಗೂ ತಮ್ಮ ಪಂಗಡಕ್ಕೂ ಲಾಭ ಪಡೆಯುವ ಪದ್ಧತಿ, ಇಂಥ ದುಷ್ಟ ಶಕ್ತಿಗಳೆಷ್ಟೊ ಪ್ರೇಮತತ್ತ್ವದ ಬೆಳವಣಿಗೆಗೆ ಆತಂಕಗಳನ್ನೊಡ್ಡುತ್ತಿವೆ.

ಸಾಕೇತ ರಾಮನ ಲೀಲಾವಿಶೇಷಗಳನ್ನು ಸರಳ ಸುಂದರ ಮಧುರ ಶೈಲಿಯಲ್ಲಿ ಸಾಯಿ ರಾಮನು ನಮಗೆ ಕಥಾ ರೂಪದಲ್ಲಿ ನೀಡಿದ್ದಾರೆ. ಈ ದಿವ್ಯ ಕಥೆಯನ್ನು ನಮ್ಮ ಕೈಗಳಿಂದ ಸ್ವೀಕರಿಸಿ, ಮನಸ್ಸಿನಲ್ಲಿ ನಿಲ್ಲಿಸಿ, ಹೃದಯದಲ್ಲಿ ತುಂಬಿಕೊಳ್ಳುವುದು ಎಂಥ ಮಹಾಭಾಗ್ಯ! ಈ ಗ್ರಂಥ ಪಠನದ ಮೂಲಕ ನಮ್ಮಲ್ಲಿ ಪರಿವರ್ತನೆಯಾಗಬೇಕು. ಸಾಯಿರಾಮನೆ ಪರಮ ಸತ್ಯವೆಂದು, ಏಕೈಕ ಸತ್ಯವೆಂದು ಗುರುತಿಸಿ ವರ್ತಿಸಬೇಕು. ವಿಶ್ವಕುಟುಂಬ ಸಂಸ್ಥಾಪನೆಗೋಸ್ಕರವಾಗಿ ಅವರು ನಡೆಸಿಕೊಂಡು ಬರುತ್ತಿರುವ ಮಹತ್ಕಾರ್ಯದಲ್ಲಿ, ಸಮರ್ಥ ಶಕ್ತಿವಂತ, ಉತ್ಸಾಹಭರಿತ ಪರಿಕರಗಳಾಗಿ ನಮ್ಮನ್ನು ತಯಾರುಮಾಡಿಕೊಳ್ಳಬೇಕು.

"ಆ ರಾಮಚಂದ್ರನೇ ಈ ರಾಮಚಂದ್ರನಾಗಿ ತನ್ನ ಬಂಟರನ್ನು ಹುಡುಕಿಕೊಂಡು ಬಂದಿದ್ದಾನೆ," ಎಂದು ಸತ್ಯಸಾಯಿ ಪ್ರಭು ಪ್ರಕಟಿಸಿದ್ದಾರೆ. ಆಗಿನ ತನ್ನ ಅನುಚರರನ್ನೂ ಸೇವಕರನ್ನೂ ಗುರುತಿಸಿ, ಧರ್ಮವನ್ನು ಪುನರುದ್ಧಾರ ಮಾಡಿ, ಪ್ರಶಾಂತಿಧಾಮಕ್ಕೆ ಮಾನವರನ್ನು ನಡೆಸಿಕೊಂಡು ಹೋಗುವ ಮಹಾಕಾರ್ಯದಲ್ಲಿ ಅವರಿಗೆ ತಕ್ಕ ಪಾತ್ರಗಳನ್ನು ದಯಪಾಲಿಸಬೇಕೆನ್ನುವುದು ಅವರ ಸಂಕಲ್ಪ. ನಮ್ಮಲ್ಲಿ ಪ್ರತಿಯೊಬ್ಬರಿಗೂ ಸಮಯೋಚಿತವಾದ ಪಾತ್ರವನ್ನು ಅವರು ಪ್ರಸಾದಿಸಿ ಶಾಂತಿಯನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತೇನೆ.

ಪ್ರಶಾಂತಿ ನಿಲಯಂ **ನಾ. ಕಸ್ತೂರಿ**


# ಅಂತರಾರ್ಥ

ಪ್ರತಿ ದೇಹದಲ್ಲೂ ರಾಮನು ಅಂತರ್ಯಾಮಿ, ಪ್ರತಿ ಅಂತರಂಗದಲ್ಲೂ ರಾಮನು ಆನಂದಧಾಮ ಮತ್ತು ಆತ್ಮಾರಾಮ. ಅಂತರಂಗದಲ್ಲಿ ಆನಂದದ ಚಿಲುಮೆಯಿಂದ ಚಿಮ್ಮುವ ರಾಮನ ಅನುಗ್ರಹ ಶಾಂತಿ ಸೌಖ್ಯಪ್ರದವಾದುದು. ಮಾನವ ಜಾತಿಯನ್ನೆಲ್ಲಾ ಒಂದೇ ಸೂತ್ರದಿಂದ ಕೂಡಿಸಬಲ್ಲ ಪ್ರೇಮ ಧರ್ಮಗಳ ಮೂರ್ತಿಸ್ವರೂಪ ಅವನು. ರಾಮಯಣ ಎರಡು ಪಾಠಗಳನ್ನು ಬೋಧಿಸುತ್ತದೆ. ನಿಸ್ಸಂಗತ್ವವು ಅತ್ಯಂತ ಬೆಲೆಬಾಳುವಂಥದು ಮತ್ತು ಪ್ರತಿ ಪ್ರಾಣಿಯಲ್ಲೂ ದಿವ್ಯತ್ವವನ್ನು ಗುರುತಿಸಬೇಕು ಎಂದು ಅದು ಬೋಧಿಸುತ್ತದೆ. ಅಯೋಧ್ಯಾ ನಗರದ ಭೋಗಭಾಗ್ಯಗಳನ್ನು ತೊರೆದುದರಿಂದ ಸೀತಾದೇವಿಯು ವನವಾಸ ಕಾಲದಲ್ಲಿ ರಾಮನ ಸನ್ನಿಧಿಯನ್ನು ಹೊಂದಲು ಸಾಧ್ಯವಾಯಿತು. ಕಾಂಚನ ಮೃಗವನ್ನು ನೋಡಿ ಮೋಹದಲ್ಲಿ ಬೀಳುವುದರಿಂದ ಅವಳು ರಾಮನ ಸನ್ನಿಧಿಯನ್ನು ಕಳೆದುಕೊಳ್ಳುವಂತಾಯಿತು. ಪರಿತ್ಯಾಗದಿಂದ ಆನಂದವೂ ಮೋಹದಿಂದ ದುಃಖವೂ ಪ್ರಾಪ್ತವಾಗುವುವು.

ಲೋಕದಲ್ಲಿ ಜೀವಿಸುತ್ತಿದ್ದರೂ ಲೌಕಿಕ ಜೀವನದಲ್ಲಿ ಮುಳುಗಿ ಹೋಗಬಾರದು. ರಾಮನ ಸೋದರರು, ಸಹಚರರು, ಎಲ್ಲರೂ ಧರ್ಮ ಮೂರ್ತಿಗಳೇ. ದಶರಥ, ಹತ್ತು ಇಂದ್ರಿಯಗಳುಳ್ಳ ಭೌತಿಕ ಶರೀರ. ಅವನ ಮೂರು ರಾಣಿಯರು ಸತ್ವ, ರಜ, ತಮೋಗುಣಗಳು. ಅವನ ನಾಲ್ವರು ಕುಮಾರರು, ಚತುರ್ವಿಧ ಪುರುಷಾರ್ಥಗಳು. ಲಕ್ಷ್ಮಣನು ಬುದ್ಧಿ, ಸುಗ್ರೀವನು ವಿವೇಕ, ವಾಲಿಯು ದುಃಖ, ಹನುಮಂತನು ಧೈರ್ಯ. ಭ್ರಾಂತಿ ಎನ್ನುವ ಸಮುದ್ರ ಸೇತು ಬಂಧನವಾಯಿತು. ರಾವಣ ರಜಸ್ಸು, ಕುಂಭಕರ್ಣ ತಮಸ್ಸು, ವಿಭೀಷಣ ಸತ್ವ ಗುಣಗಳು. ಜೀವಿತಾನುಭವವದ ಅಗ್ನಿ ಪರೀಕ್ಷೆಯಲ್ಲಿ ಯಶಸ್ವಿಯಾದ ಬ್ರಹ್ಮಜ್ಞಾನವೇ ಸೀತೆ. ರಾಮನ ವೈಭವವನ್ನು ಭಾವಿಸಿಕೊಂಡು ಹೃದಯವನ್ನು ನಿರ್ಮಲವಾಗಿಯೂ ಹಾಗೂ ಶಕ್ತಿವಂತವಾಗಿಯೂ ಮಾಡಿಕೊಳ್ಳಬೇಕು. ರಾಮನೇ ಪ್ರಾಣಾಧಾರವಾದ ಸತ್ಯವೆನ್ನುವ ಸ್ಥಿರ ವಿಶ್ವಾಸವನ್ನು ಬೆಳೆಸಿಕೊಳ್ಳಬೇಕು.

ಪ್ರಶಾಂತಿ ನಿಲಯಂ

**ಶ್ರೀ ಸತ್ಯಸಾಯಿ ಬಾಬಾ**



# ರಾಮಕಥಾರಸ ವಾಹಿನಿ

# ೧ ರಾಮ—ರಾಜಕುಮಾರ ಮತ್ತು ಧರ್ಮ

ರಾಮ ನಾಮವು ವೇದಸಾರ. ರಾಮ ಚರಿತ್ರೆಯು ಹಾಲ್ಗಡಲು. ಅಂದಿನಿಂದ ಇಂದಿನವರೆಗೂ ಬೇರೆ ಯಾವ ದೇಶದಲ್ಲೆ ಆಗಲಿ, ಯಾವ ಭಾಷೆಯಲ್ಲೆ ಆಗಲಿ, ಇಂಥ ಮಹಾಕಾವ್ಯ ಹುಟ್ಟಿಯೇ ಇಲ್ಲವೆಂದು ಹೇಳಬಹುದು. ಎಲ್ಲ ದೇಶಗಳ, ಭಾಷೆಗಳ ಕಾವ್ಯವು ಭಾರತೀಯರ ಅಂತರ್ವಾಹಿನಿಯಂತೆ ಆಧಾರವಾಗಿ ನಿಂತಿರುವ ಈ ಪ್ರಧಾನ ಕಾವ್ಯವು ಭಾರತಿಯರ ಭಾಗ್ಯವೋ ಎನ್ನುವಂತಿದೆ. ರಾಮನು ಹಿಂದೂಗಳ ಮನೆದೇವರಾಗಿಯೊ, ಮನೆಯ ಹೆಸರಾಗಿಯೊ, ಮನೆಯವರ ಹೆಸರಾಗಿಯೊ, ಅಂತೂ ಹೇಗೋ ಈ ರಾಮರಸವನ್ನು ಕುಡಿಯದಿರುವ ಭಾರತೀಯನೇ ಇಲ್ಲವೆಂದು ಹೇಳಬಹುದು. ಪಂಡಿತರಿಂದ ಹಿಡಿದು ಪಾಮರರವರೆಗೆ, ಕೋಟ್ಯಧೀಶರಿಂದ ಹಿಡಿದು ಬಡವರವರೆಗೆ, ರೋಗಿಗಳಿಂದ ಹಿಡಿದು ಯೋಗಿಗಳವರೆಗೆ ರಾಮಾಯಣವು ಎಲ್ಲರ ಪಾರಾಯಣ ಗ್ರಂಥವಾಗಿ ಪ್ರಕಾಶಿಸುತ್ತಿದೆ. ಸಮಸ್ತ ದೋಷಗಳನ್ನೂ ಪರಿಹರಿಸಿ, ಪಾಪಗಳನ್ನು ನಾಶಮಾಡಿ, ತನ್ನ ಸ್ವರೂಪವನ್ನು ಸಾಕಾರವಾಗಿ ತೋರಿಸುವಂತಹ ಸುಂದರ ನಾಮ ಈ 'ರಾಮ' ನಾಮ. ಸಮಸ್ತ ಜಲವೂ ಸಾಗರದಿಂದಲೇ ಹುಟ್ಟುವಂತೆ, ಸಮಸ್ತ ಜೀವಿಗಳೂ 'ರಾಮ'ನಿಂದಲೇ ಹುಟ್ಟುತ್ತವೆ. ಜಲವಿಲ್ಲದ ಸಾಗರ, ರಾಮನಿಲ್ಲದ ಜೀವ ಲೋಕದಲ್ಲಿ ಇಲ್ಲ. ಇರಲು ಅಸಾಧ್ಯ. ಸಾಗರಕ್ಕೂ ಸರ್ವೇಶ್ವರನಿಗೂ ಸನ್ನಿಹಿತ ಸಂಬಂಧವುಂಟು. ಸಾಗರವೇ ಸರ್ವೇಶ್ವರನಿಗೆ ನಿವಾಸ. ಕ್ಷೀರಸಾಗರಶಯನೆನ್ನುವುದಕ್ಕೆ ಇದು ಪ್ರಧಾನ ಪ್ರಮಾಣ. ಆದ್ದರಿಂದಲೇ ಪ್ರಚೇತಸನ ಕುಮಾರನಾದ ಮಹಾಕವಿ ವಾಲ್ಮೀಕಿಯು ರಾಮಾಯಣ ಭಾಗಗಳಿಗೆ ಕಾಂಡಗಳೆಂದು ಹೆಸರಿಟ್ಟನು. ಕಾಂಡವೆಂದರೆ ಜಲವೆಂದೂ ಕಬ್ಬೆಂದೂ ಅರ್ಥ. ಕಬ್ಬು ಎಷ್ಟೇ ಡೊಂಕು ಡೊಂಕಾಗಿದ್ದರೂ ಅದರ ಸಿಹಿ ವ್ಯತ್ಯಾಸವಾಗುವುದಿಲ್ಲ. ಹಾಗೆಯೆ, 'ರಾಮಕಥಾರಸ ವಾಹಿನಿ' ಎಷ್ಟು ಬಳಸಿ ಬಳಸಿ ಪ್ರವಹಿಸಿದರೂ ಅದರೊಳಗಿನ ಕರುಣಾರಸದಲ್ಲಿ ಯಾವ ಮಾರ್ಪಾಟೂ ಇಲ್ಲ. ರಾಮಕಥಾ ಪ್ರವಾಹವು ವಿಚಾರ, ವಿಷಾದ, ಆಶ್ಚರ್ಯ, ಹಾಸ್ಯ, ಅದ್ಭುತ, ರೌದ್ರ, ಶೃಂಗಾರ, ಇತ್ಯಾದಿ ಬಳಸುಗಳಿಂದ ಪ್ರವಹಿಸಿದೆ. ಇದರ ಅಂತರ್ಮರ್ಮವು ಧರ್ಮ ಪ್ರಧಾನವಾಗಿದೆ.

ಸರಯೂ ನದಿಯ ಹಾಗೆ, ರಾಮಕಥಾ ಪ್ರವಾಹ. ಮಾನಸ ಸರೋವರವೇ ಇದರ ಜನ್ಮಸ್ಥಾನ, ಲಕ್ಷ್ಮಣನು ಗಂಗೆಯಂತೆ. ಇದು ಚಿತ್ತವೆನ್ನುವ ಶಿರಸ್ಸಿನಲ್ಲಿ ಹುಟ್ಟಿದ್ದು. ರಾಮ ವಾಹಿನಿಯು ಕರುಣಾರಸ. ಲಕ್ಷ್ಮಣ ವಾಹಿನಿ ಪ್ರೇಮ, ಭಕ್ತಿ ರಸ. ಸರಯೂ ನದಿ ಗಂಗೆಯಲ್ಲಿ ಸೇರಿದಂತೆ, ಕರುಣಾರಸವು ಭಕ್ತಿರಸದಲ್ಲಿ ಲೀನವಾಗುವುದು. ರಾಮನು ಲಕ್ಷ್ಮಣನೊಂದಿಗೆ ಏಕತ್ವ ಹೊಂದಿರುವನು. ಕರುಣೆ ಪ್ರೇಮಗಳ ಮಿಲನವೇ ರಾಮನ ಅಭಿಮತ. ಅದೇ ಭಾರತಿಯರ ಮತ. ಭಕ್ತರ ವ್ರತ.

ಜೀವಿಗಳ ಪುರುಷಾರ್ಥ ಸಾಧನೆ ಅರ್ಧ ಸತ್ಯ ಮಾತ್ರ. ಅದಕ್ಕೆ ದೈವ ಕರುಣಾ ಕಟಾಕ್ಷವೆನ್ನುವ ಇನ್ನರ್ಧ ಸೇರಿದರೆ ಮಾತ್ರ ಪೂರ್ಣತ್ವವಾಗಬಲ್ಲದು. ಮನುಷ್ಯನು ಪುರುಷಾರ್ಥ ಸಾಧಿಸುವುದರ ಜೊತೆಗೆ ದೈವಾನುಗ್ರಹ ಹೊಂದಲು ಕೂಡ ತಕ್ಕ ಪ್ರಯತ್ನ ಮಾಡಬೇಕು. ಆಚೆಯ ದಡವನ್ನು ಸೇರುವುದಕ್ಕೆ ಇದು ಆಧಾರವಾದ ಸೇತುವೆ. ರಾಮಾಯಣವನ್ನು ಅವತಾರದ ಕಥೆಯೆಂಬ ದೃಷ್ಟಿಯಿಂದ ಪಾರಾಯಣ ಮಾಡಬೇಕೇ ವಿನಾ ಸಾಮಾನ್ಯ ಮಾನವನ ಕಥೆ ಎನ್ನುವ ದೃಷ್ಟಿಯಿಂದ ಮಾಡ ಬಾರದು. ರಾಮನ ಆದರ್ಶಗಳನ್ನು ಆಚರಣೆಯಲ್ಲಿಟ್ಟುಕೊಳ್ಳಲು ಬೇಕಾದ ಕೃಷಿ ಮಾಡಬೇಕು. ಭಗವಂತನು ಸರ್ವಜ್ಞ, ಸರ್ವವ್ಯಾಪಕ, ಸರ್ವಸಂಪನ್ನ. ಅಂಥವನ ನಡೆಯಾಗಲಿ, ನುಡಿಯಾಗಲಿ ಸಾಮಾನ್ಯವಾದುದಲ್ಲ. ಜೀವಿತೋದ್ಧಾರಕ್ಕೆ ಅವಶ್ಯಕ ವಾದ ಮಾರ್ಗದಲ್ಲೆ ಹೋಗುವುದು ಅವನ ವಾಗ್ಧುಟಿ. ರಾಮನನ್ನು ಒಬ್ಬ ಸೂರ್ಯವಂಶೋದ್ಧಾರಕನೆಂದಾಗಲಿ, ಅಯೋಧ್ಯಾ ಪರಿಪಾಲಕ ದಶರಥ ಚಕ್ರ ವರ್ತಿಯ ಮಗನೆಂದಾಗಲಿ ನೋಡಬಾರದು. ಆ ಸಂಬಂಧಗಳೆಲ್ಲಾ ನಿಮಿತ್ತ ಮಾತ್ರ.

ಇಂದಿನ ಪ್ರವಚನಕಾರರು ಪವಿತ್ರ ಚರಿತ್ರೆಗಳನ್ನು ಹೇಳುವಾಗ ವ್ಯಕ್ತಿಯ ಸಂಬಂಧಗ ಳನ್ನು ಮಾತ್ರ ಗಮನದಲ್ಲಿಟ್ಟುಕೊಳ್ಳುವ ಪರಿಪಾಠವಾಗಿರುವುದು ಒಂದು ದೊಡ್ಡ ಲೋಪ. ಹೇಗೆಂದರೆ, ರಾಮನ ತಂದೆಗೆ ಮೂವರು ಹೆಂಡತಿಯರು, ಮೊದಲನೆ ಯವಳು ಹೀಗೆ, ಎರಡನೆಯವಳು ಹೀಗೆ, ಮೂರನೆಯವಳು ಹೀಗೆ, ದಾಸಿಯರ ರೂಪ ಹೀಗೆ, ಇಷ್ಟು ವಿಕಾರ, ದಶರಥ ಮಾಡಿದ ಯುದ್ಧ ಇಂಥದ್ದು, ಹೀಗೆ ಲೋಕಾಭಿರಾಮಾಯಣವನ್ನೇ ಹೇಳುವುದರಿಂದ ಶ್ರೋತೃಗಳಿಗೆ ಪ್ರಧಾನವಾದ ಅಂಶಗಳು ತಿಳಿಯದೆ ಹೋಗುವುದು. ವ್ಯರ್ಥ ವಿಷಯಗಳನ್ನು ಬಿಟ್ಟು ಸಾರ್ಥಕ ವಿಷಯಗಳನ್ನು ಹೇಳುವುದೇ ಚರಿತ್ರೆಯ ಪವಿತ್ರತೆ ಎನ್ನುವುದನ್ನು ಮನಗಾಣಬೇಕು. ಪಾವಿತ್ರ್ಯವು ಚರಿತ್ರೆಯ ಅಂತರ್ ಪ್ರವಾಹ. ಅದನ್ನು ಶ್ರದ್ಧೆಯಿಂದ ಹುಡುಕಿದರೆ ಸಿಕ್ಕುವುದೆ ವಿನಾ ಮೇಲು ಮೇಲಿನ ನೋಟಕ್ಕೆ ಅದು ಸಿಕ್ಕುವಂಥದ್ದಲ್ಲ. ಭಕ್ತಿ ಮತ್ತು ಶ್ರದ್ಧೆ ಎನ್ನುವ ಕನ್ನಡಕವನ್ನು ಮನೋನೇತ್ರಗಳಿಗೆ ಹಾಕಿಕೊಂಡು ಪರಿಶೀಲಿಸಿದರೆ ಶುದ್ಧವಾದ ಜ್ಞಾನ ಲಭಿಸುವುದು.

ಮಾನವರು ಕಬ್ಬಿನ ರಸವನ್ನು ಹೀರಿ ಸಿಪ್ಪೆಯನ್ನು ಬಿಸಾಡುವಂತೆ, ದುಂಬಿಯು ಪುಷ್ಪದ ಅಂದಚೆಂದಗಳನ್ನು ನೋಡದೆ ಅದರ ಮಧುರವನ್ನು ಹೀರುವಂತೆ, ಮಿಡತೆಯು ಅಗ್ನಿಯ ಪ್ರಕಾಶದಿಂದ ಆಕರ್ಷಿತವಾಗಿ ಅಗ್ನಿಯಿಂದಾಗಬಹುದಾದ ಪ್ರಮಾದವನ್ನು ಯೋಚಿಸದೆ ದೀಪವನ್ನೇ ಸೇರುವಂತೆ, ಸಾಧಕರು ಕಾವ್ಯದಲ್ಲಿನ ಕರುಣಾರಸವನ್ನೇ ಲಕ್ಷ್ಯದಲ್ಲಿಟ್ಟುಕೊಂಡು ಮಿಕ್ಕ ವಿಷಯಗಳನ್ನು ವಿಸರ್ಜಿಸಬೇಕು. ಹಣ್ಣಿನಲ್ಲಿರುವ ಬೀಜಗಳು, ಸಿಪ್ಪೆ, ಪಿಪ್ಪಿ ಬೇರೆ ಮಾಡಿ ರಸವನ್ನೇ ಸ್ವೀಕರಿಸುವುದು ಲೋಕದಲ್ಲಿ ಸಾಮಾನ್ಯ. ಸಿಪ್ಪೆ ಬೀಜಗಳಿಲ್ಲದ ಫಲ ಇರುವುದಿಲ್ಲ. ಹಣ್ಣಿಗೆ ದುಡ್ಡು ಕೊಟ್ಟಿದ್ದೇನೆಂದು ಯಾರೂ ಸಿಪ್ಪೆಯನ್ನು ತಿನ್ನುವುದಿಲ್ಲ, ಬೀಜವನ್ನು ತಿಂದು ಜೀರ್ಣಿಸಿಕೊಳ್ಳಲಾರರು. ಹಾಗೇ, ರಾಮಫಲದಲ್ಲಿ ರಾಕ್ಷಸ ಚರಿತ್ರೆ ಎನ್ನುವ ಸಿಪ್ಪೆ, ದಾನವ ಪ್ರವರ್ತನೆಗಳೆನ್ನುವ ಬೀಜಗಳು, ಲೌಕಿಕ ವಿಷಯಗಳೆನ್ನುವ ನಾರು ಹಾಸುಹೊಕ್ಕಾಗಿ ಸೇರಿರುತ್ತದೆ. ಕರುಣಾರಸವನ್ನೇ ಅಪೇಕ್ಷೆಪಡುವವರು ಈ ವ್ಯರ್ಥ ವಾದ ವಿಷಯಗಳನ್ನು ಮನಸ್ಸಿಗೆ ಹಾಕಿಕೊಳ್ಳದೆ ರಾಮ ಚರಿತ್ರೆಯನ್ನು ಓದುವುದು ಉತ್ತಮ.

ಒಮ್ಮೆ ಪರೀಕ್ಷಿತ್ ಮಹಾರಾಜನು ಶುಕನಿಗೆ ನಮಸ್ಕಾರಮಾಡಿ, "ಸ್ವಾಮೀ! ಬಹಳ ಕಾಲದಿಂದಲೂ ಒಂದು ಸಂಶಯ ನನ್ನನ್ನು ಬಾಧಿಸುತ್ತಿದೆ. ಅದನ್ನು ನೀವಲ್ಲದೆ ಇತರರು ಪರಿಹರಿಸಲಾರರೆನ್ನುವುದು ನನಗೆ ಗೊತ್ತು. ನೀವು ಬೇರೆ ಭಾವಿಸದೆ, ಈ ದಾಸನ ಸಂಶಯವನ್ನು ನಿರ್ಮೂಲ ಮಾಡಬೇಕು. ಅದೇನೆಂದರೆ, ನಾನು ನಮ್ಮ ವಂಶದ ಮೂಲ ಪುರುಷನಾದ ಮನು ಮೊದಲ್ಗೊಂಡು ಈಚೆಗಿನ ನಮ್ಮ ತಾತ ತಂದೆಯರವರೆಗೆ ಎಲ್ಲರ ಚರಿತ್ರೆಯನ್ನೂ ಕೇಳಿದೆ, ಓದಿದೆ. ಯಾರ ಚರಿತ್ರೆಯಲ್ಲಿ ನೋಡಿದರೂ ಯಾರೋ ಒಬ್ಬ ಮಹರ್ಷಿಯು ರಾಜನನ್ನು ಆಶ್ರಯಿಸಿರುವುದೂ ಮಹಾ ಜ್ಞಾನವೃದ್ಧರಾದ ಪಂಡಿತರು ರಾಜನ ಆಸ್ಥಾನದಲ್ಲಿರುವುದೂ ಕಂಡು ಬರುವುದು. ಸರ್ವಸಂಘ ಪರಿತ್ಯಾಗಿಗಳಾದ ಋಷಿಗಳೂ ಲೋಕ ಮಿಥ್ಯ, ಬ್ರಹ್ಮ ಸತ್ಯ ಎಂದು ಗುರುತಿಸಿದ ಪಂಡಿತರೂ ರಾಜನನ್ನು ಆಶ್ರಯಿಸಿರುವುದರ ಅಂತರಾರ್ಥವು ಏನೋ ಇರಬೇಕು. ಕಾರಣವಿಲ್ಲದ ಕಾರ್ಯವನ್ನು ದೊಡ್ಡವರು ಆಲೋಚಿಸುವು ದಿಲ್ಲ, ಆಚರಿಸುವುದಿಲ್ಲ. ಆದ್ದರಿಂದ, ಈ ಸಂಶಯವನ್ನು ನಿವಾರಿಸಿ ನನ್ನನ್ನು ಧನ್ಯನನ್ನಾಗಿ ಮಾಡಬೇಕು," ಎಂದು ಪ್ರಾರ್ಥಿಸಿದನು.

ಶುಕನು ನಕ್ಕು, "ರಾಜಾ! ಸರಿಯಾದ ಪ್ರಶ್ನೆ ಕೇಳಿದೆ. ಹೇಳುತ್ತೇನೆ ಕೇಳು. ಮಹನೀಯ ರಾದ ಋಷಿಗಳೂ ಪವಿತ್ರರಾದ ಪಂಡಿತರೂ ನಿಜವಾದ ಲೋಕಪಾಲಕರು. ತಾವು ತಿಳಿದ ಸತ್ಯವನ್ನು, ಆಚರಿಸಿದ ಪವಿತ್ರ ಕರ್ಮಗಳನ್ನು, ಪಡೆದುಕೊಂಡ ದಿವ್ಯ ದೈವಾನುಗ್ರಹವನ್ನು ಸಕಲ ಮಾನವರಿಗೂ ತಿಳಿಸಿ, ಲೋಕ ಶಾಂತಿಯನ್ನು

ಸಾಧಿಸಬೇಕೆನ್ನುವ ಇಚ್ಛೆಯಿಂದ ಪರಿಪಾಲನಾ ದಕ್ಷರಾದ ರಾಜರುಗಳೊಂದಿಗೆ ಸೇರಿ, ಅಂಥ ಉತ್ತಮ ಮಾರ್ಗಗಳನ್ನು ರಾಜರ ಚಿತ್ತದಲ್ಲಿ ತುಂಬಿ, ಶಾಸನ ರೂಪದಲ್ಲಿ ಜನರಂಜಕವಾದ ಧರ್ಮ ಕರ್ಮಗಳನ್ನು ವಿಧಿಸುತ್ತಿದ್ದರು. ಆ ಕಾಲದ ರಾಜರೇ ಮಹರ್ಷಿಗಳನ್ನೂ ಪಂಡಿತರುಗಳನ್ನೂ ಆಹ್ವಾನಿಸಿ, ರಾಜನೀತಿಯನ್ನು ಅವರಿಂದ ತಿಳಿದುಕೊಂಡು ಅದಕ್ಕೆ ತಕ್ಕಂತೆ ಶಾಸನಗಳನ್ನು ಮಾಡುತ್ತಿದ್ದರು. ಪ್ರಜೆಗಳಿಗೆ ಪ್ರಭುವೇ ರಕ್ಷಕನಾದ್ದರಿಂದ, ಪ್ರಭುವು ಸರ್ವಗುಣ ಸಂಪನ್ನನಾಗಿ ಸರ್ವಧರ್ಮ ಪರಾಯಣನಾಗಿ ಸಮಸ್ತ ವಿದ್ಯಾ ಪಾರಂಗತನಾಗಿದ್ದರೆ ಪ್ರಜೆಗಳ ಯೋಗಕ್ಷೇಮವನ್ನು, ಪರಿಪಾಲನೆಯನ್ನು ಸಕ್ರಮವಾದ ಮಾರ್ಗದಲ್ಲಿ ಮಾಡುವ ನೆನ್ನುವ ಕಾರಣದಿಂದ, ಲೋಕದ ಸುಖ ಶಾಂತಿಗಾಗಿ ಇವರು ರಾಜಗುರುಗಳನ್ನು ಆಶ್ರಯಿಸುತ್ತಿದ್ದರು. ಇಷ್ಟೇ ಅಲ್ಲ, ಜನಸುಖದಾಯಕನೂ ರವಿಕುಲ ನಾಯಕನೂ ಕೌಸಲ್ಯಾಕಿಶೋರನೂ ವಸುದೇವನಂದನನೂ ಗೋಪೀ ವಲ್ಲಭನೂ ಗೋಲೋಕ ವಾಸಿಯೂ ಆದ ಶ್ರೀಮನ್ನಾರಾಯಣನು ರಾಜವಂಶದಲ್ಲಿ ಜನಿಸುವನೆನ್ನುವುದು ವೇದಶಾಸ್ತ್ರಗಳಲ್ಲಿ ಸೂಚಿಸಲ್ಪಟ್ಟಿರುವುದರಿಂದ, ಭಗವದ್ದರ್ಶನಾರ್ಥವಾಗಿ ಅಂಥ ಸಂದರ್ಭಗಳಲ್ಲಿ ರಾಜರುಗಳನ್ನು ಹೋಗಿ ಸೇರಲು ಅವಕಾಶ ಇರುವುದಿಲ್ಲವೆಂದೂ ಹಾಗೆ ಸೇರಿದರೂ ದೈವಾನಂದವನ್ನು ಮನಸಾರೆ ಅನುಭವಿಸಲು ಸಾಧ್ಯವಿಲ್ಲ ವೆಂದೂ ಯೋಚಿಸಿ, ದಿವ್ಯದೃಷ್ಟಿಯಿಂದ ಕೆಲವು ಮಹನೀಯರು ಮೊದಲೇ ಆಯಾ ರಾಜರ ಆಸ್ಥಾನಗಳನ್ನು ಸೇರಿ ದೈವಾಗಮನಕ್ಕೆ ಕಾತರರಾಗಿರುತ್ತಿದ್ದರು.

ಅಂಥವರೇ ವಸಿಷ್ಠ, ವಾಮದೇವ, ವಿಶ್ವಾಮಿತ್ರ, ಗೌತಮ, ಗರ್ಗ, ಅಗಸ್ತ್ಯ, ಇತ್ಯಾದಿ ಮಹರ್ಷಿಗಳು. ಇವರಿಗೆ ಯಾವುದರ ಕೊರತೆ? ತ್ಯಾಗಿಗಳೂ ವಿರಾಗಿಗಳೂ ಆದ ಈ ಋಷಿಗಳು ರಾಜರೊಂದಿಗೆ ವ್ಯರ್ಥ ಕಾಲ ಕಳೆಯಲು ಅವರ ಆಸ್ಥಾನ ಸೇರಲಿಲ್ಲ. ಅವರಿಂದ ಕಾಣಿಕೆಗಳನ್ನು ಪಡೆಯಲು, ಇಲ್ಲವೆ, ಅವರು ಕೊಡುವ ತಲೆ ಭಾರದ ಬಿರುದುಗಳನ್ನು ಹೊತ್ತು ಮೆರೆಯಲು ಅವರಲ್ಲಿಗೆ ಹೋದವರಲ್ಲ. ವಿಶ್ವನಾಥನ ದರ್ಶನಕ್ಕಾಗಿ, ಧರ್ಮರಕ್ಷಣಾ ದೀಕ್ಷೆಗಾಗಿ ಅವರು ಲೋಕಪಾಲರ ಬಳಿ ಇರುತ್ತಿದ್ದರು. ಇದಲ್ಲದೆ ಬೇರೆ ಯಾವ ಕಾರಣವೂ ಇಲ್ಲ. ಆ ಕಾಲದ ರಾಜರುಗಳೂ ಕೂಡ ದೈವಚಿಂತನಾತತ್ಪರರಾಗಿ, ಪ್ರಜಾ ಪರಿಪಾಲನೆಗೆ ತಕ್ಕ ಮಾರ್ಗಗಳನ್ನು ಪಂಡಿತರುಗಳಿಂದಲೂ ಋಷಿಗಳಿಂದಲೂ ತಿಳಿಯಲು ಉತ್ಸುಕರಾಗಿ, ತಾವೇ ಆಶ್ರಮಗಳಿಗೆ ಹೋಗಿ, ಇಲ್ಲವೇ ಅವರನ್ನೇ ಅರಮನೆಗೆ ಆಹ್ವಾನಿಸಿ ತಿಳಿಯುತ್ತಿದ್ದರು. ಅವರೊಂದಿಗೆ ಸಮಾಲೋಚಿಸುತ್ತಿದ್ದರು. ಆ ಕಾಲದಲ್ಲಿ ನಿಸ್ವಾರ್ಥರಾದ ಋಷಿಗಳೂ ಅಹಂಕಾರರಹಿತ, ಆಶಾರಹಿತ ಪಂಡಿತರೂ ರಾಜರುಗಳಿಗೆ ಸಲಹೆಗಾರರಾಗಿ ಇದ್ದುದರಿಂದಲೇ, ಅನ್ನ ಪಾನೀಯ ಬಟ್ಟೆ ಬರೆ ವಸತಿಗೆ ಯಾವ ಕೊರತೆಯೂ

ಇಲ್ಲದೆ ನಿತ್ಯ ಕಲ್ಯಾಣ, ಪಚ್ಚೆ ತೋರಣಗಳಿಂದ ಪ್ರಜಾ ಜೀವನ ಸಾಗುತ್ತಿತ್ತು. ಪ್ರಜಾಕ್ಷೇಮವೇ ಪ್ರಭುವಿನ ದೇಹವೆಂದು ಪ್ರಭುವೂ ಪ್ರಭುವೇ ಪ್ರಜೆಗಳ ಹೃದಯವೆಂದು ಪ್ರಜೆಗಳೂ ತಿಳಿದು ಜೀವಿಸುತ್ತಿದ್ದರು," ಎಂದು ಸಭೆಯಲ್ಲಿ ಶುಕನು ಘಂಟಾಘೋಷವಾಗಿ ಹೇಳಿದನು.

ನೋಡಿದಿರಾ! ಮಹನೀಯರು ಯಾವ ಕೆಲಸ ಮಾಡಿದರೂ ಯಾರೊಂದಿಗೆ ಸೇರಿದರೂ ಲಕ್ಷ್ಯವು ದೈವತತ್ತ್ವದ ಮೇಲೇ ಇರುತ್ತಿದ್ದುದರಿಂದ ಅವರ ಕಥೆಗಳ ಪಾರಾಯಣ ಮಾಡುವಾಗ ಸರ್ವ ಕರ್ಮಗಳು ಧರ್ಮ ಸ್ವರೂಪವನ್ನು ಧರಿಸಿ ಲೋಕವನ್ನು ಉದ್ಧರಿಸಿದುವು. ಪವಿತ್ರ ಕಥೆಗಳ ಪಾರಾಯಣ ಮಾಡುವಾಗ ಲಕ್ಷ್ಯವನ್ನು ದೈವಭಾವದಲ್ಲಿರಿಸಿ, ಕಥೆಯ ದೋಷಗಳ ಕಡೆ ಮನಸ್ಸು ಕೊಡದೆ, ನಿಶ್ಚಲ ನಿಷ್ಠೆಯಿಂದ ಅದರ ನೀತಿ ನಿಯಮಗಳನ್ನು ಹೃದ್ಗತ ಮಾಡಿಕೊಂಡು ಕರ್ತವ್ಯವನ್ನು ನಿರ್ವಹಿಸಬೇಕು.

ಧರ್ಮ ರಕ್ಷಣಾರ್ಥವಾಗಿ ಅವತರಿಸುವ ದೈವದ ಸಮಸ್ತ ವರ್ತನೆಯೂ ಸಾಧಾರಣ ಮಾನವನ ವರ್ತನೆಯಂತೆಯೇ ಇರುವುದು, ಇರಬೇಕು. ಏಕೆಂದರೆ, ಜನರಿಗೆ ಆದರ್ಶವನ್ನು ಬೋಧಿಸುವುದಕ್ಕೆ, ಅನುಭವವುಂಟುಮಾಡುವುದಕ್ಕೆ, ಲೀಲೆಗಳನ್ನು ತೋರಿಸುವುದಕ್ಕೆ ಆ ವರ್ತನೆಗಳು ಸಾಮಾನ್ಯವಾದುವೆಂದು ಕಂಡುಬಂದರೂ ಅದರಲ್ಲಿನ ರಸ, ಸರಸ, ಸೌಂದರ್ಯ ಹಾಗೂ ಪುಷ್ಟಿಗಳು ವಿಶ್ವವನ್ನು ಮೋಹಗೊಳಿಸುವುವು, ಹೃದಯವನ್ನು ಪರಿಶುದ್ಧಗೊಳಿಸುವುವು, ಮನಸ್ಸನ್ನು ಮರೆಸುವುವು, ಮಾಯೆಯನ್ನು ನಾಶ ಮಾಡುವುವು ಮತ್ತು ಮಧುರತ್ವವನ್ನು ಕೊಡುವುವು. ಸಾಮಾನ್ಯವೆಂದು ಕಂಡುಬರುವ ಅವತಾರದ ಚರ್ಯೆಗಳೆಲ್ಲವೂ ಅಸಾಮಾನ್ಯವಾದುವೆ, ಮಹನೀಯವಾದುವೆ, ದಿವ್ಯವಾದುವೆ. ರಾಮಚರಿತ್ರೆ ವ್ಯಕ್ತಿಯೊಬ್ಬನ ಚರಿತ್ರೆಯಲ್ಲ, ವಿಶ್ವಚರಿತ್ರೆಯೆಂದೇ ಹೇಳಬಹುದು. ರಾಮನು ಸಮಷ್ಟಿ ಸ್ವರೂಪನು, ಸರ್ವವ್ಯಾಪಕನು. ರಾಮಚರಿತ್ರೆ ಸ್ವಲ್ಪ ಕಾಲ ನಡೆದದ್ದೆಂದು ತಿಳಿಯಬಾರದು. ಇದು ಆದ್ಯಂತರಹಿತವಾದ ಚರಿತ್ರೆ. ರಾಮೇಚ್ಛೆ ಇಲ್ಲದೆ ಇರುವೆಯೂ ಕುಟುಕದು, ಎಲೆಯೂ ಅಲುಗದು. ಪ್ರಕೃತಿಯಲ್ಲಿ ಪಂಚಭೂತಗಳು ರಾಮೇಚ್ಛೆಯಿಂದಲೇ ತಮ್ಮ ತಮ್ಮ ಕರ್ತವ್ಯಗಳನ್ನು ಮಾಡುತ್ತಿವೆ. ದೃಶ್ಯಗೋಚರವಾದ ಸಮಸ್ತ ವಸ್ತುಜಾಲದಲ್ಲಿ ಇರುವ ಆಕರ್ಷಣ ಶಕ್ತಿಯೇ ಆ ರಾಮಚಂದ್ರ. ಅದರಿಂದಲೇ ಲೋಕ ನಡೆಯುತ್ತಿದೆ. ಆಕರ್ಷಣೆಯೇ ಇಲ್ಲದಿದ್ದರೆ ಪ್ರಕೃತಿಯೇ ಇಲ್ಲ. ಅಂದರೆ ರಾಮನಿಲ್ಲದಿದ್ದರೆ ಲೋಕವೇ ಇಲ್ಲ.

# ೨ ರಾಜ ವಂಶ

ವಿಶುದ್ಧ ಸೂರ್ಯವಂಶದಲ್ಲಿ ಪರಮ ಪ್ರತಾಪಿಯೂ ಯಶಸ್ವಿಯೂ ದೀರ್ಘ ಬಾಹುವೂ ಪುಣ್ಯಶ್ಲೋಕನೂ ಆದ ಖಟ್ವಾಂಗನೆನ್ನುವ ರಾಜನು ಪೃಥ್ವಿಯನ್ನು ಪಾಲಿಸುತ್ತಿದ್ದನು. ಪ್ರಜೆಗಳು ಅವನ ಪರಿಪಾಲನೆಯು ದೈವವೆಂದು ಭಾವಿಸಿ, ನಂಬಿ, ಗೌರವಿಸುತ್ತಿದ್ದರು.

ಆ ಮಹಾರಾಜನಿಗೆ ಏಕೈಕ ಪುತ್ರ. ಅವನೇ ದಿಲೀಪ. ಕುಮಾರನಾದ ದಿಲೀಪನು ದಿನದಿನಕ್ಕೆ ಅಭಿವೃದ್ಧಿ ಹೊಂದುತ್ತಾ ಮಹಾ ತೇಜೋವಂತನಾಗಿ, ತಂದೆಯೊಡನೆ ರಾಜ್ಯಪಾಲನೆಯ ವಿಷಯದಲ್ಲಿ ಪಾಲ್ಗೊಳ್ಳುತ್ತಾ ದೇಶದಲ್ಲಿ ಒಳ್ಳೆಯದು ಕೆಟ್ಟದ್ದನ್ನು ಗಮನಿಸುತ್ತಾ ವಿಚಾರಿಸುತ್ತಾ ಶ್ರದ್ಧಾಳುವಾಗಿ ಪ್ರಜೆಗಳ ಮಧ್ಯದಲ್ಲಿ ಬೆಳೆಯುತ್ತಿದ್ದನು. ತಂದೆಯು, ಕುಮಾರನು ದೊಡ್ಡವನಾಗುತ್ತಿರುವುದನ್ನು ನೋಡಿ ಯುಕ್ತ ವಯಸ್ಸಿನಲ್ಲೆ ವಿವಾಹ ಮಾಡಿ ರಾಜ್ಯಪರಿಪಾಲನಾ ಬಾಧ್ಯತೆಯನ್ನು ಅವನ ಮೇಲೆ ಹೊರಿಸಬೇಕೆಂದು ಸಂಕಲ್ಪಿಸಿದನು. ಎಲ್ಲ ವಿಧದಲ್ಲೂ ಸರಿಹೊಂದುವ ಸೊಸೆಯನ್ನು ತರಬೇಕೆಂದು ಯೋಚಿಸಿ, ಕಡೆಗೆ ಮಗಧನಂದಿನಿಯಾದ ಸುದಕ್ಷಿಣೆಯೊಂದಿಗೆ ಅತ್ಯಂತ ವೈಭವದಿಂದ ವಿವಾಹವನ್ನು ನಡೆಸಿದನು.

ಸುದಕ್ಷಿಣೆಯು ಮಹಾ ಗುಣವಂತೆ. ಸಾಧ್ವಿಯೂ ಸರಳ ಹೃದಯಿಯೂ ಆದ ಅವಳು ಪತಿಯನ್ನು ಅನುಸರಿಸುತ್ತಾ ಪ್ರಾಣಸಮಾನವಾಗಿ ಅವನನ್ನು ಪ್ರೇಮಿಸುತ್ತಾ ಸೇವಿಸುತ್ತಿದ್ದಳು. ಪತಿಯಾದ ದಿಲೀಪನೂ ಕೂಡ ಮಹಾ ಗುಣವಂತನಾದುದರಿಂದ ಅವಳಿಗೆ ಯಾವ ವಿಧವಾದ ಬಾಧೆಯೂ ಇರದಂತೆ ನೋಡಿಕೊಳ್ಳುತ್ತಿದ್ದನು. ರಾಜ್ಯ ಪರಿಪಾಲನಾ ವಿಷಯದಲ್ಲಿ ತಂದೆಯನ್ನು ಅನುಸರಿಸುತ್ತಾ ಕ್ರಮೇಣವಾಗಿ ತಂದೆಯ ಜವಾಬ್ದಾರಿಗಳನ್ನೆಲ್ಲಾ ತಾನೇ ನಿರ್ವಹಿಸುತ್ತಾ ತಂದೆಗೆ ಸ್ವಲ್ಪ ವಿಶ್ರಾಂತಿ ಕೊಡುತ್ತಿದ್ದುದನ್ನು ಗಮನಿಸಿ, ಖಟ್ವಾಂಗನು ಕುಮಾರನ ವಿವೇಕ, ಶಕ್ತಿ ಮತ್ತು ಸಾಮರ್ಥ್ಯಗಳಿಗೆ ತನ್ನೊಳಗೇ ತಾನು ಸಂತೋಷಪಡುತ್ತಿದ್ದನು.

ಹೀಗೆ ಸ್ವಲ್ಪ ಕಾಲ ಕಳೆಯಿತು. ಖಟ್ವಾಂಗನು ಒಂದು ಸುಮುಹೂರ್ತದಲ್ಲಿ ದಿಲೀಪನಿಗೆ ರಾಜ್ಯ ಪರಿಪಾಲನಾ ಪಟ್ಟವನ್ನು ಕಟ್ಟಿದನು. ಅಂದಿನಿಂದಲೂ ದಿಲೀಪ ಮಹಾರಾಜನೆನ್ನುವ ಹೆಸರಿನಿಂದ ಸಪ್ತದ್ವೀಪವತಿಯಾದ ವಸುಂಧರೆಗೆ ಪ್ರಭುವಾಗಿ

ಧರ್ಮಪಾಲನೆ ಮಾಡುತ್ತಿದ್ದನು. ಸಕಾಲದಲ್ಲಿ ಮಳೆ ಬಂದು, ಸಸ್ಯಶ್ಯಾಮಲ ಸಮೃದ್ಧಿಯಾಗಿ ಬೆಳೆದು, ಹೊಟ್ಟೆಬಟ್ಟೆಗೆ ಏನೂ ಕೊರತೆ ಇಲ್ಲದೆ, ನಿತ್ಯ ಕಲ್ಯಾಣ, ವೇದ ಪಾರಾಯಣಗಳಿಂದ, ಶಾಸ್ತ್ರಸಮ್ಮತವಾದ ಯಜ್ಞಯಾಗಾದಿ ಕರ್ಮಗಳಿಂದ, ಎಲ್ಲ ಜಾತಿಯವರೂ ಅವನ ರಾಜ್ಯದಲ್ಲಿ ಹಾಯಾಗಿ ಜೀವಿಸುತ್ತಿದ್ದರು.

ದಿನಗಳು ವರ್ಷಗಳು ಕಳೆದಂತೆ, ಮಹಾರಾಜನನ್ನು ಯಾವುದೋ ಅಶಾಂತಿ ಬಾಧಿಸುತ್ತಿರುವಂತೆ ಅವನ ಮುಖ ವರ್ಚಸ್ಸು ಸೂಚಿಸುತ್ತಿತ್ತು. ಹೀಗೆ ಕೆಲವು ಸಂವತ್ಸರಗಳು ಕಳೆದವು. ಆಸೆ ನೆರವೇರುವುದೆನ್ನುವ ಭರವಸೆ ದಿನ ದಿನಕ್ಕೆ ಕುಂದುತ್ತಿತ್ತು. ಒಂದು ದಿನ ತನ್ನ ರಾಣಿಯಾದ ಸುದಕ್ಷಿಣೆಯೊಂದಿಗೆ ತನ್ನ ದುಗುಡ ವನ್ನು ಹೀಗೆ ತೋಡಿಕೊಂಡನು: "ಪ್ರಿಯೆ! ನಮಗೆ ಈವರೆಗೆ ಸಂತಾನ ಇಲ್ಲದಿರುವು ದರಿಂದ, ನಮಗೆ ಮಕ್ಕಳಿಲ್ಲ ಎನ್ನುವ ಚಿಂತೆಗಿಂತಲೂ ಇಕ್ಷ್ವಾಕು ವಂಶ ಹೇಗೆ ಬೆಳೆಯುವುದೆನ್ನುವ ಚಿಂತೆ ನನ್ನನ್ನು ಬಾಧಿಸುತ್ತಿದೆ. ಇದಕ್ಕೆ ನಾನು ಮಾಡಿದ ಯಾವುದೊ ಪಾಪದ ಫಲ ಕಾರಣವಿರಬೇಕು. ಅದರ ಪರಿಹಾರಾರ್ಥವಾಗಿ ಏನು ಮಾಡಬೇಕೋ ನನಗೆ ತೋಚುತ್ತಿಲ್ಲ. ದೈವ ಕರುಣಾಕಟಾಕ್ಷವನ್ನು ಪಡೆಯುವ ಮಾರ್ಗ ಯಾವುದೆನ್ನುವುದನ್ನು ನಮ್ಮ ಕುಲಗುರುಗಳಾದ ವಸಿಷ್ಠರನ್ನು ವಿಚಾರಿಸಿ ತಿಳಿಯಬೇಕೆಂದು ಈ ದಿನ ನನ್ನ ಮನಸ್ಸು ಬಹಳ ತವಕಪಡುತ್ತಿದೆ. ಇದಕ್ಕೆ ನಿನ್ನ ಅಭಿಪ್ರಾಯವೇನು?" ಎಂದು ಕೇಳಿದನು. ಸುದಕ್ಷಿಣೆಯು ಆಲಸ್ಯ ಮಾಡದೆ, ಆಲೋಚಿಸದೆ, "ನಾಥಾ! ಈ ವಿಚಾರ ಬಹಳ ದಿನಗಳಿಂದ ನನ್ನನ್ನು ಬಾಧಿಸುತ್ತಿದ್ದರೂ ಪತಿ ಆಜ್ಞೆ ಇಲ್ಲದೆ ನನ್ನ ಆಲೋಚನೆಗಳನ್ನು ಹೊರಗೆಡಹುವುದು ತಪ್ಪಾಗುವುದೇನೊ ಎಂದು ನನ್ನಲ್ಲಿ ನಾನು ಅಂದುಕೊಂಡು ಸುಮ್ಮನಿದ್ದೆ. ತಮ್ಮ ಇಚ್ಛೆಯನ್ನು ಅನುಸರಿಸಲು ನಾನು ಸದಾ ಸಿದ್ಧಳೆನ್ನುವುದು ನಿಮಗೆ ಗೊತ್ತಿದೆಯಲ್ಲವೆ? ಇದಕ್ಕೆ ಆಲಸ್ಯವೇಕೆ?" ಎಂದು ತನ್ನ ಅಂಗೀಕಾರವನ್ನು ಸೂಚಿಸಿದಳು. ದಿಲೀಪನು ರಥವನ್ನು ಸಿದ್ಧಪಡಿಸಿ, "ಈ ದಿನ ನಮ್ಮ ಜೊತೆ ಪರಿವಾರವಾಗಲೀ ರಕ್ಷಕ ಭಟರಾಗಲೀ ಯಾರೂ ಬರಬೇಕಾದ್ದಿಲ್ಲ," ಎಂದು ಆಜ್ಞಾಪಿಸಿ, ತಾನೇ ರಥವನ್ನು ನಡೆಸಿಕೊಂಡು ರಾಣಿಯೊಂದಿಗೆ ಗುರುದೇವ ವಸಿಷ್ಠರ ಆಶ್ರಮವನ್ನು ಸೇರಿದನು.

ರಥದ ಶಬ್ದ ಕೇಳಿದೊಡನೆಯೇ ಹೊರಗಿದ್ದ ಆಶ್ರಮವಾಸಿಗಳು ಒಳಗೆ ಹೋಗಿ ಗುರುವಿಗೆ ತಿಳಿಸಿದರು. ವಸಿಷ್ಠರು ಬಾಗಿಲ ಬಳಿಗೆ ಬಂದು, ದಿಲೀಪನನ್ನು ಆಶೀರ್ವದಿಸಿ, ಕುಶಲಪ್ರಶ್ನೆ ಮಾಡುತ್ತಿರಲು, ಅವರ ಜೊತೆಯಲ್ಲೆ ಇದ್ದ ಅರುಂಧತೀದೇವಿಗೆ ರಾಣಿ ಸುದಕ್ಷಿಣೆಯು ನಮಸ್ಕರಿಸಿದಳು. ಅರುಂಧತಿಯು ಅವಳನ್ನು ಆಶೀರ್ವದಿಸಿ ಪ್ರೇಮದಿಂದ ಕುಶಲ ಪ್ರಶ್ನೆ ಮಾಡಿ, ಒಳಗೆ ಕರೆದೊಯ್ದಳು. ರಾಜ ದಿಲೀಪನೂ ಕೂಡ, ಪ್ರಭು ಧರ್ಮವನ್ನು ಅನುಸರಿಸಿ, "ಆಶ್ರಮವಾಸಿಗಳಿಗಾಗಲೀ ತಮಗಾಗಲೀ

ಯಾವ ತೊಂದರೆಯೂ ಇಲ್ಲದೆ, ಅರಣ್ಯದಲ್ಲಿ ಕ್ರೂರ ಮೃಗಗಳ ಬಾಧೆ ಇಲ್ಲದೆ, ನಿಮ್ಮ ನಿತ್ಯಾನುಷ್ಠಾನಗಳು ಸಕ್ರಮವಾಗಿ ನಡೆಯುತ್ತಿವೆ ತಾನೆ?" ಎಂದು ಗುರುಗಳಾದ ವಸಿಷ್ಠರನ್ನು ಕುಶಲಪ್ರಶ್ನೆ ಮಾಡಿದನು. ನಂತರ, ಎಲ್ಲರೂ ಒಳಗೆ ಹೋಗಿ ಅವರವರ ಆಸನಗಳನ್ನು ಸ್ವೀಕರಿಸಿದರು.

ವಸಿಷ್ಠರು ಆಶ್ರಮವಾಸಿಗಳಿಗೆ ತಮ್ಮ ತಮ್ಮ ವಸತಿಗೆ ಹೋಗುವಂತೆ ಆಜ್ಞಾಪಿಸಿ, ರಾಜನು ರಾಣೀ ಸಮೇತನಾಗಿ ಆಶ್ರಮಕ್ಕೆ ಬಂದ ಕಾರಣವೇನೆಂದು ಏಕಾಂತದಲ್ಲಿ ವಿಚಾರಿಸಿದರು. ರಾಜನು ತನಗಿದ್ದ ಕೊರತೆಯ ವಿಷಯವನ್ನು ವಿನಯದಿಂದ ಬಿನ್ನವಿಸಿ, "ನಿಮ್ಮ ಅನುಗ್ರಹವಿಲ್ಲದೆ ಇದಕ್ಕೆ ಅನ್ಯಮಾರ್ಗವಿಲ್ಲ," ಎಂದು ಪ್ರಾರ್ಥಿಸಿದನು.

ರಾಜನ ಪ್ರಾರ್ಥನೆಯನ್ನು ಕೇಳಿ, ವಸಿಷ್ಠರು ಧ್ಯಾನಮಗ್ನರಾಗಿ ಸ್ವಲ್ಪ ಕಾಲ ಮೌನವಾಗಿ ಇದ್ದುದನ್ನು ನೋಡಿ, ರಾಜನೂ ಕೂಡ ತನ್ನ ರಾಣಿಯೊಂದಿಗೆ ದೈವ ಚಿಂತನೆ ಮಾಡುತ್ತಾ ಪದ್ಮಾಸನಾಸೀನನಾಗಿ ಕುಳಿತನು. ನಂತರ, ವಸಿಷ್ಠರು ಕಣ್ಣು ತೆರದು, "ರಾಜಾ, ದೈವೇಚ್ಛೆಗೆ ಎದುರು ಹೋಗುವುದು ಎಂಥವರಿಗೂ ಸಾಧ್ಯವಿಲ್ಲ. ಪುತ್ರಪ್ರಾಪ್ತಿಯಾಗುವಂತೆ ಮಾಡುವ ಶಕ್ತಿ ನನಗಿಲ್ಲ. ನಾನು ಹಾಗೆ ಮಾಡಲಾರೆ. ನಿನಗೊಂದು ಶಾಪವಿದೆ. ಅದೇನೆಂದರೆ, ನೀನೊಮ್ಮೆ ರಾಜಧಾನಿಗೆ ಹಿಂತಿರುಗಿ ಬರುವ ಸಮಯದಲ್ಲಿ ಕಾಮಧೇನುವು ಕಲ್ಪವೃಕ್ಷದ ನೆರಳಿನಲ್ಲಿ ಮಲಗಿ ಮೆಲಕು ಹಾಕುತ್ತಿತ್ತು. ನೀನು ಅದನ್ನು ನೋಡಿಯೂ ಲೆಕ್ಕಿಸದೆ, ವಿಷಯಲೋಲುಪನಾಗಿ, ಅಹಂಕಾರದಿಂದ ರಾಜಭವನವನ್ನು ಸೇರಿಕೊಂಡೆ. ಕಾಮಧೇನುವು ನಿನ್ನಿಂದಾದ ಅಪಮಾನದ ವಿಚಾರ ಮಾಡಿ, ರಾಜನೇ ಗೋವುಗಳನ್ನು ಗೌರವಿಸದಿದ್ದ ಮೇಲೆ ಪ್ರಜೆಗಳು ಹೇಗೆ ಗೌರವಿಸಿಯಾರು ಎನ್ನುವ ಅಭಿಪ್ರಾಯಕ್ಕೆ ಬಂದು, ವೇದಗಳನ್ನು, ಬ್ರಾಹ್ಮಣರನ್ನು, ಗೋವುಗಳನ್ನು ಗೌರವಿಸದ ರಾಜರ ವಂಶ ಅಭಿವೃದ್ಧಿಯಾದರೆ ಲೋಕವೇ ಧರ್ಮಹೀನವಾಗುವುದೆಂದು ನಿಶ್ಚಯಿಸಿ, ನಿನಗೆ ವಂಶೋದ್ಧಾರಕನಾದ ಮಗ ಹುಟ್ಟದಿರಲೆಂದು ಶಪಿಸಿದಳು. ಪುತ್ರನಿಲ್ಲದ ಶೋಕದಿಂದ, ನಿನ್ನ ತಪ್ಪನ್ನು ತಿಳಿದು, ಇಲ್ಲವೆ ಪರಮ ಗುರುವಿನ ಆಜ್ಞೆಯನ್ನು ಶಿರಸಾವಹಿಸಿ, ಯಾವಾಗ ನೀನು ತಿರುಗಿ ಗೋಪೂಜೆ ಪ್ರಾರಂಭಿಸುವಿಯೊ, ಗೋವುಗಳನ್ನು ಗೌರವಿಸುವಿಯೊ, ಆಗ ನಿನ್ನ ವಂಶ ತಿರುಗಿ ವೃದ್ಧಿಯಾಗಲೆಂದು ಕಾಮಧೇನು ಭಾವಿಸಿದ್ದರಿಂದ, ನಿನಗೆ ಈಗ ಪುತ್ರನಿಲ್ಲದ ಬಾಧೆ ಪೀಡಿಸುತ್ತಿದೆ. ಆದ್ದರಿಂದ, ಇಂದಿನಿಂದ ನೀನು ಸತೀ ಸಮೇತನಾಗಿ ಸಕ್ರಮವಾಗಿ ಗೋಪೂಜೆ ಮಾಡಿದರೆ ತಪ್ಪದೆ ನಿಮಗೆ ಪುತ್ರಪ್ರಾಪ್ತಿಯಾಗುವುದು.

ಈಗ ಸಾಯಂ ಸಮಯ ಸನ್ನಿಹಿತವಾಗುತ್ತಿದೆ. ಇನ್ನೇನು ಗೋವುಗಳು ಬರುವ ಹೊತ್ತಾಯಿತು. ನನಗೂ ಅಗ್ನಿಹೋತ್ರದ ಸಮಯವಾಯಿತು. ನಂದಿನಿ ಕಾಮಧೇನು ಕಾಡಿನಿಂದ ಹಿಂತಿರುಗುವ ಹೊತ್ತಾಯಿತು. ತಡಮಾಡದೆ ಈಗಲೇ ಹೊರಟು ಗೋಸೇವೆ ಮಾಡು. ನಿರಂತರ ಧೇನು ವ್ರತನಿಷ್ಠನಾಗಿರು. ನಂದಿನಿಗೆ ಹೊತ್ತು ಹೊತ್ತಿಗೆ ಬೇಕಾದ ಆಹಾರ ಪಾನೀಯಗಳನ್ನು ಕೊಡುತ್ತಾ ಅದರ ಸ್ನಾನಾದಿಗಳಿಗೆ ಕಾಲವನ್ನು ಗೊತ್ತು ಮಾಡಿ ಜಾಗ್ರತೆಯಿಂದ ನೋಡಿಕೊಳ್ಳುತ್ತಿರು," ಎಂದು ಆಜ್ಞಾಪಿಸಿದರು. ಧೇನು ವ್ರತದ ದೀಕ್ಷೆಕೊಟ್ಟು, ತೀರ್ಥ ಪ್ರಸಾದವಿತ್ತು, ಅವರನ್ನು ಗೋಸೇವೆಗೆ ಕಳುಹಿಸಿ, ತಮ್ಮ ಅನುಷ್ಠಾನಕ್ಕಾಗಿ ನದಿಗೆ ಹೋದರು. ಅಂದಿನಿಂದ ದಿಲೀಪನೂ ರಾಣಿಯೂ ನಂದಿನಿಯನ್ನು ಪ್ರಾಣ ಸಮಾನವಾಗಿ ಪ್ರೇಮಿಸುತ್ತಾ ಪೂಜಿಸುತ್ತಾ ಸೇವಿಸುತ್ತಿದ್ದರು.

ಒಂದು ದಿನ ನಂದಿನಿಯು ಅರಣ್ಯದಲ್ಲಿ ಮೇಯುತ್ತಾ ಸಂಚರಿಸುತ್ತಿರುವಾಗ, ಒಂದು ಸಿಂಹವು ತಿನ್ನಲು ಹವಣಿಸಿ ನಂದಿನಿಯ ಮೇಲೆ ಬಿದ್ದಿತು. ಅದನ್ನು ಕಂಡು ದಿಲೀಪನು ನಂದಿನಿಯನ್ನುಳಿಸಲು ತನ್ನ ಸರ್ವ ಶಕ್ತಿಯನ್ನೂ ಉಪಯೋಗಿಸಿದನು. ಕಡೆಗೆ, ನಂದಿನಿಗೆ ಬದಲಾಗಿ ತನ್ನ ದೇಹವನ್ನು ಒಪ್ಪಿಸುವುದಕ್ಕಾಗಿ ಪ್ರಾಣವನ್ನು ತೆರಲು ಸಿದ್ಧನಾದನು. ಕ್ರೂರ ಮೃಗವಾದರೂ ಆ ಸಿಂಹವು ಪರಮ ಧರ್ಮ ನಿಷ್ಠೆಯುಳ್ಳದ್ದಾಗಿತ್ತು, ನಂದಿನಿ ಕಾಮಧೇನುವನ್ನು ರಕ್ಷಿಸಲು ತನ್ನ ಪ್ರಾಣವನ್ನೂ ಸಹ ಅರ್ಪಿಸಲು ರಾಜನು ಸಿದ್ಧನಾದುದನ್ನು ನೋಡಿ ಅದಕ್ಕೆ ದಯೆ ಬಂದಿತು. ನಂದಿನಿಗೂ ರಾಜನಿಗೂ ಯಾವ ಬಾಧೆಯನ್ನೂ ಉಂಟುಮಾಡದೆ ಅದು ಹೊರಟು ಹೋಯಿತು. ತನ್ನ ಪ್ರಾಣವನ್ನು ಕಾಪಾಡಿದ ದಿಲೀಪನ ಬಗ್ಗೆ ನಂದಿನಿಯು ಕೃತಜ್ಞತಾ ಪೂರ್ವಕವಾದ ಆನಂದವನ್ನು ವ್ಯಕ್ತಪಡಿಸುತ್ತಾ, "ರಾಜಾ! ಇಂದಿಗೆ ನಿನ್ನ ಶಾಪ ವಿಮೋಚನೆಯಾಯಿತು. ನಿನಗೆ ವಿಶ್ವವಿಜಯಿಯೂ ಧರ್ಮಾತ್ಮನೂ ತ್ರಿಲೋಕ ವಿಖ್ಯಾತಿ ಪಡೆಯುವಂಥವನೂ ಕುಲಕೀರ್ತಿಯನ್ನು ಕಾಪಾಡುವವನೂ ಅಷ್ಟೇ ಅಲ್ಲ, ಅವನ ವಂಶದಲ್ಲೇ ಶ್ರೀಮನ್ನಾರಾಯಣನು ಅವತರಿಸುವಂಥ ಸುಪುತ್ರನು ಅತಿ ಶೀಘ್ರದಲ್ಲಿ ಹುಟ್ಟುವನು," ಎಂದು ಆಶೀರ್ವದಿಸಿ, ರಾಜನೊಂದಿಗೆ ಆಶ್ರಮಕ್ಕೆ ಬಂದಿತು.

ಗುರುವು ಸರ್ವಜ್ಞನಾದುದರಿಂದ, ದಿಲೀಪ ಮತ್ತು ಅವನ ರಾಣಿಯ ಮುಖ ನೋಡಿದೊಡನೆಯೆ ವಸಿಷ್ಠರು, "ನಿಮ್ಮ ಅಭೀಷ್ಟ ನೆರವೇರಿತು. ಇನ್ನು ನೀವು ನಿಮ್ಮ ರಾಜ್ಯಕ್ಕೆ ತೆರಳಬಹುದು," ಎಂದು ಆಶೀರ್ವದಿಸಿದರು. ದಿಲೀಪನೂ ರಾಣಿಯೂ ಗುರುವಿಗೆ ನಮಸ್ಕರಿಸಿ, ಆಶ್ರಮವಾಸಿಗಳನ್ನು ಬೀಳ್ಕೊಟ್ಟು, ನಂದಿನಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಹೊರಟು, ರಾಜಧಾನಿಯನ್ನು ಸೇರಿದರು. ಅಂದಿನಿಂ

ದಲೇ ರಾಣಿಯ ಗರ್ಭದಲ್ಲಿ ಕುಮಾರನು ಬೆಳೆಯಲಾರಂಭಿಸಿದನು. ರಾಣಿಗೆ ದಿನ ತುಂಬಿ, ಒಂದು ಸುಮುಹೂರ್ತದಲ್ಲಿ ಪುತ್ರರತ್ನ ಜನಿಸಿತು.

ಈ ವಾರ್ತೆಯು ಪುರಜನರಿಗೆ ತಿಳಿದೊಡನೆಯೆ ಅವರು ಬೀದಿಗಳಿಗೆ ತೋರಣಾಲಂಕಾರ ಮಾಡಿದರು, ಸಂತೋಷದಿಂದ ನರ್ತಿಸಿದರು, ಆರತಿ ಬೆಳಗಿದರು, ಜಯ ಜಯ ಘೋಷಣೆ ಮಾಡಿದರು. ತಮ್ಮ ಸಂತೋಷವನ್ನು ಅನೇಕ ಬಗೆಯಾಗಿ ವ್ಯಕ್ತಪಡಿಸುತ್ತಾ ಸಹಸ್ರಾರು ಜನರು ರಾಜಭವನದ ಬಳಿ ಬಂದು ಸೇರಿದರು. ಇದನ್ನು ಕಂಡ ದಿಲೀಪ ಮಹಾರಾಜನು ಪ್ರಜೆಗಳಿಗೆ ಈ ಶುಭ ಸಮಾಚಾರವನ್ನು ತಿಳಿಸುವಂತೆ ಆಜ್ಞಾಪಿಸಿದನು. ರಾಜಭವನದ ಮುಂದಿನ ವಿಶಾಲ ಪ್ರದೇಶದಲ್ಲಿ ನೆರೆದಿದ್ದ ಸಹಸ್ರಾರು ಪ್ರಜೆಗಳಿಗೆ ತಮಗೊಬ್ಬ ಕುಮಾರರಾಜನು ಜನಿಸಿದ್ದಾನೆ ಎನ್ನುವ ಶುಭವಾರ್ತೆ ತಿಳಿದೊಡನೆ ಕರತಾಳ ಮಾಡಿ, ಜೈ ಜೈಕಾರ ಹಾಕಿ, ತಮ್ಮ ಮನೆಗಳಿಗೆ ತೆರಳಿದರು. ದಿಲೀಪನು ಹತ್ತನೆಯ ದಿನ ಗುರುವನ್ನು ಅರಮನೆಗೆ ಬರಮಾಡಿಕೊಂಡು ನಾಮಕರಣ ಮಹೋತ್ಸವ ನಡೆಸಿದನು. ಜನ್ಮ ನಕ್ಷತ್ರವನ್ನು ಅನುಸರಿಸಿ ಬಾಲಕನಿಗೆ ರಘು ಎನ್ನುವ ಹೆಸರಿಟ್ಟನು.

ರಘು ದಿನದಿನಕ್ಕೆ ಬೆಳೆದು ದೊಡ್ಡವನಾದನು. ಒಂದು ದಿನ ದಿಲೀಪನಿಗೆ ಏನನ್ನಿಸಿತೊ ಏನೊ, ರಾಣಿಯೊಂದಿಗೆ ಮಾತನಾಡುತ್ತಾ, "ಸುದಕ್ಷಿಣೇ! ನಾನು ಅನೇಕ ಘನ ಕಾರ್ಯಗಳನ್ನು ಸಾಧಿಸಿದೆ. ಯಜ್ಞ ಯಾಗಾದಿ ಸತ್ಕರ್ಮಗಳನ್ನು ಮಾಡಿದೆ. ರಾಜರೊಂದಿಗೆ ಭಯಂಕರ ಯುದ್ಧ ಮಾಡಿದೆ. ರಾಕ್ಷಸರನ್ನು ದಮನ ಮಾಡಿದೆ. ಕಡೆಗೆ ಪುತ್ರರತ್ನ ರೂಪದಲ್ಲಿ ಭಗವತ್‌ಕಟಾಕ್ಷವನ್ನೂ ಪಡೆದೆ. ಇನ್ನು ನಮಗೆ ಬೇಕಾದ್ದು ಯಾವುದೂ ಇಲ್ಲ. ಶೇಷ ಕಾಲವನ್ನು ದೈವಾರಾಧನೆಯಲ್ಲಿ ಪೂರ್ತಿ ಮಾಡೋಣ. ರಘುವು ಮಹಾ ಗುಣವಂತ, ಯೋಗ್ಯ. ರಾಜ್ಯ ಪರಿಪಾಲನಾ ಬಾಧ್ಯತೆಯನ್ನು ಅವನಿಗೊಪ್ಪಿಸಿ, ನಾವು ಅರಣ್ಯದಲ್ಲಿ ಕಂದ ಮೂಲಾದಿಗಳನ್ನು ತಿನ್ನುತ್ತಾ ಮಹನೀಯರ ಸೇವೆ ಮಾಡುತ್ತಾ ಶ್ರವಣ, ಮನನ, ನಿಧಿಧ್ಯಾಸನಾದಿ ಕರ್ಮಗಳಿಂದ ಕಾಲವನ್ನು ಪವಿತ್ರ ಮಾಡೋಣ. ತಡಮಾಡದೆ ಬೆಳಗಾಗುತ್ತಲೇ ಮಂತ್ರಿಗಳನ್ನು ಕರೆದು ರಘುವಿನ ಪಟ್ಟಾಭಿಷೇಕಕ್ಕೂ ವಿವಾಹಕ್ಕೂ ತಕ್ಕ ಏರ್ಪಾಟುಗಳನ್ನು ಮಾಡೋಣ. ಈ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು?" ಎಂದು ತೀವ್ರ ವೈರಾಗ್ಯದಿಂದ ರಾಣಿಯನ್ನು ಪ್ರಶ್ನೆ ಮಾಡಿದನು. ಸುದಕ್ಷಿಣೆಯು ಆನಂದಬಾಷ್ಪಗಳನ್ನು ಸುರಿಸುತ್ತಾ, "ನಾಥಾ! ಈ ದಾಸಿಗೆ ಬೇರೇನು ಬೇಕಾಗಿದೆ? ನಿಮ್ಮ ಆಜ್ಞೆಗೆ ನಾನು ಬದ್ಧಳು. ಅವಶ್ಯಕವಾದ ಏರ್ಪಾಡುಗಳನ್ನು ಮಾಡಿ," ಎಂದು, ಆಗಿಂದಾಗಲೇ ಅರಣ್ಯವಾಸಕ್ಕೆ ಹೊರಟವಳಂತೆ ತೋರಿಸಿಕೊಂಡಿದ್ದನ್ನು ನೋಡಿ ರಾಜನಿಗೆ ಮತ್ತಷ್ಟು ಉತ್ಸಾಹ ಹೆಚ್ಚಿತು.

ದಿಲೀಪ ಮಹಾರಾಜನು ಮಂತ್ರಿಗಳನ್ನೂ ಪಂಡಿತರುಗಳನ್ನೂ ಋಷಿಗಳನ್ನೂ ಬರಮಾಡಿಕೊಂಡು ಉದ್ದೇಶವನ್ನು ಅವರಿಗೆ ತಿಳಿಸಿದನು. ರಘುವಿಗೆ ಪಟ್ಟಾಭಿಷೇಕ ಮಾಡಿ, ಅವನಿಗೆ ಒಪ್ಪುವ ರಾಜಕನ್ಯೆಯನ್ನು ಹುಡುಕಿ ವಿವಾಹ ಮಾಡಿ, ಹೇಳ ಬೇಕಾದ ರಾಜನೀತಿಯನ್ನು ಹೇಳಿದನು. ವೇದ ಪೋಷಣೆಯ ವಿಷಯವನ್ನೂ ಪ್ರಜಾ ಕ್ಷೇಮಕ್ಕಾಗಿ ಮಾಡಬೇಕಾದ ಮುಖ್ಯವಾದ ಶಾಸನಗಳನ್ನೂ ರಘುವಿಗೆ ಅತ್ಯಂತ ಪ್ರಧಾನವಾಗಿ ತಿಳಿಸಿ, ಭಗವತ್ ಕಟಾಕ್ಷಕ್ಕಾಗಿ ರಾಣಿಯ ಸಮೇತನಾಗಿ ಅರಣ್ಯಕ್ಕೆ ಹೋದನು.

ರಘುವು ಅಂದಿನಿಂದ ತಂದೆಯಾಣತಿಯಂತೆ, ಪಂಡಿತರ ಆದೇಶಾನುಸಾರ, ಪ್ರಜಾ ಸೌಕರ್ಯವನ್ನೂ ಧರ್ಮ ಸಂರಕ್ಷಣೆಯನ್ನೂ ತನ್ನ ಉಚ್ಛ್ವಾಸ, ನಿಶ್ವಾಸದಂತೆ ಭಾವಿಸಿ, ತನ್ನ ಕರ್ತವ್ಯವನ್ನು ಮಂತ್ರಿಗಳೊಂದಿಗೆ ಸೇರಿ ನಿರ್ವಹಿಸುತ್ತಿದ್ದನು. ರಘುವು ಚಿಕ್ಕವನಾದರೂ ಮಹಾ ಗುಣಶಾಲಿ. ಎಂಥ ಕಠಿಣ ಸಮಸ್ಯೆಯನ್ನೂ ಲೀಲಾಜಾಲವಾಗಿ ಗ್ರಹಿಸಿ, ಅದಕ್ಕೆ ತಕ್ಕ ಪರಿಹಾರೋಪಾಯ ಕಂಡುಹಿಡಿದು ನಿವಾರಿಸುತ್ತಿದ್ದುದು ಮಾತ್ರವಲ್ಲದೆ, ಪ್ರಜಾರಂಜಕನಾಗಿಯೂ ಪ್ರವರ್ತಿಸುತ್ತಿದ್ದನು. ದುರ್ಮಾಗಿಗಳಾದ ರಾಜರುಗಳಿಗೆ ತಕ್ಕ ಬುದ್ಧಿ ಹೇಳಿ ಅವರನ್ನು ಸಾಮ, ದಾನ, ಭೇದ, ದಂಡೋಪಾಯಗಳಿಂದ ಶಿಕ್ಷಿಸಿ, ಪ್ರಜಾನುಕೂಲಗಳನ್ನೂ ಧರ್ಮ ರಕ್ಷಣೆಗೆ ಅವಶ್ಯಕವಾದ ಕರ್ಮಾಚರಣೆಗಳನ್ನೂ ಮಾಡುತ್ತಿದ್ದನು. ರಘು ಮಹಾರಾಜನ ಈ ವಿಧವಾದ ರಾಜ್ಯ ಪರಿಪಾಲನೆಯನ್ನು ಆಬಾಲ ಗೋಪಾಲರಾದಿಯಾಗಿ ಎಲ್ಲರೂ ಕೊಂಡಾಡಲಾರಂಭಿಸಿದರು. ತಂದೆಗೂ ಮೀರಿದ ಬಲಶಾಲಿ, ಧೈರ್ಯಶಾಲಿ, ಗುಣಶಾಲಿ ಎನ್ನುವ ಸಾರ್ಥಕ ನಾಮವನ್ನು ಸಂಪಾದಿಸಿದನು. ಅರಣ್ಯದಲ್ಲಿ ತಪಸ್ಸ ನ್ನಾಚರಿಸುತ್ತಿದ್ದ ಮುನಿಗಳಿಗೂ ಸಾಧುಗಳಿಗೂ ತಕ್ಕ ಭದ್ರತೆಯನ್ನೊದಗಿಸಿ, ಅವರ ಅವಶ್ಯಕತೆಗಳನ್ನು ಪ್ರತ್ಯೇಕವಾಗಿ ತಾನೇ ನೋಡಿಕೊಳ್ಳುತ್ತಾ ಋಷಿಗಳ ಆಶೀರ್ವಾ ದಕ್ಕೂ ಕೃಪೆಗೂ ಪಾತ್ರನಾಗಿದ್ದನು.

ಇದೇ ಸಮಯದಲ್ಲಿ ವರತಂತು ಎನ್ನುವ ಒಬ್ಬ ಮಹರ್ಷಿಗೆ ಕೌತ್ಸನೆನ್ನುವ ಗುಣ ವಂತ ಶಿಷ್ಯನಿದ್ದನು. ಅವನು ವಿದ್ಯಾಭ್ಯಾಸ ಪೂರ್ತಿಯಾದ ಮೇಲೆ, ಗುರುದಕ್ಷಿಣೆಗಾಗಿ ರಘುವನ್ನು ಆಶ್ರಯಿಸಿ, ಅವನಿಂದ ಧರ್ಮರೀತಿಯಾಗಿ ಪಡೆದ ಧನವನ್ನು ಗುರು ದಕ್ಷಿಣೆಯಾಗಿ ವರತಂತುವಿಗೆ ಸಲ್ಲಿಸಿದನು. ರಘು ಮಹಾರಾಜನು ಎಂಥ ನೀತಿ ಮಾರ್ಗದಲ್ಲಿ ಸಂಪಾದಿಸಿದ ಹಣವನ್ನು ತನಗೆ ಕೊಟ್ಟಿದ್ದ ಎನ್ನುವುದನ್ನು ಅವನು ತಿಳಿದಿದ್ದನು. ಪ್ರಜೆಗಳಿಗೆ ಬಾಧೆ ಕೊಡದೆ ಅವಶ್ಯಕವಾದುದಕ್ಕಿಂತ ಒಂದು ಕಾಸೂ ಅಧಿಕವಾಗಿ ಪ್ರಜೆಗಳಿಂದ ಅಪೇಕ್ಷಿಸದೆ, ದೈವ ಕಟಾಕ್ಷವನ್ನೇ ಪ್ರಧಾನ ಗುರಿಯಾಗಿಟ್ಟು ಕೊಂಡು ರಾಜ್ಯಪಾಲನೆ ಸಾಗಿಸುತ್ತಿದ್ದ ರಘು ಮಹಾರಾಜನ ಮೇಲೆ ಕೌತ್ಸನಿಗೆ

ಅಮಿತ ವಾತ್ಸಲ್ಯ ಹುಟ್ಟಿ, ತುಂಬು ಹೃದಯದಿಂದ, "ರಾಜಾ! ಶ್ರೀಘ್ರದಲ್ಲೇ ನಿನಗೆ ಲೋಕ ಪ್ರಖ್ಯಾತಿ ಹೊಂದುವ, ಸದ್ಗುಣರಾಶಿಯಾದ ಕುಮಾರರತ್ನ ಪ್ರಾಪ್ತವಾಗಲಿ," ಎಂದು ಆಶೀರ್ವದಿಸಿ ಹೊರಟುಹೋದನು.

ಆ ಆಶೀರ್ವಾದದ ಫಲವೋ ಎನ್ನುವಂತೆ ಹತ್ತು ತಿಂಗಳು ಕಳೆದೊಡನೆಯೇ ರಘುವಿಗೆ ವಜ್ರದಂಥ ಕಾಂತಿಯುಳ್ಳ ಕುಮಾರನು ಹುಟ್ಟಿದನು. ಪಂಡಿತರ, ಪುರೋಹಿತರ ಸಲಹೆಯನ್ನು ಅನುಸರಿಸಿ, ಅವನಿಗೆ 'ಅಜ' ಎನ್ನುವ ಹೆಸರಿಟ್ಟರು. ಅಜನು ಬಹು ಸುಂದರವಾಗಿದ್ದನು. ದಿನದಿನಕ್ಕೆ ಪ್ರವರ್ಧಮಾನಕ್ಕೆ ಬರುತ್ತಿದ್ದನು. ಪ್ರತ್ಯೇಕ ಶಿಕ್ಷಣದ ಮೂಲಕ ಅವನಿಗೆ ವಿದ್ಯಾ ಬುದ್ಧಿ ದೊರೆಯಿತು. ಎಲ್ಲ ವಿದ್ಯೆಗಳಲ್ಲೂ ಒಳ್ಳೆಯ ತರಬೇತಿ ಪಡೆದನು. ತಂದೆಗಿಂತಲೂ ಮಹಾ ವಿದ್ಯಾವಂತನೆನ್ನುವ ಹೆಸರು ಸಂಪಾದಿಸಿದನು.

ಹೀಗಿರುವಲ್ಲಿ, ರಘು ಮಹಾರಾಜನು ಅವನ ತಂದೆ ದಿಲೀಪನಂತೆಯೇ ಕುಮಾರನಿಗೆ ವಿವಾಹಾದಿ ಮಂಗಳ ಕಾರ್ಯವನ್ನು ನೆರವೇರಿಸಿ, ರಾಜ್ಯಭಾರವನ್ನು ಅವನಿಗೆ ವಹಿಸಬೇಕೆನ್ನುವ ಸಂಕಲ್ಪ ಮಾಡಿದನು. ಮಂತ್ರಿಗಳನ್ನು ಬರಮಾಡಿಕೊಂಡು, ತಕ್ಕ ಏರ್ಪಾಡು ನಡೆಸಿ, ವಿದರ್ಭದೇಶಾಧೀಶನಾದ ಭೋಜರಾಜನ ಸಹೋದರಿ ಇಂದುಮತಿಯೊಂದಿಗೆ ತನ್ನ ಕುಮಾರ ಅಜನ ವಿವಾಹ ಮಾಡಿದನು. ರಾಜ್ಯದ ಬಾಧ್ಯತೆಯನ್ನು ಮಗನಿಗೆ ಒಪ್ಪಿಸಿ, ರಾಣಿ ಸಹಿತವಾಗಿ ಅರಣ್ಯಕ್ಕೆ ತಪಸ್ಸಿಗೆ ಹೋದನು.

ಇತ್ತ ಅಜ ಮಹಾರಾಜನು ಇಂದುಮತಿದೇವಿಯೊಂದಿಗೆ ರಾಜ್ಯಪಾಲನೆ ಮಾಡುತ್ತಾ ಪ್ರಜೆಗಳ ಪ್ರೇಮ ಗೌರವ ಸಂಪಾದಿಸುತ್ತಾ ತಂದೆಯ ಆಜ್ಞೆಯನ್ನು ದಾಟದೆ, ಪೃಥ್ವಿಯನ್ನು ಪಾಲಿಸುತ್ತಿದ್ದನು. ಇಂದುಮತಿಯನ್ನು ಬಿಂಬವೆಂದೂ ಪ್ರಕೃತಿಯನ್ನು ಪ್ರತಿಬಿಂಬವೆಂದೂ ಭಾವಿಸಿ ಅಜನು ಅತ್ಯಂತ ಆನಂದದಿಂದ ಕಾಲ ಕಳೆಯುತ್ತಾ ಇಬ್ಬರೂ ಅರಣ್ಯಕ್ಕೆ ಹೋಗಿ, ಸಹಜ ಸೌಂದರ್ಯಯುಕ್ತವಾದ ಪ್ರಕೃತಿಯನ್ನು ನೋಡುತ್ತಾ ದಿನಗಳನ್ನು ಹಾಗೂ ವಾರಗಳನ್ನು ಅರಣ್ಯದಲ್ಲೇ ಕಳೆಯುತ್ತಿದ್ದರು. ಹೀಗಿರುವಲ್ಲಿ, ಇಂದುಮತಿ ದೇವಿಗೆ ನವಮಾಸಗಳು ತುಂಬಿ, ಪುತ್ರನಿಗೆ ಜನ್ಮವಿತ್ತಳು. ಮಗುವಿನ ತಂದೆ ತಾಯಿಗಳು ಆನಂದದಿಂದ ವಸಿಷ್ಠರಿಗೆ ವಾರ್ತೆ ಕಳಿಸಿ, ಮಗುವಿನ ಜಾತಕವನ್ನು ಬರೆಸಿ, ನಾಮಕರಣಕ್ಕೆ ಬೇಕಾದ ಏರ್ಪಾಟುಗಳನ್ನು ಮಾಡಿದರು. ಹತ್ತನೇ ದಿನ ಪಂಡಿತರುಗಳನ್ನು ಕರೆಸಿ ಮಗುವಿಗೆ ದಶರಥನೆನ್ನುವ ಹೆಸರಿಟ್ಟರು.

ದಶರಥನು ಎಲ್ಲರ ಕಣ್ಮಣಿಯಾಗಿ, ದಾಸ ದಾಸಿಯರು ಆಡಿಸುತ್ತಿದ್ದರೆ ಕೇಕೆ ಹಾಕುತ್ತಾ ಕೈ ಕಾಲು ಆಡಿಸುತ್ತಾ ಆನಂದವೇ ತನ್ನ ಜೀವಿತವೋ ಎನ್ನುವಂತೆ ದಿನ

ದಿನ ಅಭಿವೃದ್ಧಿ ಹೊಂದುತ್ತಿದ್ದನು. ಒಂದು ದಿನ ಅಜನು ಇಂದುಮತಿಯೊಂದಿಗೆ ವಾಡಿಕೆಯಂತೆ ವಿಹಾರಾರ್ಥವಾಗಿ ಉದ್ಯಾನವನಕ್ಕೆ ಹೋದನು. ಆ ದಿನ ಎಂದಿಗಿಂತ ವಿಶೇಷವಾದ ಉತ್ಸಾಹದಿಂದ ಪ್ರಕೃತಿ ದೃಶ್ಯಗಳನ್ನು ಅನುಭವಿಸುತ್ತಾ ಬಹು ದೂರ ಹೋಗಿ, ಒಂದು ತಂಪಾದ ನೆರಳಿನಲ್ಲಿ ಇಬ್ಬರೂ ಕುಳಿತು ಮಾತನಾಡಿಕೊಳ್ಳುತ್ತಿರುವಾಗ, ಜೋರಾಗಿ ಗಾಳಿ ಬೀಸಿತು. ಆ ಗಾಳಿಯ ಪರಿಮಳ ವರ್ಣನಾತೀತ. ಜೊತೆಗೆ, ಅತಿ ಮಧುರವಾದ ಗಾನವೂ ಕೇಳಿಸಿತು. ಇಬ್ಬರೂ ಎದ್ದು ಸುತ್ತಲೂ ಪರೀಕ್ಷಿಸಿದಾಗ ಆಕಾಶದಲ್ಲಿ ಮೇಘಗಳ ಮಧ್ಯೆ ಬ್ರಹ್ಮನ ಮಾನಸ ಪುತ್ರನಾದ ನಾರದನು ಅತಿವೇಗದಿಂದ ಎಲ್ಲಿಗೋ ಹೋಗುತ್ತಿದ್ದುದು ಕಾಣಿಸಿತು. ಆಗ, ನಾರದನು ಶಿಖೆಯಲ್ಲಿ ಮುಡಿದಿದ್ದ ಸುಗಂಧ ಪುಷ್ಪಗಳಲ್ಲೊಂದು ಗಾಳಿಗೆ ಹಾರಿ ಬಂದು ಇಂದುಮತಿಯ ಶಿರದಮೇಲೆ ಬಿದ್ದಿತು. ಅಜ ಮಹರಾಜನು ಈ ಆಶ್ಚರ್ಯವನ್ನು ನೋಡುತ್ತಿರುವಂತೆಯೇ ಇಂದುಮತಿದೇವಿಯು ನೆಲಕ್ಕುರುಳಿ, ಶಾಶ್ವತವಾಗಿ ಕಣ್ಣು ಮುಚ್ಚಿದಳು.

ಅವಳನ್ನು ಪ್ರಾಣ ಸಮಾನವಾಗಿ ಪ್ರೇಮಿಸುತ್ತಾ ಜೀವಿಸುತ್ತಿದ್ದ ಅಜನು ಈ ದುರಂತವನ್ನು ಸಹಿಸಲಾರದೆ ಪರಿತಪಿಸಿದನು. ಅವನ ರೋದನ ಅರಣ್ಯವನ್ನೆಲ್ಲಾ ವ್ಯಾಪಿಸಿತು. ಭೂಮಿಯು ಕಂಪಿಸಿತು. ವೃಕ್ಷಗಳೂ ಕೂಡ ಚೈತನ್ಯರಹಿತವಾಗಿ ಆಶ್ಚರ್ಯಪಡುವಂತೆ ಕಾಣಿಸಿತು. ಅಜ ಮಹಾರಾಜನು ಇಂದುಮತಿದೇವಿಯ ದೇಹದ ಮೇಲೆ ಬಿದ್ದು ಕಣ್ಣೀರ ಕಾಲುವೆ ಹರಿಸುತ್ತಾ ರೋದಿಸುತ್ತಿದ್ದುದನ್ನು ಕೇಳಿ, ನಾರದನು ಕೆಳಗಿಳಿದು ಬಂದನು.

ಅಜನನ್ನು ಸಮಾಧಾನಪಡಿಸುತ್ತಾ ನಾರದನು, "ರಾಜಾ! ಮೃತ್ಯುವಿನ ಬಗ್ಗೆ ಆಶ್ಚರ್ಯವೇಕೆ? ಇದರಲ್ಲಿ ಶೋಕ ಕೆಲಸಕ್ಕೆ ಬಾರದು. ಕಾಯಕ್ಕೆ ಜನನ ಮರಣಗಳು ಸಾಮಾನ್ಯ. ಜನನಕ್ಕೆ ಏನು ಕಾರಣವೋ ಮರಣಕ್ಕೂ ಅದೇ ಕಾರಣ. ಇವುಗಳಿಗೆ ಕಾರಣ ಹುಡುಕುವುದು ಹುಚ್ಚುತನ. ದೈವ ನಿರ್ಣಯಕ್ಕೆ ಕಾರಣ ಇರುವುದಿಲ್ಲ. ಇದನ್ನು ಅರ್ಥಮಾಡಿಕೊಳ್ಳುವುದು ಸಾಮಾನ್ಯ ಮಾನವರಿಗೆ ಅಸಾಧ್ಯ. ಅವರವರ ಬುದ್ಧಿ ಶಕ್ತಿ ಅನುಸರಿಸಿ ಸ್ವಲ್ಪ ಮಟ್ಟಿಗೆ ಅದನ್ನು ಊಹಿಸಬಲ್ಲರೇ ವಿನಾ ಬುದ್ಧಿಗೆ ಅತೀತವಾದ ತತ್ತ್ವವನ್ನು ಮಾನವರು ಹೇಗೆ ತಾನೆ ತಿಳಿಯಬಲ್ಲರು? ಮರಣವು ಪ್ರತಿ ಕಾಯಕ್ಕೂ ತಪ್ಪಿದ್ದಲ್ಲ. ಆದರೆ, ಇಂದುಮತಿಯ ಮರಣ ಒಂದು ಹಿನ್ನೆಲೆಯಿಂದ ಕೂಡಿರುವುದರಿಂದ ಕಾರಣ ಹೇಳಬೇಕಾಗಿ ಬಂದಿದೆ," ಎಂದನು.

ಅಜ ಮಹಾರಾಜನನ್ನು ಸಮೀಪಿಸಿ, "ರಾಜಾ! ಪೂರ್ವದಲ್ಲಿ ತೃಣಬಿಂದು ಎಂಬ ಋಷಿಯು ಘೋರ ತಪಸ್ಸನ್ನಾಚರಿಸುತ್ತಿರುವಾಗ, ಅವನ ತಪೋಶಕ್ತಿಯನ್ನು ಪರೀಕ್ಷಿ

ಸುವ ಸಲುವಾಗಿ ಇಂದ್ರನು ಹರಿಣಿ ಎನ್ನುವ ದೇವಕನ್ಯೆಯನ್ನು ಕಳಿಸಿದನು. ಅವಳು ತೃಣಬಿಂದುವಿನ ತಪೋಭಂಗ ಮಾಡಲು ಬಹಳ ಪ್ರಯತ್ನ ಮಾಡಿದಳು. ಅವು ಯಾವುದಕ್ಕೂ ಋಷಿಯು ವಿಚಲಿತನಾಗದೆ, ಕಣ್ಣುಗಳನ್ನು ತೆರೆದು, 'ಪರಮ ಪವಿತ್ರವಾದ ತಪಸ್ಸನ್ನು ಭಂಗಪಡಿಸಲು ಹೊರಟ ನೀನು ಸಾಮಾನ್ಯ ವ್ಯಕ್ತಿ ಅಲ್ಲ. ನೀನು ದೇವಕನ್ಯೆ ಇರಬೇಕು. ಆದರೆ, ಯಾರಾದರೇನಂತೆ, ಪಾಪ ಕಾರ್ಯದಲ್ಲಿ ತೊಡಗಿದೆಯಾದ್ದರಿಂದ ನೀನು ದೇವಲೋಕವನ್ನು ಬಿಟ್ಟು ಮಾನವ ಲೋಕದಲ್ಲಿ ಜನಿಸಿ, ಮಾನವತ್ವವನ್ನು ಅರ್ಥಮಾಡಿಕೊಳ್ಳುತ್ತಾ ಜೀವಿಸು,' ಎಂದು ಶಪಿಸಿ, ಕಣ್ಣುಗಳನ್ನು ಮುಚಿಕೊಂಡು ಮತ್ತೆ ತಪಸ್ಸನ್ನು ಪ್ರಾರಂಭಿಸಿದನು.

ಅದನ್ನು ಕೇಳಿದ ಹರಿಣಿಯು ದಿಗಿಲುಗೊಂಡು, ಕಣ್ಣೀರು ಸುರಿಸುತ್ತಾ ಕೈ ಜೋಡಿಸಿ ಅತ್ಯಂತ ದೀನತೆಯಿಂದ ತನ್ನ ತಪ್ಪನ್ನು ಕ್ಷಮಿಸಬೇಕೆಂದು ಪ್ರಾರ್ಥಿಸಿದಳು. ಸ್ವರ್ಗ ಭ್ರಷ್ಟಳಾಗದಂತೆ ಅನುಗ್ರಹಿಸಬೇಕೆಂದು ಪರಿಪರಿ ವಿಧವಾಗಿ ಬೇಡಿಕೊಂಡಳು. ಆಗ ಋಷಿಯು, 'ಅಬಲೆ! ನನ್ನ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಲು ಸಾಧ್ಯವಿಲ್ಲ. ನಿನ್ನ ತಲೆಯ ಮೇಲೆ ಯಾವಾಗ ಸ್ವರ್ಗಲೋಕದ ಪುಷ್ಪ ಬಂದು ಬೀಳುವುದೋ ಆಗ ನೀನು ಮಾನವ ದೇಹವನ್ನು ಬಿಟ್ಟು ಸ್ವಸ್ಥಾನವನ್ನು ಸೇರುವೆ,' ಎಂದು ಹೇಳಿದನು. ಆ ದೇವಕನ್ಯೆಯೇ ಈ ಇಂದುಮತಿದೇವಿ. ಇಂದು ನನ್ನ ಶಿರಸ್ಸಿನಲ್ಲಿದ್ದ ಸ್ವರ್ಗ ಲೋಕದ ಪುಷ್ಪವು ಗಾಳಿಗೆ ಹಾರಿಬಂದು ಅವಳ ತಲೆಯ ಮೇಲೆ ಬಿದ್ದೊಡನೆಯೆ ಅವಳ ಶಾಪ ವಿಮೋಚನೆಯಾಯಿತು. ಇದಕ್ಕೆ ನೀನು ಚಿಂತಿಸಿ ಪ್ರಯೋಜನವಿಲ್ಲ," ಎಂದು, ಅವನಿಗೆ ರಾಜನೀತಿ, ದೇಹನೀತಿಗಳನ್ನು ಬೋಧಿಸಿ ನಾರದನು ತನ್ನ ಪ್ರಯಾಣವನ್ನು ಮುಂದುವರಿಸಿದನು. ಅಜ ಮಹಾರಾಜನು ಬೇರೇನೂ ಮಾಡಲಾಗದೆ, ಅವಳ ಕಾಯಕ್ಕೆ ಅಂತ್ಯಕ್ರಿಯೆಗಳನ್ನು ನೆರವೇರಿಸಿದನು.

ರಾಜಧಾನಿಗೆ ಮರಳಿ, ಕಾಲವನ್ನು ಅತಿ ಭಾರವಾಗಿ ಕಳೆಯುತ್ತಾ ದಶರಥನನ್ನು ನೋಡಿ ಸ್ವಲ್ಪ ಧೈರ್ಯ ತಂದುಕೊಂಡು ಜೀವಿತವನ್ನು ಸಾಗಿಸುತ್ತಿದ್ದನು. ಕುಮಾರ ದಶರಥನು ದೊಡ್ಡವನಾದ ಮೇಲೆ ರಾಜ್ಯಭಾರವನ್ನು ಅವನಿಗೆ ವಹಿಸಿ, ಸರಯೂ ತೀರದಲ್ಲಿ ಅನಶನವ್ರತ ಎನ್ನುವ ವ್ರತವನ್ನು ಮಾಡುತ್ತಾ ಸರಯೂ ತೀರದಲ್ಲೇ ಕಾಯವನ್ನು ತ್ಯಜಿಸಿದನು. ಈ ವಿಷಯವು ದಶರಥನಿಗೆ ತಿಳಿದೊಡನೆಯೇ ಅವನು ಅತಿ ವೇಗವಾಗಿ ಸರಯೂ ತೀರವನ್ನು ಸೇರಿ, ತಂದೆಯ ಕಳೇಬರವನ್ನು ನೋಡಿ ದುಃಖಿಸುತ್ತಾ ಕಾಯಕ್ಕೆ ಮಾಡಬೇಕಾದ ದಹನ ಕ್ರಿಯೆಗಳನ್ನು ಮಾಡಿ, ತನ್ನ ತಂದೆ ವ್ರತನಿಷ್ಠನಾಗಿ ಗತಿಸಿದನೆನ್ನುವ ಪವಿತ್ರ ಸಂಗತಿಯನ್ನು ಸ್ಮರಿಸುತ್ತಾ ಧೈರ್ಯದಿಂದ ರಾಜ್ಯಭಾರದ ಸಮಸ್ತ ವ್ಯವಹಾರವನ್ನೂ ಪೂರ್ತಿಯಾಗಿ ತನ್ನ ವಶದಲ್ಲಿಟ್ಟುಕೊಂಡು ರಾಜ್ಯಪಾಲನೆ ಮಾಡುತ್ತಿದ್ದನು.

# ೩ ಪುತ್ರಕಾಮೇಷ್ಟಿ ಯಾಗ

ಸ್ವಲ್ಪ ಕಾಲದಲ್ಲೇ ದಶರಥನ ಕೀರ್ತಿಯು ಸೂರ್ಯ ಕಿರಣದಂತೆ ವ್ಯಾಪಿಸಿತು. ದಶರಥಿಕರ ಬಲ ಅವನೊಬ್ಬನಲ್ಲೇ ಇದ್ದುದರಿಂದ ದಶರಥನೆನ್ನುವ ಹೆಸರು ಕೂಡ ಅವನಿಗೆ ಸಾರ್ಥಕನಾಮವಾಯಿತು. ಅವನ ರಥಕ್ಕೆ ಎದುರು ನಿಲ್ಲುವವರೇ ಇರಲಿಲ್ಲ. ಸಮಸ್ತ ರಾಜರೂ ದಶರಥನಿಗೆ ಭಯಪಟ್ಟು ಅವನಿಗೆ ವಶವಾಗುತ್ತಿದ್ದರು. ದಶರಥನನ್ನು ಮೀರಿಸಿದ ಗುಣವಂತ, ಬಲವಂತ, ಶಕ್ತಿವಂತ ಯುಕ್ತಿಯುಳ್ಳ ಮಹಾರಾಜನು ಮತ್ತೊಬ್ಬನಿಲ್ಲ ಎನ್ನುವ ಕೀರ್ತಿ ಪ್ರಪಂಚವೆಲ್ಲಾ ವ್ಯಾಪಿಸಿತು. ಈ ವಿಷಯ ಹೇಗೋ ರಾವಣನಿಗೂ ತಿಳಿಯಿತು. ಅಂದಿನಿಂದ ರಾವಣನಿಗೆ ಹೇಗಾದರೂ ಈ ದಶರಥನನ್ನು ಕೊನೆಗಾಣಿಸಬೇಕೆನ್ನುವ ದುರ್ಬುದ್ಧಿ ದಿನ ದಿನಕ್ಕೆ ಬೆಳೆಯುತ್ತಾ ಹೋಯಿತು. ದಶರಥನೊಡನೆ ಹೋರಾಡಲು ಯಾವುದಾದರೂ ಕಾರಣ ಬೇಕಲ್ಲವೆ ಎಂದು ರಾವಣನು ಆಲೋಚಿಸಿ, ಒಂದು ದಿನ ತನ್ನ ರಾಕ್ಷಸ ದೂತರ ಮೂಲಕ ತನಗೆ ಕಾಣಿಕೆ ಸಲ್ಲಿಸಬೇಕೆಂದೂ ಹಾಗೆ ಸಲ್ಲಿಸದಿದ್ದರೆ ಯುದ್ಧ ತಪ್ಪಿದ್ದಲ್ಲವೆಂದೂ ರಾಜನೀತಿಗೆ ವಿರುದ್ಧವಾದ ವಾರ್ತೆಯನ್ನು ಹೇಳಿ ಕಳುಹಿಸಿದನು. ಅದನ್ನು ಕೇಳಿದ ದಶರಥನು ಗೊಳ್ಳೆಂದು ನಕ್ಕು, ಬಂದ ಆ ದೂತರು ನೋಡುತ್ತಿರುವಂತೆಯೇ ತೀಕ್ಷ್ಣವಾದ ಬಾಣಗಳನ್ನು ಲಂಕಾಪಟ್ಟಣಕ್ಕೆ ಹೊಡೆದನು. ಅವು ಹೋಗಿ ಲಂಕಾಪಟ್ಟಣದ ದ್ವಾರಗಳನ್ನು ಮುಚ್ಚಿದವು. ಬಂದಿದ್ದ ಆ ರಾವಣ ದೂತರಿಗೆ, "ರಾಕ್ಷಸ ದೂತರೇ, ನಾನೀಗ ನಿಮ್ಮ ನಗರದ ದ್ವಾರಗಳನ್ನು ಮುಚ್ಚಿದ್ದೇನೆ. ಅದನ್ನು ನಿಮ್ಮ ರಾಜನಾದ ರಾವಣನು ತೆರೆದರೆ, ನಾನು ಯುದ್ಧ ಮಾಡದೆಯೇ ನಿಮ್ಮ ರಾಜನಿಗೆ ಕಪ್ಪ ಸಲ್ಲಿಸುತ್ತೇನೆ," ಎಂದು ಹೇಳಿ ಕಳುಹಿಸಿದನು. ರಾಕ್ಷಸ ದೂತರು ರಾವಣನಿಗೆ ಅದನ್ನು ತಿಳಿಸಲು ಹೋದರು. ಎಲ್ಲ ದ್ವಾರಗಳೂ ಮುಚ್ಚಿಹೋಗಿದ್ದು, ರಾವಣನು ತನ್ನ ಪರಿವಾರದೊಂದಿಗೆ ನಗರದ ದ್ವಾರಗಳನ್ನು ತೆಗೆಯಲು ಎಷ್ಟೇ ಶಕ್ತಿ ಯುಕ್ತಿಗಳನ್ನು ಉಪಯೋಗಿಸಿದರೂ ಸಾಧ್ಯವಾಗಲಿಲ್ಲ. ತನಗಾದ ಪರಾಭವಕ್ಕೆ ವ್ಯಥೆಪಟ್ಟು, ಸೋತೆನೆನ್ನುವ ಭಾವ ಅವನ ಹೃದಯದಲ್ಲಿ ಬಂದೊಡನೆಯೇ ಬಾಣಗಳು ಮತ್ತೆ ಅಯೋಧ್ಯಾ ನಗರ ಸೇರಿದವು, ದ್ವಾರಗಳು ತೆರೆದುಕೊಂಡವು. ಸೋತ ರಾವಣನು ಸಮಸ್ತ ರಾಜರನ್ನೂ ಜಯಿಸುವಂಥ ಶಕ್ತಿ ಸಂಪಾದಿಸಿಕೊಳ್ಳಬೇಕೆಂದು ನಿಶ್ಚಯಿಸಿ, ತಪಸ್ಸು ಮಾಡಲು ಕಾಡಿಗೆ ಹೊರಟನು. ತಪಸ್ಸಿಗೆ ಯೋಗ್ಯ ಸ್ಥಳವನ್ನಾರಿಸಿ ಕೊಂಡು ಘೋರ ತಪಸ್ಸು ಮಾಡಿದನು.

ಅವನ ತಪಸ್ಸು ಅತಿ ತೀವ್ರವಾಗಿದ್ದುದರಿಂದ ಬ್ರಹ್ಮನು ಮೆಚ್ಚಿ ಪ್ರತ್ಯಕ್ಷನಾಗಿ, "ರಾವಣಾ! ನಿನಗೇನು ಬೇಕೊ ಕೇಳು! ತಪ್ಪದೆ ಕೊಡುತ್ತೇನೆ," ಎಂದನು. ರಾವಣನು ದಶರಥ ನಿಂದಾದ ಸೋಲನ್ನು ಜ್ಞಾಪಿಸಿಕೊಂಡು, ದಶರಥನಿಗೇ ಇಷ್ಟು ಬಲವಿದ್ದರೆ, ಅವನ ಮಕ್ಕಳಿನ್ನೆಷ್ಟು ಬಲಶಾಲಿಗಳಾಗುವರೊ ಎನ್ನುವ ಭಯದಿಂದ, "ಸ್ವಾಮೀ! ದಶರಥ ನಿಗೆ ಮಕ್ಕಳಾಗದಂತೆ ವರವನ್ನು ಅನುಗ್ರಹಿಸಿ," ಎಂದು ಪ್ರಾರ್ಥಿಸಿದನು. ಬ್ರಹ್ಮನು, "ಇಗೋ ಕೊಟ್ಟೆ," ಎಂದನು. ಅಲ್ಲೇ ಇದ್ದರೆ ರಾವಣನು ಇನ್ನೂ ಏನಾದರೂ ವರ ಕೇಳಬಹುದೆಂದು ಬ್ರಹ್ಮನು ಮರುಕ್ಷಣವೇ ಅಂತರ್ಧಾನನಾದನು.

ರಾವಣನು ನಿರ್ಭಯವಾಗಿ ತನ್ನ ಶಕ್ತಿ ಸಾಮರ್ಥ್ಯಗಳನ್ನು ಮೆರೆಯುತ್ತಾ ಗರ್ವಿಸುತ್ತಿದ್ದಾಗ, ಅವನ ತಲೆಯಲ್ಲಿ ಮತ್ತೊಂದು ಆಲೋಚನೆ ಹುಟ್ಟಿತು. ದಶರಥನಿಗೆ ಈಗ ಮದುವೆಗೆ ಯುಕ್ತ ವಯಸ್ಸು! ಅವನಿಗೆ ವಿವಾಹವೇ ಆಗದಂತೆ ಮಾಡಿದರೆ ಇನ್ನೂ ಒಳ್ಳೆಯದಲ್ಲವೆ ಎಂದು ಯೋಚಿಸಿದನು. ತನ್ನ ರಾಕ್ಷಸ ಶಕ್ತಿಯಿಂದ ಎಲ್ಲ ಕಡೆಗೂ ದೃಷ್ಟಿ ಹರಿಸಿ, ಕೋಸಲ ದೇಶದ ರಾಜನ ಪುತ್ರಿಯನ್ನು ದಶರಥನಿಗೆ ಕೊಟ್ಟು ಮದುವೆ ಮಾಡಬಹುದಾದ ಸಂಭವವಿದೆಯೆಂದು ಊಹಿಸಿದನು. ಆ ರಾಜಪುತ್ರಿಯೇ ಇಲ್ಲದಂತೆ ಮಾಡಬೇಕೆನ್ನುವ ವಿಪರೀತ ಬುದ್ಧಿ ಹುಟ್ಟಿ, ಕೋಸಲ ದೇಶಕ್ಕೆ ವೇಷ ಮರೆಸಿಕೊಂಡು ಹೋಗಿ, ರಾಜಪುತ್ರಿಯಾದ ಕೌಸಲ್ಯೆಯನ್ನು ಕದ್ದು, ಆ ಬಾಲಿಕೆಯನ್ನು ಒಂದು ಪೆಟ್ಟಿಗೆಯಲ್ಲಿ ಹಾಕಿ ಸಮುದ್ರದಲ್ಲಿ ಬಿಸಾಡಿದನು.

ದೈವಾಜ್ಞೆಯು ಇಲ್ಲದೆ ಯಾವುದೂ ನಡೆಯುವುದಿಲ್ಲವೆನ್ನುವ ವಿಷಯವನ್ನು ರಾವಣನು ತಿಳಿಯದೆ ಹೋದನು. ಅವನು ಬಿಸಾಡಿದ ಪೆಟ್ಟಿಗೆಯನ್ನು ಬ್ರಹ್ಮನು ತನ್ನ ಸಂಕಲ್ಪದಿಂದ ಒಂದು ದಡಕ್ಕೆ ಹೋಗಿ ಸೇರುವಂತೆ ಮಾಡಿದನು. ಆ ದಡ ಒಂದು ಒಳ್ಳೆಯ ವಿಹಾರ ಸ್ಥಳವಾಗಿತ್ತು. ಮಾರನೆಯ ದಿನ ದಶರಥನ ಪ್ರಧಾನ ಮಂತ್ರಿಯಾದ ಸುಮಂತನು ವನದಂಚಿನ ಆ ಸಮುದ್ರ ತೀರಕ್ಕೆ ಬಂದು ರಾಜ್ಯ ತಂತ್ರವನ್ನು ಆಲೋಚಿಸುತ್ತಿರುವಾಗ, ಅಲ್ಲೊಂದು ಅಂದವಾದ ಪೆಟ್ಟಿಗೆ ಕಾಣಿಸಿತು. ಅದರ ಬಳಿ ಹೋಗಿ ಅದನ್ನು ತೆರೆದು ನೋಡಿದನು. ಅದರೊಳಗೆ ಒಬ್ಬ ಹುಡುಗಿಯು ಅಂದವಾದ ಕಣ್ಣುಗಳಿಂದ, ದೈವೀ ತೇಜಸ್ಸಿನಿಂದ ಪ್ರಕಾಶಿಸುತ್ತಿರುವುದನ್ನು ನೋಡಿ, ಸಂತೋಷದಿಂದ ಮೃದುವಾದ ಮಾತುಗಳಿಂದ, "ಅಮ್ಮಾ, ನೀನು ಯಾರು? ಈ ಪೆಟ್ಟಿಗೆಯಲ್ಲಿರಲು ಕಾರಣವೇನು?" ಎಂದು ಪ್ರಶ್ನಿಸಿದನು.

ಅದಕ್ಕೆ ಆ ಹುಡುಗಿಯು, "ಅಯ್ಯಾ! ನಾನು ಕೋಸಲ ದೇಶದ ರಾಜಪುತ್ರಿ. ನನ್ನ ಹೆಸರು ಕೌಸಲ್ಯೆ. ನಾನು ಈ ಪೆಟ್ಟಿಗೆಯಲ್ಲಿ ಏಕೆ ಇದ್ದೇನೋ ಯಾರು ನನ್ನನ್ನು ಇಟ್ಟರೋ ನನಗೇನೂ ತಿಳಿಯದು! ನಾನು ಉದ್ಯಾನವನದಲ್ಲಿ ನನ್ನ

ಜೊತೆಗಾರ್ತಿಯರೊಂದಿಗೆ ಆಟವಾಡುತ್ತಿದ್ದೆ. ಆಮೇಲೆ ಏನಾಯಿತೋ ನನಗೆ ತಿಳಿಯದು," ಎಂದಳು. ಅವಳ ಮುಗ್ಧವಾದ ಮಾತುಗಳು ಅವನ ಮನಸ್ಸನ್ನು ಕರಗಿಸಿತು.

"ತಾಯಿ! ಇಂಥ ಕಿರಾತ ಬುದ್ಧಿ ರಾಕ್ಷಸರಿಗಲ್ಲದೆ ಮಾನವರಿಗಲ್ಲ. ನಾನು ನಿನ್ನನ್ನು ಕರೆದುಕೊಂಡು ಹೋಗಿ ನಿನ್ನ ತಂದೆಗೊಪ್ಪಿಸುತ್ತೇನೆ, ಬಾ ನನ್ನ ಜೊತೆ," ಎಂದು ಹೇಳಿ, ಸುಮಂತನು ಅವಳನ್ನು ರಥದಲ್ಲಿ ಕೋಸಲ ದೇಶಕ್ಕೆ ಕರೆದೊಯ್ದು ರಾಜನಿಗೆ ಒಪ್ಪಿಸಿ, ನಡೆದ ವೃತ್ತಾಂತವನ್ನು ತಿಳಿಸಿದನು. ಕೋಸಲ ದೇಶದ ರಾಜನು ಸುಮಂತನನ್ನು ಅನೇಕ ವಿಧವಾಗಿ ಪ್ರಶ್ನೆ ಮಾಡಿ, ಅವನು ದಶರಥ ಮಹಾರಾಜನ ಮಂತ್ರಿಯೆಂದೂ ದಶರಥನಿಗೆ ಇನ್ನೂ ಮದುವೆಯಾಗಿಲ್ಲವೆಂದೂ ತಿಳಿದು ಸಂತೋಷಿಸಿ, "ಮಂತ್ರೀ! ನಿಮ್ಮಿಂದ ರಕ್ಷಿಸಲ್ಪಟ್ಟ ಈ ಕನ್ಯೆಯನ್ನು ನಿಮ್ಮ ರಾಜನಿಗೇ ಕೊಟ್ಟು ವಿವಾಹ ಮಾಡಬೇಕೆಂದಿದ್ದೇನೆ. ನೀವು ಶೀಘ್ರವಾಗಿ ಹೋಗಿ ನಮ್ಮ ಅಭಿಪ್ರಾಯವನ್ನು ನಿಮ್ಮ ರಾಜನಿಗೆ ತಿಳಿಸಿ," ಎಂದು ಪ್ರಾರ್ಥಿಸಿದನು. ಸುಮಂತನನ್ನು ತಕ್ಕ ರೀತಿಯಲ್ಲಿ ಗೌರವಿಸಿ, ಅರಿಸಿನ ಕುಂಕುಮಗಳೊಂದಿಗೆ ತನ್ನ ಪುರೋಹಿತನನ್ನು ಅವನೊಂದಿಗೆ ಕಳಿಸಿದನು.

ಸುಮಂತನು ಹೋಗಿ ನಡೆದ ವೃತ್ತಾಂತವನ್ನು ದಶರಥನಿಗೆ ಹೇಳಿದನು. ಮದುವೆಗೆ ತನ್ನ ಸಮ್ಮತಿ ಇದೆಯೆಂದು ಸೂಚಿಸುವ ಸಲುವಾಗಿ ದಶರಥನು ತನ್ನ ಪುರೋಹಿತನನ್ನು ಕಾಣಿಕೆಗಳೊಂದಿಗೆ ಕೋಸಲ ದೇಶಕ್ಕೆ ಕಳಿಸಿದನು. ಮದುವೆಗೆ ಮುಹೂರ್ತ ನಿರ್ಣಯಿಸಿದರು. ದಶರಥನು ಚತುರಂಗ ಬಲ ಸಮೇತನಾಗಿ ಮಂಗಳವಾದ್ಯಗಳ ಶಬ್ದವು ಮುಗಿಲು ಮುಟ್ಟುತ್ತಿರಲು, ಅತ್ಯಂತ ವೈಭವದಿಂದ ಕೋಸಲ ದೇಶವನ್ನು ಹೋಗಿ ಸೇರಿದನು. ದಶರಥ ಕೌಸಲ್ಯೆಯರ ವಿವಾಹವು ಅತಿ ಸುಂದರವಾಗಿ, ವೈಭವಯುತವಾಗಿ ನಡೆಯಿತು. ಕೋಸಲ ದೇಶದ ರಾಜನು ಸುಮಂತನನ್ನು ಹತ್ತಿರ ಕರೆದು, "ಈ ಮಂಗಳ ಕಾರ್ಯಕ್ಕೆ ನೀನೇ ಕಾರಣನು. ದೈವವೇ ಎಲ್ಲಕ್ಕೂ ಕಾರಣವಾದಾಗ್ಯೂ ಪ್ರಾಕೃತ ಲೋಕದಲ್ಲಿ ನನ್ನ ಕುಮಾರಿಯನ್ನು ಕಾಪಾಡಿ, ಈ ಕಾರ್ಯ ನೆರವೇರುವಂತೆ ಮಾಡಿದವನು ನೀನು. ಆದ್ದರಿಂದ ನಿನಗೆ ಕೃತಜ್ಞತಾ ಕಾಣಿಕೆ ಕೊಡಬೇಕು. ನನ್ನ ಮಾತೊಂದನ್ನು ನೀನು ನಡೆಸಿಕೊಡುವುದಾದರೆ, ಈ ದಿನವೇ ನಿನ್ನ ವಿವಾಹದ ಮಂಗಳ ಕಾರ್ಯವನ್ನೂ ಅತ್ಯಂತ ವೈಭವದಿಂದ ನೆರವೇರಿಸುತ್ತೇನೆ," ಎಂದನು. ದಶರಥನೂ ಸುಮಂತನೂ ಒಪ್ಪಿದರು. ರಾಜನು ಗರ್ಗಕುಲ ಸಂಭೂತನಾದ ವೀರದಾಸನ ಕುಮಾರಿಯನ್ನು ಸುಮಂತನಿಗೆ ಕೊಟ್ಟು ವಿವಾಹ ಮಾಡಿದನು.

ರಾಜ ಮತ್ತು ಮಂತ್ರಿಯರ ವಿವಾಹವು ಒಂದು ವಿಚಿತ್ರ ಸುದ್ದಿಯಾಗಿ ನಗರವೆಲ್ಲಾ ಹರಡಿತು. ನಗರ ಮಾತ್ರವಲ್ಲ, ದೇಶದ ಜನರೆಲ್ಲಾ ಅದನ್ನು ಕೇಳಿ ಆಶ್ಚರ್ಯ ಗೊಂಡರು. ವಿವಿಧ ಸಮಾರಂಭಗಳಿಂದ ಮೂರು ದಿನಗಳು ಕೋಸಲ ನಗರದಲ್ಲಿ ರಾತ್ರಿ ಹಗಲೆನ್ನದೆ ವಿವಾಹ ಕಾರ್ಯಕ್ರಮಗಳು ಜರುಗಿದವು. ನಾಲ್ಕನೆ ರಾತ್ರಿ ದಶರಥನು ತನ್ನ ರಾಣಿಯಾದ ಕೌಸಲ್ಯೆ ಹಾಗೂ ಪರಿವಾರದೊಂದಿಗೂ ಮತ್ತು ಸುಮಂತನು ತನ್ನ ಧರ್ಮಪತ್ನಿ ಹಾಗೂ ಪರಿವಾರದೊಂದಿಗೂ ಹೊರಟು, ಬೀದಿಗಳಲ್ಲಿ ವೈಭವಯುತವಾಗಿ ನೃತ್ಯ ಗಾನ ಸಮಾರಂಭಗಳು ನಡೆಯುತ್ತಿರಲು, ಅಯೋಧ್ಯಾ ನಗರವನ್ನು ಪ್ರವೇಶಿಸಿದರು.

ಅಯೋಧ್ಯಾವಾಸಿಗಳು ತಮ್ಮ ಮಹಾರಾಜ ಮತ್ತು ಮಂತ್ರಿಯ ವಿವಾಹದ ಆನಂದ ವನ್ನು ಹದ್ದಿನಲ್ಲಿಟ್ಟುಕೊಳ್ಳಲಾಗದೆ ಮೈಮರೆತು ಜೈಜೈಕಾರ ಮಾಡುತ್ತಿದ್ದರು. ಮಹಾ ರಾಣಿಯನ್ನು ನೋಡಲು ಬೀದಿಗಳಲ್ಲಿ ಸ್ತ್ರೀ ಪುರುಷರು ಕಿಕ್ಕಿರಿದು ಸೇರಿ, ಪರಿಮಳ ಯುಕ್ತ ಪನ್ನೀರು ಚೆಲ್ಲಿ ಆರತಿ ಎತ್ತಿದರು. ರಾಜನು ಪುರವನ್ನು ಪ್ರವೇಶಿಸಿ, ತನ್ನ ಕರ್ತವ್ಯಗಳನ್ನು ಯಥಾ ವಿಧಿಯಾಗಿ ಆಚರಿಸುತ್ತಾ ರಾಣೀ ಸಮೇತನಾಗಿ ಆಗಾಗ ವನವಿಹಾರಕ್ಕೆ ಹೋಗುತ್ತಾ ಕಾಲ ಕಳೆಯುತ್ತಿದ್ದನು. ದಿನಗಳು, ಮಾಸಗಳು, ಸಂವತ್ಸರಗಳು ಉರುಳಿದವು. ರಾಜನಿಗೆ ನಿರಾಶೆ ಪ್ರಾರಂಭವಾಗಿ, ಪುತ್ರರಿಲ್ಲವೆಂಬ ಕೊರಗು ಪೀಡಿಸತೊಡಗಿತು. ರಾಜನು ಪಂಡಿತರ ಸಲಹೆಯನ್ನೂ ಮಂತ್ರಿಗಳ ಅಭೀಷ್ಟವನ್ನೂ ಪಟ್ಟದ ರಾಣಿಯಾದ ಕೌಸಲ್ಯಾದೇವಿಯ ಒಪ್ಪಿಗೆಯನ್ನೂ ಪುರಸ್ಕ ರಿಸಿ, ಸುಮಿತ್ರೆಯನ್ನು ಲಗ್ನವಾದನು.

ಸುಮಿತ್ರೆಯು ಹೆಸರಿಗೆ ತಕ್ಕಂಥ ಗುಣವಂತೆ. ಕೌಸಲ್ಯಾ ಸುಮಿತ್ರೆಯರು ತಾಯಿ ಮಕ್ಕಳಿಗಿಂತ ಅಧಿಕ ಪ್ರೇಮದಿಂದ ಒಬ್ಬರನ್ನೊಬ್ಬರು ಅನುಸರಿಸುತ್ತಾ ಸಹನೆ, ತ್ಯಾಗ, ಕರುಣೆಯಿಂದ ನಡೆದುಕೊಳ್ಳುತ್ತಿದ್ದರು. ಎಷ್ಟು ಕಾಲವಾದರೂ ಇಬ್ಬರು ರಾಣಿಯರಿಗೂ ಏನೂ ಶುಭ ಸೂಚನೆ ಕಾಣಲಿಲ್ಲ. ತಾವು ಪುತ್ರರನ್ನು ಪಡೆಯುವು ದಿಲ್ಲವೆಂಬ ನಿರಾಶೆಯಿಂದ ಅವರ ಸಲಹೆಯನ್ನನುಸರಿಸಿ ದಶರಥನು ಕಾಶ್ಮೀರ ದೇಶದ ರಾಜನಾದ ಕೇಕೇಯ ರಾಜನ ಮಗಳಾದ ಕೈಕೆ ಎನ್ನುವ ಸೌಂದರ್ಯರಾಶಿ ಯನ್ನು ಮದುವೆಯಾಗಲು ಇಚ್ಛೈಸಿದನು.

ಅದಕ್ಕೆ ಕೇಕೇಯ ರಾಜನು ಕೆಲವು ನಿಬಂಧನೆಗಳನ್ನು ಒಡ್ಡಿದನು. ತನ್ನ ಮಗಳಾದ ಕೈಕೆಗೆ ಹುಟ್ಟುವ ಮಗನಿಗೇ ರಾಜ್ಯಾಧಿಕಾರ ವಹಿಸಬೇಕು. ಅದಕ್ಕೆ ಒಪ್ಪದಿದ್ದ ಪಕ್ಷದಲ್ಲಿ, ತನ್ನ ಮಗಳನ್ನು ದಶರಥನಿಗೆ ಕೊಡಲು ಸಾಧ್ಯವಿಲ್ಲವೆಂದು ಗರ್ಗರೊಂದಿಗೆ ಹೇಳಿಕಳಿಸಿದನು. ಕೈಕೆಯ ವಿಶೇಷ ರೂಪಲಾವಣ್ಯಗಳನ್ನು ಕೇಳಿದ್ದ ದಶರಥನಿಗೆ

ಅವಳು ತನಗೇ ದೊರೆಯಬೇಕೆಂಬ ಆಸೆ ಅವನ ಹೃದಯದಲ್ಲಿ ತುಂಬಿದ್ದುದು ಕೌಸಲ್ಯೆ ಸುಮಿತ್ರೆಯರಿಗೆ ತಿಳಿದಿತ್ತು. ಪತಿಯ ಆನಂದಕ್ಕಿಂತ ತಮಗೆ ಬೇಕಾದ್ದು ಇನ್ನೇನಿದೆ, ಅವನ ಅಭೀಷ್ಟ ನೆರವೇರಿಸುವುದೇ ತಮ್ಮ ಧರ್ಮ ಎಂದು ನಿಶ್ಚಯಿಸಿದರು. ಅಲ್ಲದೆ, ಅಯೋಧ್ಯೆಯ ಚಕ್ರವರ್ತಿಗೆ ಧರ್ಮವಿರೋಧಿ ಪುತ್ರರು ಹುಟ್ಟುವುದಿಲ್ಲವೆಂದೂ ಈಗ ದಶರಥನು ಮಾತು ಕೊಟ್ಟರೂ ಕೈಕೆಗೆ ಹುಟ್ಟುವ ಮಗನು ಮಹಾ ಧರ್ಮಪರನೇ ಅಗುವನೆಂದೂ ಯೋಚಿಸಿ, ಇಬ್ಬರೂ ಕೈಜೋಡಿಸಿ, "ಸ್ವಾಮೀ! ನಿಮ್ಮ ಸುಖ ಸಂತೋಷಗಳಲ್ಲದೆ ನಮಗೆ ಬೇರೆ ಆನಂದ ಏನಿದೆ? ಕೇಕೇಯ ರಾಜನ ನಿಬಂಧನೆಯನ್ನು ಒಪ್ಪಿಕೊಂಡು ಕೈಕೆಯನ್ನು ಲಗ್ನವಾಗಿ ರಘುವಂಶವನ್ನು ಉದ್ಧಾರಮಾಡಿ! ಈ ವಿಷಯದಲ್ಲಿ ಏನೂ ಯೋಚಿಸುವ ಅಗತ್ಯವಿಲ್ಲ," ಎಂದು ರಾಜನನ್ನು ಪ್ರಾರ್ಥಿಸಿದರು. ತನ್ನ ಉತ್ಸಾಹವನ್ನು ಕೌಸಲ್ಯೆ ಮತ್ತು ಸುಮಿತ್ರೆಯರು ಮತ್ತಷ್ಟು ಪ್ರೋತ್ಸಾಹಿಸಿದ್ದರಿಂದ ಕೇಕೇಯ ರಾಜನಿಗೆ ಅವನ ನಿಬಂಧನೆಯನ್ನು ತಾನು ಒಪ್ಪಿರುವೆನೆಂದೂ ವಿವಾಹಕ್ಕೆ ಬರುತ್ತೇನೆಂದೂ ತಿಳಿಸುವಂತೆ ಗರ್ಗರೊಂದಿಗೆ ಹೇಳಿ ಕಳಿಸಿದನು. ಉಡುಗರೆಗಳೊಂದಿಗೆ ತನ್ನ ಪುರೋಹಿತರುಗಳನ್ನು ಅವರೊಂದಿಗೆ ಕಳಿಸಿದನು. ಕೇಕೇಯ ರಾಜನು ಅತ್ಯಂತ ಆನಂದದಿಂದ ವಿವಾಹಕ್ಕೆ ಸಿದ್ಧತೆಗಳನ್ನು ಮಾಡತೊಡಗಿದನು.

ಇಬ್ಬರು ರಾಣಿಯರು ಮತ್ತು ಪರಿವಾರ ಸಹಿತವಾಗಿ ದಶರಥನು ಕೇಕೇಯ ರಾಜ್ಯವನ್ನು ಸೇರಿ, ಕೈಕೆಯನ್ನು ಲಗ್ನವಾದನು. ಮೂವರು ರಾಣಿಯರೊಂದಿಗೆ ನಕ್ಷತ್ರಗಳ ಮಧ್ಯೆ ಇರುವ ಚಂದ್ರನಂತೆ ಅಯೋಧ್ಯಾ ನಗರದಲ್ಲಿ ಬೆಳಗುತ್ತಿದ್ದನು. ದಶರಥನು ಮೂವರು ರಾಣಿಯರನ್ನೂ ಸಮಾನ ಪ್ರೇಮದಿಂದ ಕಾಣುತ್ತಿದ್ದನು. ರಾಣಿಯರೂ ಯಾವ ಭೇದವೂ ಇಲ್ಲದೆ ಭಯ ಭಕ್ತಿಗಳಿಂದ, ಧರ್ಮ ಕರ್ಮಗಳಿಂದ, ಪತಿಯೇ ದೈವವೆಂದು ಪತಿಯ ಇಷ್ಟಕ್ಕೆ ವಿರೋಧವಾಗಿ ನಡೆಯದೆ, ಅವನ ಆನಂದಕ್ಕೆ ಆತಂಕ ತಂದೊಡ್ಡದೆ, ದೇಹಗಳು ಬೇರೆಯಾದರೂ ಪ್ರಾಣ ಒಂದೇ ಎನ್ನುವಂತೆ ಅನ್ಯೋನ್ಯದಿಂದ ಇರುತ್ತಿದ್ದರು.

ಕಾಲ ಹೋದಂತೆ ರಾಜನಿಗೂ ರಾಣಿಯರಿಗೂ ಯೌವ್ವನಾವಸ್ಥೆ ಮುಗಿಯತೊಡಗಿತು, ವೃದ್ಧಾಪ್ಯ ಪ್ರಾರಂಭವಾಯಿತು. ಆದರೂ ಪುತ್ರ ಪ್ರಾಪ್ತಿಯ ಸೂಚನೆಯೇ ಕಾಣಿಸಲಿಲ್ಲ. ಸರ್ವ ಸಾಧನಗಳಿಂದ ಅಂತಃಪುರ ಶೋಭಿಸುತ್ತಿದ್ದರೂ ರಾಜ ರಾಣಿಯರ ಹೃದಯದಲ್ಲಿ ಅಶಾಂತಿ, ಚಿಂತೆ ತಾಂಡವವಾಡುತ್ತಿತ್ತು. ಒಂದು ದಿನ ಸಂಜೆ ರಾಜ ಮತ್ತು ರಾಣಿಯರು, ನಾಲ್ಕೂ ಮಂದಿ, ಒಂದೆಡೆ ಸೇರಿ, ಅಯೋಧ್ಯೆಯ ಮುಂದಿನ ಪರಿಪಾಲಕನು ಯಾರೆಂದು ಪರಿಪರಿ ವಿಧವಾಗಿ ಯೋಚಿಸಿದರು. ಕೊನೆಗೆ ಏನನ್ನೂ ನಿರ್ಣಯಿಸಲಾಗದೆ ನಿರಾಶರಾಗಿ, ಮಾರನೆಯ

ಬೆಳಗ್ಗೆ ವಸಿಷ್ಠರನ್ನು ಬರಮಾಡಿಕೊಂಡು ಮುಂದೇನು ಮಾಡಬೇಕೆನ್ನುವುದನ್ನು ಅವರೊಂದಿಗೆ ವಿಚಾರ ಮಾಡುವುದೊಳ್ಳೆಯದು ಎಂದು ನಿಶ್ಚಯಿಸಿದರು. ಭಾರವಾದ ಹೃದಯದಿಂದ ತಮ್ಮ ತಮ್ಮ ನಿವಾಸಗಳಿಗೆ ಹಿಂದಿರುಗಿದರು.

ಮಾರನೆಯ ದಿನ ಬೆಳಗಾಗುತ್ತಲೆ ದಶರಥನು ಮಂತ್ರಿಗಳನ್ನು, ಪಂಡಿತರುಗಳನ್ನು ಬರಮಾಡಿಕೊಂಡು ಕುಲಗುರು ವಸಿಷ್ಠರನ್ನು ಆಹ್ವಾನಿಸಿ, ಈ ಸಪ್ತದ್ವೀಪ ಸಹಿತವಾದ ವಸುಂಧರೆಯನ್ನು ಪಾಲಿಸುವ ಮುಂದಿನ ರಾಜನು ಯಾರು ಎನ್ನುವ ವಿಷಯದಲ್ಲಿ ಸಮಾಲೋಚನೆ ಪ್ರಾರಂಭಿಸಿ, ಒಂದು ನಿರ್ಣಯಕ್ಕೆ ಬರಲಾಗದೆ ನಿರಾಶನಾಗಿ, ಗುರುಗಳನ್ನು ಅನೇಕ ರೀತಿಯಾಗಿ ಪ್ರಾರ್ಥಿಸಿ, ಇದಕ್ಕೆ ತಕ್ಕ ಸಲಹೆಯನ್ನು ನೀವೇ ಅನುಗ್ರಹಿಸಬೇಕೆಂದು ಕೋರಿದನು.

ವಸಿಷ್ಠರು ಕಣ್ಮುಚ್ಚಿ ದೀರ್ಘಾಲೋಚನೆ ಮಾಡಿ, ಕಣ್ಣುಗಳನ್ನು ತೆರೆದು, "ರಾಜಾ! ನೀವಿಷ್ಟು ಚಿಂತಿಸುವ ಅಗತ್ಯವಿಲ್ಲ. ಅಯೋಧ್ಯೆಗೆ ಪತಿ ವಿಯೋಗವಿಲ್ಲ, ನಿರಂತರವೂ ಅದಕ್ಕೆ ಮಂಗಳವೆ! ಈ ವಸುಂಧರೆ ನಿತ್ಯ ಕಲ್ಯಾಣ ಪಚ್ಚೆತೋರಣಗಳಿಂದ ಕಲಕಲ ಕಿಲಕಿಲ ಧ್ವನಿಗೈಯುತ್ತ ಧರ್ಮರಕ್ಷಣ ನಿರತಳಾಗಿರುವಳು. ಬೇರೆ ರಾಜಕುಮಾರನೊಬ್ಬನನ್ನು ಈ ರಾಜ್ಯದ ಅಧಿಪತಿಯಾಗಿ ಮಾಡುವುದನ್ನು ನಾನು ಒಪ್ಪುವುದಿಲ್ಲ. ದೈವಕಟಾಕ್ಷ ಅಪಾರ! ನಿಮ್ಮ ಧರ್ಮವ್ರತವೇ ನಿಮ್ಮನ್ನು ಪುತ್ರಾನಂದದಲ್ಲಿ ಮುಳುಗಿಸಿ ತೇಲಿಸುವುದು. ತಡಮಾಡದೆ, ವಿಭಾಂಡಕ ಮಹಾಮುನಿಯ ಮಗನಾದ ಋಷ್ಯ ಶೃಂಗನನ್ನು ಬರಮಾಡಿಕೊಂಡು ಅವನ ಸಲಹೆಯಂತೆ ತಕ್ಕ ಏರ್ಪಾಟುಗಳನ್ನು ನಡೆಸಿ, ಪವಿತ್ರವಾದ ಪುತ್ರಕಾಮೇಷ್ಟಿಯಾಗವನ್ನು ಮಾಡಿ. ನಿಮ್ಮ ಮನೋರಥ ಈಡೇರುವುದು," ಎಂದು ಹೇಳಿದರು. ಅವರು ಬಹು ನಿಸ್ಸಂಶಯವಾಗಿ ಆಡಿದ ಮಾತುಗಳನ್ನು ತೆರೆಯ ಹಿಂದಿದ್ದ ರಾಣಿಯರು ಕೇಳಿಸಿಕೊಂಡರು. ಅವರ ಹೃದಯ ಆನಂದದಿಂದ ತುಂಬಿಹೋಯಿತು. ಒಂದು ಹೊಸ ಆಶಾ ಕುಸುಮ ಅವರಲ್ಲಿ ಅರಳಿತು. ಅವರು ದೈವವನ್ನು ವಂದಿಸಿ ಒಳಗೆ ಹೋದರು.

ವಿಭಾಂಡಕ ಮಹಾಮುನಿಯ ಕುಮಾರನಾದ ಋಷ್ಯಶೃಂಗರನ್ನು ಕರೆದು ತರಲು ತಕ್ಕವರು ಯಾರು ಎಂದು ಮಹಾರಾಜನು ಯೋಚಿಸಿ, ತನ್ನ ಬಾಲ್ಯ ಸ್ನೇಹಿತನಾದ ಅಂಗದೇಶದ ರಾಜ ರೋಮಪಾದನನ್ನು ಅದಕ್ಕಾಗಿ ಬರಮಾಡಿಕೊಂಡು ತಕ್ಕ ಏರ್ಪಾಟುಗಳನ್ನು ಮಾಡಿದನು. ಸರಯೂ ನದಿ ತೀರದಲ್ಲಿ ಯಜ್ಞಕ್ಕೋಸ್ಕರ ಅಂದವಾದ ವೇದಿಕೆಗಳನ್ನು ನಿರ್ಮಿಸಿದರು. ಅಯೋಧ್ಯೆಯು ಎಲ್ಲಿ ನೋಡಿದರೂ ತೋರಣಗಳಿಂದ ಕಂಗೊಳಿಸತೊಡಗಿತು. ಆಯೋಜಿಸಿದಂತೆ ಋಷ್ಯಶೃಂಗರು ಶಾಂತಾ ಸಮೇತರಾಗಿ ಅಯೋಧ್ಯೆಗೆ ಕಾಲಿರಿಸಿದರು.

ರಾಜನು ಸಿಂಹದ್ವಾರದ ಬಳಿ ಋಷ್ಯಶೃಂಗರ ಪಾದಗಳನ್ನು ತೊಳೆದು ಆ ಜಲವನ್ನು ತಲೆಗೆ ಪ್ರೋಕ್ಷಿಸಿಕೊಂಡು, ಅವರನ್ನು ಒಳಗೆ ಕರೆದೊಯ್ದು, ಉನ್ನತಾಸನದಲ್ಲಿ ಕುಳ್ಳಿರಿಸಿದನು. ವಸಿಷ್ಠರಿಗೆ ನಮಸ್ಕರಿಸಿ, ಋಷ್ಯಶೃಂಗರಿಗೆ ತನ್ನ ಪ್ರಾರ್ಥನೆಯನ್ನು ತಿಳಿಸಿ, ಯಜ್ಞ ನಡೆಸುವ ವಿಧಾನವನ್ನು ತಿಳಿಸಬೇಕೆಂದು ಪ್ರಾರ್ಥಿಸಿದನು. ಋಷ್ಯ ಶೃಂಗರು ಮಂತ್ರಿಗಳನ್ನು, ಪಂಡಿತರುಗಳನ್ನು ಮತ್ತು ಮಹಾರಾಜನನ್ನು ಅವರವರ ಸ್ಥಾನಗಳಲ್ಲಿ ಕುಳಿತುಕೊಳ್ಳುವಂತೆ ಆಜ್ಞಾಪಿಸಿದರು. ಯಜ್ಞ ವಿಧಾನವನ್ನು ಕುರಿತು ಪ್ರತಿಯೊಂದನ್ನೂ ವಿವರವಾಗಿ ಅವರು ಹೇಳುತ್ತಿರಲು, ಪ್ರಧಾನ ಋತ್ವಿಕರುಗಳು ಅದನ್ನು ಬರೆದುಕೊಳ್ಳುತ್ತಿದ್ದರು. ಯಜ್ಞದಲ್ಲಿ ಯಾರು ಯಾವ ಯಾವ ಸ್ಥಾನದಲ್ಲಿ ಕುಳಿತಿರಬೇಕೊ ಅದನ್ನು ಕೂಡ ಸ್ಪಷ್ಟವಾಗಿ ತಿಳಿಸಿ, ಮಾರನೆಯ ದಿನ ಬೆಳಗ್ಗೆ ಸೂರ್ಯೋದಯವಾಗುತ್ತಿದ್ದಂತೆ ಯಜ್ಞ ಪ್ರಾರಂಭವಾಗತಕ್ಕದ್ದೆಂದು ನಿರ್ಣಯಿಸಿ ದರು. ಈ ವಾರ್ತೆಯು ಕ್ಷಣದಲ್ಲಿ ಊರಿನಲ್ಲೆಲ್ಲಾ ಹಬ್ಬಿತು. ಬೆಳಗ್ಗೆ ಊರಿನ ಬೀದಿಗಳೆಲ್ಲಾ ಹಸಿರು ತೋರಣಗಳಿಂದಲೂ ಜನ ಸಮೂಹದಿಂದಲೂ ತುಂಬಿ ಹೋದವು. ಸರಯೂ ತೀರ ಜನಮಯವಾಯಿತು. ಸ್ವಸ್ತಿವಾಚನ ಮುಗಿಲು ಮುಟ್ಟುತ್ತಿರಲು ಜಯ ಜಯ ಧ್ವನಿಗಳು, ಮಂಗಳವಾದ್ಯಗಳು ಶುಭ ಸೂಚನೆಯನ್ನು ಮೊಳಗಿಸುತ್ತಿರಲು, ರಾಜನು ರಾಣಿಯರ ಸಮೇತನಾಗಿ, ಋಷ್ಯಶೃಂಗರು ಶಾಂತಾ ಸಮೇತರಾಗಿ ಯಜ್ಞಶಾಲೆಯನ್ನು ಸೇರಿದರು.

ಋಷ್ಯಶೃಂಗರು ಬ್ರಹ್ಮನಾಗಿ ಪ್ರಮಾಣ ಸ್ವೀಕರಿಸಿ, ಋತ್ವಿಕ್ಕುಗಳನ್ನು ಅವರವರ ಅರ್ಹತೆ ಅನುಸರಿಸಿ ಆಯಾಯ ಸ್ಥಾನದಲ್ಲಿ ಆಯಾಯಾ ಪಾರಾಯಣ ಮಾಡು ವಂತೆ ನೇಮಿಸಿದರು. ಯಜ್ಞವು ಪ್ರಾರಂಭವಾಯಿತು. ಅಗ್ನಿಹೋತ್ರಕ್ಕೆ ಆಹುತಿಯನ್ನು ಋಷ್ಯಶೃಂಗರು ಅರ್ಪಿಸುತ್ತಿದ್ದರು. ಹೀಗೆ ಋಷ್ಯಶೃಂಗರು ಸಂಪೂರ್ಣ ಭಕ್ತಿ ಶ್ರದ್ಧೆ ಗಳಿಂದ ಅಗ್ನಿಯಲ್ಲಿ ಆಹುತಿಯನ್ನು ಅರ್ಪಿಸುತ್ತಿರಲು, ಅಗ್ನಿಕುಂಡದಿಂದ ಎಲ್ಲರೂ ನೋಡುತ್ತಿರುವಂತೆ ಮಹಾ ತೇಜೋಮಯನಾದ, ಮಿಂಚಿನಂತೆ ಮಿರುಗುವ ಕಣ್ಣುಗಳ ಒಬ್ಬ ಮಹಾಪುರುಷನು ಕೈಯಲ್ಲಿ ಒಂದು ಪಾತ್ರೆಯನ್ನು ಹಿಡಿದು ಪ್ರತ್ಯಕ್ಷನಾದನು. ಪ್ರಜೆಗಳೂ ಋತ್ವಿಕರೂ ಆಶ್ಚರ್ಯ ಆನಂದ ಭಯಗಳಿಂದ ದಿಗ್ಭ್ರಾಂ ತರಾಗಿ, ಎಲ್ಲಿದ್ದವರು ಅಲ್ಲೇ ಸ್ತಂಭೀಭೂತರಾದರು. ರಾಜ ರಾಣಿಯರು ಭಕ್ತಿ ಶ್ರದ್ಧೆ ಗಳಿಂದ ಆ ಮಹಾಪುರುಷನನ್ನೇ ನೋಡುತ್ತಾ ಆನಂದಬಾಷ್ಪಗಳನ್ನು ಸುರಿಸುತ್ತಾ ಕೈ ಜೋಡಿಸಿಕೊಂಡು ಪ್ರಾರ್ಥಿಸುತ್ತಿದ್ದರು.

ಋಷ್ಯಶೃಂಗರು ದೃಷ್ಟಿಯನ್ನು ಕದಲಿಸದೆ, ನಿಷ್ಠೆಯನ್ನು ಬಿಡದೆ, ಏಕಾಗ್ರತೆಯಿಂದ ಅಗ್ನಿಗೆ ಆಹುತಿಯನ್ನು ಅರ್ಪಿಸುತ್ತಿದ್ದರು. ಆಗ, ಆಕಾಶದಿಂದ ಪ್ರಳಯ ಕಾಲದ ಶಬ್ದದಂಥ ಮಾತು ಕೇಳಿಸಿದುವು. ಋಷ್ಯಶೃಂಗರು ಕೂಡ ಆಹುತಿ ಅರ್ಪಿಸುವು

ದನ್ನು ನಿಲ್ಲಿಸಿ, ಆಶ್ಚರ್ಯದಿಂದ ಅದೇನೆಂದು ಆಲಿಸಿದರು. "ಮಹಾರಾಜಾ! ಈ ಪಾತ್ರೆಯನ್ನು ತೆಗೆದುಕೊ. ಇದರಲ್ಲಿರುವ ಪಾಯಸವನ್ನು ಯಥೋಚಿತವಾಗಿ ನಿನ್ನ ಮೂವರು ರಾಣಿಯರಿಗೂ ಹಂಚು," ಎಂದು ಅಗ್ನಿಹೋತ್ರದಿಂದ ಉದ್ಭವಿಸಿದ ಆ ದಿವ್ಯ ಪುರುಷನು ದಶರಥನ ಕೈಗೆ ಆ ಪಾತ್ರೆಯನ್ನು ಕೊಟ್ಟು ಅಂತರ್ಧಾನನಾದನು. ಈ ಮಹಾದ್ಭುತವನ್ನು ನೋಡಿದ ಜನರು, ಋಷಿಗಳು, ಪಂಡಿತರು, ಮಹದಾನಂದ ಹೊಂದಿದರು. ಪೂರ್ಣಾಹುತಿ ಸಲ್ಲಿಸಿದ ಮೇಲೆ, ರಾಜನು ಪಾಯಸದ ಪಾತ್ರೆ ಯನ್ನು ಹಿಡಿದು ಮೆರವಣಿಗೆಯಲ್ಲಿ ಹೊರಟು ಅರಮನೆಯನ್ನು ಸೇರಿದನು.

# ೪ ಪುತ್ರರು

ರಾಣಿಯರು ಗುರುವಾಜ್ಞೆ ಅನುಸರಿಸಿ, ಅಭ್ಯಂಗನ ಮಾಡಿ, ಬಹು ನಿಷ್ಠೆಯಿಂದ ಪೂಜಾಗೃಹವನ್ನು ಪ್ರವೇಶಿಸಿದರು. ಅಲ್ಲಿ ವಸಿಷ್ಠರು ಪೂಜಾದಿ ಕಾರ್ಯಗಳನ್ನು ಮುಗಿಸಿ, ಅಗ್ನಿದೇವನು ಅನುಗ್ರಹಿಸಿದ ಬಂಗಾರದ ಪಾತ್ರೆಯಲ್ಲಿನ ಪಾಯಸವನ್ನು ಬಂಗಾರದ ಬಟ್ಟಲುಗಳಿಗೆ ಹಾಕಿ ಸಿದ್ಧವಾಗಿಟ್ಟಿದ್ದರು. ರಾಣಿಯರು ಬಂದೊಡನೆ ವಸಿಷ್ಠರು, ಮಹಾರಾಜನನ್ನು ಕರೆದು, "ರಾಜಾ! ಈ ಬಟ್ಟಲುಗಳಲ್ಲಿರುವ ಪಾಯಸ ವನ್ನು ನಿನ್ನ ಪತ್ನಿಯರಿಗೆ ಕೊಡು. ಮೊದಲು ಕೌಸಲ್ಯೆಗೂ ನಂತರ ಸುಮಿತ್ರೆಗೂ ಆಮೇಲೆ ಕೈಕೆಗೂ ಕೊಡು," ಎಂದು ಆಜ್ಞಾಪಿಸಿದರು. ರಾಜನು ಹಾಗೆಯೇ ಮಾಡಿದನು. ಮೂವರು ರಾಣಿಯರೂ ಆ ಬಟ್ಟಲುಗಳನ್ನು ತೆಗೆದುಕೊಂಡು, ವಸಿಷ್ಠರಿಗೆ ದಶರಥನಿಗೆ ನಮಸ್ಕರಿಸಿ ಒಳಗೆ ಹೋಗುತ್ತಿರಲು, ವಸಿಷ್ಠರು, "ಈ ಪಾಯಸವನ್ನು ಈಗಲೇ ಸೇವಿಸಬೇಡಿ. ಋಷ್ಯಶೃಂಗರು ಬಂದು ಆಶೀರ್ವದಿಸಿದ ಮೇಲೆ ಸೇವಿಸಬೇಕು," ಎಂದು ಎಚ್ಚರಿಸಿದರು. ಆಗ ಅವರು ಒಳಗೆ ತೆರಳಿ ತಲೆಗೆ ಹೊಗೆ ಹಾಕಲು ದಾಸಿಯರು ಸಿದ್ಧರಾಗಿದ್ದುದನ್ನು ಕಂಡು, ಕೌಸಲ್ಯೆ ಮತ್ತು ಕೈಕೆ ತಮ್ಮ ಪಾಯಸದ ಬಟ್ಟಲುಗಳನ್ನು ಪೂಜಾಗೃಹದಲ್ಲಿ ಭದ್ರಪಡಿಸಿ, ತಲೆ ಕೂದಲನ್ನು ಒಣಗಿಸಿಕೊಳ್ಳುತ್ತಿದ್ದರು. ಸುಮಿತ್ರೆಯು ಮಾಳಿಗೆಗೆ ಹೋಗಿ, ಪಾಯಸದ ಬಟ್ಟಲನ್ನು ಒಂದು ಕಡೆ ಇಟ್ಟು, ಕೂದಲನ್ನು ಒಣಗಿಸಿಕೊಳ್ಳುತ್ತಾ ಆಲೋಚನಾ ಮಗ್ನಳಾದಳು. ಪಟ್ಟದ ರಾಣಿಯಾದ ಕೌಸಲ್ಯೆಗೆ ಹುಟ್ಟಿದ ಮಗನಿಗೆ ಪಟ್ಟಕಟ್ಟುವುದು ರಾಜನೀತಿ. ಅಲ್ಲದೆ, ವಿವಾಹಕ್ಕೆ ಮುಂಚೆ ಕೊಟ್ಟ ಮಾತಿನಂತೆ ಕೈಕೆಗೆ ಹುಟ್ಟುವ ಮಗನಿಗೆ

ರಾಜ್ಯಾಧಿಕಾರ ವಹಿಸುವುದು ಮತ್ತೊಂದು ಧರ್ಮ. ಇವೆರಡನ್ನೂ ನಡೆಸಬೇಕಾದ ಕರ್ತವ್ಯವಿರುವಾಗ, ಇವೆರಡರಲ್ಲಿ ಯಾವುದಾದರೊಂದು ಆಗಿಯೇ ತೀರಬೇಕು. ಅಂದಮೇಲೆ, ನನಗೆ ಮಗನು ಹುಟ್ಟಿದರೆ ಪ್ರಯೋಜನವೇನು? ಅವರಿಬ್ಬರಿಗೆ ವಂಶೋದ್ಧಾರಕರು ಹುಟ್ಟಿದರೆ ಸಾಕು. ಯಾವ ಅಧಿಕಾರಕ್ಕೂ ಅರ್ಹನಲ್ಲದ ಮಗನು ನನಗೆ ಹುಟ್ಟುವುದಕ್ಕಿಂತ ಹುಟ್ಟದಿರುವುದೇ ಮೇಲು ಎಂದು ಯೋಚಿಸುತ್ತಿದ್ದಳು. ಕೊನೆಗೆ, ನಾನೆಷ್ಟು ಯೋಚಿಸಿದರೂ ದೈವೇಚ್ಛೆ ನೆರವೇರಿಯೇ ತೀರುವುದು. ಅಲ್ಲದೆ, ಪಾಯಸ ತಿನ್ನಬೇಕೆನ್ನುವುದು ಗುರುವಾಜ್ಞೆ, ರಾಜಾಜ್ಞೆ, ಆದ್ದರಿಂದ ನಾನು ಪಾಲಿಸಲೇಬೇಕು, ಎಂದು ನಿಶ್ಚಯಿಸಿ ಒಳಗೆ ಹೋಗುವುದರಲ್ಲಿದ್ದಳು. ಅಷ್ಟರಲ್ಲಿ, ಎಲ್ಲಿಂದ ಬಂದಿತೊ ಏನೊ ಒಂದು ಗರುಡವು ಹಾರಿ ಬಂದು, ಅವಳ ಪಾಯಸದ ಬಟ್ಟಲನ್ನು ಕಚ್ಚಿಕೊಂಡು ಹಾರಿ ಹೋಯಿತು.

ಸುಮಿತ್ರೆಯು ತನ್ನ ಅಜಾಗ್ರತೆಗೆ ಬಹಳವಾಗಿ ದುಃಖಿಸಿದಳು. ರಾಜನಿಗೆ ತಿಳಿಸಿದರೆ ಎಷ್ಟು ಬಾಧೆಪಡುವನೊ ಎಂದು ವ್ಯಥೆಪಟ್ಟು, ಬೇರೇನೂ ದಾರಿ ಕಾಣದೆ, ತನ್ನ ಅಕ್ಕ ಕೌಸಲ್ಯೆಯ ಬಳಿಗೆ ಹೋಗಿ ನಡೆದ ಸಂಗತಿಯನ್ನು ನಡೆದಂತೆ ಅವಳಿಗೆ ತಿಳಿಸಿದಳು. ಅಷ್ಟರಲ್ಲಿ ಕೈಕೆಯು ತಲೆಕೂದಲನ್ನು ಆರಿಸಿಕೊಂಡು ಬಂಗಾರದ ಬಟ್ಟಲನ್ನು ಹಿಡಿದು ಅಲ್ಲಿಗೆ ಬಂದಳು. ಮೂವರೂ ಸೇರಿ ಬಹಳ ಹೊತ್ತು ವಿಚಾರ ಮಾಡಿ, ಮೂವರೂ ಅಕ್ಕ ತಂಗಿಯರಂತೆ ಪ್ರೀತಿಯಿಂದ ಬಾಳುತ್ತಿದ್ದುದರಿಂದ, ರಾಜನಿಗೆ ಬಾಧೆಯಾಗದಿರಲೆಂದು, ಸುಮಿತ್ರೆಗೆ ನಿರಾಶೆಯಾಗದಿರಲೆಂದು, ಒಂದು ಬಟ್ಟಲನ್ನು ತರಿಸಿ, ಕೌಸಲ್ಯೆಯು ತನ್ನ ಪಾಯಸದಲ್ಲಿ ಸ್ವಲ್ಪ ಭಾಗವನ್ನೂ ಕೈಕೆಯು ತನ್ನ ಪಾಯಸದಲ್ಲಿ ಸ್ವಲ್ಪ ಭಾಗವನ್ನೂ ಅದರಲ್ಲಿ ಹಾಕಿ ಸುಮಿತ್ರೆಗೆ ಕೊಟ್ಟರು.

ಮೂವರೂ ಪೂಜಾಗೃಹದಲ್ಲಿ ಕುಳಿತರು. ಹೊರಗೆ ಪಂಡಿತರು ಆಶೀರ್ವಾದ ಮಂತ್ರ ಹೇಳುತ್ತಿದ್ದರು. ಋಷ್ಯಶೃಂಗ ಮುನಿಯು ಆಶೀರ್ವದಿಸಿದ ನಂತರ, ಮೂವರು ರಾಣಿಯರೂ ಪಾಯಸ ಕುಡಿದರು. ಪೂಜಾ ಪೀಠಕ್ಕೆ ನಮಸ್ಕರಿಸಿ, ಋಷ್ಯಶೃಂಗ ಮುನಿಗೆ ನಮಸ್ಕರಿಸಿ ಅವರವರ ನಿವಾಸಕ್ಕೆ ತೆರಳಿದರು. ಕೆಲವು ಕಾಲ ಕಳೆಯಿತು. ಮೂವರು ರಾಣಿಯರೂ ಗರ್ಭ ಧರಿಸಿದರೆನ್ನುವ ವಾರ್ತೆಯು ನಗರದಲ್ಲೆಲ್ಲಾ ಹಬ್ಬಿತು. ರಾಣಿಯರ ದೇಹಗಳು ಕಾಂತಿಯುಕ್ತವಾಗಿ ಬೆಳಗಿದವು. ಹತ್ತನೇ ತಿಂಗಳು ಪ್ರಾರಂಭವಾಯಿತು. ದಾದಿಯರು ಪ್ರಸವದ ಕಾಲವು ಹತ್ತಿರವಾಯಿತು, ಇನ್ನೇನು ಈಗಲೊ ಆಗಲೊ ಎಂದು ಸರ್ವ ಸಿದ್ಧತೆಯಿಂದ ರಾಣಿಯರನ್ನು ಅತಿ ಜಾಗ್ರತೆ ಯಿಂದ ನೋಡಿಕೊಳ್ಳುತ್ತಿದ್ದರು.

ಇಷ್ಟರಲ್ಲಿ ಕೌಸಲ್ಯೆಗೆ ಪ್ರಸವ ಬಾಧೆ ಶುರುವಾಯಿತೆಂದು ಕೇಳಿ ದಾದಿಯರು ರಾಣೀ ಮಂದಿರಕ್ಕೆ ಧಾವಿಸಿದರು. ಪಟ್ಟದ ರಾಣಿಗೆ ಕುಮಾರನು ಜನಿಸಿದನೆನ್ನುವ ವಿಷಯ ಅಂತಃಪುರದಲ್ಲೆಲ್ಲಾ ಹರಡಿತು. ಎರಡನೆಯ ದಿನ ಕೈಕೆಗೆ ಒಬ್ಬ ಕುಮಾರನು ಜನಿಸಿದನು. ಮೂರನೆಯ ದಿನ ಸುಮಿತ್ರೆಗೆ ಪ್ರಸವ ಬಾಧೆ ಶುರುವಾಗಿ ಅವಳಿಗೆ ಇಬ್ಬರು ಕುಮಾರರು ಜನಿಸಿದರು. ಈ ವಾರ್ತೆಯು ಅಂತಃಪುರದಲ್ಲಿ ಮಾತ್ರವಲ್ಲದೆ ಊರಿನಲ್ಲೆಲ್ಲಾ ಹರಡಿತು. ಎಲ್ಲರೂ ಆನಂದಿಸಿದರು. ಭೂಮಿಯು ಸಸ್ಯ ಶ್ಯಾಮಲ ವಾಯಿತು. ಸಕಲ ವಾದ್ಯಗಳೂ ಮೊಳಗಿದವು. ಮೇಘಗಳು ಆನಂದಬಾಷ್ಪವೋ ಎನ್ನುವಂತೆ, ಪನ್ನೀರು ವರ್ಷವೋ ಎನ್ನುವಂತೆ, ಎರಡು ನಿಮಿಷ ಪರಿಮಳದ ಹನಿಗಳನ್ನು ಅಂತಃಪುರದ ಮೇಲೆ ಮಾತ್ರ ಸುರಿಸಿದವು. ಪುತ್ರರು ಹುಟ್ಟಿದ ತಕ್ಷಣವೇ ಎಲ್ಲಿ ನೋಡಿದರೂ ಹೀಗೆ ಶುಭವೇ ಕಾಣಿಸತೊಡಗಿತು. ದಶರಥ ಮಹಾರಾಜನ ಆನಂದಕ್ಕೆ ಅಂತ್ಯವೇ ಇಲ್ಲ. ಒಬ್ಬನಾದರೂ ಮಗ ಇಲ್ಲ ಎಂದು ಚಿಂತಿಸುತ್ತಿರುವಾಗ. ನಾಲ್ವರು ಒಮ್ಮೆಲೆ ತನಗೆ ಪ್ರಾಪ್ತವಾದರೆಂಬ ಸುದ್ದಿಯಿಂದ ಅವನಿಗೆ ವರ್ಣನಾತೀತ ವಾದ ಆನಂದವಾಯಿತು.

ಬ್ರಾಹ್ಮಣರನ್ನು ಬರಮಾಡಿಕೊಂಡು ಅವರಿಗೆ ಸುವರ್ಣ, ಗೋವು, ಭೂದಾನ ಗಳನ್ನಿತ್ತನು. ಬಡವರಿಗೆ ಧನವನ್ನು ದಾನ ಮಾಡಿದನು, ವಸತಿ ಏರ್ಪಡಿಸಿದನು, ವಸ್ತ್ರಗಳನ್ನು ಹಂಚಿದನು, ಅನ್ನ ಹಾಕಿದನು. ಎಲ್ಲಿ ನೋಡಿದರೂ ಜಯಜಯ ಘೋಷ ಮೊಳಗುತ್ತಿತ್ತು. ಜನರು ಶುಭಕೋರುವ ಸಭೆಗಳನ್ನು ನಡೆಸಿದರು, ನಾಟ್ಯ ಏರ್ಪಡಿಸಿದರು. ತಮಗೆ ಹೊಸ ಪ್ರಭುಗಳು ಅವತರಿಸಿದ್ದರಿಂದ ಪ್ರಜೆಗಳೂ ತಮ್ಮ ಮನೆಗಳಲ್ಲಿ ತಮಗೆ ಮಕ್ಕಳು ಹುಟ್ಟಿದ್ದಕ್ಕಿಂತ ಹೆಚ್ಚು ಆನಂದಪಡುತ್ತಿದ್ದರು. ಕೆಲವು ಸ್ತ್ರೀಯರು ತಮ್ಮ ರಾಣಿಯರಿಗೆ ಮಕ್ಕಳಾದದ್ದು ಭಗವತ್ ಕಟಾಕ್ಷದಿಂದಲೆ ಎಂದು ನಂಬಿ ಧನ್ಯವಾದ ಅರ್ಪಿಸುವ ಸಲುವಾಗಿಯೊ ಎನ್ನುವಂತೆ ದೇವರಿಗೆ ಪೂಜೆ ಸಲ್ಲಿಸಿದರು.

ದಶರಥನು ಕುಲಗುರುವಾದ ವಸಿಷ್ಠರನ್ನು ಬರಮಾಡಿಕೊಂಡು, ಅವರ ಸಲಹೆ ಯಂತೆ, ಉದ್ದಾಮ ಸಿದ್ಧಾಂತಿಯನ್ನು ಕರೆಸಿ ಜಾತಕವನ್ನು ಬರೆಸಿದನು. ಉತ್ತರಾ ಯಣ, ವಸಂತ ಋತು, ಚೈತ್ರಮಾಸ, ಶುಕ್ಲಪಕ್ಷ, ಶುದ್ಧ ನವಮಿ, ಪುನರ್ವಸು ನಕ್ಷತ್ರ, ಸೋಮವಾರ, ಸಿಂಹಲಗ್ನ, ಅಭಿಜಿತ್ಕಾಲದಲ್ಲಿ, ಲೋಕವೆಲ್ಲವೂ ವಿಶ್ರಮಿಸುವ ವೇಳೆಯಲ್ಲಿ, ಸಮಶೀತೋಷ್ಣ ಸಮಯದಲ್ಲಿ, ಕೌಸಲ್ಯೆಗೆ ಕುಮಾರನು ಜನಿಸಿದನು. ಎರಡನೆಯ ದಿನ, ಚೈತ್ರ ಶುದ್ಧ ದಶಮಿ ಮಂಗಳವಾರ, ಪುಷ್ಯ ನಕ್ಷತ್ರ, ಗಂಧಯೋಗ, ತೈತುಲಾಕರಣದಲ್ಲಿ ಕೈಕಾದೇವಿಯು ಒಬ್ಬ ಕುಮಾರನಿಗೆ ಜನ್ಮವಿತ್ತಳು. ಮೂರನೆಯ ದಿನ ಚೈತ್ರ ಶುದ್ಧ ಏಕಾದಶಿ ಬುಧವಾರ, ಆಶ್ಲೇಷಾ ನಕ್ಷತ್ರ, ವೃದ್ಧಿಯೊಗ, ಗರಕರಣ

ದಲ್ಲಿ ಸುಮಿತ್ರಾದೇವಿಯು ಇಬ್ಬರು ಕುಮಾರರನ್ನು ಪ್ರಸವಿಸಿದಳು. ಈ ವಿವರಗಳನ್ನು ಸಿದ್ಧಾಂತಿಗೆ ತಿಳಿಸಿ, ಮಕ್ಕಳ ಜಾತಕ ಫಲವನ್ನು ವಿಚಾರಿಸಿ, ಅವರಿಗೆ ನಾಮಕರಣ ಮಾಡಲು ಯೋಗ್ಯವಾದ ಮೂಹೂರ್ತವನ್ನು ತಿಳಿಸಬೇಕೆಂದು ವಸಿಷ್ಠರನ್ನು ಕೋರಿದನು.

ಕುಲಗುರುಗಳಾದ ವಸಿಷ್ಠರು ಎರಡು ನಿಮಿಷ ಮೌನವಾಗಿ ಆಲೋಚಿಸಿ, ಯೋಗ ದೃಷ್ಟಿಯಿಂದ ಭವಿಷ್ಯತ್ತನ್ನು ತಿಳಿದು, "ಮಹಾರಾಜ! ನಿನ್ನ ಕುಮಾರರು ಸಾಮಾನ್ಯ ರಲ್ಲ, ನಿರುಪಮಾನರು. ಅವರಿಗೆ ಅನೇಕ ಹೆಸರುಗಳಿವೆ. ಅವರು ಮಾನವ ಮಾತ್ರ ರಲ್ಲ. ಮಾನವಾಕಾರವನ್ನು ಧರಿಸಿದ ದೇವತಾ ಅಂಶಗಳು, ದಿವ್ಯ ಮೂರ್ತಿಗಳು. ಇದು ಪ್ರಜೆಗಳ ಭಾಗ್ಯವೆಂದೇ ಹೇಳಬೇಕು. ಇಂಥ ಪವಿತ್ರ ಪುರುಷರಿಗೆ ನಾಮಕರಣ ಮಾಡುವುದು ನನ್ನ ಭಾಗ್ಯವೆಂದೇ ಭಾವಿಸುತ್ತೇನೆ. ತಾಯಿಯರು ಬೇರೆ ಬೇರೆ ಆದರೂ ತಂದೆಯು ಒಬ್ಬನೇ ಆದ್ದರಿಂದ, ಕೌಸಲ್ಯಾದೇವಿಯು ಪ್ರಸವಿಸಿದಾಗಿನಿಂ ದಲೆ ಎಲ್ಲರಿಗೂ ಪುರುಡು ಬಂದಿದೆ. ಆಮೇಲೆ ಬಂದ ಪುರುಡನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿಲ್ಲ. ಪ್ರಥಮ ಪುತ್ರನ ಜನ್ಮ ಅನುಸರಿಸಿ, ಹತ್ತು ದಿನಗಳು ಕಳೆದೊ ಡನೆಯೆ, ಅಂದರೆ, ಹನ್ನೊಂದನೆಯ ದಿನವು ನಾಮಕರಣಕ್ಕೆ ಯೋಗ್ಯವಾಗಿದೆ. ಅದಕ್ಕೆ ಬೇಕಾದ ಏರ್ಪಾಟುಗಳನ್ನು ಮಾಡು," ಎಂದು ಹೇಳಿ, ರಾಜನ ನಮಸ್ಕಾರ ವನ್ನು ಸ್ವೀಕರಿಸಿ ಹೊರಟರು. ಸಿದ್ಧಾಂತಿಗಳೂ ಅದನ್ನು ಅಂಗೀಕರಿಸಿ, ನಾಮಕರಣ ಕ್ಕೆ ಬೇಕಾದ ಸಾಮಗ್ರಿಗಳ ಪಟ್ಟಿಯನ್ನು ಪುರೋಹಿತರ ಕೈಗೆ ಇತ್ತು, ರಾಜನಿತ್ತ ಕಾಣಿಕೆಯನ್ನು ಸ್ವೀಕರಿಸಿ, ಆನಂದದಿಂದ ಹೊರಟು ಹೋದರು. ಅಂದಿನಿಂದಲೂ ದಶರಥನು ತನ್ನ ಬಂಧು ಮಿತ್ರರಿಗೆ, ರಾಜರಿಗೆ ಸಾಮಂತ ರಾಜರಿಗೆ, ಋಷಿಗಳಿಗೆ ಪಂಡಿತರುಗಳಿಗೆ ನಾಮಕರಣ ವೃತ್ತಾಂತವನ್ನು ಅವರವರ ಸ್ಥಾನ ಅನುಸರಿಸಿ, ಪತ್ರದ ಮೂಲಕ, ಪರಿಚಾರಕರ ಮೂಲಕ, ಪಂಡಿತರ ಮೂಲಕ, ಬ್ರಾಹ್ಮಣರ ಮೂಲಕ, ಮಂತ್ರಿಗಳ ಮೂಲಕ ಕಳಿಸಿದನು.

ಹತ್ತು ದಿನ ಕಳೆಯಿತು. ಅಯೋಧ್ಯಾ ಪಟ್ಟಣವನ್ನು ಅತ್ಯಂತ ರಮಣೀಯವಾಗಿ ಅಲಂಕರಿಸಿದರು. ಎಲ್ಲಿ ನೋಡಿದರೂ ಗಂಧರ್ವರು ಗಾನ ಮಾಡುತ್ತಿರುವರೊ ಎನ್ನುವಂತೆ ರಮ್ಯವಾದ ಗಾನವು ಗಾಳಿಯಲ್ಲಿ ತೇಲಿ ಬರುತ್ತಿತ್ತು. ದೇಶವೆಲ್ಲಾ ಮಧುರ ಗಾನದಿಂದ ವ್ಯಾಪಿಸಿದೆಯೇನೋ ಎನ್ನುವಂತಿತ್ತು. ಬೀದಿಗಳಲ್ಲಿ ಪರಿಮಳ ಚೆಲ್ಲಿದರು. ಅಯೋಧ್ಯಾ ನಗರವು ಜನರಿಂದ ಕಿಕ್ಕಿರಿದು ತುಂಬಿತ್ತು. ಪಂಡಿತರು, ಋಷಿಗಳು ಮಾತ್ರ ಅಂತಃಪುರವನ್ನು ಪ್ರವೇಶಿಸಿದರು.

ರಾಜರುಗಳಿಗೆ ಪ್ರಜೆಗಳಿಗೆ ಸೂಕ್ತ ವಸತಿ ಏರ್ಪಡಿಸಿದ್ದರು. ರಾಜಭವನದ ಮುಂದೆ ಹಾಕಿದ್ದ ಚಪ್ಪರದಲ್ಲಿ ಆಹ್ವಾನಿತರು ನಾಮಕರಣದ ವೈಭವವನ್ನು ವೀಕ್ಷಿಸುವ ನಿರೀಕ್ಷಣೆಯಲ್ಲಿ ಕುಳಿತಿದ್ದರು. ಇಷ್ಟರಲ್ಲಿ ಆಸ್ಥಾನಕ್ಕೆ ಮಂಗಳವಾದ್ಯಗಳೊಂದಿಗೆ, ಬ್ರಾಹ್ಮಣರ ಸ್ವಸ್ತಿವಾಚನಗಳೊಂದಿಗೆ, ಸುಮಂಗಲೆಯರು ಶುಭವಚನ ನುಡಿಯು ತ್ತಿರಲು ಕೌಸಲ್ಯೆ, ಸುಮಿತ್ರೆ, ಕೈಕೆಯರು ಬಂದರು. ಅವರು ತಮ್ಮತಮ್ಮ ಮಕ್ಕಳನ್ನು ಎತ್ತಿಕೊಂಡು, ಒಬ್ಬರ ಹಿಂದೊಬ್ಬರು ಬರುತ್ತಿದ್ದರು. ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಬಾಲಕರ ರೂಪದಲ್ಲಿ ಭೂಲೋಕಕ್ಕೆ ಎತ್ತಿಕೊಂಡು ಬರುತ್ತಿದ್ದ ದೇವತಾ ಸ್ತ್ರೀಯರಂತೆ ಕಾಣಿಸುತ್ತಿದ್ದರು. ಅವರ ಆನಂದ, ತೇಜಸ್ಸು ವರ್ಣನಾತೀತ!

ಪ್ರಜೆಗಳು ಅವರನ್ನು ಕಂಡೊಡನೆಯೆ ಜೈ ಜೈಕಾರ ಮಾಡಿದರು. ಸ್ತ್ರೀಯರು ಮಂಗಳಾರತಿ ಎತ್ತಿದರು. ಮೂವರಿಗೂ ಮೂರು ಯೋಗ್ಯ ಉನ್ನತಾಸನಗಳನ್ನು ಸಿದ್ಧಪಡಿಸಿಟ್ಟಿದ್ದರು. ಅದರಲ್ಲಿ ಮೊದಲು ಕೌಸಲ್ಯೆ, ತರುವಾಯ ಸುಮಿತ್ರೆ, ಆ ತರುವಾಯ ಕೈಕೆ ಕುಳಿತರು. ಕೌಸಲ್ಯೆಯ ಬಲ ಭಾಗದಲ್ಲಿ ದಶರಥನು ಕುಳಿತನು. ಬ್ರಾಹ್ಮಣರು ಮಂತ್ರವನ್ನು ಪ್ರಾರಂಭಿಸಿದರು. ಒಂದು ಪಕ್ಕದಲ್ಲಿ ಹೋಮ ಪ್ರಾರಂಭ ವಾಯಿತು. ಬಂಗಾರದ ತಟ್ಟೆಯಲ್ಲಿ ಅಕ್ಕಿಯನ್ನು ಹರಡಿ, ಅದರ ಮೇಲೆ ಮೆತ್ತನೆಯ ಬಟ್ಟೆ ಹಾಸಿ, ಆ ಬಟ್ಟೆಯ ಮೇಲೆ ಮಕ್ಕಳನ್ನು ಮಲಗಿಸಿ ವಸಿಷ್ಠರ ಮುಂದೆ ಇಟ್ಟರು. ಕೌಸಲ್ಯಾ ಕುಮಾರನು ವಸಿಷ್ಠರನ್ನೇ ನೋಡುತ್ತಿದ್ದನು. ಯಾವುದೋ ಹಿಂದಿನ ಪರಿಚಯವಿದ್ದಂತೆ, ನೋಡುವವರಿಗೆ ಆಶ್ಚರ್ಯವಾಗುವಂತೆ ವಸಿಷ್ಠರನ್ನು ತನ್ನ ಹತ್ತಿರಕ್ಕೆ ಕರೆಯುವವನಂತೆ ಕೇಕೆ ಹಾಕುತ್ತಿದ್ದನು. ವಸಿಷ್ಠರು ಅವನ ಚರ್ಯೆಯನ್ನು ನೋಡಿ ಆನಂದವನ್ನು ತಡೆದುಕೊಳ್ಳಲಾರದೆ ಆನಂದಬಾಷ್ಪಗಳನ್ನು ಸುರಿಸುತ್ತಾ ಅಕ್ಷತೆಯನ್ನು ಕೈಯ್ಯಲ್ಲಿ ಹಿಡಿದು, "ರಾಜಾ, ಕೌಸಲ್ಯಾನಂದವರ್ಧನನು ಸರ್ವರಿಗೂ ಆನಂದವನ್ನು ನೀಡುವನು. ಅವನ ಗುಣ ರೂಪಗಳು ಎಲ್ಲರನ್ನೂ ಸಂತೋಷ ಗೊಳಿಸುವುವು. ಯೋಗಿಗಳೂ ಇವನಿಂದ ರಮಿಸುವರು. ಆದ್ದರಿಂದ ಈ ಬಾಲಕನು 'ರಾಮ'ನೆನ್ನುವ ಹೆಸರಿನಿಂದ ಕರೆಯಲ್ಪಡುವನು," ಎಂದು ಕೌಸಲ್ಯಾನಂದನಿಗೆ ರಾಮನೆಂದು ನಾಮಕರಣ ಮಾಡಿದರು.

ಋಷಿಗಳು, "ಭಲೆ, ಭಲೆ, ಸರಿಯಾದ ಹೆಸರು," ಎಂದು ಆನಂದಿಸಿದರು. ಆಮೇಲೆ, ಸುಮಿತ್ರಾನಂದವರ್ಧನರಾದ ಇಬ್ಬರು ಬಾಲಕರನ್ನು ವೀಕ್ಷಿಸಿ, ದೊಡ್ಡ ಬಾಲಕನನ್ನು ನೋಡಿ ಶೌರ್ಯ ವೀರ್ಯಗಳನ್ನು ಪ್ರದರ್ಶಿಸುವ ಲಕ್ಷ್ಮೀ ಸಂಪನ್ನ ನಾಗುವನಾದ್ದರಿಂದ, ಲಕ್ಷ್ಮೀನಾರಾಯಣರ ಸೇವೆಯೇ ತನ್ನ ಶ್ವಾಸವೆಂದು ಭಾವಿಸಿ ಆಚರಿಸುವನಾದ್ದರಿಂದ, ಇವನು ಲಕ್ಷ್ಮಣನೆಂದು, ಇವನ ತಮ್ಮನು ಶತ್ರುಗಳನ್ನು

ನಾಶಮಾಡಿ, ಅಣ್ಣನ ಜಾಡನ್ನೇ ಅನುಸರಿಸಿ, ಶಾಂತಚಿತ್ತನಾಗಿ ಪ್ರವರ್ತಿಸುವನಾದ್ದರಿಂದ ಇವನು ಶತ್ರುಘ್ನನೆಂದು ಕರೆಯಲ್ಪಡುವನೆಂದೂ ಆಶೀರ್ವದಿಸಿದರು.

ನಂತರ ಕೈಕೆಯಾನಂದವರ್ಧನನಾದ ಬಾಲಕನನ್ನು ನೋಡಿ, "ಇವನು ಎಲ್ಲರ ಅಂತಃಕರಣಗಳನ್ನೂ ಪ್ರೇಮಾನಂದಗಳಿಂದ ಬೆಳಗುವುದು ಮಾತ್ರವಲ್ಲದೆ, ಧರ್ಮ ಪ್ರವೃತ್ತಿವುಳ್ಳವನಾಗುವನು ಮತ್ತು ಪ್ರಜೆಗಳಿಗೆ ಭರಣ ಪೋಷಣೆಗಳನ್ನು ಒದಗಿಸುವನಾದ್ದರಿಂದ ಇವನಿಗೆ ಭರತನೆಂದು ನಾಮಕರಣ ಮಾಡಿದ್ದೇನೆ," ಎಂದರು. ಪ್ರಜೆಗಳು ಮಕ್ಕಳ ಭವಿಷ್ಯತ್ತು, ವಸಿಷ್ಠರು ಹೇಳಿದಂತೆಯೇ ಆಗುವುದೆಂದು ನಂಬಿದರು. ಅಂದಿನಿಂದ ಕೌಸಲ್ಯಾನಂದನನನ್ನು ರಾಮನೆಂದೂ ಸುಮಿತ್ರಾನಂದನರನ್ನು ಲಕ್ಷ್ಮಣ ಶತ್ರುಘ್ನರೆಂದೂ ಕೈಕೆನಂದನನನ್ನು ಭರತನೆಂದೂ ಕರೆಯತೊಡಗಿದರು. ಬಂದವರಿಗೆ ಭೋಜನ ಏರ್ಪಡಿಸಿ ಯಾರು ಯಾರಿಗೆ ಯಾವ ಯಾವ ಗೌರವ ಸಲ್ಲಬೇಕೊ ಸಲ್ಲಿಸಿ, ದಾನ ಧರ್ಮಗಳನ್ನು ಮಾಡಿ, ಗೋವುಗಳು, ಭೂಮಿ, ಸುವರ್ಣಗಳನ್ನಿತ್ತು ಸರಿಯಾದ ರೀತಿಯಲ್ಲಿ ಆದರಿಸಿ ಕಳಿಸಿದರು.

ನಂತರ ಮಕ್ಕಳು ದಿನ ದಿನಕ್ಕೆ ಪ್ರವರ್ಧಮಾನರಾಗಿ ತಾಯಿಯರ ಪಾಲನೆ ಪೋಷಣೆಯಲ್ಲಿ ಬೆಳೆಯುತ್ತಿದ್ದರು. ಇದರಲ್ಲೂ ಒಂದು ವಿಚಿತ್ರ ಇತ್ತು! ಏನೆಂದರೆ, ಬಾಲ್ಯದಿಂದಲೂ ಲಕ್ಷ್ಮಣನು ರಾಮನನ್ನೂ ಶತ್ರುಘ್ನನು ಭರತನನ್ನೂ ಅನುಸರಿಸುತ್ತಿದ್ದರು! ಅನುಸರಿಸುವುದಷ್ಟೇ ಅಲ್ಲ, ಒಬ್ಬರನ್ನೊಬ್ಬರು ಬಿಡದೆ ಬೆಳೆಯುತ್ತಿದ್ದರು. ಲಕ್ಷ್ಮಣನು ಹುಟ್ಟಿದಾಗಿನಿಂದಲೂ ಅಳುತ್ತಿದ್ದನು. ದಾದಿಯರು, ಸೇವಕರು ಎಷ್ಟೇ ವಿಧವಾಗಿ ಔಷಧೋಪಚಾರಗಳನ್ನು ಮಾಡಿದರೂ ಸುಮ್ಮನಾಗುತ್ತಿರಲಿಲ್ಲ. ಮಗುವಿಗೆ ಏನು ಬಾಧೆಯೊ ಎಂದು ಏನೇನೊ ಔಷಧಿ ಮಾಡಿದರು.

ಇದು ಔಷಧಿಗೆ ಹೋಗುವಂಥದ್ದಲ್ಲ ಎಂದು ತಿಳಿದು ಸುಮಿತ್ರೆಯು ಒಂದು ದಿನ ಗುರುಗಳಿಗೆ ನಮಸ್ಕರಿಸಿ, "ಸ್ವಾಮೀ! ಹುಟ್ಟಿನಿಂದ ಮೊದಲು ಲಕ್ಷ್ಮಣನು ಏಕೋ ಸುಮ್ಮನೆ ಅಳುತ್ತಲೇ ಇದ್ದಾನೆ. ಏನೇನೋ ಔಷಧಿ ಮಾಡಿದೆ. ಆದರೆ ದಿನ ದಿನಕ್ಕೆ ಅಳು ಜಾಸ್ತಿಯಾಯಿತೆ ವಿನಾ ನಿಲ್ಲಲಿಲ್ಲ. ಹಾಲನ್ನು ಕೂಡ ಸರಿಯಾಗಿ ಕುಡಿಯುತ್ತಿಲ್ಲ. ನಿದ್ರೆ ಮಾಡುವುದಂತೂ ಇಲ್ಲವೇ ಇಲ್ಲ. ಹೀಗೇ ಇದ್ದರೆ ಮಗು ಬೆಳೆಯುವುದಾದರೂ ಹೇಗೆ? ಇದಕ್ಕೆ ಕಾರಣಗಳನ್ನು ತಿಳಿಸಿ ಆಶೀರ್ವದಿಸಬೇಕು," ಎಂದು ಕೇಳಿಕೊಂಡಳು. ವಸಿಷ್ಠರು ಆಲೋಚಿಸಿ, "ರಾಣೀ! ಅವನ ಬಾಧೆಯೇ ಬೇರೆ, ನೀವು ಮಾಡಿದ ವೈದ್ಯವೇ ಬೇರೆ! ಮಾನವರು ಗುರುತಿಸಲು ಸಾಧ್ಯವಿಲ್ಲದಂಥ ವೇದನೆ ಅವನದು. ಅವನಿಗೆ ದೇಹ ಸಂಬಂಧವಾದ ಬಾಧೆ ಯಾವುದೂ ಇಲ್ಲ. ನಾನು ಹೇಳಿದಂತೆ ಮಾಡು! ಆ ಕ್ಷಣದಿಂದಲೆ ಮಗು

ಅಳುವುದನ್ನು ಬಿಟ್ಟು ಸುಖವಾಗಿ ಆಡಿಕೊಂಡಿರುವುದು. ಈಗಲೇ ಮಗುವನ್ನು ತೆಗೆದುಕೊಂಡು ಹೋಗಿ ಕೌಸಲ್ಯಾನಂದನನಾದ ರಾಮನ ಪಕ್ಕದಲ್ಲಿ ಮಲಗಿಸು. ಇದೇ ಅದಕ್ಕೆ ದಿವ್ಯ ಔಷಧ," ಎಂದು ಆಶೀರ್ವದಿಸಿ ಹೊರಟರು.

ಸುಮಿತ್ರೆಯು ಹೇಗಾದರೂ ಮಗುವಿನ ಅಳು ಕಡಿಮೆಯಾದರೆ ಸಾಕೆಂದು ಮಗುವನ್ನು ತೆಗೆದುಕೊಂಡು ಹೋಗಿ ಕೌಸಲ್ಯಾನಂದನನಾದ ರಾಮನ ಹಾಸಿಗೆಯಲ್ಲಿ ಅವನ ಪಕ್ಕದಲ್ಲೆ ಮಲಗಿಸಿದಳು. ಆ ನಿಮಿಷದಿಂದಲೆ ಲಕ್ಷ್ಮಣನ ಅಳು ಮಾಯವಾಯಿತು. ನಗು, ಆಟ ಪ್ರಾರಂಭವಾಯಿತು. ನೋಡುವವರಿಗೆ ಇದು ಬಹಳ ಆಶ್ಚರ್ಯ ಉಂಟುಮಾಡಿತು. ಇದಕ್ಕೆ ಮೊದಲು, ನೀರಿನಿಂದ ದೂರವಾದ ಮೀನು ಹೇಗೆ ಚಡಪಡಿಸುವುದೊ ಹಾಗೆ ಚಡಪಡಿಸಿದ ಲಕ್ಷ್ಮಣನು ಈಗ ನೀರನ್ನು ಸೇರಿದ ಮೀನು ಬಾಲವನ್ನು ಬಡಿಯುತ್ತಾ ಸ್ವೇಚ್ಛೆಯಾಗಿ ಆಡುವಂತೆ ರಾಮನ ಹತ್ತಿರ ಇದ್ದ ಲಕ್ಷ್ಮಣನು ಕೈ ಕಾಲುಗಳನ್ನು ಬಡಿಯುತ್ತಾ ಕೇಕೆ ಹಾಕುತ್ತಾ ರಾಮಸನ್ನಿಧಿಯ ಆನಂದವನ್ನು ಹೀರುತ್ತಾ ಆಡುತ್ತಾ ಹಾಯಾಗಿ ಇದ್ದನು.

ಇದು ಲಕ್ಷ್ಮಣ ವಿಷಯವಾದರೆ, ಶತ್ರುಘ್ನನೂ ಹೀಗೆಯೆ ಹುಟ್ಟಿದಂದಿನಿಂದಲೂ ಹಾಲು ಕುಡಿಯದೆ, ಏನೋ ಚಿಂತಿಸುತ್ತಿರುವವನಂತೆ, ಆಟವಾಡದೆ, ಇದ್ದಲ್ಲಿಂದ ಕದಲದೆ, ತುಂಬಾ ಬಲಹೀನನಾಗುತ್ತಿದ್ದನು. ಗಾಬರಿಗೊಂಡ ಸುಮಿತ್ರೆಯು ಗುರುಗಳನ್ನು ಬರಮಾಡಿಕೊಂಡು, ಇದಕ್ಕೆ ಕಾರಣವೇನೆಂದು ಕೋರಿದಳು. ವಸಿಷ್ಠರು ಮುಗುಳ್ನಕ್ಕು, "ಅಮ್ಮಾ! ನಿನ್ನ ಮಕ್ಕಳು ಸಾಮಾನ್ಯರಲ್ಲ. ಅವರ ಜನ್ಮದಲ್ಲಿ ಇದೊಂದು ಲೀಲಾ ನಾಟಕ. ಶತ್ರುಘ್ನನನ್ನು ಭರತನ ಹಾಸಿಗೆಯ ಮೇಲೆ ಮಲಗಿಸು. ಅವನ ನಿತ್ಯ ಕರ್ಮ ಸಕ್ರಮವಾಗಿ ಜರುಗುವುದು, ಸಂತೋಷವಾಗಿ ಇರುವನು. ಇದಕ್ಕೆ ಚಿಂತೆ ಮಾಡುವ ಅವಶ್ಯಕತೆ ಇಲ್ಲ," ಎಂದು ಹೇಳಿ ಆಶೀರ್ವದಿಸಿ ಹೊರಟರು. ಸುಮಿತ್ರೆಯು ಹಾಗೆಯೇ ಮಾಡಿದಳು. ಅಂದಿನಿಂದ ಲಕ್ಷ್ಮಣನು ರಾಮನೊಡನೆಯೂ ಶತ್ರುಘ್ನನು ಭರತನೊಡನೆಯೂ ಬೆಳೆಯುತಿದ್ದರು. ಅವರ ಆನಂದಕ್ಕೆ ಅಡ್ಡಿ ಇಲ್ಲ, ಅಭಿವೃದ್ಧಿಗೆ ಕೊರತೆ ಇಲ್ಲ! ದಿನ ದಿನಕ್ಕೆ ಸೂರ್ಯಕಾಂತಿಯಂತೆ ಪ್ರಕಾಶಿಸುತ್ತಾ ಅಭಿವೃದ್ಧಿ ಹೊಂದುತ್ತಿದರು.

ಸುಮಿತ್ರೆಗೆ ಮಕ್ಕಳು ತನ್ನ ಬಳಿ ಇಲ್ಲದ್ದರಿಂದ ಏನೂ ಕೆಲಸವಿಲ್ಲದಂತಾಯಿತು. ಮಕ್ಕಳ ಅಭಿವೃದ್ಧಿಯೇ ತನ್ನ ಪ್ರಾಣವೆಂದು ಭಾವಿಸಿದ್ದಳಾದ್ದರಿಂದ ಕೌಸಲ್ಯೆಯ ಬಳಿ ಸ್ವಲ್ಪ ಹೊತ್ತು, ಕೈಕೆಯ ಬಳಿ ಸ್ವಲ್ಪ ಹೊತ್ತು ಇದ್ದು ಮಕ್ಕಳ ಸೇವೆ ಮಾಡುತ್ತಾ ಅಲ್ಲಿಂದಿಲ್ಲಿಗೆ ತಿರುಗುತ್ತಾ ಅವರಿಗೆ ಬೇಕಾದ ನೆರವು ನೀಡುತ್ತಾ ದಾಸಿಯಂತೆ ಕೆಲಸ ಮಾಡುವುದಾಯಿತೆ ವಿನಾ ತಾಯಿಯಂತೆ ಇರಲು ಅವಕಾಶವಾಗಲಿಲ್ಲ.

"ಇದು ನನ್ನ ಗ್ರಹಚಾರ," ಎಂದುಕೊಂಡು, ಹೀಗಾಗಲು ಏನು ಕಾರಣವೆಂದು ಗುರುಗಳೊಡನೆ ಒಂದು ದಿನ ಏಕಾಂತದಲ್ಲಿ ವಿಚಾರ ಮಾಡಿದಳು.

ಅವಳ ಪ್ರಾರ್ಥನೆಯನ್ನು ಕೇಳಿ ಗುರುಗಳು ಇದ್ದುದನ್ನು ಇದ್ದಂತೆ ಹೇಳಿದರು. "ಅಮ್ಮಾ! ಲಕ್ಷ್ಮಣನು ರಾಮನ ಅಂಶ ಉಳ್ಳವನು. ಶತ್ರುಘ್ನನು ಭರತನ ಅಂಶ ಉಳ್ಳವನು ಎಂದಿಷ್ಟು ಮಾತ್ರ ಹೇಳಬಹುದು," ಎಂದೊಡನೆಯೆ ಸುಮಿತ್ರೆಯು, "ಹೌದೇನು? ಈಗ ನನಗೆ ಅರ್ಥವಾಯಿತು! ಧನ್ಯಳಾದೆ," ಎಂದು ಗುರುಗಳಿಗೆ ನಮಸ್ಕರಿಸಿ ಹೊರಟು ಹೋದಳು. "ಆ ದಿನ ಪಾಯಸದ ಬಟ್ಟಲನ್ನು ಹದ್ದು ಎತ್ತಿಕೊಂಡು ಹೋದಾಗ ರಾಜನು ಕೋಪಿಸಿಕೊಳ್ಳುವನೆನ್ನುವ ಭಯದಿಂದ, ಕೌಸಲ್ಯೆಗೂ ಕೈಕೆಗೂ ಆ ವಿಷಯವನ್ನು ಹೇಳಿದಾಗ, ಸರಳ ನಿಷ್ಕಪಟ ಹೃದಯದ ಅವರು, ಅವಳ ಪಾಯಸದಿಂದ ಸ್ವಲ್ಪ ಭಾಗ ಇವಳ ಪಾಯಸದಿಂದ ಸ್ವಲ್ಪ ಭಾಗ ಸೇರಿಸಿ ನನಗೆ ಕೊಟ್ಟರು. ಅವೇ ಅವರ ಆ ಎರಡು ಅಂಶಗಳು. ಇಲ್ಲದಿದ್ದರೆ ನನಗೆ ಮಾತ್ರ ಇಬ್ಬರು ಪುತ್ರರು ಹುಟ್ಟಲು ಕಾರಣವೇನು? ಇಬ್ಬರ ಪಾಯಸದ ಭಾಗಗಳನ್ನೂ ತಿಂದೆನಾದ್ದರಿಂದ ಈ ಬಾಲಕರು ಇಂಥ ಸಂಬಂಧ ಹೊಂದಿದ್ದಾರೆ. ದೈವ ಸಂಕಲ್ಪ ಎಷ್ಟು ಸೂಕ್ಷ್ಮ! ಅವನ ಶಕ್ತಿ ತಿಳಿದುಕೊಳ್ಳಲು ಯಾರಿಗೆ ಸಾಧ್ಯ? ಅದನ್ನು ಬದಲಾಯಿಸುವವರು ಯಾರು?" ಎಂದು ತನ್ನಲ್ಲಿ ತಾನು ಅನಂದಿಸಿದಳು. ನವಮಾಸಗಳು ಅವರನ್ನು ಹೊತ್ತದ್ದು ಮಾತ್ರ ತಾನು ಹೊರತು ಕೌಸಲ್ಯೆ ಕೈಕೆಯರೆ ತನ್ನ ಮಕ್ಕಳ ನಿಜವಾದ ತಾಯಿಯರು ಎಂದು ದೃಢ ಮಾಡಿಕೊಂಡು, ಮಕ್ಕಳನ್ನು ಕೌಸಲ್ಯೆ ಕೈಕೆಯರಿಗೆ ಒಪ್ಪಿಸಿ, ತಾನು ದಾದಿಯಂತೆ ಮಕ್ಕಳ ಸೇವೆ ಮಾಡುತ್ತಿದ್ದಳು.

ದಾಸಿಯರೆ ಅಲ್ಲದೆ, ರಾಜ ಬಂಧುಗಳೂ ಅನೇಕರು ಮಕ್ಕಳನ್ನು ನೋಡುವುದಕ್ಕೆ ನಿತ್ಯವೂ ಬಂದು ಹೋಗುತ್ತಿದ್ದರು. ಅವರೆಲ್ಲರೂ ನೋಡಿ ಹೊರಟೊಡನೆಯೆ ಕೌಸಲ್ಯೆ ಮಕ್ಕಳಿಗೆ ದೃಷ್ಟಿ ತೆಗೆಸಿ ಹಾಕುತ್ತಿದ್ದಳು. ಮಕ್ಕಳ ಮೇಲೆ ಅವಳಿಗಿದ್ದ ಅಧಿಕ ಪ್ರೇಮದಿಂದಾಗಿ ಹಗಲು ರಾತ್ರಿ ಎನ್ನುವ ಗಮನವೇ ಅವಳಿಗೆ ಇರುತ್ತಿರಲಿಲ್ಲ. ಒಂದು ನಿಮಿಷವೂ ಮಕ್ಕಳನ್ನು ಬಿಟ್ಟಿರುತ್ತಿರಲಿಲ್ಲ. ಸ್ನಾನ ಪೂಜಾದಿಗಳಲ್ಲೂ ಕೂಡ ಲಕ್ಷ್ಯವೆಲ್ಲಾ ಮಕ್ಕಳ ಮೇಲೇ ಇರುತ್ತಿತ್ತು. ಕೆಲಸಗಳನ್ನೆಲ್ಲಾ ಬೇಗ ಬೇಗ ಮುಗಿಸಿಕೊಂಡು ಮತ್ತೆ ಮಕ್ಕಳ ಬಳಿಗೆ ಬಂದುಬಿಡುತ್ತಿದ್ದಳು.

ಒಂದು ದಿನ, ರಾಮ ಲಕ್ಷ್ಮಣರಿಗೆ ಸ್ನಾನ ಮಾಡಿಸಿ, ಧೂಪ ಹಾಕಿ, ಬಂಗಾರದ ತೊಟ್ಟಿಲಲ್ಲಿ ಮಲಗಿಸಿ, ಜೋಗುಳ ಹಾಡುತ್ತಾ ತೂಗಿ, ದಾಸಿಯರಿಗೆ ಮಕ್ಕಳನ್ನು ನೋಡಿಕೊಳ್ಳುವಂತೆ ಹೇಳಿ, ಒಳಗೆ ಹೋಗಿ, ಪಾಯಸವನ್ನು ಮಾಡಿ ಪೂಜಾ ಪೀಠದ ಬಳಿ ಇಟ್ಟು ನೈವೇದ್ಯ ಮಾಡಿದಳು. ಸ್ವಲ್ಪ ಹೊತ್ತಾದ ಮೇಲೆ ಪಾಯಸದ

ಪ್ರಸಾದವನ್ನು ಮಕ್ಕಳಿಗೆ ಸ್ವಲ್ಪ ತಿನ್ನಿಸೋಣವೆಂದು ಬಂಗಾರದ ಬಟ್ಟಲನ್ನು ಹಿಡಿದು ಪೂಜಾಗೃಹವನ್ನು ಪ್ರವೇಶಿಸಿದಾಗ ನೈವೇದ್ಯದ ಬಟ್ಟಲನ್ನು ಮುಂದಿಟ್ಟುಕೊಂಡು ಪಾಯಸವನ್ನು ತಿನ್ನುತ್ತಿದ್ದ ರಾಮನನ್ನು ಕಂಡು ತನ್ನ ಕಣ್ಣುಗಳನ್ನು ತಾನೆ ನಂಬಲಾರದೆ ಹೋದಳು.

ಇದು ನಿಜವೋ ಅಥವಾ ಭ್ರಮೆಯೊ! ತೊಟ್ಟಿಲಲ್ಲಿ ಮಲಗಿ ನಿದ್ರಿಸುತ್ತಿದ್ದ ನನ್ನ ಮಗ ಇಲ್ಲಿಗೆ ಹೇಗೆ ಬಂದ, ಯಾರು ಎತ್ತಿಕೊಂಡು ಬಂದರು ಎಂದು ಆಶ್ಚರ್ಯಪಡುತ್ತಾ ಓಡಿ ಹೋಗಿ ನೋಡಲು, ರಾಮನು ತೊಟ್ಟಿಲಲ್ಲಿ ಗಾಢ ನಿದ್ರೆಯಲ್ಲಿದ್ದುದನ್ನು ಕಂಡು, ಇದು ನನ್ನ ಭ್ರಾಂತಿ ಎಂದುಕೊಂಡಳು. ತಿರುಗಿ ಬಂದು ಗಿಂಡಿಯಲ್ಲಿ ಪಾಯಸ ಹಾಕಿಕೊಳ್ಳಲು ನೋಡಿದಾಗ ಪಾತ್ರೆಯಲ್ಲಿ ಒಂದು ಸೌಟಿನಷ್ಟೂ ಪಾಯಸ ಇರಲಿಲ್ಲ. ಮಗನನ್ನು ಇಲ್ಲಿ ನೋಡಿದ್ದು ಭ್ರಾಂತಿಯಿರಬಹುದು. ಆದರೆ ಪಾಯಸ ಇಲ್ಲದಿರುವುದು ಭ್ರಾಂತಿ ಹೇಗಾದೀತು ಎಂದು ಒಂದು ಕಡೆ ಆಶ್ಚರ್ಯ, ಇನ್ನೊಂದು ಕಡೆ ಸಂಶಯ ಅವಳನ್ನು ದಿಗ್ಭ್ರಾಂತಳನ್ನಾಗಿಸಿತು. ಆ ಗಿಂಡಿಯಲ್ಲಿ ಉಳಿದಿದ್ದ ಸ್ವಲ್ಪ ಪಾಯಸವನ್ನು ಸುರಿದುಕೊಂಡು, ತೊಟ್ಟಿಲ ಹತ್ತಿರ ಹೋಗಿ, ನಿದ್ರಿಸುತ್ತಿದ್ದ ಮಕ್ಕಳ ಮುಖವನ್ನೇ ನೋಡುತ್ತಿದ್ದಳು. ರಾಮನು ಬಾಯಿ ಚಪ್ಪರಿಸುತ್ತಾ ಕಣ್ಣುಗಳನ್ನು ಮುಚ್ಚಿಕೊಂಡು ಲೊಟ್ಟೆ ಹಾಕುತ್ತಿದುದನ್ನು ನೋಡಿದಳು. ಕೌಸಲ್ಯೆಯು ಆಶ್ಚರ್ಯದಿಂದ ಮುಗುಳ್ನಗುತ್ತಾ ಅವನ ಮುಖವನ್ನೇ ನೋಡುತ್ತಿರಲು, ರಾಮನ ಮುಖದಲ್ಲಿ ಒಂದು ನಿಮಿಷ ಬ್ರಹ್ಮಾಂಡವೇ ತಿರುಗುತ್ತಿದ್ದಂತೆ ಕಾಣಿಸಿತು. ಕೌಸಲ್ಯೆಯು ಮೈಮರೆತು, ತೆರೆದ ಕಣ್ಣುಗಳನ್ನು ಮುಚ್ಚದೆ, ರೆಪ್ಪೆ ಹೊಯ್ಯದೆ ಹುಚ್ಚಳಂತೆ ನೋಡುತ್ತಿದ್ದಳು.

ದಾಸಿಯರು ಅದನ್ನು ಗಮನಿಸಿ, "ಅಮ್ಮಾ! ಅಮ್ಮಾ!" ಎಂದು ಕೂಗಿದರು. ಅವರ ಕೂಗು ಕೌಸಲ್ಯೆಗೆ ಕೇಳಲಿಲ್ಲ. ಒಬ್ಬಳು ಅವಳ ಪಾದಗಳನ್ನು ಹಿಡಿದುಕೊಂಡು, "ಅಮ್ಮಾ! ದೇವಿ!" ಎಂದು ಅನೇಕ ವಿಧವಾಗಿ ಅರಚಿದಳು. ಕೌಸಲ್ಯೆಯು ಬೆಂಕಿ ಸೋಕಿದವಳಂತೆ ದೇಹವನ್ನು ಅಲುಗಿಸಿ, ದಾಸಿಯರನ್ನು ನೋಡಿದಳು. ಹೋಗಿ ಮಂಚದ ಮೇಲೆ ಕುಳಿತು ಆಶ್ಚರ್ಯದಿಂದ, "ದಾಸಿಯರೇ ನೀವು ಬಾಲಕನನ್ನು ನೋಡಿದಿರಾ?" ಎಂದು ಪಶ್ನಿಸಿದಳು. ಅವರು, "ಹೌದು ತಾಯಿ! ನಾವು ಇಲ್ಲೇ ಇದ್ದೇವೆ, ಬಾಲಕನನ್ನು ನೋಡುತ್ತಲೆ ಇದ್ದೇವೆ," ಎಂದರು. "ಏನು ನೋಡಿದಿರಿ? ಬಾಲಕನಲ್ಲಿ ಏನಾದರೂ ವ್ಯತ್ಯಾಸ ನೋಡಿದಿರಾ?" ಎಂದು ಆತುರದಿಂದ ಪ್ರಶ್ನಿಸಿದಳು. "ನಮಗೆ ಬದಲಾವಣೆಯೇನೂ ಕಾಣಲಿಲ್ಲ ತಾಯಿ! ಬಾಲಕನು ಗಾಢ ನಿದ್ರೆಯಲ್ಲಿದ್ದನಲ್ಲವೆ?" ಎಂದು ಉತ್ತರವಿತ್ತರು. ಕೌಸಲ್ಯೆಯು ತಾನು ನೋಡಿದ್ದೆಲ್ಲಾ ಭ್ರಮೆಯೊ! ಅಥವಾ ನಿಜವೊ! ಎನ್ನುವ ಸಂಶಯದಲ್ಲಿ ಬಿದ್ದಳು. ನಿಜವೇ ಆಗಿದ್ದರೆ ಅದೆಲ್ಲ ಅವರಿಗೇಕೆ ಕಾಣಿಸಲಿಲ್ಲ ಎಂದು ಅನೇಕ

ರೀತಿಯಾಗಿ ಆಲೋಚಿಸಿ, ಕೊನೆಗೆ, ಮಕ್ಕಳು ಯಜ್ಞ ಪ್ರಸಾದದಿಂದ ಪ್ರಾಪ್ತವಾದವರಾದ್ದರಿಂದ, ಈ ರೀತಿ ದೈವ ಚಿಹ್ನೆಗಳು ಕಾಣಿಸಿರಬೇಕೆಂದು ತನಗೆ ತಾನೆ ಸಮಾಧಾನ ಮಾಡಿಕೊಂಡಳು. ತಿರುಗಿ ಪುತ್ರ ವಾತ್ಸಲ್ಯದಲ್ಲಿ ಮುಳುಗಿ, ಅವರಿಗೆ ಅವಶ್ಯಕವಾದ ಪರಿಚರ್ಯೆಗಳನ್ನು ಮಾಡುತ್ತಾ ಶುಕ್ಲಪಕ್ಷದ ಚಂದ್ರನಂತೆ ದಿನ ದಿನಕ್ಕೆ ಪ್ರವರ್ಧಮಾನರಾಗುತ್ತಿದ್ದ ಮಕ್ಕಳನ್ನು ನೋಡುತ್ತಾ ಮುದ್ದಿಡುತ್ತಾ ಅವರ ತಲೆಯನ್ನು ಸವರುತ್ತಾ ಬಟ್ಟೆ ಆಭರಣಗಳನ್ನು ಹಾಕಿ ಅಲಂಕರಿಸುತ್ತಾ ಆನಂದಿಸುತ್ತಿದ್ದಳು.

ಬಾಲರಾಮನ ಚರಿತ್ರೆಯು ಸರಳವೂ ಶೋಭಾಯಕರವಾಗಿಯೂ ಇತ್ತು. ಅನೇಕ ಸಾರಿ ಅವನು ತನ್ನ ಮಗನೆನ್ನುವುದನ್ನೂ ಮರೆತು ಕೌಸಲ್ಯೆಯು ಕೈ ಜೋಡಿಸಿ ಅವನಿಗೆ ನಮಸ್ಕಾರ ಮಾಡುತ್ತಿದ್ದಳು. ಆಮೇಲೆ, "ಅಯ್ಯೋ! ಚಿಕ್ಕ ಹುಡುಗ! ನನ್ನ ಕುಮಾರನನ್ನು ದೈವವೆಂದು ಭಾವಿಸುವುದರಲ್ಲಿ ತಪ್ಪಿಲ್ಲವಾದರೂ ಅವನಿಗೆ ನಮಸ್ಕರಿಸುವುದನ್ನು ಜನರು ನೋಡಿದರೆ ನಗುವುದಿಲ್ಲವೆ!" ಎಂದು, ಯಾರಾದರೂ ನೋಡಿದರೇನೊ ಎನ್ನುವ ಭ್ರಾಂತಿಯಿಂದ, ತಕ್ಷಣವೇ ಮೇಲೆ ನೋಡುತ್ತ ದೈವವನ್ನು ಪ್ರಾರ್ಥಿಸುವವಳಂತೆ ನಟಿಸುತ್ತಿದ್ದಳು. "ಸ್ವಾಮಿಯ ಕಟಾಕ್ಷ ನನ್ನ ಕುಮಾರರು ಆಯುರಾರೋಗ್ಯವಂತರಾಗಿರುವಂತೆ ನೋಡಿಕೊಳ್ಳಲಿ," ಎನ್ನುತ್ತಿದ್ದಳು. "ನಿನ್ನ ಮಾಯೆ ನನ್ನನ್ನು ಆವರಿಸದಂತೆ ಕಾಪಾಡು," ಎಂದು ಪ್ರಾರ್ಥಿಸುತ್ತಿದ್ದಳು. ಕುಮಾರನ ಮುಖವನ್ನು ನೋಡುತ್ತಾ ಮುಖದ ಕಾಂತಿಯು ಕಣ್ಣು ಕೋರೈಸುವಂತೆ ಹೊರಹೊಮ್ಮುವುದನ್ನು ಅಚ್ಚರಿಯಿಂದ ನೋಡುತ್ತಿದ್ದಳು. ಯಾರಿಗಾದರೂ ಹೇಳಿದರೆ ಏನನ್ನುವರೊ, ತನ್ನನ್ನು ಹುಚ್ಚಿ ಎಂದುಕೊಳ್ಳುವರೊ ಎಂದು, ಯಾರಿಗೂ ಹೇಳದೆ, ತನ್ನೊಳಗೆ ಅದುಮಿಟ್ಟುಕೊಳ್ಳಲಾಗದೆ, ಚಡಪಡಿಸುತ್ತಿದ್ದಳು. ಒಮ್ಮೊಮ್ಮೆ ರಾಮ ಲೀಲೆಗಳು, ಮಹಾತ್ಮ್ಯಗಳು ಅವಳನ್ನು ಉನ್ಮತ್ತಳನ್ನಾಗಿ ಮಾಡುತ್ತಿದ್ದುವು. ತನ್ನ ಸನ್ನಿಹಿತ ಸೋದರಿ ಸುಮಿತ್ರೆಗಾಗಲಿ, ಕೈಕೆಗಾಗಲಿ ಇದನ್ನೆಲ್ಲ ಹೇಳಿದರೆ, ತನ್ನ ಮಗನು ಒಬ್ಬ ಮಹಾ ವ್ಯಕ್ತಿ, ನಮ್ಮ ಮಕ್ಕಳು ಏನೂ ಕೆಲಸಕ್ಕೆ ಬಾರದವರು ಎನ್ನುವುದನ್ನು ತೋರಿಸಲು ಈ ಕಥೆಗಳನ್ನೆಲ್ಲಾ ಕಟ್ಟುತ್ತಿದ್ದಾಳೆ ಎಂದು ಭಾವಿಸುವರೊ ಎಂದು ಅನುಮಾನಿಸಿ ಅವರಿಗೂ ಹೇಳಲು ಹಿಂದುಮುಂದು ನೋಡುತ್ತಿದ್ದಳು.

ಒಂದು ದಿನ ಹೇಗೊ ಧೈರ್ಯ ಮಾಡಿ, ದಶರಥನಿಗೆ ತಾನು ಕಂಡ ಆಶ್ಚರ್ಯ, ವಿನೋದ, ವಿಚಿತ್ರಗಳನ್ನೆಲ್ಲಾ ಹೇಳಿದಳು. ದಶರಥನು ಕೇಳಿ ಸಂತೋಷಿಸಿ, "ದೇವೀ! ಇದೆಲ್ಲಾ ವ್ಯಾಮೋಹ, ಪುತ್ರವಾತ್ಸಲ್ಯದಿಂದ ನೀನು ನಿರಂತರವು ನಿನ್ನ ಕುಮಾರನನ್ನು ಮನಸ್ಸಿನಲ್ಲಿ ದೈವದೊಂದಿಗೆ ಹೋಲಿಸಿಕೊಳ್ಳುತ್ತಾ ಇರುವುದರಿಂದ ಹಾಗೆ ನಿನ್ನ

ಕಣ್ಣಿಗೆ ಕಾಣುತ್ತಿರಬಹುದು," ಎಂದು ಅವಳನ್ನು ಪೂರ್ತಿ ನಿರಾಶೆಗೊಳಿಸದೆ, ಪೂರ್ತಿ ನಿಜವೆಂದೂ ಹೇಳದೆ, ಸ್ವಲ್ಪ ತೃಪ್ತಿಯಾಗುವಂತೆ ಹೇಳಿ ಕಳುಹಿಸಿದನು. ದಶರಥನು ಏನೇ ಹೇಳಿದರೂ ಕಣ್ಣಾರೆ ಕಂಡವಳು ತಾನಾದ್ದರಿಂದ, ಅವನ ಮಾತಿನಿಂದ ತೃಪ್ತಿಯಾಗದೆ, ಸಮಯ ಕಾದು ಗುರುವಿಗೆ ಎಲ್ಲವನ್ನೂ ತಿಳಿಸಿದಳು. ಗುರುವು ಆಲೋಚಿಸಿ, "ರಾಣೀ! ನೀನು ಹೇಳಿದ್ದೆಲ್ಲವೂ ಪರಮ ಸತ್ಯ, ಭ್ರಾಂತಿಯಲ್ಲ. ನಿನ್ನ ಕುಮಾರನು ಸಾಮಾನ್ಯನಲ್ಲ, ಅವನು ದೇವತಾ ಅಂಶ. ಇದು ನಿಮ್ಮ ಜನ್ಮ ಜನ್ಮಗಳ ಪುಣ್ಯಫಲ. ಲೋಕೋದ್ಧಾರಕನು ಕೌಸಲ್ಯಾನಂದನನಾಗಿರುವುದರಿಂದ ಇಡೀ ಅಯೋಧ್ಯಾವಾಸಿಗಳೇ ಅದೃಷ್ಟಶಾಲಿಗಳು," ಎಂದು ಆಶೀರ್ವದಿಸಿದರು.

ಕೌಸಲ್ಯಾದೇವಿಯು ವಸಿಷ್ಠರ ಮಾತನ್ನು ಗ್ರಹಿಸಿ, ಅವರ ಮಾತಿನಲ್ಲಿ ವಿಶ್ವಾಸ ವಿಟ್ಟು, ತೃಪ್ತಿಹೊಂದಿ, ತನ್ನ ಕುಮಾರನ ಅತಿಮಾನುಷ ಚರ್ಯೆಗಳನ್ನು ಮತ್ತೆ ಮತ್ತೆ ಸ್ಮರಿಸುತ್ತಾ ಆನಂದಿಸುತ್ತಾ ಕಾಲ ಕಳೆಯುತ್ತಿದ್ದಳು. ಹೀಗಿರುವಲ್ಲಿ, ರಾಮ, ಲಕ್ಷ್ಮಣ, ಭರತ, ಶತ್ರುಘ್ನರು ಅಂಬೆಗಾಲು ಹಾಕುವುದು, ಕೂರುವುದು, ಹೀಗೆ ಬೆಳೆಯುತ್ತಿದ್ದರು. ಮಕ್ಕಳಿಗೆ ಅಲ್ಲಿಂದಿಲ್ಲಿಗೆ ಹೋಗುವ ಶಕ್ತಿ ಬಂದಿರುವುದರಿಂದ ಎಲ್ಲಿಯಾದರೂ ಹೋಗಿ ಬಿದ್ದು ಪೆಟ್ಟುಮಾಡಿಕೊಳ್ಳುವರೊ ಏನೊ ಎಂದು, ಅವರನ್ನು ನೋಡಿಕೊಳ್ಳಲು ವಿಶೇಷ ಏರ್ಪಾಟು ಮಾಡಿದರು. ಅನೇಕ ಆಟದ ಬೊಂಬೆಗಳನ್ನು ತಂದುಕೊಟ್ಟರು. ತಾಯಿಯೊಂದಿಗೆ ಮಕ್ಕಳು, ಮಕ್ಕಳೊಂದಿಗೆ ತಾಯಿ, ಅವರೊಂದಿಗೆ ದಾದಿಯರು; ಕಾಲವೆನ್ನುವುದು ಅವರಿಗರಿವಿಲ್ಲದಂತೆಯೆ ಹೋಗುತ್ತಿತ್ತು. ಹೀಗೆ, ಕಾಲವನ್ನು ಆನಂದದಿಂದ ಕಳೆಯುತ್ತಿರಲು, ಮಕ್ಕಳು ದಾದಿಯರ, ತಾಯಿಯರ ಬೆರಳುಗಳನ್ನು ಹಿಡಿದುಕೊಂಡು ಎದ್ದು ನಿಲ್ಲುವುದನ್ನು ಕಲಿತರು, ಗೋಡೆಗಳನ್ನು ಹಿಡಿದುಕೊಂಡು ನಿಲ್ಲುತ್ತಿದ್ದರು, ತಪ್ಪು ತಪ್ಪು ಹೆಜ್ಜೆ ಹಾಕುತ್ತಿದ್ದರು. ಈ ಆಟವು ತಾಯಿಯರಿಗೆ ಇನ್ನಷ್ಟು ಆನಂದದಾಯಕವಾಗಿತ್ತು. ತಮ್ಮ ಪುಟ್ಟ ಪುಟ್ಟ ತುಟಿಗಳನ್ನಾಡಿಸುತ್ತಾ ಹಲ್ಲಿಲ್ಲದ ಬಾಯಿಯಿಂದ ತೊದಲು ನುಡಿಗಳನ್ನಾಡುತ್ತಿದ್ದರೆ ತಾಯಿಯರು ಹೊಟ್ಟೆ ಹುಣ್ಣಾಗುವಂತೆ ನಗುತ್ತಿದ್ದರು. ಬಾಲಕರು 'ಅಮ್ಮ, ಅಪ್ಪ' ಎನ್ನುವ ಮಾತುಗಳನ್ನು ಕಲಿಯುತ್ತಿದ್ದರು.

ನಿತ್ಯವೂ ಬೆಳಗಾಗುತ್ತಲೆ ಸುಗಂಧ ದ್ರವ್ಯಗಳನ್ನು ಎಣ್ಣೆಯಲ್ಲಿ ಬೆರೆಸಿ, ಮೈಗೆ ಉಜ್ಜಿ, ನಾದಿದ ಸುಗಂಧಹಿಟ್ಟಿನಿಂದ ಉಜ್ಜಿ, ಸರಯೂ ನದೀ ತೀರ್ಥದಲ್ಲಿ ಅಭ್ಯಂಗ ಸ್ನಾನ ಮಾಡಿಸಿ, ತಲೆಗೆ ಸುಗಂಧದ ಹೊಗೆ ಹಾಕಿ, ಕಣ್ಣಿಗೆ ಕಾಡಿಗೆ ತಿದ್ದಿ, ದೃಷ್ಟಿ ಬೊಟ್ಟು ಇಟ್ಟು, ಹಣೆಯ ಮೇಲೆ ತಿಲಕವನ್ನು ತಿದ್ದಿ, ತರತರದ ಬಟ್ಟೆಗಳಿಂದ ಅಲಂಕರಿಸಿ, ಹೂವುಯ್ಯಾಲೆಯಲ್ಲಿ ಮಲಗಿಸಿ, ಜೋಗುಳ ಹಾಡುತ್ತಿದ್ದರೆ, ಆ ತಾಯಿಯರಿಗೆ ಬೇರೆ ವೈಕುಂಠ ಇದೆ ಎನ್ನುವುದೇ ಮರೆತು ಹೋಗಿ, ಅದೇ ಅವರಿಗೆ

ಸ್ವರ್ಗ ವೈಕುಂಠಗಳಿಗಿಂತ ಮಿಗಿಲಾಗಿರುತ್ತಿತ್ತು. ಇನ್ನು ಆಭರಣಗಳೋ! ಅಬ್ಬಾ! ದಿನಕ್ಕೊಂದು ಬಗೆಯ ಕಾಲ್ಗೆಜ್ಜೆ, ನಡುಗೆಜ್ಜೆ, ಕಂಠಹಾರ. ಇವು ಮೈಗೆ ಚುಚ್ಚುವುವೊ ಏನೋ ಎಂದು ಅವುಗಳ ಕೆಳಗೆ ಮೆತ್ತಗಿನ ಬಟ್ಟೆ ಜೋಡಿಸಿ ತೊಡಿಸುತ್ತಿದ್ದರು. ಬಾಲಕರ ಬಾಲ ಲೀಲೆಗಳು ವರ್ಣನಾತೀತವಾಗಿರುತ್ತಿದ್ದುವು. ಅವರು ನಡೆದಾಡುವ ವಯಸ್ಕರಾದಾಗ ಪಟ್ಟಣದಲ್ಲಿನ ಅದೇ ವಯಸ್ಸಿನ ಹುಡುಗರನ್ನು ಕರೆತಂದು, ಅವರನ್ನೂ ಇವರನ್ನೂ ಒಟ್ಟು ಗೂಡಿಸಿ ಆಟಗಳನ್ನಾಡಿಸುತ್ತಿದ್ದರು, ತಿಂಡಿಗಳನ್ನು ಕೊಡುತ್ತಿದ್ದರು. ಆ ಪುರ ಪ್ರಮುಖರ ಮಕ್ಕಳಿಗೆ ಬಹುಮಾನಗಳನ್ನೂ ಆಟದ ಬೊಂಬೆಗಳನ್ನೂ ಕೊಡುವುದು, ಅವರ ತಾಯಂದಿರಿಗೆ, ಜೊತೆಗೆ ಬಂದ ದಾದಿಯರಿಗೆ ಊಟದ ಏರ್ಪಾಟು ಮಾಡುವುದು, ಹೀಗೆ ಕೌಸಲ್ಯೆ ಸುಮಿತ್ರೆ ಕೈಕೆಯರು ತಮ್ಮ ದೇಹಗಳನ್ನೇ ಮರೆತು, ಮಕ್ಕಳನ್ನು ಪ್ರಾಣಸಮಾನವಾಗಿ ನೋಡಿಕೊಳ್ಳುತ್ತಾ ಆನಂದಿಸುತ್ತಿದ್ದರು.

ಹೀಗೆ ಸ್ವಲ್ಪ ಕಾಲ ಅಂತಃಪುರದಲ್ಲಿ, ತಾಯಿಯರೊಂದಿಗೆ ಬಾಲಲೀಲೆಗಳನ್ನಾಡಿದ ಮೇಲೆ, ಮೂರು ವರ್ಷಗಳು ತುಂಬುತ್ತಲೆ, ಬಾಲಕರನ್ನು ಆಟವಾಡಲು ದಾದಿಯರೊಂದಿಗೆ ಆಟದ ಮೈದಾನಕ್ಕೆ ಕಳಿಸಿ, ಸಕಾಲದಲ್ಲಿ ಅಂತಃಪುರಕ್ಕೆ ಹಿಂತಿರುಗುವಂತೆ ತಿಳಿಸಿ ತಾಯಿಯರು ಮಕ್ಕಳನ್ನು ಅತಿ ಜಾಗರೂಕತೆಯಿಂದ ನೋಡಿಕೊಳ್ಳುತ್ತಿದ್ದರು. ಒಂದು ದಿನ ದಶರಥನು ರಾಣಿಯರೊಂದಿಗೆ ಮಾತನಾಡುತ್ತಾ, "ಮಕ್ಕಳು ಹೀಗೆ ದಾದಿಯರೊಂದಿಗೇ ಕಾಲಕಳೆಯುತ್ತಿದ್ದರೆ, ವಿದ್ಯಾ ಬುದ್ಧಿಗಳನ್ನು ಕಲಿಯುವುದಿಲ್ಲ," ಎಂದು ಹೇಳಿ, ಸರಿಯಾದ ಮುಹೂರ್ತ ನಿರ್ಣಯಿಸಿ, ಗುರುಗಳನ್ನು ಬರಮಾಡಿಕೊಂಡು, ಅವರಿಗೆ ಅಕ್ಷರಾಭ್ಯಾಸವನ್ನು ಮಾಡಿಸಿದನು. ಅಂದಿನಿಂದಲೂ ಹುಡುಗರು ರಾಜೋಚಿತ ವೇಷಭೂಷಣಗಳನ್ನು ಬಿಟ್ಟು, ಗುರುಕುಲದ ಆಶ್ರಮ ಪದ್ಧತಿಯಂತೆ, ಮೇಲೆ ಅಂಗವಸ್ತ್ರ ಹೊದ್ದು, ಸೊಂಟಕ್ಕೆ ಮುಂಡನ್ನು ಸುತ್ತಿ ಗುರುಗೃಹವನ್ನು ಪ್ರವೇಶಿಸಿದರು. ಅರಮನೆಯಲ್ಲಿದ್ದರೆ ವಿದ್ಯೆ ಕಲಿಯಲು ಆಗುವುದಿಲ್ಲವೆಂದು, ಗುರುವಿನ ಗೃಹದಲ್ಲೆ, ಗುರು ಸೇವೆ ಮಾಡುತ್ತಾ ಅವರು ಕೊಟ್ಟ ಆಹಾರವನ್ನೇ ಸೇವಿಸುತ್ತಾ ಮೂರ್ತೀಭವಿಸಿದ ಬ್ರಹ್ಮಚಾರಿಗಳಂತೆ ವಿದ್ಯೆಯನ್ನು ಕಲಿಯುತ್ತಿದ್ದರು. ತಾಯಿಯರಿಗೆ ಯಾವಾಗಲಾದರೂ ಮಕ್ಕಳನ್ನು ನೋಡಬೇಕೆಂದು ಆಶೆಯಾದರೆ, ತಾಯಿಯರೇ ಗುರು ಗೃಹಕ್ಕೆ ಹೋಗಿ ಮಕ್ಕಳನ್ನು ನೋಡಿ, ಅವರ ವಿದ್ಯಾಬುದ್ಧಿಗಳನ್ನು ಗಮನಿಸಿ, ಆನಂದಿಸಿ ಹಿಂತಿರುಗುತ್ತಿದ್ದರು.

ಗುರುವು ಆ ಬಾಲಕರ ಶ್ರದ್ಧಾ ಭಕ್ತಿಗಳಿಗೆ, ಧಾರಣಾ ಶಕ್ತಿಗೆ ಅತ್ಯಂತ ಆಶ್ಚರ್ಯ ಆನಂದಪಡುತ್ತಿದ್ದರು. ಅದರಲ್ಲಿಯೂ ರಾಮನ ಶ್ರದ್ಧೆ ಅತ್ಯಂತ ತೀವ್ರವಾಗಿತ್ತು. ಗುರುವು ತಾವು ಹೇಳಿಕೊಟ್ಟ ಪಾಠವನ್ನು ಕ್ಷಣದಲ್ಲಿ ತಿರುಗಿ ಒಪ್ಪಿಸುತ್ತಿದ್ದ ರಾಮನ

ಕುಶಾಗ್ರ ಬುದ್ಧಿಗೆ ಅಚ್ಚರಿಪಟ್ಟು, ಅವನ ಶ್ರದ್ಧೆಗೆ ಭಂಗ ಬರಬಾರದೆಂದು ಲಕ್ಷ್ಮಣ, ಭರತ, ಶತ್ರುಘ್ನರನ್ನು ಬೇರೆ ಕೂರಿಸಿ, ರಾಮನಿಗೆ ಪ್ರತ್ಯೇಕವಾಗಿ ವೇದಶಾಸ್ತ್ರಗಳನ್ನು ಕಲಿಸಲು ಪ್ರಾರಂಭಿಸಿದರು. ಲಕ್ಷ್ಮಣ, ಭರತ, ಶತ್ರುಘ್ನರು ಕೂಡ ಮಹಾ ಶ್ರದ್ಧೆಯಿಂದ ಕಲಿಯುತ್ತಿದ್ದುದಲ್ಲದೆ, ನಿರಂತರವು ರಾಮನ ಸಹವಾಸಕ್ಕೆ ಹಾತೊರೆಯುತ್ತಿದ್ದರು. ಒಂದು ನಿಮಿಷ ರಾಮನು ತಮ್ಮಿಂದ ದೂರವಾದರೆ ಪಾಠದ ಮೇಲಾಗಲೀ ಗುರುವಿನ ಆಜ್ಞೆಯ ಮೇಲಾಗಲೀ ಅವರಿಗೆ ಮನಸ್ಸು ನಿಲ್ಲುತ್ತಿರಲಿಲ್ಲ. ಅದರಿಂದ ಅವರು ಒಂದೆರಡು ತರಗತಿ ಹಿಂದೆ ಬೀಳುತ್ತಿದರು. ಲಕ್ಷ್ಮಣನು ಒಮ್ಮೊಮ್ಮೆ, "ನಮಗೆ ಈ ವಿದ್ಯೆ ಅವಶ್ಯಕವಿಲ್ಲ, ರಾಮನೊಬ್ಬ ನಮ್ಮ ಬಳಿ ಇದ್ದರೆ ಸಾಕು," ಎಂದು ಗುರುಗಳೊಂದಿಗೆ ನಿರ್ಭಯವಾಗಿ ಹೇಳಿಯೇ ಬಿಡುತ್ತಿದ್ದ. ರಾಮನೆಂದರೆ ಲಕ್ಷ್ಮಣನಿಗೆ ಅಮಿತ ಪ್ರಾಣ. ಅವರಿಬ್ಬರ ಸಂಬಂಧವನ್ನು ಆಗಾಗ ಗಮನಿಸಿ ಗುರು ವಸಿಷ್ಠರು ಆನಂದಿಸುತ್ತಿದ್ದರು. "ಅವರು ನಿಜವಾಗಿಯೂ ನರನಾರಾಯಣರೇ," ಎನ್ನುತ್ತಿದ್ದರು ವಸಿಷ್ಠರು.

## ೫ ಗುರು ಶಿಷ್ಯರು

ಹೀಗೆ ರಾಮ, ಲಕ್ಷ್ಮಣ, ಭರತ, ಶತ್ರುಘ್ನರು ಗುರು ಗೃಹದಲ್ಲಿ ಸರ್ವಸುಖಗಳನ್ನೂ ತ್ಯಜಿಸಿ ಗುರುವಾಜ್ಞೆ ಅನುಸರಿಸಿ, ವಿನಯ ವಿಧೇಯತೆಗಳಿಂದ ಅತಿ ಸ್ವಲ್ಪ ಕಾಲದಲ್ಲೆ ವಿದ್ಯಾಭ್ಯಾಸವನ್ನು ಪೂರ್ತಿ ಮಾಡಿದರು. ಒಂದು ದಿನ ಸಂಜೆ ದಶರಥನು ಮಂತ್ರಿಯಿಂದೊಡಗೂಡಿ ಗುರು ಗೃಹಕ್ಕೆ ತೆರಳಿ ವೇದವನ್ನುಚ್ಚರಿಸುತ್ತಿದ್ದ ಪುತ್ರರತ್ನಗಳನ್ನು ನೋಡಿ, ಅವರ ಮುಖಾರವಿಂದಗಳಿಂದ ಹೊರಡುತ್ತಿದ್ದ ಮುತ್ತಿನಂಥ ಸ್ಪಷ್ಟವಾದ ಪದಗಳನ್ನು ಕೇಳಿ, ಅತ್ಯಂತ ಆನಂದ ಹೊಂದಿದನು. ತನ್ನ ಕುಮಾರರು ಸ್ವಲ್ಪ ಕಾಲದಲ್ಲೆ ಇಷ್ಟೊಂದು ಅಭಿವೃದ್ಧಿ ಹೊಂದಿದರಲ್ಲಾ ಎಂದು ದಶರಥನು ಸಂತೋಷಿಸಿದನು. ರಾಮನು ಎದ್ದು ಬಂದು ತಂದೆಗೆ ನಮಸ್ಕಾರ ಮಾಡಿದನು. ಅದನ್ನು ನೋಡಿ ಮಿಕ್ಕ ಮೂವರು ಸೋದರರೂ ತಂದೆಗೆ ನಮಸ್ಕಾರ ಮಾಡಿ ನಿಂತರು. ಗುರುಗಳು ರಾಜನನ್ನೂ ಮಂತ್ರಿಯನ್ನೂ ಉನ್ನತಾಸನಗಳಲ್ಲಿ ಕುಳಿತುಕೊಳ್ಳುವಂತೆ ಹೇಳಿದರು. ರಾಜನು ತನ್ನ ಕುಮಾರರು ವಿದ್ಯಾಭ್ಯಾಸದಲ್ಲಿ ಎಷ್ಟು ಅಭಿವೃದ್ಧಿ ಹೊಂದಿದ್ದಾರೆ ಎನ್ನುವುದನ್ನು ಕೇಳಿ ತಿಳಿದುಕೊಳ್ಳಲು ಪ್ರಾರಂಭಿಸಿದನು. ಅವರ

ಸಂಭಾಷಣೆಯನ್ನು ಕೇಳಬಾರದೆನ್ನುವುದರ ಸೂಚಕವಾಗಿ ರಾಮನು ತನ್ನ ಪುಸ್ತಕಗಳನ್ನು ತೆಗೆದುಕೊಂಡು ಗುರುವಾಜ್ಞೆಯನ್ನು ಪಡೆದು ತನ್ನ ಕೋಣೆಗೆ ಹೋದನು. ಪ್ರತಿ ವಿಷಯದಲ್ಲೂ ಸೋದರರು ರಾಮನನ್ನು ಅನುಸರಿಸುತ್ತಿದ್ದರಾದ್ದರಿಂದ, ಅವನ ಅಭಿಪ್ರಾಯವನ್ನು ಗ್ರಹಿಸಿ, ಅವರೂ ಅಲ್ಲಿಂದ ಹೊರಟರು.

ತಮ್ಮ ಸಂಭಾಷಣೆಯ ಉದ್ದೇಶವನ್ನು ಗ್ರಹಿಸಿ ರಾಮನು ನಡೆದುಕೊಂಡ ರೀತಿಯನ್ನು ನೋಡಿ ವಸಿಷ್ಠರೂ ದಶರಥನೂ ಆ ಬಾಲಕನ ಶಿಸ್ತಿಗೆ ಮಾರುಹೋದರು. ವಸಿಷ್ಠರು ಆನಂದ ಹೃದಯದಿಂದ, "ಮಹಾರಾಜಾ! ನಿಮ್ಮ ಪುತ್ರರೆಲ್ಲರೂ ಸಮಸ್ತ ವಿದ್ಯೆಗಳಲ್ಲೂ ಪಾರಂಗತರಾಗಿದ್ದಾರೆ. ರಾಮನಿಗೆ ಸರ್ವಶಾಸ್ತ್ರಗಳೂ ತಿಳಿದಿವೆ. ಅವನು ಸಾಮಾನ್ಯನಲ್ಲ. ನಾನು ವೇದಶಾಸ್ತ್ರಗಳನ್ನು ಹೇಳಿಕೊಡಲು ಪ್ರಾರಂಭಿಸಿದೊಡನೆ ಅವುಗಳನ್ನು ಮೊದಲೇ ತಿಳಿದವನಂತೆ ಹೇಳಿಬಿಡುತ್ತಿದ್ದನು. ವೇದಪುರುಷನೊಬ್ಬನಿಗೆ ಇದು ಸಾಧ್ಯವೆ ವಿನಾ ಸಾಮಾನ್ಯರಿಗೆ ಅಸಾಧ್ಯ. ಒಂದು ವೇಳೆ ವೇದವು ಒಂದು ಗ್ರಂಥವಾಗಿದ್ದರೆ ಅದನ್ನು ವಿರಾಮ ಕಾಲದಲ್ಲಿ ಓದಿಕೊಂಡಿದ್ದಾನೆನ್ನಬಹುದಾಗಿತ್ತು. ಆದರೆ, ವೇದವು ಒಂದು ಗ್ರಂಥವಲ್ಲ. ಅದು ಗುರು ಶಿಷ್ಯ ಪಾರಂಪರ್ಯದಲ್ಲಿ ಒಬ್ಬರು ಹೇಳಿಕೊಟ್ಟು ಇನ್ನೊಬ್ಬರು ಹೇಳುವಂಥದ್ದೇ ವಿನಾ ಓದಿಕೊಂಡು ಕಲಿಯುವಂಥದ್ದಲ್ಲ. ಕೇಳಿ ಕಲಿಯಬೇಕಾದ ವಿದ್ಯೆಯಾದ್ದರಿಂದಲೆ ಅದನ್ನು ಶ್ರುತಿ ಎಂದು ಕೂಡ ಹೇಳುವರು. ಅಂಥ ಪವಿತ್ರವಾದ ಪರಮಾತ್ಮಶ್ವಾಸ ಸಮಾನವಾದ ವೇದವನ್ನು ಕೆಲವು ತಿಂಗಳಲ್ಲೇ ಪೂರ್ತಿ ಕಲಿತವರನ್ನು ನಾನು ಕಂಡಿಲ್ಲ. ಕಾಣುವುದಿರಲಿ, ಯಾವ ಚರಿತ್ರೆಗಲ್ಲೂ ಅಂಥವರಿದ್ದರೆಂದು ಕೇಳಿಲ್ಲ, ಓದಿಲ್ಲ! ನಿಮ್ಮ ಕುಮಾರನ ಇಂಥ ಅತಿಮಾನುಷ ಚರ್ಯೆಗಳು ಅನೇಕ, ಎಷ್ಟೆಂದು ಹೇಳಲಿ. ಮಹಾರಾಜಾ! ಇಂಥ ಮಕ್ಕಳು ನನ್ನ ಶಿಷ್ಯರಾದದ್ದು ನನ್ನ ತಪಃ ಫಲವೇ ಹೊರತು ಬೇರೆ ಅಲ್ಲ. ಇನ್ನು ಅವರು ಕಲಿಯಬೇಕಾದ ವಿದ್ಯೆಯಾವುದೂ ಉಳಿದಿಲ್ಲ. ರಾಜಧರ್ಮವನ್ನು ಅನುಸರಿಸಿ ತಕ್ಕ ಅಸ್ತ್ರ ಶಸ್ತ್ರ ವಿದ್ಯೆಗಳನ್ನು ಕಲಿಸಬಹುದೇ ವಿನಾ ನನ್ನ ಹತ್ತಿರ ಇದ್ದು ಕಲಿಯಬೇಕಾದ ವಿದ್ಯೆಗಳೆಲ್ಲಾ ಮುಗಿದಿವೆ. ಈ ದಿವಸ ಮುಹೂರ್ತ ಕೂಡ ಚೆನ್ನಾಗಿದೆ. ಹೇಗೂ ಬಂದಿದ್ದೀರಿ, ಜೊತೆಯಲ್ಲೆ ನಿಮ್ಮ ಮಕ್ಕಳನ್ನು ಕರೆದುಕೊಂಡು ಹೋಗುವುದು ಒಳ್ಳೆಯದು," ಎಂದು ಹೇಳಲು, ಪುತ್ರವಿಯೋಗದಿಂದ ಬಾಧೆಪಡುತ್ತಿದ್ದ ದಶರಥನ ಆನಂದಕ್ಕೆ ಪಾರವೆ ಇಲ್ಲದೆ, ಆನಂದಬಾಷ್ಪದ ಕೋಡಿ ಹರಿಯಿತು. ಪಕ್ಕದಲ್ಲಿದ್ದ ಸುಮಂತನಿಗೆ, ರಾಜಭವನಕ್ಕೆ ಹೋಗಿ ರಾಣಿಯರಿಗೆ ಈ ವಾರ್ತೆಯನ್ನು ತಿಳಿಸಿ ಗುರುದಕ್ಷಿಣೆಯಾಗಿ ಮಕ್ಕಳು ಸಲ್ಲಿಸಬೇಕಾದ ಕಾಣಿಕೆಗಳನ್ನು ತೆಗೆದುಕೊಂಡು ಬರುವಂತೆ ಹೇಳಿ ಕಳಿಸಿದನು.

ಸುಮಂತನೂ ಕೂಡ ಅತ್ಯಂತ ಆನಂದದಿಂದ, ಅತಿ ವೇಗವಾಗಿ ರಾಜಭವನಕ್ಕೆ ಹೋಗಿ, ವಿಷಯವನ್ನು ತಿಳಿಸಿ, ಕಾಣಿಕೆಗಳನ್ನು ತೆಗೆದುಕೊಂಡು ಬೇಗನೆ ಬಂದನು. ಗುರುಗಳು ಹುಡುಗರನ್ನು ಕರೆದು ಅವರವರ ಸಾಮಾನುಗಳನ್ನು ಸಿದ್ಧಪಡಿಸಿಕೊಳ್ಳು ವಂತೆ ಆಜ್ಞಾಪಿಸಿದರು. ಹುಡುಗರು ಸಾಮಾನುಗಳನ್ನು ಸಿದ್ಧಪಡಿಸಿ ರಥದಲ್ಲಿಡಲು ಕಳಿಸಿದರು. ತಂದೆಯ ಆಜ್ಞೆಯನ್ನು ಅನುಸರಿಸಿ ರಾಮ, ಲಕ್ಷ್ಮಣ, ಭರತ, ಶತ್ರುಘ್ನರು ಗುರು ಪೂಜೆ ಮಾಡಿ, ಕಾಣಿಕೆಗಳನ್ನು ಅರ್ಪಿಸಿ, ನಮಸ್ಕರಿಸಿ, ಮನೆಗೆ ಹಿಂತಿರುಗಲು ಅನುಜ್ಞೆ ಬೇಡಿದರು. ಮಹಾ ಋಷಿಯು ಆ ಬಾಲಕರನ್ನು ತನ್ನ ತೋಳ್ತೆಕ್ಕೆಯಲ್ಲಿಟ್ಟು ಕೊಂಡು, ತಲೆಯನ್ನು ಮುದ್ದಾಡಿ ಆಶೀರ್ವದಿಸಿದರು. ಅವರನ್ನು ಕಳಿಸಲಾರದೆ, ಕಣ್ಣಲ್ಲಿ ನೀರು ತುಂಬಿ, ಉಕ್ಕಿ ಬರುತ್ತಿದ್ದ ದುಃಖವನ್ನು ಹೇಗೋ ತಡೆದುಕೊಂಡು, ಅವರನ್ನು ಬೀಳ್ಕೊಟ್ಟರು. ಬಾಲಕರು ಗುರುವಿನೊಂದಿಗೆ ರಥದವರೆಗೂ ಬಂದು, ರಥದಲ್ಲಿ ಕುಳಿತರು. ಬಾಲಕರು ಕೈ ಜೋಡಿಸಿ ಗುರುಗಳಿಗೆ ನಮಸ್ಕರಿಸಿದರು. ಗುರುಗಳೂ ದುಃಖ ಸಹಿಸಲಾರದೆ ಕಣ್ಣೀರು ಸುರಿಸಿದರು. ಆ ಗುರು ಶಿಷ್ಯ ಸಂಬಂಧವನ್ನು ನೋಡಿದ ದಶರಥನು ತನ್ನಲ್ಲೇ ತಾನು ಆನಂದಿಸಿದನು. ಅಲ್ಲಿಂದ ಹೊರಟು ಎಲ್ಲರೂ ರಾಜಭವನ ಸೇರಿದರು.

ಗುರುವು ಭಾರವಾದ ಹೃದಯದಿಂದ ಆಶ್ರಮವನ್ನು ಸೇರಿದರು. ಅವರಿಗೆ ಆಶ್ರಮವು ದೀಪವಿಲ್ಲದ ಮನೆಯಂತೆ ಕತ್ತಲೆಯಾಗಿ ಕಾಣಿಸಿತು. ಹೀಗೆ ಚಿಂತಿಸಿದರೆ, ಅದೇ ಒಂದು ಮಹಾ ಮೋಹವಾಗಿ ಪರಿಣಮಿಸಬಹುದೆಂದು, ತನ್ನ ಅವರ ಸಂಬಂಧ ಅನುಭವವನ್ನು ಮರೆಯುವುದಕ್ಕಾಗಿ ಗುರುಗಳು ಧ್ಯಾನಮಗ್ನರಾದರು. ಬಾಹ್ಯ ಭ್ರಾಂತಿ ಹೋಗಿ, ಅಂತರ್ ಆನಂದದಲ್ಲಿ ಮುಳುಗಿದರು. ನಾಲ್ವರು ಬಾಲಕರು ಧರ್ಮ, ಅರ್ಥ, ಕಾಮ, ಮೋಕ್ಷ ಸ್ವರೂಪರೆಂದೂ ಲೋಕದಲ್ಲಿ ಈ ನಾಲ್ಕನ್ನು ಬೋಧಿಸಿ, ನೆಲೆ ನಿಲ್ಲಿಸುವುದಕ್ಕಾಗಿ ಅವತರಿಸಿರುವ ಧರ್ಮಮೂರ್ತಿಗಳೆಂದೂ ಗ್ರಹಿಸಿ ಆನಂದಿಸಿದರು.

ರಾಮ, ಲಕ್ಷ್ಮಣ, ಭರತ, ಶತ್ರುಘ್ನರಿಗೆ ವಿದ್ಯಾಭ್ಯಾಸವು ಪೂರ್ತಿಯಾಯಿತೆಂದು ತಿಳಿದು ದಶರಥನು, ರಾಜ ವಿದ್ಯಾಭ್ಯಾಸವನ್ನು ಕಲಿಸುವ ಉದ್ದೇಶದಿಂದ ವೀರರೂ ಪರಿಣತರೂ ಆದ ಶಿಕ್ಷಕರನ್ನು ಬರಮಾಡಿಕೊಂಡು ಅವರಿಗೆ ಅಸ್ತ್ರ ಶಸ್ತ್ರವಿದ್ಯೆಗಳನ್ನು ಕಲಿಸಲು ಪ್ರಾರಂಭಿಸಿದನು. ಸರ್ವವಿದ್ಯಾ ಸಂಪನ್ನರಾದ ಆ ಬಾಲಕರಿಗೆ ವಿದ್ಯೆ ಕಲಿಸುವವರಾರು? ರಾಮನು ಮಾನವಾಕಾರ ಧರಿಸಿದ್ದುದರಿಂದ ಲೋಕರೀತಿ ಯನ್ನು ಅವಲಂಬಿಸುತ್ತಿದ್ದನೆ ವಿನಾ ಜಗನ್ನಾಟಕ ಸೂತ್ರಧಾರಿಯಾದ ಅವನಿಗೆ ಸೂತ್ರಗಳನ್ನು ಕುರಿತು ಬೋಧಿಸುವವರುಂಟೆ? ಮಾಯೆಯಿಂದ ಆವರಿಸಲ್ಪಟ್ಟ ಮನುಷ್ಯರು ಮಾಧವನನ್ನು ಗುರುತಿಸಲಾರದೆ, ಅವನಿಗೆ ಪ್ರಾಕೃತ ವಿದ್ಯೆಗಳನ್ನು

ಕಲಿಸಲು ಪ್ರಯತ್ನಿಸಿದರು! ಲೋಕಸಂರಕ್ಷಣೆಗಾಗಿ ಅವತರಿಸಿದಾಗ ಲೋಕದ ವಾಡಿಕೆಯನ್ನೇ ಅನುಸರಿಸಬೇಕಾಗುವುದು. ಮಾನವಾತೀತವಾದ ಪ್ರವರ್ತನೆಗಳನ್ನು ಮಾಡಿತೋರಿಸಿದರೆ ಜನರು ಅದನ್ನು ಅನುಸರಿಸಲಾರರು. ಪ್ರಜೆಗಳಿಗೆ ಆಚರಣ ಯೋಗ್ಯವಾದ ಮಾರ್ಗಗಳನ್ನು ಬೋಧಿಸುತ್ತಾ ಬಂದರೆ, ಸುಲಭವಾಗಿ ಧರ್ಮ ರಕ್ಷಣೆಯಾಗುವುದು. ಎಂತಲೆ, ರಾಮನು ಬೂದಿ ಮುಚ್ಚಿದ ಕೆಂಡದಂತೆ, ಪಾಚಿ ಮುಚ್ಚಿದ ನೀರಿನಂತೆ, ಮೇಘಗಳು ಮುಚ್ಚಿದ ಚಂದ್ರನಂತೆ ಸಾಮಾನ್ಯ ಬಾಲಕನ ಹಾಗೆ ಬೆಳೆಯುತ್ತಿದ್ದನು. ಸೋದರರು ಅಣ್ಣನ ಹೆಜ್ಜೆಗಳನ್ನೇ ಅನುಸರಿಸುತ್ತಿದ್ದರು. ಅಸ್ತ್ರ ಶಸ್ತ್ರ ವಿದ್ಯೆಯನ್ನು ಕಲಿಸಲು ನೇಮಿಸಿದ್ದ ಪ್ರವೀಣರಿಗೂ ತಿಳಿಯದ ಶಕ್ತಿ ಯುಕ್ತಿಗಳನ್ನು ರಾಮ ಲಕ್ಷ್ಮಣರು ಪ್ರದರ್ಶಿಸುವುದನ್ನು ನೋಡಿ ಗುರುಗಳು ಆಶ್ಚರ್ಯ ಪಡುತ್ತಿದ್ದರು, ಭಯಪಡುತ್ತಿದ್ದರು.

ಆದರೆ ರಾಮ, ಲಕ್ಷ್ಮಣ, ಭರತ, ಶತ್ರುಘ್ನರು ಎಂದೂ ತಮ್ಮ ಅಸ್ತ್ರಗಳಿಂದ ಮೃಗಗಳನ್ನಾಗಲಿ, ಪಕ್ಷಿಗಳನ್ನಾಗಲಿ ಹೊಡೆದು ಕೊಲ್ಲುತ್ತಿರಲಿಲ್ಲ. ತಮ್ಮ ಅಸ್ತ್ರಗಳನ್ನು ಅಗತ್ಯವಾದ ಸಮಯಗಳಲ್ಲಿ ಹೊರತು, ಮಿಕ್ಕ ಸಮಯಗಳಲ್ಲಿ ಉಪಯೋಗಿಸುವುದಿಲ್ಲವೆಂದು ತೆಗೆದುಕೊಂಡ ದೀಕ್ಷೆಗೆ ಎಂಥ ಸಮಯದಲ್ಲೂ ವಿರುದ್ಧವಾಗಿ ನಡೆದವರಲ್ಲ. ಅನೇಕ ವೇಳೆ ಗುರುಗಳು ವಿಹಾರಾರ್ಥವಾಗಿ ಬಾಲಕರನ್ನು ಅಡವಿಗೆ ಕರೆದುಕೊಂಡು ಹೋದಾಗ, ಕೆಲವು ಹಕ್ಕಿಗಳನ್ನೂ ಪ್ರಾಣಿಗಳನ್ನೂ ಬೇಟೆಯಾಡುವಂತೆ ಸೂಚಿಸುತ್ತಿದ್ದರು. ರಾಮನು ಅದಕ್ಕೆ ಸಮ್ಮತಿಸದೆ, "ಈ ಅಸ್ತ್ರಗಳಿರುವುದು ಈ ನಿರಪರಾಧಿ ಜೀವಿಗಳನ್ನು ಕೊಲ್ಲುವುದಕ್ಕಲ್ಲ ಅಲ್ಲವೆ? ಲೋಕ ಸಂರಕ್ಷಣೆಗಾಗಿ, ಪ್ರಜಾ ಸೇವೆಗಾಗಿ ಇರುವ ಈ ಪವಿತ್ರ ಅಸ್ತ್ರಗಳನ್ನು ಇಂಥ ಅಲ್ಪ ಮಾರ್ಗದಲ್ಲಿ ವಿನಿಯೋಗಿಸಿ, ಅಪವಿತ್ರ ಮಾಡುವುದಕ್ಕೆ ನನ್ನ ಮನಸ್ಸೊಪ್ಪುವುದಿಲ್ಲ," ಎಂದು ಘಂಟಾಘೋಷವಾಗಿ ಹೇಳಿಬಿಡುತ್ತಿದ್ದನು. ಗುರುಗಳು ಮರುಮಾತನಾಡದೆ ಸುಮ್ಮನಾಗುತ್ತಿದ್ದರು. ರಾಮಚಂದ್ರನು ಪ್ರತಿ ಮಾತಿನಲ್ಲೂ ಕರುಣಾರಸ ಹರಿಸುತ್ತಿದ್ದನು. ಒಮ್ಮೊಮ್ಮೆ ಲಕ್ಷ್ಮಣನು ಸ್ವಲ್ಪ ಉತ್ಸಾಹದಿಂದ ಅಲ್ಲಿ ಸುಳಿದಾಡುತ್ತಿದ್ದ ಯಾವುದಾದರೂ ಮೃಗದ ಮೇಲೆ ಗುರಿ ಇಟ್ಟರೂ ತಕ್ಷಣ ರಾಮನು ಅಡ್ಡ ಬಂದು, "ಲಕ್ಷ್ಮಣಾ! ಅವುಗಳಿಂದ ನಿನಗಾಗಲಿ, ಲೋಕಕ್ಕಾಗಲಿ ಏನು ಅಪಕಾರವಾಗಿದೆಯೆಂದು ಅವುಗಳನ್ನು ಕೊಲ್ಲಲು ಹೊರಟಿದ್ದೀಯೆ? ನಿರ್ದೋಷಿಗಳನ್ನು ಶಿಕ್ಷಿಸುವುದು ರಾಜನೀತಿಗೆ ಪರಮ ವಿರುದ್ಧವಲ್ಲವೆ?" ಎಂದು ಬುದ್ಧಿ ಹೇಳುತ್ತಿದ್ದನು.

ಮಹಾರಾಜನು ಆಗಾಗ ಮಂತ್ರಿಗಳ ಜೊತೆ ಮಕ್ಕಳನ್ನೂ ಸೇರಿಸಿ ಪರಿಪಾಲನಾ ವಿಧಾನಗಳನ್ನು, ರಾಜನೀತಿ, ಧರ್ಮನೀತಿ, ದೈವನೀತಿಗಳನ್ನು ಹೇಳಿಕೊಡುತ್ತಿದ್ದನು. ಅವರ ತಾತಂದಿರ ಪ್ರಜಾ ಪರಿಪಾಲಾನೆಯನ್ನೂ ಅವರು ಪಡೆದಿದ್ದ ಪ್ರಜಾ ಮನ್ನಣೆ

ಯನ್ನೂ ದಾನವರೊಂದಿಗೆ, ದೇವತೆಗಳೊಂದಿಗೆ ಅವರು ನಡೆಸಿದ ಹೋರಾಟ ಗಳನ್ನೂ ಅವರಿಗಿದ್ದ ದೈವ ಸಂಬಂಧವನ್ನೂ ಅತ್ಯಂತ ಉತ್ಸಾಹದಿಂದ, ಕಥೆಗಳ ರೂಪದಲ್ಲಿ ಹೇಳುತ್ತಿದ್ದನು. ಒಮ್ಮೊಮ್ಮೆ ಮಂತ್ರಿಗಳಿಂದ ಹೇಳಿಸುತ್ತಿದ್ದನು. ಹೀಗೆ ಬಾಲ್ಯದಲ್ಲೆ ಅವರಿಗೆ ಶಿಸ್ತಿನ ಶಿಕ್ಷಣದೊಂದಿಗೆ, ಪರಿಪಾಲನಾ ದಕ್ಷತೆಯನ್ನು ಕೂಡ ಹೇಳಿಕೊಡುತ್ತಿದ್ದನು.

ಕಾಲ ಹೋದಂತೆ ಬಾಲಕರು ವೃದ್ಧಿಯಾಗುತ್ತಾ ಬರುತ್ತಿರುವುದನ್ನು ಕಂಡು, ಕುಶಾಗ್ರ ಬುದ್ಧಿಯ ಈ ಬಾಲಕರು ಅತಿ ಶೀಘ್ರದಲ್ಲಿ ರಾಜ್ಯದ ಬಾಧ್ಯತೆ ವಹಿಸಬಲ್ಲ ರೆನ್ನುವುದು ಮಂತ್ರಿಗಳಲ್ಲಿ ದೃಢವಾಯಿತು. ಅವರ ಪರಿಪಾಲನೆಯಲ್ಲಿ ದೇಶವು ದಿವ್ಯಲೋಕವಾಗಿ ಪರಿವರ್ತನೆಯಾಗುವುದೆಂದು ಪ್ರಜೆಗಳು ಕೂಡ ಕನಸು ಕಾಣುತ್ತಿ ದ್ದರು. ಪ್ರಜೆಗಳನ್ನು ರಾಜಕುಮಾರರೂ ರಾಜಕುಮಾರರನ್ನು ಪ್ರಜೆಗಳೂ ಆಪ್ಯಾಯ ಮಾನಕರವಾಗಿ ನೋಡುತ್ತಾ ಪರಸ್ಪರ ಬಂಧುಗಳ ಹಾಗೆ ಪ್ರೀತಿಯಿಂದ ನಡೆದು ಕೊಳ್ಳುತ್ತಿದರು. ನಿರಾಡಂಬರ, ನಿಗರ್ವ, ನಿರ್ಮಲ, ನಿಸ್ವಾರ್ಥಪರರಾದ ಆ ಬಾಲಕ ರನ್ನು ಪ್ರೇಮಿಸದವರು ನೋಡದವರು ಅಯೋಧ್ಯೆಯಲ್ಲೇ ಇರಲಿಲ್ಲ. ಅಯೋ ಧ್ಯೆಯೇ ಬಾಲಕರ ದೇಹ, ಆ ಬಾಲಕರೇ ಅಯೋಧ್ಯೆಯ ಹೃದಯ ಎನ್ನುವಂತೆ ಸಂಬಂಧ ಏರ್ಪಟ್ಟಿತ್ತು.

ಬಾಲಕರಿಗೆ ಹತ್ತು ಹನ್ನೊಂದು ವರ್ಷ ವಯಸ್ಸು ಇದ್ದಿರಬಹುದು. ಆಗ, ಒಂದು ದಿನ ದಶರಥ ಮಹಾರಾಜನು ಗುಣಶಾಲಿಯಾದ ಮಂತ್ರಿ ಸುಮಂತನನ್ನು ಕರೆದು, "ನನ್ನ ಮಕ್ಕಳು ರಾಮ, ಲಕ್ಷ್ಮಣ, ಭರತ, ಶತ್ರುಘ್ನರು ಪ್ರಾಕೃತ ವಿದ್ಯೆಯಾದ ಅಪರ ವಿದ್ಯೆಯ ಜೊತೆಗೆ, ಪರಾವಿದ್ಯೆ ಕೂಡ ಕಲಿಯುವುದು ಅವಶ್ಯಕ. ಪರಾವಿದ್ಯೆ ಇಲ್ಲದೆ, ಅಪರವಿದ್ಯೆ ಎಷ್ಟಿದ್ದರೂ ಧರ್ಮಕ್ಕೆ ಅಗತ್ಯವಾದ ಬಲಗೈ ಕೂಡುವುದಿಲ್ಲ. ಈ ಎಳೆ ವಯಸ್ಸಿನಲ್ಲೆ ಹೃದಯದಲ್ಲಿ ಉತ್ತಮ ಸಂಸ್ಕಾರವನ್ನು ಸೇರಿಸಬೇಕು.

ಭವಿಷ್ಯತ್ತಿನ ಒಳ್ಳೆಯದು ಕೆಟ್ಟದ್ದು ಬಾಲ್ಯಾವಸ್ಥೆಯಲ್ಲಿ ದೊರೆಯುವ ಸಂಸ್ಕರಿಸ ಲ್ಪಟ್ಟ ಅನುಭವಗಳನ್ನು ಆಧರಿಸಿರುವುವು. ಈ ಬಾಲ್ಯಾವಸ್ಥೆಯೆ ಭವಿಷ್ಯತ್ತೆನ್ನುವ ಭವನಕ್ಕೆ ಬುನಾದಿ. ಆದ್ದರಿಂದ, ಮಕ್ಕಳನ್ನು ರಾಜ್ಯ ಸಂಚಾರ ಮಾಡಿಸುವುದರ ಜೊತೆಗೆ, ಕ್ಷೇತ್ರಯಾತ್ರೆ ಮಾಡಿಸಿ, ತೀರ್ಥರಾಜ್ಯಗಳ ಪವಿತ್ರತೆಯನ್ನೂ ಕ್ಷೇತ್ರಗಳ ವಿಶಿಷ್ಟತೆಯನ್ನೂ ವಿವರಿಸಿ ಅವುಗಳ ದರ್ಶನ ಪಡೆಯುವಂತೆ ಮಾಡಿಸುವುದು ಅವಶ್ಯಕವೆನಿಸುತ್ತದೆ. ಮಕ್ಕಳು ಬೆಳೆದು ದೊಡ್ಡವರಾದ ಮೇಲೆ ವಿಷಯಾಸಕ್ತರಾ ಗುವರು. ಅದಕ್ಕೆ ಮೊದಲೆ ಅವರನ್ನು ದೈವ ಪ್ರೇಮಿಗಳನ್ನಾಗಿ ಮಾಡುವುದು ಹಿರಿಯರ ಒಂದು ಅಗತ್ಯವಾದ ಕರ್ತವ್ಯ. ಪ್ರಭುಗಳಾದವರಿಗೆ ಇದು ಅತಿ

ಪ್ರಧಾನವಾದ ಕರ್ತವ್ಯ. ಆದ್ದರಿಂದ, ಗುರುಗಳೊಂದಿಗೆ ವಿಚಾರ ಮಾಡಿ ಯಾತ್ರೆಗೆ ಬೇಕಾದ ಏರ್ಪಾಟು ಮಾಡಿ," ಎಂದು ಆಜ್ಞಾಪಿಸಿದನು. ಅದನ್ನು ಕೇಳಿ ಸುಮಂತನು ಸಂತೋಷಪಟ್ಟು, ತಕ್ಕ ಸಿದ್ಧತೆಗಳನ್ನು ಮಾಡಿ, ಬಾಲಕರೊಂದಿಗೆ ತಾನೂ ಹೋಗಲು ಸಿದ್ಧನಾದನು.

ಅಂತಃಪುರದಲ್ಲಿ ಈ ಯಾತ್ರೆಯ ವಿಷಯ ತಿಳಿದೊಡನೆಯೆ ರಾಣಿಯರು ತಮ್ಮ ಮಕ್ಕಳು ಪವಿತ್ರಯಾತ್ರೆ ಮಾಡಲಿದ್ದಾರೆನ್ನುವ ಆನಂದದಿಂದ ಪ್ರಯಾಣಕ್ಕೆ ತಕ್ಕ ಆಹಾರ ವಿಹಾರಾದಿ ಏರ್ಪಾಟುಗಳನ್ನೆಲ್ಲಾ ಮಾಡಿದರು. ಅವರೊಂದಿಗೆ ದಾದಿಯರನ್ನೂ ಕೆಲವು ಪುರದ ಬಾಲಕರನ್ನೂ ಕಳಿಸುವ ಏರ್ಪಾಟು ಮಾಡಿದರು. ರಾಮ ಲಕ್ಷ್ಮಣ ಭರತ ಶತ್ರುಘ್ನರು ಪವಿತ್ರ ಯಾತ್ರೆ ಮಾಡಲಿರುವೆವೆನ್ನುವ ಅಪಾರ ಆನಂದವನ್ನು ಪ್ರದರ್ಶಿಸುತ್ತಾ ತಮ್ಮ ಒಡನಾಡಿಗಳಾದ ಬಾಲಕರನ್ನು ಪ್ರೋತ್ಸಾಹಿಸಿ, ತಂದೆಗೆ ಹೇಳಿ ಅವರಿಗೆ ತಕ್ಕ ಪ್ರಯಾಣ ಸೌಕರ್ಯಗಳನ್ನು ವ್ಯವಸ್ಥೆಗೊಳಿಸಿದರು.

ಯಾತ್ರೆ ಹೊರಡುವ ದಿನ, ಆ ಸುಮುಹೂರ್ತ ಸಮೀಪಿಸುತ್ತಲೆ ತಾಯಿಯರಿಗೆ, ತಂದೆಗೆ, ಗುರುಗಳಿಗೆ ನಮಸ್ಕರಿಸಿ, ತಾಯಿಯರು ಆರತಿ ಎತ್ತಿದ ಬಳಿಕ, ಅವರಿಂದ ದೃಷ್ಟಿ ಚುಕ್ಕೆ, ರಕ್ಷೆ ಚುಕ್ಕೆ ಇಡಿಸಿಕೊಂಡು, ರಾಜವೇಷವನ್ನು ತೆಗೆದು ಸಾಮಾನ್ಯವಾದ ಯಾತ್ರಾ ವೇಷವನ್ನು, ಅಂದರೆ ಪಂಚೆ ಧೋತ್ರ ಉಟ್ಟು, ಅಂಗವಸ್ತ್ರ ಹೊದ್ದು, ರಥಗಳಲ್ಲಿ ಕುಳಿತು, ಜಯ ಜಯ ಧ್ವನಿಗಳೊಂದಿಗೆ ರಥಗಳನ್ನು ಕದಲಿಸಿದರು. ಮುಂದೂ ಹಿಂದೂ ರಕ್ಷಕ ಭಟರ ರಥಗಳು ವಾಯುವೇಗದಿಂದ ಓಡುತ್ತಿದ್ದುವು. ದಿನಗಳು, ವಾರಗಳು, ತಿಂಗಳುಗಳು ಕಳೆದವು. ಪ್ರತಿ ಕ್ಷೇತ್ರವನ್ನೂ ಪ್ರತಿ ತೀರ್ಥವನ್ನೂ ಸಂದರ್ಶಿಸಿ, ಪೂಜೆ ಸಲ್ಲಿಸಿ, ಅವುಗಳ ವಿಷಯಗಳನ್ನು ತಿಳಿಯುತ್ತಿದ್ದರು. ಸುಮಂತನು ಅತ್ಯಂತ ಉತ್ಸಾಹದಿಂದ, ಭಕ್ತಿ ಶ್ರದ್ಧೆಗಳಿಂದ, ಅನ್ಯ ಆಶೆಗಳಿಗೆ ಅವಕಾಶವೀಯದೆ, ನಿರಂತರವೂ ಕ್ಷೇತ್ರಗಳ ವಿಶೇಷ ಚರಿತ್ರೆಯನ್ನು ಹೇಳುತ್ತಿದ್ದನು. ಬಾಲಕರು ಶ್ರದ್ಧೆಯಿಂದ ಕೇಳುತ್ತಾ, "ಆಮೇಲೆ, ಆಮೇಲೆ," ಎಂದು ಕುತೂಹಲದಿಂದ ಕೇಳಿ ತಿಳಿದುಕೊಳ್ಳುತ್ತಿದ್ದರು. ಸುಮಂತನು ಅವರ ಶ್ರದ್ಧಾ ಭಕ್ತಿಗಳಿಗೆ ತುಂಬಾ ಆನಂದಪಟ್ಟು, ಮತ್ತಷ್ಟು ಉತ್ಸಾಹದಿಂದ, ಅಲ್ಲಿಯ ವಿಶೇಷಗಳನ್ನು ತಿಳಿಸುತ್ತಿದ್ದನು.

ಹೀಗೆ ಉತ್ತರದ ತುದಿಯಿಂದ ದಕ್ಷಿಣದ ತುದಿಯವರೆಗೂ ಪೂರ್ವ ಸಮುದ್ರ ತೀರದಿಂದ ಪಶ್ಚಿಮ ಸಮುದ್ರ ತೀರದವರೆಗೂ ಇರುವ ಕ್ಷೇತ್ರಗಳನ್ನು ಮೂರು ನಾಲ್ಕು ಮಾಸಗಳು ಸಂಚಾರ ಮಾಡಿದರು. ಮಧ್ಯೆ ಮಧ್ಯೆ, ಆಯಾ ರಾಜ್ಯಗಳಲ್ಲಿನ ಕೆಲವು ಪ್ರಜಾ ಅನನುಕೂಲಗಳನ್ನೂ ಯಾತ್ರಿಕರ ಅನನುಕೂಲಗಳನ್ನೂ ಗುರುತಿಸಿ,

ಮಂತ್ರಿಗೆ ಹೇಳಿ ಅವುಗಳನ್ನು ಸರಿಪಡಿಸುತ್ತಿದ್ದರು. ದೈವ ಮಂದಿರಗಳಿಗೆ ತಕ್ಕ ಏರ್ಪಾಟುಗಳನ್ನೂ ಭದ್ರತೆಗಳನ್ನೂ ಕಲ್ಪಿಸಿದರು. ಯಾತ್ರಿಕರಿಗೆ ನೀರು, ವಸತಿ, ಮರದ ನೆರಳು, ಅರವಟ್ಟಿಗೆಗಳು, ಛತ್ರಗಳು, ಆರೋಗ್ಯ ಕೇಂದ್ರ, ಹೀಗೆ ಅನೇಕ ಬಗೆಯ ಸೌಕರ್ಯಗಳನ್ನು ಏರ್ಪಡಿಸುವಂತೆ ರಾಮನು ಹೇಳಿದಾಗಲೆಲ್ಲಾ ಮಂತ್ರಿ ಸುಮಂತನು ರಾಮನ ಅಭೀಷ್ಟಕ್ಕೆ ಇದಿರು ಹೇಳದೆ, ಎಲ್ಲವನ್ನೂ ಅತಿ ಶೀಘ್ರವಾಗಿ ಮಾಡಿಸುತ್ತಿದ್ದುದನ್ನು ನೋಡಿ ಬಾಲಕರು ತಮ್ಮಲ್ಲೇ ಆನಂದಿಸುತ್ತಿದ್ದರು. ತಮ್ಮ ಮಂತ್ರಿಯಂಥ ಮಂತ್ರಿಗಳು ಲೋಕದಲ್ಲಿದ್ದರೆ, ಲೋಕ ಕ್ಷೇಮಕ್ಕೆ ಕೊರತೆಯೇ ಇರದು ಎಂದು ತಮ್ಮ ತಮ್ಮಲ್ಲೇ ಆಡಿಕೊಳ್ಳುತ್ತಿದ್ದರು.

ಇತ್ತ, ಅಯೋಧ್ಯೆಯಲ್ಲಿ, ಕುಮಾರರ ಕ್ಷೇಮವನ್ನು ಗೂಢಚಾರರ ಮೂಲಕ ತಿಳಿಯುತ್ತಿದ್ದರು. ಒಂದೊಂದು ಸಾರಿ, ರಾಣಿಯರು ಪುತ್ರವಿಯೋಗವನ್ನು ಸಹಿಸಲಾರದೆ, ಎಲ್ಲಿದ್ದಾರೊ ಹೇಗಿದ್ದಾರೊ, ಆಹಾರ ಹವಾಗಳ ವ್ಯತ್ಯಾಸದಿಂದ ಅವರ ಆರೋಗ್ಯ ಹೇಗಿದೆಯೊ ಎಂಬ ಅನುಮಾನದಿಂದ ವಸಿಷ್ಠರನ್ನು ಬರಮಾಡಿಕೊಂಡು ಮಕ್ಕಳ ಕ್ಷೇಮ ಸಮಾಚಾರವನ್ನು ವಿಚಾರಿಸುತ್ತಿದ್ದರು. ವಸಿಷ್ಠರು ತಮ್ಮ ಯೋಗದೃಷ್ಟಿಯಿಂದ ಪರಿಶೀಲಿಸಿ, ಬಾಲಕರಿಗೆ ಯಾವ ತೊಂದರೆಯೂ ಇಲ್ಲದೆ ಆನಂದವಾಗಿ ಯಾತ್ರೆಯನ್ನು ಸಾಗಿಸುತ್ತಿದ್ದಾರೆಂದೂ ಅತಿ ಶೀಘ್ರವಾಗಿ ಅಯೋಧ್ಯೆ ಸೇರುವರೆಂದೂ ಹೇಳಿ, ರಾಣಿಯರಿಗೆ ಧೈರ್ಯವನ್ನೂ ಆನಂದವನ್ನೂ ಇತ್ತು, ಅವರನ್ನು ಆಶೀರ್ವದಿಸಿ ಹೋಗುತ್ತಿದ್ದರು. ರಾಜಕುಮಾರರು ಎರಡು ದಿನಗಳಲ್ಲೆ ಅಯೋಧ್ಯೆಯನ್ನು ಸೇರುವರೆನ್ನುವ ಸುದ್ದಿಯನ್ನು ಗೂಢಚಾರರಿಂದ ತಿಳಿದು, ಯಾತ್ರೆಯ ದಿಗ್ವಿಜಯದಿಂದ ಹಿಂತಿರುಗುತ್ತಿರುವ ದಿವ್ಯ ಮೂರ್ತಿಗಳಾದ ಆ ನಾಲ್ವರಿಗೆ ಮಂಗಳ ಸ್ವಾಗತ ನೀಡಲು, ಪುರದ ಸಿಂಹದ್ವಾರದಲ್ಲಿ ದಿವ್ಯ ವೈಭವದ ಏರ್ಪಾಟು ಮಾಡಿದರು. ಬೀದಿಗಳಲ್ಲಿ ಧೂಳು ಏಳದಂತೆ ಪನ್ನೀರು ಚಿಮುಕಿಸಿದರು.

ನಿರೀಕ್ಷಿಸಿದಂತೆ ರಾಜಕುಮಾರರು ಸಿಂಹದ್ವಾರವನ್ನು ಪ್ರವೇಶಿಸಿ, ಮಂಗಳಾರತಿಯನ್ನು ಸ್ವೀಕರಿಸಿ, ಪುರ ಬೀದಿಗಳಲ್ಲಿ ಪೌರರು ಪುಷ್ಪಗಳನ್ನು ಸುರಿಸುತ್ತಿರಲು, ಮಂಗಳವಾದ್ಯಗಳು ಸ್ವಾಗತ ಪದ್ಯಗಳನ್ನು ನುಡಿಸುತ್ತಿರಲು, ಬ್ರಾಹ್ಮಣರು ಆಶೀರ್ವಾದ ಮಾಡುತ್ತಿರಲು, ಪೂರ್ಣ ತೇಜಸ್ಸಿನಿಂದ ಭಗವತ್ ಕಳೆಯನ್ನು ಮೆರೆಸುತ್ತಾ ಸುಮಂತನೊಂದಿಗೆ ರಾಜಭವನವನ್ನು ತಲುಪಿದರು. ಅಲ್ಲಿ ಅನೇಕ ಬಗೆಯಾಗಿ ದೃಷ್ಟಿ ತೆಗೆದು ಅವರನ್ನು ಒಳಗೆ ಕರೆದುಕೊಂಡು ಹೋದರು. ಕುಮಾರರನ್ನು ನೋಡಲು ಹಾತೊರೆಯುತ್ತಿದ್ದ ಕಣ್ಣುಗಳಿಂದ ತಾಯಿಯರು ಅಂತಃಪುರದಲ್ಲಿ ಕಾದಿದ್ದರು. ನಾಲ್ವರು ಕುಮಾರರೂ ಓಡಿ ಹೋಗಿ ತಾಯಿಯರಿಗೆ ನಮಸ್ಕರಿಸಿ,

ಅವರ ತೋಳಪ್ಪಿನಲ್ಲಿ ಸಾಟಿ ಇಲ್ಲದ ಆನಂದ ಅನುಭವಿಸಿದರು. ಕಾಯಗಳ ಸ್ಮೃತಿ ಇಲ್ಲದೆ ಆರು ನಿಮಿಷಗಳ ಸಾಯುಜ್ಯ ಸ್ಥಿತಿ ಅನುಭವಿಸಿದರು.

ತಾಯಿಯರ ಪ್ರೇಮದಿಂದ ತಡೆಯಿಲ್ಲದೆ ಸುರಿಯುತ್ತಿದ್ದ ಆನಂದಬಾಷ್ಪಗಳಿಂದ ಬಾಲಕರ ತಲೆಗಳು ಒದ್ದೆಯಾಯಿತು. ಕೊಂಚ ಸಮಯದ ಬಳಿಕ ಮಕ್ಕಳ ತಲೆಯನ್ನು ಸೀರೆಯ ಸೆರಗಿನಿಂದ ಒರೆಸಿ, ತಲೆಯನ್ನು ಮುದ್ದಾಡಿದರು. ಪೀಠದಲ್ಲಿ ಕುಳಿತು, ತಮ್ಮ ಮಕ್ಕಳನ್ನು ತೊಡೆಯ ಮೇಲೆ ಕೂರಿಸಿಕೊಂಡು, ಸಕ್ಕರೆ ಪೊಂಗಲು, ದಧ್ಯೋದನಗಳನ್ನು ತರಿಸಿ, ತಮ್ಮ ಕೈಯಿಂದ ಅವರ ಬಾಯಿಗಿಡುತ್ತಿದ್ದಾಗ, ಅಬ್ಬಾ! ಆ ತಾಯಿಯರ ಆನಂದ ವರ್ಣನಾತೀತ. ಮೂರು ತಿಂಗಳು ಪುತ್ರ ವಿಯೋಗದಿಂದ ಉಂಟಾಗಿದ್ದ ಪ್ರೇಮ ತಾಪವನ್ನು ನಿವಾರಿಸಿಕೊಳ್ಳಲು ಕೆಲವು ದಿನಗಳ ಕಾಲ ರಾತ್ರಿ, ಹಗಲು ತಮ್ಮ ಮಕ್ಕಳನ್ನು ತಮ್ಮೊಂದಿಗೆ ಇಟ್ಟುಕೊಂಡು, ಆಗಾಗ ಅವರಿಂದ ಯಾತ್ರೆಯ ವಿಷಯವನ್ನು ಕೇಳಿ ತಿಳಿದುಕೊಳ್ಳುತ್ತಿದ್ದರು. ಬಾಲಕರು ಒಂದೊಂದು ಕ್ಷೇತ್ರದ ವಿಶಿಷ್ಟತೆಯನ್ನೂ ಸುಮಂತನಿಂದ ಕೇಳಿದ್ದೆಲ್ಲವನ್ನೂ ತಾಯಿಯರಿಗೆ ಹೇಳು ತ್ತಿದ್ದರು. ಆ ತಾಯಿಯರು ಕೂಡಾ ಯಾತ್ರಾ ಫಲವನ್ನು ಅನುಭವಿಸುವವರಂತೆ ಅತ್ಯಂತ ಶ್ರದ್ಧಾ ಭಕ್ತಿಯಿಂದ ಕೇಳುತ್ತಿದ್ದರು.

ಮಕ್ಕಳು ಯಾತ್ರೆ ಮಾಡಿಕೊಂಡು ಬಂದರೆನ್ನುವ ಸಂಭ್ರಮದಿಂದ ದಶರಥನು ಒಂದು ದಿನ ದೇವತಾ ಸಮಾರಾಧನೆ ನಡೆಸಿ, ಕಾಶಿ, ಪ್ರಯಾಗ ತೀರ್ಥಗಳನ್ನು ಬಂದವರೆಲ್ಲರಿಗೂ ಬ್ರಾಹ್ಮಣರಿಂದ ಕೊಡಿಸಿದನು, ಮೃಷ್ಟಾನ್ನ ನೀಡಿದನು, ದಕ್ಷಿಣೆ ಕೊಟ್ಟು ಕಳಿಸಿದನು.

ಈ ವಿಧವಾಗಿ ಮಕ್ಕಳು ಹುಟ್ಟಿದಾಗಿನಿಂದಲೂ ಯಾವುದಾದರೂ ಒಂದೊಂದು ಹೆಸರಿನಿಂದ ಅಯೋಧ್ಯೆಯಲ್ಲಿ ಉತ್ಸವಗಳನ್ನು ನಡೆಸುತ್ತಲೇ ಇದ್ದರು. ಅಯೋ ಧ್ಯೆಯು ನಿತ್ಯೋತ್ಸವ ನಿಲಯವಾಗಿ ರಾರಾಜಿಸುತ್ತಿತ್ತು. ಉತ್ಸವಗಳು, ವಿನೋದಗಳು ಪಟ್ಟಣದವರೆಲ್ಲರನ್ನೂ ಒಂದೇ ಕುಟುಂಬದವರನ್ನಾಗಿ ಮಾಡುತ್ತಿತ್ತು. ತಿಂಗಳು ತಿಂಗಳು ಬರುವ ನವಮಿ, ದಶಮಿ, ಏಕಾದಶಿಗಳಂದು ಮಕ್ಕಳ ಹುಟ್ಟಿದ ಹಬ್ಬವನ್ನು ಅತ್ಯಂತ ವೈಭವದಿಂದ ನಡೆಸುತ್ತಿದ್ದರು. ಮಕ್ಕಳು ಮೂರು ತಿಂಗಳು ಅಯೋಧ್ಯೆ ಯಲ್ಲಿ ಇರಲಿಲ್ಲವಾದರೂ ಮಕ್ಕಳ ಹೆಸರಿನಲ್ಲಿ ಮಾಡುವ ಹಬ್ಬಗಳನ್ನೂ ಮಿಕ್ಕ ದಾನ ಧರ್ಮ ನೃತ್ಯ ಗಾನಾದಿ ಕಾರ್ಯಕ್ರಮಗಳನ್ನೂ ಅಯೋಧ್ಯಾ ಪಟ್ಟಣದಲ್ಲಿ ನಡೆಸುತ್ತಲೇ ಇದ್ದರು.

ಯಾತ್ರೆಯಿಂದ ಹಿಂತಿರುಗಿ ಬಂದ ರಾಜಕುಮಾರರು ಮೊದಲಿನಂತಿರದೆ ಅತ್ಯಂತ ಆಶ್ಚರ್ಯಕರವಾದ ಪ್ರವರ್ತನೆಯಿಂದಿದ್ದುದನ್ನು ತಾಯಿಯರು ಗಮನಿಸಿದರು. ಕೆಲವು ದಿನಗಳಿಂದ ಅಭ್ಯಾಸವಾಗಿರುವ ಈ ಪ್ರವರ್ತನೆಯು ದಿನಗಳು ಕಳೆದಂತೆ ಪರಿವರ್ತನೆಯಾಗಬಹುದೆಂದು ನಿರೀಕ್ಷಿಸುತ್ತಾ ಅವರು ದಿನ ದಿನವೂ ಕಾದು ನೋಡುತ್ತಿದ್ದರು. ಆದರೆ ಪರಿವರ್ತನೆಯು ಕಂಡು ಬರಲಿಲ್ಲ. ರಾಮನು ಮೊದಲಿ ನಂತೆ ಹೆಚ್ಚು ಮಾತನಾಡುತ್ತಿರಲಿಲ್ಲ. ಸಕಾಲಕ್ಕೆ ಸ್ನಾನಾದಿಗಳನ್ನು ಮಾಡುತ್ತಿರಲಿಲ್ಲ. ರಾಜ್ಯದ ಕಾರುಬಾರುಗಳನ್ನು ಬಹು ಎಚ್ಚರಿಕೆಯಿಂದ ಗಮನಿಸುತ್ತಿದ್ದನು. ಮೃಷ್ಟಾನ್ನ ತಿನ್ನದೆ, ಬಂಗಾರದ ಪೀಠದಲ್ಲಿ ಕುಳಿತುಕೊಳ್ಳದೆ, ಯಾವುದೋ ಪರಧ್ಯಾನದಲ್ಲಿ ಇರುವಂತೆ ಕಾಣಿಸುತ್ತಿದ್ದನು. ಅಣ್ಣನು ಹಾಗಿದ್ದುದ್ದರಿಂದ ತಮ್ಮಂದಿರು ಮೂವರೂ ಅಣ್ಣನ ಜೊತೆಯೇ ಇರುತ್ತಿದ್ದರು. ಆಟಕ್ಕಾಗಲಿ, ಬೇರೆ ಎಲ್ಲಿಗಾಗಲಿ ಹೋಗುತ್ತಿರ ಲಿಲ್ಲ. ನಾಲ್ವರೂ ಒಂದೇ ಕೋಣೆಯಲ್ಲಿ ಸೇರಿ ಬಾಗಿಲು ಹಾಕಿಕೊಂಡು ಇರುತ್ತಿದ್ದರು. ಹೊತ್ತು ಹೊತ್ತಿಗೆ ತಾಯಿಯರು ಬಾಗಿಲು ತೆಗೆಸಿ, ಆಹಾರ ಕೊಡುತ್ತಿದ್ದರು. ಅವರು ಎಷ್ಟು ಒತ್ತಾಯ ಮಾಡಿದರೂ ಕಾರಣ ಹೇಳುತ್ತಿರಲಿಲ್ಲ. ರಾಮನು ಮಾತ್ರ ಇದು ನನ್ನ ಸಹಜ ಸ್ವಭಾವ, ಇದಕ್ಕೆ ಕಾರಣವೇಕೆ ಎನ್ನುತ್ತಿದ್ದನು.

ಅವರ ಈ ನಡವಳಿಕೆಯನ್ನು ಬೆಳೆಯಲು ಬಿಡುವುದು ಸರಿಯಲ್ಲವೆಂದು ತಾಯಿ ಯರು ದಶರಥನಿಗೆ ತಿಳಿಸಿದರು. ದಶರಥನು ತನ್ನ ಕೋಣೆಗೆ ಬರುವಂತೆ ಮಕ್ಕಳಿಗೆ ಹೇಳಿ ಕಳಿಸಿದನು. ಹಿಂದೆ, ಹೇಳಿ ಕೇಳಿಸುವ ಮೊದಲೆ ಓಡೋಡಿ ಬರುತ್ತಿದ್ದ ಹುಡುಗರು, ಈಗ ಎಷ್ಟು ಹೊತ್ತಾದರೂ ಬರದಿರುವುದನ್ನು ನೋಡಿ ಆಶ್ಚರ್ಯ ದಿಂದ, ದಶರಥನು ಆಲೋಚನಾಪರನಾಗಿ ತಾನೇ ಮಕ್ಕಳ ಬಳಿಗೆ ಹೋಗಲು ಸಿದ್ಧನಾಗುತ್ತಿರುವಾಗ, ಸೇವಕನು ಬಂದು ಚಿಕ್ಕ ಪ್ರಭುಗಳು ದಯಮಾಡಿಸುತ್ತಿದ್ದಾ ರೆಂದು ಹೇಳಿದನು. ದಶರಥನು ಅಪರಿಮಿತ ಆನಂದದಿಂದ ನಾಲ್ವರು ಮಕ್ಕಳನ್ನೂ ಎದೆಗೆ ಅಪ್ಪಿಕೊಂಡು, ಎರಡು ಪಕ್ಕಗಳಲ್ಲಿಯೂ ಅವರನ್ನು ಕೂರಿಸಿಕೊಂಡು, ಪ್ರವಾಸದ ವಿಶೇಷಗಳನ್ನು ಕೇಳಲು ಮೊದಲು ಮಾಡಿದನು.

ಹಿಂದೆ ಒಂದು ಮಾತಿಗೆ ಹತ್ತು ಮಾತಾಡುತ್ತಿದ್ದ ಮಕ್ಕಳು, ಇಂದು ಹತ್ತು ಮಾತಿಗೆ ಒಂದು ಮಾತೂ ಆಡದೆ ಇರುವುದನ್ನು ನೋಡಿ, ರಾಮನನ್ನು ತೊಡೆಯ ಮೇಲೆ ಕೂರಿಸಿಕೊಂಡು, "ಮಗೂ! ನಿನಗೇನು ಬೇಕು ಹೇಳು? ಏಕೆ ಹೀಗೆ ಮಾತನಾಡದೆ ಮೌನವಾಗಿದ್ದೀಯೆ? ನಿನಗಿಂತಲೂ ಹೆಚ್ಚಿನದು ನನಗೆ ಈ ಲೋಕದಲ್ಲಿ ಬೇರೆ ಏನಿದೆ? ನಿನ್ನ ಇಷ್ಟವೇನಿದೆ ತಿಳಿಸು, ತಪ್ಪದೆ ಕೊಡುತ್ತೇನೆ. ನೀನು ಮೊದಲಿನಂತೆ ತಮ್ಮಂದಿರೊಡನೆ ಸಲಿಗೆಯಿಂದ ಇದ್ದು ಆಟವಾಡದಿದ್ದರೆ ತಮ್ಮಂದಿರಿಗೂ ಬಾಧೆ ಯಾಗುವುದು. ಕಾರಣವೇನು ಹೇಳು," ಎಂದು ಗಲ್ಲವನ್ನು ಹಿಡಿದು ಎಷ್ಟು

ಬಗೆಯಾಗಿ ಕೇಳಿದರೂ ತನಗೇನೂ ಬೇಕಾಗಿಲ್ಲವೆಂದೂ ತಾನು ಆನಂದವಾಗಿಯೇ ಇದ್ದೇನೆಂದೂ ಹೇಳಿದನೆ ಹೊರತು, ಬೇರೆ ಏನನ್ನೂ ಹೇಳಲಿಲ್ಲ. ಈ ವಿಚಿತ್ರ ಚರ್ಯೆಯನ್ನು ನೋಡಿ ದಶರಥನ ತಲೆಯಲ್ಲಿ ಎಲ್ಲಿಲ್ಲದ ಚಿಂತೆ ಆವರಿಸಿತು, ಕಣ್ಣೀರು ಹರಿಯಿತು. ಅದರಿಂದ ಮಕ್ಕಳಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ.

ದಶರಥನು ಕೆಲವು ಒಳ್ಳೆಯ ಮಾತುಗಳನ್ನಾಡಿ, ರಾಜಕುಮಾರರು ಇರಬೇಕಾದ ವಿಧಾನವನ್ನು ಹೇಳಿ, ಹುಡುಗರನ್ನು ಅವರ ವಸತಿಗಳಿಗೆ ಕಳಿಸಿದನು. ಸುಮಂತನನ್ನು ಬರಮಾಡಿಕೊಂಡು ಮಕ್ಕಳಲ್ಲಿ ಆಗಿರುವ ಬದಲಾವಣೆಯನ್ನು ಅವನಿಗೆ ವಿಶದವಾಗಿ ತಿಳಿಸಿ, "ಯಾತ್ರೆಯಲ್ಲಿ ಬಾಲಕರ ಇಷ್ಟಕ್ಕೆ ವಿರುದ್ಧವಾಗಿ ಏನಾದರೂ ನಡೆಯಿತೆ? ಇಲ್ಲವೆ, ಇನ್ನೂ ಯಾತ್ರೆ ಮಾಡಬೇಕೆಂಬ ಅವರ ಉತ್ಸಾಹಕ್ಕೆ ಭಂಗ ಉಂಟಾಯಿತೆ? ಏನಾಯಿತೆನ್ನುವುದನ್ನು ವಿವರವಾಗಿ ಹೇಳು," ಎಂದನು.

ಸುಮಂತನು ಆಶ್ಚರ್ಯವನ್ನೂ ಭಯವನ್ನೂ ಪ್ರಕಟಿಸುತ್ತಾ, "ಪ್ರಭೂ! ಯಾತ್ರೆಯಲ್ಲಿ ಬಾಲಕರಿಗೆ ಯಾವ ಕಷ್ಟವಾಗಲಿ, ಅವರ ಆಶಯಕ್ಕೆ ವಿರುದ್ಧವಾದುದಾಗಲಿ ನಡೆಯಲಿಲ್ಲ. ಬಾಲಕರ ಇಷ್ಟವನ್ನು ಅನುಸರಿಸಿ ದಾನಧರ್ಮಗಳನ್ನಾಗಲಿ, ಯಾತ್ರಿಕರುಗಳಿಗೆ ಅಗತ್ಯವಾದ ಸೌಕರ್ಯಗಳನ್ನೊದಗಿಸುವುದಾಗಲಿ, ಅವರು ಅಪೇಕ್ಷಿಸಿದ ಮರುಕ್ಷಣವೇ ಕಾರ್ಯಗತ ಮಾಡುತ್ತಿದ್ದೆ. ಆ ವಿಷಯದಲ್ಲಿ ತಮಗೆ ಅಸಂತೃಪ್ತಿಯಾಯಿತೆಂದು ಅವರು ಎಂದೂ ಹೇಳಲಿಲ್ಲ. ನನಗೆ ಕೂಡ ಹಾಗೆ ಅನಿಸಲಿಲ್ಲ," ಎಂದು ಪರಿ ಪರಿ ವಿಧವಾಗಿ ಬಿನ್ನವಿಸಿಕೊಳ್ಳುತ್ತಿದ್ದ ಸುಮಂತನನ್ನು ನೋಡಿ ದಶರಥನು, "ಸುಮಂತಾ! ನೀನು ಮಹಾ ಗುಣಶಾಲಿ. ನೀನು ಎಂದೂ ರಾಜ್ಯ ಕಾರ್ಯದಲ್ಲಿ ಅಶ್ರದ್ಧೆಯನ್ನಾಗಲಿ, ತಪ್ಪನ್ನಾಗಲಿ ಮಾಡುವುದಿಲ್ಲವೆನ್ನುವುದು ನನಗೆ ಚೆನ್ನಾಗಿ ಗೊತ್ತು. ಆದರೆ, ಏಕೋ ಏನೋ ಯಾತ್ರೆಯಿಂದ ಬಂದ ಮೇಲೆ ಹುಡುಗರು ಬಹಳ ಬದಲಾವಣೆಯಾಗಿದ್ದಾರೆ. ಆಹಾರ ವಿಹಾರಗಳನ್ನೂ ಬಿಟ್ಟಿದ್ದಾರೆ. ಎಷ್ಟು ವಿಧವಾಗಿ ವಿಚಾರಿಸಿದರೂ ಕಾರಣ ತಿಳಿಸದೆ, ರಾಮನು ಸರಿಯಾಗಿ ಮಾತನ್ನೂ ಆಡದೆ, ವೈರಾಗ್ಯ ತಾಳಿರುವುದನ್ನು ನೋಡಿ ನನಗೆ ಆಶ್ಚರ್ಯವಾಗುತ್ತಿದೆ! ರಾಣಿಯರು ಕೂಡ ಮುಂದೇನಾಗುವುದೊ ಎನ್ನುವ ಭಯದಿಂದ ಒಳಗೊಳಗೇ ಕೊರಗುತ್ತಿದ್ದಾರೆ," ಎಂದು ತಿಳಿಸಲು, ಸುಮಂತನು, "ತಾವು ಒಪ್ಪಿದರೆ ನಾನೊಂದು ಸಾರಿ ಬಾಲಕರನ್ನು ಕಂಡು ವಿಷಯವನ್ನು ತಿಳಿಯುತ್ತೇನೆ" ಎಂದು ಕೋರಿದನು, ದಶರಥನು, "ತಪ್ಪದೆ ಹೋಗಬಹುದು. ಕಾರಣ ತಿಳಿದರೆ ಅದಕ್ಕೆ ಬೇಕಾದ ಕಾರ್ಯವನ್ನು ಸುಲಭವಾಗಿ ಮಾಡಬಹುದು. ಆಲಸ್ಯ ಮಾಡದೆ ಹೊರಡು," ಎಂದು ಅಪ್ಪಣೆ ಮಾಡಿದನು.

ಸುಮಂತನು ಆವೇದನೆಯಿಂದ ಆತುರಾತುರವಾಗಿ ಬಾಲಕರ ವಸತಿಗೆ ಹೋಗಿ ನೋಡಲು ವಸತಿಯ ಒಳಗಿನಿಂದ ಅಗಳಿ ಹಾಕಿತ್ತು. ಮುಂದುಗಡೆ ಪರಿಚಾರಕನೊಬ್ಬ ನಿಂತಿದ್ದನು. ಮಂತ್ರಿಯು ಬಾಗಿಲು ಬಡಿಯುತ್ತಲೆ ಲಕ್ಷ್ಮಣನು ಬಂದು ಬಾಗಿಲು ತೆಗೆದನು. ಸುಮಂತನು ಒಳಗೆ ಹೋಗಿ ಅಗಳಿ ಹಾಕಿ, ಬಾಲಕರೊಡನೆ ಬಹು ವಿಧವಾಗಿ ಸಂಭಾಷಣೆ ನಡೆಸಿದನು. ಏನು ಮಾಡಿದರೂ ಅವನಿಗೆ ಅವರ ನಡೆವಳಿಕೆಯ ಕಾರಣ ಸಿಕ್ಕಲಿಲ್ಲ. ಹುಡುಗರು ಯಾತ್ರೆಯಲ್ಲಿ ತನ್ನೊಂದಿಗಿದ್ದಾಗಿನ ಲವಲವಿಕೆಗೂ ಉಲ್ಲಾಸಕ್ಕೂ ಈಗ ತನ್ನೊಂದಿಗೆ ನಡೆಸುತ್ತಿರುವ ಸಂಭಾಷಣೆಗೂ ಇದ್ದ ಅಗಾಧ ವ್ಯತ್ಯಾಸವನ್ನು ಗಮನಿಸಿ, ಕಣ್ಣೀರು ಸುರಿಸುತ್ತಾ ರಾಮನನ್ನು ಬಹು ವಿಧವಾಗಿ ಬೇಡಿಕೊಂಡನು. ರಾಮನು ಮುಗುಳ್ನಗುತ್ತಾ, "ಸುಮಂತಾ! ಸಹಜವಾದುದಕ್ಕೆ ಕಾರಣವೇನಿರುತ್ತದೆ? ನನಗೆ ಯಾವ ಕೊರತೆಯೂ ಇಲ್ಲ. ಯಾವ ಆಸೆಯೂ ಇಲ್ಲ. ನೀನು ಚಿಂತಿಸುವ ಅಗತ್ಯವಿಲ್ಲ," ಎಂದು ಸಮಾಧಾನ ಪಡಿಸಿದನು.

ಸುಮಂತನು ದಶರಥನ ಬಳಿಗೆ ಬಂದು, ನಾಳೆಯ ದಿನ ಗುರುಗಳನ್ನು ಕರೆಸಿ ಆಲೋಚಿಸುವುದೊಳ್ಳೆಯದು ಎಂದಷ್ಟೆ ಹೇಳಿ, ಅಪ್ಪಣೆ ಪಡೆದು ಹೊರಟನು. ದಶರಥನು ಲೋಕವನ್ನು ಮರೆತು, ಚಿಂತೆಯಲ್ಲಿ ಮುಳುಗಿ ಪರಿಪರಿಯಾಗಿ ಯೋಚಿಸಿದನು. ಕಡೆಗೆ, ಇದು ವಯೋಧರ್ಮ ಬದಲಾವಣೆಯಾಗುವ ಸಮಯವಾದ್ದರಿಂದ ದೇಹದಲ್ಲಾಗುವ ಬದಲಾವಣೆಯನ್ನು ಹೇಳಲು ತಿಳಿಯದೆ, ಮಕ್ಕಳು ಈ ರೀತಿಯಾಗಿ ಉನ್ಮತ್ತ ಸ್ಥಿತಿಯಲ್ಲಿದ್ದಾರೆಂದೂ ಇದು ಬಾಲ್ಯಾವಸ್ಥೆಯಿಂದ ಯೌವನಾವಸ್ಥೆಯನ್ನು ಪ್ರವೇಶಿಸುವ ಸೂಚನೆಯೆಂದೂ ಅವರ ವರ್ತನೆಗೆ ಇದೇ ಕಾರಣವಿರಬೇಕೆಂದೂ ಮನಸ್ಸಿನಲ್ಲಿ ಸ್ಥಿರ ಮಾಡಿಕೊಂಡನು. ರಾಣಿಯರಿಗೂ ಅದನ್ನೇ ಹೇಳಿ, ಶಾಂತಿಯಿಂದ ಇದ್ದನು.

ಬೆಳಗಾಯಿತು, ವಸಿಷ್ಠರು ಬರುವರೆನ್ನುವ ಸುದ್ದಿಯನ್ನು ತಿಳಿದು ರಾಜ ರಾಣಿಯರು ಸರ್ವ ಸಿದ್ಧತೆಯನ್ನೂ ಮಾಡಿಕೊಂಡು ಕಾಯುತ್ತಿರಲು, ವಸಿಷ್ಠರು ಬಂದರು. ಎಲ್ಲರೂ ಗುರುಗಳಿಗೆ ನಮಸ್ಕರಿಸಿ, ಬಾಲಕರ ನಡವಳಿಕೆಯಲ್ಲಿ ಬದಲಾವಣೆಯಾಗಿರುವುದಕ್ಕೆ ಕಾರಣವೇನೆಂದು ಕೇಳುತ್ತಾ ಕಣ್ಣೀರು ಹಾಕಿದರು. ರಾಜರಾಣಿಯರ ಆತಂಕವನ್ನು ಗಮನಿಸಿ, ವಸಿಷ್ಠರು ಯೋಗದೃಷ್ಟಿಯನ್ನು ಹರಿಸಿ, ವಿಚಾರವೇನೆಂದು ಪರಿಶೀಲಿಸಿದರು. "ಹುಡುಗರಲ್ಲಿ ಯಾವ ದೋಷವೂ ಇಲ್ಲ. ಅವರು ಸಾಮಾನ್ಯರಲ್ಲ. ಅವರಿಗೆ ಲೋಕದ ವಾಂಛೆ ಏನೇನೂ ಇಲ್ಲ. ಶುದ್ಧ ಮನಸ್ಕರಾಗಿದ್ದಾರೆ. ನೀವು ಚಿಂತಿಸದಿರಿ, ಮಕ್ಕಳನ್ನು ಇಲ್ಲಿಗೆ ಕರೆಸಿ, ನೀವು ನಿಮ್ಮ ವಸತಿಗೆ ಹೋಗಿ," ಎಂದು ಆಜ್ಞಾಪಿಸಿದರು.

ಅವರ ಮಾತಿನಿಂದ ರಾಜರಾಣಿಯರು ಸಂತಸಗೊಂಡು, ಮಕ್ಕಳಿಗೆ ಹೇಳಿ ಕಳಿಸಿದರು. ರಾಣಿಯರು ಅವರವರ ವಸತಿಗೆ ಹೊರಟರು. ಗುರುಗಳು ಹೇಳಿ ಕಳಿಸಿದ್ದಾರೆಂದು ಕೇಳಿ, ಲಕ್ಷ್ಮಣ, ಭರತ ಶತ್ರುಘ್ನರು ಹೊರಡಲು ಸಿದ್ಧರಾದರು. ಆದರೆ ರಾಮನು ಏನೂ ಆತುರ ತೋರಿಸದೆ ತನ್ನ ಪಾಡಿಗೆ ತಾನು ಇರುವುದನ್ನು ಗಮನಿಸಿ, ಲಕ್ಷ್ಮಣನು ಅಣ್ಣನ ಪಾದಗಳನ್ನು ಹಿಡಿದು, "ಅಣ್ಣಾ, ಬೇಗ ಹೊರಡುವುದೊಳ್ಳೆಯದು. ಇಲ್ಲದಿದ್ದರೆ ಗುರುವಾಜ್ಞೆಯನ್ನು ಮೀರಿದೆವೆನ್ನುವ ವಿಷಯ ತಂದೆ ತಾಯಿಯರನ್ನು ಬಹುವಾಗಿ ಬಾಧಿಸುವುದು," ಎಂದು ಬೇಡಿಕೊಂಡು ಅಣ್ಣನನ್ನು ಒಪ್ಪಿಸಿದನು. ಲಕ್ಷ್ಮಣ, ಭರತ, ಶತ್ರುಘ್ನರು ಅವನೊಂದಿಗೆ ಹೊರಟು ಪೂಜಾ ಮಂದಿರವನ್ನು ಸೇರಿದರು.

ಗುರುಗಳಿಗೆ ನಮಸ್ಕಾರ ಮಾಡಿ, ವಿನಯದಿಂದ ನಿಂತಿದ್ದ ಬಾಲಕರನ್ನು ನೋಡಿ, ವಸಿಷ್ಠರು ಪ್ರೀತಿಯಿಂದ ಹತ್ತಿರ ಬಂದು ಕುಳಿತುಕೊಳ್ಳುವಂತೆ ಹೇಳಿದರು. ಎಲ್ಲರೂ ಹತ್ತಿರ ಹೋಗಿ ಕುಳಿತರು. ರಾಮನನ್ನು ಮತ್ತಷ್ಟು ಹತ್ತಿರ ಬರುವಂತೆ ಹೇಳಿದರು. ಹತ್ತಿರ ಬಂದು ಕುಳಿತ ರಾಮನ ತಲೆಯನ್ನು ನೇವರಿಸಿ, ಬೆನ್ನು ತಟ್ಟುತ್ತಾ, "ರಾಮಾ! ಏಕೆ ಹೀಗೆ ನಿಶ್ಚೇಷ್ಟವಾಗಿ ಮೌನ ವಹಿಸಿದ್ದೀಯೆ? ನಿನ್ನ ಚರ್ಯೆಗಳನ್ನು ಅರ್ಥಮಾಡಿಕೊಳ್ಳಲಾಗದೆ ನಿನ್ನ ತಾಯಿ ತಂದೆಯರು ಅನೇಕ ವಿಧವಾಗಿ ಬಾಧೆ ಪಡುತ್ತಿದ್ದಾರೆ. ನೀನು ಅವರ ಸಂತೋಷವನ್ನೂ ಸ್ವಲ್ಪ ಯೋಚಿಸಬೇಕಲ್ಲವೆ? 'ಮಾತೃ ದೇವೋ ಭವ, ಪಿತೃ ದೇವೋ ಭವ' ಎನ್ನುವ ಮಹಾ ವಾಕ್ಯಗಳ ಅರ್ಥವನ್ನು ಸಹ ಆಚರಣೆಯಲ್ಲಿ ನಿರೂಪಿಸಬೇಕಲ್ಲವೇ?" ಎಂದು ಕೆಲವು ನೀತಿ ಬೋಧನೆ ಪ್ರಾರಂಭಿಸಿದ ವಸಿಷ್ಠರ ಮುಖವನ್ನು ನೋಡಿ, ರಾಮನು ಮುಗುಳ್ನಕ್ಕು, "ಸ್ವಾಮೀ! ತಾಯಿ ಯಾರು? ಮಗ ಯಾರು? ಮುಖ್ಯವಾಗಿ ದೇಹವೆಂದರೇನು? ಜೀವವೆಂದರೇನು? ಈ ಪ್ರಕೃತಿ ಸತ್ಯವೊ, ಪರಮಾತ್ಮ ಸತ್ಯವೊ? ಪ್ರಕೃತಿಯ ಬಿಂಬವೆ ಈ ಕಾಯವಲ್ಲವೆ? ಕಾಯದಲ್ಲಿರುವ ಪಂಚ ಭೂತಗಳೇ ಅಲ್ಲವೆ ಲೋಕವೆಲ್ಲಾ ತುಂಬಿರುವುದೂ ಕೂಡ? ಪಂಚಭೂತಗಳ ಸಮ್ಮಿಳಿತವೇ ಈ ಪ್ರಕೃತಿ! ಈ ಭೂತಗಳು ಮಾರ್ಪಾಟು ಹೊಂದುತ್ತವಲ್ಲವೆ? ಅಂಥವುಗಳನ್ನು ಸತ್ಯವೆಂದು ತಿಳಿದು ಭ್ರಮಿಸಿ, ವರಿಸಿ, ಸತ್ಯ ನಿತ್ಯವಾದ ಆತ್ಮವನ್ನು ಸ್ಮರಿಸದಿರುವುದರಿಂದ ಜೀವಿಗಳಿಗೆ ಬರುವ ಫಲವೇನು?" ಎಂದು ಅನೇಕ ರೀತಿಯ ಪ್ರಶ್ನೆಗಳನ್ನು ಹಾಕಲು ಮೊದಲು ಮಾಡಿದನು.

ರಾಮನನ್ನು ನೋಡುತ್ತಿದ್ದಂತೆ ಅವನ ಮುಖದಿಂದ ಅತ್ಯಂತ ತೇಜಸ್ಸಿನಿಂದ ಕೂಡಿದ ಪ್ರಕಾಶಮಾನವಾದ ಕಾಂತಿ ಕಿರಣಗಳು ಹೊರಹೊಮ್ಮುತ್ತಿದ್ದುದನ್ನು ಗುರುಗಳು ಗಮನಿಸಿದರು. ಇದೆಲ್ಲವೂ ದೈವತ್ವವು ಪ್ರಕಟವಾಗುವುದಕ್ಕೆ ಚಿಹ್ನೆಗಳೆಂದು

ತಿಳಿದು ವಸಿಷ್ಠರು, ರಾಮನು ಕೇಳಿದ ಪ್ರಶ್ನೆಗಳಿಗೆ ಅವನೇ ಉತ್ತರ ಹೇಳುವಂತೆ ಕೇಳಿದರು. ರಾಮನದು ಸಾಕ್ಷಾತ್ ದೈವವಾಣಿ ಎನ್ನುವುದನ್ನು ಸಂಪೂರ್ಣವಾಗಿ ನಂಬಿದ ವಸಿಷ್ಠರು ಅವನಿಗೆ ಮನಸ್ಸಿನಲ್ಲೇ ನಮಸ್ಕರಿಸಿ, "ಮಗೂ! ತಿರುಗಿ ಸಾಯಂಕಾಲ ನಿನ್ನನ್ನು ನೋಡುತ್ತೇನೆ," ಎಂದು ಹೇಳಿ, ಎಲ್ಲರ ಶಿರಸ್ಸನ್ನೂ ಮುದ್ದಾಡಿ, ಆಶೀರ್ವದಿಸಿ, ದಶರಥನನ್ನು ನೋಡದೆ, ನೇರವಾಗಿ ಆಶ್ರಮಕ್ಕೆ ಹೊರಟು ಹೋದರು.

ದಶರಥನು ಮಕ್ಕಳನ್ನು ಕಂಡಾಗ ಅವರಲ್ಲಿ ಬ್ರಹ್ಮ ತೇಜಸ್ಸು ಮೂರ್ತೀಭವಿಸಿ ದಂತೆ ಪ್ರಕಾಶಿಸುತ್ತಿತ್ತು. ಸಾಯಂಕಾಲ ವಸಿಷ್ಠರು ಬರುವುದನ್ನೇ ಎಲ್ಲರೂ ಕಾಯು ತ್ತಿದ್ದರು. ಗುರುಗಳು ಪೂಜಾಗೃಹವನ್ನು ಪ್ರವೇಶಿಸುತ್ತಲೇ ತಾಯಿಯರು ಮಕ್ಕಳು ಮತ್ತು ದಶರಥನೊಂದಿಗೆ ಬಂದು ನಮಸ್ಕಾರ ಮಾಡಿ, ತಮ್ಮ ಆಸನಗಳಲ್ಲಿ ಕೈಜೋಡಿಸಿಕೊಂಡು ಕುಳಿತರು. ಆಗ, ರಾಮನು ಗುರುಗಳನ್ನುದ್ದೇಶಿಸಿ, "ಜೀವಿ, ದೇವರು, ಪ್ರಕೃತಿ, ಈ ಮೂರಕ್ಕೂ ಇರುವ ಸಂಬಂಧವೇನು? ಈ ಮೂರೂ ಒಂದೇಯೋ ಅಥವಾ ಬೇರೆ ಬೇರೆಯೋ? ಒಂದೇ ಆದರೆ, ಅದು ಈ ಮೂರು ರೂಪ ಧರಿಸಲು ಕಾರಣವೇನು? ಜೀವ, ಈಶ್ವರ, ಪ್ರಕೃತಿಯಲ್ಲಿ ಏಕತ್ವ ಯಾವುದು? ಏಕತ್ವವನ್ನು ಬಿಟ್ಟು ಭಿನ್ನತ್ವವನ್ನು ನಿತ್ಯ ಸತ್ಯವೆಂದು ನಂಬಿದರೆ ಆಗುವ ಪರಿಣಾಮ ವೇನು?" ಎಂದು ಕೇಳಲಾರಂಭಿಸಿದನು.

ಅವನ ಪ್ರಶ್ನೆಗಳನ್ನು ಕೇಳಿ ತಂದೆ ತಾಯಿಯರು ಆಶ್ಚರ್ಯದಿಂದ ಅವನನ್ನು ನೋಡಿದರು. ಜ್ಞಾನವೇ ದಿವಿಯಿಂದ ಬುವಿಗೆ ಇಳಿದು ಬಂದು ಮೂರ್ತೀಭವಿಸಿ ದಂತೆ ತೇಜಸ್ಸಿನಿಂದ ರಾಮನು ಬೆಳಗಿದನು. ಸ್ಪಷ್ಟವಾದ ವಜ್ರದಂಥ ಮಾತುಗಳಿಂದ ಪ್ರವಹಿಸುತ್ತಿದ್ದ ರಾಮ ವಸಿಷ್ಠರ ಪ್ರಶ್ನೋತ್ತರ ವಾಹಿನಿಯಲ್ಲಿ ಅವರು ಮುಳುಗಿದರು. ರಾಮನು ಮಗನೆನ್ನುವ ಭಾವನೆಯೇ ಸ್ವಲ್ಪ ಕಾಲ ಅವರಲ್ಲಿ ಮರೆಯಾಯಿತು. ಶುದ್ಧ ಜ್ಞಾನವನ್ನೇ ಅದ್ವೈತವನ್ನೇ ಆಡುತ್ತಾ ರಾತ್ರಿ ಜಾವಗಳು ಕಳೆದರೂ ಅವರ ವಾದ ಮುಗಿಯಲಿಲ್ಲ. ಕಡೆಗೆ, ಗುರುಗಳು ರಾಮಚಂದ್ರನ ಮಾತುಗಳು ಲೋಕಕ್ಕೆ ಶಾಂತಿಯನ್ನು ನೀಡುವ ಅಮೃತ ಬಿಂದುಗಳೆಂದು ಹೇಳಿ, ದಶರಥ ಸಮೇತರಾಗಿದ್ದ ರಾಣಿಯರನ್ನು ಆಶೀರ್ವದಿಸಿ, ಆಶ್ರಮಕ್ಕೆ ಹೊರಟರು. ಹೀಗೆ ನಡೆದ ರಾಮ ವಸಿಷ್ಠರ ಸಂಭಾಷಣೆಯೇ ಇಂದು ಲೋಕದಲ್ಲಿ 'ಯೋಗವಾಸಿಷ್ಠ' ಎನ್ನುವ ಹೆಸರಿನಿಂದ ಸಾರ್ಥಕವಾಗಿದೆ. ಇದನ್ನೇ 'ರಾಮಗೀತೆ' ಎಂದು ಕೂಡ ಹೇಳುವರು.

ಹೀಗೆ, ರಾಮನು ವೇದಾಂತದಲ್ಲಿ ಮುಳುಗಿ, ಸರ್ವವನ್ನೂ ತ್ಯಜಿಸಿ, ತನ್ನಲ್ಲೆ ತಾನು ಮಾತನಾಡಿಕೊಳ್ಳುತ್ತಾ ಕೈ ಆಡಿಸುತ್ತಾ ಉನ್ಮತ್ತನಂತೆ ಆಗಾಗ ನಗುತ್ತಾ ಇರುವುದನ್ನು

ಗಮನಿಸಿ, ಅವನಿಂದಾಗಿ ಬೇರೆ ಮಕ್ಕಳೂ ಹಾಗೆಯೇ ಆಗುವರೋ ಎಂದು ಹೆದರಿ, ಅವರನ್ನು ಬೇರೆ ಇಡಲು ಪ್ರಯತ್ನಿಸಿದರು. ಆದರೆ ಅವರು ಒಪ್ಪದೆ, ನಿರಂತರವೂ ರಾಮನೊಂದಿಗೇ ಇರುತ್ತಿದ್ದರು. ರಾಜರಾಣಿಯರು ದಿನ ದಿನವೂ ಚಿಂತೆಯಿಂದ ಕೊರಗುತ್ತಿದ್ದರು. ತಾವು ಭಾವಿಸಿದ್ದೆಲ್ಲಾ ಸ್ವಪ್ನ ದೃಶ್ಯಗಳಾಗುವುವೇನೋ ಮಕ್ಕಳಲ್ಲಿ ಯಾವಾಗ ಒಳ್ಳೆಯ ಬದಲಾವಣೆಯಾಗುವುದೋ ಎಂದು ನಿಮಿಷ ನಿಮಿಷಗಳನ್ನು ಎಣಿಸುತ್ತಾ ಕಾಲ ಕಳೆಯುತ್ತಿದ್ದರು. ರಾಮನು ಸರಿಯಾಗಿ ಆಹಾರ ತೆಗೆದುಕೊಳ್ಳದಿದ್ದುದರಿಂದ, ಅವನ ದೇಹವು ಸ್ವಲ್ಪ ಬಲಹೀನವಾದಂತೆ ಕಾಣಿಸುತ್ತಿತ್ತು.

# ೬ ಯಾಗ ರಕ್ಷಣೆ, ಮೊದಲ ಗೆಲುವು

ಅದೇ ಸಮಯದಲ್ಲಿ, ಅಯೋಧ್ಯೆಗೆ ಪೂರ್ವ ದಿಕ್ಕಿನಲ್ಲಿದ್ದ ಅರಣ್ಯದಲ್ಲಿ ವಿಶ್ವಾಮಿತ್ರ ಮಹರ್ಷಿಯು ಘೋರ ತಪಸ್ಸು ಮಾಡುತ್ತಾ ಒಂದು ಪವಿತ್ರ ಯಾಗವನ್ನು ಪ್ರಾರಂಭಿಸಿ, ಅಸುರರು ಅಡ್ಡಿಪಡಿಸುತ್ತಿದ್ದರಿಂದ ಎಷ್ಟು ಪ್ರಯತ್ನಿಸಿದರೂ ಅದನ್ನು ಪೂರ್ಣಗೊಳಿಸಲಾಗಿರಲಿಲ್ಲ. ಅಸುರರು ಆ ಯಾಗದ ಪ್ರದೇಶವನ್ನು ಅಪವಿತ್ರಗೊಳಿಸುತ್ತಿದ್ದರು. ಅಲ್ಲಿ ಮಾಂಸದ ತುಂಡುಗಳನ್ನು ಚೆಲ್ಲಿ ಅವರ ಯಾಗವನ್ನು ನಾನಾ ರೀತಿಯಲ್ಲಿ ಭಂಗಗೊಳಿಸುತ್ತಿದ್ದರು. ವಿಶ್ವಾಮಿತ್ರರು ಬಹಳವಾಗಿ ಯೋಚಿಸಿ ಆಶ್ರಮದಿಂದ ಹೊರಟು ದೀರ್ಘ ಪ್ರಯಾಣದ ನಂತರ ಅಯೋಧ್ಯಾ ನಗರವನ್ನು ಸೇರಿದರು.

ಮಹರ್ಷಿಯ ಆಗಮನದ ವಾರ್ತೆಯನ್ನು ತಿಳಿದು ಮಹಾರಾಜನು ಮಂತ್ರಿಗಳನ್ನು ಕರೆದು, ಅವರನ್ನು ತಕ್ಕ ಗೌರವಗಳಿಂದ ಸ್ವಾಗತಿಸುವಂತೆ ಆಜ್ಞಾಪಿಸಿದನು. ಅದರಂತೆ ಅವರುಗಳು ಪುರಸಿಂಹದ್ವಾರದಲ್ಲಿ ಮಹರ್ಷಿಯನ್ನು ಸ್ವಾಗತಿಸಿ, ರಾಜಭವನಕ್ಕೆ ಕರೆದೊಯ್ದುದರು. ಸರ್ವಸಿದ್ಧತೆಗಳಿಂದ ಕಾಯುತ್ತಿದ್ದ ದಶರಥ ಮಹಾರಾಜನು, ಬ್ರಾಹ್ಮಣರು ಸ್ವಸ್ತಿ ವಾಚನ ಹೇಳುತ್ತಿರಲು, ಮುನಿಯ ಪಾದಗಳನ್ನು ತೊಳೆದು, ಶಾಸ್ತ್ರ ವಿಧಿಯನ್ನೂ ಸಂಪ್ರದಾಯವನ್ನೂ ಅನುಸರಿಸಿ, ಜಲವನ್ನು ಶಿರಸ್ಸಿನ ಮೇಲೆ ಪ್ರೋಕ್ಷಿಸಿಕೊಂಡು ಒಳಗೆ ಕರೆದುಕೊಂಡು ಹೋಗಿ ಉನ್ನತಾಸನದಲ್ಲಿ ಕುಳ್ಳಿರಿಸಿ,

"ಈ ದಿನ ಮಹಾ ಸುದಿನ! ಮಹಾ ಮುನಿಗಳು ಅನಿರೀಕ್ಷಿತವಾಗಿ ದಯಮಾಡಿಸಿ, ನಮ್ಮ ಸೇವೆಯನ್ನು ಸ್ವೀಕರಿಸುತ್ತಿರುವುದು ನಮ್ಮ ಭಾಗ್ಯ," ಎಂದು ಆನಂದವನ್ನು ಬಿನ್ನವಿಸಿದನು. ವಿಶ್ವಾಮಿತ್ರರು ರಾಜನನ್ನೂ ಮಂತ್ರಿಗಳನ್ನೂ ಕುಳಿತುಕೊಳ್ಳುವಂತೆ ಆಜ್ಞಾಪಿಸಿದರು. ಮುನಿಯ ಆಜ್ಞೆಯಂತೆ ಎಲ್ಲರೂ ಅವರವರ ಆಸನಗಳಲ್ಲಿ ಕುಳಿತರು.

ವಿಶ್ವಾಮಿತ್ರರು ದಶರಥನನ್ನು ಕುಶಲ ಪ್ರಶ್ನೆ ಮಾಡಿದರು. ರಾಜ್ಯಪಾಲನಾ ಕಾರ್ಯದಲ್ಲಿ ಯಾವ ತೊಂದರೆಯೂ ಇಲ್ಲದೆ, ಪ್ರಜಾಕ್ಷೇಮಕ್ಕೆ ಯಾವ ಕೊರತೆಯೂ ಇಲ್ಲದೆ, ರಾಜ್ಯವು ಸುಖ ಶಾಂತಿ ಭದ್ರತೆಗಳಿಂದ ಇದೆಯೇ ಎಂದು ರಾಜ್ಯಸ್ಥಿತಿಯನ್ನೂ ಪ್ರಜಾಕ್ಷೇಮವನ್ನೂ ವಿಚಾರಿಸಿದರು. ದಶರಥನು, "ದೈವಾನುಗ್ರಹದಿಂದಲೂ ಮಹರ್ಷಿಗಳ ಆಶೀರ್ವಾದದಿಂದಲೂ ರಾಜ್ಯದಲ್ಲಿ ಯಾವ ರೀತಿಯ ಅಶಾಂತಿಯೂ ಇಲ್ಲದೆ ಪ್ರಜೆಗಳು ತಮ್ಮ ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸುತ್ತಿದ್ದಾರೆ. ರಾಜ್ಯ ಪರಿಪಾಲನೆಯೂ ಸಹ ಪ್ರಜಾಕ್ಷೇಮವನ್ನೇ ಲಕ್ಷ್ಯದಲ್ಲಿಟ್ಟುಕೊಂಡು, ಸೇವಾ ಭಾವನೆಯಿಂದ ನಡೆಯುತ್ತಿದೆ," ಎಂದು ಬಿನ್ನವಿಸಿದನು.

ನಂತರ, ಮಹರ್ಷಿಗೆ ರಾಜೋಚಿತ ಉಪಚಾರಗಳನ್ನು ಮಾಡಿ, ಅವರ ಆಗಮನಕ್ಕೆ ಕಾರಣ ಏನೆಂದು ವಿಚಾರಿಸಿ, ಅವರ ಅಭೀಷ್ಟವನ್ನು ನೆರವೇರಿಸಲು ತಾನು ಸರ್ವಸಿದ್ಧವಾಗಿರುವುದಾಗಿಯೂ ತನ್ನಿಂದ ಆಗಬೇಕಾದ ಸೇವೆ ಏನಿದ್ದರೂ ಶಿರಸಾ ವಹಿಸಿ ನೆರವೇರಿಸುವುದಾಗಿಯೂ ಭಕ್ತಿ ಶ್ರದ್ಧೆಗಳಿಂದ ಬಿನ್ನವಿಸಿದನು. ವಿಶ್ವಾಮಿತ್ರರು ರಾಜನ ಕಡೆ ದೃಷ್ಟಿಯನ್ನು ಹರಿಸಿ, ಅವನ ಮಾತಿಗೆ ತಲೆದೂಗುತ್ತಾ ಮುಗುಳ್ನಗುತ್ತಿದ್ದರು. ನಂತರ, ದಶರಥನನ್ನು ಕುರಿತು, "ರಾಜಾ! ನೀನು ಮಹಾ ಧರ್ಮಪರನೆನ್ನುವುದನ್ನೂ ಅತಿಥಿ ಅಭ್ಯಾಗತರನ್ನು ಆದರಿಸುವ ಶ್ರದ್ಧೆ ನಿನ್ನಲ್ಲಿ ಮೂರ್ತೀಭವಿಸಿದೆಯೆನ್ನುವುದನ್ನೂ ನೀನು ಸರ್ವವಿದ್ಯಾ ಪಾರಂಗತನೆನ್ನುವುದನ್ನೂ ನಾನು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ. ಲೋಕ ಕ್ಷೇಮವೇ ನಿನ್ನ ಗುಣಕ್ಕೆ ಸರಿಯಾದ ಸಾಕ್ಷಿಯಾಗಿದೆ. ಪಾಲಕರೆಂಥವರೋ ಪ್ರಜಾಲೋಕ ಅಂಥದಾಗುವುದು. ಲೋಕದ ಪ್ರಶಾಂತಿ, ಅಶಾಂತಿಗಳು ಪಾಲಕರ ಒಳ್ಳೆಯದು, ಕೆಟ್ಟದ್ದನ್ನು ವ್ಯಕ್ತಪಡಿಸುವುವು. ನಾನು ಎಲ್ಲಿ ವಿಚಾರಿಸಿದರೂ ಪ್ರಜಾ ಪ್ರೀತಿಯುಳ್ಳ ಪ್ರಭುವೂ ಪ್ರಭು ಪ್ರೀತಿಯುಳ್ಳ ಪ್ರಜೆಗಳೂ ಅಯೋಧ್ಯೆಯಲ್ಲಿ ಮಾತ್ರವೇ ಇರುವರೆನ್ನುವ ಕರ್ಣಾನಂದಕರವಾದ ವಾರ್ತೆಯು ಕೇಳಿ ಬರುತ್ತಿತ್ತು. ಆದ್ದರಿಂದ, ನಿನ್ನ ಮಾತುಗಳು ನೇರವಾಗಿ ಹೃದಯದಿಂದ ಬರುವ ಮಾತುಗಳು. ನೀನು ತಪ್ಪದೆ ನನ್ನ ಅಭೀಷ್ಟವನ್ನು ನೆರವೇರಿಸುವೆಯೆನ್ನುವುದರಲ್ಲಿ ನನಗೆ ಎಷ್ಟು ಮಾತ್ರಕ್ಕೂ ಸಂಶಯವಿಲ್ಲ. ನೀನು ಆಡಿದ ಮಾತಿಗೆ ತಪ್ಪುವುದಿಲ್ಲ," ಎಂದರು.

ಅವರಾಡಿದ ಮಾತುಗಳು ದಶರಥನ ಹೃದಯವನ್ನು ಕಲಕಿತು. "ಮಹನೀಯರುಗಳು ಲೋಕೋದ್ಧಾರವಾದ ಕಾರ್ಯಗಳನ್ನೇ ಮಾಡುವರು. ಅವರು ಏನು ಮಾಡಿದರೂ ಅದು ಶಾಸ್ತ್ರ ಸಮ್ಮತವೇ! ಕಾರಣವಿಲ್ಲದ ಕಾರ್ಯವನ್ನಾಗಲಿ, ದೈವ ಸಮ್ಮತವಲ್ಲದ ಕಾರ್ಯವನ್ನಾಗಲಿ ಅವರು ಯೋಚಿಸರು, ಅಲ್ಲವೆ? ತಮ್ಮ ಸೇವೆಗಾಗಿ ನಾನೂ ನನ್ನ ಪರಿವಾರವೂ ಸದಾ ಆಜ್ಞಾಬದ್ಧರಾಗಿರುವೆವು," ಎಂದು ಮತ್ತೆ ಮತ್ತೆ ದಶರಥನು ಪ್ರತಿಜ್ಞೆ ಮಾಡುತ್ತಿದ್ದುದನ್ನು ನೋಡಿದ ವಿಶ್ವಾಮಿತ್ರರು, "ರಾಜಾ! ನೀನು ಹೇಳಿದ ಹಾಗೆ, ಕಾರಣವಿಲ್ಲದೆಯೇ ಮಹನೀಯರು ಕಾಲು ಕದಲಿಸರು. ನಾನೊಂದು ಕಾರ್ಯ ನಿಮಿತ್ತವಾಗಿ ನಿನ್ನಲ್ಲಿಗೆ ಬಂದಿದ್ದೇನೆ. ನಿನ್ನ ಮಾತನ್ನು ಕೇಳಿ, ನೀನು ನನ್ನ ಕಾರ್ಯವನ್ನು ನೆರವೇರಿಸುತ್ತೀಯೆನ್ನುವ ಆನಂದವು ನನ್ನನ್ನು ಮತ್ತಷ್ಟು ಹುರಿದುಂಬಿಸುತ್ತಿದೆ. ನಿನ್ನ ಮಾತನ್ನು ನೀನು ಉಳಿಸಿಕೊಳ್ಳುವೆಯಲ್ಲವೆ?" ಎಂದು ಸ್ವಲ್ಪ ಸಂಶಯದಿಂದ ಪ್ರಶ್ನಿಸಿದ್ದನ್ನು ಕೇಳಿ, ದಶರಥನು, "ಸ್ವಾಮೀ! ಇಂಥ ಪ್ರಶ್ನೆಯನ್ನು ನೀವು ಇತರರಿಗೆ ಕೇಳಬಹುದೇ ವಿನಾ ದಶರಥನು ಆಡಿದ ಮಾತಿಗೆ ತಪ್ಪುವವನಲ್ಲ. ಪ್ರಾಣವನ್ನಾದರೂ ಕೊಟ್ಟು ಮಾನವನ್ನು ಕಾಪಾಡಿಕೊಳ್ಳುವನು. ರಾಜನಿಗೆ ನೀತಿ ನಿಜಾಯತಿಗಳೇ ನಿಜ ಗೌರವ, ನಿಜ ಪಾಲನೆ. ಈ ಎರಡೂ ನಾಶವಾದರೆ, ರಾಜ್ಯವು ಜ್ಯೋತಿ ಇಲ್ಲದ ಮಂದಿರದಂತೆ, ಕೋತಿ ಆಟಕ್ಕೆ ಗುರಿಯಾಗಿ, ಅನಾಯಕತ್ವಕ್ಕೆ ಗುರಿಯಾಗುವುದು, ಕಲಹಗಳಿಗೆ ಆಶ್ರಯವಾಗುವುದು, ಆಂದೋಳನಕ್ಕೆಡೆಮಾಡಿಕೊಡುವುದು, ಕೊನೆಗೆ ರಾಜನಿಗೇ ಕೇಡು ಸಂಭವಿಸುವುದು. ಅಂಥ ಸ್ಥಿತಿ ನನ್ನ ರಾಜ್ಯಕ್ಕೆ ಬರುವುದೆಂದು ಕನಸಿನಲ್ಲಿ ಕೂಡ ನಾನು ನಿರೀಕ್ಷಿಸುವುದಿಲ್ಲ. ನಾನೇ ಅಲ್ಲ, ನನ್ನ ವಂಶದ ಆಡಳಿತದಲ್ಲೇ ಅಂಥ ದುಷ್ಕೃತ್ಯಗಳು ಈ ರಾಜ್ಯದಲ್ಲಿ ನಡೆಯವು. ರಾಜ್ಯಕ್ಕೆ ಅಂಥ ದುಃಸ್ಥಿತಿ ಬರದು ಎನ್ನುವುದೇ ನನ್ನ ದೃಢವಾದ ನಂಬಿಕೆ. ಸಂಶಯ ಪಡದೆ, ತಾವು ತಮ್ಮ ಸಂಕಲ್ಪವನ್ನು ತಿಳಿಸಿ, ಈ ದಾಸನಿಂದ ಸೇವೆ ಮಾಡಿಸಿಕೊಳ್ಳಿ," ಎಂದು ನಮಸ್ಕರಿಸಿದನು.

ಅಗ, ವಿಶ್ವಾಮಿತ್ರರು, "ರಾಜಾ! ನೀನು ಏನನ್ನುವೆಯೋ ನೋಡೋಣ ಎಂದು ಹಾಗೆ ಪ್ರಶ್ನಿಸಿದೆನಲ್ಲದೆ, ಇಕ್ಷ್ವಾಕು ವಂಶವು ಇಷ್ಟಾರ್ಥಗಳನ್ನು ನೆರವೇರಿಸುವುದಕ್ಕೆ ಸರ್ವ ವಿಧದಲ್ಲೂ ಸಂಸಿದ್ಧವಾದ ವಂಶ ಎನ್ನುವುದು ನನಗೆ ಗೊತ್ತಿದೆ. ರಾಜಾ! ನಿನ್ನಿಂದ ನಾನು ಪಡೆಯ ಬಯಸಿರುವುದು ಒಂದನ್ನು ಮಾತ್ರವೇ. ಅದು ಧನವಲ್ಲ, ವಾಹನವಲ್ಲ, ಗೋವುಗಳಲ್ಲ, ಸುವರ್ಣವಲ್ಲ, ಸೈನ್ಯವಾಗಲೀ ಪರಿವಾರವಾಗಲೀ ಅಲ್ಲ. ನಿನ್ನ ಮಕ್ಕಳಾದ ರಾಮ ಲಕ್ಷ್ಮಣರನ್ನು ನನಗಿತ್ತರೆ ಸಾಕು. ಇದೇ ನನ್ನ ಅಪೇಕ್ಷೆ. ಅದಕ್ಕೇನೆನ್ನುತ್ತೀ?" ಎಂದು ಹೇಳುತ್ತಲೇ ದಶರಥನು ಕೇಳಿ ನಿಲ್ಲಲಾರದೆ ಹೋದನು. ಮನಸ್ಸು ತತ್ತರಿಸಿತು. ಆದರೂ ಧೈರ್ಯ ತಂದುಕೊಂಡು, "ಸ್ವಾಮೀ,

ಆ ಬಾಲಕರಿಂದ ನಿಮಗಾಗುವ ಪ್ರಯೋಜನವೇನು? ಯಾವ ಕಾರ್ಯವನ್ನು ಆ ಬಾಲಕರಿಂದ ಮಾಡಿಸಿಕೊಳ್ಳಬೇಕೆಂದು ಮಾಡಿದ್ದೀರೋ ಅದನ್ನು ನಾನೇ ಮಾಡಿ ಧನ್ಯನಾಗುತ್ತೇನೆ. ಆ ಕಾರ್ಯ ಯಾವುದೋ ಹೇಳಿದರೆ, ಅದನ್ನು ಕೇಳಿ ಸಂತೋಷಿಸುತ್ತೇನೆ," ಎಂದು ಪ್ರಾರ್ಥಿಸಿದನು.

ವಿಶ್ವಾಮಿತ್ರರು, "ರಾಜಾ! ಆ ಬಾಲಕರು ಮಾಡುವ ಘನಕಾರ್ಯವನ್ನು ನೀವು ಯಾರೂ ಮಾಡಲಾರಿರಿ ಎಂದೇ ನನ್ನ ದೃಢವಾದ ನಂಬಿಕೆ. ನೀನಾಗಲೀ ನಿನ್ನ ಲಕ್ಷೋಪಲಕ್ಷ ಸೈನಿಕರಿಂದ ಕೂಡಿದ ಸೈನ್ಯವಾಗಲೀ ಮಾಡಲಾಗದ, ಸಾಧಿಸಲಾಗದ ಕಾರ್ಯವನ್ನು ಆ ಇಬ್ಬರೂ ಬಾಲಕರು ಮಾತ್ರವೇ ಮಾಡಬಲ್ಲರು! ಅಂಥವರು ಲೋಕದಲ್ಲಿ ಎಂದೂ ಹುಟ್ಟಿಲ್ಲ, ಹುಟ್ಟುವುದೂ ಇಲ್ಲ. ಇದು ನನ್ನ ನಿರ್ಧಾರ. ಕೇಳು, ನಾನೊಂದು ಮಹಾಯಾಗವನ್ನು ಸಂಕಲ್ಪಿಸಿ, ಅದನ್ನು ಪ್ರಾರಂಭಿಸಿದೊಡನೆಯೇ ಎಲ್ಲಿಂದಲೋ ರಾಕ್ಷಸರು ಬಂದು, ಅದಕ್ಕೆ ವಿಘ್ನ ಉಂಟುಮಾಡುತ್ತಾ ನಾನಾ ಅಶುದ್ಧಗಳನ್ನು ತಂದು ಹಾಕುತ್ತಿದ್ದಾರೆ. ಆದ್ದರಿಂದ, ಅವರು ಆ ರಾಕ್ಷಸರ ಕಿರುಕುಳ ವನ್ನು ತಪ್ಪಿಸಿ, ನನ್ನ ಯಾಗವನ್ನು ರಕ್ಷಿಸಿ, ಪೂರ್ತಿಗೊಳಿಸಬೇಕು. ಇದೇ ನನ್ನ ಅಭಿಲಾಷೆ. ಏನನ್ನುತ್ತೀ?" ಎಂದು ಗಂಭೀರವಾಗಿ ಪ್ರಶ್ನಿಸಿದರು.

ದಶರಥನು, "ಸ್ವಾಮೀ! ಈ ಕಾರ್ಯವು ಈ ಹಸುಳೆಗಳಿಂದ ಸಾಧ್ಯವಿಲ್ಲ, ನಾನು ಸಿದ್ಧವಾಗಿದ್ದೇನೆ. ಚತುರಂಗ ಬಲ ಸಮೇತನಾಗಿ ನಾನು ತಮ್ಮ ಆಶ್ರಮವನ್ನು ಕಾಪಾಡಿ ಯಜ್ಞವು ನಿರ್ವಿಘ್ನವಾಗಿ ಜರುಗುವಂತೆ ನೋಡಿಕೊಳ್ಳುತ್ತೇನೆ. ದೇವಾಸುರ ರೊಂದಿಗೆ ಹೋರಾಡಿದ ಅನುಭವವು ನನಗೆ ಚೆನ್ನಾಗಿ ಇರುವುದರಿಂದ, ಇದು ಸುಲಭವಾಗಿ ನೆರವೇರುವುದು. ಈಗಲೇ ತಮ್ಮೊಂದಿಗೆ ಬರಲು ಎಲ್ಲ ಏರ್ಪಾಟು ಗಳನ್ನು ಮಾಡುತ್ತೇನೆ. ಅಪ್ಪಣೆ ಕೊಡಿ," ಎಂದು ಪ್ರಾರ್ಥಿಸಿದನು.

ವಿಶ್ವಾಮಿತ್ರರು, "ರಾಜಾ! ನೀನು ಏನು ಹೇಳಿದರೂ ನನ್ನ ಮನಸ್ಸು ಒಪ್ಪುತ್ತಿಲ್ಲ. ಇದು ನಿನ್ನಿಂದಾಗದು. ಸರ್ವಜ್ಞನೂ ಸರ್ವಶಕ್ತಿ ಸಂಪನ್ನನೂ ಆದ ನನಗೇ ಇದು ಸಾಧ್ಯವಾಗಿಲ್ಲ. ಇನ್ನು ನಿನಗೆ ಹೇಗೆ ಸಾಧ್ಯವಾದೀತು? ಆ ಬಾಲಕರು ಸಾಮಾನ್ಯ ರೆಂದು ನೀನು ಭಾವಿಸಿದ್ದೀಯೆ. ಇದು ಪುತ್ರವಾತ್ಸಲ್ಯದಿಂದುಂಟಾಗಿರುವ ದೋಷ. ಇವರು ಮೂರ್ತೀಭವಿಸಿರುವ ದೈವ ಶಕ್ತಿ ಎನ್ನುವುದು ನನಗೆ ಚೆನ್ನಾಗಿ ಗೊತ್ತು. ಸಂಶಯಪಡದೆ, ನಿನ್ನ ಮಾತನ್ನುಳಿಸಿಕೊಳ್ಳಲು ಅವರನ್ನು ತಕ್ಷಣವೇ ನನ್ನ ಜೊತೆ ಕಳುಹಿಸು. ಇಲ್ಲದಿದ್ದರೆ ಕೊಟ್ಟ ಮಾತನ್ನುಳಿಸಿಕೊಳ್ಳಲಾರೆ ಎಂದು ಹೇಳಿಬಿಡು, ಹೋಗುತ್ತೇನೆ. ಎರಡರಲ್ಲಿ ಯಾವುದಾದರು ಒಂದನ್ನು ಹೇಳು. ಕಾಲಹರಣ ಮಾಡುವ ಸಮಯವು ಇದಲ್ಲ," ಎಂದು ತೀಕ್ಷ್ಣ ಮಾತುಗಳನ್ನು ಆಡಿದ ಮುನಿ

ಯನ್ನು ನೋಡಿ ದಶರಥನು ಏನು ಪ್ರಮಾದವು ಸಂಭವಿಸಿಬಿಡುವುದೋ ಎಂದು ಭಯಭ್ರಾಂತನಾಗಿ, ಮಂತ್ರಿಗಳನ್ನು ಕಳಿಸಿ ವಸಿಷ್ಠರನ್ನು ಬರಮಾಡಿಕೊಂಡನು.

ವಸಿಷ್ಠರು ವಿಶ್ವಾಮಿತ್ರರನ್ನು ನೋಡಿ ಪರಸ್ಪರ ನಕ್ಕು, ಅವರಿಗೆ ಕೃತಜ್ಞತೆಯನ್ನು ಹೇಳಿ ಕುಳಿತು, ಜರುಗಿದ ಸಂಗತಿಯನ್ನೆಲ್ಲಾ ವಿವರವಾಗಿ ರಾಜನಿಂದ ಕೇಳಿ ತಿಳಿದರು. ಬಾಲಕರ ವಿಷಯವು ವಸಿಷ್ಠರಿಗೂ ಚೆನ್ನಾಗಿ ತಿಳಿದಿತ್ತಾದ್ದರಿಂದ, ದಶರಥನಿಗೆ ಏನನ್ನೂ ಮರೆಮಾಚದಂತೆ ಎಲ್ಲವನ್ನೂ ತಿಳಿಸಲು ಹೇಳಿದರು. ದಶರಥನು ಕುಮಾರರ ಸ್ಥಿತಿ ಕೆಲವು ದಿನಗಳಿಂದ ಸರಿಯಾಗಿಲ್ಲ, ರಾಕ್ಷಸರೊಂದಿಗೆ ಯುದ್ಧ ಮಾಡಲು ಬೇಕಾಗುವ ಶರೀರ ಬಲವನ್ನು ಕಳೆದುಕೊಂಡಿದ್ದಾರೆ. ಮೊದಲೇ ಅವರ ಸ್ಥಿತಿಯನ್ನು ನೋಡಿ ದುಃಖಿಸುತ್ತಿರುವ ನಮಗೆ ಇದರಿಂದ ಹುಣ್ಣಿನ ಮೇಲೆ ಬರೆ ಎಳೆದಂತಾಗುವುದು. ಈ ಘೋರ ಕೃತ್ಯಕ್ಕೆ ಅವರನ್ನು ಕಳಿಸುವ ಬದಲು ಪ್ರಾಣವನ್ನಾದರೂ ಕೊಡಲು ತಾನು ಸಿದ್ಧ ಎಂದು ಗೋಳಿಡುತ್ತಿದ್ದುದನ್ನು ನೋಡಿ, ವಿಶ್ವಾಮಿತ್ರರು, "ರಾಜಾ! ನೀನು ದುಃಖಿಸುವುದರಲ್ಲಿ ಅರ್ಥವಿಲ್ಲ. ನಡೆಸಲಾಗದ ಇಂಥ ವಾಗ್ದಾನವನ್ನು ಮೊದಲೇ ಕೊಡದಿದ್ದರೆ ಚೆನ್ನಾಗಿತ್ತು. ವಿಚಾರ ಮಾಡದೆ ವಾಗ್ದಾನ ಮಾಡಿ, ಅದನ್ನು ನಡೆಸಿಕೊಡಬೇಕಾಗಿ ಬಂದಾಗ ಹಿಂದೆ ಸರಿಯಲೆತ್ನಿಸುವುದು ಮಹಾ ಪಾಪಕರ್ಮ. ಇದು ನಿನ್ನಂಥ ರಾಜರಿಗೆ ಸರಿಯಲ್ಲ. ವ್ಯಥೆಯಿಂದ ಮಾಡುವ ಸಹಾಯ ನನಗೆ ಬೇಡ. ಹೃದಯಪೂರ್ವಕವಾದ ಸಹಾಯ ಎಷ್ಟು ಸಣ್ಣದಾದರೂ ಅದು ಪ್ರಾಣ ಸಮಾನವಾದುದು. ಅಸಂತೃಪ್ತಿಯಿಂದ ಮಾಡುವ ಸಹಾಯ ದೊಡ್ಡದಾದರೂ ಅದು ಅಲ್ಪಕಾರ್ಯವೇ ಆಗುವುದು. ನಿನ್ನನ್ನು ಬಾಧಿಸಿ, ನನ್ನ ಕಾರ್ಯವನ್ನು ಸಾಧಿಸಿಕೊಳ್ಳಬೇಕೆಂಬ ಆಶೆ ನನಗಿಲ್ಲ. ನೀನು ಆನಂದವಾಗಿ ಇರು. ನಾನು ಹೋಗಿ ಬರುತ್ತೇನೆ," ಎಂದು ಹೊರಟರು.

ರಾಜನು ಅವರ ಪಾದಗಳಿಗೆ ಬಿದ್ದು, "ಈ ಸಮಸ್ಯೆಗೆ ನೀವೇ ಸರಿಯಾದ ಮಾರ್ಗವನ್ನು ನಮಗೆ ತಿಳಿಸಿ, ನಿಮ್ಮ ಕಾರ್ಯವನ್ನು ನೆರವೇರಿಸಿಕೊಳ್ಳಿ," ಎಂದು ಪ್ರಾರ್ಥಿಸಿದನು. ಆಗ, ವಸಿಷ್ಠರು ದಶರಥನನ್ನು ಹತ್ತಿರ ಕರೆದು, "ರಾಜಾ! ಪುತ್ರ ವಾತ್ಸಲ್ಯವೆನ್ನುವ ತೆರೆ ಹೃದಯದಲ್ಲಿರುವುದರಿಂದಲೇ ನೀನು ಇಂಥ ಘನಕಾರ್ಯಕ್ಕೆ ಅಡ್ಡಿಯಾಗುತ್ತಿದ್ದೀಯೆ. ನಿನ್ನ ಕುಮಾರರಿಗೆ ಎಂಥ ಅಪಾಯವೂ ಇಲ್ಲ, ಬರುವುದೂ ಇಲ್ಲ. ಅವರು ಮಾಡಲಾಗದ ಕೆಲಸ ಲೋಕದಲ್ಲಿ ಯಾವುದೂ ಇಲ್ಲ. ರಾಕ್ಷಸ ಸಂಹಾರಕ್ಕಾಗಿ ಅವತರಿಸಿರುವ ಶಕ್ತಿಯೇ ನಿನ್ನ ಕುಮಾರರು. ಆದ್ದರಿಂದ, ಚಿಂತೆ ಮಾಡದೆ ಮಕ್ಕಳನ್ನು ಕಳಿಸಿಕೊಡು. ಅವರ ಭುಜಬಲ ಬುದ್ಧಿಬಲಗಳು ನೀನು ನೋಡದಂಥವು. ಅಲ್ಲದೆ ದೈವಬಲ ಅವರಲ್ಲಿ ತುಂಬಿ ತುಳುಕುತ್ತಿದೆ. ಆ ಬಲಕ್ಕಿಂತ

ಮಿಗಿಲಾದ ಬಲ ಬೇರೊಂದಿಲ್ಲ," ಎಂದು ಹಲವು ಬಗೆಯಲ್ಲಿ ಸಮಾಧಾನ ಹೇಳಿ, ರಾಮ ಲಕ್ಷ್ಮಣರನ್ನು ಕರೆಸಿದರು.

ವಿಶ್ವಾಮಿತ್ರ ವಸಿಷ್ಠರು ಹೇಳಿಕಳಿಸಿದ್ದಾರೆಂದು ಕೇಳಿ, ಆ ಕ್ಷಣವೇ ರಾಮ ಲಕ್ಷ್ಮಣರು ಅವರ ಬಳಿಗೆ ಬಂದರು. ಮೊದಲು ತಂದೆಗೆ ನಂತರ ವಸಿಷ್ಠ ವಿಶ್ವಾಮಿತ್ರರಿಗೆ ನಮಸ್ಕರಿಸಿ, ವಿನಯದಿಂದ ನಿಂತಿದ್ದ ಬಾಲಕರನ್ನು ನೋಡಿ ವಿಶ್ವಾಮಿತ್ರರು ಮುಗುಳ್ನಗುತ್ತಾ, "ಮಕ್ಕಳೇ! ನೀವು ನನ್ನೊಂದಿಗೆ ಬರುವಿರಾ?" ಎಂದು ಪ್ರಶ್ನಿಸಿದರು. ಬಾಲಕರು ಸಂತೋಷದಿಂದ, "ತಾವು ಆಜ್ಞಾಪಿಸಿದರೆ ನಾವು ಸಿದ್ಧ," ಎಂದರು. ಅದನ್ನು ಕೇಳಿ ದಶರಥನು ಮತ್ತಷ್ಟು ಕುಗ್ಗಿ ಹೋದನು, ಅವನ ಮುಖ ಮುದುಡಿತು.

ದುಃಖಿಸುತ್ತಿದ್ದ ತಂದೆಯನ್ನು ನೋಡಿ, ರಾಮನು ತಂದೆಯ ಬಳಿ ಹೋಗಿ, "ಅಪ್ಪಾ! ಮಹರ್ಷಿಗಳ ಜೊತೆಯಲ್ಲಿ ಕಳಿಸಲು ನೀವೇಕೆ ಇಷ್ಟು ಚಿಂತಿಸುತ್ತಿದ್ದೀರೊ ಅರ್ಥವಾಗುತ್ತಿಲ್ಲ. ಪರೋಪಕಾರಾರ್ಥವಾಗಿ ಹುಟ್ಟಿರುವ ಈ ಶರೀರಗಳನ್ನು ಹೀಗೆ ಪವಿತ್ರ ಮಾಡುವುದಕ್ಕಿಂತ ಬೇರೆ ಪುರುಷಾರ್ಥವಿದೆಯೆ? ಆದ್ದರಿಂದ, ಮಹರ್ಷಿಗಳ ಸೇವೆ ಮಾಡಿ, ಅವರ ಕಾರ್ಯದಲ್ಲಿ ಪಾಲ್ಗೊಂಡು, ಅವರನ್ನು ಸಂತೃಪ್ತಿಪಡಿಸುವುದಕ್ಕಿಂತ ಪವಿತ್ರ ಕಾರ್ಯ ಬೇರೆ ಇದೆಯೆ? ನಮ್ಮಿಂದಾಗದ ಕೆಲಸ ಉಂಟೆ? ಎಂಥ ರಾಕ್ಷಸರಾದರೂ ಸರಿ, ಹೋರಾಡಿ ಋಷಿಯ ಅಭೀಷ್ಟ ನೆರವೇರಿಸುತ್ತೇವೆ. ಅಪ್ಪಣೆ ಕೊಟ್ಟು ಕಳಿಸಿದರೆ, ಈ ನಿಮಿಷವೇ ಅವರೊಡನೆ ಹೋಗಲು ನಾವು ಸರ್ವಸಿದ್ಧರು," ಎಂದು ಧೈರ್ಯದ ಮಾತುಗಳನ್ನು ಹೇಳಿ ತಂದೆಯ ಆತಂಕವನ್ನು ಕಡಿಮೆ ಮಾಡಿದನು.

ದಶರಥನು ಪ್ರತ್ಯುತ್ತರ ಹೇಳಲು ಸಾಧ್ಯವಿಲ್ಲದ ಸ್ಥಿತಿಯಲ್ಲಿ ಸಿಕ್ಕಿಬಿದ್ದನು. ರಾಮನನ್ನು ಹತ್ತಿರ ಕರೆದು, "ಮಗೂ! ರಾಕ್ಷಸರು ಸಾಮಾನ್ಯರಲ್ಲ. ಅದರಲ್ಲೂ ಸುಂದ, ಉಪಸುಂದ, ಮಾರೀಚ, ಸುಬಾಹು ಮಹಾ ಕ್ರೂರರೆಂದು ಕೇಳಿದ್ದೇನೆ. ಕ್ರೂರತ್ವಕ್ಕೆ ತಕ್ಕ ಭಯಂಕರ ರೂಪ ಅವರದು, ನೀವೆಂದೂ ಅಂಥ ರೂಪವನ್ನು ನೋಡಿಲ್ಲ. ಅವರನ್ನು ನೋಡಿದರೇ ನೀವು ಭಯ ಪಡುವಿರೇನೋ! ಅಂದಮೇಲೆ ಅನೇಕ ಮಾಯೆಗಳನ್ನು ಬಲ್ಲ ಅವರೊಡನೆ ಹೇಗೆ ಯುದ್ಧ ಮಾಡುವಿರಿ? ಯುದ್ಧ ಎನ್ನುವ ಮಾತನ್ನೇ ನೀವು ಇದುವರೆಗೂ ಕೇಳಿಲ್ಲ, ಯುದ್ಧವನ್ನು ನೋಡಿಲ್ಲ. ಇಂಥ ಮುಗ್ಧರು ರಾಕ್ಷಸರೊಂದಿಗೆ ಹೋರಾಡಬಲ್ಲಿರಾ? ಅಯ್ಯೋ! ದೈವ ಎಷ್ಟು ನಿರ್ದಯವಾಗಿದೆ. ನನ್ನ ಕುಮಾರರಿಗೆ ಪ್ರಥಮದಲ್ಲೇ ಇಂಥ ಕಠಿಣ ಪರೀಕ್ಷೆಯೆ?" ಎಂದು ಚಿಂತಿಸುತ್ತಾ ಮಕ್ಕಳನ್ನು ಹತ್ತಿರ ಎಳೆದುಕೊಂಡು ದುಃಖದಿಂದ ಕಣ್ಣೀರು ಹಾಕಿದನು. ಲಕ್ಷ್ಮಣನು ತಂದೆಯ ಬಲಹೀನತೆಯನ್ನು ಗಮನಿಸಿ, "ಅಪ್ಪಾ,

ನಾವು ಹೆಣ್ಣುಮಕ್ಕಳಲ್ಲ. ಯುದ್ಧವು ನಮ್ಮ ಹಕ್ಕು, ಧರ್ಮ ಸ್ಥಾಪನೆಯು ನಮ್ಮ ಕರ್ತವ್ಯ. ಋಷಿ ಸೇವೆ, ರಾಜನೀತಿಗಳು ನಮ್ಮ ಉಚ್ಛ್ವಾಸ ನಿಶ್ವಾಸ. ಇಂಥ ಧರ್ಮಕಾರ್ಯಕ್ಕೆ ಕಳಿಸಲು ನೀವು ಇಷ್ಟು ಯೋಚಿಸುವುದು ಆಶ್ಚರ್ಯ. ಜನರು ನೋಡಿ ನಗುತ್ತಾರೆ. ಪ್ರೇಮದಿಂದ ಆಶೀರ್ವದಿಸಿ ಕಳಿಸಿ. ಅಣ್ಣನೊಂದಿಗೆ ನಾನೂ ಹೋಗಿ ಜಯಲಕ್ಷ್ಮಿಯನ್ನು ಪಡೆದು ಬರುತ್ತೇನೆ," ಎಂದನು.

ವಾತ್ಸಲ್ಯೋನ್ಮತ್ತನಾಗಿ ದುಃಖಿಸುತ್ತಿದ್ದ ತಂದೆಯನ್ನು ನೋಡಿ, ರಾಮನು ಕೈಗಳನ್ನು ಹಿಡಿದುಕೊಂಡು, "ಅಪ್ಪಾ! ನಿಮ್ಮನ್ನು ನೀವು ಮರೆತಂತಿದೆ. ನೀವು ಯಾರು, ಯಾವ ವಂಶದಲ್ಲಿ ಹುಟ್ಟಿದಿರಿ, ನಿಮ್ಮ ಪೂರ್ವಿಕರ ಘನ ಕೀರ್ತಿಗಳನ್ನು ಒಮ್ಮೆ ಸ್ಮರಿಸಿಕೊಂಡರೆ, ನೀವು ಹೀಗೆ ದುಃಖಿಸುತ್ತಿರಲಿಲ್ಲ. ನೀವು ಇಕ್ಷ್ವಾಕು ವಂಶದಲ್ಲಿ ಹುಟ್ಟಿದಿರಿ. ಧರ್ಮವೇ ಸಾಕ್ಷಾತ್ ನಿಮ್ಮ ರೂಪದಲ್ಲಿ ಮೂರ್ತೀಭವಿಸಿದೆಯೊ ಎನ್ನುವಂತೆ ಇದುವರೆಗೆ ಪ್ರವರ್ತಿಸಿದ್ದೀರಿ. ನೀವು ಸುವ್ರತರು, ಧರ್ಮಾತ್ಮರು, ಧೈರ್ಯ ಸಾಹಸಶಾಲಿಗಳು ಎಂದು ಮೂರು ಲೋಕಕ್ಕೂ ತೋರಿಸಿಕೊಟ್ಟಿದ್ದೀರಿ. ಕೊಟ್ಟ ಮಾತಿಗೆ ತಪ್ಪುವುದಕ್ಕಿಂತ ದೊಡ್ಡ ಪಾಪ ಬೇರೊಂದಿಲ್ಲ ಎನ್ನುವುದನ್ನು ನೀವು ಬಲ್ಲಿರಿ. ಮಹರ್ಷಿಗೆ ಕೊಟ್ಟ ಮಾತನ್ನು ನೆರವೇರಿಸಿಕೊಡಲು ನೀವು ಇಷ್ಟೊಂದು ಚಿಂತಿಸುವುದು ನಿಮ್ಮ ಕೀರ್ತಿಗೆ ತರವಲ್ಲ. ತಂದೆಯ ಅಪಕೀರ್ತಿಯನ್ನು ಮಕ್ಕಳು ಸಹಿಸರು. ನಿಮ್ಮ ಮಾತನ್ನು ನೀವು ಉಳಿಸಿಕೊಳ್ಳದೇ ಹೋದರೆ, ನೀವು ಮಾಡಿದ ಯಜ್ಞಯಾಗಾದಿ ಕರ್ಮಗಳು, ಕೊಟ್ಟ ದಾನ, ನಿರ್ಮಿಸಿದ ಬಾವಿ, ಕೊಳ, ಸೋಪಾನಾದಿಗಳು, ಎಲ್ಲವೂ ನಿಷ್ಫಲ. ಹೆಚ್ಚೇಕೆ, ದಶರಥನು ಆಡಿದ ಮಾತಿಗೆ ತಪ್ಪಿದ ಎನ್ನುವ ಮಾತನ್ನು ಕೇಳುವುದು ಪುತ್ರರಾದ ನಮಗೂ ಅಸಹನೀಯವೇ. ಇದು ವಂಶಕ್ಕೇ ಮಾಯದ ಮಸಿಯಾಗಿ ಉಳಿಯುವುದು. ಪುತ್ರವಾತ್ಸಲ್ಯದಿಂದ ವಂಶಕ್ಕೇ ತೀರದ ಅಪಕೀರ್ತಿ ತಂದಂತಾಗುವುದು. ವಿಚಾರಶೂನ್ಯವಾದ ನಿಮ್ಮ ಪ್ರೇಮವು ನಮ್ಮನ್ನು ಶಿಕ್ಷಿಸುವುದೇ ವಿನಾ ರಕ್ಷಿಸದು. ನಿಜವಾಗಿಯೂ ಪುತ್ರ ವಾತ್ಸಲ್ಯವೇ ನಿಮ್ಮಲ್ಲಿ ಇರುವುದಾದರೆ, ಪುತ್ರರ ಸತ್ಕೀರ್ತಿಯನ್ನು ಲಕ್ಷ್ಯದಲ್ಲಿಡಬೇಕಲ್ಲವೆ? ನಿಮಗೆ ಹೇಳುವ ಯೋಗ್ಯತೆ ನಮಗಿಲ್ಲ. ಎಲ್ಲವೂ ನಿಮಗೆ ತಿಳಿದಿದೆ. ವಾತ್ಸಲ್ಯವೆನ್ನುವುದು ಇಷ್ಟು ಕಷ್ಟಕರವಾಗಿ ಪರಿಣಮಿಸಿಬಿಟ್ಟಿದೆ, ಕರ್ತವ್ಯವನ್ನು ಗುರುತಿಸದಂತೆ ಮಾಡಿದೆ. ನಮಗೆ ಯಾವ ಭಯವೂ ಇಲ್ಲ. ವಿಜಯಲಕ್ಷ್ಮಿಯು ನಮ್ಮನ್ನು ವರಿಸುತ್ತಾಳೆ. ನೀವು ಭ್ರಮಿಸದೆ ಆಶೀರ್ವದಿಸಿ, ಋಷಿಗಳೊಂದಿಗೆ ಕಳುಹಿಸಿಕೊಡಿ," ಎಂದು ರಾಮನು ತಲೆಬಾಗಿ ನಮಸ್ಕರಿಸಿದನು.

ದಶರಥನು ರಾಮನನ್ನು ಆಲಿಂಗಿಸಿಕೊಂಡು, ಶಿರಸ್ಸನ್ನು ಮುದ್ದಾಡಿ, "ಮಗೂ! ನೀನು ಹೇಳಿದುದೆಲ್ಲವೂ ಪರಮ ಸತ್ಯಗಳು, ಪವಿತ್ರ ರತ್ನಗಳು. ನಾನು ಅವುಗಳನ್ನು

ಅಲ್ಲವೆನ್ನುವ ಮೂರ್ಖನಲ್ಲ. ಚತುರಂಗಬಲ ಸಮೇತನಾಗಿ ಹೋಗಿ, ಋಷಿಯ ಯಾಗವನ್ನು ರಕ್ಷಿಸಲು ನನ್ನ ಸರ್ವಸ್ವವನ್ನೂ ತ್ಯಾಗ ಮಾಡಲು ಸಿದ್ಧನಿದ್ದೇನೆ. ಆದರೆ, ಅಸ್ತ್ರಶಸ್ತ್ರ ವಿದ್ಯೆಗಳಲ್ಲಿ ಇನ್ನೂ ತರಬೇತಿ ಹೊಂದುತ್ತಿರುವ ಎಳೆಯ ಮಕ್ಕಳನ್ನು ಆ ರಾಕ್ಷಸರ ಕೈಗೊಪ್ಪಿಸಲು ನನ್ನ ಮನಸ್ಸು ಒಪ್ಪುತ್ತಿಲ್ಲ. ತಿಳಿದೂ ತಿಳಿದೂ ಹುಲಿಯ ಬಾಯಿಗೆ ಮಕ್ಕಳನ್ನು ನೂಕಲು ಯಾವ ತಂದೆ ತಾಯಿಯೂ ಇಷ್ಟಪಡುವುದಿಲ್ಲವಲ್ಲವೆ? ಅನೇಕ ಯಜ್ಞ ಯಾಗಾದಿಗಳನ್ನು ಮಾಡಿ, ತಪಸ್ಸನ್ನು ಮಾಡಿ ಪಡೆದ ನಿಮ್ಮನ್ನು ಪ್ರಾಣ ಸಮಾನವಾಗಿ ನೋಡುತ್ತಿರುವ ನನ್ನನ್ನು ಹೀಗೆ ವಿಷಾದಾಗ್ನಿಯಲ್ಲಿ ಸುಡುವುದು ಪುತ್ರರಾದ ನಿಮಗಿದು ನ್ಯಾಯವೆ? ಅಯ್ಯೋ! ವಿಧಿಯು ಎದುರು ಬಿದ್ದರೆ ಯಾರೇನು ಮಾಡುವರು! ಇದು ನನ್ನ ಪಾಪದ ಫಲ," ಎಂದು ತಲೆಯ ಮೇಲೆ ಕೈಯಿಟ್ಟು ದುಃಖಿಸಿದನು.

ರಾಮನು ಮುಗುಳ್ನಕ್ಕು, "ಅಪ್ಪಾ! ಏನಿದು ಬಲಹೀನತೆ? ತಿಳಿದೂ ತಿಳಿದೂ ಹುಲಿಯ ಬಾಯಿಗೆ ನೂಕುತ್ತಿದ್ದೇನೆಂದಿರಿ. ನಾವು ಮೇಕೆ ಮರಿಗಳಲ್ಲ ಎನ್ನುವುದನ್ನು ನೀವು ತಿಳಿದಿಲ್ಲ. ನಾವು ಪುರುಷ ಸಿಂಹಗಳು ಎಂದು ತಿಳಿದು ಪುಣ್ಯಕಾರ್ಯ ನಿಮಿತ್ತವಾಗಿ ನಮ್ಮನ್ನು ಆಶೀರ್ವದಿಸಿ ಕಳಿಸಿ. ಕಾಲಯಾಪನೆ ಪ್ರಭುಗಳಿಗೆಂದೂ ಶೋಭೆಯಲ್ಲ," ಎಂದು ಸ್ವಲ್ಪ ಚುರುಕಾಗಿ ಮತಾನಾಡಿದ್ದನ್ನು ಕೇಳಿ ವಸಿಷ್ಠರು, "ಭೇಷ್, ಭೇಷ್, ದಶರಥಾ! ಕೇಳಿದೆಯಾ ಸಿಂಹ ಗರ್ಜನೆ? ಇನ್ನು ಈ ಹೇಡಿತನ ವೇಕೆ? ಏಳು, ಅಂತಃಪುರಕ್ಕೆ ಹೇಳಿ ಕಳಿಸಿ, ರಾಣಿಯರನ್ನು ಕರೆಸು, ಪುತ್ರರನ್ನು ವಿಶ್ವಾಮಿತ್ರರಿಗೊಪ್ಪಿಸು," ಎಂದು ಆಜ್ಞಾಪಿಸಿದರು. ದಶರಥನು ಬೇರೆ ಮಾರ್ಗ ವಿಲ್ಲದೆ, ರಾಣಿಯರನ್ನು ಕರೆದುಕೊಂಡು ಬರುವಂತೆ ಹೇಳಿ ಕಳಿಸಿದನು.

ರಾಣಿಯರು ಮುಖಕ್ಕೆ ಮುಸುಕು ಹಾಕಿಕೊಂಡು ಬಂದು, ಮಹರ್ಷಿಗಳಿಗೆ ನಮಸ್ಕರಿಸಿ, ದಶರಥನಿಗೆ ನಮಸ್ಕರಿಸಿ, ಹೋಗಿ ಮಕ್ಕಳೊಂದಿಗೆ ನಿಂತು, ತಮ್ಮ ಮಕ್ಕಳ ತಲೆಯನ್ನು ಸವರುತ್ತಾ ತಲೆತಗ್ಗಿಸಿ ನಿಂತರು. ವಸಿಷ್ಠರು, "ಅಮ್ಮಂದಿರಾ! ನಮ್ಮ ರಾಮ ಲಕ್ಷ್ಮಣರು ವಿಶ್ವಾಮಿತ್ರರ ಯಾಗರಕ್ಷಣೆಗಾಗಿ ಹೊರಡಲು ಸರ್ವಸಿದ್ಧರಾಗಿದ್ದಾರೆ. ಅವರನ್ನು ಆಶೀರ್ವದಿಸಿ ಕಳಿಸಿಕೊಡುವುದಕ್ಕಾಗಿಯೇ ನಿಮ್ಮನ್ನಿಲ್ಲಿಗೆ ಕರೆಸಿದ್ದು. ಅವರನ್ನು ಆಶೀರ್ವದಿಸಿ ಕಳಿಸಿಕೊಡಿ," ಎಂದು ಹೇಳಿದರು. ಅದನ್ನು ಕೇಳಿ ಕೌಸಲ್ಯೆಯು ಬೆಚ್ಚಿಬಿದ್ದು, ತಲೆಯೆತ್ತಿ ಗುರುಗಳನ್ನು ನೋಡಿ, "ಏನು! ಈ ಹಸುಗೂಸುಗಳು ಮಹರ್ಷಿಗಳ ಯಜ್ಞ ಸಂರಕ್ಷಿಸುವುದೆ? ಯಜ್ಞವನ್ನು ಮಂತ್ರಗಳೇ ರಕ್ಷಿಸುವುವು ಎಂದು ಕೇಳಿದ್ದೇನೆ. ಅಂದಮೇಲೆ, ಮನುಷ್ಯರು ರಕ್ಷಿಸುವುದೇನಿದೆ? ಯಜ್ಞದ ರಕ್ಷಣೆಯು ಋತ್ವಿಕ್ಕುಗಳ ದೀಕ್ಷೆಯ ಮೇಲೆ ಆಧಾರಪಟ್ಟಿರುವುದಲ್ಲವೆ?" ಎಂದಳು.

ಕೌಸಲ್ಯೆಯ ಮಾತುಗಳು ವಸಿಷ್ಠರಿಗೆ ಸತ್ಯವೆಂದು ಕಂಡರೂ ವಿಷಯವನ್ನು ವಿವರಿಸುವುದೊಳ್ಳೆಯದೆಂದು, "ಅಮ್ಮಾ! ಕೌಸಲ್ಯೆ! ವಿಶ್ವಾಮಿತ್ರರ ಯಾಗವು ಸಾಮಾನ್ಯವಾದ ಯಾಗವಲ್ಲ. ಅದಕ್ಕೆ ಅನೇಕ ಅಡಚಣೆಗಳು ಬಂದು ಅಶಾಂತಿಯುಂಟು ಮಾಡುತ್ತಿವೆ," ಎಂದು ಇನ್ನೂ ಏನೋ ಹೇಳುವಷ್ಟರಲ್ಲಿ ಕೌಸಲ್ಯೆಯು ತಡೆದು, "ಗುರುದೇವಾ! ಮಹರ್ಷಿಗಳು ಮಾಡುವ ಪವಿತ್ರ ಕಾರ್ಯಗಳಿಗೆ ಅಡಚಣೆಗಳು ಬರುತ್ತಿವೆಯೆಂದರೆ ನನಗೆ ಆಶ್ಚರ್ಯವಾಗುತ್ತಿದೆ. ದಿವ್ಯ ಸಂಕಲ್ಪಗಳಿಗೆ ಅಡ್ಡಿ ಉಂಟು ಮಾಡಬಲ್ಲ ಯಾವ ಶಕ್ತಿಯೂ ಇಲ್ಲವೆಂದು ನನ್ನ ನಂಬಿಕೆ. ಬಹುಶಃ ಇದನ್ನೇ ಒಂದು ನಿಮಿತ್ತ ಮಾಡಿಕೊಂಡು ಭವಿಷ್ಯದಲ್ಲಿ ಮಕ್ಕಳ ಮಹತ್ತರವಾದ ಕಾಂತಿಯನ್ನು ಕೀರ್ತಿಯನ್ನು ಬೆಳಗಿಸಲು ಮಹರ್ಷಿಗಳು ಹೀಗೆ ಹೇಳಿರಬಹುದು. ಅಥವಾ ಮಹಾರಾಜರ ಮನಸ್ಸನ್ನು ಪರೀಕ್ಷಿಸೋಣವೆಂದು ಹೀಗೆ ಹೇಳಿರಬಹುದೆ ಹೊರತು, ಸರ್ವ ಶಕ್ತಿ ಸಂಪನ್ನರಾದ ಮಹರ್ಷಿಗಳು ಮಾಡುವ ಯಾಗಕ್ಕೆ ಈ ಎಳೆ ಕಂದಗಳು ರಕ್ಷಕರೆಂದರೇನು?" ಎಂದು ಕೌಸಲ್ಯೆಯು ರಾಮಲಕ್ಷ್ಮಣರ ತಲೆಯನ್ನು ಸವರುತ್ತಿರಲು, ದಶರಥನು ಧೈರ್ಯವನ್ನು ತಂದುಕೊಂಡು, "ಕೌಸಲ್ಯೆಯು ಆಡಿದ ಮಾತುಗಳು ಪರಮ ಸತ್ಯ. ಇದೆಲ್ಲವೂ ನೀವು ನನ್ನನ್ನು ಪರೀಕ್ಷಿಸಲು ಮಾಡಿರುವುದೆನ್ನುವುದು ನನಗೆ ದೃಢವಾಗುತ್ತಿದೆ. ತಾವು ಪರೀಕ್ಷೆ ಮಾಡಲು ನಾನೆಷ್ಟರವನು. ತಮ್ಮ ಅಭೀಷ್ಟವೇನೋ ಅದರಂತೆ ಮಾಡಿ," ಎಂದು ಗುರುಗಳಿಗೆ ನಮಸ್ಕರಿಸಿ ನಿಂತನು.

ವಸಿಷ್ಠರು, "ಮಹಾರಾಜಾ! ನೀನು ಧನ್ಯ. ನಿನ್ನ ಚಿರಂಜೀವಿಗಳು ಸಾಮಾನ್ಯರಲ್ಲ. ಅವರ ಶಕ್ತಿ ಸಾಮರ್ಥ್ಯಗಳು ಅನಂತ, ತಿಳಿದವರಿಗೆ ಅದು ತಿಳಿದಿದೆಯಲ್ಲದೆ ಅನ್ಯರಿಗೆ ಅರ್ಥವಾಗದು. ರಾಮನ ಸಂಕ್ಕಲ್ಪಕ್ಕೆ ಇದು ಪ್ರಾರಂಭೋತ್ಸವ, ಅವನ ಲೋಕ ಖ್ಯಾತಿಗೆ ಇದು ಬುನಾದಿ. ಅವನ ಧರ್ಮ ರಕ್ಷಣೆಗೆ ಇದು ಕಂಕಣ. ಅವರು ಶೀಘ್ರವಾಗಿ ವಿಜಯಲಕ್ಷ್ಮಿಯೊಂದಿಗೆ ಬರುತ್ತಾರೆ. ಚಿಂತಿಸದೆ, ಸಂತಸ ಹೃದಯಿಯಾಗಿ ವಿಶ್ವಾಮಿತ್ರರಿಗೆ ಅವರನ್ನು ಒಪ್ಪಿಸು," ಎಂದರು. "ಮಕ್ಕಳೇ! ಹೀಗೆ ಬನ್ನಿ," ಎಂದು ರಾಮ ಲಕ್ಷ್ಮಣರನ್ನು ಹತ್ತಿರ ಕರೆದು, ಇಬ್ಬರ ತಲೆಯ ಮೇಲೂ ಕೈಯಿಟ್ಟು, ಮಂಗಳಪ್ರದವಾದ ಮಂತ್ರಗಳಿಂದ ಅಭಿಮಂತ್ರಿಸಿದರು. ಮಹಾದಾನಂದದಿಂದ ರಾಮ ಲಕ್ಷ್ಮಣರು ಗುರುದೇವರಿಗೂ ವಿಶ್ವಾಮಿತ್ರರಿಗೂ ತಂದೆ ತಾಯಿಗಳಿಗೂ ನಮಸ್ಕರಿಸಿದರು. ಆಶೀರ್ವಾದ ಪಡೆದು ಹೊರಡಲು ಸಿದ್ಧರಾದ ಬಾಲಕರ ತೇಜಸ್ಸನ್ನು ನೋಡಿ, ದಶರಥನು ಉಕ್ಕಿ ಬರುತ್ತಿದ್ದ ದುಃಖವನ್ನು ಅದುಮಿಕೊಂಡು, ಇಬ್ಬರೂ ಮಕ್ಕಳ ಭುಜದ ಮೇಲೆ ಕೈಗಳನ್ನು ಹಾಕಿಕೊಂಡು ವಿಶ್ವಾಮಿತ್ರರ ಬಳಿಗೆ ಕರೆತಂದು ಅವರಿಗೆ ನಮಸ್ಕರಿಸಿ, "ಸ್ವಾಮೀ, ಇವರು ಇಂದಿನಿಂದ ನಿಮ್ಮ ಪ್ರೇಮ ಪುತ್ರರು. ಇವರ ಯೋಗಕ್ಷೇಮವು ನಿಮಗೆ ಸೇರಿದ್ದು.

ಇವರಿಗೆ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳಲು ಕೆಲವು ಜನ ಪರಿವಾರದವರನ್ನು ಜೊತೆಯಲ್ಲಿ ಕಳಿಸಲು ಅಪ್ಪಣೆಯಾದರೆ, ಶಿರಸಾವಹಿಸಿ ಕಳುಹಿಸಿಕೊಡುತ್ತೇನೆ," ಎಂದು ಹೇಳಿದನು.

ಅದನ್ನು ಕೇಳಿ ವಿಶ್ವಾಮಿತ್ರರು ನಕ್ಕು, "ಮಹಾರಾಜಾ! ಯಾಗ ಸಂರಕ್ಷಕರಾಗಿ ಹೋಗುತ್ತಿರುವ ಮಹಾವೀರರರನ್ನು ರಕ್ಷಿಸುವವರೂ ಬೇರೆ ಉಂಟೆ? ಮಹರ್ಷಿಗಳಿಗೇ ಆಗದ ಮಹಾಕಾರ್ಯಗಳನ್ನು ಸಾಧಿಸಲು ಹೊರಟಿರುವ ಸರ್ವಶಕ್ತಿವಂತರ ಸಹಾಯಕ್ಕೆ ಬೇರೆ ಏರ್ಪಾಟು ಮಾಡಬೇಕೆ? ನಿನ್ನ ವಾತ್ಸಲ್ಯವು ನಿನ್ನನ್ನು ಹೀಗೆ ಮಂಕು ಮಾಡಿದೆಯಲ್ಲದೆ, ನಿನಗೆ ಇದು ತಿಳಿಯದ ವಿಷಯವಲ್ಲ. ಮಹಾರಾಜಾ! ಇವರಿಗೆ ಯಾವ ತೊಂದರೆಯೂ ಬರದೆ, ಕಾರ್ಯವು ಪೂರ್ತಿಯಾದೊಡನೆಯೇ ನಾನೇ ಸ್ವತಃ ಜೊತೆಯಲ್ಲಿ ಕರೆದುಕೊಂಡು ಬಂದು ನಿನಗೊಪ್ಪಿಸುವೆನು. ಚಿಂತೆ ಮಾಡದೆ, ನಿನ್ನ ರಾಜ್ಯ ಪರಿಪಾಲನೆಗೆ ಯಾವ ತೊಂದರೆಯೂ ಬಾರದಂತೆ ನೋಡಿಕೋ," ಎಂದು ವಿಶ್ವಾಮಿತ್ರರು ಹೊರಡಲು ಸಿದ್ಧರಾಗಿ ಎದ್ದು ನಿಂತ ಕೂಡಲೇ ಎಲ್ಲರೂ ಹಸ್ತಗಳನ್ನು ಜೋಡಿಸಿ ಮಹರ್ಷಿಗೆ ನಮಸ್ಕರಿಸಿದರು.

ವಿಶ್ವಾಮಿತ್ರರು ಮುಂದೆ, ರಾಮ ಲಕ್ಷ್ಮಣರು ಧನುರ್ಧಾರಿಗಳಾಗಿ ಅವರ ಹಿಂದೆ ನಡೆದು ಹೋಗುತ್ತಾ ರಾಜಭವನದ ಸಿಂಹದ್ವಾರದ ಬಳಿಗೆ ಬರುತ್ತಲೇ ದೇವ ದುಂದುಭಿಗಳು ಮೊಳಗಿದವು! ಹೂವಿನ ಮಳೆ ಸುರಿಯಿತು! ದಾರಿಯುದ್ದಕ್ಕೂ ಶಂಖಗಳನ್ನೂದಿದರು, ಭೇರಿಯನ್ನು ಬಾರಿಸಿದರು. ಪುರ ಬೀದಿಗಳ ಎರಡು ಕಡೆಯೂ ಸ್ತ್ರೀಪುರುಷರು, ಬಾಲಕರು, ವೃದ್ಧರು ಆಶ್ಚರ್ಯ ತುಂಬಿದ ಕಣ್ಣುಗಳಿಂದ ನೋಡುತ್ತಿದ್ದರು. ಮಹರ್ಷಿಯ ಜೊತೆಯಲ್ಲಿ ಕಾಲು ನಡಿಗೆಯಲ್ಲಿ ಹೋಗುತ್ತಿದ್ದ ಆ ಬಾಲಕರು, ಗಂಡು ಸಿಂಹದ ಜೊತೆಯಲ್ಲಿ ಹೋಗುತ್ತಿದ್ದ ಮರಿ ಸಿಂಹಗಳ ಹಾಗೆ ಕಾಣಿಸಿದರು. ವಿಷಯ ತಿಳಿಯದೆ, ಎಲ್ಲಿಗೆ ಹೋಗುತ್ತಿದ್ದಾರೆ ಎಂದು ತಿಳಿಯಲು ಅವರೊಳಗೇ ಗುಸುಗುಸು ಪ್ರಾರಂಭವಾಯಿತು. ಮಹಾರಾಜನ ಆಜ್ಞೆಯಂತೆ, ಮಂತ್ರಿಗಳೂ ಪುರ ಜನರೂ ನಗರದ ಸಿಂಹದ್ವಾರದವರೆಗೆ ಮಾತ್ರವೇ ಹೋಗಿ, ರಾಮ ಲಕ್ಷ್ಮಣರನ್ನು ಬೀಳ್ಕೊಟ್ಟು ಹಿಂದಿರುಗಿದರು.

ಅಲ್ಲಿಂದ ಮುಂದೆ, ವಿಶ್ವಾಮಿತ್ರರು ಮುಂದೂ ರಾಮನು ಅವರ ಹಿಂದೂ ಅವನ ಹಿಂದೆ ಲಕ್ಷ್ಮಣನೂ ಕಾಲು ದಾರಿಯಲ್ಲಿ ಹೊರಟರು. ಇಕ್ಕೆಲಗಳಲ್ಲೂ ಇದ್ದ ಸುಂದರವಾದ ವೃಕ್ಷಗಳನ್ನು ನೋಡುತ್ತಾ ಪ್ರಕೃತಿಯ ಸಹಜ ಸೌಂದರ್ಯವನ್ನು ಆಸ್ವಾದಿಸುತ್ತಾ ಹೋಗುತ್ತಿದ್ದರು. ಮುಂದೆ ನಿರ್ಜನ ಪ್ರದೇಶವನ್ನು ಪ್ರವೇಶಿಸುತ್ತಲೇ ರಾಮ ಲಕ್ಷ್ಮಣರು ವಿಶ್ವಾಮಿತ್ರರ ಆಜ್ಞಾನುಸಾರವಾಗಿ, ಮಣಿಕಟ್ಟುಗಳಿಗೂ ಬೆರಳು

ಗಳಿಗೂ ಉಡದ ತೊಗಲಿನ ಕವಚವನ್ನು ಹಾಕಿಕೊಂಡರು. ಭುಜದ ಮೇಲಿದ್ದ ಧನುಸ್ಸನ್ನು ತೆಗೆದು, ಕೈಯಲ್ಲಿ ಸಿದ್ಧವಾಗಿಟ್ಟುಕೊಂಡರು. ನಕ್ಷತ್ರವನ್ನು ಹೋಲುವ ಕಾಂತಿಯಿಂದ, ನಿರ್ಜನಾರಣ್ಯದಲ್ಲಿ, ನಿಶ್ಶಬ್ದ ವಾತಾವರಣದಲ್ಲಿ, ದಟ್ಟವಾದ ಪೊದೆ ಗಳ ಮಧ್ಯೆ ಹೋಗುತ್ತಿರುವ ಸಿಂಹದ ಮರಿಗಳಂತೆ, ರಾಮ ಲಕ್ಷ್ಮಣರು ಮುಗುಳ್ನಗೆ ಸೂಸುತ್ತಾ ನಿರ್ಭಯರಾಗಿ ವಿಶ್ವಾಮಿತ್ರರನ್ನು ಅನುಸರಿಸುತ್ತಾ ಸರಯೂ ನದಿಯ ದಕ್ಷಿಣ ತೀರವನ್ನು ಸೇರಿದರು.

ಸೂರ್ಯಾಸ್ತಮವಾಗುತ್ತಿದ್ದುದರಿಂದ ವಿಶ್ವಾಮಿತ್ರರು, “ಮಕ್ಕಳೇ! ತಡ ಮಾಡದೆ ನದಿಯಲ್ಲಿ ಆಚಮನ ಮಾಡಿ. ಸಮಸ್ತ ಮಂತ್ರಗಳಿಗೂ ಮೂಲಾಧಾರವಾದ ಬಲ–ಅತಿಬಲ ಎನ್ನುವ ಎರಡು ಮಂತ್ರಗಳನ್ನು ನಿಮಗೆ ಉಪದೇಶಿಸುತ್ತೇನೆ. ಈ ಎರಡು ಮಂತ್ರಗಳು ಮಹಾ ಪ್ರಭಾವವುಳ್ಳವು. ಇವು ಎಷ್ಟು ಆಲಸ್ಯವಾದರೂ ಕ್ಷಣದಲ್ಲಿ ತೀರಿಸಿ ಹಾಯಿಮಾಡುತ್ತವೆ. ಇವು ಎಷ್ಟು ಕೆಲಸ ಮಾಡಿದರೂ ಆಲಸ್ಯ ವಾಗದಂತೆ ಮಾಡುವುವು; ವ್ಯಾಧಿಗಳು ಬರದಂತೆ, ರಾಕ್ಷಸರಿಂದ ಬಾಧೆ ಆಗದಂತೆ ರಕ್ಷಿಸುವುವು. ಇಷ್ಟೇ ಅಲ್ಲ, ದಾರಿಯಲ್ಲಿ ನಡೆದು ಹೋಗುವ ಸಮಯದಲ್ಲಿ ಈ ಮಂತ್ರಗಳನ್ನು ಸ್ಮರಿಸುತ್ತಾ ಹೋದರೆ ಹಸಿವು, ಬಾಯಾರಿಕೆಗಳು ಇಲ್ಲದೆ, ಇವು ಆನಂದೋಲ್ಲಾಸಗಳನ್ನಿತ್ತು, ಅತಿಬಲವುಂಟುಮಾಡುತ್ತಾ ಹೋಗುತ್ತವೆ. ರಾಮಾ! ಬಲ ಅತಿಬಲ ಎನ್ನುವ ಈ ಎರಡು ಮಂತ್ರಗಳು ಸಮಸ್ತ ಮಂತ್ರಗಳಿಗೇ ಅಲ್ಲದೆ, ಸಮಸ್ತ ಶಕ್ತಿಗಳಿಗೂ ತೇಜೋವಂತವಾದುವು,” ಎಂದು ಆ ಮಂತ್ರಗಳ ಶಕ್ತಿ ಸಾಮರ್ಥ್ಯಗಳನ್ನು ವಿಶ್ವಾಮಿತ್ರರು ವರ್ಣಿಸುತ್ತಿರಲು, ಸರ್ವಜ್ಞನಾದ ರಾಮಚಂದ್ರನು ಅವುಗಳ ವಿಷಯ ಏನೂ ತಿಳಿಯದವನಂತೆ ತಲೆದೂಗುತ್ತಾ ಆಶ್ಚರ್ಯದಿಂದ ಕೇಳುತ್ತಿರುವವನಂತೆ ನಟಿಸುತ್ತಿದ್ದನು. ಲಕ್ಷ್ಮಣನು ಇಬ್ಬರನ್ನೂ ನೋಡಿ ತನ್ನೊಳಗೇ ನಗುತ್ತಿದ್ದನು.

ಇಲ್ಲಿ, ಲೋಕೋಪದೇಶ ನಿಮಿತ್ತವಾಗಿ ರಾಮನು ಒಂದು ಎಚ್ಚರಿಕೆ ನೀಡಿದ್ದಾನೆ. ಅದೇನೆಂದರೆ ಮಾಯೆಯು ಎಂಥವರನ್ನಾದರೂ ತಕ್ಷಣದಲ್ಲಿ ತಲೆ ಕೆಳಗು ಮಾಡು ವುದು; ದೇಹಾಭಿಮಾನ ಇರುವವರೆಗೂ ಮಾಯೆಯು ಮನುಷ್ಯನನ್ನು ಬಿಡದು; ಇದು ತಪಸ್ಸಿನಿಂದ, ಜ್ಞಾನದಿಂದ, ಹೆಸರು ಪ್ರತಿಷ್ಠೆಗಳಿಂದ, ಶಕ್ತಿ ಸಾಮರ್ಥ್ಯಗಳಿಂದ ತೊಲಗುವಂಥದಲ್ಲ; ತಾನು ಆತ್ಮಸ್ವರೂಪನೆಂದು ತಿಳಿದುಕೊಂಡು ಸಮತ್ವಬುದ್ಧಿ ಯಿಂದ ಜಗತ್ತನ್ನು ನೋಡುವುದರಿಂದ ಮಾತ್ರ ಮಾಯೆಯು ತೊಲಗುವುದು ಎನ್ನುವ ನೀತಿಯನ್ನು ಇಲ್ಲಿ ನಿರೂಪಿಸಿದ್ದಾನೆ. ಇಲ್ಲದಿದ್ದರೆ, ಬಲ ಅತಿಬಲ ಎನ್ನುವ ಶಕ್ತಿಯುತವಾದ ಮಂತ್ರಗಳು ತನ್ನಲ್ಲಿದ್ದರೂ ತಾನು ತಪೋಸಂಪನ್ನನಾಗಿದ್ದರೂ ಯಜ್ಞ ಸಂರಕ್ಷಣೆಗೆ ತಕ್ಕ ಶಕ್ತಿ ಸಾಮರ್ಥ್ಯವುಳ್ಳವನು ಶ್ರೀರಾಮನೇ ಎನ್ನುವುದನ್ನು

ತಿಳಿದಿದ್ದರೂ, "ರಾಮನು ಸಾಮಾನ್ಯನಲ್ಲ, ಲೋಕರಕ್ಷಕನು. ಅವನು ಮಾಡಲಾಗದ ಕಾರ್ಯವೇ ಜಗತ್ತಿನಲ್ಲಿ ಯಾವುದೂ ಇಲ್ಲ, ಪುತ್ರವಾತ್ಸಲ್ಯವೇ ನಿನ್ನನ್ನಿಷ್ಟು ಮಂಕನನ್ನಾಗಿ ಮಾಡಿದೆ," ಎಂದು ದಶರಥನಿಗೆ ಬೋಧಿಸಿದ ವಿಶ್ವಾಮಿತ್ರರು, ಮಾಯಾ ಬಂಧಿತರಾಗಿ, ಗುಣ ಮೋಹಿತರಾಗಿ, ರಾಮ ಲಕ್ಷ್ಮಣರನ್ನು ಸಾಮಾನ್ಯ ಹುಡುಗರಂತೆ ಭಾವಿಸಿ, ಅವರಿಗೆ ಮಂತ್ರೋಪದೇಶ ಮಾಡುವುದಕ್ಕೆ ತೊಡಗುತ್ತಾರೆ. ಮಾಯೆಯ ಪ್ರಭಾವವನ್ನು ನಿರೂಪಿಸುವುದೇ ಇದರ ಅಂತರಾರ್ಥ. ಅಂಥ ಮಾಯೆಯನ್ನು ಆ ನಿಮಿಷದಲ್ಲಿ ವಿಶ್ವಾಮಿತ್ರರಲ್ಲಿ ಪ್ರವೇಶ ಮಾಡಿಸದಿದ್ದರೆ, ರಾಮನ ಕಾರ್ಯವು ಜರುಗದು. ಮಹರ್ಷಿಗಳಲ್ಲಿ ಪ್ರವೇಶಿಸಿದ ಮಾಯೆಯೂ ಸಹ ಮಹತ್ತರವಾದ ಕಾರ್ಯಗಳನ್ನೇ ಮಾಡಿಸುವುದು.

ವಿಶ್ವಾಮಿತ್ರ ಮಹರ್ಷಿಯ ಆಜ್ಞಾನುಸಾರವಾಗಿ ರಾಮ ಲಕ್ಷ್ಮಣರು ಸರಯೂ ನದಿಯಲ್ಲಿ ಆಚಮನ ಮಾಡಿದರು. ವಿಶ್ವಾಮಿತ್ರರು ರಾಮನ ಬಳಿಗೆ ಬಂದು, ಆ ಎರಡು ಮಂತ್ರಗಳನ್ನು ಉಪದೇಶಿಸಿದರು. ಮಾಯಾ ಮಾನುಷರೂಪನಾದ ರಾಮನು ವಿಶ್ವಾಮಿತ್ರರು ಹೇಳಿಕೊಟ್ಟಂತೆ ಹೇಳಿ, ತಲೆದೂಗಿ ಶಿಷ್ಯತ್ವವನ್ನು ಸ್ವೀಕರಿಸಿದಂತೆ ಪ್ರದರ್ಶಿಸಿದನು. ಇಷ್ಟರಲ್ಲಿ ಕತ್ತಲೆಯಾಗಿದ್ದರಿಂದ ವಿಶ್ವಾಮಿತ್ರರು ರಾಮ ಲಕ್ಷ್ಮಣರಿಗೆ ಮಲಗಲು ಪಕ್ಕಪಕ್ಕದಲ್ಲೆ ಹಾಸಿಗೆ ಏರ್ಪಡಿಸಿ, ಅವರ ಪಕ್ಕದಲ್ಲೇ ತಾವೂ ಹುಲ್ಲಿನ ಹಾಸಿಗೆಯ ಮೇಲೆ ಕುಳಿತು ಬಗೆ ಬಗೆಯ ಕಥೆಗಳನ್ನು ಹೇಳತೊಡಗಿದರು. ರಾಮ ಲಕ್ಷ್ಮಣರು ನಡೆದು ಆಲಸ್ಯವಾಗಿರುವವರಂತೆ, ನಿದ್ರೆ ಬಂದವರಂತೆ ಕಾಣುತ್ತಿದ್ದುದರಿಂದ, ವಿಶ್ವಾಮಿತ್ರರು ಕಥೆಯನ್ನು ನಿಲ್ಲಿಸಿ, ತಮ್ಮ ಮುಂದಿನ ಕಾರ್ಯಕ್ರಮವನ್ನು ಕುರಿತು ಯೋಚಿಸಿದರು.

ರಾತ್ರಿ ಕಳೆದು ಬೆಳಗಾಯಿತು. ಸುಪ್ರಭಾತವೋ ಎನ್ನುವಂತೆ ಬಣ್ಣ ಬಣ್ಣದ ಹಕ್ಕಿಗಳು ರಾಮ ಲಕ್ಷ್ಮಣರು ನಿದ್ರಿಸುತ್ತಿದ್ದ ಮರದ ಬಳಿ ಅಲ್ಲಿಂದಿಲ್ಲಿಗೆ ಹಾರುತ್ತಾ ಸುಶ್ರಾವ್ಯವಾದ ಕಂಠದಿಂದ ಕೂಗುತ್ತಿದ್ದವು. ಆ ಇಂಪಾದ ಧ್ವನಿಯು ಗಂಧರ್ವ ಗಾನದಂತಿತ್ತು. ಆದರೆ, ರಾಮ ಲಕ್ಷ್ಮಣರು ನಿದ್ರೆಯಿಂದ ಏಳಲಿಲ್ಲ. ಅವರು ಗಾಢ ನಿದ್ರೆಯಲ್ಲಿದ್ದುದನ್ನು ವಿಶ್ವಾಮಿತ್ರರು ಗಮನಿಸಿ, ರಾಮನ ಬಳಿ ಹೋಗಿ, "ರಾಮಾ! ಬೆಳಕು ಹರಿಯಿತು, ಏಳು," ಎಂದು ಸಂಸ್ಕೃತದಲ್ಲಿ ಆಡಿದ ಮಾತುಗಳು ರಾಮನ ಕರ್ಣರಂಧ್ರಗಳನ್ನು ಸೇರಿ, ರಾಮನಿಗೆ ಥಟ್ಟನೆ ಎಚ್ಚರವಾಯಿತು. ಒಡನೆಯೇ ಅವನು ಲಕ್ಷ್ಮಣನನ್ನು ಎಬ್ಬಿಸಿದನು. ಇಬ್ಬರೂ ವಿಶ್ವಾಮಿತ್ರರಿಗೆ ನಮಸ್ಕರಿಸಿ, ಸರಯೂ ನದಿಯಲ್ಲಿ ಸ್ನಾನಮಾಡಿ, ಆಚಮನ ಮಾಡಿ, ಅರ್ಘ್ಯವಿತ್ತು, ಗಾಯತ್ರೀ ಜಪಮಾಡಿ, ಪ್ರಯಾಣಕ್ಕೆ ಸಿದ್ಧರಾಗಿ ಋಷಿಯ ಬಳಿ ಬಂದು ಕೈ ಕಟ್ಟಿ ನಿಂತರು. ವಿಶ್ವಾಮಿತ್ರರು, "ಮಕ್ಕಳೇ! ಇನ್ನು ನಮ್ಮ ಆಶ್ರಮಕ್ಕೆ ಪ್ರಯಾಣ ಮಾಡಬಹುದಲ್ಲವೆ?" ಎನ್ನುತ್ತಲೇ

ರಾಮನು, “ತಮ್ಮ ಆಜ್ಞೆಗಾಗಿ ಕಾದಿದ್ದೇವೆ,” ಎಂದನು. ಮೂವರೂ ಅಲ್ಲಿಂದ ಹೊರಟರು.

ವಿಶ್ವಾಮಿತ್ರರು ಮುಂದೂ ರಾಮ ಲಕ್ಷ್ಮಣರು ಅವರ ಹಿಂದೂ ನಡೆಯುತ್ತಾ ಸರಯೂ ನದಿಯು ಗಂಗಾ ನದಿಯನ್ನು ಸೇರುವ ಸ್ಥಳವನ್ನು ಆನಂದದಿಂದ ವೀಕ್ಷಿಸಿ, ನಮಸ್ಕರಿಸಿ, ಅಣ್ಣ ತಮ್ಮಂದಿರಿಬ್ಬರೂ ದೃಷ್ಟಿಯನ್ನು ಅತ್ತಿತ್ತ ಹೊರಳಿಸಿದಾಗ ಆ ಪ್ರದೇಶದಲ್ಲಿದ್ದ ಒಂದು ಆಶ್ರಮವು ಅವರ ದೃಷ್ಟಿಗೆ ಬಿದ್ದಿತು. ಅದು ಅತಿ ಪ್ರಾಚೀನವಾದ ಆಶ್ರಮವಾಗಿ ಗೋಚರಿಸಿತು. ಆಗ, ಲಕ್ಷ್ಮಣನು ವಿಶ್ವಾಮಿತ್ರರನ್ನು ಕುರಿತು, “ಸ್ವಾಮೀ, ಈ ಪುಣ್ಯಾಶ್ರಮವು ಯಾರದ್ದು? ಇಲ್ಲಿ ವಾಸಿಸುವ ಮಹಾ ಮುನಿಯ ಹೆಸರೇನು?” ಎಂದು ಕೇಳಿದನು.

ಮಹರ್ಷಿ ವಿಶ್ವಾಮಿತ್ರರು ಮಂದಹಾಸ ಬೀರುತ್ತಾ, “ಮಗೂ! ಕೇಳು. ಪರಮ ಶಿವನು ಪಾರ್ವತಿಯನ್ನು ಲಗ್ನವಾಗುವ ಮೊದಲು ಪ್ರಮಥಗಣಗಳೊಂದಿಗೆ ಇಲ್ಲಿಗೆ ಬಂದು, ದೃಢ ನಿಯಮಗಳಿಂದ ಇಲ್ಲಿ ಲೋಕ ಪರಿಪಾಲನೆಯನ್ನು ಮಾಡುತ್ತಿದ್ದನು. ಮನ್ಮಥನು ಇಲ್ಲಿಗೆ ಬಂದು, ಶಿವನ ನಿಯಮಗಳಿಗೆ ಅಡಚಣೆ ಮಾಡಿದ್ದರಿಂದ ಶಿವನು ತನ್ನ ತ್ರಿನೇತ್ರವನ್ನು ತೆರೆದು ನೋಡಲು, ಮನ್ಮಥನ ಸರ್ವಾಂಗಗಳೂ ಭಸ್ಮವಾದುವು. ಅಂದಿನಿಂದ ಮನ್ಮಥನು ಅನಂಗನಾದನು. ಮನ್ಮಥನು ತನ್ನ ಅಂಗಗಳೆಲ್ಲವನ್ನೂ ಇಲ್ಲಿ ಕಳೆದುಕೊಂಡಿದ್ದರಿಂದ, ಈ ಪ್ರಾಂತಕ್ಕೆ ಅಂಗದ ದೇಶ ವೆಂದು ಹೆಸರಾಯಿತು. ಇದು ಶ್ರೀಮಂತವಾದ ದೇಶ. ಈ ಆಶ್ರಮವು ಶಿವನದೇ. ಅವನ ಶಿಷ್ಯರು ತಲತಲಾಂತರಗಳಿಂದ ಇಲ್ಲೇ ತಪಸ್ಸು ಮಾಡುತ್ತಾ ದೈವದಲ್ಲಿ ಲೀನವಾಗುತ್ತಿದ್ದಾರೆ. ಪರಮಧಾರ್ಮಿಕರು ಮಾತ್ರವೇ ಇಲ್ಲಿ ಇರಲು ಸಾಧ್ಯ, ಅನ್ಯರಿಗೆ ಅಸಾಧ್ಯ. ನೀವು ಇಷ್ಟಪಟ್ಟರೆ ಈ ರಾತ್ರಿ ಇಲ್ಲೇ ಮಲಗಿದ್ದು ನಾಳೆ ಸೂರ್ಯೋದಯದಲ್ಲಿ ಗಂಗಾ ಸ್ನಾನಮಾಡಿ ನಮ್ಮ ಪ್ರಯಾಣ ಸಾಗಿಸಬಹುದು,” ಎಂದರು. ರಾಮ ಲಕ್ಷ್ಮಣರು ಹಿಡಿಸಲಾರದ ಆನಂದದಿಂದ ಮಹದಾನಂದವೆಂದು ಅಂಗೀಕರಿಸಿದರು. ನಂತರ, ಗಂಗಾ ನದೀ ತೀರಕ್ಕೆ ಹೋಗಿ ಸ್ನಾನ ಮಾಡಿದರು. ಇಷ್ಟರಲ್ಲಿ, ರಾಮ ಲಕ್ಷ್ಮಣರೊಂದಿಗೆ ವಿಶ್ವಾಮಿತ್ರರು ಬಂದಿರುವರೆನ್ನುವುದನ್ನು ತಿಳಿದ ಆಶ್ರಮವಾಸಿಗಳು ಅಲ್ಲಿಗೆ ಬಂದು ವಿಶ್ವಾಮಿತ್ರರನ್ನೂ ರಾಮ ಲಕ್ಷ್ಮಣರನ್ನೂ ಆಶ್ರಮಕ್ಕೆ ಕರೆದೊಯ್ದರು.

ಆ ರಾತ್ರಿ ಪರಮಶಿವನ ಆಶ್ರಮದಲ್ಲಿ ಕಂದಮೂಲ ಫಲಾದಿಗಳನ್ನು ತಿಂದು, ಆಶ್ರಮವಾಸಿಗಳ ನಿತ್ಯಾನುಷ್ಠಾನವನ್ನು ವೀಕ್ಷಿಸಿ, ವಿಶ್ವಾಮಿತ್ರರು ಹೇಳಿದ ದಿವ್ಯ ಕಥೆಗಳನ್ನು ಕೇಳಿ ಆನಂದಿಸುತ್ತಾ ಕಾಲವನ್ನು ಸಂತೋಷವಾಗಿ ಕಳೆದರು. ಬೆಳಗಾ

ಗುತ್ತಲೆ ಸ್ನಾನ ಸಂಧ್ಯಾದಿಗಳನ್ನು ಮುಗಿಸಿ, ಆಶ್ರಮವಾಸಿಗಳ ಅಪ್ಪಣೆ ಪಡೆದು ರಾಮ ಲಕ್ಷ್ಮಣರು ವಿಶ್ವಾಮಿತ್ರರ ಜೊತೆಯಲ್ಲಿ ಹೊರಟರು. ಗಂಗಾನದಿಯನ್ನು ದಾಟಬೇಕಾಗಿದ್ದುದರಿಂದ ಸ್ಥಾಣ್ವಾಶ್ರಮ ವಾಸಿಗಳು ಅವರಿಗಾಗಿ ಸಿದ್ಧಪಡಿಸಿದ್ದ ನಾವೆಯನ್ನು ನದೀ ತೀರಕ್ಕೆ ತಂದು, ವಿಶ್ವಾಮಿತ್ರರನ್ನೂ ರಾಮ ಲಕ್ಷ್ಮಣರನ್ನೂ ಅದರಲ್ಲಿ ಆಚೆ ದಡಕ್ಕೆ ಕರೆದೊಯ್ದು, ಆಶ್ರಮಕ್ಕೆ ಹಿಂದಿರುಗಲು ವಿಶ್ವಾಮಿತ್ರರ ಅಪ್ಪಣೆ ಪಡೆದರು. ಅವರ ಭಕ್ತಿ ಶ್ರದ್ಧೆಗಳನ್ನು ವಿಶ್ವಾಮಿತ್ರರು ಕೊಂಡಾಡಿ, ಸಂತೋಷದಿಂದ ಅವರನ್ನು ಹರಸಿ ಕಳಿಸಿದರು.

ಅದೇ ಸಮಯದಲ್ಲಿ ಆ ಪ್ರದೇಶದಲ್ಲಿ ಒಂದು ದೊಡ್ಡ ಪ್ರಳಯ ಶಬ್ದವು ಕೇಳಿ ಬಂತು. ಜಲವು ದೊಡ್ಡ ದೊಡ್ಡ ನೊರೆಯಾಗಿ ಭಾರಿ ಪ್ರಮಾಣದಲ್ಲಿ ಏರುತ್ತಾ ಇದ್ದುದನ್ನು ಗಮನಿಸಿದ ರಾಮನು ವಿಶ್ವಾಮಿತ್ರರನ್ನು ಕುರಿತು, "ಸ್ವಾಮೀ! ಇದೇನು ಶಬ್ದ? ಈ ಪ್ರವಾಹ ಒಮ್ಮಿಂದೊಮ್ಮೆಲೇ ಈ ರೀತಿ ಘೋರ್ಗರೆಯುತ್ತಾ ಅಧಿಕವಾಗುತ್ತಿರುವುದೇಕೆ?" ಎಂದು ಪ್ರಶ್ನಿಸಿದನು. ವಿಶ್ವಾಮಿತ್ರರು, "ರಾಮಾ! ಪ್ರಶಾಂತವಾಗಿ ಪ್ರವಹಿಸುತ್ತಿರುವ ಗಂಗಾ ನದಿಯಲ್ಲಿ ವೇಗವಾಗಿ ಹರಿಯುವ ಸರಯೂ ನದಿಯು ಬಂದು ಬೀಳುತ್ತಿರುವುದರಿಂದ ಈ ಪ್ರಳಯ ಶಬ್ದವಾಗುತ್ತಿದೆ ಅಷ್ಟೆ, ಬೇರೇನೂ ಅಲ್ಲ," ಎಂದು ಶಾಂತವಾಗಿ ಉತ್ತರಿಸಿ, "ರಾಮಾ! ಪೂರ್ವದಲ್ಲಿ ಬ್ರಹ್ಮನು ಮನಸ್ಸಿನಲ್ಲೇ ಸಂಕಲ್ಪಿಸಿದಾಗ, ಕೈಲಾಸ ಪರ್ವತದಲ್ಲಿ ಒಂದು ಸರೋವರವು ಹುಟ್ಟಿತು. ಮನಸ್ಸಿನಿಂದ ಹುಟ್ಟಿದ ಸರೋವರವಾದ್ದರಿಂದ ಅದಕ್ಕೆ ಮಾನಸ ಸರೋವರವೆಂದು ದೇವತೆಗಳು ಹೆಸರಿಟ್ಟರು. ಆ ಸರೋವರದಲ್ಲಿ ಹುಟ್ಟಿ ಹರಿದು ಬಂದ ಪ್ರವಾಹವೇ ಈ ಸರಯೂ ನದಿ. ಈ ಸರಯೂ ನದಿಯೇ ಅಯೋಧ್ಯೆಯನ್ನು ಸುತ್ತುವರಿದು, ಅಲ್ಲಿಂದ ಹರಿದು ಬಂದು ಇಲ್ಲಿ ಗಂಗೆಯನ್ನು ಸೇರುತ್ತಿದೆ. ಬ್ರಹ್ಮದೇವನ ಮಾನಸ ಸರೋವರದಲ್ಲಿ ಹುಟ್ಟಿದ್ದಾದ್ದರಿಂದ ಈ ಸರಯೂ ನದಿಯು ಪುಣ್ಯ ನದಿಯಾಗಿ ಸಾರ್ಥಕ ಪಡೆದಿದೆ," ಎಂದು ನದಿಯ ವೈಶಿಷ್ಟತೆಯನ್ನು ವರ್ಣಿಸುತ್ತಾ ದಕ್ಷಿಣ ತೀರವನ್ನು ಸೇರಿ ದಟ್ಟವಾದ ಅರಣ್ಯವನ್ನು ಪ್ರವೇಶಿಸಿದರು.

ಆ ಅರಣ್ಯವು ಮಹಾ ಭಯಂಕರವಾಗಿತ್ತು. ಅದನ್ನು ನೋಡಿ ರಾಮನು, "ಸ್ವಾಮೀ! ಈ ಅರಣ್ಯದಲ್ಲಿ ಮನುಷ್ಯರು ಎಂದೂ ಸಂಚರಿಸಿದ ಚಿಹ್ನೆಗಳೇ ಕಾಣುತ್ತಿಲ್ಲ," ಎಂದನು. ಅಷ್ಟರಲ್ಲಿ, ಹುಲಿ, ಸಿಂಹ, ಇನ್ನೂ ಇತರ ಪ್ರಾಣಿಗಳು ಭೂಮಿ ಸೀಳುವಂತೆ ಗರ್ಜಿಸುತ್ತಿದ್ದುದು ಕೇಳಿಸಿತು. ಕೆಲವು ಪ್ರಾಣಿಗಳು ಭಯಂಕರವಾಗಿ ಹೋರಾಡುತ್ತಾ ರೌದ್ರ ಪ್ರದರ್ಶಿಸುತ್ತಿದ್ದುದನ್ನು ನೋಡಿದರು. ಆ ಅರಣ್ಯವೆಲ್ಲಾ ಎಲ್ಲಿ ನೋಡಿದರೂ ಎತ್ತರವಾಗಿ ಬೆಳೆದ ದೇವದಾರು, ಆಲ, ಬಿಲ್ವಪತ್ರೆ ಮರಗಳಿಂದಲೂ ದಟ್ಟವಾಗಿ ಬೆಳೆದ ತುಂಬೆ, ತುಳಸೀ ವನಗಳಿಂದಲೂ ತುಂಬಿದ್ದಿತು. ದಾರಿಯೇ ಇಲ್ಲದೆ,

ಅವರವರೇ ದಾರಿ ಮಾಡಿಕೊಂಡು ನಡೆಯಬೇಕಾಯಿತು. ಆ ಅರಣ್ಯವನ್ನು ನೋಡಿ ಲಕ್ಷ್ಮಣನು, "ಸ್ವಾಮೀ ಈ ಭೀಕರಾರಣ್ಯ ಯಾರದು? ಇದರ ಹೆಸರೇನು?" ಎಂದು ವಿಶ್ವಾಮಿತ್ರರನ್ನು ಪ್ರಶ್ನಿಸಿದನು.

ಅವರು, "ಲಕ್ಷ್ಮಣಾ! ಪೂರ್ವದಲ್ಲಿ ಧನಧಾನ್ಯ ಸಮೃದ್ಧವಾದ ಮಲದ, ಕರೂಶಾ ಎನ್ನುವ ಎರಡು ರಾಜ್ಯಗಳು ಇಲ್ಲಿ ಇದ್ದವು. ಅವು ಸಾಕ್ಷತ್ ದೇವತೆಗಳ ರಾಜ್ಯದಂತೆ ಬೆಳಗುತ್ತಿದ್ದವು. ದೇವತೆಗಳೇ ಆ ಎರಡು ರಾಜ್ಯಗಳನ್ನು ನಿರ್ಮಿಸಿದ್ದಿರಬೇಕು. ಪೂರ್ವದಲ್ಲಿ ದೇವೇಂದ್ರನು ವೃತ್ರಾಸುರನನ್ನು ಸಂಹರಿಸಿದಾಗ ಅವನಿಗೆ ಅಶುಚಿ ಯಾಯಿತು. ಅಲ್ಲದೆ ಅವನು ಘೋರವಾದ ಹಸಿವಿನಿಂದ ಬಾಧೆಪಡಲಾರಂಭಿ ಸಿದನು. ಆಗ ದೇವತೆಗಳೂ ಮಹರ್ಷಿಗಳೂ ಅವನನ್ನು ಇಲ್ಲಿಗೆ ಕರೆತಂದು, ಗಂಗೆಯಲ್ಲಿ ಸ್ನಾನ ಮಾಡಿಸಿ, ಬಿಂದಿಗೆ ಬಿಂದಿಗೆ ಗಂಗಾಜಲವನ್ನು ಮಂತ್ರಿಸಿ, ಅವನ ತಲೆಯ ಮೇಲೆ ಸುರಿದರು. ಅದರಿಂದ ಅವನ ಬ್ರಹ್ಮಹತ್ಯಾ ದೋಷವು ಹೋಯಿತು. ಅಶುಚಿಯೂ ಹಸಿವೂ ಮಾಯವಾದುವು ಎಂದು ಬ್ರಹ್ಮದೇವನು ಸಂತೋಷಪಟ್ಟು, ಈ ಪ್ರದೇಶದಲ್ಲಿ ದೋಷಮಲವು ಹೋದದ್ದರಿಂದ ಮಲದ ಎಂದೂ ಕರೂಷವು ಹೋದದ್ದರಿಂದ ಕರೂಷ ಎಂದೂ ಎರಡು ದೇಶಗಳಾಗಿ ಪ್ರಸಿದ್ಧವಾಗಲಿ ಎಂದನು. ಜ್ಞಾಪಕಾರ್ಥವಾಗಿ ದೇವತೆಗಳು ಧನಧಾನ್ಯ ಸದುಪಾಯ ಸಹಿತವಾದ ಮಲದ ಕರೂಷ ಎನ್ನುವ ಈ ರಾಜ್ಯಗಳು ಅಭಿವೃದ್ಧಿಯಾಗುವಂತೆ ಮಾಡಿದರು.

ಹೀಗಿರುವಾಗ, ಈ ದೇಶಗಳ ಮಧ್ಯೆ ತಾಟಕಿ ಎನ್ನುವ ರಾಕ್ಷಸಿಯು ಪ್ರಬಲವಾಗಿ, ಎಲ್ಲವನ್ನೂ ಧ್ವಂಸ ಮಾಡಲಾರಂಭಿಸಿದಳು. ಅವಳು ಯಕ್ಷಿಣಿ, ಕಾಮರೂಪಿಣಿ. ಅವಳು ಹುಟ್ಟಿದಾಗಲೇ ಸಾವಿರ ಆನೆಗಳ ಬಲ ಪಡೆದಿದ್ದಳೆಂದು ಪ್ರತೀತಿ. ಅವಳಿಗೆ ಮಾರೀಚನೆಂಬೊಬ್ಬ ಮಗ. ಅವನು ಇಂದ್ರನಂಥ ಪರಾಕ್ರಮಿ. ತಾಯಿ ಮತ್ತು ಮಗ ಇಬ್ಬರೂ ಸೇರಿ ಪ್ರಜೆಗಳನ್ನು ನಾನಾ ವಿಧವಾಗಿ ಬಾಧಿಸತೊಡಗಿದರು. ಆ ದುಷ್ಟಚಾರಿಣಿಯಾದ ತಾಟಕಿಯು ಇರುವ ಅರಣ್ಯವು ಇಲ್ಲಿಂದ ಒಂದೂವರೆ ಯೋಜನ ದೂರದಲ್ಲಿದೆ.

ಸಮೃದ್ಧವಾದ ಈ ಮಲದ, ಕರೂಷ ರಾಜ್ಯಗಳನ್ನು ನಾಶಮಾಡಿದವಳೇ ಆ ತಾಟಕಿ. ಭೂಮಿಗಳನ್ನು ಸಾಗುಮಾಡುತಿದ್ದ ಜನರು ಕ್ಷೀಣಿಸಿದ್ದರಿಂದಲೇ, ಫಲವತ್ತಾದ ಭೂಮಿಯೆಲ್ಲಾ ಮಹಾರಣ್ಯವಾಗಿ ಪರಿಣಮಿಸಿತು. ತಾಟಕಿ ಮತ್ತು ಅವಳ ಮಗ ಯಾರಿಗೂ ಸಿಕ್ಕದ ಹಾಗೆ ತಪ್ಪಿಸಿಕೊಳ್ಳುತ್ತಿದ್ದಾರೆ. ತಾಟಕಿಯನ್ನು ಹಿಡಿದು ಕೊಲ್ಲುವ ವರು ಯಾರೂ ಇದುವರೆಗೆ ಸಿಗಲಿಲ್ಲ. ಭಯಂಕರ ಶಕ್ತಿ ಸಾಮರ್ಥ್ಯಗಳುಳ್ಳ ಅವಳನ್ನು ಕೊಲ್ಲುವವನು ನೀನೊಬ್ಬನಲ್ಲದೆ ಬೇರೊಬ್ಬರು ನನ್ನ ಊಹೆಗೂ ಸಿಗು

ತ್ತಿಲ್ಲ. ಈ ದುರ್ಮಾರ್ಗಿಗಳಾದ ತಾಯಿ ಮತ್ತು ಮಗ ನನ್ನ ಯಾಗಾದಿ ಸತ್ಕರ್ಮಗಳನ್ನು ಅಪವಿತ್ರ ಮಾಡುತ್ತಿರುವವರು," ಎಂದು ಆ ರಾಕ್ಷಸರ ವಿಷಯ ವನ್ನೂ ಅವರ ಪರಾಕ್ರಮ ಶಕ್ತಿಗಳನ್ನೂ ಹೇಳುತ್ತಾ ದಾರಿಯಲ್ಲಿ ನಡೆಯುತ್ತಾ ಹೋದರು.

ವಿಶ್ವಾಮಿತ್ರರ ಮಾತುಗಳು ರಾಮನ ಹೃದಯವನ್ನು ಕದಲಿಸಿದುವು. ತನ್ನ ಭಾವನೆ ಗಳನ್ನು ಹೊಟ್ಟೆಯಲ್ಲಿಟ್ಟುಕೊಳ್ಳಲಾರದೆ ರಾಮನು ವಿನಯ ಮತ್ತು ವಿಧೇಯ ತೆಗಳಿಂದ, "ಮುನಿಪುಂಗವಾ! ಯಕ್ಷರು ಅಲ್ಪ ವೀರ್ಯರೆಂದು ಕೇಳಿದ್ದೇನೆ. ಅದ ರಲ್ಲೂ ತಾಟಕಿಯು ಒಬ್ಬ ಹೆಂಗಸು! ಅಬಲೆ! ಅವಳಿಗಷ್ಟು ಬಲ ಎಲ್ಲಿಂದ ಬಂದಿತು? ದೇವತೆಗಳೇ ನಿರ್ಮಿಸಿದ ದೇಶವನ್ನು ಹೇಗೆ ತಾನೆ ಅವಳು ಹಾಳು ಮಾಡಿದಳು? ಇದು ಬಹಳ ಆಶ್ಚರ್ಯಕರವಾಗಿದೆ, ನಂಬುವುದಕ್ಕೂ ಸಾಧ್ಯವಿಲ್ಲ ದಂತಿದೆ," ಎಂದನು. ಅವನ ಮಾತುಗಳನ್ನು ಕೇಳಿ ವಿಶ್ವಾಮಿತ್ರರು, "ರಾಮಾ! ನನ್ನ ಮಾತುಗಳು ಪರಮ ಸತ್ಯ. ವಿವರಿಸುತ್ತೇನೆ ಕೇಳು. ಪೂರ್ವದಲ್ಲಿ ಸುಕೇತು ಎನ್ನುವ ಯಕ್ಷನೊಬ್ಬ ಇದ್ದನು. ಅವನು ಎಷ್ಟು ಪರಾಕ್ರಮಿಯೋ ಅಷ್ಟೇ ಸದಾಚಾರ ಸಂಪನ್ನನು. ಅವನಿಗೆ ಸಂತಾನ ಪ್ರಾಪ್ತಿಯಿಲ್ಲದುದರಿಂದ ಆತನು ಘೋರ ತಪಸ್ಸು ಮಾಡಿದನು. ಬ್ರಹ್ಮನು ಅವನ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷವಾಗಿ, 'ಮಹಾ ಬಲಶಾಲಿ ಯಾದ, ಶಕ್ತಿ ಸಾಮರ್ಥ್ಯಗಳಲ್ಲಿ ಸರಿಸಾಟಿ ಇಲ್ಲದ ಒಬ್ಬಳು ಪುತ್ರಿಯು ನಿನಗೆ ಹುಟ್ಟುವಳು,' ಎಂದು ವರವನ್ನು ಅನುಗ್ರಹಿಸಿದನು.

ಸುಕೇತುವು ಮನೆಗೆ ಹಿಂದಿರುಗಿ, ಕಾಲವನ್ನು ಕಳೆಯುತ್ತಿರಲು, ಅವನಿಗೊಬ್ಬಳು ಮಗಳು ಹುಟ್ಟಿದಳು. ಆ ಮಗುವು ಬೆಳೆದು ದೊಡ್ಡವಳಾಗಿ, ಅಬಲಳಾದರೂ ತನ್ನ ಶಕ್ತಿ ಸಾಮರ್ಥ್ಯಗಳನ್ನು ಕಳೆದುಕೊಳ್ಳದೆ ಬ್ರಹ್ಮಾನುಗ್ರಹದಿಂದ ಅನೇಕ ಆನೆಗಳ ಬಲದಿಂದ ಕೂಡಿದವಳಾಗಿ ಅಡೆತಡೆಯೇ ಇಲ್ಲದೆ ಸ್ವೇಚ್ಛೆಯಾಗಿ ಸಂಚರಿಸು ತ್ತಿದ್ದಳು. ಅವಳು ರೂಪವತಿ. ಆದ್ದರಿಂದ ಅವಳ ತಂದೆಯು ಸರಿಯಾದ ವರ ಸಿಕ್ಕಿದರೆ ಮಾತ್ರ ತಾಟಕಿಗೆ ಲಗ್ನ ಮಾಡಬೇಕೆಂದು ನಿಶ್ಚಯಿಸಿದನು. ಬಹಳವಾಗಿ ಹುಡುಕಿ, ಕಡೆಗೆ ಸುಂದ ಎನ್ನುವವನಿಗೆ ಕೊಟ್ಟು ಲಗ್ನ ಮಾಡಿದನು. ಮೂರು ವರ್ಷಗಳ ನಂತರ ಅವರಿಗೊಬ್ಬ ಮಗನು ಜನಿಸಿದನು. ಅವನೇ ಮಾರೀಚ. ತಾಯಿ ತಾಟಕಿ ಮತ್ತು ಮಗ ಮಾರೀಚ ಇಬ್ಬರೂ ಯಾರೂ ಎದುರಿಸಲಾಗದಂಥ ಬಲಿಷ್ಠರಾಗಿ ಮೆರೆಯಲಾರಂಭಿಸಿದರು. ಅವರು ಅನೇಕ ಪಾಪಕಾರ್ಯಗಳನ್ನು ಮಾಡುತ್ತಾ ಮಹಾ ಋಷಿಗಳನ್ನು ಅನೇಕ ವಿಧವಾಗಿ ಬಾಧಿಸುತ್ತಿದ್ದುದರಿಂದ, ತಾಟಕಿಯ ಪತಿಯಾದ ಸುಂದನು ಅಗಸ್ತ್ಯ ಮಹರ್ಷಿಯ ಶಾಪಕ್ಕೆ ಗುರಿಯಾಗಿ ಸತ್ತುಹೊದನು. ತನ್ನ ಪತಿಯನ್ನು ಕೊಂದನೆಂಬ ಕೋಪದಿಂದ, ಮಗನನ್ನು

ಜೊತೆಯಲ್ಲಿಟ್ಟುಕೊಂಡು ತಾಟಕಿಯು ಅಗಸ್ತ್ಯರನ್ನು ಕೊಲ್ಲಲು ಹೊರಟಳು. ವಿಕಾರವಾದ ಆಕಾರವನ್ನು ತಾಳಿ, ಭಯಂಕರವಾಗಿ ಆರ್ಭಟಿಸುತ್ತಾ ಅಗಸ್ತ್ಯರನ್ನು ನುಂಗುವುದಕ್ಕೆಂದು ಓಡಿ ಬಂದಳು. ಇವರ ಕಾರ್ಯವನ್ನು ಗಮನಿಸಿ, ಅವರು ಮೊದಲು ಮಾರೀಚನನ್ನು, 'ನೀನು ರಾಕ್ಷಸನಾಗು,' ಎಂದು ಶಪಿಸಿದರು.

ಇದರಿಂದ ಮತ್ತಷ್ಟು ಕ್ರೋಧಗೊಂಡ ತಾಟಕಿಯು ಕಣ್ಣುಗಳಿಂದ ರಕ್ತವನ್ನು ಕಾರುತ್ತಿರುವಳೋ ಎನ್ನುವಂತೆ, ಭಯಂಕರವಾಗಿ ಕೇಕೆ ಹಾಕುತ್ತಾ ಅಗಸ್ತ್ಯರ ಮೇಲೆ ಬೀಳಹೋದಳು. ಆಲಸ್ಯವು ಅಪಾಯವೆಂದು ತಿಳಿದು ಅಗಸ್ತ್ಯರು ತಕ್ಷಣ ತಾಟಕಿಯನ್ನುದ್ದೇಶಿಸಿ, 'ನಿನ್ನ ಸೌಂದರ್ಯವನ್ನು ಕಳೆದುಕೊಂಡು, ವಿಕಾರ ರೂಪದವಳಾಗಿ, ನರಮಾಂಸ ಭಕ್ಷಿಸುತ್ತಾ ಮಹಾ ರಾಕ್ಷಸಿಯಾಗಿ ಅಲೆಯುತ್ತಿರು,' ಎಂದು ಶಪಿಸಿದರು. ಅವರ ಶಾಪಕ್ಕೆ ಸ್ವಲ್ಪವೂ ಜಗ್ಗದೆ, ಕುಗ್ಗದೆ, ಅವಳು ಅಗಸ್ತ್ಯರನ್ನು ಕೊಲ್ಲಲು ಬಹುವಾಗಿ ಪ್ರಯತ್ನಿಸಿ ವಿಫಲಳಾದಳು. ಅವರನ್ನು ಏನೂ ಮಾಡಲಾರದೆ ತಮ್ಮ ಕೋಪವನ್ನು ಬೇರೆ ರೀತಿಯಲ್ಲಿ ತೀರಿಸಿಕೊಳ್ಳಲೆತ್ನಿಸಿ, ಅಗಸ್ತ್ಯರು ಸಂಚರಿಸುತ್ತಿದ್ದ ಈ ಮಲದ, ಕರೂಷ ದೇಶಗಳನ್ನು ನಾಶಮಾಡಿದ್ದಾರೆ. ಅಗಸ್ತ್ಯರ ಮೇಲಿನ ಕೋಪವನ್ನು ತಾಯಿ ಮಕ್ಕಳಿಬ್ಬರೂ ಈ ರೀತಿ ತೀರಿಸಿಕೊಳ್ಳುತ್ತಿದ್ದಾರೆ," ಎಂದು ಹೇಳಿದರು.

ಅವರು ಹೇಳಿದ ಪೂರ್ವ ವೃತ್ತಾಂತವನ್ನು ಕೇಳಿ ರಾಮನು, "ಸ್ವಾಮೀ! ಸರಿ, ಅವಳು ಬ್ರಹ್ಮಾನುಗ್ರಹದಿಂದ ಹುಟ್ಟಿ, ತಪಶ್ಶಕ್ತಿ ಹೊಂದಿ, ಮಹರ್ಷಿಯ ಶಾಪದಿಂದ ರಾಕ್ಷಸಾಕಾರ ಪಡೆದು, ಮಹಾಬಲದಿಂದ, ಪರಾಕ್ರಮದಿಂದ ಸ್ವೇಚ್ಛಾ ವಿಹಾರ ನಡೆಸುತ್ತಿರಬಹುದು. ಎಷ್ಟು ಬಲ ಪರಾಕ್ರಮಗಳಿದ್ದರೂ ಅವಳು ಅಬಲೆಯೇ ಅಲ್ಲವೆ? ಸ್ತ್ರೀ ಹತ್ಯಾ ಪಾಪವು ಮಹಾ ಘೋರವಾದದ್ದಲ್ಲವೆ? ಆದ್ದರಿಂದಲೇ ಅಗಸ್ತ್ಯರು ಕೂಡ ಅವಳನ್ನು ಕೊಲ್ಲದೆ, ಇಂಥ ವಿಕಾರ ರೂಪದವಳಾಗು ಎಂದು ಶಪಿಸಿದ್ದು. ಇಲ್ಲದಿದ್ದರೆ, ಪತಿಯನ್ನು ಶಪಿಸಿಕೊಂದ ಮಹಾ ಋಷಿಗೆ ಸತಿಯನ್ನೂ ಶಪಿಸಿ ಕೊಲ್ಲಲು ಆಗುತ್ತಿರಲಿಲ್ಲವೆ? ಸ್ತ್ರೀ ಹತ್ಯೆಗೆ ತೊಡಗುವುದು ಪುರುಷ ಸಿಂಹಗಳಿಗೆ ಹೇಳಿಸಿದ ಕೃತ್ಯವಲ್ಲವೆಂದು ಕೇಳಿದ್ದೆ. ನಾನೀಗ ಏನು ಮಾಡಬೇಕೋ ಆಜ್ಞಾಪಿಸಬೇಕು," ಎಂದು ತನ್ನ ಸಂಶಯವನ್ನು ಹೇಳಿದನು.

ವಿಶ್ವಾಮಿತ್ರರು ಸಂತೋಷಿಸಿ, "ರಾಮಾ! ಸ್ತ್ರೀ ಹತ್ಯೆ ಮಹಾಪಾತಕವೆಂದು ನನಗೆ ತಿಳಿಯದೆ ಇಲ್ಲ. ಆದರೆ, ಗೋಬ್ರಾಹ್ಮಣ, ಸಾಧು ಸಂರಕ್ಷಣೆಗಾಗಿ ಅಧರ್ಮವನ್ನು ನಾಶ ಮಾಡುವುದರಿಂದ ಯಾವ ದೋಷವೂ ಬರುವುದಿಲ್ಲ. 'ಧರ್ಮೋ ರಕ್ಷತಿ ರಕ್ಷಿತಃ' ಎನ್ನುವ ಆರ್ಯೋಕ್ತಿಯನ್ನು ನೀನು ಕೇಳಿಲ್ಲವೆ? ಇದು ಸ್ವಾರ್ಥಕ್ಕಾಗಿ

ಮಾಡುವ ಹಿಂಸೆ ಎನಿಸುವುದಿಲ್ಲ. ಲೋಕರಕ್ಷಣೆಗಾಗಿ ಮಾಡುವ ಕಾರ್ಯದಿಂದ ಎಂಥ ದೋಷವೂ ಬರುವುದಿಲ್ಲ ಎನ್ನುವುದೇ ನನ್ನ ಮತ. ಅಷ್ಟೇ ಅಲ್ಲ, ಸೃಷ್ಟಿ, ಸ್ಥಿತಿ, ಲಯ ಇವು ದೈವ ಸಂಕಲ್ಪವಾದುವುಗಳು. ಇವು ಮಾನವ ಮಾತ್ರರಿಂದ ನಡೆಸಲ್ಪಡುವ ಕಾರ್ಯಗಳಲ್ಲ. ನೀನು ದೈವಾಂಶ ಸಂಭೂತನು. ನಿನಗೆ ಅಂಥ ಅಧಿಕಾರ ಇದೆ. ಬೆಂಕಿಗೆ ಯಾವ ಮಾಲಿನ್ಯವೂ ಹೇಗೆ ಅಂಟುವುದಿಲ್ಲವೋ ದೈವಕ್ಕೂ ಹಾಗೆಯೇ ಯಾವ ಪಾಪವೂ ಅಂಟದು. ದೈವಕ್ಕೆ ರಕ್ಷಿಸುವುದಕ್ಕೆ ಎಷ್ಟು ಅಧಿಕಾರ ಉಂಟೊ, ಸೃಷ್ಟಿಸುವುದಕ್ಕೆ ಎಂಥ ಸಂಕಲ್ಪವೋ ಶಿಕ್ಷಿಸುವುದಕ್ಕೂ ಅಷ್ಟೆ ಅಧಿಕಾರ ಉಂಟು. ಪಾಪಕ್ಕೆ ತಕ್ಕ ಶಿಕ್ಷೆ ಎಂದಿಗೂ ತಪ್ಪದು. ಇನ್ನೂ ಅನೇಕ ಪಾಪಗಳನ್ನು ಮಾಡಿ, ಪೂರ್ತಿಯಾಗಿ ಹೀನವಾಗುವುದಕ್ಕಿಂತ, ಈಗ ನಿನ್ನ ಕೈಯಿಂದ ಸಾಯುವುದು ತಾಟಕಿಯ ಪುಣ್ಯವೆಂದೇ ಹೇಳಬಹುದು. ನೀನು ಅವಳಿಗೂ ದೇಶಕ್ಕೂ ಉಪಕಾರ ಮಾಡಿದವನಾಗುತ್ತೀಯೇ ವಿನಾ ಅಪಕಾರವನ್ನಾಗಲೀ ಪಾಪ ವನ್ನಾಗಲೀ ಮಾಡಿದವನಾಗುವುದಿಲ್ಲ.

ಈಗ ನೀನು ದಯೆ ತೋರಿ ಅವಳನ್ನು ಬಿಟ್ಟುಬಿಟ್ಟರೆ ಲೋಕಕ್ಕೂ ಧರ್ಮಕ್ಕೂ ಹೇಳಲಾರದಷ್ಟು ಹಾನಿ ಮಾಡಿದಂತಾಗುವುದಲ್ಲದೆ, ಆ ತಾಟಕಿಯ ಪಾಪವನ್ನು ಅಧಿಕಗೊಳಿಸಿದವನಾಗುತ್ತೀಯೆ. ನಾನು ದಿವ್ಯ ದೃಷ್ಟಿಯಿಂದ ಅರಿತಿದ್ದೇನೆ, ನೀನು ರಾಕ್ಷಸ ಸಂಹಾರಕ್ಕೆ ಅವತರಿಸಿದ್ದೀಯೆ. ಇದು ನಿನ್ನ ಕೆಲಸ. ನೀನು ಇಂದು ಮಾಡುವುದಾಗಲೀ ಇನ್ನು ಮುಂದೆ ಮಾಡುವುದಾಗಲೀ ಧರ್ಮ ರಕ್ಷಣೆ, ರಾಕ್ಷಸ ಸಂಹಾರ. ಇವೆರಡೂ ನಿನ್ನ ಜನ್ಮಕ್ಕೆ ಕಾರಣಗಳು. ಈ ಸತ್ಯವನ್ನು ತಿಳಿದೇ ನಿನ್ನ ಬಳಿಗೆ ಬಂದೆ. ಇಲ್ಲದಿದ್ದರೆ, ನಿನ್ನನ್ನು ನಾನು ಆಶ್ರಯಿಸುವ ಕಾರಣವಾದರೂ ಏನಿತ್ತು? ಮಹರ್ಷಿಗಳು, ಸಾಧು ಪುಂಗವರು, ಲೋಕಕ್ಷೇಮ ನಿಮಿತ್ತವಾಗಿ ರಾಜರನ್ನು ಆಶ್ರಯಿಸುವರೇ ಹೊರತು, ತಮ್ಮ ಸ್ವಾರ್ಥಕ್ಕಲ್ಲ. ಸರ್ವಸಂಗ ಪರಿತ್ಯಾಗಿಗಳಾಗಿ, ಕಂದ ಮೂಲಾದಿಗಳಿಂದ ಕಾಯವನ್ನು ಕೊಂಚಕಾಲ ತುಂಬಿ, ಕಡೆಗೆ ಆ ಆಹಾರ ವನ್ನು ವಿಸರ್ಜಿಸಿ, ಕಾಯವನ್ನು ಅಲಕ್ಷಿಸಿ, ಕಾಂತಿಯಲ್ಲಿ ಲೀನವಾಗುವವರು ಪರಿಪರಿ ರಕ್ಷಣೆಯನ್ನಾದರು ಏಕೆ ಬಯಸುತ್ತಾರೆ? ಏನಾದರೆ ಅವರಿಗೇನು ನಷ್ಟ? ಆದರೆ, ಜ್ಞಾನಿಗಳು ತಮ್ಮ ಮೋಕ್ಷವನ್ನು ಸಾಧಿಸುವುದಲ್ಲದೆ, ತಾವು ತಿಳಿದ ಸತ್ಯವನ್ನು ಲೋಕದ ಜನರಿಗೆ ತಿಳಿಸಿ, ಅವರು ಆಚರಿಸುವಂತೆ ಮಾಡಿ, ಅವರನ್ನು ಮುಕ್ತರ ನ್ನಾಗಿ ಮಾಡಲು ಸಂಕಲ್ಪಿಸುತ್ತಾರೆ. ಜ್ಞಾನಿಗಳು ಲೋಕದೊಂದಿಗೆ ನಮಗೇನು ಕೆಲಸ ಎಂದು ತಮ್ಮ ಪಾಡು ತಾವು ನೋಡಿಕೊಂಡರೆ, ಜೀವಿಗಳು ಭ್ರಷ್ಟರಾಗಿ, ಧರ್ಮವನ್ನು ನಾಶ ಮಾಡುವರು.

ಮಹರ್ಷಿಗಳು ಇಂಥ ಪವಿತ್ರ ಉದ್ದೇಶವನ್ನು ದೃಷ್ಟಿಯಲ್ಲಿ ಇಟ್ಟುಕೊಂಡೇ ಲೋಕದ ಜನರೊಂದಿಗೆ ಸಂಬಂಧ ಇಟ್ಟುಕೊಳ್ಳುವರು. ಅವರ ಸ್ವಾರ್ಥಕ್ಕಾಗಿ ಅಲ್ಲ. ಅವರು ನೀರಿನಲ್ಲಿನ ತಾವರೆಯಂತೆ, ಲೋಕದ ಜನರೊಂದಿಗೆ ಬೆರೆತಿದ್ದರೂ ಲೋಕದ ಯಾವ ವಾಸನೆಗಳನ್ನೂ ತಮ್ಮೊಳಗೆ ಸೇರಿಸಿಕೊಳ್ಳುವುದಿಲ್ಲ, ಲೋಕೋದ್ಧಾರವನ್ನು ಮಾತ್ರವೇ ನೋಡುವರು, ಧರ್ಮ ರಕ್ಷಣೆಯನ್ನು ಮಾತ್ರವೇ ಮಾಡುವರು. ದೈವ ವನ್ನು ಮಾತ್ರವೇ ಆಶ್ರಯಿಸುವರು," ಎಂದರು. ರಾಮನು ಏನೂ ಅರಿಯದವ ನಂತೆ, "ಸ್ವಾಮೀ! ಮಹರ್ಷಿಗಳ ಅಂತರ್ಭಾವಗಳಲ್ಲಿರುವ ಪವಿತ್ರವಾದ ಅರ್ಥ ವನ್ನು ಲೋಕದ ಜನರು ಗಮನಿಸುವುದಿಲ್ಲ ಅಲ್ಲವೇ? ಎಂತಲೇ ಅವರು ತಿಳಿದು ಕೊಳ್ಳಲಿ ಎನ್ನುವುದಕ್ಕಾಗಿ ನಾನು ನಿಮ್ಮನ್ನು ಹೀಗೆ ಪ್ರಶ್ನಿಸಿದೆನಲ್ಲದೆ, ಯಾವುದು ಏನಾದರೆ ನನಗೇನು? ನಾನು ಪಿತೃ ಆಜ್ಞೆಯಂತೆ ನಡೆಯುವವನು. ವಿಶ್ವಾಮಿತ್ರರು ಹೇಳಿದಂತೆ ನಡೆದುಕೋ ಎಂದು ನನ್ನ ತಂದೆ ತಿಳಿಸಿದ್ದಾರೆ. ಪಿತೃವಾಕ್ಯ ಪರಿಪಾಲ ನೆಯೇ ನನ್ನ ವ್ರತ. ಅಲ್ಲದೆ ನೀವು ಮಹಾ ಋಷಿಗಳು, ಮಹಾ ತಪಸ್ಸಂಪನ್ನರು. ಅಂಥ ನೀವೇ ತಾಟಕಿಯ ವಧೆಯು ನ್ಯಾಯವೆಂದು ಹೇಳುವಾಗ, ಇದರಲ್ಲಿ ನನ್ನ ತಪ್ಪೇನೂ ಇಲ್ಲ. ಗೋಬ್ರಾಹ್ಮಣ ಹಿತಕ್ಕೋಸ್ಕರ, ಪ್ರಜಾಕ್ಷೇಮಕ್ಕೋಸ್ಕರ, ಧರ್ಮರಕ್ಷಣೆಗೋಸ್ಕರ, ನೀವು ಆಜ್ಞಾಪಿಸಿದ ಯಾವ ಕೆಲಸವನ್ನಾದರೂ ಮಾಡಲು ನಾನು ಸಿದ್ಧ," ಎಂದು ಬಿಲ್ಲನ್ನು ಎತ್ತಿ ಹಿಡಿದು ದಶದಿಕ್ಕುಗಳಲ್ಲೂ ಮೊಳಗುವಂತೆ ಠೇಂಕಾರ ಮಾಡಿದನು.

ಆ ಶಬ್ದಕ್ಕೆ ಅರಣ್ಯವೆಲ್ಲಾ ತತ್ತರಿಸಿದಂತಾಗಿ, ಅಲ್ಲಿನ ಮೃಗಗಳು ಬೆದರಿ ಚೆಲ್ಲಾಪಿಲ್ಲಿ ಯಾಗಿ ಓಡಿದವು. ತಾಟಕಿಯು ದಿಗ್ಭ್ರಮೆಗೊಂಡು ರೋಷಾವೇಷದಿಂದ ಆ ಮಹಾಧ್ವನಿಯು ಕೇಳಿಸುತ್ತಿದ್ದ ದಿಕ್ಕಿಗೆ ಓಡಲಾರಂಭಿಸಿದಳು. ಒಂದು ದೊಡ್ಡ ಮದಗಜದಂತೆ, ಬೆಟ್ಟದಂತೆ ಬರುತ್ತಿದ್ದ ತಾಟಕಿಯನ್ನು ರಾಮನು ನೋಡಿ, ಮುಗು ಳ್ನಕ್ಕು, "ತಮ್ಮಾ! ನೋಡಿದೆಯಾ ಆ ವಿಕಾರ ಆಕಾರವನ್ನು? ನಿಜವಾಗಿಯೂ ಸಾಮಾನ್ಯ ಮಾನವರು ಈ ಆಕಾರವನ್ನು ನೋಡಿ ಬದುಕಬಲ್ಲರೆ? ವಿಶ್ವಾಮಿತ್ರರು ಹೇಳಿದ ಹಾಗೆ, ಇವಳ ಆಕಾರವೇ ಇಷ್ಟು ಭಯಂಕರವಾಗಿರುವಾಗ, ಇವಳ ಬಲ ಇನ್ನು ಹೇಳಬೇಕಾಗಿಯೇ ಇಲ್ಲ. ಇವಳು ಹೆಂಗಸು, ಕೊಲ್ಲಲು ನನ್ನ ಮನಸ್ಸು ಒಪ್ಪುತ್ತಿಲ್ಲ. ಅವಳ ಕೈ ಕಾಲುಗಳನ್ನು ಕತ್ತರಿಸಿದರೆ ಇವಳ ಶಕ್ತಿ ನಶಿಸು ವುದು," ಎಂದು ಹೇಳುತ್ತಿರುವಷ್ಟರಲ್ಲೇ, ತಾಟಕಿಯು ಉದ್ದವಾದ ಕೈಗಳನ್ನು ಚಾಚಿ, ರಾಮನನ್ನು ಹಿಡಿದು ಹಪ್ಪಳದಂತೆ ಹಿಸುಕಿ ಬಾಯಿಯಲ್ಲಿ ಹಾಕಿಕೊಳ್ಳಲೊ ಎನ್ನುವಂತೆ ಆರ್ಭಟಿಸುತ್ತಾ ರಾಮನ ಮೇಲೆ ಬಿದ್ದಳು.

ಇದನ್ನು ನೋಡಿ ವಿಶ್ವಾಮಿತ್ರರು ಕಣ್ಣುಗಳನ್ನು ಮುಚ್ಚಿಕೊಂಡು ರಾಮ ಲಕ್ಷ್ಮಣರಿಗೆ ಯಾವ ಕೇಡೂ ಆಗದಿರಲೆಂದು ಪ್ರಾರ್ಥಿಸಿದರು. ತಾಟಕಿಯು ರಾಮನ ಬಳಿಗೆ ಹೋಗಲಾರದಾದಳು. ಅವನನ್ನು ಸಮೀಪಿಸಿದಾಗ ಮಿಂಚು ಹೊಡೆದಂತಾಗಿ ಹಿಮ್ಮೆಟ್ಟುತ್ತಿದ್ದಳು. ಮತ್ತೆ ಮತ್ತೆ ಅವನ ಮೇಲೆ ಬೀಳಲು ಹೋಗಿ, ಆಗದೆ ಬೆದರಿದಳು. ಕೋಪದಿಂದ ಭೂಮಿಯನ್ನು ಮೆಟ್ಟಿ ಕುಣಿದು ಕುಪ್ಪಳಿಸುತ್ತಾ ಉಲ್ಲೋಲಕಲ್ಲೋಲ ಉಂಟುಮಾಡಿ ಆ ಪ್ರದೇಶವೆಲ್ಲಾ ಅಂಧಕಾರಮಯವಾಗುವಂತೆ ಮಾಡಿದಳು. ಕ್ಷಣಕಾಲ ರಾಮ ಲಕ್ಷ್ಮಣರೂ ಕೂಡ ಏನೂ ತೋಚದವರಾಗಿ ನಿಂತುಬಿಟ್ಟರು. ನಂತರ ತಾಟಕಿಯು ಮಾಯವಾಗಿ ಅವರ ಮೇಲೆ ಎಡಬಿಡದೆ ಕಲ್ಲಿನ ಮಳೆ ಸುರಿಸಲಾರಂಭಿಸಿದಳು. ಇದನ್ನು ನೋಡಿ ರಾಮನು ಇಂಥ ದುರ್ಮಾರ್ಗಿ ರಾಕ್ಷಸಿಯನ್ನು ಜೀವಸಹಿತ ಉಳಿಸುವುದು ಒಳ್ಳೆಯದಲ್ಲ, ಹೆಂಗಸು ಎಂದು ಎಷ್ಟು ಔದಾರ್ಯ ತೋರಿಸಿದರೂ ಇವಳ ಚೇಷ್ಟೆ ನಿಲ್ಲಲಿಲ್ಲ, ಮಿತಿಮೀರುತ್ತಿದೆ ಎಂದು ತಾಟಕಿಯ ಸೂಕ್ಷ್ಮ ರೂಪವು ಎಲ್ಲಿರುವುದೋ ತಿಳಿದು, ಅಲ್ಲಿಗೆ ಗುರಿಯಿಟ್ಟು ಅಂಬನ್ನು ಹೊಡೆದನು.

ಇದರಿಂದ ಉದ್ರೇಕಗೊಂಡ ತಾಟಕಿಯು ತಿರುಗಿ ರಾಮನ ಮೇಲೆ ಬಿದ್ದಳು. ರಾಮನು ಅವಳ ಎರಡು ತೋಳುಗಳನ್ನು ಕತ್ತರಿಸಿದನು. ಅವಳ ಆರ್ಭಟವು ನಿಂತಿತು. ಭುಜಗಳು ಕತ್ತರಿಸಿ ಹೋದದ್ದರಿಂದ, ನಿಲ್ಲಲಾರದೆ ಕೆಳಕ್ಕೆ ಬಿದ್ದಳು. ತಕ್ಷಣವೇ ಲಕ್ಷ್ಮಣನು ಒಂದೊಂದಾಗಿ ಅವಳ ಅಂಗಗಳನ್ನು ಕತ್ತರಿಸಿ ಹಾಕಿದನು. ಆದರೆ, ತಾಟಕಿಯು ಕಾಮರೂಪಿಯಾದ್ದರಿಂದ, ಸತ್ತವಳಂತೆ ನಟಿಸಿದರೂ ತಿರುಗಿ ಅನೇಕ ರೂಪಗಳಿಂದ ಅಲ್ಲಿ ಇಲ್ಲಿ ಕಾಣಿಸಿಕೊಳ್ಳುತ್ತಾ ಮತ್ತೆ ಕಲ್ಲು ಮಳೆಗರೆಯಲಾರಂಭಿಸಿ ತನ್ನ ಸಾಹಸವನ್ನು ಪ್ರದರ್ಶಿಸಿದಳು. ರಾಮ ಲಕ್ಷ್ಮಣರು ಹೋರಾಡಿ ಹೋರಾಡಿ ಬಹುವಾಗಿ ಆಯಾಸಗೊಂಡರು. ಇದನ್ನು ಗಮನಿಸಿ, ವಿಶ್ವಾಮಿತ್ರರು, ಕಾಲ ಮೀರಿದರೆ ಪ್ರಮಾದ ಸಂಭವಿಸಬಹುದೆಂದು ಯೋಚಿಸಿ, "ರಾಮಾ, ಇನ್ನು ಹಿಂಜರಿಯಬೇಡ, ಹೆಂಗಸೆಂದು ದಯೆ ತೋರಿಸಲು ಇದು ಸಮಯವಲ್ಲ. ಅಂಗಗಳನ್ನು ಕಡಿದರೆ ಪ್ರಯೋಜನವಿಲ್ಲ. ಪ್ರಾಣವಿದ್ದರೆ ರಾಕ್ಷಸರು ಮತ್ತೆ ಮತ್ತೆ ರೂಪಗಳನ್ನು ಧರಿಸಿಬಲ್ಲರು. ಆದ್ದರಿಂದ ಅವರ ಪ್ರಾಣವನ್ನೇ ತೆಗೆಯಬೇಕು. ಸಂಧ್ಯಾಕಾಲ ಸಮೀಪಿಸುತ್ತಿದೆ. ಆದ್ದರಿಂದ ಇವಳ ಮಾಯೆಯು ಮತ್ತಷ್ಟು ಹೆಚ್ಚುವುದು. ಸೂರ್ಯಾಸ್ತಮವಾದಮೇಲೆ ರಾಕ್ಷಸರೊಂದಿಗೆ ಹೋರಾಡಲು ಯಾರಿಗೂ ಸಾಧ್ಯವಿಲ್ಲ. ಅಷ್ಟರೊಳಗೇ ಇವಳನ್ನು ಸಂಹರಿಸಬೇಕು. ಏಳು! ಸಿದ್ಧನಾಗು!" ಎಂದು, ರಕ್ಷಣಾ ಮಂತ್ರವನ್ನು ಉಚ್ಚರಿಸುತ್ತಾ ರಾಮನನ್ನು ಎಚ್ಚರಿಸಿದರು.

ರಾಮನು ಯಥಾರ್ಥವನ್ನು ತಿಳಿದು, ಶಬ್ದವೇದಿ ಜ್ಞಾನದಿಂದ ತಾಟಕಿ ಎಲ್ಲಿರುವ ಳೆನ್ನುವುದನ್ನು ತಿಳಿದು, ಅಲ್ಲಿಗೇ ಗುರಿಯಿಟ್ಟು ಒಂದು ಉಗ್ರವಾದ ಬಾಣವನ್ನು ಹೊಡೆದನು. ಆ ಬಾಣವು ತಾಟಕಿಯನ್ನು ಕಟ್ಟಿಹಾಕಿ ಕದಲದಂತೆ ಮಾಡಿತು. ತಾಟಕಿಯು ಗಟ್ಟಿಯಾಗಿ ಭಯಂಕರವಾದ ಶಬ್ದ ಮಾಡುತ್ತಾ ನಾಲಗೆಯನ್ನು ಚಾಚಿ ರಾಮ ಲಕ್ಷ್ಮಣರನ್ನು ನುಂಗಲೆತ್ನಿಸಿದಳು. ತಡಮಾಡುವುದೊಳ್ಳೆಯದಲ್ಲವೆಂದು, ರಾಮನು ಎದೆಯಲ್ಲಿ ನಾಟುವಂತೆ ಒಂದು ತೀಕ್ಷ್ಣವಾದ ಬಾಣವನ್ನು ಹೊಡೆದನು. ಆ ಬಾಣದ ಹೊಡೆತಕ್ಕೆ ತಾಟಕಿಯು ನೆಲಕ್ಕುರಳಿ ಪ್ರಾಣಬಿಟ್ಟಳು. ಅವಳು ಪ್ರಾಣ ಬಿಡುವ ಸಮಯದಲ್ಲಿ ಅತ್ತಿತ್ತ ಹೊರಳಿದಾಗ ಅಕ್ಕಪಕ್ಕದ ವೃಕ್ಷಗಳು ಬುಡಮೇಲಾಗಿ ಉರುಳಿದವು. ಅವಳು ಹೊರಳಾಡಿದ ಪ್ರದೇಶವು ತಗ್ಗು ಬಿದ್ದು ಹಳ್ಳವಾಯಿತು. ಸುತ್ತಲೂ ನೂರಾರು ಗಜ ಎತ್ತರದ ಪ್ರದೇಶವು ಸಮತಟ್ಟಾಯಿತು. ಅವಳು ಪ್ರಾಣ ಬಿಡುವಾಗ ಮಾಡಿದ ಆರ್ಭಟದಿಂದ ಕಾಡಿನ ಮೃಗಗಳು ಬೆದರಿದವು, ರೆಂಬೆಗಳು ಮುರಿದು ಬಿದ್ದುವು.

ಇಂಥ ಬಲಿಷ್ಠ ತಾಟಕಿಯು ನೆಲಕ್ಕುರುಳುತ್ತಲೇ ವಿಶ್ವಾಮಿತ್ರರು ರಾಮನನ್ನು ಹತ್ತಿರಕ್ಕೆ ಕರೆದು, ತಲೆ ಸವರಿ, "ಮಗೂ! ಭಯಗೊಂಡೆಯಾ? ಸರ್ವಲೋಕ ರಕ್ಷಕನಾದ ನಿನಗೆ ಭಯ ಉಂಟೆ? ಲೋಕ ಸಂರಕ್ಷಣೆಯಲ್ಲಿ ಇದು ಪ್ರಧಾನವಾದ ಕಾರ್ಯ, ಬುನಾದಿ. ಇದು ಭದ್ರವಾದದ್ದರಿಂದಲೇ ಇನ್ನು ಮುಂದಿನ ನಿನ್ನ ಕಾರ್ಯಭಾರ ವೆನ್ನುವ ಭವನ ಭದ್ರವಾಗಿ ನಿಲ್ಲಬಲ್ಲದು. ಬಹಳ ಶ್ರಮ ಪಟ್ಟಿದ್ದೀರಿ! ಸೂರ್ಯಾಸ್ತ ಸಮಯವಾಗಿದೆ. ಸಂಧ್ಯಾವಂದನೆಯನ್ನು ಮಾಡಿ, ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳುವು ದೊಳ್ಳೆಯದು, ಬನ್ನಿ!" ಎಂದು ನದೀ ತೀರಕ್ಕೆ ಕರೆದೊಯ್ದು, "ಮಕ್ಕಳೇ! ಈ ರಾತ್ರಿ ಇಲ್ಲೇ ವಿಶ್ರಮಿಸಿಕೊಂಡು ಬೆಳಗಾಗುತ್ತಲೆ ನಾವು ನಮ್ಮ ಆಶ್ರಮಕ್ಕೆ ಹೋಗೋಣ," ಎಂದರು.

ಅವರಿಗೆ ಹಲವಾರು ಕಥೆಗಳನ್ನು ಹೇಳುತ್ತಾ ಅವರ ಶಕ್ತಿ ಸಾಮರ್ಥ್ಯಗಳನ್ನು ವರ್ಣಿಸುತ್ತಾ ರಾತ್ರಿಯನ್ನು ಕಳೆದರು, ಬೆಳಗಾಯಿತು. ಆಚಮನ ಮಾಡಿದರು. ವಿಶ್ವಾಮಿತ್ರರು ರಾಮ ಲಕ್ಷ್ಮಣರ ಹತ್ತಿರ ಹೋಗಿ, ಮಂದಹಾಸದಿಂದ ಮೃದು ಮಧುರವಾದ ಮಾತುಗಳಿಂದ, "ರಾಮಾ! ನಿನ್ನ ಪರಾಕ್ರಮಕ್ಕೆ ಸಂತುಷ್ಟನಾದೆ. ಆ ತಾಟಕಿಯೊಂದಿಗೆ ಹೋರಾಡುವಾಗ ನಿನ್ನ ವಿಶ್ವರೂಪವನ್ನು ಕಂಡು ನಾನು ಧನ್ಯನಾದೆ," ಎಂದು ಆನಂದಬಾಷ್ಪ ಸುರಿಸುತ್ತಾ ತಮ್ಮಲ್ಲಿದ್ದ ಸಮಸ್ತ ಅಸ್ತ್ರಗಳನ್ನೂ ಮಂತ್ರ ರೂಪದಲ್ಲಿ ರಾಮಚಂದ್ರನ ಹಸ್ತದಲ್ಲಿಟ್ಟು, "ಈ ಅಸ್ತ್ರಗಳನ್ನು ಧರಿಸುವ ಅಧಿಕಾರ ನನಗಿಲ್ಲ. ಅಂತಹ ಅಧಿಕಾರವಾಗಲೀ ಅಸ್ತ್ರಗಳಾಗಲೀ ನನ್ನಲ್ಲಿದ್ದರೂ ನಿರರ್ಥಕವಲ್ಲವೆ? ಎಲ್ಲ ಅಸ್ತ್ರಗಳಿಗೂ ನೀನೇ ಅಧಿಕಾರಿ. ಅವು ನಿನ್ನ ಬಳಿ ಇದ್ದರೆ,

ಅವಕ್ಕೂ ಕೂಡ ತೃಪ್ತಿಯಾಗುತ್ತದೆ. ತಮ್ಮ ತಮ್ಮ ಕರ್ತವ್ಯಗಳನ್ನು ತೃಪ್ತಿಯಿಂದ ಮಾಡುವುವು. ಇಗೋ! ಇಂದಿನಿಂದ ನನ್ನ ಸರ್ವಾಸ್ತ್ರಗಳನ್ನೂ ನಿನ್ನ ಸ್ವಾಧೀನ ಮಾಡುತ್ತಿದ್ದೇನೆ," ಎಂದು ಮಂತ್ರಪೂರ್ವಕವಾಗಿ ಪ್ರೋಕ್ಷಿಸಿ ರಾಮನಿಗೆ ಅಸ್ತ್ರಗಳನ್ನು ಅರ್ಪಿಸಿದರು.

ಪುನಃ ರಾಮನನ್ನು ಕರೆದು ದಂಡ ಚಕ್ರವನ್ನೂ ಧರ್ಮ ಚಕ್ರವನ್ನೂ ಕಾಲಚಕ್ರ ವನ್ನೂ ಅತ್ಯುಗ್ರವಾದ ವಿಷ್ಣುಚಕ್ರವನ್ನೂ ಇಂದ್ರಾಸ್ತ್ರವನ್ನೂ ವಜ್ರಾಸ್ತ್ರವನ್ನೂ ಶಿವದೇವ ತಾಕವಾದ ಶೂಲವನ್ನು ಬ್ರಹ್ಮ ಶಿರಸ್ತ್ರಾಣವನ್ನೂ ಐಕ್ಷಿಕಾಸ್ತ್ರವನ್ನೂ ಇವೆಲ್ಲಕ್ಕೂ ಮಿಗಿಲಾದ ಬ್ರಹ್ಮಾಸ್ತ್ರವನ್ನೂ ರಾಮನಿಗೆ ಕೊಟ್ಟರು. ಸ್ವಲ್ಪ ಹೊತ್ತು ಕಣ್ಣು ಮುಚ್ಚಿ ಕೊಂಡು, ನಂತರ, "ರಾಮಾ! ಇನ್ನು ನನಗೆ ಇವುಗಳಾದರೂ ಏತಕ್ಕೆ? ತೆಗೆದುಕೊ," ಎಂದು ಮೋದಕೀ ಶಿಖರೀ ಎನ್ನುವ ಎರಡು ಬಲವಾದ ಗದೆಗಳನ್ನು ಕೊಟ್ಟರು. ಆಗ್ನೇಯಾಸ್ತ್ರ, ಕೌಂಚಾಸ್ತ್ರ, ನಾರಾಯಣಾಸ್ತ್ರ, ವಾಯುವ್ಯಾಸ್ತ್ರಗಳನ್ನೂ ಆಶ್ರಮಕ್ಕೆ ಹೋದ ಮೇಲೆ ಕೊಟ್ಟರಾಯಿತು ಎಂದುಕೊಂಡು, "ರಾಮಾ! ಈ ಅಸ್ತ್ರಗಳೆಲ್ಲವೂ ಇಚ್ಛಾಧೀನ ರೂಪಗಳು, ಮಹಾ ಬಲಯುತವಾದುವುಗಳು," ಎಂದು ಕರ್ಣ ರಂಧ್ರಗಳ ಮೂಲಕ ಅವುಗಳ ಮಂತ್ರಗಳನ್ನು ಇತ್ತರು. "ಈ ಮಂತ್ರ ದೇವತೆಗಳನ್ನು ವಶಪಡಿಸಿಕೊಳ್ಳಲು ಈಗಲೇ ಜಪ ಮಾಡು," ಎಂದು ಆಜ್ಞಾಪಿಸಿದರು.

ವಿಶ್ವಾಮಿತ್ರರ ಆಜ್ಞಾನುಸಾರವಾಗಿ ಜಪವನ್ನು ಮಾಡಿ ರಾಮನು ಆಯಾ ಮಂತ್ರ ರೂಪವನ್ನು ಸ್ವಾಧೀನಪಡಿಸಿಕೊಂಡನು. ಮಂತ್ರಗಳು ತಮ್ಮ ತಮ್ಮ ರೂಪದಿಂದ ಪ್ರತ್ಯಕ್ಷವಾಗಿ ಮುಂದೆ ನಿಂತು ನಮಸ್ಕರಿಸಿ, "ರಾಮಾ! ಇಂದಿನಿಂದ ನಾವು ನಿನ್ನ ಕಿಂಕರರು," ಎಂದು ಪ್ರಮಾಣ ಮಾಡಿ ಅಂತರ್ಧಾನವಾದುವು. ರಾಮನು ಸಂತಸಗೊಂಡು, ವಿಶ್ವಾಮಿತ್ರರಿಗೆ ನಮಸ್ಕರಿಸಿ, "ಸ್ವಾಮಿ, ತಮ್ಮ ಹೃದಯ ತ್ಯಾಗ ಮಯವಾದುದು. ನಿಜಕ್ಕೂ ನೀವು ಸಾಕ್ಷಾತ್ ಅಪರತ್ಯಾಗ, ಯೋಗಗಳ ಮೂರ್ತೀ ಭವಿಸಿದ ದೈವಾಕಾರವಾಗಿ ಗೋಚರಿಸುತ್ತಿದ್ದೀರಿ. ಇಲ್ಲದಿದ್ದರೆ, ಇಷ್ಟು ಯೋಗ್ಯತೆ ಯುಳ್ಳ ಶಕ್ತಿವಂತ ಅಸ್ತ್ರಗಳನ್ನು ಇತರರಿಗೆ ಕೊಡುವವರು ಲೋಕದಲ್ಲಿದ್ದಾರೆಯೇ? ನನಗೆ ಅಸ್ತ್ರಗಳನ್ನು ಕೊಟ್ಟು ಹೇಗೆ ಅವುಗಳನ್ನು ನನ್ನ ವಶಪಡಿಸಿದಿರೋ ಹಾಗೆಯೇ ಅವುಗಳನ್ನು ಉಪಸಂಹಾರ ಮಾಡುವ ಮಾರ್ಗವನ್ನೂ ಕೂಡ ತಿಳಿಸಿ ನನ್ನನ್ನು ಆನಂದಪಡಿಸಿರಿ," ಎಂದು ಕೋರಿದನು.

ವಿಶ್ವಾಮಿತ್ರರು ಉಲ್ಲಾಸ ಹೃದಯಿಯಾಗಿ, "ಮಗೂ, ರಾಮಾ! ಸತ್ಯಕೀರ್ತಿ, ಧೃಷ್ಟ, ರಭಸ, ದೃಢಲಾಭ, ಸುನಾಭ, ದಶಾಕ್ಷ, ಶತೋದರ, ಪದ್ಮನಾಭ, ಕೃಶನ, ವೈರಾಗ್ಯ, ಯೋಗಂಧನ, ವಿಧೂತ, ಕರವಿರಕ, ರುತರ, ಪಿತೃಸಾಮಸ, ಜೃಂಭಕ, ಇವೆಲ್ಲವೂ

ಇಚ್ಛಾಧೀನ ರೂಪಗಳು. ಇವುಗಳ ಉಪಸಂಹಾರ ಮಂತ್ರವನ್ನು ಕೇಳು," ಎಂದು ಕರ್ಣ ರಂಧ್ರಗಳ ಮೂಲಕ ಆ ಮಂತ್ರಗಳನ್ನಿತ್ತರು. ರಾಮನು ಆ ಮಂತ್ರಗಳನ್ನು ಉಚ್ಚರಿಸಿದಾಗ, ತಿರುಗಿ ಆಯಾ ರೂಪಗಳು ಬಂದು ನಿಂತು ನಮಸ್ಕರಿಸಿದವು. ರಾಮನು ಅವುಗಳ ನಮಸ್ಕಾರವನ್ನು ಸ್ವೀಕರಿಸಿ, "ಅಗತ್ಯವಾದಾಗ ಕರೆಯುತ್ತೇನೆ, ಆಗ ಬನ್ನಿ," ಎಂದು ಆಜ್ಞಾಪಿಸಿ ಕಳಿಸಿದನು.

ನಂತರ, ವಿಶ್ವಾಮಿತ್ರರು, "ಮಕ್ಕಳೇ, ಇನ್ನು ನಮ್ಮ ಪ್ರಯಾಣವನ್ನು ಮುಂದು ವರಿಸೋಣ," ಎಂದು ಅವರೊಂದಿಗೆ ಹೊರಟರು. ಸ್ವಲ್ಪ ದೂರ ಹೋಗುತ್ತಲೇ ಒಂದು ಪರ್ವತ ಪ್ರದೇಶವನ್ನು ತಲುಪಿದರು. ಆ ಪರಿಸರದಲ್ಲಿ ಒಂದು ಸುಂದರ ಉದ್ಯಾನವನ ಕಾಣಿಸಿತು. ಅದು ಅವರನ್ನು ಸ್ವಾಗತಿಸುತ್ತಿದೆಯೋ ಎನ್ನುವಂತೆ ಅದರ ಸುಗಂಧವು ಅವರನ್ನು ಆವರಿಸಿತು. ಭಯಂಕರವಾದ ಅರಣ್ಯವನ್ನು ದಾಟಿ, ಸುಂದರವಾದ ಉದ್ಯಾನವನವನ್ನು ಪ್ರವೇಶಿಸುತ್ತಿದ್ದೇವೆ ಎಂದು ಅವರು ಸಂತಸಗೊಂಡರು. ರಾಮನು, "ಸ್ವಾಮೀ! ಇದು ಯಾರದೋ ಪುಣ್ಯಾಶ್ರಮದಂತೆ ಕಾಣುತ್ತಿದೆ. ಇದು ಯಾರ ಪುಣ್ಯಾಶ್ರಮವೋ ತಿಳಿಸಬೇಕು," ಎಂದು ಕೇಳಲು, ವಿಶ್ವಾಮಿತ್ರರು, "ಮಕ್ಕಳೇ! ಮಹಾಮಹಿಮರಾದ ದೇವತೆಗಳು, ಯೋಗಿಗಳು, ತಮ್ಮ ತಮ್ಮ ಸಂಕಲ್ಪಗಳನ್ನು ಸಾಧಿಸಿ ಸಿದ್ಧಿ ಪಡೆಯುವುದಕ್ಕಾಗಿ ಇಲ್ಲಿ ವಾಸ ಮಾಡುತ್ತಿದ್ದಾರೆ. ಕಶ್ಯಪರು ತಪಸ್ಸಿದ್ಧಿ ಪಡೆದದ್ದೂ ಇಲ್ಲೇ. ಆದ್ದರಿಂದಲೆ ಇದು ಸಿದ್ಧಾಶ್ರಮವೆಂದು ಪ್ರಸಿದ್ಧವಾಗಿದೆ. ನಾನು ಭಕ್ತಿಯಿಂದ ಈ ಆಶ್ರಮವನ್ನು ಈಗ ನನ್ನ ನಿವಾಸ ಮಾಡಿಕೊಂಡಿದ್ದೇನೆ. ಈ ಆಶ್ರಮ ಪ್ರದೇಶಕ್ಕೇ ರಾಕ್ಷಸರು ಬಂದು ನನ್ನ ಯಜ್ಞಕ್ಕೆ ವಿಘ್ನ ಮಾಡುತ್ತಿರುವುದು. ಇಲ್ಲೇ ನೀವು ಅವರ ಸಂಹಾರ ಮಾಡಬೇಕಾಗಿರುವುದು," ಎನ್ನುತ್ತಾ ಸಿದ್ಧಾಶ್ರಮ ಪ್ರದೇಶದಲ್ಲಿ ಅಡಿ ಇಟ್ಟರು.

ರಾಮನ ಭುಜದ ಮೇಲೆ ಕೈಯಿಟ್ಟು, "ಮಗೂ! ಈ ಆಶ್ರಮವು ನನ್ನದು ಹೇಗೋ ಹಾಗೆಯೇ ಇಂದಿನಿಂದ ಇದು ನಿನ್ನದೂ ಹೌದು," ಎಂದು ಆನಂದಬಾಷ್ಪ ಸುರಿಸುತ್ತಾ ಆಶ್ರಮವನ್ನು ಪ್ರವೇಶಿಸಿದರು. ಆಶ್ರಮ ವಾಸಿಗಳು ಓಡೋಡಿ ಬಂದು, ವಿಶ್ವಾಮಿತ್ರರ ಪಾದಗಳನ್ನು ತೊಳೆದು, ರಾಮ ಲಕ್ಷ್ಮಣರಿಗೆ ಅರ್ಘ್ಯಪಾದ್ಯಗಳನ್ನಿತ್ತು ಅವರ ಮುಂದೆ ಹೂವು ಚೆಲ್ಲುತ್ತಾ ಅವರುಗಳನ್ನು ಒಳಕ್ಕೆ ಕರೆದೊಯ್ದರು. ಫಲ ಪಾನೀಯಗಳನ್ನಿತ್ತು, ವಿಶ್ರಾಂತಿ ತೆಗೆದುಕೊಳ್ಳುವಂತೆ ಕೋರಿದರು. ವಿಶ್ರಾಂತಿ ಪಡೆದ ನಂತರ ರಾಮ ಲಕ್ಷ್ಮಣರು ಎದ್ದು ಪಾದಗಳನ್ನು ತೊಳೆದುಕೊಂಡು ವಿಶ್ವಾಮಿತ್ರರ ಬಳಿಗೆ ಬಂದು, ಕೈ ಕಟ್ಟಿನಿಂತು, "ಸ್ವಾಮೀ, ನಾಳೆಯಿಂದಲೇ ತಾವು ಯಜ್ಞವನ್ನು ಪ್ರಾರಂಭಿಸಬಹುದಲ್ಲವೆ?" ಎನ್ನಲು, "ಸರ್ವಸಿದ್ಧವಾಗಿರುವ ಸಿದ್ಧಾಶ್ರಮದಲ್ಲಿ ಸಿದ್ಧ

ಮಾಡಬೇಕಾದದ್ದೇನಿದೆ? ನಾಳೆಯೇ ದೀಕ್ಷೆ ವಹಿಸುತ್ತೇನೆ," ಎಂದರು. ಅದಕ್ಕೆ ಬೇಕಾದ ಏರ್ಪಾಟುಗಳನ್ನೆಲ್ಲಾ ಆಶ್ರಮವಾಸಿಗಳಿಗೆ ತಿಳಿಸಿ ಸಿದ್ಧತೆ ಮಾಡಿ ಎಂದರು.

ಬೆಳಗಾಯಿತು. ಯಜ್ಞ ದೀಕ್ಷೆಯನ್ನು ವಹಿಸಿ ವಿಶ್ವಾಮಿತ್ರರು ಸಿದ್ಧವಾದರು. ರಾಮ ಲಕ್ಷ್ಮಣರು ಸ್ಕಂದ ವಿಶಾಖರಂತೆ ಅಂಬು ಹಿಡಿದು ತಮ್ಮ ದೀಕ್ಷೆಯನ್ನು ನೆರವೇರಿಸಿದರು. ತೀವ್ರ ಸಂಕಲ್ಪದಿಂದ ಸಿದ್ಧವಾಗಿ ನಿಂತರು. ಯಜ್ಞದೀಕ್ಷೆ ವಹಿಸಿದ್ದ ವಿಶ್ವಾಮಿತ್ರರನ್ನು ಮಾತನಾಡಿಸುವುದು ಉಚಿತವಲ್ಲ ಎಂದು ರಾಮ ಲಕ್ಷ್ಮಣರು ಪಕ್ಕದಲ್ಲಿದ್ದ ಋಷಿಗಳಿಗೆ ಸಂಜ್ಞೆ ಮಾಡಿ, ರಾಕ್ಷಸರು ಯಾವಾಗ ಬರುತ್ತಾರೆ, ಯಾವ ದಿಕ್ಕಿನಿಂದ ಬರುತ್ತಾರೆ ಎಂದು ವಿಚಾರಿಸುತ್ತಿದ್ದರು. ರಾಕ್ಷಸರು ಯಾವಾಗ ಬರುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ಅವರಿಗೆ ಕಾಲ ಭೇದವೇ ಇಲ್ಲ. ಯಾವ ನಿಮಿಷವಾದರೂ ಬಂದು ದಾಳಿ ಮಾಡಬಹುದು. ಅವರ ವಿಷಯ ಹೇಳಲು ಬರುವಂತಿಲ್ಲ, ಎಂದು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಹೇಳಿದರು. ಆದ್ದರಿಂದ, ಯಾವಾಗ ಅಂದರೆ ಆಗ ಅವರನ್ನು ಎದುರಿಸಲು ಸಿದ್ಧವಾಗಿರಬೇಕಾದ್ದು ಅವಶ್ಯಕ ಎಂದು ರಾಮನು ತಮ್ಮನನ್ನು ಎಚ್ಚರಿಸಿದನು. ನಾಲ್ಕು ದಿಕ್ಕಿಗೂ ದೃಷ್ಟಿಹಾಯಿಸುತ್ತಾ ಏಕಾಗ್ರತೆಯಿಂದ, ಏನೇ ಒಂದು ಸಣ್ಣ ಶಬ್ದ ಕೇಳಿಸಿದರೂ ರಾಕ್ಷಸರ ಶಬ್ದವೇ ಎಂದು ಜಾಗರೂಕರಾಗಿರುವುದನ್ನು ನೋಡಿ, ಮುನಿಗಳು ಬಾಲಕರ ಧೈರ್ಯ ಸಾಹಸಗಳಿಗೆ ಆನಂದ ಆಶ್ಚರ್ಯ ಪಡುತ್ತಿದ್ದರು.

ಈ ರೀತಿಯಾಗಿ ಐದು ಅಹೋರಾತ್ರಿಗಳು ನಿದ್ರೆ ಇಲ್ಲದೆ, ಆ ತಪೋವನವನ್ನೂ ಯಜ್ಞ ಶಾಲೆಯನ್ನೂ ರಾಮ ಲಕ್ಷ್ಮಣರು ಕಾಪಾಡಿದರು. ಆರನೇ ದಿನ ಬೆಳಗಾಯಿತು. ವಿಶ್ವಾಮಿತ್ರರು ಯಥಾ ಪ್ರಕಾರ ಯಜ್ಞವನ್ನು ಸಮಂತ್ರಕವಾಗಿ ಶಾಸ್ತ್ರೀಯವಾಗಿ ನಡೆಸುತ್ತಿದ್ದರು. ಋತ್ವಿಕರುಗಳು ಅವರವರ ಕೆಲಸದಲ್ಲಿ ಅವರು ಮಗ್ನರಾಗಿ ದೀಕ್ಷೆ ಸಾಧಿಸುತ್ತಿದ್ದರು. ಆಗ, ಇದ್ದಕಿದ್ದಂತೆ, ಆಕಾಶ ಒಡೆಯಿತೋ ಎನ್ನುವಂತೆ, ಭಯಂಕರ ಶಬ್ದ ಕೇಳಿಸಿತು. ದರ್ಭೆ, ಪಾನ ಪಾತ್ರೆಗಳು, ಹೋಮ ಪಾತ್ರೆಗಳು, ಸಮಿತ್ತುಗಳು, ಹೂವು, ಕುಂಕುಮ, ಅಕ್ಷತೆ ಎಲ್ಲವು ಬಿರುಗಾಳಿಯ ರಭಸಕ್ಕೆ ಹಾರಿ, ಎಲ್ಲೋ ಹೋಗಿ ಬಿದ್ದವು. ಭುಗಿಲ್ ಭುಗಿಲ್ ಎಂದು ಬೆಂಕಿಯ ಜ್ವಾಲೆಗಳು ಎದ್ದುವು. ಮಳೆಗಾಲದ ಮೋಡಗಳಂತೆ ಒಮ್ಮಿಂದೊಮ್ಮೆಗೇ ಮೋಡಗಳು ಆಕಾಶವನ್ನು ಆವರಿಸಿ ಭಯಂಕರವಾದ ಕತ್ತಲು ವ್ಯಾಪಿಸಿತು.

ಆ ಮಾಯಾ ಮೋಡಗಳು ವೇಗದಿಂದ ಯಾಗಶಾಲೆಯ ಕಡೆಗೆ ಬಂದವು. ಆ ಮೋಡಗಳಿಂದ ಭಯಂಕರವಾದ ರಕ್ತದ ಮಳೆ ಸುರಿಯಲಾರಂಭಿಸಿತು. ಆ ರಕ್ತ ಪ್ರವಾಹವು ವೇದಿಕೆಯ ಮೇಲೆ ಬೀಳುವ ಹೊತ್ತಿಗೆ ಜ್ವಾಲೆಯು ಮತ್ತಷ್ಟು

ಅಧಿಕವಾಯಿತು. ರಾಮ ಲಕ್ಷ್ಮಣರು ಬಹು ಎಚ್ಚರಿಕೆಯಿಂದ ಆ ರಾಕ್ಷಸರ ಆಕಾರಗಳು ಎಲ್ಲಿವೆಯೆಂದು ಹುಡುಕತೊಡಗಿದರು. ರಾಮನು ದಿವ್ಯ ದೃಷ್ಟಿಯಿಂದ ನೋಡಿ, ಮಾರೀಚ ಸುಬಾಹುಗಳಿದ್ದ ಕಡೆಗೆ ಮಾನಸಾಸ್ತ್ರವನ್ನು ಬಿಟ್ಟನು. ಅದು ಮಾರೀಚನ ಎದೆಗೆ ಬಡಿಯಿತು. ತಕ್ಷಣ ಆಗ್ನೇಯಾಸ್ತ್ರವನ್ನು ಬಿಡಲು, ಅದು ಸುಬಾಹುವಿನ ಎದೆಗೆ ಬಡಿಯಿತು. ಆ ರಾಕ್ಷಸರ ಕಾಯಗಳು ಆ ನಾಡಿನಲ್ಲೇ ಇದ್ದರೆ ಯಜ್ಞಕ್ಕೆ ಅಶುಭವೆಂದುಕೊಂಡಿದ್ದರಿಂದ, ಆ ಅಸ್ತ್ರಗಳು ಅಷ್ಟಕ್ಕೆ ಬಿಡದೆ, ಮಾರೀಚ ಸುಬಾಹುಗಳ ದೇಹವನ್ನು ನೂರು ಯೋಜನ ದೂರಕ್ಕೆ ಹಾರಿಸಿ ಸಮುದ್ರದಲ್ಲಿ ಕೆಡವಿದವು. ಆ ರಾಕ್ಷಸರಿಬ್ಬರೂ ವಿಲವಿಲ ತಿರುಗುತ್ತಾ ಅನೇಕ ಚೇಷ್ಟೆಗಳನ್ನು ಮಾಡುತ್ತಾ ಸಮುದ್ರದಲ್ಲಿ ಬಿದ್ದರು. ಆದರೆ ಸಾಯಲಿಲ್ಲ. ಮಾರೀಚ ಸುಬಾಹುಗಳ ಅನೇಕ ಅನುಚರರು ಅತ್ತ ಇತ್ತ ಓಡಿದರು. ರಾಕ್ಷಸರು ಯಾರೇ ಆಗಲಿ ಅವರನ್ನು ಬಿಡುವುದೊಳ್ಳೆಯದಲ್ಲ. ಇಂದಿನ ಅವರ ಅಬಲತ್ವವೇ ನಾಳೆಯ ಬಲವಾಗಿ ಮಾರ್ಪಡುವುದು. ಇವರನ್ನು ಬಿಡುವುದು ಒಳ್ಳೆಯದಲ್ಲ ಎಂದು ಅನಿಸಿದ್ದರಿಂದ ಲಕ್ಷ್ಮಣನು ಅವರೆಲ್ಲರನ್ನೂ ಸಂಹರಿಸಿದನು.

ಈ ದೃಶ್ಯವನ್ನು ಕಣ್ಣಾರೆ ನೋಡುತ್ತಿದ್ದ ಮಹರ್ಷಿಗಳು ಮಹದಾಶ್ಚರ್ಯಗೊಂಡು, ಇವರು ಸಾಕ್ಷಾತ್ ಪರಮಶಿವನ ರುದ್ರ ಭದ್ರಾಕಾರರೇ ಎಂದುಕೊಂಡು, ಮನಸ್ಸಿನಲ್ಲಿ ನಮಸ್ಕರಿಸಿದರು. ಒಂದೇ ನಿಮಿಷದಲ್ಲಿ ಅರಣ್ಯವು ಮತ್ತೆ ಪ್ರಶಾಂತ ವಾತಾವರಣದಿಂದ, ಲವಲವಿಕೆಯಿಂದ ಶೋಭಿಸಿತು. ವಿಶ್ವಾಮಿತ್ರ ಮಹರ್ಷಿಯು ಚಿತ್ತವನ್ನು ಚಲಿಸದೆ, ಕಟ್ಟು ಕದಲಿಸದೆ, ವೇದಿಕೆಯನ್ನು ಬಿಡದೆ, ತಮ್ಮ ದೀಕ್ಷೆಯಲ್ಲಿ ನಿಮಗ್ನರಾಗಿ ಯಜ್ಞವನ್ನು ಪೂರ್ತಿ ಮಾಡಿದರು. ಪೂರ್ಣಾಹುತಿಯು ಅತ್ಯಂತ ವೈಭವಯುತವಾಗಿ, ಮಂಗಳಕರವಾಗಿ ಮುಕ್ತಾಯವಾಯಿತು. ನಂತರ ವಿಶ್ವಾಮಿತ್ರರು ಹಸನ್ಮುಖರಾಗಿ, ರಾಮ ಲಕ್ಷ್ಮಣರ ಬಳಿಗೆ ಬಂದು, "ಯಶಸ್ವಿಗಳೇ! ನನ್ನ ಕಾರ್ಯವನ್ನು ದಿಗ್ವಿಜಯಗೊಳಿಸಿದಿರಿ. ಈ ಸಿದ್ಧಾಶ್ರಮದ ಹೆಸರನ್ನು ಸಾರ್ಥಕಗೊಳಿಸಿದಿರಿ, ಅಲ್ಲದೆ, ನಿಮ್ಮಿಂದ ನಾನು ಕೃತಾರ್ಥನಾದೆ," ಎಂದು ಆನಂದಬಾಷ್ಪ ಸುರಿಸುತ್ತಾ ಅವರ ಶಿರಸ್ಸನ್ನು ಮುದ್ದಾಡಿ, ಇಬ್ಬರ ಭುಜದ ಮೇಲೂ ಕೈಹಾಕಿ, ಆಶ್ರಮದೊಳಕ್ಕೆ ಕರೆದುಕೊಂಡು ಹೋಗಿ, ಅವರಿಗೆ ಯಜ್ಞ ಪ್ರಸಾದವಿತ್ತು, "ಇನ್ನು ಹಾಯಾಗಿ ವಿಶ್ರಾಂತಿ ತೆಗೆದುಕೊಳ್ಳಿ," ಎಂದು ಕೋರಿದರು.

ರಾಮ ಲಕ್ಷ್ಮಣರಿಗೆ ತಾವು ಬಂದ ಕಾರ್ಯವು ನೆರವೇರಿದ ಆನಂದವೇ ದೊಡ್ಡ ವಿಶ್ರಾಂತಿಯಾಗಿತ್ತು. ಅದರಿಂದಲೇ ಅವರಿಗೆ ಪ್ರಶಾಂತಿ ಲಭಿಸಿತು. ಆದರೂ ಮಹರ್ಷಿಯ ಆಜ್ಞೆ ಮೀರಬಾರದೆಂದು ನಿಶ್ಚಿಂತೆಯಿಂದ ನಿದ್ರಿಸಿದರು. ಅವರ ನಿದ್ರೆಗೆ ಭಂಗ ಬಾರದಂತೆ ಕಾವಲಿಟ್ಟು, ಅವರಾಗಿ ಎಚ್ಚರಗೊಳ್ಳುವವರೆಗೂ ಯಾರೂ

ಅವರಿಗೆ ನಿದ್ರಾಭಂಗ ಮಾಡಬಾರದೆಂದು ಆಜ್ಞಾಪಿಸಿ, ವಿಶ್ವಾಮಿತ್ರರು ಮತ್ತೊಂದು ಪರ್ಣಶಾಲೆಗೆ ಹೋದರು. ಅಲ್ಲಿ, ಋತ್ವಿಕರುಗಳೊಂದಿಗೆ, ಪಂಡಿತರುಗಳೊಂದಿಗೆ, ಮುನಿಗಳೊಂದಿಗೆ ಯಜ್ಞ ವಿಜಯವನ್ನು ಕುರಿತು ರಾಮ ಲಕ್ಷ್ಮಣರ ದೈವೀಶಕ್ತಿಯನ್ನು ಕುರಿತು ವರ್ಣಿಸುತ್ತಾ ಆನಂದಿಸಿದರು.

ಇಷ್ಟರಲ್ಲಿ, ರಾಮ ಲಕ್ಷ್ಮಣರು ಎದ್ದು, ಕರಚರಣಗಳನ್ನು ಶುದ್ಧ ಮಾಡಿಕೊಂಡು ಹೊರಗೆ ಬಂದು, ಬಾಗಿಲ ಬಳಿ ಕಾವಲು ಕಾಯುತ್ತಿದ್ದ ಋಷಿಶಿಷ್ಯರನ್ನು ವಿಚಾರಿಸಲು, "ವಿಶ್ವಾಮಿತ್ರರು ನಿಮ್ಮ ನಿದ್ರೆಗೆ ಭಂಗ ಬರಬಾರದೆಂದು ನಮ್ಮನ್ನಿಲ್ಲಿ ಕಾವಲಿರಿಸಿ, ಅವರು ಸಮೀಪದಲ್ಲಿರುವ ಪರ್ಣಶಾಲೆಯಲ್ಲಿ ಮುನಿಗಳೊಂದಿಗೆ ಸಂಭಾಷಿಸುತ್ತಿದ್ದಾರೆ," ಎಂದರು. ರಾಮ ಲಕ್ಷ್ಮಣರು ಅಲ್ಲಿಗೆ ಹೋಗಿ, ವಿಶ್ವಾಮಿತ್ರರಿಗೆ ನಮಸ್ಕರಿಸಿ, ಕೈ ಕಟ್ಟಿ ನಿಂತುಕೊಂಡು, "ಮಹರ್ಷಿ! ಈ ಕಿಂಕರರು ಮಾಡಬೇಕಾದ ಕೆಲಸ ಇನ್ನೂ ಏನಾದರೂ ಇದ್ದರೆ, ನಾವು ಸಂಸಿದ್ಧರು," ಎಂದರು. ಆಗ, ಅವರಲ್ಲೊಬ್ಬರು ಎದ್ದು ನಿಂತು, "ರಾಮಾ! ರಾಕ್ಷಸರ ಸಂಹಾರದಿಂದ ಸರ್ವ ಕಾರ್ಯಗಳೂ ಸಫಲವಾದವು. ಇನ್ನೇನು ಉಳಿದಿದೆ? ವಿಶ್ವಾಮಿತ್ರರ ಬಹುಕಾಲದ ಆಸೆ ನೆರವೇರಿತು. ಇದಕ್ಕಿಂತ ಹೆಚ್ಚಿನದು ನಮಗೆ ಆಗಬೇಕಾದದ್ದು ಏನು? ಇಲ್ಲಿ ನೀವಿಬ್ಬರೂ ಶಿವಶಕ್ತಿಯಂತೆ ಗೋಚರಿಸುತ್ತಿದ್ದೀರಿ. ನೀವು ಸಾಮಾನ್ಯರಲ್ಲ. ನಿಮ್ಮನ್ನು ನೋಡುವ ಮಹದ್ಭಾಗ್ಯ ದೊರೆತದ್ದರಿಂದ ನಾವೆಲ್ಲರೂ ಧನ್ಯರಾದೆವು," ಎಂದರು. ಎಲ್ಲರೂ ನಮಸ್ಕರಿಸಲು, ಒಬ್ಬ ಋಷಿಕುಮಾರನು ಕೈಯಲ್ಲಿ ಒಂದು ತಾಳೆಪತ್ರವನ್ನು ಹಿಡಿದುಕೊಂಡು ಬಂದು ವಿಶ್ವಾಮಿತ್ರರಿಗೆ ಕೊಟ್ಟನು.

## ೭ ಸೀತಾ ಪರಿಣಯ

ವಿಶ್ವಾಮಿತ್ರರು ಅದನ್ನು ತೆರೆದುನೋಡಿ, ಒಬ್ಬ ವೃದ್ಧಮುನಿಯ ಕೈಗಿತ್ತು ಗಟ್ಟಿಯಾಗಿ ಓದಿ ಹೇಳು ಎಂದರು. ಅದರಲ್ಲಿ ಜನಕನು ತಾನು ಮಹಾಯಾಗವೊಂದನ್ನು ಮಾಡುವುದಾಗಿಯೂ ವಿಶ್ವಾಮಿತ್ರರು ಶಿಷ್ಯವೃಂದದೊಂದಿಗೆ ಆ ಯಾಗಕ್ಕೆ ತಪ್ಪದೆ ದಯಮಾಡಿಸಬೇಕೆಂದೂ ಪ್ರಾರ್ಥಿಸಿ ಬರೆದಿರುವುದನ್ನು ಆ ಮುನಿಯು ಓದುತ್ತಿದ್ದಂತೆಯೇ ಎಲ್ಲರೂ, "ಶುಭವಾಗಲಿ! ಶುಭವಾಗಲಿ!" ಎಂದು ಆಶೀರ್ವದಿಸಿ

ದರು. ವಿಶ್ವಾಮಿತ್ರರು, "ಮಗೂ! ಇನ್ನು ಅರಣ್ಯದಲ್ಲಿ ಸ್ವೇಚ್ಛಾ ಸಂಚಾರ ಮಾಡ ಬಹುದಾದ್ದರಿಂದ, ಆಶ್ರಮವಾಸಿಗಳನ್ನೆಲ್ಲಾ ಕರೆದುಕೊಂಡು ನಾಳೆಯೇ ನಾನು ಮಿಥಿಲಾಪುರಿಗೆ ಹೋಗಬೇಕೆಂದು ಸಂಕಲ್ಪಿಸಿದ್ದೇನೆ," ಎಂದು ರಾಮನಿಗೆ ತಿಳಿಸಲು, ರಾಮನು, "ಸ್ವಾಮೀ! ಮಹದಾನಂದವಾಯಿತು. ತಾವು ಆಜ್ಞೆಯಿತ್ತರೆ, ನಮ್ಮಿಂದ ಆಗಬೇಕಾದ ಕೆಲಸ ಇನ್ನೇನೂ ಇಲ್ಲವಾದರೆ, ನಾವೂ ನಾಳೆ ಬೆಳಗ್ಗೆ ಅಯೋಧ್ಯೆಗೆ ಹೊರಡುತ್ತೇವೆ," ಎಂದು ಅವರ ಅಪ್ಪಣೆ ಕೇಳಿದನು.

ವಿಶ್ವಾಮಿತ್ರರು, "ರಾಮಾ! ದಶರಥನಿಗೆ ನಾನು ಕೊಟ್ಟ ಮಾತನ್ನು ಉಳಿಸಿಕೊಳ್ಳ ಬೇಕಲ್ಲವೆ? ನಾನೇ ಜೊತೆಯಲ್ಲಿ ಕರೆದು ತಂದು ಬಿಡುತ್ತೇನೆ ಎಂದು ದಶರಥನಿಗೆ ಮಾತು ಕೊಟ್ಟಿದ್ದೇನೆ. ಆದ್ದರಿಂದ, ನಾನು ನಿಮ್ಮ ಜೊತೆಯಲ್ಲಿ ಬರದೆ ನೀವು ಹೋಗುವಂತಿಲ್ಲ. ಮಿಥಿಲಾಪುರದಲ್ಲಿ ಯಜ್ಞ ನಡೆಯುತ್ತಿದೆಯಾದ್ದರಿಂದ, ನಾನು ಅಯೋಧ್ಯೆಗೆ ಬಂದು, ಅಲ್ಲಿಂದ ಮಿಥಿಲಾಪುರಕ್ಕೆ ಹೋಗಲು ಕಾಲ ಬಹಳ ಕಡಿಮೆ ಇದೆ. ನೀವೂ ನನ್ನೊಂದಿಗೆ ಮಿಥಿಲೆಗೆ ಬಂದರೆ, ಅಲ್ಲಿ ಯಾಗವನ್ನು ನೋಡಿ ಕೊಂಡು, ಅಲ್ಲಿಂದ ಅಯೋಧ್ಯೆಗೆ ಹೋಗಬಹುದು," ಎಂದರು. ವಿಶ್ವಾಮಿತ್ರರು ಆಡಿದ ಮಾತನ್ನು ಕೇಳಿ, ರಾಮನು ಹಿಂದು ಮುಂದು ನೋಡದೆ, "ಸ್ವಾಮೀ, ಪಿತೃವಾಕ್ಯ ಪರಿಪಾಲನೆ ನನ್ನ ಪ್ರಧಾನ ದೀಕ್ಷೆಯಾದ್ದರಿಂದ ತಮಗೊಂದು ನನ್ನ ಬಿನ್ನಹವಿದೆ," ಎಂದನು. ಅದೇನೆಂದು ಕೇಳಲು, "ನನ್ನ ತಂದೆಯು, 'ವಿಶ್ವಾಮಿತ್ರರ ಯಾಗವನ್ನು ರಕ್ಷಿಸಿ, ಋಷಿಪುಂಗವನಿಗೆ ಆನಂದವುಂಟುಮಾಡಿ ದಿಗ್ವಿಜಯಿಗಳಾಗಿ ಬನ್ನಿ,' ಎಂದು ಆಜ್ಞಾಪಿಸಿದರೇ ಹೊರತು, ಮಿಕ್ಕ ಯಜ್ಞಗಳಿಗೆ ಹೋಗಿರೆಂದು ಹೇಳಲಿಲ್ಲ. ಮಿಥಿಲಾಪುರಕ್ಕೆ ಹೋಗಲು ಪ್ರತ್ಯೇಕವಾಗಿ ತಂದೆಯ ಅನುಮತಿ ಪಡೆಯಬೇಕಲ್ಲವೆ?" ಎಂದು ರಾಮನು ಕೇಳಲು, ವಿಶ್ವಾಮಿತ್ರರು, "ರಾಮಾ! ದಶರಥನು ಅಷ್ಟೇ ಹೇಳಲಿಲ್ಲ. ಋಷಿಪುಂಗವರು ಹೇಳಿದಂತೆ ನಡೆದುಕೊಂಡು, ಅವರ ಆಜ್ಞೆಯ ಗೆರೆ ದಾಟದೆ ಇರಬೇಕೆಂದು ನಿಮಗೆ ಹೇಳಿದ್ದಲ್ಲದೆ, ನನಗೆ, 'ಸ್ವಾಮೀ, ನನ್ನ ಮಕ್ಕಳ ಬಾಧ್ಯತೆ ಎಲ್ಲವನ್ನೂ ನೀವೇ ನೋಡಿಕೊಂಡು, ಸ್ವತಃ ನೀವೇ ಕರೆದುಕೊಂಡು ಬಂದು ಬಿಡಬೇಕು,' ಎಂದು ಹೇಳಿದ್ದನ್ನು ನೀವು ಕೇಳಲಿಲ್ಲವೆ? ಆದ್ದರಿಂದ, ನಾನು ಹೇಳಿದಂತೆ ಕೇಳಿ, ನನ್ನೊಡನೆ ಮಿಥಿಲೆಗೆ ಬನ್ನಿ. ಅಲ್ಲಿಂದ ನನ್ನ ಶಿಷ್ಯವೃಂದ ಸಹಿತವಾಗಿ, ಎಲ್ಲರೂ ಅಯೋಧ್ಯೆಗೆ ಹೋಗೋಣ," ಎಂದರು.

ರಾಮನು ಅವರ ಮಾತಿನ ಸತ್ಯತೆಯನ್ನರಿತು, "ತಮ್ಮ ಇಷ್ಟದಂತೆಯೇ ಆಗಲಿ," ಎಂದನು. ಬೆಳಗಾಗುತ್ತಲೆ ಹೊರಡಲು ಎಲ್ಲ ಸಿದ್ಧತೆಗಳನ್ನೂ ಮಾಡುವಂತೆ ಆಶ್ರಮ ವಾಸಿಗಳಿಗೆ ಆಜ್ಞಾಪಿಸಿ, ವಿಶ್ವಾಮಿತ್ರರು ರಾಮ ಲಕ್ಷ್ಮಣರನ್ನು ಕರೆದುಕೊಂಡು ನದೀ ತೀರಕ್ಕೆ ಹೋಗಿ ಅವರೊಂದಿಗೆ ಸಂಭಾಷಿಸುತ್ತಾ ಆ ಅರಣ್ಯದ ವಿಶಿಷ್ಟತೆ

ಯನ್ನೂ ತಾವು ಈ ಮೊದಲು ಯಜ್ಞ ಮಾಡಲು ಪ್ರಯತ್ನಿಸಿದಾಗ ರಾಕ್ಷಸರಿಂದ ಉಂಟಾದ ಆತಂಕಗಳನ್ನೂ, ಅದನ್ನು ನಿವಾರಿಸಲು ತಾವು ಮಾಡಿದ ವಿಫಲ ಪ್ರಯತ್ನಗಳನ್ನೂ ವಿವರಿಸಿದರು. ರಾಕ್ಷಸರ ಬಾಧೆಯು ಆಶ್ರಮವಾಸಿಗಳಿಗೇ ಅಲ್ಲದೆ ಸುತ್ತುಮುತ್ತಲ ಪ್ರಜೆಗಳಿಗೂ ತೊಲಗಿ, ಎಲ್ಲರಿಗೂ ಆನಂದವಾಗಿದೆ ಎನ್ನುವುದನ್ನು ಅವರಿಗೆ ತಿಳಿಸಿದರು. ಪ್ರಶಾಂತ ವಾತಾವರಣದಲ್ಲಿ ಮೆತ್ತನೆಯ ಮರಳು ದಿಣ್ಣೆಯ ಮೇಲೆ, ಋಷಿ ವಿಶ್ವಾಮಿತ್ರರು ರಾಮ ಲಕ್ಷ್ಮಣರನ್ನು ಹತ್ತಿರ ಕುಳ್ಳಿರಿಸಿಕೊಂಡು, ಮಿಥಿಲಾಪುರದಲ್ಲಿ ಜನಕನು ಮಾಡುವ ಯಾಗದ ವಿಶಿಷ್ಟತೆಯನ್ನು ಹೇಳುತ್ತಿದ್ದರು.

ಮಾತಿನ ಮಧ್ಯೆ, ಜನಕ ಮಹಾರಾಜನ ಬಳಿ ಒಂದು 'ಧನುರತ್ನ' ಇದೆಯೆಂದೂ ಅದು ಬಹಳ ಮಹತ್ವಪೂರ್ಣವಾದುದೆಂದೂ ಅದರ ತೇಜಸ್ಸು ದೇದೀಪ್ಯಮಾನ ವಾಗಿ ಕಂಗೊಳಿಸುತ್ತಿದೆಯೆಂದೂ ಅದು ನೋಡಬೇಕಾದದ್ದೆಂದೂ ಅಂಥ ಧನುಸ್ಸು ಪ್ರಪಂಚದಲ್ಲೆಲ್ಲಿಯೂ ಇಲ್ಲವೆಂದೂ ಅವರಿಗೆ ವರ್ಣಿಸಿದರು. ಆಗ ರಾಮನು ಆ ಧನುಸ್ಸು ಮಿಥಲಾಪುರಾಧಿಪತಿಗೆ ಹೇಗೆ ಪ್ರಾಪ್ತವಾಯಿತೆಂದು ಪ್ರಶ್ನಿಸಲು, ವಿಶ್ವಾಮಿತ್ರರು, "ಮಗೂ! ಕೇಳು! ಪೂರ್ವದಲ್ಲಿ ಮಿಥಿಲಾಪುರಾಧಿಪತಿ ದೇವರಾತನು ದೊಡ್ಡದೊಂದು ಯಜ್ಞ ಮಾಡಿದನು. ಆ ಯಜ್ಞವು ಸಾಮಾನ್ಯರಿಗೆ ಅಸಾಧ್ಯ ವಾದುದು. ಮಹಾ ಪವಿತ್ರವಾದುದು. ಮಾನವ ಮಾತ್ರರಿಗೆ ಅಸಾಧ್ಯವಾದ ಅಂಥ ಯಜ್ಞವನ್ನು ಮಿಥಿಲಾಧಿಪತಿ ಸಾಧಿಸಿದ್ದನ್ನು ಮೆಚ್ಚಿ ದೇವತೆಗಳು ಯಜ್ಞಫಲವಾಗಿ ಆ ಧನುಸ್ಸನ್ನು ಅವನಿಗಿತ್ತರು. ಅದು ಶಿವನ ಧನುಸ್ಸು. ಅದನ್ನು ರಾಜನು ನಿತ್ಯವೂ ಗಂಧ ಪುಷ್ಪಾಕ್ಷತೆಗಳಿಂದ ಪೂಜಿಸಿ, ಧೂಪ, ದೀಪ ನೈವೇದ್ಯಾದಿಗಳಿಂದ ಆರಾಧಿಸುತ್ತಿದ್ದನು. ದೇವ, ದಾನವ, ಅಮರ, ಗಂಧರ್ವ, ಯಕ್ಷ, ಕಿನ್ನರ, ರಾಕ್ಷಸರು ಯಾರೂ ಅದನ್ನು ಹೂಡಲಾರದೆ ಹೋದರು. ಅನೇಕ ಮಂದಿ ರಾಜಪುತ್ರರು ಕೂಡ ಪ್ರಯತ್ನಿಸಿ ವಿಫಲರಾದರು. ರಾಮಾ! ನೀನು ಒಮ್ಮೆ ಪ್ರಯತ್ನಿಸಿ ನೋಡಬೇಕಾದ ಧನುಸ್ಸು ಅದು. ಈ ಯಜ್ಞ ಸಮಯದಲ್ಲಿ ಅದರ ಪ್ರದರ್ಶನ ಕೂಡ ಇದ್ದೇ ಇರುವುದು. ಆದ್ದರಿಂದ ಇದು ಒಂದು ಒಳ್ಳೆಯ ಅವಕಾಶ," ಎಂದು ಅದರ ಅದ್ಭುತ ಶಕ್ತಿಯನ್ನು ವಿಶ್ವಾಮಿತ್ರರು ವರ್ಣಿಸುತ್ತಿರಲು, ಲಕ್ಷ್ಮಣನು ಹೋಗೋಣವೆಂಬಂತೆ ಎಲ್ಲ ಕಡೆಯೂ ನೋಡಿದನು.

ರಾಮನು, "ಖಂಡಿತವಾಗಿ ನಾವು ನೋಡಲೇಬೇಕು. ನಾಳೆ ನಾವೂ ಸಹ ನಿಮ್ಮೊಂ ದಿಗೆ ಬರುತ್ತೇವೆ," ಎಂದು ಅತ್ಯುತ್ಸಾಹದಿಂದ ಹೇಳಿದ್ದನ್ನು ಕೇಳಿ ವಿಶ್ವಾಮಿತ್ರರು ಸಂತೋಷಿಸಿದರು. ಕತ್ತಲೆಯಾದದ್ದರಿಂದ ಎಲ್ಲರೂ ಎದ್ದು ಸಿದ್ಧಾಶ್ರಮಕ್ಕೆ ಹೊರಟ ರು. ವಿಶ್ವಾಮಿತ್ರರು ಆಶ್ರಮವಾಸಿಗಳೆಲ್ಲರನ್ನು ಕರೆದು, "ಬೆಳಗಾಗುತ್ತಲೇ ಮಿಥಿಲಾ ಪುರಕ್ಕೆ ಹೋಗಲು ಸಿದ್ಧವಾಗಿರಿ," ಎಂದು ಆಜ್ಞಾಪಿಸಿದರು. ಅವರಲ್ಲಿ ಕೆಲವರು,

"ಸ್ವಾಮೀ! ಆಶ್ರಮದ ನಿತ್ಯ ಕಾರ್ಯಕ್ರಮಗಳನ್ನು ನಡೆಸುವವರು ಯಾರೂ ಇಲ್ಲದಿದ್ದರೆ ಹೇಗೆ?" ಎನ್ನಲು, "ಅವರವರ ಕಾರ್ಯಕ್ರಮಗಳನ್ನು ಅವರವರು ನಡೆಸಿಕೊಂಡು ಹೋಗುತ್ತಿದ್ದರೆ ಅದೇ ಆಶ್ರಮದ ಕರ್ತವ್ಯ ಕರ್ಮ ಆಗುವುದು! ಆಶ್ರಮ ಕಾರ್ಯಕ್ರಮಗಳೆಂದೇ ಪ್ರತ್ಯೇಕವಾಗಿಲ್ಲ, ಅಲ್ಲವೆ? ಆಶ್ರಿತರು ಸೇರಿರುವುದರಿಂದ ಆಶ್ರಮ ಆಗಿದೆ. ಆಶ್ರಿತನ ಕರ್ತವ್ಯವು ಪ್ರಧಾನವೇ ಹೊರತು ಆಶ್ರಮ ಪ್ರತ್ಯೇಕ ಅಲ್ಲ! ಅಷ್ಟೇ ಅಲ್ಲ, ನಿನ್ನೆಯಿಂದ ರಾಕ್ಷಸರ ಬಾಧೆ ತಪ್ಪಿದೆಯಾದ್ದರಿಂದ ಆಶ್ರಮಕ್ಕೆ ಯಾವ ತೊಂದರೆಯೂ ಇಲ್ಲ. ತೊಂದರೆ ಬರುವುದೂ ಇಲ್ಲ! ಸರ್ವ ಸೃಷ್ಟಿಕರ್ತನೇ ನಮಗೆಲ್ಲರಿಗೂ ಆಶ್ರಯ. ಅವನನ್ನು ಆಶ್ರಯಿಸಿದರೆ ಅವನೇ ಎಲ್ಲರನ್ನೂ ಆದರಿಸುವನು," ಎಂದು ಹೊಸ ರೀತಿಯ ಮಾತುಗಳನ್ನು ಆಡಿ, "ನಿಮ್ಮ ನಿಮ್ಮ ನಿತ್ಯಾನುಷ್ಠಾನದ ಸಾಮಗ್ರಿಗಳನ್ನೂ ಆಶ್ರಮದ ಸಾಮಾನುಗಳನ್ನೂ ನಿಮ್ಮೊಂದಿಗೆ ತೆಗೆದುಕೊಂಡು ಬನ್ನಿ. ಇಲ್ಲಿ ಏನನ್ನೂ ಇಡುವ ಅಗತ್ಯವಿಲ್ಲ," ಎಂದು ಆಜ್ಞಾಪಿಸಿದರು.

ಆಗ ಕೆಲವು ಶಿಷ್ಯರು, "ಸ್ವಾಮೀ! ನಾವು ಇಲ್ಲಿಗೆ ಬರಲು ಎಷ್ಟು ಕಾಲ ಆಗುತ್ತದೆ ಎನ್ನುವುದನ್ನು ತಿಳಿಸಿದರೆ, ಅಗತ್ಯವಾದಷ್ಟನ್ನು ಮಾತ್ರವೇ ಜೊತೆಯಲ್ಲಿ ತೆಗೆದುಕೊಂಡು ಬರುತ್ತೇವೆ. ಅನವಶ್ಯಕವಾಗಿ ಭಾರ ಹೊರುವುದೇಕೆ?" ಎಂದು ಪ್ರಾರ್ಥಿಸಿದರು. ಅದಕ್ಕೆ ವಿಶ್ವಾಮಿತ್ರರು, "ಕಾಲವು ಕಾಯಕ್ಕೆ ಅಧೀನವಲ್ಲ. ಕಾಯವೇ ಕಾಲಕ್ಕೆ ಅಧೀನವಾಗಿರುವುದು. ಆದ್ದರಿಂದ ಯಾವಾಗ ತಿರುಗಿ ಬರುತ್ತೇವೆ ಎಂದು ಹೇಳುವಂತಿಲ್ಲ. ನಾನಿಲ್ಲಿಗೆ ತಿರುಗಿ ಬರುತ್ತೇನೋ ಇಲ್ಲವೋ ಅದೇ ಸಂದೇಹ!" ಎನ್ನಲು, ಆಶ್ರಮವಾಸಿಗಳ ಎದೆ ಝುಗ್ಗೆಂದಿತು. ಕೈಗಳಲ್ಲಿದ್ದ ವಸ್ತ್ರ, ಸಾಮಗ್ರಿಗಳು ಕೆಳಕ್ಕೆ ಜಾರಿದುವು. ಎಲ್ಲರೂ ಸ್ತಂಭೀಭೂತರಾದರು. ಮರು ಮಾತು ಹೊರಡದಾಯಿತು. ಪ್ರಶ್ನೆ ಮಾಡಲು ಧೈರ್ಯವಿಲ್ಲದೆ, ಅವರ ಆಜ್ಞೆಯ ಪ್ರಕಾರ ಸಾಮಾನುಗಳನ್ನೂ ಹೊರಲು ಸಾಧ್ಯವಾದಷ್ಟು ಸಮಿತ್ತು, ದರ್ಭೆ ಹಾಗೂ ಅಗ್ನಿಹೋತ್ರ ಸಾಮಗ್ರಿಗಳನ್ನೂ ಕಟ್ಟಿಕೊಂಡು ಸಿದ್ಧರಾದರು.

ವಿಶ್ವಾಮಿತ್ರರ ಮಾತು ಯಾರಿಗೂ ಅರ್ಥವಾಗದೆ, ತಮತಮಗೆ ತಿಳಿದಂತೆ ಊಹಿಸಿದರು. ಆ ರಾತ್ರಿ ಕಳೆಯಿತು. ಎಲ್ಲರೂ ಸಿದ್ಧರಾಗಿ ಆಶ್ರಮದ ಬಾಗಿಲುಗಳನ್ನು ಬಿಗಿದು ಮುಚ್ಚುತ್ತಿರಲು, ವಿಶ್ವಾಮಿತ್ರರು, "ಬಾಗಿಲು ಬಿಗಿಯಬೇಡಿ! ತೆರೆದಿರಲಿ! ಇದು ನಮ್ಮದಲ್ಲ. ಯಾರು ಬಂದರೂ ಇದರಲ್ಲಿ ಪ್ರವೇಶಿಸಬಹುದು, ಇದು ಎಲ್ಲಾ ವೇಳೆಯಲ್ಲೂ ಎಲ್ಲರನ್ನೂ ಸ್ವಾಗತಿಸುವಂತಿರಬೇಕು. ಇಂದಿನಿಂದ ನಮಗೂ ಈ ಆಶ್ರಮಕ್ಕೂ ಸಂಬಂಧ ತೀರಿತು," ಎಂದು ಹೇಳಿ, "ವನದೇವತೆಗಳೇ! ನೀವಿನ್ನು ಸುಖವಾಗಿ ಬೆಳೆಯಿರಿ. ನನ್ನ ಕಾರ್ಯಸಿದ್ಧಿ ಮಾಡಿಕೊಟ್ಟ ನಿಮಗೆ ಕೃತಜ್ಞತಾಭಿವಂದನೆಗಳು! ರಾಕ್ಷಸರ ಬಾಧೆಯೂ ತೀರಿತು. ನೀವಿನ್ನು ಸುಖವಾಗಿ

ಪುತ್ರ ಪೌತ್ರಾಭಿವೃದ್ಧಿ ಪಡೆದು ಶಾಂತಿಯಿಂದಿರಿ. ನಾನಿಂದು ಸಿದ್ಧಾಶ್ರಮವನ್ನು ಬಿಟ್ಟು ಹೋಗುತ್ತಿದ್ದೇನೆ. ಉತ್ತರೋತ್ತರ ನಾನು ಗಂಗಾನದಿಗೆ ಉತ್ತರದಲ್ಲಿರುವ ಹಿಮಾಲಯ ಪರ್ವತ ಪ್ರಾಂತದಲ್ಲಿ ವಾಸಿಸಲು ಸಂಕಲ್ಪಿಸಿದ್ದೇನೆ," ಎಂದು ವನ ದೇವತೆಗಳಿಗೆ ತಿಳಿಸಿ, ನಮಸ್ಕರಿಸಿ, ರಾಮ ಲಕ್ಷ್ಮಣರೊಂದಿಗೂ ಸಿದ್ಧಾಶ್ರಮದ ವಾಸಿಗಳಾದ ಮಹಾಮುನಿಗಳೊಂದಿಗೂ ಹೊರಟರು.

ವಿಶ್ವಾಮಿತ್ರರ ಸಂಕಲ್ಪವನ್ನು ತಿಳಿದ ಆಶ್ರಮವಾಸಿಗಳು ಚಿಂತೆಯನ್ನು ಬಿಟ್ಟು, ವಿಶ್ವಾ ಮಿತ್ರರೆಲ್ಲಿದ್ದರೆ ನಾವು ಅಲ್ಲಿರುವುದು ಮುಖ್ಯವೇ ಹೊರತು ಒಂದು ವನವಾಗಲೀ ಆಶ್ರಮವಾಗಲೀ ಪ್ರಧಾನವಲ್ಲ, ಆಧಾರವಲ್ಲ. ಹಿಮಾಲಯ ಪರ್ವತ ಪ್ರದೇಶವೇ ತಮಗೂ ವಾಸಯೋಗ್ಯವೆಂದು ಭಾವಿಸಿದರು. ಅವರು ವನದೇವತೆಗಳಿಗೂ ಆಶ್ರ ಮಕ್ಕೂ ನಮಸ್ಕರಿಸಿ ವಿಶ್ವಾಮಿತ್ರರೊಂದಿಗೆ ಹೊರಟರು. ಅವರು ಉತ್ತರಾಭಿಮುಖ ವಾಗಿ ನಡೆದು ಹೋಗುತ್ತಿರಲು ಅವರ ಹಿಂದೆ ಸಾವಿರಾರು ಜಿಂಕೆಗಳು, ಪಕ್ಷಿಗಳು, ನವಿಲುಗಳು ಕೊರಳೆತ್ತಿ ಅರಚುತ್ತಾ ಓಡೋಡಿ ಬರುತ್ತಿದ್ದುದನ್ನು ನೋಡಿ, ವಿಶ್ವಾ ಮಿತ್ರರು, "ವನಚರಗಳೇ! ನಿಮ್ಮ ನಿವಾಸಸ್ಥಳವಾದ ಈ ವನವೇ ನಿಮಗೆ ಯೋಗ್ಯ ವಾದ ಪ್ರದೇಶವಲ್ಲದೆ ನಾನು ಹೋಗುತ್ತಿರುವ ಪ್ರದೇಶವು ನಿಮಗೆ ಸುರಕ್ಷಿತವಲ್ಲ! ಆದ್ದರಿಂದ, ನೀವು ಚಿಂತಿಸದೆ, ನಮ್ಮ ಹಿಂದೆ ಬರದೆ ಇಲ್ಲೇ ವಾಸವಾಗಿರಿ, ದೈವವು ನಿಮ್ಮನ್ನು ರಕ್ಷಿಸುವುದು, ಹೊರಡಿ!" ಎಂದು ಅವುಗಳಿಗೂ ಬೀಳ್ಕೊಡುಗೆಯನ್ನು ಹೇಳಿ ಕಳಿಸಿಕೊಟ್ಟರು.

ಆ ದಿನವೆಲ್ಲಾ ಪ್ರಯಾಣ ಸಾಗಿಸಿ, ರಾತ್ರಿ ಶೋಣಾಕೂಲವನ್ನು ಸೇರಿದರು. ಆ ರಾತ್ರಿ ಅಲ್ಲೇ ಇರಬೇಕಾಯಿತು. ಶೋಣಾ ನದಿಯಲ್ಲಿ ಸ್ನಾನ, ಆಚಮನಗಳನ್ನು ಮಾಡಿ, ನದಿ ತೀರದಲ್ಲಿ ಎಲ್ಲರೂ ವಿಶ್ವಾಮಿತ್ರರ ಸುತ್ತಲು ಕುಳಿತರು. ಆಗ ರಾಮನು, "ಸ್ವಾಮೀ! ಈ ಪ್ರಾಂತವು ಎಷ್ಟು ಶೋಭಾಯಮಾನವಾಗಿದೆ. ಇದು ಯಾವ ಪ್ರದೇಶವೆನ್ನುವುದನ್ನು ತಿಳಿಯಲಪೇಕ್ಷಿಸುತ್ತೇನೆ," ಎಂದು ಪ್ರಾರ್ಥಿಸಿದನು. ವಿಶ್ವಾಮಿತ್ರರು, "ರಾಮಾ! ಬ್ರಹ್ಮ ಮಾನಸ ಪುತ್ರನಾದ ಕುಶನೆನ್ನುವ ತಾಪಸಿಯು ಪೂರ್ವದಲ್ಲಿ ಬ್ರಹ್ಮಲೋಕಕ್ಕೆ ಬಂದನು. ಅವನು ದೃಢವ್ರತನು, ಧರ್ಮಜ್ಞನು, ಶೌರ್ಯ ಸಂಪನ್ನನು. ಅವನು ಮಹಾಕುಲೀನಳಾದ ವಿದರ್ಭ ರಾಜಪುತ್ರಿಯನ್ನು ಮದುವೆಯಾಗಿದ್ದನು. ಸತಿಪತಿಗಳಿಬ್ಬರೂ ಧರ್ಮಾರ್ಥ ಕಾಮ ಮೋಕ್ಷ ಚತುರ್ವಿಧ ಪುರುಷಾರ್ಥಗಳನ್ನು ನಿಯಮ ತಪ್ಪದೆ ಪಾಲಿಸುತ್ತಿದ್ದರು. ಅವರಿಗೆ ಕುಶಾಂಬ, ಕುಶನಾಭ, ಅಧೂರ್ತರಜಕ, ವಸು ಎನ್ನುವ ನಾಲ್ಕು ಜನ ಪುತ್ರರು ಜನಿಸಿದರು. ಅವರು ನಾಲ್ವರೂ ತಂದೆಯಿಂದ ಸರಿಸಮಾನವಾಗಿ ಸದ್ಗುಣಗಳನ್ನು ಪಡೆದು,

ಅಮಿತ ತೇಜೋವಂತರಾಗಿ, ಪರಮಧಾರ್ಮಿಕರಾಗಿ, ಸತ್ಯಸಂಧರಾಗಿ, ಕ್ಷತ್ರಿಯ ಧರ್ಮವನ್ನು ಅವಲಂಬಿಸುತ್ತಿದ್ದರು.

ಹೀಗಿರುವಲ್ಲಿ, ಕುಶನು ಈ ಭೂಮಿಯನ್ನು ನಾಲ್ಕು ಭಾಗ ಮಾಡಿ ತನ್ನ ನಾಲ್ಕು ಜನ ಮಕ್ಕಳಿಗೂ ಹಂಚಿಕೊಟ್ಟು, "ಮಕ್ಕಳೇ! ನಿಮ್ಮ ನಿಮ್ಮ ಭೂಭಾಗವನ್ನು ನೀವು ಪಾಲಿಸುತ್ತಾ ಬನ್ನಿ," ಎಂದು ಹೇಳಿದನು. ಆ ನಾಲ್ವರೂ ತಂದೆಯ ಮಾತನ್ನು ಶಿರಸ್ಸಿನಲ್ಲಿ ಧರಿಸಿ, ತಮ್ಮ ಬಾಧ್ಯತೆಯನ್ನು ವಹಿಸಿ, ಪರಿಪಾಲನಾ ದೀಕ್ಷೆಯನ್ನು ಕೈಗೊಂಡರು. ನಾಲ್ವರೂ ತಮ್ಮ ತಮ್ಮ ರಾಜ್ಯಗಳಿಗೆ ಒಂದೊಂದು ರಾಜಧಾನಿ ಇರಬೇಕೆಂದು ನಿಶ್ಚಯಿಸಿ, ಅವುಗಳನ್ನು ಕಟ್ಟಿಸಲು ಮೊದಲು ಮಾಡಿದರು. ಕುಶಾಂಬನು ಕೌಶಾಂಬೀ ನಗರವನ್ನು, ಕುಶನಾಭನು ಮಹೋದಯ ಎನ್ನುವ ನಗರವನ್ನು, ಅಧೂರ್ತರಜಕನು ಧರ್ಮಾರಣ್ಯ ಎನ್ನುವ ನಗರವನ್ನು, ವಸುವು ಗಿರಿವ್ರಜ ಎನ್ನುವ ನಗರವನ್ನು ಕಟ್ಟಿಸಿದರು. ರಾಮಾ! ಈಗ ನಾವು ಇರುವ ಈ ಪ್ರದೇಶವು ವಸುರಾಜನ ರಾಜ್ಯದಲ್ಲಿದೆ. ಈ ದೇಶದ ಸುತ್ತಲೂ ಐದು ಬೆಟ್ಟಗಳಿವೆ. ಆದ್ದರಿಂದಲೇ ಈ ರಾಜಧಾನಿಗೆ ಗಿರಿವ್ರಜ ಎನ್ನುವ ಹೆಸರು ಬಂದಿದೆ. ಮಂಗಳಕರವಾದ ಈ ಶೋಣಾ ನದಿಯೇ ಸುಮಾಗಧಿ ಎಂದು ಪ್ರಸಿದ್ಧಿಗೇರಿತು. ಈ ನದಿಯಿಂದಾಗಿಯೇ ಈ ದೇಶವನ್ನು ಮಗಧ ದೇಶ ಎಂದು ಸಹ ಕರೆಯಲು ಮೊದಲು ಮಾಡಿದರು. ಈ ಮಾಗಧಿ ನದಿಯು ಐದು ಬೆಟ್ಟಗಳ ಮಧ್ಯೆ ಹೂಮಾಲೆಯಂತೆ ಪೂರ್ವದಿಂದ ಪಶ್ಚಿಮಕ್ಕೆ ಪ್ರವಹಿಸುತ್ತಿದೆ. ವಸುರಾಜನ ಮಹಾತ್ಮ್ಯದಿಂದ ಈ ಜಲವು ಪ್ರವಹಿಸುವ ವರೆಗೂ ದೂರದ ಭೂಮಿಯು ಸುಕ್ಷೇಮವಾಯಿತು.

ಎರಡನೆ ಕುಮಾರನಾದ ಕುಶನಾಭನು ರಾಜರ್ಷಿ, ಧರ್ಮಾತ್ಮ. ಅವನಿಗೆ ಎಲ್ಲ ಹೆಣ್ಣು ಮಕ್ಕಳೇ. ಅವನು ಅವರೆಲ್ಲರಿಗೆ ಅನೇಕ ರೀತಿಯ ಧರ್ಮಬೋಧನೆ ಮಾಡಿದನು. 'ಕ್ಷಮೆಯೇ ದಾನ, ಕ್ಷಮೆಯೇ ಯಜ್ಞ, ಕ್ಷಮೆಯೇ ಸತ್ಯ, ಕ್ಷಮೆಯೇ ಯಶಸ್ಸು ಮತ್ತು ಕ್ಷಮೆಯೇ ಸಮಸ್ತ ಧರ್ಮಗಳಿಗೂ ಮೂಲ. ಈ ಜಗತ್ತೆಲ್ಲವೂ ಕ್ಷಮೆಯ ಮೇಲೆ ಆಧಾರಪಟ್ಟಿದೆ. ಕ್ಷಮಾಗುಣವೇ ಬಹು ದೊಡ್ಡಗುಣ, ಅದನ್ನು ಪಡೆಯುವುದೇ ನಿಮ್ಮ ಗುರಿ,' ಎಂದು ಅವರಿಗೆ ಸ್ಪಷ್ಟವಾಗಿ ಬೋಧಿಸಿದನು. ತನ್ನ ಎಲ್ಲ ಹೆಣ್ಣು ಮಕ್ಕಳನ್ನೂ ಕಾಂಪಿಲ್ಯಾನಗರದ ರಾಜನಾದ ಬ್ರಹ್ಮದತ್ತನಿಗೆ ಕೊಟ್ಟು ವಿವಾಹಮಾಡಿ, ಅವನೊಂದಿಗೆ ಕಳಿಸಿದಾಗ, ಮನೆ ಬರಿದಾದುದನ್ನು ಕಂಡು, 'ಅಯ್ಯೋ! ಪುತ್ರಿಯರಿಂದ ಕೂಡಿ ಲವಲವಿಕೆಯಿಂದ ತುಂಬಿ ನಿತ್ಯೋತ್ಸವವಾಗಿದ್ದ ಮನೆಯು ಇಂದು ನಿಶ್ಶಬ್ದವಾಗಿ, ಕಳಾಹೀನವಾಗಿ, ಆನಂದರಹಿತವಾಗಿ ಕಾಣುತ್ತಿದೆ. ಹೆಣ್ಣು ಮಕ್ಕಳು ಎಷ್ಟು ಜನ ಇದ್ದರೇನು, ಎಂದಾದರೊಂದು ದಿನ ಅವರು ತಂದೆಯ

ಮನೆಯನ್ನು ಬಿಟ್ಟುಹೋಗಲೇಬೇಕು. ಆದರೆ, ಒಬ್ಬ ಮಗನಿದ್ದಿದ್ದರೆ ಇಂಥ ಸ್ಥಿತಿ ನನಗೆ ಬರುತ್ತಿರಲಿಲ್ಲ ಅಲ್ಲವೆ?' ಎಂದು ಚಿಂತಿಸುತ್ತ ಪುತ್ರೇಷ್ಟಿಯಾದನು.

ತಂದೆಯಾದ ಕುಶನು ಅದೇ ಸಮಯಕ್ಕೆ ಮನೆಗೆ ಬಂದು, ಮಗನ ಚಿಂತೆಗೆ ಕಾರಣವೇನೆಂದು ಕೇಳಲು, ವಿಷಯವನ್ನು ತಂದೆಗೆ ತಿಳಿಸಿದನು. "ಇದಕ್ಕೇಕೆ ಇಷ್ಟೊಂದು ಬಾಧೆಪಡುತ್ತಿರುವೆ? ತಪ್ಪದೆ ನಿನ್ನಂಥವನೇ ಒಬ್ಬ ಮಗನು ನಿನಗೆ ಪ್ರಾಪ್ತವಾಗುವನು," ಎಂದು ತಂದೆಯು ಆಶೀರ್ವದಿಸಿದನು. ತಂದೆಯ ಆಶೀರ್ವಾದದ ಫಲವೋ ಎನ್ನುವಂತೆ, ಅವನಿಗೆ ಒಬ್ಬ ಮಗನು ಹುಟ್ಟಿದನು. ಅವನೇ ಗಾಧಿರಾಜ, ಅವನು ಮಹಾ ಧರ್ಮಾತ್ಮ. ಕುಶವಂಶದಲ್ಲಿ ಹುಟ್ಟಿದನಾದ್ದರಿಂದ ಕೌಶಿಕ ಎಂದು ಅವನಿಗೆ ಮತ್ತೊಂದು ಹೆಸರು. ಅವನ ಅಕ್ಕಂದಿರು ತಮ್ಮ ಗಂಡಂದಿರನ್ನು ಕಳೆದುಕೊಂಡು, ಸಹಗಮನ ಮಾಡಿ, ಸ್ವರ್ಗವನ್ನು ಸೇರಿದರು. ಆ ವಿಚಾರದಲ್ಲಿ ಅವರಿಗೆ ಐಹಿಕ ಆಮುಷ್ಮಿಕ ಫಲಗಳನ್ನು ಕೊಡಬಯಸಿ ಹಿಮವತ್ ಪರ್ವತದ ಪ್ರಾಂತದಲ್ಲಿ ಮಹಾನದಿಗಳಾಗಿ ಹುಟ್ಟಿ, ಮಹಾಗಣ್ಯವಾದ ಕೌಶಿಕೀ ನದಿಯನ್ನು ಸೇರಿ ಪ್ರವಹಿಸುತ್ತಿದ್ದಾರೆ.

ಕೌಶಿಕಿಯು ಪುಣ್ಯ ನದಿ. ಸ್ವರ್ಗ ಸೇರಿದ ಇವನ ಹಿರಿಯ ಅಕ್ಕ ಸತ್ಯವತಿಯೇ ಆ ನದಿ. ತನ್ನ ಅಕ್ಕನು ಮತ್ತೆ ಕೌಶಿಕೀ ನದೀ ರೂಪದಲ್ಲಿ ಪ್ರವಹಿಸುತ್ತಿದ್ದುದರಿಂದ ಅವಳ ಮೇಲಿನ ಅತಿಶಯ ಗೌರವ ಪ್ರೀತಿಯಿಂದ ಕೌಶಿಕನು ಆ ನದಿ ತೀರದಲ್ಲೇ ವಾಸಮಾಡತೊಡಗಿದನು. ಮುಂದೆ ಯಜ್ಞದ ಸಲುವಾಗಿ ಆ ಪ್ರದೇಶವನ್ನು ಬಿಟ್ಟು, ಸಿದ್ಧಾಶ್ರಮಕ್ಕೆ ಬರಬೇಕಾಯಿತು. ರಾಮಾ! ನಿನ್ನ ಪರಾಕ್ರಮದಿಂದ ಇಲ್ಲಿ ನನ್ನ ಯಜ್ಞವು ಸಫಲವಾಯಿತು. ನನ್ನ ತಪಸ್ಸು ಸಿದ್ಧಿಸಿತು," ಎಂದರು. ಆಗ, ಅಲ್ಲಿ ಸೇರಿದ್ದ ಋಷಿಗಳು, ಮುನಿಶಿಷ್ಯರು, "ಆಹಾ! ಏನಾಶ್ಚರ್ಯ. ನಿಜಕ್ಕೂ ಇಂದು ಗುರುಗಳ ಪೂರ್ವಿಕರ ವಿಷಯ ತಿಳಿಯುವ ಮಹದ್ಭಾಗ್ಯ, ಮಹಾದಾನಂದ ನಮಗೆ ಲಭಿಸಿತು. ಕುಶ ವಂಶವು ಮಹಾ ಪವಿತ್ರವಾದುದು. ಅದು ಬ್ರಹ್ಮದೇವನ ಸಮಾನರಾದ ಮಹಾತ್ಮರುಗಳ ವಂಶ. ಧರ್ಮಾತ್ಮರಿಗೆ ನಿಲಯವಾದ ಕುಶ ವಂಶದ ಇಂದಿನ ಕಾಯದಲ್ಲಿ ಸಂಚರಿಸುವ ಸತ್ಪುರುಷನಾದ ವಿಶ್ವಾಮಿತ್ರರಿಗೆ ಸೇವೆ ಮಾಡುವ ಭಾಗ್ಯ ನಮ್ಮೆಲ್ಲರ ಪೂರ್ವ ಪುಣ್ಯದ ಫಲ," ಎಂದು ಆನಂದಿಸಿದರು.

ವಿಶ್ವಾಮಿತ್ರರು, "ರಾಮಾ! ನೀನು ಕೇಳಿದೆಯಾದ್ದರಿಂದ ಈ ದೇಹಸಂಬಂಧವಾದ ವಿಷಯವನ್ನು ಹೇಳಬೇಕಾಯಿತು. ಇಲ್ಲದಿದ್ದರೆ ಈ ದೇಹ ಸಂಬಂಧದ ವಂಶವನ್ನು ಹೇಳುವ ಅಗತ್ಯವಿರಲಿಲ್ಲ. ರಾತ್ರಿಯಾಯಿತು, ನಾವಿನ್ನು ವಿಶ್ರಮಿಸಿಕೊಳ್ಳುವುದು ಒಳ್ಳೆಯದು. ತಡವಾಗಿ ಮಲಗಿದರೆ ನಾಳೆ ಪ್ರಯಾಣವು ನಿಧಾನ

ವಾಗುವುದು. ರಾಮಾ ನೋಡು, ಚಂದ್ರನು ಕತ್ತಲನ್ನು ಪಕ್ಕಕ್ಕೆ ಸರಿಸಿ, ತಾಪವನ್ನು ನಿವಾರಿಸಿ, ತಂಪು ಕಿರಣಗಳಿಂದ ಕೂಡಿದವನಾಗಿ ಮರದ ಕೊಂಬೆಗಳ ಮಧ್ಯದಿಂದ ನೋಡುತ್ತಿದ್ದಾನೆ. ಇನ್ನು ಹೋಗಿ ಮಲಗಿಕೊಳ್ಳಿ," ಎಂದು ಹೇಳಿ, ತಾವೂ ಒಂದು ಮೆತ್ತನೆಯ ಹುಲ್ಲು ಹಾಸಿಗೆಯ ಮೇಲೆ ತಲೆಯೂರಿದರು. ಎಲ್ಲರೂ ಆ ರಾತ್ರಿ ವಿಶ್ವಾಮಿತ್ರರ ಪೂರ್ವಿಕರನ್ನು ಸ್ಮರಿಸುತ್ತಾ ನಿದ್ರಿಸಿದರು. ಬೆಳಗಾಗುತ್ತಲೆ, ಕಾಲಕೃತ್ಯಗಳನ್ನು ತೀರಿಸಿಕೊಂಡು, ಸ್ನಾನ ಸಂಧ್ಯಾದಿಗಳನ್ನು ಮಾಡಿ ಪ್ರಯಾಣಕ್ಕೆ ಸಿದ್ಧವಾಗಿ ವಿಶ್ವಾಮಿತ್ರರ ಬಳಿ ಬಂದು ನಮಸ್ಕರಿಸಿ ನಿಂತರು.

ಆಗ ರಾಮನು, "ಸ್ವಾಮೀ! ನಾವೀಗ ನದಿಯನ್ನು ದಾಟಬೇಕು. ಈ ಶೋಣಾ ನದಿ ಆಳವಿಲ್ಲ, ಜಲ ಕೂಡ ನಿರ್ಮಲವಾಗಿದೆ. ದೋಣಿಯ ಅವಶ್ಯಕತೆ ಇಲ್ಲ. ಕಾಲ್ನಡಿಗೆಯಿಂದಲೇ ದಾಟಬಹುದು," ಎನ್ನಲು, ವಿಶ್ವಾಮಿತ್ರರು, "ಮಗೂ! ನಾವು ಹೋಗಬೇಕಾದ ದಾರಿ ನಿಮಗೆ ತಿಳಿಯದು. ಆದ್ದರಿಂದ ನಾನು ಮುಂದೆ ಹೋಗು ತ್ತೇನೆ. ನಂತರ ನೀವು ನನ್ನನ್ನು ಅನುಸರಿಸಿ ಬನ್ನಿ," ಎಂದು, ಮುಂದೆ ಹೊರಟ ರು. ಎಲ್ಲರೂ ತಮ್ಮ ತಮ್ಮ ಮೂಟೆಗಳನ್ನು ಬಗಿಲಿಗೆ ಹಾಕಿಕೊಂಡು ಅವರ ಹಿಂದೆ ಹೊರಟರು. ಮಧ್ಯಾಹ್ನವಾಗುತ್ತಿದ್ದಂತೆ, ಜಾಹ್ನವೀ ನದಿ ಕಾಣಿಸಿತು. ಹಂಸಗಳ ಕುಹೂ ನಾದ ಕೇಳಿಸಿತು. ಮನೋಹರವಾದ ಆ ನದಿಯನ್ನು ನೋಡಿ ಎಲ್ಲರೂ ಆನಂದಿಸಿದರು. ಸ್ನಾನಾದಿಗಳನ್ನು ಮಾಡಿ, ಪಿತೃ ಪಿಂಡಗಳನ್ನು ಹಾಕಿ, ಅಗ್ನಿಹೋತ್ರ ಮಾಡಿ, ನದೀ ತೀರದಲ್ಲಿ ಸಮೃದ್ಧಿಯಾಗಿ ಬೆಳೆದಿದ್ದ ಮರಸೇಬು ಬೋರೆ ಹಣ್ಣು ಗಳನ್ನು, ಕಂದಮೂಲಗಳನ್ನು ತಿಂದು, ಅಮೃತ ಸಮಾನವಾದ ನೀರನ್ನು ಕುಡಿದು ಆನಂದಿಸಿದರು.

ರಾಮ ಲಕ್ಷ್ಮಣರು ವಿಶ್ವಾಮಿತ್ರರು ಕುಳಿತಿದ್ದ ನೆರಳಿಗೆ ಹೋಗಿ ಹತ್ತಿರ ಕುಳಿತು ಕೊಂಡು, "ಸ್ವಾಮೀ! ಈ ಗಂಗಾನದಿಯು ಮೂರು ಕವಲುಗಳಾಗಿ ಮೂರು ಲೋಕಗಳಲ್ಲೂ ಏಕೆ ಪ್ರವಹಿಸುತ್ತಿದೆ? ನದಿಗಳೆಲ್ಲಕ್ಕೂ ಪ್ರಭುವಾದ ಸಮುದ್ರವನ್ನು ಅದು ಹೇಗೆ ಸೇರುತ್ತದೆ? ತಿಳಿಸಿದರೆ, ಕೇಳಿ ಆನಂದಿಸುತ್ತೇವೆ," ಎಂದು ಪ್ರಾರ್ಥಿಸಿ ದರು. ವಿಶ್ವಾಮಿತ್ರರು, "ಮಗೂ! ರಾಮಾ! ಸರ್ವ ಲೋಕಗಳಿಗೂ ಸರ್ವ ಮೃಗಗ ಳಿಗೂ ಸರ್ವ ಮೂಲಿಕೆಗಳಿಗೂ ನಿಲಯವಾದುದು ಹಿಮಾಲಯ. ಅದಕ್ಕೆ ಇಬ್ಬರು ಪುತ್ರಿಯರು. ಅಂದರೆ ಅದರಲ್ಲಿ ಹುಟ್ಟಿದಂತವು. ಒಬ್ಬಳ ಹೆಸರು ಗಂಗಾ, ಮತ್ತೊಬ್ಬಳ ಹೆಸರು ಉಮಾ; ದೊಡ್ಡವಳು ಗಂಗೆ, ಚಿಕ್ಕವಳು ಉಮಾ. ಇವರಿಬ್ಬರೂ ಜಗತ್ಪ್ರಸಿ ದ್ಧರು, ಸರ್ವಲೋಕ ಪೂಜ್ಯರು. ದೇವಹಿತಕ್ಕಾಗಿ ಗಂಗೆಯನ್ನು ತಮಗೆ ಕೊಡ ಬೇಕೆಂದು ದೇವತೆಗಳು ಕೋರಿದರು. ಆಗ ಹಿಮವಂತನು ಮೂರು ಲೋಕಗಳ ಹಿತವನ್ನೂ ಬಯಸಿ, ಹಿರಿಯ ಮಗಳಾದ ಗಂಗೆಯನ್ನು ದೇವತೆಗಳಿಗೆ ಕೊಟ್ಟನು.

ಎರಡನೆಯ ಮಗಳಾದ ಉಮಾ, ಮಹೋಗ್ರವಾದ ತಪಸ್ಸು ಮಾಡಲಾರಂಭಿಸಿದಳು. ಅವಳು ಹೀಗೆ ತಪಸ್ಸಿನಲ್ಲಿ ಮುಳುಗಿದರೆ ಲೋಕ ವಾಂಛೆಯೇ ಇಲ್ಲದೆ ಸರ್ವಸಂಗ ಪರಿತ್ಯಾಗಿಯಾಗುವಳೆಂದು ಹೆದರಿ ಹಿಮವಂತನು ಅವಳನ್ನು ಹೇಗಾದರೂ ಮಾಡಿ ಗೃಹಸ್ಥಾಶ್ರಮ ಪ್ರವೇಶಿಸುವಂತೆ ಮಾಡಬೇಕೆಂದು ಅನೇಕ ಪ್ರಯತ್ನಗಳನ್ನು ಮಾಡಿದನು. ಕಡೆಗೆ, ರುದ್ರನನ್ನೊಪ್ಪಿಸಿ ಅವನಿಗೆ ಕೊಟ್ಟು ವಿವಾಹ ಮಾಡಿದನು. ಆಗಿನಿಂದ ಅವಳು ಮೂರು ಲೋಕಗಳಿಗೂ ಪೂಜ್ಯಳಾದಳು. ತ್ರಿಲೋಕ ಹಿತಾಚರಣಪರರಾದ ದೇವತೆಗಳು ಗಂಗೆಯೊಂದಿಗೆ ದೇವಲೋಕಕ್ಕೆ ಹೋದರು. ಅವಳು ದೇವಲೋಕದಲ್ಲಿ ದಿವ್ಯ ವಾಹಿನಿಯಾಗಿ ಪ್ರವಹಿಸಿದಳು. ಆ ತ್ರಿಪಥಗಾಮಿನಿಯೇ ಈ ಗಂಗೆ," ಎಂದರು.

ವಿಶ್ವಾಮಿತ್ರರು ರಾಮ ಲಕ್ಷ್ಮಣರಿಗೆ, ಶಿಷ್ಯರಿಗೆ, ತಮ್ಮ ಪೂರ್ವ ಚರಿತ್ರೆಯನ್ನೂ ಸ್ಥಳ ಮಹಾತ್ಮೆಗಳನ್ನೂ ರಾಜರ ವೃತ್ತಾಂತಗಳನ್ನೂ ಹೇಳುತ್ತಾ ಮಿಥಿಲಾಪುರಕ್ಕೆ ಪ್ರಯಾಣ ಮಾಡುತ್ತಾ ಕ್ರಮಕ್ರಮೇಣ, ಮಿಥಿಲಾಪುರದ ಸಮೀಪಕ್ಕೆ ಹೋದರು. ಆ ಸಂಜೆ ಸ್ನಾನ ಸಂಧ್ಯಾದಿಗಳನ್ನು ಮುಗಿಸಿಕೊಂಡು, ಗಂಗಾನದಿಯ ಮರಳುದಿಣ್ಣೆಯ ಮೇಲೆ ಎಲ್ಲರೂ ಪ್ರಸನ್ನ ಹೃದಯಿಗಳಾಗಿ ಕುಳಿತರು. ಗಂಗಾನದಿಯ ವಿಷಯವನ್ನು ರಾಮನು ಜ್ಞಾಪಿಸಿದ್ದರಿಂದ, ಮತ್ತೆ ಹೇಳಲಾರಂಭಿಸಿದರು. "ರಾಮಾ! ಈ ಗಂಗಾನದಿಯು ಭೂಮಿಗಿಳಿಯಲು ನಿಮ್ಮ ಪೂರ್ವಿಕರೇ ಕಾರಣ. ಅವರ ಪುಣ್ಯದಿಂದ ಭೂಮಿಯ ಮೇಲೆ ಹುಟ್ಟಿದ ಮಾನವರು ಅದರಲ್ಲಿ ಸ್ನಾನ ಸಂಧ್ಯಾದಿಗಳನ್ನಾಚರಿಸಿ ಪುನೀತರಾಗುತ್ತಿದ್ದಾರೆ. ಗಂಗಾನದಿಯು ಪರಮ ಪವಿತ್ರವಾಹಿನಿ, ಜನ್ಮರಾಹಿತ್ಯ ಉಂಟುಮಾಡುವ ಅಮೃತ ಜಲ ರೂಪಿಣಿ. ಶಿವನ ಜಟಾಜೂಟವೇ ಇವಳ ನಿವಾಸ ಸ್ಥಾನ. ಆದ್ದರಿಂದಲೇ ಇವಳು ಮಂಗಳಕಾರಿಣಿ, ಶುಭದಾಯಿನಿ," ಎಂದು ಅನೇಕ ವಿಧವಾಗಿ ಗಂಗೆಯನ್ನು ಕೊಂಡಾಡಿದರು.

ರಾಮಚಂದ್ರನು ಆಶ್ಚರ್ಯದಿಂದ, "ಸ್ವಾಮೀ! ಇಂಥ ಅದ್ಭುತ ಪ್ರವಾಸವನ್ನು ನಮ್ಮ ಪೂರ್ವಿಕರು ಹೇಗೆ ಶಕ್ತಿಯುಕ್ತಿಗಳಿಂದ ಧರೆಗೆ ತಂದರೆನ್ನುವುದನ್ನು ವಿವರವಾಗಿ ಹೇಳಿದರೆ ಕೇಳಿ ಆನಂದಿಸುತ್ತೇವೆ," ಎಂದು ಅತಿ ವಿನಯದಿಂದ ಕೇಳಲು, ವಿಶ್ವಾಮಿತ್ರರು, "ರಾಮಾ! ಕೇಳು, ಪೂರ್ವದಲ್ಲಿ ಅಯೋಧ್ಯಾ ನಗರವನ್ನು ಸಗರನೆನ್ನುವ ಚಕ್ರವರ್ತಿಯು ಪರಿಪಾಲಿಸುತ್ತಿದ್ದನು. ಅವನು ಧಾರ್ಮಿಕ, ಮಹಾಪರಾಕ್ರಮಿ. ಅವನ ಗುಣ ಪರಾಕ್ರಮಗಳನ್ನು ಮೆಚ್ಚಿದ ವಿದರ್ಭ ದೇಶದ ರಾಜನು ತನ್ನ ಪ್ರೇಮ ಪುತ್ರಿಯಾದ ಕೇಶಿನಿಯನ್ನು ಅವನಿಗೆ ಕೊಟ್ಟು ವಿವಾಹ ಮಾಡಿದನು. ಅವಳು ಕೂಡ ಧರ್ಮಿಷ್ಠೆ, ಸತ್ಯಭಾಷಿಣಿ. ಅವರಿಗೆ ಎಷ್ಟು ಕಾಲವಾದರೂ ಸಂತಾನವಾಗಲಿಲ್ಲ. ವಂಶಾಭಿವೃದ್ಧಿಯನ್ನು ಆಶಿಸಿದ ಸಗರನು ಕೇಶಿಯ ಒಪ್ಪಿಗೆ ಪಡೆದು, ಅರಿಷ್ಠ

ನೇಮಿಯ ಮಗಳಾದ ಸುಮತಿ ಎನ್ನುವ ಸುಂದರ ಸುಕೋಮಲ ಕನ್ಯೆಯನ್ನು ಲಗ್ನವಾದನು.

ಅವಳೂ ಸಂತಾನವತಿಯಾಗದಿದ್ದುದರಿಂದ, ಇನ್ನು ಚಿಂತಿಸಿ ಪ್ರಯೋಜನವಿಲ್ಲವೆಂದು, ಭಗವಂತನ ಕಟಾಕ್ಷವನ್ನು ಪಡೆಯಲು ಸಗರನು ತನ್ನ ಇಬ್ಬರು ಹೆಂಡತಿಯರೊಂದಿಗೆ ಹೊರಟು, ಹಿಮವತ್ಪರ್ವತದಲ್ಲಿ ಭೃಗು ಮಹರ್ಷಿಯು ವಾಸಿಸುತ್ತಿದ್ದ ನದೀತೀರವನ್ನು ಸೇರಿ, ಅಲ್ಲಿ ತೀವ್ರವಾದ ತಪಸ್ಸನ್ನು ಮಾಡಲಾರಂಭಿಸಿದನು. ಬಹಳ ಕಾಲ ತಪಸ್ಸು ಮಾಡಿದ ಮೇಲೆ, ಒಂದು ದಿನ ಬೆಳಗಿನ ಜಾವ, ಮಹಾ ಸತ್ಯ ಸಂಪನ್ನನಾದ ಭೃಗು ಮಹರ್ಷಿಯು ಪ್ರತ್ಯಕ್ಷವಾಗಿ, 'ರಾಜಾ! ತಪಸ್ಸನ್ನು ನಿಲ್ಲಿಸು. ನೀನು ಲೋಕದಲ್ಲಿ ಅಸಾಮಾನ್ಯ ಕೀರ್ತಿ ಸಂಪಾದಿಸುವೆ. ಶೀಘ್ರದಲ್ಲೇ ಪುತ್ರಾನಂದ ಪಡಯುವೆ,' ಎಂದನು. ಅವನ ಮಾತುಗಳನ್ನು ಕೇಳಿದೊಡನೆಯೇ, ಸಗರನು ಕಣ್ಣುಗಳನ್ನು ತೆಗೆದು, ಭೃಗು ಮಹರ್ಷಿಗೆ ನಮಸ್ಕರಿಸಿ, 'ಸ್ವಾಮೀ! ನನಗಿಬ್ಬರು ಹೆಂಡತಿಯರಿದ್ದಾರೆ, ಅವರ ನಮಸ್ಕಾರಗಳನ್ನು ಸ್ವೀಕರಿಸಬೇಕು. ಅವರನ್ನು ಸ್ವತಃ ನೀವೇ ಆಶೀರ್ವದಿಸಬೇಕು,' ಎಂದು, ಮಹರ್ಷಿಗೆ ನಮಸ್ಕರಿಸುವಂತೆ ತನ್ನ ಇಬ್ಬರು ಹೆಂಡತಿಯರಿಗೂ ಸಂಜ್ಞೆ ಮಾಡಿದನು.

ಹಿರಿಯಳಾದ ಕೇಶಿನಿಯು ಭಕ್ತಿ ಶ್ರದ್ಧೆಯಿಂದ ಸ್ತೋತ್ರ ಮಾಡುತ್ತಾ ತಲೆಬಾಗಿ ನಮಸ್ಕರಿಸಲು, 'ಅಮ್ಮಾ! ನಿನಗೆ ವಂಶವರ್ಧನನಾದ ಒಬ್ಬ ಕುಮಾರ ಬೇಕೋ, ಮಹಾ ಬಲವಂತರೂ ಕೀರ್ತಿವಂತರೂ ಆದ ಅನೇಕ ಮಂದಿ ಕುಮಾರರು ಬೇಕೋ?' ಎಂದು ಕೇಳಿದರು. ಅವಳು, 'ಸ್ವಾಮೀ! ವಂಶವರ್ಧನನಾದ ಒಬ್ಬ ಕುಮಾರನೇ ಸಾಕು,' ಎಂದಳು. ಭೃಗುವು, 'ತಥಾಸ್ತು,' ಎಂದು ಆಶೀರ್ವದಿಸಿದರು. ಕಿರಿಯಳಾದ ಸುಮತಿಯು ನಮಸ್ಕರಿಸಲು, ಅವಳನ್ನೂ ಹಾಗೆಯೇ ಪ್ರಶ್ನಿಸಿದರು. ಅವಳು ಮಹಾ ಬಲವಂತರೂ ಕೀರ್ತಿವಂತರೂ ಆದ ಬಹುಜನ ಕುಮಾರರನ್ನು ಕೋರಿದಳು. ಭೃಗು ಮಹರ್ಷಿಯು ಹಾಗಯೇ ಆಗಲೆಂದು ಆಶೀರ್ವದಿಸಿ ಅಂತರ್ಧಾನರಾದರು.

ರಾಮಚಂದ್ರ! ಭೃಗು ಮಹರ್ಷಿಯ ಅಮೋಘವಾದ ಆಶೀರ್ವಾದವನ್ನು ಪಡೆದು, ಸಗರನು ಹೆಂಡತಿಯರೊಂದಿಗೆ ತನ್ನ ರಾಜಧಾನಿಯನ್ನು ಸೇರಿದನು. ಭೃಗುವಿನ ವರಗಳನ್ನು ಮನಸ್ಸಿನಲ್ಲಿ ವಿಚಾರ ಮಾಡುತ್ತಾ ಕಾಲ ಕಳೆಯುತ್ತಿರಲು, ಕೆಲವು ತಿಂಗಳಲ್ಲೇ ಇಬ್ಬರು ಹೆಂಡತಿಯರೂ ಗರ್ಭ ಧರಿಸಿದರು. ಕ್ರಮವಾಗಿ ಒಂಬತ್ತು ತಿಂಗಳುಗಳು ಕಳೆದ ಮೇಲೆ, ಕೇಶಿನಿಗೆ ಒಬ್ಬ ಪುತ್ರನೂ ಸುಮತಿಗೆ ಅನೇಕ ಜನ ಪುತ್ರರೂ ಜನಿಸಿದರು.

ದಿನ ಕಳೆದಂತೆ, ಆ ಮಕ್ಕಳು ಬೆಳೆದು ದೊಡ್ಡವರಾಗಿ ಜೊತೆ ಹುಡುಗರೊಂದಿಗೆ ಆಟ ಪಾಟದಲ್ಲಿ ಸೇರಿಕೊಳ್ಳುತ್ತಿದ್ದರು. ಸಗರನ ಜ್ಯೇಷ್ಠ ಪುತ್ರನಾದ ಅಶ್ವಮಂಜುವು ಅಯೋಧ್ಯೆಯ ಚಿಕ್ಕ ಚಿಕ್ಕ ಹುಡುಗರನ್ನು ಆಡುವುದಕ್ಕಾಗಿ ಸರಯೂ ನದಿಯ ಮರಳಿಗೆ ಕರೆದುಕೊಂಡು ಹೋಗಿ, ಅವರನ್ನು ನದಿಯಲ್ಲಿ ತಳ್ಳಿ, ಆ ಅರಿಯದ ಮಕ್ಕಳು ಮುಳುಗುತ್ತಿರುವುದನ್ನು ನೋಡಿ ಗಟ್ಟಿಯಾಗಿ ನಗುತ್ತಿದ್ದನು. ಹೀಗೆ, ಊರಿನ ಮಕ್ಕಳನ್ನು ಕೊಲ್ಲುವ ಮಹಾ ಘೋರ ಕೃತ್ಯದಲ್ಲಿ ತೊಡಗಿ, ಪರಮ ದುರ್ಮಾರ್ಗಿಯೆನ್ನುವ ಹೆಸರು ಪಡೆದನು.

ಮಕ್ಕಳು ಯುಕ್ತ ವಯಸ್ಸಿಗೆ ಬಂದೊಡನೆ ಸಗರನು ತನ್ನ ಮಕ್ಕಳೆಲ್ಲರಿಗೂ ತಕ್ಕ ಹೆಣ್ಣುಗಳನ್ನು ತಂದು ವಿವಾಹ ಮಾಡಿದನು. ಆದರೂ, ಅಶ್ವಮಂಜು ತನ್ನ ಪಾಪ ಕಾರ್ಯಗಳನ್ನು ಬಿಡದೆ ಅಯೋಧ್ಯಾವಾಸಿಗಳಿಗೆ ಅನೇಕ ರೀತಿಯಾಗಿ ದುಃಖ ಕೊಡುತ್ತಿದ್ದನು. ಅಯೋಧ್ಯಾವಾಸಿಗಳು ಒಂದು ದಿನ ಸಗರನ ಬಳಿಗೆ ಬಂದು, ಅವನ ಜ್ಯೇಷ್ಠ ಪುತ್ರನ ದುರ್ಮಾರ್ಗಗಳನ್ನೂ ದುಷ್ಟ ಕಾರ್ಯಗಳನ್ನೂ ಅವನಿಂದ ತಮಗಾಗುತ್ತಿರುವ ದುಃಖವನ್ನೂ ಹೇಳಿಕೊಂಡು ಗೋಳಾಡಿದರು. ಅದನ್ನು ಕೇಳಿ, ತನ್ನ ಪುತ್ರನೆನ್ನುವ ಪ್ರೇಮವನ್ನೂ ಬಿಟ್ಟು, ನಿರ್ದಯನಾಗಿ, ಕೂಡಲೇ ಅಶ್ವಮಂಜುವು ರಾಜ್ಯವನ್ನು ಬಿಟ್ಟು ಕಾಡಿಗೆ ಹೋಗಬೇಕೆಂದು ಸಗರನು ಆಜ್ಞಾಪಿಸಿದನು. ಆ ಸಮಯದಲ್ಲೇ ಅಶ್ವಮಂಜುವಿಗೆ ಒಬ್ಬ ಮಗ ಹುಟ್ಟಿದನು. ಮಗನನ್ನೂ ಹೆಂಡತಿ ಮತ್ತು ತಂದೆ ತಾಯಿಗಳನ್ನೂ ಬಿಟ್ಟು ಅಶ್ವಮಂಜುವು ತಂದೆಯ ಆಜ್ಞೆ ಪ್ರಕಾರ ಅಡವಿಗೆ ಹೋದನು.

ಕೆಲವು ಸಂವತ್ಸರಗಳು ಕಳೆದ ಮೇಲೆ, ಅಶ್ವಮಂಜುವಿನ ಕುಮಾರನಾದ ಅಂಶುಮಂತನು ಬೆಳೆದು ದೊಡ್ಡವನಾಗಿ, ಸರ್ವಲೋಕ ಸಮ್ಮತನೆಂದೂ ಸದ್ಗುಣ ಸಂಪನ್ನನೆಂದೂ ಮಹಾ ಪರಾಕ್ರಮಶಾಲಿಯೆಂದೂ ಹೆಸರು ಪಡೆದನು. ಒಂದು ದಿನ ಸಗರ ಚಕ್ರವರ್ತಿಯು ಒಳ್ಳೆಯ ಮುಹೂರ್ತವನ್ನು ನೋಡಿ ಅಶ್ವಮೇಧ ಯಾಗ ಪ್ರಾರಂಭಿಸಿದನು," ಎಂದು ವಿಶ್ವಾಮಿತ್ರರು ಯಾಗವನ್ನು ಕುರಿತು ಹೇಳಲು ಮೊದಲು ಮಾಡಿದೊಡನೆಯೇ ರಾಮನು, "ಸ್ವಾಮೀ! ಅಶ್ವಮೇಧ ಯಾಗವನ್ನು ಸಗರನು ಅಯೋಧ್ಯೆಯಲ್ಲೇ ಮಾಡಿದನೋ? ಇಲ್ಲವೆ ಬೇರೆ ನದೀ ತೀರದಲ್ಲಿ ಮಾಡಿದನೋ? ವಿವರವಾಗಿ ಹೇಳಬೇಕು," ಎಂದು ಪ್ರಾರ್ಥಿಸಿದನು. ವಿಶ್ವಾಮಿತ್ರರು ಮುಗುಳ್ನಗುತ್ತಾ, "ರಾಮಾ! ಯಾಗವೆಂದರೆ ನಿನಗೆ ಅದೆಷ್ಟು ಶ್ರದ್ಧೆಯೋ ನನಗೆ ತಿಳಿದಿದೆ! ಹೇಳುತ್ತೇನೆ, ಕೇಳು. ಹಿಮವತ್ಪರ್ವತದ ಎದುರಿಗೊಂದು ಪರ್ವತವಿದೆ. ಅದನ್ನು ವಿಂಧ್ಯ ಪರ್ವತವೆನ್ನುವರು. ಹಿಮವತ್ಪರ್ವತವೂ ವಿಂಧ್ಯ ಪರ್ವತವೂ ಪರಸ್ಪರ ನೋಡುತ್ತಿರುವಂತೆ ಇವೆ. ಆ ಎರಡು ಪರ್ವತಗಳ ಮಧ್ಯದ ಪ್ರದೇಶದಲ್ಲಿ

ಸಗರನು ಯಜ್ಞಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿದನು. ಆ ಸುಂದರ ಪ್ರಶಾಂತ ಪ್ರದೇಶದಲ್ಲಿ ವೇದವೇತ್ತರಾದ ಋತ್ವಿಕ್ಕುಗಳು ಮಂತ್ರಗಳನ್ನು ಹೇಳುತ್ತಿದ್ದರೆ ಪರ್ವತಗಳೇ ಅದರಿ, ಬೆದರಿ ಏನಾಗುವುವೋ ಎನ್ನುವಂತೆ ಪ್ರತಿಧ್ವನಿಯಾಗುತ್ತಿದ್ದಿತು. ಲಕ್ಷಾಂತರ ಪ್ರಜೆಗಳು ಆ ಯಜ್ಞದಲ್ಲಿ ಮಗ್ನರಾಗಿರುವ ಸಮಯದಲ್ಲಿ, ಅಶ್ವವನ್ನು ಸರ್ವಾಲಂಕಾರಸಹಿತವಾಗಿ ಕರೆದುಕೊಂಡು ಬಂದು ಪೂಜೆ ಮಾಡಿ ಸಂಚಾರಕ್ಕೆ ಬಿಟ್ಟರು. ಅದರ ಜೊತೆ ಮಹಾರಥನೂ ಧನುರ್ಧರನೂ ಆದ ಅಂಶುಮಂತನನ್ನು ಕಳಿಸಿದರು.

ಅಂಶುಮಂತನು ಅಶ್ವದ ಜೊತೆಯಲ್ಲಿ ಎಲ್ಲ ಕಡೆಯೂ ತಿರುಗಿ ದಿಗ್ವಿಜಯ ಮಾಡಿಕೊಂಡು ಕುದುರೆಯೊಂದಿಗೆ ಹಿಂತಿರುಗಿದನು. ಯಜ್ಞದ ಪರ್ವಕಾಲ ಸಮೀಪಿಸುತ್ತಿದ್ದಂತೆ, ಆ ದಿನ ಬೆಳಗಾಗುತ್ತಲೆ ಎದ್ದು ನೋಡಿದಾಗ ಕುದುರೆಯು ಕಾಣಿಸಲಿಲ್ಲ. ಋತ್ವಿಕ್ಕುಗಳು ದಿಗಿಲುಗೊಂಡು ಸಗರನಿಗೆ ಈ ವಾರ್ತೆಯನ್ನು ತಿಳಿಸಿದರು. ಸಗರನು ಕುದುರೆಯನ್ನು ಹುಡುಕಲು ನಾಲ್ಕು ದಿಕ್ಕಿಗೂ ಸೈನಿಕರನ್ನು ಕಳಿಸಿದನು. ಅಶ್ವವು ಹೀಗೆ ಕಣ್ಮರೆಯಾಗಿರುವುದು ರಾಜನಿಗೆ ಅಮಂಗಳಕರವೆಂದು ಋತ್ವಿಕ್ಕುಗಳು ಹೇಳಿದ್ದರಿಂದ ಸಗರನು ಚಿಂತಾಗ್ರಸ್ತನಾಗಿ ತನ್ನ ಕಿರಿಯ ಹೆಂಡತಿಯ ಮಕ್ಕಳಿಗೆ ಸರ್ವಾಯುಧಾರೂಢರಾಗಿ ಕುದುರೆಯನ್ನು ಹುಡುಕುವಂತೆ ಆಜ್ಞಾಪಿಸಿದನು. ಅವರು ರಾಕ್ಷಸರನ್ನೂ, ದೇವತೆಗಳನ್ನೂ, ನರರನ್ನೂ, ಶೋಧಿಸಿ, ಅಡ್ಡ ಬಂದವರೊಡನೆ ಯುದ್ಧ ಮಾಡಿ, ಭೂಮಿಯೊಳಗೆ ಬಚ್ಚಿಟ್ಟಿದ್ದಾರೇನೋ ಎನ್ನುವ ಸಂದೇಹದಿಂದ ಭೂಮಿಯನ್ನು ಕೂಡ ಅಗೆದು ಶೋಧಿಸಿದರು.

ಎಲ್ಲಿಯೂ ಅಶ್ವವು ಕಾಣಿಸದಿದ್ದುದರಿಂದ ಹಿಂತಿರುಗಿ ಬಂದು ತಂದೆಗೆ ಹೇಳಲು, ಸಗರನು ಕೋಪಿಸಿಕೊಂಡು, 'ಇಂಥ ಅಪ್ರಯೋಜಕ ಕುಮಾರರಿದ್ದೇನು ಪ್ರಯೋಜನ? ಕುದುರೆ ಇಲ್ಲದೆ ಬರಿಗೈಯಿಂದ ಬಂದ ನಿಮ್ಮ ಮುಖಗಳನ್ನು ನಾನು ನೋಡುವುದಿಲ್ಲ,' ಎಂದು ಗರ್ಜಿಸಿದನು. 'ಪುನಃ ಹೋಗಿ ಹುಡುಕಿ, ಅದು ಸಿಗುವವರೆಗೂ ನನ್ನನ್ನು ನೋಡಬೇಡಿ,' ಎಂದು ಆಜ್ಞಾಪಿಸಿದನು. ತಂದೆಯ ಮಾತಿನಿಂದ ಸಾಗರರು ರೋಷಗೊಂಡು, ತೀವ್ರ ಪರಿಶೋಧನೆ ನಡೆಸುತ್ತಾ ಹೊರಟರು. ಬೆಟ್ಟ, ಗುಡ್ಡ, ಕೆರೆ, ನದಿ, ಗುಹೆ, ಪಟ್ಟಣ, ಅಡವಿ ಅಷ್ಟೇಕೆ, ಅಡಿ ಅಡಿ ಭೂಮಿಯನ್ನೂ ಶೋಧಿಸುತ್ತಾ ಹೊರಟರು. ಹೀಗೆ ಹುಡುಕುತ್ತಿರುವಾಗ, ಒಂದು ಪ್ರದೇಶದಲ್ಲಿ ಧ್ಯಾನ ನಿಷ್ಠನಾದ ಒಬ್ಬ ಮಹಾ ಮುನಿಯನ್ನು ಕಂಡರು. ಅವರ ಸಮೀಪದಲ್ಲೇ ಗರಿಕೆಯನ್ನು ಮೇಯುತ್ತಿದ್ದ ಯಜ್ಞಾಶ್ವವನ್ನು ನೋಡಿದರು.

ಅಶ್ವವನ್ನು ನೋಡಿದೊಡನೆಯೇ ಹಿಡಿಸಲಾರದಷ್ಟು ಆನಂದವೂ ಮುನಿಯ ಮೇಲೆ ಅಷ್ಟೇ ತೀವ್ರವಾದ ಕೋಪವೂ ಏಕಕಾಲದಲ್ಲಿ ಉಂಟಾಗಿ ಅವರನ್ನು ಉನ್ಮತ್ತರನ್ನಾಗಿ ಮಾಡಿತು. ಅತಿ ಕ್ರೋಧದಿಂದ ಬುದ್ಧಿ ಶೂನ್ಯವಾಯಿತು. ಅವರು ಕತ್ತಿಯನ್ನು ಮೇಲೆತ್ತಿ, "ಎಲೈ ದುರ್ಬುದ್ಧೀ! ನೀನು ನಮ್ಮ ಅಶ್ವವನ್ನೇಕೆ ಕದ್ದೆ?" ಎಂದು ಅವನ ಮೇಲೆ ಬೀಳ ಹೋದರು. ಆಗ, ಕಪಿಲ ಮುನಿಯು ಕಣ್ಣುಗಳನ್ನು ತೆರೆದು ನೋಡಿದನು. ಅವನು ಪ್ರಶಾಂತವಾಗಿಯೇ ನೋಡಿದರೂ ಸಾಗರರು ವಿವೇಕ ಶೂನ್ಯರಾಗಿ ಅವನನ್ನು ಮತ್ತಷ್ಟು ಬೈದರು, ಹೊಡೆಯ ಹೋದರು. ಕಪಿಲನು ಈ ಮೂಢರು ಮಾತಿಗೆ ಬಗ್ಗುವವರಲ್ಲ ಎನ್ನುವುದನ್ನು ಗಮನಿಸಿ, ಇವರೊಂದಿಗೆ ಮಾತಿಗಿಳಿಯುವುದು ಒಳ್ಳೆಯದಲ್ಲವೆಂದು, ಶಪಿಸಿ ಅವರನ್ನು ನಿಮಿಷದಲ್ಲಿ ಸುಟ್ಟು ಬೂದಿ ಮಾಡಿದನು.

ಎಷ್ಟು ಕಾಲವಾದರೂ ಸಾಗರರು ತಿರುಗಿ ಬರದಿದ್ದುದನ್ನು ನೋಡಿ ಸಗರನು ಚಿಂತೆಗೊಳಗಾದನು. ಅವನು ಯಜ್ಞವನ್ನು ನಿಲ್ಲಿಸಲಾಗದೆ, ಮುಂದುವರಿಸಲಾಗದೆ ವಿಚಾರ ಮಾಡುತ್ತಿದ್ದುದನ್ನು ನೋಡಿ, ಮೊಮ್ಮಗನಾದ ಅಂಶುಮಂತನು ತಾತನಿಗೆ ನಮಸ್ಕರಿಸಿ, 'ತಾತಾ! ಆಜ್ಞೆ ಇತ್ತರೆ, ಕುದುರೆಯನ್ನೂ ಚಿಕ್ಕಪ್ಪಂದಿರನ್ನೂ ಹುಡುಕಿ ಕರೆದುಕೊಂಡು ಬರುತ್ತೇನೆ,' ಎಂದು ಕೋರಿದನು. ಸಗರನು ಅವನನ್ನು ಆಶೀರ್ವದಿಸಿ ಕಳಿಸಿದನು. ಅಂಶುಮಂತನು ರಾತ್ರಿ ಹಗಲು ಹುಡುಕಿ, ಅಶ್ವವಿದ್ದ ಜಾಗವನ್ನು ಸೇರಿದನು. ಅಲ್ಲೇ ತನ್ನ ಚಿಕ್ಕಪ್ಪಂದಿರು ಭಸ್ಮವಾಗಿ ಬಿದ್ದಿದ್ದ ಗುರುತುಗಳನ್ನು ನೋಡಿದನು. ಚಿಕ್ಕಪ್ಪಂದಿರ ಮರಣಕ್ಕೆ ಕಾರಣವು ಏನಿರಬಹುದೆಂದು ವಿಚಾರ ಮಾಡುತ್ತಾ, ಅವರಿಗೆ ಜಲ ತರ್ಪಣ ಕೊಡಲು ಅತ್ತ ಇತ್ತ ಹೋಗಿ ನೋಡಿದನು. ಎಲ್ಲಿಯೂ ಜಲವು ಕಾಣಿಸಲಿಲ್ಲ. ಚಿಂತೆಯಿಂದ ಇನ್ನೂ ಸ್ವಲ್ಪ ದೂರ ಹೋದನು. ಅಲ್ಲಿ ಒಬ್ಬ ಮುನಿಯು ಎದುರಿಗೆ ಬಂದು, 'ಮಗೂ! ಚಿಂತಿಸಬೇಡ. ಲೋಕ ಹಿತಾರ್ಥವಾಗಿ ಕಪಿಲನು ನಿನ್ನ ಚಿಕ್ಕಪ್ಪಂದಿರನ್ನು ಶಪಿಸಿದ್ದಾನೆ. ಇದಕ್ಕೆ ದುಃಖಿಸುವ ಅಗತ್ಯವಿಲ್ಲ. ಲೋಕದ ನೀರಿನಿಂದ ಇವರಿಗೆ ತರ್ಪಣ ಬಿಡುವುದಕ್ಕಿಂತ, ಗಂಗಾ ದೇವಿಯನ್ನು ಈ ಭೂಮಿಗೆ ತರುವ ಪ್ರಯತ್ನ ಮಾಡು. ಆ ಪವಿತ್ರ ಗಂಗೋದಕವು ನಿನ್ನ ಚಿಕ್ಕಪ್ಪಂದಿರ ಭಸ್ಮಗಳ ಮೇಲೆ ಪ್ರವಹಿಸಿದರೆ ಅವರು ಧನ್ಯರಾಗುವರು. ನೀನು ಮೊದಲು ಕುದುರೆಯನ್ನು ಹೊಡೆದುಕೊಂಡು ಹೋಗು. ನಿನ್ನ ತಾತನು ಸಂಕಲ್ಪಿಸಿರುವ ಯಜ್ಞವನ್ನು ಪೂರ್ತಿಮಾಡಿ, ನಂತರ ನಿನ್ನ ಚಿಕ್ಕಪ್ಪಂದಿರ ಸದ್ಗತಿಗೆ ತಕ್ಕ ಪ್ರಯತ್ನವನ್ನು ಮಾಡು,' ಎಂದು ಹಿತವಚನ ಹೇಳಿದನು. ಅಂಶುಮಂತನು ಮುನಿಗೆ ನಮಸ್ಕರಿಸಿ, ಅವನ ಆಜ್ಞಾನುಸಾರವಾಗಿ ಅಶ್ವವನ್ನು ಹೊಡೆದುಕೊಂಡು ಹೋಗಿ ಯಜ್ಞಶಾಲೆಯನ್ನು ಸೇರಿದನು.

ರಾತ್ರಿ ಹಗಲು ಕಣ್ಣು ಮುಚ್ಚದೆ, ಅಶ್ವ ಬರುವುದೇನೋ ಎಂದು ನೋಡುತ್ತಿದ್ದ ಋತ್ವಿಕ್ಕುಗಳಿಗೆ ಪರಮಾನಂದವಾಯಿತು. ಅಂಶುಮಂತನು, ಆಗಲೇ ಸಾಗರರ ವಿಷಯವನ್ನು ತಿಳಿಸುವುದು ಒಳ್ಳೆಯದಲ್ಲವೆಂದು ಭಾವಿಸಿ, ಪೂರ್ಣಾಹುತಿಯನ್ನು ಜಯಪ್ರದವಾಗಿ ನಡೆಸಿ, ಸ್ನಾನಾದಿಗಳನ್ನು ಮಾಡಿ, ತೀರ್ಥಪ್ರಸಾದ ವಿನಿಯೋಗದ ತರುವಾಯ ಸಗರನಿಗೆ ಸಾಗರರ ವೃತ್ತಾಂತವನ್ನು ವಿಶದವಾಗಿ ತಿಳಿಸಿದನು. ಗಂಗೆಯನ್ನು ಭೂಮಿಗೆ ತರುವ ವಿಷಯವನ್ನು ಹೇಳಿದನು. ಅದನ್ನು ಕೇಳಿ ಸಗರನು ಆನಂದಿಸಿದನು. ನಂತರ, ಗಂಗೆಯನ್ನು ಭೂಲೋಕಕ್ಕೆ ತರುವ ಸರ್ವ ಪ್ರಯತ್ನವನ್ನೂ ಮಾಡಿದನು. ಆದರೂ ಕೃತಕೃತ್ಯನಾಗಲಿಲ್ಲ. ತನ್ನ ಕುಮಾರರ ಚಿಂತೆಯಿಂದ, ಅವರನ್ನು ಪುನೀತರನ್ನಾಗಿ ಮಾಡದೆ ಹೋದೆನಲ್ಲಾ ಎನ್ನುವ ದುಃಖದಿಂದ ಕೊರಗಿ, ಕೃಶನಾಗಿ ಮೃತನಾದನು.

ರಾಮಾ! ಸಗರನು ಕಾಲಧರ್ಮವಶನಾದ ಮೇಲೆ, ಪ್ರಜೆಗಳ ಅನುಮತಿಯಿಂದ ಮಂತ್ರಿಗಳು ಅಂಶುಮಂತನಿಗೆ ಪಟ್ಟ ಕಟ್ಟಿದರು. ಧಾರ್ಮಿಕ, ಅಧ್ಯಾತ್ಮಿಕ ಶಕ್ತಿ ಸಂಪನ್ನನಾದ ಅಂಶುಮಂತನು, ತನ್ನ ಪಾಲನೆಯಲ್ಲಿ ಯಾವ ಲೋಪವೂ ಬರದಂತೆ, ಪ್ರಜೆಗಳನ್ನು ಕಣ್ಣು ರೆಪ್ಪೆಯಂತೆ ಕಾಪಾಡುತ್ತಿದ್ದನು. ಹೀಗೆ ಕೆಲವು ಸಂವತ್ಸರಗಳು ಪರಿಪಾಲನೆ ನಡೆಸಿ, ವೃದ್ಧಾಪ್ಯ ಪ್ರಾರಂಭವಾದೊಡನೆಯೇ ತನ್ನ ಕುಮಾರನಾದ ದಿಲೀಪನಿಗೆ ರಾಜ್ಯಭಾರವನ್ನು ವಹಿಸಿ, ಚಿಕ್ಕಪ್ಪಂದಿರನ್ನು ಪುನೀತರನ್ನಾಗಿ ಮಾಡುವ ಸದುದ್ದೇಶದಿಂದ ಗಂಗೆಯನ್ನು ಭೂಮಿಗಿಳಿಸುವ ಸಲುವಾಗಿ ತಪಸ್ಸು ಮಾಡಲು ಹಿಮಾಲಯಕ್ಕೆ ಹೊರಟನು. ಆದರೆ, ಕೃತಕೃತ್ಯನಾಗದೆಯೇ ಉದ್ದೇಶವನ್ನು ನೆರವೇರಿಸಿಕೊಳ್ಳದೆಯೇ ಕಾಯವನ್ನು ಬಿಟ್ಟನು. ತಂದೆಯ ಆಶಯವನ್ನು ತಿಳಿದ ದಿಲೀಪನು ಅದನ್ನು ನೇರವೇರಿಸುವ ಸಲುವಾಗಿ. ಮುತ್ತಾತಂದಿರನ್ನು ಉದ್ಧರಿಸುವ ಅನೇಕ ಉಪಾಯಗಳನ್ನು ಮಾಡತೊಡಗಿದನು. ಅನೇಕ ಯಜ್ಞಯಾಗಾದಿ ಸತ್ಕಾರ್ಯಗಳನ್ನು ಮಾಡಿದನು.

ತಂದೆಯ ಆಶಯವನ್ನು ನೆರವೇರಿಸಲಾರದವನಾದೆ ಎನ್ನುವ ಚಿಂತೆಯಿಂದ ಕಡೆಗೆ ರೋಗಿಯಾದನು. ಶರೀರಬಲ, ಮನೋಬಲಗಳು ಕುಗ್ಗಿದೊಡನೆಯೇ ತನ್ನ ಕುಮಾರನಾದ ಭಗೀರಥನಿಗೆ ರಾಜ್ಯಾಭಿಷೇಕ ಮಾಡಿದನು. ಗಂಗೆಯನ್ನು ಭೂಮಿಗೆ ತರುವುದೇ ತನ್ನ ಪ್ರಧಾನ ಆಶಯವೆಂದು ಸ್ಪಷ್ಟವಾಗಿ ತಿಳಿಸಿ, ಅದನ್ನು ನೆರವೇರಿಸುವಂತೆ ಹೇಳಿ ಪ್ರಾಣವನ್ನು ಬಿಟ್ಟನು.

ಭಗೀರಥನು ತೇಜೋವಂತನು. ಅವನು ತಂದೆಯ ಆಶಯವನ್ನು ಪೂರ್ತಿ ಮಾಡುತ್ತೇನೆಂದು ವಾಗ್ದಾನ ಮಾಡಿದನು. ರಾಜ್ಯವನ್ನು ಅತಿ ಜಾಗ್ರತೆಯಿಂದ

ಪರಿಪಾಲಿಸುತ್ತಿದ್ದನು. ಎಷ್ಟು ಕಾಲವಾದರೂ ಸಂತಾನ ಇಲ್ಲದ ಚಿಂತೆ ಒಂದು ಕಡೆ, ಗಂಗೆಯನ್ನು ಭೂಮಿಗೆ ಕರೆತರುತ್ತೇನೆಂದು ತಂದೆಗಿತ್ತ ವಾಗ್ದಾನ ಇನ್ನೊಂದು ಕಡೆ ಅವನನ್ನು ಬಾಧಿಸುತ್ತಿದ್ದುವು. ಸರಿಯಾದ ಸಮಯವನ್ನು ನೋಡಿ, ರಾಜ್ಯಪಾಲನೆಯನ್ನು ಮಂತ್ರಿಗಳಿಗೆ ವಹಿಸಿ, ಗೋಕರ್ಣ ಕ್ಷೇತ್ರಕ್ಕೆ ಹೋಗಿ, ತಪೋನಿರತನಾದನು. ತಿಂಗಳಿಗೊಂದೇಸಾರಿ ಊಟ ಮಾಡುತ್ತಾ ಜಿತೇಂದ್ರಿಯನಾಗಿ ಘೋರ ತಪಸ್ಸನ್ನಾಚರಿಸಿದನು. ತಪಸ್ಸಿಗೆ ಮೆಚ್ಚಿ ಭಗವಂತನು ಸಂತುಷ್ಟನಾಗಿ, 'ಅಯ್ಯಾ! ಭಗೀರಥಾ! ನಿನಗೇನು ಬೇಕೊ ಕೇಳಿಕೋ,' ಎಂದನು.

ಭಗೀರಥನು ಕಣ್ಣು ತೆರೆದು, ಕೋಟಿ ಸೂರ್ಯ ಕಾಂತಿವಂತನನ್ನು ಕಂಡು, ನಮಸ್ಕರಿಸಿ, 'ಸ್ವಾಮೀ! ನಮ್ಮ ಮುತ್ತಾತಂದಿರನ್ನು ಪುನೀತರನ್ನಾಗಿಸಲು ಗಂಗೆಯನ್ನು ಭೂಮಿಯ ಮೇಲೆ ಪ್ರವಹಿಸುವಂತೆ ಮಾಡಿ. ಇಕ್ಷ್ವಾಕು ವಂಶವು ನನ್ನಿಂದಾಗಿ ಕೃಶವಾಗಿ ಹೋಗದಂತೆ ವಂಶಾಭಿವೃದ್ಧಿಯನ್ನು ಅನುಗ್ರಹಿಸಿ,' ಎಂದು ಪಾದಗಳ ಮೇಲೆ ಬಿದ್ದು ಪ್ರಾರ್ಥಿಸಿದನು. ಆಗ, ಹರಿಯು, 'ಅಪ್ಪಾ! ಮೊದಲನೆ ಕೋರಿಕೆಯು ಮಹಾ ದುರ್ಲಭವಾದುದ್ದು. ಆದರೂ ನೆರವೇರಿಸುತ್ತೇನೆ. ನಿನ್ನ ಎರಡನೆ ಕೋರಿಕೆಯಂತೆ ನಿನಗೆ ಸುಪುತ್ರನು ಹುಟ್ಟಿ ವಂಶಾಭಿವೃದ್ಧಿ ಆಗುವುದು, ಏಳು!' ಎಂದು ಆಶೀರ್ವದಿಸಿ, 'ಭಗೀರಥಾ! ಗಂಗೆಯು ಮಹಾ ತೀವ್ರ ಗಾಮಿನಿ. ಅವಳು ಭೂಮಿಯ ಮೇಲೆ ಬಿದ್ದರೆ ಭೂಮಿ ಸಹಿಸಲಾರದು. ಭೂಮಿಗೆ ಸಹಿಸುವ ಶಕ್ತಿ ಇಲ್ಲದ ಕಾರಣ ನೀನು ಭೂಪತಿಯಾದ್ದರಿಂದ ಯೋಚಿಸಬೇಕಾಗಿದೆ. ಒಂದು ಸಾರಿ ಭೂಮಿಯ ಮೇಲೆ ಗಂಗೆಯು ಧುಮುಕಿದರೆ ಮಹಾಪ್ರಮಾದವೇ ಸಂಭವಿಸುವುದು. ಆದ್ದರಿಂದ, ಅವಳು ಮೊದಲು ಶಿವನ ಶಿರವನ್ನು ಪ್ರವೇಶಿಸಿ, ಅಲ್ಲಿಂದ ನಿಧಾನವಾಗಿ ಭೂಮಿಗೆ ಹರಿದರೆ ಭೂಲೋಕ ವಾಸಿಗಳಿಗೆ ಕ್ಷೇಮವುಂಟಾಗುವುದು,' ಎಂದು ಹೇಳಿ ಹೊರಟು ಹೋದನು. ಅಂದಿನಿಂದ ಭಗೀರಥನು ಹರನನ್ನು ಕುರಿತು ತಪಸ್ಸು ಮಾಡುತ್ತಾ ಹರನು ಪ್ರಸನ್ನನಾಗುವಂತೆ ಮಾಡಿದನು.

ಹರನು ತನ್ನ ಶಿರದಿಂದ ಗಂಗೆಯು ಏಳು ಕವಲುಗಳಾಗಿ ಹರಿಯುವಂತೆ ಮಾಡಿದನು. ಹ್ರಾದಿನೀ ನಳಿನೀ ಪಾವನೀ ಎಂಬ ಮೂರು ಕವಲುಗಳು ಪೂರ್ವಕ್ಕೂ ಸುಚಕ್ಷೂ ಸೀತಾ ಸಿಂಧೂ ಎನ್ನುವ ಮೂರು ಕವಲುಗಳು ಪಶ್ಚಿಮಕ್ಕೂ ಹರಿದವು. ಏಳನೆಯದು ಭಗೀರಥ ರಾಜರ್ಷಿಯೊಂದಿಗೆ ಪ್ರವಹಿಸಿತು. ಭಗೀರಥನು ಹೇಗೆ ಹೋದರೆ ಹಾಗೆ ಪ್ರವಹಿಸುತ್ತಾ ಕಡೆಗೆ ಅವನ ಮುತ್ತಾತಂದಿರ ಭಸ್ಮದ ಮೇಲೆ ಪ್ರವಹಿಸಿ, ಅವರೊಂದಿಗೆ ಲೋಕದ ಜನರನ್ನೂ ಕೂಡ ಪುನೀತರನ್ನಾಗಿಸಿತು. ಪಾವನ ಗಂಗೋದಕದಿಂದ ಅವರ ಸರ್ವ ಪಾಪಗಳೂ ಪರಿಹಾರವಾಯಿತು.

ಭಗೀರಥನು ಗಂಗೆಯನ್ನು ಭೂಮಿಗೆ ತಂದನಾದ್ದರಿಂದ, ಅವನನ್ನು ಗಂಗೆಯ ತಂದೆಯೆಂದು ಕರೆದರು. ಗಂಗೆಯನ್ನು ಭಾಗೀರಥಿಯೆಂದು ಕರೆಯಲಾರಂಭಿಸಿದರು. ಭಗೀರಥನು ಆ ಗಂಗಾ ಜಲದಿಂದ ಸಗರ ಪುತ್ರರಿಗೆ ತರ್ಪಣ ಬಿಟ್ಟು ಅಯೋಧ್ಯೆಯನ್ನು ಸೇರಿ, ತನ್ನ ತಂದೆ, ತಾತ, ಮುತ್ತಾತಂದಿರ ಅಭೀಷ್ಟವನ್ನು ನೆರವೇರಿಸಿದನೆನ್ನುವ ಆನಂದದಿಂದ ರಾಜ್ಯವಾಳುತ್ತಾ, ಪ್ರಜೆಗಳ ಪ್ರೀತಿಗಳಿಸುತ್ತಾ ಕಾಲ ಕಳೆದು ಕಡೆಗೆ ಕಾಯವನ್ನು ಬಿಟ್ಟನು," ಎಂದು ರಾಮವಂಶೀಯರನ್ನು ಕುರಿತು ಇಷ್ಟು ಘನವಾಗಿ ಹೇಳಿದ್ದನ್ನು ರಾಮಲಕ್ಷ್ಮಣರು ಬಹು ಶ್ರದ್ಧೆಯಿಂದ ಕೇಳುತ್ತಿದ್ದರು. ಅರ್ಧರಾತ್ರಿಯಾಯಿತು. ಎಲ್ಲರೂ ಮಲಗಿಕೊಳ್ಳುವಂತೆ ವಿಶ್ವಾಮಿತ್ರರು ಆಜ್ಞಾಪಿಸಿದರು. ಎಲ್ಲರೂ ಗುರುವಿಗೆ ನಮಸ್ಕರಿಸಿ ಮರಳು ದಿಣ್ಣೆಗಳ ಮೇಲೆ ಹೋಗಿ ಮಲಗಿದರು.

ರಾಮಲಕ್ಷ್ಮಣರು ಗುರುವಾಜ್ಞೆಯನ್ನು ಮೀರಲಾರದೆ ಹೋಗಿ ಮಲಗಿದರೇ ವಿನಾ ಅವರಿಗೆ ನಿದ್ರೆ ಹತ್ತಲಿಲ್ಲ. ಗಂಗೆಯನ್ನು ಕುರಿತ ಅದ್ಭುತ ಚರಿತ್ರೆಯನ್ನು ಸ್ಮರಿಸುತ್ತಿದ್ದಂತೆ ಬೆಳಗಾಯಿತು. ಎಲ್ಲರೂ ಎದ್ದು ಸ್ನಾನ ಸಂಧ್ಯಾದಿಗಳನ್ನು ಮಾಡಿ ಪ್ರಯಾಣಕ್ಕೆ ಸಿದ್ಧರಾದರು. ದೋಣಿಯು ಸಿದ್ಧವಾಗಿದೆಯೆಂದು ಋಷಿ ಕುಮಾರರು ಹೇಳುತ್ತಲೇ ಎಲ್ಲರೂ ಹೋಗಿ ದೋಣಿಯಲ್ಲಿ ಕುಳಿತು ಆ ಪವಿತ್ರ ನದಿಯನ್ನು ದಾಟಿ ಉತ್ತರ ದಿಕ್ಕನ್ನು ಸೇರಿ, ಸುಂದರವಾದ ವನ ಸೌಂದರ್ಯವನ್ನು ನೋಡುತ್ತಾ ಪ್ರಯಾಣ ಮಾಡಿದರು. ಸ್ವಲ್ಪ ದೂರ ನಡೆದ ನಂತರ ಸುಂದರ ಸೌಧಗಳಿಂದ ಕೂಡಿದ ಒಂದು ವಿಶಾಲವಾದ ಪಟ್ಟಣವು ಕಾಣಿಸಿತು. ರಾಮನು, "ಸ್ವಾಮೀ! ಈ ಸುಂದರವಾದ ವನದಲ್ಲಿ ವಿಶಾಲವಾದ ಪಟ್ಟಣವೊಂದು ಕಾಣಿಸುತ್ತಿದೆಯಲ್ಲಾ, ಅದು ಯಾವ ರಾಜ್ಯವಾಗಿರಬಹುದು?" ಎಂದು ಕೇಳಿದನು. ವಿಶ್ವಾಮಿತ್ರರು, "ರಾಮಾ! ಅದು ನಮಗೆ ಅತಿ ಸಮೀಪದಲ್ಲಿರುವಂತೆ ಕಾಣಿಸುತ್ತಿದೆ. ಆದರೆ ಅಲ್ಲಿ ಹೋಗಿ ಸೇರಲು ತುಂಬಾ ಕಾಲ ಬೇಕು. ಸುಮಾರು ಸಾಯಂಕಾಲವಾಗಬಹುದು. ಸಮೀಪಕ್ಕೆ ಹೋದ ಮೇಲೆ ಆ ಪಟ್ಟಣದ ಪೂರ್ವ ವೃತ್ತಾಂತವನ್ನು ತಿಳಿಸುತ್ತೇನೆ. ಮೊದಲು ದಾರಿ ಸಾಗಲಿ," ಎಂದರು. ಹಸನ್ಮುಖರಾಗಿ ತಿಳಿಸಿದ ಮಾತನ್ನು ಅತ್ಯಂತ ಶ್ರದ್ಧೆಯಿಂದ ಕೇಳಿ ಮರುಮಾತನಾಡದೆ ನಡಿಗೆಯನ್ನು ಸಾಗಿಸಿದರು.

ತಗ್ಗಿನಲ್ಲಿ ನಡೆದು ಹೋಗುವಾಗ ಆ ಪಟ್ಟಣವು ಕಾಣಿಸದೆ ಎತ್ತರದ ಸ್ಥಳಕ್ಕೆ ಬಂದೊಡನೆ ಸಮೀಪದಲ್ಲಿದ್ದಂತೆ ಕಾಣಿಸುತ್ತಿತ್ತು. ನಡೆ ನಡೆದು, ವಿಶ್ವಾಮಿತ್ರರು ಹೇಳಿದ ಹಾಗೆ ಸಾಯಂಕಾಲವಾದರೂ ಆ ಪಟ್ಟಣವನ್ನು ಪ್ರವೇಶಿಸಲಾಗಲಿಲ್ಲ. ಸಂಧ್ಯಾಕಾಲಕ್ಕೆ ಆ ಪಟ್ಟಣದ ಸಮೀಪವನ್ನು ಸೇರಿ, ಸ್ನಾನ ಸಂಧ್ಯಾದಿಗಳನ್ನು ಆಚರಿಸಿ, ವಿಶಾಲವಾದ ಒಂದು ಪ್ರದೇಶದಲ್ಲಿ ಗುಂಪಾಗಿ ಕುಳಿತರು. ಆಗ ರಾಮನು,

"ಸ್ವಾಮೀ! ಆ ಪಟ್ಟಣದ ಸಮೀಪಕ್ಕೆ ಬಂದು ಸೇರಿದ್ದೇವಲ್ಲವೆ, ಈಗ ಅದರ ಪೂರ್ವ ವೃತ್ತಾಂತವನ್ನು ಹೇಳುವಿರಾ?" ಎಂದು ಪ್ರಾರ್ಥಿಸಿದನು. ವಿಶ್ವಾಮಿತ್ರರು, "ಮಗೂ! ಅದನ್ನೇ ನಾನು ಈಗ ಹೇಳುವವನಿದ್ದೆ. ಎಲ್ಲರ ಮನಸ್ಸನ್ನೂ ನೀನು ಅರಿತವನೆನ್ನುವುದು ನನಗೆ ತಿಳಿದಿದ್ದರೂ ಮಧ್ಯೆ ಮಧ್ಯೆ ಮಾಯೆಯು ವಿಕಾರ ಮಾರ್ಗದಲ್ಲಿ ನನ್ನ ಮನಸ್ಸನ್ನು ತಳ್ಳುತ್ತದೆ. ಮನಸ್ಸನ್ನು ಸ್ವಾಧೀನದಲ್ಲಿಟ್ಟುಕೊಳ್ಳುವುದು ಎಲ್ಲರಿಗೂ ಸಾಧ್ಯವಿಲ್ಲ. ನನಗೇ ಮನಸ್ಸನ್ನು ಸ್ವಾಧೀನದಲ್ಲಿಟ್ಟುಕೊಳ್ಳುವುದು ಅಸಾಧ್ಯ ವಾಗಿದೆ ಎಂದ ಮೇಲೆ ಸಾಮಾನ್ಯರ ವಿಷಯ ಹೇಳಲೇಬೇಕಾಗಿಲ್ಲ. ಪಟ್ಟಣದ ವಿಷಯವನ್ನು ನೀನು ಮರೆತೆಯೇನೋ ಎಂದುಕೊಳ್ಳುತ್ತಿರುವಷ್ಟರಲ್ಲಿ ನೀನು ಆ ವಿಷಯವನ್ನೇ ಪ್ರಸ್ತಾಪಿಸಿದೆ. ನೀನು ಸರ್ವಜ್ಞನೆನ್ನುವುದಕ್ಕೆ ಬೇರೆ ಪ್ರಮಾಣವೇಕೆ?

ರಾಮಾ! ಪೂರ್ವದಲ್ಲಿ ಕಶ್ಯಪನಿಗೆ ಅದಿತಿ, ದಿತಿ ಎನ್ನುವ ಇಬ್ಬರು ಸತಿಯರಿದ್ದರು. ಅವರಲ್ಲಿ, ದಿತಿಯ ಪುತ್ರರು ಮಹಾ ಬಲಶಾಲಿಗಳು. ಅದಿತಿಯ ಪುತ್ರರು ಧಾರ್ಮಿಕರು. ದಿನದಿನಕ್ಕೆ ಪ್ರವರ್ಧಮಾನರಾಗಿ ಬೆಳೆಯುತ್ತಿದ್ದ ಅವರನ್ನು ನೋಡಿ ತಂದೆ ತಾಯಿಗಳು ಅಮಿತಾನಂದ ಹೊಂದುತ್ತಿದ್ದರು. ಒಂದು ದಿನ ಅದಿತಿಯ ಪುತ್ರರೂ ದಿತಿಯ ಪುತ್ರರೂ ಒಟ್ಟು ಸೇರಿ ವಾರ್ಧಕ್ಯ, ಮೃತ್ಯು, ಅನಾರೋಗ್ಯಗಳು ಇಲ್ಲದಿರುವಂತಾಗಲು ಉಪಾಯವೇನು ಎಂದು ತಮ್ಮೊಳಗೇ ತರ್ಕಿಸುತ್ತಿದ್ದರು. ಕಡೆಗೆ, ಹಾಲುಗಡಲನ್ನು ಕಡೆದರೆ ಅದರಲ್ಲಿ ಅಮೃತ ಹುಟ್ಟುವುದೆಂದೂ ಆ ಅಮೃತವನ್ನು ಕುಡಿದರೆ ಜರಾಮರಣಗಳು ಇರುವುದಿಲ್ಲವೆಂದೂ ನಿಶ್ಚಯಿಸಿದರು. ಅವರು ಮಂದರ ಪರ್ವತವನ್ನು ಕಡಗೋಲಾಗಿಯೂ ವಾಸುಕಿ ಎನ್ನುವ ಸರ್ಪ ವನ್ನು ಹಗ್ಗವನ್ನಾಗಿಯೂ ಮಾಡಿಕೊಂಡು ಕ್ಷೀರ ಸಮುದ್ರವನ್ನು ಕಡೆಯಲಾರಂಭಿಸಿದರು. ಬಹಳ ಕಾಲ ಕಡೆದ ಮೇಲೆ, ವಾಸುಕಿಯು ತನ್ನ ಬಾಯಿಂದ ವಿಷವನ್ನು ಕಾರಲು ಮೊದಲು ಮಾಡಿದನು; ಬಾಧೆಯನ್ನು ಸಹಿಸಿಕೊಳ್ಳಲಾರದೆ ಮಹಾಕ್ರೋಧ ದಿಂದ ಪರ್ವತದಲ್ಲಿರುವ ಕಲ್ಲುಗಳನ್ನು ಕಚ್ಚತೊಡಗಿದನು. ವಾಸುಕಿಯು ಕಾರುತ್ತಿದ್ದ ವಿಷವು ಬೆಂಕಿಯಜ್ವಾಲೆಯ ಹಾಗೆ ಕಾಣಿಸುತ್ತಿತ್ತು. ದಿತಿ ಪುತ್ರರು ಈ ಜ್ವಾಲೆಯಲ್ಲಿ ಬೆಂದು ಹೋಗುವೆವೇನೋ ಎನ್ನುವ ಭಯದಿಂದ ದೈವವನ್ನು ಪ್ರಾರ್ಥಿಸಿದರು. ವಿಷ್ಣುವು ಪ್ರತ್ಯಕ್ಷವಾಗಲು ದಿತಿ ಪುತ್ರರು, 'ಸ್ವಾಮೀ! ಈ ವಿಷಜ್ವಾಲೆಯನ್ನು ಸಹಿಸ ಲಾರೆವು, ರಕ್ಷಿಸು,' ಎಂದು ಪ್ರಾರ್ಥಿಸಿದರು. ವಿಷ್ಣುವು ಹರನಾಗಿ ರೂಪಾಂತರ ಹೊಂದಿ, 'ಮಕ್ಕಳೇ! ನಾನು ದೇವತೆಗಳ ಅಗ್ರಜನಾದುದರಿಂದ ಹಾಲ್ಗಡಲಿನಲ್ಲಿ ಮೊಟ್ಟಮೊದಲು ಹುಟ್ಟಿದುದನ್ನು ಅಗ್ರ ನೈವೇದ್ಯವೆಂದು ಭಾವಿಸಿ ಸ್ವೀಕರಿಸುತ್ತೇನೆ,' ಎಂದು ಹೇಳಿ, ತಡಮಾಡದೆ ಆ ಹಾಲಾಹಲವನ್ನು ಕುಡಿದನು.

ನಂತರ, ದಿತಿ ಅದಿತಿ ಪುತ್ರರು ನಿರ್ಭಯವಾಗಿ ಮಂದರ ಪರ್ವತವನ್ನು ಕಡೆಯಲಾರಂಭಿಸಿದರು. ಆಗ ಭಾರವಾದ ಮಂದರ ಪರ್ವತವು ಸಮುದ್ರದಲ್ಲಿ ಮುಳುಗಲಾರಂಭಿಸಿತು. ಅದನ್ನು ಗಮನಿಸಿ ಅವರು ತಿರುಗಿ ದೈವವನ್ನು ಪುನಃ ಪ್ರಾರ್ಥಿಸಿದರು. ಪುನಃ ವಿಷ್ಣು ಮೂರ್ತಿಯು ಸಾಕ್ಷಾತ್ಕರಿಸಿ, 'ಮಕ್ಕಳೇ! ಭಯ ಪಡದಿರಿ,' ಎಂದು ಅಭಯವಿತ್ತು, ಆಮೆಯ ರೂಪ ಧರಿಸಿ ಕ್ಷೀರ ಸಮುದ್ರದಲ್ಲಿ ಮುಳುಗಿ ಮಂದರಗಿರಿಯ ಕೆಳಭಾಗವನ್ನು ಸೇರಿ, ತನ್ನ ಮೈಯ್ಯ ಚಿಪ್ಪಿನ ಮೇಲೆ ಆ ಪರ್ವತವನ್ನು ಹೊತ್ತು ಅದು ಮುಳುಗದಂತೆ ಆಸರೆಯಾಗಿ ನಿಂತನು. ಕಶ್ಯಪ ಪುತ್ರರು ಸಂತೋಷಿಸಿ ವಿಷ್ಣುವನ್ನು ಅನೇಕ ವಿಧವಾಗಿ ಸ್ತುತಿಸಿದರು. ಆಮೇಲೆ, ಹಾಲ್ಗಡಲಿನಲ್ಲಿ ದಂಡ ಕಮಂಡಲ ಧಾರಿಯಾಗಿ ಧನ್ವಂತರಿಯು ಹುಟ್ಟಿದನು. ದಿತಿ ಅದಿತಿ ಪುತ್ರರು ಆಶ್ಚರ್ಯದಿಂದ ನೋಡುತ್ತಿರುವಂತೆಯೇ ಒಂದು ವಿಧವಾದ ರಸವು ಉದ್ಭವಿಸಿತು. ಕ್ರಮಕ್ರಮವಾಗಿ ಆ ರಸವು ಗೋಳಾಕಾರವನ್ನು ಧರಿಸಿ ಕ್ಷಣದಲ್ಲಿ ಒಡೆಯಿತು. ಅದರಿಂದ ಮಹಾವರ್ಚಸ್ವಿಗಳು ಅನೇಕ ಮಂದಿ ಹೊರ ಬಂದರು. ಹಾಗೆ ಬಂದವರೆಲ್ಲರೂ ಕನ್ಯೆಯರೇ. ರಸದಿಂದ ಹುಟ್ಟಿದವರಾದ್ದರಿಂದ ಅಪ್ಸರೆಯರು ಎಂದು ಕರೆಯಲ್ಪಟ್ಟರು. ತಮ್ಮನ್ನು ವರಿಸುವಂತೆ ಅದಿತಿ ಪುತ್ರರನ್ನು ಬಹು ವಿಧವಾಗಿ ಪ್ರಾರ್ಥಿಸಿದರು, ಪ್ರಯತ್ನಿಸಿದರು. ಆದರೆ ಅವರು ವರಿಸಲು ಒಪ್ಪಲಿಲ್ಲವಾದ್ದರಿಂದ ಅಪ್ಸರೆಯರು ಸ್ವೇಚ್ಛಾ ವಿಹಾರಿಗಳಾದರು.

ನಂತರ ಹಾಲ್ಗಡಲಿನಿಂದ ವರುಣನ ಮಗಳಾದ ವಾರುಣಿಯು ಸುರೆಯನ್ನು ತೆಗೆದುಕೊಂಡು ಹೊರಗೆ ಬಂದಳು. ದಿತಿ ಪುತ್ರರು ಆ ಸುರೆಯನ್ನು ಕುಡಿಯಲು ಒಪ್ಪಲಿಲ್ಲ. ಅದಿತಿ ಪುತ್ರರು ಕುಡಿದರು. ಆ ಸುರೆಯನ್ನು ಕುಡಿದವರು ಸುರರಾದರು. ಅದನ್ನು ಕುಡಿಯದವರು ಅಸುರರಾದರು. ಆ ಹಾಲ್ಗಡಲಿನಿಂದ ಅಮೃತವು ಉದ್ಭವಿಸಿತು. ಅಮೃತವನ್ನು ಕುಡಿಯಲು ದಿತಿ ಅದಿತಿ ಪುತ್ರರು ತಮ್ಮ ತಮ್ಮಲ್ಲೇ ಹೊಡೆದಾಡಿದರು. ಅದಿತಿ ಪುತ್ರರು ದಿತಿ ಪುತ್ರರನೇಕರನ್ನು ಕೊಂದರು. ಕುಲಕ್ಷಯವಾಗುವವರೆಗೂ ಹೋರಾಟ ಸಾಗಿತು. ಆ ಯುದ್ಧದಿಂದ ಲೋಕಗಳೆಲ್ಲಾ ತತ್ತರಿಸಿದುವು. ಎಲ್ಲೆಲ್ಲೂ ಭಯಾಂದೋಳನ ವ್ಯಾಪಿಸಿತು.

ಆಗ, ವಿಷ್ಣುವು ಸುಂದರ ಸ್ತ್ರೀ ವೇಷವನ್ನು ಧರಿಸಿ, ಎಲ್ಲರನ್ನೂ ಮೋಹದಲ್ಲಿ ಮುಳುಗಿಸಿ ಅಮೃತವನ್ನು ಮಾಯ ಮಾಡಿದನು. ದಿತಿ ಪುತ್ರರೆಲ್ಲರೂ ಹತರಾದರು. ಈ ದುಃಖ ವಾರ್ತೆಯನ್ನು ಕೇಳಿದೊಡನೆ ಮಹಾ ಪ್ರಳಯ ಸಂಭವಿಸಿತೇನೋ ಎನ್ನುವಂತೆ ದಿತಿಯು ಘೋರವಾಗಿ ಅಳತೊಡಗಿದಳು. ಕಶ್ಯಪನು ಎಷ್ಟು ಸಮಾಧಾನಪಡಿಸಿದರೂ ಅವಳ ದುಃಖ ಶಮನವಾಗಲಿಲ್ಲ. ಕೊನೆಗೆ, ಹೇಗೋ ಕಶ್ಯಪನು ಒಳ್ಳೆಯ ಮಾತುಗಳಿಂದ ಅವಳನ್ನು ಸ್ವಲ್ಪ ಶಾಂತಪಡಿಸಿದನು. ದಿತಿಯು ದುಃಖ

ವನ್ನು ಒಳಗೊಳಗೇ ನುಂಗಿಕೊಂಡು, ಪತಿಯ ಬಳಿ ಸೇರಿ, 'ನಾಥಾ! ಇದು ನ್ಯಾಯವೇ? ಇಬ್ಬರೂ ನಿನ್ನ ಮಕ್ಕಳೇ ಅಲ್ಲವೇ? ನನ್ನನ್ನು ಪುತ್ರರಿಲ್ಲದವಳಾಗಿ ಮಾಡಿದಿರಿ. ಇದೇ ನನ್ನ ಗತಿಯೇನು? ಒಬ್ಬ ಪುತ್ರನೂ ಜೀವದಿಂದುಳಿದು ಬರಲಿಲ್ಲವಲ್ಲಾ! ಅಲ್ಪಾಯುಗಳಾದ ಅನೇಕ ಮಕ್ಕಳಿಗಿಂತ ಚಿರಂಜೀವಿಯಾದ ಒಬ್ಬ ಮಗನೇ ಸಾಕಲ್ಲವೆ?' ಎಂದು ಗೋಳೋ ಎಂದು ಅತ್ತಳು. ಕಶ್ಯಪನು ಅವಳನ್ನು ಸಮಾದಾನಪಡಿಸಿ, 'ಸತೀ! ದೀರ್ಘಾಯುಷಿಯಾದ ಒಬ್ಬ ಪುತ್ರನು ಬೇಕೆಂದು ತಪಸ್ಸು ಮಾಡು. ನಿಷ್ಪ್ರಯೋಜಕವಾದ ದುಃಖವನ್ನು ಮರೆತುಬಿಡು, ಹೋಗು,' ಎಂದು ಆದೇಶಿಸಿದನು. ಒಡನೆಯೇ ಅವಳು ಪತಿಗೆ ನಮಸ್ಕರಿಸಿ, ಇಂದ್ರನನ್ನು ಜಯಿಸುವಂಥ ಪುತ್ರನ ಪ್ರಾಪ್ತಿಗಾಗಿ ತಪಸ್ಸಾಚರಿಸಲು ಸಿದ್ಧವಾಗಿ ಹೊರಟು ನಿಂತಳು.

ಕಶ್ಯಪನು, 'ದಿತೀ, ತಪವೆಂದರೆ ಸಾಮಾನ್ಯವಲ್ಲ. ಕಡೆಯವರೆಗೂ ಶುಚಿಯಾಗಿದ್ದು ವ್ರತನಿಷ್ಠೆಯನ್ನು ಬಿಡದೆ ಮಾಡಿದರೆ, ತಪಸ್ಸು ಫಲಿಸಲೆಂದು ದೈವವು ಅನುಗ್ರಹಿಸು ವುದು. ಶುಚಿ, ದೀಕ್ಷೆ ಇವು ಅತ್ಯವಶ್ಯಕ. ಇವುಗಳಲ್ಲಿ ಯಾವ ಲೋಪವೂ ಆಗದಂತೆ ನೋಡಿಕೊ, ಹೋಗಿ ಬಾ,' ಎಂದು ಆಜ್ಞಾಪಿಸಿ ಕಳಿಸಿದನು. ದಿತಿಯು ಕುಶಪ್ಲವ ಎನ್ನುವ ಪ್ರದೇಶವನ್ನು ಸೇರಿ ಪತಿಯು ತಿಳಿಸಿದಂತೆ ಶುಚಿಯಾಗಿ ದೀಕ್ಷೆಯನ್ನು ಪ್ರಾರಂಭಿಸಿದಳು. ದೇವೇಂದ್ರನು ಅವಳ ವ್ರತನಿಷ್ಠೆಯನ್ನು ಪರೀಕ್ಷಿಸುವ ಸಲುವಾಗಿ ಪರಿಚಾರಕನಂತೆ ಅವಳೊಂದಿಗೆ ಹೊರಟನು. ದಿತಿಯ ವ್ರತವು ಫಲಿಸಿತು. ದೈವಾನು ಗ್ರಹದಿಂದ ಅವಳು ಗರ್ಭವನ್ನು ಧರಿಸಿದಳು. ದಿನಗಳು, ತಿಂಗಳುಗಳು ಕಳೆದವು. ಒಂದು ದಿನ ಮಟಮಟ ಮಧ್ಯಾಹ್ನ ಆಲಸ್ಯವಾದ್ದರಿಂದ ದಿತಿಯು ನಿದ್ರೆ ಮಾಡುವ ಸೂಚನೆ ಕಂಡು ಬರಲು ನಿದ್ರೆಯ ಪಾರವಶ್ಯದಲ್ಲಿ, ಕಾಲಿನ ಕಡೆ ತಲೆ, ತಲೆಯ ಕಡೆ ಕಾಲು ಹಾಕಿಕೊಂಡು, ತಲೆ ಕೆದರಿಕೊಂಡು ಮಲಗಿ ನಿದ್ರೆ ಹೋದಳು. ಆಗ, ಅವಳ ತಪೋನಿಷ್ಠೆಗೆ ಭಂಗ ಬಂದುದನ್ನು ಗಮನಿಸಿದ ದೇವೇಂದ್ರನು ಯೋಗಶಕ್ತಿಯಿಂದ ಗರ್ಭದಲ್ಲಿದ್ದ ಪಿಂಡವನ್ನು ಚೂರು ಚೂರು ಮಾಡಿದನು. ಆ ಸಮಯದಲ್ಲಿ ಪಿಂಡದಿಂದ ರೋದನ ಕೇಳಿ ಬರಲು, 'ಮಾ ರುದಃ, ಮಾ ರುದಃ,' ಎಂದು ಇಂದ್ರನು ಪಿಸುಗುಟ್ಟುತ್ತಿದ್ದನು. 'ಮಾ ರುದಃ' ಎಂದರೆ ಅಳಬೇಡ ಎಂದರ್ಥ.

ದಿತಿಯು ಬಾಧೆಯಾದ್ದರಿಂದ ಎಚ್ಚರಗೊಂಡು, ರಕ್ತಸ್ರಾವ ಆಗುತ್ತಿದ್ದುದನ್ನು ನೋಡಿ ಅಳಲಾರಂಭಿಸಿದಳು. ದೇವೇಂದ್ರನು ಕೈ ಜೋಡಿಸಿ, 'ಅಮ್ಮಾ! ನನ್ನನ್ನು ಕ್ಷಮಿಸು. ವ್ರತನಿಷ್ಠಾಭಂಗ ಮಾಡಿಕೊಂಡೆ. ತಲೆ ಕೆದರಿಕೊಂಡು ಕಾಲಿನ ಕಡೆ ತಲೆ ಇಟ್ಟು ಕೊಂಡು ಮಲಗಿದ್ದೆ. ಆದ್ದರಿಂದ ವ್ರತನಿಷ್ಠೆಗೆ, ಶುಚಿಗೆ ಭಂಗವಾಯಿತು. ಅವಕಾಶ ಸಿಕ್ಕಾಗ ಶತ್ರುವು ಬಿಡುವನೇ? ನನ್ನನ್ನು ಕೊಲ್ಲುವವನ್ನು ನಿನ್ನ ಗರ್ಭದಲ್ಲಿ ನಾನು

ಕೊಂದೆ. ಅವನು ನನ್ನ ಶತ್ರು ಸಮಾನನಲ್ಲವೇ? ನಾನು ಧರ್ಮ ವಿರುದ್ಧವಾಗಿ ಅವನನ್ನು ಸಂಹರಿಸಿಲ್ಲ. ವ್ರತನಿಷ್ಠೆಗೆ ಶುಚಿ ಪ್ರಧಾನವೆನ್ನುವುದು ನಿನಗೆ ತಿಳಿದೇ ಇದೆ. ಅದಕ್ಕೆ ವಿರುದ್ಧವಾಗಿ ನೀನು ನಡೆದಾಗ, ಆ ಸಮಯವನ್ನು ಕಾದು ನನ್ನ ರಕ್ಷಣೆ ನಾನು ಮಾಡಿಕೊಳ್ಳುವುದರಲ್ಲಿ ಯಾವ ತಪ್ಪೂ ಇಲ್ಲವೆಂದೇ ಹಾಗೆ ಮಾಡಿದೆ. ಗರ್ಭವೂ ಏಳು ಚೂರಾಗಿದೆ. ಆದ್ದರಿಂದ, ಅವರು ದೇವತೆಗಳಂತೆ ಏಳು ಜನ ಮರುದ್ಗಣ ಗಳಾಗಿರುವಂತೆ ಮಾಡುತ್ತೇನೆ,' ಎಂದು ವರವಿತ್ತು ಹೊರಟು ಹೋದನು.

ರಾಮಾ! ಇಂದ್ರನೂ ದಿತಿಯೂ ಈ ವಿಧವಾಗಿ ಒಪ್ಪಂದ ಮಾಡಿಕೊಂಡ ಪವಿತ್ರ ಸ್ಥಳವೇ ಇದು. ಇಲ್ಲೇ ಇಕ್ವ್ವಾಕು ಮತ್ತು ಅಲಂಬುಸಾ ದೇವಿಗೆ ಒಬ್ಬ ಮಗನು ಹುಟ್ಟಿದನು. ಅವನೇ ವಿಶಾಲ, ಆ ವಿಶಾಲನು ನಿರ್ಮಿಸಿದ ದೇಶವೇ ಈ ವಿಶಾಲ ದೇಶ. ವಿಶಾಲನಿಗೆ ಹೇಮಚಂದ್ರನು ಹುಟ್ಟಿದನು. ಅವನು ಮಹಾಬಲವಂತ. ಅವನಿಗೆ ಸುಚಂದ್ರ ಹುಟ್ಟಿದನು. ಸುಚಂದ್ರ ಬೆಳೆದು ದೊಡ್ಡವನಾಗಿ ಮದುವೆ ಯಾದನು. ಅವನಿಗೆ ಧೂಮ್ರಾಶ್ವ, ಧೂಮ್ರಾಶ್ವನಿಗೆ ಸೃಂಜಯ, ಸೃಂಜಯನಿಗೆ ಸಹದೇವನೂ ಹುಟ್ಟಿದನು. ಸಹದೇವನು ಶ್ರೀಮಂತ, ಮಹಾಧಾರ್ಮಿಕ, ಬಲಶಾಲಿ. ಅವನ ಪರಿಪಾಲನೆಯು ಬಹಳ ಕಾಲ ನಡೆಯಿತು. ಅವನಿಗೆ ಕುಶಾಶ್ವನೆನ್ನುವ ಕುಮಾರನು ಹುಟ್ಟಿದನು. ಅವನ ಕುಮಾರನೇ ಸೋಮದತ್ತನು.

ಸೋಮದತ್ತನಿಗೆ ಕಕುತ್ಸ್ಥನು ಹುಟ್ಟಿದನು. ಆ ಪರಾಕ್ರಮಶಾಲಿಯ ಪುತ್ರನು ಸುಮತಿ. ಈಗ ಈ ವಿಶಾಲ ಪಟ್ಟಣವನ್ನು ಪರಿಪಾಲಿಸುತ್ತಿರುವವನೇ ಆ ಸುಮತಿ. ಇವನು ಮಹಾ ಬಲಶಾಲಿ, ಗುಣಶಾಲಿ, ದೇವತೆಗಳಿಗೆ ಸಮಾನನು. ರಾಮಾ! ಈ ದಿನ ವಿಶಾಲ ಪಟ್ಟಣದಲ್ಲಿ ಸುಖವಾಗಿ ಮಲಗಿದ್ದು, ನಾಳೆ ಜನಕ ಮಹಾರಾಜನ ಪಟ್ಟಣಕ್ಕೆ ಪ್ರಯಾಣ ಮಾಡೋಣ," ಎನ್ನಲು ಎಲ್ಲರೂ ಆನಂದಿಸಿದರು.

ವಿಶ್ವಾಮಿತ್ರ ಮಹರ್ಷಿಯು ತನ್ನ ಪಟ್ಟಣದ ಸಮೀಪಕ್ಕೆ ಬಂದಿರುವುದನ್ನು ದೂತ ರಿಂದ ತಿಳಿದ ಸುಮತಿಯು ತನ್ನ ಪರಿಚಾರಕರು ಮತ್ತು ಪುರೋಹಿತರೊಂದಿಗೆ ಬಂದು ತನ್ನ ಪಟ್ಟಣವನ್ನು ಪ್ರವೇಶಿಸಿ, ರಾಜ ಭವನವನ್ನು ಪವಿತ್ರ ಮಾಡಬೇಕೆಂದು ವಿಶ್ವಾಮಿತ್ರರನ್ನು ಪ್ರಾರ್ಥಿಸಿದನು. ವಿಶ್ವಾಮಿತ್ರರು ಅವನ ಆಹ್ವಾನಕ್ಕೆ ಸಂತೋಷಪಟ್ಟು ಕುಶಲ ಪ್ರಶ್ನೆ ಮಾಡಿದರು. ಇಬ್ಬರೂ ಸ್ವಲ್ಪ ಹೊತ್ತು ಪುರಕ್ಷೇಮದ ಮಾತನಾಡಿದ ಬಳಿಕ, ಸುಮತಿಯು ರಾಮ ಲಕ್ಷ್ಮಣರನ್ನು ನೋಡಿ, "ಈ ಸಿಂಹದ ಮರಿಗಳು ಯಾರು?" ಎಂದು ವಿಶ್ವಾಮಿತ್ರರನ್ನು ಪ್ರಶ್ನಿಸಿದನು. ವಿಶ್ವಾಮಿತ್ರರು, "ಸುಮತಿ! ಅದು ದೊಡ್ಡ ಚರಿತ್ರೆ, ಈಗ ಸಮಯವಿಲ್ಲ. ರಾಜಭವನಕ್ಕೆ ಹೋದಮೇಲೆ ಹೇಳುತ್ತೇನೆ," ಎಂದು ಹೇಳಿ, ಋಷಿ ಶಿಷ್ಯರಿಗೂ ರಾಮ ಲಕ್ಷ್ಮಣರಿಗೂ, "ವಿಶಾಲ ಪಟ್ಟಣಕ್ಕೆ

ಹೋಗೋಣ ನಡೆಯಿರಿ," ಎಂದು ಹೇಳಿ, ತಾವೂ ಎದ್ದು, ಸುಮತಿಯೊಂದಿಗೆ ಮಾತನಾಡುತ್ತಾ ನಡೆದು ಹೊರಟರು.

ಅವರು ಪಟ್ಟಣವನ್ನು ಪ್ರವೇಶಿಸುತ್ತಲೇ ಮಂಗಳವಾದ್ಯಗಳು ಮೊಳಗಿದವು. ಬ್ರಾಹ್ಮಣರು ಸ್ವಸ್ತಿವಾಚನ ಹೇಳಿದರು. ವಿಶಾಲಪುರಿಯ ಅರಮನೆಯನ್ನು ಅವರು ಪ್ರವೇಶಿಸಿದರು. ಸುಮತಿಯಿತ್ತ ಆತಿಥ್ಯವನ್ನು ಸ್ವೀಕರಿಸಿ, ಅಲ್ಲಿ ಸೇರಿದ್ದ ಪಂಡಿತರಿಗೂ ಬಂಧುಮಿತ್ರರಿಗೂ ಸಿದ್ಧಾಶ್ರಮದಲ್ಲಿ ತಾವು ಮಾಡಿದ ಯಜ್ಞವನ್ನು ಹಾಗೂ ರಾಮಲಕ್ಷ್ಮಣರನ್ನು ಕುರಿತು ಮತ್ತು ಅವರು ಯಜ್ಞವನ್ನು ರಕ್ಷಿಸಿದ ವಿಧಾನವನ್ನು ಕುರಿತು ವಿಶ್ವಾಮಿತ್ರರು ವಿಪುಲವಾಗಿ ಹೇಳಿದರು. ಆಶ್ಚರ್ಯಕರವಾದ ಶಕ್ತಿಸಾಮರ್ಥ್ಯಗಳನ್ನುಳ್ಳ ಬಾಲಕರ ಚರಿತ್ರೆಯನ್ನು ಕೇಳಿ ಅಲ್ಲಿ ಸೇರಿದ್ದವರು ಅಮಿತಾನಂದದಿಂದ ರಾಮಲಕ್ಷ್ಮಣರನ್ನೇ ನೋಡುತ್ತಿದ್ದರು. ಸಾಕ್ಷಾತ್ಕರಿಸಿದ ನರನಾರಾಯಣರೇ ಎಂದು ಭಾವಿಸಿ ಎಲ್ಲರೂ ಅವರಿಗೆ ನಮಸ್ಕರಿಸಿದರು.

ವೇಳೆಯಾಗಿದ್ದರಿಂದ ರಾಮಲಕ್ಷ್ಮಣರು ವಿಶ್ವಾಮಿತ್ರರಿಗೆ ನಮಸ್ಕರಿಸಿ ವಿಶ್ರಾಂತಿ ತೆಗೆದುಕೊಳ್ಳುವ ಸಲುವಾಗಿ ಅವರಿಗಾಗಿ ಏರ್ಪಡಿಸಿದ್ದ ಪ್ರತ್ಯೇಕವಾದ ಬಿಡದಿ ಗೃಹಕ್ಕೆ ತೆರಳಿದರು. ಬೆಳಗ್ಗೆ ಸ್ನಾನ ಸಂಧ್ಯಾದಿಗಳನ್ನು ಮುಗಿಸಿ ಸಕಾಲದಲ್ಲಿ ವಿಶ್ವಾಮಿತ್ರರ ಬಳಿಗೆ ಬಂದರು. ಎಲ್ಲರೂ ಸುಮತಿಗೆ ಕೃತಜ್ಞತೆಯನ್ನು ಹೇಳಿ, ಮಿಥಿಲಾಪುರಿಗೆ ಹೊರಟರು. ಸುಮತಿಯೂ ಸ್ವಲ್ಪ ದೂರ ಅವರೊಂದಿಗೆ ಬಂದು ಬೀಳ್ಕೊಟ್ಟು ಹಿಂದಿರುಗಿದನು. ವಿಶ್ವಾಮಿತ್ರರು ಶಿಷ್ಯವೃಂದದೊಂದಿಗೆ, ರಾಮಲಕ್ಷ್ಮಣರೊಂದಿಗೆ ನಡೆಯುತ್ತಾ ಮಧ್ಯಾಹ್ನದ ವೇಳೆಗೆ ಒಂದು ಸುಂದರವಾದ ವನವನ್ನು ಸೇರಿದರು.

ಅದು ಪೂರ್ವದಲ್ಲಿ ಬಹಳ ಅಂದವಾಗಿದ್ದಂತೆಯೂ ಅಲ್ಲಲ್ಲಿ ಶಿಥಿಲವಾದ ಪರ್ಣಶಾಲೆಗಳೂ ಯಜ್ಞಯಾಗಗಳನ್ನು ಮಾಡಿದ ಹೋಮ ಕುಂಡಗಳೂ ವೇದಿಕೆಗಳೂ ರಾಮನಿಗೆ ಕಾಣಿಸಿತು. ರಾಮನು ಸುತ್ತಲೂ ಪರೀಕ್ಷಿಸಿ, ಇದು ಪೂರ್ವದಲ್ಲಿ ಯಾರೋ ಮಹರ್ಷಿಗಳು ವಾಸವಾಗಿದ್ದ ವನದಂತಿದೆ ಎಂದು ವಿಶ್ವಾಮಿತ್ರರಿಗೆ ಹೇಳಿದನು. ಅವರು ನಸುನಕ್ಕು, "ರಾಮಾ! ಚೆನ್ನಾಗಿ ಗಮನಿಸಿದೆ! ಸಂತೋಷ. ಈ ಪ್ರದೇಶದಲ್ಲಿ ಯಾವ ಮಹನೀಯರು ವಾಸವಾಗಿದ್ದರು, ಅವರು ಏಕೆ ಈ ಪ್ರದೇಶವನ್ನು ಬಿಡಬೇಕಾಯಿತು ಎನ್ನುವುದನ್ನು ಹೇಳುತ್ತೇನೆ ಕೇಳು," ಎಂದು ಹೇಳಲು ಮೊದಲು ಮಾಡಿದರು. "ಇದು ಗೌತಮ ಮಹರ್ಷಿಯ ಆಶ್ರಮ. ದೇವತೆಗಳು ಸಹ ಈ ಆಶ್ರಮವನ್ನು ಎಷ್ಟೋ ಪ್ರಶಂಸಿಸುತ್ತಿದ್ದರು. ಗೌತಮರು ತಮ್ಮ ಹೆಂಡತಿಯಾದ ಅಹಲ್ಯೆಯೊಂದಿಗೆ ಅನೇಕ ವರ್ಷಗಳು ಇಲ್ಲಿ ವಾಸಿಸುತ್ತಾ

ಘೋರವಾದ ತಪಸ್ಸನ್ನಾಚರಿಸುತ್ತಿದ್ದರು. ಅನೇಕ ಯಜ್ಞ, ಯಾಗ, ಕ್ರತುಗಳನ್ನು ಮಾಡಿದರು. ಈ ಪ್ರದೇಶವು ನಿತ್ಯ ಕಲ್ಯಾಣದಿಂದ ಕಳೆ ಕಳೆಯಾಗಿದ್ದಿತು.

ಗೌತಮರ ಹೆಂಡತಿಯಾದ ಅಹಲ್ಯೆಯು ಮಹಾ ಗುಣವಂತೆ, ರೂಪವತಿ. ಅವಳನ್ನು ಹೋಲುವ ಸ್ತ್ರೀಯು ಲೋಕದಲ್ಲಿ ಬೇರೊಬ್ಬರು ಇಲ್ಲದಿದ್ದುದರಿಂದಲೇ ಗೌತಮ ಮುನಿಯು ಬಹಳ ಜಾಗ್ರತೆಯಿಂದ ಅವಳನ್ನು ಕಾಪಾಡಿಕೊಂಡಿದ್ದರು. ಒಂದು ದಿನ ಅವಳ ಸೌಂದರ್ಯವನ್ನು ನೋಡಲೆಂದು, ಇಂದ್ರನು ಗೌತಮರ ವೇಷವನ್ನು ಧರಿಸಿ ಆಶ್ರಮವನ್ನು ಪ್ರವೇಶಿಸಿದನು. ಗುಣವಂತೆಯಾದ ಅಹಲ್ಯೆಯು ಅವನನ್ನು ಪತಿಯೆಂದು ಭಾವಿಸಿ, ಅವನಿಗೆ ಉತ್ತಮೋತ್ತಮವಾದ ರೀತಿಯಲ್ಲಿ ಸೇವೆಯನ್ನು ಸಲ್ಲಿಸುತ್ತಿರುವಾಗ ನಿಜವಾದ ಗೌತಮರು ಪ್ರವೇಶಿಸಿ ತಮ್ಮ ವೇಷದಲ್ಲಿದ್ದ ಇಂದ್ರನನ್ನು ನೋಡಿ ಉಗ್ರರಾಗಿ, 'ನನ್ನ ವೇಷವನ್ನು ಧರಿಸಿ ಅಹಲ್ಯೆಯೊಂದಿಗೆ ಸೇವೆ ಮಾಡಿಸಿಕೊಳ್ಳುತ್ತಿರುವೆಯಾ, ದುರ್ಮತಿ!' ಎಂದು ಗರ್ಜಿಸಿದ ಕೂಡಲೇ ಇಂದ್ರನು ಅಂತರ್ಧಾನನಾದನು.

ಗೌತಮರು ಅದೇ ರೌದ್ರದಿಂದ ಅಹಲ್ಯೆಯನ್ನು ನೋಡಿ, 'ಆಶ್ರಮದ ನಾಶಕ್ಕೆ ಕಾರಣಳಾದವಳೇ,' ಎಂದು ಗರ್ಜಿಸಿ, 'ಛೀ, ಇನ್ನೊಂದು ನಿಮಿಷವೂ ನಾನಿಲ್ಲಿರೆನು. ನಿನ್ನ ಮುಖವನ್ನು ನೋಡಬಾರದು. ಅನ್ನ ನೀರಿಲ್ಲದೆ, ಗಾಳಿಯನ್ನು ಸೇವಿಸುತ್ತಾ ಯಾರಿಗೂ ಕಾಣಿಸದಂತೆ ಪೊದೆಯೊಳಗೆ ಬಿದ್ದಿರು. ನಾನು ಹೊರಡುತ್ತೇನೆ,' ಎಂದ ಬೆಂಕಿಯಂಥ ಮಾತುಗಳನ್ನಾಡಿ ಅವಳನ್ನು ಶಪಿಸಿದರು. ಅಹಲ್ಯೆಯು ಗೊಳೋ ಎಂದು ಅತ್ತಳು. ತನ್ನದೇನೂ ತಪ್ಪಿಲ್ಲವೆಂದೂ ತಾನು ಆಳವಾಗಿ ವಿಚಾರಿಸದೆ ಅವನ ವೇಷವನ್ನು ನೋಡಿ ಪತಿಯೆಂದು ಭಾವಿಸಿ ಸೇವೆ ಮಾಡಿದೆನೇ ಹೊರತು ತನ್ನಲ್ಲಿ ಅನ್ಯಭಾವವಿಲ್ಲವೆಂದು ಗೋಳಾಡುತ್ತಾ ಪತಿಯ ಕಾಲುಗಳ ಮೇಲೆ ಬಿದ್ದು ಪ್ರಾರ್ಥಿಸಿದಳು. ಗೌತಮರು ಶಾಂತರಾಗಿ ಯಥಾರ್ಥವನ್ನು ಗುರುತಿಸಿದರು. ತಾನಾಡಿದ ಮಾತುಗಳನ್ನು ಪುನಃ ಹಿಂದಕ್ಕೆ ತೆಗೆದುಕೊಳ್ಳಲು ಸಾಧ್ಯವಿಲ್ಲವೆಂದು ತಿರುಗಿ, 'ಅಹಲ್ಯಾ! ಆಡಿದ ಮಾತನ್ನು ತಪ್ಪನೆಂಬ ವ್ರತವಿದೆ. ಅದು ನಿನಗೆ ತಿಳಿದಿದೆ. ಆದ್ದರಿಂದ ಅಹಲ್ಯಾ! ನೀನು ಇಲ್ಲೇ ಜಡವಾಗಿ ಬಿದ್ದಿರು. ಶೀಘ್ರದಲ್ಲೇ ದಶರಥರಾಮನು ಇಲ್ಲಿಗೆ ಬರುತ್ತಾನೆ. ನಿನ್ನನ್ನು ನೋಡಿ ಕಟಾಕ್ಷಿಸುತ್ತಾನೆ, ದರ್ಶನ ನೀಡುತ್ತಾನೆ. ಆ ದರ್ಶನ ಸ್ಪರ್ಶನ ಸಂಭಾಷಣೆಗಳಿಂದ ನಿನ್ನ ದೋಷವು ಪರಿಹಾರವಾಗುವುದು. ನಿನ್ನ ಯಥಾರ್ಥವಾದ ರೂಪ ತೇಜಸ್ಸುಗಳು ಪುನಃ ನಿನಗೆ ಬರುವುವು. ಆಗ ನಾನು ತಿರುಗಿ ನಿನ್ನನ್ನು ಸೇರುತ್ತೇನೆ,' ಎಂದು ಹೇಳಿ ಗೌತಮರು ಆಶ್ರಮವನ್ನು ಬಿಟ್ಟು ಹಿಮವತ್ಪರ್ವತ ಪ್ರಾಂತಕ್ಕೆ ಹೊರಟುಹೋದರು.

ಆಗಿನಿಂದಲೂ ಅಹಲ್ಯೆಯು ರೂಪರಹಿತಳಾಗಿ ಗಾಳಿಯನ್ನು ಕುಡಿಯುತ್ತಾ ತನ್ನ ಪತಿಯನ್ನು ಸೇರ ಬಯಸಿ ಘೋರ ತಪಸ್ಸಿನಲ್ಲಿ ಮುಳುಗಿದ್ದಾಳೆ. ಹೀಗೆ ಆಶ್ರಮವು ಹಾಳುಬಿದ್ದಿತು," ಎಂದು ವಿಶ್ವಾಮಿತ್ರರು ಹೇಳುತ್ತಲೇ ರಾಮಚಂದ್ರನು ಅತಿಶಯ ಆಶ್ಚರ್ಯವನ್ನು ಪ್ರದರ್ಶಿಸುತ್ತಾ, "ಏನು, ನನ್ನ ಬರುವಿಕೆಗಾಗಿ ಕಾದಿದ್ದಾಳೆಂದು ಹೇಳುತ್ತಿರುವಿರಲ್ಲಾ! ಪಾಪ, ಅವಳು ಎಲ್ಲಿ ತಪಸ್ಸನಾಚರಿಸುತ್ತಿದ್ದಾಳೋ ತಿಳಿಸಿ, ಹೋಗೋಣ," ಎಂದು ಮುನ್ನಡೆದನು. ವಿಶ್ವಾಮಿತ್ರ ಲಕ್ಷ್ಮಣರು ಅವನನ್ನು ಅನುಸರಿಸಿದರು. ಮಹಾರಣ್ಯದ ಪೊದೆಗಳನ್ನು ದಾಟಿ ಶಿಥಿಲವಾದ ಪರ್ಣಶಾಲೆ ಯನ್ನು ಪ್ರವೇಶಿಸಿದರು.

ಅದುವರೆಗೂ ದೇವದಾನವರಾರಿಗೂ ಸಾಧ್ಯವಾಗದಂಥ ತಪೋನಿಷ್ಠೆಯಲ್ಲಿ ಸರ್ವ ವನ್ನೂ ಮರೆತು ನಿದ್ರಾಹಾರಗಳಿಲ್ಲದೆ, ಕಲ್ಲಿನಂತೆ ಬಿದ್ದಿದ್ದ ಅಹಲ್ಯೆಯು ಮಂಜು ಮುಸುಕಿದ ಚಂದ್ರನಂತೆ ಕಂಡಳು. ಅವಳ ವಿಗ್ರಹವು ಹೊಗೆಯಿಂದ ಆವರಿಸಲ್ಪಟ್ಟ ಅಗ್ನಿಜ್ವಾಲೆಯಂತಿತ್ತು. ರಾಮನು ಸಮೀಪಕ್ಕೆ ಹೋಗುತ್ತಿದ್ದಂತೆ ಅವನ ಕಾಲು ಅವಳಿಗೆ ಸೋಕಿತು. ಥಟ್ಟನೆ, ಅಹಲ್ಯೆಯು ತಲೆಯೆತ್ತಿ ರಾಮನ ದಿವ್ಯಸುಂದರ ವಿಗ್ರಹವನ್ನು ನೋಡಿ, "ಆಹಾ! ಧನ್ಯಳಾದೆ," ಎಂದು ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು, "ನನ್ನ ಪಾಪ ಪರಿಹಾರ ಮಾಡಲು ಬಂದೆಯಾ ಪರಮಾತ್ಮಾ! ಇಂದಿಗೆ ನಿನಗೆ ದಯೆ ಬಂದಿತೇ!" ಎಂದು ಅನೇಕ ವಿಧವಾಗಿ ಪ್ರಾರ್ಥಿಸಿದಳು. ತನ್ನ ರೂಪವು ಮೋಡಗಳಿಂದ ಹೊರಬಂದ ಚಂದ್ರನಂತೆ ಪ್ರಕಾಶಿಸುತ್ತಾ ಮೇಲೆದ್ದಳು. ಯೋಗಲಕ್ಷಣ ಸಂಪನ್ನರಾದ ಗೌತಮರೂ ಆ ಕ್ಷಣದಲ್ಲಿ ಅಲ್ಲಿಗೆ ಬಂದರು.

ಆ ತಪೋಬಲ ವಿಶುದ್ಧಾಂಗನೆಯನ್ನು ನೋಡಿದರು. ಇಬ್ಬರೂ ರಾಮಲಕ್ಷ್ಮಣ ರಿಗೆ ಅತ್ಯಂತ ಆನಂದದಿಂದ ನಮಸ್ಕರಿಸಿದರು. ವಿಶ್ವಾಮಿತ್ರರನ್ನು ಗೌತಮರು ತಕ್ಕ ರೀತಿಯಲ್ಲಿ ಸನ್ಮಾನಿಸಿದರು. ಈ ಆಶ್ಚರ್ಯಕರವಾದ ವಿಚಿತ್ರವನ್ನು ವಿಶ್ವಾಮಿತ್ರರ ಶಿಷ್ಯರು ನೋಡಿ ಕಣ್ಣಿನಿಂದ ಆನಂದ ಬಿಂದುಗಳನ್ನು ಸುರಿಸುತ್ತಾ ರಾಮಲಕ್ಷ್ಮಣ ರನ್ನು ತದೇಕಚಿತ್ತದಿಂದ ನೋಡುತ್ತಿದ್ದರು. ವಿಶ್ವಾಮಿತ್ರರು ಗೌತಮರಿಂದ ಅಪ್ಪಣೆ ಪಡೆದು, ರಾಮಲಕ್ಷ್ಮಣರನ್ನು ಜೊತೆಯಲ್ಲಿಟ್ಟುಕೊಂಡು ಈಶಾನ್ಯ ದಿಕ್ಕಿಗೆ ಪ್ರಯಾಣ ಮಾಡಿದರು.

ಸಾಯಂಕಾಲದ ವೇಳೆಗೆ ಮಿಥಿಲಾಪುರವನ್ನು ಸಮೀಪಿಸಿದರು. ಅದೇ ಮಿಥಿಲಾ ಪುರವೆಂದು ಅಲ್ಲಿ ಕಾಣಿಸುವ ದೊಡ್ಡ ದೊಡ್ಡ ಭವನಗಳಿಂದ ಕೂಡಿದ ವಿಶಾಲವಾದ ಪಟ್ಟಣವನ್ನು ವಿಶ್ವಾಮಿತ್ರರು ರಾಮಲಕ್ಷ್ಮಣರಿಗೆ ತೋರಿಸಿದರು. ರಾಮಲಕ್ಷ್ಮಣರು ಮತ್ತು ಋಷಿಶಿಷ್ಯರು ಹಿಡಿಸಲಾರದ ಆನಂದದಿಂದ ಕುಣಿದಾಡಿದರು. ನಡಿಗೆಯನ್ನು

ತೀವ್ರಗೊಳಿಸಿದರು. ದೇಹವನ್ನೇ ಮರೆತರೇನೋ ಎನ್ನುವಂತೆ ಚೆಂಡಿನಂತೆ ಪುಟ ಪುಟಿಸುತ್ತಾ ಮಿಥಿಲಾಪುರದ ಸಿಂಹದ್ವಾರವನ್ನು ಸೇರಿದರು. ನಗರದಲ್ಲಿ ಎಲ್ಲಿ ನೋಡಿದರೂ ಋಷಿಗಳೂ ಬ್ರಾಹ್ಮಣರೂ ವೇದಪಠಣ ಮಾಡುತ್ತಿದ್ದರು. ಯಜ್ಞ ಕಾರ್ಯಗಳನ್ನು ಮಾಡುತ್ತಿದ್ದರು. ಯಾವ ಮರದ ಕೆಳಗೆ ನೋಡಿದರೂ ಎತ್ತಿನ ಗಾಡಿಗಳನ್ನು ನಿಲ್ಲಿಸಿ, ಅದರಿಂದ ಜನರು ಗುಂಪು ಗುಂಪಾಗಿ ಇಳಿಯುತ್ತಿದ್ದರು. ಸ್ತ್ರೀಯರೂ ಪುರುಷರೂ ವೃದ್ಧರೂ ಬಾಲಕರೂ ಎಲ್ಲಾ ವರ್ಗಗಳವರೂ ಎಲ್ಲಾ ಆಶ್ರಮಗಳವರೂ ಎಲ್ಲಾ ದೇಶಗಳವರೂ ತರತರದ ಜನರು ಕಾಣಿಸುತ್ತಾ ಕಣ್ಣಿಗೆ ಹಬ್ಬವಾಗಿತ್ತು. ಕಿಕ್ಕಿರಿದ ಜನರು ಅತ್ತಿತ್ತ ತಿರುಗಾಡುತ್ತಾ ದಾರಿ ಯಾವುದೆಂದು ತಿಳಿಯದೆ ಪರದಾಡುತ್ತಿದ್ದರು.

ವಿಶ್ವಾಮಿತ್ರರು ಎಲ್ಲಿ ಬಿಡದಿ ಮಾಡಬೇಕೋ ತಿಳಿಯದೆ, ಅತ್ತಿತ್ತ ನೋಡಿ, ಜನ ಸಮೂಹವು ಕಡಿಮೆ ಇದ್ದ ಒಂದು ಮರದ ಬಳಿಗೆ ಹೋದರು. ಅಲ್ಲಿ ಅವರೆಲ್ಲರೂ ಸಾಮಾನುಗಳನ್ನಿಟ್ಟು ಸ್ನಾನ ಸಂಧ್ಯಾದಿಗಳನ್ನು ಮುಗಿಸಿದರು. ಯಜ್ಞಕ್ಕೆ ಆಹ್ವಾನಿತ ರಾದವರು ಯಾರಾದರೂ ಬಂದಿದ್ದಾರೇನೋ ಎಂದು ರಾಜಭಟರು ಎಲ್ಲಾ ಕಡೆ ತಿರುಗುತ್ತಾ ಬಂದವರ ಬಳಿ ಹೋಗಿ, "ಎಲ್ಲಿಂದ ಬಂದಿರಿ? ಯಾವ ಆಶ್ರಮದಿಂದ ಬಂದಿರಿ? ನಿಮ್ಮ ಹೆಸರೇನು?" ಎಂದೆಲ್ಲಾ ವಿಚಾರಿಸಿ ರಾಜನಿಗೆ ವಾರ್ತೆಯನ್ನು ಕಳಿಸುತ್ತಿದ್ದರು.

ಮಹಾ ತೇಜೋವಂತರಾದ ವಿಶ್ವಾಮಿತ್ರರು ಸ್ನಾನ ಸಂಧ್ಯಾದಿ ಕಾರ್ಯಗಳನ್ನು ಮಾಡಿ, ನಕ್ಷತ್ರಗಳಂತೆ ಪ್ರಜ್ವಲಿಸುವ, ಸಿಂಹಗಳಂತೆ ದೃಢಕಾಯರಾದ ಬಾಲಕ ರೊಂದಿಗೆ ಮರದ ಕೆಳಗೆ ಕುಳಿತು ಅವರಿಗೆ ಮಿಥಿಲೆಯ ವೈಭವವನ್ನು ಹೇಳುತ್ತಿ ದ್ದರು. ಆಗ ರಾಜಭಟರು ಅಲ್ಲಿಗೆ ಬಂದು ವಿನಯದಿಂದ, "ಸ್ವಾಮೀ! ತಾವು ಯಾರು? ಎಲ್ಲಿಂದ ದಯಮಾಡಿಸಿದಿರಿ? ನಾವು ರಾಜಭಟರು, ಜನಕ ಚಕ್ರ ವರ್ತಿಯ ಆಜ್ಞಾನುಸಾರವಾಗಿ ನಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇವೆ. ತಮ್ಮ ನಾಮಧೇಯವನ್ನು ತಿಳಿಸಿದರೆ ಮಹಾರಾಜರಿಗೆ ನಿವೇದಿಸುತ್ತೇವೆ," ಎಂದು ಪ್ರಾರ್ಥಿ ಸಿದರು. ವಿಶ್ವಾಮಿತ್ರರು, ತಮ್ಮ ಹೆಸರನ್ನು ತಿಳಿಸಿದರು.

ರಾಜಭಟರು ಅರಮನೆಗೆ ಹೋಗಿ ವಿಶ್ವಾಮಿತ್ರರ ಆಗಮನವನ್ನು ತಿಳಿಸಿದರು. ಮಹಾರಾಜನು ಅವರಿಗೆ ತಕ್ಕ ಏರ್ಪಾಟುಗಳನ್ನು ಮಾಡಿ, ಅವರನ್ನು ಸ್ವಾಗತಿಸಲು ತನ್ನ ಪ್ರಧಾನ ಪುರೋಹಿತರಾದ ಶತಾನಂದರನ್ನು ಬ್ರಾಹ್ಮಣರೊಂದಿಗೆ ಕಳಿಸಿದನು. ಶತಾನಂದನು ಸ್ವಸ್ತಿವಾಚನ ಹೇಳುತ್ತಾ ಮರದ ಬಳಿಗೆ ಬರುತ್ತಿರುವುದನ್ನು ನೋಡಿ, ತಮ್ಮನ್ನು ಕರೆದುಕೊಂಡು ಹೋಗಲು ಬರುತ್ತಿದ್ದಾರೆನ್ನುವುದನ್ನು ತಿಳಿದು ವಿಶ್ವಾ

ಮಿತ್ರರು ರಾಮಲಕ್ಷ್ಮಣರಿಗೆ ಹೊರಡಲು ಸಿದ್ಧರಾಗಿ ಎಂದು ಹೇಳಲು, ಎಲ್ಲರೂ ಸಿದ್ಧರಾದರು. ಶತಾನಂದರು ಬಂದು ವಿನಯ ವಿಧೇಯತೆಗಳಿಂದ ವಿಶ್ವಾಮಿತ್ರರಿಗೆ ಅರ್ಘ್ಯ ಪಾದ್ಯ ಮಧುಪರ್ಕಗಳನ್ನು ಸಮರ್ಪಿಸಿ ಮಹಾರಾಜನ ಆಜ್ಞೆಯ ಪ್ರಕಾರ ತಮಗೆ ಸ್ವಾಗತ ಬಯಸಲು ಬಂದಿದ್ದೇನೆ ಎಂದರು. ಅವರ ಸಾಮಾನುಗಳಿಗೆ ಒಂದು ಪಲ್ಲಕ್ಕಿಯಲ್ಲಿ ತಂದು, ವಿಶ್ವಾಮಿತ್ರರನ್ನೂ ರಾಮಲಕ್ಷ್ಮಣರನ್ನೂ ಋಷಿ ಕುಮಾರರನ್ನೂ ಮಂಗಳವಾದ್ಯಗಳೊಂದಿಗೆ ಕರೆದುಕೊಂಡು ಹೊರಟರು.

ರಾಜಬೀದಿಯನ್ನು ಪ್ರವೇಶಿಸುತ್ತಲೇ ಜನಕ ಮಹಾರಾಜನು ಮಂತ್ರಿ ಪರಿವಾರ ದೊಂದಿಗೆ ತಾನೇ ಬಂದು ಎದುರುಗೊಂಡು, ವಿಶ್ವಾಮಿತ್ರರಿಗೆ ನಮಸ್ಕರಿಸಿ, "ಸ್ವಾಮಿ! ನಾನು ಧನ್ಯನು. ತಾವು ದಯಮಾಡಿಸಿದ್ದರಿಂದ ಮಿಥಿಲಾಪುರಕ್ಕೆ ಅದೆಷ್ಟೋ ಶೋಭೆ ಬಂದಿತು," ಎಂದು ಹೇಳಿ, ಕ್ಷೇಮ ಸಮಾಚಾರವನ್ನು ವಿಚಾರಿಸಿ, ತನ್ನ ದೃಷ್ಟಿಯನ್ನು ರಾಮಲಕ್ಷ್ಮಣರ ಮೇಲೆ ಏಕಾಗ್ರಗೊಳಿಸಿದನು. ಅವರ ರೂಪಗಳು ಸಾಕ್ಷಾತ್ ಸೂರ್ಯ ತೇಜಃಪುಂಜದಂತೆ ಕಾಣಿಸಿತು. ರಾಜನಿಗೆ ಕೆಲವು ನಿಮಿಷ ಏನೂ ತೋಚದಂತಾಯಿತು. ತಾನೆಲ್ಲಿರುವೆನೆನ್ನುವುದೂ ತಿಳಿಯದೆ ಹೋಯಿತು.

ಹೇಗೋ ತನ್ನ ಮನಸ್ಸನ್ನು ಹತೋಟಿಗೆ ತಂದುಕೊಂಡು, ದಿಗ್ಭ್ರಾಂತಿಯಿಂದ, "ಸ್ವಾಮೀ! ಈ ಬಾಲಕರು ಯಾರು? ಸಾಕ್ಷಾತ್ ಅಶ್ವಿನಿ ದೇವತೆಗಳಂತೆ ಕಾಣಿಸು ತ್ತಿದ್ದಾರೆ. ಇವರು ನನ್ನ ಅದೃಷ್ಟದಿಂದ ನನ್ನನ್ನು ಅನುಗ್ರಹಿಸಲು ಈಗಿಂದೀಗಲೇ ದೇವಲೋಕದಿಂದ ಇಳಿದ ದೇವತಾ ವಿಗ್ರಹಗಳಂತಿದ್ದಾರೆ. ಸೂರ್ಯ ಚಂದ್ರರೇ ಇಂಥ ರೂಪ ಧರಿಸಿ ಭೂಲೋಕಕ್ಕೆ ಬಂದಿರುವಂತಿದೆ. ಇಂಥ ಸುಂದರ ಸುಕುಮಾ ರರು ನಿಮ್ಮೊಂದಿಗೆ ಕಾಲ್ನಡಿಗೆಯಲ್ಲಿ ಹೇಗೆ ಬಂದರು? ಅಥವಾ ಇಲ್ಲೇ ಎಲ್ಲಾದರೂ ತಮಗೆ ಇವರ ಪರಿಚಯವಾಯಿತೇ?" ಎಂದು ತನ್ನಷ್ಟಕ್ಕೇ ತಾನು ಮೈಮರೆತು ಮಾತನಾಡುತ್ತಿದ್ದಾನೋ ಎನ್ನುವಂತೆ, ಒಂದಾದಮೇಲೊಂದರಂತೆ ಪ್ರಶ್ನೆಯ ಮಳೆ ಗರೆಯುತ್ತಿದ್ದ ಜನಕ ಮಹಾರಾಜನನ್ನು ನೋಡಿ, ವಿಶ್ವಾಮಿತ್ರರು ಮುಗುಳ್ನಗುತ್ತಾ, "ರಾಜಾ! ಇವರು ಅಯೋಧ್ಯಾ ಚಕ್ರವರ್ತಿಯಾದ ದಶರಥನ ಪುತ್ರರತ್ನಗಳು. ಇವರ ಹೆಸರು ರಾಮ ಲಕ್ಷ್ಮಣ. ಇವರ ಬಲಪರಾಕ್ರಮಗಳು ಅತ್ಯಂತ ವಿಚಿತ್ರವಾದವು, ಅದ್ಭುತವಾದವು," ಎಂದು ಹೇಳಿ, ಇನ್ನೂ ಹೇಳಬೇಕೆಂದುಕೊಂಡಿದ್ದನ್ನು ಬಿಡದಿ ಯನ್ನು ಸೇರಿದ ಮೇಲೆ ಹೇಳೋಣವೆಂದು, ಆ ಮಾತನ್ನು ಅಲ್ಲಿಗೇ ಮುಗಿಸಿ, ರಾಜ ನೊಂದಿಗೆ ನಡೆಯುತ್ತಾ ಹೊರಟು ಅವರಿಗಾಗಿ ಏರ್ಪಡಿಸಿದ್ದ ಗೃಹಕ್ಕೆ ಹೋದರು.

ವಿಶಾಲವಾದ ತೋಟದಲ್ಲಿ ಸುಂದರವಾಗಿ ಅಲಂಕರಿಸಲ್ಪಟ್ಟಿದ್ದ ಆ ಭವನವು ಪ್ರಶಾಂತಿ ಉದ್ಭವಿಸಿದ್ದೇ ಅಲ್ಲಿಯೇ ಏನೋ ಎನ್ನುವಂತೆ ನಿಶ್ಶಬ್ದವಾಗಿತ್ತು. ರಾಜ

ಭವನಕ್ಕೆ ಸಮೀಪವೇ ಇತ್ತು. ಜನಕ ಮಹಾರಾಜನು ವಿಶ್ವಾಮಿತ್ರರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, "ತಾವು ಬಂದದ್ದು ನನಗೆಷ್ಟೋ ಬಲವನ್ನೂ ಆನಂದವನ್ನೂ ಕೊಟ್ಟಿದೆ, ಎಷ್ಟೋ ಜನ್ಮಗಳ ಪುಣ್ಯಫಲವೇ ನನಗಿಂಥ ಭಾಗ್ಯವನ್ನು ತಂದಿದೆ," ಎಂದು ಕೃತಜ್ಞತೆಯನ್ನು ತಿಳಿಸಿ, "ಸ್ವಾಮೀ! ಯಜ್ಞವು ಇನ್ನು ಹನ್ನೆರಡು ದಿನ ನಡೆಯುವುದೆಂದು ಋತ್ವಿಕ್ಕುಗಳು ಹೇಳಿದ್ದಾರೆ. ತಾವು ಈ ಹನ್ನೆರಡು ದಿನಗಳ ಕಾಲವೂ ಮಿಥಿಲೆಯಲ್ಲೇ ಇದ್ದು ನನ್ನನ್ನು ಅನುಗ್ರಹಿಸಬೇಕು," ಎಂದು ಪ್ರಾರ್ಥಿಸಿದನು.

ವಿಶ್ವಾಮಿತ್ರರು ಅದಕ್ಕೆ ತಮ್ಮ ಅಭ್ಯಂತರವಿಲ್ಲವೆಂದು ರಾಜನಿಗೆ ಆಶ್ವಾಸನೆ ಕೊಟ್ಟೊಡನೆ, ರಾಮಲಕ್ಷ್ಮಣರು, ಅಷ್ಟೊಂದು ದಿನ ಇಲ್ಲಿರಬೇಕೇ ಎಂದು ಆಶ್ಚರ್ಯಪಟ್ಟವರಂತೆ ಒಬ್ಬರನ್ನೊಬ್ಬರು ನೋಡಿದರು. ಜನಕ ಮಹಾರಾಜನು, ಅವರೆಲ್ಲರೂ ಅಲ್ಲಿ ವಿಶ್ರಾಂತಿ ತೆಗೆದುಕೊಳ್ಳಲು ತಕ್ಕ ಏರ್ಪಾಟು ಮಾಡಿ, ಅವರಿಗೆ ಹಣ್ಣು, ಹಾಲು, ಪಾನೀಯಗಳನ್ನೊದಗಿಸುವಂತೆ ಪರಿಚಾರಕರಿಗೆ ಹೇಳಿ, "ಪ್ರಯಾಣದಿಂದ ತುಂಬಾ ಬಳಲಿದ್ದೀರಿ, ಚೆನ್ನಾಗಿ ವಿಶ್ರಾಂತಿ ತೆಗೆದುಕೊಳ್ಳಿ, ನಾಳೆ ಬೆಳಗ್ಗೆ ಬಂದು ತಮ್ಮ ದರ್ಶನ ಮಾಡುತ್ತೇನೆ," ಎಂದು ಹೇಳಿ ವಿಶ್ವಾಮಿತ್ರರ ಅಪ್ಪಣೆ ಪಡೆದು ರಾಜ ಪುರೋಹಿತರೊಂದಿಗೆ, ಮಂತ್ರಿಗಳೊಂದಿಗೆ ಅರಮನೆಗೆ ಹೊರಟನು. ಅವನು ಹೋದ ಮೇಲೆ ರಾಮಲಕ್ಷ್ಮಣರು ಜನಕ ಮಹಾರಾಜನ ಭಕ್ತಿ ಶ್ರದ್ಧೆಗಳನ್ನು, ವಿನಯ ವಿಧೇಯತೆಗಳನ್ನು ಅವನ ಮುಖ ತೇಜಸ್ಸನ್ನು ಕೊಂಡಾಡಿದರು. ಗುರುಗಳ ಬಳಿ ಹೋಗಿ ಹಣ್ಣುಗಳನ್ನು ತಿಂದು, ವಿಶ್ರಮಿಸಿಕೊಳ್ಳಲು ಅವರ ಅನುಜ್ಞೆ ಕೋರಿ ತಮ್ಮ ಸ್ಥಳಗಳಿಗೆ ಹೋದರು.

ಆ ದಿನ ರಾತ್ರಿ ಹಾಯಾಗಿ ನಿದ್ರಿಸಿದರು. ಬೆಳಗಾಗುತ್ತಲೇ ಅವರ ಭವನದ ಬಾಗಿಲಿನಲ್ಲಿ ಮಂಗಳವಾದ್ಯಗಳು ಮೊಳಗಿದವು. ಬ್ರಾಹ್ಮಣರು ವೇದಗಳನ್ನು ಪಠಿಸಿದರು. ರಾಮ ಲಕ್ಷ್ಮಣರು ಎದ್ದು ಸ್ನಾನ ಮಾಡಿ, ಸಂಧ್ಯಾವಂದನೆಗಳನ್ನು ಮುಗಿಸಿಕೊಂಡು, ವಿಶ್ವಾಮಿತ್ರರನ್ನು ಕೂಡಿಕೊಂಡರು. ವಿಶ್ವಾಮಿತ್ರರು ಅವರಿಗೆ ಕುಡಿಯಲು ಹಾಲು ಕೊಟ್ಟರು, "ಮಕ್ಕಳೇ! ಜನಕನು ಬರುವ ಹೊತ್ತಾಯಿತು, ನೀವು ಸ್ವಲ್ಪ ಫಲಾಹಾರ ತೆಗೆದುಕೊಂಡು ಸಿದ್ಧವಾಗಿರಿ," ಎಂದು ಆಜ್ಞಾಪಿಸಿದರು. ರಾಮಲಕ್ಷ್ಮಣರು ಮತ್ತು ಋಷಿ ಕುಮಾರರು ಫಲಪಾನೀಯಗಳನ್ನು ಸೇವಿಸಿ, ಹಸ್ತಗಳನ್ನು ಶುದ್ಧಿಮಾಡಿಕೊಂಡು ಬಂದು ವಿಶ್ವಾಮಿತ್ರರ ಬಳಿ ಕುಳಿತರು. ಆ ವೇಳೆಗೆ ಜನಕ ಮಹರಾಜನು ಪುರೋಹಿತರ ಸಮೇತನಾಗಿ ಬಂದನು. ಅವನ ಪರಿವಾರದವರು ಶಂಖಗಳನ್ನೂದಿ ನವವಾದ್ಯಗಳನ್ನು ಬಾರಿಸಿಕೊಂಡು ಬಂದರು. ಗಂಧಾಕ್ಷತೆಯನ್ನು

ಕೈಯಲ್ಲಿಟ್ಟುಕೊಂಡು, ಜನಕ ಮಹಾರಾಜನು ಅರ್ಘ್ಯ, ಪಾದ್ಯಗಳನ್ನು ಹಿಡಿದ ಶತಾನಂದರು ಮತ್ತು ಪರಿವಾರದೊಂದಿಗೆ ಬಿಡದಿಯನ್ನು ಪ್ರವೇಶಿಸಿದರು.

ಜನಕನು ವಿಶ್ವಾಮಿತ್ರರಿಗೆ ನಮಸ್ಕರಿಸಿ ಮುನಿಯ ಪೀಠದ ಎದುರಿಗಿದ್ದ ಉನ್ನತಾಸನದ ಬಳಿ ನಿಂತನು. ವಿಶ್ವಾಮಿತ್ರರು ಕುಳಿತುಕೊಳ್ಳುವಂತೆ ಹೇಳಲು, ಆ ಉನ್ನತಾಸನದಲ್ಲಿ ಕುಳಿತನು. ರಾಮಲಕ್ಷ್ಮಣರು ವಿಶ್ವಾಮಿತ್ರರ ಬಲಭಾಗದಲ್ಲಿ ನೆಲದ ಮೇಲೆ ಹಾಸಿದ ರತ್ನಗಂಬಳಿಯ ಮೇಲೆ ಕುಳಿತರು. ಜನಕನು ಕೈ ಜೊಡಿಸಿ, "ಮಹಾಮುನಿ! ನಿಮಗೆ ಸದಾ ಸ್ವಾಗತ! ನಿಮ್ಮ ಆಜ್ಞೆ ಏನೆಂದು ತಿಳಿಸಿದರೆ ಅದರಂತೆ ನಡೆದುಕೊಳ್ಳಲು ನಾನು ಸಂಸಿದ್ಧ," ಎಂದನು. ವಿಶ್ವಾಮಿತ್ರರು ನಸುನಕ್ಕು, "ನಿನ್ನೆ ರಾತ್ರಿ ಸಮಯ ಇರಲಿಲ್ಲವಾದ್ದರಿಂದ ನಿನಗೆ ಎಲ್ಲಾ ವಿವರಗಳನ್ನೂ ಹೇಳಲು ಆಗಲಿಲ್ಲ. ನೀನು ಕೇಳವುದಾದರೆ, ಈ ರಾಮಲಕ್ಷ್ಮಣರ ವಿಷಯವನ್ನು ಈಗ ಹೇಳುತ್ತೇನೆ. ನಿನಗೆ ಸಮಯ ಇಲ್ಲದಿದ್ದರೆ ಇನ್ನೊಮ್ಮೆ ಹೇಳುತ್ತೇನೆ," ಎಂದರು. ಅದಕ್ಕೆ ರಾಜನು, "ಸ್ವಾಮೀ ತಮ್ಮ ಸಂಭಾಷಣೆಯ ಭಾಗ್ಯಕ್ಕಿಂತ ಮುಖ್ಯವಾದ ಕೆಲಸ ನನಗೆ ಬೇರೇನಿದೆ? ನಿಮ್ಮ ಸಂಭಾಷಣೆಯು ಸರ್ವ ತಪಸ್ಸಿನ ಸಾರ, ಸರ್ವ ಯಜ್ಞಗಳ ಫಲ, ಸಮಸ್ತ ಪುಣ್ಯಗಳ ಪುಂಜ. ಅದನ್ನು ಕೇಳಿ ಆನಂದಿಸುತ್ತೇನೆ, ಮಹಾ ಭಾಗ್ಯವೆಂದು ಭಾವಿಸುತ್ತೇನೆ," ಎಂದನು.

ಆಗ ವಿಶ್ವಾಮಿತ್ರರು, ತಾವು ದಶರಥನನ್ನು ಕಂಡಾಗಿನಿಂದ ಹಿಡಿದು ತಮ್ಮ ಯಾಗ ಸಂರಕ್ಷಣೆಯವರೆಗೂ ಜರುಗಿದ ವಿಷಯವನ್ನು ವಿಶದವಾಗಿ ಹೇಳಿ, ರಾಕ್ಷಸರೊಂದಿಗೆ ಹೋರಾಡಿದ ಆ ಬಾಲಕರ ಶಕ್ತಿ ಸಾಮರ್ಥ್ಯಗಳನ್ನು ಅದ್ಭುತವಾಗಿ ವರ್ಣಿಸಿದರು. ಮಧ್ಯೆ ಮಧ್ಯೆ ಆನಂದವನ್ನು ತಡೆಯಲಾರದೆ ಆನಂದಬಾಷ್ಪಗಳನ್ನು ಸುರಿಸುತ್ತಿದ್ದರು. ವಿಶ್ವಾಮಿತ್ರರ ಆಶ್ಚರ್ಯಾನಂದವನ್ನು ಮತ್ತು ಆ ಬಾಲಕರನ್ನು ನೋಡುತ್ತಾ ಮೈಮರೆತಿದ್ದ ಜನಕನು ಮಹಾಸಮಾಧಿಸ್ಥಿತಿಯಲ್ಲಿದ್ದವನಂತೆ ಕಾಣಿಸುತ್ತಿದ್ದನು. ಆ ಬಾಲಕರನ್ನು ದೇವತಾ ಮೂರ್ತಿಗಳೆಂದೇ ಅವನು ಭಾವಿಸಿದನು. ತನ್ನ ದೃಷ್ಟಿಯನ್ನು ಎಷ್ಟೆಷ್ಟು ಬದಲಾಯಿಸಿದರೂ ಮತ್ತೆ ಮತ್ತೆ ಕಣ್ಣುಗಳು ಆ ದಿವ್ಯ ಮೂರ್ತಿಗಳನ್ನೇ ನೋಡಲು ಬಯಸುತ್ತಿದ್ದವು. ಆ ಬಾಲಕರ ಮುಖ ಪದ್ಮಗಳ ಮೇಲೆ ಬ್ರಹ್ಮ ತೇಜಸ್ಸು ಬೆಳಗುತ್ತಿತ್ತು. ಜನಕನು ಆ ದಿವ್ಯ ಅನುಭವವನ್ನು ತನ್ನೊಳಗೇ ಅನುಭವಿಸುತ್ತಾ ಬಾಲಕರ ಬಗ್ಗೆ ವಿನಯ ವಿಧೇಯತೆಗಳಿಂದ ನಡೆದುಕೊಳ್ಳುತ್ತಿದ್ದನೇ ವಿನಾ ತಾನು ಚಕ್ರವರ್ತಿಯೆಂದೂ ಅವರು ಬೇರೊಬ್ಬ ರಾಜನ ಕುಮಾರರೆಂದೂ ಭಾವಿಸಲಿಲ್ಲ. ಅವರು ಸಾಕ್ಷಾತ್ ದೇವಲೋಕದಿಂದ ಭೂಮಿಗಿಳಿದ ದಿವ್ಯ ಮೂರ್ತಿಗಳೆಂದೇ ಒಳಗೊಳಗೆ ಭಾವಿಸಿದನು. ರಾಮಲಕ್ಷ್ಮಣರಿಂದ ವಿಶ್ವಾಮಿತ್ರರು ಮಾಡಿದ ಅವರ ಪರಾಕ್ರಮದ ವರ್ಣನೆಯಿಂದ ಅವನ ವಿಶ್ವಾಸ ಮತ್ತಷ್ಟು ಬಲಗೊಂ

ಡಿತು. ಮಹಾ ತಪಶ್ಶಕ್ತಿಸಂಪನ್ನರಾದ ವಿಶ್ವಾಮಿತ್ರರ ಕೈಯಲ್ಲಿ ಆಗದಿದ್ದ ಯಜ್ಞ ಸಂರಕ್ಷಣೆಯು ಈ ಎಳೆಯ ಬಾಲಕರಿಂದ ಸಾಧ್ಯವಾಯಿತೆಂದರೆ ಇವರು ಸಾಮಾನ್ಯ ಮಾನವ ಮಾತ್ರರಲ್ಲವೆನ್ನುವುದರಲ್ಲಿ ಸಂಶಯವೇ ಇಲ್ಲ ಎನಿಸಿತು ಅವನಿಗೆ.

ಮುಂದುವರಿದು, ವಿಶ್ವಾಮಿತ್ರರು, ತಾವು ಮಿಥಿಲಾಪುರಕ್ಕೆ ಹೊರಟಾಗಿನಿಂದ ಎಷ್ಟು ಉಲ್ಲಾಸದಿಂದ ಪ್ರಯಾಣ ಸಾಗಿತೆನ್ನುವುದನ್ನೂ, ಗೌತಮ ಮಹರ್ಷಿಯ ಆಶ್ರಮ ದಲ್ಲಿ ಅಹಲ್ಯೆಯನ್ನು ಪುನೀತಳನ್ನಾಗಿ ಮಾಡಿದುದನ್ನು ಅತ್ಯಂತ ಆನಂದದಿಂದ ಹೇಳಿದ್ದನ್ನು ಕೇಳಿ ಶತಾನಂದರು ಪರಮಾಶ್ಚರ್ಯದಿಂದ, "ಏನು! ನನ್ನ ತಾಯಿಯ ಶಾಪ ವಿಮೋಚನೆಯಾಯಿತೇ? ಈ ಮಹನೀಯರು ನನ್ನ ತಾಯಿಯನ್ನು ಪುನೀತ ಗೊಳಿಸಿ ನನ್ನ ತಂದೆಯೊಡನೆ ಸೇರಿಸಿದರೆ? ಆಹಾ ನಿಜವಾಗಿಯೂ ಇವರು ಸಾಕ್ಷಾತ್ ದೈವಸ್ವರೂಪರೆನ್ನುವುದರಲ್ಲಿ ಸಂದೇಹವಿಲ್ಲ," ಎಂದು ಆನಂದಬಾಷ್ಪ ಗಳನ್ನು ಸುರಿಸುತ್ತಾ ಬಾಯಲ್ಲಿ ಮಾತು ಹೊರಡದೆ ಸ್ತಂಭೀಭೂತರಾದರು. ಶತಾ ನಂದರನ್ನು ನೋಡಿ ವಿಶ್ವಾಮಿತ್ರರು, "ಮಗೂ! ಇಷ್ಟಕ್ಕೇ ದಿಗ್ಭ್ರಾಂತನಾಗಬೇಡ ಇನ್ನು ಮುಂದೆ ಜರುಗುವ ಅದ್ಭುತ ಚರ್ಯೆಗಳನ್ನು ನೀನೇ ನೋಡುವೆಯಂತೆ, ಅತಿ ಶೀಘ್ರದಲ್ಲಿ ಅನುಭವಿಸಿ ಆನಂದಿಸುವಿಯಂತೆ. ನಿನ್ನ ತಂದೆ ತಾಯಿಗಳು ಸಹ ಇಂದೋ ನಾಳೆಯೋ ಮಿಥಿಲಾಪುರಕ್ಕೆ ಬಂದೇ ಬರುವರು. ರಾಮಲಕ್ಷ್ಮಣರ ಅದ್ಭುತ ಚರ್ಯೆಗಳನ್ನು ಅವರಿಂದಲೇ ಕೇಳುವೆಯಂತೆ," ಎಂದು ಸಮಾಧಾನ ಗೊಳಿಸಿದರು.

ಅಷ್ಟರಲ್ಲಿ, ಜನಕ ಮಹಾರಾಜನು, "ಸ್ವಾಮೀ! ಇಂಥ ಪವಿತ್ರ ಪುತ್ರರನ್ನು ಪಡೆದ ತಂದೆ ತಾಯಿಗಳು ಅದೆಷ್ಟು ಅದೃಷ್ಟವಂತರೋ! ಅನಿರೀಕ್ಷಿತವಾಗಿ ಅವರು ನನ್ನ ಮನೆಗೆ ಬಂದಿರುವುದು ನನ್ನ ಭಾಗ್ಯ, ತಮ್ಮ ಅನುಗ್ರಹ," ಎಂದು ರಾಮ ಲಕ್ಷ್ಮಣರ ಕಡೆ ತಿರುಗಿ, "ಮಕ್ಕಳೇ! ನಿಮಗೆ ವಸತಿ ವ್ಯವಸ್ಥೆ ಸರಿಯಾಗಿಲ್ಲದಿದ್ದರೆ ನನ್ನನ್ನು ಕ್ಷಮಿಸಿ. ನೀವು ಇಚ್ಛಿಸುವ ವಸತಿ ಏರ್ಪಡಿಸಲು ನಾನು ಸಿದ್ಧನಾಗಿದ್ದೇನೆ. ಅಲ್ಲದೆ, ನಗರವನ್ನು ನೋಡುವ ಅಪೇಕ್ಷೆಯಿದ್ದರೆ, ತಕ್ಕ ಏರ್ಪಾಟು ಮಾಡುತ್ತೇನೆ. ಹೊಸಬನೆಂದು ಸಂಕೋಚ ಪಡದೆ, ಮನ ಬಿಚ್ಚಿ ನಿಮ್ಮ ಅಪೇಕ್ಷೆಯನ್ನು ತಿಳಿಸಿದರೆ ನನಗೆ ಸಂತೋಷವಾಗುವುದು," ಎಂದು ಪ್ರೇಮದಿಂದ ಆಡಿದ ಜನಕ ಮಹಾ ರಾಜನ ಮಾತುಗಳಿಗೆ ರಾಮಚಂದ್ರನು ಅತ್ಯಂತ ಗೌರವ ಭಾವದ ಪ್ರತಿಕ್ರಿಯೆಯನ್ನು ಸೂಚಿಸುತ್ತಾ, "ಮಹಾರಾಜಾ! ನಾವು ಹುಡುಗರು. ನಮ್ಮ ಸೌಕರ್ಯಗಳಿಗೇನೂ ಕೊರತೆಯಿಲ್ಲ, ಆನಂದವಾಗಿದ್ದೇವೆ. ತಾವು ನಮಗಾಗಿ ಪ್ರತ್ಯೇಕವಾದ ಏರ್ಪಾಟು ಮಾಡುವ ಅವಶ್ಯಕತೆ ಇಲ್ಲ. ತಮಗೆ ನಮ್ಮ ಮೇಲೆ ಅಷ್ಟೊಂದು ವಾತ್ಸಲ್ಯವಿದ್ದರೆ ನಮ್ಮ ಒಂದು ಕೋರಿಕೆಯನ್ನು ನೆರವೇರಿಸುತ್ತೀರೆಂದು ಅತ್ಯಂತ ಆಸೆಯಿಂದ

ಕಾದುಕೊಂಡಿದ್ದೇವೆ," ಎಂದು ಪೂರ್ತಿಯಾಗಿ ವಿವರಿಸಲು, ವಿಶ್ವಾಮಿತ್ರರ ಕಡೆ ನೋಡಿ ಸುಮ್ಮನಾದನು.

ವಿಶ್ವಾಮಿತ್ರರು ಅದನ್ನು ಗ್ರಹಿಸಿ, "ಜನಕಾ! ನನ್ನ ಯಜ್ಞವು ಪೂರ್ತಿಯಾದೊಡ ನೆಯೇ ರಾಮಲಕ್ಷ್ಮಣರು, 'ನಮ್ಮ ಕಾರ್ಯ ಮುಗಿಯಿತು. ನಾವು ಅಯೋಧ್ಯೆಗೆ ಹೊರಡುತ್ತೇವೆ. ಅಪ್ಪಣೆ ಕೊಡಿ,' ಎಂದು ಕೇಳಿದರು. ಆ ವೇಳೆಗೆ ನಿನ್ನಿಂದ ಯಜ್ಞಕ್ಕೆ ಆಹ್ವಾನ ಬಂದಿತ್ತಾದ್ದರಿಂದ, ನಾನು ಅವರಿಗೆ ಮಿಥಿಲಾಪುರಕ್ಕೆ ಬನ್ನಿ ಎಂದು ಕರೆದೆ. ಅದಕ್ಕೆ ರಾಮನು, 'ಯಜ್ಞ ಸಂರಕ್ಷಣೆಗೆ ಮಾತ್ರವೇ ಹೊರತು, ಮಿಕ್ಕ ಕಡೆ ಹೋಗಲು ತಂದೆಯ ಆಜ್ಞೆಯನ್ನು ನಾವು ಪಡೆಯಲಿಲ್ಲವಲ್ಲವೆ?' ಎಂದನು. ಆಗ ನಾನು, ಇವರಿಗೆ ಅತ್ಯಂತ ಪ್ರಿಯವಾದ ಅಸ್ತ್ರಗಳ ವಿಷಯವನ್ನು ಹೇಳುತ್ತಾ ನಿನ್ನ ಮನೆಯಲ್ಲಿ ಒಂದು ಧನುಸ್ಸು ಇದೆಯೆಂದೂ ಅದನ್ನು ನೀವು ಅವಶ್ಯಕವಾಗಿ ನೋಡಬೇಕಾದುದೆಂದೂ ಆ ಧನುಸ್ಸಿನ ಮಹತ್ವವನ್ನೂ ಹೇಳಿದೆ. ಅದನ್ನು ನೋಡಲೇಬೇಕೆನ್ನುವ ಆಕಾಂಕ್ಷೆಯಿಂದ ಇವರು ನನ್ನೊಂದಿಗೆ ಬಂದಿ ದ್ದಾರೆ. ಇವರು ನಗರವನ್ನು ನೋಡುವುದಕ್ಕಾಗಲೀ ಯಾವ ವಿಹಾರ ವಿನೋದಗಳ ನ್ನಾಗಲೀ ಅನುಕೂಲಗಳನ್ನಾಗಲೀ ಅಪೇಕ್ಷಿಸುವುದಿಲ್ಲ. ಅಸ್ತ್ರಗಳೆಂದರೆ ಇವರಿಗೆ ಬಹಳ ಪ್ರೀತಿ ...!" ಎಂದು ಇನ್ನೂ ಏನೋ ಹೇಳುತ್ತಿದ್ದುದನ್ನು ಜನಕನು ಕಿವಿಗೆ ಹಾಕಿಕೊಳ್ಳದೆ, "ಹಾಗಾದರೆ, ತಕ್ಷಣವೇ ದಿವ್ಯಾಸ್ತ್ರವನ್ನು ಯಜ್ಞಶಾಲೆಗೆ ತರಿಸುವ ಏರ್ಪಾಟು ಮಾಡುತ್ತೇನೆ," ಎಂದು ಹೇಳಿ, ಶತಾನಂದರಿಗೆ, "ಅದಕ್ಕೆ ಒಳ್ಳೆಯ ಮೂಹೂರ್ತವೊಂದನ್ನು ನೋಡಿ ಹೇಳಿ," ಎಂದನು.

ಶತಾನಂದರು ಆಲೋಚಿಸುತ್ತಿರುವಾಗ, ರಾಮಚಂದ್ರನು, "ಮಹಾರಾಜಾ, ಆ ಧನುಸ್ಸು ತಮ್ಮಲ್ಲಿ ಹೇಗೆ ಬಂತು? ಆ ವೃತ್ತಾಂತವನ್ನು ಹೇಳಿದರೆ ಕೇಳಿ ಆನಂದಿಸು ತ್ತೇನೆ," ಎಂದು ಪ್ರಾರ್ಥಿಸಿದನು. ಅದಕ್ಕೆ ಜನಕನು, "ಮಗೂ! ನಮ್ಮ ಪೂರ್ವಿಕನಾದ ನಿಮಿ ಚಕ್ರವರ್ತಿಯ ನಂತರ ಆರನೆಯ ತಲೆಮಾರಿನಲ್ಲಿ, ದೇವರಾತನೆನ್ನುವವನು ರಾಜ್ಯವಾಳುತ್ತಿದ್ದನು. ದೇವತೆಗಳು ಈ ಶಿವಧನುಸ್ಸನ್ನು ಅವನಲ್ಲಿ ನಿಕ್ಷೇಪವಾಗಿರಿಸಿ ದರು. ಆಗಿನಿಂದಲೂ ಅದು ನಮ್ಮ ಅರಮನೆಯಲ್ಲೇ ಇದೆ. ಇದು ದೇವತೆಗಳ ವರಪ್ರಸಾದ. ಇದು ಸಾಮಾನ್ಯ ಅಸ್ತ್ರವಲ್ಲ ಎಂದು ಮಾತ್ರ ಹೇಳಬಲ್ಲೆ. ಇದು ಹಲವು ಸಾವಿರ ಮಣಗಳಷ್ಟು ತೂಕವಿದೆ. ಇದುವರೆಗೂ ಇದನ್ನು ಎತ್ತಿದವರು ಯಾರೂ ಇಲ್ಲ. ಇದನ್ನು ಎತ್ತಿ ನಿಲ್ಲಿಸಬಲ್ಲ ಶೂರರು ಯಾರಾದರೂ ಇರುವರೋ ಎಂದು ಪರೀಕ್ಷಿಸಲು ಅನೇಕ ಸಾರಿ ಪ್ರದರ್ಶಿಸಿ ನೋಡಿದೆ. ಆದರೆ, ಬಂದ ಎಲ್ಲ ರಾಜರೂ ರಾಜಕುಮಾರರೂ ವಿಫಲರಾಗಿ ಹಿಂತಿರುಗಿದರು. ಇದನ್ನು ಎತ್ತಿ ಬಗ್ಗಿಸುವುದಿರಲಿ, ನಿಲ್ಲಿಸುವುದಿರಲಿ, ಕದಲಿಸಲೂ ಸಹ ಆಗದೆ ಹೋಯಿತು. ಒಂದು

ದಿನ ನಾನು ಯಜ್ಞ ಮಾಡುವ ಉದ್ದೇಶದಿಂದ ಭೂಮಿಯನ್ನು ಉಳುತ್ತಿರುವಾಗ ಭೂಮಿಯಲ್ಲಿ ಒಂದು ಪಾತ್ರೆಯು ಕಣಿಸಿತು. ಅದನ್ನು ತೆಗೆದು ನೋಡಿದಾಗ ಅದರಲ್ಲಿ ಒಂದು ಸುಂದರವಾದ ಹೆಣ್ಣು ಶಿಶುವಿತ್ತು. ಆ ಶಿಶು ಭೂಮಿಯಲ್ಲಿ ನೇಗಿಲು ಹೊಡೆಯುವಾಗ ಸಿಕ್ಕಿತಾದ್ದರಿಂದ ಆಕೆಗೆ ಸೀತೆ ಎಂದು ಹೆಸರಿಟ್ಟು ಬಹಳ ಮುದ್ದಿನಿಂದ ಸಾಕುತ್ತಿದ್ದೆವು. ಸೀತೆಯು ಬಹಳ ಶಕ್ತಿವಂತೆ. ಒಂದು ದಿನ ಅವಳು ತನ್ನ ಪರಿಚಾರಿಕೆಯರೊಂದಿಗೆ ಆಟವಾಡುತ್ತಿದ್ದಾಗ, ಅವಳ ಆಟದ ಸಾಮಾನೊಂದು ಈ ಧನುಸ್ಸಿನ ಪೆಟ್ಟಿಗೆಯ ಕೆಳಗೆ ಹೋಯಿತು. ಅದನ್ನು ಹೊರಗೆ ತೆಗೆಯಲು ದಾದಿಯರು ಅನೇಕ ಬಗೆಯಾಗಿ ಪ್ರಯತ್ನಿಸಿದರು. ಅದರೆ, ಅದು ಇನ್ನಷ್ಟು ಒಳಗೆ ಹೋಗುತ್ತಿತ್ತೇ ವಿನಾ ಹೊರಗೆ ಬರಲಿಲ್ಲ. ಆಗ, ಸೀತೆಯು ಮಗುಳ್ನಕ್ಕು, ದಾದಿಯರನ್ನು ಹಾಸ್ಯ ಮಾಡುತ್ತಾ ಒಂದೇ ಕೈಯಿಂದ ಆ ಪೆಟ್ಟಿಗೆಯನ್ನು ಪಕ್ಕಕ್ಕೆ ಸರಿಸಿ, ಕೆಳಗೆ ಬಿದ್ದಿದ್ದ ಆಟದ ಸಾಮಾನನ್ನು ಸರಾಗವಾಗಿ ಕೈಗೆತ್ತಿಕೊಂಡಳು. ಇದನ್ನು ಕಂಡ ದಾದಿಯರು ಆಶ್ಚರ್ಯಪಟ್ಟು, ರಾಣಿಯರ ಮೂಲಕ ಈ ಸುದ್ದಿಯನ್ನು ನನಗೆ ಮುಟ್ಟಿಸಿದರು.

ಅವಳ ಶಕ್ತಿಗೆ ಸರಿಸಮಾನನಾದವನಿಗೇ ಅವಳನ್ನು ಕೊಟ್ಟು ಲಗ್ನ ಮಾಡಬೇಕೆಂದು ಅಂದೇ ನಾನು ನಿಶ್ಚಯಿಸಿದೆ. ಅವಳ ಸೌಂದರ್ಯವನ್ನು ನೋಡಿ ಅವಳನ್ನು ಮದುವೆಯಾಗಬೇಕೆಂಬ ಆಸೆಯಿಂದ ಎಷ್ಟೋ ಸಾವಿರ ಮಂದಿ ರಾಜಕುಮಾರರು ಬಂದು, ಧನುಸ್ಸನ್ನು ಎತ್ತಲಾರದೆ ನಾಚಿಕೆಯಿಂದ ಹಿಂತಿರುಗುತ್ತಿದ್ದಾರೆ. ಧನುಸ್ಸನ್ನು ಕದಲಿಸಲಾರದೆ ಅಪಜಯ ಹೊಂದಿ, ನಿರಾಶರಾಗಿ ಹಿಂದಿರುಗಿದ ಇಂಥ ಅಲ್ಪ ಪರಾಕ್ರಮ ಸಂಪನ್ನರು ಒಟ್ಟಾಗಿ ಸೇರಿ ಮಿಥಿಲಾಪುರಕ್ಕೆ ಮುತ್ತಿಗೆ ಹಾಕಿದರು. ಆ ನಿರಾಶಾಪರರ ಮುತ್ತಿಗೆ ಒಂದು ವರ್ಷಕಾಲ ನಡೆಯಿತು. ಅದರಿಂದ ನನ್ನ ಸೈನ್ಯ, ಸಾಮಗ್ರಿ, ಸರ್ವಸ್ವವೂ ನಾಶವಾಯಿತು. ಆಗ ನಾನು ಹೆದರಿ ಬೇರೆ ಮಾರ್ಗವಿಲ್ಲದೆ ದೇವತಾನುಗ್ರಹಕ್ಕಾಗಿ ತಪಸ್ಸು ಮಾಡಿದೆ. ದೇವತೆಗಳು ಸಂತುಷ್ಟರಾಗಿ ನನ್ನನ್ನು ಅನುಗ್ರಹಿಸಿ ಚತುರಂಗ ಬಲವನ್ನು ಪ್ರಸಾದಿಸಿ ನನ್ನನ್ನು ಬೆಂಬಲಿಸಿ ದುರ್ಮಾರ್ಗಿಗಳಾದ ಅಲ್ಪವೀರರನ್ನು ಹೊಡೆದೋಡಿಸಿದರು. ಹೀಗೆ, ಅಲ್ಪರಾದ ರಾಜರು ನನ್ನನ್ನು ಅನೇಕ ವಿಧವಾಗಿ ಹಿಂಸಿಸಿದರೂ ಈ ಪವಿತ್ರವಾದ ಧನುಸ್ಸು ನನ್ನನ್ನು ಕಣ್ಣು ರೆಪ್ಪೆಯಂತೆ ಕಾಪಾಡಿತು. ಧನುಸ್ಸಿನ ಮಹತ್ತರ ಶಕ್ತಿಗಳು ವರ್ಣಿಸಲಸಾಧ್ಯವಾದಷ್ಟಿದೆ.

ರಾಮಚಂದ್ರಾ! ನಿನ್ನ ಅಭೀಷ್ಟವನ್ನು ನಾನು ಇಲ್ಲವೆನ್ನಲಾರೆ. ನೀನು ಒಪ್ಪುವುದಾದರೆ ನಾಳೆ ಬೆಳಗಾಗುತ್ತಲೇ ಸುಮುಹೂರ್ತದಲ್ಲಿ ಧನುಸ್ಸನ್ನು ಯಜ್ಞಶಾಲೆಗೆ ತರಿಸುವ ಪ್ರಯತ್ನವನ್ನು ಮಾಡುವುದೇ ಅಲ್ಲದೆ, ಅದನ್ನೆತ್ತಿ ನಿಲ್ಲಿಸುವವರು ಯಾರಾದರು ಇದ್ದರೆ ಮುಂದೆ ಬರಬಹುದೆಂದೂ ಪ್ರಕಟಪಡಿಸುತ್ತೇನೆ, ಆಗಬಹುದೇ?" ಎಂದು

ಕೇಳಿದನು. ರಾಮಲಕ್ಷ್ಮಣರು ಒಬ್ಬರನ್ನೊಬ್ಬರು ನೋಡಿ, ವಿಶ್ವಾಮಿತ್ರರ ಆಜ್ಞೆಗಾಗಿ ಅವರನ್ನು ನೋಡಿದರು. ವಿಶ್ವಾಮಿತ್ರರು ಬಾಲಕರ ಶಕ್ತಿಸಾಮರ್ಥ್ಯಗಳನ್ನು ಚೆನ್ನಾಗಿ ತಿಳಿದವರಾದ್ದರಿಂದ ರಾಜನು ಹೇಳಿದುದಕ್ಕೆ ತಮ್ಮ ಅಭ್ಯಂತರವೇನೂ ಇಲ್ಲವೆಂದು ತಿಳಿಸಿದರು. ನಂತರ, ಆ ಧನುಸ್ಸನ್ನು ಬಗ್ಗಿಸಿದವರಿಗೆ ಪೂರ್ವದ ನಿಬಂಧನೆಯನ್ನನು ಸರಿಸಿ ತನ್ನ ಪ್ರೇಮದ ಪುತ್ರಿಯಾದ ಸೀತೆಯನ್ನು ಕೊಟ್ಟು ವಿವಾಹ ಮಾಡುವುದಾಗಿಯೂ ಜನಕ ಮಹಾರಾಜನು ಹೇಳಿದನು. ವಿಶ್ವಾಮಿತ್ರರು ಅದನ್ನು ಅಂಗೀಕರಿಸಿದರು. ಜನಕನು ವಿಶ್ವಾಮಿತ್ರರ ಅಪ್ಪಣೆಯನ್ನು ಪಡೆದು ರಾಜಭವನಕ್ಕೆ ಹೋಗಿ, ಧನುಸ್ಸನ್ನು ಯಜ್ಞಶಾಲೆಗೆ ತರಿಸುವ ಏರ್ಪಾಟು ಮಾಡಿದನು.

ಯಜ್ಞಶಾಲೆಯಲ್ಲಿ ಧನುಸ್ಸನ್ನು ಬಗ್ಗಿಸುವ ವಿಷಯವನ್ನು ಕೂಡ ಪ್ರಚುರ ಪಡಿಸಿ, ಉದ್ದೇಶವನ್ನು ಪ್ರಸಿದ್ಧ ಪಡಿಸಿ, ಕೆಲವು ರಾಜರುಗಳಿಗೆ ವರ್ತಮಾನವನ್ನು ಕಳಿಸಿದನು. ಅಧಿಕ ದೇಹ ಬಲವುಳ್ಳ ಅನೇಕ ಮಂದಿ ಬಲಾಢ್ಯರನ್ನು ಕರೆಸಿ, ಎಂಟು ಕಬ್ಬಿಣದ ಚಕ್ರಗಳಿಂದ ಕೂಡಿದ ಅಲಂಕೃತವಾದ ಧನುಸ್ಸಿನ ಗಾಡಿಯನ್ನು ಹೊರ ತರುವ ಪ್ರಯತ್ನ ಮಾಡಿದನು. ಆದರೆ ಅವರು ಅದನ್ನು ಕದಲಿಸಲಾರದಾದರು. ಮತ್ತಷ್ಟು ಜನ ಬಲಾಢ್ಯರನ್ನು ಕರೆಸಿ ಕಬ್ಬಿಣದ ಸರಪಳಿಯನ್ನು ಕಟ್ಟಿ ಎಳೆಸಿ ಬಹು ಜಾಗ್ರತೆಯಿಂದ ಹೊರತಂದರು. ಸ್ವಸ್ತಿವಾಚನದೊಂದಿಗೆ ಅದನ್ನು ಯಜ್ಞ ಶಾಲೆಗೆ ಬರಮಾಡಿಕೊಂಡರು.

ಬೆಳಗಾಯಿತು, ನವ ಧ್ವನಿಗಳು ಮುಗಿಲು ಮುಟ್ಟಿದವು. ಶಂಖಗಳನ್ನೂದಿದರು. ಮಂಗಳವಾದ್ಯಗಳನ್ನು ಬಾರಿಸಿದರು. ಜನಕನು ಪುರೋಹಿತರೊಂದಿಗೆ ಪೂಜಾ ದ್ರವ್ಯಗಳನ್ನು ತೆಗೆದುಕೊಂಡು ಯಜ್ಞಶಾಲೆಗೆ ಬಂದನು. ಅಷ್ಟು ಹೊತ್ತಿಗಾಗಲೇ ಅನೇಕಮಂದಿ ರಾಜರೂ ಮಂತ್ರಿಗಳೂ ಋಷಿಗಳೂ ಪಂಡಿತರೂ ಮಂಟಪದಲ್ಲಿ ಬಂದು ಸೇರಿದ್ದರು. ಮಹಾರಾಜನು ಯಜ್ಞ ಮಂಟಪವನ್ನು ಸೇರುತ್ತಲೇ ಎಲ್ಲರೂ ಎದ್ದು ನಿಂತು, ಪ್ರಭು ಮರ್ಯಾದೆಯನ್ನು ಪಾಲಿಸಿದರು. ಬ್ರಾಹ್ಮಣರು ವೇದ ಪಾರಾಯಣ ಮಾಡಿದರು. ಮುಗಿಲು ಮುಟ್ಟುವಂತೆ ಏಕಕಂಠದಿಂದ ಅವರು ಮಂತ್ರಪುಷ್ಪಗಳನ್ನು ಹೇಳುತ್ತಿರಲು ಪ್ರೇಕ್ಷಕರು ಮೈಮರೆತು ಆನಂದಮಯರಾಗಿ ಕಣ್ಣು ರೆಪ್ಪೆಗಳನ್ನಾಡಿಸದೆ ನೋಡುತ್ತಿದ್ದರು.

ಜನಕನು ಧನುಸ್ಸಿಗೆ ಪ್ರದಕ್ಷಿಣೆ ಮಾಡಿ, ಮಂತ್ರಪುಷ್ಪಗಳನ್ನರ್ಪಿಸಿ, ನಮಸ್ಕರಿಸಿ, ಸಭೆಯ ಎದುರಿಗೆ ನಿಂತು ಹೀಗೆ ಹೇಳಿದನು, "ಮಹಾ ಋಷಿಗಳಿಗೆ ನನ್ನ ನಮಸ್ಕಾರ, ಸಭಾಸದರಿಗೆ ನನ್ನ ಧನ್ಯವಾದಗಳು. ಅನೇಕ ಸಂವತ್ಸರಗಳಿಂದ ನನ್ನ ವಂಶೀಯರೂ ಇತರ ರಾಜರೂ ದೈವ ಯಂತ್ರವಾದ ಈ ಧನುಸ್ಸನ್ನು ಗೌರವ ಭಾವದಿಂದ

ಪೂಜಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯವೆ. ಅಲ್ಲದೆ, ಸುರಾಸುರರಾಗಲೀ ಯಕ್ಷ, ರಾಕ್ಷಸ, ಗರುಡ, ಗಂಧರ್ವ, ಕಿನ್ನರ, ಮಹೋರಗರಾಗಲೀ ಇದನ್ನು ಬಗ್ಗಿಸಲಾರದೆ ಅವಮಾನಿತರಾಗಿ ಹಿಂತಿರುಗಿ ಹೋಗಿರುವುದೂ ಅನೇಕರಿಗೆ ತಿಳಿದ ವಿಷಯವೇ. ಈ ದಿನ ಅದನ್ನು ಅಂಥ ಪರೀಕ್ಷೆಗಾಗಿ ಪುನಃ ಇಲ್ಲಿಗೆ ತರಿಸಿದ್ದೇನೆ. ಈ ಶಿವಧನುಸ್ಸು ಈಗ ನಿಮ್ಮ ಮುಂದಿದೆ. ನಿಮ್ಮಲ್ಲಿ ಯಾರಾದರೂ ಸರಿಯೆ, ಇದನ್ನು ಎತ್ತಿ ನಿಲ್ಲಿಸುವವರಾಗಲೀ ಇದನ್ನು ಬಗ್ಗಿಸುವರಾಗಲೀ ಬಿಲ್ಲಿಗೆ ದಾರವನ್ನು ಕಟ್ಟುವವರಾಗಲೀ ಇದರಲ್ಲಿ ಬಾಣವನ್ನು ಹೂಡುವವರಾಗಲೀ ಇಲ್ಲವೆ ಇದರ ಭಾರ ವನ್ನು ಪರೀಕ್ಷಿಸುವರಾಗಲೀ ಇದ್ದಲ್ಲಿ, ನಿರ್ಭಯವಾಗಿ ಮುಂದೆ ಬರಬಹುದು," ಎಂದು ಹೇಳಿ ನಮಸ್ಕರಿಸಿ, ಹೋಗಿ ಸಿಂಹಾಸನದ ಮೇಲೆ ಕುಳಿತನು. ವಿಶ್ವಾಮಿತ್ರರು ನಸುನಗುತ್ತಾ ರಾಮನ ಕಡೆ ನೋಡಿದರು. ಅವರ ಇಂಗಿತವನ್ನರಿತು, ರಾಮನು ಥಟ್ಟನೆ ಎದ್ದು ಧನುಸ್ಸಿನ ಕಡೆ ನಡೆದು, ಅದರ ಪೆಟ್ಟಿಗೆಯ ಕಬ್ಬಿಣದ ಮುಚ್ಚಳವನ್ನು ಎಡಗೈಯಲ್ಲಿ ಎತ್ತಿ ಬಲಗೈಯಿಂದ ಒಳಗಿದ್ದ ಧನುಸ್ಸನ್ನು ಸರಾಗವಾಗಿ ಹೊರತೆಗೆದು ಕೈಯಲ್ಲಿ ಹಿಡಿದು, ಅದನ್ನು ಮೇಲೆ ಕೆಳಗೆ ಪರೀಕ್ಷಿಸಿ ನೋಡಿದನು.

ಅದನ್ನು ನೋಡುತ್ತಿದ್ದ ಮಹರ್ಷಿಗಳು, ರಾಜರುಗಳು, ಸಾವಿರಾರು ಮಹಾಜನ ಗಳು ಆಶ್ಚರ್ಯಪರವಶರಾಗಿ ಮುಗಿಲು ಮುಟ್ಟುವಂತೆ ಕರತಾಡನ ಮಾಡಿದರು. ರಾಮನು ಅನಾಯಾಸವಾಗಿ ಆ ಧನುಸ್ಸಿಗೆ ಹೆದೆ ಏರಿಸಿ, ಬಾಣವನ್ನು ಹೂಡಿದನು. ಬಾಣವನ್ನು ಹೊಡೆಯಲು ಹೆದೆಯನ್ನು ಆಕರ್ಣಾಂತವಾಗಿ ಎಳೆದೊಡನೆ, ಧನುಸ್ಸು ಚಟಚಟನೆ ಮುರಿದು ಕೆಳಗೆ ಬಿದ್ದಿತು. ಅದು ಬೀಳುವಾಗ ಪರ್ವತ ಉರುಳಿ ಬಿದ್ದಿತೇನೋ ಎನ್ನುವಂತೆ ಪ್ರಳಯ ಶಬ್ದಮಾಡಿ ಸಭಾಸದಸ್ಯರನ್ನು ಭಯಭ್ರಾಂತ ರನ್ನಾಗಿ ಮಾಡಿತು. ಕೆಲವರು ಮೂರ್ಛೆ ಹೋದರು. ಕೆಲವರು ಭೀತಿಯಿಂದ ಅರಚಿದರು. ಕೆಲವರು ಓಡಿದರು. ಋಷಿಗಳು ದೈವವನ್ನು ನೆನೆದರು. ಹೆಚ್ಚೇನು, ಆ ಮಹಾಸಭೆಯಲ್ಲಿ ಜನಕ, ವಿಶ್ವಾಮಿತ್ರ, ರಾಮ ಲಕ್ಷ್ಮಣರನ್ನು ಬಿಟ್ಟು ಮಿಕ್ಕವರೆಲ್ಲರೂ ಭಯಗೊಂಡರು.

ಜನಕನು ಎದ್ದು ವಿಶ್ವಾಮಿತ್ರರಿಗೆ ನಮಸ್ಕರಿಸಿ, "ಸ್ವಾಮೀ! ಈ ಭೂಲೋಕದಲ್ಲಿ ರಾಮನನ್ನು ಮೀರಿಸುವ ಬಲಶಾಲಿ ಬೇರೊಬ್ಬನಿಲ್ಲ. ಇಂಥ ಬಲಶಾಲಿಯು ಭೂಲೋಕದಲ್ಲಿಲ್ಲ ಎಂದು ತಿಳಿದಿದ್ದ ನನಗೆ ಇದರಿಂದ ಪರಮಾನಂದವಾಗಿದೆ. ಈ ಧನುಸ್ಸನ್ನು ಬಗ್ಗಿಸಿದವರಿಗೆ ನನ್ನ ಪ್ರೇಮ ಪುತ್ರಿಯನ್ನು ಕೊಟ್ಟು ವಿವಾಹ ಮಾಡುತ್ತೇನೆಂದು ಹೇಳಿದ್ದ ಮಾತನ್ನು ನಡೆಸಲು ತಮ್ಮ ಅಪ್ಪಣೆಯಾಗಬೇಕು," ಎಂದು ಪ್ರಾರ್ಥಿಸಿದನು. ವಿಶ್ವಾಮಿತ್ರರು, "ಜನಕಾ! ಈ ವಾರ್ತೆಯನ್ನು ದಶರಥ ಮಹಾರಾಜನಿಗೆ ತಿಳಿಸಿ, ಅವರನ್ನು ಬರಮಾಡಿಕೊಂಡು ಮಂಗಳ ಕಾರ್ಯವನ್ನು

ನಡೆಸುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಆದ್ದರಿಂದ, ಅದಕ್ಕೆ ತಕ್ಕ ಪ್ರಯತ್ನಗಳನ್ನು ಮಾಡು. ಪಿತೃ ಆಜ್ಞೆಯನ್ನು ರಾಮನು ಪ್ರಾಣಸಮಾನವಾಗಿ ಭಾವಿಸುವುದರಿಂದ, ತಂದೆಯ ಅನುಮತಿಯಿಲ್ಲದೆ ವಿವಾಹವನ್ನು ಅಂಗೀಕರಿಸನು," ಎಂದರು. ಅವರು ಆಜ್ಞೆಕೊಡುತ್ತಿದ್ದಂತೆಯೆ ಜನಕನು ಬ್ರಾಹ್ಮಣರನ್ನು ಕರೆಸಿದನು. ಬ್ರಾಹ್ಮಣರು ಹಾಗೂ ಮಂತ್ರಿಗಳು ಅಯೋಧ್ಯೆಗೆ ಹೋಗಲು ಏರ್ಪಾಡುಗಳನ್ನು ಮಾಡಿದನು.

ಬೆಳಗಾಗುತ್ತಲೇ ಮಂತ್ರಿಗಳೂ ಬ್ರಾಹ್ಮಣರೂ ರಥಗಳನ್ನೇರಿ, ಮೂರು ಅಹೋರಾತ್ರಿ ಪ್ರಯಾಣ ಮಾಡಿ, ನಾಲ್ಕನೇ ದಿನ ಬೆಳಗ್ಗೆ ಅಯೋಧ್ಯಾ ನಗರವನ್ನು ಸೇರಿದರು. ನಿಮಿಷವೂ ಆಲಸ್ಯಮಾಡದೆ ರಥಗಳನ್ನು ನೇರವಾಗಿ ರಾಜಭವನದ ಸಿಂಹದ್ವಾರದ ಮುಂದೆ ನಿಲ್ಲಿಸಿದರು. ತಮ್ಮ ಆಗಮನವನ್ನು ದಶರಥ ಮಹಾರಾಜನಿಗೆ ಬಿನ್ನವಿಸಬೇಕೆಂದು ಮಂತ್ರಿಗಳು ದ್ವಾರಪಾಲಕರಿಗೆ ಹೇಳಿದರು. ಕೂಡಲೇ ದ್ವಾರಪಾಲಕರು ಹೋಗಿ ರಾಜನಿಗೆ ತಿಳಿಸಿದರು. ರಾಜನ ಅನುಮತಿಯಂತೆ ಬ್ರಾಹ್ಮಣರೂ ಮಂತ್ರಿಗಳೂ ರಾಜಭವನವನ್ನು ಪ್ರವೇಶಿಸಿದರು. ಮಿಥಿಲಾಪುರದ ಬ್ರಾಹ್ಮಣರಿಗೆ, ದಶರಥ ಮಹಾರಾಜನು ವೃದ್ಧನಾದಾಗ್ಯೂ ದೇವತೆಯಂತೆ ತೇಜೋವಂತನಂತೆ ಕಾಣಿಸಿದನು. ದಶರಥನ ಪ್ರಸನ್ನವಾದ ವದನವನ್ನು ನೋಡುತ್ತಲೇ ಬ್ರಾಹ್ಮಣರೂ ಮಂತ್ರಿಗಳೂ ಯಾವ ಅನುಮಾನವೂ ಇಲ್ಲದೆ ಪವಿತ್ರ ಹೃದಯದಿಂದ ನಮಸ್ಕರಿಸಿ, "ಮಹಾರಾಜಾ! ನಾವು ಮಿಥಿಲಾಧಿಪತಿ ಜನಕ ಮಹಾರಾಜರ ದೂತರು. ನಮ್ಮ ಮಹಾರಾಜರು ಸ್ನೇಹಪೂರ್ವಕವಾಗಿ ತಮ್ಮ ಕುಶಲವನ್ನೂ ರಾಜ್ಯ ಕ್ಷೇಮವನ್ನೂ ವಿಚಾರಿಸಿಕೊಂಡು ಬರುವಂತೆ ಆಜ್ಞಾಪಿಸಿದ್ದಾರೆ. ಅಲ್ಲದೆ, ತಮಗೆ ಅತಿ ಮುಖ್ಯವಾದ ವಿಷಯವನ್ನು ಬಿನ್ನವಿಸುವುದಕ್ಕಾಗಿ ವಿಶ್ವಾಮಿತ್ರ ಮಹರ್ಷಿಯ ಅನುಮತಿಯಿಂದಲೂ ಶತಾನಂದೋಪಾಧ್ಯಾಯರ ಸಮ್ಮತಿಯಿಂದಲೂ ಮಹಾರಾಜರು ನಮ್ಮನ್ನು ಇಲ್ಲಿಗೆ ಕಳಿಸಿದ್ದಾರೆ," ಎಂದು ವಿನಯದಿಂದಲೂ ರಾಜಗೌರವದಿಂದಲೂ ಬಿನ್ನವಿಸಿದರು.

ದಶರಥ ಮಹಾರಾಜನು ಪ್ರಶಾಂತ ವದನನಾಗಿ, ಮುಗುಳ್ನಗುತ್ತ, "ಬ್ರಾಹ್ಮಣೋತ್ತಮರೇ! ಮಂತ್ರಿಗಳೇ! ಅಯೋಧ್ಯಾ ಪರಿಪಾಲನೆಯಲ್ಲಿ ಯಾವ ತೊಂದರೆಯೂ ಇಲ್ಲದೆ, ಅಗ್ನಿಹೋತ್ರಾದಿ ಸತ್ಕರ್ಮಗಳಿಗೆ ಯಾವ ತೊಂದರೆಯೂ ಇಲ್ಲದೆ, ಪ್ರಜಾ ಕ್ಷೇಮಕ್ಕೆ ಯಾವ ಕೊರತೆಯೂ ಇಲ್ಲದೆ, ಧಾರ್ಮಿಕ ಆಧ್ಯಾತ್ಮಿಕ ಮಾರ್ಗಾನುಸರಣೆಗೆ ಯಾವ ಇಕ್ಕಟ್ಟೂ ಇಲ್ಲದೆ, ಪ್ರಜೆಗಳು ಸುಕ್ಷೇಮವಾಗಿ ಕಾಲ ಕಳೆಯುತ್ತಿದ್ದಾರೆ. ಮಿಥಿಲಾ ರಾಜ್ಯಧಿಪತಿಯಾದ ಜನಕನ ಕುಶಲವನ್ನೂ ಪ್ರಜಾ ಕ್ಷೇಮವನ್ನೂ ಅಗ್ನಿಹೋತ್ರಾದಿ ಸತ್ಕರ್ಮಾಚರಣ ದೀಕ್ಷೆಯನ್ನೂ ತಿಳಿಯಬಯಸುತ್ತೇನೆ. ಅಲ್ಲದೆ,

ಯಾವ ಸಂದೇಹವೂ ಇಲ್ಲದೆ ಬಂದ ಕಾರಣವನ್ನು ತಿಳಿಸಬೇಕು. ವಿಷಯ ಏನೆಂಬುದನ್ನು ತಿಳಿಯಲಿಚ್ಛಿಸುತ್ತೇನೆ," ಎಂದು ಮೃದು ಮಧುರವಾಗಿ ಮಾತಾಡಿ ಅನುಮತಿ ಕೊಟ್ಟೊಡನೆಯೇ ಮಂತ್ರಿಗಳು ಬ್ರಾಹ್ಮಣರಿಗೆ ಸಂಜ್ಞೆ ಮಾಡಿದರು.

ಆಗ, ಪ್ರಧಾನ ಪುರೋಹಿತನು ಎದ್ದು ನಿಂತು, "ಮಹಾಪ್ರಭೂ! ನಮ್ಮ ಮಹಾರಾಜರಾದ ಜನಕ ಭೂಪತಿಯು ತನ್ನ ಮಗಳಾದ ಸೀತಾದೇವಿಗೆ ಪರಾಕ್ರಮವೇ ವರನೆಂದು ಪ್ರತಿಜ್ಞೆ ಮಾಡಿದ್ದುದರಿಂದ, ಅನೇಕ ಜನ ರಾಜಕುಮಾರರು ಬಂದು ಧನುಸ್ಸನ್ನೆತ್ತಲಾರದೆ ನಿರ್ವೀರ್ಯರಾಗಿ, ವಿಫಲರಾಗಿ ಹೋದದ್ದು ತಮಗೆ ಗೊತ್ತಿರಬೇಕು. ತಮ್ಮ ಪುತ್ರರಾದ ರಾಮಲಕ್ಷ್ಮಣರು, ವಿಶ್ವಾಮಿತ್ರ ಋಷಿಯೊಂದಿಗೆ ದೈವೇಚ್ಛೆಯಂತೆ ಮಹಾರಾಜರು ಮಾಡುತ್ತಿರುವ ಯಜ್ಞವನ್ನು ನೋಡಬಯಸಿ ನಮ್ಮ ರಾಜಧಾನಿಗೆ ಬಂದರು. ತಮ್ಮ ಜ್ಯೇಷ್ಠ ಕುಮಾರ, ಮಹಾವೀರನಾದ ರಾಮನು, ತನ್ನ ಪರಾಕ್ರಮವನ್ನು ಪ್ರದರ್ಶಿಸಿ ಸೀತಾದೇವಿಯನ್ನು ಪಡೆದಿದ್ದಾನೆ. ಮಹಾರಾಜಾ! ಏನೆಂದು ಹೇಳೋಣ. ಮಹರ್ಷಿಗಳೂ ರಾಜರ್ಷಿಗಳೂ ರಾಜಾಧಿರಾಜರುಗಳೂ ನೋಡುತ್ತಿರುವಂತೆಯೇ ಮಹಾಪರಾಕ್ರಮಿಯಾದ ರಾಮನು ಶಿವಧನುಸ್ಸಿನ ಮಧ್ಯಭಾಗವನ್ನು ಹಿಡಿದೆತ್ತಿ ಬಗ್ಗಿಸಿದನಷ್ಟೇ ಅಲ್ಲ, ಅತಿ ಭಾರವಾದ ಆ ಧನುಸ್ಸನ್ನು ಆ ಮಹಾವೀರನು ಲೀಲಾಜಾಲವಾಗಿ ಮುರಿದು ಎರಡು ತುಂಡು ಮಾಡಿದನು. ಸೀತಾದೇವಿಗೆ ಪರಾಕ್ರಮವೇ ವರನಾದುದರಿಂದ, ಅವಳನ್ನು ರಾಮನಿಗೆ ಕೊಟ್ಟು ಮದುವೆಮಾಡಲು ಅಲ್ಲಿ ಸೇರಿದ್ದ ಋಷಿಗಳೂ ಮಹಾರಾಜರುಗಳೂ ನಿಶ್ಚಯಿಸಿದ್ದಾರೆ.

ಮದುವೆಗೆ ತಮ್ಮ ಅನುಮತಿಯನ್ನು ಪಡೆಯಲು ಮತ್ತು ಬಂಧು ಮಿತ್ರರು, ಉಪಾಧ್ಯಾಯರು, ಪುರೋಹಿತರು, ಮಂತ್ರಿಗಳೊಂದಿಗೆ ಸಪರಿವಾರವಾಗಿ ತಾವು ಮಿಥಿಲಾಪುರಕ್ಕೆ ದಯಮಾಡಿಸಬೇಕೆಂದು ಆಹ್ವಾನಿಸುವುದಕ್ಕಾಗಿ ಸ್ವತಃ ನಾವೇ ಬಂದಿದ್ದೇವೆ. ನಿಮ್ಮ ದರ್ಶನ ಮಾಡಿ, ನಿಮ್ಮ ಸಮಕ್ಷಮದಲ್ಲಿ ತಮ್ಮ ಮಗಳ ವಿವಾಹ ನಡೆಸಬೇಕೆಂದು ಮಹಾರಾಜರು ಆಶಿಸಿದ್ದಾರೆ. ಈ ವಿಷಯವನ್ನು ನಿಮಗೆ ಮನವಿ ಮಾಡುವುದಕ್ಕಾಗಿಯೇ ನಮ್ಮನ್ನು ಕಳಿಸಿದ್ದಾರೆ," ಎಂದು ಬಿನ್ನವಿಸಿದನು. ದಶರಥನು, ಕೈಕಟ್ಟಿ ನಿಂತಿದ್ದ ಮಂತ್ರಿಗಳನ್ನೂ ಬ್ರಾಹ್ಮಣರನ್ನೂ ನೋಡಿ ಮನಸ್ಸಿನಲ್ಲಿ ಚೆನ್ನಾಗಿ ಆಲೋಚಿಸಿ, ಮರುಮಾತಾಡದೆ, ವಸಿಷ್ಠ ವಾಮದೇವಾದಿ ಋಷಿಗಳನ್ನೂ ಬರಮಾಡಿಕೊಂಡನು.

ಅವರೆಲ್ಲರೂ ಬಂದು ಸೇರಿದ ಮೇಲೆ, ಮತ್ತೊಂದು ಸಾರಿ ಮಿಥಿಲಾಪುರದ ಬ್ರಾಹ್ಮಣರಿಂದ ಅವರಿಗೆ ವಿಷಯವನ್ನು ಹೇಳಿಸಿದನು. ಅವರೆಲ್ಲರ ಅಭಿಪ್ರಾಯವನ್ನು

ತಿಳಿಯ ಬಯಸಿ, ವಸಿಷ್ಠರಿಗೆ ನಮಸ್ಕರಿಸಿ ಮೊದಲು ಅವರ ಅಭಿಪ್ರಾಯವನ್ನು ತಿಳಿಸಬೇಕೆಂದು ಪ್ರಾರ್ಥಿಸಿದನು. ವಸಿಷ್ಠ ವಾಮದೇವಾದಿಗಳು, "ಶುಭಂ ಶುಭಂ," ಎಂದು ಅಮಿತ ಉತ್ಸಾಹದಿಂದ, "ಇದಕ್ಕೆ ಇನ್ನೂ ಏಕೆ ಯೋಚನೆ? ಮಿಥಿಲಾಪುರದ ಪ್ರಯಾಣಕ್ಕೆ ಸಿದ್ಧತೆ ಮಾಡಿ," ಎಂದರು. ಮಂತ್ರಿಗಳು ತಲೆದೂಗಿದರು. ಕ್ಷಣದಲ್ಲಿ ಅಯೋಧ್ಯಾ ನಗರದಲ್ಲೆಲ್ಲಾ ಅಂತಃಪುರದಲ್ಲೆಲ್ಲಾ ರಾಮ ಕಲ್ಯಾಣದ ವಿಷಯ ವ್ಯಾಪಿಸಿತು.

ಪುರ ಜನರು ಜೈ ಜೈಕಾರ ಮಾಡಿದರು. ಪರಿವಾರದವರು ಪ್ರಯಾಣಕ್ಕೆ ಎಲ್ಲ ಸಿದ್ಧತೆ ಮಾಡಿದರು. ಆಭರಣ, ಪಟ್ಟೆಪೀತಾಂಬರ, ಬಹುಮಾನಗಳನ್ನು ಹೇರಳವಾಗಿ ಸಿದ್ಧಪಡಿಸಿದರು. ರಥಗಳನ್ನು ತಂದು ನಿಲ್ಲಿಸಿದರು. ರಾಜನ ಕುಲಗುರುಗಳಾದ ವಸಿಷ್ಠರು, ಪಂಡಿತರು, ಬ್ರಾಹ್ಮಣೋತ್ತಮರು, ಮಂತ್ರಿಗಳು, ಅವರವರ ರಥಗಳನ್ನು ಅಲಂಕರಿಸಿದರು. ಇಡೀ ಅಯೋಧ್ಯೆಯೇ ಕದಲುತ್ತಿದೆಯೇನೋ ಎನ್ನುವಂತೆ ಎಲ್ಲರೂ ಪ್ರಯಾಣ ಮಾಡುವವರೇ! ಎಲ್ಲರಿಗೂ ಪ್ರಯಾಣಕ್ಕೆ ಎಲ್ಲ ವಿಧದ ಅನುಕೂಲತೆಯನ್ನು ದಶರಥನು ಏರ್ಪಡಿಸಿದ್ದನು. ವಾಯುವೇಗದಿಂದ ಕುದರೆ ಗಳು ಕೂಡ ಆಲಸ್ಯ ಮಾಡದೆ ಅಮಿತೋತ್ಸಾಹದಿಂದ ಓಡಲಾರಂಭಿಸಿದುವು. ಎರಡು ರಾತ್ರಿಗಳೂ ಎರಡು ಹಗಲುಗಳೂ ಪ್ರಯಾಣ ಮಾಡಿ, ಮೂರನೆಯ ರಾತ್ರಿ ಮಿಥಿಲಾಪುರವನ್ನು ಸೇರಿದರು. ದಶರಥ ಮಹಾರಾಜನು ಮಿಥಿಲಾಪುರದ ಸಿಂಹದ್ವಾರವನ್ನು ತಲುಪುತ್ತಲೇ ಜನಕ ಮಹಾರಾಜನು ಸ್ವಾಗತಿಸಿದನು. ಮಂತ್ರಿ ಗಳನ್ನೂ ಪುರೋಹಿತರನ್ನೂ ಮಹಾ ಋಷಿಗಳನ್ನೂ ತಕ್ಕ ರೀತಿಯಲ್ಲಿ ಸತ್ಕರಿಸಿದನು. ಅವರವರಿಗೆ ತಕ್ಕ ವಸತಿಯನ್ನು ಏರ್ಪಡಿಸಿ, ಆ ರಾತ್ರಿ ಅವರು ಪೂರ್ತಿಯಾಗಿ ವಿಶ್ರಾಂತಿ ತೆಗೆದುಕೊಳ್ಳಲು ಎಲ್ಲ ಏರ್ಪಾಟುಗಳನ್ನೂ ಮಾಡಿದನು.

ಬೆಳಗಾಗುತ್ತಲೆ ದಶರಥ ಮಹಾರಾಜನು ಋತ್ವಿಜರನ್ನೂ ಬಂಧುಗಳನ್ನೂ ಮಂತ್ರಿ ಗಳೇ ಮೊದಲಾದವರನ್ನೂ ಕರೆಸಿಕೊಂಡು, ಯಾವ ನಿಮಿಷದಲ್ಲಿ ಅಗತ್ಯವಾದರೂ ಸಿದ್ಧರಾಗಿರುವಂತೆ ಎಲ್ಲರಿಗೂ ಎಚ್ಚರಿಕೆ ಇತ್ತನು. ಇಷ್ಟರಲ್ಲಿ, ಜನಕ ಮಹಾರಾಜನು ದಶರಥನ ಬಿಡದಿ ಗೃಹಕ್ಕೆ ಬಂದು, ಅವನನ್ನು ಯಜ್ಞಮಂಟಪಕ್ಕೆ ಕರೆದುಕೊಂಡು ಹೋದನು. ಗುರುಗಳಿಗೂ ಮಂತ್ರಿಗಳಿಗೂ ಮಹಾರಾಜನಿಗೂ ಪರಿವಾರದವರಿಗೂ ಅವರವರ ಸ್ಥಾನಕ್ಕೆ ತಕ್ಕಂತೆ ಯಜ್ಞಮಂಟಪದಲ್ಲಿ ಆಸನಗಳನ್ನು ಸಿದ್ಧಪಡಿಸಿದ್ದರು. ಎಲ್ಲರೂ ಕುಳಿತ ಮೇಲೆ, ಜನಕ ಮಹಾರಾಜನು ದಶರಥ ಮಹಾರಾಜನಿಗೆ ಸ್ವಾಗತ ಬಯಸುತ್ತಾ, "ಮಹಾರಾಜಾ! ನಮ್ಮ ಭಾಗ್ಯವೋ ಎನ್ನುವಂತೆ ನೀವು ಮಹರ್ಷಿಗಳೊಂದಿಗೆ ಬ್ರಾಹ್ಮಣೋತ್ತಮರೊಂದಿಗೆ ಪರಿವಾರದೊಂದಿಗೆ ಮಿಥಿಲಾ ಪುರಕ್ಕೆ ಬಂದಿರುವುದು ನಮ್ಮ ಪುಣ್ಯಪರಿಪಾಕವೇ ಎಂದು ನಾನು ಭಾಸಿಸುತ್ತೇನೆ.

ನಿಮ್ಮ ಪುತ್ರನ ಪರಾಕ್ರಮ ವಿಜಯಗಳಿಗೆ ನೀವು ಮನಸಾರೆ ಸಂತೋಷಿಸಿದ್ದೀರಿ ಎಂದು ಬೇರೆ ಹೇಳಬೇಕಾಗಿಲ್ಲ. ಅಮಿತ ಪರಾಕ್ರಮವಂತರು ಹುಟ್ಟಿದ ರಘುವಂಶ ದೊಂದಿಗೆ ಈಗ ನಾನು ಸಂಬಂಧ ಬೆಳೆಸುತ್ತಿದ್ದೇನೆ. ಇನ್ನು ಮೇಲೆ ನನ್ನ ವಂಶವು ಮತ್ತಷ್ಟು ಪೂಜನೀಯವಾಗುವುದು. ಇದು ನನ್ನ ಪೂರ್ವಿಕರ ಪುಣ್ಯಫಲವೆಂದೇ ಭಾವಿಸುತ್ತೇನೆ.

ಮಹಾರಾಜ! ನಾನು ಸಂಕಲ್ಪಿಸಿದ ಯಜ್ಞವು ನಾಳೆ ಸಮಾಪ್ತವಾಗುವುದು. ಮಹರ್ಷಿಗಳ ಸಮ್ಮತಿಯಿಂದ ಆ ಸಂದರ್ಭದಲ್ಲಿ ಸೀತಾರಾಮರ ವಿವಾಹವನ್ನು ಮಾಡಬೇಕೆಂದಿದ್ದೇನೆ. ಇದಕ್ಕೆ ತಮ್ಮ ಅನುಮತಿಯನ್ನು ಕೋರುತ್ತಿದ್ದೇನೆ," ಎಂದು ಹೇಳಿದನು. ದಶರಥನು ಆನಂದದಿಂದ ಮುಗುಳ್ನಗೆ ಹೊರಚೆಲ್ಲುತ್ತಾ, "ರಾಜಾ! ನೀವು ದಾತರು. ದಾನವು ದಾತರ ವಶವೆಂದು ದೊಡ್ಡವರು ಹೇಳುತ್ತಾರೆ. ಆದ್ದ ರಿಂದ ನೀವು ಯಾವಾಗ ಏನು ಕೊಡುತ್ತೇನೆ ಎಂದು ಹೇಳಿದರೆ, ಆಗ ಅದನ್ನು ತೆಗೆದುಕೊಳ್ಳಲು ನಾವು ಸಿದ್ಧರಾಗಿದ್ದೇವೆ," ಎಂದನು. ದಶರಥ ಮಹಾರಾಜನು ಹೀಗೆ ಚಮತ್ಕಾರವಾಗಿ, ನಯವಾದ ಮಾತುಗಳಿಂದ ಹೃದಯ ಕರುಗುವಂತೆ ಮಾತನಾಡಿದ್ದನ್ನು ಕೇಳಿ, ಜನಕನು ಆನಂದದಿಂದ ಉಬ್ಬಿಹೋದನು. ಆ ಹೊತ್ತಿಗೆ ರಾಮ ಲಕ್ಷ್ಮಣರು ವಿಶ್ವಾಮಿತ್ರರೊಂದಿಗೆ ಅಲ್ಲಿಗೆ ಬಂದು ತಂದೆಗೆ ಮತ್ತು ವಸಿಷ್ಠ ವಾಮದೇವಾದಿ ಮಹರ್ಷಿಗಳಿಗೆ ನಮಸ್ಕರಿಸಿದರು. ದಶರಥನು ಪುತ್ರರಿಬ್ಬರನ್ನೂ ಹತ್ತಿರ ಕರೆದು ಶಿರಸ್ಸನ್ನು ಮುದ್ದಾಡಿ ಭುಜದ ಮೇಲೆ ಕೈಯಿರಿಸಿ ವಕ್ಷಸ್ಥಳಕ್ಕೆ ಅವರನ್ನು ಅಪ್ಪಿಕೊಂಡು ಪಡುತ್ತಿದ್ದ ಆನಂದವನ್ನು ನೋಡಿ ಅಲ್ಲಿ ನೆರೆದಿದ್ದ ಬ್ರಾಹ್ಮಣರೂ ಮಂತ್ರಿಗಳೂ ದಶರಥನಿಗಿರುವ ಪುತ್ರ ವಾತ್ಸಲ್ಯಕ್ಕೆ ತನ್ಮಯರಾದರು, ಆಶ್ಚರ್ಯ ಗೊಂಡರು.

ದಶರಥ ಮಹಾರಾಜನು ಪುತ್ರರೊಂದಿಗೆ ನಲಿದಾಡುತ್ತಾ, ಅಯೋಧ್ಯೆಯನ್ನು ಬಿಟ್ಟಲಾಗಾಯಿತು ವಿಶ್ವಾಮಿತ್ರ ಮಹರ್ಷಿಯ ಯಾಗ ಸಂರಕ್ಷಣೆ, ಅನಂತರ ಮಿಥಿ ಲಾಪುರಿಗೆ ಬಂದ ವಿವರಗಳನ್ನು ರಾಮ ಲಕ್ಷ್ಮಣರು ಹೇಳುತ್ತಿರಲು, ವಸಿಷ್ಠ ವಾಮದೇವಾದಿ ಮಹರ್ಷಿಗಳೊಂದಿಗೆ, ಭರತ ಶತ್ರುಘ್ನ ಸುಮಂತ ಮೊದಲಾದ ವರೊಂದಿಗೆ ಅತ್ಯಂತ ಆನಂದದಿಂದ ಕೇಳುತ್ತಾ ಆ ರಾತ್ರಿಯನ್ನು ಕಳೆದನು. ಅದೇ ಸಮಯದಲ್ಲಿ ಜನಕ ಮಹಾರಾಜನು ವಿವಾಹದ ಏರ್ಪಾಟಿನಲ್ಲಿ ಮಗ್ನನಾಗಿದ್ದನು.

ಬೆಳಗಾಯಿತು, ಜನಕ ಮಹಾರಾಜನು ತನ್ನ ಪ್ರಧಾನ ಪುರೋಹಿತರಾದ ಶತಾನಂದ ರನ್ನು ಬರಮಾಡಿಕೊಂಡು, ಅವರೊಂದಿಗೆ ವಿವಾಹ ಸಂಬಂಧವಾದ ವಿಷಯ ವನ್ನು ಆಲೋಚಿಸಬೇಕೆಂದು ಅತಿ ವಿನಯದಿಂದ ಪ್ರಾರ್ಥಿಸಿದನು. ಶತಾನಂದರು,

"ಮಹಾರಾಜಾ! ಈ ದಿನವೇ ಯಜ್ಞವು ಪೂರ್ತಿಯಾಗಿದೆ. ಎರಡು ಮೂರು ದಿನಗಳಲ್ಲಿನ ಮುಹೂರ್ತಗಳು ಚೆನ್ನಾಗಿಯೆ ಇವೆ. ತಾವು ಅನುಮತಿಸಿದರೆ ವಿವರಿಸುತ್ತೇನೆ," ಎಂದು ತಿಳಿಸಿದರು. ಜನಕ ಮಹಾರಾಜನು "ಸ್ವಾಮೀ! ನಿನ್ನೆ ರಾತ್ರಿಯೇ ಮದುವೆಗೆ ದಶರಥ ಮಹಾರಾಜನ ಒಪ್ಪಿಗೆಯನ್ನು ಪಡೆದೆ. ಇದು ನನ್ನ ಭಾಗ್ಯ. ಆದರೆ, ನನ್ನ ಪ್ರೀತಿಯ ತಮ್ಮ ಕುಶಧ್ವಜನು ಈಗ ಇಲ್ಲಿಲ್ಲ. ಅವನು ನಮ್ಮ ಯಜ್ಞಕ್ಕೆ ಸಂಬಂಧಿಸಿದ ಸಾಮಗ್ರಿಗಳನ್ನು ಒದಗಿಸಲು ತುಂಬಾ ಶ್ರಮಪಟ್ಟಿದ್ದಾನೆ. ಅವನಿಲ್ಲದೆ ಈ ಮಂಗಳಕಾರ್ಯವನ್ನು ನೆರವೇರಿಸಲು ನನ್ನ ಮನಸ್ಸು ಒಪ್ಪುತ್ತಿಲ್ಲ. ಈ ಕಾರ್ಯದಲ್ಲಿ ಅವನು ಭಾಗವಹಿಸಲೇಬೇಕು. ಆದ್ದರಿಂದ ನನ್ನ ತಮ್ಮನನ್ನು ಬರಮಾಡಿಕೊಳ್ಳಲು ಏರ್ಪಾಟು ಮಾಡಿದ್ದೇನೆ. ಅವನು ಬಂದ ನಂತರ ಲಗ್ನವನ್ನು ನಿರ್ಣಯಿಸುವುದೊಳ್ಳೆಯದು," ಎಂದು ಪ್ರಾರ್ಥಿಸಿದನು. ಶತಾನಂದರು, "ಒಳ್ಳೆಯದು, ತುಂಬಾ ಸಂತೋಷ," ಎಂದು ಹೇಳಿ ಹೊರಟುಹೋದರು.

ಜನಕ ಮಹಾರಾಜನು ನಾಲ್ಕು ದಿಕ್ಕುಗಳಿಗೂ ದೂತರನ್ನು ಕಳಿಸಿ ಬಹು ಶೀಘ್ರವಾಗಿ ತನ್ನ ತಮ್ಮನನ್ನು ಕರೆದುಕೊಂಡು ಬರುವಂತೆ ಆಜ್ಞಾಪಿಸಿದನು. ದೂತರು ಅತಿ ವೇಗವಾಗಿ ಓಡುವ ಕುದುರೆಗಳ ಮೇಲೆ ಹೊರಟು, ಅಂದುಕೊಂಡ ಕಾಲಕ್ಕಿಂತ ಶೀಘ್ರವಾಗಿ ಸಾಂಕಾಸ್ಯ ಪಟ್ಟಣವನ್ನು ಸೇರಿ, ಕುಶಧ್ವಜ ಮಹಾರಾಜನಿಗೆ ಮಿಥಿಲಾಪುರದ ವೃತ್ತಾಂತವನ್ನೆಲ್ಲಾ ವಿವರವಾಗಿ ತಿಳಿಸಿದರು. ಕುಶಧ್ವಜನು ಅತ್ಯಂತ ಆನಂದಪಟ್ಟು, ಸಪರಿವಾರನಾಗಿ, ಅವಶ್ಯಕವಾದ ಕಾಣಿಕೆಗಳನ್ನು ರಥದಲ್ಲಿಟ್ಟುಕೊಂಡು, ರಾತ್ರೋ ರಾತ್ರಿ ಹೊರಟು ಮಿಥಿಲಾಪುರಿಯನ್ನು ಸೇರಿದನು.

ಅವನ ಆಗಮನದ ನಿರೀಕ್ಷಣೆ ಮಾಡುತ್ತಾ ನಿಮಿಷ ನಿಮಿಷವನ್ನೂ ಎಣಿಸುತ್ತಿದ್ದ ಜನಕನು ತನ್ನ ತಮ್ಮನನ್ನು ನೋಡಿದೊಡನೆ ಅವನನ್ನು ಆಲಂಗಿಸಿ ಆನಂದಿಸಿದನು. ಕುಶಧ್ವಜನು ಅಣ್ಣನಿಗೆ ನಮಸ್ಕರಿಸಿ, ನಂತರ ಶತಾನಂದರಿಗೆ ನಮಸ್ಕರಿಸಿದನು. ಮೂವರೂ ಕುಳಿತರು. ಅಣ್ಣ ತಮ್ಮ ಇಬ್ಬರೂ ಎಲ್ಲ ವಿಧದಲ್ಲೂ ಆಲೋಚನೆ ನಡೆಸಿ ಒಂದು ನಿರ್ಣಯಕ್ಕೆ ಬಂದೊಡನೆ ಜನಕನು ಶ್ರೇಷ್ಠನಾದ ಸುಧಾಮನನ್ನು ಕರೆಸಿ, "ಮಂತ್ರೀ! ನೀನು ಈಗಲೇ ಹೋಗಿ ಮಹಾರಾಜರನ್ನೂ ಅವರ ಮಂತ್ರಿವರ್ಗವನ್ನೂ ಪುರೋಹಿತರನ್ನೂ ಗುರುಗಳನ್ನೂ ಅವರಿಗೆ ಪ್ರಧಾನರಾದ ಇನ್ನೂ ಬೇರೆಯವರನ್ನೂ ಗೌರವದಿಂದ ಪ್ರಾರ್ಥಿಸಿ, ಇಲ್ಲಿಗೆ ಕರೆದುಕೊಂಡು ಬಾ," ಎಂದು ಆಜ್ಞಾಪಿಸಿದನು.

ಸುಧಾಮನು ಬೇಕಾದವರನ್ನೆಲ್ಲಾ ಜೊತೆಯಲ್ಲಿರಿಸಿಕೊಂಡು ದಶರಥ ಮಹಾರಾಜನ ಬಿಡದಿಯನ್ನು ಸೇರಿ, ಜನಕ ಮಹಾರಾಜನ ಅಭಿಪ್ರಾಯವನ್ನು ದಶರಥ

ಮಹಾರಾಜನಿಗೆ ಬಿನ್ನವಿಸಿ ವಿನಯ ವಿಧೇಯತೆಗಳಿಂದ ಅವರನ್ನು ಆಹ್ವಾನಿಸಿದನು. ಸಿದ್ಧವಾಗಿಯೇ ಇದ್ದ ದಶರಥ ಮಹಾರಾಜನು ಗುರುಗಳೊಂದಿಗೆ, ಮಂತ್ರಿಗಳೊಂದಿಗೆ, ಪುರೋಹಿತರೊಂದಿಗೆ ಹೊರಟು ಜನಕ ಮಹಾರಾಜನ ಆಸ್ಥಾನವನ್ನು ಸೇರಿದನು. ಒಬ್ಬರಿಗೊಬ್ಬರು ತಕ್ಕ ರೀತಿಯಲ್ಲಿ ಪರಸ್ಪರ ವಂದನೆಗಳನ್ನು ಸಲ್ಲಿಸಿ ಎಲ್ಲರೂ ಉನ್ನತಾಸನಗಳಲ್ಲಿ ಕುಳಿತುಕೊಂಡರು. ಬಳಿಕ, ದಶರಥ ಮಹಾರಾಜನು ಎದ್ದು ನಿಂತು, "ಜನಕಾ! ವಸಿಷ್ಠ ಮಹರ್ಷಿಯು ನಮ್ಮ ಇಕ್ಷ್ವಾಕು ವಂಶೀಯರ ಭೂಲೋಕದ ದೈವ. ಅವರೇ ನಮ್ಮ ಪರಮ ಗುರು. ನಮ್ಮ ಸಮಸ್ತ ವಿಷಯಗಳಿಗೂ ಅವರೇ ಮುಖ್ಯರು. ಆ ಮಹಾನುಭಾವರು ನಮ್ಮ ವಂಶ ಕ್ರಮವನ್ನು ಹೇಳಬಲ್ಲರು," ಎಂದು ಹೇಳಿ ಕುಳಿತನು.

ವಸಿಷ್ಠರು ಎದ್ದು, "ರಾಜರ್ಷೀ! ಸಭಾಸದರರೇ! ಬ್ರಹ್ಮನು ಅವ್ಯಕ್ತ ಪ್ರಭುವು. ನಿತ್ಯನು, ನಿರ್ಮಲನು. ಅಂಥ ಬ್ರಹ್ಮದೇವನು ಮನಸ್ಸಿನಲ್ಲಿ ಸಂಕಲ್ಪಿಸಿ, ಈ ಭೂಲೋಕದಲ್ಲಿ ಮರೀಚಿ ಎನ್ನುವ ಸ್ವರೂಪವು ಜನಿಸುವಂತೆ ಮಾಡಿದನು. ಆ ಮರೀಚಿಯು ಕಾಶ್ಯಪನನ್ನು ಮಗನಾಗಿ ಪಡೆದನು. ಕಾಶ್ಯಪನ ಮಗನು ಸೂರ್ಯ. ಸೂರ್ಯನ ಮಗನೇ ಮನು. ಈ ಮನುವಿಗೆ ವೈವಸ್ವತ ಮನುವು ಹುಟ್ಟಿದನು. ಅವನು ಪ್ರಜಾಪಾಲನೆಯನ್ನು ಮಾಡಿ, ಪ್ರಜಾಪತಿಯೆನ್ನುವ ಸಾರ್ಥಕ ಹೆಸರನ್ನು ಪಡೆದನು. ಅವನ ಪರಿಪಾಲನೆಯ ಕಾಲದಲ್ಲಿ ಅವನಿಗೆ ಇಕ್ಷ್ವಾಕುವು ಹುಟ್ಟಿದನು. ಅಯೋಧ್ಯೆಯನ್ನು ಪಾಲಿಸಿದವರಲ್ಲಿ ಮೊಟ್ಟಮೊದಲನೆಯವನೇ ಇವನು. ಆದ್ದರಿಂದಲೇ ಅಯೋಧ್ಯಾ ರಾಜರುಗಳಿಗೆ ಇಕ್ಷ್ವಾಕು ವಂಶದವರೆನ್ನುವ ಹೆಸರು ಶಾಶ್ವತವಾಗಿ ನಿಂತು ಹೋಯಿತು. ಆ ಇಕ್ಷ್ವಾಕುವಿಗೆ ಕುಕ್ಷಿ, ಕುಕ್ಷಿಗೆ ವಿಕುಕ್ಷಿ, ವಿಕುಕ್ಷಿಗೆ ಅಮಿತ ತೇಜೋವಂತನೂ ಶೌರ್ಯ ಪರಾಕ್ರಮವಂತನೂ ಆದ ಬಾಣನು ಜನಿಸಿದನು. ಬಾಣನಿಗೆ ಅನರಣ್ಯ, ಅವನಿಗೆ ಪೃಥು, ಪೃಥುವಿಗೆ ತ್ರಿಶಂಕು, ತ್ರಿಶಂಕುವಿಗೆ ದುಂದುಮಾರು, ದುಂದುಮಾರನಿಗೆ ಯುವನಾಶ್ವ, ಯುವನಾಶ್ವನಿಗೆ ಮಾಂಧಾತ, ಮಾಂಧಾತನಿಗೆ ಸುಸಂಧಿ, ಸುಸಂಧಿಗೆ ಧೃವಸಂಧಿ ಮತ್ತು ಪ್ರಸೇನಜಿತ್ ಎನ್ನುವ ಇಬ್ಬರೂ ಮಕ್ಕಳೂ ಹುಟ್ಟಿದರು. ಧೃವಸಂಧಿಗೆ ಮಹಾಯಶಸ್ವಿಯಾದ ಭರತನು ಹುಟ್ಟಿದನು.

ಅವನಿಗೆ ಅಸಿತ ಎಂಬುವನು ಹುಟ್ಟಿದನು. ಅವನು ಪರಿಪಾಲನೆ ಮಾಡುತ್ತಿದ್ದ ಸಮಯದಲ್ಲಿ, ಹೈಹಯರೂ ತಾಲಜಂಘರೂ ಶಶಿಬಿಂದುಗಳೂ ಸೇರಿ ದಂಡೆಯಾತ್ರೆ ನಡೆಸಿ, ಅಸಿತನನ್ನು ಓಡಿಸಿದರು. ಆಗ ಅಸಿತನು ತನ್ನ ಇಬ್ಬರು ಹೆಂಡತಿಯರೊಡನೆ ಹಿಮವತ್ಪರ್ವತವನ್ನು ಸೇರಿ, ಅಲ್ಲಿ ಭೃಗುಪ್ರಶ್ರವಣವೆನ್ನುವ ಪ್ರದೇಶದಲ್ಲಿ ವಾಸ ಮಾಡುತ್ತಿದ್ದನು. ಸ್ವಲ್ಪ ಕಾಲದ ಮೇಲೆ ಕಾಲಧರ್ಮವಶನಾದನು. ಅವನು

ಕಾಯವನ್ನು ಬಿಡುವ ಸಮಯದಲ್ಲಿ ಅವನ ಇಬ್ಬರು ಹೆಂಡತಿಯರೂ ನವಮಾಸ ಗರ್ಭಿಣಿಯರಾಗಿದ್ದರು. ಅವರು ಆ ಅರಣ್ಯದಲ್ಲಿ ಒಂಟಿಯಾಗಿ ಜೀವಿಸಲು ಸಾಧ್ಯ ವಿಲ್ಲದೆ, ಹತ್ತಿರದಲ್ಲೇ ಇದ್ದ ಭೃಗು ಮಹರ್ಷಿಯ ವಂಶೀಯರಾದ ಚ್ಯವನ ಮಹರ್ಷಿ ಗಳ ಆಶ್ರಮವನ್ನು ಸೇರಿ, ಅವರಿಗೆ ನಮಸ್ಕರಿಸಿ ತಮ್ಮ ಬಾಧೆಯನ್ನು ಅವರಿಗೆ ಬಿನ್ನವಿಸಿಕೊಂಡರು.

ಆಗ ಚ್ಯವನರು ಅವರ ಮೇಲೆ ದಯೆ ತೋರಿ, 'ಅಮ್ಮಾ! ಭಯಪಡಬೇಡಿ, ಇದು ನಿಮ್ಮ ಮನೆ. ಶೀಘ್ರದಲ್ಲೇ ನಿಮ್ಮ ಗರ್ಭದಲ್ಲಿ ಅತಿ ತೇಜೋವಂತನೂ ಬಲವಂತನೂ ಶ್ರೀಮಂತನೂ ಆದ ಮಗನು ಹುಟ್ಟುವನು,' ಎಂದು ಆಶೀರ್ವದಿ ಸಿದರು. ಸ್ವಲ್ಪ ಕಾಲದ ನಂತರ ಹಿರಿಯ ಹೆಂಡತಿಯಲ್ಲಿ ಒಬ್ಬ ಕುಮಾರನು ಹುಟ್ಟಿದನು. ಅವನೇ ಸಗರನು. ಅವನು ಅಯೋಧ್ಯಾ ರಾಜ್ಯಕ್ಕೆ ಚಕ್ರವರ್ತಿಯಾದನು. ಅವನಿಗೆ ಅಶ್ವಮಂಜುವು ಹುಟ್ಟಿದನು. ಅಶ್ವಮಂಜುವಿಗೆ ಅಂಶುಮಂತ, ಅಂಶು ಮಂತನಿಗೆ ದಿಲೀಪ, ದಿಲೀಪನಿಗೆ ಭಗೀರಥ, ಭಗೀರಥನಿಗೆ ಕಕುತ್ಸ್ಥನು, ಅವನಿಗೆ ರಘುವು, ರಘುವಿಗೆ ಪ್ರವೃದ್ಧನು, ಹುಟ್ಟಿದನು. ಅವನಿಗೆ ಸುದರ್ಶನ, ಸುದರ್ಶ ನನಿಗೆ ಅಗ್ನಿವರ್ಣ, ಅಗ್ನಿವರ್ಣನಿಗೆ ಶೀಘ್ರಗ, ಶೀಘ್ರಗನಿಗೆ ಮರುಡ, ಮರುಡನಿಗೆ ಪ್ರಶುಶ್ರುಕ, ಪ್ರಶುಶ್ರುಕನಿಗೆ ನಹುಷ, ನಹುಷನಿಗೆ ನಾಭಾಗ, ನಾಭಾಗನಿಗೆ ಅಜನೂ ಹುಟ್ಟಿದರು. ಅಜ ಮಹಾರಾಜನ ಪ್ರಥಮ ಪುತ್ರನೇ ದಶರಥ ಮಾಹಾರಾಜನು.

ದಶರಥನ ಪುತ್ರರತ್ನಗಳೇ ಶ್ರೀರಾಮ, ಲಕ್ಷ್ಮಣ, ಭರತ ಮತ್ತು ಶತ್ರುಘ್ನರು. ಶಿವಧನು ಸ್ಸನ್ನು ಎತ್ತಿ ಮುರಿದ ಶ್ರೀರಾಮನು ಇವನ ಜ್ಯೇಷ್ಠ ಪುತ್ರನು. ರಾಜರ್ಷಿ! ಇವರದು ಪರಮ ಶುದ್ಧ ವಂಶ. ಈ ವಂಶದಲ್ಲಿ ಹುಟ್ಟಿದವರೆಲ್ಲರೂ ತೇಜೋವಂತರು, ಮಹಾ ಧಾರ್ಮಿಕರು, ಅಧ್ಯಾತ್ಮಿಕ ವೇತ್ತರು, ವೀರಾಗ್ರೇಸರರು. ರಾಮ ಲಕ್ಷ್ಮಣ ಭರತ ಶತ್ರುಘ್ನರು ಈ ವಂಶಕ್ಕೆ ಕುಲದೀಪಕರು. ಅಲ್ಲದೆ, ಬಿಂಬ ಪ್ರತಿಬಿಂಬದಂತೆ ಬೆಳೆದ ರಾಮಲಕ್ಷ್ಮಣರಿಗೆ ಒಂದೇ ಕಾಲದಲ್ಲಿ ಮಂಗಳ ಕಾರ್ಯವು ನಡೆದರೆ ಚೆನ್ನಾಗಿರುವುದೆಂದು ನಮ್ಮ ಅಪೇಕ್ಷೆ. ನಿಮ್ಮ ಇಬ್ಬರು ಹೆಣ್ಣು ಮಕ್ಕಳು, ಸೀತಾ ಮತ್ತು ಊರ್ಮಿಳೆ ಈ ರಾಮಲಕ್ಷ್ಮಣರಿಗೆ ತಕ್ಕವರು. ಯಾವುದೂ ಸಂಶಯವಿಟ್ಟುಕೊಳ್ಳದೆ ಈ ಶುಭ ಕಾರ್ಯದ ನಿರ್ಣಯವನ್ನು ಮಾಡಿ," ಎಂದು ಹೇಳಿ, ವಸಿಷ್ಠರು ಎಲ್ಲರನ್ನೂ ಆಶೀರ್ವದಿಸಿ ತಮ್ಮ ಅಸನದಲ್ಲಿ ಕುಳಿತುಕೊಂಡರು.

ವಸಿಷ್ಠರು ಇಕ್ಷ್ವಾಕು ವಂಶವನ್ನು ಕುರಿತು ಹೇಳಿದ ಮೇಲೆ, ಜನಕನು ಎದ್ದು, "ಓ ಬ್ರಹ್ಮರ್ಷಿ! ಕುಲೀನನು ಕನ್ಯಾದಾನ ಮಾಡಲು ನಿಶ್ಚಯಿಸಿದ ಮೇಲೆ, ತನ್ನ ವಂಶವನ್ನು ಕುರಿತು ಹೇಳಿಕೊಳ್ಳಬೇಕಲ್ಲವೆ? ನಮ್ಮ ವಂಶವನ್ನು ಕುರಿತು ನಾನೇ

ಸ್ವತಃ ಹೇಳಬೇಕೆಂದಿದ್ದೇನೆ. ಇದು ನನಗೆ ಪರಮಾನಂದದ ವಿಷಯ. ನಮ್ಮ ವಂಶವನ್ನು ಇತರು ವರ್ಣಿಸುವುದು ನನಗೆ ತೃಪ್ತಿಯಿಲ್ಲ. ಆ ವಂಶವನ್ನು ಆ ವಂಶಕ್ಕೆ ಸಂಬಂಧಿಸಿದ ಈ ದೇಹದಿಂದಲೇ ವರ್ಣಿಸಿದರೆ ನನ್ನ ಜನ್ಮ ಸಾರ್ಥಕವಾಗುವುದು. ಇದು ನನ್ನ ವಂಶೀಯರಿಗೆ ನಾನು ಸಲ್ಲಿಸುವ ಕೃತಜ್ಞತೆ ಎಂದು ಭಾವಿಸುತ್ತೇನೆ, ಅನುಜ್ಞೆ ದಯಪಾಲಿಸಬೇಕು," ಎಂದು ಪ್ರಾರ್ಥಿಸಿದನು.

ವಸಿಷ್ಠರು ಅನುಜ್ಞೆ ಇತ್ತೊಡನೆ ಜನಕನು, "ಬ್ರಹ್ಮರ್ಷೀ! ಗುರುವರ್ಯರೇ! ದಶರಥ ಮಹಾರಾಜಾ! ಪೂರ್ವದಲ್ಲಿ ನಿಮಿ ಚಕ್ರವರ್ತಿಯು ಪರಮ ಧಾರ್ಮಿಕನೆಂದೂ ಬಲಿಷ್ಠನೆಂದೂ ಪ್ರಸಿದ್ಧಿ ಹೊಂದಿದನು. ಅವನಿಗೆ ಮಿಥಿ ಎನ್ನುವ ಪುತ್ರನು ಹುಟ್ಟಿದನು. ಮಿಥಿಯೇ ಈ ಮಿಥಿಲಾ ನಗರವನ್ನು ನಿರ್ಮಿಸಿದವನು, ಅವನೇ ಈ ರಾಜ್ಯಕ್ಕೆ ಪ್ರಥಮ ಮಹಾರಾಜನು. ಅವನ ಪರಿಪಾಲನೆಯು ಪ್ರಜಾಹಿತವನ್ನು ಸಾಧಿಸಿತು. ಅವನಿಗೆ ಉದಾವಸು ಎಂಬ ಮಗನು ಹುಟ್ಟಿದನು. ಉದಾವಸುವಿಗೆ ನಂದಿವರ್ಧನ, ನಂದಿವರ್ಧನನಿಗೆ ಸುಕೇತು, ಸುಕೇತುವಿಗೆ ದೇವರಾತನೂ ಹುಟ್ಟಿದರು. ದೇವರಾತನು ಮಹಾ ಬಲಶಾಲಿ, ಧಾರ್ಮಿಕ, ರಾಜರ್ಷಿ ಎಂದು ಪ್ರಸಿದ್ಧಿ ಪಡೆದನು. ಆ ದೇವರಾತನಿಗೆ ಬೃಹದ್ರಥ, ಬೃಹದ್ರಥನಿಗೆ ಮಹಾವೀರ ಹುಟ್ಟಿದರು. ಮಹಾವೀರನು ನಿಜಕ್ಕೂ ಮಹಾವೀರನೇ! ಅವನಿಗೆ ಸುಧೃತಿ, ಸುಧೃತಿಗೆ ಧೈರ್ಯವಂತನಾದ ದೃಷ್ಟಕೇತು, ದೃಷ್ಟಕೇತುವಿಗೆ ಹರ್ಯಶ್ವ, ಅವನಿಗೆ ಮರು, ಮರುವಿಗೆ ಪ್ರತೀಂಧಕ, ಪ್ರತೀಂಧಕನಿಗೆ ಕೀರ್ತಿರಥ, ಕೀರ್ತಿರಥನಿಗೆ ದೇವಮೀಢ, ದೇವಮೀಢನಿಗೆ ವಿಬುಧ, ವಿಬುಧನಿಗೆ ಮಹೀಂದ್ರಕ, ಮಹೀಂದ್ರಕನಿಗೆ ಕೀರ್ತಿರಾತ, ಅವನಿಗೆ ಮಹಾರೋಮ, ಮಹಾರೋಮನಿಗೆ ಸ್ವರ್ಣರೋಮ, ಸ್ವರ್ಣರೋಮನಿಗೆ ಹೃಸ್ವರೋಮನೂ ಹುಟ್ಟಿದರು. ಹೃಸ್ವರೋಮನು ಮಹಾಮೇಧಾವಿ, ಮಹಾತ್ಮ, ಮತ್ತು ಧಾರ್ಮಿಕ. ಅವನೇ ನನ್ನ ತಂದೆ. ಅವನ ಜ್ಯೇಷ್ಠ ಪುತ್ರನೆಂದು ಹೇಳಿಕೊಳ್ಳಲು ನಾನೆಷ್ಟೋ ಸಂತೋಷಿಸುತ್ತೇನೆ.

ನಾನೀಗ ಈ ಮಿಥಿಲಾ ರಾಜ್ಯ ಪರಿಪಾಲನೆ ಮಾಡುತ್ತಿರುವುದು ನನ್ನ ಪೂರ್ವಿಕರ ಧಾರ್ಮಿಕ ಫಲ ವಿಶೇಷವೆಂದೇ ಹೇಳಬೇಕು. ಇನ್ನು ನನ್ನ ತಮ್ಮ ಕುಶಧ್ವಜನು ದೇವ ಸಮಾನನು. ನಾನು ಅವನನ್ನು ಸೋದರ ಭಾವಕ್ಕಿಂತ ಮಿಗಿಲಾದ ಸ್ನೇಹ ಭಾವನೆಯಿಂದ ನೋಡುತ್ತಾ ಸ್ವಾತಂತ್ರ್ಯವಿತ್ತು ಬೆಳೆಸಿ ದೊಡ್ಡವನಾಗಿ ಮಾಡಿದೆ. ಹೀಗಿರುವಲ್ಲಿ ಸ್ವಲ್ಪ ಕಾಲಾನಂತರ, ಸಾಂಕಾಸ್ಯ ಪಟ್ಟಣವನ್ನು ಆಳುತ್ತಿದ್ದ ಸುಧನ್ವನೆನ್ನುವ ರಾಜನು ಮಿಥಿಲಾಪುರವನ್ನು ಮುತ್ತಿಗೆ ಹಾಕಿದನು. ನನ್ನ ಅರಮನೆಯಲ್ಲಿದ್ದ ಶಿವಧನುಸ್ಸನ್ನು ತನಗೊಪ್ಪಿಸಬೇಕೆಂದು ರಾಯಭಾರಿಗಳ ಮೂಲಕ ಹೇಳಿ ಕಳಿಸಿದನು. ಅದನ್ನು ನಾನು ನಿರಾಕರಿಸಿದೆ. ಆ ಕಾರಣದಿಂದ ನಮ್ಮಿಬ್ಬರಿಗೂ ಘೋರ

ಯುದ್ಧವು ನಡೆಯಿತು. ರಣದಲ್ಲಿ ನಾನು ಸುಧನ್ವನನ್ನು ಕೊಂದು ಹಾಕಿದೆ, ಸಾಂಕಾಸ್ಯ ಪಟ್ಟಣವನ್ನು ನನ್ನ ವಶ ಮಾಡಿಕೊಂಡು ಆ ರಾಜ್ಯಕ್ಕೆ ನನ್ನ ತಮ್ಮನಾದ ಕುಶಧ್ವಜ ನನ್ನು ರಾಜನನ್ನಾಗಿ ಮಾಡಿದೆ. ಆ ಪಟ್ಟಣವು ಇಕ್ಷುಮತೀ ನದೀ ತೀರದಲ್ಲಿ ಶೋಭಾಯಮಾನವಾಗಿದೆ. ಅದು ದೂರಕ್ಕೆ ಪುಷ್ಪಕ ವಿಮಾನದಂತೆ ಕಾಣುತ್ತದೆ. ನನ್ನ ತಮ್ಮನು ಧಾರ್ಮಿಕ. ಅವನೀಗ ಸಾಂಕಾಸ್ಯ ಪಟ್ಟಣವನ್ನು ಪರಿಪಾಲಿಸುತ್ತಿದ್ದಾನೆ. ಈ ಸಮಾರಂಭದಲ್ಲಿ ಪಾಲ್ಗೊಳ್ಳುವ ಸಲುವಾಗಿ ಅವನನ್ನು ಕರೆಸಿದ್ದೇನೆ.

ಬ್ರಹ್ಮರ್ಷೀ! ನನ್ನ ಇಬ್ಬರು ಕುಮಾರಿಯರನ್ನು ರಾಮ ಲಕ್ಷ್ಮಣರಿಗಿತ್ತು ವಿವಾಹ ಮಾಡೆಂದು ತಾವು ಆಜ್ಞಾಪಿಸಿದಿರಿ, ಬಹಳ ಸಂತೋಷ. ಸೀತೆ ದೇವಕನ್ನಿಕೆಯಾದ್ದ ರಿಂದ ಅವಳು ವೀರ್ಯ ಶುಲ್ಕ. ಅವಳನ್ನು ರಾಮಚಂದ್ರನಿಗಿತ್ತು ವಿವಾಹ ಮಾಡ ಬೇಕೆಂದು ನಿರ್ಣಯವಾಗಿದೆ. ನನ್ನ ಇನ್ನೊಬ್ಬಳು ಮಗಳು ಊರ್ಮಿಳೆಯನ್ನು ಲಕ್ಷ್ಮಣನಿಗೆ ಕೊಟ್ಟು ವಿವಾಹ ಮಾಡುವ ವಿಷಯದಲ್ಲಿ ತಮ್ಮ ಆಜ್ಞೆಯನ್ನು ಶಿರಸಾವಹಿಸಿ ನಡೆಸುತ್ತೇನೆ. ಹಾಗೇ ಮತ್ತೊಂದು ವಿಷಯವನ್ನೂ ಮನವಿ ಮಾಡಿ ಕೊಳ್ಳುತ್ತಿದ್ದೇನೆ. ದಶರಥ ಮಹಾರಾಜಾ! ಈ ದಿವಸ ಮಖಾ ನಕ್ಷತ್ರ. ಈ ದಿನ ರಾಮ ಲಕ್ಷ್ಮಣರಿಗೆ ವಿವಾಹ ನಡೆಸಲು ತಾವು ನಾಂದಿಗೆ ಸಿದ್ಧರಾಗಬೇಕು. ಅಲ್ಲದೆ, ತಮಗೆ ನಾಲ್ಕು ಪುತ್ರರತ್ನಗಳು, ಒಂದೇ ಅನುಗ್ರಹದಿಂದ ಅವರನ್ನು ಪಡೆದಿರುವಿರಾದ ಕಾರಣ ಮಿಕ್ಕ ಇಬ್ಬರು ಪುತ್ರರು ಅವಿವಾಹಿತರಾಗಿರುವುದು ರಾಮ ಲಕ್ಷ್ಮಣರಿಗೆ ಅತೃಪ್ತಿ ಉಂಟುಮಾಡಿದ ಹಾಗಾಗಬಹುದು. ಆದ್ದರಿಂದ, ನಾಡಿದ್ದು ಉತ್ತರ ಫಾಲ್ಗುಣಿ ನಕ್ಷತ್ರದಲ್ಲಿ ಭರತ ಶತ್ರುಘ್ನರಿಬ್ಬರಿಗೂ ನನ್ನ ತಮ್ಮ ಕುಶಧ್ವಜನ ಇಬ್ಬರು ಕುಮಾರಿಯರಾದ ಮಾಂಡವಿ ಶ್ರುತಕೀರ್ತಿಯರನ್ನು ಕೊಟ್ಟು ವಿವಾಹ ಮಾಡಬಹುದು. ಅನುಜ್ಞೆಯನ್ನು ದಯಪಾಲಿಸಬೇಕು," ಎಂದು ಪ್ರಾರ್ಥಿಸಲು. ಸಭಾಜನರು, "ಶುಭಂ, ಶುಭಂ," ಎಂದು ಮುಗಿಲು ಮುಟ್ಟುವಂತೆ ಕರತಾಡನ ಮಾಡಿದರು.

ಜನಕ ಮಹಾರಾಜನ ಸಲಹೆಯನ್ನು ಪುರಸ್ಕರಿಸಿ, ಭರತ ಶತ್ರುಘ್ನರ ವಿವಾಹದ ಬಗ್ಗೆ ವಸಿಷ್ಠ, ವಾಮದೇವ, ವಿಶ್ವಾಮಿತ್ರಾದಿಗಳು ದೀರ್ಘವಾಗಿ ಆಲೋಚಿಸಿ, ದಶರಥನನ್ನು ಒಪ್ಪಿಸಿ ಜನಕ ಮಹಾರಾಜನಿಗೆ ಈ ರೀತಿಯಾಗಿ ತಿಳಿಸಿದರು. "ಇಕ್ಷ್ವಾಕು ವಿದೇಹ ವಂಶಗಳೆರಡೂ ಯಾರೂ ಊಹಿಸಲಾರದಷ್ಟು ಪವಿತ್ರವಾದ ವುಗಳು. ಈ ಎರಡೂ ವಂಶಗಳ ದೊಡ್ಡತನವನ್ನು ಎಷ್ಟೆಂದು ವರ್ಣಿಸಲಾದೀತು! ಈ ವಂಶಗಳಿಗೆ ಸರಿಸಮಾನವಾದ ವಂಶಗಳು ಈ ಜಗತ್ತಿನಲ್ಲೆಲ್ಲೂ ಇಲ್ಲವೆಂದೇ ನಮ್ಮ ಭಾವನೆ. ಈ ಎರಡು ವಂಶದವರಿಗೂ ಹೀಗೆ ವಿವಾಹದ ಮೂಲಕ ಧರ್ಮ ಸಂಬಂಧ ಏರ್ಪಡುತ್ತಿರುವುದು ಅತ್ಯಂತ ಸಮಂಜಸವಾದುದೂ ವೈಭವಯುತ

ವಾದುದೂ ಘನತೆಯಿಂದ ಕೂಡಿದುದೂ ಪವಿತ್ರವಾದುದೂ ಆಗಿದೆ. ಇಷ್ಟೇ ಅಲ್ಲದೆ, ವಧೂವರರು ಸರಿಸಮಾನವಾದ ರೂಪಲಾವಣ್ಯ ಹೊಂದಿರುವವರು. ಓ ಜನಕರಾಜಾ! ನಿಮ್ಮ ತಮ್ಮ ಕುಶಧ್ವಜನು ಧರ್ಮಜ್ಞನು. ಅವನೂ ಕೂಡ ದಶರಥ ಮಹಾರಾಜನೊಂದಿಗೆ ಸಂಬಂಧ ಬೆಳೆಸುವುದು ಉಚಿತವೇ ಪರಮಾನಂದದ ವಿಷ ಯವೇ. ಅವನ ಮಕ್ಕಳಾದ ಮಾಂಡವಿ, ಶ್ರುತಕೀರ್ತಿಯರನ್ನು ನಾವು ಭರತ ಶತ್ರುಘ್ನರಿಗೆ ತಂದುಕೊಳ್ಳಲು ಸಿದ್ಧರಾಗಿದ್ದೇವೆ. ಈ ಎರಡು ವಂಶಗಳೂ ಈ ಮದುವೆಗಳ ಮೂಲಕ ಪರಸ್ಪರ ಬಂಧಿಸಿಕೊಳ್ಳಬೇಕೆನ್ನುವುದೇ ನಮ್ಮ ಆಸೆ," ಎಂದು ವಸಿಷ್ಠ, ವಿಶ್ವಾಮಿತ್ರರು ಹೇಳಿದರು.

ಜನಕ ಕುಶಧ್ವಜರು ಅಮಿತಾನಂದದಿಂದ ಮಹರ್ಷಿಗಳಿಗೆ ನಮಸ್ಕರಿಸಿ, "ನಮ್ಮ ಪುಣ್ಯವು ಅಸಾಧಾರಣವಾದುದು. ನಾವಿಬ್ಬರು ಅಣ್ಣತಮ್ಮಂದಿರೂ ಇಕ್ಷ್ವಾಕು ವಂಶ ದೊಂದಿಗೆ ಸಂಬಂಧ ಬೆಳೆಸಬೇಕೆಂದು ಮಹಾ ಋಷಿಗಳು ಸಂಕಲ್ಪಿಸಿರುವುದು ಸಾಮಾನ್ಯವಲ್ಲ. ನಮ್ಮ ಜನ್ಮಾಂತರ ಪುಣ್ಯವಿಶೇಷವಲ್ಲದೆ ಮಹರ್ಷಿಗಳಿಗೆ ಇಂಥ ಸಂಕಲ್ಪ ಬರುವುದಿಲ್ಲ. ನಿಮ್ಮ ಆಜ್ಞೆಯನ್ನು ನಾವಿಬ್ಬರೂ ಶಿರಸಾವಹಿಸುತ್ತೇವೆ," ಎಂದು ಕೃತಜ್ಞತಾಪೂರ್ವಕವಾಗಿ ಹೇಳಿದರು.

ನಾಳೆ ಒಳ್ಳೆಯ ಮೂಹೂರ್ತವಾದ ಕಾರಣ ನಾಲ್ಕು ಜನ ಅಣ್ಣ ತಮ್ಮಂದಿರಿಗೂ ಒಂದೇ ಸಾರಿ ವಿವಾಹ ಮಾಡುವುದು ಒಳ್ಳೆಯದೆಂದು ವಸಿಷ್ಠರು ಸಲಹೆ ಮಾಡಲು, ಜನಕ ಮಹಾರಾಜನು, "ನಾವು ಧನ್ಯರು. ದಶರಥ ಮಹಾರಾಜರು ಎಷ್ಟೋ ದಿನಗಳಿಂದ ತಮ್ಮ ಶಿಷ್ಯರಾಗಿ ತಮ್ಮ ಆಜ್ಞೆಯನ್ನು ಪಾಲಿಸುತ್ತಿದ್ದಾರೆ. ಇಂದಿನಿಂದ ನಾವು ಅಣ್ಣತಮ್ಮಂದಿರು ತಮ್ಮ ಆಜ್ಞೆಗೆ ಬದ್ಧರಾಗುತ್ತಿದ್ದೇವೆ. ನಮ್ಮ ಮೂವರ ಬಾಧ್ಯತೆಯನ್ನೂ ನೀವೇ ವಹಿಸಿ, ಏನು ಮಾಡಬೇಕೆಂದು ಆಜ್ಞಾಪಿಸಿದರೆ ಅದನ್ನು ಮಾಡಲು ನಾವು ಸಿದ್ಧರಾಗಿದ್ದೇವೆ. ನಮ್ಮಿಂದ ಮಾಡಿಸುವ ಭಾರ ನಿಮ್ಮದೇ," ಎಂದು ಹೇಳಿ ಕೈಕಟ್ಟಿ ನಿಂತನು. ದಶರಥ ಮಹಾರಾಜನು ಎದ್ದು ನಿಂತು, "ಮಿಥಿಲಾಪತೀ! ಅಣ್ಣ ತಮ್ಮಂದಿರಾದ ನಿಮ್ಮಿಬ್ಬರ ಸದ್ಗುಣಗಳನ್ನು ವರ್ಣಿಸಲು ಸಾಧ್ಯವಿಲ್ಲ. ಇಷ್ಟು ಮಂದಿ ಮಹರ್ಷಿಗಳನ್ನೂ ರಾಜ ಪುಂಗವರನ್ನೂ ಮಹಾರಾಜ ರನ್ನೂ ಪ್ರಜಾಕೋಟಿಯನ್ನೂ ನೀವು ಆದರದಿಂದ ಸತ್ಕರಿಸಿದ್ದೀರಿ. ನಾನು ಈಗಲೇ ಬಿಡದಿಗೆ ಹೋಗಿ ನಾಂದೀ ಸಮಾವರ್ತನ ಶಾಸ್ತ್ರಗಳನ್ನು ಯಥಾವಿಧಿಯಾಗಿ ಮಾಡುತ್ತೇನೆ, ಅಪ್ಪಣೆಕೊಡಿ," ಎಂದು ಕೇಳುತ್ತಲೆ, ಜನಕನೂ ಕುಶಧ್ವಜನೂ ಅವನನ್ನು ಬೀಳ್ಕೊಟ್ಟು ತಮ್ಮ ಕೆಲಸದ ಮೇಲೆ ಹೊರಟರು.

ದಶರಥ ಮಹಾರಾಜನು ನಾಂದೀ ಕಾರ್ಯಗಳನ್ನು ಶಾಸ್ತ್ರ ವಿಹಿತವಾಗಿ ನೆರವೇರಿಸಿ ದನು. ಬೆಳಗ್ಗೆ ನಾಲ್ವರು ಕುಮಾರರ ಹತ್ತಿರವೂ ಸಮಾವರ್ತನ ಕಾರ್ಯವನ್ನು ಮಾಡಿಸಿದನು. ಹಲವು ಸಾವಿರ ಗೋವುಗಳನ್ನು ಬಂಗಾರದ ಕೊಂಬು ಗೆಜ್ಜೆಗಳಿಂದ ಅಲಂಕರಿಸಿ, ಹಾಲು ಕರೆಯಲು ಪಾತ್ರೆ ಸಹಿತವಾಗಿ, ಮಕ್ಕಳಿಂದ ಬ್ರಾಹ್ಮಣರಿಗೆ ದಾನ ಮಾಡಿಸಿದನು. ಆ ಸುಂದರ ದೃಶ್ಯವು ಕಣ್ಣುಗಳಿಗೆ ಹಬ್ಬವಾಗಿತ್ತು. ದಶರಥನು ಮಿಥಿಲಾಪುರದ ಜನರಿಗೆ, ನಾಲ್ವರು ದಿಕ್ಪಾಲಕರ ಮಧ್ಯೆ ಪ್ರಸನ್ನ ತೇಜೋವಂತನಾಗಿ ಪ್ರಕಾಶಿಸುತ್ತಿರುವ ಬ್ರಹ್ಮದೇವನ ಹಾಗೆ ಕಾಣಿಸಿದನು. ಹೀಗೆ ಗೋದಾನವಾಗುತ್ತಿರು ವಾಗ ಕೇಕೇಯ ರಾಜಪುತ್ರನಾದ ಯುಧಾಜಿತ್ ಬಂದನು. ಅವನೇ ಕೈಕೆಯ ಸೋದರ, ಭರತನ ಸೋದರಮಾವ. ಆ ವೈಭವಗಳನ್ನೆಲ್ಲಾ ನೋಡಿದ ಮೇಲೆ, ಕುಶಲ ಪ್ರಶ್ನೆಗಳಾದ ಬಳಿಕ ಅವನು, "ನಮ್ಮ ತಂದೆಯು ಮೊಮ್ಮಗನನ್ನು ನೋಡಲು ತುಂಬ ಆಸೆ ಪಡುತ್ತಿದ್ದಾರೆ. ಆದ್ದರಿಂದ ನಾನು ಅಯೋಧ್ಯೆಗೆ ಬಂದೆ. ಅಲ್ಲಿ ರಾಮಕಲ್ಯಾಣದ ವಾರ್ತೆಯನ್ನು ತಿಳಿದು, ಆತುರದಿಂದ ಇಲ್ಲಿಗೆ ಹೊರಟು ಬಂದೆ. ರಾಮಕಲ್ಯಾಣದ ವಾರ್ತೆಯು ನಮ್ಮ ತಂದೆಗೆ ತಿಳಿಯದು. ರಾಮಕಲ್ಯಾಣವನ್ನು ನೋಡಿದಂತೆಯೂ ತಮ್ಮನ್ನು ದರ್ಶಿಸಿದಂತೆಯೂ ನಮ್ಮ ತಂದೆಯ ಕೋರಿಕೆ ಯನ್ನು ತಿಳಿಸಿದಂತೆಯೂ ಎಲ್ಲವೂ ನಡೆಯುವುದೆಂದು ನೆನೆದು ನಾನು ಮಾತ್ರ ಮದುವೆಗೆ ಬರುವಂತಾಯಿತು. ನಾನು ಅದನ್ನು ನೋಡಿದ ಹಾಗಾಯಿತು ಮತ್ತು ತಮ್ಮನ್ನೆಲ್ಲಾ ದರ್ಶನ ಮಾಡಿದ ಹಾಗಾಯಿತು. ಹಾಗೇ ನಮ್ಮ ತಂದೆಯ ಇಷ್ಟವನ್ನೂ ತಿಳಿಸಿದ ಹಾಗಾಯಿತು ಎಂದು ಹೊರಟುಬಂದೆ," ಎಂದು ಹೇಳಿದ್ದನ್ನು ಕೇಳಿ ದಶರಥನು ಬಹಳವಾಗಿ ಸಂತೋಷಗೊಂಡನು.

ಆ ರಾತ್ರಿ ದಶರಥ ಮಹಾರಾಜನು ಮಕ್ಕಳೊಂದಿಗೂ ಬಂಧು ಮಿತ್ರರೊಂದಿಗೂ ಹಲವಾರು ಆನಂದದ ವಿಷಯಗಳನ್ನು ಕುರಿತು ಮಾತನಾಡಿದನು. ಅವರ ಬಿಡದಿ ಯಲ್ಲಿ ಯಾರೂ ರಾತ್ರಿ ನಿದ್ರೆ ಮಾಡಲೇ ಇಲ್ಲ. ಯಾವಾಗ ಬೆಳಗಾಗುವುದೋ ಪ್ರಭುಗಳ ವಿವಾಹವನ್ನು ಯಾವಾಗ ನೋಡುವೆವೋ ಎಂದು ಅಮಿತೋಲ್ಲಾಸ ದಿಂದ, ಪ್ರತಿಯೊಬ್ಬರೂ ತಮ್ಮ ಮನೆಯಲ್ಲೇ ಮುದುವೆ ಸಮಾರಂಭ ನಡೆಯುತ್ತಿದೆ ಯೇನೋ ಎನ್ನುವಂತೆ ಬ್ರಹ್ಮಾನಂದಪಡುತ್ತಿದ್ದರು.

ಮಾರನೆಯ ದಿನ ಪ್ರಭಾತ ಸಮಯದಲ್ಲಿ ಸಮಸ್ತ ಕಾರ್ಯಗಳನ್ನೂ ಮುಗಿಸಿ ಕೊಂಡು, ಮಹರ್ಷಿಗಳೊಂದಿಗೆ ಜನಕ ಮಹಾರಾಜನು ಯಜ್ಞಶಾಲೆಗೆ ಆಗಮಿಸಿ ದನು. ರಾಮ ಲಕ್ಷ್ಮಣ ಭರತ ಶತ್ರುಘ್ನರು ಮಂಗಳ ಸ್ನಾನ ಮಾಡಿ ಪೀತಾಂಬರ ಉಟ್ಟು, ತಲೆಗೆ ಪೇಟ ಕಟ್ಟಿ, ಹಾರ ಹಾಕಿಕೊಂಡು, ವಜ್ರ ವೈಡೂರ್ಯಗಳಿಂದ ಕೂಡಿದ ಅನೇಕ ಆಭರಣಗಳನ್ನು ಧರಿಸಿ, ದಿವಿಯಿಂದಿಳಿದು ಬಂದ ದೇವಲೋಕದ

ಸುಂದರರಂತೆ ತೇಜೋವಂತರಾಗಿ ಪ್ರಕಾಶಿಸುತ್ತಿದ್ದರು. ಅನೇಕ ಬಗೆಯ ಮಂಗಳ ವಾದ್ಯಗಳು ಮೊಳಗುತ್ತಿರಲು, ವಿಜಯ ಮುಹೂರ್ತದಲ್ಲಿ ಯಜ್ಞಶಾಲೆಗೆ ನಡೆದು ಬಂದರು. ಅವರ ಜೊತೆಯಲ್ಲಿ ಮಂತ್ರಿಗಳೂ ಸಾಮಂತರೂ ಪರಿವಾರವೂ ವಿವಾಹಕ್ಕೆ ಅವಶ್ಯಕವಾದ ಸಾಮಗ್ರಿಗಳೊಂದಿಗೆ, ಆಭರಣಗಳೊಂದಿಗೆ, ಪೀತಾಂಬ ರಗಳೊಂದಿಗೆ, ಧನರಾಶಿಯೊಂದಿಗೆ ಬಂದರು. ಮಿಥಿಲಾಪುರದ ಬೀದಿಯಲ್ಲಿ ಲಗ್ನ ಮಂಟಪದ ಕಡೆಗೆ ಅವರು ನಡೆದು ಹೋಗುತ್ತಿರಲು, ಜನರು ಎವೆಯಾಡಿಸದೆ, "ಎಂಥ ಸುಂದರರು! ನಿಜವಾಗಿಯೂ ಇವರು ಸಾಮಾನ್ಯ ಮಾನವರಲ್ಲ. ದೇವ ಲೋಕದಿಂದ ಇಳಿದು ಬಂದಿರಬೇಕು!" ಎಂದು ಆಶ್ಚರ್ಯಪಡುತ್ತಾ ಗುಸು ಗುಸು ಮಾತನಾಡಿಕೊಂಡರು. ಇಂಥ ಸುಂದರ ರಾಜಕುಮಾರರನ್ನು ತಾವು ಎಂದೂ ನೋಡಿಯೇ ಇರಲಿಲ್ಲ ಎಂದು ಸ್ತ್ರೀಯರು ಆನಂದಿಸಿದರು. ಮಹಡಿಗಳು, ಕಿಟಕಿಗಳು, ಬಾಗಿಲುಗಳು, ಬೀದಿಗಳು ಜನರಿಂದ ಕಿಕ್ಕಿರಿದಿದ್ದುವು. ರಸ್ತೆಯಲ್ಲಿ ನಡೆದು ಬಂದ ಆ ಸುಂದರ ವಿಗ್ರಹಗಳು ಮಂಟಪವನ್ನು ಸೇರಿದವು.

ಜನಕ ಮಹಾರಾಜನು ತನ್ನ ತಮ್ಮ ಕುಶಧ್ವಜನೊಂದಿಗೆ, ತಮ್ಮ ಪುತ್ರೀ ರತ್ನಗಳನ್ನು ಮಂಗಳ ಸ್ನಾನ ಮಾಡಿಸಿ, ಮದುವಣಗಿತ್ತಿಯರನ್ನಾಗಿ ಅಲಂಕರಿಸಿ ಲಗ್ನಮಂಟಪಕ್ಕೆ ಕರೆತಂದನು. ಮದುವಣಗಿತ್ತಿಯರು ಮುಖಕ್ಕೆ ಮುಸುಕು ಹಾಕಿಕೊಂಡು ಬರುತ್ತಿ ದ್ದರು. ಅವರ ಹಿಂದೆ ಸಾವಿರಾರು ದಾಸಿಯರು ಮದುವೆಗೆ ಸಂಬಂಧಿಸಿದ ಫಲಪುಷ್ಪಾದಿಗಳು, ಅರಿಶಿನ, ಕುಂಕುಮ, ಅಕ್ಷತೆ, ಆಭರಣ ಮತ್ತು ಪೀತಾಂಬ ರಗಳೊಂದಿಗೆ ಬರುತ್ತಿರಲು ಮಿಥಿಲಾಪುರವೇ ಬರುತ್ತಿದ್ದೆಯೇನೋ ಎನ್ನುವಂತಿತ್ತು. ನಾಲ್ವರು ಕನ್ನಿಕೆಯರು ನಾಲ್ಕು ದೀಪಗಳಂತೆ ಪ್ರಕಾಶಿಸುತ್ತಿದ್ದರು.

ವಿವಾಹ ಮಂಟಪದ ಒಂದು ಕಡೆ ರಾಮ ಲಕ್ಷ್ಮಣ ಭರತ ಶತ್ರುಘ್ನರೂ ಇನ್ನೊಂದು ಕಡೆ ಸೀತೆ, ಊರ್ಮಿಳೆ, ಮಾಂಡವಿ, ಶ್ರುತಕೀರ್ತಿಯರೂ ಪೀಠಗಳಲ್ಲಿ ಆಸೀನರಾಗಿ ದ್ದರು. ಅವರ ನಡುವೆ ಶುಭ್ರವಾದ ಬಿಳಿಯ ಬಟ್ಟೆಯನ್ನು ಅಡ್ಡ ಹಿಡಿದರು. ಅಯೋಧ್ಯಾ ವಾಸಿಗಳೆಲ್ಲರೂ ದಶರಥನ ಕಡೆಯೂ ಮಿಥಿಲಾಪುರದ ವಾಸಿಗಳೆ ಲ್ಲರೂ ಜನಕನ ಕಡೆಯೂ ಆಸೀನರಾದರು. ವಿವಾಹ ಮಂಟಪವನ್ನು ಬಗೆಬಗೆಯ ಆಭರಣಗಳಿಂದ ಅಲಂಕರಿಸಿದ್ದು ಮಿರುಮಿರುಗುತ್ತಿತ್ತು. ಬಂದಿದ್ದವರ ದೃಷ್ಟಿಯೆಲ್ಲಾ ವಿವಾಹ ಮಂಟಪದ ಮೇಲೇ ಇತ್ತು. ಅಷ್ಟು ಆಕರ್ಷಣೀಯವಾಗಿ ಅದನ್ನು ಸಿಂಗರಿಸಿದ್ದರು. ಸಮಾರಂಭದಲ್ಲಿ ಸಹಸ್ರಾರು ಬಂಧು ಮಿತ್ರರು ಸೇರಿದ್ದರು. ನಿಜಕ್ಕೂ ಆ ದಿನ ಮಿಥಿಲಾಪುರಿಗೇ ಮದುವೆಯೊ ಎನ್ನುವಂತೆ ಕಾಣುತ್ತಿತು. ಆಗ, ದಶರಥನು ಎದ್ದು, "ಇನ್ನು ತಡವೇಕೆ," ಎಂದು ವಸಿಷ್ಠರಲ್ಲಿ ಮನವಿ

ಮಾಡಲು, ಜನಕ ಮಹಾರಾಜನು ಕೈಜೋಡಿಸಿಕೊಂಡು, "ಈ ಕಾರ್ಯವನ್ನು ನೀವೇ ನಡೆಸಿಕೊಡಬೇಕು," ಎಂದು ವಸಿಷ್ಠರನ್ನು ಪ್ರಾರ್ಥಿಸಿದನು.

ವಸಿಷ್ಠರು ವಿಶ್ವಾಮಿತ್ರ, ಶತಾನಂದರನ್ನು ಜೊತೆಯಲ್ಲಿಟ್ಟುಕೊಂಡು, ಪಂಡಿತರ ವೇದ ಮಂತ್ರಗಳು ಮುಗಿಲು ಮುಟ್ಟುತ್ತಿರಲು, ಅಗ್ನಿವೇದಿಕೆಯನ್ನು ಸಿದ್ಧಪಡಿಸಿದರು. ಗಂಧ ಪುಷ್ಪಗಳಿದ್ದ ಸುವರ್ಣ ಪಾತ್ರೆಗಳನ್ನೂ ಧಾನ್ಯ ತುಂಬಿದ ಬಟ್ಟಲುಗಳನ್ನೂ ಧೂಪದ ಬಟ್ಟಲನ್ನೂ ಹೋಮದ ಸೌಟನ್ನೂ ಅರ್ಘ್ಯ ಪಾತ್ರೆಯನ್ನೂ ವೇದಿಕೆಯ ಸುತ್ತಲೂ ಅಣಿಮಾಡಿದರು. ವೇದಿಕೆಯ ಮಧ್ಯ ಭಾಗದಲ್ಲಿ ಅಗ್ನಿಹೋತ್ರವನ್ನು ಸ್ಥಾಪಿಸಿದರು. ಹೆಚ್ಚು ಕಡಿಮೆ ಇಲ್ಲದ, ಒಂದೇ ಉದ್ದದ ದರ್ಭೆಗಳನ್ನು ಯಥಾ ಶಾಸ್ತ್ರೀಯವಾಗಿ, ಮಂತ್ರಪೂರ್ವಕವಾಗಿ ಇಟ್ಟರು. ವಧೂವವರ ಅಭ್ಯುದಯಕ್ಕಾಗಿ ವೈದಿಕ ಮಂತ್ರಗಳಿಂದ ಹೋಮವನ್ನು ಮಾಡಲಾರಂಭಿಸಿದರು. ವೇದವಿಹಿತವಾದ ಕರ್ಮಗಳನ್ನು ಸಕ್ರಮವಾಗಿ ಮಾಡಿಸಿ, ಕಂಕಣಗಳನ್ನು ಕಟ್ಟಿಸಿದರು.

ಕನ್ಯಾದಾನಕ್ಕೆ ಏರ್ಪಾಟುಗಳನ್ನು ಮಾಡಿ, ವಸಿಷ್ಠರು ಜನಕ ಮಹಾರಾಜನನ್ನು ಆಹ್ವಾನಿಸಲು, ಜನಕನು ಸರ್ವಾಭರಣಧಾರಿಯಾಗಿ ಹೋಮ ವೇದಿಕೆಗೆ ಬಂದನು. ವಸಿಷ್ಠರ ಆಜ್ಞಾನುಸಾರವಾಗಿ ರಾಮನ ಹಸ್ತದಲ್ಲಿ ನಾರಿಕೇಳವನ್ನಿಟ್ಟು ಅದರ ಮೇಲೆ ಸೀತೆಯ ಹಸ್ತವನ್ನಿರಿಸಿ, ಅದರ ಮೇಲೆ ಕ್ಷೀರವನ್ನೆರೆದು, ತನ್ನ ಆನಂದಬಾಷ್ಪಗಳನ್ನು ಸುರಿಸಿದನು. "ರಾಮಾ! ಇಗೋ ಸೀತೆ, ನನ್ನ ಮಗಳು. ಇವಳು ನಿನ್ನ ಸಹಧರ್ಮ ಚಾರಿಣಿ, ಒಪ್ಪಿಸಿಕೊ. ನಿನಗೆ ಶುಭವಾಗಲಿ. ನಿನ್ನ ಕೈಯಿಂದ ಇವಳ ಕೈ ಹಿಡಿದುಕೊ. ಇವಳು ಮಹಾ ಗುಣವಂತೆ. ಇನ್ನು ಮೇಲೆ ಇವಳು ನಿನ್ನೊಂದಿಗೆ ನಿನ್ನ ನೆರಳಿನಂತೆ ಇರುವಳು," ಎಂದು ಹೇಳಿ, ರಾಮನ ಕೈಗೆ ಮಂತ್ರಸಹಿತವಾಗಿ ನೀರು ಬಿಟ್ಟು, ಮಂತ್ರೋದಕದಿಂದ ಸೀತೆಯನ್ನು ರಾಮನಿಗೆ ಒಪ್ಪಿಸಿದನು.

ಲಕ್ಷ್ಮಣನ ಬಳಿಗೆ ಬಂದು, "ಲಕ್ಷ್ಮಣಾ! ನಿನಗೆ ಈ ಊರ್ಮಿಳೆಯನ್ನು ಒಪ್ಪಿಸುತ್ತಿದ್ದೇನೆ, ಒಪ್ಪಿಸಿಕೊ," ಎಂದು ಹೇಳಿ, ಮಂತ್ರೋದಕದೊಂದಿಗೆ ಊರ್ಮಿಳೆಯನ್ನು ಲಕ್ಷ್ಮಣನಿಗೆ ಒಪ್ಪಿಸಿದನು. ಭರತನ ಬಳಿಗೆ ಬಂದು, ಮಂತ್ರೋದಕದಿಂದ ಮಾಂಡವಿಯನ್ನು ಭರತನಿಗೆ ಒಪ್ಪಿಸಿದನು. ಶತ್ರುಘ್ನನ ಬಳಿಗೆ ಬಂದು, ಮಂತ್ರೋದಕದಿಂದ ಶ್ರುತಕೀರ್ತಿಯನ್ನು ಶತ್ರುಘ್ನನಿಗೊಪ್ಪಿಸಿದನು. ನಂತರ ಮಾಡಬೇಕಾದ ವಿಧಿಗಳನ್ನು ಋತ್ವಿಕರು ಮಾಡಿದರು.

ಜನಕನು ಆ ಮಂಟಪದ ಮಧ್ಯದಲ್ಲಿ ಹಸನ್ಮುಖಿಯಾಗಿ ನಿಂತು, "ಓ ಸೌಮ್ಯರೇ! ನಮ್ಮ ಕುವರಿಯರು ನಿಮಗೆ ಗೃಹಿಣಿಯರಾಗುತ್ತಿದ್ದಾರೆ, ಮುಹೂರ್ತಕ್ಕೆ ತಡವಿಲ್ಲ,"

ಎನ್ನುತ್ತಲೇ, ವಸಿಷ್ಠರ ಅನುಮತಿಯಿಂದ ನಾಲ್ವರು ಅಣ್ಣ ತಮ್ಮಂದಿರೂ ಅಕ್ಕ ತಂಗಿಯರ ಕೈಗಳನ್ನು ಹಿಡಿದುಕೊಂಡು ಅಗ್ನಿಹೋತ್ರಕ್ಕೆ ಪ್ರದಕ್ಷಿಣೆ ಮಾಡಿದರು. ನಂತರ, ಜನಕನಿಗೂ ದಶರಥನಿಗೂ ಮಹರ್ಷಿಗಳಿಗೂ ಪ್ರದಕ್ಷಿಣೆ ಮಾಡಿ ನಮಸ್ಕರಿಸಿದರು. ಪುಷ್ಪವರ್ಷ ಸುರಿಯಿತು. ಮಂಗಳವಾದ್ಯಗಳು ಮೊಳಗಿದವು. ಸಭಾಸದರು ಅಕ್ಷತೆ ಹಾಕಿದರು. "ಶುಭಂ ಶುಭಂ," ಎನ್ನುವ ಶಬ್ದವು ಮುಗಿಲು ಮುಟ್ಟುವಂತೆ ಕರ್ಣಾನಂದವಾಗಿ ಮೊಳಗಿತು. ದೇವದುಂದುಭಿಯು ಮೊಳಗಿತು. ಅಪ್ಸರೆಯರು ಹಾಡಿದರು. ದಾಸಿಯರು 'ಗೌರೀ ಕಲ್ಯಾಣವೇ' ಎನ್ನುವ ಮಂಗಳ ಗೀತೆಯನ್ನು ವಿವಿಧ ಸ್ವರಗಳಲ್ಲಿ ಇಂಪಾಗಿ ಹಾಡಿದರು. ನಾಲ್ವರು ರಾಜಕುಮಾರರು ತಮ್ಮ ತಮ್ಮ ಪತ್ನಿಯರೊಂದಿಗೆ ಸಭಾಸದರಿಗೆ ವಂದಿಸಿದರು. ಮಹಾಸಭೆಯು, "ಮಂಗಳಂ ಮಂಗಳಂ," ಎಂದಿತು. ತೇಜೋವಂತರಾದ ಆ ನಾಲ್ವರು ಅಣ್ಣ ತಮ್ಮಂದಿರು ತಮ್ಮ ಸತಿಯರ ಕೈಗಳನ್ನು ಹಿಡಿದು, ಪರದೆಯೊಳಗಿದ್ದ ತಮ್ಮ ತಮ್ಮ ತಾಯಿಯರಿಗೆ ನಮಸ್ಕರಿಸಲು ಒಳಗೆ ಹೋದರು. ಅವರ ಆಶೀರ್ವಾದಗಳನ್ನು ಪಡೆದು ಬಿಡದಿಗೆ ಹೋದರು. ಅಂದಿನಿಂದ ಮೂರು ದಿನಗಳು ನಿತ್ಯವೂ ಯಾವುದಾದರೊಂದು ವೈಭವವಾದ ಸಮಾರಂಭವನ್ನು ನಡೆಸಿ, ಅಯೋಧ್ಯೆಯಿಂದ ಬಂದವರಿಗೂ ಮಿಥಿಲಾಪುರವಾಸಿಗಳಿಗೂ ರಾತ್ರಿ ಹಗಲೆನ್ನುವ ಭೇದ ತಿಳಿಯದಂತೆ ಮಾಡಿದರು.

ವಿವಾಹ ನಡೆದ ಮರುದಿನ ವಿಶ್ವಾಮಿತ್ರರು ದಶರಥನ ಬಳಿ ಹೋಗಿ ತಾವು ಸಂಕಲ್ಪಿಸಿದ ಕಾರ್ಯವು ಅಮಿತಾನಂದದಿಂದ ಪೂರ್ತಿಯಾಯಿತೆಂದು ಹೇಳಿದರು. ರಾಮ ಲಕ್ಷ್ಮಣ ಭರತ ಶತ್ರುಘ್ನರನ್ನು ಹತ್ತಿರ ಕರೆದು, ಶಿರಸ್ಸುಗಳನ್ನು ಮುದ್ದಾಡಿ, ಆಶೀರ್ವದಿಸಿ, ತಾವಿನ್ನು ಹಿಮಾಲಯಕ್ಕೆ ತೆರುಳುವುದಾಗಿ ಹೇಳಲು, ರಾಮ ಲಕ್ಷ್ಮಣ ಭರತ ಶತ್ರುಘ್ನರು ಅವರಿಗೆ ನಮಸ್ಕರಿಸಿದರು. ನಂತರ, ವಿಶ್ವಾಮಿತ್ರರು ಜನಕ ಮಹಾರಾಜನ ಬಳಿ ಹೋಗಿ ಕಾರ್ಯ ದಿಗ್ವಿಜಯವಾಯಿತೆಂದೂ ತಿಳಿಸಿ, ಜನಕನ ರಾಣಿಯನ್ನೂ ಸೀತೆ, ಊರ್ಮಿಳೆ, ಮಾಂಡವಿ, ಶ್ರುತಕೀರ್ತಿಯರನ್ನೂ ಆಶೀರ್ವದಿಸಿ, ತಾವಿನ್ನು ಹಿಮಾಲಯಕ್ಕೆ ಹೊರಡುವುದಾಗಿ ಹೇಳಿದರು. ದಶರಥ ಜನಕಾದಿಗಳು ವಿಶ್ವಾಮಿತ್ರರನ್ನು ಬಿಡಲಾರದೆ, ಹಲವು ಬಾರಿ ವಂದನೆಗಳನ್ನು ಸಲ್ಲಿಸಿ, ಅವರನ್ನು ಬೀಳ್ಕೊಟ್ಟರು.

ಮೂರನೆಯ ದಿನ, ರಾಮ ಲಕ್ಷ್ಮಣ ಭರತ ಶತ್ರುಘ್ನರು ದಶರಥನ ಇಷ್ಟ ಪ್ರಕಾರ ತಾವು ಅಯೋಧ್ಯೆಗೆ ಹೋಗಬೇಕೆನ್ನುವ ಸಂಕಲ್ಪವನ್ನು ಜನಕನಿಗೆ ತಿಳಿಸಲು, ಜನಕನು ಅದಕ್ಕೆ ಅಡ್ಡಿ ಹೇಳದೆ, ಅವರ ಪ್ರಯಾಣಕ್ಕೆ ಏರ್ಪಾಟು ಮಾಡಿ, ಅನೇಕ ಸಾಮಗ್ರಿಗಳನ್ನು ರಥಗಳಲ್ಲಿ ಸಿದ್ಧಪಡಿಸಿದನು. ಸಾವಿರ ದಾಸ ದಾಸಿಯರು, ಆನೆ, ರಥ, ಕುದುರೆ, ಗೋವುಗಳನ್ನು ಅಧಿಕ ಸಂಖ್ಯೆಯಲ್ಲಿ ತಮ್ಮ ಕುಮಾರಿಯರಿಗೆ

ಬಹುಮಾನವಾಗಿ ಕೊಟ್ಟನು. ಅಳಿಯಂದರಿಗೆ ಬೆಲೆ ಬಾಳುವ ಮಹಾ ಮಹಾ ಆಭರಣಗಳನ್ನೂ, ರಥಗಳನ್ನೂ, ಕೊಟ್ಟನು. ದಾಸಿಯರಿಗೆ ಹತ್ತು ವರ್ಷಗಳಿಗಾಗುವಷ್ಟು ವಸ್ತ್ರಗಳು, ಆಭರಣಗಳು, ಅನೇಕ ಬಗೆಯ ನಿತ್ಯೋಪಯೋಗದ ವಸ್ತುಗಳನ್ನೂ ಕೊಟ್ಟನು.

ಮಾರನೆಯ ದಿನ ಬೆಳಗಾಗುವ ಹೊತ್ತಿಗೆ ರಥಗಳು ಸಿದ್ಧವಾಗಿದ್ದುವು. ಮಿಥಿಲಾಪುರದ ಅಂತಃಪುರ ಮಾತ್ರವಲ್ಲದೆ ಪುರಸ್ತ್ರೀಯರೆಲ್ಲಾ ಕಣ್ಣೀರು ಹಾಕಿದರು. ಕೆಲವು ವೃದ್ಧ ದಾಸಿಯರು, ದಾದಿಯರು, ಸೀತೆಯನ್ನೂ ಊರ್ಮಿಳೆಯನ್ನೂ ಬಿಡಲಾರದೆ ಕಣ್ಣೀರು ಸುರಿಸುತ್ತಾ ಗೋಳಾಡಿದರು. ಸೀತೆ, ಊರ್ಮಿಳೆ, ಮಾಂಡವಿ, ಶ್ರುತಕೀರ್ತಿಯರ ತಾಯಂದಿರು ಅಳಿಯಂದಿರ ಕೈ ಹಿಡಿದುಕೊಂಡು ತಮ್ಮ ಮಕ್ಕಳನ್ನು ಅತಿ ಜಾಗ್ರತೆಯಿಂದ ನೋಡಿಕೊಳ್ಳಬೇಕೆಂದೂ ಅವರು ಯಾವ ಕಷ್ಟವನ್ನೂ ಸಹಿಸಲಾರರು ಎಂದೂ ಪರಿಪರಿಯಾಗಿ ಹೇಳಿ, ಕಣ್ಣುಗಳು ಊದುವಂತೆ ಅತ್ತು, ಮುಸುಕು ಹಾಕಿಕೊಂಡೇ ರಥದವರೆಗೂ ಬಂದು ಅವರನ್ನು ರಥದಲ್ಲಿ ಹತ್ತಿಸಿದರು. ಮೂರು ದಿನಗಳ ಹಿಂದೆ ಎಷ್ಟು ವೈಭವ ಎಷ್ಟು ಆನಂದವಿತ್ತೋ ಆ ದಿನ ಅಷ್ಟೇ ಚಿಂತೆ ಆವರಿಸಿತ್ತು. ರಥಗಳು ಒಂದರ ಹಿಂದೆ ಒಂದು ಕದಲಿದವು.

ಸೀತೆಯನ್ನು ಬಿಡಲಾರದೆ ದುಃಖ ಉಕ್ಕಿ ಬರುತ್ತಿದ್ದರೂ ಸಮಾಧಾನ ಮಾಡಿಕೊಳ್ಳಲು ಬಹುವಾಗಿ ಪ್ರಯತ್ನಿಸುತ್ತಾ ಅವರನ್ನು ಕಳಿಸಿಕೊಡಲು ಜನಕನು ದಶರಥ ಮಹಾರಾಜನೊಂದಿಗೆ ಸ್ವಲ್ಪ ದೂರ ಹೋದನು. ದಾರಿಯುದ್ದಕ್ಕೂ ಜನಕನು ತನ್ನ ಕುಮಾರಿಯರ ಗುಣಗಳನ್ನೇ ವರ್ಣಿಸುತ್ತಾ ಕಣ್ಣೀರಿಡುತ್ತಾ ಅವರನ್ನು ಚೆನ್ನಾಗಿ ನೋಡಿಕೊಳ್ಳುವಂತೆಯೂ ಆಗಾಗ ಅವರ ಕ್ಷೇಮ ಸಮಾಚಾರವನ್ನು ತಿಳಿಸುವಂತೆಯೂ ಮತ್ತೆ ಮತ್ತೆ ಪ್ರಾರ್ಥಿಸುತ್ತಿದ್ದನು.

ದಶರಥ ಮಹಾರಾಜನು ಅವನನ್ನು ಸಮಾಧಾನ ಮಾಡುತ್ತಾ, "ಜನಕಾ! ನಮ್ಮ ಮನೆಯಲ್ಲಿ ಹೆಣ್ಣು ಮಕ್ಕಳು ಇಲ್ಲದ್ದರಿಂದ ಅವರೇ ನಮ್ಮ ಹೆಣ್ಣು ಮಕ್ಕಳೆಂದು ಭಾವಿಸುತ್ತೇವೆ. ನಮಗೆ ಹೆಣ್ಣು ಮಕ್ಕಳೂ ಅವರೇ ಸೊಸೆಯರೂ ಅವರೇ. ಅವರ ಕ್ಷೇಮಾನಂದಕ್ಕೆ ಯಾವ ಕೊರತೆಯೂ ಇರದು. ನೀವು ಚಿಂತೆ ಮಾಡದೆ ಹಿಂತಿರುಗಿ," ಎಂದು ಹೇಳಿ ರಥವನ್ನು ನಿಲ್ಲಿಸಿದನು. ಅಲ್ಲಿಂದ ಜನಕನು ತನ್ನ ಮಕ್ಕಳು ಅಳಿಯಂದಿರಿದ್ದ ರಥದ ಬಳಿ ಹೋಗಿ, ಮಕ್ಕಳನ್ನು ಹಲವು ಬಗೆಯಾಗಿ ಸಮಾಧಾನಗೊಳಿಸಿ, ಧೈರ್ಯ ಹೇಳಿ, ಧರ್ಮ ಸೂಕ್ತಿಗಳನ್ನು ತಿಳಿಸಿ, ಅತ್ತೆ ಮಾವಂದಿರೊಂದಿಗೆ, ಗಂಡ ಭಾವಮೈದುನರೊಂದಿಗೆ, ನೌಕರರೊಂದಿಗೆ ಹೇಗೆ ನಡೆದುಕೊಳ್ಳಬೇಕೆನ್ನುವುದನ್ನು ಮತ್ತೊಮ್ಮೆ ಜ್ಞಾಪಿಸಿ, ಅವರ ನಮಸ್ಕಾರಗಳನ್ನು

ಸ್ವೀಕರಿಸಿ, ಅವರ ಶಿರಸ್ಸುಗಳನ್ನು ಮುದ್ದಾಡಿ, ಆಶೀರ್ವದಿಸಿ, ಹಿಂತಿರುಗಲಾರದೆ ಗೋಳೋ ಎಂದು ಅಳುತ್ತಾ ರಥದಲ್ಲಿ ಬಂದು ಕುಳಿತನು.

ಅವರ ರಥಗಳು ಅತ್ತ, ಜನಕನ ರಥ ಇತ್ತ ಶರವೇಗದಿಂದ ಹೋದವು. ಜನಕನು ಮಿಥಿಲೆಯನ್ನು ಸೇರಿದೊಡನೆ ಅದು ನಿರ್ಜನ ಪ್ರದೇಶವಾಗಿ ಕಳಾಹೀನವಾಗಿ ನಿಶ್ಶಬ್ದವಾಗಿದ್ದುದನ್ನು ನೋಡಿ ಅಲ್ಲಿ ಇರಲು ಅವನಿಗೆ ಸಾಧ್ಯವಾಗದೆ ಹೋಯಿತು. ಶತಾನಂದರನ್ನೂ ಮಂತ್ರಿಗಳನ್ನೂ ಕರೆಸಿ, ಹೊತ್ತು ಕಳೆಯುವ ಸಲುವಾಗಿ ಮರು ಕಳಿಸುತ್ತಿದ್ದ ಮಕ್ಕಳ ವಿಯೋಗ ದುಃಖವನ್ನು ಶಾಂತಪಡಿಸುವ ಸಲುವಾಗಿ, ಯಾವ ಯಾವುದೋ ವಿಚಾರಗಳನ್ನು ಅವರೊಂದಿಗೆ ಮಾತನಾಡತೊಡಗಿದನು. ಮಧ್ಯೆ ಮಧ್ಯೆ ಎಲ್ಲೋ ಯೋಚಿಸುತ್ತಾ ಏನೋ ಉತ್ತರ ಹೇಳುತ್ತಾ ಇದ್ದುದನ್ನು ಗಮನಿಸಿದ ಮಂತ್ರಿಯು, "ಮಹಾರಾಜಾ! ಸೀತಾ ವಿಯೋಗವು ತಮಗೆ ತೀರದ ವಿಚಾರವೆಂದು ತೋರುತ್ತಿದೆ. ಪ್ರತಿಯೊಬ್ಬ ತಂದೆಗೂ ಇದು ತಪ್ಪಿದ್ದಲ್ಲ. ದಾನ ಮಾಡಿದ ಮೇಲೆ ನಾವು ಕ್ರಮೇಣ ಆ ಸಂಬಂಧವನ್ನು ಸ್ವಲ್ಪ ಬಿಡಬೇಕಾಗಿ ಬರುವುದು. ಇದು ನಿಮಗೆ ತಿಳಿಯದೆ ಇಲ್ಲ. ಅದರಲ್ಲಿಯೂ ಸೀತಾದೇವಿಯು ಎಲ್ಲರಂತೆ ಸಾಮಾನ್ಯವಾದ ಬಾಲಕಿಯಲ್ಲ, ಅವಳು ದೇವತಾ ಪುತ್ರಿ. ಅವಳ ಅಗಲಿಕೆ ಅಧಿಕ ದುಃಖಕ್ಕೆ ಕಾರಣವಾದುದು.

ಮಹಾರಾಜ! ನಮ್ಮ ಮಕ್ಕಳು ಮಾತ್ರವಲ್ಲದೆ, ಅಳಿಯಂದಿರೂ ಕೂಡ ಸಾಮಾನ್ಯ ಯುವಕರಲ್ಲ. ಅವರು ಕೂಡ ಸಾಕ್ಷಾತ್ ದೇವಲೋಕದಿಂದ ಇಳಿದು ಬಂದವರಂತೆ ಕಾಣುತ್ತಾರೆಂದು ನಮ್ಮ ನಗರದ ಆಬಾಲವೃದ್ಧರು ಮಾತಾಡಿಕೊಂಡಿರುವುದನ್ನು ನಾನೇ ಸ್ವತಃ ಕೇಳಿದ್ದೇನೆ. ಇಂಥ ವಂಶ, ಇಂಥ ಸಂಪ್ರದಾಯಗಳುಳ್ಳ ಸಂಬಂಧ ದೊರಕುವುದು, ಕುದುರುವುದು ಮಹಾ ಆಶ್ಚರ್ಯಕರವಾದುದು. ಎಲ್ಲರಿಗೂ ಈ ರೀತಿ ಆಗದು. ನಮ್ಮ ಹೆಣ್ಣು ಮಕ್ಕಳು ಯಾವ ರೀತಿಯ ಕೊರತೆಯೂ ಇಲ್ಲದೆ ಸುಖದಿಂದಿರಬಹುದು. ಶುಭದಿಂದ ಅಭಿವೃದ್ಧಿ ಹೊಂದುವರು," ಎಂದು ವಿವಾಹದ ವೈಭವವನ್ನೆಲ್ಲಾ ಹೇಳಿ ಜನಕನು ಶಾಂತವಾಗುವಂತೆ ಮಾಡಿದರು.

# ೮ ಮತ್ತೊಂದು ಪಂಥಾಹ್ವಾನ

ಅತ್ತ ದಶರಥನು ಮಕ್ಕಳು ಸೊಸೆಯರೊಂದಿಗೆ ಹೋಗುತ್ತಿರುವಾಗ ಕಣ್ಣುಗಳಿಗೆ ಏನೇನೋ ದುರ್ನಿಮಿತ್ತಗಳು ಕಾಣಿಸತೊಡಗಿದವು. ಅವನು ವಸಿಷ್ಠರನ್ನು ಕುರಿತು, "ಸ್ವಾಮೀ! ಏನಿದು? ಆಕಾಶದಲ್ಲಿ ಪಕ್ಷಿಗಳು ಹಾರಾಡುತ್ತಾ ಘೋರವಾಗಿ ಅರಚುತ್ತಿವೆ. ಭೂಮಿಯ ಮೇಲೆ ಪ್ರಾಣಿಗಳು ನಮ್ಮ ರಥಕ್ಕೆ ಪ್ರದಕ್ಷಿಣೆಯಾಗಿ ತಿರುಗುತ್ತಿವೆ, ಹಾಗೆ ತಿರುಗಬಾರದಲ್ಲವೆ? ಇದಕ್ಕೇನೊ ಕಾರಣವಿರಬೇಕು. ನನಗೇನೋ ದಿಗಿಲಾಗುತ್ತಿದೆ," ಎಂದನು. ವಸಿಷ್ಠರು ದಿವ್ಯದೃಷ್ಟಿಯಿಂದ ತಿಳಿದು, "ರಾಜಾ! ನಮಗೆ ಬರಲಿರುವ ಭಯಂಕರ ಕೇಡಿನ ಸೂಚಕವಾಗಿ ಆಕಾಶದಲ್ಲಿ ಪಕ್ಷಿಗಳು ಭಯಂಕರವಾಗಿ ಅರಚುತ್ತಿದೆ. ಆದರೆ, ಭೂಮಿಯ ಮೇಲೆ ಮೃಗಗಳು ನಮಗೆ ಪ್ರದಕ್ಷಿಣೆ ಮಾಡುತ್ತಿರುವುದು ಬರಲಿರುವ ಆ ಕೇಡು ನಿವಾರಣೆಯಾಗುವುದರ ಚಿಹ್ನೆ. ಆದ್ದರಿಂದ, ನೀವು ಚಿಂತಿಸುವ ಕಾರಣವಿಲ್ಲ," ಎಂದು ಧೈರ್ಯ ಹೇಳುತ್ತಿರುವಂತೆಯೇ ಒಂದು ಭಯಂಕರ ಬಿರುಗಾಳಿ ಬೀಸಿತು.

ನೋಡುತ್ತಿರುವಂತೆಯೇ ದೊಡ್ಡ ದೊಡ್ಡ ವೃಕ್ಷಗಳು ನೆಲಕ್ಕುರುಳಿದವು. ಪರ್ವತಗಳು ತೂಗಾಡತೊಡಗಿದವು. ಭೂಮಿಯೇ ಅಲುಗಾಡುತ್ತಿದೆಯೋ ಎನ್ನುವಂತೆ ಪಿಡುಗಿನಂಥ ಶಬ್ದ ಕೇಳಿಸಿತು. ಒಬ್ಬರ ರಥವು ಮತ್ತೊಬ್ಬರಿಗೆ ಕಾಣದ ಹಾಗಾಯಿತು. ಎಲ್ಲೆಲ್ಲೂ ಧೂಳು ಮುಸುಕಿತು. ಕುದುರೆಗಳೂ ಆನೆಗಳೂ ಓಡಲಾರಂಭಿಸಿದುವು. ಸೈನಿಕರು ಮೂರ್ಛೆ ಹೋದರು. ಕೆಲವರು ಸ್ತಂಭೀಭೂತರಾದರು. ವಸಿಷ್ಠರು, ದಶರಥ ಮತ್ತು ಅವನ ನಾಲ್ವರು ಕುಮಾರರ ಹೊರತು ಮಿಕ್ಕವರೆಲ್ಲರೂ ವಿಚೇತನರಾದರು. ಭೂಮ್ಯಾಕಾಶ ಒಂದಾಗಿ ಕತ್ತಲೆ ಆವರಿಸಿತು. ಆ ಗಾಢಾಂಧಕಾರದಲ್ಲಿ ಥಳಥಳನೆ ಪ್ರಕಾಶಿಸುವ ಒಂದು ಕಾಂತಿಯು ಕಣ್ಣಿಗೆ ಗೋಚರಿಸಿತು. ಭಯಂಕರ ನೇತ್ರಗಳುಳ್ಳ ಉಗ್ರನಾದ ಒಬ್ಬ ವ್ಯಕ್ತಿಯು ಅವರೆದುರಿಗೆ ನಿಂತಿರುವುದು ಕಾಣಿಸಿತು. ಅವನ ತಲೆ ತುಂಬಾ ದಟ್ಟವಾದ ಗಂಟು ಗಂಟಾದ ಕೂದಲು, ಭುಜದ ಮೇಲೆ ನೇತಾಡುತ್ತಿದ್ದ ಗಂಡುಗೊಡಲಿ ಹಾಗೂ ಮಿಂಚಿನಂತೆ ಪ್ರಕಾಶಿಸುವ ಬಿಲ್ಲು ಬಾಣಗಳು. ಅವನು ತ್ರಿಪುರಾಸುರನ ಸಂಹಾರಕ್ಕೆ ಹೊರಟ ಫಾಲಾಕ್ಷನಂತೆ ಅವರಿಗೆ ಕಂಡನು. ವಸಿಷ್ಠರು ಅವರು ಪರಶುರಾಮರೆನ್ನುವುದನ್ನು ಗುರುತಿಸಿದರು. ಅವರ ಕೋಪತಾಪಗಳು ಹಿಂದೆಯೇ ಶಾಂತವಾಗಿತ್ತಲ್ಲವೇ? ಶತ್ರುಗಳೆಲ್ಲರನ್ನೂ ಹತಮಾಡಿ ಶಾಂತರಾಗಿದ್ದ ಪರಶುರಾಮರಿಗೆ ತಿರುಗಿ ಈ ದಿನ ಕೋಪ ಬರಲು ಕಾರಣವೇನೆಂದು ಯೋಚಿಸಿದರು.

ಅರ್ಘ್ಯಾದಿಗಳನ್ನು ತೆಗೆದುಕೊಂಡು ಹೋಗಿ ಅವರ ಎದುರು ನಿಂತು, "ಓ ರಾಮಾ! ಭಾರ್ಗವರಾಮಾ?" ಎಂದು ಮನೋಹರವಾಗಿ ಸಂಭಾಷಿಸಿ, ಅರ್ಘ್ಯವನ್ನಿತ್ತರು. ಪರಶುರಾಮರು ಅವರು ಇತ್ತ ಅರ್ಘ್ಯವನ್ನು ಸ್ವೀಕರಿಸುತ್ತಾ ರಾಮನತ್ತ ಧಗಧಗಿಸುವ ಕೆಂಡದಂಥ ಕಣ್ಣುಗಳಿಂದ ನೋಡಲಾರಂಭಿಸಿದರು. ಅದಕ್ಕೆ ಉತ್ತರವಾಗಿ ಶ್ರೀರಾಮಚಂದ್ರನು ಮುಗುಳ್ನಗೆ ಸೂಸುತ್ತಾ ಅವರನ್ನು ನೋಡಿದನು. ಪರಶುರಾಮರು ಮತ್ತಷ್ಟು ಉದ್ರಿಕ್ತರಾಗಿ, "ಓ ದಾಶರಥೀ! ನಿನ್ನ ಪರಾಕ್ರಮವನ್ನು ಸಾವಿರ ನಾಲಗೆಗಳಿಂದ ಕೇಳಿದ್ದೇನೆ. ನೀನು ಶಿವಧನುಸ್ಸನ್ನು ಲೀಲಾಜಾಲವಾಗಿ ಮುರಿದ ವಿಷಯ ಕೂಡ ಕೇಳಿದ್ದೇನೆ. ಅವೆಲ್ಲವೂ ಕೇಳಿದ್ದೇ ಹೊರತು ನೋಡಿದ್ದಿಲ್ಲ. ಈ ದಿನ ನಿನ್ನ ಪರಾಕ್ರಮವನ್ನು ಕಣ್ಣಾರೆ ನೋಡಬೇಕೆಂದು ಇಲ್ಲಿಗೆ ಬಂದಿದ್ದೇನೆ. ನಾನೊಂದು ಬಿಲ್ಲನ್ನು ತಂದಿದ್ದೇನೆ. ಅದು ನನ್ನ ತಂದೆ ಜಮದಗ್ನಿಯದು. ಇದಕ್ಕೆ ಬಾಣ ಹೂಡಿ ನಿನ್ನ ಬಲವನ್ನು ಪ್ರದರ್ಶಿಸು. ಇಲ್ಲದಿದ್ದರೆ ನನ್ನೊಡನೆ ಹೋರಾಡಲು ಬಾ," ಎಂದು ಬಹು ಉದ್ರೇಕದ ಮಾತುಗಳನ್ನಾಡಿದರು.

ಅದರಿಂದ ರಾಮನು ಸ್ವಲ್ಪವೂ ವಿಚಲಿತನಾಗದೆ, ಮಂದಹಾಸ ಬೀರುತ್ತಾ, "ಓ ಭಾರ್ಗವರಾಮಾ! ನಿಮಗೆ ಕ್ಷತ್ರಿಯರ ಮೇಲಿದ್ದ ಕೋಪವು ಎಂದೋ ತೀರಿ ಹೋಯಿತು ಎಂದು ಕೇಳಿದ್ದೆ, ಹಾಗೇ ಅಂದುಕೊಂಡಿದ್ದೆ. ಆದರೆ, ತಿರುಗಿ ಈ ವೈಪರೀತ್ಯ, ಈ ವಿಕಾರ ಏನಿದು?" ಎನ್ನುತ್ತಿರುವಂತೆಯೇ ದಶರಥನು, ದೀನನಾಗಿ, "ಭಾರ್ಗವಾ, ನೀನು ಬ್ರಾಹ್ಮಣನು. ಮಹಾ ಯಶಸ್ಸಿನ ನನ್ನ ಮಕ್ಕಳು ಹಸುಗೂಸುಗಳು, ಅವರ ಮೇಲೆ ಈ ವಿಧವಾದ ನಿಷ್ಕಾರಣ ದ್ವೇಷ ಸಾಧಿಸುವುದು ನಿಮ್ಮಂಥ ಉತ್ತಮ ವಂಶೀಯರಿಗೆ ಧರ್ಮವಲ್ಲ. ನಿಮ್ಮ ವಂಶೀಯರು ನಿರಂತರ ವೇದಾಧ್ಯಯನ ಮಾಡುತ್ತಾ ಚಾಂದ್ರಾಯಣ ವ್ರತವನ್ನು ಆಚರಿಸುತ್ತಿದ್ದವರು. 'ಇಂದಿನಿಂದ ಶಸ್ತ್ರಾಸ್ತ್ರಗಳನ್ನು ಬಿಟ್ಟಿದ್ದೇನೆ, ನನ್ನ ಮನೋಭೀಷ್ಟವು ನೆರವೇರಿತು,' ಎಂದು ದೇವೇಂದ್ರನೆದುರು ಪ್ರತಿಜ್ಞೆ ಮಾಡಿ, ಧರ್ಮಪರಾಯಣರಾಗಿ, ಪ್ರಶಾಂತ ಚಿತ್ತರಾಗಿ, ಈ ವಸುಂಧರೆಯನ್ನು ಕಶ್ಯಪನಿಗೆ ದಾನ ಮಾಡಿ ಮಹೇಂದ್ರ ಪರ್ವತದ ಮೇಲೆ ತಪಸ್ಸು ಮಾಡುತಿದ್ದ ನೀವು, ಈಗ ನಮ್ಮ ಸರ್ವನಾಶಕ್ಕೆ ಸಂಸಿದ್ಧರಾಗಿರುವುದು ನಿಮ್ಮ ಮಾತಿಗೇ ವಿರುದ್ಧವಾಗಿದೆ. ಮಾತಿಗೆ ತಪ್ಪುವುದು ಮಹಾಪಾಪವಲ್ಲವೆ? ಮಾತಿಗೆ ತಪ್ಪಿದ ಮೇಲೆ ಎಷ್ಟು ತಪಸ್ಸು ಮಾಡಿದರೆ ಏನು ಫಲ! ಸತ್ಯಕ್ಕೂ ಮಿಗಿಲಾದ ದೇವರು ಬೇರೊಂದಿಲ್ಲ ಅಲ್ಲವೆ? ಒಬ್ಬ ರಾಮನೊಂದಿಗೆ ಮಾತ್ರವೇ ಯುದ್ಧ ಮಾಡುತ್ತೇನೆ ಎನ್ನುತ್ತೀರಿ. ಆದರೆ, ಆ ಒಬ್ಬ ರಾಮನಿಗೆ ಯಾವ ಅಪಾಯವಾದರೂ ನನ್ನ ವಂಶ ನಾಶವಾಗುವುದು. ನಾವೆಲ್ಲರೂ ಮರುಕ್ಷಣವೇ ಪ್ರಾಣ ಬಿಡುತ್ತೇವೆ. ಇಷ್ಟು

ಪ್ರಾಣಗಳನ್ನು ತೆಗೆಯುವುದು ನಿಮ್ಮಂಥ ಬ್ರಾಹ್ಮಣರಿಗೆ ಪರಮ ವಿರುದ್ಧವೇ ಅಲ್ಲದೆ, ಮಹಾಪಾಪವೂ ಹೌದು," ಎಂದು ಹೇಳಿದನು.

ಅದನ್ನು ಪರಶುರಾಮರು ಲಕ್ಷ್ಯಕ್ಕೇ ತೆಗೆದುಕೊಳ್ಳದೆ ರಾಮನನ್ನು ಉದ್ದೇಶಿಸಿ, "ರಾಮಾ! ನೀನು ಮುರಿದ ಬಿಲ್ಲು ಮತ್ತು ಈಗ ನಾನು ತಂದಿರುವ ಬಿಲ್ಲು ಎರಡೂ ದೇವಲೋಕದ್ದು. ಎರಡೂ ಪವಿತ್ರವಾದುವು. ಇವೆರಡನ್ನೂ ವಿಶ್ವಕರ್ಮನೇ ನಿರ್ಮಿಸಿದನು. ಒಂದನ್ನು ಶಿವನು ತ್ರಿಪುರಾಸುರ ಸಂಹಾರಕ್ಕೆ ಉಪಯೋಗಿಸಿದನು. ಇನ್ನೊಂದನ್ನು ವಿಷ್ಣುಮೂರ್ತಿಯು ತನ್ನ ಕೈಯಲ್ಲಿ ಹಿಡಿದುಕೊಂಡನು. ತ್ರಿಪುರಾಸುರ ಸಂಹಾರವಾದ ಮೇಲೆ ಶಿವನು ಆ ಬಿಲ್ಲನ್ನು ಬಾಣ ಸಹಿತವಾಗಿ ದೇವತೆಗಳ ಮೂಲಕ ವಿದೇಹ ರಾಜನಾದ ದೇವರಾತನಿಗೆ ಕೊಟ್ಟನು. ಯಾವ ಕಾರ್ಯದ ನಿಮಿತ್ತವಾಗಿ ಆ ಬಿಲ್ಲನ್ನು ನಿರ್ಮಿಸಿದನೋ ಆ ಕಾರ್ಯವು ಮುಗಿದಿದ್ದರಿಂದ ಆ ಬಿಲ್ಲಿನ ಬಲ ಕಡಿಮೆಯಾಗಿದ್ದಿರಬಹುದು. ಅಂಥ ಬಲಹೀನವಾದ ಬಿಲ್ಲನ್ನು ಬಗ್ಗಿಸುವುದು ಧೀರನ ಲಕ್ಷಣವಲ್ಲ. ಆದರೆ, ಈ ಪವಿತ್ರವಾದ ಬಿಲ್ಲು, ಇದಕ್ಕೆ ನಿಯಮಿಸಿದ ಕಾರ್ಯವು ಇನ್ನೂ ಮುಗಿದಿಲ್ಲವಾದ್ದರಿಂದ, ಇನ್ನೂ ಶಕ್ತಿವಂತವಾಗಿದೆ. ಇದನ್ನು ಬಗ್ಗಿಸು ನೋಡೋಣ. ಇದನ್ನು ಬಗ್ಗಿಸಿದರೆ ನೀನು ನಿನ್ನ ಪೌರುಷವನ್ನು ಸಾರ್ಥಕ ಮಾಡಿಕೊಂಡವನಾಗುವೆ. ಶಿವಧನುಸ್ಸನ್ನು ಮುರಿದೆನೆಂದು ಸುಮ್ಮನೆ ಗರ್ವ ಪಡಬೇಡ. ಇಗೋ, ಇದನ್ನು ಮುರಿದು ನಿನ್ನ ಹೆಸರನ್ನು ಉಳಿಸಿಕೊ.

ಈ ವಿಷ್ಣು ಧನುಸ್ಸು ನನಗೆ ಹೇಗೆ ಬಂತು ಎಂದು ಸಂದೇಹಿಸುತ್ತೀಯೇನೋ? ಇದನ್ನು ವಿಷ್ಣುವು ಋಷಿಕ ಮಹರ್ಷಿಗೆ ನಿಕ್ಷೇಪವಾಗಿ ಕೊಟ್ಟನು. ಆ ದಿವ್ಯ ತೇಜಸ್ವಿಯು ಇದನ್ನು ತನ್ನ ಮಗನಾದ ಜಮದಗ್ನಿಗೆ ಕೊಟ್ಟನು. ಆ ಜಮದಗ್ನಿಯೇ ನನ್ನ ತಂದೆ. ಅವನು ಮಹಾ ತಪಸ್ಸಂಪನ್ನನು, ಪ್ರತೀಕಾರವರಿಯದ ಮಹಾ ಪವಿತ್ರನು. ಅಸ್ತ್ರ ಸಂನ್ಯಾಸ ಮಾಡಿದ ನನ್ನ ತಂದೆಯನ್ನು ಕಾರ್ತವೀರ್ಯಾರ್ಜುನನು ತಾಮಸ ಬುದ್ಧಿಯಿಂದ ಕೊಂದುಹಾಕಿದನು. ಅಂಥ ದಾರುಣ ಕೃತ್ಯವನ್ನು ಎಂದೂ ಯಾರೂ ಇದುವರೆಗೆ ಮಾಡಿಲ್ಲ. ಅಂಥ ಅಧರ್ಮ ಪ್ರವರ್ತನೆಗೆ ರಾಕ್ಷಸ ಕೃತ್ಯಕ್ಕೆ ಹೇಸದ ರಾಜನ ಮೇಲೆ ದಯೆ ತೋರಿಸಿಬಿಡಬಾರದೆಂದೂ ಅವನೇ ಅಲ್ಲದೆ, ಅವನಂತೆ ಅಧರ್ಮದಲ್ಲಿ ತೊಡಗಿದ ಪ್ರತಿಯೊಬ್ಬ ರಾಜನನ್ನೂ ತಲೆಯೆತ್ತದಂತೆ ಹತ ಮಾಡುವೆನೆಂದೂ ಪ್ರತಿಜ್ಞೆ ಮಾಡಿದೆ. ಆ ದಿನದಿಂದಲೂ ಅಧರ್ಮ, ಅನ್ಯಾಯ ಕ್ರೂರ ಕೃತ್ಯಗಳಲ್ಲಿ ನಿರತರಾದ ರಾಜರನ್ನು ತುಂಡರಿಸಿ ಚೆಂಡಾಡಲು ಈ ಪವಿತ್ರ ಬಿಲ್ಲನ್ನೂ ಈ ಆಯುಧವನ್ನೂ ಹಿಡಿದು ಹೊರಟೆ. ಅನೇಕ ದುರ್ಮಾರ್ಗಿಗಳಾದ ರಾಜರನ್ನು ಕೊಂದೆ. ಈ ಭೂಲೋಕವನ್ನೇ ವಶಮಾಡಿಕೊಂಡೆ. ಆದುದರಿಂದ,

ಕಾರ್ತವೀರ್ಯಾರ್ಜುನನು ನನ್ನ ತಂದೆಯನ್ನು ಕೊಂದ ಕೋಪವು ಸ್ವಲ್ಪ ಮಟ್ಟಿಗೆ ಶಾಂತವಾಯಿತು. ಕ್ಷತ್ರಿಯರ ಮೇಲೆ ದಂಡೆತ್ತಿ ಹೋಗುವುದನ್ನು ಬಿಟ್ಟು ಯಜ್ಞವನ್ನು ಪ್ರಾರಂಭಿಸಿದೆ. ಆ ಯಜ್ಞಕ್ಕೆ ಮಹಾತ್ಮನೂ ಪುಣ್ಯಕರ್ಮಿಯೂ ಆದ ಕಶ್ಯಪನನ್ನು ಆಹ್ವಾನಿಸಿ, ಅವನಿಗೆ ನಾನು ಗೆದ್ದ ಭೂಭಾಗವನ್ನು ದಕ್ಷಿಣೆಯಾಗಿತ್ತೆ. ಅಂದಿನಿಂದ ಮಹೇಂದ್ರ ಪರ್ವತದ ಮೇಲೆ ಕಾಲವನ್ನು ಪ್ರಸನ್ನ ಹೃದಯಿಯಾಗಿ ಕಳೆಯುತ್ತಿದ್ದೇನೆ. ಆದರೆ, ಒಮ್ಮೆ ಅಸ್ತ್ರ ಸಂನ್ಯಾಸ ಮಾಡಿದ ನಾನು ತಿರುಗಿ ಈ ಅಸ್ತ್ರ ಪ್ರಯೋಗಕ್ಕೇಕೆ ಇಳಿದೆ ಎಂದು ನಿನ್ನ ತಂದೆಯು ಕೇಳಿದ ಪ್ರಶ್ನೆಗೆ ಸಮಾಧಾನ ಹೇಳುತ್ತೇನೆ, ಕೇಳು.

ರಾಮಾ! ನೀನು ಶಿವಧನುಸ್ಸನ್ನು ಮುರಿದೆಯೆನ್ನುವುದನ್ನು ಕೇಳಿ, ನಿನ್ನ ಶಕ್ತಿ ಸಾಮರ್ಥ್ಯವು ದೊಡ್ಡದೆಂದೇ ಭಾವಿಸಿದೆ. ಬ್ರಹ್ಮಸೃಷ್ಟಿಯಾದ ಈ ಎರಡು ಅಸ್ತ್ರಗಳಲ್ಲಿ ಒಂದು ಮುರಿಯಿತು. ಇನ್ನೊಂದು ಇದೆಯಾದರೂ ಇದು ಅಸ್ತ್ರ ಸಂನ್ಯಾಸ ಮಾಡಿದ ನನ್ನ ಹತ್ತಿರ ಇದೆಯಾದ್ದರಿಂದ ಇದರಿಂದ ಪ್ರಯೋಜನವಿಲ್ಲವೆಂದು ತಿಳಿದು, ನೀನು ಇದನ್ನೂ ಮುರಿಯಬೇಕು, ಇಲ್ಲವೆ ನನ್ನೊಂದಿಗೆ ಯುದ್ಧ ಮಾಡಿ ಇದನ್ನು ಸ್ವಾಧೀನ ಮಾಡಿಕೊಳ್ಳಬೇಕು. ಈ ಎರಡರಲ್ಲಿ ಒಂದಾದರೆ ಮಾತ್ರ ಒಳ್ಳೆಯದೆಂದು ಭಾವಿಸಿ, ಕಾಲ ನಿರೀಕ್ಷಣೆ ಮಾಡುತ್ತಿದ್ದೆ. ಅಂಥ ಕಾಲ ಈ ದಿನ ಲಭಿಸಿತು. ದೊರೆತ ಕಾಲವನ್ನು ಸದ್ವಿನಿಯೋಗ ಮಾಡಬೇಕೇ ವಿನಾ ನಿರುಪಯೋಗ ಮಾಡಬಾರದು. ಯುದ್ಧವು ಸದ್ವಿನಿಯೋಗವೇ ಎಂದು ನೀನು ಶಂಕಿಸಬಹುದು. ಲೋಕಕಲ್ಯಾಣ ನಿಮಿತ್ತವಾಗಿ ದುರ್ಮಾರ್ಗಿಗಳನ್ನು ಸದೆಬಡಿದು ಸತ್ ಪದಾರ್ಥವನ್ನು ಭದ್ರವಾಗಿ ನಿಲ್ಲಿಸುವುದೇ ಯುದ್ಧದ ಅಂತರಾರ್ಥ!

ಆದ್ದರಿಂದ, ಯುದ್ಧವನ್ನು ಬಾಹ್ಯದೃಷ್ಟಿಯಿಂದ ಮಾತ್ರ ನೋಡಿ ಅದು ಹಿಂಸೆಯೆಂದು ತಿಳಿಯಬಾರದು. ಅದರ ಉದ್ದೇಶವನ್ನು ಲಕ್ಷ್ಯದಲ್ಲಿಟ್ಟುಕೊಂಡರೆ ಬಾಹ್ಯ ಕ್ರಿಯೆಯ ಸಮಂಜಸತೆ ಅರ್ಥವಾಗುವುದು. ಕತ್ತಿ ಹರಿತವಾಗಬೇಕಾದರೆ, ಅದನ್ನು ಸಾಣೆ ಕಲ್ಲಿನ ಮೇಲೆ ಮಸೆಯಬೇಕು. ಮಸೆಯುವುದರಿಂದ ಕತ್ತಿಗೆ ಬಾಧೆಯಾಗುತ್ತಿದೆಯೆಂದು ಭಾವಿಸುವುದಿಲ್ಲ ಅಲ್ಲವೆ? ದೇಹಕ್ಕೆ ಬಲ ಬರಬೇಕಾದರೆ ಆಹಾರವನ್ನು ಗಟ್ಟಿಯಾದ ಹಲ್ಲುಗಳ ಮಧ್ಯೆ ಸೇರಿಸಿ ಅಗಿಯಬೇಕು. ಅದರಿಂದ, ಆ ಪದಾರ್ಥವನ್ನು ಬಾಧಿಸುತ್ತಿದ್ದೇವೆಂದು ತಿಳಿಯುವುದು ಸರಿಯಲ್ಲ, ಅಲ್ಲವೆ? ಹಾಗೇ ದೇಶವೆನ್ನುವ ದೇಹಕ್ಕೆ ಸಾತ್ವಿಕ ಧರ್ಮವೆನ್ನುವ ಬಲ ಬರಬೇಕಾದರೆ ಈ ವಿಧವಾದ ಮರ್ದನ ನಡೆಯಬೇಕು. ಇದು ಮಾರ್ಗ ಮಧ್ಯವು. ಮಾತಿನಲ್ಲಿ ಕಾಲ ಕಳೆಯುವುದಕ್ಕಿಂತ ಕ್ರಿಯೆಯಲ್ಲಿ ಇಳಿಯುವುದು, ತಿಳಿಯುವುದು ಅವಶ್ಯಕ. ಇಗೋ, ಈ ಬಿಲ್ಲನ್ನು ಮುರಿ, ಇಲ್ಲವೆ ನನ್ನೊಂದಿಗೆ ಮುಷ್ಠಿ ಯುದ್ಧ ಮಾಡು," ಎಂದು ಬಿಲ್ಲನ್ನು ಅವನ

ಕೈಗೆ ಕೊಡಲುದ್ಯುಕ್ತರಾದರು. ಪರಶುರಾಮರ ಮಾತಿಗೆ ಕಿಡಿ ಕಾರುತ್ತಾ ಲಕ್ಷ್ಮಣನು ಏನೋ ಹೇಳಲು ಪ್ರಯತ್ನಿಸಿದಾಗ, ರಾಮನು ಅವನನ್ನು ಸಮಾಧಾನಪಡಿಸಿ, "ಇದು ನಿನಗೆ ಸಂಬಂಧಿಸಿದ್ದಲ್ಲ. ನನ್ನನ್ನು ಕೇಳಿದ ಪ್ರಶ್ನೆಗೆ ನಾನೇ ಉತ್ತರ ಹೇಳಬೇಕು," ಎಂದು ಶಾಂತಪಡಿಸಿದನು.

ಆದರೆ, ಮತ್ತೆ ಪರಶುರಾಮರು ವಿಕಟವಾಗಿ ನಗುತ್ತಾ ರಾಮನನ್ನು ಅನೇಕ ಪರಿಯಾಗಿ ಪರಿಹಾಸ್ಯ ಮಾಡುತ್ತಿದ್ದುದನ್ನು ಲಕ್ಷ್ಮಣನು ತಾಳಲಾರದೆ, "ಓ ಭಾರ್ಗವಾ! ಶಿವಧನುಸ್ಸನ್ನು ಮುರಿದ ರಾಮನಿಗೆ ಇದು ದೊಡ್ಡದಲ್ಲ. ಇದನ್ನು ಮುರಿಯಲು ರಾಮನೇ ಬೇಕಾಗಿಲ್ಲ. ಬ್ರಾಹ್ಮಣನ ಅಸ್ತ್ರವು ದರ್ಭೆ ಸಮಾನ. ಇದನ್ನು ನಾನೇ ಲೀಲಾಜಾಲವಾಗಿ ಮುರಿದೇನು! ಈ ಸಣ್ಣ ಕೆಲಸಕ್ಕೆ ಶ್ರೀರಾಮನೇ ಬೇಕಾಗಿಲ್ಲ," ಎಂದು ರೋಷದಿಂದ ಆಡಿದ ಮಾತು ಪರಶುರಾಮರನ್ನು ಮತ್ತಷ್ಟು ಉದ್ರೇಕಗೊಳಿಸಿತು. ರಾಮನು ಶಾಂತವಾಗಿ, ಮುಗುಳ್ನಗುತ್ತಾ ಲಕ್ಷ್ಮಣನನ್ನು ಸಮಾಧಾನಪಡಿಸಿದನು. ಪರುಶುರಾಮರು ಎಷ್ಟು ಕ್ರೋಧಗೊಳ್ಳುತ್ತಿದ್ದರೋ ರಾಮನು ಅಷ್ಟೇ ಶಾಂತವಾಗಿದ್ದನು. ಕಡೆಗೆ, ಪರಶುರಾಮರು ಶ್ರುತಿ ತಪ್ಪಿ ಮಾತಾಡಲು ಪ್ರಾರಂಭಿಸಿದ ಮೇಲೆ, ದಶರಥನು ಸ್ವಲ್ಪ ಗಾಬರಿಯಾದನು. ಪಂಡಿತರೂ ಭಯಗೊಂಡರು. ಚತುರಂಗಬಲ ಸೈನ್ಯವೂ ಭಯಪಟ್ಟಿತು. ದಾಸ ದಾಸಿಯರು ತಲೆ ತಲೆ ಬಡಿದುಕೊಂಡರು. ಆದರೆ, ಸೀತಾದೇವಿಯು ಅದನ್ನು ವಿನೋದವಾಗಿ ನೋಡುತ್ತಿದ್ದಳೇ ವಿನಾ ಸ್ವಲ್ಪವೂ ಅಳುಕಲಿಲ್ಲ. "ನನ್ನ ಪುರುಷ ಸಿಂಹದೆದುರು ಈ ಗುಳ್ಳೆನರಿಯು ಎಷ್ಟು ಮಾತ್ರದ್ದು!" ಎಂದು, ಊರ್ಮಿಳೆ, ಮಾಂಡವಿ, ಶ್ರುತಕೀರ್ತಿಯರಿಗೆ ಧೈರ್ಯ ಹೇಳುತ್ತಿದ್ದಳು.

ರಾಮನು ಲಕ್ಷ್ಮಣನನ್ನು ಸಮಾಧಾನಗೊಳಿಸುತ್ತಿದ್ದುದನ್ನು ನೋಡಿ ಭರತ ಶತ್ರುಘ್ನರೂ ಸುಮ್ಮನಾದರು. ಇಲ್ಲದಿದ್ದರೆ ಅವರೂ ಕೋಪೋದ್ರೇಕದಿಂದ ಕುದಿಯುತ್ತಾ ರಾಮನ ಆಜ್ಞೆಗೆ ಕಾಯುತ್ತಿದ್ದವರೇ! ವಸಿಷ್ಠರು ತ್ರಿಕಾಲ ಜ್ಞಾನಿಗಳಾದ್ದರಿಂದ ಅವರಿಗೆ ವಿಷಯವು ತಿಳಿದಿತ್ತು. ಇದು ಭಗವಲ್ಲೀಲಾ ನಾಟಕವೆಂದು ತಮ್ಮೊಳಗೇ ಭಾವಿಸಿ, ಏನೂ ಮಾತನಾಡದೆ, ಮಧ್ಯೆ ಪ್ರವೇಶಿಸದೆ ಸುಮ್ಮನೆ ನೋಡುತ್ತಿದ್ದರು. ರಾಮನು ಶಾಂತ ವಚನಗಳಿಂದ, "ಪರುಶುರಾಮ! ನೀವು ಬ್ರಾಹ್ಮಣರು. ಅದರಲ್ಲೂ ಕ್ಷತ್ರಿಯರಿಗೆ ಪೂಜ್ಯಪಾದರಾದ ವಿಶ್ವಾಮಿತ್ರರಿಗೆ ಬಂಧುಗಳು. ನಿಮ್ಮಂಥ ಬ್ರಾಹ್ಮಣರನ್ನು ಕೊಲ್ಲುವುದು ಒಳ್ಳೆಯದಲ್ಲ. ಈ ಪವಿತ್ರ ಅಸ್ತ್ರವನ್ನು ನಿಮ್ಮ ಮೇಲೆ ಬಿಡುವುದು ಸರಿಯಲ್ಲ. ಅಲ್ಲದೆ, ಈ ಬಾಣವು ದೇವಲೋಕದ್ದೆಂದೂ ಇದು ಶತ್ರುಗಳೆಲ್ಲರನ್ನೂ ಜಯಿಸಿದ್ದೆಂದೂ ಯಾರ ದರ್ಪಬಲಗಳನ್ನೇ ಆಗಲಿ ಇದು ನಾಶ ಮಾಡುವುದೆಂದೂ ನೀವೇ ಹೇಳಿದಿರಿ. ಇಂಥ ಪವಿತ್ರವಾದ ಬಾಣವು ನೆಲದ ಪಾಲಾದರೆ

ವ್ಯರ್ಥವಾಗುವುದು. ಆದ್ದರಿಂದ, ಬಾಣದಿಂದ ನಿಮ್ಮ ಪಾದಗಮನ ಶಕ್ತಿಯನ್ನು ಬಂಧಿಸಬೇಕೋ ಅಥವಾ ನೀವು ತಪೋಬಲದಿಂದ ಸಂಪಾದಿಸಿದ ಪುಣ್ಯಲೋಕ ಪ್ರಾಪ್ತಿಯನ್ನು ನಿಮ್ಮಿಂದ ತೆಗೆಯಬೇಕೋ ನೀವೇ ಹೇಳಿ," ಎಂದನು.

ಇದನ್ನು ಕೇಳಿದಾಕ್ಷಣ ಪರಶುರಾಮರು ಮತ್ತಷ್ಟು ಉಗ್ರರಾಗಿ, ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು, "ರಾಮಾ, ಏನೆಂದೆ?" ಎಂದು ಮುಂದೆ ಬಂದೊಡನೆ, ರಾಮನು ನಗುತ್ತಾ, ಅವರ ಭುಜದ ಮೇಲಿದ್ದ ಆ ವಿಷ್ಣು ಧನುಸ್ಸನ್ನು ಎಳೆದುಕೊಂಡು ಕೈಯಲ್ಲಿ ಹಿಡಿದುಕೊಂಡನು. ಅಸ್ತ್ರವು ರಾಮನು ಕೈಗೆ ಬಂದೊಡನೆಯೇ ಪರಶುರಾಮರು ನಿರ್ವೀರ್ಯರಾದರು. ಆ ಅಸ್ತ್ರವನ್ನು ಧರಿಸಿದ ರಾಮನನ್ನು ನೋಡಲು ಸಾಧ್ಯವಾ ಗದೆ ಹೋಯಿತು. ಮಹಾ ತೇಜೋವಂತನಾಗಿ, ಅನೇಕ ಕೋಟಿ ದೀಪಗಳು ಒಂದೆಡೆ ಸೇರಿದರೆ ಎಷ್ಟು ಪ್ರಕಾಶಮಾನವಾಗಿರುವುದೋ ಅಷ್ಟು ಪ್ರಕಾಶಮಾನವಾಗಿ ಸಾಕ್ಷಾತ್ ನಾರಾಯಣನು ಕಾಣಿಸತೊಡಗಿದನು. ತನ್ನ ಆಯುಧವು ತನ್ನ ಕೈ ಸೇರಿದೊಡನೆ, ಆ ಆಯುಧವು ಕೂಡ ಮತ್ತಷ್ಟು ತೇಜೋಮಯವಾಗಿ ಪ್ರಕಾಶಿಸಿತು. ಅದರಲ್ಲಿ ನಿಜವಾದ ಶಕ್ತಿ ಆವಿರ್ಭವಿಸಿತು. ಇದನ್ನು ನೋಡಿ ದೇವತೆಗಳು ಆಕಾಶ ದಿಂದ ಹೂವಿನ ಮಳೆಗರೆದರು. ಮಂಗಳವಾದ್ಯಗಳು ಮೊಳಗಿದವು.

ಪರಶುರಾಮರು ಮಂದಹಾಸದಿಂದ, "ರಾಮಾ! ನಿನ ದಿವ್ಯ ಶಕ್ತಿಯನ್ನು ನೋಡಿದೆ. ನಿನ್ನ ದಿವ್ಯ ತೇಜಸ್ಸನ್ನು ಅನುಭವಿಸಿದೆ. ನಾನು ಪೂರ್ವದಲ್ಲಿ ಈ ಭೂಭಾಗವನ್ನು ಕಶ್ಯಪನಿಗೆ ದಾನವಿತ್ತಾಗ, ಅವನು, 'ನೀನಿನ್ನು ಈ ದೇಶದಲ್ಲಿ ಇರಕೂಡದು. ಹಾಗೇನಾದರೂ ನೀನು ಇಲ್ಲಿಗೆ ಬಂದರೆ ಒಂದು ರಾತ್ರಿ ಕೂಡ ಇಲ್ಲಿ ನಿದ್ರಿಸಬಾರದು,' ಎಂದು ಶಾಪವಿತ್ತನು. ಆದ್ದರಿಂದ, ಕತ್ತಲೆಯಾಗುತ್ತಿದೆ, ನಾನಿನ್ನು ಈ ಭೂಭಾಗದಲ್ಲಿ ಇರುವಂತಿಲ್ಲ. ಬೇಗ ಮಹೇಂದ್ರ ಪರ್ವತ ಪ್ರಾಂತಕ್ಕೆ ಹೋಗಬೇಕು. ನನ್ನ ಪಾದ ಗತಿಯನ್ನು ಬಂಧಿಸಬೇಡ. ನಾನು ತಪೋಬಲದಿಂದ ಅಪ್ರತಿಮವಾದ ಲೋಕಗ ಳನ್ನು ಜಯಿಸಿದೆ. ಆ ಶಕ್ತಿಯನ್ನು ಈಗಲೇ ಈ ಬಾಣದಿಂದಲೇ ಹೊಡೆದು ತೆಗೆ. ರಾಮಾ! ನನ್ನಲ್ಲಿರುವ ಸರ್ವ ಶಕ್ತಿಯೂ ನಿನ್ನದೆ. ನಿನ್ನ ಶಕ್ತಿಯನ್ನು ತಿರುಗಿ ನಿನಗೇ ಕೊಡುತ್ತಿದ್ದೇನೆ," ಎಂದು ರಾಮನನ್ನು ಆಲಂಗಿಸಿಕೊಂಡೊಡನೆಯೇ ಪರಶುರಾಮರ ಮೂರು ಕಳೆಗಳ ಶಕ್ತಿಯು ರಾಮನಲ್ಲಿ ಲೀನವಾಯಿತು.

ಆಗ ಪರಶುರಾಮರು, "ರಾಮಾ! ಲೋಕದಲ್ಲಿ ದೈವತ್ವವನ್ನು ಅರ್ಥಮಾಡಿಕೊಳ್ಳದೆ, ಎಂತಹ ಪರಾಕ್ರಮ ತಪೋಸಂಪನ್ನರೂ ಕೂಡ ತಮ್ಮ ತಮ್ಮ ಯೋಗಶಕ್ತಿಯನ್ನೇ ಅವಲಂಬಿಸಿ ವಿಷ್ಣು ಮಾಯೆಯನ್ನು ಮರೆತು ಸಂಚರಿಸುತ್ತಿರುವುದು ಸರ್ವೇ ಸಾಮಾನ್ಯ. ಆದ್ದರಿಂದ ಈ ನಿನ್ನ ನಿಜಶಕ್ತಿಯನ್ನು ಲೋಕಕ್ಕೆ ತೋರಿಸುವುದಕ್ಕಾಗಿ,

ನೀನೇ ಈ ದೇಹವನ್ನೂ ಈ ರೀತಿಯ ಕೆಲವು ಶಕ್ತಿಗಳನ್ನೂ ನನಗೆ ಅನುಗ್ರಹಿಸಿದೆ, ತಿರುಗಿ ನಿನ್ನ ವಿಷ್ಣುತ್ವವನ್ನು ಸಾದೃಶಗೊಳಿಸಿದೆ. ನೀನು ಸಾಕ್ಷಾತ್ ವಿಷ್ಣುಮೂರ್ತಿ, ನೀನು ಅಸದೃಶ ಕರ್ಮಿ. ಲೋಕವೇ ನಿನ್ನ ನಾಟಕ. ನೀನು ಇಲ್ಲದ್ದು, ನೀನು ಅಲ್ಲದ್ದು, ಲೋಕದಲ್ಲಿ ಇಲ್ಲವೇ ಇಲ್ಲ. ಎಲ್ಲಾ ನಿನ್ನದೇ. ಇಂಥ, ಮಹಾಪವಿತ್ರವಾದ ನಿನ್ನ ಅಸ್ತ್ರವು ಸ್ವಲ್ಪ ಕಾಲವಾದರೂ ನನ್ನ ಬಳಿ ಇದ್ದುದರಿಂದ ನನ್ನ ಬಗೆಗೂ ಲೋಕದಲ್ಲಿ ಪೂಜ್ಯ ಭಾವ ಉಂಟಾಯಿತು, ಅದೇ ನನ್ನ ಪುಣ್ಯ. ಇದೇ ನನ್ನ ಅರ್ಪಣೆ," ಎಂದು ಹೇಳಿ ಅಂತರ್ಧಾನರಾದರು.

ರಾಮನು ಶಾಂತವದನನಾಗಿ ಹಸನ್ಮುಖದಿಂದ, ಆ ಬಿಲ್ಲನ್ನೂ ಆ ಬಾಣವನ್ನೂ ವರುಣದೇವನಿಗೆ ಕೊಟ್ಟನು. ವಸಿಷ್ಠರಿಗೂ ತನ್ನ ತಂದೆಗೂ ನಮಸ್ಕರಿಸಿದನು. ತನ್ನ ಮಗನಿಗೆ ಯಾವ ನಿಮಿಷದಲ್ಲಿ ಏನಾಗುವುದೋ ಎಂದು ಭಯ ಕಂಪಿತನಾಗಿ ಕುಗ್ಗಿಹೋಗಿದ್ದ ದಶರಥನು ಹಿಡಿಸಲಾರದ ಆನಂದದಿಂದ ರಾಮನನ್ನು ಎದೆಗಪ್ಪಿ ಕೊಂಡು ಅನೇಕ ಬಗೆಯಾಗಿ ಮುದ್ದಾಡಿ, ತಲೆ ಸವರಿ, ಬಾಯಲ್ಲಿ ಮಾತು ಹೊರಡದೆ, "ಮಗೂ! ಧನ್ಯನಾದೆ, ಪುನಃ ನಿನ್ನನ್ನು ಸುಕ್ಷೇಮವಾಗಿ ನೋಡುವಂತಾ ಯಿತು. ನಿನ್ನ ಪರಾಕ್ರಮ ಶಕ್ತಿಗಳು ಅಪಾರ, ಅದ್ಭುತ," ಎಂದು ಅನೇಕ ರೀತಿಯಾಗಿ ಕೊಂಡಾಡಿದನು.

ರಾಮನು, "ಅಪ್ಪಾ! ಧರ್ಮಕ್ಕೆ ಜಯ ಖಂಡಿತ. ಆದರೆ ಪ್ರಾರಂಭದಲ್ಲಿ ಭಯ ಹುಟ್ಟಿಸುವುದು, ಬಲಹೀನತೆ ಉಂಟುಮಾಡುವುದು, ಅಪಜಯದ ಸೂಚನೆ ಕೂಡ ಕಾಣಿಸುವುದು. ಅವುಗಳಿಗೆ ಜಗ್ಗದೆ, ಕುಗ್ಗದೆ ಧರ್ಮವನ್ನೇ ದೃಷ್ಟಿಯಲ್ಲಿಟ್ಟುಕೊಂಡು ಮುನ್ನಡೆದರೆ ಎಂದೂ ಅಪಜಯ ಇಲ್ಲ, ಬರುವುದಿಲ್ಲ. ಆದರೆ, ಮಾನವರು ಈ ಸತ್ಯವನ್ನು ತಿಳಿಯದೆ ಆಳವಾಗಿ ವಿಚಾರ ಮಾಡದೆ, ಮೇಲೆ ಮೇಲೆ ಪರದಾಡುವುದ ರಿಂದ ಅಪಜಯಕ್ಕೆ ಗುರಿಯಾಗುವರು. ಸರಿ, ಆದದ್ದಾಯಿತು, ಇದೆಲ್ಲಾ ನಿಮ್ಮ ಆಶೀರ್ವಾದದ ಬಲ," ಎಂದು ಮತ್ತೊಮ್ಮೆ ನಮಸ್ಕರಿಸಿ, "ಚತುರಂಗ ಬಲವು ಅಯೋಧ್ಯೆಗೆ ಹೋಗಲು ನಿಮ್ಮ ಆಜ್ಞೆಗೆ ಕಾಯುತ್ತಿದೆ," ಎನ್ನಲು, ದಶರಥನು ಅಮಿತೋತ್ಸಾಹದಿಂದ, "ಮಗೂ! ಇನ್ನು ಆಲಸ್ಯವೇಕೆ? ಹೊರಡೋಣ," ಎಂದು ಮಂತ್ರಿಯನ್ನು ಕರೆದು, ಸೈನ್ಯವು ಅಯೋಧ್ಯಾ ನಗರಕ್ಕೆ ಹೊರಡುವಂತೆ ಆಜ್ಞಾಪಿಸಿ ದನು. ಚತುರಂಗ ಬಲವು ವಿಜಯಧ್ವನಿಯನ್ನು ಮೊಳಗಿಸಿ, ಮುಂದೆ ಸಾಗಿತು.

ದಶರಥ ಮಹಾರಾಜನು ಮಕ್ಕಳು ಸೊಸೆಯರೊಂದಿಗೆ ನಡೆದುಹೋದ ಅದ್ಭುತ ಚರ್ಯೆಗಳನ್ನು ಕುರಿತು ಮಾತನಾಡುತ್ತಾ ಪ್ರಯಾಣ ಸಾಗಿಸಿದನು. ನಗರದ ಸಮೀಪಕ್ಕೆ ಬಂದಾಗ, ಮುಂದೆ ಸ್ವಲ್ಪ ಸೈನ್ಯವನ್ನು ಕಳುಹಿಸಿ ನಗರಕ್ಕೆ ತಾನು

ಬರುತ್ತಿರುವುದನ್ನು ತಿಳಿಸುವಂತೆ ಹೇಳಿ ಕಳಿಸಿದನು. ಪಡೆದ ವಿಜಯದಿಂದ ಅಮಿತಾನಂದದಲ್ಲಿದ್ದ ಸೈನ್ಯವು ಶರವೇಗದಲ್ಲಿ ನಗರವನ್ನು ಸೇರಿ, "ರಾಮ ಲಕ್ಷ್ಮಣ ಭರತ ಶತ್ರುಘ್ನರು ಸತೀ ಸಮೇತರಾಗಿ ನಗರವನ್ನು ಪ್ರವೇಶಿಸುತ್ತಿದ್ದಾರೆ, ದಶರಥ ಮಹಾರಾಜರು ಅಮಿತಾನಂದದಿಂದ ಈ ವಾರ್ತೆಯನ್ನು ಕಳಿಸಿದ್ದಾರೆ," ಎಂದು ತಿಳಿಸಿತು. ಪುರಜನರು ತೋರಣವನ್ನು ಕಟ್ಟಿ ಬೀದಿಗಳನ್ನು ಅಲಂಕರಿಸಿದರು, ಬಾಳೆ ಕಂಬಗಳನ್ನು ಕಟ್ಟಿದರು. ಕಮಾನುಗಳನ್ನು ಹಾಕಿದರು. ನಾರಿಕೇಳಗಳನ್ನು ತೂಗುಬಿಟ್ಟರು. ರಾಜಬೀದಿಗಳಲ್ಲಿ ಪನ್ನೀರು ಚೆಲ್ಲಿದರು, ನಗರವನ್ನೆಲ್ಲಾ ಅತಿ ಸುಂದರವಾಗಿ ಶೃಂಗರಿಸಿದರು. ಮಂಗಳವಾದ್ಯ ವೃಂದಗಳನ್ನು ಅಲ್ಲಲ್ಲಿ ನಿಲ್ಲಿಸಿದರು. ಮಂಗಳ ಸಾಮಗ್ರಿಗಳನ್ನು ಸಿದ್ಧಪಡಿಸಿದರು. ಬಣ್ಣಿಸಲಾರದ ಆನಂದದಿಂದ ಪುರ ಜನರು ಕ್ಷಣಕ್ಷಣವನ್ನೂ ಎಣಿಸುತ್ತಾ ಅವರ ದಾರಿ ಕಾದರು. ಸ್ತ್ರೀಯರು ಕಿಟಕಿಗಳಲ್ಲಿ ಮಹಡಿಗಳಲ್ಲಿ ಮುಸುಕು ಹಾಕಿಕೊಂಡು ಕಿಕ್ಕಿರಿದು ಸೇರಿದರು.

ಸೊಸೆಯರು ಮಕ್ಕಳೊಂದಿಗೆ ದಶರಥನು ಅಯೋಧ್ಯಾ ನಗರವನ್ನು ಪ್ರವೇಶಿಸಿ ದನು, ಮಂಗಳವಾದ್ಯಗಳು ಮುಗಿಲು ಮುಟ್ಟುವಂತೆ ಮೊಳಗಿದುವು. ಜನರು ಜೈ ಜೈಕಾರ ಮಾಡಿದರು. ಸ್ತ್ರೀಯರು ಮಂಗಳಾರತಿ ಎತ್ತಿದರು. ಪನ್ನೀರು ಚೆಲ್ಲಿದರು. ಪುಷ್ಪಗಳನ್ನು ಸುರಿದರು. ನಕ್ಷತ್ರಗಳಂಥ ಸೊಸೆಯರ ಮಧ್ಯದಲ್ಲಿ ಸೂರ್ಯನಂಥಾ ಕುಮಾರರು ಬೀದಿಗಳಲ್ಲಿ ಬರುತ್ತಿದ್ದರೆ ಜನರು ದೇಹಗಳನ್ನೇ ಮರೆತು ಆನಂದಿಸಿ ದರು. ಎಷ್ಟು ಹೊತ್ತು ನೋಡಿದರೂ ತೃಪ್ತಿಯಾಗದೆ, ಮತ್ತೆ ಮತ್ತೆ ನೋಡಲು ಮುಂದಕ್ಕೆ ಬರುತ್ತಿದ್ದರು. ದಶರಥಾದಿಗಳು ಬೀದಿಗಳನ್ನು ಹಾದು ರಾಜಭವನವನ್ನು ಸೇರಿದರು. ಸಿಂಹದ್ವಾರದ ಬಳಿ ಬ್ರಾಹ್ಮಣರು ಸ್ವಸ್ತಿವಾಚನ ಹೇಳಿದರು. ದಾದಿಯರು ಅನೇಕ ರೀತಿಯಾಗಿ ದೃಷ್ಟಿ ತೆಗೆದರು. ಮಂಗಳಾರತಿ ಎತ್ತಿದರು. ಬಲಗಾಲು ಮುಂದಿಟ್ಟು ಪ್ರವೇಶಿಸುವಂತೆ ಪಾದಗಳನ್ನು ಹಿಡಿದು ಪ್ರಾರ್ಥಿಸಿದರು. ಸೊಸೆಯರು ಬಲಗಾಲು ಒಳಗಿಟ್ಟು ಪ್ರವೇಶಿಸಿದರು. ಅಂತಃಪುರದ ಪ್ರಥಮ ದ್ವಾರದ ಬಳಿ, ಯಾವಾಗ ನೋಡುವೆವೋ ಎಂದು ಕಣ್ಣುಗಳೂ ಕಾಯಗಳೂ ತವಕಿಸುತ್ತಿವೆ ಯೇನೊ ಎನ್ನುವಂತೆ ಕಾದಿದ್ದ ಕೌಸಲ್ಯಾ, ಸುಮಿತ್ರೆ, ಕೈಕೆಯರು ಸೊಸೆಯರನ್ನು ಎದುರ್ಗೊಂಡು ಗಂಧವನ್ನು ಚೆಲ್ಲಿಕೊಂಡು ಶಿರಸ್ಸನ್ನು ಮುದ್ದಾಡಿ ಆಶೀರ್ವದಿಸಿ ದರು. ಮಕ್ಕಳು, ಸೊಸೆಯರೊಂದಿಗೆ ತಾಯಿಯರಿಗೆ ನಮಸ್ಕರಿಸಿದರು. ತಾಯಿ ಯರ ಆನಂದ ಹದ್ದು ಮೀರಿ, ಹಿಡಿಸಲಾರದ ಆನಂದದಿಂದ ಆನಂದಬಾಷ್ಪವು ತಾನೇ ತಾನಾಗಿ ಸುರಿಯಿತು.

ಅಷ್ಟರಲ್ಲಿ ದಾದಿಯರು ಹಾಲನ್ನವನ್ನು ಬಂಗಾರದ ಬಟ್ಟಲಲ್ಲಿ ತಂದರು. ತಾಯಿ ಯರು ತಮ್ಮ ತಮ್ಮ ಮಕ್ಕಳು ಸೊಸೆಯರ ಬಾಯಿಯಲ್ಲಿ ಹಾಲನ್ನವಿಟ್ಟು ತಿನ್ನಿಸಿದರು,

ಹಾಲನ್ನು ಕುಡಿಸಿದರು. ಒಳಗೆ ಕರೆದೊಯ್ದು ಅಭ್ಯಂಗನ ಸ್ನಾನಕ್ಕೆ ಏರ್ಪಾಟು ಮಾಡಿದರು. ಪ್ರಯಾಣದ ಬಳಲಿಕೆಯನ್ನು ತೀರಿಸುವಂತೆ ಕುಮಾರರಿಗೆ ಪರಿಚಾರಕರನ್ನೂ ಸೊಸೆಯರಿಗೆ ಪರಿಚಾರಿಕೆಯರನ್ನೂ ಮೈಗೆ ಎಣ್ಣೆ ಹಚ್ಚಲು ನೇಮಿಸಿ, ಅಭ್ಯಂಗನ ಸ್ನಾನ ಮಾಡಿಸಿದರು. ಸ್ವಲ್ಪ ಹೊತ್ತು ವಿಶ್ರಮಿಸಿಕೊಳ್ಳುವಂತೆ ಹೇಳಿದರು. ಅವರು ನಿದ್ರಿಸುತ್ತಿರುವಾಗ ತಲೆಗೆ ಹೊಗೆ ಹಾಕುವವರೂ ಪಾದಗಳನ್ನು ಒತ್ತುವವರೂ ಚಾಮರಗಳಿಂದ ಗಾಳಿ ಬೀಸುವವರೂ ಅಮಿತೋತ್ಸಾಹದಿಂದ ಸೇವೆ ಮಾಡುತ್ತಿದ್ದರು. ಅವರಿಗೆ ಆಹಾರಾದಿಗಳನ್ನು ಅವರಿದ್ದಲ್ಲಿಗೇ ಕಳಿಸಿದರು. ಅವರು ಚೆನ್ನಾಗಿ ವಿಶ್ರಮಿಸಿಕೊಂಡಮೇಲೆ, ಸಂಜೆ ಅಯೋಧ್ಯಾ ನಗರದ ಸ್ತ್ರೀಯರನ್ನು ಆರತಕ್ಷತೆಗೆ ಬರಮಾಡಿಕೊಂಡರು. ಸುಂದರವಾದ ವೇದಿಕೆಯ ಮೇಲೆ ಬಂಗಾರದ ಪೀಠಗಳನ್ನು ಸಿದ್ಧಪಡಿಸಿದರು. ತಾಯಿಯರಾದ ಕೌಸಲ್ಯಾ, ಸುಮಿತ್ರೆ, ಕೈಕೆಯರು ತಮ್ಮ ತಮ್ಮ ಸೊಸೆಯರನ್ನು ಅತಿ ಬೆಲೆಬಾಳುವ ವಸ್ತ್ರಗಳಿಂದ ವಜ್ರ ವೈಡೂರ್ಯಗಳಿಂದ ಮಾಡಿದ ಆಭರಣಗಳಿಂದ ಅಲಂಕರಿಸಲು ದಾದಿಯರನ್ನು ನೇಮಿಸಿದರು. ತಾವು ಅಲ್ಲೇ ಇದ್ದು ಅಲಂಕಾರ ಮಾಡಿಸಿ, ಸೊಸೆಯರನ್ನು ಕೈಹಿಡಿದು ಕರೆತಂದು ವೇದಿಕೆಯ ಮೇಲಿನ ಪೀಠದಲ್ಲಿ ಕೂರಿಸಿದರು.

ರಾಮ ಲಕ್ಷ್ಮಣ ಭರತ ಶತ್ರುಘ್ನರು ರಾಜವಸ್ತ್ರಾಲಂಕೃತರಾಗಿ, ಬೆಲೆಬಾಳುವ ಆಭರಣಗಳನ್ನೂ ಕಿರೀಟಗಳನ್ನೂ ಧರಿಸಿ, ತಮ್ಮ ತಮ್ಮ ಹೆಂಡತಿಯರ ಬಲಭಾಗದಲ್ಲಿ ಕುಳಿತರು. ಆ ದೃಶ್ಯವನ್ನು ತಾಯಿಯರೂ ಪುರಸ್ತ್ರೀಯರೂ ಅದೆಷ್ಟು ಬಣ್ಣಿಸಿದರೋ ನೋಡಿ ಎಷ್ಟು ಆನಂದಿಸಿದರೋ ಅದು ವರ್ಣನಾತೀತ. ಅರಮನೆಯಲ್ಲಿ ಈ ಸಮಾರಂಭವು ನಡೆಯುತ್ತಿರುವಾಗ, ನಗರದ ಬೀದಿಗಳಲ್ಲಿ ದಾನ ಕೊಡುವ ಕಾರ್ಯವು ಸಾಗಿತ್ತು. ಗೋವುಗಳು, ಧನ, ಸುವರ್ಣ, ಭೂಮಿ, ಧಾನ್ಯ, ವಸ್ತು, ವಾಹನಾದಿಗಳನ್ನು ದಾನ ಮಾಡಿದರು. ಮಕ್ಕಳು ಸೊಸೆಯರಿಗೆ ಬ್ರಾಹ್ಮಣರು ಬಂದು ಆಶೀರ್ವಾದಗಳನ್ನು ಹೇಳಿ ಅಕ್ಷತೆ ಹಾಕಿದ ತರುವಾಯ, ಸುಮಂಗಲಿಯರು ನೂರೆಂಟು ದೀಪಗಳಿಂದ ಆರತಿ ಎತ್ತಿದರು, ದೃಷ್ಟಿ ತೆಗೆದರು. ನಂತರ ಕುಮಾರರು ತಮ್ಮ ತಮ್ಮ ಹೆಂಡತಿಯರೊಂದಿಗೆ, ತಾಯಿಯರಿಗೂ ತಂದೆಗೂ ಗುರುವಿಗೂ ನಮಸ್ಕರಿಸಿ ಒಳಗೆ ಹೋದರು.

# ೯ ಪಟ್ಟಾಭಿಷೇಕಕ್ಕೆ ಸಿದ್ಧತೆ

ಸಮಾರಂಭವು ಮುಗಿದ ಮೇಲೆ ಕೇಕೇಯ ರಾಜಕುಮಾರನಾದ ಭರತನ ಸೋದರ ಮಾವನು ದಶರಥನ ಹತ್ತಿರಕ್ಕೆ ಬಂದು, "ನಾನು ಬಂದು ಬಹಳ ಕಾಲವಾಯಿತು. ನನ್ನ ತಂದೆ ನನಗಾಗಿ ಕಾದಿರುತ್ತಾರೆ. ಈ ಮಂಗಳ ಕಾರ್ಯದಲ್ಲಿ ನನ್ನ ತಂದೆ ಇದ್ದಿದ್ದರೆ ಎಷ್ಟೋ ಆನಂದಪಡುತ್ತಿದ್ದರು. ಭರತನ ಮದುವೆಯು ನನ್ನ ತಂದೆಗೆ ತಿಳಿಯದು. ತಾನಿಲ್ಲದೆ ತನ್ನ ಮೊಮ್ಮಗನ ಮದುವೆ ಆಗಿರುವುದು ಅವರಿಗೆ ನಿರಾಸೆಯಾಗಬಹುದು. ಹಾಗೆ ಬೇಸರಕ್ಕೆ ಅವಕಾಶವಾಗದಿರಲು, ಅನುಜ್ಞೆಯಿತ್ತು ಭರತನನ್ನು ನನ್ನ ಜೊತೆಯಲ್ಲಿ ಕಳಿಸಿದರೆ, ಅಲ್ಲಿ ಪುನಃ ವೈಭವದಿಂದ ಸಮಾರಂಭ ಗಳನ್ನು ನಡೆಸಿ, ನನ್ನ ತಂದೆಯು ತೃಪ್ತಿಪಟ್ಟುಕೊಳ್ಳುವರು," ಎಂದನು. ದಶರಥನು ಹೆಂಡತಿಯರೊಂದಿಗೆ ಸಮಾಲೋಚಿಸಿ, ಭರತನನ್ನು ಕರೆದು, "ಮಗೂ! ನಿನ್ನ ಸೋದರಮಾವ ಯುಧಾಜಿತನು ನಿನ್ನನ್ನು ಕರೆದೊಯ್ಯಲು ಬಂದಿದ್ದಾನೆ. ಮಿಥಿಲಾ ಪುರದಿಂದಲೇ ನಿನ್ನನ್ನು ಕರೆದುಕೊಂಡು ಹೋಗುತ್ತೇನೆಂದು ಅವನು ಹೇಳಿದಾಗ ನಾನು ಒಪ್ಪಲಿಲ್ಲ. ನಿನ್ನ ತಾತನು ನಿನಗಾಗಿ ಪರಿತಪಿಸುತ್ತಿದ್ದಾರೆಂದು ತಿಳಿಯಿತು. ಆದ್ದರಿಂದ, ಅವನೊಂದಿಗೆ ಹೊರಡಲು ಸಿದ್ಧನಾಗು," ಎಂದು ಆಜ್ಞಾಪಿಸಿದನು. ಭರತನು, "ಅಪ್ಪಾ! ಶತ್ರುಘ್ನನೂ ನನ್ನೊಂದಿಗೆ ಬಂದರೆ ಒಳ್ಳೆಯದು," ಎನ್ನಲು, ದಶರಥನು ಅವನಿಗೂ ಹೊರಡಲು ಆಜ್ಞಾಪಿಸಿದನು. ಇಬ್ಬರೂ ತಮ್ಮ ಹೆಂಡತಿಯ ರೊಂದಿಗೆ ಗಿರಿವ್ರಜಪುರಕ್ಕೆ ಪ್ರಯಾಣ ಹೊರಟರು.

ತಂದೆಯ ಮೇಲಿನ ಅಭಿಮಾನದಿಂದ ಭರತನು ಮರುಮಾತನಾಡದೆ ತನ್ನ ಹೆಂಡತಿಯೊಂದಿಗೆ ಹೊರಟಿದ್ದನು. ಭರತನು ಮಹಾ ಬುದ್ಧಿವಂತ, ಜಿತೇಂದ್ರಿಯ. ಭರತಶತ್ರುಘ್ನರಿಬ್ಬರೂ ತಮ್ಮ ತಮ್ಮ ಧರ್ಮಪತ್ನಿಯರೊಂದಿಗೆ ಆನಂದವಾಗಿ ಪ್ರಯಾಣ ಮಾಡಿ ಗಿರಿವ್ರಜಪುರವನ್ನು ಸೇರಿದರು. ತನ್ನ ಮುದ್ದು ಮೊಮ್ಮಗನನ್ನು ನೋಡಲು ಕಾತರನಾಗಿದ್ದ ತಾತನು ಭರತ ಶತ್ರುಘ್ನರನ್ನು ನೋಡಿ ಆನಂದದಿಂದ ಮುದ್ದಾಡಿ, ಪಕ್ಕದಲ್ಲಿ ಕೂರಿಸಿಕೊಂಡು ಅನೇಕ ಪರಿಯಾಗಿ ಅಯೋಧ್ಯೆಯ ಕ್ಷೇಮ ಸಮಾಚಾರಗಳನ್ನು ವಿಚಾರಿಸಿದನು. "ಪ್ರಯಾಣದಿಂದ ಬಳಲಿದ್ದೀರಿ, ವಿಶ್ರಮಿಸಿ ಕೊಳ್ಳಿ," ಎಂದು ಹೇಳಿ ಅವರವರ ವಸತಿಗೆ ಕಳಿಸಿದನು. ಅವರನ್ನು ಸ್ವಂತ ಮಕ್ಕಳಿ ಗಿಂತ ಹೆಚ್ಚಾಗಿ ಅತ್ಯಂತ ಪ್ರೀತಿಯಿಂದ ಆನಂದದಿಂದ ಆದರಿಸುತ್ತಾ, ಜಾಗ್ರತೆಯಿಂದ ನೋಡಿಕೊಳ್ಳುತ್ತಿದ್ದನು. ಅವರ ಆನಂದ, ಅನುಕೂಲಕ್ಕಾಗಿ ತಾತನು ಎಷ್ಟೆಷ್ಟು ರೀತಿಯ ಏರ್ಪಾಟುಗಳನ್ನು ಮಾಡಿದ್ದರೂ ಭರತ ಶತ್ರುಘ್ನರು ಮಾತ್ರ ಏನೋ ಒಂದು ರೀತಿಯಾಗಿ ಅಸಂತೃಪ್ತಿಯಿಂದಿರುವಂತೆ ಕಾಣುತ್ತಿದ್ದರು. ತಂದೆಯನ್ನೂ

ಪ್ರಾಣ ಸಮಾನನಾದ ರಾಮನನ್ನೂ ಬಿಟ್ಟಿರಲಾರದಿದ್ದುದೇ ಇದಕ್ಕೆ ಕಾರಣ. ಸದಾ ದಶರಥನ ಮತ್ತು ರಾಮನ ಕುರಿತಾದ ಮಾತಿನಲ್ಲೇ ಇಬ್ಬರೂ ಇರುತ್ತಿದ್ದರು. ಮಧ್ಯೆ ಮಧ್ಯೆ ತಂದೆ ಹೇಗಿರುವರೋ ಎಂದು ಬಾಧೆಪಡುತ್ತಿದ್ದರು.

ಅತ್ತ, ಅಯೋಧ್ಯೆಯಲ್ಲಿ, ದಶರಥನು ಭರತ ಶತ್ರುಘ್ನರ ವಿಷಯವನ್ನು ಯೋಚಿಸದ ನಿಮಿಷವೇ ಇರಲಿಲ್ಲ. ದಶರಥನೂ ಅವರನ್ನು ಬಿಟ್ಟಿರಲಾರದೆ ಚಡಪಡಿಸುತ್ತಿದ್ದನು. ಒಮ್ಮೊಮ್ಮೆ, ಏಕಾದರೂ ಅವರನ್ನು ಕಳಿಸಿದೆನೊ, ಕಳಿಸದಿದ್ದರೆ ಚೆನ್ನಾಗಿತ್ತು ಎಂದು ಕೊಳ್ಳುತ್ತಿದ್ದನು. ದಶರಥನು ನಾಲ್ಕು ಜನ ಮಕ್ಕಳನ್ನೂ ತನ್ನ ನಾಲ್ಕು ಕೈಗಳೆಂದೇ ಭಾವಿಸಿದ್ದನು. ಕೆಲವೊಮ್ಮೆ ಭರತ ಶತ್ರುಘ್ನರನ್ನು ಕುರಿತು ಚಿಂತಿಸುತ್ತಿದ್ದ ದಶರಥ ನನ್ನು ನೋಡಿ ರಾಮಚಂದ್ರನು ತಂದೆಯ ಬಳಿಗೆ ಹೋಗಿ ಮಧುರವಾದ ಮಾತುಗಳನ್ನಾಡಿ ಅವನ ಮನಸ್ಸನ್ನು ಸಂತೋಷಪಡಿಸುತ್ತಿದ್ದನು.

ರಾಮನು ಪರಮ ಶಾಂತಮೂರ್ತಿ. ಯಾರು ಎಷ್ಟೇ ಕಠಿಣವಾಗಿ ಮಾತನಾಡಿದರೂ ಮೃದು ಮಧುರವಾಗಿಯೇ ಉತ್ತರಿಸುತ್ತಿದ್ದನು. ತನಗೆ ಪರರು ಎಷ್ಟೊಂದು ಅಪಕಾರ ಮಾಡಿದರೂ ಅವುಗಳನ್ನು ಜ್ಞಾಪಕದಲ್ಲಿಡದೆ, ಎಲ್ಲರ ಬಗ್ಗೆಯೂ ಉಪಕಾರ ಭಾವ ವನ್ನೇ ಹೊಂದಿರುತ್ತಿದ್ದನು. ಅವಕಾಶ ಸಿಕ್ಕಾಗಲೆಲ್ಲಾ ಸದಾಚಾರ ಸತ್ಸಂಪ್ರದಾಯ ಗಳನ್ನು ಕುರಿತು ವಯೋವೃದ್ಧರಾದ ಮುನಿಗಳೊಂದಿಗೆ ಬ್ರಾಹ್ಮಣರೊಂದಿಗೆ ಪಂಡಿ ತರೊಂದಿಗೆ ಚರ್ಚಿಸುತ್ತಿದ್ದನು. ವೇದಾಂತ ರಹಸ್ಯಗಳನ್ನು ಸುಲಭವಾಗಿ ವಿವರಿಸಿ, ತನ್ನ ವಿವರಣೆ ಸರಿಯೋ ತಪ್ಪೋ ಎಂದು ಸಾಮಾನ್ಯ ಮಾನವರಂತೆ ಪಂಡಿತರ ಅಭಿಪ್ರಾಯ ಕೇಳುತ್ತಿದ್ದನು. ಅಲ್ಲಿ ಸೇರಿದ್ದ ಋಷಿಗಳೂ ವೇದಾಂತ ವಿಜ್ಞಾನ ನಿಧಿ ಗಳಾದ ಪಂಡಿತರುಗಳೂ ರಾಮವಾಕ್ಯಗಳನ್ನು ಕೇಳಿ ಅಮಿತಾನಂದ ಹೊಂದುತ್ತಿ ದ್ದರು. ಅವನ ವಿವೇಕವನ್ನು ಮುಕ್ತಕಂಠದಿಂದ ಕೊಂಡಾಡುತ್ತಿದ್ದರು. ರಾಮನು ಪ್ರಜೆಗಳೊಂದಿಗೆ ತಾನೇ ಮೊದಲು ಮಾತನ್ನಾರಂಭಿಸಿ ಅವರ ಕ್ಷೇಮಸಮಾಚಾರಗ ಳನ್ನು ವಿಚಾರಿಸುತ್ತಿದ್ದನು. ಈ ಕಾರಣದಿಂದ ಪ್ರಜೆಗಳು ಕೂಡ ರಾಮನನ್ನು ತಮ್ಮ ಆಪ್ತನೆಂದು ಭಾವಿಸಿ, ಗೌರವಿಸಿ, ಅಮಿತವಾಗಿ ಪ್ರೀತಿಸುತ್ತಿದ್ದರು.

ರಾಮನು ನಿರಂತರವೂ ದೃಢ ನಿಯಮ ನಿರತನಾಗಿ, ಎಂಥ ಅನನುಕೂಲ ಸಂದರ್ಭದಲ್ಲೂ ನಿಯಮವನ್ನು ಬಿಡದೆ ಪಾಲಿಸುತ್ತಿದ್ದನು. ಯಾರೊಂದಿಗೆ ಸಂಭಾ ಷಿಸಿದರೂ ಹಸನ್ಮುಖದಿಂದ, ಲಾಸ್ಯವಾಡುವ ಕೆನ್ನೆಗಳಿಂದ ಆಕರ್ಷಕವಾಗಿ, ಹರ್ಷ ಚಿತ್ತನಾಗಿ ಮಾತನಾಡುತ್ತಿದ್ದನು. ಅವನ ಮುಖದಲ್ಲಿ ಕೋಪ, ಬೇಜಾರು, ನಿರಾಸೆ ಯನ್ನು ಯಾರೂ ಕಂಡಿಲ್ಲ. ದಯೆ, ದಾಕ್ಷಿಣ್ಯ, ಶರಣಾಗತ ರಕ್ಷಣಾದಿ ಧರ್ಮಗಳೆಲ್ಲಾ ರಾಮನಲ್ಲಿ ಮೂರ್ತೀಭವಿಸಿದ್ದುವು. ಪಗಡೆ, ಜೂಜು, ಇತ್ಯಾದಿ ಕೆಟ್ಟ ಹವ್ಯಾಸಗಳು

ಅವನ ಮನಸ್ಸಿನಲ್ಲಿ ಎಂದೂ ಬರಲಿಲ್ಲ. ಅಂಥ ದುರ್ಗುಣಗಳೆಲ್ಲಾ ಸದಾ ರಾಮನಿಂದ ಅತಿ ದೂರವಾಗಿಯೇ ಇದ್ದವು. ಅವನಲ್ಲಿ ಅತಿ ಮಾತಾಗಲೀ ಕೆಟ್ಟ ದೃಷ್ಟಿಯಾಗಲೀ ಇರಲಿಲ್ಲ. ಆದರೆ, ಯಾರಾದರೂ ಯುಕ್ತಿಯಿಂದ ಮಾತಾಡಿದರೆ ಅದಕ್ಕಿಂತ ಹೆಚ್ಚಾದ ಯುಕ್ತಿಯಿಂದ ಮಾತಾಡಿ ಅವರ ಬಾಯಿ ಮುಚ್ಚಿಸುತ್ತಿದ್ದನು. ಯುಕ್ತಿಗೆ ಅವಕಾಶಕೊಡದೆ ಅದನ್ನು ಆಗಿಂದಾಗಲೇ ಮುರಿಯುತ್ತಿದ್ದನು.

ಅವನು ಅನಾರೋಗ್ಯವನ್ನು ಎಂದೂ ಕಾಣನು. ಪ್ರಜಾಭಿಪ್ರಾಯಕ್ಕೆ ಅನುಗುಣ ವಾಗಿ ಅವರ ಅನುಕೂಲಕ್ಕಾಗಿ ಆಗಬೇಕಾದುದನ್ನು ತಂದೆಗೆ ತಿಳಿಸಿ, ಮಂತ್ರಿಗಳ ಮೂಲಕ ಮಾಡಿಸುತ್ತಿದ್ದನು. ದಶರಥನೂ ಕೂಡ ರಾಮನ ಅಭೀಷ್ಟಕ್ಕೆ ಎಂದೂ ಅಡ್ಡಿ ಹೇಳದೆ, ಮರುಕ್ಷಣವೇ ಆ ಕಾರ್ಯವನ್ನು ಮಾಡಿಸುತ್ತಿದ್ದನು. ಪ್ರತಿ ಸಣ್ಣ ಸಮಸ್ಯೆಯನ್ನೂ ಅತಿ ಜಾಗ್ರತೆಯಿಂದ ಗ್ರಹಿಸಿ, ಅಂಥ ಸಮಸ್ಯೆಯು ತಿರುಗಿ ಬರದಂತೆ ಏನು ಮಾಡಬೇಕೋ ಅದನ್ನೆಲ್ಲಾ ಮಾಡುತ್ತಿದ್ದನು. ಅವನ ಇನ್ನೊಂದು ವಿಶಿಷ್ಟತೆ ಎಂದರೆ, ತನ್ನ ಮನೋ ನಿರ್ಧಾರ ಏನೆನ್ನುವುದನ್ನು ಯಾರಿಗೂ ತಿಳಿಯಗೊಡುತ್ತಿರಲಿಲ್ಲ. ಅವನ ಭಾವನೆಗಳು ಪ್ರಕಟವಾಗುವವರೆಗೂ ಯಾರಿಗೂ ಅವುಗಳ ಸುಳಿವು ಸಿಕ್ಕುತ್ತಿರಲಿಲ್ಲ. ಅವನ ಕೋಪ, ಸಂತೋಷ ಎಂದೂ ವ್ಯರ್ಥವಾದುದಾಗಿರಲಿಲ್ಲ. ಆಲಸ್ಯವಾಗಲೀ ಕಪಟ ಮಾತಾಗಲೀ ಅವನಿಗೆ ಗೊತ್ತೇ ಇರಲಿಲ್ಲ. ಇಂಥ ಲೋಕೋತ್ತರ ಗುಣಗಳಿಂದ ರಾಮನು ಪ್ರಕಾಶಿಸುತ್ತಿದ್ದನು. ಅಯೋಧ್ಯೆಯಲ್ಲಿ ದಶರಥನು ಇಂಥ ಕುಮಾರನನ್ನು ನೋಡಿ ಸಂತೋಷಿಸುತ್ತಾ ಪ್ರಜೆಗಳಲ್ಲಿ ರಾಮನ ಬಗೆಗಿದ್ದ ಪವಿತ್ರ ಕೀರ್ತಿಯನ್ನೂ ವಿಶ್ವಾಸವನ್ನೂ ಮಂತ್ರಿ ಗಳಿಂದ ಪುರೋಹಿತರುಗಳಿಂದ ಕೇಳಿ ತನ್ನಲ್ಲೇ ತಾನು ಆನಂದಿಸುತ್ತಿದ್ದನು.

ಹೀಗಿರುವಲ್ಲಿ, ಒಂದು ದಿನ ರಾತ್ರಿ ದಶರಥನಿಗೆ ಬಾಯಾರಿಕೆಯಾಗಿ ನೀರು ಕುಡಿಯಬೇಕೆನಿಸಿತು. ರಾಣಿಯರ ನಿದ್ರಾಭಂಗ ಮಾಡಲು ಮನಸ್ಸು ಒಪ್ಪದೆ, ಹೂ ಜಿಯಲ್ಲಿನ ನೀರನ್ನು ಒಂದು ಸಣ್ಣ ಗಿಂಡಿಗೆ ತಾನೇ ಸುರಿದುಕೊಂಡು ಕುಡಿಯುವ ಸಮಯದಲ್ಲಿ, ಗಿಂಡಿಯ ಮೇಲಿನ ಹಿಡಿತ ತಪ್ಪಿ ಕೈ ಅದುರುತ್ತಿದ್ದುದನ್ನು ಗಮನಿಸಿ, ನಿದ್ರೆ ಹತ್ತದೆ ನಾನಾ ಆಲೋಚನೆಗಳಲ್ಲಿ ಮುಳುಗಿಹೋದನು. ತನಗೆ ವಾರ್ಧಕ್ಯ ಬಂದಿರುವುದೆಂದೂ ನರಗಳ ಬಲ ಕುಗ್ಗಿದ ಮೇಲೆ ರಾಜ್ಯಪಾಲನೆ ಮಾಡಕೂಡ ದೆಂದೂ ಇಂದ್ರಿಯ ನಿಗ್ರಹವಿಲ್ಲದ ಪರಿಪಾಲನೆ ಪ್ರಜಾಕ್ಷೇಮಕ್ಕೆ ವಿರುದ್ಧವಾಗಬಲ್ಲ ದೆಂದೂ ಅಂಥ ಪರಿಪಾಲನೆಯಿಂದ ರಾಜ್ಯವು ಅಸ್ತವ್ಯಸ್ತವಾಗಿ, ಕಡೆಗೆ ಪತನಕ್ಕೆ ದಾರಿಯಾಗುವುದೆಂದೂ ನಿಶ್ಚಯಿಸಿದನು. ಯಾವಾಗ ಬೆಳಗಾಗುವುದೋ ಎಷ್ಟು ಹೊತ್ತಿಗೆ ತನ್ನ ನಿರ್ಧಾರವನ್ನು ಮಂತ್ರಿಗಳಿಗೆ ಹೇಳಿಯೇನೋ ಎಂದು ನಿಮಿಷಗಳನ್ನೆ ಣಿಸುತ್ತಾ ಮಲಗಿರಲು ಬೆಳಗಾಯಿತು.

ಎದ್ದು, ತನ್ನ ಕಾಲಕೃತ್ಯಗಳನ್ನು ತೀರಿಸಿಕೊಂಡು ಸ್ನಾನ ಸಂಧ್ಯಾದಿಗಳನ್ನು ಮಾಡಿ, ವಿಶೇಷವಾದ ಒಂದು ಸಭೆಯನ್ನು ವ್ಯವಸ್ಥೆಗೊಳಿಸಿ, ಪುರಪ್ರಮುಖರನ್ನೂ ಪುರೋಹಿತರನ್ನೂ ಮಂತ್ರಿಗಳನ್ನೂ ಆ ಸಭೆಗೆ ಆಹ್ವಾನಿಸುವಂತೆ ಭಕ್ಷಿಗಳಿಗೆ ಆಜ್ಞೆ ಮಾಡಿದನು. ಆಹ್ವಾನಿತರೆಲ್ಲರೂ ಮಹಾರಾಜನ ಆಜ್ಞೆಯನ್ನು ಶಿರಸಾವಹಿಸಿ ಸಭೆಗೆ ಆಗಮಿಸಿದರು. ದಶರಥನು ವಸಿಷ್ಠರಿಗೆ ನಮಸ್ಕರಿಸಿ, ರಾತ್ರಿ ತನಗಾದ ಅನುಭವವನ್ನೂ ಅದರಿಂದ ತನ್ನಲ್ಲುಂಟಾದ ಭಾವನೆಗಳನ್ನೂ ಸ್ಪಷ್ಟವಾಗಿ ಬಿನ್ನವಿಸಿ, ರಾಜ್ಯ ಪರಿಪಾಲನಾ ಬಾಧ್ಯತೆಯನ್ನು ತನ್ನ ಕುಮಾರನಾದ ರಾಮಚಂದ್ರನಿಗೆ ವಹಿಸಬೇಕೆಂದು ತಿರ್ಮಾನಿಸಿರುವುದಾಗಿಯೂ ಇದಕ್ಕೆ ಅಡ್ಡಿ ಹೇಳಬಾರದೆಂದು ಅವರನ್ನು ವಿನಯದಿಂದ ಪ್ರಾರ್ಥಿಸಿ, ಅದಕ್ಕೆ ತಕ್ಕ ಏರ್ಪಾಟುಗಳನ್ನು ಮಾಡಲು ಅವರ ಅನುಜ್ಞೆಯನ್ನು ಕೇಳಿದನು.

ಪ್ರಧಾನ ಮಂತ್ರಿಯಾದ ಸುಮಂತನು ಎದ್ದು ನಿಂತು ಸಭಾಸದರಿಗೆ ಈ ವಾರ್ತೆಯನ್ನು ತಿಳಿಸಿದೊಡನೆಯೇ ಪುರಪ್ರಮುಖರು ಮಂತ್ರಿಗಳು ಪುರೋಹಿತರು, ಅವರಿವರೇನು, ಅಲ್ಲಿ ನೆರೆದವರೆಲ್ಲರೂ, "ಶುಭಂ ಶುಭಂ," ಎಂದು ಮುಗಿಲು ಮುಟ್ಟುವಂತೆ ಹರ್ಷೋದ್ಗಾರ ಮಾಡಿದರು. ವಸಿಷ್ಠರು ಎದ್ದು ನಿಂತು, "ರಾಜಾ! ಇದಕ್ಕೆ ಇಷ್ಟೊಂದು ವಿಚಾರ ಮಾಡುವ ಅಗತ್ಯವಿಲ್ಲ. ರಾಮಚಂದ್ರನು ರಾಜ್ಯಭಾರ ವಹಿಸಿಕೊಳ್ಳುವುದಕ್ಕೆ ಯೋಗ್ಯನಾದರೂ ಸ್ವಲ್ಪ ನಿಧಾನಿಸಿ, ಬೇಕಾದವರಿಗೆಲ್ಲ ಆಹ್ವಾನ ಕಳುಹಿಸಿ, ಪಟ್ಟಾಭಿಷೇಕವನ್ನು ಅತಿ ವೈಭವವಾಗಿ ನಡೆಸಬಹುದು. ರಾಮಚಂದ್ರನನ್ನು ಎಂದಾದರೂ ಯುವರಾಜನನ್ನಾಗಿ ಮಾಡಬಹುದಾದ್ದರಿಂದ ಆತುರಪಡದೆ ಒಂದೋ ಎರಡೋ ತಿಂಗಳು ಕಾಯುವುದೊಳ್ಳೆಯದೆಂದು ನನ್ನ ಅಭಿಪ್ರಾಯ," ಎಂದರು.

ಅದಕ್ಕೆ ದಶರಥನು, "ಮಹಾತ್ಮಾ! ನಿಮಗೆ ತಿಳಿಯದುದಿಲ್ಲ. ನೀವು ಸರ್ವಜ್ಞರು. ಅಂಗ ಭದ್ರತೆ ತಪ್ಪಿದ ರಾಜನು ಪರಿಪಾಲನೆಗೆ ಅರ್ಹನಲ್ಲ. ವಾರ್ಧಕ್ಯ ಪ್ರವೇಶಿಸಿದ ಪ್ರಭುವಿಗೆ ಪರಿಪಾಲನಾಕಾಂಕ್ಷೆ ಇರುವುದು ಮಹಾ ಪ್ರಮಾದ. ಅದು ದುರಾಶಾ ಪೀಡೆಯಾಗಬಹುದು. ಇದು ತಿಳಿದಿದ್ದೂ ನಾನು ಮತ್ತೆ ಅದರಲ್ಲಿ ಪ್ರವೇಶಿಸಿದರೆ ನಾನು ಕರ್ತವ್ಯ ಭ್ರಷ್ಟನಾಗುವೆನು. ಆದ್ದರಿಂದ, ಕ್ಷಮಿಸಿ. ಇನ್ನು ವಿಳಂಬ ಮಾಡದೆ, ಈ ಎರಡು ಮೂರು ದಿನಗಳೊಳಗೇ ನಮ್ಮ ರಾಮಚಂದ್ರನನ್ನು ಯುವರಾಜನನ್ನಾಗಿ ಮಾಡಲು ಅನುಜ್ಞೆ ನೀಡಬೇಕು," ಎಂದು ಅತಿ ದೀನವಾಗಿ ವಸಿಷ್ಠರ ಪಾದಗಳಿಗೆರಗಿದನು. ವಸಿಷ್ಠರು ಅವನನ್ನು ಮೇಲೆತ್ತಿ, ಆಶೀರ್ವದಿಸಿ, "ರಾಜಾ! ರಾಮಚಂದ್ರನ ವಿವಾಹವು ಸಹ ಆಗಿಂದಾಗಲೇ ಅನಿರೀಕ್ಷಿತವಾಗಿ ನಡೆದುಹೋಯಿತು. ಆ ವೈಭವವನ್ನು ಕೂಡ ಪ್ರಜೆಗಳೆಲ್ಲರೂ ನೋಡಿ ಅನುಭವಿ

ಸದೆ ಹೋದರು. ಪಟ್ಟಾಭಿಷೇಕ ಸಹ ಈಗಿಂದೀಗಲೇ ನಿರ್ಣಯಿಸಿ, ಅನಿರೀಕ್ಷಿತವಾಗಿ ನಡೆದುಹೋದರೆ, ಇತರ ರಾಜರುಗಳಿಗೆ ಮಾತ್ರವಲ್ಲದೆ ಒಡಹುಟ್ಟಿದವರಾದ ಭರತ ಶತ್ರುಘ್ನರಿಗೆ ಕೂಡ ಬಾಧೆಯಾಗಬಹುದು. ಮೊನ್ನೆ ಮೊನ್ನೆ ತಾನೆ ಸಂಬಂಧಿಯಾದ ಜನಕ ಮಹಾರಾಜನು ಕೂಡ ಬರದಂತಾಗಬಹುದು. ಆದ್ದರಿಂದ ಈ ಬಗ್ಗೆ ಯೋಚಿಸುವುದೊಳ್ಳೆಯದು," ಎಂದರು.

ಆಗ, ಪ್ರಧಾನ ಮಂತ್ರಿಯು ಎದ್ದು, "ಕುಲಗುರುಗಳು ನನ್ನನ್ನು ಕ್ಷಮಿಸಬೇಕು! ಚಕ್ರವರ್ತಿಗಳ ಸಂಕಲ್ಪವು ಸರ್ವಜನರಿಗೂ ಸಮ್ಮತವಾಗಿಯೇ ಇದೆ. ಸರ್ವಜನ ಸಂತಾಪಹರನೂ ಪೂರ್ಣಚಂದ್ರನಂತೆ ಸರ್ವಲೋಕಪ್ರಿಯನೂ ಆದ ರಾಮಚಂದ್ರ ನನ್ನು ಯುವರಾಜನನ್ನಾಗಿ ಮಾಡಲು ಕಾಲಹರಣ ಮಾಡದೆ, ಶೀಘ್ರವಾಗಿ ಆಜ್ಞೆ ಯನ್ನು ಅನುಗ್ರಹಿಸಬೇಕೆಂದು ಪ್ರಜೆಗಳ ಪರವಾಗಿ ಪ್ರಾರ್ಥಿಸುತ್ತಿದ್ದೇನೆ," ಎಂದು ಬಿನ್ನವಿಸಿದನು. ಚಕ್ರವರ್ತಿಯೂ ಮುಖ್ಯಮಂತ್ರಿಯೂ ಈ ವಿಧವಾಗಿ ಪ್ರಾರ್ಥಿಸಿದ ಮೇಲೆ ವಸಿಷ್ಠರು ವಿಧಿಯಿಲ್ಲದೆ ಅಂಗೀಕರಿಸಿದರು. ಪ್ರಜಾಭಿಪ್ರಾಯವನ್ನು ಕೂಡ ತಿಳಿದುಕೊಳ್ಳಬೇಕೆಂದು ಸಲಹೆ ಮಾಡಿದರು. ದಶರಥನು ಎದ್ದು ನಿಂತು, ಆ ಸಭೆಯಲ್ಲಿ ಸಮಾವೇಶಗೊಂಡಿದ್ದ ಮಂತ್ರಿಗಳನ್ನೂ ಮಹನೀಯರನ್ನೂ ಸದಸ್ಯ ರನ್ನೂ ಪಂಡಿತರನ್ನೂ ಪುರೋಹಿತರನ್ನೂ ಎಲ್ಲರನ್ನೂ ಒಂದು ಸಾರಿ ನೋಡಿ ಕುಳಿತನು.

ನಂತರ, ಸಭಿಕರಲ್ಲೊಬ್ಬನು ಎದ್ದುನಿಂತು, "ಮಹಾರಾಜಾ! ನಿಮ್ಮ ಪೂರ್ವಿಕ ರಾದ ರಾಜೇಂದ್ರರೆಲ್ಲರೂ ಪ್ರಜೆಗಳನ್ನು ತಮ್ಮ ಸ್ವಂತ ಮಕ್ಕಳಂತೆ ಕಾಪಾಡುತ್ತಾ ರಾಜ್ಯಪಾಲನೆ ಮಾಡಿದರು. ಇಕ್ಷ್ವಾಕು ನರೇಂದ್ರರಂತೆಯೇ ಈ ಕೋಸಲ ದೇಶವೂ ಶುಭಪ್ರದವಾದ ರಾಜ್ಯವಾಯಿತು. ನಿಮ್ಮ ಜ್ಯೇಷ್ಠಪುತ್ರನಾದ ಶ್ರೀರಾಮನು ಸದ್ಗುಣ ಸಂಪನ್ನನು. ಪರಮ ಧಾರ್ಮಿಕನು, ಪರಾಕ್ರಮದಲ್ಲಿ ಪುರಂದರನು. ಅಷ್ಟೇ ಅಲ್ಲ, ಮೂರು ಲೋಕಗಳನ್ನೂ ಆಳಬಲ್ಲ ಸಮರ್ಥನು. ಅವನನ್ನು ಯುವರಾಜನನ್ನಾಗಿ ಮಾಡುವುದು ನಮ್ಮ ಭಾಗ್ಯ. ಇದಕ್ಕೆ ಯಾವ ಸಂದೇಹವೂ ಬೇಡ," ಎಂದು ಮೇಘಗರ್ಜನೆಯಂತೆ, ಸಭಾಭವನವೆಲ್ಲಾ ಪ್ರತಿಧ್ವನಿಸುವಂತೆ ಆನಂದ ವಚನ ಗಳನ್ನಾಡಿದನು. ನಂತರ ದಶರಥನು ಎದ್ದು ನಿಂತು, "ಸಭಾ ಸದಸ್ಯರುಗಳೇ! ನಾನು ನಮ್ಮ ಪೂರ್ವಿಕರ ಮಾರ್ಗವನ್ನನುಸರಿಸಿ, ನನ್ನ ಶಕ್ತ್ಯಾನುಸಾರ ಇದುವರೆಗೂ ರಾಜ್ಯವನ್ನು ಕಾಪಾಡಿದೆ, ಆಳಿದೆ. ಲೋಕಹಿತಕ್ಕಾಗಿಯೇ ಈ ಶ್ವೇತ ಛತ್ರಛಾಯೆಯಲ್ಲಿ ನನ್ನ ಎಲ್ಲಾ ಆಯುಸ್ಸನ್ನು ಕಳೆದೆ. ನಾನೀಗ ವೃದ್ಧ. ಈ ದೇಹದ ಅಂಗಗಳ ಸ್ವಾಧೀನ ತಪ್ಪಿದೆಯೆನ್ನುವುದನ್ನು ಅರಿತಿದ್ದೇನೆ.

ಇನ್ನು ಈ ಶಿಥಿಲ ದೇಹಕ್ಕೆ ವಿಶ್ರಾಂತಿ ಕೊಡಬೇಕೆಂದು ಈ ನಿರ್ಧಾರಕ್ಕೆ ಬಂದಿದ್ದೇನೆ. ಧರ್ಮ ಸಂಸ್ಥಾಪನಾ ರೂಪದ ರಾಜ್ಯಭಾರವು ಸಾಮಾನ್ಯವಾದುದಲ್ಲ. ಜಿತೇಂದ್ರಿಯನಾದವನು ಮಾತ್ರ ಅನೇಕ ಸಾಧನಗಳಿಂದ ಧರ್ಮ ಸಂಸ್ಥಾಪನಾ ರೂಪದ ರಾಜ್ಯಭಾರವನ್ನು ನಿರ್ವಹಿಸಬಲ್ಲವನಾಗುತ್ತಾನೆ. ಈ ರಾಜ್ಯಭಾರವನ್ನು ಹೊತ್ತು ಹೊತ್ತು ನನಗೆ ಆಯಾಸವಾಗಿದೆ. ನನ್ನ ಈ ಆಲೋಚನೆಯು ನಿಮ್ಮೆಲ್ಲರಿಗೂ ಸಮ್ಮತವಾದರೆ, ನಾನು ಹೀಗೆ ಮಾಡುವದು ನಿಮ್ಮೆಲ್ಲರಿಗೂ ಉಚಿತವೆನಿಸಿದರೆ ಈ ಕೆಲಸ ಮಾಡುತ್ತೇನೆ. ಇಲ್ಲದಿದ್ದಲ್ಲಿ ನಿಮ್ಮ ಅಭೀಷ್ಟಕ್ಕೆ ನಾನೆಂದೂ ವಿರುದ್ಧವಾಗಿ ನಡೆಯುವುದಿಲ್ಲ. ನನ್ನನ್ನು ಸಂತೋಷಪಡಿಸಲೋ ಇಲ್ಲದೆ ರಾಜಾಜ್ಞೆ ಮೀರಬಾರದೆಂಬ ಅಂಜಿಕೆಯಿಂದಲೋ ರಾಮನ ಯುವರಾಜ್ಯಾಭಿಷೇಕವನ್ನು ಒಪ್ಪಿಕೊಳ್ಳಬೇಕಾಗಿಲ್ಲ. ಇದರಲ್ಲಿ ನೀವು ಸ್ವತಂತ್ರರು. ಇದು ನಿಮಗೆಲ್ಲರಿಗೂ ಒಪ್ಪಿಗೆಯಾದರೆ, ಇಲ್ಲವೆ ಬೇರೆ ಏನಾದರೂ ನಿಮ್ಮ ಸಲಹೆ ಸೂಚನೆಗಳಿದ್ದರೆ, ನಿರ್ದಾಕ್ಷಿಣ್ಯವಾಗಿ ಹೇಳಬಹುದು. ಆದ್ದರಿಂದ, ನೀವೆಲ್ಲರೂ ವಿಚಾರ ಮಾಡಿ ರಾತ್ರಿ ನಿಮ್ಮ ಅಭಿಪ್ರಾಯವನ್ನು ತಿಳಿಸಿ," ಎಂದು ದಶರಥನು ಮಾತು ಪೂರ್ತಿ ಮಾಡುವ ಮೊದಲೇ ಮಳೆಗರೆಯುವ ಮೋಡಗಳನ್ನು ನೋಡಿ ನವಿಲುಗಳು ಗರಿಗೆದರಿ ಕೇಕೆ ಹಾಕುವಂತೆ ಸಭಾ ಸದಸ್ಯರೆಲ್ಲರೂ, "ತಮ್ಮ ಅಭೀಷ್ಟವೇ ನಮ್ಮ ಅಭೀಷ್ಟ. ಅದಕ್ಕಿಂತ ಉತ್ತಮ ಆಲೋಚನೆ ಮಾಡಲು ನಾವು ಅರ್ಹರಲ್ಲ. ಶುಭಂ, ಶುಭಂ," ಎಂದರು. "ರಾಮಚಂದ್ರ ಯುವರಾಜರಿಗೆ ಜೈ, ದಶರಥ ಮಹಾರಾಜರಿಗೆ ಜೈ," ಎಂದು ದಿಕ್ಕುಗಳು ಪ್ರತಿಧ್ವನಿಸುವಂತೆ ಹರ್ಷೋದ್ಗಾರ ಮಾಡಿದರು.

ಈ ಶುಭ ಧ್ವನಿಯನ್ನು ಕೇಳಿ ದಶರಥನು ಒಂದೆಡೆ ಆನಂದದಿಂದ, ಇನ್ನೊಂದೆಡೆ ಒಂದು ವಿಧವಾದ ಅನುಮಾನದಿಂದ ಯಾವುದೂ ಅರ್ಥವಾಗದ ಸ್ಥಿತಿಯಲ್ಲಿ ಸ್ತಂಭೀಭೂತನಾದನು. ಚೇತರಿಸಿಕೊಂಡು ಸಭಾಸದರನ್ನುದ್ದೇಶಿಸಿ, "ಸಭಿಕರೇ! ನಿಮ್ಮ ಅಭೀಷ್ಟವನ್ನು ನೆರವೇರಿಸುವುದಕ್ಕಿಂತ ಬೇರೆ ಕಾರ್ಯವೊಂದು ನನಗಿಲ್ಲ, ತಪ್ಪದೆ ನಿಮ್ಮ ಇಷ್ಟಾನುಸಾರವಾಗಿಯೇ ರಾಮನನ್ನು ಯುವರಾಜನನ್ನಾಗಿ ಮಾಡುತ್ತೇನೆ. ಆದರೆ, ಒಂದು ಅನುಮಾನ ನನ್ನನ್ನು ಬಾಧಿಸುತ್ತಿರುವುದರಿಂದ, ಅದನ್ನು ಕೂಡ ಪರಿಹಾರ ಮಾಡಿಕೊಳ್ಳಲಿಚ್ಛಿಸುತ್ತಿದ್ದೇನೆ. ಆದ್ದರಿಂದ, ನೀವು ಅಂಜಿಕೊಳ್ಳದೆ ಇದ್ದುದನ್ನು ಇದ್ದಂತೆ ತಿಳಿಸಿ, ನನ್ನನ್ನು ಆನಂದಗೊಳಿಸುತ್ತೀರೆಂದು ಆಶಿಸುತ್ತಿದ್ದೇನೆ. ಅದೇನೆಂದರೆ, ರಾಮ ಪಟ್ಟಾಭಿಷೇಕ ವಿಷಯವನ್ನು ನಾನು ನಿಮಗೆ ತಿಳಿಸುವ ಮೊದಲೇ ನೀವೆಲ್ಲರೂ ರಾಮಚಂದ್ರನನ್ನು ತಪ್ಪದೆ ಯುವರಾಜನನ್ನಾಗಿ ಮಾಡಬೇಕೆಂದೂ ಅವನ ಸಾಮರ್ಥ್ಯ ಅಪಾರವಾದುದೆಂದೂ ಹೇಳಿದಿರಿ. ಇದನ್ನು ನೋಡಿದರೆ ನನ್ನ ಪರಿಪಾಲನೆಯಲ್ಲಿ ನಿಮಗೇನಾದರೂ ಅನನುಕೂಲಗಳೋ ನಿಮ್ಮ

ಅಭೀಷ್ಟಕ್ಕೆ ವಿರುದ್ಧವಾದ ಶಾಸನಗಳೋ ಧರ್ಮಬಾಹಿರವಾದ ಕಾರ್ಯಗಳೋ ನನ್ನಿಂದಾಗಿರಬೇಕು ಎನಿಸುತ್ತಿದೆ. ಅಥವಾ ಮುಂದಿನ ನನ್ನ ಪರಿಪಾಲನೆಯ ಬಗ್ಗೆ ಸಂದೇಹಪಟ್ಟು ರಾಮನ ಯುವರಾಜ್ಯಾಭಿಷೇಕವನ್ನು ಕೋರುತ್ತಿದ್ದೀರೇನೋ ಎನ್ನುವ ಸಂಶಯ ಸಹ ನನ್ನನ್ನು ಬಾಧಿಸುತ್ತಿದೆ. ಆದ್ದರಿಂದ, ನನ್ನ ತಪ್ಪು ಏನೇ ಇದ್ದರೂ ನಿರ್ದಾಕ್ಷಿಣ್ಯವಾಗಿ ನೀವು ಹೇಳಬೇಕು," ಎಂದು ಕೋರಿದನು.

ಆಗ ಸಭಾಸದರ ಪ್ರಮುಖನು ಎದ್ದು, "ರಾಮನ ಶಕ್ತಿ ಸಾಮರ್ಥ್ಯಗಳು, ಗುಣ ಗಣಗಳು ವರ್ಣನಾತೀತ. ಇನ್ನು ನೀವಾದರೋ ದೇವದೇವನಂಥವರು. ಪ್ರಜಾ ಕೋರಿಕೆಗಳನ್ನು ಕೇಳಿದಾಕ್ಷಣ ನಡೆಸಿಕೊಡುವ ಶಂಕರನಂಥವರು. ರಕ್ಷಿಸುವುದರಲ್ಲಿ ನೀವು ವಿಷ್ಣುಮೂರ್ತಿಯ ಹಾಗೆ. ನಿಮ್ಮ ಪರಿಪಾಲನೆಯನ್ನು ಶಂಕಿಸಿದೆವಾದರೆ ನಾವು ನಿಜಕ್ಕೂ ಕ್ರೂರಿಗಳೇ ಸರಿ. ಹಾಗೆ ಶಂಕಿಸುವವರು ಪಾಪಿಗಳು. ಲೋಕಹಿತ ಕ್ಕಾಗಿ ಹಾಗೂ ನಿಮ್ಮನ್ನು ಸಂತೋಷಪಡಿಸುವುದಕ್ಕಾಗಿ ನಿಮ್ಮ ಆಜ್ಞೆಯನ್ನು ಶಿರಸಾ ವಹಿಸಿದೆವಷ್ಟೆ," ಎಂದು ಬಿನ್ನವಿಸಿದನು.

**ಅವಸರದ ಕಾರ್ಯಗಳು**: ದಶರಥನು ಅತ್ಯಂತ ಆನಂದದಿಂದ, "ಬ್ರಾಹ್ಮಣೋ ತ್ತಮರೇ! ಕೇಳಿದಿರಲ್ಲವೇ ಪ್ರಜಾಭಿಪ್ರಾಯ? ಇನ್ನು ನೀವು ಆಲಸ್ಯ ಮಾಡದೆ ಪಟ್ಟಾಭಿಷೇಕಕ್ಕೆ ಬೇಕಾದ ಸಾಮಗ್ರಿಗಳನ್ನು ಅಣಿಮಾಡಿಕೊಳ್ಳಿ. ಹೋಮಕುಂಡಾದಿ ಗಳನ್ನು ಏರ್ಪಡಿಸಿಕೊಳ್ಳಿ," ಎಂದು ಆಜ್ಞಾಪಿಸಿದನು. ವಸಿಷ್ಠರಿಗೆ ನಮಸ್ಕರಿಸಿ, "ಸ್ವಾಮೀ! ಬರಲು ಸಾಧ್ಯವಿದ್ದವರು ಮಾತ್ರ ಬರುತ್ತಾರೆ. ದೂರ ಪ್ರಾಂತದವರನ್ನು ನಿರೀಕ್ಷಿಸಬೇಡಿ. ಅವರು ಪಟ್ಟಾಭಿಷೇಕ ನಡೆಸಿದ ಮೇಲೆ ಕೇಳಿ ಆನಂದಿಸುವರು. ಆದ್ದರಿಂದ ಕೇಕಯ ರಾಜನಾಗಲೀ ಜನಕನಾಗಲೀ ಬರಲೇ ಬೇಕೆನ್ನುವ ಅಪೇಕ್ಷೆ ಇಟ್ಟುಕೊಳ್ಳದೆ, ಕಾಲಹರಣ ಮಾಡದೆ, ಶೀಘ್ರವಾಗಿ ಈ ಪವಿತ್ರ ಅಭಿಷೇಕಕ್ಕೆ ಅನುಜ್ಞೆ ನೀಡಬೇಕು," ಎಂದು ಕೈ ಜೋಡಿಸಿ ಪ್ರಾರ್ಥಿಸಿದನು.

ವಸಿಷ್ಠರು, "ಮಹಾರಾಜಾ! ನಾನು ಸರ್ವಸಿದ್ಧನಾಗಿಯೇ ಇದ್ದೇನೆ. ನಾಳೆಯ ದಿನವೇ ಅಗ್ನಿಹೋತ್ರ ಗೃಹಗಳನ್ನೂ ಪೂಜಾ ದ್ರವ್ಯಾದಿಗಳನ್ನೂ ಓಷಧಿಗಳನ್ನೂ ನೂರು ಕಲಶಗಳನ್ನೂ ಪೂರ್ಣವಾಗಿರುವ ಹುಲಿದೊಗಲನ್ನೂ ಸಿದ್ಧಪಡಿಸಿ, ಚತು ರಂಗ ಬಲದೊಂದಿಗೂ ಸರ್ವ ಶುಭಲಕ್ಷಣಯುತವಾದ ಶತ್ರುಂಜಯ ಆನೆಯೊಂ ದಿಗೂ ಸರ್ವಾಲಂಕೃತವಾದ ವೃಷಭದೊಂದಿಗೂ ಶ್ವೇತಛತ್ರದೊಂದಿಗೂ ಧ್ವಜ ದೊಂದಿಗೂ ಸರ್ವಸಿದ್ಧವಾಗಿರಿ," ಎಂದು ಆಜ್ಞಾಪಿಸಿದರು. ನಾಳೆಯೆ ಮುಹೂರ್ತ ಎಂದು ವಸಿಷ್ಠರು ನಿರ್ಣಯಿಸಿ ತಿಳಿಸಿದೊಡನೆಯೇ ಪ್ರಜೆಗಳು ಪರಮಾನಂದದಿಂದ ಜೈಕಾರ ಹಾಕಿದರು. ರಾಜಬೀದಿಗಳನ್ನು ಶುಭ್ರ ಮಾಡುವುದು, ರಂಗೋಲಿ ಹಾಕು

ವುದು, ತೋರಣ ಕಟ್ಟುವುದು, ಚಪ್ಪರ ಹಾಕುವುದು, ಇತ್ಯಾದಿ ಅವಶ್ಯಕವಾದ ಕಾರ್ಯಗಳನ್ನು ಆಗಿಂದಾಗಲೇ ಪ್ರಾರಂಭಿಸಿದರು. ಬ್ರಾಹ್ಮಣರು, ಪ್ರಜೆಗಳು ಕಲ ಕಲ ಹರ್ಷ ಧ್ವನಿ ಮಾಡುತ್ತಾ ಕಿಲಕಿಲನೆ ನಗುತ್ತಾ ದಶರಥನ ಅಪ್ಪಣೆ ಪಡೆದು ಸಭಾಭವನವನ್ನು ಬಿಟ್ಟು ಹೊರಟರು.

**ಪರಮಾನಂದ**: ದಶರಥನೂ ಕುಲಗುರು ವಸಿಷ್ಠರೂ ಮಂತ್ರಿಗಳೂ ಒಳಗೆ ಹೊರಟರು. ದಶರಥ ಮಹಾರಾಜನು ಶ್ರೀರಾಮನನ್ನು ಆಸ್ಥಾನಕ್ಕೆ ಬರಮಾಡಿ ಕೊಂಡು ಪಟ್ಟಾಭಿಷೇಕಕ್ಕೆ ಸಂಬಂಧಿಸಿದ ಎಲ್ಲ ವಿಧಿಗಳನ್ನು ವಿವರವಾಗಿ ತಿಳಿಸಿ, ಮಾರನೆ ದಿನ ಸೂರ್ಯೋದಯಕ್ಕೆ ಸಿದ್ಧವಾಗಿರುವಂತೆ ಹೇಳಿ ಅದಕ್ಕೆ ಬೇಕಾದ ಏರ್ಪಾಟುಗಳನ್ನು ಮಾಡಲು ಸಂಬಂಧಪಟ್ಟ ಜನರನ್ನು ನೇಮಿಸಿ, ರಾಮನನ್ನು ಕಳಿಸಿಕೊಟ್ಟನು.

ಈ ವಾರ್ತೆಯನ್ನು ಕೇಳಿದ ಲಕ್ಷ್ಮಣನು ಪರಮಾನಂದದಿಂದ ಓಡುತ್ತಾ ಹೋಗಿ ಕೌಸಲ್ಯಾದೇವಿಗೆ ತಿಳಿಸಿದನು. ಅವಳು ಹಿಡಿಸಲಾರದ ಆನಂದದಿಂದ ರಾಮನ ಆಗಮನದ ನಿರೀಕ್ಷೆ ಮಾಡುತ್ತಾ ಕುಳಿತಳು. ಕಾಲಾವಕಾಶ ಬಹಳ ಕಡಿಮೆಯಾ ದರೂ ಪಟ್ಟಾಭಿಷೇಕದ ವಾರ್ತೆಯು ವೇಗವಾಗಿ ನಗರವನ್ನೆಲ್ಲಾ ವ್ಯಾಪಿಸಿತು. ಸುತ್ತಮುತ್ತಲ ರಾಜ್ಯಗಳಿಗೂ ಗ್ರಾಮಗಳಿಗೂ ಬಹುಬೇಗ ಮುಟ್ಟಿತು. ಗ್ರಾಮ ಗ್ರಾಮ ಗಳಿಂದ ಅಯೋಧ್ಯೆಗೆ ಧಾವಿಸಿ ಬರುತ್ತಿದ್ದ ಜನರ ಸಂಖ್ಯೆಯು ಮಿತಿಮೀರಿತು. ಇದೆಲ್ಲವನ್ನೂ ತಿಳಿದ ರಾಮಚಂದ್ರನು ಏನೂ ತೋಚದೆ, ಬಾಯಲ್ಲಿ ಮಾತು ಹೊರಡದೆ, ಆನಂದವನ್ನು ವ್ಯಕ್ತಪಡಿಸದೆ, ಮೌನ ಧರಿಸಿದನು. ರಾಮನ ಸ್ಥಿತಿಯನ್ನು ನೋಡಿದ ದಶರಥನು, "ಮಗೂ! ಪಟ್ಟಾಭಿಷೇಕ ಆಗಲಿರುವಾಗ ನಿನ್ನಲ್ಲಿ ಆನಂದವೇ ಕಾಣಿಸದಿರುವುದರ ಕಾರಣವೇನು? ಯುವರಾಜನಾಗಲು ನಿನಗೆ ಇಷ್ಟವಿಲ್ಲವೆ? ಇಂದಿನಿಂದಲೇ ರಾಜ್ಯಭಾರವನ್ನು ನಿನ್ನ ತಲೆಯ ಮೇಲೆ ಹೇರಲಿದ್ದೇವೆಂದು ಭಯವೇ? ನಿನ್ನ ಮನೋಭೀಷ್ಟವೇನೊ ತಿಳಿಸು," ಎಂದು ಬಹು ವಿಧವಾಗಿ ಹಲವು ಬಾರಿ ಪ್ರಶ್ನಿಸಿದನು.

ದಶರಥನ ಮುಖವನ್ನು ನೋಡುತ್ತಾ ರಾಮಚಂದ್ರನು, "ಅಪ್ಪಾ! ನೀವು ಏಕೆ ಇಷ್ಟೊಂದು ಆತುರಪಡುತ್ತಿದ್ದೀರೊ ನನಗೆ ಅರ್ಥವಾಗುತ್ತಿಲ್ಲ. ನನ್ನ ಪ್ರಿಯ ಸೋದ ರರು, ಭರತ ಶತ್ರುಘ್ನರು ನನ್ನೊಂದಿಗಿಲ್ಲ. ಇನ್ನು, ತಾತನವರು ಬಹಳ ದೂರದಲ್ಲಿ ಇರುವುದರಿಂದ, ಅವರು ಬರಲಾರರು. ಸಾಮಂತ ರಾಜರು ಯಾರೂ ಇಲ್ಲಿಗೆ ಬಂದು ಸೇರಲು ಆಗದಿರಬಹುದು. ಇಷ್ಟೊಂದು ಜನರಿಗೆ ನಿರಾಶೆಯುಂಟುಮಾಡಿ, ಪಟ್ಟಾಭಿಷೇಕ ಮಾಡಿಕೊಳ್ಳಲು ನನ್ನ ಮನಸ್ಸೊಪ್ಪುತ್ತಿಲ್ಲ," ಎಂದು ನಮಸ್ಕರಿಸಿ

ವಿನಯದಿಂದ ನುಡಿದನು. ಆಗ, ವಸಿಷ್ಠರು, "ರಾಮಾ! ಇದನ್ನು ನಾವೂ ವಿಚಾರ ಮಾಡದೆ ಹೋಗಿಲ್ಲ. ಎಲ್ಲಾ ರೀತಿಯಲ್ಲೂ ವಿಚಾರ ಮಾಡಿ, ಪ್ರಜಾಭಿಪ್ರಾಯವನ್ನು ಕೂಡ ಪಡೆದು, ಈ ನಿರ್ಣಯಕ್ಕೆ ಬಂದಿದ್ದೇವೆ. ನೀನಿನ್ನು ಯಾವ ಅಡ್ಡಿಯನ್ನೂ ಹೇಳದೆ, ಮಹಾರಾಜನ ಅಭೀಷ್ಟವನ್ನು ಶಿರಸಾವಹಿಸು. ಅಭಿಷೇಕವು ನಾಳೆಯೇ ಆಗಬೇಕು. ಈ ರಾತ್ರಿಯಿಂದಲೇ ನಿಯಮಗಳನ್ನು ಪಾಲಿಸಬೇಕು. ಈ ರಾತ್ರಿ ಹಾಸಿಗೆ ಮಂಚಗಳನ್ನು ಬಿಟ್ಟು ದರ್ಭೆ ಶಯ್ಯೆಯಲ್ಲಿ ಮಲಗಬೇಕು. ಸೀತಾಸಮೇತನಾಗಿ ಉಪವಾಸ ಮಾಡಬೇಕು. ಬೆಳಗಾಗುತ್ತಲೇ ಅಭ್ಯಂಗನ ಸ್ನಾನ ಮಾಡಿ, ಅರಿಶಿನ ಬಣ್ಣದ ವಸ್ತ್ರ ಧರಿಸಬೇಕು. ಸೂರ್ಯೋದಯಕ್ಕೆ, ಪುಷ್ಯಮಿ ನಕ್ಷತ್ರಕ್ಕೆ ನೂತನ ವಸ್ತ್ರ ಧರಿಸಬೇಕು. ಪಟ್ಟಾಭಿಷೇಕ ಪೂರ್ತಿಯಾಗಿರಬೇಕು. ಆದ್ದರಿಂದ, ನೀನೀಗ ಮರುಮಾತನಾಡದೆ ನಿನ್ನ ವಸತಿಗೆ ಹೊರಡು," ಎಂದು ಆಜ್ಞಾಪಿಸಿದರು.

**ತಾಯಿ ಮಗ**: ರಾಮನು ತಂದೆಗೂ ಗುರುವಿಗೂ ನಮಸ್ಕರಿಸಿ ಏನೂ ಮಾತಾಡದೆ ಸುಮಂತನೊಂದಿಗೆ ವಸತಿಗೆ ಹೋಗಿ, ಸೀತೆಗೆ ವಾರ್ತೆಯನ್ನು ತಿಳಿಸಿದನು. ಅಲ್ಲಿಂದ ಹೊರಟು, ಕೌಸಲ್ಯೆಯ ಭವನಕ್ಕೆ ಹೋಗಿ ಅವಳಿಗೆ ನಮಸ್ಕರಿಸಿದನು. ಕೌಸಲ್ಯೆಯು ಅತ್ಯಂತ ಆನಂದದಿಂದ ಕುಮಾರನನ್ನು ಮುದ್ದಾಡಿದಳು. ಸರ್ವಾಲಂಕಾರ ಮಾಡಿ ಸಿದ್ಧವಾಗಿಟ್ಟಿದ್ದ ಅನೇಕ ಗೋವುಗಳನ್ನು ಕುಮಾರನಿಂದ ದಾನ ಮಾಡಿಸಿದಳು. ಇನ್ನೂ ಅನೇಕ ಬಗೆಯ ದಾನಗಳನ್ನು ಅವನಿಂದ ಮಾಡಿಸಿದಳು. ಸುಮಿತ್ರಾ ಲಕ್ಷ್ಮಣರ ಸಮೇತವಾಗಿ ಕೌಸಲ್ಯೆಯು ರಾಮನನ್ನು ಪಕ್ಕದಲ್ಲಿ ಕೂರಿಸಿಕೊಂಡು ಆನಂದಬಾಷ್ಪಗಳನ್ನು ಒರೆಸಿಕೊಳ್ಳುತ್ತಾ, "ಮಗೂ! ಈ ಸುಸಮಯವನ್ನೆಂದು ಕಾಣುವೆನೊ ಎನ್ನುವ ನನ್ನ ಬಹಳ ಕಾಲದ ಆಸೆಯು ಇಂದಿಗೆ ಪೂರ್ತಿಯಾಯಿತು. ನಾನು ಧನ್ಯಳಾದೆ. ನನ್ನ ಬಂಗಾರು ಮಗುವೇ! ನಾಳೆಯಿಂದ ನೀನು ಯುವರಾಜ. ಚಿರಕಾಲ ಬಾಳು. ಪ್ರಜಾಕ್ಷೇಮವನ್ನು ದೃಷ್ಟಿಯಲ್ಲಿಟ್ಟುಕೊಂಡು ಸಕ್ರಮವಾಗಿ ಪ್ರಜಾಪಾಲನೆ ಮಾಡಿ ಸತ್ಕೀರ್ತಿ ಗಳಿಸು. ನಮ್ಮ ಪೂರ್ವಿಕರ ಘನತೆಯನ್ನುಳಿಸು. ನಿಮ್ಮ ತಂದೆಗಿಂತ ದೊಡ್ಡ ಹೆಸರು ಸಂಪಾದಿಸು. ಆಗಲೇ ನನ್ನ ಜನ್ಮ ಧನ್ಯವಾಗುವುದು, ನನ್ನ ವ್ರತ ಉಪವಾಸಗಳು ಸಫಲವಾಗುವುವು," ಎಂದು ರಾಮನ ತಲೆಯನ್ನು ಸವರುತ್ತಾ ಅನೇಕ ರೀತಿಯಾಗಿ ಅವನನ್ನು ಆಶೀರ್ವದಿಸುತ್ತಾ ಬುದ್ಧಿಮಾತುಗಳನ್ನು ಹೇಳಿದಳು.

**ಅಣ್ಣ ತಮ್ಮ**: ಅವಳ ಮಾತನ್ನು ರಾಮನು ಶ್ರದ್ಧೆಯಿಂದ ಕೇಳಿದನು. ಅವನ ಮುಖದಲ್ಲಿ ಮುಗುಳ್ನಗೆ ಲಾಸ್ಯವಾಡುತ್ತಿರಲು, ತಮ್ಮ ಲಕ್ಷ್ಮಣನನ್ನು ನೋಡಿ, "ಸೋದರಾ! ನಿನ್ನನ್ನು ಯಾವ ರಾಜ್ಯಲಕ್ಷ್ಮಿ ವರಿಸಿರುವಳೋ ಹೇಳಬಲ್ಲೆಯಾ?" ಎಂದು ಪ್ರಶ್ನಿಸಿದನು. ಲಕ್ಷ್ಮಣನು ಬಹು ಆನಂದದಿಂದ, "ಅಣ್ಣಾ! ನನಗೆ ಯಾವ

ರಾಜ್ಯಲಕ್ಷ್ಮಿಯೂ ಬೇಡ. ನಿನ್ನ ರಾಜ್ಯದಲ್ಲೇ ನಿನ್ನ ಆದೇಶಾನುಸಾರ ಪರಿಪಾಲನಾ ಬಾಧ್ಯತೆ ವಹಿಸುವೆನು. ಅದೇ ಸಾಕು ನನಗೆ," ಎಂದು ಅಣ್ಣನಿಗೆ ನಮಸ್ಕರಿಸಿದನು. ಆಗ ರಾಮನು, "ಲಕ್ಷ್ಮಣಾ! ನೀನು ನನ್ನ ಎರಡನೆ ಪ್ರಾಣ. ಆದ್ದರಿಂದ ಅರ್ಧ ರಾಜ್ಯಭಾರವು ನಿನ್ನದು. ನನ್ನೊಂದಿಗೆ ನೀನೂ ಸರ್ವಾಲಂಕೃತನಾಗು. ನನ್ನ ಬಾಧ್ಯತೆ, ನನ್ನ ಭೋಗ ಭಾಗ್ಯಗಳು ಎಲ್ಲದರಲ್ಲೂ ನಿನಗೆ ಅರ್ಧ ಭಾಗದ ಅಧಿಕಾರವಿದೆ. ನಾನೇನು ಅನುಭವಿಸಿದರೂ ಅದರಲ್ಲಿ ನಿನಗೆ ಅರ್ಧ ಬಾಧ್ಯತೆ ಇದೆ," ಎಂದು ಹೇಳಿದ್ದನ್ನು ಕೇಳಿ ಸುಮಿತ್ರೆಯು ಆನಂದಬಾಷ್ಪ ಸುರಿಸಿದಳು. ಇಬ್ಬರನ್ನೂ ಆಶೀರ್ವದಿಸುತ್ತಾ, "ರಾಮಾ! ನಿಮ್ಮಿಬ್ಬರ ಮಧ್ಯೆ ಇರುವ ಪ್ರೇಮವು ನನ್ನನ್ನು ಅದೆಷ್ಟೋ ಆನಂದಗೊಳಿಸಿದೆ. ನನ್ನ ಕುಮಾರನಿಗೆ ನಿನ್ನ ಸೇವೆಯಲ್ಲದೆ ಬೇರೆ ಅಧಿಕಾರ ಅಗತ್ಯವಿಲ್ಲ. ನಿನ್ನ ಪ್ರೇಮ ಅಭಿಮಾನಗಳು ಸದಾ ಕಾಲವೂ ನನ್ನ ಕುಮಾರನ ಮೇಲಿದ್ದರೆ ಅಷ್ಟೇ ಸಾಕು," ಎಂದಳು. ರಾಮನು ಇಬ್ಬರು ತಾಯಿಯರಿಗೂ ನಮಸ್ಕರಿಸಿದನು. ಲಕ್ಷ್ಮಣನೂ ತಾಯಿಯರಿಗೆ ನಮಸ್ಕರಿಸಿ, ಅಣ್ಣನೊಂದಿಗೆ ಅವನ ವಸತಿಗೆ ಹೋದನು.

**ವ್ರತ**: ಗುರುಗಳು ತಿಳಿಸಿದ್ದಂತೆ ಆ ರಾತ್ರಿ ರಾಮ ಮತ್ತು ಸೀತೆ ಉಪವಾಸ ಮಾಡಿದರು. ದರ್ಭಾಸನದ ಮೇಲೆ ಮಲಗಿದರು. ಬೆಳಕು ಹರಿಯಿತು. ಎಲ್ಲಿ ನೋಡಿದರೂ ಮಂಗಳವಾದ್ಯ, ಬ್ರಾಹ್ಮಣರ ವೇದಘೋಷ ಪ್ರತಿಧ್ವನಿಸುತ್ತಿತ್ತು. ರಾಮನಿಗೂ ಸೀತೆಗೂ ಅಭ್ಯಂಗನ ಸ್ನಾನಕ್ಕಾಗಿ ಸರಯೂ ನದಿಯ ಪವಿತ್ರ ಜಲವನ್ನು ಬಂಗಾರದ ಬಿಂದಿಗೆಗಳಲ್ಲಿ ತಂದು ಪರಿವಾರದವರು ಸಿದ್ಧರಾಗಿದ್ದರು. ಸ್ವಸ್ತಿವಾಚನವು ಕಿವಿಗೆ ಇಂಪಾಗಿ ಕೇಳಿಸುತ್ತಿತ್ತು. ಭವನವನ್ನೆಲ್ಲಾ ಅಂದವಾಗಿ ಸಿಂಗರಿಸಿದ್ದರು.

# ೧೦ ಕೈಕೆಯ ಎರಡು ವರ

**ಮಂಥರಳ ಮನೋವೇದನೆ**: ಇಲ್ಲಿ ಹೀಗಿರಲು, ಹಿಂದಿನ ರಾತ್ರಿ ಕೈಕೆಯ ದಾಸಿಯಾದ ಮಂಥರಳು ಮನೆಗೆ ಹೋಗುತ್ತಿರುವಾಗ, ಆ ಅಲಂಕಾರ ವೈಭವಗಳನ್ನು ನೋಡಿ ಕಾರಣ ತಿಳಿಯದೆ, ಕುತೂಹಲದಿಂದ ವಿಚಾರಿಸಲು, ರಾಮ ಪಟ್ಟಾಭಿಷೇಕದ ವಿಷಯ ತಿಳಿಯಿತು. ತನ್ನಂತೆಯೇ ದಾಸಿಯರಾಗಿ ಕೌಸಲ್ಯೆ

ಸುಮಿತ್ರೆಯರ ಬಳಿ ಇರುವ ದಾಸಿಯರು ಮಲ್ಲಿಗೆ ಹೂವಿನಂಥ ಬಿಳಿಯ ಸೀರೆಗಳನ್ನುಟ್ಟು ಆಭರಣಗಳನ್ನು ಹಾಕಿಕೊಂಡು ಅತ್ತಿಂದಿತ್ತ ಓಡಾಡುತ್ತಿರುವುದನ್ನು ನೋಡಿದಳು. ಅವಳಿಗೆ ಅಲ್ಲಿ ನಿಲ್ಲಲು ಸಾಧ್ಯವಾಗದೆ ಹೋಯಿತು. ಮೈಮೇಲೆ ಜರಿಗಳು ಹರಿದಂತಾಯಿತು. ಚೇಳು ಕುಟುಕಿದಂತಾಯಿತು. ಓಡುತ್ತಾ ಕೈಕೆಯ ಭವನಕ್ಕೆ ಹೋದಳು. ಅಷ್ಟರಲ್ಲಿ ಕೈಕೆಯು ಶಯ್ಯಾಗೃಹಕ್ಕೆ ಹೋಗಿದ್ದುದನ್ನು ಕಂಡು, ಶಯ್ಯಾಗೃಹದ ಬಾಗಿಲ ಬಳಿ ಹೋಗಿ ತೀಕ್ಷ್ಣ ಸ್ವರದಿಂದ, "ಅಮ್ಮಾ ಅಮ್ಮಾ, ಬಾಗಿಲು ತೆಗೆ, ಬಾಗಿಲು ತೆಗೆ, ಬಹು ಅವಸರದ ವಿಷಯ, ನಿನ್ನ ಜೀವಿತವೇ ನಾಶವಾಗುತ್ತಿದೆ. ಭೂಕಂಪವಾಗುತ್ತಿದೆ," ಎಂದು ಬಡಬಡನೆ ಮಾತಿನ ಮೇಲೆ ಮಾತು ಆಡುತ್ತಾ ಕೂಗತೊಡಗಿದಳು. ಮಂಥರಳ ಧ್ವನಿಯನ್ನು ಕೇಳಿ ಕೈಕೆಯು ತಕ್ಷಣವೇ ಬಾಗಿಲು ತೆಗೆದು, "ಏನಾಯಿತು? ಯಾಕಿಷ್ಟು ಗಾಬರಿಯಾಗಿದ್ದೀ?" ಎಂದು ಆತಂಕದಿಂದ ಕೇಳಿದಳು. ಮಂಥರಳು, "ಏನಾಯಿತು! ನನ್ನದೇನೂ ನಾಶವಾಗಿಲ್ಲ, ಸುಟ್ಟು ಹೋಗಿಲ್ಲ. ನಿನ್ನ ಜೀವಿತವೇ ಹಾಳಾಯಿತು. ಮೂರ್ಖ ರಾಣಿಯಾಗಿ ಬದುಕುವ ಹೊತ್ತು ಬಂದಿತು ನಿನಗೆ," ಎಂದು ಚೀರಾಡುತ್ತಾ ಕಣ್ಣೀರು ಸುರಿಸುತ್ತಾ ಗೋಳಾಡಿದಳು. ಕೈಕೆಗೆ ಏನೂ ತೋಚಲಿಲ್ಲ, "ಮಹಾರಾಜ, ರಾಮ ಲಕ್ಷ್ಮಣರು, ಕೌಸಲ್ಯಾ ಸುಮಿತ್ರಾದಿಗಳು ಕ್ಷೇಮ ತಾನೆ? ಅವರೆಲ್ಲಾ ಕ್ಷೇಮವಾಗಿದ್ದರೆ ಇನ್ನು ಏನಾದರೇನು? ನನಗೇನೂ ವಿಚಾರವಿಲ್ಲ, ಅವರಿಗೇನಾದರೂ ಪ್ರಮಾದವಾಯಿತೇ ಮಂಥರಾ? ಬೇಗ ಹೇಳು," ಎಂದು ತಲೆಯ ಮೇಲೆ ಕೈ ಸವರಿ, ಗಲ್ಲ ಹಿಡಿದು ಕೇಳಿದಳು. ಮಂಥರೆಯು, "ಇಲ್ಲ ಇಲ್ಲ, ಅವರಿಗೆ ಯಾವ ಕೆಡಕೂ ಆಗಿಲ್ಲ. ನಿನ್ನ ಮಗನ ಕೊರಳು ಕೊಯ್ಯುವ ಆಲೋಚನೆ ಮಾಡಿದ್ದಾರೆ ಅಷ್ಟೆ!" ಎನ್ನಲು ಕೈಕೆಯು, "ಮಂಥರಾ! ಇಲ್ಲ ಸಲ್ಲದ ಊಹೆ ಮಾಡುತ್ತಿದ್ದಿ. ಮಹಾರಾಜನಾಗಲೀ ರಾಮ ಲಕ್ಷ್ಮಣರಾಗಲೀ ಅಕ್ಕಂದಿರಾದ ಕೌಸಲ್ಯೆ ಸುಮಿತ್ರೆಯರಾಗಲೀ ಅಂಥವರಲ್ಲ. ನನ್ನ ಮಗನನ್ನು ತಮ್ಮ ಮಕ್ಕಳಿಗಿಂತ ಅಧಿಕವಾಗಿ ಪ್ರೀತಿಸುತ್ತಾರೆ. ಇದು ನಿನ್ನ ಬುದ್ಧಿ ದೋಷವೇ ವಿನಾ ಸತ್ಯವಲ್ಲ. ಇಷ್ಟಕ್ಕೂ ವಿಷಯ ಏನು ಎನ್ನುವುದನ್ನಾದರೂ ತಿಳಿಸು," ಎಂದು ದುಗುಡದಿಂದ ವಿಚಾರಿಸಿದಳು.

**ಭರವಸೆಯ ಹೊದಿಕೆ**: "ವಿಷಯವೇ? ನಾಳೆ ಬೆಳಗ್ಗೆ ಸೂರ್ಯೋದಯ ಸಮಯಕ್ಕೆ ಶ್ರೀರಾಮಚಂದ್ರನ ಪಟ್ಟಾಭಿಷೇಕವಂತೆ, ಪಟ್ಟದ ರಾಣಿಯನ್ನು ಹಿಡಿದು ಹಾಕಲು ಹಗ್ಗವೇ ಇಲ್ಲ! ಅತ್ಯಂತ ಆನಂದದಿಂದ ತನ್ನ ದಾಸಿಯರಿಗೆ ಪಟ್ಟೆ ಪೀತಾಂಬರಗಳನ್ನು ಆಭರಣಗಳನ್ನು ಕೊಟ್ಟು ಕಳಿಸುತ್ತಿದ್ದಾಳೆ. ಇಷ್ಟೆಲ್ಲಾ ನಡೆಸುತ್ತಿದ್ದರೂ ನಿನ್ನನ್ನಿಷ್ಟು ಕಡೆಗಣಿಸಿರುವುದನ್ನು ನಾನು ಭರಿಸಲಾರೆ, ಸಹಿಸಲಾರೆ. ನಿನಗಿನ್ನೂ ಅರ್ಥವೇ ಆಗಿಲ್ಲ. ನೀನು ಗಂಡನಿಗೆ ಬೇಡದ ರಾಣಿಯಾಗಿಬಿಟ್ಟಿದ್ದೀ.

ಆದರೂ ನನಗಿಂತ ಭಾಗ್ಯವಂತರಿಲ್ಲವೆಂದು ಬೀಗುತ್ತಿದ್ದೀಯೆ. ನಿಜಕ್ಕೂ ನಿನ ಗಿಂತ ದುರದೃಷ್ಟವಂತರೇ ಇಲ್ಲವೆನ್ನಬಹುದು. ನಿನ್ನ ಭಾಗ್ಯವು ಬೇಸಿಗೆಯ ನದೀ ನೀರಿನಂತೆ ಬತ್ತಿಹೋಗುತ್ತಿದೆ. ನೀನು ಗಂಡನಿಗೂ ಸವತಿಯರಿಗೂ ಕೆಲಸಕ್ಕೆ ಬಾರದವಳಾಗಿಹೋದೆ. ಇನ್ನು ಸ್ವಲ್ಪ ಕಾಲದಲ್ಲಿ ದಾಸಿಯಂತೆ ನಿನ್ನನ್ನು ಉಪಯೋ ಗಿಸಿಕೊಳ್ಳುವರು. ಅಂಥ ದುಃಖ ಸ್ಥಿತಿ ಬರುವ ಮೊದಲೇ ಸ್ವಲ್ಪ ಎಚ್ಚರಿಕೆಯಿಂದಿರು ವುದು ಒಳ್ಳೆಯದು. ನಿದ್ರೆಯಿಂದ ಎಚ್ಚೆತ್ತು ಜಾಗ್ರತೆಯಿಂದ ಆಲೋಚಿಸು. ನಿನಗೆ ಬರಲಿರುವ ದುರ್ಗತಿಯನ್ನು ತಪ್ಪಿಸಿಕೊಳ್ಳಲು ಉಪಾಯವನ್ನು ಯೋಚಿಸು.

**ದುಷ್ಟಮತಿಗಳು**: ರಾಮನೇ ಯುವರಾಜನಾದರೆ ಆಯಿತು! ರಾಜ್ಯವು ಕೌಸಲ್ಯೆಯ ಕೈವಶವಾಗುವುದು. ಆಗ ನೀನೂ ಅವಳ ಕೈವಶವಾಗಿ ಅವಳು ಆಡಿಸಿದಂತೆ ಆಡಬೇಕಾಗುವುದು," ಎಂದು ಕಪಟ ಕಳವಳದ ಅಳುವನ್ನು ಪ್ರದರ್ಶಿಸುತ್ತಿದ್ದ ಮಂಥರೆಯನ್ನು ನೋಡಿ ಕೈಕೆಯು, "ಮಂಥರಾ! ನಿನಗೇನಾದರೂ ಬುದ್ಧಿ ಕೆಟ್ಟಿ ದೆಯೆ? ರಾಮಚಂದ್ರನು ಯುವರಾಜನಾಗುವುದು ರಾಜ್ಯಕ್ಕೇ ಮಂಗಳಕರ. ಇಂಥ ಆನಂದದ ವಾರ್ತೆಯನ್ನು ತಂದ ನಿನಗೆ ನನ್ನ ಕಂಠಹಾರವನ್ನೇ ಬಹುಮಾನ ವಾಗಿ ಕೊಡುತ್ತೇನೆ, ಸಂತೋಷಪಡು. ರಾಮಚಂದ್ರನು ರಾಜನಾಗುವುದು ಅವನ ತಾಯಿ ಕೌಸಲ್ಯೆಗಿಂತ ನನಗೇ ಅಪರಿಮಿತ ಆನಂದ. ರಾಮಚಂದ್ರನು ಕೂಡ ತನ್ನ ತಾಯಿಗಿಂತ ನನ್ನನ್ನೇ ಹೆಚ್ಚು ಪ್ರೀತಿಸುತ್ತಾನೆ, ಗೌರವಿಸುತ್ತಾನೆ. ಅಂಥ ಮಹಾ ಗುಣಶಾಲಿಯ ಮೇಲೆ ನೀನಿಷ್ಟೊಂದು ಅಪವಾದ ಕಲ್ಪಿಸುವುದನ್ನು ನಾನು ಕೇಳಲಾರೆ. ನಿನಗೆ ನಿಜವಾಗಿ ಬುದ್ಧಿ ಕೆಟ್ಟಿರುವಂತಿದೆ," ಎಂದು ಮಂಥರೆಯನ್ನು ಖಂಡಿಸಿದಳು.

ಮಂಥರೆಯು ಆರ್ಭಟಿಸುತ್ತಾ, "ರಾಣೀ! ನನಗಲ್ಲ ಬುದ್ಧಿ ಕೆಟ್ಟಿರುವುದು, ನಿನಗೆ! ಬರಲಿರುವ ಆಪತ್ತನ್ನು ನೀನು ಯೋಚಿಸದೆ ಹೋಗುತ್ತಿದ್ದೀಯೆ. ಕುರುಡು ನಂಬಿಕೆ ಯಿಂದ ಪ್ರವರ್ತಿಸುತ್ತಿದ್ದೀಯೆ. ನಿನ್ನ ಕ್ಷೇಮ ಗೌರವಗಳನ್ನು ಕೋರಿಯೇ ನಾನಿಷ್ಟು ಬಾಧೆಪಡಬೇಕಾಗಿ ಬಂದಿದೆ. ಅವರೆಲ್ಲರೂ ಸೇರಿ ನಾಟಕವಾಡುತ್ತಿದ್ದಾರೆ. ನೀನೆಂ ದರೆ ಅವರಿಗೆ ಏನೇನೂ ಗೌರವವಿಲ್ಲ. ಮಹಾರಾಜನಿಗೆ ಪಟ್ಟದ ರಾಣಿಯ ಮೇಲಿದ್ದಷ್ಟು ಬೇರೆ ರಾಣಿಯರ ಮೇಲೆ ಪ್ರೇಮವಿಲ್ಲ. ಸಮಯ ಪೂರ್ತಿಗೆ ನಿನ್ನನ್ನು ತೃಪ್ತಿಪಡಿಸಲು ಒಳ್ಳೆಯ ಮಾತಾಡುವರೇ ವಿನಾ ನಿಜವಾಗಿಯೂ ಅವರಿಗೆ ನಿನ್ನ ಮೇಲೆ ಪ್ರೀತಿ ಇಲ್ಲ. ಹಾಗೆ ನಿಜವಾಗಿಯೂ ನಿನ್ನ ಮೇಲೆ ಅವರಿಗೆ ಗೌರವ ಪ್ರೇಮಗಳಿದ್ದಿದ್ದರೆ, ರಾಮ ಪಟ್ಟಾಭಿಷೇಕದ ವಿಷಯವನ್ನು ನಿನಗೆ ಮೊದಲೇ ತಿಳಿಸುತ್ತಿದ್ದರು. ಎಷ್ಟೋ ತಿಂಗಳ ಹಿಂದೆಯೇ ಈ ಯೋಜನೆ ಪ್ರಾರಂಭವಾಗಿರುವುದ ರಿಂದಲೇ ಈಗ ಈ ರೂಪ ತಾಳಿದೆ. ಇಲ್ಲದಿದ್ದರೆ, ಪಟ್ಟಾಭಿಷೇಕವು ಆಗಿಂದಾಗಲೇ

ನಿರ್ಧರಿಸಿ ಮಾಡುವಂಥದಲ್ಲ, ಅಲ್ಲವೆ? ಇದೆಲ್ಲಾ ಕೌಸಲ್ಯಾದೇವಿಯ ಕುತಂತ್ರ," ಎಂದಳು. ಇದನ್ನು ಕೇಳಿ ಕುಪಿತಳಾದ ಕೈಕೆಯು, "ಮಂಥರಾ! ಅಕ್ಕನಿಗೆ ಅಂಥ ಆಲೋಚನೆ ಎಂದೆಂದಿಗೂ ಬರುವುದಿಲ್ಲ. ನಾನು ಇದನ್ನು ನಂಬುವುದಿಲ್ಲ. ಮಹಾರಾಜರು ಅವಳಿಗಿಂತಲೂ ಒಳ್ಳೆಯವರು. ಅವರಲ್ಲಿ ಇಂಥ ತುಚ್ಛ ಬುದ್ಧಿಯ ಚುಕ್ಕೆಯೂ ಇಲ್ಲ. ಏನೋ ಕಾರಣದಿಂದ ಈಗಿಂದೀಗಲೇ ಕಾರ್ಯವನ್ನು ಗೊತ್ತು ಮಾಡಿದ್ದಾರೆ. ರಾಮನ ವಿವಾಹಕ್ಕಾದರೂ ಎಷ್ಟು ತಿಂಗಳ ಪ್ರಯತ್ನವಿತ್ತು? ಆಗಿಂದಾಗಲೇ ನಿರ್ಣಯವಾಯಿತು. ಅಂತೆಯೇ ರಾಮನ ಪಟ್ಟಾಭಿಷೇಕ ಕೂಡ ನಿರ್ಣಯವಾಗಿರಬೇಕು. ಇದರ ಕಾರಣವನ್ನು ಮಹಾರಾಜರೇ ತಿಳಿಸುವರು. ನೀನು ವಿಷಯ ತಿಳಿಯದೇ ವಿಕಾರ ಭಾವದಿಂದ ಪವಿತ್ರ ಹೃದಯಗಳನ್ನು ಶಂಕಿಸುತ್ತಿದ್ದೀಯೆ. ಸತ್ಯವು ಕೆಲವು ನಿಮಿಷಗಳಲ್ಲಿ ತಿಳಿಯುತ್ತದೆ," ಎಂದು ಕೈಕೆಯು ತನ್ನನ್ನು ಬೈಯುತ್ತಿದ್ದುದನ್ನು ನೋಡಿ, ಮಂಥರೆಯು ತನ್ನ ತಂತ್ರವು ಪೂರ್ತಿಯಾಗಿ ವಿಫಲವಾಯಿತೆಂದು ಭಯಪಟ್ಟು, ಶ್ರುತಿ ಮೀರಿದ ಸ್ಥಿತಿಗಿಳಿದು, "ತಾಯೀ! ನೀನು ನಿನ್ನೊಳಗೇ ಯೋಚನೆ ಮಾಡು. ನಾನು ಹೊರಗೆ ಅನೇಕ ವಿಷಯಗಳನ್ನು ಕೇಳಿದ್ದೇನೆ. ನಿಜಕ್ಕೂ ಈ ಪಟ್ಟಾಭಿಷೇಕವನ್ನು ತಿಂಗಳ ಹಿಂದೆಯೇ ನಿಶ್ಚಯಿಸಿದ್ದಾರೆ. ಆದ್ದರಿಂದಲೇ ಭರತ ಶತ್ರುಘ್ನರನ್ನು ಹೊರಕ್ಕೆ ಕಳಿಸಿದ್ದಾರೆ. ಅವರಿದ್ದರೆ ಏನಾದರೂ ಅಡಚಣೆ ಆಗಬಹುದೇನೋ ಎನ್ನುವ ಭಯ!

**ವಿವಾಹ ಪೂರ್ವದ ವಾಗ್ದಾನ**: ಅದಕ್ಕೆ ಅನೇಕ ಆಧಾರಗಳು ಕೂಡ ಇಲ್ಲದೆ ಇಲ್ಲ. ಇಲ್ಲದಿದ್ದರೆ ಭರತ ಶತ್ರುಘ್ನರಿಲ್ಲದ ಈ ಸಮಯದಲ್ಲೇ ಏಕೆ ಈ ಪಟ್ಟಾಭಿಷೇಕ? ಇಷ್ಟೂ ಕೂಡ ನೀನು ಯೋಚನೆ ಮಾಡದೆ ಹೋದೆಯಲ್ಲಾ! ಪೂರ್ವದಲ್ಲಿ ನಿನ್ನನ್ನು ವಿವಾಹವಾಗುವ ಸಮಯದಲ್ಲಿ ನಿನ್ನಲ್ಲಿ ಹುಟ್ಟಿದ ಮಗನಿಗೇ ಪಟ್ಟಾಭಿಷೇಕ ಮಾಡುತ್ತೇನೆನ್ನುವ ದಶರಥನ ವಾಗ್ದಾನವನ್ನು ನೀನು ಮರೆತರೂ ನಾನು ಮರೆತಿಲ್ಲ. ಭರತನು ಈ ಸಮಯದಲ್ಲಿ ಇಲ್ಲಿದ್ದರೆ ಈ ವಿಷಯವು ಪ್ರಸ್ತಾಪಿಸಲ್ಪಡಬಹುದೇನೊ ಎನ್ನುವ ಭಯದಿಂದ ಭರತನನ್ನು ತಾತನ ಬಳಿಗೆ ಕಳಿಸಿದ್ದಾರೆ. ಪಟ್ಟಾಭಿಷೇಕ ಆದಮೇಲೆ ಯಾರೂ ಏನೂ ಮಾಡಲಾರರು ಅಲ್ಲವೆ? ಆದ್ದರಿಂದ, ನಿನಗೆ ಇದನ್ನು ತಿಳಿಸದೆ ಇಷ್ಟು ಗುಟ್ಟಾಗಿಟ್ಟು ಈಗ ಮಾಡುತ್ತಿದ್ದಾರೆ. ಇದರಲ್ಲಿ ಏನೋ ಅಂತರಾರ್ಥವಿದೆಯೆನ್ನುವುದನ್ನು ನೀನು ಯೋಚಿಸದೆ ಹೋಗುತ್ತಿದ್ದೀಯೆ. ಬೆಳ್ಳಗಿರುವುದೆಲ್ಲಾ ಹಾಲೇ ಎನ್ನುವ ಸ್ಥಿತಿಯಲ್ಲಿದ್ದೀಯೆ. ಈಗ ಅವರ ಸಂಚು ಬೆಳಕಿಗೆ ಬರುತ್ತಿದೆ. ರಾಮಾ ರಾಮಾ ಎಂದು ರಮಿಸುತ್ತಿದ್ದೀಯೆ. ಹೋಗಲಿ, ಅಷ್ಟು ಪ್ರೀತಿಯಿಂದ ಇರುವ ರಾಮನಾದರೂ ನಿನಗೆ ತಿಳಿಸಿದನೇನು?" ಎಂದು ಕೈಕೆಯನ್ನು ಕೆಣಕಿದಳು.

ಕುಟಿಲ ಬುದ್ಧಿಯ ಮಂಥರೆಯು ಅನೇಕ ಯುಕ್ತಿಗಳಿಂದ ನಿರ್ಮಲ ನಿಸ್ವಾರ್ಥ ಳಾದ ಕೈಕೆಯ ಮನಸ್ಸನ್ನು ಮಾಲಿನ್ಯಗೊಳಿಸಿ, ಮಹಾರಾಜನ ಮೇಲೆ ಹಟ ಸಾಧಿಸಲು ತಕ್ಕವಳನ್ನಾಗಿ ತಯಾರು ಮಾಡಿದಳು. ಇಷ್ಟರಿಂದಲೇ ಕೈಕೆಯ ಮನಸ್ಸು ಪೂರ್ತಿಯಾಗಿ ಪರಿವರ್ತನೆಯಾಗಿಲ್ಲವೆನ್ನುವ ಅನುಮಾನದಿಂದ, ವಿನಯ ವಿಧೇ ಯತೆಗಳನ್ನು ಪ್ರದರ್ಶಿಸುತ್ತಾ, ಅವಳ ಹತ್ತಿರ ಹೋಗಿ, ಪಾದಗಳ ಬಳಿ ಕುಳಿತು ಕಣ್ಣೀರು ಸುರಿಸುತ್ತಿರುವವಳಂತೆ ನಟಿಸುತ್ತಾ, "ಅಮ್ಮಾ! ಈ ಅಯೋಧ್ಯೆಯಲ್ಲಿ ನಮ್ಮನ್ನು ಗೌರವಿಸುವವರು ಯಾರು? ನಮ್ಮನ್ನು ಲೆಕ್ಕದಲ್ಲಿಟ್ಟಿರುವವರು ಯಾರು? ಏನೆಂದರೂ ಅವರೆಲ್ಲರೂ ಒಂದೇ, ನಾವೇ ಹೊರಗಿನವರು. ಇನ್ನು ಕೆಲವು ದಿನಗಳಲ್ಲಿ ನಿನ್ನನ್ನು ಅಯೋಧ್ಯೆಯಿಂದಲೂ ಹೊರಗೆ ಕಳಿಸಬಹುದು. ಅಂಥ ಕೆಲಸಕ್ಕೂ ಅವರು ಹೇಸರು.

ಮಹಾರಾಜನು ಮಹಾ ಮಾಟಗಾರ. ನಿನ್ನ ಬಳಿ ಬಂದಾಗ ಪೂಸಿ ಮಾತನಾಡಿ ತನ್ನ ಕಾರ್ಯ ಸಾಧಿಸಿಕೊಂಡು ಹೋಗುತ್ತಾನೆ. ನೀನು ಯಾವುದರಲ್ಲೂ ಪ್ರಧಾನ ಸ್ಥಾನವನ್ನು ಪಡೆಯದಿರುವುದರ ಅಂತರಾರ್ಥವನ್ನೇ ತಿಳಿಯದೆ ಹೋಗಿದ್ದೀಯೆ. ಅಮ್ಮಾ! ನಿನಗೆ ಜ್ಞಾಪಕವಿರಬೇಕು. ಅಯೋಧ್ಯೆಯ ರಾಜರು ಕೇವಲ ಕಾಮರೂಪಿ ಗಳೇ ವಿನಾ ಪ್ರೇಮರೂಪಿಗಳಲ್ಲವೆನ್ನುವ ಸತ್ಯವನ್ನು ತಿಳಿದೇ ನಿಮ್ಮ ತಂದೆಯು ಈ ವೃದ್ಧನಿಗೆ ನಿನ್ನನ್ನು ಕೊಟ್ಟು ಮದುವೆ ಮಾಡಲು ಮೊದಲು ಒಪ್ಪಲಿಲ್ಲ. ಅನಂತರ, ಅನೇಕ ರಾಯಭಾರಗಳಾದ ಮೇಲೆ, ಹಲವು ನಿಬಂಧನೆಗಳನ್ನು ಹಾಕಿ, ಗರ್ಗ ಋಷಿಗಳ ಮಾತಿನ ಮೇಲೆ ನಿನ್ನನ್ನು ಕೊಟ್ಟು ವಿವಾಹ ಮಾಡಲು ಒಪ್ಪಿದರು.

ಇಂದು, ಆ ನಿಬಂಧನೆಗಳನ್ನು ನೀರುಪಾಲು ಮಾಡಿ, ನಿನ್ನನ್ನು ಬೆಂಕಿಪಾಲು ಮಾಡಿ, ನಿನ್ನ ಕುಮಾರನಿಗೆ ದ್ರೋಹ ಬಗೆದು, ಈ ನಾಟಕ ಆಡುತ್ತಿದ್ದಾರೆ. ಇಲ್ಲದಿದ್ದರೆ, ಭರತನು ರಾಜ್ಯದಲ್ಲಿಲ್ಲದ ಸಮಯವನ್ನು ನೋಡಿ, ಪರರಾಜರು ಯಾರೂ ಇದರಲ್ಲಿ ಭಾಗವಹಿಸಲು ಅವಕಾಶವಿಲ್ಲದಂತೆ, ಆಗಿಂದಾಗಲೇ ಏರ್ಪಟ್ಟಿತೋ ಎನ್ನುವಂತೆ, ನಾಳೆಯೇ ಪಟ್ಟಾಭಿಷೇಕ ನಡೆಸಲು ಏರ್ಪಾಟು ನಡೆಸುತ್ತಿದ್ದಾರೆಂದರೆ ಎಷ್ಟು ಕುತ್ಸಿತ ಬುದ್ಧಿಯೋ ನೀನೇ ಯೋಚಿಸು. ಪರರಾಜರಿಗೆ ತಿಳಿಸಿದರೆ ಅವರೊಂದಿಗೆ ನಿನ್ನ ತಂದೆಯೂ ಬಂದು ಭಾಗವಹಿಸುವರು. ಆಗ, ನಿನ್ನನ್ನು ಮದುವೆ ಮಾಡಿ ಕೊಳ್ಳುವಾಗ ಕೊಟ್ಟ ವಾಗ್ದಾನವನ್ನು ನಿನ್ನ ತಂದೆಯು ಜ್ಞಾಪಕಕ್ಕೆ ತರುವರು. ಆದ್ದ ರಿಂದ, ಯಾರಿಗೂ ತಿಳಿಯದಂತೆ ಕಾರ್ಯ ನಡೆಸಿಬಿಟ್ಟರೆ, ಆಮೇಲೆ ತಿಳಿದರೂ ಯಾರೂ ಏನೂ ಮಾಡಲಾರರೆನ್ನುವ ಉದ್ದೇಶದಿಂದ ಈ ಹೇಯವಾದ ನಾಟಕ ವಾಡುತ್ತಿದ್ದಾರೆ. ಈ ಸಮಯವು ಕಳೆದುಹೋದರೆ ನಿನ್ನ ಪಾಡು ನಾಯಿಪಾಡಾಗ ಬಹುದು. ಆದ್ದರಿಂದ, ತಡಮಾಡದೆ ಚೆನ್ನಾಗಿ ಯೋಚಿಸಿ, ಪಟ್ಟಾಭಿಷೇಕ ನಡೆಯ

ದಂತೆ ಏನು ಮಾಡಬೇಕೋ ಅದನ್ನು ಆಲೋಚಿಸುವುದೊಳ್ಳೆಯದು," ಎಂದು ರೋಷ ಕಾರುತ್ತಿದ್ದ ಮಂಥರೆಯ ಮಾತಿಗೆ ಮನಸೋತ ಕೈಕೆಯು, "ಮಂಥರಾ! ನಿನ್ನ ಮಾತುಗಳನ್ನು ಕೇಳಿದರೆ, ಒಂದಕ್ಕಿಂತ ಮತ್ತೊಂದು ಪರಮ ಸತ್ಯವಾಗಿ ತೋರುವುದು. ನಿಜಕ್ಕೂ ಆಲಸ್ಯ ಮಾಡಲು ಕಾರಣವಿಲ್ಲ. ಏನು ಮಾಡಬೇಕೋ ಅದನ್ನು ನೀನೇ ನಿರ್ಣಯಿಸಿದರೆ, ಅದನ್ನು ನಾನು ತಕ್ಕ ರೀತಿಯಲ್ಲಿ ಕಾರ್ಯ ರೂಪದಲ್ಲಿ ತರುತ್ತೇನೆ," ಎಂದು ತನ್ನ ಒಪ್ಪಿಗೆಯನ್ನು ತಿಳಿಸಿದಳು.

ಮಂಥರೆಯು ಉತ್ಸಾಹದಿಂದ, "ಅಮ್ಮಾ! ಇದಕ್ಕೆ ಬೇರೆ ಯಾವ ವಿಧಾನವನ್ನೂ ಯೋಚಿಸಬೇಕಾಗಿಲ್ಲ. ಆಧಾರ ಸಿದ್ಧವಾಗಿಯೇ ಇದೆ. ಆ ದಿನ ದೇವಾಸುರರ ಯುದ್ಧದಲ್ಲಿ ನಿನ್ನ ಸಹಾಯ ಪಡೆದ ಮಹಾರಾಜರು ಅತ್ಯಂತ ಆನಂದದಿಂದ ಎರಡು ವರಗಳನ್ನು ಕೇಳೆಂದು ನಿನ್ನನ್ನು ಕೋರಿದರಲ್ಲವೆ? ಅಂದು ನೀನು ಅವರ ಅಭಿಮಾನಕ್ಕೆ ಸೋತು ಅವರ ಮಾತುಗಳನ್ನು ಲಕ್ಷಿಸದೆ, ನನಗೀಗ ಯಾವ ಅಪೇಕ್ಷೆಯೂ ಇಲ್ಲ, ಅಗತ್ಯ ಬಿದ್ದಾಗ ಕೋರುತ್ತೇನೆ ಎಂದು ಹೇಳಿದೆಯಲ್ಲವೆ? ಅದು ಈ ಸಮಯದಲ್ಲಿ ತುಂಬಾ ಸಹಾಯವಾಗಬಹುದು! ಈಗ ಅವುಗಳನ್ನು ಕೇಳಬಹುದಲ್ಲವೆ?" ಎಂದು ಬಹಳ ಬುದ್ಧಿವಂತಿಕೆಯಿಂದ ಮಾತನಾಡಿದ್ದನ್ನು ಕೇಳಿ ಕೈಕೆಯು ಬೆಚ್ಚಿಬಿದ್ದವಳಂತೆ ತಲೆಯೆತ್ತಿ, "ಮಂಥರಾ! ನಿನಗದೆಷ್ಟು ಬುದ್ಧಿಯೇ! ರೂಪದಲ್ಲಿ ಗೂನಿಯಾದರೂ ಬುದ್ಧಿಯಲ್ಲಿ ನೀನು ಮಹಾ ಸುಂದರಿ. ರೂಪದಲ್ಲಿ ಅಂದವಿಲ್ಲವಾದರೂ ಬುದ್ಧಿಯಲ್ಲಿ ಮಹಾ ಪ್ರವೀಣೆ. ಈ ಎರಡು ವರಗಳನ್ನು ಈ ಸಮಯದಲ್ಲಿ ಹೇಗೆ ಕೇಳಬೇಕೋ ಅದನ್ನೂ ನೀನೇ ಹೇಳಿಬಿಡು," ಎನ್ನುತ್ತಲೇ, ಮಂಥರೆಯು, "ಅಮ್ಮಾ! ಒಂದನೆಯದು, ನಿನ್ನ ಕುಮಾರನನ್ನು ಯುವರಾಜ ನನ್ನಾಗಿ ಮಾಡಿ ಎನ್ನುವುದು. ಎರಡನೆಯದು ರಾಮನನ್ನು ರಾಜ್ಯದಲ್ಲಿ ಇರದಂತೆ ಮಾಡಿ ಎನ್ನುವುದು," ಎಂದಳು.

ಆಲೋಚನೆ ಮಾಡದೆಯೇ ಥಟ್ಟನೆ ಹೇಳಿದುದನ್ನು ಕೇಳಿ ಕೈಕೆಯು ಸಂದೇಹದಿಂದ, "ಮಂಥರಾ! ನನ್ನ ಕುಮಾರನಿಗೆ ಪಟ್ಟಾಭಿಷೇಕ ಮಾಡಿ ಎಂದು ಕೇಳುವುದಕ್ಕೆ ನನ್ನ ಮನಸ್ಸೊಪ್ಪುತ್ತಿಲ್ಲ. ಅದು ನನಗೆ ದುಃಖವುಂಟುಮಾಡುತ್ತಿದೆ," ಎಂದು ಚಿಂತಾ ಕ್ರಾಂತಳಾಗಿ ಕುಳಿತ ಕೈಕೆಯನ್ನು ನೋಡಿ ಮಂಥರೆಯು ಬಿರುಸಾಗಿ, "ಅಮ್ಮಾ! ಅಧೈರ್ಯಕ್ಕೆ ಇದು ಸಮಯವಲ್ಲ. ಆಲಸ್ಯ ಮಾಡಿದರೆ ಅಮೃತವೂ ವಿಷವಾಗು ವುದು. ಇದರಲ್ಲಿ ತಪ್ಪೇನೂ ಇಲ್ಲ. ಇಷ್ಟು ಕಾಠಿಣ್ಯ ವಹಿಸಿ ಕೆಲಸ ಮಾಡದಿದ್ದರೆ ನಮ್ಮ ಕೆಲಸವನ್ನು ನಾವು ಎಷ್ಟು ಮಾತ್ರಕ್ಕೂ ಸಾಧಿಸಲಾರೆವು. ನಿನ್ನ ಮಗನು ರಾಜನಾಗಬೇಕಾದರೆ, ನೀನು ರಾಜಮಾತೆ ಆಗಬೇಕಾದರೆ ಹೀಗೆ ಮಾಡಲೇಬೇಕು. ಇಲ್ಲದಿದ್ದರೆ ನಾನೀಗಲೇ ವಿಷ ತೆಗೆದುಕೊಂಡು ಪ್ರಾಣಬಿಡುತ್ತೇನೆ. ಬದುಕಿದ್ದು ನಿನ್ನ

ಬಾಧೆ ನೋಡಲಾರೆ," ಎಂದು ಅವಳ ಮೇಲೆ ಮಹಾ ಪ್ರೇಮವಿರುವವಳಂತೆ ಪ್ರದರ್ಶಿಸಿ, ಗೊಳೋ ಎಂದು ಅಳಲಾರಂಭಿಸಿದಳು.

ಬಾಲ್ಯದಿಂದಲೂ ತನ್ನನ್ನು ಆಡಿಸಿ ಬೆಳೆಸಿದ ದಾದಿಯಾದ ಮಂಥರೆಯು ತನಗೆ ಬಹು ಇಷ್ಟವಾದವಳಾದ್ದರಿಂದ, ಕೈಕೆಯು ಮಂಥರೆಯನ್ನು ಸಮಾಧಾನಪಡಿಸುತ್ತಾ, "ಮಂಥರಾ! ಬಾಧೆಪಡಬೇಡ. ತಪ್ಪದೆ ನಾನು ನಿನ್ನನ್ನು ಸಂತೋಷಪಡಿಸುತ್ತೇನೆ. ನಾನೀಗ ಏನು ಮಾಡಬೇಕೋ ತಿಳಿಸು," ಎನ್ನಲು ಮಂಥರೆಯು, ರಾಮನನ್ನು ಅರಣ್ಯಕ್ಕೆ ಕಳಿಸಲು ಎಷ್ಟು ಮಾತ್ರಕ್ಕೂ ಚಿಂತೆಮಾಡದೆ ಅದನ್ನು ಕೋರಲೇಬೇಕು ಎಂದು ಕೈಕೆಯನ್ನು ಒತ್ತಾಯಿಸಿದಳು. ಕೈಕೆಯು ರಾಜನೀತಿಯಲ್ಲಿ ರಾಜ್ಯಪರಿಪಾಲನಾ ವಿಷಯದಲ್ಲಿ ಹಸುಗೂಸಾದ್ದರಿಂದ, ರಾಮನನ್ನು ಅರಣ್ಯಕ್ಕೆ ಕಳಿಸುವಾಗ ಒಂದು ಅವಧಿಯನ್ನು ಗೊತ್ತುಮಾಡುವುದು ಒಳ್ಳೆಯದೆಂದು ಮಂಥರೆಯು ನಿಶ್ಚಯಿಸಿದಳು. ಆ ಕಾಲದ ನಿಯಮದಂತೆ ಹನ್ನೆರಡು ವರ್ಷದ ಅನುಭವ ಇರುವವರಿಗೇ ರಾಜ್ಯದ ಹಕ್ಕು ಎನ್ನುವ ಶಾಸನವನ್ನು ಗಮನದಲ್ಲಿಟ್ಟುಕೊಂಡು, ರಾಮನಿಗೆ ಹದಿನಾಲ್ಕು ವರ್ಷ ಅರಣ್ಯವಾಸ ಕೋರಿದರೆ, ಆ ಅವಧಿಯ ನಂತರ ನಿನ್ನ ಮಗನಿಗೆ ಅಧಿಕಾರ ಸ್ಥಿರವಾಗುವುದೆಂದು ಕೈಕೆಗೆ ತಿಳಿಸಿದಳು.

ಈ ಎರಡು ಕೋರಿಕೆಗಳನ್ನು ಕೇಳಲು ಕೈಕೆಯು ಸಿದ್ಧಳಾದುದನ್ನು ಗಮನಿಸಿ ಮಂಥರೆಯು, "ಅಮ್ಮಾ ಇನ್ನು ಆಲಸ್ಯ ಬೇಡ. ನೀನು ಹೀಗೆ ಇದ್ದು ವರಗಳನ್ನು ಕೇಳಿದರೆ ಮಹಾರಾಜನು ಬಗ್ಗುವುದಿಲ್ಲ. ನೀನು ಮಹಾ ಕ್ರೋಧವನ್ನು ಪ್ರದರ್ಶಿಸಬೇಕು. ಶಯ್ಯಾಗೃಹವನ್ನು ತ್ಯಜಿಸಿ ತಲೆ ಕೆದರಿಕೊಂಡು, ಜೀವನದ ಮೇಲೆ ಆಸೆ ತೊರೆದವಳಂತೆ ನಟಿಸುತ್ತಾ ಕ್ರೋಧಗೃಹವನ್ನು ಪ್ರವೇಶಿಸಬೇಕು. ಆಗಲೇ ನಿನ್ನ ಕೋರಿಕೆಗೆ ಬಲ ಬರುವುದು. ಏಳು, ಮೊದಲು ಕಾರ್ಯ ಪ್ರವೃತ್ತಳಾಗು," ಎಂದು ನಿರ್ಬಂಧಪಡಿಸಿದಳು. ಮಂಥರೆಯ ಮಾತಿಗೆ ಕೈಕೆಯು ಒಡಂಬಟ್ಟು, ಕ್ರೋಧಗೃಹವನ್ನು ಪ್ರವೇಶಿಸಿದಳು. ಮಂಥರೆಯು ಏನೂ ತಿಳಿಯದವಳಂತೆ, ಕ್ರೋಧಗೃಹದ ಬಾಗಿಲ ಬಳಿ ರೋದಿಸುತ್ತಿರುವವಳಂತೆ ನಟಿಸುತ್ತಾ ಕುಳಿತಳು. ಅಷ್ಟರಲ್ಲಿ, ಮಹಾರಾಜನು ಪಟ್ಟಾಭಿಷೇಕದ ಸಿದ್ಧತೆ ನಡೆಸಿ, ಆಸ್ಥಾನದಿಂದ ಹೊರಬಿದ್ದವನೇ ಕೌಸಲ್ಯೆಯ ಭವನಕ್ಕೆ ತೆರಳದೆ ತನ್ನ ನಿರ್ಣಯವನ್ನು ಮೊದಲು ಕೈಕೆಗೆ ಹೇಳಬಯಸಿ ಕೈಕೆಯ ಭವನಕ್ಕೆ ಧಾವಿಸಿದನು.

ಅಲ್ಲಿ, ದಾಸಿಯರೆಲ್ಲಾ ಏನೋ ಚಿಂತೆ ಮಾಡುತ್ತಿರುವವರಂತೆ ಕಾಣಿಸಿತು. ಇವರಿಗೆ ರಾಮಪಟ್ಟಾಭಿಷೇಕದ ವಿಷಯ ತಿಳಿದಿಲ್ಲವಾದ್ದರಿಂದ ಹೀಗಿದ್ದಾರೆ ಎಂದುಕೊಂಡು ನೇರವಾಗಿ ಶಯ್ಯಾಗೃಹವನ್ನು ಪ್ರವೇಶಿಸಿದನು. ದಿಕ್ಕಾಪಾಲಾಗಿ ಬಿದ್ದಿದ್ದ ಒಡವೆ

ಬಟ್ಟೆಗಳಿಂದ ವಿಕಾರವಾಗಿದ್ದ ಅಲ್ಲಿಯ ದೃಶ್ಯವನ್ನು ನೋಡಿ ಮಹಾರಾಜನು ಆಶ್ಚರ್ಯದಿಂದ ಕೈಕೆಗಾಗಿ ಅತ್ತಿತ್ತ ನೋಡಿದನು. ಆಗ ದಾಸಿಯೊಬ್ಬಳು ಬಂದು, "ಮಹಾರಾಜಾ, ಕೈಕಾದೇವಿಯವರು ಕ್ರೋಧಗೃಹದಲ್ಲಿದ್ದಾರೆ," ಎಂದು ಹೇಳಿದಳು. ನಿರಾಶೆಯಿಂದ ಅತ್ತ ಹೊರಟ ದಶರಥನು, ಅಲ್ಲಿ, ಕಗ್ಗತ್ತಲೆಯಲ್ಲಿ ರೋದಿಸುತ್ತಾ ನೆಲದ ಮೇಲೆ ಮಲಗಿದ್ದ ಕೈಕೆಯನ್ನು ನೋಡಿ, "ಕೈಕಾ! ಏನಿದು ವಿಕಾರ? ಇಷ್ಟೊಂದು ಕೋಪಕ್ಕೆ ಕಾರಣವೇನು? ನಿನ್ನೀ ಸ್ಥಿತಿಗೆ ಯಾರು ಕಾರಣರೋ ಹೇಳು. ಕ್ಷಣಮಾತ್ರದಲ್ಲಿ ಅವರನ್ನು ಕೊಂದು ನಿನಗೆ ಸಂತೋಷವನ್ನುಂಟು ಮಾಡುತ್ತೇನೆ. ನಿನ್ನ ಮನೋಭೀಷ್ಟವೇನು ಹೇಳು. ನಾನು ನೆರವೇರಿಸಲು ಸಿದ್ಧನಾಗಿದ್ದೇನೆ. ನಿನ್ನ ಆನಂದವೇ ನನ್ನ ಆನಂದ. ನಿನಗಿಂತ ಹೆಚ್ಚಿನದು ಈ ಲೋಕದಲ್ಲಿ ನನಗೆ ಮತ್ತೊಂದಿಲ್ಲವೆನ್ನುವುದು ನಿನಗೆ ತಿಳಿಯದೆ? ನನ್ನನ್ನೇಕೆ ಪರೀಕ್ಷಿಸುತ್ತಿದ್ದಿ? ಏಳು, ನಿನ್ನ ಅಭೀಷ್ಟವನ್ನು ತಿಳಿಸು," ಎಂದನು.

ತಲೆಯನ್ನು ನೇವರಿಸುತ್ತಾ ನೆಲದ ಮೇಲೆ ಮಲಗಿದ್ದ ಕೈಕೆಯನ್ನು ಸಮಾಧಾನ ಪಡಿಸುತ್ತಿದ್ದ ದಶರಥನನ್ನು ನೋಡಿ ಕೈಕೆಯು ಆವೇಶದಿಂದ ಹಲ್ಲು ಕಡಿಯುತ್ತಾ, ಅವನ ಕೈಗಳನ್ನು ಅತ್ತ ನೂಕಿ, "ಸಾಕು ನಿಮ್ಮ ಬೂಟಾಟಿಕೆಯ ಮಾತುಗಳು. ಇಷ್ಟು ಕಾಲವೂ ನಿಮ್ಮನ್ನು ನಂಬಿದ್ದರಿಂದ ನಾನು ಈ ಸ್ಥಿತಿಗೆ ಬಂದಿದ್ದೇನೆ. ಇನ್ನು ನಿಮ್ಮ ಮಾತನ್ನು ನಂಬುವುದಿಲ್ಲ. ನೀವು ಕಪಟ ನಾಟಕವಾಡುತ್ತೀರೆಂದು ನಾನೆಂದೂ ನೆನಸಿರಲಿಲ್ಲ. ನಿಮ್ಮನ್ನು ನಂಬಿದ್ದಕ್ಕೆ ಇದೇ ಶಿಕ್ಷೆ. ಸಾಕು ಸಾಕು, ನಿಮಗಿಷ್ಟವಾದವರ ಹತ್ತಿರವೇ ಹೋಗಿ. ಮನಸ್ಸೊಂದು ಕಡೆ, ಮಾತು ಮತ್ತೊಂದು ಕಡೆ. ಮನಸ್ಸು ಕೊಟ್ಟವರಿಗೇ ಮಾತೂ ಕೊಡಿ. ಇನ್ನು ನಾನು ನಿಮ್ಮ ಮಾತನ್ನು ನಂಬುವುದಿಲ್ಲ. ಅನವಶ್ಯಕವಾಗಿ ನನ್ನನ್ನು ಮತ್ತಷ್ಟು ಬಾಧೆಪಡಿಸದೆ ಬಂದ ದಾರಿ ಯಲ್ಲಿ ಹಿಂತಿರುಗಿ. ನಾನೇನಾದರೇನು ನಿಮಗೆ? ದಾಸಿಯಾಗಿ ಸಾಯುವುದಕ್ಕಿಂತ ರಾಣಿಯಾಗಿ ಸಾಯುವುದೇ ಮೇಲು. ಇಂದೇ ನನ್ನ ಜೀವನಕ್ಕೆ ಕೊನೆಯ ದಿನ," ಎಂದು ಬಿಕ್ಕಿ ಬಿಕ್ಕಿ ಅತ್ತಳು. ಕೈಕೆಯ ಮಾತುಗಳು ಅರ್ಥವಾಗದೆ ದಶರಥನು ದಿಗ್ಭ್ರಾಂತನಾದನು.

ಅವಳ ಸಮೀಪದಲ್ಲಿ ಕುಳಿತು ಪ್ರೇಮದಿಂದ, "ಕೈಕಾ! ಏನಿದು ಈ ಮಾತುಗಳು? ನನಗೆ ಅರ್ಥವಾಗುತ್ತಿಲ್ಲ. ಕಪಟ ಮಾತುಗಳಾಗಲೀ ಆಟಗಳಾಗಲೀ ನನ್ನಲ್ಲಿ ಎಂದೂ ಇಲ್ಲ, ಎಂದೂ ಬರುವುದಿಲ್ಲ. ಮಾತು, ಮನಸ್ಸು ಎರಡೂ ಒಂದೇ ಕಡೆ ಇರುವುವಲ್ಲದೆ ಬೇರೆ ಬೇರೆಯಾಗಿರಲು ಸಾಧ್ಯವಿಲ್ಲ. ಇಷ್ಟು ಕಾಲವಾದರೂ ನನ್ನನ್ನು ನೀನು ಅರ್ಥಮಾಡಿಕೊಳ್ಳದೆ ಹೋಗಿರುವುದರ ಕಾರಣ ತಿಳಿಯುತ್ತಿಲ್ಲ. ಇಷ್ಟಕ್ಕೂ ನಡೆದದ್ದೇನೆನ್ನುವುದನ್ನೇ ಹೇಳದೆ, ಅರ್ಥವಿಲ್ಲದ ಮಾತುಗಳಿಂದ ನನ್ನನ್ನು ಚಿತ್ರವಧೆ

ಮಾಡಬೇಡ. ನೀನು ಹೀಗಿರಲು ಕಾರಣವೇನೋ ಹೇಳು," ಎಂದು ದೈನ್ಯತೆಯಿಂದ ಕೇಳಿದನು. ಆದರೆ ಪ್ರಯೋಜನವಾಗಲಿಲ್ಲ. ಕೈಕೆಯು ಮಾತು ಮಾತಿಗೆ ದಶರಥನ ಮಾತುಗಳನ್ನು ಖಂಡಿಸುತ್ತಾ ಅಲಕ್ಷಿಸುತ್ತಾ ವ್ಯಂಗ್ಯವಾಗಿ ನಗುತ್ತಾ ಅವನ ಮಾತಿಗೆ ಬೆಲೆ ಇಲ್ಲದವಳಂತೆ ನಟಿಸುತ್ತಿದ್ದಳು. ಅವಳ ಚೇಷ್ಟೆಗಳಿಂದ ಮಹಾರಾಜನಿಗೆ ತೀವ್ರ ಬಾಧೆಯಾಯಿತು. ಏನೂ ಮಾಡಲಾರದೆ ಮಂಥರೆಯನ್ನು ಕರೆದನು.

ಮಂಥರೆಯು ಅವಳಿಗಿಂತ ಗಟ್ಟಿಯಾಗಿ ರೋದಿಸುತ್ತಾ, "ಮಹಾರಾಜಾ! ಅಮ್ಮ ನನ್ನು ಕಾಪಾಡಿ," ಎಂದು ಅವನ ಪಾದಗಳ ಮೇಲೆ ಬಿದ್ದು ಗೋಳೋ ಎಂದು ಅತ್ತಳು. ಮಹಾರಾಜನು ನಿರ್ಮಲಚಿತ್ತನಾದ್ದರಿಂದ, ಅವರಿಬ್ಬರು ಮಾಡುತ್ತಿದ್ದುದು ನಟನೆಯೆಂದು ತಿಳಿಯದೆ, ಏನೋ ಪ್ರಮಾದ ಸಂಭವಿಸಿದೆಯೆಂದೂ ಇಲ್ಲದಿದ್ದಲ್ಲಿ ತನ್ನ ನೆಚ್ಚಿನ ರಾಣಿಯು ಹೀಗೆ ವರ್ತಿಸುವುದಿಲ್ಲವೆಂದೂ ಭಾವಿಸಿ, ಕಾರಣವನ್ನು ತಿಳಿಸೆಂದು ಮತ್ತೊಮ್ಮೆ ಮಂಥರೆಯನ್ನು ಕೇಳಿದನು. ಮಂಥರೆಯು, "ಮಹಾ ರಾಜಾ! ನಾನೇನು ಹೇಳಲಿ? ನನಗೆ ವಿಷಯವೇ ತಿಳಿಯದು. ಅಮ್ಮನವರು ತಮ್ಮ ಕ್ರೋಧಕ್ಕೆ ಯಾರಿಗೂ ಕಾರಣವನ್ನು ಹೇಳಲಿಲ್ಲ. ಇದ್ದಕ್ಕಿದ್ದಂತೆ ಶಯ್ಯಾಗೃಹದಿಂದ ವೇಗ ವೇಗವಾಗಿ ಕ್ರೋಧಗೃಹಕ್ಕೆ ಬರುತ್ತಿದ್ದುದನ್ನು ಕಂಡು ನಾನಿಲ್ಲಿಗೆ ಬಂದೆ. ನಾನೆಷ್ಟು ಪ್ರಾರ್ಥಿಸಿದರೂ ಏನೂ ಹೇಳಲಿಲ್ಲ. ತಮಗೇ ಹೇಳದಿದ್ದವರು ನಮಗೆ ಹೇಳುತ್ತಾರೆಯೆ? ಅಮ್ಮನವರು ಪಡುತ್ತಿರುವ ಬಾಧೆಯನ್ನು ನಾವು ನೋಡಲಾರೆವು. ಅವರು ಏನಾಗುವರೊ ಎನ್ನುವ ಭಯದಿಂದ ಕ್ಷಣ ಕ್ಷಣವೂ ಎಚ್ಚರವಾಗಿದ್ದು ನಿಮಗಾಗಿ ಕಾದಿದ್ದೇವೆ. ತಾವು ಸಮಾಧಾನಪಡಿಸದಿದ್ದರೆ ಅಮ್ಮನವರಿಗೇನಾದರೂ ಪ್ರಮಾದ ಸಂಭವಿಸಬಹುದು. ಈಗಲೇ ಬಹಳ ತಡವಾಗಿದೆ. ನಾನಿನ್ನು ಬರುತ್ತೇನೆ. ತಾವೇ ಕಾರಣವನ್ನು ಕೇಳಿ ಅದಕ್ಕೆ ತಕ್ಕ ಪರಿಹಾರ ನೀಡಿ ಶಾಂತಪಡಿಸಬೇಕು," ಎಂದು ಹೇಳಿ ಹೊರಗೆ ಬಂದಳು.

ಮಂಥರೆಯ ಮಾತನ್ನು ಕೇಳಿದ ಮೇಲೆ ಮಹಾರಾಜನು ಮತ್ತಷ್ಟು ಕಂಗಾಲಾಗಿ, "ಕೈಕಾ! ನನ್ನೊಂದಿಗೆ ಮುಚ್ಚುಮರೆ ಏಕೆ?" ಎಂದು ನೆಲದ ಮೇಲಿದ್ದ ಅವಳ ತಲೆಯನ್ನೆತ್ತಿ ತನ್ನ ತೊಡೆಯ ಮೇಲೆ ಇಟ್ಟುಕೊಂಡು ಕಾರಣವೇನು ಹೇಳೆಂದು ಪರಿಪರಿಯಾಗಿ ಕೇಳಿದನು. ಸ್ವಲ್ಪ ಹೊತ್ತಾದ ಬಳಿಕ, ಕೈಕೆಯು ಸ್ವಲ್ಪ ಸುಧಾರಿಸಿ ಕೊಂಡು, "ರಾಜಾ! ಆ ದಿನ ದೇವಾಸುರ ಯುದ್ಧದಲ್ಲಿ ನೀವು ಕೊಟ್ಟ ಎರಡು ವರಗಳನ್ನು ಮರೆತಿಲ್ಲ ತಾನೆ?" ಎಂದು ಕೇಳಿದಳು. ಅದಕ್ಕೆ ಮಹಾರಾಜನು, "ಕೈಕಾ! ಅದಕ್ಕೋಸ್ಕರ ನೀನು ಇಷ್ಟೊಂದು ದುಃಖಪಡುವುದೇ? ನನ್ನ ಪ್ರಾಣವಿರುವವರೆಗೂ ನಿನಗೆ ಕೊಟ್ಟ ವರಗಳನ್ನು ನಾನು ಮರೆಯುವುದಿಲ್ಲ. ಕೈಕೆಯು ಹೇಗೆ ನನ್ನ ಪ್ರಾಣವೋ ಕೈಕೆಗಿತ್ತ ವರಗಳೂ ಹಾಗೆಯೇ ನನ್ನ ಪ್ರಾಣ ಸಮಾನ. ದೇವೀ!

ನಿನ್ನನ್ನು ಯಾರಾದರೂ ಕಷ್ಟಪಡಿಸಿದರೇ? ಅಥವಾ, ಆರೋಗ್ಯ ಸರಿಯಾಗಿಲ್ಲವೇ? ಯಾರಾದರೂ ಕ್ರೂರಿಗಳು ನಿನ್ನ ಇಚ್ಛೆಗೆ ವಿರುದ್ಧವಾಗಿ ನಡೆದರೆ, ಹೇಳು? ನಿನಗೋಸ್ಕರ ಪ್ರಾಣಾಪಾಯದ ಕೆಲಸವಾದರೂ ಸರಿ ಆನಂದವಾಗಿ ಮಾಡುತ್ತೇನೆ. ಸಂದೇಹಪಡದಿರು.

ಓ ಮಂಗಳಾಂಗಿ! ನೀನೇಕೆ ಇಷ್ಟು ಬಾಧೆಪಡುತ್ತಿರುವೆ? ಸಮಸ್ತ ದೇಶಗಳೂ ನನ್ನ ಸ್ವಾಧೀನವಿರುವ ವಿಷಯ ನಿನಗೆ ತಿಳಿದಿದೆಯಲ್ಲವೆ? ಯಾವ ದೇಶವನ್ನೇ ಆಗಲಿ, ಆ ದೇಶದ ಯಾವುದೇ ವಸ್ತು ನಿನಗೆ ಬೇಕಾಗಿದ್ದರೆ ಹೇಳು, ಕ್ಷಣ ಕಾಲದಲ್ಲಿ ತರಿಸಿಕೊಟ್ಟು ನಿನ್ನನ್ನು ಆನಂದಪಡಿಸುತ್ತೇನೆ. ನೀನು ಏಕೆ ಭಯಪಡುತ್ತಿರುವೆಯೋ ಏಕೆ ದುಃಖಿಸುತ್ತಿರುವೆಯೋ ಸಂಕೋಚಪಡದೆ ತಿಳಿಸು. ಸೂರ್ಯನು ಮಂಜನ್ನು ಕರಗಿಸುವಂತೆ ನಿನ್ನ ಭಯವನ್ನೂ ದುಃಖವನ್ನೂ ಕ್ಷಣಮಾತ್ರದಲ್ಲಿ ನಾನು ನಿವಾರಿಸುತ್ತೇನೆ," ಎಂದನು. ದಶರಥನು ತನ್ನನ್ನು ಮುದ್ದಾಡಿ ಸಮಾಧಾನಪಡಿಸುತ್ತಿದ್ದ ಸಮಯವನ್ನು ನೋಡಿ, ಮಂಥರೆಯು ಹೇಳಿದ್ದ ಮಾತುಗಳನ್ನು ಕೈಕೆಯು ಮರೆಯದಂತೆ ಮನಸ್ಸಿನಲ್ಲಿಟ್ಟುಕೊಂಡು, ತನ್ನ ಕೋರಿಕೆಯನ್ನು ನಡೆಸಿಕೊಡುವ ಭಾಷೆಯನ್ನು ಅವನಿಂದ ತೆಗೆದುಕೊಂಡ ನಂತರವೇ ಅಪ್ರಿಯವಾದ ಆ ವರಗಳನ್ನು ಕೇಳಬೇಕೆಂದು ನಿಶ್ಚಯಿಸಿಕೊಂಡು, ಬೂಟಾಟಿಕೆಯ ಪ್ರೇಮವನ್ನು ಪ್ರದರ್ಶಿಸುತ್ತಾ ಕಣ್ಣೀರು ಹಾಕಿದಳು. ಕಾಮೋದ್ರೇಕಿತನಾದ ಅವನ ಕೈಗಳನ್ನು ಹಿಡಿದುಕೊಂಡು, "ದೇವಾ! ನನಗೆ ಎಂಥ ಕೋಪವೂ ಇಲ್ಲ, ನನ್ನನ್ನು ಯಾರೂ ಅವಮಾನಿಸಿಲ್ಲ, ನಿಂದಿಸಿಲ್ಲ. ಯಾವ ದೇಶದ ವಸ್ತುವನ್ನೂ ನಾನೆಂದೂ ಕೇಳುವುದಿಲ್ಲ. ಆದರೆ ನನಗೊಂದು ಬಹಳ ಕಾಲದ ಆಸೆ ಇದೆ. ಅದನ್ನು ನಡೆಸಿಕೊಡುತ್ತೇನೆಂದು ಭಾಷೆ ಕೊಟ್ಟರೆ ಹೇಳುತ್ತೇನೆ," ಎಂದು ಮುಗುಳ್ನಗೆ ಬೀರಿದ ಕೈಕೆಯನ್ನು ನೋಡಿ, ದಶರಥನು ಕೂಡ ಮಂದಹಾಸ ಬೀರುತ್ತಾ, "ಅಬ್ಬಾ! ಹುಚ್ಚುರಾಣಿ! ಇಷ್ಟಕ್ಕೆ ಸಾಮ್ರಾಜ್ಯ ಮುಳುಗಿದಂತೆ ಗೋಳಾಡಬೇಕೆ? ಸ್ತ್ರೀಯರಲ್ಲಿ ನಿನಗಿಂತ ಪ್ರಿಯಳಾದವಳು, ಪುರುಷರಲ್ಲಿ ರಾಮನಿಗಿಂತ ಪ್ರಿಯನಾದವನು ಈ ಲೋಕದಲ್ಲೇ ನನಗೆ ಯಾರೂ ಇಲ್ಲ. ನೀವಿಬ್ಬರೂ ನನಗೆ ಪ್ರಾಣಸಮಾನರು. ಇದು ನಿನಗೆ ಚೆನ್ನಾಗಿ ಗೊತ್ತಿದೆ. ಒಂದು ದಿನ ಕೂಡ ನಿನ್ನನ್ನಾಗಲೀ ರಾಮನನ್ನಾಗಲೀ ನೋಡದೆ ಇರಲಾರೆ, ಬದುಕಲಾರೆ. ಆದ್ದರಿಂದ, ಅಂತಹ ರಾಮನ ಮೇಲೆ ಆಣೆ ಹಾಕಿ ಹೇಳುತ್ತೇನೆ. ನಿನ್ನ ಕೋರಿಕೆ ಏನು ತಿಳಿಸು, ತಪ್ಪದೆ ನಡೆಸಿಕೊಡುತ್ತೇನೆ," ಎಂದು ಪ್ರತಿಜ್ಞೆ ಮಾಡಿದನು.

ಕೈಕೆಯು ಎದ್ದು ಕುಳಿತು ದಶರಥನು ಅನುಕೂಲವಾಗಿ ಮಾರ್ಪಟ್ಟಿದ್ದಕ್ಕೆ ಸಂತೋಷಿಸಿ, ಮತ್ತಷ್ಟು ಪ್ರೇಮವನ್ನು ಪ್ರದರ್ಶಿಸುತ್ತಾ, "ರಾಜಾ! 'ರಾಮನ ಆಣೆಯಾಗಿ'

ಎಂದು ಶಪಥ ಮಾಡಿದಿರಿ. ಇದು ಸತ್ಯ ತಾನೆ? ರಾಜಾ! ನೀವು ಸತ್ಯಸಂಧರು. ಪರಮ ಧಾರ್ಮಿಕರು, ಮಹಾಪರಾಕ್ರಮಿಗಳು. ದೇವಾಸುರ ಯುದ್ಧವು ನಿಮಗೆ ನೆನಪಿರಬಹುದು, ಆದರೂ ನಾನು ನೆನಪು ಮಾಡಿಕೊಡುತ್ತೇನೆ. ಆ ರಾತ್ರಿ ಶಂಬರಾಸುರನು ಎಲ್ಲರನ್ನೂ ಸಂಹರಿಸಿದಾಗ, ನೀವು ಕೊನೆಯುಸಿರು ಬಿಡುತ್ತಾ ಬಾಧೆಪಡುತ್ತಿದ್ದಿರಿ. ಆ ದಿನ ನಾನು ನಿಮಗೆ ಸಹಾಯ ಮಾಡದಿದ್ದರೆ, ಶುಶ್ರೂಷೆ ಮಾಡಿ ಕಾಪಾಡದಿದ್ದರೆ ನೀವು ಏನಾಗುತ್ತಿದ್ದಿರೋ ನಿಮಗೇ ಗೊತ್ತಿದೆ. ಅಂಥ ಪವಿತ್ರ ತ್ಯಾಗಕ್ಕೆ ಮೆಚ್ಚಿ, 'ಕೈಕಾ! ನನ್ನ ಪ್ರಾಣವನ್ನೇ ಕಾಪಾಡಿದೆ. ಅಂಥ ನಿನಗೆ ಪ್ರತ್ಯುಪಕಾರವಾಗಿ ನಾನೇನು ಕೊಡಲಿ! ಏನಾದರೂ ಸರಿ, ಎರಡು ವರಗಳನ್ನು ಕೋರು, ತಪ್ಪದೆ ಕೊಡುತ್ತೇನೆ, ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ,' ಎಂದು ನನ್ನನ್ನು ಕೇಳಿದಿರಿ. ಅದಕ್ಕೆ ನಾನು, ನೀವು ಕ್ಷೇಮವಾಗಿ ಬದುಕಿ ಉಳಿದುದೇ ಬಹು ದೊಡ್ಡ ಸಂಪತ್ತೆಂದು ಭಾವಿಸಿ, 'ನಾಥಾ! ನನಗೇನೂ ಈಗ ಅಗತ್ಯವಿಲ್ಲ. ಬೇಕಾದಾಗ ಕೋರುತ್ತೇನೆ, ಆ ಎರಡು ವರಗಳನ್ನು ನಿಮ್ಮಲ್ಲೇ ಮುಡುಪಾಗಿಟ್ಟುಕೊಳ್ಳಿ, ನನಗೆ ಬೇಕಾದಾಗ ಪಡೆದುಕೊಳ್ಳುತ್ತೇನೆ,' ಎಂದು ವಿನಯದಿಂದ ಪ್ರಾರ್ಥಿಸಿದೆ. ಅದಕ್ಕೆ ನೀವು ಕೂಡ ಸಂತೋಷಪಟ್ಟು ನನ್ನ ತ್ಯಾಗವನ್ನು ಮೆಚ್ಚಿ ವರಗಳನ್ನು, ಯಾವ ಅಡ್ಡಿಯನ್ನೂ ಹೇಳದೆ ನಿನಗೆ ಸಲ್ಲಿಸುತ್ತೇನೆ,' ಎಂದು ಆಶ್ವಾಸನೆ ಕೊಟ್ಟಿರಿ. ಇದು ನಿಮಗೆ ಜ್ಞಾಪಕವಿದೆಯಲ್ಲವೆ?

ತಾವು ಭೂಮಿಯನ್ನಾಳುವ ಪ್ರಭುಗಳು. ಆಡಿದ ಮಾತಿಗೆ ತಪ್ಪುವವರಲ್ಲ. ಆದ್ದರಿಂದ ಆ ದಿನ ನಾನು ನಿಮ್ಮಿಂದ ಪಡೆದ ಎರಡು ವರಗಳನ್ನು ಈಗ ನನಗೆ ಸಲ್ಲಿಸಿ ಆನಂದಪಡಿಸಬೇಕೆಂದು ಪ್ರಾರ್ಥಿಸುತ್ತೇನೆ. ನಾನು ಹೊಸತಾಗಿ ಏನನ್ನೂ ಕೋರುತ್ತಿಲ್ಲ, ಆ ದಿನ ನೀವು ಕೊಟ್ಟ ಆ ನನ್ನ ವರಗಳನ್ನೇ ಈಗ ನನಗೆ ಕೊಡಿ ಎಂದು ಕೇಳುತ್ತಿದ್ದೇನೆ. ಸಾಲ ಪಡೆದುಕೊಂಡ ಹಣವನ್ನು ಹಿಂತಿರುಗಿಸದವರು ಮಹಾಪಾಪಿಗಳಾಗುವರೆನ್ನುವ ಸಂಗತಿಯನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಹಾಗೆ ನಿಮಗೆ ಕೊಡಲು ಸಾಧ್ಯವಿಲ್ಲ ಎನ್ನುವುದಾದರೆ ನನಗೆ ಸೋಲಾದಂತೆ, ನನಗೆ ದ್ರೋಹವೆಸಗಿದಂತೆ. ಅಂಥ ಸೋಲನ್ನು ಸಹಿಸುವುದಕ್ಕಿಂತ ಪ್ರಾಣ ಬಿಡುವುದು ಮೇಲು. ಹೆಂಡತಿಗಿತ್ತ ಮಾತನ್ನೇ ನಡೆಸಿಕೊಡದವರು ಪ್ರಜೆಗಳ ಅಭೀಷ್ಟವನ್ನು ಹೇಗೆ ನೆರವೇರಿಸುವರು? ಹೆಂಡತಿಯನ್ನು ನಂಬಿಸಿ ಮೋಸಪಡಿಸುವ ಪ್ರಭುವು ಪ್ರಜಾಪರಿಪಾಲನೆಗೆ ಅರ್ಹನಲ್ಲ ಅಲ್ಲವೆ? ಅಂಥವರು ಪ್ರಭುವಲ್ಲ ಎನ್ನುವ ಮನು ಧರ್ಮವು ನಿಮಗೆ ತಿಳಿಯದೆ! ಹೆಚ್ಚೇಕೆ, ಈ ದಿನ ನನ್ನ ಕೊರಿಕೆಗಳನ್ನು ನನಗೆ ಸಲ್ಲಿಸದಿದ್ದರೆ ಸೂರ್ಯೋದಯದೊಳಗೇ ಕೈಕೆಯಿ ಪ್ರಾಣಸಹಿತ ಇರಳು,'' ಎಂದು ಗೋಳಾಡಿದಳು.

ಕೈಕೆಯ ನಟನೆಗಳಿಗೆ ದಶಥನು ಖಿನ್ನನಾಗಿ, ಬಲೆ ಬೀಸಿದ ಬೇಟೆಗಾರನು ಕೃತ್ರಿಮ ವಾಗಿ ಕೂಗಿದೊಡನೆ, ಜಿಂಕೆಯು ಓಡಿ ಬಂದು ಬಲೆಯಲ್ಲಿ ಬೀಳುವಂತೆ, ಕೈಕೆಯು ಬೀಸಿದ ಬಲೆಯಲ್ಲಿ ಬಿದ್ದನು. ದಶರಥನು ಕಾಮಮೋಹಿತನಾಗಿ, ಅವಳ ನಟನೆಗ ಳಿಗೆ ಮನಸೋತು, ಉನ್ಮತ್ತನಂತೆ, "ಈ ಕ್ಷಣದಲ್ಲೇ ನಿನ್ನ ಎರಡು ಕೋರಿಕೆಗಳನ್ನೂ ನೆರವೇರಿಸುತ್ತೇನೆ," ಎಂದು ಕೈಕೆಯ ಹಸ್ತವನ್ನು ತೆಗೆದುಕೊಂಡು ಅದರ ಮೇಲೆ ತನ್ನ ಹಸ್ತವನ್ನಿಟ್ಟು ಪ್ರಮಾಣ ಮಾಡಿದನು. ದಶರಥನ ಮಾತುಗಳನ್ನು ಕೇಳಿದಾ ಕ್ಷಣ ಕೈಕೆಯು ಹೊಳೆಯುವ ಕಣ್ಣುಗಳನ್ನರಳಿಸಿ ಅವನನ್ನು ನೋಡುತ್ತಾ, "ರಾಜಾ! ನೀವೆಷ್ಟು ಒಳ್ಳೆಯವರೆನ್ನುವುದು ಈ ದಿನ ತಿಳಿಯಿತು. ಇನ್ನು, ಆಡಿದ ಮಾತಿಗೆ ತಪ್ಪುವವರಲ್ಲ ಎನ್ನುವುದು ನಾಳೆ ತಿಳಿಯುವುದು," ಎಂದು ಅನೇಕ ವಿಧವಾಗಿ ಅವನನ್ನು ವರ್ಣಿಸಲಾರಂಭಿಸಿದಳು. ಅದಕ್ಕೆ, ಕಾಮಿಯಾದ ದಶರಥನು ಉಬ್ಬಿ ಹೋಗಿ, "ಕೈಕಾ! ಇನ್ನು ಕಾಲಹರಣವೇಕೆ? ಕೋರು ನಿನ್ನ ವರಗಳನ್ನು," ಎಂದು ಆತುರಪಡಿಸಿದನು.

ಕೈಕೆಯು ಮಾತುಗಳನ್ನು ತಡಬಡಿಸುತ್ತಾ ಹೇಳಿದಳು, "ನಾಳೆ ರಾಮನಿಗಾಗಿ ಸಿದ್ಧವಾಗಿರುವ ರಾಜ್ಯಾಭಿಷೇಕ ಏರ್ಪಾಟು ವೈಭವಗಳಿಂದ ನನ್ನ ಕುಮಾರನಾದ ಭರತನಿಗೆ ರಾಜ್ಯಾಭಿಷೇಕ ಮಾಡಬೇಕೆನ್ನುವುದು ನನ್ನ ಮೊದಲನೆಯ ಕೋರಿಕೆ. ರಾಮನು ಜಟೆಯನ್ನು ಬಿಟ್ಟು ನಾರು ವಸ್ತ್ರಗಳನ್ನು ಧರಿಸಿ ದಂಡಕಾರಣ್ಯದಲ್ಲಿ ಹದಿನಾಲ್ಕು ವರ್ಷಗಳು ತಾಪಸಿಯಂತೆ ವನವಾಸ ಮಾಡುವುದು, ಇದು ನನ್ನ ಎರಡನೆಯ ಕೋರಿಕೆ. ಭರತನು ನಿರಾತಂಕವಾಗಿ ಯುವರಾಜನಾಗಬೇಕು. ಆದ್ದ ರಿಂದ, ರಾಮನು ಈಗಲೇ ನನ್ನ ಕಣ್ಣು ಮುಂದೆ ಅರಣ್ಯಕ್ಕೆ ಪ್ರಯಾಣ ಮಾಡಬೇಕು. ಈ ಎರಡು ವರಗಳನ್ನು ನೆರವೇರಿಸಿ ನೀವು ನಿಮ್ಮ ಗೌರವವನ್ನು ಉಳಿಸಿಕೊಳ್ಳಿ, ಇಲ್ಲವೆ ಈ ಕ್ಷಣವೇ ಕೈಕೆಯ ಮರಣಕ್ಕಾದರೂ ಒಪ್ಪಿಕೊಳ್ಳಿ," ಎಂದು ರಾಕ್ಷಸಿಯಂತೆ ದಿಟ್ಟತನದಿಂದ ಎದ್ದು ನಿಂತಳು. ಈ ದಾರುಣವಾದ ಕಠಿಣ ಮಾತುಗಳನ್ನು ಕೇಳಿ ಮಹಾರಾಜನು ತತ್ತರಿಸಿ ಹೋದನು.

ಇದು ಕನಸೆ? ಅಥವಾ ನಿಜವೆ? ಕೋರಿಕೆಗಳನ್ನು ಕೇಳುತ್ತಿರುವವಳು ಕೈಕೆಯೋ ಅಥವಾ ಯಾವುದಾದರೂ ಪಿಶಾಚಿಯೊ? ಅಥವಾ ನನಗೆ ಚಿತ್ತ ಭ್ರಮಣೆಯೊ? ಮನೋ ಜಾಡ್ಯವೊ? ಏನೂ ತೋಚದವನಂತೆ, "ಕೈಕಾ! ನೀನು ಕೈಕೆಯೊ, ಇಲ್ಲವೆ ಕೈಕೆಯ ರೂಪ ಧರಿಸಿದ ಮಹಾರಾಕ್ಷಸಿಯೊ? ಮೊದಲು ತಿಳಿಸು," ಎಂದು ಶರೀರದ ಮೇಲೆ ಹತೋಟಿ ತಪ್ಪಿ ಏಳಲಾರದೆ, ಬಾಯಲ್ಲಿ ಮಾತು ಹೊರಡದೆ, ಹುಚ್ಚನಾಗಿ, ಅತ್ತ ಇತ್ತ ಹುಚ್ಚುದೃಷ್ಟಿ ಬೀರುತ್ತಾ, ಕಣ್ಣುಗಳಿಂದ ಬೆಂಕಿಯ ಕಿಡಿ ಕಾರುತ್ತಾ, ಕೈಕೆಯತ್ತ ತಿರುಗಿ, "ಎಲೈ ದುಷ್ಟಚಾರಿಣೀ! ಏನಿದು ಈ ನಿನ್ನ ದುರ್ಬುದ್ಧಿ?

ನನ್ನ ವಂಶವನ್ನೇ ನಿರ್ಮೂಲನ ಮಾಡಲು ಸಂಕಲ್ಪಿಸಿದೆಯಾ? ತನ್ನ ತಾಯಿಯಾದ ಕೌಸಲ್ಯೆಗಿಂತ ಅಧಿಕವಾಗಿ ನಿನ್ನನ್ನು ಪ್ರೀತಿಸಿದ ನನ್ನ ರಾಮನನ್ನು ಕಾರಡವಿಗೆ ಕಳಿಸಲು ನಿನ್ನ ಮನಸ್ಸು ಹೇಗೊಪ್ಪಿತು? ಇಷ್ಟು ಕಾಲ ನಿನ್ನನ್ನು ರಾಜಕುಮಾರಿಯೆಂದುಕೊಂಡಿದ್ದೆ. ತೀಕ್ಷ್ಣವಾದ ವಿಷ ಸರ್ಪವನ್ನು ಅಜ್ಞಾನದಿಂದ ಮನೆಯಲ್ಲಿ ತಂದಿಟ್ಟುಕೊಂಡಿದ್ದೆ. ನನ್ನ ಪ್ರಾಣ ಸಮಾನನಾದ ರಾಮನನ್ನು ಸಕಲ ಪ್ರಾಣಿಕೋಟಿಯೂ ಕೊಂಡಾಡುತ್ತಿರುವಾಗ ನಿನಗೇಕೆ ಇಂಥ ಪಾಪ ಬುದ್ಧಿ ಹುಟ್ಟಿತು? ಅಗತ್ಯವಾದರೆ ರಾಜ್ಯವನ್ನಾದರೂ ಬಿಟ್ಟೇನು, ಕಡೆಗೆ ಪ್ರಾಣವನ್ನಾದರೂ ಬಿಟ್ಟೇನು, ಆದರೆ ರಾಮನನ್ನು ಬಿಡಲಾರೆ, ಬಿಡುವುದಿಲ್ಲ! ನಿನ್ನ ಮಗನು ರಾಜನಾಗಬೇಕೆಂದಾದರೆ ಮಾಡಿಕೊ! ನಾನು ಕೌಸಲ್ಯೆ ಸುಮಿತ್ರೆಯರೊಂದಿಗೆ ನನ್ನ ರಾಮನನ್ನು ಕರೆದುಕೊಂಡು ಅರಣ್ಯಕ್ಕೆ ಹೋಗುತ್ತೇನೆ. ಹಾಗಲ್ಲದೆ ರಾಮನನ್ನು ಮಾತ್ರ ಒಬ್ಬೊಂಟಿಯಾಗಿ ಅರಣ್ಯಕ್ಕೆ ಕಳುಹಿಸುವುದಿಲ್ಲ. ಅದು ಸಾಧ್ಯವಿಲ್ಲ. ಈ ಪಾಪಿಷ್ಟ ಕೋರಿಕೆಯನ್ನು ಬಿಡು, ರಾಮನ ಮೇಲೆ ಕೋಪ ಬೇಡ. ಕೈಕಾ! ನಿಜವಾಗಿಯೂ ನೀನೇ ಈ ಕೋರಿಕೆಗಳನ್ನು ಕೇಳುತ್ತಿದ್ದೀಯೊ? ಇಲ್ಲವೆ, ಭರತನ ಮೇಲೆ, ನಿನ್ನ ಮೇಲೆ ನನಗೆ ಪ್ರೇಮ ಇದೆಯೋ ಇಲ್ಲವೋ ಎಂದು ಪರೀಕ್ಷಿಸಲು ಕೇಳುತ್ತಿರುವೆಯೊ? ನಿನ್ನ ಕುಮಾರನಿಗೆ ರಾಜ್ಯಾಭಿಷೇಕ ಮಾಡಬೇಕೆಂದು ನೀನು ಕೋರಬಹುದೆ ಹೊರತು, ರಾಮನನ್ನು ಅಡವಿಗೆ ಕಳಿಸೆಂದು ಕೋರುವುದರಲ್ಲಿ ಅರ್ಥವಿಲ್ಲ. ತಮಾಷೆಗಾದರೂ ಇಂಥ ಕೋರಿಕೆಯನ್ನು ಕೋರಬಾರದು, ಮಹಾಪಾಪ!

ಕೈಕಾ! ರಾಮನು ಜ್ಯೇಷ್ಠ ಪುತ್ರ, ಗುಣವಂತ. ಅವನ ಪರಿಪಾಲನಾ ದಿನಗಳು ಮಹಾ ವೈಭವಯುತವಾಗಿರುವುದು. ಅಂಥ ದಿನಗಳನ್ನು ನಾನು ನೋಡಬೇಕೆನ್ನುವ ಕನಸು ಕಾಣುತ್ತಿದ್ದೇನೆಂದು ನೀನೇ ಅನೇಕ ಸಾರಿ ನನ್ನೊಂದಿಗೆ ಹೇಳಿರುವೆಯಲ್ಲವೆ? ಹಾಗಿರುವಾಗ, ಇಂದು ಅಂಥ ರಾಮಚಂದ್ರನನ್ನು ಅರಣ್ಯಕ್ಕೆ ಕಳಿಸೆಂದು ಕೋರುವುದರ ಅಂತರಾರ್ಥವೇನು? ನನ್ನೊಂದಿಗೆ ಪರಿಹಾಸ್ಯವಾಡುತ್ತಿದ್ದೀಯಾ? ಪರಿಹಾಸ್ಯವೇ ಆಗಿದ್ದರೆ, ಈ ಕ್ರೋಧಗೃಹ ಪ್ರವೇಶಿಸಿದ್ದೇಕೆ? ಈ ಕಠಿಣವಾದ ನೆಲದಮೇಲೆ ಮಲಗಿ ಪರಿತಪಿಸುವುದೇಕೆ? ಪರಿಹಾಸ್ಯಕ್ಕೂ ಒಂದು ಮಿತಿಯಿರಬೇಕಲ್ಲವೆ? ಮಿತಿಮೀರಿದ ಪರಿಹಾಸ್ಯ ಮತಿಗೆಡಿಸುವಂಥದ್ದಾಗುವುದು. ಪರಿಹಾಸ್ಯಕ್ಕಾದರೂ ಇಂಥದ್ದನ್ನು ನಾನು ಸಹಿಸಲಾರೆ. ರಾಮನನ್ನು ಬಿಡಲಾರೆ. ಕೈಕಾ! ಇದುವರೆಗೆ ನೀನು ಎಷ್ಟು ಬುದ್ಧಿವಂತಳಾಗಿ ವರ್ತಿಸಿದೆ! ಈಗ ವಿಪರೀತ ಬುದ್ಧಿ ಹುಟ್ಟಿದೆ. ವಿನಾಶಕಾಲವು ಹತ್ತಿರವಾಗುತ್ತಿರುವುದರಿಂದ ನಿನಗೆ ಈ ರೀತಿಯಾದ ವಿಪರೀತ ಬುದ್ಧಿ ಹುಟ್ಟಿದೆ. ಒಳ್ಳೆಯವರಿಗೆ ಕೇಡು ಬಗೆಯುವುದು ಮಹಾ ಪಾಪ. ಸತ್ಪುರುಷರನ್ನು ಸತಾಯಿಸುವುದು ರಾಕ್ಷಸ ಕೃತ್ಯ. ಒಳ್ಳೆಯವರಿಗೆ ಎಂಥ ಕೇಡೂ

ಇರದು. ದುರ್ಮಾರ್ಗಿಗಳ ದುಷ್ಟ ಬುದ್ಧಿಯು ಸನ್ಮಾರ್ಗಿಗಳ ಕೀರ್ತಿಯನ್ನು ಪ್ರಕಾಶ ಗೊಳಿಸುವುದು. ಆದರೆ, ಅವರಿಗೆ ಪ್ರಸ್ತುತದಲ್ಲಿ ಸ್ವಲ್ಪ ಕಷ್ಟವಾಗಿ ಕಾಣುವುದು.

ಇಂದು ನಿನ್ನ ಆಲೋಚನೆಯಿಂದ ಇಕ್ಷ್ವಾಕು ವಂಶಕ್ಕೇ ಅನರ್ಥವಾಗುತ್ತಿದೆ. ಇದುವ ರೆಗೂ ನೀನೊಂದು ಅನುಚಿತ ಕಾರ್ಯವನ್ನಾಗಲೀ ಅಪ್ರಿಯ ಕಾರ್ಯವನ್ನಾಗಲೀ ಮಾಡಿದವಳಲ್ಲ. ಈಗ ಇಂಥ ಕೋರಿಕೆಗಳನ್ನು ಕೋರುತ್ತಿದ್ದೀಯೆ. ನನ್ನನ್ನು ನಾನೇ ನಂಬದೆ ಹೋಗುತ್ತಿದ್ದೇನೆ. ಕೈಕಾ! ನಿರಂತರವೂ ಧರ್ಮಭೀತಿ, ದೈವಪ್ರೀತಿ ಹೊಂದಿದ್ದ ನೀನು ಇಂದು ಧರ್ಮಭೀತಿಯನ್ನು ಹೇಗೆ ಬಿಟ್ಟೆ? ದೈವಪ್ರೀತಿಯನ್ನು ಏನು ಮಾಡಿದೆ? ಧಾರ್ಮಿಕನಾದ ರಾಮನನ್ನು ಹದಿನಾಲ್ಕು ವರ್ಷಗಳ ಕಾಲ ಅರಣ್ಯಕ್ಕೆ ಕಳಿಸೆಂದು ಕೇಳುವುದರಲ್ಲಿ ನಿನ್ನ ಉದ್ದೇಶವೇನಿದೆ? ಕುಸುಮ ಕೋಮಲ ಶರೀರನಾದ ರಾಮನು, ಸುಂದರಾಕಾರನಾದ ರಾಮನು ಕಾರಡವಿಯಲ್ಲಿ ಬೆಂದು ಪಡಬಾರದ ಬಾಧೆಪಡುವುದರಿಂದ ನಿನಗೆ ಬರುವ ಲಾಭವೇನು? ರಾಜಭವನದಲ್ಲಿ ಸಾವಿರಾರು ಸೇವಕರು ದಾಸಿಯರಿದ್ದಾರೆ. ಅವರಲ್ಲಿ ಒಬ್ಬರಾದರೂ ರಾಮನು ಇಂಥವನೆಂದು ಅವನಲ್ಲಿ ಒಂದೇ ಒಂದು ತಪ್ಪನ್ನಾದರೂ ತೋರಿಸಬಲ್ಲರೇ? ನಮ್ಮ ರಾಜಭವನ ಹಾಗಿರಲಿ, ನಮ್ಮ ನಗರದಲ್ಲಿ ಯಾರಾದರೂ ರಾಮನಲ್ಲಿ ಒಂದು ತಪ್ಪು ತೋರಿಸುವವರನ್ನು ಕರೆದುಕೊಂಡು ಬರುವೆಯಾ ತೋರಿಸುವೆಯಾ? ಅನೇಕ ಜನ ದೀನರಿಗೆ ತಾನೇ ಧನವಿತ್ತು, ಆದರಿಸಿ, ದರಿದ್ರರಿಗೆ ಗೃಹವಸತಿ ಕಲ್ಪಿಸಿ, ಅನೇಕ ವಿಧದಲ್ಲಿ ಆದರಿಸಿ, ಪ್ರಜಾ ಪ್ರೇಮವನ್ನು ಸೂರೆಗೊಂಡ ರಾಮನನ್ನು ದ್ವೇಷಿಸುವ ನೀನು ಎಂಥ ಕಿರಾತಳೋ ನನಗೆ ಹೇಳಲಸಾಧ್ಯ.

ಅನೇಕ ವಿಧವಾಗಿ ಪ್ರಜೆಗಳನ್ನು ಪೀಡಿಸಿ ತಮ್ಮ ಸ್ವಾರ್ಥವನ್ನು ಲಕ್ಷ್ಯದಲ್ಲಿಟ್ಟು ಕೊಂಡು ತಮ್ಮ ಒಳಿತನ್ನೇ ನೋಡಿಕೊಳ್ಳುತ್ತಾ ಪ್ರವರ್ತಿಸುವ ಕಿರಾತರು ಇಂದು ಒಳ್ಳೆಯವರಾಗಿ ಕಾಣುತ್ತಿದ್ದಾರೆ. ದೀನರನ್ನು, ದರಿದ್ರರನ್ನು ಆದರಿಸಿ, ಅವರಿಗೆ ಅನುಕೂಲತೆಗಳನ್ನು ಮಾಡಿಕೊಟ್ಟು, ಅವರ ಯೋಗಕ್ಷೇಮವನ್ನು ಸ್ವತಃ ವಿಚಾರಿಸಿ, ಪ್ರಜೆಗಳ ಏಳಿಗೆಯನ್ನೂ ಪ್ರಜಾಕ್ಷೇಮವನ್ನೂ ಬಯಸಿ ಪ್ರವರ್ತಿಸುವವರು ಕೆಟ್ಟವ ರೆಂದಾದರೆ ಇದು ಯುಗದೋಷವೋ ಇಲ್ಲವೆ ನನ್ನ ಪಾಪಫಲವೋ ಇರಬೇಕು. ಸಮಸ್ತ ಜನರೂ ರಾಮನ ಗುಣಗಳನ್ನು ವರ್ಣಿಸುತ್ತಾ ಹೊಲಗಳಲ್ಲಿ ಸಹಿತ ತಮ್ಮ ಕೆಲಸದಲ್ಲಿ ಶ್ರಮವಾದರೆ, ಅದನ್ನು ಸಹಿಸುವ ಸಲುವಾಗಿ, ರಾಮನ ಗುಣಗಳನ್ನು ಪದ ಕಟ್ಟಿ ಹಾಡುತ್ತಿದ್ದಾರೆನ್ನುವ ವಾರ್ತೆಯನ್ನು ಕೇಳಿ ಅದೆಷ್ಟೋ ಸಂತೋಷಪಟ್ಟಿ ದ್ದೇನೆ. ಅಂಥ ದಯಾಮಯನಿಗೆ ಈ ದಾರುಣ ಶಿಕ್ಷೆ ಕೊಡಲು ನಿನ್ನ ಮನಸ್ಸು ಹೇಗೊಪ್ಪಿತು?

ಈ ದಿನ ಸಂಜೆ ಪುರಪ್ರಮುಖರನ್ನೂ ಋಷಿಗಳನ್ನೂ ಮಹಾಮುನಿಯರನ್ನೂ ಮಂತ್ರಿಗಳನ್ನೂ ಪಂಡಿತರನ್ನೂ ಅನೇಕ ಮಂದಿ ತಿಳಿವಳಿಕೆಯುಳ್ಳ ಜನರನ್ನೂ ಸಭೆ ಸೇರಿಸಿ ರಾಮಪಟ್ಟಾಭಿಷೇಕ ವಿಷಯ ತಿಳಿಸಿದಾಗ, ನೆರೆದಿದ್ದವರಲ್ಲಿ ಒಬ್ಬರಾದರೂ ಅಸಂತೃಪ್ತಿ ಸೂಚಿಸದೆ, ಅನೇಕ ಬಗೆಯಾಗಿ ರಾಮನನ್ನು ಕೊಂಡಾಡಿದರು. ಅಂಥ ಜಿತೇಂದ್ರಿಯ, ತ್ಯಾಗಮೂರ್ತಿ, ಸತ್ಯವ್ರತನಾದ ರಾಮನು ಮಹಾಪ್ರಭುವಾಗುವುದು ನಮ್ಮ ಪೂರ್ವಜನ್ಮದ ಪುಣ್ಯವೆಂದು ಜೈಜೈಕಾರ ಮಾಡಿದರು. ಅಂಥ ಪ್ರಜಾ ಮನ್ನಣೆ ಪಡೆದ ನನ್ನ ಪ್ರೇಮ ರಾಶಿಯನ್ನು ಅರಣ್ಯಕ್ಕೆ ಕಳಿಸೆಂದು ಕೋರಿದೆಯಾ? ನೀನೇನಾದರೂ ಸರಿಯೆ, ನಾನು ನನ್ನ ರಾಮನನ್ನು ಅಡವಿಗೆ ಕಳಿಸುವುದಿಲ್ಲ. ಅಷ್ಟೇ ಅಲ್ಲ, ನಾಳೆ ರಾಮ ಪಟ್ಟಾಭಿಷೇಕ ಕೂಡ ತಪ್ಪದು," ಎಂದು ಮೊಂಡು ಧೈರ್ಯದಿಂದ ಹೇಳುತ್ತಿದ್ದ ದಶರಥನನ್ನು ನೋಡಿ ಕೈಕೆಯು ಅತ್ಯಂತ ಕ್ರೋಧ ದಿಂದ, "ರಾಜಾ ನನ್ನ ಎರಡು ವರಗಳನ್ನು ನಡೆಸಿಕೊಡುತ್ತೇನೆಂದು ಕೆಲವೇ ನಿಮಿಷಗಳ ಮೊದಲು ನೀವು ಅನೇಕ ಪ್ರಮಾಣಗಳನ್ನು ಮಾಡಿದಿರಿ. ಈಗ ಆ ವರಗಳನ್ನು ಸಲ್ಲಿಸಲು ಹಿಂದೆ ಸರಿಯುತ್ತಿರುವುದರಿಂದ ಇಕ್ಷ್ವಾಕು ವಂಶಕ್ಕೆ ಅಪಕೀರ್ತಿ ತರುತ್ತಿರುವವರು ನೀವೋ ನಾನೋ ಚೆನ್ನಾಗಿ ವಿಚಾರ ಮಾಡಿ. ಇಕ್ಷ್ವಾಕು ವಂಶಜರು ಆಡಿದ ಮಾತಿಗೆ ತಪ್ಪದವರು ಎನ್ನುವ ಬಿರುದಿಗೆ ನೀವೇ ಕಳಂಕ ತರುತ್ತಿದ್ದೀರಿ. ಹಿಂದು ಮುಂದು ಯೋಚಿಸದೆ, ನಿನ್ನ ವರಗಳನ್ನು ತಪ್ಪದೆ ನಡೆಸಿಕೊಡುತ್ತೇನೆಂದು ಹೇಳಿದ ತಪ್ಪು ನಿಮ್ಮದೇ ವಿನಾ ನನ್ನದಲ್ಲ. ಆ ದಿನ ಯುದ್ಧದಲ್ಲಿ ಮಾತು ಕೊಟ್ಟಿದ್ದೂ ಈ ದಿನ ಮಾತುಕೊಟ್ಟಿದ್ದೂ ನೀವೇ! ನೀವು ಕೊಟ್ಟ ಮಾತನ್ನೇ ನೀವು ನಿರರ್ಥಕ ಮಾಡಿದರೆ ನಿಮ್ಮ ಘನತೆ ಏನಾಗುವುದೋ ಯೋಚಿಸಿ. ಅಬಲೆಯನ್ನು ಮೋಸಪಡಿಸುವುದು, ಆಡಿದ ಮಾತಿಗೆ ತಪ್ಪುವುದು, ಪರಿಪಾಲಕರಿಗೆ ತಲೆ ತಗ್ಗಿಸುವಂಥವೇ ವಿನಾ ಗೌರವ ಪ್ರತಿಷ್ಠೆಯಾಗದು. ಆಡಿದ ಮಾತಿಗೆ ತಪ್ಪಿ ಅಂಗನೆಯರನ್ನು ವಂಚಿಸುವವರು ಮಹಾ ಕಿರಾತರೇ ವಿನಾ ಪ್ರಭುವಾಗಲಾರರು. ಪ್ರಭುಗಳೇ ಇಂಥ ಕಿರಾತ ಚರ್ಯೆಗಿಳಿದರೆ ಪ್ರಜೆಗಳ ಕಷ್ಟಗಳಿಗೆ ಅಂತ್ಯವೇ ಇರದು. ಅಂಥ ರಾಜ್ಯವು ರಾಕ್ಷಸ ರಾಜ್ಯವೇ ಸರಿ!

**ಬುದ್ಧಿ ಕಡಿಮೆಯೆನ್ನುವ ಆರೋಪ**: ಇಷ್ಟು ಕಾಲವೂ ಅನೇಕ ವಿಧವಾದ ಗೌರವ ಮರ್ಯಾದೆಗಳನ್ನು ಸಂಪಾದಿಸಿಕೊಂಡ ನಿಮ್ಮಂಥವರೇ ಆಡಿದ ಮಾತಿಗೆ ತಪ್ಪುವಿರೆಂದರೆ, ಆ ಅಪಕೀರ್ತಿ ನಿಮಗೇ ಹೊರತು ನನಗಲ್ಲ. ಪೂರ್ವದ ರಾಜರು ಗಳ ವೃತ್ತಾಂತವನ್ನು ಜ್ಞಾಪಕಕ್ಕೆ ತಂದುಕೊಳ್ಳಿ! ನಿಮ್ಮ ವಚನ ಭಂಗವಾಗದಂತೆ ನೋಡಿಕೊಳ್ಳಿ! ರಾಜಾ! ಚೆನ್ನಾಗಿ ಆಲೋಚಿಸಿ, ನೀವು ತೀರಾ ದುರ್ಮಾರ್ಗದಲ್ಲಿ ಹೋಗುತ್ತಿದ್ದೀರಿ, ಧರ್ಮವನ್ನು ತಪ್ಪುತ್ತಿದ್ದೀರಿ. ಹೋಗಲಿ, ನೀವಷ್ಟು ತಿಳಿವಳಿಕೆ

ಇದ್ದವರೇ ಆಗಿದ್ದರೆ ನನ್ನ ಕೋರಿಕೆ ಏನೆನ್ನುವುದನ್ನು ಮೊದಲು ಚೆನ್ನಾಗಿ ತಿಳಿದು, ಆಮೇಲೆ ವಚನ ಕೊಡಬೇಕಾಗಿತ್ತು. ನೀವು ಕಾಮೋದ್ರೇಕಿಗಳಾಗಿ ಕೆಡಕು ಒಳಿತೆನ್ನದೆ, ಹಿಂದು ಮುಂದು ನೋಡದೆ ನನ್ನ ಮಾತಿಗೆ ಕಟ್ಟುಬಿದ್ದು, ವರಗಳನ್ನಿತ್ತು, ಈಗ ಅವುಗಳನ್ನು ನಡೆಸಿಕೊಡಬೇಕೆಂದಾಗ ನನ್ನದೇ ತಪ್ಪೆಂದು ನಿಂದಿಸುವುದರಲ್ಲಿ ನೀವೆಷ್ಟು ದಾರಿತಪ್ಪಿ ಹೋಗುತ್ತಿದ್ದೀರೋ ನೀವೆಂಥ ವಿವೇಕಶಾಲಿಗಳೋ ಎಂದು ಯೋಚಿಸಿ.

ಧರ್ಮಭೀತಿ, ದೈವಪ್ರೀತಿಯುಳ್ಳ ನಾನು ಧರ್ಮವನ್ನು ಲೆಕ್ಕಿಸದೆ ದಾರುಣ ಮಾರ್ಗ ಪ್ರವೇಶಿಸಿರುವೆನೆಂದು ಹೇಳಿದಿರಿ. ಆದರೆ, ಧರ್ಮವ್ರತರೆಂದೂ ದೈವ ಸಮಾನರಾದ ವರೆಂದೂ ಕೀರ್ತಿ ಸಂಪಾದಿಸಿದ ನೀವು ಆಡಿದ ಮಾತಿಗೆ ತಪ್ಪುತ್ತಿದ್ದೀರೆಂದರೆ ನೀವೆಂಥ ಧರ್ಮವ್ರತರೋ ನೀವೇ ಮೊದಲು ಯೋಚಿಸಿಕೊಳ್ಳಿ. ಇತರರ ತಪ್ಪುಗಳನ್ನು ಮಾತ್ರವೇ ಹುಡುಕುವ ತಿಳಿವಳಿಕೆ ಉತ್ತಮ ತಿಳಿವಳಿಕೆಯಲ್ಲ. ತಮ್ಮ ತಪ್ಪುಗಳೆಲ್ಲವನ್ನು ತಿಳಿದ ಪ್ರಭುವೇ ಹೀಗೆ ವಿಚಾರ ಮಾಡದೆ ತಮ್ಮ ಸ್ವಾರ್ಥವನ್ನು ಮಾತ್ರವೇ ತಾವು ನೋಡಿಕೊಂಡರೆ ಇನ್ನು ನಮ್ಮಂಥ ಅಬಲೆಯರ ಗತಿ ಹೇಳಲೇ ಬೇಕಾಗಿಲ್ಲ. ನೀವೇ ಹಾಗೆ ಮಾಡಿದ ಮೇಲೆ, ನಾವು ಮಾಡುವುದರಲ್ಲಿ ಏನೂ ತಪ್ಪಿಲ್ಲ. ವರಗಳನ್ನು ಕೊಟ್ಟಿದ್ದು ಸತ್ಯ, ವಚನ ಕೊಟ್ಟದ್ದು ಸತ್ಯ, ಮಾತಿಗೆ ತಪ್ಪಿದ್ದು ಸತ್ಯ! ಮೂರೂ ಸತ್ಯವಲ್ಲವೆ, ನೀವೇ ಯೋಚಿಸಿ. ಪುತ್ರ ಪ್ರೇಮದಿಂದ, ಸತೀ ಕಾಮದಿಂದ ತಬ್ಬಿಬ್ಬಾಗಿ ಮಾತು ಬದಲಾಯಿಸುತ್ತಿರುವವರು ನೀವೇ ವಿನಾ ನಾನಲ್ಲ.

ಪುತ್ರ ಪ್ರೇಮವು ತಾಯಿಗೆ ಸಹಜವೇ. ತನ್ನ ಮಗ ರಾಜನಾಗಬೇಕೆಂದು ಕೋರು ವುದು ತಾಯಿ ಸ್ಥಾನದಲ್ಲಿರುವ ಪ್ರತಿಯೊಬ್ಬ ಸ್ತ್ರೀಗೂ ಸಹಜವೇ. ಹಾಗೆ ಪಡೆದ ರಾಜ್ಯ ವನ್ನು ಕಾಪಾಡಿಕೊಳ್ಳಲು ಬೇಕಾದ ಮುಂದಾಲೋಚನೆಗಳನ್ನು ಮಾಡುವುದೂ ತಾಯಿಯಾದವಳ ಕರ್ತವ್ಯವೇ. ಅಂತೆಯೇ ನಾನೂ ಸಹಜ ಕರ್ತವ್ಯವನ್ನು ಅನುಸರಿಸಿದ್ದೇನಲ್ಲದೆ ವಿರುದ್ಧವಾಗಿ ನಡೆದಿಲ್ಲ. ರಾಮನಿಗೆ ಪಟ್ಟಾಭಿಷೇಕ ಮಾಡಿದರೆ ಅವನ ತಾಯಿಯಾದ ಕೌಸಲ್ಯೆಯು ರಾಜಮಾತೆಯಾಗುವಳು. ನನ್ನ ಕುಮಾರನು ರಾಮಾಜ್ಞೆ ಪಾಲಕನಾಗಿ, ಕೈಕಟ್ಟಿಕೊಂಡು ಹೇಳಿದ ಕೆಲಸಗಳನ್ನು ಮಾಡುತ್ತಾ ಸೇವಕನಂತೆ ನಮಸ್ಕರಿಸುತ್ತಿರುವುದನ್ನು ನಾನು ಒಂದು ದಿನವೂ ನೋಡಲಾರೆ, ನೋಡಿ ಜೀವಿಸಿರಲಾರೆ. ನನ್ನ ಕುಮಾರನ ಅಂಥ ದುಃಸ್ಥಿತಿಯನ್ನು ನೋಡಿ ಮರುಗುವುದಕ್ಕಿಂತ ವಿಷ ಕುಡಿದು ಪ್ರಾಣ ಬಿಡುವುದು ಮೇಲು. ರಾಜಾ! ನನ್ನ ಪ್ರಾಣ ಸಮಾನನಾದ ಭರತನ ಮೇಲೆ ಆಣೆ ಇಟ್ಟು ಹೇಳುತ್ತೇನೆ. ರಾಮನನ್ನು ಅರಣ್ಯವಾಸಕ್ಕೆ ಕಳಿಸದೆ ನೀವೇನೇ ಮಾಡಿದರೂ ನನಗೆ ತೃಪ್ತಿಯಿಲ್ಲ," ಎಂದು

ತುಂಬಾ ತೀಕ್ಷ್ಣವಾದ ಮಾತುಗಳನ್ನಾಡಿ, ನೆಲದ ಮೇಲೆ ಬಿದ್ದು ಹೊರಳಾಡುತ್ತಾ ಬಿಕ್ಕಿ ಬಿಕ್ಕಿ ಅಳಲಾರಂಭಿಸಿಳು.

**ಅಪಾಯ ಪರಂಪರೆ**: ದಶರಥನು ಹುಚ್ಚು ಹಿಡಿದವನಂತೆ ತಲೆ ಚಚ್ಚಿಕೊಳ್ಳುತ್ತಾ, "ಕೈಕಾ! ಈ ಅನರ್ಥದಿಂದ ನಿನಗೊಳ್ಳೆಯದಾಗುವುದೆಂದು ಯಾರಾದರೂ ಬೋಧಿಸಿದರೇ? ಇಲ್ಲವೆ, ಯಾವುದಾದರೂ ಪಿಶಾಚಿ ಹಿಡಿದು ನಿನ್ನನ್ನು ಹೀಗೆ ಕಾಡಿಸುತ್ತಿದೆಯಾ? ರಾಮನನ್ನು ಕಾಡಿಗೆ ಕಳಿಸಿರೆಂದು, ಭರತನಿಗೆ ಪಟ್ಟಕಟ್ಟಿರೆಂದು ಕೋರುವುದೇನಿದು ಈ ವಿಚಾರ? ಏತಕ್ಕೆ ಈ ವಿಪರೀತ ಬುದ್ಧಿ? ಕೈಕಾ! ನಿನ್ನ ಪತಿಯಾದ ನನಗೂ ನಿನ್ನ ಪುತ್ರನಾದ ಭರತನಿಗೂ ಈ ರಾಜ್ಯಕ್ಕೂ ನೀನು ಒಳಿತು ಮಾಡಲು ಆಲೋಚಿಸಿದ್ದರೆ ಈ ವಿಪರೀತದ ಕೋರಿಕೆಗಳನ್ನು ಬಿಡು. ಚೆನ್ನಾಗಿ ವಿಚಾರ ಮಾಡು, ಇಲ್ಲದಿದ್ದರೆ, ನೀನು, ನಾನು, ನಿನ್ನ ಕುಮಾರ ಎಲ್ಲರೂ ನಿಷ್ಕಾರಣವಾಗಿ ಅಪಕೀರ್ತಿಯ ಪಾಲಾಗಬೇಕಾಗುವುದು. ಅಷ್ಟಕ್ಕೇ ಮುಗಿಯದೆ, ರಾಜ್ಯವು ನಾಶವಾಗುವುದು. ಇನ್ನೂ ಅನೇಕ ಪ್ರಮಾದಗಳು ಸಂಭವಿಸಬಹುದು. ನೀಚಳೇ! ಈ ದಿನ ನೀನು ಕೋರಿದ್ದನ್ನು ನಾನು ಅಂಗೀಕರಿಸಿದರೂ ಭರತನು ರಾಜ್ಯ ಪಟ್ಟಾಭಿಷೇಕಕ್ಕೆ ಒಪ್ಪಿಕೊಳ್ಳುವನೆನ್ನುವ ನಂಬಿಕೆ ಏನಿದೆ? ಭರತನು ಧಾರ್ಮಿಕ, ಮತಿವಂತ. ರಾಮನನ್ನು ಅರಣ್ಯಕ್ಕೆ ಕಳಿಸುವುದಕ್ಕಾಗಲಿ, ಈ ರಾಜ್ಯವನ್ನು ಆಳುವುದಕ್ಕಾಗಲಿ ಭರತನು ಒಪ್ಪನು. ಋಷಿಗಳೂ ಎಲ್ಲರೂ ನಿನ್ನಭೀಷ್ಟಕ್ಕೆ ವಿರುದ್ಧವಾದವರೇ ಆಗುವರು. ಇಷ್ಟೊಂದು ಜನರ ಅಸಂತೃಪ್ತಿಯ ನಡುವೆ ನೀನೇನು ಆನಂದಪಡುವೆ, ಚೆನ್ನಾಗಿ ಯೋಚಿಸು.

ಈಗ ಇವರೆಲ್ಲರ ಅಂಗೀಕಾರದಲ್ಲಿ ಏಕಾಭಿಪ್ರಾಯವಿದೆ. ಇಂದು ಸಂಜೆ ನಮ್ಮ ಜನರ ಸಭೆಯಲ್ಲಿ ರಾಮನ ಪಟ್ಟಾಭಿಷೇಕ ಮಾಡುತ್ತೇನೆಂದು ಪ್ರಕಟಿಸಿದೆ. ಈಗ ನನ್ನ ಮಾತನ್ನೇ ನಾನು ಬದಲಾಯಿಸಿದರೆ ಸೈನ್ಯದೊಂದಿಗೆ ಯುದ್ಧಕ್ಕೆ ಹೊರಟು ಶತ್ರು ಸೇನೆಯನ್ನು ನೋಡಿ ಹಿಂತಿರುಗಿದಂತಾಗುತ್ತದಲ್ಲವೆ? ರಾಮಾಭಿಷೇಕಕ್ಕೆ ಸಕಲವೂ ಸಿದ್ಧವಾಗಿದೆ. ಎಲ್ಲರಿಗೂ ವಾರ್ತೆಯನ್ನು ಕಳಿಸಿದ್ದೇನೆ. ಜನರು ತಕ್ಕ ರೀತಿಯಲ್ಲಿ ನಾಳೆಗೆ ಏರ್ಪಾಟು ಮಾಡುತ್ತಿದ್ದಾರೆ. ನಗರವು ಆಗಲೇ ಜನರಿಂದ ಕಿಕ್ಕಿರಿದು ಕಳಕಳಿಸುತ್ತಿದೆ.

ಈ ಸಮಯದಲ್ಲಿ ನಾನು ರಾಮನನ್ನು ವನವಾಸಕ್ಕೆ ಕಳಿಸಿದರೆ, ರಾಮಾಭಿಷೇಕ ರಾಜ್ಯಪಾಲನೆಗಳು ಒಂದೇ ರಾತ್ರಿಯಲ್ಲಿ ವನವಾಸವಾಗಿ ಹೋಯಿತೇ! ಎಂದೆಲ್ಲಾ ಪ್ರಜೆಗಳು ನನ್ನನ್ನು ಪರಿಹಾಸ್ಯ ಮಾಡುವುದಿಲ್ಲವೆ? ಸಭೆಯಲ್ಲಿ ನಾನು ಪ್ರಕಟಿಸಿದ ಮಾತುಗಳನ್ನು ನಾನು ಹೇಗೆ ಸಮರ್ಥಿಸಿಕೊಳ್ಳಲಿ? ಮಹಾರಾಜನು ಎಷ್ಟು

ಅವಿವೇಕಿಯಾದನೆಂದು ಜನ ನನ್ನನ್ನು ಹೀಯಾಳಿಸರೆ? ಇಷ್ಟು ಸಂವತ್ಸರಗಳು ಪ್ರಜಾ ಮನ್ನಣೆಯನ್ನು ಪಡೆದು, ದಶರಥ ಮಹಾರಾಜನು ಮಹಾ ಧಾರ್ಮಿಕ, ಗುಣವಂತ, ಶೌರ್ಯವಂತ ಎನ್ನುವ ಹೆಸರು ಸಂಪಾದಿಸಿ, ಕಡೆಗೆ, ಇಷ್ಟು ಅವಿವೇಕ ದಿಂದ ವರ್ತಿಸಿದನೆನ್ನುವ ಅಪಕೀರ್ತಿಯನ್ನು ನಾನು ಹೇಗೆ ಸಹಿಸಲಿ?" ಎಂದು ಅನೇಕ ಬಗೆಯಾಗಿ ತನ್ನ ಗೌರವ ಮರ್ಯಾದೆಯ ಪ್ರಶ್ನೆಯನ್ನೂ ಕೈಕೆಗೆ ತಿಳಿಯು ವಂತೆ ವಿಶದವಾಗಿ ಹೇಳಿದನು. ಆದರೆ ಕೈಕೆಯು ಮಹಾಮಾರಿಯಾಗಿ, ದಶರಥನ ಮಾತನ್ನು ಅಣುಮಾತ್ರವೂ ಲೆಕ್ಕಿಸದೆ, ಅವನ ಗೌರವ ಪ್ರತಿಷ್ಠೆಗಳನ್ನು ಯೋಚಿಸದೆ, ತನ್ನ ಪಟ್ಟುಬಿಡದೆ, ಕ್ಷಣಕ್ಷಣಕ್ಕೂ ತನ್ನ ದುರಾಸೆಯನ್ನು ಹೆಚ್ಚಿಸಿಕೊಳ್ಳುತ್ತಾ ಹೋದಳು. ಮಹಾರಾಜನ ಮಾತಿಗೆ ವಿರುದ್ಧವಾಗಿ ಮಾತನಾಡುತ್ತಾ ಸಾರಿ ಸಾರಿಗೂ ಅವನ ವಾಗ್ದಾನವನ್ನು ಜ್ಞಾಪಿಸುತ್ತಾ ಹೋದಳು.

**ವೈಧವ್ಯ**: ಆಗ ದಶರಥನು, "ಕೈಕಾ! ರಾಮನು ಅರಣ್ಯವಾಸಕ್ಕೆ ಹೋದ ಮೇಲೆ ನಾನು ಒಂದು ಕ್ಷಣವಾದರೂ ಬದುಕುವುದಿಲ್ಲ. ಕೌಸಲ್ಯೆಯ ಸ್ಥಿತಿ ಹೇಳಬೇಕಾದ್ದೇ ಇಲ್ಲ. ಆ ಕ್ಷಣವೇ ಪ್ರಾಣ ಬಿಡುವಳು. ಇನ್ನು ಸೀತೆಯು ತಲ್ಲಣಿಸಿ ಹೋಗುವಳು. ರಾಮನನ್ನು ಅವಳು ಒಂದು ಕ್ಷಣವೂ ಬಿಟ್ಟಿರಳು. ಈ ಎಲ್ಲಾ ಘೋರ ಪರಿಣಾಮ ಗಳನ್ನು ಪ್ರಜೆಗಳು ನೋಡಲಾರರು. ಮಹಾ ಮೇಧಾವಿ ಗುಣಶೀಲ ರಾಮನನ್ನು ಅರಣ್ಯಕ್ಕೆ ಕಳಿಸುತ್ತಿದ್ದರೆ ಲಕ್ಷ್ಮಣನು ನೋಡುತ್ತಾ ಸುಮ್ಮನಿರುವನೇನು? ಮರು ಕ್ಷಣವೇ ನಿನ್ನ ಪ್ರಾಣವನ್ನು ತೆಗೆಯುವನು. ಇದು ಸತ್ಯ. ಕಡೆಗೆ, ನಮ್ಮ ರಾಜ್ಯವು ಅನರ್ಥಕ್ಕೆ ಅವ್ಯವಸ್ಥೆಗೆ ಗುರಿಯಾಗುವುದು. ನೀನು ತಿಳಿದೂ ತಿಳಿದೂ ವಿಧವೆಯ ಬದುಕಿಗೇಕೆ ಇಷ್ಟೊಂದು ಪ್ರಯತ್ನಿಸುತ್ತಿರುವೆಯೋ ಅರ್ಥವಾಗುತ್ತಿಲ್ಲ! ದುರಾತ್ಮಳೇ! ನಿನ್ನ ಮುದ್ದು ಮುಖವನ್ನು ನೋಡಿ ಮೋಸ ಹೋದೆ. ಬಂಗಾರದ ಕತ್ತಿಯೆಂದು ಮೋಹಿಸಿ ಕೊರಳು ಕೊಯ್ದುಕೊಂಡ ಮೂಢನಾದೆ. ವಿಷ ಬೆರತ ಹಾಲನ್ನು ಕುಡಿದವನಾದೆ. ನನ್ನನ್ನು ಅನೇಕ ರೀತಿಯಾಗಿ ನೀನು ಇಷ್ಟು ಕಾಲವೂ ಮೋಸ ಪಡಿಸಿದೆ, ಕೊನೆಗೆ ನನ್ನ ವಂಶವನ್ನೇ ಮಣ್ಣುಪಾಲು ಮಾಡಲು ಸಂಕಲ್ಪಿಸಿದೆ.

ಛೀ! ನಾನೆಂಥ ಮೂಢ, ಅನೇಕ ಯಾಗಗಳನ್ನು ಮಾಡಿ ದೈವ ಕಟಾಕ್ಷದಿಂದ ಪಡೆದ ಪವಿತ್ರ ಪುತ್ರನನ್ನು ಮಾರಿ, ಸ್ತ್ರೀ ಸುಖವನ್ನು ಕೊಂಡುಕೊಂಡ ಪಾಪಿ ನಾನು. ದಶರಥನಂಥವನು ಈ ಕೆಲಸ ಮಾಡಬಹುದೇ? ನಿನ್ನ ಕೋರಿಕೆಗಳನ್ನು ನಾನು ಒಪ್ಪಿಕೊಂಡಿದ್ದೇ ಆದರೆ ನಾಯಿಗಳು ಕೂಡ ನನ್ನನ್ನು ನಿಂದಿಸುವುದಿಲ್ಲವೆ? ಹುಡುಗರು ನನ್ನನ್ನು ನೋಡಿ ಕಲ್ಲು ಹೊಡೆಯುವುದಿಲ್ಲವೆ? ಕಟ್ಟ ಕಡೆಗೆ ಇಂಥ ಗತಿಯೇ ದಶರಥನಿಗೆ? ಛೀ! ಇದು ನನ್ನ ಪುರಾಕೃತ ಕರ್ಮ. ಕೊರಳಿಗೆ ಹಾಕಿಕೊಂಡದ್ದು ಗೋಣು ಬಿಗಿಯುವ ಹಗ್ಗ ಎನ್ನುವುದು ಗೊತ್ತಿಲ್ಲದೆ ಬಿಗಿಮಾಡಿ

ಕೊಂಡ ಹಾಗಾಯಿತು. ಇಷ್ಟು ಕಾಲ ನಾನು ರಮಿಸಿದ್ದು ಮೃತ್ಯು ದೇವತೆಯೊಂದಿಗೆ ಎನ್ನುವುದನ್ನು ತಿಳಿಯದೆ ಹೋದೆ. ಕೈಯಾರೆ ಮೃತ್ಯುವನ್ನು ರಮಿಸಿದೆ, ಹೊಗಳಿದೆ. ಅದು ನನ್ನ ಪಾಪ ಫಲ, ಇಲ್ಲದಿದ್ದರೆ, ಸ್ತ್ರೀ ಸುಖಕ್ಕಾಗಿ ಸ್ವಂತ ಮಗನನ್ನು ಕಾರಡವಿಗಟ್ಟುವ ತಂದೆ ತಾಯಿಗಳಿರುವರೇ? ಅಯ್ಯೋ! ಏನಿದು ವಿಚಿತ್ರ! ಈಗಲೂ ನನಗೆ ನಂಬಲಾಗುತ್ತಿಲ್ಲ.

ಕೈಕಾ! ಬದಲಾಯಿಸಿಕೊ ನಿನ್ನ ಮೂರ್ಖ ವಿಚಾರವನ್ನು. ರಾಮನು ನನ್ನ ಮಾತಿಗೆ ಮರುಮಾತಾಡುವುದಿಲ್ಲ. ನಾನು ಹೇಳಬೇಕಾಗಿಯೂ ಇಲ್ಲ. ಈ ವಿಷಯವನ್ನು ಅವನು ಕೇಳಿದರೂ ಸಾಕು, ಅಡವಿಗೆ ಹೊರಡಲು ಸಿದ್ಧನಾಗುತ್ತಾನೆ. ನನ್ನನ್ನೇಕ್ಕೆ ಅಡವಿಗೆ ಕಳಿಸುತ್ತಿದ್ದೀರೆಂದು ಸಹ ಪ್ರಶ್ನಿಸುವುದಿಲ್ಲ. ಅಂಥ ಗುಣಶೀಲ ಅವನು. ರಾಮನೇನು, ನನ್ನ ಕುಮಾರರು ಯಾರೂ ನನ್ನ ಆಜ್ಞೆಯನ್ನು ಮೀರರು. ಭರತನು ಸಹ ಈ ವಿಚಾರ ತಿಳಿದರೆ ಸಹಿಸನು. ತಾಯಿ ಎನ್ನುವುದನ್ನು ಮರೆತು ನಿನ್ನನ್ನು ಏನಾದರೂ ಮಾಡಬಹುದು. ಭರತನಿಗೆ ರಾಮನೆಂದರೆ ಪಂಚಪ್ರಾಣ, ನಿನ್ನ ಕೋರಿಕೆಗೆ ವಿರುದ್ಧವಾಗಿ ಏನು ಮಾಡಲೂ ಅವನು ಸಿದ್ಧ. ತಾನೇ ಅಡವಿಗೆ ಹೋಗಿ ತನ್ನ ಬದಲು ರಾಮನಿಗೆ ಪಟ್ಟಾಭಿಷೇಕ ಮಾಡಲೂಬಹುದು. ಅಂಥ ಗುಣಶಾಲಿ ಭರತ. ಅವನ ಗುಣವನ್ನು ಗಮನಿಸದ ನಿನ್ನ ದುರ್ಬುದ್ಧಿಗೆ ಏನೆಂದು ಹೇಳಲಿ. ಕೈಕಾ! ವಿನಾಶಕಾಲೇ ವಿಪರೀತ ಬುದ್ಧಿಃ ಎನ್ನುವಂತೆ ನಿನ್ನ ವಿನಾಶಕ್ಕೆ ಈ ವಿಕಾರವಾದ ಆಲೋಚನೆಗಳು ನಿನಗೆ ಬರುತ್ತಿವೆ.

ಈ ಇಕ್ಷ್ವಾಕು ವಂಶಕ್ಕೇ ಶಾಶ್ವತವಾದ ಅಪಕೀರ್ತಿ ತರುತ್ತಿದ್ದೀಯೆ. ಇಷ್ಟು ಜನರನ್ನು ಶಾಶ್ವತ ದುಃಖದಲ್ಲಿ ಮುಳುಗಿಸಿ, ಅವರ ಪ್ರಾಣಗಳನ್ನು ತೆಗೆದು, ನೀನು ಮಾತ್ರ ಏನು ಆನಂದಪಡುತ್ತಿ? ಒಂದು ವೇಳೆ ಆನಂದಿಸಿದರೂ ಅದು ಆನಂದವೇ? ಛೀ! ಛೀ! ಪರರ ಬಾಧೆಯನ್ನು ನೋಡಿ ಆನಂದಿಸುವವರು ಮಹಾಪಾಪಿಗಳು, ರಾಕ್ಷಸರು. ಪರರ ಸಂತೋಷವನ್ನು ಕೋರುವವರು, ಪರರ ಆನಂದವನ್ನು ಬಯಸುವವರು ಪವಿತ್ರರು. ಮಹಾರಾಣಿಯಾಗಿ, ರಾಜಪುತ್ರಿಯಾಗಿ ಇಷ್ಟು ಮಾತ್ರವೂ ತಿಳಿದುಕೊಳ್ಳ ದಿದ್ದರೆ ರಾಜವಂಶಕ್ಕೆ ಅಪಕೀರ್ತಿಯಲ್ಲವೆ? ಕೈಕಾ! ನಾನು ಕಡೆಯ ಸಾರಿ ಒಂದು ಮಾತನ್ನು ಹೇಳಬೇಕೆಂದಿದ್ದೇನೆ, ಕೇಳು. ರಾಮನು ನನ್ನ ಪ್ರಾಣ, ಅವನನ್ನು ಬಿಟ್ಟು ನಾನು ಬದುಕಿರಲಾರೆ. ನಿನಗೂ ಅಸಂತೃಪ್ತಿ ಉಂಟುಮಾಡಲಾರೆ. ಒಂದು ವೇಳೆ ನಿನ್ನ ತೃಪ್ತಿಯ ನಿಮಿತ್ತ ರಾಮನನ್ನು ಅರಣ್ಯಕ್ಕೆ ಹೋಗೆಂದು ನಾನು ಬಾಯಿಂದ ಹೇಳದಿದ್ದರೂ ಈ ವಿಷಯವು ಅವನಿಗೆ ತಿಳಿದರೆ ಸಾಕು, ಅವನು ಪಿತೃವಾಕ್ಯ ಪರಿಪಾಲಕನಾದ್ದರಿಂದ ತಂದೆಯ ಮಾತನ್ನು ನೆರವೇರಿಸುವುದಕ್ಕಾಗಿ ತಾನೇ ಅರಣ್ಯಕ್ಕೆ ಹೊರಟು ಹೋಗುವನು. ಅದಕ್ಕೆ ಅಡ್ಡಿಯೇ ಇರುವುದಿಲ್ಲ.

**ಅಂತ್ಯಕ್ರಿಯೆಗಳಿಗೆ ಅಡ್ಡಿ**: ಆ ಸುದ್ದಿಯನ್ನು ಕೇಳಿದ ಕ್ಷಣವೇ ನಾನು ಪ್ರಾಣ ಬಿಡುತ್ತೇನೆ. ಲಕ್ಷ್ಮಣ, ಸೀತೆ, ಕೌಸಲ್ಯೆಯರು ರಾಮನೊಂದಿಗೆ ಕಾಡಿಗೆ ಹೋಗುವರು. ಏಕೆಂದರೆ, ಕೌಸಲ್ಯೆಯು ರಾಮನನ್ನು ಬಿಟ್ಟು ಬದುಕಳು. ಸೀತೆಯು ರಾಮನನ್ನು ಅನುಸರಿಸದಿರಳು. ಲಕ್ಷ್ಮಣನು ರಾಮನು ನಡೆದ ಜಾಡನ್ನು ಬಿಡನು. ಲಕ್ಷ್ಮಣನನ್ನು ಅನುಸರಿಸಿ ಊರ್ಮಿಳೆಯು ಕೂಡ ಹೋಗಬಹುದು. ಅಂಥ ಸಮಯದಲ್ಲಿ ನಾನು ಪ್ರಾಣವನ್ನು ಬಿಟ್ಟು, ಈ ಕಾಯಕ್ಕೆ ಅಂತ್ಯಕ್ರಿಯೆ ಮಾಡುವವರೂ ಸಹ ಇರುವುದಿಲ್ಲ. ನನ್ನ ಮರಣ ವಾರ್ತೆಯನ್ನು ಕೇಕೇಯ ರಾಜನಿಗೆ ತಿಳಿಸಿ, ಭರತ ಶತ್ರುಘ್ನರನ್ನು ಕರೆಸುವುದಕ್ಕೆ ಕಾಲ ಹಿಡಿಯುವುದು. ಅಲ್ಲಿಯವರೆಗೂ ಈ ಕಾಯಕ್ಕೆ ಯಾರೂ ಸಂಸ್ಕಾರ ಮಾಡುವುದಿಲ್ಲ. ನಾನು ಕಿರಾತ ಚೇಷ್ಟೆಗಳಿಗೆ ಒಡಂಬಟ್ಟೆನೆಂದು ತಾತ್ಸಾರದಿಂದ ಪ್ರಜೆಗಳೂ ಕೂಡ ನೋಡದೆ, ನನ್ನನ್ನು ಕಾಗೆ ಹದ್ದುಗಳ ಪಾಲು ಮಾಡಬಹುದು. ಅದರೆ, ನನ್ನ ಪ್ರಜೆಗಳು ಆ ಮಟ್ಟಕ್ಕೆ ಇಳಿಯುವುದಿಲ್ಲ. ಭರತನು ಬರುವವರೆಗೂ ಹೇಗಾದರೂ ಈ ಕಾಯವನ್ನು ಕಾಪಾಡುವರು. ರಾಜ್ಯಪಾಲನೆಗೆ ಭರತನು ಒಪ್ಪದಿದ್ದರೆ, ಅಂಥವನು ನನ್ನ ಕಾಯವನ್ನು ಮುಟ್ಟುವುದಕ್ಕಾಗಲೀ ದಹನ ಸಂಸ್ಕಾರ ಮಾಡುವುದಕ್ಕಾಗಲೀ ಅವಕಾಶವಿರುವುದಿಲ್ಲ. ಅಂಥವನು ಅರ್ಹನು ಕೂಡ ಅಲ್ಲ. ಆದ್ದರಿಂದ, ಅವನಿಂದ ಪ್ರೇತಕರ್ಮ ಮಾಡಿಸೆಂದು ನಿನ್ನಿಂದ ವಾಗ್ದಾನ ಕೂಡ ನಾನೀಗ ಕೇಳುವುದಿಲ್ಲ. ನೀನು ಹಾಗೆ ವಾಗ್ದಾನ ಕೊಟ್ಟರೂ ಕೊಡಬಹುದು. ಆದರೆ, ವಿಧವೆಯಾಗಿ ಬದುಕಿರುವುದರಲ್ಲಿ ನಿನಗೇನು ಆನಂದವೋ ಹೇಳು. ದುಷ್ಟಚಾರಿಣಿ! ಕಡೆಗೆ ಇಂಥ ಕಿರಾತೆಯಾದೆಯಾ? ರಘುವಂಶವನ್ನೇ ನೆಲಸಮ ಮಾಡಲು ಹೊರಟೆಯಾ? ಇದೇನು ನಿನ್ನ ಸ್ವಭಾವವೋ ಅಥವಾ ವೈಷ್ಣವ ಮಾಯೆಯು ನಿನ್ನಲ್ಲಿ ಪ್ರವೇಶಿಸಿ ನಿನ್ನನ್ನು ಹೀಗೆ ಆಡಿಸುತ್ತಿದೆಯೋ ನನಗೆ ಅರ್ಥವಾಗುತ್ತಿಲ್ಲ," ಎಂದು ದಶರಥನು ಬಾಧೆಪಡುತ್ತಿರುವಾಗ ಮೂರು ಜಾವಗಳು ಕಳೆದವು.

**ನೀನೇ ಪಟ್ಟಾಭಿಷೇಕವನ್ನು ನಡೆಸು**: ಅವನು ವ್ಯಾಧಿಗ್ರಸ್ತನಂತೆ ನಿಟ್ಟುಸಿರು ಬಿಡುತ್ತಾ ಸೊರಗುತ್ತಿದ್ದನು. ಹೇಗಾದರೂ ಕೈಕೆಯನ್ನು ಒಳ್ಳೆಯವಳನ್ನಾಗಿ ಮಾಡಿ ಕೊಂಡು ರಾಮ ಪಟ್ಟಾಭಿಷೇಕವು ಪೂರ್ತಿಯಾಗಿ ನೆರವೇರುವ ಹಾಗೆ ಮಾಡ ಬೇಕೆಂದು ಯೋಚಿಸಿ ದಶರಥನು, "ಓ! ದೇವಿ! ನೀನು ಮಂಗಳ ಸ್ವರೂಪಿಣಿ! ನಾನು ಇದುವರೆಗೂ ನಿನ್ನನ್ನು ಪ್ರಾಣ ಸಮಾನವಾಗಿ ನೋಡಿಕೊಂಡೆ, ನೀನೂ ನನ್ನನ್ನು ಹೃದಯ ಸಮಾನವಾಗಿ ಕಾಪಾಡಿದೆ. ಇನ್ನುಳಿದಿರುವ ಕಾಲವನ್ನು ಈ ರೀತಿಯ ವೈಮನಸ್ಯಗಳಿಗೆ ಅವಕಾಶವಿಲ್ಲದಂತೆ ಶಾಂತವಾಗಿ ಸಂತೋಷವಾಗಿ ಕಳೆಯಲು ಪ್ರಯತ್ನಿಸೋಣ. ಓ! ಸುಶ್ರೋಣಿ! ನಾನಿನ್ನು ಬಹಳ ಕಾಲ ಬದುಕಿರುವುದಿಲ್ಲ! ಇಷ್ಟು

ಕಾಲವೂ ಸತ್ಯವ್ರತನೆಂದು ಹೆಸರು ಪಡೆದು, ಸರ್ವ ಮಾನವರ ಮನ್ನಣೆಯನ್ನು ಪಡೆದು, ಬಹಿರಂಗ ಸಭೆಯಲ್ಲಿ ನಾಳೆ ಶ್ರೀರಾಮಚಂದ್ರನಿಗೆ ಪಟ್ಟಾಭಿಷೇಕ ಮಾಡುತ್ತೇನೆಂದು ಶಪಥ ಮಾಡಿದ್ದೇನೆ. ನಾಳೆಯ ದಿನ ಈ ಮಂಗಳಕಾರ್ಯವನ್ನು ನಡೆಸದಿದ್ದರೆ ಲೋಕದ ಜನರು ನನ್ನನ್ನೆಷ್ಟು ನಿಂದಿಸುವರೊ ನೀನೇ ಯೋಚಿಸು.

ದೇವಾಸುರ ಯುದ್ಧದಲ್ಲಿ ನನ್ನನ್ನು ಕಾಪಾಡಿ, ಈ ದಿನ ನನ್ನನ್ನು ಪರಾಭವಗೊಳಿಸುವುದು ನಿನಗೆ ಎಷ್ಟು ಮಾತ್ರಕ್ಕೂ ನ್ಯಾಯವಲ್ಲ. ಹೋಗಲಿ! ಈ ರಾಜ್ಯವನ್ನೆಲ್ಲಾ ನಿನಗೆ ವರದಾನವಾಗಿ ಕೊಡುತ್ತೇನೆ, ನೀನೇ ರಾಮನಿಗೆ ಪಟ್ಟಾಭಿಷೇಕ ನೆರವೇರಿಸು! ಇದಕ್ಕೆ ಭರತನು ಕೂಡಾ ಅಮಿತಾನಂದಪಡುವನು. ಅಷ್ಟೇ ಅಲ್ಲ, ಗುರುಗಳೂ ಋಷಿಗಳೂ ಮಂತ್ರಿಗಳೂ ಪ್ರಜೆಗಳೂ ಅವರಿವರೇನು, ಲೋಕವೇ ನಿನ್ನನ್ನು ಮೆಚ್ಚಿಕೊಳ್ಳುವುದು. ನಿನ್ನ ಹೆಸರು ಲೋಕದಲ್ಲಿ ಶಾಶ್ವತವಾಗಿ ನಿಲ್ಲುವುದು, ಹಾಗಲ್ಲದೆ, ಈ ದಿನ ನೀನು ರಾಮಾಭಿಷೇಕಕ್ಕೆ ಅಡ್ಡಿಮಾಡಿದರೆ ಲೋಕವೆಲ್ಲಾ ನಿನ್ನನ್ನು ನಿಂದಿಸುವುದು, ನೀಚಳೆನ್ನುವುದು. ನಿನ್ನ ಮಗನನ್ನು ಸಹ ನಿಂದಿಸುವುದು. ನಿನ್ನಿಂದ ರಾಜ್ಯಕ್ಕೆ ಅಲ್ಲದೆ ವಂಶಕ್ಕೇ ಅಪಕೀರ್ತಿ ಬರುವುದು. ನೀನು ಸಣ್ಣ ಸಣ್ಣ ಜನರಿಂದ ಕೂಡ ಛೀ! ಛೀ! ಎನಿಸಿಕೊಳ್ಳಬೇಕಾಗುವುದು. ಚೆನ್ನಾಗಿ ಯೋಚಿಸು. ಶಾಶ್ವತ ಕೀರ್ತಿಯನ್ನು ಬಯಸಿ, ಈ ಪಟ್ಟಾಭಿಷೇಕಕ್ಕೆ ಅಡ್ಡಿಪಡಿಸದೆ, ನಾಳೆ ನಿನ್ನ ಕೈಯಿಂದಲೇ ರಾಮಚಂದ್ರನಿಗೆ ಅಭಿಷೇಕ ನಡೆಸು," ಎಂದು ಅವಳನ್ನು ಅನೇಕ ರೀತಿಯಾದ ಮೃದು ಮಧುರ ಮಾತುಗಳಿಂದ ಸಂತೋಷಪಡಿಸಲು ಯತ್ನಿಸಿದನು.

**ಕೊಟ್ಟ ಮಾತನ್ನು ನಡೆಸಿಕೊಡಿ**: ಕೈಕೆಯಿ, "ರಾಜಾ! ನಿಮ್ಮ ಮಾತುಗಳು ಅತಿ ವಿಚಿತ್ರವಾಗಿದೆ. ಕೊಟ್ಟ ಮಾತಿಗೆ ತಪ್ಪಿಸಿಕೊಳ್ಳುವುದಕ್ಕಾಗಿ ನೀವು ಮಾಡುತ್ತಿರುವ ಸನ್ನಾಹಗಳು ನನ್ನನ್ನು ಎಷ್ಟು ಮಾತ್ರಕ್ಕೂ ಮೋಸಪಡಿಸಲಾರವು. ಏನು ಕೋರುತ್ತೀಯೋ ಕೋರು, ಕೊಡುತ್ತೇನೆ ಎಂದು ವಾಗ್ದಾನವಿತ್ತು, ನುಡಿದಂತೆ ನಡೆಯದೆ, ಈಗ ಈ ರೀತಿ ದುಃಖವನ್ನು ಪ್ರದರ್ಶಿಸುತ್ತಿರುವುದು ನಿಮಗೆ ಧರ್ಮವಲ್ಲ. ನಿಮ್ಮ ಗೌರವ ಮರ್ಯಾದೆಗಳನ್ನು ನೀವೇ ಹಾಳುಮಾಡಿಕೊಳ್ಳುತ್ತಿದ್ದೀರಿ. ಇದಕ್ಕೆ ನಾನೇನೂ ಬಾಧ್ಯಳಲ್ಲ. ಸತ್ಯವೇ ಪರಮ ಧರ್ಮವೆಂದು ಧರ್ಮವೇತ್ತರು ಹೇಳುವ ಮಾತನ್ನು ಜ್ಞಾಪಕಕ್ಕೆ ತಂದುಕೊಳ್ಳಿ. ನಾನೂ ಕೂಡ ಆ ಧರ್ಮವನ್ನು ಅನುಸರಿಸಿಯೇ ನೀವು ವಾಗ್ದಾನ ಮಾಡಿದ ವರಗಳನ್ನು ಸಲ್ಲಿಸಿರೆಂದು ಕೋರಿದೆ. ನೀವು, 'ಸರಿ! ಆಗಲಿ,' ಎಂದು ಒಪ್ಪಿಕೊಂಡಿರಿ.

ಈಗ, ನಾನು ಏನೋ ಅನ್ಯಾಯ ಮಾಡಹೊರಟಿದ್ದೇನೆ, ಮಹಾಪಾಪ ಕಾರ್ಯದಲ್ಲಿ ತೊಡಗಿದ್ದೇನೆ, ಮಹಾ ದುಷ್ಟ ಸಂಚು ಮಾಡಿದ್ದೇನೆ, ನಿಮಗೆ ಶಾಶ್ವತ ಅಪಕೀರ್ತಿ

ತರುತ್ತಿದ್ದೇನೆ ಎನ್ನುವ ಹಾಗೆ ಮಾತನಾಡುತ್ತಿದ್ದೀರಿ. ಇದು ನ್ಯಾಯವಲ್ಲ. ಇದರಲ್ಲಿ ನನ್ನದು ಏನೇನು ದೋಷವಿಲ್ಲ. ಹಿಂದು ಮುಂದು ಯೋಚಿಸದೆ ಮಾತು ಕೊಟ್ಟು, ಅದನ್ನು ಕಾರ್ಯರೂಪದಲ್ಲಿ ತರುವಾಗ ತಬ್ಬಿಬ್ಬಾಗುವುದು ನಿಮ್ಮ ದೋಷವೇ! ವಾಗ್ದಾನ ನಡೆಸಿಕೊಡಲಾಗದವರು ವಾಗ್ದಾನ ಕೊಡುವುದು ಮಹಾ ಪಾಪ. ಕೊಟ್ಟ ಮಾತನ್ನು ನಡೆಸಿದರೆ, ಸತ್ಯ ವಾಕ್ಯಾಚರಣೆಯಿಂದ ಎಂಥ ಪಾಪವಾದರೂ ನಶಿಸುವುದು.

**ಪೂರ್ವ ರಾಜರ ಸತ್ಯವಾಕ್ಯ ಪರಿಪಾಲನೆ**: ನಿಮಗೆ ತಿಳಿಯದೇ? ಪೂರ್ವದಲ್ಲಿ ಶಿಬಿ ಚಕ್ರವರ್ತಿಯು, 'ನಿನ್ನನ್ನು ಕಾಪಾಡುತ್ತೇನೆ,' ಎಂದು ಪಾರಿವಾಳಕ್ಕೆ ಮಾತು ಕೊಟ್ಟು, ಆ ಮಾತನ್ನು ಉಳಿಸಿಕೊಳ್ಳುವುದಕ್ಕಾಗಿ ತನ್ನ ದೇಹದ ಮಾಂಸವನ್ನು ಕೊಯ್ದು ಗಿಡಗನಿಗೆ ಕೊಟ್ಟನು. ಅಲರ್ಕ ಮಹಾರಾಜನು ತನ್ನ ಮಾತನ್ನು ಉಳಿಸಿ ಕೊಳ್ಳುವುದಕ್ಕಾಗಿ, ಒಬ್ಬಾನೊಬ್ಬ ಬ್ರಾಹ್ಮಣನಿಗೆ ತನ್ನ ಎರಡು ಕಣ್ಣುಗಳನ್ನೂ ಕಿತ್ತು ಕೊಟ್ಟನು. ಸಮಸ್ತ ನದಿಗಳಿಗೂ ಅಧಿಪತಿಯಾದ ಸಮುದ್ರನು ಸತ್ಯವ್ರತದಿಂದಾಗಿಯೇ ತನ್ನ ತೀರವನ್ನು ದಾಟಿ ಬರುತ್ತಿಲ್ಲ. ರಾಜಾ! ಹೆಚ್ಚೇಕೆ ಎಲ್ಲರಿಗೂ ಸತ್ಯವೇ ಪರಮ ಪ್ರಮಾಣ, ಪರಮ ವಿಧಾನ. ಸತ್ಯವೇ ಶಬ್ದ, ಸತ್ಯವೇ ಬ್ರಹ್ಮ, ಅದೇ ಧರ್ಮ. ಸತ್ಯವೊಂದೇ ಅಕ್ಷಯವಾಗಿರುವುದು. ಅಂಥ ಅಕ್ಷಯ ಪದವನ್ನು ಬಿಟ್ಟು ಕ್ಷಯಕ್ಕಾಗಿ ನೀವು ಪ್ರಯತ್ನಿಸುತ್ತಿದ್ದೀರಿ. ಇದು ನಿಮ್ಮಂಥ ರಾಜರಿಗೆ ಸರಿಯಲ್ಲ. ಕೊಟ್ಟ ಮಾತನ್ನು ನಡೆಸಿ ಶಾಶ್ವತ ಕೀರ್ತಿಯನ್ನು ಗಳಿಸಿಕೊಳ್ಳಿ. ಹಾಗಲ್ಲದೆ ಪುತ್ರವಾತ್ಸಲ್ಯಕ್ಕೆ, ಸ್ತ್ರೀ ವ್ಯಾಮೋಹಕ್ಕೆ ವಶರಾಗಿ ರಾಜನೀತಿಯನ್ನು ಉಲ್ಲಂಘಿಸಿ ಇಕ್ಷ್ವಾಕು ವಂಶಕ್ಕೆ ಶಾಶ್ವತವಾದ ಅಪಕೀರ್ತಿಯನ್ನು ತಂದುಕೊಳ್ಳಬೇಡಿ! ಬೇರೆ ಯೋಚಿಸದೆ, ತಕ್ಷಣವೇ ರಾಮನನ್ನು ಕರೆದು ಅರಣ್ಯಕ್ಕೆ ತೆರಳಲು ಸಿದ್ಧವಾಗೆಂದು ಹೇಳಿ. ಭರತನನ್ನು ಬರಮಾಡಿಕೊಳ್ಳಲು ಏರ್ಪಾಟು ಮಾಡಿರೆಂದು ಮಂತ್ರಿಗಳಿಗೆ ತಿಳಿಸಿ. ಬೆಳಕು ಹರಿಯುತ್ತಿದೆ. ಬೆಳಗಾಗುವುದರೊಳಗೇ ಇವು ಆಗಿ ತೀರಬೇಕು. ನೀವೇನು ಹೇಳಿದರೂ ನಾನು ತೃಪ್ತಿಪಡೆನು. ಹಾಗೇನಾದರೂ ನೀವು ಹಟ ಮಾಡಿ ರಾಮ ಪಟ್ಟಾಭಿಷೇಕ ನಡೆಸಿದಿರಾದರೆ ತುಂಬು ಸಭೆಯಲ್ಲಿ ನಾನು ಪ್ರಾಣ ಬಿಡುತ್ತೇನೆ, ಇದು ಸತ್ಯ," ಎಂದಳು.

**ದಶರಥನು ಮೂರ್ಛೆ ಬೀಳುವುದು**: ಹೀಗೆ ತೀಕ್ಷ್ಣವಾಗಿ ಮಾತನಾಡಿದ ಕೈಕೆಯನ್ನು ನೋಡಿ ದಶರಥನು ಮಹಾ ರುದ್ರನಾಗಿ, ಕೋಪವನ್ನು ಒಳಗೆ ನುಂಗಲಾರದೆ, ಹೊರಗೆ ವ್ಯಕ್ತಪಡಿಸಲಾರದೆ ವಾಮನ ಮೂರ್ತಿಗೆ ಮಾತುಕೊಟ್ಟು ತಪ್ಪಿಸಿಕೊಳ್ಳಲಾರದೆ ಹೋದ ಬಲಿಚಕ್ರವರ್ತಿಯಂತೆ ಧರ್ಮಶಾಪಬದ್ಧನಾದನು. ಕಣ್ಣು ಮಬ್ಬಿಟ್ಟಿತು, ತಲೆ ಸುತ್ತಿತು, ನೆಲಕ್ಕುರುಳಿದನು. ಕಡೆಗೆ, ಹೇಗೊ ಧೈರ್ಯ ತಂದು

ಕೊಂಡು, "ಪಾಪೀ, ಇಂದು ರಾಮಾಭಿಷೇಕ ನಿಂತರೆ, ನಾನು ಪ್ರಾಣ ಬಿಡುವುದು ಖಂಡಿತ. ಆಮೇಲೆ, ವಿಧವೆಯಾಗಿ ಈ ರಾಜ್ಯವನ್ನು ನಿನ್ನ ಇಷ್ಟ ಬಂದಂತೆ ಆಳಿಕೋ!" ಎಂದು ಉದ್ರೇಕದಿಂದ ನುಡಿದನು, "ಹೇ! ರಾಮಾ! ನನ್ನ ಕೈಯಿಂದಲೇ ನಿನ್ನನ್ನು ಅರಣ್ಯಕ್ಕೆ ಕಳಿಸುವಂತಾಯಿತೇ? ನಾನು ಕಳಿಸುವುದಿಲ್ಲ, ನನ್ನ ಪ್ರಾಣವನ್ನಾದರು ಬಿಟ್ಟೇನು, ನಿನ್ನನ್ನು ಬಿಟ್ಟಿರಲಾರೆ. ಓ! ರಾಕ್ಷಸೀ! ನನ್ನ ಸುಕುಮಾರ ಸುಂದರನನ್ನು ಕಾರಡವಿಗೆ ಕಳಿಸಲು ನಿನ್ನ ಮನಸ್ಸು ಹೇಗೊಪ್ಪಿತು? ಎಂಥ ಕಿರಾತಳಾದೆ, ಚಂಡೀ ..." ಎನ್ನುತ್ತಾ ಮೂರ್ಛೆ ಹೋದನು.

**ಪಟ್ಟಾಭಿಷೇಕ ಪದ್ಧತಿಗಳು**: ಬೆಳಗಾಯಿತು. ನವಧ್ವನಿಗಳನ್ನು ಬಾರಿಸತೊಡಗಿದರು. ರಾಜ ಬೀದಿಯಲ್ಲಿ ಪನ್ನಿರು ಚೆಲ್ಲಿದರು. ಪುರವೆಲ್ಲಾ ಸುಗಂಧದಿಂದ ತುಂಬಿ ಹೋಯಿತು. ಸುವಾಸನಾಯುಕ್ತನಾಗಿ ವಾಯುವು ಉತ್ಸಾಹದಿಂದ ಆಕಾಶವನ್ನು ವ್ಯಾಪಿಸಿದನು. ಪುಷ್ಯ ನಕ್ಷತ್ರವು ಹುಟ್ಟಿತು. ವಸಿಷ್ಠ ಮಹರ್ಷಿಯು ತನ್ನ ಶಿಷ್ಯವೃಂದದೊಂದಿಗೆ ಸರಯೂ ನದಿಯಲ್ಲಿ ಸ್ನಾನಮಾಡಿ, ಅಭಿಷೇಕ ದ್ರವ್ಯಾದಿಗಳೊಂದಿಗೆ ಬರುತ್ತಿರಲು, ರಾಜಬೀದಿಯಲ್ಲಿ ರಾಜಭಟರು ಅವರಿಗೆ ದಾರಿ ಬಿಡಿಸುತ್ತಿದ್ದರು. ಅವರು ಆ ಮಹಾ ಜನಸಮೂಹದ ಮಧ್ಯೆ ನಡೆದು ಬಂದು, ರಾಜಪ್ರಾಸಾದವನ್ನು ಪ್ರವೇಶಿಸಿದರು. ಅಷ್ಟು ಹೊತ್ತಿಗಾಗಲೇ, ಅನೇಕ ಮಂದಿ ಪುರೋಹಿತರೂ ರಾಜರೂ ಪ್ರಜಾಪ್ರತಿನಿಧಿಗಳೂ ಆವರಣವನ್ನು ಪ್ರವೇಶಿಸಿ ತಮ್ಮ ತಮ್ಮ ಸ್ಥಾನಗಳಲ್ಲಿ ಆಸೀನರಾಗಿದ್ದರು. ಬೀದಿಗಳಲ್ಲಿ ವೇದ ಪಾರಾಯಣವು ಮುಗಿಲು ಮುಟ್ಟುತ್ತಿತ್ತು. ಆಗ, ವಸಿಷ್ಠರು ಸುಮಂತನನ್ನು ಕರೆದು, "ಮಂತ್ರೀ! ನೀನು ಕೂಡಲೇ ಹೋಗಿ ಮುಹೂರ್ತವು ಸಮೀಪಿಸುತ್ತಿದೆಯೆಂದೂ ಅದಕ್ಕೆ ಪೂರ್ವದಲ್ಲಿ ಮಾಡಬೇಕಾದ ಕೆಲಸಗಳು ಬಹಳ ಇವೆಯೆಂದೂ ತಕ್ಷಣ ಇಲ್ಲಿಗೆ ಬರಬೇಕೆಂದೂ ವಸಿಷ್ಠರು ನಿಮ್ಮ ನಿರೀಕ್ಷಣೆಯಲ್ಲಿರುವರೆಂದೂ ಮಹಾರಾಜನಿಗೆ ತಿಳಿಸು," ಎಂದು ಹೇಳಿ ಕಳುಹಿಸಿದರು. ಮಹಾರಾಜನನ್ನು ಕರೆತರಲು ಸುಮಂತನು ಹೊರಟನು. ವೇಗವಾಗಿ ನಡೆಯುತ್ತಾ ಯಾವ ಅಂತಃಪುರವನ್ನಾದರೂ ಪ್ರವೇಶಿಸುವ ಸ್ವಾತಂತ್ರ್ಯವಿದ್ದುದರಿಂದ ಕೈಕೆಯ ಅಂತಃಪುರವನ್ನು ಪ್ರವೇಶಿಸಿದನು.

**ಸುಮಂತನ ಸ್ತೋತ್ರ ಪಾಠ**: ಸುಮಂತನು ಶಯ್ಯಾಗೃಹವನ್ನು ಪ್ರವೇಶಿಸುತ್ತಲೇ ಅವನಿಗೆ ಏನೂ ತೋಚದಂತಾಯಿತು. ನೆಲದ ಮೇಲೆ ಬಿದ್ದಿದ್ದ ದಶರಥನನ್ನೇ ನೋಡಿ ತನಗೇನು ಭ್ರಮೆ ಹಿಡಿದಿದೆಯೋ ಎಂದು ದಿಗ್ಭ್ರಾಂತನಾದನು. ಹತ್ತಿರ ಹೋಗಿ, "ರಾಜಾ! ಚಂದ್ರೋದಯ ಸಮಯದಲ್ಲಿ ಸಂತೋಷಿಸುವ ಸಮುದ್ರನಂತೆ ಈಗ ಸಂತೋಷಿಸಬೇಕಾದ ನೀವು, ಏಕೆ ಹೀಗೆ ಮಲಗಿದ್ದೀರೋ ಅರ್ಥವಾಗುತ್ತಿಲ್ಲ. ಮಹಾ ಶುಭ ಸಮಯವು ಸಮೀಪಿಸುತ್ತಿದೆ. ವೇದ ವೇದಾಂಗ ಪಾರಂಗತರು

ಸಿದ್ಧರಾಗಿ ನಿಮ್ಮ ಆಗಮನಕ್ಕಾಗಿ ಕಾದಿದ್ದಾರೆ. ನೀವಿನ್ನು ಎದ್ದು, ಮಂಗಳಾಲಂಕಾರ ಮಾಡಿಕೊಂಡು ಕಾಂತೆಯರೊಂದಿಗೆ ವಿರಾಜಮಾನರಾಗಿ ಸಭಾಭವನಕ್ಕೆ ಬರ ಬೇಕು. ವಸಿಷ್ಠರು ನಿಮ್ಮನ್ನು ಕರೆದುಕೊಂಡು ಬರುವಂತೆ ಆಜ್ಞಾಪಿಸಿದ್ದಾರೆ," ಎಂದು ನಿವೇದಿಸಿಕೊಂಡನು. ಸುಮಂತನ ಮಾತುಗಳನ್ನು ಕೇಳಿ ದಶರಥನು ದುಃಖ ತಡೆಯಲಾರದೆ ಗೊಳೋ ಎಂದು ಅಳಲಾರಂಭಿಸಿದನು. "ಸುಮಂತಾ! ಸ್ತೋತ್ರ ಪಾಠವು ನನ್ನ ಹೃದಯವನ್ನು ಸೀಳುತ್ತಿದೆ," ಎಂದು ಅಂತಃಕರಣವು ಕರಗುವಂತೆ ಹೇಳಿದುದನ್ನು ಕೇಳಿ ಸುಮಂತನು ಮುಂದೆ ಹೋಗಲೂ ಆಗದೆ, ಹಿಂದೆ ಸರಿ ಯಲೂ ಆಗದೆ, ಕೈಜೋಡಿಸಿಕೊಂಡು, "ರಾಜಾ! ಏನು ಈ ವಿಚಿತ್ರ? ಎಷ್ಟೋ ಆನಂದ ಪಡಬೇಕಾದ ಈ ಸಮಯದಲ್ಲಿ ನೀವು ಹೀಗೆ ಚಿಂತಾಮಗ್ನರಾಗಿರಲು ಕಾರಣವೇನು? ನನಗೇನೂ ಅರ್ಥವಾಗುತ್ತಿಲ್ಲ," ಎಂದು ಆಲೋಚನಾ ಮಗ್ನನಾಗಿ ನಿಂತನು.

**ಕೈಕೆಯ ಆಜ್ಞೆ:** ಆಗ ಕೈಕೆಯು ಬಂದು, "ಓ! ಮಂತ್ರಿಪುಂಗವಾ! ಮಹಾರಾಜರು ರಾತ್ರಿಯೆಲ್ಲಾ ರಾಮನ ವಿಷಯವಾಗಿ ಚಿಂತಿಸಿ, ಚಿಂತಿಸಿ, ಜಾಗರಣೆ ಮಾಡಿದರು. ನೀನು ಈಗಲೇ ಹೋಗಿ ರಾಮನನ್ನು ಇಲ್ಲಿಗೆ ಕರೆದುಕೊಂಡು ಬಂದರೆ, ಎಲ್ಲಾ ವಿಶದವಾಗಿ ತಿಳಿಯುವುದು. ನಾನು ಹೇಳುತ್ತಿದ್ದೇನೆಂದು ಬೇರೆ ಭಾವಿಸದೆ, ರಾಮ ನನ್ನು ತಕ್ಷಣ ಕರೆದುಕೊಂಡು ಬಾ," ಎಂದಳು. ಅವಳ ಆಜ್ಞೆಯನ್ನೇ ರಾಜಾಜ್ಞೆ ಯೆಂದು ಭಾವಿಸಿ ಸುಮಂತನು ರಾಮ ಮಂದಿರಕ್ಕೆ ಧಾವಿಸಿದನು. ಬೀದಿ ಬೀದಿ ಗಳಲ್ಲೂ ರಾಮಮಂದಿರದ ಸಿಂಹದ್ವಾರದ ಎರಡು ಪಕ್ಕಗಳಲ್ಲೂ ಪೀತಾಂಬರ ಪನ್ನೀರು ಪುಷ್ಪಗುಚ್ಛಗಳಿಂದ ಕೂಡಿದ ತಟ್ಟೆಗಳನ್ನು ಹಿಡಿದು ನಿಂತಿದ್ದ ಜನ ಸಮೂಹದ ದೃಶ್ಯವು ಕಣ್ಣಿಗೆ ಹಬ್ಬವಾಗಿತ್ತು. ಇದನ್ನು ನೋಡುತ್ತಾ ಹೋಗುತ್ತಿದ್ದ ಸುಮಂತನಿಗೆ, ಈ ಎಲ್ಲ ಸಂಭ್ರಮದ ಮಧ್ಯದಲ್ಲಿ ಏನೋ ಒಂದು ಮಹಾ ಕೊರತೆ ಕಾಣಿಸಿಕೊಂಡಿದೆ ಎಂದೆನಿಸಿ, ಅಯೋಮಯ ಸ್ಥಿತಿಯಲ್ಲಿ ಮುಳುಗಿ ಹೋದನು. ಕೆಲವು ನಿಮಿಷಗಳ ಪೂರ್ವದಲ್ಲಿದ್ದ ಅವನ ಆನಂದವು ಹೃದಯದ ತಳವನ್ನು ಸೇರಿ ಅಡಗಿಹೋಯಿತು. ಆದರೆ ಅವನು ರಥದಲ್ಲಿ ರಾಮಭವನಕ್ಕೆ ಬರುತ್ತಿರುವುದನ್ನು ಲಕ್ಷಾಂತರ ಪ್ರಜೆಗಳು ನೋಡಿ ರಾಮಚಂದ್ರನನ್ನು ಪಟ್ಟಾಭಿಷೇಕಕ್ಕೆ ಕರೆದೊಯ್ಯಲು ಅವನು ಬರುತ್ತಿದ್ದಾನೆಂದು ಭಾವಿಸಿ ಆನಂದದಿಂದ ಮುಖಗಳನ್ನರಳಿಸಿಕೊಂಡು, ರೆಪ್ಪೆಯಾಡಿಸದೆ ರಸ್ತೆಯ ಕಡೆ ನೋಡುತ್ತಿದ್ದರು. ಇಷ್ಟರಲ್ಲಿ ಸುಮಂತನು ರಾಮ ಭವನವನ್ನು ಪ್ರವೇಶಿಸಿ ಏಳು ಅಂತಸ್ತಿನ ಅಂತಃಪುರವನ್ನು ಯಾವ ಅಡ್ಡಿಯೂ ಇಲ್ಲದೆ, ಮಹಾ ನದಿಯ ಗರ್ಭವನ್ನು ಪ್ರವೇಶಿಸುವ ಮೊಸಳೆಯಂತೆ ರಭಸದಿಂದ ಪ್ರವೇಶಿಸಿದನು.

# ೧೧ ಲಕ್ಷ್ಮಣ ಸಹಿತ

ಅಲ್ಲಿ ರಾಮನ ಕೆಲವು ಯುವ ಮಿತ್ರರು ಉಜ್ವಲ ಕರ್ಣಕುಂಡಲಗಳ ಕಾಂತಿಯಿಂದ ಪ್ರಜ್ವಲಿಸುತ್ತಾ ರಾಮನೊಡನೆ ಹೊರಡಲು ಸಿದ್ಧರಾಗಿದ್ದರು. ಇನ್ನೂ ಮುಂದೆ ಹೋದಾಗ, ರಾಮನು ಅಲಂಕಾರಗಳಿಂದ, ಕಣ್ಣು ಕೋರೈಸುವ ಕಾಂತಿಯಿಂದ ಚಿತ್ತಾ ನಕ್ಷತ್ರದ ಚಂದ್ರನಂತೆ ಕಾಣುತ್ತಿದ್ದನು. ಸುಮಂತನು ತಡಮಾಡದೆ, "ರಾಮಾ! ಕೈಕಾ ದೇವಿಯವರೂ ನಿಮ್ಮ ತಂದೆಯವರೂ ತಕ್ಷಣವೇ ನಿಮ್ಮನ್ನು ಕೈಕೆಯ ಮಂದಿರಕ್ಕೆ ಕರೆದುಕೊಂಡು ಬರಲು ನನ್ನನ್ನು ಕಳಿಸಿದ್ದಾರೆ. ಅದಕ್ಕಾಗಿ ನಾನಿಲ್ಲಿಗೆ ಬಂದಿದ್ದೇನೆ," ಎಂದನು. ಅದನ್ನು ಕೇಳಿದ ತಕ್ಷಣ ರಾಮನು ಸೀತೆಯನ್ನು ನೋಡಿ, "ಸೀತಾ! ನಿನಗಿದು ತಿಳಿಯದು. ಇದು ಬರಲಿರುವ ಆಪತ್ತಿನ ಸೂಚನೆಯಲ್ಲದೆ ಬೇರೆಯಲ್ಲ. ತಂದೆಯವರ ಪ್ರೀತ್ಯರ್ಥವಾಗಿ, ಅವರ ಆಜ್ಞೆಯನ್ನು ಮೀರಕೂಡ ದೆನ್ನುವುದಕ್ಕಾಗಿ, ಅವರನ್ನು ದುಃಖಕ್ಕೆ ಗುರಿಮಾಡಬಾರದೆನ್ನುವುದಕ್ಕಾಗಿ ನಾನು ಪಟ್ಟಾಭಿಷೇಕಕ್ಕೆ ಒಪ್ಪಿಕೊಳ್ಳಬೇಕಾಯಿತು. ನನಗೆ ಈ ವಿಷಯ ಮೊದಲೇ ತಿಳಿದಿತ್ತು. ತಿಳಿದಿದ್ದರೂ ನಾನು ಕರ್ತವ್ಯ ನಿರ್ವಹಿಸಬೇಕಾಗಿದ್ದುದರಿಂದ ಹಾಗೆ ಒಪ್ಪಿಕೊಳ್ಳ ಬೇಕಾಯಿತು ..." ಎಂದು ಇನ್ನೂ ಏನೇನೋ ಹೇಳುತ್ತಿದ್ದಂತೆ ಸುಮಂತನ ಎದೆ ಬಡಿದುಕೊಳ್ಳಲಾರಂಭಿಸಿತು. ತಾನು ನೋಡಿದ ದಶರಥನ ಪರಿಸ್ಥಿತಿ, ಇಲ್ಲಿ ರಾಮನು ಆಡುತ್ತಿರುವ ಮಾತುಗಳು, ಎರಡನ್ನೂ ಸೇರಿಸಿದಾಗ ಇದು ಏನೋ ವಿಘ್ನಕ್ಕೊಯ್ಯುತ್ತಿದೆ ಎನ್ನುವುದು ಅವನಿಗೆ ಅರ್ಥವಾಯಿತು.

**ಸಮಾನ ಆನಂದ**: ಇಷ್ಟರಲ್ಲಿ ಸೀತೆಯು, "ನಾಥಾ! ಏನಿದು ನಿಮ್ಮ ಮಾತುಗಳು? ಈ ಶುಭ ಸಮಯದಲ್ಲಿ ನೀವು ಹೀಗೆ ಮಾತನಾಡಬಾರದು. ಯಾವುದು ಏನಾ ದರೂ ಸರಿ, ಮಾವನವರ ಮಾತುಗಳನ್ನು ನಡೆಸಲೇಬೇಕು. ಅವರ ತೃಪ್ತಿಯೇ ನಮ್ಮ ತೃಪ್ತಿ. ಅವರಿಗಾಗಿ ನಾವು ಎಂಥ ತ್ಯಾಗವನ್ನಾದರೂ ಮಾಡಲೇ ಬೇಕು. ಅವರ ಆಜ್ಞೆಯ ಗೆರೆ ದಾಟದಂತೆ ತಕ್ಷಣವೇ ಹೋಗಿ ಬನ್ನಿ. ಅಭಿಷೇಕ ಆದರೂ ಸರಿಯೇ ಆಗದಿದ್ದರೂ ಸರಿಯೇ ಎರಡಕ್ಕೂ ನಾವು ಸಮಾನ ಆನಂದವನ್ನೇ ಪಡಬೇಕು. ಕೈಕಾದೇವಿಗೆ ನಮ್ಮ ಮೇಲೆ ಅಮಿತ ಪ್ರೇಮ. ಆ ದೇವಿ ಏನು ಹೇಳಿದರೂ ಏನು ಮಾಡಿದರೂ ನಮ್ಮ ಒಳಿತಿಗೇ! ಅವರಿಗಿಂತ ಅಧಿಕವಾಗಿ ನಮ್ಮ ಮೇಲ್ಮೆಯನ್ನು ಕೋರುವವರು ಈ ಲೋಕದಲ್ಲಿ ಯಾರೂ ಇಲ್ಲ. ಅಂಥ ತಾಯಿ ತಂದೆಯರು

ತಕ್ಷಣವೇ ಹೊರಟು ಬರಲಿ ಎಂದು ಹೇಳಿ ಕಳಿಸಿದರೆ ಎಷ್ಟೊಂದು ಆನಂದ!" ಎಂದು ಹೇಳಿ, ದ್ವಾರದವರೆಗೂ ರಾಮನೊಂದಿಗೆ ಬಂದು ಅನೇಕ ಬಗೆಯಾಗಿ ಅವನಿಗೆ ಸಾಂತ್ವನ ಹೇಳಿದಳು.

ಅದಕ್ಕೆ ರಾಮನು, "ಸೀತಾ! ನನಗೆ ಅಷ್ಟು ಮಾತ್ರ ತಿಳಿಯದೆ? ಆಗಲಿರುವ ಘಟನೆಗಳು, ಆಗುತ್ತಿರುವ ಘಟನೆಗಳು, ಆಗಿ ಹೋದ ಘಟನೆಗಳು, ಎಲ್ಲ ನನಗೆ ಸಮಾನವೆ. ನಾನು ಎಲ್ಲದಕ್ಕೂ ಆನಂದದಿಂದ ಸ್ವಾಗತ ನೀಡುತ್ತೇನೆ. ತಂದೆಯ ಕೀರ್ತಿಗಾಗಿ ನಾನು ಏನು ಮಾಡಲೂ ಸಿದ್ಧ! ಎಲ್ಲಿಗೆ ಹೋಗಲೂ ಸಿದ್ಧ. ನೀನೂ ಇದಕ್ಕೆ ನೀನು ಸಿದ್ಧಳಾಗಿರುವುದು ನನಗೆ ಅದೆಷ್ಟೋ ಆನಂದವಾಗಿದೆ," ಎಂದು ಹೇಳಿ ಸುಮಂತನೊಂದಿಗೆ ರಥದಲ್ಲಿ ಕುಳಿತು ಹೊರಟನು. ನೆರೆದಿದ್ದ ಪ್ರಜಾ ಸಮೂಹವು, "ರಾಮಚಂದ್ರ ಪ್ರಭುವಿಗೆ ಜೈ! ಜೈ! ಜೈ!" ಎಂದು ಘೋಷಣೆ ಮಾಡಿತು. ಸುಮಂತನು ಪ್ರಜೆಗಳಿಗೆ ವಿಷಯವನ್ನು ತಿಳಿಸುವ ಸಲುವಾಗಿ ಅವರನ್ನು ದ್ದೇಶಿಸಿ, "ಈಗ ಹೋಗುತ್ತಿರುವುದು ಪಟ್ಟಾಭಿಷೇಕಕ್ಕಲ್ಲ, ಮಹಾರಾಜನ ಬಳಿಗೆ ಹೋಗುತ್ತಿದ್ದೇವೆ. ಕಾಲಾವಕಾಶವಿಲ್ಲದ್ದರಿಂದ ರಥವನ್ನು ವೇಗವಾಗಿ ಓಡಿಸಬೇಕಾ ಗಿದೆ. ಕೆಲವು ಕ್ಷಣಗಳಲ್ಲೇ ರಾಮನು ಹಿಂತಿರುಗಿ ಬರುತ್ತಾನೆ. ನೀವು ತೊಂದರೆ ಪಡದಿರಿ," ಎಂದು ಅವರಿಗೆ ಅರ್ಥವಾಗುವಂತೆ ಒಳ್ಳೆಯ ಮಾತುಗಳಲ್ಲಿ ತಿಳಿಸಿ, ಕೈಕೆಯ ಮಂದಿರಕ್ಕೆ ರಥವನ್ನು ವೇಗವಾಗಿ ನಡೆಸಿಕೊಂಡು ಹೋದನು.

**ಅಂತಃಪುರ ಪ್ರವೇಶ** : ರಾಮನು ದಿವ್ಯ ರಥದಲ್ಲಿ ಕುಳಿತು ಪುರಬೀದಿಗಳನ್ನು ಹಾದು ಕೈಕೆಯ ಮಂದಿರಕ್ಕೆ ಹೋಗುತ್ತಿದ್ದಾನೆ. ಶೂರರು ಸಿಂಹನಾದ ಮಾಡುತ್ತಿದ್ದಾರೆ. ವಂದಿ ಮಾಗಧರು ಮಂಗಳವಾದ್ಯ ನುಡಿಸುತ್ತಿದ್ದಾರೆ. ವಿವಿಧ ವಾದ್ಯಗಳು ಮೊಳಗು ತ್ತಿವೆ, ಜನಸ್ತೋಮದ ಜಯ ಜಯ ಧ್ವನಿ ಮುಗಿಲು ಮುಟ್ಟುತ್ತಿದೆ. ಅಂದವಾಗಿ ಅಲಂಕರಿಸಿಕೊಂಡ ಉತ್ತಮಾಂಗನೆಯರು ಮಾಳಿಗೆಯಲ್ಲಿ ಕಿಟಕಿಗಳಲ್ಲಿ ನಿಂತು ಮಂಗಳಾರತಿ ಎತ್ತುತ್ತಾ ಹೂವಿನ ಎಸಳುಗಳನ್ನು ಚೆಲ್ಲುತ್ತಿದ್ದಾರೆ. ಕಣ್ಣ ನೋಟದಿಂದ ದೂರವಾದ ರಥವನ್ನು ಮನೋ ನೇತ್ರದಿಂದ ನೋಡುತ್ತಾ ರಾಮನ ವಿಗ್ರಹವನ್ನು ಹೃದಯದಲ್ಲಿ ಚಿತ್ರಿಸಿಕೊಂಡು, ಜನಸಮೂಹವು ವಿಗ್ರಹದಂತೆ ಕದಲದೆ ನಿಂತಿತ್ತು. ಕೈಲಾಸ ಪರ್ವತ ಶಿಖರದಂಥ ವರ್ಧಮಾನವೆನ್ನುವ ದಶರಥ ಮಹಾರಾಜನ ದಿವ್ಯ ಭವನದೊಳಕ್ಕೆ ರಥವು ಪ್ರವೇಶಿಸಿತು. ಧನುರ್ಧಾರಿಗಳು ಕಾವಲು ಕಾಯುತ್ತಿದ್ದ ಮೂರು ಕಕ್ಷಗಳನ್ನು ರಥವು ದಾಟಿದ ಮೇಲೆ ರಾಮನು ರಥದಿಂದ ಇಳಿದನು. ಮಿಕ್ಕೆರಡು ಕಕ್ಷಗಳನ್ನು ಪಾದಚಾರಿಯಾಗಿ ದಾಟಿ, ತನ್ನ ಜೊತೆಯಲ್ಲಿ ಬರುತ್ತಿದ್ದ ಮಿತ್ರರನ್ನೂ ಲಕ್ಷ್ಮಣನನ್ನೂ ಅಲ್ಲಿಯೆ ನಿಲ್ಲುವಂತೆ ಹೇಳಿ, ಅಂತಃಪುರವನ್ನು

ಪ್ರವೇಶಿಸಿದನು. ಅಲ್ಲಿ ಏನು ನಡೆಯುವುದೆನ್ನುವುದು ರಾಮನಿಗೆ ಮೊದಲೇ ತಿಳಿದಿತ್ತು. ಆದರೂ ಸಾಮಾನ್ಯ ಮಾನವನಂತೆ ನಟಿಸುತ್ತಿದ್ದನು.

**ನೋಡಲಾರದ ದುಃಖ**: ಅಂತಃಪುರದಲ್ಲಿ ತಂದೆ ದಶರಥನು ಹಾಸಿಗೆಯ ಮೇಲೆ ಬಿದ್ದಿದ್ದನು. ಕೂದಲು ಕೆದರಿತ್ತು. ಹಿಂದಿನ ದಿನ ಧರಿಸಿದ್ದ ಬಟ್ಟೆಯಲ್ಲೇ ಹುಚ್ಚನಂತೆ ಕ್ರಮವಾದ ಮಾರ್ಗವನ್ನು ಬಿಟ್ಟು ಬಿದ್ದಿದ್ದನು. ರಾಮನು ಇದನ್ನು ನೋಡಿ ಆಶ್ಚರ್ಯದಿಂದ ಅವನ ಬಳಿ ಧಾವಿಸಿದನು. ಕೈಕೆಯಿ ಮಂಚದ ಪಕ್ಕದಲ್ಲಿ ನಿಂತಿದ್ದಳು. ದಶರಥನು ಕಳೆಗುಂದಿದವನಾಗಿ ವಿಲಪಿಸುತ್ತಿದ್ದನು. ರಾಮನನ್ನು ಕಂಡೊಡನೆ ಏಕಧಾರೆಯಾಗಿ ಕಣ್ಣೀರು ಸುರಿಸತೊಡಗಿದನು. ಏನೋ ಹೇಳಲು ಪ್ರಯತ್ನಿಸುತ್ತಿದ್ದರೂ ಬಾಯಲ್ಲಿ ಮಾತು ಹೊರಡಲಿಲ್ಲ. ತಂದೆಯ ಇಂಥ ಭಯಾನಕ ಸ್ಥಿತಿಯನ್ನು ರಾಮಚಂದ್ರನು ಇದಕ್ಕೆ ಮೊದಲು ನೋಡಿಯೇ ಇರಲಿಲ್ಲ. ತುಂಬಾ ಗಾಬರಿಯಾಗಿ, ತಂದೆಯ ಬಳಿ ಹೋಗಿ, ಪಾದಗಳನ್ನು ಹಿಡಿದು, "ನೀವು ಇಷ್ಟೊಂದು ದುಃಖಿಸಲು ಕಾರಣವೇನೆಂದು ತಿಳಿಸಿದರೆ, ಅದನ್ನು ತಕ್ಕ ರೀತಿಯಲ್ಲಿ ನಿವಾರಣೆ ಮಾಡಿ ನಿಮಗೆ ಸಂತೋಷ ಉಂಟುಮಾಡುತ್ತೇನೆ, ಜೀವವನ್ನಾದರೂ ಅರ್ಪಿಸಿ ನಿಮಗೆ ಆನಂದ ಉಂಟುಮಾಡುತ್ತೇನೆ, ಕಾರಣವೇನು ತಿಳಿಸಿ," ಎಂದು ಪ್ರಾರ್ಥಿಸಿದನು. ದಶರಥನ ಬಾಯಿಂದ, "ರಾಮಾ!" ಎಂದು ಒಂದೇ ಒಂದು ಮಾತು ಹೊರಟಿತು. ಗೋಳೋ ಎಂದು ಅಳಲಾರಂಭಿಸಿದನು; ಪ್ರಜ್ಞೆ ತಪ್ಪಿತು.

ರಾಮನು ಎಷ್ಟು ಸಮಾಧಾನ ಮಾಡಿದರೂ ಕ್ಷಣಕ್ಷಣಕ್ಕೂ ದಶರಥನ ದುಃಖ ಅಧಿಕವಾಯಿತೇ ವಿನಾ ಶಾಂತನಾಗಲಿಲ್ಲ. ಅದನ್ನು ನೋಡಿ ರಾಮನು ಧೈರ್ಯದಿಂದ, "ಅಪ್ಪಾ! ಏನಿದು? ನನ್ನಂಥ ಚಿಕ್ಕವರಿಗೆ ಧೈರ್ಯ ಹೇಳಬೇಕಾದ ನೀವು, ಹೀಗೆ ದುಃಖಿಸುವುದು ಸರಿಯಲ್ಲ. ಈ ಸಮಯದಲ್ಲಿ ಅಭಿನಂದಿಸಬೇಕಾದ ನೀವು ಹೀಗೆ ಘೋರವಾಗಿ ದುಃಖಿಸುವುದು ಸರಿಯೆ? ಎಷ್ಟೇ ಕೋಪದಿಂದಿರಲಿ, ನನ್ನನ್ನು ನೋಡಿದ ಕ್ಷಣ ಕೋಪ ಬಿಟ್ಟು, ಆನಂದವಾಗಿ, ಶಾಂತವಾಗಿ ನನ್ನನ್ನು ಹತ್ತಿರ ಕರೆದುಕೊಳ್ಳುತ್ತಿದ್ದಿರಲ್ಲವೆ? ಈ ದಿನ ಅದಕ್ಕೆ ವಿರುದ್ಧವಾಗಿ ನನ್ನನ್ನು ನೋಡುತ್ತಿದ್ದಂತೆ ದುಃಖ ಅಧಿಕವಾಗುತ್ತಿದೆಯಲ್ಲಾ? ಈ ವಿಚಿತ್ರಕ್ಕೆ ಕಾರಣವೇನೋ ತಿಳಿಸಿ ನನ್ನನ್ನು ಆನಂದಪಡಿಸುವುದಿಲ್ಲವೆ? ನಿಮ್ಮ ದುಃಖವು ನನ್ನನ್ನು ಮತ್ತಷ್ಟು ಚಿಂತೆಯಲ್ಲಿ ಮುಳುಗಿಸುತ್ತಿದೆ. ನನ್ನಿಂದೇನಾದರೂ ತಪ್ಪು ಸಂಭವಿಸಿತೇ? ನನ್ನ ತಪ್ಪನ್ನು ತಿಳಿಸಿದರೆ ತಿದ್ದಿಕೊಳ್ಳುತ್ತೇನೆ. ಇಲ್ಲವೆ, ನಾನೇನಾದರು ಮಾಡುವುದಿದೆಯೇ? ಹೇಳಿ, ತಪ್ಪದೆ ಮಾಡುತ್ತೇನೆ. ಚಿಂತೆ ಮಾಡದೆ, ಸಂದೇಹಪಡದೆ ಹೇಳಿದರೆ ನಾನು ಶಿರಸಾವಹಿಸುತ್ತೇನೆ. ಅಪ್ಪಾ! ನೀವು ಹೀಗೆ ಚಿಂತಿಸುವುದು ನಿಮಗೂ ನನಗೂ ರಾಜ್ಯಕ್ಕೂ ಒಳ್ಳೆಯದಲ್ಲ," ಎಂದು ಪ್ರಾರ್ಥಿಸಿದನು.

**ನನ್ನ ಬಾಧೆಯನ್ನು ನಿವಾರಿಸಿ:** ಕೈಕೆಯತ್ತ ತಿರುಗಿ ಕೈ ಜೋಡಿಸಿಕೊಂಡು, "ಅಮ್ಮಾ! ನಾನೇನಾದರೂ ಅಪರಾಧ ಮಾಡಿದೆನೆ? ತಂದೆಗೆ ಇಂಥ ದುಃಖವುಂಟು ಮಾಡಿದ ಪಾಪಿ ಯಾರು ತಿಳಿಸು. ನನ್ನನ್ನು ನೋಡಿದ ತಕ್ಷಣವೇ ಆಲಂಗಿಸಿಕೊಂಡು ಆದರಿಸುತ್ತಿದ್ದ ತಂದೆ, ಇಂದು ನನ್ನ ಮುಖವನ್ನೂ ನೋಡದಿರಲು ಏನು ಕಾರಣ? ಒಂದು ಮಾತನ್ನು ಆಡದೆ ಮುಖ ತಿರುಗಿಸಿಕೊಂಡಿದ್ದಾರೆ. ಬಹುಶಃ ನನ್ನಿಂದಲೇ ಅಪರಾಧವಾಗಿದ್ದರೆ ನಾನು ಎಂಥ ಶಿಕ್ಷೆಯನ್ನಾದರೂ ಅನುಭವಿಸುತ್ತೇನೆ. ನನ್ನ ತಂದೆಯು ಆನಂದವಾಗಿದ್ದರೆ ಅಷ್ಟೇ ಸಾಕು. ಅವರಿಗೆ ದೇಹದಲ್ಲೇನಾದರೂ ಅಸ್ವಸ್ಥತೆಯಾಗಿದೆಯೇ? ಇಲ್ಲವೆ, ಭರತ ಶತ್ರುಘ್ನರೇನಾದರೂ ದುಃಖವಾರ್ತೆ ಯನ್ನು ಕಳಿಸಿದ್ದಾರೆಯೆ? ಅವರೆಲ್ಲರೂ ಕ್ಷೇಮ ತಾನೆ? ತಾಯಿಯರಾದ ಕೌಸಲ್ಯಾ ಸುಮಿತ್ರೆಯರು ಕ್ಷೇಮ ತಾನೆ? ತಂದೆಯ ದುಃಖಕ್ಕೆ ಕಾರಣವೇನೋ ತಿಳಿಯದೆ ನಾನು ಬಾಧೆಪಡುತ್ತಿದ್ದೇನೆ. ಅವರನ್ನು ಸಂತೋಷಪಡಿಸಲು ನಾನು ಎಂಥ ಕಾರ್ಯವನ್ನಾದರೂ ಮಾಡುತ್ತೇನೆ. ತಂದೆಯ ಆಜ್ಞೆಯು ಏನೇ ಆದರೂ ಶಿರಸಾ ವಹಿಸುತ್ತೇನೆ. ಲೋಕದಲ್ಲಿ ಯಾರ ಜನ್ಮಕ್ಕೇ ಆಗಲಿ ತಂದೆಯೇ ಕಾರಣ. ಆದ್ದರಿಂದ ಯಾರಿಗೇ ಆಗಲಿ ತಂದೆಯೇ ದೈವ. ನನಗೆ ಅವರ ಆನಂದಕ್ಕಿಂತ ಬೇರೇನೂ ಇಲ್ಲ. ಏನು ನಡೆಯಿತೋ ದಯಮಾಡಿ ತಿಳಿಸು. ಅಮ್ಮಾ! ಸ್ವಾಭಿಮಾನದಿಂದ ಅವರನ್ನು ನೀನೇನಾದರೂ ಕಟುವಾಗಿ ಅಂದೆಯಾ? ಅಥವಾ ನನ್ನ ತಾಯಿಯೇನಾದರು ತಂದೆಯ ಮನಸ್ಸಿಗೆ ವಿರುದ್ಧವಾಗಿ ನಡೆದು ಬಾಧೆಯುಂಟುಮಾಡಿದಳೆ? ಕೌಸಲ್ಯ ಹಾಗೆಂದೂ ಮಾಡಳು. ಸುಮಿತ್ರೆಯು ಅಂಥದನ್ನು ಮೊದಲೇ ಮಾಡಳು. ಒಂದು ವೇಳೆ ಹಾಗೆ ಮಾಡಿದರೂ ನನ್ನ ತಂದೆಯು ಇಷ್ಟು ದುಃಖಿಸುವುದಿಲ್ಲ. ಇದಕ್ಕೇನೋ ಪ್ರಬಲ ಕಾರಣ ಇಲ್ಲದಿಲ್ಲ. ನನ್ನ ತಂದೆಯು ಹೇಳಲು ಹಿಂಜರಿದ ವಿಷಯವನ್ನು ನೀನಾದರೂ ಹೇಳಿ ನನ್ನ ಬಾಧೆಯನ್ನು ನಿವಾರಿಸು," ಎಂದು ವಿನಯದಿಂದ ಪ್ರಾರ್ಥಿಸಿದ ರಾಮನನ್ನು ನೋಡಿ,

ಕೈಕೆಯು, ದಯಾದಾಕ್ಷಿಣ್ಯವನ್ನು ಬಿಟ್ಟು, ಪತಿಯು ಇನ್ನಷ್ಟು ಬಾಧೆ ಪಡುವರೇನೋ ಎನ್ನುವುದನ್ನೂ ಚಿಂತಿಸದೆ, ಹಿಂದು ಮುಂದು ಯೋಚಿಸದೆ, ಪ್ರಮಾದವಾಗುವು ದೇನೋ ಎನ್ನುವುದನ್ನೂ ನಿರೀಕ್ಷಿಸದೆ, ಹೇಳಬಹುದೇ ಬೇಡವೇ ಎನ್ನುವುದನ್ನೂ ವಿಚಾರ ಮಾಡದೆ, ಪ್ರೇಮವನ್ನು ಪಕ್ಕಕ್ಕೆ ತಳ್ಳಿ, ಅಭಿಮಾನವನ್ನು ಹೊರಹಾಕಿ, "ರಾಮಾ! ಕೇಳು! ಹಿಂದೆ ದೇವಾಸುರ ಯುದ್ಧದಲ್ಲಿ ನಿಮ್ಮ ತಂದೆಯು ಬಾಣೋಪ ಹತನಾಗಿ ಬಾಧೆಪಡುತ್ತಿದ್ದ ಸಮಯದಲ್ಲಿ ನಾನು ಅವರನ್ನು ಎರಡು ಬಾರಿ ರಕ್ಷಿಸಿದೆ. ಆಗ ನನ್ನ ತ್ಯಾಗಕ್ಕೆ ಮೆಚ್ಚಿ ನಿಮ್ಮ ತಂದೆಯು ಎರಡು ವರಗಳನ್ನು ಕೇಳು, ಕೊಡುತ್ತೇನೆ ಎಂದರು. ಅವರು ಕ್ಷೇಮವಾಗಿರುವುದೊಂದೇ ಆಗ ನನ್ನ

ಲಕ್ಷ್ಯದಲ್ಲಿದ್ದುದರಿಂದ, 'ಈಗೇನೂ ನನಗೆ ಅವಶ್ಯಕವಿಲ್ಲ, ಅವಶ್ಯಕತೆ ಬಂದಾಗ ಕೇಳುತ್ತೇನೆ,' ಎಂದು ನಾನು ಹೇಳಿದೆ. ಅದಕ್ಕೆ ನಿಮ್ಮ ತಂದೆಯು, 'ಹಾಗಾದರೆ ಸರಿ. ನಿನಗಿಷ್ಟವಾದುದನ್ನು ಕೇಳಿಕೊಳ್ಳಬಹುದು, ತಪ್ಪದೆ ನಡೆಸಿಕೊಡುತ್ತೇನೆ, ಇದಕ್ಕೆ ಕಾಲ ಮತ್ತು ವಿಷಯದ ನಿರ್ಬಂಧವಿಲ್ಲ. ನನ್ನ ಜೀವಿತ ಕಾಲದಲ್ಲಿ ಯಾವ ಸಂದರ್ಭದಲ್ಲೇ ಆಗಲಿ, ಯಾವ ವಿಷಯಕ್ಕೆ ಸಂಬಂಧಿಸಿದಂತೆಯೇ ಆಗಲಿ ನೀನು ಕೇಳಿದುದನ್ನು ನಡೆಸಿಕೊಡುತ್ತೇನೆ,' ಎಂದು ಮಾತು ಕೊಟ್ಟರು. ಇಕ್ಷ್ವಾಕು ವಂಶದವರು ಆಡಿದ ಮಾತಿಗೆ ತಪ್ಪರೆನ್ನುವುದು ನಿನಗೆ ಗೊತ್ತಿಲ್ಲವೆ?

**ಇಷ್ಟು ಸಣ್ಣ ವಿಷಯ**: ಅಂಥ ವಿಶ್ವಾಸದಿಂದ ನಾನು ಈಗ ಆ ಎರಡು ವರ ಗಳನ್ನು ಕೋರಿದೆ. ನನ್ನ ಪ್ರೇಮ ಪುತ್ರನಾದ ಭರತನಿಗೆ ಪಟ್ಟ ಕಟ್ಟಿ ಎನ್ನುವುದು ಒಂದು. ನಿನ್ನನ್ನು ಹದಿನಾಲ್ಕು ವರುಷ ದಂಡಕಾರಣ್ಯಕ್ಕೆ ಕಳಿಸಿ ಎನ್ನುವುದು ಇನ್ನೊಂದು. ಈ ಎರಡು ವರಗಳನ್ನು ಕೋರಿದೆ. ಇಷ್ಟಕ್ಕೆ ನಿಮ್ಮ ತಂದೆ ಇಷ್ಟೊಂದು ದುಃಖಪಡುತ್ತಿದ್ದಾರೆ. ಅಷ್ಟೇಕೆ, ನಾನು ಈ ಸಂಕಲ್ಪವನ್ನು ಬಿಡುವುದಿಲ್ಲ. ನಿಮ್ಮ ತಂದೆಯು ಸತ್ಯವ್ರತರೆಂದು, ನೀನು ಸತ್ಯವ್ರತನೆಂದು ತೋರಿಸಿಕೊಡಬೇಕೆಂಬ ಮನಸ್ಸಿದ್ದರೆ, ನೀನೀಗಲೇ ಜಟಾಜಿನಗಳನ್ನು ಧರಿಸಿ ದಂಡಕಾರಣ್ಯಕ್ಕೆ ಹೋಗಬೇಕು, ಅಲ್ಲಿ ಹದಿನಾಲ್ಕು ವರ್ಷ ವಾಸಮಾಡಬೇಕು. ನಿಮ್ಮ ತಂದೆಗೆ ನೀನೆಂದರೆ ಪ್ರಾಣ ವಾದ್ದರಿಂದ ನಿನ್ನನ್ನು ಕಳಿಸಲು ಇಷ್ಟಪಡದೆ, ನೀನು ಏನೆಂದುಕೊಳ್ಳುವಿಯೊ ಎಂದು ನಿನಗೆ ಹೇಳಲಾಗದೆ ದುಃಖಿಸುತ್ತಿದ್ದಾರೆ. ಅಷ್ಟೇ ವಿನಾ ಬೇರೆ ಯಾವ ಪ್ರಳಯವೂ ಸಂಭವಿಸಿಲ್ಲ.

ಇಷ್ಟು ಸಣ್ಣ ವಿಷಯಕ್ಕೆ ಬೆಟ್ಟದಂಥ ಪ್ರಮಾದವಾದಂತೆ ದುಃಖಿಸುವುದರಲ್ಲಿ ಅರ್ಥ ವಿಲ್ಲ. ರಾಮಾ! ಅಷ್ಟೇ ಅಲ್ಲ, ತಂದೆಯು ಕೊಟ್ಟ ವಾಗ್ದಾನವನ್ನು ಅವನು ನೆರವೇರಿಸದೆ ಹೋದರೂ ತಂದೆಯ ಪ್ರತಿಬಿಂಬವಾಗಿ ಹುಟ್ಟಿದ ಮಗನು ಅದನ್ನು ನೆರವೇರಿಸಿದರೆ ತಂದೆಗೆ ಮೋಕ್ಷ. ಹಾಗಲ್ಲದೆ, ತಾನೂ ಮಾಡದೆ ಮಗನೂ ಅದನ್ನು ನೆರವೇರಿಸದಿದ್ದರೆ ನಿಮ್ಮ ತಂದೆಯು ಅಧೋಗತಿಯ ಪಾಲಾಗುವನು. ತಂದೆಯ ಋಣವನ್ನು ತೀರಿಸುವುದೇ ಮಗನ ಕರ್ತವ್ಯವೆನ್ನುವುದು ನಿನಗೆ ತಿಳಿಯದ್ದೇನಲ್ಲ," ಎಂದು ನಿರ್ದಾಕ್ಷಿಣ್ಯವಾಗಿ ಹೇಳುತ್ತಿದ್ದ ಮಾತುಗಳಿಗೆ ರಾಮನು ವಿಚಲಿತನಾಗದೆ ನಸುನಗುತ್ತಾ, "ಇಷ್ಟು ಮಾತ್ರಕ್ಕೇ ತಂದೆಯವರು ಇಷ್ಟು ದುಃಖಿಸುವುದು ನಿಜವಾ ಗಿಯೂ ನ್ಯಾಯವಲ್ಲ," ಎಂದು, ಆನಂದವದನನಾಗಿ ಅವಳ ಸಲಹೆಯನ್ನು ಅಂಗೀಕರಿಸಿದವನಂತೆ ತಲೆಯಾಡಿಸಿದನು. ಈ ಮಾತನ್ನು ಕೇಳುತ್ತಿದ್ದ ದಶರಥನ ಹೃದಯವನ್ನು ಕರಕರ ಎಂದು ಗರಗಸದಲ್ಲಿ ಕೊಯ್ದಂತಾಯಿತು. ಅವನು ತಲ್ಲಣಿಸಿ

ಹೋದನು. ರಾಮನು ಕೈಕೆಯ ಕಡೆ ತಿರುಗಿ, "ಅಮ್ಮಾ! ನೀನು ಅಂದುಕೊಂಡಂತೇ ಆಗುವುದು. ನಮ್ಮ ತಂದೆಯು ಕೊಟ್ಟ ಮಾತನ್ನು ನಾನು ಶಿರಸಾವಹಿಸುತ್ತೇನೆ.

ಆದರೆ ತಂದೆಯವರು ಯಾವಾಗಲೂ ಮಾಡುತ್ತಿದ್ದಂತೆ ಒಂದು ಸಾರಿ ಹತ್ತಿರ ಕರೆದುಕೊಂಡು ಆಶೀರ್ವದಿಸಿದರೆ ಸಾಕು. ಅದಕ್ಕೂ ಅರ್ಹನಲ್ಲವೆಂದರೆ, ಅದನ್ನೂ ನಾನು ಆನಂದದಿಂದ ಒಪ್ಪಿಕೊಳ್ಳುತ್ತೇನೆ. ನನ್ನ ತಂದೆಯು ಯಾವಾಗಲೂ ನನ್ನ ಮೇಲ್ಮೆಯನ್ನು ಕೋರುವವರೇ. ಅವರು ಮಹಾನುಭಾವರು. ಅವರು ನನಗೆ ತಂದೆ ಮಾತ್ರವೇ ಅಲ್ಲ, ಒಳ್ಳೆಯದನ್ನು ಬೋಧಿಸುವ ಆಚಾರ್ಯರೂ ಸಹ! ಅಂಥ ಜನಕನೂ ಆಚಾರ್ಯನೂ ಆದ ಅವರನ್ನು ಸಂತೋಷಪಡಿಸುವುದಕ್ಕಿಂತ ನನಗೆ ಬೇರೆ ಕರ್ತವ್ಯವೇನಿದೆ? ಅದೇ ನನ್ನ ಮುಖ್ಯ ಧರ್ಮ.

**ತಂದೆ ಹೇಳಿದರೂ ತಾಯಿ ಹೇಳಿದರೂ**: ಭರತನಿಗೆ ರಾಜ್ಯಾಭಿಷೇಕ ಮಾಡುವುದರಲ್ಲಿ ನಾನೆಷ್ಟೋ ಆನಂದಿಸುತ್ತೇನೆ. ಹದಿನಾಲ್ಕು ವರ್ಷಗಳ ಕಾಲ ವನವಾಸ ಮಾಡುವುದು ಮಹದಾನಂದವೇ! ಹದಿನಾಲ್ಕು ವರ್ಷಗಳಷ್ಟೇ ಅಲ್ಲ, ತಂದೆಯು ಇಷ್ಟಪಟ್ಟರೆ ಇಡೀ ಜೀವಿತವನ್ನೇ ಅರಣ್ಯದಲ್ಲಿ ಕಳೆಯಲು ಕೂಡ ಸಿದ್ಧ. ಆದರೆ, ತಂದೆಯವರು ಈ ಎರಡು ವಿಷಯಗಳನ್ನು ನನಗೆ ತಿಳಿಸಲು ಏಕೆ ಅನುಮಾನಿಸುತ್ತಿದ್ದಾರೆನ್ನುವುದೇ ನನಗೆ ಬಾಧೆಯಾಗಿದೆ.

ಅವರು ಹೇಳಿದರೆ ನಾನು ಮಾಡುವುದಿಲ್ಲವೆ? ಈ ರಾಮನು ಪಿತೃವಾಕ್ಯ ಪರಿಪಾಲಕನೇ ವಿನಾ ಪಿತೃ ದ್ರೋಹಿಯಲ್ಲ. ತಂದೆಯಿಂದ ಬಂದ ಕಾಯವನ್ನು ತಂದೆಗೇ ಅರ್ಪಿಸುವುದಕ್ಕಿಂತ ಬೇರೆ ಕೃತಜ್ಞತೆಯುಂಟೆ? ಹೃದಯಪೂರ್ವಕವಾದ ಆನಂದದಿಂದ ಅರ್ಪಿಸುತ್ತೇನೆ. ನಾನು ಒಬ್ಬರಿಂದ ಹೇಳಿಸಿಕೊಳ್ಳುವವನಲ್ಲ. ಭರತನಿಗೆ ರಾಜ್ಯಾಭಿಷೇಕ ಮಾಡಬೇಕೆಂದು ನೀನಾದರೂ ನನಗೆ ಒಮ್ಮೆಯೂ ತಿಳಿಸಲಿಲ್ಲವೇಕೆ? ನನಗೂ ನನ್ನ ತಮ್ಮನಿಗೂ ಯಾವ ಭೇದವೂ ಇಲ್ಲ. ಅಂಥ ಭೇದರಹಿತ ಹೃದಯಿಯೊಂದಿಗೆ ನೀನೇಕೆ ಭೇದ ಮಾಡುತ್ತೀ? ಇದು ನಿಮ್ಮ ತಂದೆಯ ಆಜ್ಞೆ ಎಂದೇಕೆ ಹೇಳುತ್ತೀ? ನಿನ್ನ ಆಜ್ಞೆ ಎಂದರೆ ನಾನು ಮೀರುವನೆ? ಮೀರೆನು.

ನೀನು ಹೇಳಿದರೂ ಸರಿ, ತಂದೆ ಹೇಳಿದರೂ ಸರಿ, ಆನಂದದಿಂದ ಮಾಡುತ್ತೇನೆ. ಇಂದೇ ಅಯೋಧ್ಯೆಯನ್ನು ಬಿಟ್ಟು ಅರಣ್ಯಕ್ಕೆ ಹೊರಡುತ್ತೇನೆ. ಅಮ್ಮಾ! ಭರತನನ್ನು ತಾತನ ಮನೆಯಿಂದ ಬರಮಾಡಿಕೊಳ್ಳಲು ಇಂದೇ ದೂತರನ್ನು ಕಳಿಸಿ ಅದಕ್ಕೆ ತಕ್ಕ ಏರ್ಪಾಟುಗಳನ್ನು ಮಾಡಿಸುವುದು ಉತ್ತಮ, ಆಲಸ್ಯವೇಕೆ? ನನ್ನ ಅರಣ್ಯವಾಸದೊಂದಿಗೆ ಭರತನ ಪಟ್ಟಾಭಿಷೇಕವನ್ನೂ ನಡೆಸಿದರೆ ತಂದೆಗೆ ಆ ಶ್ರಮ ತಪ್ಪುವುದು.

ನಿನಗೂ ಸಂತೃಪ್ತಿಯಾಗುವುದು. ಆಮೇಲೆ ಪರಿಸ್ಥಿತಿ ಹೇಗಿರುವುದೊ ಯಾರು ಹೇಳಬಲ್ಲರು," ಎಂದನು. ಅದನ್ನು ಕೇಳಿ ಕೈಕೆಗೆ ಒಂದು ಕಡೆ ಆನಂದ ಇನ್ನೊಂದು ಕಡೆ ಸಂಶಯ. ಭರತನು ಬಂದ ಮೇಲೆ ಏನು ಬದಲಾವಣೆಯಾಗುವುದೋ, ಆದ್ದರಿಂದ, ಭರತನು ಬರುವುದರೊಳಗೇ ಅರಣ್ಯಕ್ಕೆ ಕಳಿಸುವುದು ಒಳ್ಳೆಯದೆಂದು ಆಲೋಚಿಸಿ, "ರಾಮಾ, ನೀನು ಹೇಳಿದಂತೆ ಭರತನನ್ನು ಅಯೋಧ್ಯೆಗೆ ಕರೆಸುವ ಏರ್ಪಾಟು ಮಾಡಬಹುದು. ಆದರೆ, ಭರತನು ಬರುವವರೆಗೂ ನೀನು ಅಯೋಧ್ಯೆ ಯಲ್ಲಿರುವ ಅವಶ್ಯಕತೆ ಇಲ್ಲ.

**ಮಾತೃ ವಾಕ್ಯ**: ನೀನು ಹೇಗಾದರೂ ವನವಾಸ ಮಾಡುವ ನಿಶ್ಚಯ ಮಾಡಿ ಕೊಂಡಿದ್ದೀಯಾದ್ದರಿಂದ, ಕಾಲಯಾಪನ ಏತಕ್ಕೆ? ಹೊರಡಲು ಎಷ್ಟು ಆಲಸ್ಯ ಮಾಡಿದರೆ, ತಿರುಗಿ ಬರಲು ಅಷ್ಟು ಆಲಸ್ಯವಾಗುವುದು. ಈಗಲೇ ಸಿದ್ಧವಾಗುವು ದೊಳ್ಳೆಯದು. ಇದನ್ನೆಲ್ಲಾ ನಿನಗೆ ತಾವೇ ಹೇಳಲು ನಿಮ್ಮ ತಂದೆಯು ಸ್ವಲ್ಪ ಹಿಂಜ ರಿಯುತ್ತಿದ್ದಾರೆ. ಹೇಳಬೇಕೆನ್ನುವ ಭಾವನೆ ಹೃದಯದಲ್ಲಿದ್ದರೂ ಪ್ರೇಮದ ಪುತ್ರನಿಗೆ ಇಂಥ ಆಜ್ಞೆ ಮಾಡುವುದು ಹೇಗೆ ಎನ್ನುವ ಅಂಜಿಕೆ ಅವರನ್ನು ಸ್ವಲ್ಪ ಹಿಂಸಿಸುತ್ತಿದೆ. ತಮ್ಮ ವಾಗ್ದಾನವನ್ನು ನಿನಗೆ ಹೇಳಲು ಮನಸ್ಸಿಲ್ಲದೆ ಇಷ್ಟು ದುಃಖಿಸುತ್ತಿದ್ದಾರೇ ವಿನಾ ಅವರಿಗೆ ಬೇರೇನು ದುಃಖವಿಲ್ಲ. ನೀನು ಅಯೋಧ್ಯೆಯನ್ನು ಎಷ್ಟು ಬೇಗ ಬಿಟ್ಟರೆ ನಿನ್ನ ತಂದೆಯ ದುಃಖವು ಅಷ್ಟು ಬೇಗ ಕಡಿಮೆಯಾಗುವುದು. ನೀನು ಅಯೋಧ್ಯೆ ಬಿಡುವವರೆಗೂ ಅವರೂ ಆಹಾರ ಪಾನೀಯಗಳನ್ನು ಸೇವಿಸರು. ಸ್ನಾನಾದಿಗಳನ್ನೂ ಸಹ ಮಾಡರು. ಆದ್ದರಿಂದ ನಿಮ್ಮ ತಂದೆಯ ದುಃಖ ಎಷ್ಟು ಬೇಗ ಸಮಾಧಾನವಾಗಬೇಕೆಂದು ಬಯಸುವಿಯೋ ಅಷ್ಟು ಬೇಗ ನೀನು ಅಯೋಧ್ಯೆ ಯನ್ನು ಬಿಡುವುದೊಳ್ಳೆಯದು," ಎಂದು ನಿದಾಕ್ಷಿಣ್ಯವಾಗಿ ಹೇಳಿದಳು.

ಅದನ್ನು ಕೇಳಿ ದಶರಥನು ಸಹಿಸಲಾರದ ದುಃಖದಿಂದ ಮಾತು ಹೊರಡದ ಸ್ಥಿತಿಯಲ್ಲಿ, "ಛೀ, ಛೀ, ದುರ್ಮಾರ್ಗಿ," ಎಂದನು. "ರಾಮಾ! ರಾಮಾ!" ಎನ್ನುತ್ತಾ ತಿರುಗಿ ಮೂರ್ಛೆ ಹೋದನು. ರಾಮನು ದಶರಥನ ತಲೆಯನ್ನು ತೊಡೆಯ ಮೇಲಿಟ್ಟುಕೊಂಡು ತಂದೆಯ ಮೈಸವರುತ್ತಾ, ಕೈಕೆಯನ್ನುದ್ದೇಶಿಸಿ, "ಅಮ್ಮಾ! ನಾನು ಅರ್ಥಪರನಲ್ಲ. ಜನರನ್ನು ನನ್ನ ಪರವಾಗಿಟ್ಟುಕೊಂಡು ರಾಜ್ಯವಾಳಬೇಕೆನ್ನುವ ಅಪೇಕ್ಷೆ ನನಗಿಲ್ಲ. ನನ್ನದು ಋಷಿಯಂತಿರಬೇಕೆಂಬ ಬಯಕೆ! ಕೇವಲ ಧರ್ಮವನ್ನು ಸ್ಥಾಪಿಸಬೇಕೆಂಬ ಆಕಾಂಕ್ಷೆ! ಪೂಜ್ಯಪಾದರಾದ ತಂದೆಯವರನ್ನು ಸಂತೋಷಪಡಿಸಬೇಕೆನ್ನುವ ದೀಕ್ಷೆ! ಇಷ್ಟೇ ಹೊರತು, ಬೇರಾವ ಆಸೆಯೂ ನನಗಿಲ್ಲ. ಈ ಮೂರಕ್ಕಾಗಿ ಯಾವ ಕೆಲಸವನ್ನಾದರೂ ಮಾಡುತ್ತೇನೆ; ಪ್ರಾಣವನ್ನಾದರೂ ಅರ್ಪಿಸುತ್ತೇನೆ.

**ಶಿರಸಾವಹಿಸಿ**: ಪುತ್ರನಾದವನಿಗೆ ಪಿತೃ ಸೇವೆ, ಪಿತೃವಾಕ್ಯ ಪರಿಪಾಲನೆಗಿಂತ ಮಹತ್ತರವಾದ ಧರ್ಮ ಮತ್ತೊಂದಿಲ್ಲ. ಅಮ್ಮಾ! ತಂದೆ ಅವರು ನನಗೆ ಬಾಯಲ್ಲಿ ಹೇಳದಿದ್ದರೂ ಅವರು ಆಜ್ಞಾಪಿಸಿರುವರೆಂದು ನೀನೇ ಹೇಳುತ್ತಿರುವೆಯಲ್ಲವೆ? ಅಷ್ಟೇ ಸಾಕು. ಅಲ್ಲದೆ, ಅವರ ಸಮಕ್ಷದಲ್ಲಿ ನೀನು ಆಡುತ್ತಿರುವ ಮಾತುಗಳನ್ನು ಅವರು ಕೇಳುತ್ತಿದ್ದರೂ ಏನೂ ಹೇಳದಿರುವುದರಿಂದ, ಇದು ಅವರ ಮಾತೆಂದೇ ಅರ್ಥವಾಗುತ್ತಿದೆ. ಆದ್ದರಿಂದ ನಾನು ಶಿರಸಾವಹಿಸಿ ಅರಣ್ಯಕ್ಕೆ ಹೋಗುತ್ತಿದ್ದೇನೆ. ಅಮ್ಮಾ! ಈ ನನ್ನ ಒಂದು ಸಣ್ಣ ಇಚ್ಛೆಯನ್ನು ನೆರವೇರಿಸುತ್ತೀಯೆಂದು ಆಶಿಸುತ್ತೇನೆ. ಏನೆಂದರೆ, ಭರತನು ರಾಜ್ಯಪಾಲನೆ ಮಾಡುತ್ತಾ ತಂದೆಯ ಆಜ್ಞೆಯನ್ನು ಶಿರಸಾ ವಹಿಸಿ ಅವರನ್ನು ಆನಂದಪಡಿಸುವಂತೆ ನೋಡಿಕೊಳ್ಳುವ ಬಾಧ್ಯತೆ ನಿನ್ನದು. ನನಗಾಗಲೀ ಭರತನಿಗಾಗಲೀ ಯಾವಾಗಲೂ ತಂದೆಯನ್ನು ಆನಂದಪಡಿಸುವುದಕ್ಕಿಂತ, ತಂದೆಯನ್ನು ತೃಪ್ತಿಪಡಿಸುವುದಕ್ಕಿಂತ ಬೇರೊಂದು ವ್ರತವಿಲ್ಲ. ಪಿತೃ ಸೇವೆಯು ಪುತ್ರನಿಗೆ ಸನಾತನ ಧರ್ಮ," ಎಂದು ರಾಮನು ನಮಸ್ಕರಿಸಿದಾಗ, ದಶರಥನ ಹೃದಯ ಚೂರು ಚೂರಾದಂತಾಯಿತು.

**ಲಕ್ಷ್ಮಣನೂ**: ರಾಮನ ಧರ್ಮವಚನ, ಶಾಂತಸ್ವಭಾವಗಳನ್ನು ಕೇಳಿ, ಅವನ ಮೇಲಿದ್ದ ಪ್ರೇಮವು ಉಕ್ಕಿ, ದುಃಖವು ಉಮ್ಮಳಿಸಿ, ರಾಮನು ಇನ್ನು ಅಯೋಧ್ಯೆಯಲ್ಲಿ ಇರನೆನ್ನುವುದು ಖಚಿತವಾಗಿ, ದಶರಥನು ಮಾನಾಪಮಾನದ ಪ್ರಜ್ಞೆ ಇಲ್ಲದೆ, "ಅಯ್ಯೋ!" ಎಂದು ಅರಚಿ ನೆಲಕ್ಕೆ ಬಿದ್ದನು. ಆ ಶಬ್ದವನ್ನು ಅಂತಃಪುರದ ಹೆಂಗಸರು ಕೇಳಿ, ಆಶ್ಚರ್ಯ ದುಃಖಗಳಿಂದ ಅಳತೊಡಗಿದರು. ಇನ್ನು ಆಲಸ್ಯ ಮಾಡುವುದು ಒಳ್ಳೆಯದಲ್ಲವೆಂದು ತಿಳಿದ ರಾಮನು ತಂದೆಯ ಪಾದಗಳಿಗೆ ನಮಸ್ಕಾರ ಮಾಡಿ, ಅಂತಃಪುರದಿಂದ ಹೊರಟನು. ಬಾಗಿಲ ಬಳಿ ನಿಂತು ಒಳಗೆ ನಡೆಯುತ್ತಿದ್ದ ಸಂಭಾಷಣೆಯನ್ನು ಕೇಳುತ್ತಿದ್ದ ಲಕ್ಷ್ಮಣನು ಕಣ್ಣೀರು ಸುರಿಸುತ್ತಾ ಕೈಕೆಯ ಮೇಲೆ ಉಗ್ರನಾಗಿ, ತಂದೆಯ ಮೇಲೆ ಕ್ರೋಧ ಕಾರುತ್ತಾ ಏನೂ ಹೇಳದ ಸ್ಥಿತಿಯಲ್ಲಿ, ರಾಮನು ಹೊರಗೆ ಬರುತ್ತಲೇ ಕೈಕಟ್ಟಿಕೊಂಡು, ಕಣ್ಣೆತ್ತಿ ನೋಡದೆ ತಲೆ ಬಗ್ಗಿಸಿಕೊಂಡು ಅವನನ್ನು ಅನುಸರಿಸಿ ಹೊರಟನು. ಆದರೆ, ರಾಜ್ಯ ಹೋದರೂ ಅರಣ್ಯ ಪ್ರಾಪ್ತವಾದರೂ ಕಗ್ಗತ್ತಲು ಕವಿದರೂ ಚಂದ್ರನ ಕಾಂತಿಯು ಮುಸುಕದೆ ಇರುವಂತೆ, ರಾಮನ ಮುಖವಿಕಾಸವು ಸ್ವಲ್ಪವೂ ಮಾಸದೆ, ಮಾನಾಪಮಾನಗಳನ್ನು ಲೆಕ್ಕಿಸದೆ ಪರಮ ಯೋಗೀಂದ್ರನಂತೆ ಚಿತ್ತವಿಕಾರವಿಲ್ಲದೆ ನಡೆದು ಬರುತ್ತಿದ್ದ ಅವನನ್ನು ನೋಡಿದರೆ, ಅಂತಃಪುರದಲ್ಲಿ ಏನೂ ಅಶಾಂತಿ ಸಂಭವಿಸಿಯೇ ಇಲ್ಲವೇನೋ ಅನಿಸುವಂತಿತ್ತು.

**ಸುಮಂತನ ಊಹೆ**: ಸುಮಂತನು ಒಳಗೇನೋ ವಿರುದ್ಧವಾದ ಸಂಗತಿ ನಡೆದಿದೆಯೆಂದು ಅನುಮಾನಿಸಿದನು. ಅನುಮಾನಿಸುವುದೇನು, ನಡೆದಿದೆಯೆಂದೇ ನಿಶ್ಚಯಿಸಿಕೊಂಡನು. ಲಕ್ಷ್ಮಣನನ್ನು ನೋಡಿ ಸುಮಂತನ ಎದೆ ಝಲ್ಲೆಂದಿತು. ಅದಕ್ಕೆ ಸರಿಯಾಗಿ ರಾಮನು ಹೊರಗೆ ಬಂದೊಡನೆ ಶ್ವೇತಛತ್ರ ಹಿಡಿದಾಗ ಅದು ತನಗೆ ಬೇಡವೆಂದೂ ಚಾಮರ ಬೀಸಕೂಡದೆಂದೂ ಬೆಳ್ಳಿಯ ರಥದ ಅರ್ಹತೆ ತನಗಿಲ್ಲವೆಂದೂ ರಾಮನು ಹೇಳಿದ್ದನ್ನು ಕೇಳಿ ಸುಮಂತನು ತಲ್ಲಣಿಸಿಹೋದನು. ತನ್ನ ಊಹೆಯು ಸಂಪೂರ್ಣ ಸತ್ಯವೆಂದುಕೊಂಡನು. ರಾಮನು ಸ್ವಜನರೊಂದಿಗಾಗಲಿ ಅಥವಾ ಪುರಜನರೊಂದಿಗಾಗಲಿ ಮಾತಾಡದೆ ಹೋಗುತ್ತಿದ್ದನು. ತನಗೆ ದುಃಖವು ಇಲ್ಲದಿದ್ದರೂ ವಿಷಯ ತಿಳಿದರೆ ಇತರರು ದುಃಖಪಡುವರೆನ್ನುವ ಭಾವನೆಯಿಂದ ತಾನು ಸತ್ಯವನ್ನೇ ಹೇಳಬೇಕಾಗುವುದೆಂದೂ ಅದರಿಂದ ಇತರರನ್ನು ಬಾಧೆಪಡಿಸಿದ ಹಾಗಾಗುವುದೆಂದೂ ಅವನು ಯಾರೊಂದಿಗೂ ಮಾತನಾಡುತ್ತಿಲ್ಲವೆನ್ನುವುದು ವ್ಯಕ್ತವಾಗುತ್ತಿತ್ತು.

ಅವನು ನೇರವಾಗಿ ಸೀತಾಂತಃಪುರಕ್ಕೆ ಹೋಗದೆ, ಕೌಸಲ್ಯಾ ಅಂತಃಪುರಕ್ಕೆ ಕಾಲ್ನಡಿಗೆಯಲ್ಲಿ ಹೊರಟನು. ಕೌಸಲ್ಯಾದೇವಿಯ ಮಂದಿರಕ್ಕೆ ರಾಮ ಲಕ್ಷ್ಮಣರು ಬರುತ್ತಿರುವರೆನ್ನುವ ವಾರ್ತೆಯು ಕೌಸಲ್ಯಾಂತಃಪುರದ ವನಿತೆಯರಿಗೆ ತಿಳಿದು, ಬಹು ಸಂತೋಷದಿಂದ ಮಾತನಾಡಿಕೊಳ್ಳುತ್ತಾ ಮಂಗಳಾರತಿಯನ್ನು ಸಿದ್ಧಪಡಿಸಿಟ್ಟುಕೊಂಡು ಕಾದಿದ್ದರು. ಅಂತಃಪುರದ ದ್ವಾರದ ಬಳಿ ಪರಮ ಪುಣ್ಯರೂ ವೃದ್ಧರೂ ಆದ ದ್ವಾರಪಾಲಕರು ರಾಮನು ಬರುತ್ತಿರುವುದನ್ನು ನೋಡಿ ಥಟ್ಟನೆದ್ದು, "ವಿಜಯೀಭವ! ವಿಜಯೀಭವ!" ಎಂದು ತಲೆಬಾಗಿ ನಮಸ್ಕರಿಸಿದರು. ರಾಮನು ಆ ಮಂದಿರದ ಎರಡನೆ ಕಕ್ಷಕ್ಕೆ ಹೋಗುತ್ತಲೇ ಬ್ರಾಹ್ಮಣರು ಆಶೀರ್ವದಿಸಿದರು. ಮೂರನೆ ಕಕ್ಷವನ್ನು ಪ್ರವೇಶಿಸುತ್ತಲೇ ದ್ವಾರಪಾಲಕರಾದ ಯುವಕರು, ರಾಮ ಲಕ್ಷ್ಮಣರನ್ನು ನೋಡಿ ಅತ್ಯಾನಂದದಿಂದ ಒಳಗೆ ಓಡಿ ಹೋಗಿ, ರಾಮ ಲಕ್ಷ್ಮಣರು ಬರುತ್ತಿದ್ದಾರೆಂದು ಕೌಸಲ್ಯಾದೇವಿಗೆ ತಿಳಿಸಿದರು.

ಅಲ್ಲಿಂದ ಮುಂದೆ, ಕೌಸಲ್ಯಾದೇವಿಯ ಪೂಜಾಮಂದಿರದವರೆಗೂ ಸುಮಂಗಲಿಯರು ಎರಡು ಪಕ್ಕಗಳಲ್ಲೂ ಜ್ಯೋತಿಯನ್ನಿಟ್ಟುಕೊಂಡು ಆರತಿಯೆತ್ತಲು ಅತ್ಯಂತ ರಮಣೀಯನಾದ ರಾಮನ ಬರುವಿಕೆಗಾಗಿ ಎದುರು ನೋಡುತ್ತಿದ್ದರು. ರಾಮನನ್ನು ನೋಡುತ್ತಲೇ ಮಂಗಳಾರತಿ ಎತ್ತಿದರು. ಕೌಸಲ್ಯಾದೇವಿಯು ರಾತ್ರಿಯೆಲ್ಲಾ ಜಾಗರಣೆಯನ್ನು ಮಾಡಿ, ಬೆಳಗಿನ ಜಾವ ಪೂಜೆ ವ್ರತಗಳನ್ನು ಪ್ರಾರಂಭಿಸಿ, ವೃದ್ಧ ಬ್ರಾಹ್ಮಣರಿಂದ ಹೋಮಾದಿಗಳನ್ನು ಮಾಡಿಸುತ್ತಿದ್ದಳು. ಆ ತಾಯಿಯು ತನ್ನ ಮಗನ ಅಭಿಷೇಕ ಮಹೋತ್ಸವವನ್ನು ಕಣ್ಣಾರೆ ನೋಡುತ್ತಿದ್ದೇನೆನ್ನುವ ಪರಮಾ

ನಂದದಿಂದ, ಅನೇಕ ಬಗೆಯ ಪೂಜೆಗಳನ್ನು, ದಾನ ಧರ್ಮಾದಿಗಳನ್ನು ಮಾಡುತ್ತಾ ಆಹಾರ ನಿದ್ರೆಗಳನ್ನು ಬಿಟ್ಟು, ಆನಂದಾಹಾರದಿಂದಲೇ ತೃಪ್ತಳಾಗಿದ್ದಳು.

ರಾಮನು ಬರುತ್ತಿದ್ದಂತೆ ಅವನೆದುರಿಗೆ ಓಡೋಡಿ ಬಂದು, ಅವನ ಶಿರಸ್ಸನ್ನು ಮುದ್ದಾಡಿ, ಕೈ ಹಿಡಿದುಕೊಂಡು ಹೋದಳು. ನಡೆದಿದ್ದ ವೈಪರೀತ್ಯವು ಅವಳಿಗೇನೂ ತಿಳಿಯದು. ಮುಗ್ಧಳೂ ನಿರಪರಾಧಿಯೂ ಆದ ಕೌಸಲ್ಯೆಯು ನಿರ್ಮಲ ಪ್ರೇಮ ದಿಂದ, ಬೆಳ್ಳನೆಯ ಸೀರೆಯುಟ್ಟು, ವ್ರತಕಂಕಣವನ್ನು ಕೈಗೆ ಕಟ್ಟಿಕೊಂಡು, ಅತ್ಯಂತ ಉಲ್ಲಾಸದಿಂದಿದ್ದಳು. ಅವಳಿಗೆ ರಾಮನ ಮುಖವು ಪರಮ ತೇಜೋಮಯವಾಗಿ ಕಾಣಿಸಿತು. ತನ್ನ ಆನಂದವನ್ನು ಬಚ್ಚಿಟ್ಟುಕೊಳ್ಳಲಾಗದೆ, "ಮಗೂ! ನಿನ್ನ ಪೂರ್ವಿಕ ರೆಲ್ಲರೂ ರಾಜರ್ಷಿಗಳು, ಪರಮ ಧಾರ್ಮಿಕರು, ಮಹಾತ್ಮರು. ಅವರೆಲ್ಲರಂತೆ ನೀನೂ ಕೂಡ ದೀರ್ಘಾಯುಷ್ಮಂತನಾಗಬೇಕು. ನಿನ್ನ ಕೀರ್ತಿಯು ದಿಗ್ದಿಗಂತಗಳ ಲ್ಲೆಲ್ಲಾ ವ್ಯಾಪಿಸಬೇಕು. ಮಗೂ! ನಿನ್ನ ವಂಶೋಚಿತ ಧರ್ಮವನ್ನು ಯಾವಾಗಲೂ ಎಂಥ ಸಂದರ್ಭದಲ್ಲೂ ಮರೆಯದೆ, ತಪ್ಪದೆ ಆಚರಿಸಬೇಕು," ಎಂದು ಆಶೀರ್ವದಿ ಸಿದಳು.

**ಮಾತೃ ಬೋಧೆ**: ಶಿರಸ್ಸಿನ ಮೇಲೆ ಅಕ್ಷತೆ ಹಾಕಿ, ಬಂಗಾರದ ಪೀಠ ಹಾಕಿ, "ಮಗೂ! ರಾತ್ರಿಯೆಲ್ಲಾ ನೀನೂ ಕೂಡ ದೀಕ್ಷೆಯಲ್ಲಿದ್ದು, ಉಪವಾಸ ವ್ರತದಲ್ಲಿದ್ದು ಬಳಲಿದ್ದೀಯೆ. ಕುಳಿತು ಸ್ವಲ್ಪ ಫಲಹಾರ ಮಾಡುವುದೊಳ್ಳೆಯದು," ಎಂದು ಹೇಳಿ, ಸಿದ್ಧವಾಗಿಟ್ಟಿದ್ದ ಬಂಗಾರದ ತಟ್ಟೆಯನ್ನು ಕೈಗೆತ್ತಿಕೊಂಡಳು. ತಾಯಿಯು ಪಡುತ್ತಿದ್ದ ಆನಂದವನ್ನೂ ಅವಳ ಪ್ರೇಮವನ್ನೂ ಗಮನಿಸಿ, ಆಕೆಗೆ ನಡೆದ ಸಂಗತಿಯನ್ನು ಹೇಗೆ ಹೇಳುವುದೆಂದು ಯೋಚಿಸುತ್ತಾ ತಾಯಿಯ ಸಂತೃಪ್ತಿಗಾಗಿ, ಆ ಪೀಠವನ್ನೂ ತಟ್ಟೆಯನ್ನೂ ಕೈಯಿಂದ ಮುಟ್ಟಿ, "ಅಮ್ಮಾ! ಈಗಿನಿಂದ ನಾನಿನ್ನು ಸುವರ್ಣವನ್ನು ಮುಟ್ಟುವಂತಿಲ್ಲ. ಬಂಗಾರದ ಪೀಠದಲ್ಲಿ ಕೂರುವಂತಿಲ್ಲ. ನೀನು ಆಶೀರ್ವದಿಸಿದರೆ ನಾನಿನ್ನು ನಮಸ್ಕರಿಸಿ ದಂಡಕಾರಣ್ಯಕ್ಕೆ ಹೊರಡುತ್ತೇನೆ. ನಿನ್ನ ಅನುಜ್ಞೆಗಾಗಿ ಇಲ್ಲಿಗೆ ಬಂದೆ," ಎಂದನು. ಕೌಸಲ್ಯೆಗೆ ಅರ್ಥವಾಗದೆ, "ಮಗೂ! ಇನ್ನು ಕೆಲವೇ ನಿಮಿಷ ಗಳಲ್ಲಿ ಪಟ್ಟಾಭಿಷೇಕವು ನಡೆಯಲಿರುವುದು. ನೀನೀಗ ದಂಡಕಾರಣ್ಯದ ಮಾತು ಆಡುತ್ತಿರುವುದು ನನಗೇನು ಅರ್ಥವಾಗುತ್ತಿಲ್ಲ," ಎಂದು, ತನ್ನ ಕುಮಾರನು ತಮಾಷೆ ಮಾಡುತ್ತಿದ್ದಾನೆಂದು ಭಾವಿಸಿ, "ಮಗೂ! ಈ ಶುಭ ಸಮಯದಲ್ಲಿ ತಮಾಷೆಗಾದರೂ ಇಂಥ ಅಶುಭದ ಮಾತು ಆಡಬಾರದು, ನನ್ನ ಚಿನ್ನಾ!" ಎನ್ನುತ್ತಾ ಕ್ಷೀರಾನ್ನವನ್ನು ಅವನ ಬಾಯಲ್ಲಿಟ್ಟಳು.

ಅವಳ ಆ ಪ್ರೇಮವನ್ನೂ ಆನಂದವನ್ನೂ ನೋಡಿ ಲಕ್ಷ್ಮಣನ ಕಣ್ಣುಗಳಲ್ಲಿ ಅವನಿಗೆ ತಿಳಿಯದಂತೇ ಕಣ್ಣೀರಿನ ಕೋಡಿ ಹರಿಯಿತು. ಅದನ್ನು ನೋಡಿದ ಕೌಸಲ್ಯೆಯು ಆಶ್ಚರ್ಯದಿಂದ, "ಮಗೂ! ಲಕ್ಷ್ಮಣಾ! ಏನಿದು ಇಷ್ಟು ದುಃಖ ನಿನಗೆ?" ಎಂದು ಅವನನ್ನು ಹತ್ತಿರ ಸೆಳೆದುಕೊಳ್ಳುತ್ತಲೇ ಲಕ್ಷ್ಮಣನು ತಡೆಯಲಾರದೆ ಗಟ್ಟಿಯಾಗಿ ಅಳಲಾರಂಭಿಸಿದನು. ಕೌಸಲ್ಯೆಗೆ ಏನೂ ಅರ್ಥವಾಗಲಿಲ್ಲ. ರಾಮನ ಮಾತು, ಲಕ್ಷ್ಮಣನ ದುಃಖ ಅವಳನ್ನು ದಿಗ್ಭ್ರಾಂತಿಗೊಳಿಸಿತು. ರಾಮನು ತಾಯಿಯ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡು, "ಅಮ್ಮಾ! ನೀನು ದುಃಖಿಸುವಿದಿಲ್ಲವೆಂದು ಮಾತು ಕೊಟ್ಟರೆ ನಾನೊಂದು ಮಾತು ಹೇಳುತ್ತೇನೆ. ಅದು ನನಗೂ ನಿನಗೂ ಇಡೀ ವಂಶಕ್ಕೂ ಸತ್ಕೀರ್ತಿ ತರುವಂಥದಾದ್ದರಿಂದ, ನೀನು ಏನೂ ಚಿಂತೆ ಮಾಡದೆ ಪ್ರೀತಿಯಿಂದ ಅಂಗೀಕರಿಸಬೇಕು. ತಂದೆಯ ಮಾತನ್ನು ನಾನು ಶಿರಸಾವಹಿಸು ವುದು ನಿನಗೂ ಪರಮ ಸಂತೋಷವೇ ಅಲ್ಲವೆ? ತಂದೆಯವರು ಭರತನಿಗೆ ಪಟ್ಟಾಭಿಷೇಕ ಮಾಡಲು ನಿಶ್ಚಯಿಸಿದ್ದಾರೆ. ನನ್ನನ್ನು ಹದಿನಾಲ್ಕು ವರ್ಷ ಕಾಲ ದಂಡಕಾರಣ್ಯಕ್ಕೆ ತಾಪಸ ವೇಷದಲ್ಲಿ ಕಳಿಸಲು ನಿಶ್ಚಯಿಸಿದ್ದಾರೆ. ಅವರ ಆಜ್ಞೆಯನ್ನು ಅಂಗೀಕರಿಸಿ ನಿನ್ನ ಆಜ್ಞೆಗಾಗಿ ಇಲ್ಲಿಗೆ ಬಂದೆ," ಎಂದು ಹೇಳಿದನು.

**ಕೌಸಲ್ಯೆಯ ಶೋಕ**: ಅದನ್ನು ಕೇಳುತ್ತಿದ್ದಂತೆಯೇ, "ರಾಮಾ!" ಎನ್ನುತ್ತಾ ಕೌಸಲ್ಯೆಯು ನೆಲಕ್ಕುರುಳಿದಳು. "ಏನು ಈ ವೈಪರೀತ್ಯ? ನನ್ನ ಸುಕೋಮಲ ಪುತ್ರನನ್ನು ಕಾರಡವಿಗೆ ಕಳಿಸುವುದೇ? ನನ್ನ ರಾಮನು ಅಂಥ ಅಪಚಾರ ಏನು ಮಾಡಿದ? ಇದು ನಿಜವೇ? ಅಥವಾ ರಾತ್ರಿಯೆಲ್ಲಾ ಎಚ್ಚರವಾಗಿದ್ದು ಉಪವಾಸವಿದ್ದ ದ್ದರಿಂದ ಪಿತ್ತ ಕೆರಳಿ ನನಗೆ ಭ್ರಮೆಯೇ?" ಎಂದು ಚಿಂತಿಸಿದಳು. ಕೈಕೆಯ ಮಂದಿರದಲ್ಲಿ ನಡೆದ ವಿಷಯವು ಕ್ಷಣದಲ್ಲಿ ಅಂತಃಪುರಕ್ಕೆಲ್ಲಾ ತಿಳಿದು, ದಾಸಿಯರು ರೋದಿಸತೊಡಗಿದರು. ಎಲ್ಲ ಕಡೆಯಿಂದಲೂ ಕಣ್ಣೀರು ಸುರಿಸುತ್ತಾ, "ರಾಮ ಚಂದ್ರಾ! ನಮ್ಮನ್ನು ಬಿಟ್ಟು ಹೋಗಬೇಡ," ಎಂದು ಕೌಸಲ್ಯಾ ಮಂದಿರಕ್ಕೆ ಬರುತ್ತಿದ್ದ ಗುಂಪುಗಳನ್ನು ನೋಡಿ ಕೌಸಲ್ಯೆಗೆ ಏನೂ ಅರ್ಥವಾಗದೆ, ಆಶ್ಚರ್ಯ, ಭಯ, ದುಃಖದಿಂದ ಉನ್ಮತ್ತಳಾಗಿ, ಮೈಮೇಲೆ ಸ್ವಾಧೀನವಿಲ್ಲದೆ, ಮಾತಾಡಲಾರದೆ ವಿಷಯವೇನೆಂದು ತಿಳಿಯುವ ಸಲುವಾಗಿ, ರಾಮನನ್ನು ಬರಸೆಳೆದು, ತಲೆ ಸವರಿ, "ಮಗೂ! ಏನಿದು ಈ ವಾರ್ತೆ? ವಿಶದವಾಗಿ ನಡೆದುದನ್ನೆಲ್ಲಾ ಹೇಳಿ ನನ್ನ ಬಾಧೆಯನ್ನು ನಿವಾರಿಸು," ಎಂದು ಕೇಳಿದಳು. ರಾಮನು, "ತಂದೆಯವರು ಎಂದೋ ಕೈಕೆಗಿತ್ತ ಎರಡು ವರಗಳನ್ನು ಇಂದು ಕೈಕೆಯು ಕೇಳಿದಳಂತೆ," ಎಂದು ಹೇಳಲಾರಂಭಿಸಿದನು.

"ಅದರಲ್ಲಿ ಒಂದನೆಯ ವರವಾಗಿ ತನ್ನ ಕುಮಾರನಾದ ಭರತನಿಗೆ ಪಟ್ಟಾಭಿಷೇಕ ಮಾಡಬೇಕೆಂದೂ ಎರಡನೆಯದಾಗಿ ನನ್ನನ್ನು ಹದಿನಾಲ್ಕು ವರ್ಷ ದಂಡಕಾರಣ್ಯಕ್ಕೆ ಕಳಿಸಬೇಕೆಂದೂ ಕೇಳಿದಳಂತೆ. ಇದು ನಡೆದ ವಿಷಯ," ಎಂದು ಹೇಳುತ್ತಲೇ ಕೌಸಲ್ಯೆಯು, "ಕೈಕೆಯಿ ಅಂಥ ವರಗಳನ್ನು ಕೇಳಿದಳೇ? ನೀನೆಂದರೆ ಕೈಕೆಗೆ ಅಮಿತವಾದ ಪ್ರೇಮವಲ್ಲವೆ? ಅವಳೆಂದಿಗೂ ಅಂಥ ವರಗಳನ್ನು ಕೇಳುವವಳಲ್ಲ ವೆಂದೇ ನನ್ನ ಭಾವನೆ. ಹೋಗಲಿ, ಕೇಳಿದಳೆನ್ನೋಣ! ರಾಜನನ್ನು ಪರೀಕ್ಷಿಸುವು ದಕ್ಕಾಗಿ ಕೇಳಿರಬಹುದು! ಅಷ್ಟಕ್ಕೇ ಇಷ್ಟು ಕಂಗಾಲಾಗುವುದೇ? ಒಂದು ವೇಳೆ ಅವಳು ಕೇಳಿದರೂ ನಿನ್ನ ತಂದೆಯು ನಿನ್ನನ್ನು ಕಳಿಸಲು ಒಪ್ಪಿದರೆ? ನಾನು ನಂಬುವುದಿಲ್ಲ. ಒಂದು ಕ್ಷಣವೂ ನಿನ್ನನ್ನು ನೋಡದೆ ಇರಲಾರದ ನಿನ್ನ ತಂದೆಯು ಹದಿನಾಲ್ಕು ವರ್ಷ ನಿನ್ನನ್ನು ಅರಣ್ಯದಲ್ಲಿಡುವರೇ? ಏನೋ ಇದೆಲ್ಲ ನನ್ನನ್ನು ದಿಗ್ಭ್ರಾಂತಿಗೊಳಿಸುತ್ತಿದೆ," ಎಂದು, ನಡೆದ ಸತ್ಯ ಸಂಗತಿಯನ್ನು ನಂಬಲಾರದೆ ಹೋದಳು.

**ಅಯೋಮಯ**: ರಾಮನು ಅವಳ ಕೈಗಳನ್ನು ಹಿಡಿದುಕೊಂಡು, "ಅಮ್ಮಾ, ನನ್ನ ಮಾತನ್ನು ನಂಬು. ನನ್ನ ತಂದೆಯವರು ನಡೆಸಿಕೊಡುತ್ತೇನೆಂದು ಅವಳಿಗೆ ಮಾತುಕೊಟ್ಟ ಮೇಲೆ ಅವಳು ಈ ವರಗಳನ್ನು ಕೇಳಿದಳು. ತಂದೆಯವರು ಕೊಟ್ಟ ಮಾತನ್ನು ಹಿಂತೆಗೆದುಕೊಳ್ಳಲಾರದೆ, ಆಡಿದ ಮಾತಿಗೆ ತಪ್ಪಲಾರದೆ, ನನ್ನನ್ನು ಬಿಡುವುದಕ್ಕೂ ಅರಣ್ಯಕ್ಕೆ ಕಳಿಸುವುದಕ್ಕೂ ಮನಸ್ಸೊಪ್ಪದೆ ಬಹು ಬಾಧೆಪಡುತ್ತಿದ್ದಾರೆ. ಅವರ ಬಾಧೆಯನ್ನು ನೋಡಲಾರದಾದೆ. ಈಗ ನಾನು ಅಲ್ಲಿಂದಲೇ ಬರುತ್ತಿದ್ದೇನೆ. ಅವರು ಪ್ರಜ್ಞಾವಸ್ಥೆಯಲ್ಲಿಲ್ಲ. ಘೋರವಾದ ಬಾಧೆ ಅನುಭವಿಸುತ್ತಿದ್ದಾರೆ.

**ಹೊರಡುವುದು ತಪ್ಪದು**: ಇದು ಪರಮ ಸತ್ಯ. ತಮಾಷೆಗಾಗಿ ನಿನ್ನನ್ನು ಇಷ್ಟು ಬಾಧೆಗೆ ಗುರಿಪಡಿಸಲು ನಾನಂಥ ಮೂರ್ಖನಲ್ಲ. ಪಿತೃವಾಕ್ಯವನ್ನು ನಡೆಸುವುದಕ್ಕಾಗಿ ನಾನು ಅರಣ್ಯಕ್ಕೆ ಹೋಗುವುದು ತಪ್ಪದು. ತಂದೆಯ ಆಜ್ಞೆಯನ್ನು ಪಡೆದೇ ಬಂದಿದ್ದೇನೆ. ಇನ್ನು ನಿನ್ನ ಆಜ್ಞೆಯು ಬೇಕು," ಎಂದು ಪಾದಗಳಿಗೆ ನಮಸ್ಕರಿಸಿದ ರಾಮನನ್ನು ನೋಡಿ ಕೌಸಲ್ಯೆಯು, "ರಾಮಾ! ಏನು ಈ ವಿಕಾರ ಭಾವ! ಎಂಥ ಕಿರಾತರಾದವರು ಇಂಥವನ್ನು ಕೋರಿಯಾರೆ? ಕೆಲವು ನಿಮಿಷ ಗಳಲ್ಲೇ ಪಟ್ಟಾಭಿಷೇಕವಾಗಲಿದ್ದ ನಿನ್ನನ್ನು ಘೋರವಾದ ಅಡವಿಗೆ ಕಳಿಸುವುದು ಮಾನವ ಮಾತ್ರರು ಯೋಚಿಸಲಾಗದ ವಿಷಯವಲ್ಲವೆ? ಬದುಕಿರುವಷ್ಟು ಕಾಲವೂ ನನಗೆ ಬಾಧೆಯೇ? ಎಷ್ಟೋ ವ್ರತಗಳನ್ನು ಮಾಡಿ, ಕಡೆಗೆ ಮಗನನ್ನು ಪಡೆದೆನಲ್ಲಾ ಎಂದು ಅನುಭವಿಸಿದ ಬಾಧೆಗಳನ್ನೆಲ್ಲಾ ಮರೆತು, ನನ್ನ ಮುದ್ದು ಮಗನನ್ನು ನೋಡಿ ಆನಂದಿಸುತ್ತಿದ್ದೆನಲ್ಲಾ! ಬೇರೆ ಯಾವ ಸುಖವನ್ನೂ ನಾನು ಆಶಿಸಲಿಲ್ಲ.

ನನ್ನ ಮಗನು ನನ್ನೊಂದಿಗಿದ್ದರೆ ಸಾಕೆಂದುಕೊಂಡಿದ್ದೆ. ಅದಕ್ಕೆ ಕೂಡ ಪ್ರಾಪ್ತಿ ಇಲ್ಲದವಳಾದೆನಲ್ಲಾ! ಕಾರಡವಿಗೆ ಕಳಿಸುವುದಕ್ಕೇನು ನಾನು ಮಗನನ್ನು ಪಡೆದದ್ದು? ಯಾವ ತಾಯಿಯೇ ಆಗಲಿ ಮಗನನ್ನು ಕಾರಡವಿಗೆ ಕಳಿಸಲು ಒಪ್ಪುವಳೆ?

**ಕನಸು ಕಲ್ಲಾಯಿತೆ**: ನಾನೇನು ಪಾಪ ಮಾಡಿದೆ? ಯಾವ ಜನ್ಮದಲ್ಲಿ ತಾಯಿ ಮಕ್ಕಳನ್ನು ಅಗಲಿಸಿದ್ದೆನೋ ಏನೋ? ನಿನಗೆ ಉಪನಯನವಾದ ದಿನದಿಂದ ನನ್ನ ಮಗನು ಯಾವಾಗ ಯುವರಾಜನಾಗುವನೋ ಎಂದು ಕ್ಷಣಕ್ಷಣವೂ ಉತ್ಸಾಹ ದಿಂದ ಆ ದಿನವನ್ನು ಎದುರು ನೋಡುತ್ತಿದ್ದ ನನ್ನ ಕನಸು ಸುಳ್ಳಾಯಿತೇ? ನನ್ನ ಆಶೆಗಳು ತಲೆಕೆಳಗಾದುವೇ? ನಾನು ನಿನಗಾಗಿ ಮಾಡಿದ, ಪೂಜೆಗಳು, ವ್ರತಗಳು, ಹೋಮಗಳು ವ್ಯರ್ಥವಾದುವೆ? ನಾನೆಂಥ ಪಾಪಿಯಾದೆ! ನಿಜಕ್ಕೂ ಈ ವಾರ್ತೆ ಯನ್ನು ಕೇಳಿದ ನನ್ನ ಎದೆಯು ಒಡೆಯದೆ ಏಕಿದೆ? ನಾನಿನ್ನೂ ಎಷ್ಟು ದುಃಖಗಳ ಭಾಗಿಯಗಬೇಕೋ? ನನಗೆ ಸಾವು ಬರಲಿಲ್ಲ. ಇಂಥ ದುಃಖ ವಾರ್ತೆಯನ್ನು ಕೇಳಿಯೂ ನನ್ನ ಹೃದಯ ಬಡಿದುಕೊಳ್ಳುತ್ತಿದೆ. ಇಷ್ಟಕ್ಕೂ ಕಾಲ ಬಂದರೇನೇ ಸಾವು ಬರುವುದು. ನನ್ನನ್ನು ಆ ಯಮನೂ ಬಿಟ್ಟು ಹೋಗುತ್ತಿದ್ದಾನೇನೋ! ಯಮಲೋಕಕ್ಕೂ ಹೋಗಲು ನನಗೆ ಅರ್ಹತೆಯಿಲ್ಲ. ಹೇ ರಾಮಾ! ಎಂಥ ಗತಿ ಬಂತು!" ಎಂದು ಕೆಳಗೆ ಬಿದ್ದು, ಹೊರಳಾಡುತ್ತಾ ಎದೆ ಬಡಿದುಕೊಳ್ಳುತ್ತಾ ಗೋಳಾಡುತ್ತಿದ್ದ ಕೌಸಲ್ಯೆಯನ್ನು ರಾಮನು ನೋಡಲಾರದೆ ಹೋದನು. ಸುತ್ತಲಿದ್ದ ದಾಸಿಯರ ಗೋಳು ಅವನ ಕಿವಿಗಳನ್ನು ಕಿವುಡು ಮಾಡಿತು. ಯಾರೊಂದಿಗೂ ಅವನು ತುಟಿ ತೆರೆದು ಮಾತಾಡಲಿಲ್ಲ. ತಾಯಿಯನ್ನು ಸಮಾಧಾನ ಪಡಿಸುತ್ತಾ ತಲೆ ಸವರುತ್ತಾ ಅವಳ ಬಟ್ಟೆಗೆ ಅಂಟಿಕೊಂಡಿದ್ದ ನೆಲದ ಧೂಳನ್ನು ಕೊಡವುತ್ತಾ ಸಮುದ್ರದಲ್ಲಿ ಹೂತುಕೊಂಡಿರುವ ದೊಡ್ಡ ಬಂಡೆಯೊಂದು ಅಲೆಗಳ ಹೊಡೆತಕ್ಕೆ ಕದಲದೆ, ತತ್ತರಿಸದೆ ಇರುವಂತೆ, ರಾಮನು ಶೋಕಕ್ಕೂ ಆನಂದಕ್ಕೂ ಅತೀತನಾಗಿ ದ್ದನು. ಪಟ್ಟಾಭಿಷೇಕಕ್ಕೆ ಎಂಥ ತೇಜಸ್ಸಿನಿಂದ ಉತ್ಸಾಹದಿಂದ ಸಿದ್ಧನಾಗಿದ್ದನೋ ಅರಣ್ಯವಾಸಕ್ಕೂ ಅಷ್ಟೇ ಉತ್ಸಾಹದಿಂದ, ತೇಜಸ್ಸಿನಿಂದ ಸಿದ್ಧನಾಗಿದ್ದನು. ಕೌಸಲ್ಯೆಗೂ ರಾಮನು ಮಹಾ ದೀಕ್ಷಾಪರನೆನ್ನುವುದು ಗೊತ್ತು. ಅವನು ಆಡಿದ ಮಾತಿಗೆ ತಪ್ಪನೆಂದೂ ತಂದೆಯ ಆಜ್ಞೆಯ ಗೆರೆ ದಾಟನೆಂದೂ ಅವಳಿಗೆ ಗೊತ್ತು. ತಾನು ಇನ್ನೆಷ್ಟು ಗೋಳಿಟ್ಟರೂ ರಾಮನು ಹಿಂದಕ್ಕೆ ಹೆಜ್ಜೆ ಇಡನೆಂದೂ ಅರಣ್ಯಕ್ಕೆ ತಪ್ಪದೆ ಹೋಗಿಯೇ ತೀರುವನೆಂದೂ ಸ್ಪಷ್ಟವಾಗಿ ಅವಳಿಗೆ ತಿಳಿದಿತ್ತು.

**ಎಲ್ಲವೂ ನಮ್ಮ ಒಳ್ಳೆಯದಕ್ಕೆ**: ಎಂತಲೇ, ರಾಮನನ್ನು ಅಡ್ಡಿಪಡಿಸಲು ಏನೂ ಪ್ರಯತ್ನಿಸದೆ ಮನಸ್ಸನ್ನು ಗಟ್ಟಿಮಾಡಿಕೊಂಡು, "ಮಗೂ! ನಮ್ಮ ಹಣೆಬರಹ ಹೀಗಿರುವಾಗ ಒಬ್ಬರನ್ನಂದು ಪ್ರಯೋಜನವಿಲ್ಲ. ಎಲ್ಲಾ ನಮ್ಮ ಒಳ್ಳೆಯದಕ್ಕೇ! ದೈವ

ನಿರ್ಣಯವನ್ನು ಯಾರೂ ಅಲ್ಲವೆನ್ನರು. ನನಗೆ ಎಂದೂ ಈ ಅಯೋಧ್ಯೆಯಲ್ಲಿ, ಈ ಅಂತಃಪುರದಲ್ಲಿ ಸುಖವಿಲ್ಲ. ನನ್ನ ಕುಮಾರನು ಇರುವಲ್ಲೇ ನನ್ನ ಸುಖವಿದೆಯಾದ್ದರಿಂದ ನಾನೂ ನಿನ್ನೊಂದಿಗೆ ಬರುತ್ತೇನೆ. ಕರೆದುಕೊಂಡು ಹೋಗು," ಎಂದು ಏಳಲು ಪ್ರಯತ್ನಿಸಿದಳು. ದಾಸಿಯು ಅವಳನ್ನು ಹಿಡಿದು ಮೈಗೊರಗಿಸಿಕೊಂಡು ಸಮಾಧಾನಪಡಿಸುತ್ತಾ ಕೂರಿಸಿದಳು.

**ಒಂದು ಹೆಂಗಸಿನ ಮಾತು**: ಕೌಸಲ್ಯೆಯ ಮಾತನ್ನು ಕೇಳುತ್ತಾ ಅವಳ ಬಾಧೆಯನ್ನು ನೋಡುತ್ತಿದ್ದ ಲಕ್ಷ್ಮಣನು ತನ್ನ ಮನಸ್ಸಿನ ಭಾವನೆಗಳನ್ನು ಅದುಮಿಟ್ಟುಕೊಳ್ಳಲಾಗದೆ, ಉಗ್ರನಾಗಿ, ಕೈಕಟ್ಟಿಕೊಂಡು, ಕೌಸಲ್ಯಾದೇವಿಯನ್ನು ನೋಡುತ್ತಾ, "ಓ ಪೂಜ್ಯಳೇ! ಒಬ್ಬ ಹೆಂಗಸಿನ ಮಾತಿಗೆ ಕಟ್ಟುಬಿದ್ದು ರಾಮನು ರಾಜ್ಯವನ್ನು ತ್ಯಜಿಸಿ, ಅಡವಿ ಪಾಲಾಗುವುದನ್ನು ನಾನು ಒಪ್ಪೆನು, ಸಹಿಸೆನು. ತಂದೆಯವರು ವೃದ್ಧರಾದ್ದರಿಂದ ಕೈಕೆಯ ಪ್ರೇರೇಪಣೆಗೆ ದಾಸರಾಗಿ, ಮನ್ಮಥ ಪರವಶರಾಗಿ, ಹಿಂದು ಮುಂದು ಯೋಚಿಸದೆ ಏನು ಬೇಕಾದರೂ ಆಜ್ಞಾಪಿಸಬಹುದು. ಆ ಆಜ್ಞೆಗಳನ್ನೆಲ್ಲಾ ನಾವು ಒಪ್ಪಲಾಗದು. ನಿತ್ಯಾನಿತ್ಯ ಪರಿಜ್ಞಾನವಿಲ್ಲದ ಸ್ಥಿತಿಯಲ್ಲಿರುವ ರಾಜನು ರಾಜನಾಗಲಾರ. ಅಂಥವರ ಆಜ್ಞೆಯು ಆಜ್ಞೆಯಾಗಲಾರದು. ಅಲ್ಲದಿದ್ದರೆ, ರಾಜ್ಯದಲ್ಲೂ ಉಳಿಸದೆ, ಅಡವಿಗೆ ಹೋಗಬೇಕಾದಂಥ ಮಹಾಪರಾಧವನ್ನು ರಾಮನು ಮಾಡಿದನೆ?

ರಾಮನಿಗೆ ಶತ್ರುಗಳಾಗಲೀ ಅಪರಾಧಗಳನ್ನು ಮಾಡಿ ಶಿಕ್ಷೆಯನ್ನು ಅನುಭವಿಸುತ್ತಿರುವ ಕಿರಾತರಾಗಲೀ ಯಾರೂ ಇಲ್ಲ. ಅಂಥವರೂ ಸಹಿತ ರಾಮನಲ್ಲಿ ದೋಷಾರೋಪಣೆ ಮಾಡರು! ಯಾರೇ ಆಗಲಿ, ರಾಮನಲ್ಲಿ ಏನೊಂದು ದೋಷವನ್ನಾಗಲಿ ಕಂಡದ್ದುಂಟೆ? ಏನನ್ನಾದರೂ ರಾಮನ ಮೇಲೆ ಆಪಾದಿಸಿದ್ದುಂಟೆ? ಅಂಥ ನಿರಪರಾಧಿಯನ್ನು, ನಿರ್ಮಲ ಚಿತ್ತನನ್ನು, ಪವಿತ್ರ ಪುರುಷನನ್ನು ಅಡವಿಗಟ್ಟುವುದಕ್ಕೆ ಯಾವ ರಾಜನಿಗೂ ಅಧಿಕಾರವಿಲ್ಲ. ರಾಮನು ಋಜುವರ್ತನೆಯವನು, ಜಿತೇಂದ್ರಿಯನು. ಎಂಥ ಶತ್ರುವನ್ನಾದರೂ ಆದರಿಸುವವನು. ಅಂಥ ಸುಪುತ್ರನನ್ನು ಯಾವ ತಂದೆಯಾಗಲೀ ಅಡವಿಗಟ್ಟುವನೆ? ಅದರಲ್ಲಿಯೂ ಮಹಾ ಧಾರ್ಮಿಕನೂ ಪವಿತ್ರ ವೀರನೂ ಸರ್ವಧರ್ಮ ಪ್ರವರ್ತಕನೂ ಆದ ರಾಜನು ಹೀಗೆ ಆಜ್ಞಾಪಿಸುವನೆ? ಇದನ್ನು ನೋಡಿದರೆ ದಶರಥನಿಗೆ ಮತಿಭ್ರಮಣೆಯಾಗಿರಬೇಕು. ಇಲ್ಲವೆ ಮನ್ಮಥ ಪರವಶನಾಗಿರಬೇಕು.

ಈ ಎರಡು ಸ್ಥಿತಿಯಲ್ಲಿರುವವರ ಆಜ್ಞೆಯು ಪರಿಪಾಲನೆಗೆ ಯೋಗ್ಯವಾಗದು. ಹುಚ್ಚನಂತೆ, ಏನೂ ತಿಳಿಯದ ಶಿಶುವಿನಂತೆ ಪ್ರವರ್ತಿಸುತ್ತಿರುವ ರಾಜನ ಮಾತನ್ನು

ಮನ್ನಿಸುವ ಅಗತ್ಯವಿಲ್ಲ. ರಾಜನೀತಿಯನ್ನು ಮರೆತು, ಲೋಕರೀತಿಯನ್ನು ಬಿಟ್ಟು, ಪುತ್ರವಾತ್ಸಲ್ಯಕ್ಕೆ ಸ್ವಸ್ತಿ ಹೇಳಿ, ಉನ್ಮತ್ತನಾಗಿ, ಚಿತ್ತವನ್ನು ಸ್ವೇಚ್ಛೆಯಾಗಿ ಬಿಟ್ಟು ಸಂಚರಿಸುವ ದಶರಥನ ಆಜ್ಞೆಯನ್ನು ಆಜ್ಞೆಯೆಂದು ಭಾವಿಸುವುದನ್ನು ನಾನು ಅಂಗೀಕರಿಸೆನು," ಎನ್ನುತ್ತಾ, ರಾಮನ ಕಡೆ ತಿರುಗಿ, ಕೈಕಟ್ಟಿಕೊಂಡು, "ರಾಮಾ! ನನ್ನನ್ನು ಕ್ಷಮಿಸು. ಈ ವಿಷಯವು ಇತರರಿಗೆ ತಿಳಿಯುವ ಮೊದಲೇ ನೀನು ರಾಜ್ಯವನ್ನು ಸ್ವಾಧೀನಮಾಡಿಕೊ. ನಾನು ಧನುರ್ಧಾರಿಯಾಗಿ ನಿನ್ನ ಹಿಂದೆ ಇರುತ್ತೇನೆ. ನನ್ನ ಧನುಸ್ಸು ಇರುವುದು ಪೂಜೆಗಾಗಿ ಅಲ್ಲ. ಅಯೋಧ್ಯಾ ನಗರದಲ್ಲಿ ನಿನ್ನನ್ನು ಎದುರಿಸುವವರನ್ನು ದಂಡಿಸುವ ಸಲುವಾಗಿದೆ, ಈ ಧನುಸ್ಸು. ಹಾಗೆ ನನ್ನನ್ನು ಎದುರಿಸುವವರು ನಮ್ಮ ಅಯೋಧ್ಯೆಯಲ್ಲಿ ಮಾತ್ರವಲ್ಲ, ಎಲ್ಲೂ ಇಲ್ಲ. ಒಂದು ವೇಳೆ ಇಲ್ಲಿ ನಿನ್ನನ್ನು ಯಾರಾದರೂ ಎದುರಿಸಿದ್ದೇ ಆದರೆ, ನನ್ನ ಈ ತೀಕ್ಷ್ಣ ಬಾಣಗಳಿಂದ ಈ ನಗರವು ನಿರ್ಮಾನುಷ್ಯವಾಗಿ ಹೋಗುವುದು.

ಹೆಚ್ಚೇಕೆ? ಭರತನಾಗಲಿ, ಅವನ ಹಿತವನ್ನು ಕೋರುವ ಬೇರೆ ಯಾರೇ ಆಗಲಿ, ನಿನ್ನ ಮೇಲೆರಗಿ ಬಂದರೆ, ಅವರೆಲ್ಲರನ್ನೂ ನಾಶಮಾಡುತ್ತೇನೆ. ಕೈಕೆಯ ಪ್ರೋತ್ಸಾಹದಿಂದ ದಶರಥ ಮಹಾರಾಜನೆ ಶತ್ರುವಾಗಿ ನಮ್ಮ ಮೇಲೆ ಬಂದರೆ, ಅವನನ್ನು ಕೂಡ ಬಿಡುವುದಿಲ್ಲ. ಅವನನ್ನು ಬಂಧಿಸಿ ಕಾರಾಗೃಹದಲ್ಲಿಡುತ್ತೇನೆ," ಎಂದನು.

**ಇದು ದೈವ ನಿರ್ಣಯ**: ಇನ್ನೂ ಏನೇನನ್ನೋ ಹೇಳುವುದರಲ್ಲಿದ್ದ ಲಕ್ಷ್ಮಣನನ್ನು ನೋಡಿ ರಾಮನು, "ಲಕ್ಷ್ಮಣಾ! ಮಾತು ಮಿತಿ ಮೀರುತ್ತಿದೆ. ನನ್ನ ಇಷ್ಟವನ್ನು ಯಾರೂ ಇಲ್ಲವೆನ್ನಲಾರರು. ನನ್ನ ಸಂಕಲ್ಪವನ್ನು ಯಾರೂ ಬದಲಿಸಲಾರರು. ನಾನು ಅಡವಿಗೆ ಹೋಗುವುದು ತಪ್ಪದು. ನನ್ನ ಮೇಲೆ ನಿನಗಿರುವ ಪ್ರೇಮದಿಂದ ನನ್ನ ಅಗಲುವಿಕೆಯನ್ನು ಸಹಿಸಲಾರದೆ ಹೀಗೆ ಮಾತಾಡುತ್ತಿದ್ದೀಯೆ. ಶಾಂತಿಯು ಎಲ್ಲದಕ್ಕೂ ರಕ್ಷೆ! ಶಾಂತನಾಗು. ತಂದೆಯನ್ನಾಗಲೀ ಸೋದರನಾದ ಭರತನನ್ನಾಗಲೀ ದ್ವೇಷಿಸದಿರು. ಅವರು ಪವಿತ್ರರು, ನಿರ್ಮಲ ಚಿತ್ತರು.

ಕೈಕೆಯು ಕೂಡ ಪರಮಪವಿತ್ರಳು, ಪೂಜ್ಯಳು. ಅವಳು ಕೋರಿದ ಕೋರಿಕೆಗಳಲ್ಲಿ ಯಾವ ದೋಷವೂ ಇಲ್ಲ. ತನ್ನ ಮಗನಾದ ಭರತನಿಗಿಂತ ಅಧಿಕವಾಗಿ ಅವಳು ನನ್ನನ್ನು ಪ್ರೇಮಿಸಿದಳು, ಹತ್ತಿರವಿಟ್ಟುಕೊಂಡು ಆದರಿಸಿದಳು, ಆಡಿಸಿದಳು, ಆನಂದಿಸಿದಳು. ಅಂಥ ದೇವಿಯು ಇಂದು ಲೋಕ ವಿರುದ್ಧವಾದ ಕೋರಿಕೆಯನ್ನು ಕೋರಿದಳೆಂದರೆ, ಇದರಲ್ಲಿ ಏನೋ ಒಂದು ಅಂತರಾರ್ಥ ಇಲ್ಲದಿಲ್ಲ. ಇದು ದೈವ ನಿರ್ಣಯವೇ ವಿನಾ ಪುರುಷ ಕಾರಣವಾದದ್ದು ಎಷ್ಟು ಮಾತ್ರಕ್ಕೂ ಅಲ್ಲ. ಶಾಂತಿ ವಹಿಸಿ, ಮುಂದೆ ಮಾಡಬೇಕಾದ್ದನ್ನು ಯೋಚಿಸು," ಎಂದು ಉಪದೇಶಿಸಿದನು.

ಲಕ್ಷ್ಮಣನು ರಾಮನಿಗೆ ನಮಸ್ಕರಿಸಿ, "ರಾಮಾ! ನಿನಗೆ ಬರಬೇಕಾದ ರಾಜ್ಯವನ್ನು ಯಾವ ಕಾರಣದಿಂದ ಕೈಕಾದೇವಿಯ ಕುಮಾರನಿಗೆ ಕೊಡಲು ಹೊರಟಿದ್ದಾರೆ? ಯಾವ ಧರ್ಮ, ಯಾವ ಬಲ ಅನುಸರಿಸಿ ಹಾಗೆ ಮಾಡುತ್ತಿದ್ದಾರೆ? ಜ್ಯೇಷ್ಠ ಪುತ್ರನಿಗಿಲ್ಲದ ಅಧಿಕಾರ ಯಾವ ಪುತ್ರನಿಗಿದೆ? ನೀನು ಪಿತೃ ಪ್ರೇಮದಿಂದ ಇಂಥ ಮೂರ್ಖ ಆಜ್ಞೆಯನ್ನು ಸಹಿತ ಶಿರಸಾವಹಿಸುತ್ತಿದ್ದೀಯೇ ಹೊರತು, ನೀನೇನು ಹೇಳಿದರೂ ನಾನು ಒಪ್ಪುವುದಿಲ್ಲ," ಎಂದು ಕೌಸಲ್ಯೆಯ ಕಡೆಗೆ ತಿರುಗಿ, "ಓ ದೇವಿ! ನಾನು ನಿಜವಾಗಿಯೂ ರಾಮಾನುರಕ್ತನೆನ್ನುವುದನ್ನು ಸತ್ಯಪ್ರಮಾಣ ಮಾಡಿ ಹೇಳುತ್ತೇನೆ. ರಾಮನನ್ನು ಬಿಟ್ಟು ನಾನೊಂದು ನಿಮಿಷ ಕೂಡ ಇರಲಾರೆ. ಒಂದು ವೇಳೆ ರಾಮನಿಗೆ ರಾಜ್ಯಾಕಾಂಕ್ಷೆ ಇಲ್ಲದೆ, ಅಡವಿಯಲ್ಲಿ ವಾಸ ಮಾಡುವುದೇ ಪ್ರೀತಿಯಾಗಿ ಕಂಡರೆ, ನಾನೂ ಕೂಡ ಅವನನ್ನು ಹಿಂಬಾಲಿಸುತ್ತೇನೆ. ಅವನ ಹೆಜ್ಜೆ ಅನುಸರಿಸುತ್ತೇನೆ. ನೆರಳಿನಂತೆ ಅವನನ್ನು ಹಿಂಬಾಲಿಸುತ್ತೇನೆ. ಅವನು ಆಜ್ಞೆ ಮಾಡಿದ್ದೇ ಆದರೆ, ಉರಿಯುವ ಬೆಂಕಿಯಲ್ಲಾದರೂ ಆನಂದವಾಗಿ ಧುಮುಕು ತ್ತೇನೆ. ನನಗೆ ರಾಮಾಜ್ಞೆಯೊಂದೇ ಆಜ್ಞೆ, ಅನ್ಯರ ಆಜ್ಞೆಯನ್ನು ನಾನು ಕಿವಿಯಲ್ಲೂ ಹಾಕಿಕೊಳ್ಳುವುದಿಲ್ಲ. ಅಮ್ಮಾ! ನಿಮ್ಮ ದುಃಖವನ್ನು ನಾನು ನೋಡಲಾರೆ. ನಿಮ್ಮ ಕುಮಾರನಾದ ರಾಮಚಂದ್ರನು ನನಗೆ ಪ್ರಾಣ ಸಮಾನನು. ಅಂಥ ಪ್ರಾಣವನ್ನು ಬಿಟ್ಟಿರಲು ಯಾರೂ ಒಪ್ಪರು ಅಲ್ಲವೇ?" ಎಂದನು.

**ನಿನ್ನಂಥ ಸೋದರ ಇನ್ನೊಬ್ಬನಿಲ್ಲ**: ಲಕ್ಷ್ಮಣನ ಮಾತಿನಿಂದ ಕೌಸಲ್ಯೆಗೆ ಸ್ವಲ್ಪ ಸಮಾಧಾನವಾಯಿತು. ಅವಳು ಲಕ್ಷ್ಮಣನ ತಲೆಸವರುತ್ತಾ, "ಕುಮಾರಾ! ನಿನ್ನ ಪ್ರೇಮವು ನನ್ನನ್ನು ಬಹು ಸಂತೋಷಪಡಿಸುತ್ತಿದೆ. ನಿನ್ನ ಮಾತುಗಳು ನನಗೆ ಅದೆಷ್ಟೋ ಬಲವನ್ನು ಕೊಡುತ್ತಿವೆ. ನಿನ್ನಂಥ ಸೋದರರು ಲೋಕದಲ್ಲಿ ದುರ್ಲಭ. ಇಂಥ ಪುತ್ರರತ್ನಗಳನ್ನು ಪಡೆದ ತಾಯಿಯರು ಮಹಾ ಪವಿತ್ರರೆಂದು ಲೋಕದ ಜನ ತಿಳಿಯುವರು. ಆದರೆ, ನಾನೆಂಥ ಪಾಪ ಮಾಡಿದ್ದೆನೊ ಎನ್ನುವ ನನ್ನ ಬಾಧೆಯು ನನಗಲ್ಲದೆ ಅನ್ಯರಿಗೆ ಅರ್ಥವಾಗದು. ರಾಮನು ತನ್ನ ಪಟ್ಟನ್ನು ಬಿಡನು. ಅವನು ಅರಣ್ಯಕ್ಕೆ ಹೋಗಿಯೇ ತೀರುವನು. ಆದ್ದರಿಂದ ನನ್ನನ್ನೂ ನಿಮ್ಮೊಂದಿಗೆ ಕರೆದೊಯ್ಯಿರಿ," ಎಂದು ಗೋಳಾಡಿದಳು.

**ಸತ್ಯ ಧರ್ಮಗಳು**: ಲಕ್ಷ್ಮಣನನ್ನು ಉದ್ದೇಶಿಸಿ ರಾಮಚಂದ್ರನು, "ತಮ್ಮಾ! ನಿನಗೆ ನನ್ನ ಮೇಲೆ ಎಷ್ಟು ಅನುರಾಗ ಎನ್ನುವುದು ನನಗೆ ಗೊತ್ತಿದೆ. ನಿನ್ನ ಪರಾಕ್ರಮ, ಬಲ, ಪ್ರಭಾವಗಳೂ ನನಗೆ ತಿಳಿಯದ್ದೇನಲ್ಲ. ಸತ್ಯದ ಸ್ವರೂಪವನ್ನು ತಿಳಿಯಲಾರದೆ ತಾಯಿ ಕೌಸಲ್ಯೆಯು ಮಹಾ ದುಃಖ ಅನುಭವಿಸುತ್ತಿದ್ದಾಳೆ. ಹೆತ್ತವಳಾದ್ದರಿಂದ ಅದು

ಸಹಜವೇ. ಆದರೆ, ಸಕಲ ಪುರುಷಾರ್ಥಗಳಿಗೂ ಧರ್ಮವೇ ಮೂಲ. ಧರ್ಮವು ಸತ್ಯದ ಮೇಲೆ ನಿಂತಿರುತ್ತದೆ. ಸತ್ಯವಿಲ್ಲದೆ ಧರ್ಮವು ನಿಲ್ಲಲಾರದು.

ಸತ್ಯಧರ್ಮಗಳೆರಡಕ್ಕೂ ಅವಿನಾಭಾವ ಸಂಬಂಧವಿದೆ. ಪಿತೃವಾಕ್ಯ ಪರಿಪಾಲನೆಯಿಂದ ನನಗೀಗ ಸತ್ಯ ಧರ್ಮಗಳೆರಡೂ ಕೈಗೂಡುತ್ತಿವೆ. ತಾಯಿಗಾಗಲೀ ತಂದೆಗಾಗಲೀ ಗುರುಗಳಿಗಾಗಲೀ ಮಾತುಕೊಟ್ಟ ಮೇಲೆ ಧಾರ್ಮಿಕನಾದವನು ಯಾರೂ ಅದಕ್ಕೆ ತಪ್ಪುವುದಿಲ್ಲ, ತಪ್ಪಕೂಡದು. ಆದ್ದರಿಂದ, ಪಿತೃ ಆಜ್ಞೆಯನ್ನು ನಾನು ಅತಿಕ್ರಮಿಸೆನು. ಕೈಕೆಯು ನನ್ನನ್ನು ಆಜ್ಞಾಪಿಸಲಿಲ್ಲ; ಪಿತ್ರಾಜ್ಞೆಯನ್ನು ನನಗೆ ತಲುಪಿಸಿದ್ದಾಳೆ. ಅದೂ ತಂದೆಯ ಸನ್ನಿಧಿಯಲ್ಲೇ ಆದ್ದರಿಂದ ಅದನ್ನು ಶಿರಸಾವಹಿಸಲೇಬೇಕು. ಹಾಗೆ ಅದು ತಂದೆಯ ಆಜ್ಞೆ ಅಲ್ಲದಿದ್ದ ಪಕ್ಷದಲ್ಲಿ, ಕೈಕೆಯು ತಿಳಿಸಿದಾಗ, 'ಇದು ನನ್ನ ಆಜ್ಞೆಯಲ್ಲ,' ಎಂದು ಅವರು ಹೇಳಬಹುದಾಗಿತ್ತಲ್ಲವೇ? ಹಾಗೆ ಹೇಳದೆ ಸುಮ್ಮನೆ ದುಃಖಿಸುತ್ತಿದ್ದರಾದ್ದರಿಂದ, ಅವರು ಅಂಗೀಕರಿಸಿದಂತೆಯೇ. ಆದ್ದರಿಂದ, ನಾನು ನನ್ನ ಸಂಕಲ್ಪವನ್ನು ಬದಲಾಯಿಸಲು ಅವಕಾಶವಿಲ್ಲ. ನೀನು ಸುಮ್ಮನೆ ಭಯಂಕರವಾದ ಕ್ಷತ್ರಿಯ ಧರ್ಮದತ್ತ ನಿನ್ನ ಬುದ್ಧಿಯನ್ನು ಹೋಗಗೊಡಬೇಡ! ಕ್ರೌರ್ಯವನ್ನು ಬಿಟ್ಟು ನನ್ನ ಮಾರ್ಗವನ್ನು ಅವಲಂಬಿಸು," ಎಂದು ಚಿಂತೆಯಿಂದ ಸೊರಗಿಹೋಗಿದ್ದ ಲಕ್ಷ್ಮಣನ ತಲೆಯನ್ನು ಸವರುತ್ತಾ ಪರಮ ಶಾಂತಿಯಿಂದ, ಪ್ರೇಮ ವಚನಗಳಿಂದ ಅವನನ್ನು ಸಮಾಧಾನಗೊಳಿಸಿದನು.

**ಅರಣ್ಯ ರಾಜ್ಯ, ಅಯೋಧ್ಯ ರಾಜ್ಯ**: ತಾಯಿ ಕೌಸಲ್ಯೆಯತ್ತ ತಿರುಗಿ, "ಅಮ್ಮಾ! ನನ್ನ ನಿರ್ಧಾರಕ್ಕೆ ಅಡ್ಡ ಬಂದು ನನ್ನ ವ್ರತವನ್ನು ಭಂಗಪಡಿಸಬೇಡ. ಏನೇ ಬರಲಿ, ನಾನು ಅರಣ್ಯಕ್ಕೆ ಹೋಗುವುದು ತಪ್ಪದು. ನೀನು ಪ್ರೇಮದಿಂದ ಸಮ್ಮತಿಸಿ ಕಳಿಸಿಕೊಡು, ಆಶೀರ್ವದಿಸು," ಎಂದು ಮೊಳಕಾಲೂರಿ ನಮಸ್ಕರಿಸಿದ ರಾಮನನ್ನು ನೋಡಿ, ತಾಯಿಯು ಕುಗ್ಗಿ ಹೋಗಿ, ದುಃಖವನ್ನು ನುಂಗಿಕೊಳ್ಳುತ್ತಾ, ಅವನ ತಲೆಯ ಮೇಲೆ ಕೈ ಇಟ್ಟು ಗೊಳೋ ಎಂದು ಅತ್ತಳು. ರಾಮನು ಸಹಿಸಲಾರದೆ, ತಾಯಿಯ ಪಾದಗಳನ್ನು ಹಿಡಿದು, "ಅಮ್ಮಾ! ನನ್ನ ಮಾತು ಪರಮ ಸತ್ಯ! ವನವಾಸದಲ್ಲಿ ನನಗೆಂಥ ಕಷ್ಟವೂ ಬರುವುದಿಲ್ಲ. ಅತ್ಯಂತ ಆನಂದವಾಗಿ ಹದಿನಾಲ್ಕು ವರ್ಷ ವನವಾಸವನ್ನು ಕಳೆದು ಮತ್ತೆ ನಾನು ತಮ್ಮ ಸನ್ನಿಧಿಗೆ ಬರುವೆನು. ಅಮ್ಮಾ! ದಶರಥನ ಆಜ್ಞೆಯನ್ನು ನಾನು ಮಾತ್ರವಲ್ಲ, ನೀನೂ, ಲಕ್ಷ್ಮಣ, ಸುಮಿತ್ರೆ, ಭರತ, ಶತ್ರುಘ್ನರೂ ಸಹ ನೆರವೇರಿಸಬೇಕು, ಶಿರಸಾವಹಿಸಬೇಕು. ಇದೇ ಸನಾತನ ಧರ್ಮ. ತಾಯೀ! ನನ್ನ ಇನ್ನೊಂದು ಮನವಿಯನ್ನು ನಡೆಸಬೇಕು. ನನಗಾಗಿ ಅಣಿಗೊಳಿಸಿದ ಎಲ್ಲವನ್ನೂ ನೀನು ಸಂತೋಷದಿಂದ ಸಮಾನ ಪ್ರೇಮದಿಂದ ಭರತನ ರಾಜ್ಯಾಭಿಷೇಕಕ್ಕೆ ಕೊಟ್ಟು ಕಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ತಂದೆಯು ನನಗೆ

ಅರಣ್ಯರಾಜ್ಯವನ್ನು ವಹಿಸಿದ್ದಾರೆ. ಅಯೋಧ್ಯಾ ರಾಜ್ಯವನ್ನು ಭರತನಿಗೆ ಕೊಡುವರು. ನಮ್ಮ ನಮ್ಮ ಕರ್ತವ್ಯ ನಿರ್ವಹಿಸುವುದೇ ಪರಮ ಧರ್ಮ. ಕರ್ತವ್ಯ ನಿರ್ವಹಿಸದೇ ಅದು ಕಠಿಣವೆಂದು ತಿಳಿಯುವುದು ಪುತ್ರನಿಗೆ ಸರಿಯಾದುದಲ್ಲ. ತಾಯಿಯಾದ ನೀನು, ರಾಮನಿಗಾಗಲೀ ಭರತನಿಗಾಗಲೀ ಭೇದ ಮಾಡದೆ, ಇಬ್ಬರೂ ತಮ್ಮ ತಮ್ಮ ಬಾಧ್ಯತೆಯನ್ನು ಸಕ್ರಮವಾಗಿ ನಿರ್ವಹಿಸಬೇಕೆಂದು ಆಶೀರ್ವದಿಸುವುದೇ ನಿನ್ನ ಧರ್ಮ," ಎಂದನು.

**ಪತಿಗೆ ಸತಿ ಅರ್ಧಾಂಗಿ**: ಕೌಸಲ್ಯಾದೇವಿಯು ತಡೆಯಲಾಗದ ದುಃಖದಿಂದ ಕುಸಿದು, "ಮಗೂ! ಶರೀರ ಸಂಬಂಧದಲ್ಲೂ ಬೆಳೆಸಿ ದೊಡ್ಡವನನ್ನಾಗಿ ಮಾಡಿದ್ದ ರಲ್ಲೂ ನಿನಗೆ ನಿನ್ನ ತಂದೆಯು ಎಷ್ಟು ಪೂಜ್ಯರೋ ನಾನೂ ಅಷ್ಟೇ ಪೂಜ್ಯಳಲ್ಲವೇ? ಅಷ್ಟೇ ಅಲ್ಲದೆ ಪತಿಗೆ ಸತಿಯು ಅರ್ಧಾಂಗಿ, ಅಂದರೆ ಪತಿಯ ಎಡಭಾಗವು ಸತಿ. ಸತಿಯ ಬಲಭಾಗವು ಪತಿ. ಈ ವಿಧವಾಗಿ ಒಬ್ಬರಲ್ಲಿ ಒಬ್ಬರ ಅರ್ಧಭಾಗವು ಸತಿಪತಿಯಾಗಿರಲು ನಾನು ದಶರಥನ ಅರ್ಧಭಾಗವಾಗಿರುವುದರಿಂದಲೇ ನನ್ನನ್ನು ಅರ್ಧಾಂಗಿ ಎಂದು ಕರೆಯುವುದು ನಿನಗೆ ತಿಳಿಯದೆ? ಈ ದಿನ ನಿನ್ನ ತಂದೆಯು ನಿನಗೆ ಆಜ್ಞಾಪಿಸಿರುವುದು ಅರ್ಧ ಆಜ್ಞೆಯೇ ವಿನಾ ಪೂರ್ತಿ ಆಜ್ಞೆಯಲ್ಲ, ಅಲ್ಲವೆ? ಅದು ಪೂರ್ತಿಯಾಗಬೇಕಾದರೆ ನಾನೂ ಕೂಡ ಸಮ್ಮತಿಸಬೇಕು. ಆಗ ಮಾತ್ರ ನೀನು ಪೂರ್ಣ ಆಜ್ಞೆಯನ್ನು ಪಾಲಿಸಿದವನಾಗುತ್ತೀಯೆ. ಹಾಗಲ್ಲದೆ, ಅಪೂರ್ಣ ಆಜ್ಞೆಯನ್ನು ಪಾಲಿಸಲು ಸಿದ್ಧನಾಗುವುದು ಸರಿಯಲ್ಲವೆನ್ನುವುದನ್ನು ನೀನು ವಿಚಾರ ಮಾಡಬೇಕು.

ಸರ್ವಧರ್ಮಗಳನ್ನೂ ತಿಳಿದ ನೀನು ಈ ಧರ್ಮವನ್ನು ಕೂಡ ಯೋಚಿಸ ಬೇಕಲ್ಲವೆ? ತಾಯಿಯ ಆಜ್ಞೆ ಇಲ್ಲದೆ ಯಾವುದೂ ಪೂರ್ಣರೂಪ ಧರಿಸದು, ಧರ್ಮವಾಗದು. ಪಿತೃ ಆಜ್ಞೆಗಿಂತ ಮಾತೃ ಆಜ್ಞೆಯೇ ಪ್ರಧಾನ. ಹೊತ್ತು ಹೆತ್ತು ದೊಡ್ಡವನನ್ನಾಗಿ ಮಾಡುವುದು ತಾಯಿಯೇ ವಿನಾ ತಂದೆಯಲ್ಲ. ಒಂಬತ್ತು ತಿಂಗಳು ತಾಯಿಯು ಹೊಟ್ಟೆಯಲ್ಲಿಟ್ಟುಕೊಳ್ಳದಿದ್ದರೆ ಪುತ್ರನೇ ಇಲ್ಲ, ಅಲ್ಲವೆ? ಇಂಥ ತಾಯಿಯನ್ನು ಶೋಕಾಗ್ನಿಯಲ್ಲಿ ಹಾಕಿ, ತಂದೆಯ ಆಜ್ಞೆ, ತಂದೆಯ ಆಜ್ಞೆ ಎಂದು ನೀನು ತಂದೆಗೇ ಪ್ರಾಧಾನ್ಯತೆ ಕೊಡುವುದನ್ನು ನಾನು ಎಂದಿಗೂ ಅಂಗೀಕರಿಸೆನು. ಇದು ನಿನಗೆ ಸರಿಯಲ್ಲ. ತಾಯಿಗೆ ಮಗನಿಗಿಂತ ಹೆಚ್ಚಿನ ಧನ ಬೇರೆ ಇಲ್ಲ. ಅದರಲ್ಲೂ ನನ್ನಂಥ ತಾಯಿಗೆ ಮಗನೇ ಸರ್ವಸ್ವ. ಮಗನನ್ನು ಕಾಡುಪಾಲು ಮಾಡಿ, ಅದು ಪಿತೃ ಆಜ್ಞೆ ಪರಿಪಾಲನೆ ಎಂದು ಅಂಗೀಕರಿಸಿದರೆ, ನನಗೆ ಪರಲೋಕ ಪ್ರಾಪ್ತಿಯಾಗಲಿ, ಸ್ವರ್ಗ ಲೋಕದಲ್ಲಿ ಅಮೃತಪಾನ ಮಾಡುವ ಪ್ರಾಪ್ತಿಯಾಗಲಿ ಲಭಿಸಿಯೂ ಫಲವೇನು? ನಾನು ಮಗನ ಬಳಿ ಇದ್ದರೆ ಅದೇ ನನಗೆ ಸರ್ವಸ್ವ.

ರಾಮಾ! ಇಲ್ಲಿದ್ದಾದರೂ ನಾನು ಮಾಡುವುದೇನಿದೆ? ನನ್ನ ಜೀವಿತದಲ್ಲಿ ನಾನೆಂದೂ ಸಂತೋಷ ಅನುಭವಿಸಿದವಳಲ್ಲ. ಹುಟ್ಟಿದಾಗಿನಿಂದ ತಂದೆ ತಾಯಿಗಳ ಆಜ್ಞೆ ಅನುಸರಿಸುತ್ತಾ ಎಂಥಾ ಪತಿ ದೊರಕುವನೋ ಹೇಗಿರುವನೋ ಎನ್ನುವ ಚಿಂತೆ ಯಿಂದ ಕೊರಗುತ್ತಿದ್ದಂತೆ ಮದುವೆಯಾಯಿತು; ಕೆಲವು ಸಂವತ್ಸರಗಳು ಪುತ್ರರಿಲ್ಲ, ಸವತಿಯರೊಂದಿಗೆ ಬಾಳುವಂತಾಯಿತು. ಅಂದಿನಿಂದ ಇಂದಿನವರೆಗೂ ಆ ಬಾಧೆ ತಪ್ಪಲಿಲ್ಲ. ಯಾವ ಜನ್ಮದ ಫಲವೋ ನಿನ್ನನ್ನು ಮಗನಾಗಿ ಪಡೆದೆ. ನಿನ್ನ ವಿಯೋ ಗವೂ ಈ ರೀತಿ ಆಗುತ್ತಿದೆ. ನನಗೆ ಸುಖ ಎಂದು? ಜೀವಿತವೇ ಒಂದು ದುಃಖ ಸಾಗರವಾಗಿ, ಅದರಲ್ಲಿ ಬಿದ್ದಿದ್ದ ನನಗೆ, ದಡ ಸಿಕ್ಕದೆ ಈಜಲಾರದೆ ಮುಳುಗುತ್ತಿರುವ ನನಗೆ, ರಾಮಾಧಾರ ಎನ್ನುವುದು ಹಿಡಿದುಕೊಳ್ಳಲು ಒಂದು ಕೊಂಬೆಯಾಗಿತ್ತು. ಇಂದು ಅವನೂ ಕೈ ಬಿಟ್ಟರೆ ಇನ್ನು ನನ್ನ ಗತಿ ಏನಾಗುವುದೋ ನೀನೇ ಯೋಚಿಸು. ಮಗೂ! ನಾನು ಇಲ್ಲದಿದ್ದರೆ ನಿನ್ನ ತಂದೆಗೆ ಯಾವ ಕೊರತೆಯೂ ಆಗುವುದಿಲ್ಲ. ಆದ್ದರಿಂದ ಇಲ್ಲಿದ್ದು ಈ ರೀತಿಯಾಗಿ ರಾತ್ರಿ ಹಗಲು ಕೊರಗಿ, ಕೊನೆಗೆ ಪ್ರಾಣ ಬಿಡುವುದಕ್ಕಿಂತ, ನನ್ನ ಮುದ್ದು ಕುಮಾರನ ಮುಖವನ್ನು ನೋಡುತ್ತಾ ಅರಣ್ಯದಲ್ಲಿ ಅನ್ನಪಾನಾದಿಗಳಿಲ್ಲದಿದ್ದರೂ ಹಾಯಾಗಿರುತ್ತೇನೆ," ಎಂದು ಪರಿಪರಿ ವಿಧವಾಗಿ ದುಃಖಿಸುತ್ತಿದ್ದ ಕೌಸಲ್ಯೆಯ ಮಾತುಗಳು ರಾಮಚಂದ್ರನಿಗೆ ಸರಿಯಾಗಿ ಕಂಡಿತು.

ಆದರೆ, ತಂದೆಯ ಆಜ್ಞೆಯನ್ನು ಶಿರಸಾವಹಿಸಿಯೇ ತೀರುವೆನೆನ್ನುವ ಅವನ ನಿರ್ಧಾರವು ಅವನನ್ನು ಅಸಹಾಯಕನನ್ನಾಗಿಸಿತು. ಇಷ್ಟರಲ್ಲಿ ಲಕ್ಷ್ಮಣನು, "ಅಣ್ಣಾ! ತಾಯಿಯ ಮಾತು ಪರಮ ಸತ್ಯ. ತಂದೆಗಿಂತ ತಾಯಿ ಪ್ರಧಾನ. ಆದ್ದ ರಿಂದಲೇ ಶಾಸ್ತ್ರವು ಮಾತೃದೇವೋಭವ, ಪಿತೃದೇವೋಭವ ಎಂದು ಮಾತೃಸ್ಥಾನಕ್ಕೆ ಪ್ರಾಧಾನ್ಯತೆ ಇತ್ತಿದೆ. ಹೀಗಿದ್ದರೂ ನೀನು ಪಟ್ಟು ಹಿಡಿದು ಮಾತೃದೇವಿಯನ್ನು ಬಾಧೆ ಪಡಿಸುವುದು ಒಳ್ಳೆಯದಲ್ಲ," ಎಂದನು.

**ಧರ್ಮ ಸಮಗೂಡಿಸುವ ಕೆಲಸ**: ತಮ್ಮನ ಮಾತಿಗೆ ಉತ್ತರವಾಗಿ ರಾಮನು, "ಲಕ್ಷ್ಮಣಾ! ಪುತ್ರ ವಾತ್ಸಲ್ಯದಿಂದ ಪರಿತಪಿಸುತ್ತಿರುವ ತಾಯಿಯ ಮಾತುಗಳನ್ನೇ ನೀನು ಪ್ರಧಾನವಾಗಿ ಪರಿಗಣಿಸುತ್ತಿದ್ದೀಯಲ್ಲದೆ, ಇಡೀ ಪ್ರಪಂಚಕ್ಕೂ ಸಮಸ್ತ ಪ್ರಜೆಗಳಿಗೂ ಸಂಬಂಧಿಸಿದ ಪಿತೃವಾಕ್ಯ ಪರಿಪಾಲನೆಯನ್ನು ನೀನು ಯೋಚಿಸದಿ ರುವುದರ ಅಂತರಾರ್ಥವೇನೋ ನನಗೆ ಅರ್ಥವಾಗುತ್ತಿಲ್ಲ. ಧರ್ಮ ಒಂದ ರಿಂದಲೇ ಅರ್ಥ, ಕಾಮ, ಮೋಕ್ಷಗಳೆನ್ನುವ ಮೂರು ಪುರುಷಾರ್ಥಗಳೂ ಕೈಗೂಡು ವುವು. ಇದರಲ್ಲಿ ಸಂದೇಹ ಬೇಡ. ಹೆಂಡತಿ ಅನುಕೂಲವತಿಯಾಗಿ ಧರ್ಮವನ್ನು, ಒಂದೇ ಅಭಿಪ್ರಾಯದವಳಾಗಿ ಕಾಮವನ್ನು ಮತ್ತು ಸುಪುತ್ರವತಿಯಾಗಿ ಅರ್ಥವನ್ನು ಕೈಗೂಡಿಸುವಳು. ಅದೇ ವಿಧವಾಗಿ ಧರ್ಮಾನುಷ್ಠಾನದಿಂದ ಧರ್ಮ, ಅರ್ಥ,

ಕಾಮ—ಈ ಮೂರೂ ಯಾವ ಕಾರ್ಯದಲ್ಲಿ ಸರಿಗೂಡುವುದಿಲ್ಲವೋ ಆ ಕಾರ್ಯವನ್ನು ಮಾಡಬಾರದು. ಕೇವಲ ಅರ್ಥಪರನಾದವನನ್ನು ಲೋಕವು ದ್ವೇಷಿಸುವುದು. ಕೇವಲ ಕಾಮಪರತ್ವ ಅಪ್ರಶಸ್ತ. ಆದ್ದರಿಂದ ಧರ್ಮವು ಕೈಗೂಡುವಂಥ ಕೆಲಸ ಮಾಡಬೇಕು.

ಲಕ್ಷ್ಮಣಾ! ಅಷ್ಟೇ ಅಲ್ಲ, ದಶರಥ ಮಹಾರಾಜನು ನಮ್ಮ ತಂದೆ, ಗುರು, ರಾಜ. ಅವರು ಕೋಪದಿಂದಾಗಲೀ ಕಾಮದಿಂದಾಗಲೀ ಪ್ರೇಮದಿಂದಾಗಲೀ ಏನನ್ನು ಆಜ್ಞಾಪಿಸಿದರೂ ನಾವು ಮಾಡಿಯೇ ತೀರಬೇಕು. ಪಾಪಕರ್ಮಿಯಾದ ಮಗನು ತಂದೆಯು ಹೇಳಿದ್ದನ್ನು ಮಾಡದೆ ಹೋಗಬಹುದು. ನಾನು ಹಾಗಲ್ಲ. ನನ್ನ ತಂದೆಯು ಏನು ಹೇಳಿದರೂ ನಾನು ಶಿರಸಾವಹಿಸುವೆನು. ಇದರಲ್ಲಿ ನಿನಗೆ ಒಂದು ಸಂದೇಹ ಬರಬಹುದು. ತಂದೆಯು ಮೂರ್ಖನಾಗಿ, ಕಾಮಾಂಧನಾಗಿ, ನಿತ್ಯಾನಿತ್ಯ ಪರಿಜ್ಞಾನವಿಲ್ಲದೆ ತನ್ನ ಸ್ವಾರ್ಥವನ್ನೇ ಲಕ್ಷ್ಯದಲ್ಲಿಟ್ಟುಕೊಂಡು, ಇತರರ ಮಾತನ್ನು ನಂಬಿ, ಸ್ವಂತ ಮಗನನ್ನು ಕಷ್ಟಪಡಿಸುವಂಥ ಅವನ ಅಧರ್ಮ ಚರ್ಯೆಯನ್ನು ಕೂಡ ಮಗನು ಒಪ್ಪಬೇಕೆ ಎಂದು ನೀನು ಕೇಳಬಹುದು. ಖಂಡಿತವಾಗಿಯೂ ಒಪ್ಪಬೇಕಾದ್ದೇ! ಮೂರ್ಖನಾದರೂ ಅಜ್ಞಾನಿಯಾದರೂ ಅವನಿಗೆ ನೀನು ಮಗನೇ. ಅದನ್ನು ನೀನು ಒಪ್ಪಿದರೆ, ಮಿಕ್ಕೆಲ್ಲವೂ ಅದಕ್ಕಿಂತ ಕಡಿಮೆಯೇ ವಿನಾ ಅಧಿಕ ಸ್ಥಾನವಾಗುವುದಿಲ್ಲ.

**ಶಾಶ್ವತ ಕೀರ್ತಿಯನ್ನು ಕಡೆಗಣಿಸುವುದು**: ತಂದೆಯು ಹೇಳಿದ ವಿಷಯಗಳು ಮಗನಿಗೆ ಸರಿಯಾಗಿ ಕಾಣದಿದ್ದರೆ ತಂದೆಗೆ ಚೆನ್ನಾಗಿ ವಿವರಿಸಿ, ಅವನನ್ನು ಒಪ್ಪಿಸಬಹುದೇ ವಿನಾ ತಂದೆಯು ಹೇಳಿದ್ದು ಅವಿವೇಕವೆಂದು ತಿರಸ್ಕರಿಸಬಾರದು. ಅಲ್ಲದೇ ದಶರಥ ಮಹಾರಾಜರು ಮಹಾ ಮೇಧಾವಿ, ಶೂರ, ಧಾರ್ಮಿಕ. ಕೊಟ್ಟ ಮಾತಿನಂತೆ ನಡೆಯುವುದಕ್ಕಾಗಿ ಅಷ್ಟು ಪರಿತಪಿಸುತ್ತಿದ್ದಾರೆಯೇ ವಿನಾ ಕೈಕೆಗೆ ಸೋತು ವಶವಾಗಿಯಾಗಲೀ ಕಾಮಾತುರತೆಯಿಂದಾಗಲೀ ಅಲ್ಲ.

ಅವರು ಆ ದಿನ ಕೊಟ್ಟ ಮಾತು ಸತ್ಯ. ನಿನ್ನೆ ಕೂಡ, 'ನಿನ್ನ ಅಭೀಷ್ಟ ಏನಾದರೂ ಸರಿಯೇ, ನನ್ನನ್ನು ಪ್ರಾಣಾಪಾಯಕ್ಕೆ ಗುರಿಮಾಡುವಂಥದಾದರೂ ಸರಿಯೇ ನಾನು ನೆರವೇರಿಸುತ್ತೇನೆ,' ಎಂದು ವಾಗ್ದಾನವಿತ್ತಿದ್ದರಾದ್ದರಿಂದ ಪರಿತಪಿಸುತ್ತಿರುವ ತಂದೆಯನ್ನು ಕಾಮಾಂಧನೆಂದು ಅಂಗೀಕರಿಸೆನು. ಲಕ್ಷ್ಮಣಾ! ದಶರಥ ಮಹಾರಾಜನು ತನ್ನ ಪೂರ್ವಿಕರಿಗಿಂತ ಧರ್ಮಾತ್ಮನು; ಮೂರು ಲೋಕಗಳಲ್ಲೂ ಆತನ ಹೆಸರು ಪ್ರತಿಷ್ಠೆಗಳು ವ್ಯಾಪಿಸಿವೆ, ಪ್ರಸಿದ್ಧಿಗೇರಿವೆ. ಅವನು ಜೀವಿಸಿರುವಾಗ ಅವರ ಪಟ್ಟದ ದೇವಿಯಾದ ಕೌಸಲ್ಯಾದೇವಿಯು ಪತಿಯನ್ನು ಬಿಟ್ಟು, ಮಗನೊಂದಿಗೆ

ಅರಣ್ಯಕ್ಕೆ ಹೋದಳೆನ್ನುವ ವಿಷಯವು ಲೋಕಕ್ಕೆ ಅಪಮಾರ್ಗವನ್ನು ಹಾಕಿಕೊಟ್ಟಂತಾಗುವುದು. ಬದುಕು ಸ್ವಲ್ಪ ಕಾಲ. ಆ ಅಲ್ಪಕಾಲದ ಬದುಕಿಗಾಗಿ ಶಾಶ್ವತ ಕೀರ್ತಿಯನ್ನು ಕಡೆಗಣಿಸುವುದು ನಿನಗಾಗಲೀ ನನಗಾಗಲೀ ಒಳ್ಳೆಯದಲ್ಲ," ಎಂದು ಹೇಳುತ್ತಾ, ಅಮ್ಮಾ ಎಂದು ತಾಯಿಯ ಕಡೆ ತಿರುಗಿ, ದೀನನಾಗಿ ಪ್ರಾರ್ಥಿಸುತ್ತಿದ್ದ ರಾಮವಾಕ್ಯಗಳು ಕೌಸಲ್ಯೆಯಲ್ಲಿ ವಿಚಾರಗೊಂದಲವೆಬ್ಬಿಸಿದುವು. ಅವಳು ಸ್ತಂಭೀಭೂತಳಾದಳು. ರಾಮನನ್ನು ಕಾಡಿಗೆ ಹೋಗದಂತೆ ತಡೆದು ನಿಲ್ಲಿಸಲು ತಾನು ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾದವು. ಇನ್ನು ಸಮ್ಮತಿಸದೆ ವಿಧಿಯಿಲ್ಲ ಎನ್ನುವುದನ್ನು ತಿಳಿದಳು.

**ಲಕ್ಷ್ಮಣನ ಕಣ್ಣೀರು**: ತಾನು ದುಃಖಿಸಿದಷ್ಟೂ ರಾಮನನ್ನು ಬಾಧೆಪಡಿಸಿದ ಹಾಗಾಗುವುದೆಂದು ಭಾವಿಸಿದಳು ಕೌಸಲ್ಯ. ಇಷ್ಟರಲ್ಲಿ, ಲಕ್ಷ್ಮಣನು ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು, ಮೈಮೇಲೆ ಪ್ರಜ್ಞೆ ಇಲ್ಲದೆ, ತುಟಿಗಳು ನಡುಗುತ್ತಾ ಬಾಯಲ್ಲಿ ಮಾತು ಹೊರಡದೆ, ಕಣ್ಣು ರೆಪ್ಪೆಗಳನ್ನು ಆಡಿಸದೆ, ನೆಟ್ಟನೋಟದಿಂದ ನೆಲವನ್ನೇ ನೋಡುತ್ತಾ ಸುರಿಸುತ್ತಿದ್ದ ಕಣ್ಣೀರ ಧಾರೆಯನ್ನು ರಾಮಚಂದ್ರನು ನೋಡಿದನು. ಇಂಥ ಸ್ಥಿತಿಯಲ್ಲಿರುವ ಲಕ್ಷ್ಮಣನನ್ನು ಬಿಟ್ಟು ಹೋಗುವುದು ಒಳ್ಳೆಯದಲ್ಲವೆನಿಸಿತು. ಅಷ್ಟೇ ಅಲ್ಲ, ತಾನು ಹೋದ ಮೇಲೆ, ಲಕ್ಷ್ಮಣನು ಚಿಂತೆಯಿಂದ ತನ್ನ ಜೀವಕ್ಕೇ ಏನಾದರೂ ಅಪಾಯ ಮಾಡಿಕೊಳ್ಳಬಹುದೆನಿಸಿತು. ಹಾಗೇನಾದರೂ ಆದರೆ, ಅದು ತನ್ನಿಂದಾಗಿಯೇ ಆದಂತಾಗುವುದು ಎಂದು ಲಕ್ಷ್ಮಣನನ್ನು ಕುರಿತು, "ತಮ್ಮಾ! ಕೋಪವು ಸರ್ವ ಪಾಪಗಳಿಗೆ ಧೂಪವಿದ್ದ ಹಾಗೆ. ಅದನ್ನು ನಿಗ್ರಹಿಸು. ನಿನ್ನ ರಾಮಚಂದ್ರನಿಗೆ ಇಷ್ಟು ಅವಮಾನವಾಯಿತಲ್ಲಾ ಎಂದು ದುಃಖಿಸಬೇಡ. ಸತ್ಯ ಧರ್ಮಗಳಿಗೆ ಮಾನಾಪಮಾನಗಳಿಲ್ಲ. ಧೈರ್ಯ ತಂದುಕೊ. ತಂದೆಯ ಸೇವೆ ಮಾಡಿ ಧನ್ಯನಾಗು," ಎಂದು ಆಶೀರ್ವದಿಸಿದನು.

ಲಕ್ಷ್ಮಣನು, "ಅಣ್ಣಾ, ನನ್ನ ಪ್ರಾಣ ಸಮಾನನಾದ ರಾಮನು ಅರಣ್ಯಕ್ಕೆ ಹೊರಟಿರುವಾಗ ಈ ಲಕ್ಷ್ಮಣನು ಈ ಜಡವಾದ ಕಾಯದಿಂದ ಯಾರನ್ನು ಸೇವಿಸಿಯಾನು? ಲಕ್ಷ್ಮಣನಿಗೆ ರಾಮನ ಸೇವೆಯಲ್ಲದೆ ಅನ್ಯರ ಸೇವೆಯ ಅವಶ್ಯಕತೆಯಿಲ್ಲ. ನಿನ್ನ ಧರ್ಮವು ನಿನಗೆ ಹೇಗೋ ನನ್ನ ಧರ್ಮವು ನನಗೆ ಹಾಗೇ. ಆದ್ದರಿಂದ ನಾನು ನಿನ್ನೊಂದಿಗೆ ಬರುತ್ತೇನೆ. ನನಗೆ ಯಾರ ಆಜ್ಞೆಯೂ ಬೇಕಾಗಿಲ್ಲ. ನಾನು ಕೈಕೆಯಿ ಕೇಳಿದ ವರದಲ್ಲಿ ಸೇರಿಲ್ಲ. ಒಂದು ವೇಳೆ ಸೇರಿದ್ದರೂ ನಾನು ಅವಳ ಆಜ್ಞೆಯನ್ನಾಗಲೀ ಅವಳ ಅನುಚರರ ಆಜ್ಞೆಯನ್ನಾಗಲೀ ಮನ್ನಿಸುವುದಿಲ್ಲ. ನನಗೆ ಆಜ್ಞಾಪಿಸಲು ಒಬ್ಬ ರಾಮನಿಗಲ್ಲದೆ ಬೇರೆ ಯಾರಿಗೂ ಅಧಿಕಾರವಿಲ್ಲ. ಆದ್ದರಿಂದ ಇಗೋ, ಈಗಲೇ ನಾನೂ ಕೂಡ ಜಟಾವಲ್ಕಲಗಳನ್ನು ಧರಿಸಿ ಸಿದ್ಧನಾಗುತ್ತೇನೆ,"

ಎಂದು ಪಟ್ಟಾಭಿಷೇಕಕ್ಕೆ ಮಾಡಿಕೊಂಡಿದ್ದ ಅಲಂಕಾರ ಆಭರಣಗಳನ್ನೆಲ್ಲಾ ತೆಗೆದು ಬಿಸಾಡಿ, ಕುಂಡಲ ಚಂದ್ರ ಹಾರಗಳನ್ನು ನಾಲ್ಕು ದಿಕ್ಕಿಗೂ ಎಸೆದು, ಅಣ್ಣನೊಂದಿಗೆ ಹೊರಡಲು ಅಣಿಯಾದನು.

ಲಕ್ಷ್ಮಣನ ತ್ಯಾಗವನ್ನು ನೋಡಿ ರಾಮನ ಹೃದಯ ಕರಗಿತು. ಅವನ ಹತ್ತಿರ ಬಂದು ಬೆನ್ನನ್ನು ಸವರುತ್ತಾ, "ತಮ್ಮಾ! ಇಂಥ ತಮ್ಮನು ನನಗಿರುವಾಗ ನನ್ನ ಆನಂದಕ್ಕೆ ಅಂತ್ಯವೇ ಇಲ್ಲ. ಇದು ನನ್ನ ಭಾಗ್ಯ. ನೀನು ನನ್ನೊಂದಿಗೆ ಬರುವುದರಿಂದ ತಾಯಿ ಕೌಸಲ್ಯೆಗೆ ಕೂಡ ಸ್ವಲ್ಪ ಶಾಂತಿಯಾಗುವುದು. ನಾನು ಹದಿನಾಲ್ಕು ಸಂವತ್ಸರಗಳ ಕಾಲ ಅರಣ್ಯದಲ್ಲಿ ಹೇಗೆ ಜೀವನ ಕಳೆಯುವೆನೊ ಕಡೆಗೆ ಹದಿನಾಲ್ಕು ಸಂವತ್ಸರಗಳನ್ನೂ ಪೂರ್ತಿ ಕಳೆದ ಮೇಲೆ ಅಯೋಧ್ಯೆಗೆ ಹಿಂದಿರುಗಿ ಬರುವೆನೋ ಇಲ್ಲವೋ ಎನ್ನುವ ಅನುಮಾನವು ತಾಯಿಯಲ್ಲಿ ತಲೆಹಾಕುತ್ತಿದೆ. ಆದ್ದರಿಂದ ನೀನು ತಾಯಿಗೆ ತಕ್ಕ ಸಮಾಧಾನ ಹೇಳು. ನಾವು ಹೀಗೆ ಕಾಲ ಕಳೆಯುತ್ತಿದ್ದರೆ ತಂದೆಯು ಮತ್ತಷ್ಟು ಬಾಧೆ ಪಡುವರು. ರಾಮನು ಅರಣ್ಯಕ್ಕೆ ಹೊರಡುವನೋ ಇಲ್ಲವೋ ಎನ್ನುವ ಅನುಮಾನ ಕೈಕೆಯಲ್ಲಿ ಹುಟ್ಟಬಹುದು. ಆದ್ದರಿಂದ, ನಾನು ಸೀತೆಗೆ ಈ ವಾರ್ತೆಯನ್ನು ತಿಳಿಸಿ, ಕೈಕೆಯ ಮಂದಿರಕ್ಕೆ ಹೋಗಿ ತಂದೆಗೆ ನಮಸ್ಕಾರ ಮಾಡಿ ಬರುವುದರೊಳಗೆ, ನೀನು ನಿನ್ನ ತಾಯಿ ಸುಮಿತ್ರೆಯ ಅಪ್ಪಣೆ ಪಡೆದು ಬಾ," ಎಂದು ಹೇಳಿ, ಕೌಸಲ್ಯೆಗೆ ಪ್ರದಕ್ಷಿಣೆ ಮಾಡಿ ನಮಸ್ಕರಿಸುತ್ತಿದ್ದ ರಾಮನನ್ನು ನೋಡಿ, ಅಂತಃಪುರದ ದಾಸಿಯರೂ ಮಿಕ್ಕ ರಾಣಿಯರೂ ಒಮ್ಮಿಂದೊಮ್ಮೆಗೇ ಪ್ರಳಯವಾದಂತೆ ಗಟ್ಟಿಯಾಗಿ ಗೋಳಿಟ್ಟರು.

**ತಾಯಿಯ ಆಶೀರ್ವಚನಗಳು** : "ತಾಯೀ! ಆಶೀರ್ವದಿಸು," ಎಂದು ಶಿರವೊಡ್ಡಿ ನಿಂತ ಮಗನನ್ನು ಕೌಸಲ್ಯೆಯು ತಬ್ಬಿಕೊಂಡು, ಶಿರಸ್ಸನ್ನು ಮುದ್ದಾಡಿ, "ಮಗೂ! ರಾಮಾ, ನೀನು ಪರಮ ಧಾರ್ಮಿಕ, ಪರಾಕ್ರಮಿ. ನಿನಗೆ ಅರಣ್ಯದಲ್ಲಿ ಎಂಥ ಭಯವೂ ಇರುವುದಿಲ್ಲ. ವನವಾಸ ಮಾಡಬೇಕೆಂದು ನಿಶ್ಚಯಿಸಿದ್ದೀಯೆ. ನಿನ್ನನ್ನು ತಡೆಯಲು ನನ್ನಿಂದಾಗಲಿಲ್ಲ. ನಿನಗೆ ಶುಭವಾಗಲಿ. ನೀನು ಪಿತೃವಾಕ್ಯ ಪರಿಪಾಲನೆ ಮಾಡಿ, ಪಿತೃ ಋಣವನ್ನು ತೀರಿಸಿ ಚರಿತಾರ್ಥನಾಗಿ ಹಿಂದಿರುಗಿ ಬಂದರೆ ಅಷ್ಟೇ ಸಾಕು. ಆ ದಿನವೇ ನನಗೆ ಸಂತೋಷ. ರಾಮಾ! ದೈವಬಲವು ಸಾಮಾನ್ಯವಾದುದಲ್ಲ. ದೈವ ನಿರ್ಣಯವನ್ನು ಯಾರೂ ಬದಲಿಸಲಾಗದು. ಯಾವ ಧರ್ಮಕ್ಕಾಗಿ ನೀನು ಕಾಡಿಗೆ ಹೋಗುತ್ತಿದ್ದೀಯೋ ಆ ಧರ್ಮವೇ ನಿನ್ನನ್ನು ರಕ್ಷಿಸುವುದು. ರಾಮಾ! ಹದಿನಾಲ್ಕು ಸಂವತ್ಸರಗಳನ್ನು ಕಳೆದು ಜಟಾವಲ್ಕಲಧಾರಿಯಾಗಿ ನೀನೀಗ ಹಿಂತಿರುಗಿ ಬಂದಿರುವೆಯೆಂದಾಗಿದ್ದರೆ ಎಷ್ಟು ಚೆನ್ನಾಗಿತ್ತು! ಅಯ್ಯೋ ನನ್ನ ಹುಚ್ಚೇ! ಹದಿನಾಲ್ಕು ವರ್ಷಗಳೆಂದರೆ ಸಾಮಾನ್ಯವೇ? ಮಗೂ! ಏನೆಂದು ಆಶೀರ್ವದಿಸಲಿ. ಹದಿನಾಲ್ಕು ವರ್ಷಗಳನ್ನು ಹದಿನಾಲ್ಕು ದಿನಗಳಾಗಿ,

ಇಲ್ಲ ಇಲ್ಲ, ನಿಮಿಷಗಳಾಗಿ ಕಳೆದು ಬಾ, ರಾಜ್ಯಾಭಿಷಿಕ್ತನಾಗುವೆಯಂತೆ! ಹೇ ರಘುವಂಶೋದ್ಧಾರಕಾ! ಇನಕುಲ ತಿಲಕಾ! ನನ್ನ ಮುದ್ದು ಮಗೂ! ಯಾವ ಧರ್ಮ ರಕ್ಷಣೆಗಾಗಿ ನೀನು ಅಡವಿಗೆ ಹೊಗುತ್ತಿದ್ದೀಯೋ, ಆ ಧರ್ಮ ದೇವತೆಯೇ ನಿನ್ನ ಸುತ್ತಲೂ ರಕ್ಷಿಸುವುದು. ಅದಕ್ಕಿಂತ ಬೇರೊಬ್ಬರು ರಕ್ಷಕರಿಲ್ಲ.

ನಿನಗಾಗಿ ಹದಿನಾಲ್ಕು ಸಂವತ್ಸರಗಳೂ ನಾನು ಹೋಮ ಮಾಡುತ್ತಿರುತ್ತೇನೆ. ನಿನ್ನ ಪಿತೃಸೇವೆ, ಮಾತೃಸೇವೆ, ಗುರುಸೇವೆಯೇ ನಿನಗೆ ಆಯುರಾರೋಗ್ಯಗಳನ್ನೀಯುವುದು. ನಿನ್ನ ಸತ್ಯವ್ರತವೇ ಪರಮಧೈರ್ಯವನ್ನು ಕೊಡುವುದು. ಪರ್ವತಗಳೂ ನದಿಗಳೂ ಗಿಡಗಳೂ ಮೃಗಪಕ್ಷಿಗಳೂ ನಿನಗೆ ಆಶ್ರಯಕೊಟ್ಟು, ನಿನ್ನನ್ನಾದರಿಸಿ ಆನಂದಪಡಿಸುವುವು. ಸೂರ್ಯ ಚಂದ್ರರು, ನಕ್ಷತ್ರ ಉಪಗ್ರಹಗಳು ಸಹ ನಿನಗೆ ಯಾವ ಕಷ್ಟವೂ ಆಗದಂತೆ ಕಾಪಾಡುವುವು. ಕ್ರೂರ ಕೃತ್ಯಗಳಿಗೆ ಮುಂದಾಗುವ ರಾಕ್ಷಸರು ಕೂಡ ನಿನ್ನ ತಣ್ಣನೆಯ ಪ್ರೇಮಕ್ಕೆ ವಶರಾಗಿ ನಿನಗೆ ದಾಸರಾಗುವರು," ಎಂದು ಆಶೀರ್ವದಿಸಿದಳು. ಉಕ್ಕಿ ಬರುತ್ತಿದ್ದ ದುಃಖವನ್ನು ನುಂಗಿಕೊಂಡು, ಸಂತೋಷವನ್ನು ನಟಿಸುತ್ತಾ ರಾಮನ ತಲೆಯನ್ನು ಸವರಿ, ಆಘ್ರಾಣಿಸಿ, ಮುದ್ದಾಡಿದಳು. ಅದರುತ್ತಿದ್ದ ತುಟಿಗಳಿಂದ, "ರಾಮಾ! ಕ್ಷೇಮವಾಗಿ ಹಿಂತಿರುಗು, ಆನಂದವಾಗಿ ಹೋಗಿ ಬಾ," ಎಂದಳು.

ರಾಮನು ಕೂಡ ತಾಯಿಯ ಪ್ರೇಮವನ್ನು ಚೆನ್ನಾಗಿ ಬಲ್ಲವನಾದ್ದರಿಂದ, ಅವಳನ್ನು ಬಾಧೆಪಡಿಸುವುದಲ್ಲದೆ ಅನ್ಯಮಾರ್ಗವಿಲ್ಲದ್ದರಿಂದ ಮತ್ತೆ ಮತ್ತೆ ಅವಳ ಪಾದಗಳಿಗೆ ನಮಸ್ಕರಿಸುತ್ತಾ, "ಅಮ್ಮಾ! ನೀನು ದುಃಖಿಸದೆ, ನಿದ್ರಾಹಾರಗಳನ್ನು ಬಿಡದೆ, ಆರೋಗ್ಯವನ್ನು ಕೆಡಿಸಿಕೊಳ್ಳದೆ, ಸದಾ ಸಂತಸ ಹೃದಯದಿಂದ ನನ್ನನ್ನು ಜ್ಞಾಪಿಸಿಕೊಳ್ಳುತ್ತಿರು. ನೀನು ಹೇಗೆ ನನ್ನ ನೆನಪು ಮಾಡಿಕೊಳ್ಳುವಿಯೊ, ನನ್ನ ಕ್ಷೇಮ ಹಾಗಿರುವುದು. ಆದ್ದರಿಂದ ನಾನು ಸುಕ್ಷೇಮವಾಗಿ, ಸುಖವಾಗಿ ಇರಬೇಕೆನ್ನುವುದಾದರೆ ನೀನು ದುಃಖಿಸದೆ ಆಶೀರ್ವದಿಸುತ್ತಿರು," ಎಂದು ಪ್ರಾರ್ಥಿಸಿದನು.

ಬಿಡಲಾರದೆ ತಾಯಿ ಕೌಸಲ್ಯೆಯನ್ನು ಬಿಟ್ಟು ಜನನಿಬಿಡವಾದ ರಾಜಬೀದಿಯಲ್ಲಿ ಪಾದಚಾರಿಯಾಗಿ ನಡೆದು ಹೊರಟನು. ಗಾಳಿವಾರ್ತೆಯಾಗಿ ಬಂದ ರಾಮನ ಅರಣ್ಯವಾಸದ ವಿಷಯವು ನಿಜವೋ ಸುಳ್ಳೋ ಎನ್ನುವ ಗೊಂದಲದಲ್ಲಿ ಬಿದ್ದಿದ್ದ ಜನ ಸಮೂಹವು ಆ ಗುಣವಂತನು ಪಾದಚಾರಿಯಾಗಿ ಬರುವುದನ್ನು ನೋಡಿ ತಲ್ಲಣಿಸಿ ಹೊಯಿತು. ಪಟ್ಟಾಭಿಷೇಕವೆಂದು ಹಿರಿ ಹಿಗ್ಗಿದ ಹಿಗ್ಗೆಲ್ಲ ದುಃಖವಾಗಿ ಹರಿಯತೊಡಗಿತು. ಜೀವಚ್ಛವಗಳಂತೆ ಜನರ ಮುಖ ಬಾಡಿತು. ರಾಮನು ತಲೆಯೆತ್ತಿ ನೋಡದೆ, ಯಾರೊಂದಿಗೂ ಮಾತಾಡದೆ ಸೀತಾಂತಃಪುರಕ್ಕೆ ಹೊರಟನು.

# ೧೨ ಒತ್ತಾಯಿಸಿ ಗೆದ್ದ ಸೀತೆ

ಏನು ನಡೆಯಿತೆನ್ನುವುದನ್ನು ತಿಳಿಯದೆ, ಸೀತೆಯು ಪಟ್ಟಾಭಿಷೇಕ ಮೂಹೂರ್ತ ಸಮೀಪಿಸುತ್ತಿದೆಯಲ್ಲಾ ಇನ್ನೂ ರಾಮನು ಏಕೆ ಬರಲಿಲ್ಲಾ ಎಂದು ಬಾಗಿಲತ್ತ ನೋಡುತ್ತಿದ್ದಳು. ಉಪವಾಸ ವ್ರತವನ್ನು ಪೂರ್ತಿಮಾಡಿ ಗಂಧ ಪುಷ್ಪಾಕ್ಷತಾದಿ ಗಳನ್ನು ಕೈಯ್ಯಲ್ಲಿಟ್ಟುಕೊಂಡು, ರಾಮನು ಯಾವಾಗ ಬರುವನೋ ಎಂದು ಆತಂಕಪಡುತ್ತಿದ್ದಳು. ಅವಳೊಂದಿಗೆ ಅಂತಃಪುರದಲ್ಲಿದ್ದವರೆಲ್ಲರೂ ಸಂತೋಷ ದಿಂದ ಓಲಾಡುತ್ತಿದ್ದರು. ಮಂಗಳಾಂಗಿಯರು ಆರತಿಯನ್ನು ಸಿದ್ಧವಾಗಿಟ್ಟುಕೊಂಡಿ ದ್ದರು. ಅಷ್ಟರಲ್ಲಿ, ಅಪೂರ್ವವಾದ ರೀತಿಯಲ್ಲಿ ಅಲಂಕರಿಸಲ್ಪಟ್ಟ ಆ ಅರಮನೆ ಯೊಳಕ್ಕೆ ತಲೆ ತಗ್ಗಿಸಿಕೊಂಡು ನಡೆದು ಬಂದ ರಾಮನನ್ನು ನೋಡಿ ಎಲ್ಲರೂ ದಿಗ್ಭ್ರಾಂತರಾದರು. ಸೀತಾದೇವಿಯು ತನ್ನನ್ನು ತಾನೇ ನಂಬದವಳಾದಳು. ದೇಹವು ಗಡಗಡ ನಡುಗಿತು. ತುಟಿಗಳು ಅದುರಿದವು. "ಪ್ರಭೂ! ಏನಿದು? ಹೀಗೇಕಿದ್ದೀರಿ? ಈ ದಿನ ಬೃಹಸ್ಪತಿ ದೇವಾಂಕಿತ ದಿನವೆಂದರಲ್ಲಾ? ಶುಭಕರವಾದ ದಿನವೆಂದು, ಪುಷ್ಯಮೀ ನಕ್ಷತ್ರದಲ್ಲಿ ನಿಮ್ಮ ಯುವ ರಾಜ್ಯಾಭಿಷೇಕವೆಂದು ಬ್ರಾಹ್ಮಣೋತ್ತಮರು ಹೇಳಿದರಲ್ಲಾ? ನಿಮ್ಮ ದಿವ್ಯ ಸುಂದರ ವಿಗ್ರಹಕ್ಕೆ ಸೂರ್ಯ ಪ್ರಭೆಯ ಸಹಸ್ರ ರತ್ನಖಚಿತ ಕಡ್ಡಿಗಳ ಶ್ವೇತಚ್ಛತ್ರ ಹಿಡಿದಿಲ್ಲವೇಕೆ? ಚಂದ್ರ ಮಂಡಲದಂತೆ ಥಳಥಳಿ ಸುವ, ಹಂಸಗಳಂತೆ ತೋರುವ ಚಾಮರಗಳನ್ನೇಕೆ ಬೀಸುತ್ತಿಲ್ಲ? ವಂದಿಮಾಗಧರು ಸ್ತೋತ್ರ ಪಾಠ ಮಾಡುತ್ತಿಲ್ಲವೇಕೆ? ನಾಥಾ! ವೇದ ಪಾರಂಗತ ಬ್ರಾಹ್ಮಣರು ಪಟ್ಟಾಭಿಷಿಕ್ತರಾಗಲಿರುವ ನಿಮ್ಮ ಶಿರವನ್ನು ಜೇನುತುಪ್ಪ ಮೊಸರುಗಳಿಂದ ಅಭಿಷೇಕ ಮಾಡಿಲ್ಲವೇಕೆ? ಮಂತ್ರಿಗಳು, ಸಾಮಂತರು, ಪ್ರಜಾಮುಖ್ಯರು ನಿಮ್ಮೊಂದಿಗೆ ನಡೆದು ಬರಲಿಲ್ಲವೇಕೆ? ನೀಲಮೇಘವು ನೆಲದ ಮೇಲೆ ನಡೆದು ಬರುತ್ತಿದೆಯೋ ಇಲ್ಲವೆ ಕರಿಯ ಬೆಟ್ಟವೊಂದು ಕದಲುತ್ತಿದೆಯೋ ಎನ್ನುವಂತೆ ಕಾಣುವ ಶತ್ರುಂಜಯ ಪಟ್ಟದಾನೆ ನಿಮ್ಮ ಮುಂದೆ ನಡೆದು ಬರಲಿಲ್ಲೇಕೆ?" ಎಂದು ಸೀತಾದೇವಿಯು ಪ್ರಶ್ನೆಗಳ ಮಳೆಗರೆಯುತ್ತಿರಲು, ರಾಮನು ಏನೂ ತೋಚದೆ, ಸುಲಭವಾಗಿ ಅಲ್ಲೇ ಉತ್ತರಿಸಲು ಸಾಧ್ಯವಲ್ಲದ ವಿಷಯವಾದ್ದರಿಂದ, ಒಳಗೆ ಹೋಗಿ, ಸೀತೆಯನ್ನು ಹತ್ತಿರ ಕೂರಿಸಿಕೊಂಡು, "ಸೀತಾ! ಪೂಜ್ಯಪಾದರಾದ ನನ್ನ ತಂದೆಯು ನನ್ನನ್ನು ಇದೇ ಮುಹೂರ್ತದಲ್ಲಿ ಅರಣ್ಯಕ್ಕೆ ಕಳಿಸಲು ನಿಶ್ಚಯಿಸಿಕೊಂಡಿದ್ದಾರೆ. ಆದ್ದರಿಂದ ಈಗಿಂದೀಗಲೇ ಪಿತೃ ಆಜ್ಞೆ ಪರಿಪಾಲಿಸಬೇಕಾಗಿ ಬಂದಿದೆ," ಎಂದನು.

ಸೀತೆಗೆ ಈ ಮಾತನ್ನು ನಂಬಲಾಗಲಿಲ್ಲ. ಕಾರಣ ಹೇಳದೆ, ವಿಷಯವನ್ನು ಮಾತ್ರವೇ ಹೇಳಿದ್ದರಿಂದ, ಸೀತೆಯು, "ನಾಥಾ! ಅರಣ್ಯಕ್ಕೆ ಕಳಿಸುವಂಥ ಅಪರಾಧಗಳನ್ನು ನೀವೇನು ಮಾಡಿದಿರಿ? ಧರ್ಮಾತ್ಮರಾದ ದಶರಥ ಮಹಾರಾಜರು ನಿಷ್ಕಾರಣವಾಗಿ ಅಂಥ ಆಜ್ಞೆಯನ್ನು ವಿಧಿಸರು ಅಲ್ಲವೆ? ನೀವಾದರೂ ಅಂಥ ಅಪರಾಧವೇನೂ ಮಾಡಿಲ್ಲ ಅಲ್ಲವೆ? ಅಂದಮೇಲೆ, ನೀವು ವನವಾಸ ಮಾಡುವುದರಲ್ಲಿ ಅರ್ಥ ವೇನಿದೆ?" ಎಂದು ಪ್ರಶ್ನಿಸಿದಳು. ರಾಮನು ಮುಗುಳ್ನಕ್ಕು, "ಸೀತಾ, ಪೂರ್ವದಲ್ಲಿ, ಒಂದು ಸಂದರ್ಭದಲ್ಲಿ ತಾಯಿಯಾದ ಕೈಕೆದೇವಿಗೆ ನನ್ನ ತಂದೆಯು ಎರಡು ವರಗಳನ್ನು ಕೊಟ್ಟಿದ್ದರಂತೆ. ಅವುಗಳನ್ನು ಇದುವರೆಗೂ ಅವರು ಸಲ್ಲಿಸಿರಲಿಲ್ಲ. ಅವಳು ಕೇಳಿಯೇ ಇರಲಿಲ್ಲ. ಈಗ ಅವಳು ಆ ಎರಡು ವರಗಳನ್ನು ಕೇಳಿದ್ದಾಳೆ. ಅವುಗಳಲ್ಲಿ ಒಂದು ಭರತನಿಗೆ ಪಟ್ಟಾಭಿಷೇಕ ಮಾಡಬೇಕೆನ್ನುವುದು. ಎರಡನೆ ಯದು ನಾನು ಜಟಾವಲ್ಕಲಗಳನ್ನು ಧರಿಸಿ ಹದಿನಾಲ್ಕು ಸಂವತ್ಸರ ವನವಾಸ ಮಾಡಬೇಕೆನ್ನುವುದು ಅವಳ ಕೋರಿಕೆ. ನನ್ನ ತಂದೆಯು ಪರಮ ಧಾರ್ಮಿಕರು. ಆಡಿದ ಮಾತಿಗೆ ತಪ್ಪದವರು. ಅದಕ್ಕಾಗಿ ತಲೆ ಬಾಗಿದ್ದಾರೆ. ಆದ್ದರಿಂದ, ನಿನ್ನನ್ನು ನೋಡಿ ಹೋಗೋಣವೆಂದು ನಾನಿಲ್ಲಿಗೆ ಬಂದೆ. ಸೀತಾ! ನೀನು ಮಹಾ ಪೂಜ್ಯ ವಂಶದಲ್ಲಿ ಜನಿಸಿದ್ದೀಯೆ, ನೀನು ಸಮಸ್ತ ಧರ್ಮಗಳನ್ನೂ ತಿಳಿದವಳು. ಪರಮ ಧರ್ಮಾತ್ಮ, ಜ್ಞಾನಿ, ಜನಕ ಮಹಾರಾಜನು ನಿನ್ನ ತಂದೆ. ನೀನು ಧರ್ಮಚಾರಿಣಿ. ನಾನು ಈ ದಿನವೇ ಅಡವಿಗೆ ಹೋಗಬೇಕಾಗಿದೆ. ಪರಂಪರಾಗತವಾದ ಈ ದೇಶಕ್ಕೆ ಭರತನೇ ಪ್ರಭು. ಪಟ್ಟಾಭಿಷೇಕವಾದೊಡನೆ ಅವನು ನಿನಗೆ ನಮಸ್ಕರಿಸಲು ಬರುತ್ತಾನೆ. ಆಗ ನೀನು ನನ್ನ ತಮ್ಮನೆದುರು ನನ್ನನ್ನು ಶ್ಲಾಘಿಸುವುದಾಗಲೀ ನನ್ನನ್ನು ಅರಣ್ಯಕ್ಕೆ ಕಳಿಸಿದರೆನ್ನುವ ದುಃಖದಿಂದ ಅವನನ್ನು ಜರಿಯುವುದಾಗಲೀ ಮಾಡಬಾರದು. ರಾಜರು ತಮ್ಮನ್ನು ಆರಾಧಿಸಿ ಸೇವೆ ಮಾಡುವವರನ್ನೇ ಮೆಚ್ಚಿ ಕೊಳ್ಳುವರು. ಆದ್ದರಿಂದ ನೀನು ನನ್ನ ಗುಣಗಾನ ಮಾಡುವುದಾಗಲೀ ಅವನನ್ನು ತೆಗಳುವುದಾಗಲೀ ಮಾಡಬಾರದು. ದೇಹರೀತಿಯಾಗಿ ಅವನು ನನಗೆ ತಮ್ಮ, ನಿನಗೆ ಮೈದುನ. ಆದರೆ ಸ್ಥಾನ ರೀತಿಯಾಗಿ ನಿನಗೂ ನನಗೂ ಅವನು ಪ್ರಭು. ಅಂಥ ಪ್ರಭುವಿಗೆ ತಕ್ಕ ಗೌರವವನ್ನು ನೀನು ಸಲ್ಲಿಸು, ಭರತನಿಗೆ ಅಪ್ರಿಯವಾಗುವಂತೆ ನಡೆದುಕೊಳ್ಳಬೇಡ.

ಓ! ಕಲ್ಯಾಣೀ! ನೀನು ಭರತನ ಆಜ್ಞೆಯನ್ನೇ ಅಲ್ಲದೆ, ವೃದ್ಧನಾದ ದಶರಥನ ಆಜ್ಞೆಯನ್ನೂ ಶಿರಸಾವಹಿಸಿ ನೆರವೇರಿಸು. ನನ್ನ ವಿಯೋಗದಿಂದ ಸೊರಗಿ ಹೋಗಿ ರುವ ಕೌಸಲ್ಯೆಗೆ ಸೇವೆ ಸಲ್ಲಿಸಿ, ಅವಳನ್ನು ದುಃಖದಿಂದ ಪಾರು ಮಾಡಲು ಅಗತ್ಯವಾದುದನ್ನು ಮಾಡು. ಮಿಕ್ಕ ಇಬ್ಬರು ತಾಯಂದಿರೂ ಅಂದರೆ, ಕೈಕೆ ಮತ್ತು

ಸುಮಿತ್ರೆಯರೂ ನನ್ನನ್ನು ಒಂದೇ ಪ್ರೇಮದಿಂದ ನೋಡಿಕೊಂಡರು. ಆದ್ದರಿಂದ ಅವರ ಆಜ್ಞೆಯ ಗೆರೆಯನ್ನೂ ದಾಟಬೇಡ. ಭರತ ಶತ್ರುಘ್ನರು ನನ್ನ ಪ್ರಾಣ ಸಮಾನರು. ಅವರಿಬ್ಬರನ್ನೂ ನಿನ್ನ ಜೊತೆ ಹುಟ್ಟಿದವರಂತೆ ಇಲ್ಲವೆ ಮಕ್ಕಳ ಹಾಗೆ ಆದರಿಸು. ಓ ಭೂಮಿನೀ! ನಾನು ಇಲ್ಲವೆನ್ನುವ ಕಾರಣದಿಂದ ಮಿಥಿಲಾನಗರಕ್ಕೆ ಹೋಗಬೇಡ. ಅಯೋಧ್ಯೆಯಲ್ಲೇ ಇದ್ದು, ತಾಯಿ ತಂದೆಯರನ್ನು ಉಪಚರಿಸುತ್ತಾ ಅವರನ್ನು ಸೇವಿಸುತ್ತಾ ಅವರಿಗೆ ಸಂತೋಷ ನೀಡುತ್ತಿರು," ಎಂದನು.

**ಸೀತೆ ನಕ್ಕಳು**: ಹೀಗೆ ಸೀತೆಗೆ ಕರ್ತವ್ಯಗಳನ್ನು ಬೋಧಿಸುತ್ತಿದ್ದಾಗ ಅವಳಿಗೆ ಹಿಡಿಸಲಾರದಷ್ಟು ನಗು ಬಂದಿತು, ನಾಚಿಕೆ ಆಯಿತು. ಸುಮ್ಮನಿರಲಾರದೆ, "ರಾಮಾ! ನೀವು ದಶರಥ ಮಹಾರಾಜನ ಪುತ್ರರಾಗಿ ಇಂಥ ಅಸಂಬದ್ಧ ಮಾತು ಆಡಿದ್ದನ್ನು ಇದುವರೆಗೂ ಕೇಳಿರಲಿಲ್ಲ. ತಾಯಿ-ತಂದೆ, ಮಗ-ಸೊಸೆ ಮುಂತಾದವರು ಅವರವರು ಮಾಡಿದ ಪಾಪ ಪುಣ್ಯಗಳಂತೆ ಶುಭಾಶುಭಗಳನ್ನು ಅನುಭವಿಸುವರು. ಹೆಂಡತಿಯೊಬ್ಬಳೇ ಗಂಡನ ಶುಭಾಶುಭಗಳ ಭಾಗವನ್ನು ಅನುಭವಿಸುವಳು. ದಶರಥ ಮಹಾರಾಜನು ನಿಮ್ಮನ್ನು ಅಡವಿಗೆ ಹೋಗೆಂದು ಹೇಳಿದ್ದರೆ ನನ್ನನ್ನೂ ಹೋಗೆಂದು ಹೇಳಿದಂತೆಯೇ ಹೆಂಗಸೊಬ್ಬಳನ್ನು ತಂದೆತಾಯಿಗಳು ಪೋಷಿಸ ಬಹುದು, ಮಗ ಆದರಿಸಬಲ್ಲನು, ದಾಸಿಯರು ಸೇವಿಸಬಲ್ಲರು. ಆದರೆ ಅವರು ಅವಳಿಗೆ ದಿಕ್ಕಾಗಲಾರರು. ನೀವಾಡುವ ಮಾತುಗಳಿಂದ ನಗು ಬರುತ್ತಿದೆ. ಮದುವೆ ಯಾಗುವ ಮೊದಲೇ ನನಗೆ ನನ್ನ ತಂದೆಯು ಸರ್ವಧರ್ಮಗಳನ್ನೂ ಬೋಧಿಸಿ ದ್ದಾನೆ. ನಾನೇನು ಅಜ್ಞಾನಿಯಲ್ಲ. ಸ್ವಾರ್ಥಪರಳೂ ಅಲ್ಲ, ಹೆಚ್ಚಿನ ಮೊಂಡುತನವೂ ನನಗಿಲ್ಲ. ಸರ್ವಧರ್ಮಗಳನ್ನೂ ತಿಳಿದ ನನಗೆ ನೀವು ಪ್ರತ್ಯೇಕವಾಗಿ ಧರ್ಮವನ್ನು ಹೇಳುವ ಅವಶ್ಯಕತೆ ಇಲ್ಲ. ನಾನು ಇಲ್ಲಿದ್ದರಲ್ಲವೆ ಅತ್ತೆ, ಮಾವ, ಮೈದುನ, ಪ್ರಭು ಅವರನ್ನು ಸೇವಿಸಬೇಕಾದ ಕೆಲಸ? ನೀವು ಹೇಳಬೇಕಾದ ಅವಶ್ಯಕತೆಯಾದರೂ ಎಲ್ಲಿದೆ? ನಾನು ಆನಂದವಾಗಿ ನಿಮ್ಮೊಂದಿಗೇ ಬರುತ್ತೇನೆ.

**ತೀರದ ಆಸೆ**: ಅರಣ್ಯವಾಸ ಮಾಡಬೇಕೆಂದು ನನಗೆ ಎಷ್ಟೋ ಕಾಲದಿಂದ ತೀರದ ಒಂದು ಆಸೆ ಇದೆ. ಅದು ಇಂದು ನನ್ನ ಪತಿದೇವರಿಂದಲೇ ಪ್ರಾಪ್ತವಾಗುತ್ತಿರುವುದು ನನ್ನ ಅದೃಷ್ಟ. ಈ ವಿಷಯದಲ್ಲಿ, ನೀನು ಬರಲೇಬಾರದೆಂದು ನೀವು ಶಾಸನ ಮಾಡಿದರೂ ನಾನು ಕೇಳುವುದಿಲ್ಲ. ನನ್ನ ಮಾತನ್ನು ಕೇಳಲಿಲ್ಲವೆಂದು ನೀವು ಕೋಪಿಸಿಕೊಳ್ಳಬೇಡಿ. ಕುಡಿದು ಬಿಟ್ಟ ನೀರಿನಂತೆ ನನ್ನನ್ನು ಇಲ್ಲಿ ಬಿಟ್ಟು ಹೋಗು ವುದು ನೀತಿಯಲ್ಲ. ನನ್ನ ಮಾತನ್ನು ನೀವು ನಂಬಿ. ನಾನು ಒಂದು ಕ್ಷಣ ಕೂಡ ಅಯೋಧ್ಯೆಯಲ್ಲಿ ಇರೆನು. ನಿಮ್ಮೊಂದಿಗೆ ಕರೆದೊಯ್ಯಿರಿ," ಎಂದು ಪಾದಗಳನ್ನು ಹಿಡಿದು ಪ್ರಾರ್ಥಿಸಿದಳು. "ನಿಮಗೆ ಪಟ್ಟಾಭಿಷೇಕವಾಗಲಿಲ್ಲ ಎನ್ನುವ ಚಿಂತೆ ನನಗೆ

ಎಷ್ಟು ಮಾತ್ರಕ್ಕೂ ಇಲ್ಲ. ನನಗೆ ನೀವು ಪ್ರಧಾನವೇ ವಿನಾ ರಾಜ್ಯಾಭಿಷೇಕ ಪ್ರಧಾನವಲ್ಲ. ನೀವೊಬ್ಬರಿದ್ದರೆ ಅದೇ ನನ್ನ ರಾಜ್ಯ. ಅದೇ ನನ್ನ ಭಾಗ್ಯ," ಎಂದು ವಾದಿಸಿದಳು. ರಾಮಚಂದ್ರನು ಅಡವಿಯ ವಾಸವು ಸಾಮಾನ್ಯವಲ್ಲವೆಂದೂ ಅಲ್ಲಿ ಕ್ರೂರ ಮೃಗಗಳೂ ರಾಕ್ಷಸರೂ ದರೋಡೆಕೋರರೂ ಇರುವರೆಂದೂ ನದಿಗಳನ್ನೂ ದಟ್ಟವಾದ ಪೊದೆಗಳನ್ನೂ ದಾಟಬೇಕಾಗುವುದೆಂದೂ ಅವಳೆಂದೂ ನಡೆದವಳಲ್ಲವಾದ್ದರಿಂದ ತುಂಬಾ ಶ್ರಮಪಡಬೇಕಾಗುವುದೆಂದೂ ಬಗೆಬಗೆಯಾಗಿ ಅವಳಿಗೆ ಹೇಳಿ ತನ್ನೊಂದಿಗೆ ಬರದಂತೆ ಅಡ್ಡಿಪಡಿಸಲು ನೋಡಿದನು.

**ಸೀತೆ ಆಶಿಸಿದ ಸೇವೆ**: ಅದಕ್ಕೆ ಸೀತೆಯು "ಪ್ರಭೂ! ಎಂಥ ಕ್ರೂರ ಮೃಗಗಳಿದ್ದರೂ ಎಂಥ ದಟ್ಟವಾದ ಅರಣ್ಯದಲ್ಲಿ ಪ್ರವಾಸ ಮಾಡುವುದು ನನಗೆ ಚೆನ್ನಾಗಿ ಗೊತ್ತು. ಅದು ನನಗೇನೂ ಬಾಧೆ ಮಾಡುವುದಿಲ್ಲ. ನಾನೇ ಮುಂದೆ ನಡೆದು ನಿಮಗೆ ದಾರಿ ಸರಿಸುತ್ತಾ ಹೋಗುವುದಾದರೆ ಮತ್ತೂ ಸಂತೋಷವೇ. ಮುಳ್ಳು, ಕಲ್ಲು, ಕಡ್ಡಿಗಳನ್ನು ಆಯ್ದು ಬಿಸಾಡಿ ನಿಮಗೆ ಹಾಯಾಗುವಂತೆ ಮಾಡುತ್ತೇನೆ. ಅಂಥ ಸೇವೆಮಾಡುವುದಕ್ಕಾದರೂ ನಿಮ್ಮೊಂದಿಗೆ ನನ್ನನ್ನು ಕರೆದೊಯ್ಯಿರಿ. ಈ ಅಯೋಧ್ಯಾ ಅಂತಃಪುರದಲ್ಲಿ ನನಗಂಥ ಸೇವೆ ಸಿಕ್ಕಲಿಲ್ಲ. ಎಲ್ಲ ಸೇವೆಗಳನ್ನೂ ಇಲ್ಲಿ ದಾಸದಾಸಿಯರೇ ನಿಮಗೆ ಮಾಡುತ್ತಿದ್ದಾಗ ನಾನು ಬಹಳವಾಗಿ ಆ ಬಗ್ಗೆ ಯೋಚಿಸುತ್ತಿದ್ದೆ. ದಾಸ ದಾಸಿಯರಿಲ್ಲದ ಆ ಅರಣ್ಯದಲ್ಲಿ ನನ್ನ ಪ್ರಭುವಿನ ಸೇವೆಯನ್ನು ನಾನೇ ಮಾಡಬೇಕು. ಅದು ನನ್ನ ಭಾಗ್ಯ. ಅಂಥ ಪವಿತ್ರ ಅವಕಾಶವನ್ನು ನನಗಿತ್ತು ಧನ್ಯಳನ್ನಾಗಿಸಿ," ಎಂದು ಪರಿಪರಿ ವಿಧದಲ್ಲಿ ಪ್ರಾರ್ಥಿಸಿದ್ದನ್ನು ನೋಡಿ ರಾಮನು ಅನುಕಂಪದಿಂದ, "ಸೀತಾ! ನೀನು ಭಾವಿಸಿದಂತೆ ಅಲ್ಲಿ ಸುಖವಾಗಿ ವಾಸಿಸುವುದು ಸಾಧ್ಯವಿಲ್ಲ. ಅಲ್ಲಿ ಬಾಧೆಪಡಬೇಕಾಗುವುದು, ಯೋಚಿಸು," ಎಂದನು.

ಆದರೂ, ಸೀತೆಯು ಬಿಡದೆ, "ರಾಮಾ! ನಿಮ್ಮ ವ್ರತಕ್ಕೆ ನಾನು ಯಾವ ರೀತಿಯ ಭಂಗವನ್ನೂ ತರುವುದಿಲ್ಲ. ನೀವು ಏನೋ ಮರೆಮಾಚುತ್ತಿರುವಂತಿದೆ. ನನ್ನೊಂದಿಗೆ ಗುಟ್ಟೇಕೆ? ನಿಮ್ಮೊಂದಿಗೆ ವನದ ಸುಗಂಧಗಳನ್ನು ಆಘ್ರಾಣಿಸುತ್ತಾ ಕಂದ ಮೂಲಾದಿಗಳನ್ನು ಭಕ್ಷಿಸುತ್ತಾ ನಿಯಮದಿಂದ ಬ್ರಹ್ಮಚಾರಿಣಿ ವ್ರತವನ್ನು ಪಾಲಿಸುತ್ತೇನೆ. ಎಷ್ಟೆಷ್ಟೋ ಜನರನ್ನು ಕಾಪಾಡುವ ಇನಕುಲಪತಿಗೆ ನನ್ನೊಬ್ಬಳನ್ನು ಕಾಪಾಡುವುದು ಕೈಲಾಗದೇ? ಅದನ್ನು ನಾನು ನಂಬೆನು! ನನಗೆ ಅದು ಬೇಕು ಇದು ಬೇಕು ಎಂದು ನಿಮ್ಮನ್ನು ಬಾಧಿಸುವುದಿಲ್ಲ. ನಿಮಗೆ ಎಂಥ ಶ್ರಮವನ್ನು ಕೊಡುವುದಿಲ್ಲ ಪ್ರಭೂ! ನಾನು ನಿಮ್ಮೊಂದಿಗೆ ಬರುವುದು ತಪ್ಪಿದ್ದಲ್ಲ. ನಿಮ್ಮ ಪಾದಗಳ ಬಳಿ ಇರುತ್ತೇನೆ, ಅದು ನನಗೆ ಪರಮಾನಂದ ಉಂಟುಮಾಡುವುದು. ರಾಮಾ! ನೀವಲ್ಲದೆ ಅನ್ಯರನ್ನು ನಾನು ಅರಿಯೆ, ನಿಮ್ಮನ್ನು ಬಿಟ್ಟು ನಿಮಿಷವೂ ಇರುವುದಿಲ್ಲ, ಇರಲಾರೆ.

ಹಾಗೊಮ್ಮೆ ನೀವು ಪಟ್ಟುಹಿಡಿದು ನನ್ನನ್ನು ಅಯೋಧ್ಯೆಯಲ್ಲಿ ಬಿಟ್ಟು ಹೋದರೆ ನೀವು ಅರಣ್ಯ ಸೇರುವ ಮೊದಲೇ ಸೀತೆಯು ಪ್ರಾಣಸಹಿತ ಇರುವುದಿಲ್ಲ. ಇದು ಪರಮ ಸತ್ಯ," ಎಂದು ಕಣ್ಣೀರಿನ ಕೋಡಿ ಹರಿಸಿದಳು.

**ಭರಿಸುವುದು ಭಾರವು**: ರಾಮನು ಅವಳನ್ನು ಸಮಾಧಾನ ಪಡಿಸುತ್ತಾ, "ಓ ಸೀತಾ! ನೀನು ಮಹಾ ಕುಲೀನಳು, ಧರ್ಮಿಷ್ಟಳು. ನೀನು ನಿನ್ನ ಧರ್ಮವನ್ನು ಆಚರಿಸುತ್ತಾ ಇಲ್ಲೇ ಇರುವುದು ಒಳ್ಳೆಯದು. ನೀನು ಇಷ್ಟಬಂದ ಹಾಗೆ ಮಾಡ ಕೂಡದು. ನಿನಗೆ ಇಷ್ಟ ಬಂದ ಹಾಗೆ ಮಾಡುವುದಕ್ಕೆ ಸ್ವಾತಂತ್ರ್ಯವಿಲ್ಲ. ನೀನು ಹೇಳಿದ ಹಾಗೆ ಕೇಳಬೇಕಾಗುವುದು. ಆದ್ದರಿಂದ ನೀನು ಈ ಆಲೋಚನೆಗಳನ್ನು ಬಿಡು. ನಿನ್ನ ಒಳಿತಿಗೆ ನಾನು ಹೇಳುತ್ತಿದ್ದೇನೆ. ನಿನ್ನನ್ನು ರಕ್ಷಿಸುವುದು ನನಗೆ ಅತಿ ಭಾರವಾದ ಹೊಣೆಯಾಗುವುದು. ದೊಡ್ಡ ದೊಡ್ಡ ಬೆಟ್ಟಗಳಿಂದ ಶಿಲೆಗಳು ಜಾರಿಬೀಳುವ ಸಂಭವ ಉಂಟು. ಬೆಟ್ಟದ ಗುಹೆಗಳಲ್ಲಿ ವಾಸಿಸುವ ಕ್ರೂರಮೃಗಗಳ ಗರ್ಜನೆಯು ಮಹಾ ಭಯಂಕರವಾಗಿರುವುದು. ಕಾಡಿನಲ್ಲಿ ಸಿಂಹ ಮತ್ತಿತರ ಕ್ರೂರಮೃಗಗಳು ಸ್ವೇಚ್ಛೆಯಾಗಿ ಸಂಚರಿಸುತ್ತಿರುತ್ತವೆ. ನದಿಗಳನ್ನು ದಾಟಿ ಹೋಗ ಬೇಕಾಗುತ್ತದೆ. ದೊಡ್ಡ ದೊಡ್ಡ ಬಂಡೆಗಳಿಂದ ಕೆಳಕ್ಕೆ ಧುಮುಕಬೇಕಾಗುತ್ತದೆ. ಈ ಎಲ್ಲ ಕಷ್ಟಗಳನ್ನೂ ಯೋಚಿಸಿಯೇ ನಿನಗೆ ಇಷ್ಟು ಕಟ್ಟುನಿಟ್ಟಾಗಿ ಹೇಳಬೇಕಾಯಿತು. ಜಟೆಗಳನ್ನು ಧರಿಸಿ, ವಲ್ಕಲಗಳನ್ನು ಕಟ್ಟಿಕೊಂಡು ಋಷಿ ಜೀವನ ಸಾಗಿಸಬೇಕಾ ಗುತ್ತದೆ. ನಾವು ಸಂಧ್ಯಾವಂದನೆಗಳನ್ನು ಆಚರಿಸುವಾಗ ಒಂಟಿಯಾಗಿರುವ ನಿನಗೇ ನಾದರೂ ಅಪಾಯ ಸಂಭವಿಸಬಹುದು. ಎಂತಹ ಆಪತ್ತಿನಲ್ಲೂ ನಾನು ನಿಯಮ ವನ್ನು ಬಿಡುವುದಿಲ್ಲವೆನ್ನುವುದನ್ನು ನೀನು ಚೆನ್ನಾಗಿ ಬಲ್ಲೆ. ಯಾವ ಸಮಯ ಹೇಗಿರುತ್ತೋ ಹೇಳಲಾಗುವುದಿಲ್ಲ," ಎಂದನು.

**ಸೀತೆಗೆ ಭಯವೇಕೆ**: ರಾಮನಾಡಿದ ಭಯ ಹುಟ್ಟಿಸುವ ಮಾತುಗಳಿಗೆ ಸೀತೆಯು ಹೆದರಲಿಲ್ಲ. "ರಾಮಾ! ಹಳ್ಳಿ ಮಕ್ಕಳಿಗೆ, ಶಾಸ್ತ್ರಹೀನಳಿಗೆ, ಪೆದ್ದಳಿಗೆ ಹೇಳಿದಂತೆ ನನಗೆ ಹೇಳುವುದು ಬೇಡ. ನಿಮ್ಮ ಶಕ್ತಿ ಸಾಮರ್ಥ್ಯಗಳನ್ನು ನಾನು ಚೆನ್ನಾಗಿ ಬಲ್ಲೆ. ನಿಮ್ಮ ಕೈಲಾಗದ್ದು ಈ ಲೋಕದಲ್ಲೇ ಅಲ್ಲ, ಹದಿನಾಲ್ಕು ಲೋಕಗಳಲ್ಲೂ ಇಲ್ಲ. ಅಂಥ ನೀವು ನನ್ನ ಜೊತೆಯಲ್ಲಿರುವಾಗ ನನಗೆ ಭಯವೇಕೆ? ಹೋಗಲಿ, ನಾನು ಯಾವುದೋ ಕ್ರೂರ ಮೃಗದ ಬಾಯಲ್ಲಿ ಬಿದ್ದರೂ ನಿಮ್ಮ ಸನ್ನಿಧಿಯಲ್ಲಿ ಆನಂದವಾಗಿ ಪ್ರಾಣ ಬಿಡಲು ನಾನು ಸಿದ್ಧ.

**ಸೀತೆಯ ರಾಮನು ಅರ್ಧಾಂಗಿ**: ನೀವಿಲ್ಲದ ಜೀವಿತವನ್ನು ನಾನು ಅಂಗೀಕರಿಸ ಲಾರೆ. ನನಗೆ ಇಷ್ಟ ಬಂದ ಹಾಗೆ ಮಾಡಲು ಅಧಿಕಾರವಿಲ್ಲ ಎಂದಿರಿ. ಇದನ್ನು ನೀವು

ಯೋಚಿಸಿ ಹೇಳಿದಿರಾ? ಅಥವಾ ನನ್ನನ್ನು ಮೋಸಪಡಿಸಲು ಆಡಿದ ಮಾತೋ ನನಗರ್ಥವಾಗುತ್ತಿಲ್ಲ. ನಿಮಗೆ ಯಾವ ಯಾವ ಹಕ್ಕುಗಳಿವೆಯೋ ಅವೆಲ್ಲವೂ ನನಗೂ ಇವೆ. ನಾನು ನಿಮ್ಮ ಅರ್ಧಾಂಗಿ, ನಿಮ್ಮ ದೇಹದಲ್ಲಿ ಅರ್ಧಭಾಗ ನನ್ನ ಹಕ್ಕು; ನನ್ನ ದೇಹದಲ್ಲಿ ಅರ್ಧಭಾಗ ನಿಮ್ಮ ಹಕ್ಕು. ಅಷ್ಟೇ ವಿನಾ ನೀವೂ ಸ್ವತಂತ್ರರಲ್ಲ, ನಾನೂ ಸ್ವತಂತ್ರಳಲ್ಲ. ನನ್ನ ವಿಷಯದಲ್ಲಿ ನಿಮಗೆಷ್ಟು ಅಧಿಕಾರವೋ ನಿಮ್ಮ ವಿಷಯದಲ್ಲಿ ನನಗೂ ಅಷ್ಟೇ ಅಧಿಕಾರ ಉಂಟು. ಆದರೆ ನಾನು ಅಧಿಕಾರವನ್ನು ಹಿಡಿದು ವಾದಿಸುವುದಿಲ್ಲ. ನಿಮ್ಮ ಜೊತೆಯಲ್ಲಿರಲು ಕೋರಿ ಆಡುತ್ತಿರುವ ಮಾತು ಗಳಿವು," ಎಂದು ಗಟ್ಟಿಯಾಗಿ ಆಡಿದ ಸೀತೆಯ ಮಾತುಗಳಿಗೆ ರಾಮನು ಮತ್ತಷ್ಟು ಗಟ್ಟಿಯಾಗಿ, "ಸೀತಾ! ನೀನು ಹಕ್ಕಿನ ವಿಷಯದಲ್ಲಿ ಗೊಂದಲಕ್ಕೆ ಸಿಕ್ಕಿದ್ದೀಯೆ. ನಾನು ಅರಣ್ಯಕ್ಕೆ ಹೋಗುವುದರಿಂದ ವೃದ್ಧರಾದ ನನ್ನ ತಂದೆ ತಾಯಿಯರು ನನಗಾಗಿ ದುಃಖಿಸುವರು. ಅಂಥ ಸಮಯದಲ್ಲಿ ನೀನು ಅತ್ತೆ ಮಾವಂದಿರ ಮನಸ್ಸನ್ನು ತಿಳಿದು ಅವರ ಸೇವೆ ಮಾಡುತ್ತಾ, ಧೈರ್ಯ ಹೇಳುತ್ತಾ ಇರುವುದು ನಿನ್ನ ಕರ್ತವ್ಯ.

**ಕೌಸಲ್ಯೆಗೊಂದು ಬೋಧೆ, ಸೀತೆಗೊಂದು ಬೋಧೆ**: ಸಮಯಕ್ಕೆ ತಕ್ಕ ಹಾಗೆ ಜೀವಿಸುವುದೊಳ್ಳೆಯದು, ಅತ್ತೆ ಮಾವಂದಿರ ಜೊತೆಯಲ್ಲಿದ್ದು ಅವರನ್ನು ಸೇವಿಸು, ಅದೇ ನನಗೆ ಆನಂದ," ಎಂದು, ದೃಢ ನಿರ್ಧಾರ ಮಾಡಿದವನಂತೆ ಆಜ್ಞೆ ಮಾಡಿದನು. ಸೀತೆಯು ಮುಗುಳ್ನಕ್ಕು, "ರಾಮಾ! ಸ್ವಂತ ಮಗನೇ ಅಪ್ಪ ಅಮ್ಮನನ್ನು ಕಠಿಣವಾದ ದುಃಖದಲ್ಲಿ ಮುಳುಗಿಸಿ, ಕರಡಿಯಂತೆ ಪಟ್ಟು ಹಿಡಿದು ಸರ್ವಸ್ವವನ್ನೂ ತ್ಯಜಿಸಿ ಅಡವಿಗೆ ಹೊರಟಿರುವಾಗ, ಪರರ ಮನೆಯಿಂದ ಬಂದ ಸೊಸೆಗೆ ಅತ್ತೆ ಮಾವಂದಿರನ್ನು ನೋಡಿಕೊಳ್ಳುವ ಬಾಧ್ಯತೆ ಬರುವುದೇ, ನೀವೇ ಯೋಚಿಸಿ! ಸ್ವಂತ ಮಗನನ್ನು ಬಿಡಲಾರದೆ ಕಾರಡವಿಗೆ ತಾನೂ ಬರುತ್ತೇನೆಂದು ಕಣ್ಣುಗಳು ಇಂಗುವಂತೆ ಅತ್ತರೂ ಪತಿ ಸೇವೆಯೇ ಪತ್ನಿಗೆ ಪ್ರಧಾನ ಕರ್ತವ್ಯವೆಂದೂ ಮಗನ ಮೇಲಿನ ಪ್ರೀತಿಯಿಂದ ಮದುವೆಯಾದ ಗಂಡನನ್ನು ಬಿಟ್ಟು ಬರುವುದು ಇಕ್ಷ್ವಾಕು ವಂಶಕ್ಕೇ ತೀರದ ಅಪಕೀರ್ತಿಯೆಂದೂ ಮಹಾ ಮಹಾ ಧರ್ಮಗಳನ್ನು ಕೌಸಲ್ಯೆಗೆ ಬೋಧಿಸಿ, ಈಗ ನನ್ನ ಹತ್ತಿರ ಬಂದೊಡನೆಯೇ ನನಗೆ ಅತ್ತೆ ಮಾವಂದಿರ ಸೇವೆಯೇ ಕರ್ತವ್ಯವೆಂದು ಬೋಧಿಸುತ್ತಿದ್ದೀರಿ. ಇದರಲ್ಲಿ ಯಾವುದು ಸತ್ಯವೋ ನೀವೇ ಯೋಚಿಸಿ.

ಸತಿಗೆ ಪತಿ ದೈವವೆನ್ನುವುದು ಒಬ್ಬ ಕೌಸಲ್ಯೆಗೆ ಮಾತ್ರವೇ ಅಲ್ಲ, ಲೋಕದ ಸಮಸ್ತ ಸ್ತ್ರೀ ಜಾತಿಗೆ ಅನ್ವಯಿಸುವ ಸತ್ಯವೆನ್ನುವುದನ್ನು ಮರೆತಿರಿ. ಕೌಸಲ್ಯೆಗೆ ಹೇಳಿದ ನೀತಿಗಳು ನನಗೆ ಮಾತ್ರ ಏಕೆ ಅನ್ವಯಿಸುವುದಿಲ್ಲವೋ ಹೇಳದೆ ಹೋದಿರಿ. ನೀವು ಏನೇ ಹೇಳಿದರೂ ನಾನು ಪತಿಯ ಜಾಡನ್ನು ಬಿಡೆನು. ನಿಮ್ಮ ಮಾತನ್ನು

ಮೀರುತ್ತಿದ್ದೇನೆನ್ನುವ ಕೋಪದಿಂದ ನನ್ನನ್ನು ಕೊಂದರೂ ಸಂತೋಷಿಸುತ್ತೇನೆ. ಆದರೆ ನಿಮ್ಮನ್ನು ಮಾತ್ರ ಬಿಟ್ಟಿರಲಾರೆ.

**ಆ ದಿನಗಳ ಕಥೆ**: ರಾಮಚಂದ್ರಾ! ನೀವು ವನವಾಸ ಮಾಡುತ್ತೇನೆಂದು ಹೇಳಿದೊಡನೆಯೇ ಹಿಂದಿನ ಒಂದು ಘಟನೆಯು ನನ್ನ ತಲೆಯಲ್ಲಿ ಸುಳಿದು ಎಷ್ಟು ಸಂತೋಷಪಟ್ಟೆನೋ ನಿಮಗೆ ತಿಳಿಯದು. ನನ್ನ ತಾಯಿ ಮಹಾ ಸಾಧ್ವೀಮಣಿ. ನನಗೆ ಮದುವೆಯಾಗುವ ಮುಂಚೆ ಒಂದು ದಿನ ನನ್ನ ತಾಯಿಯು ನನ್ನನ್ನು ತೊಡೆಯ ಮೇಲೆ ಕೂರಿಸಿಕೊಂಡು, ನನ್ನ ಸೀತೆಗೆ ಎಂಥ ಗಂಡ ಸಿಕ್ಕುವನೋ ಸದ್ಗುಣ ಸಂಪನ್ನನು ಸಿಕ್ಕುವನೋ ಇಲ್ಲವೋ ಎಂದು ತಲೆ ಸವರುತ್ತಾ ಯೋಚಿಸುತ್ತಿರುವಾಗ ತಾಪಸಾಂಗನೆಯೊಬ್ಬಳು ಅಂತಃಪುರಕ್ಕೆ ಬಂದು ಅಮ್ಮನನ್ನು ನೋಡ ಬಯಸುತ್ತಿದ್ದಾಳೆಂದು ದಾಸಿಯು ಬಂದು ಹೇಳಿದಳು. ಅಮ್ಮನು ನನ್ನನ್ನು ಪಕ್ಕಕ್ಕೇ ಕೂರಿಸಿ, ಎದ್ದು ಹೊರಟಳು. ನಾನೂ ನಮ್ಮಮ್ಮನ ಜೊತೆಯಲ್ಲೇ ಹೊರಟೆ. ತಾಪಸಾಂಗನೆಗೆ ನನ್ನ ತಾಯಿಯು ನಮಸ್ಕರಿಸಿ, ನನ್ನನ್ನೂ ನಮಸ್ಕರಿಸುವಂತೆ ಹೇಳಿದಳು. ಅಮ್ಮನ ಆಜ್ಞೆಯಂತೆ ಶಿರಸಾವಹಿಸಿ ನಾನೂ ನಮಸ್ಕರಿಸಲು, ಆ ತಾಪಸಾಂಗನೆಯು ನನ್ನನ್ನು ಮನಸಾರೆ ನೋಡಿ, 'ಅಮ್ಮಾ! ನಿನ್ನ ಮಗಳು ಪತಿಯೊಂದಿಗೆ ವನವಾಸ ಮಾಡುವಳು,' ಎಂದಾಗ; ನನ್ನ ತಾಯಿಯು, 'ಇವಳಿಗೆ ಮದುವೆಯೇ ಆಗಿಲ್ಲ, ಇನ್ನು ಪತಿಯೊಂದಿಗೆ ಹೊಗುವುದೆಲ್ಲಿಗೆ,' ಎಂದು ಫಕ್ಕನೆ ನಕ್ಕಳು. ಆ ತಾಪಸಾಂಗನೆಯು, 'ಇಲ್ಲ, ಮದುವೆಯಾದ ಮೇಲೆ ಪತಿಯೊಂದಿಗೆ ಸ್ವಲ್ಪ ಕಾಲ ಕಾಡಿನಲ್ಲಿ ವಾಸ ಮಾಡಬೇಕಾಗಿ ಬರುವುದು,' ಎಂದು ಸ್ಪಷ್ಟವಾಗಿ ಹೇಳಿ ಹೋದಳು. ಅಂದು ಮೊದಲು ಇಂದಿನವರೆಗೂ ಪತಿಯೊಂದಿಗೆ ವನವಾಸಕ್ಕೆ ಹೋಗುವುದು ಯಾವಾಗ ಎಂದು ಉತ್ಸಾಹದಿಂದ ಎದುರು ನೋಡುತ್ತಿದ್ದೇನೆ!

ಅಂಥ ನನ್ನ ಬಹುಕಾಲದ ಆಸೆಯನ್ನು ನೆರವೇರಿಸಿ ನನ್ನನ್ನು ಆನಂದಪಡಿಸಿ," ಎಂದು ಪಾದಗಳ ಮೇಲೆ ಬಿದ್ದು ಪ್ರಾರ್ಥಿಸಿದ ಸೀತೆಯನ್ನು ನೋಡಿ, ರಾಮನು ಕನಿಕರಿಸಿ, ಪ್ರೇಮದಿಂದ ಸೀತೆಯನ್ನು ಮೇಲೆತ್ತಿ, "ಸೀತಾ! ನನ್ನೊಳಗಿನ ರಹಸ್ಯವನ್ನು ನಿನಗಲ್ಲದೆ ಬೇರೆ ಯಾರಿಗೆ ಹೇಳಲಿ? ಕೇಳು ನೀನು ಇನ್ನೂ ಚಿಕ್ಕ ವಯಸ್ಸಿನವಳು. ಅಡವಿಯಲ್ಲಿ ಅನೇಕ ಮಂದಿ ಋಷಿಗಳೂ ಮುನಿಗಳೂ ಇರುತ್ತಾರಾದ್ದರಿಂದ ನಾನು ಅವರ ಸೇವೆ ಮಾಡಲು ಹೋಗಬೇಕಾಗುತ್ತದೆ. ಬೇಟೆಗಾಗಿ ಬಂದ ಅನೇಕ ಮಂದಿ ರಾಜಪುತ್ರರೂ ರಾಜರೂ ಆಶ್ರಮಗಳಿಗೆ ಬರುವರು. ಅವರ ದೃಷ್ಟಿಯು ನಿನ್ನ ಮೇಲೆ ಬೀಳಬಹುದು. ಅದರ ನಿಮಿತ್ತವಾಗಿ ಮಾಡುವ ಪ್ರಯತ್ನಗಳು ಅನೇಕವಾಗಿ ಜರುಗಬಹುದು. ನಾನು ತಾಪಸ ವೇಷದಿಂದಿರುವುದರಿಂದ ಅವರೊಂದಿಗೆ ವೈರ ಕಟ್ಟಿಕೊಳ್ಳುವುದು ಒಳ್ಳೆಯದಲ್ಲ. ಈ ಕಾರಣದಿಂದಲಾದರೂ ನೀನು ಅಯೋಧ್ಯೆ

ಯಲ್ಲಿರು," ಎಂದು ಹೇಳುತ್ತಿದ್ದಂತೆ, ಸೀತೆಯು, "ರಾಮಾ! ನೀವು ಸಾಮಾನ್ಯ ಮಾನವರಂತೆ ಇಂಥ ಕಟ್ಟು ಕಥೆಗಳನ್ನು ಹೇಳಿ ನನ್ನನ್ನು ವಂಚಿಸುವುದು ಅನ್ಯಾಯ. ನೀವು ಜೊತೆಯಲ್ಲಿದ್ದರೆ ಸರ್ವೇಶ್ವರನೂ ಸಹಿತ ನನ್ನನ್ನು ಕಣ್ಣೆತ್ತಿ ನೋಡಲಾರ. ಹಾಗೇನಾದರೂ ನೋಡಿದರೆ ಅವನು ಅಲ್ಲೇ ಭಸ್ಮವಾಗಿ ಹೋದಾನು! ಈ ಕಾರಣದಿಂದಲಾದರೂ ನನ್ನನ್ನು ನಿಮ್ಮೊಂದಿಗೆ ಕರೆದುಕೊಂಡು ಹೋಗುವುದು ಇಲ್ಲದಿದ್ದರೆ, ನಾನು ಒಂಟಿಯಾಗಿ ಅಯೋಧ್ಯೆಯಲ್ಲಿದ್ದರೆ, ಅಂಥದೇನಾದರೂ ಸಂಭವಿಸಬಹುದೆನೋ! ಇಲ್ಲವೆ, ನಾನೇ ಇತರರ ಆನಂದವನ್ನು ನೋಡಿ ಸಹಿಸದೆ ಬಾಧೆಪಡುವಂತಾಗಬಹುದು. ಆದ್ದರಿಂದ, ನನ್ನನ್ನು ಒಂಟಿಯಾಗಿ ಬಿಟ್ಟು ಹೋಗದೆ ಜೊತೆಯಲ್ಲಿ ಕರೆದುಕೊಂಡು ಹೋಗುವುದರಿಂದ ನಮ್ಮಿಬ್ಬರ ಹೆಸರೂ ಪ್ರತಿಷ್ಠೆಗಳೂ ಜಗದ್ವ್ಯಾಪಿ ಆಗುವುದು.

**ಚಂದ್ರನೂ ಬೆಳದಿಂಗಳೂ**: ಅಷ್ಟೇ ಅಲ್ಲ, ರಾಮಾ! ನೀವು ರಾಮಚಂದ್ರ, ನಾನು ಸೀತಾ ಜಾತೆ, ಅಂದರೆ, ನಾನು ಚಂದ್ರನಿಂದ ಹೊರಟ ಆಹ್ಲಾದಕರವಾದ ಶೀತಲ ಬೆಳದಿಂಗಳು. ಚಂದ್ರನು ಅರಣ್ಯದಲ್ಲೂ ಬೆಳದಿಂಗಳು ಅಯೋಧ್ಯೆಯಲ್ಲೂ ಇರಲು ಸಾಧ್ಯವಿಲ್ಲ, ಅಲ್ಲವೆ? ಚಂದ್ರನಲ್ಲಿ ಬೆಳದಿಂಗಳು ಕೂಡಿಯೇ ಇರುವುದು, ಅವುಗಳ ವಿಯೋಗ ಸಂಭವಿಸದು. ಇವೆರಡಕ್ಕೂ ನಿರಂತರ ಸಂಯೋಗವೇ ವಿನಾ ವಿಯೋಗವಿಲ್ಲ. ಹಾಗೆ ವಿಯೋಗ ಸಂಭವಿಸುವುದಾದರೆ, ಅದು ಯಾವುದೋ ಪ್ರಳಯ ಕಾಲದಲ್ಲಿ ಇಲ್ಲವೆ ದುಷ್ಟ ಸಂಹಾರಕ್ಕಾಗಿ ಶಿಷ್ಟ ಪರಿಪಾಲನೆಗಾಗಿ ಆಗ ಬಹುದು. ಈಗ ಅಂಥದೇನೂ ಇಲ್ಲವಾದ್ದರಿಂದ ನಮ್ಮಿಬ್ಬರ ಬೇರ್ಪಡೆಗೆ ಅವಕಾಶ ವಿಲ್ಲ," ಎಂದು ದೃಢ ವಚನಗಳನ್ನಾಡಿದಳು.

**ವನವಾಸದ ಕಷ್ಟಗಳು**: ಅದರೂ ಬಿಡದೆ, ರಾಮನು, "ಸೀತಾ, ಕಲ್ಲುನೆಲದ ಮೇಲೆ ಮಲಗಬೇಕಾಗುವುದು, ನಾರುವಸ್ತ್ರಗಳನ್ನು ತೊಡಬೇಕಾಗುವುದು, ಗೆಡ್ಡೆಗೆಣಸು ಗಳನ್ನು ತಿನ್ನಬೇಕಾಗುವುದು. ಅವೂ ಕೂಡ ಪ್ರತಿದಿನವು ಸಿಕ್ಕುವುದು ಅಸಾಧ್ಯ. ಋತುಧರ್ಮ ಅನುಸರಿಸಿ ಅವು ಸಿಕ್ಕುವುವು. ಕೋಟಿ ಕಪಟ ವೇಷಗಳನ್ನು ಧರಿಸಿ ಮನುಷ್ಯರನ್ನೇ ತಿನ್ನುವ ರಾಕ್ಷಸರು ಅರಣ್ಯದಲ್ಲಿ ಹೇರಳವಾಗಿರುವರು. ವನವಾಸದ ಕಷ್ಟಗಳು ಹೇಳಲಸಾಧ್ಯ. ನೀನು ವನವಾಸಕ್ಕೆ ತಕ್ಕವಳಲ್ಲ. ನೀನು ನನ್ನೊಂದಿಗೆ ವನವಾಸಕ್ಕೆ ಬಂದದ್ದೇ ಆದರೆ, ಜನರು ನನ್ನನ್ನು ಅತಿ ನೀಚನೆಂದು ದೂಷಿಸುವರು. ಮಾನಸ ಸರೊವರದ ಅಮೃತ ಸಮಾನವಾದ ನಿರ್ಮಲ ಜಲವನ್ನು ಕುಡಿದು ಜೀವಿಸುವ ಹಂಸವು ಸಮುದ್ರದ ಉಪ್ಪು ನೀರನ್ನು ಕುಡಿದು ಹೇಗೆ ಜೀವಿಸಬಲ್ಲದು? ಹೊಸದಾಗಿ ಚಿಗುರಿದ ಮಾವಿನ ತೋಟದಲ್ಲಿ ವಿಹರಿಸುವ ಕೋಗಿಲೆಯು ಮುಳ್ಳಿನ ತೋಟದಲ್ಲಿ ಹೇಗೆ ವಿಹರಿಸಬಲ್ಲದು? ಇದನ್ನೆಲ್ಲಾ ಯೋಚಿಸಿ ನೀನು ಮನೆಯಲ್ಲೇ

ಇರುವುದು ಉತ್ತಮ," ಎಂದು ಮೃದು ಮಧುರವಾಗಿ ಹೇಳಿದ ಮಾತುಗಳನ್ನು ಕೇಳಿ ಸೀತೆಯು ಕಣ್ಣೀರು ಸುರಿಸಿದಳು. ನೆಲವನ್ನೇ ದಿಟ್ಟಿಸುತ್ತಾ ಸ್ತಂಭೀಭೂತಳಾದಳು. ಅವಳು ಧಾರಾಕಾರವಾಗಿ ಕಣ್ಣೀರು ಸುರಿಸುತ್ತಿದ್ದುದನ್ನು ರಾಮನು ನೋಡಲಾರದೆ ಹೋದನು. ಅವನಿಗೆ ಪ್ರತ್ಯುತ್ತರಿಸಲು ಏನೂ ತೋಚದಾಯಿತು. ಸೀತೆಯ ಶಕ್ತಿ ಕುಂದಿತು.

**ಸತಿಗೆ ಪತಿಯೇ ಗತಿ**: ಸೀತೆ ಹೇಗೋ ಸಹಿಸಿಕೊಂಡು ದುಃಖವನ್ನು ನುಂಗಿ ಮಾತಾಡಿದಳು, "ಓ ಪ್ರಾಣನಾಥಾ, ನೀವು ಕರುಣಾ ಸಮುದ್ರರು. ಸಕಲ ಸುಖ ನಿಧಿಯಾದ ನೀವು ನನ್ನೊಂದಿಗಿಲ್ಲದಿದ್ದಾಗ ಸ್ವರ್ಗವೂ ನನಗೆ ನರಕ ಸಮಾನ. ತಂದೆ, ತಾಯಿ, ಸೋದರ–ಸೋದರಿ, ಅತ್ತೆ–ಮಾವ, ಮಕ್ಕಳು, ಗುರುಗಳು, ಬಂಧುಗಳು ಇವರೆಲ್ಲರೂ ಸಕಲ ಗುಣ ಸಂಪನ್ನರಾದರೂ ಸತಿಗೆ ಸುಖ ನೀಡುವವನು ಪತಿಯೇ. ಅವಳಿಗೆ ಪತಿ ವಿನಾ ಬೇರೆ ಗತಿ ಇಲ್ಲ. ನಾಥಾ! ತನು, ಧನ, ಗೃಹ, ಪುರ ಇವೆಲ್ಲವೂ ಪತಿ ದೂರವಾದ ಸತಿಗೆ ದುಃಖವನ್ನೇ ಕೊಡುವುದಲ್ಲದೆ ಆನಂದ ಕೊಡುವುದಿಲ್ಲ. ಪತಿ ಇಲ್ಲದ ಭೋಗಗಳು ರೋಗ ಸಮಾನವೇ. ನನ್ನ ಸರ್ವ ಸುಖಗಳೂ ನೀವೇ. ಶರತ್ಕಾಲದ ಚಂದ್ರಬಿಂಬದಂಥ ನಿಮ್ಮ ಮುಖಾರವಿಂದವನ್ನು ನೋಡುತ್ತಿರುವುದೇ ನನಗೆ ಸರ್ವ ಸುಖ. ನಾನು ನಿಮ್ಮೊಂದಿಗಿರುವಾಗ ಖಗ ಮೃಗಗಳೇ ನನ್ನ ಬಂಧುಗಳು, ವನವೇ ಪಟ್ಟಣ. ವಲ್ಕಲಗಳೇ ಪಟ್ಟೆ ಪೀತಾಂಬರಗಳು, ಪರ್ಣ ಶಾಲೆಯೇ ಸುರಸದನ, ಸೌಂದರ್ಯ ಭವನ, ವನ ದೇವತೆಗಳೇ ನನ್ನ ಅತ್ತೆ ಮಾವಂದಿರು. ನಿಮ್ಮೊಂದಿಗಿರುವಾಗ ಹುಲ್ಲಿನ ಹಾಸಿಗೆಯೇ ಮನ್ಮಥನ ಪಲ್ಲಂಕ ದಂತೆ ಸುಖ ನೀಡುವುದು. ಕಂದಮೂಲ ಫಲಗಳು ಅಮೃತ ಸಮಾನವಾಗಿ ರುವುವು. ಅಲ್ಲಿಯ ಪರ್ವತಗಳು ಅಯೋಧ್ಯೆಯ ಸೌಧ ಸಮಾನ. ಸೌಧಗಳಿಂದ ಇಳಿಯುವಷ್ಟು ಲೀಲಾಜಾಲವಾಗಿ ಪರ್ವತಗಳಿಂದ ಇಳಿಯುತ್ತೇನೆ. ನಿತ್ಯವೂ ನಿಮ್ಮ ಪಾದಾರವಿಂದಗಳನ್ನು ದರ್ಶನಮಾಡಿ ಸಂತೋಷಿಸುತ್ತೇನೆ.

**ಬಾಧೆಯಾಗಲಾರದು**: ಅಷ್ಟೇ ಅಲ್ಲ, ನಿಮ್ಮ ಸರ್ವ ಸೇವೆಗಳನ್ನು ದೂರಮಾಡಿ ಕೊಂಡು ನಾನು ಹೇಗಿರಲಿ? ಓ ಕೃಪಾನಿಧಿ! ನನ್ನನ್ನು ಕರೆದೊಯ್ಯಲು ಸರ್ವಾಂತರ್ಯಾಮಿಯಾದ ನಿಮಗೆ ನಾನಿಷ್ಟು ಹೇಳುವ ಅಗತ್ಯವಿಲ್ಲ. ನನ್ನ ಹೃದಯವನ್ನು ಬಲ್ಲ ನೀವು ನನ್ನನ್ನು ಇಷ್ಟು ಬಾಧಿಸುವುದು ಸರಿಯಲ್ಲ. ನಾಥಾ! ನಾನು ದೀನಳು. ನನ್ನನ್ನು ಬಿಟ್ಟು ಹೋದರೆ ನಿಮ್ಮ ಹೆಸರಿಗೆ ಕಳಂಕ ಬರುವುದು. ನೀವು ಸಕಲ ಗುಣ ಸಂಪನ್ನರು. ನನ್ನ ಮೇಲೆ ದಯೆ ತೋರದಿರುವುದು ನಿಮಗುಚಿತವೆ? ಹದಿನಾಲ್ಕು ಸಂವತ್ಸರಗಳು ನಿಮ್ಮನ್ನು ಬಿಟ್ಟು ಜೀವಿಸಿರಬಲ್ಲೆನೆ? ಹದಿನಾಲ್ಕು ನಿಮಿಷಗಳೂ ನಿಮ್ಮನ್ನು ಬಿಟ್ಟು ಜೀವಿಸಿರಲಾರೆ. ಕರುಣಿಸಿ, ಕನಿಕರಿಸಿ,

ಕರೆದೊಯ್ಯಿರಿ, ನಾಥಾ! ನಾನು ನಿಮ್ಮೊಂದಿಗಿದ್ದರೆ ನನ್ನನ್ನು ಯಾರೂ ನುಂಗ ಲಾರರು. ಅಷ್ಟೇಕೆ, ಕಣ್ಣೆತ್ತಿ ನೋಡಲಾರರು. ನರಿ ಮೊಲಗಳಂಥ ಸಣ್ಣ ಮೃಗಗಳು ಸಿಂಹವನ್ನು ಕಣ್ಣು ಬಿಟ್ಟು ನೋಡಬಲ್ಲವೆ? ನಾನು ಸುಕುಮಾರಿಯಲ್ಲ, ನೀವೇ ಸುಕುಮಾರರು. ನೀವೇ ವನವಾಸಕ್ಕೆ ಅರ್ಹರಲ್ಲ. ಭೂಮಿಯು ನನ್ನ ತಾಯಿಯಾದ್ದ ರಿಂದ ಭೂಮಿಯ ಮೇಲೆ ಸಂಚರಿಸಲು ಬೇಕಾದ ಸಾಮರ್ಥ್ಯ ನನಗಿದೆ, ನಿಜಕ್ಕೂ ಸುಖಪಡುವುದು ನಿಮ್ಮ ಪಾಲು, ಕಷ್ಟ ಪಡುವುದು ನನ್ನ ಪಾಲು. ಅದನ್ನು ನೀವು ವಿರುದ್ಧವಾಗಿ ಭಾವಿಸಿ ಬಾಧಿಸುವುದು ನ್ಯಾಯವಲ್ಲ.

**ತಕ್ಕ ಬಲವುಂಟು**: ನೀವು ಮಾಡಲಾಗದ ಕಠಿಣ ಕೆಲಸಗಳನ್ನು ನಾನು ಲೀಲಾ ಜಾಲವಾಗಿ ಮಾಡುವೆನು. ಯಾವ ರಾಜರು ಎತ್ತಲಾಗದ ಶಿವಧನುಸ್ಸನ್ನು ಲೀಲಾ ಜಾಲವಾಗಿ ಎತ್ತಿದ ಸಂಗತಿ ನಿಮಗೆ ಚೆನ್ನಾಗಿ ತಿಳಿದೂ ನನ್ನ ಬಲವನ್ನು ನೀವು ಶಂಕಿಸುವುದು ಆಶ್ಚರ್ಯ. ನಿಮಗೆಷ್ಟು ಶಕ್ತಿ ಸಾಮರ್ಥ್ಯಗಳುಂಟೋ ನನ್ನ ಶಕ್ತಿ ಸಾಮರ್ಥ್ಯಗಳೂ ಅದಕ್ಕೆ ಸರಿಸಮಾನವಾಗಿವೆ. ಆದ್ದರಿಂದ ಕಾಲಹರಣ ಮಾಡುವ ಮಾತುಗಳನ್ನಾಡದೆ ಅನುಮತಿ ಇತ್ತು, ಮುಂದೆ ನಡೆಯಬೇಕಾದ ಏರ್ಪಾಟು ಗಳನ್ನು ಆನಂದವಾಗಿ ನಡೆಸಿ," ಎಂದು ಬಾಗಿ ನಮಸ್ಕರಿದಳು.

**ಜೊತೆಯಲ್ಲಿ ಕರೆದೊಯ್ಯುವೆನು**: ರಾಮನು ಇನ್ನು ಅವಳನ್ನು ತಡೆಯುವುದು ಸಾಧ್ಯವಿಲ್ಲವೆಂದು ನಿಶ್ಚಯ ಮಾಡಿಕೊಂಡು, "ಸೀತಾ! ಚಿಂತಿಸಬೇಡ. ಸರಿ, ನಿನ್ನ ಇಷ್ಟದಂತೆ ನಿನ್ನನ್ನು ನನ್ನ ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇನೆ. ಚಿಂತೆ ಮಾಡುವ ಸಮಯವಲ್ಲ ಇದು. ಅರಣ್ಯಕ್ಕೆ ಹೋಗುವ ಏರ್ಪಾಟುಗಳನ್ನು ಶೀಘ್ರ ವಾಗಿ ಮಾಡಿಕೊ," ಎಂದು ಪ್ರಿಯ ವಚನಗಳನ್ನಾಡಿದ್ದನ್ನು ಕೇಳಿ, ಸೀತೆಯು ಅಂತ್ಯವಿಲ್ಲದ ಆನಂದದಿಂದ, "ನಾಥಾ! ವನವಾಸಕ್ಕೆ ಮಾಡಿಕೊಳ್ಳಬೇಕಾದ ಸಿದ್ಧತೆ ಗಳೇನಿದೆ? ನನ್ನ ಸರ್ವಾಭರಣಗಳು ಸಮಸ್ತ ಅನುಕೂಲಗಳು ನಿರಂತರವೂ ಸಿದ್ಧವೇ. ನನ್ನ ಸಮಸ್ತ ಆಭರಣ ಅನುಕೂಲಗಳು ನೀವಲ್ಲದೆ ಅನ್ಯರೂಪದಲ್ಲಿ ಇರಬೇಕೆಂದು ನಾನು ಆಶಿಸಿದವಳಲ್ಲ ಎನ್ನುವುದು ನಿಮಗೆ ಗೊತ್ತಿದೆ. ಈ ಕ್ಷಣವೇ ನಿಮ್ಮೊಂದಿಗೆ ಹೊರಡುತ್ತೇನೆ," ಎಂದಳು. ರಾಮಚಂದ್ರನು ಯೋಚಿಸಿ, "ಸೀತಾ ಹದಿನಾಲ್ಕು ವರ್ಷ ನಾವು ಅಯೋಧ್ಯೆಯಲ್ಲಿ ಇರುವುದಿಲ್ಲವಾದ್ದರಿಂದ, ನಿನ್ನ ಪ್ರೀತಿ ಪಾತ್ರರನ್ನು ಬಿಡಬಹುದು. ಆದ್ದರಿಂದ, ಅವುಗಳನ್ನು ಬಂಧನದಿಂದ ಬಿಡುಗಡೆ ಮಾಡು. ಗೋವುಗಳನ್ನು ಬ್ರಾಹ್ಮಣರಿಗೆ ದಾನ ಮಾಡಿ, ನಿತ್ಯ ಜೀವನಕ್ಕೆ ಉಪಯೋಗಿ ಸುತ್ತಿದ್ದ ವಸ್ತು ವಾಹನಾದಿಗಳನ್ನು ಬಡ ಬಗ್ಗರಿಗೆ ಕೊಟ್ಟು ಬಿಡು. ಇಲ್ಲದಿದ್ದರೆ ಹಾಳಾಗುವುವು. ಹಾಳಾಗುವುದಕ್ಕಿಂತ ಬೇರೆಯವರಿಗೆ ಕೊಟ್ಟು ಅವರಿಗೆ ಅನುಕೂಲ ಮಾಡಿಕೊಡುವುದೊಳ್ಳೆಯದಲ್ಲವೆ," ಎಂದು ಸೂಚಿಸಿದನು.

**ಬಯಲು ಸೇರುವುದರಲ್ಲಿದೆ ಆನಂದ**: ರಾಮನ ಸಲಹೆಯಂತೆ ಸೀತೆಯು ಪಂಜರಗಳ ಬಳಿ ಹೋಗಿ ಒಂದೊಂದು ಪಕ್ಷಿಯನ್ನೂ ಪ್ರೀತಿಯಿಂದ ಮಾತಾಡಿಸಿ, "ನೀವೂ ನಮ್ಮಂತೆ ಸಹಜಾರಣ್ಯದಲ್ಲಿ ಸ್ವೇಚ್ಛಾ ವಿಹಾರ ನಡೆಸಿ," ಎಂದು ತನ್ನ ಕೈಗಳಿಂದಲೇ ಅವುಗಳನ್ನು ಬಂಧನದಿಂದ ಹೊರಬಿಟ್ಟಳು. ಗೋವುಗಳನ್ನು, ತಿಂಡಿ ಪದಾರ್ಥಗಳನ್ನು, ನಾನಾ ವಿಧವಾದ ಫಲಾಹಾರಗಳನ್ನು ಕ್ಷಣದಲ್ಲಿ ಹಂಚಿದಳು. ಸೀತಾ ಜನನಿಯು ಅರಳಿದ ಮುಖದಿಂದ ಮೃದು ಮಧುರ ವಚನಗಳಿಂದ ಬ್ರಾಹ್ಮಣರನ್ನು ಮಾತಾಡಿಸುತ್ತಿದ್ದುದು, ಗೋವುಗಳನ್ನು ಕೊಡುತ್ತಿದ್ದುದು ನೋಡು ವವರ ಹೃದಯವನ್ನು ಕರಗಿಸಿತು, ಕಣ್ಣೀರಿನ ಕೋಡಿ ಹರಿಸಿತು. ಅವಳ ತ್ಯಾಗ, ಔದಾರ್ಯ, ಪತಿಯೊಂದಿಗೆ ಅರಣ್ಯಕ್ಕೆ ಹೋಗುವುದರಲ್ಲಿದ್ದ ಆನಂದ, ಯಾವ ಕವಿಯೂ ವರ್ಣಿಸಲಾರದಂತಿತ್ತು.

# ೧೩. ಕಾಡಿಗೆ

**ಪ್ರಜೆಗಳ ವಿಚಾರ**: ತಾಯಿಯ ಅಪ್ಪಣೆ ಪಡೆದು ಬಂದು ಲಕ್ಷ್ಮಣನ ಜೊತೆಗೂಡಿ ಸೀತಾ ರಾಮಲಕ್ಷ್ಮಣರು ರಾಜಮಂದಿರಕ್ಕೆ ಹೊರಟರು. ರಸ್ತೆಗಳಲ್ಲಿ ನೆರೆದಿದ್ದ ಜನರು ಅದನ್ನು ನೋಡಲಾರದೆ ಹೊದರು. ಅವರು ಬಾಡಿದ ಹೂಗಳಂತೆ ಸೊರಗಿದರು. ಅವರ ಮನಸ್ಸು ದುಃಖದಿಂದ ತಲ್ಲಣಿಸಿತು. ಮಧುವನ್ನು ಕಳೆದು ಕೊಂಡ ದುಂಬಿಗಳಂತೆ ಜನರು ದೀನರಾದರು. ಕೈಗಳನ್ನು ಬೀಸುತ್ತಾ ತಲೆಯನ್ನು ಚೆಚ್ಚಿಕೊಳ್ಳುತ್ತಾ ರೆಕ್ಕೆಗಳಿಲ್ಲದ ಪಕ್ಷಿಗಳಂತೆ ರೋದಿಸಿದರು. ಸಹಸ್ರಾರು ಜನರು ಅರಮನೆಯ ಹಜಾರದಲ್ಲಿ ಸೇರಿದ್ದರು. ಅವರ ಚಿಂತೆ ವರ್ಣನಾತೀತವಾಗಿತ್ತು.

**ಉಕ್ಕಿಬರುತ್ತಿರುವ ದುಃಖ**: ಮಂತ್ರಿಯು ಒಳಗೆ ಹೋಗಿ ಎಚ್ಚರ ತಪ್ಪಿಬಿದ್ದಿದ್ದ ರಾಜನನ್ನು ಎಬ್ಬಿಸಿ ಕೂರಿಸಿದನು. ಸೀತಾ ರಾಮ ಲಕ್ಷ್ಮಣರು ನಿಮ್ಮ ದರ್ಶನಕ್ಕಾಗಿ ಬರುತ್ತಿದ್ದಾರೆಂದು ರಾಜನಿಗೆ ತಿಳಿಸಿದನು. ರಾಮನು ಪ್ರಿಯವಚನಗಳನ್ನಾಡುತ್ತಾ ತಂದೆಯ ಬಳಿ ಬಂದನು. ಅವನೊಂದಿಗೆ ಸೀತಾ ಲಕ್ಷ್ಮಣರೂ ಇದ್ದುದನ್ನು ನೋಡಿ ದಶರಥನು ಬಹುವಾಗಿ ದುಃಖಿಸಿದನು. ರಾಮನನ್ನು ಬಿಗಿಯಾಗಿ ಅಪ್ಪಿಕೊಂಡು ಪ್ರಜ್ಞೆತಪ್ಪಿ ಕೆಳಗೆ ಬಿದ್ದನು. ಭರಿಸಲಾರದ ದುಃಖದಿಂದ, ಮಾತನಾಡದ ಸ್ಥಿತಿಯಲ್ಲಿ,

ಎದೆಯನ್ನು ಬಡಿದುಕೊಳ್ಳುತ್ತಿದ್ದ ದಶರಥನ ಅವಸ್ಥೆಯನ್ನು ಸೀತಾ ಲಕ್ಷ್ಮಣರು ನೋಡಲಾರದೆ ಹೋದರು. ಬಳಿಯಲ್ಲೇ ನಿಂತು ಕೀವಿಯಿಂದ ನೋಡುತ್ತಿದ್ದ ಕೈಕೆಯ ಪ್ರಾಣವನ್ನು ಕ್ಷಣದಲ್ಲಿ ತೆಗೆಯುವವನಂತೆ ಲಕ್ಷ್ಮಣನು ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಉಗ್ರನಾಗಿ ನೋಡುತ್ತಾ ರಾಮಚಂದ್ರನ ಶಾಂತವದನದ ದರ್ಶನಮಾಡಿ ಕೋಪವನ್ನು ತಣ್ಣಗೆ ಮಾಡಿಕೊಳ್ಳುತ್ತಿದ್ದನು.

**ಹೊರಡುವುದೊಳ್ಳೆಯದು**: ಅಷ್ಟರಲ್ಲಿ, ಕೈಕೆಯು, "ರಾಮಾ, ನೀನು ನಿಮ್ಮ ತಂದೆಯನ್ನು ಮತ್ತಷ್ಟು ದುಃಖಕ್ಕೆ ಗುರಿಪಡಿಸುತ್ತಿದ್ದೀಯೆ. ನೀನು ಎಷ್ಟು ಬೇಗ ಹೊರಟು ಅರಣ್ಯವನ್ನು ಸೇರುತ್ತೀಯೋ ಅಷ್ಟು ಬೇಗ ನಿಮ್ಮ ತಂದೆಯು ಶಾಂತಿ ಪಡೆಯುವರು. ಆದ್ದರಿಂದ, ತಡಮಾಡದೆ ತಂದೆಗೆ ನಮಸ್ಕರಿಸಿ ಹೊರಡುವು ದೊಳ್ಳೆಯದು," ಎಂದು ನಿರ್ದಾಕ್ಷಿಣ್ಯವಾಗಿ ಆಡಿದ ಮಾತುಗಳು ದಶರಥನ ಕಿವಿಗಳನ್ನು ಹರಿದು ಚೂರು ಚೂರು ಮಾಡಿದಂತಾಯಿತು. "ರಾಕ್ಷಸೀ, ಎಂಥ ಕಠೋರವಾದ ಮಾತನಾಡುತ್ತೀ," ಎಂದು ಮತ್ತೆ ಮೂರ್ಛೆ ಹೋದನು. ಸೀತಾ ರಾಮ ಲಕ್ಷ್ಮಣರು ತಂದೆಯ ಪಾದಗಳಿಗೆ ನಮಸ್ಕರಿಸಿ, "ತಂದೇ! ನಮ್ಮನ್ನು ಆಶೀರ್ವದಿಸಿ ಕಳಿಸಿಕೊಡಿ," ಎಂದರು. "ನೀವು ದುಃಖಿಸುವುದು ಒಳ್ಳೆಯದಲ್ಲ, ಇದು ಸಂತೋಷಿಸುವ ಸಮಯ. ಅತಿ ಮೋಹವು ಅಪಕೀರ್ತಿಗೆ ಮಾರ್ಗ," ಎಂದು ರಾಮನು ತಂದೆಗೆ ಮೋಹವನ್ನು ಬಿಡುವಂತೆ ಹೇಳಿದನು.

ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಕಾಲುಗಳ ಬಳಿ ಕುಳಿತಿದ್ದ ರಾಮನನ್ನು ದಶರಥನು ಕಣ್ಣು ತೆರೆದು ನೋಡಿ, ಪ್ರಯಾಸದಿಂದ ಎದ್ದು ಕುಳಿತು, ರಾಮನ ಕೈಗಳನ್ನು ಹಿಡಿದುಕೊಂಡು,"ನನ್ನ ಬಂಗಾರ ಮಗುವೇ! ನನ್ನ ಮಾತನ್ನು ಕೇಳು. ನೀನು ನಿಯತಾತ್ಮನು. ಉಚಿತವಾದ ಕಾರ್ಯ ಮಾಡುವುದು ನಿನಗೆ ತಕ್ಕುದೇ ಸರಿ. ಆದರೆ ಅಪರಾಧ ಮಾಡಿದವನೊಬ್ಬನಾಗಿ, ಅದರ ಫಲವನ್ನು ಬೇರೊಬ್ಬನು ಅನುಭವಿಸಬೇಕೆಂದು ಹೇಳುವುದು ಸರಿಯಲ್ಲ. ವಿಧಿಯ ರೀತಿ ವಿಚಿತ್ರ, ಅದನ್ನು ತಿಳಿಯಬಲ್ಲವರಾರು?" ಎಂದು, ರಾಮನ ಪ್ರಯಾಣವನ್ನು ತಪ್ಪಿಸಲು ನಿಷ್ಕಪಟತೆ ಯಿಂದ ಅನೇಕ ಬಗೆಯಾಗಿ ಹೇಳಲಾರಂಭಿಸಿದನು.

**ದಶರಥನ ಬೋಧೆ**: ಧರ್ಮದುರಂಧರನೂ ಚತುರನೂ ಧೀರನೂ ಆದ ಶ್ರೀರಾಮನ ಮುಖವನ್ನು ಮುಖ ಲಕ್ಷಣಗಳ ಗುರುತುಗಳಿಂದ, ಅವನು ಪ್ರಯಾಣ ಕ್ಕೆ ಸಿದ್ಧವಾಗಿದ್ದಾನೆಂದು ದಶರಥನು ಗ್ರಹಿಸಿದನು. ಜಾನಕಿಯನ್ನು ಹತ್ತಿರ ಕರೆದು ಅವಳ ಶಿರಸ್ಸನ್ನು ಸವರುತ್ತಾ ವನವಾಸದ ಕಷ್ಟಗಳನ್ನು ಅವಳಿಗೆ ತಿಳಿಸುತ್ತಾ ಅತ್ತೆ ಮಾವಂದಿರೊಂದಿಗಾಗಲೀ, ಇಲ್ಲವೆ ತಂದೆ ತಾಯಿಗಳೊಂದಿಗಾಗಲೀ ಇರುವುದೊ

ಳ್ಳೆಯದೆಂದು ಅವಳಿಗೆ ಬುದ್ಧಿವಾದ ಬೋಧಿಸುತ್ತಾ ಸಹಿಸಲಾರದ ಬಾಧೆಯಿಂದ ದುಃಖಿಸುತ್ತಾ, ಕೈಕೆಯನ್ನು ನೋಡಿ ಹಲ್ಲು ಕಡಿಯುತ್ತಾ, ಬಹು ಬಗೆಯಾಗಿ ತಳಮಳಿಸುತ್ತಿದ್ದ ರಾಜನನ್ನು ನೋಡಿ ಸೀತಾದೇವಿಯು ಪಾದಗಳಿಗೆ ನಮಸ್ಕರಿಸಿ, "ಮಾವಾ! ನನ್ನ ಮನಸ್ಸು ಅಮಿತವಾಗಿ ಸೇವೆಯನ್ನೇ ಆಶಿಸುತ್ತಿದೆ. ಅಂಥ ಸೇವಾ ಭಾಗ್ಯ ಅರಣ್ಯದಲ್ಲಿ ನನಗೆ ಅಮಿತವಾಗಿ ಲಭಿಸುವುದು. ಅಂಥ ಘನವಾದ ಫಲವನ್ನು ಬಿಟ್ಟು ನಾನಿರಲಾರೆ. ಸತಿಗೆ ಅತ್ತೆಮಾವಂದಿರ ಸೇವೆಯೂ ತಂದೆ ತಾಯಿಯ ಸೇವೆಯೂ ಅಷ್ಟು ಸಂತೃಪ್ತಿ ನೀಡಲಾರವು. ಪತಿ ಸೇವೆಗೆ ಮೀರಿದ ಆನಂದ, ಸುಖ ಎಲ್ಲಿಯೂ ಸಿಕ್ಕುವುದಿಲ್ಲ. ನೀವು ಅಡ್ಡಿಪಡಿಸದೆ ಆಶೀರ್ವದಿಸಿ ನನ್ನನ್ನು ರಾಮಚಂದ್ರನೊಂದಿಗೆ ಕಳಿಸಿಕೊಡಿ," ಎಂದು ಪ್ರಾರ್ಥಿಸುತ್ತಿರಲು, ಸೀತೆಯ ಅಭೀಷ್ಟವನ್ನು ಅರ್ಥಮಾಡಿಕೊಂಡು ದಶರಥನು ಸೀತೆಯ ಗುಣಗಳನ್ನು ನಾನಾ ವಿಧವಾಗಿ ಕೈಕೆಗೆ ಬಣ್ಣಿಸಿದನು. ಮಂತ್ರಿಪತ್ನಿಯರೂ ಗುರುಪತ್ನಿಯರೂ ಸೀತೆಯನ್ನು ಹತ್ತಿರ ಕರೆದು ವನವಾಸದ ಕಷ್ಟ ನಷ್ಟಗಳನ್ನು ಕುರಿತು ಜಾನಕಿಗೆ ಬಹು ವಿಧವಾಗಿ ಹೇಳಿದರು.

ಗುರುಪತ್ನಿಯು ಸಲಿಗೆಯಿಂದ ಮಾತನಾಡಿಸುತ್ತಾ, "ಸೀತಾ! ನೀನು ವನಕ್ಕೆ ಹೋಗಬೇಕೆಂದು ಯಾರೂ ಹೇಳಿಲ್ಲ. ಆದ್ದರಿಂದ, ನೀನು ಅತಿ ದುಃಖದಲ್ಲಿ ಮುಳುಗಿದ ಅತ್ತೆ ಮಾವಂದಿರನ್ನು ಸೇವಿಸುತ್ತಾ, ಅವರ ಬಾಧೆಯನ್ನು ಉಪಶಾಂತಿಗೊಳಿಸಲು ಅವರ ಬಳಿ ಇರುವುದೊಳ್ಳೆಯದು. ನೀನು ರಾಮನ ಅರ್ಧಾಂಗಿಯಾದ್ದರಿಂದ, ರಾಮನು ಕೊಡದಿದ್ದ ತೃಪ್ತಿಯನ್ನು, ಅವನ ಅರ್ಧಭಾಗವಾದ ನೀನಾದರು ಕೊಟ್ಟು ಅತ್ತೆ ಮಾವಂದಿರನ್ನು ದುಃಖದಿಂದ ತಪ್ಪಿಸು. ಜ್ಯೇಷ್ಠ ಪುತ್ರನಾದ ರಾಮಚಂದ್ರನ ಅರ್ಧಾಂಗಿಯಾದ್ದರಿಂದ ರಾಜ್ಯಪಾಲನೆಯ ಅಧಿಕಾರ ಕೂಡ ನಿನಗುಂಟು. ಆದ್ದರಿಂದ ಪಿತೃವಾಕ್ಯ ಪರಿಪಾಲನೆಗಾಗಿ ರಾಮನು ವನವಾಸ ಮಾಡಿದರೂ ನೀನು ರಾಜ್ಯ ಪಾಲನೆ ಮಾಡಿ, ರಾಮ ಕೀರ್ತಿಯನ್ನು ಬೆಳಗಿ, ಅತ್ತೆ ಮಾವಂದಿರಿಗೆ ಸಂತೃಪ್ತಿ ನೀಡು. ಇದೂ ಕೂಡ ರಾಮಸತಿಯಾದ ನಿನಗೆ ಪರಮ ಲಕ್ಷ್ಯವೇ," ಎಂದಳು. ಶರತ್ಕಾಲದ ಚಂದ್ರ ಕಿರಣಗಳು ಚಕ್ರವಾಕಗಳ ಮೇಲೆ ಹಿತವಾದ ಪರಿಣಾಮ ಮಾಡುವಂತೆ ಮೃದುಮಧುರವಾದ ಅವರ ಹಿತೋಪದೇಶವು ಜಾನಕಿಯನ್ನು ವ್ಯಾಕುಲಕ್ಕೆ ಸಿಕ್ಕಿಸಿತು. ಅವಳು ಸಂತೋಷದಿಂದ ಮರು ಮಾತಾಡದೆ ಸುಮ್ಮನಿದ್ದಳು.

**ನಾರು ವಸ್ತ್ರಗಳು**: ಇಷ್ಟರಲ್ಲಿ, ಕೈಕೆಯು, ನಾರುವಸ್ತ್ರಗಳನ್ನೂ, ತುಲಸೀಮಾಲೆಯನ್ನೂ ಹಿಡಿದುಕೊಂಡು ಬಂದು, ರಾಮನ ಮುಂದಿಟ್ಟು, "ರಾಮಾ! ರಾಜನಿಗೆ ನೀನು ಪ್ರಾಣದಂತಿರುವೆ. ನಿನ್ನ ಮೇಲಿರುವ ವಾತ್ಸಲ್ಯದಿಂದಾಗಿ ಅವರು ನಿನ್ನನ್ನು ಬಿಡಲಾರದೆ ಅಪಕೀರ್ತಿ ತಂದುಕೊಳ್ಳುತ್ತಿದ್ದಾರೆ. ವನಕ್ಕೆ ಹೋಗೆಂದು ಅವರು

ಎಂದಿಗೂ ನಿನಗೆ ಹೇಳುವುದಿಲ್ಲ. ಅವರ ಅಪ್ಪಣೆಗಾಗಿ ನೀನು ಕಾದರೆ ಪ್ರಯೋಜನವಿಲ್ಲ. ನೀನು ಅಪಕೀರ್ತಿಯನ್ನು ತಂದುಕೊಂಡು ರಾಜ್ಯವಾಳುತ್ತೀಯೋ ನಾರು ಬಟ್ಟೆಗಳನ್ನುಟ್ಟು ವನಕ್ಕೆ ಹೋಗಿ ಇಕ್ಷ್ವಾಕು ವಂಶಕ್ಕೆ ಶಾಶ್ವತ ಕೀರ್ತಿಯನ್ನು ತರುತ್ತೀಯೋ? ಈ ಎರಡರಲ್ಲಿ ಯಾವುದಾದರೊಂದನ್ನು ತಕ್ಷಣವೇ ನಿರ್ಧರಿಸು," ಎಂದಳು. ಕೈಕೆಯ ಈ ಮಾತುಗಳನ್ನು ಕೇಳಿ ರಾಮಚಂದ್ರನು ಸಂತೋಷಿಸಿದನು. ಆದರೆ ಆ ಮಾತುಗಳು ರಾಜನ ಹೃದಯಕ್ಕೆ ಮುಳ್ಳುಗಳಂತೆ ನಾಟಿದುವು. "ಆಹಾ ಎಂಥ ನಿರ್ಭಾಗ್ಯ ನಾನು. ಇಂಥ ಕಠಿಣ ಮಾತುಗಳನ್ನು ಕೇಳಿಯೂ ನನ್ನ ಪ್ರಾಣವು ಹೋಗದೆ ಇರುವುದಲ್ಲಾ," ಎಂದು ದುಃಖದಿಂದ ಎಚ್ಚರ ತಪ್ಪಿ ಬಿದ್ದನು. ಸಾರಿ ಸಾರಿಗೂ ಈ ವಿಧವಾಗಿ ದುಃಖಿಸುತ್ತಾ ಮೂರ್ಛೆ ಹೋಗುತ್ತಿದ್ದ ತಂದೆಯನ್ನು ರಾಮಚಂದ್ರನು ನೋಡಲಾರದೆ ಹೋದನು.

ಕೈಕೆಯ ಮಾತಿನಂತೆ ಎಷ್ಟು ಬೇಗ ಅರಣ್ಯಕ್ಕೆ ಹೊರಟರೆ ಅಷ್ಟು ಒಳ್ಳೆಯದೆಂದು, ಚಿಕ್ಕಮ್ಮನು ತಂದ ನಾರುವಸ್ತ್ರಗಳೆರಡನ್ನೂ ತೆಗೆದುಕೊಂಡು, ಒಂದನ್ನು ತಾನಿಟ್ಟು ಕೊಂಡು, ಇನ್ನೊಂದನ್ನು ಸೀತೆಗೆ ಕೊಟ್ಟನು. ಆ ತುಂಡು ನಾರು ಸೀರೆಯನ್ನು ಕೈಯಲಿ ಹಿಡಿದು ಹೇಗೆ ಉಡಬೇಕೋ ತಿಳಿಯದೆ ನಾಚಿಕೆಯಿಂದ ಅವಳು ಅತ್ತಿತ್ತ ನೋಡುತ್ತಾ ನಿಂತಳು. ಇಷ್ಟರಲ್ಲಿ ನಾರುವಸ್ತ್ರವನ್ನುಟ್ಟು ಬಂದ ರಾಮನು ಹತ್ತಿರ ಬಂದು ಏನೆಂದು ಮೆಲ್ಲಗೆ ಮಾತನಾಡತೊಡಗಿದನು. ಅವಳು ನಾಚಿಕೆಯಿಂದ, "ನಾಥಾ! ಈ ನಾರುಸೀರೆಯನ್ನು ಮುನಿಪತ್ನಿಯರು ಹೇಗೆ ಉಡುತ್ತಾರೊ ನನಗೆ ತಿಳಿಯದು. ಅಲ್ಲದೆ, ಇದು ಸಾಮಾನ್ಯ ಸೀರೆಯಂತಿರದೆ ಚಿಕ್ಕದಾಗಿದೆ. ಆದ್ದರಿಂದ ಉಡುವುದಕ್ಕೆ ಗೊತ್ತಿಲ್ಲದೆ ಸುಮ್ಮನಿದ್ದೇನೆ," ಎಂದು ಮೆಲ್ಲಗೆ ಹೇಳಿದಳು. ರಾಮನು ತಾನೇ ಅವಳ ಪೀತಾಂಬರದ ಮೇಲೆ ನಾರುಸೀರೆಯನ್ನು ಹೇಗೆ ಉಟ್ಟುಕೊಳ್ಳಬೇಕೆನ್ನುವುದನ್ನು ತೋರಿಸಿ ಅದನ್ನು ಕಟ್ಟಿದನು. ಗುರುಪತ್ನಿಯೂ ಅಂತಃಪುರದ ಸ್ತ್ರೀಯರೂ ಇದನ್ನು ನೋಡಿ ಕಣ್ಣೀರು ಹರಿಸಿದರು.

**ಧರ್ಮ ವಚನಗಳು**: ಆ ಹೊತ್ತಿಗೆ ಗುರುಗಳಾದ ವಸಿಷ್ಠರು ಬಂದು, ಆ ದೃಶ್ಯವನ್ನು ನೋಡಿ ದಿಗ್ಭ್ರಾಂತರಾಗಿ ನಿಂತರು. ಕೈಕೆಗೆ ಛೀಮಾರಿ ಹಾಕಿದರು. ಸೀತೆಯು ನಾರು ಸೀರೆಯನ್ನುಡಬೇಕಾದ್ದಿಲ್ಲವೆಂದರು. ಕೈಕೆಯು ಕೋರಿದ ವರಗಳಲ್ಲಿ ಭರತನಿಗೆ ಪಟ್ಟಾಭಿಷೇಕ, ರಾಮನಿಗೆ ವನವಾಸ ಇವೆರಡೇ ಅವಳ ನಿಬಂಧನೆಗಳೆಂದೂ ಸೀತೆಯು ಸಮಸ್ತ ಸೌಕರ್ಯಗಳಿಂದ ರಾಜಠೀವಿಯಲ್ಲಿ ವನವಾಸ ಮಾಡಬಹುದೆಂದು ಹೇಳಿದರು. ಅದನ್ನು ಕೇಳಿ ರಾಮನು ಅವಳ ಪೀತಾಂಬರದ ಮೇಲೆ ಸುತ್ತಿದ್ದ ನಾರು ಸೀರೆಯನ್ನು ತೆಗೆದೊಗೆದನು. ಸೀತೆಯು ಗುರುವಿಗೆ ನಮಸ್ಕರಿಸಿ, "ಸ್ವಾಮೀ! ನಾನು ನಾರು ಸೀರೆಯನ್ನು ಉಡುವುದಕ್ಕೂ ಕೈಕೆಯ ವಾಂಛೆಗೂ ಯಾವ

ಸಂಬಂಧವಿಲ್ಲದಿದ್ದರೂ ನನ್ನ ನಾಥನನ್ನು ಅನುಸರಿಸುವಾಗ ನನ್ನ ಕರ್ತವ್ಯಗಳನ್ನು ನಾನು ನಿರ್ವಹಿಸಬೇಕಲ್ಲವೆ? ನಾರುವಸ್ತ್ರಗಳನ್ನುಟ್ಟ ಪತಿಯೊಂದಿಗೆ ಸರ್ವಾಭರಣ ಸೌಂದರ್ಯದೊಂದಿಗೆ, ರಾಜಗೌರವಕ್ಕೆ ತಕ್ಕ ಬೆಲೆ ಬಾಳುವ ವಸ್ತ್ರಗಳನ್ನುಟ್ಟು ವನವಾಸ ಮಾಡುವುದು ನನಗೆ ಗೌರವವಲ್ಲ, ಅಲ್ಲವೆ? ಪತಿಯನ್ನು ಅನುಸರಿಸುವ ಸತಿಗೆ ಇದು ಪರಮ ವಿರುದ್ಧವಾದ್ದರಿಂದ, ನನ್ನ ಗೌರವ ಪ್ರತಿಷ್ಠೆಗಳನ್ನು ಉಳಿಸಿ ಕೊಳ್ಳುವುದಕ್ಕಾದರೂ ನಾನು ಈ ನಾರು ಸೀರೆಯನ್ನುಡಲು ಅಪ್ಪಣೆ ಕೊಡಬೇಕು," ಎಂದು ಪ್ರಾರ್ಥಿಸಿದಳು.

ಸೀತೆಯಾಡಿದ ಧರ್ಮನೀತಿಯು ವಸಿಷ್ಠರ ಹೃದಯವನ್ನು ಕರಗಿಸಿತು. ವಸಿಷ್ಠರು, "ಸೀತಾ! ಸುಗುಣಶೀಲೆಯಾದ ನಿನಗೆ ಇಂಥ ಆಲೋಚನೆ ಸಹಜವೇ. ಆದರೆ, ರಾಜನೀತಿಯ ಪ್ರಕಾರವೂ ಕೆಲವು ನಿಯಮಗಳನ್ನು ಮೀರಬಾರದು, ನಿನ್ನ ಅತ್ತೆ ಕೈಕೆಯ ಕುಟಿಲ ಬುದ್ಧಿಗೆ ತಕ್ಕಂತೆ ನಾವೂ ಕೆಲವು ವಿಚಾರಗಳನ್ನು ಅವಳಿಗೆ ತಿಳಿಸಲೇಬೇಕು. ನಿಜಕ್ಕೂ ಈ ದಿನ ನಿನ್ನ ಪತಿಯಾದ ರಾಮನಿಗೇ ಪಟ್ಟಾಭಿಷೇಕ ಆಗಬೇಕಿತ್ತು. ಆದರೆ, ಅದು ಕಾರಣಾಂತರಗಳಿಂದ ಹಿಂದೆ ಕೊಟ್ಟ ವಾಗ್ದಾನದ ಫಲವಾಗಿ ಆಗದೆ ಹೋದರೂ ಭರತನಿಗೆ ಪಟ್ಟಾಭಿಷೇಕ ಮಾಡುವುದು ರಾಜನೀತಿಗೆ ವಿರುದ್ಧವಾದುದು. ಜ್ಯೇಷ್ಠ ಪುತ್ರನಿಗಲ್ಲದೆ ಮಿಕ್ಕವರಿಗೆ ಅಧಿಕಾರವಿಲ್ಲ. ಅವನ ಅರ್ಧಾಂಗಿಯಾದ ನಿನಗೆ ಆ ರಾಜ್ಯಾಧಿಕಾರ ಇರುವುದೇ ವಿನಾ ಮೂರನೆಯವರಿಗೆ ಎಷ್ಟು ಮಾತ್ರಕ್ಕೂ ಇರದು," ಎಂದರು. ವಸಿಷ್ಠರಾಡಿದ ಧರ್ಮವಚನವನ್ನು ಕೇಳಿದ ಕೈಕೆಯು ದಿಗಿಲುಗೊಂಡವಳಂತೆ ಕಾಣಿಸಿದಳು.

**ವನವಾಸಕ್ಕೆ ಹೊರಟರು**: ಆದರೆ, ಸೀತೆಯು ಅಂಥ ಅಧಿಕಾರವನ್ನು ಆಶಿಸುವ ವಳಲ್ಲ ಎನ್ನುವುದು ಕೈಕೆಗೆ ಗೊತ್ತಿಲ್ಲದಿಲ್ಲ. ವಸಿಷ್ಠರು ಏನೇ ಹೇಳಿದರೂ ಸೀತೆಯು ಅದನ್ನು ಮನಸ್ಸಿಗೆ ಹಾಕಿಕೊಳ್ಳದೆ, ನಾರು ಸೀರೆಯನ್ನುಡುವ ಪ್ರಯತ್ನದಲ್ಲೇ ಇದ್ದಳು. ಗುರುಪತ್ನಿಯು ಅವಳ ಕಷ್ಟವನ್ನು ನೋಡಲಾರದೆ ಮುನಿಪತ್ನಿಯರು ಉಡುವ ಹಾಗೆ ಅವಳಿಗೆ ತಾನೇ ಮುಂಚೆ ಉಟ್ಟಿದ್ದ ಪೀತಾಂಬರದ ಮೇಲೆ ಸೀರೆಯನ್ನು ಉಡಿಸಿದಳು. ಲಕ್ಷ್ಮಣನು ಕೂಡ ರಾಮ ಸೀತೆಯರಂತೆ ನಾರುವಸ್ತ್ರ ಉಟ್ಟನು. ಆಲಸ್ಯಕ್ಕೆ ಕಾಲವಲ್ಲವೆಂದು ರಾಮನು ನಿಶ್ಚಯಿಸಿ, ಮೂರ್ಛೆಹೊಗಿದ್ದ ತಂದೆಯ ಪಾದಗಳಿಗೆ ಮೂವರೂ ನಮಸ್ಕರಿಸಿದರು. ಕೈಕೆಗೂ ಗುರು ವಸಿಷ್ಠರಿಗೂ ಗುರುಪತ್ನಿಗೂ ಸಹ ನಮಸ್ಕರಿಸಿ ವನಕ್ಕೆ ಹೊರಟರು.

**ಪ್ರಜೆಗಳಿಗೆ ನೀತಿ ವಚನಗಳು**: ಮುನಿವೇಷದಿಂದ ಬೀದಿಯಲ್ಲಿ ನಡೆದು ಹೋಗು ತ್ತಿದ್ದ ಸೀತಾ ರಾಮಲಕ್ಷ್ಮಣರನ್ನು ನೋಡಿ ಪ್ರಜೆಗಳು ಗೊಳೋ ಎಂದು ಅಳಲು

ಆರಂಭಿಸಿದರು. ಕೆಲವರು ಮೂರ್ಛೆಹೋದರು, ಕೆಲವರು ತಲೆ ಬಡಿದುಕೊಂಡರು. ರಾಮಚಂದ್ರನು ಅಂತಃಪುರವನ್ನು ದಾಟಿ ರಾಜಬೀದಿಯ ಸಿಂಹದ್ವಾರದಲ್ಲಿ ನಿಂತು ವಸಿಷ್ಠರಿಗೆ ನಮಸ್ಕರಿಸಿ, ಪ್ರಜೆಗಳಿಗೆ ನೀತಿ ವಚನಗಳನ್ನು ಹೇಳಿದನು. ಅವರು ದುಃಖಿಸುವುದು ಸರಿಯಲ್ಲವೆಂದೂ ಬೇಗ ಹದಿನಾಲ್ಕು ವರ್ಷಗಳನ್ನು ಕಳೆದು ತಿರುಗಿ ಅಯೋಧ್ಯೆಗೆ ಬರುವೆನೆಂದೂ ಇದು ನಿಮಗೂ ನನಗೂ ಲೋಕಕ್ಕೂ ಕಲ್ಯಾಣಕರವಾದ ಕಾರ್ಯವೆಂದೂ ಮೃದು ಮಧುರವಾದ ವಾಕ್ಯಗಳನ್ನಾಡಿ ಅವರನ್ನು ಸಂತೈಸಿದನು. ಯಾಚಕರಿಗೆ ದಾನ ಧರ್ಮಗಳನ್ನೂ ಬ್ರಾಹ್ಮಣರಿಗೆ ತಕ್ಕ ವಸತಿಗಳನ್ನೂ ಯಜ್ಞಯಾಗಾದಿ ಕ್ರತುಗಳಿಗೆ ಸಂಬಂಧಿಸಿದ ಭೂದಾನ, ಗೋದಾನ, ಸುವರ್ಣದಾನಗಳನ್ನೂ ಮಾಡಿಸಿರೆಂದು ಗುರುವನ್ನು ಪ್ರಾರ್ಥಿಸಿದನು. ಕೈಗಳನ್ನು ಜೋಡಿಸಿ, "ಗುರುಗಳೇ, ಪ್ರಜೆಗಳಿಗೂ ನನ್ನ ತಾಯಿತಂದೆಯರಿಗೂ ನೀವೇ ತಂದೆ ತಾಯಿ. ಪ್ರಜೆಗಳನ್ನು ಆದರಿಸಿ, ಪೋಷಿಸಿ, ಸ್ವಂತ ಮಕ್ಕಳ ಹಾಗೆ ಕಾಪಾಡುವಂತೆ ರಾಜನಿಗೆ ಬೋಧಿಸಿ, ಶಾಸಿಸುವಂತೆ ನೋಡಿಕೊಳ್ಳಿ," ಎಂದು ಮತ್ತೆ ಮತ್ತೆ ಗುರುವನ್ನು ಪ್ರಾರ್ಥಿಸುತ್ತಿದ್ದ ರಾಮಚಂದ್ರನ ಮಾತುಗಳನ್ನು ಕೇಳಿ ಪ್ರಜೆಗಳ ಹೃದಯಗಳು ದುಃಖತಪ್ತವಾದುವು.

ಇಂತಹ ಮಹಾರಾಜನ ಪರಿಪಾಲನೆಯನ್ನು ಪಡೆಯಲಾರದ ನಮ್ಮ ಪ್ರಾಣಗಳು ಇದ್ದಾದರೂ ಏನು ಪ್ರಯೋಜನ ಎಂದು ಕೆಲವರು ಎದೆ ಎದೆ ಬಡಿದುಕೊಂಡರು. ಕೆಲವರು ತಲೆ ಕುಟ್ಟಿಕೊಂಡರು. ಕೆಲವರು ಕೆಳಗೆ ಬಿದ್ದು ರೋದಿಸಿದರು. ರಾಮನು ಪ್ರಜೆಗಳ ಕಡೆಗೆ ತಿರುಗಿ ಕೈ ಜೋಡಿಸಿಕೊಂಡು, "ಪ್ರಾಣ ಪ್ರಿಯರಾದ ಪ್ರಜೆಗಳೇ! ನಮ್ಮ ಪ್ರಭುವಾದ ದಶರಥನು ನನ್ನನ್ನು ವನ ಪರಿಪಾಲನೆಯ ನಿಮ್ಮಿತ್ತವಾಗಿ ಕಳಿಸಿದನೆನ್ನುವ ದ್ವೇಷಕ್ಕೆ ಹೃದಯದಲ್ಲಿ ಅವಕಾಶ ಕೊಡದೆ, ರಾಜನ ಕ್ಷೇಮವನ್ನು ಕೋರುತ್ತಾ ರಾಜಾಜ್ಞೆಯನ್ನು ಶಿರಸಾವಹಿಸಿ ಆನಂದದಿಂದ ಕಾಲವನ್ನು ಕಳೆಯಬೇಕು. ನನ್ನ ಮೇಲಿನ ಪ್ರೇಮದಿಂದ ರಾಜನನ್ನು ನೀವು ದ್ವೇಷಿಸಬಾರದು. ರಾಜನಿಗೆ ಕೇಡು ಹಾರೈಸಬಾರದು. ನಾನು ಅರಣ್ಯಕ್ಕೆ ಹೋದ ನಂತರವೂ ರಾಜನಿಗೆ ಸುಖವಾಗುವಂತೆ ವರ್ತಿಸುವವರೇ ನನಗೆ ಪ್ರಿಯರು. ಅಂಥವರೇ ನನ್ನ ಮಿತ್ರರು. ಈ ಮಾತನ್ನು ನಡೆಸಿಕೊಟ್ಟು ನನ್ನನ್ನು ಆನಂದಪಡಿಸಿ," ಎಂದು ವಿನಂತಿಸಿದನು. "ಓ ಪ್ರಿಯರೇ, ನನ್ನ ವಿಯೋಗದಿಂದ ನನ್ನ ತಾಯಿ ಕೌಸಲ್ಯೆಯು ದುಃಖಿಸುತ್ತಿರುವಳು. ಇದು ಪ್ರತಿ ಮಾತೃ ಮೂರ್ತಿಗೂ ಸಹಜವೇ. ನೀವು ಚತುರರಾದ್ದರಿಂದ, ಅವಳ ದುಃಖವು ಹೋಗುವಂತೆ, ತೀರುವಂತೆ ಪ್ರಯತ್ನ ಮಾಡಿ," ಎಂದು ಶ್ರೀರಾಮನು ಕೇಳಿಕೊಂಡನು.

ಸುಮಂತನನ್ನು ಕರೆದು, "ಓ ಸುಮಂತಾ, ನೀನಿನ್ನು ತಂದೆಯ ಬಳಿ ಹೋಗಿ ಎಲ್ಲ ರೀತಿಯಲ್ಲಿ ಅವನನ್ನು ಶಾಂತ ಪಡಿಸು," ಎಂದು ಪ್ರಾರ್ಥಿಸಿದನು. ಇನ್ನೇನೂ ಮಾಡಲೂ ಸಾಧ್ಯವಿಲ್ಲದೆ, ಸುಮಂತನು ಕಣ್ಣೀರು ಸುರಿಸುತ್ತಾ ಮಾತನಾಡಲಾರದವನಾಗಿ, ದುಃಖ ಸಹಿಸಲಾರದೆ, ಗೊಳೋ ಎಂದು ಗಟ್ಟಿಯಾಗಿ ಅಳತೊಡಗಿದನು. ಪಕ್ಕದಲ್ಲಿದ್ದ ಇತರ ಮಂತ್ರಿಗಳೂ ಪರಿವಾರದವರೂ ಸುಮಂತನನ್ನು ಸಮಾಧಾನ ಪಡಿಸಲೆತ್ನಿಸಿದರು. ತಾವೂ ದುಃಖಿಸಿದರು. ನಂತರ ರಾಮಾಜ್ಞೆಯನ್ನು ಶಿರಸಾವಹಿಸಿ ಒಳಗೆ ಹೋದರು. ನಗರವೆಲ್ಲಾ ಶೋಕ ಸಾಗರದಲ್ಲಿ ಮುಳುಗಿತ್ತು. ದಶರಥನು ಮೂರ್ಛೆಯಿಂದೆದ್ದು, 'ರಾಮಾ, ರಾಮಾ' ಎಂದು ಕೂಗುತ್ತಾ ಏಳಲು ಹೋಗಿ ಮತ್ತೆ ಕೆಳಗೆ ಬೀಳುತ್ತಾ ಈ ರೀತಿಯಾಗಿ ಕೋಣೆಯೊಳಗೆ ಸುತ್ತಾಡುತ್ತಿದ್ದನು. ಆ ಸಮಯಕ್ಕೆ ಸುಮಂತನು ರಾಜನ ಕೋಣೆಯೊಳಗೆ ಪ್ರವೇಶಿಸಿ ರಾಜನನ್ನು ಸಮಾಧಾನ ಪಡಿಸಲೆತ್ನಿಸಿದನು. ತನ್ನಲ್ಲೇ ಒಳಗೆ ಪರ್ವತದಷ್ಟು ದುಃಖರಾಶಿ ತುಂಬಿರುವಾಗ, ದಶರಥನನ್ನೇನು ಅವನು ಸಮಾಧಾನ ಮಾಡಬಲ್ಲ? ಆದರೂ ರಾಮಾಜ್ಞೆಯನ್ನು ನೆನೆದು, ಉಕ್ಕಿಬರುತ್ತಿದ್ದ ದುಃಖವನ್ನು ನುಂಗಿ, ಕಣ್ಣೀರು ಹರಿಸುತ್ತಾ ಮಾತಾಡಲಾರದ ಸ್ಥಿತಿಯಲ್ಲಿ ತನ್ನ ಪಕ್ಕದಲ್ಲಿ ಕುಳಿತಿದ್ದ ಸುಮಂತನನ್ನು ದಶರಥನು ಕಣ್ಣು ತೆರೆದು ನೋಡಿ, "ರಾಮಾ!" ಎಂದು ಕಿರುಚಿ ಸುಮಂತನನ್ನು ಒರಗಿದನು.

# ೧೪ ಅರಣ್ಯ ಪ್ರವೇಶ

ಸ್ವಲ್ಪ ಹೊತ್ತು ಆ ಸ್ಥಿತಿಯಲ್ಲಿದ್ದು, ಮತ್ತೆ ಎದ್ದು, "ಓ ಸುಮಂತಾ! ರಾಮನು ವನಕ್ಕೆ ಹೋದನೇ ಹೊರತು ನನ್ನ ಪ್ರಾಣವು ನನ್ನ ಶರೀರ ಬಿಟ್ಟು ಹೋಗಲಿಲ್ಲ. ನನ್ನ ಶರೀರವನ್ನಾಶ್ರಯಿಸಿರುವ ಈ ನನ್ನ ಪ್ರಾಣಕ್ಕೆ ಸುಖವಾದರೂ ಎಲ್ಲಿ?" ಎನ್ನುತ್ತಾ ಧೈರ್ಯ ತಂದುಕೊಂಡು, "ಸುಮಂತಾ! ಹೊರಡು. ರಥವನ್ನು ತೆಗೆದುಕೊಂಡು, ರಾಮನ ಹಿಂದೆ ಹೋಗು. ಕಮಲ ಕುಮಾರರಿಬ್ಬರೂ ಅತಿ ಸುಕುಮಾರರು. ಸೊಸೆಯು ಬಿಸಿಲು ಸಹಿಸಳು, ಕಮಲ ದಳಗಳಂಥ ಅವಳ ಪಾದಗಳಿಗೆ ಅದೆಷ್ಟು ಬೊಬ್ಬೆಗಳೇಳುವುವೋ! ಹೊರಡು, ತಕ್ಷಣ ರಥವನ್ನು ತೆಗೆದುಕೊಂಡು ಹೋಗು."

**ಸುಮಂತನಿಗೆ ರಾಜಾಜ್ಞೆ**: "ಸುಮಂತಾ! ನನ್ನ ರಾಮಚಂದ್ರನು ಧೀರ. ಅವನು ಹಿಂತಿರುಗುವುದಿಲ್ಲ. ಅವನ ಸಂಕಲ್ಪವನ್ನು ಯಾರೂ ಬದಲಿಸಲಾರರು. ಅವನನ್ನು ಹಾಗೆ ಬದಲಾಯಿಸುವಂತೆ ಒತ್ತಾಯಿಸುವುದೂ ವ್ಯರ್ಥವೆ. ಹಾಗೆ ಮಾಡಿದರೆ ಅವನನ್ನು ತೊಂದರೆ ಪಡಿಸಿದಹಾಗಾಗುವುದು. ಅವನು ಸತ್ಯಸಂಧ. ನಿಧಾನಿಸಿದರೆ ದಾರಿ ತಪ್ಪುವುದು. ತಕ್ಷಣವೇ ರಥವನ್ನು ತೆಗೆದುಕೊಂಡು ಹೋಗು. ರಾಜಬೀದಿ ಯಲ್ಲಿ ನನ್ನ ಕುಮಾರರು ನಡೆದುಕೊಂಡು ಹೋಗುತ್ತಿದ್ದರೆ ಪ್ರಜೆಗಳು ನೋಡಿ ಸಹಿಸರು. ಹೊರಡು, ಹೊರಡು," ಎಂದು ಸುಮಂತನನ್ನು ಒತ್ತಾಯಿಸಿದನು.

"ರಥದಲ್ಲಿ ದಾರಿ ಬುತ್ತಿಯನ್ನೂ, ಆಯುಧ ಸಾಮಾಗ್ರಿಗಳನ್ನೂ ತೆಗೆದುಕೊಂಡು ಹೋಗು, ಮರೆತೀಯೆ. ಸುಮಂತಾ! ನೀನು ಹೇಗಾದರೂ ಮಾಡಿ ಸೀತೆಯ ಮನ ಒಲಿಸಿ ನಾನು ಹೇಳಿದೆನೆಂದು ಹೇಳಿ, ಅವಳನ್ನು ಅಯೋಧ್ಯೆಗೆ ಹಿಂತಿರುಗುವಂತೆ ಮಾಡು. ಅವರನ್ನು ರಥದಲ್ಲಿ ಕೂರಿಸಿಕೊಂಡೇ ಸ್ವಲ್ಪ ದೂರ ಕಾಡಿನಲ್ಲಿ ಕರೆದು ಕೊಂಡು ಹೋಗು. ಅರಣ್ಯವನ್ನು ನೋಡಿ ಜಾನಕಿಯು ಭಯಪಟ್ಟಂತೆ ಕಂಡೊಡ ನೆಯೇ ರಾಮಾಜ್ಞೆಯನ್ನು ಪಡೆದು ಮಿಥಿಲಾ ಕಿಶೋರಿಯಾದ ಜಾನಕಿಗೆ ನನ್ನ ಮಾತನ್ನು ತಿಳಿಸಿ, ಅಯೋಧ್ಯೆಗೆ ಹಿಂತಿರುಗಬೇಕೆಂದು ಪ್ರಾರ್ಥಿಸು. ನೀನು ಅಯೋ ಧ್ಯೆಯಲ್ಲಿರುವುದು ಅಂಗೀಕರಿಸದಿದ್ದರೆ ಮಹಾರಾಜನು ನಿನ್ನ ತಂದೆಯಾದ ಜನಕನ ಬಳಿಗೆ ನಿನ್ನನ್ನು ಕಳಿಸುವನು, ಎಂದೂ ಹೇಳು," ಎಂದು ದಶರಥನು ಮತ್ತೆ ಮತ್ತೆ ಹೇಳುತ್ತಿದ್ದನು, ಮತ್ತೆ ಮತ್ತೆ ಸ್ಮೃತಿತಪ್ಪಿ ಬೀಳುತ್ತಿದ್ದನು, ಎಚ್ಚರಗೊಳ್ಳುತ್ತಿದನು. "ಸುಮಂತಾ ಇಷ್ಟೊಂದು ಮಾತೇಕೆ? ನನ್ನ ಸೀತಾ ರಾಮ ಲಕ್ಷ್ಮಣ ಮೂವರನ್ನೂ ಕರೆದುಕೊಂಡು ಬಂದು ತೋರಿಸು. ಆ ಕೆಲಸವನ್ನು ಮಾಡಿ ನನ್ನನ್ನು ಆನಂದ ಪಡಿಸು," ಎಂದು ಬಹು ದೀನವಾಗಿ ಗೋಳಿಟ್ಟನು.

"ರಥವನ್ನು ಬೇಗ ಓಡಿಸಿಕೊಂಡು ಹೋಗು, ಮುಂದೆ ಹೋಗಲಾಗುವುದಿಲ್ಲ ಎನ್ನುವಲ್ಲಿಯವರೆಗೂ ರಥವನ್ನು ತೆಗೆದುಕೊಂಡು ಹೋಗು. ಬಹುಶಃ ಮೂರು ನಾಲ್ಕು ದಿನಗಳು ರಥದಲ್ಲಿ ಪ್ರಯಾಣ ಮಾಡಬೇಕಾಗಿ ಬರಬಹುದು. ಆಮೇಲೆ ಅವರನ್ನು ಇಳಿಸಿ, ಅವರು ಕಣ್ಣಿಗೆ ಕಾಣಿಸುವವರೆಗೆ ಇದ್ದು, ಅವರ ಕ್ಷೇಮ ವಾರ್ತೆಯನ್ನು ತೆಗೆದುಕೊಂಡು ಬಾ, ಹೊರಡು," ಎಂದು ಆತುರಪಡಿಸಿದನು. ಸುಮಂತನು ದಶರಥ ಮಹಾರಾಜನ ಆಜ್ಞೆ ಪಡೆದು, ಅವನಿಗೆ ನಮಸ್ಕರಿಸಿ, ರಥವನ್ನು ನಡೆಸಿಕೊಂಡು, ನಗರದ ಬೀದಿಗಳಲ್ಲಿ ಕಾಲು ನಡಿಗೆಯಲ್ಲಿ ಹೋಗುತ್ತಿದ್ದ ಸೀತಾ ರಾಮಲಕ್ಷ್ಮಣರನ್ನು ಸೇರಿ, ರಾಜನ ಮಾತುಗಳನ್ನು ರಾಮನಿಗೆ ಬಿನ್ನವಿಸಿ ಅವರನ್ನು ರಥದಲ್ಲಿ ಕೂರಿಸಿಕೊಂಡು ರಾಜಬೀದಿಯಲ್ಲಿ ಹೊರಟನು. ಸೀತಾ ರಾಮ ಲಕ್ಷ್ಮಣರು ಇಕ್ಕೆಲಗಳಲ್ಲೂ ಕಣ್ಣೀರು ಸುರಿಸುತ್ತಾ ದುಃಖಾವೇಶದಿಂದ ರೋದಿಸುತ್ತಾ

ನಿಂತಿದ್ದ ಪ್ರಜೆಗಳನ್ನು ಕುರಿತು ಶಾಂತವಾಗಿರುವಂತೆ ಹೇಳುತ್ತಾ ನಮಸ್ಕರಿಸುತ್ತಾ ಸಾಗಿದರು. ರಾಜಬೀದಿಯನ್ನು ದಾಟಿ ಅಯೋಧ್ಯಾ ನಗರವನ್ನು ಬಿಟ್ಟು ಸ್ವಲ್ಪ ದೂರ ಹೋದರು. ಪುರಜನರು ಹಿಂದೆಯೇ ಓಡುತ್ತಾ ಬರುತ್ತಿದ್ದರು. ರಥದ ಹಿಂದೆ ಧೂಳು ಗಗನವನ್ನೆಲ್ಲಾ ಆವರಿಸಿ, ದಾರಿಯೇ ತಿಳಿಯದಂತಿದ್ದರೂ ರಥದ ಹಿಂದೆ ವೃದ್ಧರು, ಸ್ತ್ರೀಯರು, ಯುವಕರು, ಬ್ರಾಹ್ಮಣರು, "ರಾಮಾ! ರಾಮಾ! ನಮ್ಮನ್ನೂ ನಿನ್ನೊಂದಿಗೇ ಕರೆದುಕೊಂಡು ಹೋಗು," ಎಂದು ರೋದಿಸುತ್ತಾ ಓಡೋಡಿ ಬರುತ್ತಿದ್ದರು.

**ರಥವನ್ನು ನಿಲ್ಲಿಸು**: ಅಯೋಧ್ಯೆಯ ರಾಜಬೀದಿಗಳೆಲ್ಲಾ ನಿರ್ಜನ ಪ್ರದೇಶಗಳಾದುವು. ನಗರವು ನಿದ್ರಿಸುತ್ತಿದೆಯೋ ಎನ್ನುವಂತೆ ನಿಶ್ಶಬ್ದವಾಗಿತ್ತು. ಕತ್ತಲಾವರಿಸಿತ್ತು. ನಡೆಯಲಾರದ ಕೆಲವು ಸ್ತ್ರೀ ಪುರುಷರು ದಾರಿಗಳಲ್ಲಿ ಸ್ತಂಭಿಸಿ ನಿಂತರು. ಕೆಲವರು ಬಾಗಿಲುಗಳನ್ನು ಹಾಕಿಕೊಂಡು ಒಳೊಳಗೇ ಸಂಕಟಪಡುತ್ತಾ ಆಹಾರ ಪಾನೀಯಗಳನ್ನು ಬಿಟ್ಟು, ಎಲ್ಲೆಂದರೆ ಅಲ್ಲೇ ಬಿದ್ದು ಹೊರಳಾಡಿದರು. ಇನ್ನು ಕೆಲವರು, ಶ್ರೀರಾಮನು ತನ್ನ ಮನಸ್ಸು ಬದಲಾಯಿಸಿ ಕತ್ತಲಾದ ಮೇಲೆ ತಿರುಗಿ ಅಯೋಧ್ಯೆಗೆ ಬರುವನೇನೋ ಎಂದು ದಾರಿ ಕಾದರು. ಇಷ್ಟರಲ್ಲಿ, ದಶರಥನು ಒಂದು ರಥವನ್ನೇರಿ, "ಸುಮಂತಾ! ಸುಮಂತಾ! ರಥವನ್ನು ನಿಲ್ಲಿಸು, ಒಂದು ಸಾರಿ ನನ್ನ ಪ್ರೇಮಮೂರ್ತಿಯನ್ನು ನೋಡುತ್ತೇನೆ," ಎಂದು ಬೀದಿಗಳಲ್ಲಿ ಅರಚುತ್ತಾ ರಥವನ್ನು ಓಡಿಸಿದನು. ರಾಮನ ರಥದ ಹಿಂದೆ ಓಡೋಡಿ ಆಯಾಸಗೊಂಡು ದಾರಿಯಲ್ಲಿ ಕುಳಿತ್ತಿದ್ದ ಪ್ರಜೆಗಳು ದಶರಥನ ರಥವನ್ನು ನೋಡಿ ರಾಮನೇ ಬರುತ್ತಿದ್ದಾನೇನೋ ಎಂದು ಆಶೆಯಿಂದ ತಲೆಯೆತ್ತಿ ನೋಡಿದರು, ದಾರಿ ಅಡ್ಡಗಟ್ಟಿದರು. ಆದರೆ, ದಶರಥನ ರೋದನವನ್ನು ಕೇಳಿ ತಾವೂ ಮತ್ತಷ್ಟು ರೋದಿಸಿ, ರಥಕ್ಕೆ ದಾರಿ ಬಿಟ್ಟು, "ಮಹಾರಾಜಾ! ಶೀಘ್ರವಾಗಿ ಹೋಗಿ ನಮ್ಮ ರಾಮಚಂದ್ರನನ್ನು ಹಿಂದಕ್ಕೆ ಕರೆತನ್ನಿ, ನಮ್ಮ ಆಶೆ ನೆರವೇರಿಸಿ," ಎಂದು ಪ್ರಾರ್ಥಿಸಿದರು.

ರಾಮರಥವು ಅಯೋಧ್ಯಾ ಮರಳು ದಿಣ್ಣೆಯ ಮೇಲೆ ವೇಗವಾಗಿ ಓಡುತ್ತಿದ್ದುದನ್ನು ದೂರದಿಂದ ನೋಡಿದ ದಶರಥನು, "ಸುಮಂತಾ! ಸುಮಂತಾ! ನಿಲ್ಲಿಸು, ನಿಲ್ಲಿಸು," ಎಂದು ಅರಚುತ್ತಾ ರಥವನ್ನೋಡಿಸಿದನು. ಸುಮಂತನು, ಹಿಂದೆ ವೇಗವಾಗಿ ಬರುತ್ತಿದ್ದ ರಥವನ್ನು ನೋಡಿ, "ರಾಮಚಂದ್ರಾ, ನಿಮ್ಮ ತಂದೆ ಹಿಂಬಾಲಿಸುತ್ತಿದ್ದಾರೆ. ಸ್ವಲ್ಪ ಹೊತ್ತು ನಿಲ್ಲಿಸಿ ಅವರ ಆಜ್ಞೆಯನ್ನು ಪಡೆಯುವುದೊಳ್ಳೆಯದು," ಎಂದು ಪ್ರಾರ್ಥಿಸಿದನು. ಓಡೋಡಿ ಬರುತ್ತಿದ್ದ ಪ್ರಜೆಗಳನ್ನೂ ತಂದೆಯ ರಥವನ್ನೂ ರಾಮಚಂದ್ರನು ನೋಡಿದನು. ಮಾರ್ಗ ಮಧ್ಯದಲ್ಲಿ ನಿಲ್ಲಿಸಿದರೆ ಜನಗಳೆಲ್ಲರೂ ತನ್ನನ್ನು ಕೂಡಿಕೊಂಡು ಮತ್ತಷ್ಟು ದುಃಖಿಸುವರೆಂದೂ ಬಳಲಿ ಅಲ್ಲಲ್ಲೇ ದಾರಿಯಲ್ಲಿ

ಕುಸಿದು ಬಿದ್ದಿರುವ ಜನರು ಮತ್ತೆ ಓಡುತ್ತಾ ಬಂದು ಇನ್ನಷ್ಟು ಶ್ರಮಪಡುವರೆಂದೂ ಇದು ಪ್ರಜೆಗಳಿಗೆ ವೃಥಾ ಬಾಧೆ ಕೊಟ್ಟಂತಾಗುವುದಲ್ಲದೆ ತನ್ನ ನಿರ್ಧಾರಕ್ಕೆ ಆತಂಕ ತರುವುದೆಂದು ಅವನಿಗೆ ಅನಿಸಿತು. ಅಲ್ಲದೆ ಮಾರ್ಗ ಮಧ್ಯದಲ್ಲಿ ದಶರಥನು ಗೋಳಿಡುವುದನ್ನು ಜನರೆಲ್ಲರೂ ನೋಡಿದರೆ ರಾಜನ ಗೌರವಕ್ಕೆ ಭಂಗ ಬರುವುದೆಂದು ಯೋಚಿಸಿ, ರಥವನ್ನು ನಿಲ್ಲಿಸಬೇಕಾಗಿಲ್ಲವೆಂದೂ ಶರವೇಗದಿಂದ ರಥವನ್ನು ಓಡಿಸುವುದೊಳ್ಳೆಯದೆಂದೂ ಸುಮಂತನನ್ನು ಎಚ್ಚರಿಸಿದನು.

ಸುಮಂತನು ಕೈ ಜೋಡಿಸಿ, "ರಾಮಾ, ನನಗೂ ಕೂಡ ನಾಲ್ಕು ದಿನಗಳು ಮಾತ್ರವೇ ನಿಮ್ಮೊಂದಿಗೆ ಇರಲು ಚಕ್ರವರ್ತಿಯು ಅನುಮತಿ ಇತ್ತಿದ್ದಾರೆ. ಆಮೇಲೆ ನಾನು ಅಯೋಧ್ಯೆಯನ್ನು ಸೇರಬೇಕಲ್ಲವೆ? ಆಗ ಚಕ್ರವರ್ತಿಯು, 'ಸುಮಂತಾ, ನನ್ನ ರಥವನ್ನು ನೋಡಿಯೂ, ನೀನೇಕೆ ರಥವನ್ನು ಓಡಿಸಿದೆ?' ಎಂದು ಪ್ರಶ್ನಿಸಿದರೆ ನಾನೇನು ಉತ್ತರವೀಯಲಿ? ಹೋಗಲಿ, ನೀವು ನನ್ನನ್ನೂ ನಿಮ್ಮೊಂದಿಗೆ ಅರಣ್ಯದಲ್ಲಿರಿಸಿಕೊಂಡರೆ ನಾನೆಷ್ಟೋ ಧನ್ಯ. ನನ್ನನ್ನು ಇರಿಸಿಕೊಳ್ಳುವುದಾದರೆ, ಹೇಳಿ, ರಥವನ್ನು ನಿಲ್ಲಿಸದೆ ಓಡಿಸುತ್ತೇನೆ. ನಿಮ್ಮ ಅಪ್ಪಣೆಯೇನೋ ತಿಳಿಸಿ," ಎಂದು ಪ್ರಾರ್ಥಿಸಿದನು.

**ಧರ್ಮ ವಚನಾಮೃತ**: ರಾಮನು ಚೆನ್ನಾಗಿ ಯೋಚಿಸಿ, "ಸುಮಂತಾ, ರಥವನ್ನು ತೆಗೆದುಕೊಂಡು ಹೋಗಿ ಅವರನ್ನು ಅರಣ್ಯದಲ್ಲಿ ಬಿಟ್ಟು ಬಾ ಎಂದು ಆಜ್ಞಾಪಿಸಿದವನು ಚಕ್ರವರ್ತಿ. ಈಗ ರಥವನ್ನು ನಿಲ್ಲಿಸೆಂದು ರೋದಿಸುತ್ತಾ ಬರುತ್ತಿರುವವನು ದಶರಥ. ನೀನು ರಾಜಾಜ್ಞೆಯನ್ನು ಪಾಲಿಸಬೇಕೇ ವಿನಾ ದಶರಥನ ಆಜ್ಞೆಯನ್ನಲ್ಲ. ನೀನು ರಾಜನಿಗೆ, ರಾಜ್ಯಕ್ಕೆ ಮಂತ್ರಿಯೇ ವಿನಾ ಒಬ್ಬ ವ್ಯಕ್ತಿ ದಶರಥನಿಗಲ್ಲ. ವ್ಯಕ್ತಿಶಃ ದಶರಥನಿಗೂ ನನಗೂ ತಂದೆ ಮಗನ ವಾತ್ಸಲ್ಯದ ಸಂಬಂಧ. ಚಕ್ರವರ್ತಿಯಾಗಿ ನಿನಗೂ ನನಗೂ ಅವರು ಚಕ್ರವರ್ತಿ. ಆದ್ದರಿಂದ ಇಬ್ಬರಿಗೂ ಸಮಾನ ಸಂಬಂಧದ ಚಕ್ರವರ್ತಿ ಸ್ಥಾನವೇ ನಮಗೆ ಪ್ರಧಾನ. ನೀನು ನಿನ್ನ ಕರ್ತವ್ಯವನ್ನು ನೆರವೇರಿಸು. ನನ್ನ ಮಾತನ್ನು ನೀನು ಕೇಳಲಿಲ್ಲವೇಕೆ ಎಂದು ಪ್ರಶ್ನಿಸಿದರೆ, ಕೇಳಲಿಲ್ಲವೆಂದು ಹೇಳು, ತಪ್ಪಿಲ್ಲ," ಎಂದನು.

ರಥವನ್ನು ನಿಲ್ಲಿಸದೆ ವೇಗವಾಗಿ ಹೊಡೆಯೆಂದು ಆಜ್ಞಾಪಿಸಿದ ರಾಮನ ವಚನಾಮೃತವನ್ನು ಸುಮಂತನು ಧರ್ಮ ರಸವೆಂದು ಕುಡಿದು, ಆನಂದಿಸಿ, ರಥವನ್ನು ಮುಂದಕ್ಕೋಡಿಸಿದನು. ರಥವು ನಿಲ್ಲದಿದ್ದುದನ್ನು ನೋಡಿ ದಶರಥನು ತನ್ನ ರಥವನ್ನು ನಿಲ್ಲಿಸಿ, ರೋದಿಸುತ್ತಾ ಮತ್ತೆ ಹಿಂದಕ್ಕೆ ಹೊರಟನು. ಆದರೆ, ಜನರೆಲ್ಲರೂ ತಮ್ಮ ನಿರ್ಧಾರವನ್ನು ಬಿಡಲಿಲ್ಲ. ದೇಹಕ್ಕಾಗುತ್ತಿದ್ದ ಬಾಧೆಗೆ ಹೆದರದೆ, ಪ್ರಾಣವನ್ನಾ

ದರೂ ಬಿಡಲು ಸಿದ್ಧರಾದ ಕೆಲವರು, ಆಯಾಸದಿಂದ ಉಸಿರು ಬಿಡುತ್ತಾ ಅಯೋಧ್ಯೆಗೆ ಹಿಂತಿರುಗಿ ಹೋಗುವುದಕ್ಕಿಂತ ರಾಮನನ್ನು ಹಿಂಬಾಲಿಸಿ ಪ್ರಾಣಬಿಡುವುದೊಳ್ಳೆಯದೆಂದು ರಥವು ಹೋದ ಮಾರ್ಗವನ್ನು ಅನುಸರಿಸುತ್ತಾ ಕಾಲೆಳೆದುಕೊಂಡು ಹೊರಟರು. ಪ್ರೇಮಕ್ಕೆ ವಶರಾಗಿ ತನ್ನನ್ನು ಬಿಡಲಾರದೆ ಹಿಂಬಾಲಿಸುತ್ತಿದ್ದ ಜನರನ್ನು ನೋಡಿ ರಾಮನು ತುಂಬಾ ಚಿಂತಾಕ್ರಾಂತನಾದನು. ರಥವನ್ನು ನಿಲ್ಲಿಸಿ, ಕರುಣೆಯಿಂದ, ಮೃದು ಮಧುರವಾದ ಮಾತುಗಳಿಂದ ಅವರನ್ನು ಮಾತಾಡಿಸಿ, ಅನೇಕ ಧರ್ಮ ಸೂಕ್ಷ್ಮಗಳನ್ನು ಅವರಿಗೆ ಉಪದೇಶಿಸಿ, ಅಯೋಧ್ಯೆಗೆ ಹಿಂತಿರುಗುವಂತೆ ಅವರನ್ನು ಪ್ರಾರ್ಥಿಸಿದನು.

**ಅರಣ್ಯವೇ ಆನಂದಪುರ**: "ನಾವು ನಿಮ್ಮನ್ನಗಲಿ ಕ್ಷಣಕಾಲವದರೂ ಇರುವುದಿಲ್ಲ. ನಮ್ಮ ಪ್ರಾಣಗಳನ್ನು ಬಿಡುವುದಕ್ಕೂ ನಾವು ಸಿದ್ಧ," ಎಂದು ಕೆಲವರು ಹೇಳಿದರು. ಇನ್ನು ಕೆಲವು ಯುವಕರು, "ರಾಮಾ, ಧರ್ಮದೇವತೆಯಿಲ್ಲದ ಊರು ಅರಣ್ಯಕ್ಕಿಂತ ಘೋರ. ಅಂಥ ಭಯಂಕರವಾದ ಅರಣ್ಯದಲ್ಲಿ ನಾವಿರುವುದಿಲ್ಲ. ನೀವು ವಾಸಿಸುವ ಅರಣ್ಯವೇ ನಮಗೆ ಆನಂದಪುರ. ನಮ್ಮ ಶ್ರಮಕ್ಕೆ ನೀವೆಷ್ಟು ಮಾತ್ರಕ್ಕೂ ಚಿಂತೆ ಮಾಡಬೇಡಿ. ನಿಮ್ಮ ದೀಕ್ಷೆಯನ್ನು ನೀವು ಪೂರೈಸಿ, ನಮ್ಮ ದೀಕ್ಷೆಯನ್ನು ನಾವು ಪೂರೈಸುತ್ತೇವೆ. ಪಿತೃವಾಕ್ಯ ಪರಿಪಾಲನೆ ನಿಮಗೆಷ್ಟು ಪ್ರಧಾನವೆಂದು ನೀವು ತಿಳಿಯುವಿರೋ ಹಾಗೇ ನಮ್ಮ ಹೃದಯವಾಸಿಯಾದ ಆತ್ಮಾರಾಮನ ಅಣತಿ ನಮಗಷ್ಟು ಪ್ರಧಾನ, ಅದೇ ಪ್ರಮಾಣ, ಆದ್ದರಿಂದ ನಾವು ನಿಲ್ಲುವುದಿಲ್ಲ, ಹಿಂತಿರುಗುವುದಿಲ್ಲ, ಮರಣವೇ ನಮಗೆ ಆಶ್ರಮ," ಎಂದು ಗೋಳಿಟ್ಟರು.

ಅವರನ್ನು ನೋಡಿ ಅವರ ನಿರ್ಧಾರದ ಮಾತುಗಳನ್ನು ಕೇಳಿ ರಾಮಚಂದ್ರನ ಹೃದಯವು ಕರಗಿತು. ಸೀತೆಯ ಕಣ್ಣಲ್ಲಿ ಕಣ್ಣೀರು ಜಳಜಳ ಸುರಿಯಿತು. ಪ್ರಜೆಗಳ ಅಭಿಮಾನವನ್ನು ನೋಡಿ ಲಕ್ಷ್ಮಣನು ಇಂಥ ಅಭಿಮಾನ ಕೈಕೆಗೆ ಇಲ್ಲದೆ ಹೋಯಿತಲ್ಲಾ ಎಂದು ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಮಾತನಾಡದ ಸ್ಥಿತಿಯಲ್ಲಿ ತಲೆ ತಗ್ಗಿಸಿ ಕುಳಿತನು. ರಾಮನು ಹೇಗಾದರೂ ಅವರಿಗೆ ಸಮಾಧಾನ ಹೇಳಿ ಕಳಿಸುವುದೊಳ್ಳೆಯದೆಂದು, ಮತ್ತಷ್ಟು ಕನಿಕರದಿಂದ, ಪ್ರೇಮದಿಂದ ಅವರನ್ನು ಸಾಂತ್ವನಗೊಳಿಸಲೆತ್ನಿಸಿದನು. "ನಿಮ್ಮ ಅಗ್ನಿ ಕಾರ್ಯಗಳಿಗೆ ನಿಮ್ಮ ಪ್ರಯಾಣದಿಂದ ಅಡ್ಡಿಯಾಗುವುದು. ನೀವು ಅಯೋಧ್ಯೆಗೆ ಹೋಗಿ ಯಜ್ಞಯಾಗಾದಿ ಕಾರ್ಯಗಳನ್ನು ಮಾಡಿಕೊಂಡಿದ್ದರೆ ಕಾಲ ಬಹಳ ಬೇಗ ಹೋಗಬಹುದು. ನೀವು ಮಾಡುವ ಯಜ್ಞಯಾಗಾದಿ ಕರ್ಮಗಳ ಫಲವಾಗಿ ನಾನು ಅರಣ್ಯದಲ್ಲಿ ಸುಖ ಜೀವನ ನಡೆಸಿ, ಆನಂದದಿಂದ ಪುನಃ ಅಯೋಧ್ಯೆಗೆ ಬಂದು ಸೇರುತ್ತೇನೆ," ಎಂದು ಹಲವು ಬಗೆಯಾಗಿ ಸಂತೈಸಿ ಕಳಿಸಲೆತ್ನಿಸಿದನು.

**ವೃದ್ಧರ ಮೊರೆ**: ಆದರೂ ಬ್ರಾಹ್ಮಣ ಯುವಕರು ಹಿಂದಕ್ಕೆ ಹೋಗಲು ಒಪ್ಪಲಿಲ್ಲ. ರಾಮನು, "ನಿಮ್ಮ ತಂದೆತಾಯಿಯರು ವೃದ್ಧರಾದ್ದರಿಂದ ಅವರನ್ನು ನೋಡಿ ಕೊಳ್ಳುವವರೂ ಸಹ ಮನೆಯಲ್ಲಿ ಇಲ್ಲದ ಕಾರಣ ಇಂಥ ಪಟ್ಟನ್ನು ಹಿಡಿದು, ವೃದ್ಧರನ್ನು ಬಾಧೆಪಡಿಸುವುದು ಒಳ್ಳೆಯದಲ್ಲವೆಂದು ಧರ್ಮಬೋಧೆಯನ್ನೂ ನೀತಿ ಸೂಕ್ತಿಗಳನ್ನೂ ಮೇಲಿಂದ ಮೇಲೆ ಹೇಳಿದನು," ಎಂದನು. ಅದಕ್ಕೆ ಆ ಬ್ರಾಹ್ಮಣ ಯುವಕರು "ರಾಮಚಂದ್ರಾ ನಮ್ಮ ತಾಯಿ ತಂದೆಯರು ಬಲಹೀನರಾದ್ದರಿಂದ ಸ್ವಲ್ಪ ದೂರ ಮಾತ್ರ ಬಂದು, ರಾಮ ವಿಯೋಗವನ್ನು ತಾಳಲಾರದೆ, ಅವನನ್ನು ಅನುಸರಿಸಲಾಗದೆ ಹಿಂದುಳಿದರು. 'ನಾವು ರಾಮನನ್ನು ಅನುಸರಿಸಲಾಗಲಿಲ್ಲ, ನೀವಾದರೂ ಅನುಸರಿಸಿ ಅವನ ಅನುಗ್ರಹಕ್ಕೆ ಪಾತ್ರರಾಗಿ,' ಎಂದು ಆಜ್ಞಾಪಿಸಿ, ನಮ್ಮನ್ನು ಕಳಿಸಿದ್ದಾರೆ. ನಾವು ಅವರೊಂದಿಗಿಲ್ಲವೆನ್ನುವ ಚಿಂತೆಗಿಂತ ರಾಮನು ಅಯೋಧ್ಯೆಯಲ್ಲಿಲ್ಲವೆನ್ನುವ ಚಿಂತೆಯೇ ಅವರನ್ನು ಅತಿಯಾಗಿ ಬಾಧಿಸುತ್ತಿದೆ. ನಾವು ರಾಮನನ್ನು ಅನುಸರಿಸುತ್ತಿರುವುದು ನಮ್ಮ ತಂದೆತಾಯಿಗೆ ಆನಂದವೇ ವಿನಾ ಚಿಂತೆಗೆ ಕಾರಣವಾಗಿಲ್ಲ ಅವರನ್ನು ಆನಂದಪಡಿಸುವ ಸಲುವಾಗಿಯಾದರೂ ನಾವು ನಿನ್ನೊಂದಿಗೆ ಬರಲು ನೀನು ಒಪ್ಪಬೇಕು," ಎಂದು ಪ್ರಾರ್ಥಿಸಿದರು.

ರಾಮನ ಹೃದಯವು ಕರಗಿತು. ಪ್ರತ್ಯುತ್ತರ ಕೊಡಲಾರದವನಾದನು. ಏನು ಹೇಳಲು ತೋಚದೆ ತನ್ನ ತ್ಯಾಗಕ್ಕಿಂತ ಮಿಗಿಲಾದ ತ್ಯಾಗಕ್ಕೆ ಅವರು ಸಿದ್ಧರಾಗಿದ್ದುದನ್ನು ಕಂಡು, ಒಂದು ಕಡೆ ಆನಂದವೂ ಮತ್ತೊಂದು ಕಡೆ ನಾಚಿಕೆಯೂ ಆಯಿತು. ಇಷ್ಟರಲ್ಲಿ ಕತ್ತಲಾಯಿತು. ಕಗ್ಗತ್ತಲೆಯಲ್ಲಿ ಅಯೋಧ್ಯೆಗೆ ಹಿಂದಿರುಗಿ ಎಂದು ಅವರಿಗೆ ಹೇಳುವುದು ಸರಿಯಲ್ಲವೆಂದು, ಆಯಾಸಗೊಂಡಿರುವ ಅವರಿಗೆ ಸ್ವಲ್ಪ ವಿಶ್ರಾಂತಿ ಕೊಡುವುದೊಳ್ಳೆಯದೆಂದು, ಕಂದಮೂಲಾದಿಗಳನ್ನು ತಿಂದು ವಿಶ್ರಮಿಸಿಕೊಳ್ಳಿ ಎಂದು ಅವರಿಗೆ ಹೇಳಿದನು. ತನ್ನ ರಥವನ್ನು ನಿಲ್ಲಿಸಿ, ತಮಸಾ ನದಿಯಲ್ಲಿ ಸ್ನಾನಮಾಡಿ, ಸಂಧ್ಯಾವಂದನೆಯನ್ನು ಮುಗಿಸಿ, ತಾನೂ ಸ್ವಲ್ಪ ವಿಶ್ರಾಂತಿ ತೆಗೆದು ಕೊಳ್ಳುವವನಂತೆ ನಟಿಸಿದನು. ಹಗಲೆಲ್ಲಾ ಓಡೋಡಿ ಪ್ರಯಾಣ ಮಾಡಿದ್ದ ಪ್ರಜೆಗಳು ರಾಮ ಸನ್ನಿಧಿಯಲ್ಲಿ ವಿಶ್ರಮಿಸಿದ್ದ ಕಾರಣ ಗಾಢವಾದ ನಿದ್ರೆಯಲ್ಲಿ ಮುಳುಗಿದರು. ಬೆಳಗ್ಗೆ ಇವರು ಮತ್ತೆ ತನ್ನನ್ನು ಬಿಡದೆ ಹಿಂಬಾಲಿಸುವರೆಂದು, ರಾತ್ರಿ ಎರಡು ಝಾವಗಳು ಕಳೆದೊಡನೆಯೇ ರಾಮನು ಸುಮಂತನನ್ನೆಬ್ಬಿಸಿ ರಥದ ಜಾಡು ಕಾಣಿಸದಂತೆ, ನಿದ್ರೆಮಾಡುತ್ತಿರುವವರು ಎಚ್ಚರಗೊಳ್ಳದಂತೆ ರಥವನ್ನು ನಡೆಸು ಎಂದು ಹೇಳಿದನು. ಇದೇ ಸರಿಯಾದ ಉಪಾಯವೆಂದು ತಿಳಿದು, ಸುಮಂತನು ರಥವನ್ನು ಜಾಗ್ರತೆಯಿಂದ ಹಾಗೂ ಹೀಗೂ ತಿರುಗಿಸಿ, ರಥವು ಅಯೋಧ್ಯೆಯ

ಕಡೆ ಹೋದಂತೆ ಗಾಲಿಯ ಗುರುತು ಮೂಡಿಸಿ, ದಟ್ಟವಾದ ಅರಣ್ಯವನ್ನು ಪ್ರವೇಶಿಸಿದನು.

**ವಿಧಿ ಬರಹ**: ಬೆಳಗಾಯಿತು, ಜನರು ನಿದ್ರೆಯಿಂದೆದ್ದು ನೋಡಿದರು. ರಥವಾಗಲೀ ಸೀತಾ ರಾಮ ಲಕ್ಷ್ಮಣರಾಗಲೀ ಇಲ್ಲದಿದ್ದುದನ್ನು ನೋಡಿ ಬಹಳ ದುಃಖಿಸಿದರು. ಇನ್ನೂ ನಿದ್ರೆಮಾಡುತ್ತಿದ್ದವರನ್ನು ಎಬ್ಬಿಸಿ, ರಥವು ಹೋದ ಜಾಡನ್ನು ಗುರುತಿಸಲು ಪ್ರಯತ್ನಿಸುತ್ತಾ, "ರಾಮಾ! ರಾಮಾ!" ಎಂದು ಗಟ್ಟಿಯಾಗಿ ಅಳಲಾರಂಭಿಸಿದರು. ಓಡಲಾರಂಭಿಸಿದರು. ಅವರಲ್ಲೊಬ್ಬನು, "ಸೋದರರೇ! ನಮಗಾಗುತ್ತಿದ್ದ ಕಾಯದ ಕಷ್ಟವನ್ನು ನೋಡಿ ರಾಮನು ನಮ್ಮನ್ನು ಬಿಟ್ಟು ಹೋಗಿದ್ದಾನೆ," ಎಂದನು. ಅವರು ತಮ್ಮನ್ನು ನಿಂದಿಸಿಕೊಳ್ಳುತ್ತಾ, ನೀರಿನಲ್ಲಿರುವ ಮೀನುಗಳು ತಮಗಿಂತ ಮೇಲೆಂದು ಅವುಗಳನ್ನು ಕೊಂಡಾಡಿದರು. "ಮೀನುಗಳು ನೀರಿಲ್ಲದೆ ಬದುಕುವುದಿಲ್ಲ. ಆದರೆ, ನಾವು ರಾಮನಿಲ್ಲದೆಯೇ ಬದುಕಿದ್ದೇವೆ. ಛೀ! ಏತಕ್ಕೇ ಬದುಕು? ನಮಗೆ ಪ್ರಿಯನಾದ ರಾಮನ ವಿಯೋಗವನ್ನು ತಂದುಕೊಂಡೆವಲ್ಲವೆ? ನಮಗೆ ಮರಣ ಬರಲಿಲ್ಲವೇಕೆ?" ಎಂದು ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಾ ಆತ್ಮವೇ ರಾಮನಾದ್ದರಿಂದ ಆತ್ಮಹತ್ಯೆ ಸಲ್ಲದೆಂದುಕೊಂಡರು. "ಈ ವಿಯೋಗವು ನಾವು ಬಯಸಿ ಬಂದದ್ದಲ್ಲ, ವಿಧಿಯ ಬರಹ. ಅಂತೆಯೇ ಮರಣವನ್ನೂ ಬಯಸಿ ತಂದುಕೊಳ್ಳುವುದು ಸರಿಯಲ್ಲ. ಅದೂ ಕೂಡ ವಿಧಿಯನ್ನನುಸರಿಸಿಯೇ ಬರಬೇಕು. ಆದ್ದರಿಂದ, ವಿಧಿಯನ್ನಾದರೂ ಪ್ರಾರ್ಥಿಸಿ ಆ ಮರಣ ತಂದುಕೊಳ್ಳುವುದೊಳ್ಳೆಯದು," ಎಂದೊಬ್ಬನು ಸೂಚಿಸಿದನು.

**ಜಾಡನ್ನು ಗುರುತಿಸಿದರು**: ಹೀಗೆ ಒಬ್ಬೊಬ್ಬರೂ ವಾದಿಸುತ್ತಾ ಮುಂದೇನು ಮಾಡುವುದೆಂದು ವಿಚಾರ ಮಾಡುತ್ತಾ ರಥದ ಜಾಡನ್ನು ಗುರುತಿಸಿದರು. ರಥವು ಅಯೋಧ್ಯಾ ಪುರದ ಕಡೆಗೆ ಸ್ವಲ್ಪ ದೂರ ಹೋದಹಾಗೆ ಕಾಣಿಸಿ, ಮುಂದೆ ಕಾಣಿಸಲಿಲ್ಲ. ಜಾಡನ್ನು ಗುರುತಿಸುವುದು ಕಷ್ಟವಾಯಿತು. ಬೇರೇನೂ ಮಾಡಲು ಅವಕಾಶವಿಲ್ಲದೆ, ವಿಯೋಗ ದುಃಖದಿಂದ ನಗರಕ್ಕೆ ಹಿಂದುಗಿದರು. ರಾಮನು ನಮ್ಮ ವಿಯೋಗ ಬಾಧೆಯನ್ನು ತಿಳಿದು, ಎರಡು ಮೂರು ದಿನಗಳಲ್ಲೇ ಅಯೋಧ್ಯೆಗೆ ಹಿಂತಿರುಗಬಹುದೆಂಬ ದುಃಖದಿಂದ ನಗರಕ್ಕೆ ಹಿಂದಿರುಗಿದರು. ಮನೆ ಮನೆಗಳಲ್ಲಿ ಸ್ತ್ರೀಯರು ರಾಮನ ಪುನರ್ದರ್ಶನಾಪೇಕ್ಷಿಗಳಾಗಿ ವ್ರತ ಉಪವಾಸಗಳನ್ನು ಮಾಡಲಾರಂಭಿಸಿದರು. ಸೂರ್ಯನಿಲ್ಲದ ಸಮಯದಲ್ಲಿ ಚಕ್ರವಾಕ ಪಕ್ಷಿಗಳೂ ಕಮಲಗಳೂ ಸೊರಗಿರುವಂತೆ ಅವರು ದೀನರಾಗಿ ಪರಿತಪಿಸಿದರು.

**ಗಂಗಾ ಸ್ನಾನ**: ಪ್ರಜೆಗಳ ಗೋಳು ಹೀಗಿರಲು, ಇತ್ತ, ಸೀತಾ ರಾಮಲಕ್ಷ್ಮಣರು, ಮಂತ್ರಿ ಸುಮಂತನೊಂದಿಗೆ ಶೃಂಗಿಬೇರಪುರಕ್ಕೆ ಬಂದು ಸೇರಿದರು. ರಾಮನು ಗಂಗಾನದಿಯನ್ನು ನೋಡಿ ರಥವನ್ನು ನಿಲ್ಲಿಸೆಂದು ಸುಮಂತನಿಗೆ ಹೇಳಿದನು. ಆತನು ಕೆಳಗಿಳಿದು ಗಂಗಾ ನದಿಗೆ ನಮಸ್ಕರಿಸಿದನು. ಎಲ್ಲರೂ ರಥದಿಂದಿಳಿದು, ಗಂಗಾನದಿಗೆ ನಮಸ್ಕರಿಸಿದರು. ಸಕಲ ಸನ್ಮಂಗಳಗಳಿಗೂ ಆನಂದಕ್ಕೂ ಗಂಗಾ ನದಿಯು ಮೂಲವೆಂದು ರಾಮಚಂದ್ರನು ಹೇಳಿದನು. ಗಂಗೆಯನ್ನು ಕುರಿತ ಅನೇಕ ಚಿತ್ರ ವಿಚಿತ್ರ ಕಥೆಗಳನ್ನು ಅವರಿಗೆ ಹೇಳುತ್ತಾ, ನದಿಯತ್ತ ನಡೆದು ಬಂದನು. ಎಲ್ಲರೂ ಗಂಗೆಯಲ್ಲಿಳಿದು ಸ್ನಾನಮಾಡಿದರು, ಸೀತೆ ನದಿಗಿಳಿಯಲು ತಕ್ಕ ಏರ್ಪಾಟು ಮಾಡೆಂದು ಲಕ್ಷ್ಮಣನಿಗೆ ರಾಮನು ಆದೇಶಿಸಿದನು. ಅರಣ್ಯದಲ್ಲಿ ಪ್ರವಹಿಸುತ್ತಿದ್ದ ಗಂಗೆಯ ದಡಗಳು ಕೆಸರಿನಿಂದ ತುಂಬಿದ್ದುದರಿಂದ, ಲಕ್ಷ್ಮಣನು ಗಟ್ಟಿಯಾದ ಬಂಡೆಗಲ್ಲಿನ ಸ್ಥಳವನ್ನು ಹುಡುಕಿ ಅಲ್ಲಿ ಸ್ನಾನ ಮಾಡುವಂತೆ ಸೀತಾಮಾತೆಯನ್ನು ಪ್ರಾರ್ಥಿಸಿದನು. ಸೀತೆಯಾದರೂ ಎಚ್ಚರಿಕೆಯಿಂದ ಗಂಗೆಯಲ್ಲಿಳಿದು, ನಮಸ್ಕರಿಸಿ, ಸ್ನಾನ ಮಾಡಿದಳು. ಲಕ್ಷ್ಮಣನು ಸುತ್ತಾಡಿ ಅಡವಿ ಫಲಗಳನ್ನು ಆಯ್ದು ತಂದು ಸೀತಾ ರಾಮರಿಗೆ ಕೊಟ್ಟನು. ಮಾರ್ಗಾಯಾಸದಿಂದ ಬಳಲಿದ್ದ ಅವರು ಅದನ್ನು ತಿಂದು ವಿಶ್ರಮಿಸಿದರು.

ಇಷ್ಟರಲ್ಲಿ ಕೆಲವು ಅಂಬಿಗರು ಅಲ್ಲಿಗೆ ಬಂದರು. ಸೀತಾ ರಾಮಲಕ್ಷ್ಮಣರನ್ನೂ ರಥವನ್ನೂ ನೋಡಿ ಅವರು ಯಾರೋ ರಾಜಪುತ್ರರಿರಬೇಕೆಂದೂ ವಿಹಾರಾರ್ಥ ವಾಗಿ ಬಂದಿರಬೇಕೆಂದೂ ಭಾವಿಸಿ, ಧಾವಿಸಿ, ನಿಷದಾಧಿಪತಿಯಾದ ಗುಹನಿಗೆ ವಾರ್ತೆಯನ್ನು ತಿಳಿಸಿದರು. ಗುಹನು ಮತ್ತೊಬ್ಬನನ್ನು ಕರೆದು ಅವರ ಬಳಿಗೆ ಹೋಗಿ ಅವರು ಯಾರು? ಏಕೆ ಬಂದಿದ್ದಾರೆ ತಿಳಿದುಕೊಂಡು ಬರುವಂತೆ ಆಜ್ಞಾಪಿಸಿದನು. ಅವರು ಪರರು ಯಾರೂ ಅಲ್ಲವೆಂದೂ ಅಯೋಧ್ಯಾ ಪತಿಯಾದ ದಶರಥ ಮಹಾರಾಜನ ಪುತ್ರರೆಂದೂ ಮಂತ್ರಿ ಸುಮಂತನೊಂದಿಗಿದ್ದಾರೆಂದೂ ಅವನು ಬಂದು ಹೇಳಿದನು. ಉತ್ಕೃಷ್ಟ ಪದಾರ್ಥವನ್ನು ಒಬ್ಬನೇ ಸೇವಿಸುವುದು ಉಚಿತವಲ್ಲವೆಂದು ಗುಹನು, ರಾಮನಾಗಮನದ ವಾರ್ತೆಯನ್ನು ಬಂಧುಗಳಿಗೂ ಸ್ನೇಹಿತರಿಗೂ ತಿಳಿಸಿದನು. ಫಲಪುಷ್ಪಗಳೊಂದಿಗೆ ಗುಂಪಾಗಿ ಎಲ್ಲರೂ ಹೊರಟು ಗಂಗಾ ತೀರಕ್ಕೆ ಬಂದರು. ಫಲಪುಷ್ಪಗಳನ್ನು ರಾಮನ ಪಾದದ ಬಳಿ ಇಟ್ಟು, ಗುಹನೂ ಅವನ ಬಂಧು ಮಿತ್ರರೂ ನಮಸ್ಕರಿಸಿದರು. ಅವರ ಆನಂದವನ್ನು ನೋಡಿ ಹರ್ಷಿತನಾಗಿ, ರಾಮನು ಗುಹನನ್ನು ಬಳಿಯಲ್ಲಿ ಕುಳ್ಳಿರಿಸಿಕೊಂಡು ಕುಶಲ ಪ್ರಶ್ನೆ ಮಾಡಿದನು. ಪರಿಪಾಲನಾ ವಿಧಾನಗಳನ್ನು ಕುರಿತು ವಿಚಾರಿಸಿದನು.

**ಗುಹ**: ಉತ್ತರವಾಗಿ ಗುಹನು, "ನಾಥಾ! ರಾಮಚಂದ್ರಾ! ನಿಮ್ಮ ಚರಣ ದರ್ಶನ ಮಾಡಿದ್ದರಿಂದ ನಾವೆಲ್ಲರೂ ಅಮಿತಾನಂದ ಪಡುತ್ತಿದ್ದೇವೆ. ದುರ್ಲಭವಾದ ನಿಮ್ಮ ದರ್ಶನವು ನಮ್ಮ ಪುಣ್ಯಫಲದಿಂದ ಸಿಕ್ಕಿದೆ. ಇಲ್ಲದಿದ್ದರೆ ಈ ಅರಣ್ಯದಲ್ಲಿರುವ ನಮಗೆ ನಿಮ್ಮ ಪವಿತ್ರ ಚರಣಗಳು ಸಿಕ್ಕುವುದೆಂದರೇನು! ಇದಕ್ಕೆ ಪೂರ್ವವು ಹೇಗಿದ್ದರೂ ಇನ್ನು ಮುಂದೆ ನಿಮ್ಮ ಪಾದ ಸ್ಪರ್ಷದಿಂದ ಈ ಪ್ರಾಂತವು ಸುಭಿಕ್ಷದಿಂದ, ನಿತ್ಯ ಕಲ್ಯಾಣದಿಂದ ಕಂಗೊಳಿಸುವುದು. ಇದರಲ್ಲಿ ಯಾವ ಸಂಶಯವೂ ಇಲ್ಲ," ಎಂದು, ರಾಮದರ್ಶನ ಫಲವನ್ನೇ ವರ್ಣಿಸುತ್ತಾ, ಆನಂದಬಾಷ್ಪಗಳನ್ನು ಸುರಿಸುತ್ತಿದ ಗುಹ ನನ್ನು ನೋಡಿ ಲಕ್ಷ್ಮಣ ಸೀತಾ ಸುಮಂತರು ಆಶ್ಚರ್ಯಪರವಶರಾದರು. ಗುಹನು ರಾಮನ ಪಾದಗಳನ್ನು ಹಿಡಿದು, "ರಾಮಚಂದ್ರಾ! ಎಲ್ಲವೂ ನಿನ್ನದೇ. ನನ್ನಲ್ಲಿರುವ ಧನ, ರಾಜ್ಯ, ಸಂಪತ್ತು, ಪ್ರಜೆಗಳು ಎಲ್ಲವೂ ನಿನ್ನ ಸೇವೆಗಾಗಿಯೇ. ನನ್ನನ್ನು ನಿನ್ನ ಪಾದದಾಸನಾಗಿ ಭಾವಿಸಿ, ನಗರವನ್ನು ಪ್ರವೇಶಿಸಿ, ನನ್ನನ್ನು ಕೃತಾರ್ಥನನ್ನಾಗಿ ಮಾಡು," ಎಂದು ಕೇಳಿಕೊಂಡನು.

**ಆಜ್ಞಾನುಸಾರ**: ರಾಮಚಂದ್ರನು ಮುಗುಳ್ನಕ್ಕು, "ಗುಹಾ! ನೀನು ಪರಮ ಭಕ್ತ, ಗುಣಶಾಲಿ. ನಿನ್ನ ಹೃದಯವು ಅತಿ ನಿರ್ಮಲ. ನನ್ನ ತಂದೆಯ ಆಜ್ಞೆಯಂತೆ ಹದಿನಾಲ್ಕು ಸಂವತ್ಸರಗಳವರೆಗೂ ನಾನು ಮುನಿವೇಶದಿಂದ ಅರಣ್ಯದಲ್ಲಿ ವಾಸಿಸ ಬೇಕು. ನಾನು ಪಟ್ಟಣದಲ್ಲಿ ಪಾದ ಇಡಬಾರದು. ತಾಪಸ ಆಹಾರವನ್ನೇ ಸೇವಿಸ ಬೇಕು, ತಾಪಸ ಜೀವಿತವನ್ನೇ ನಡೆಸಬೇಕು," ಎಂದು ತಿಳಿಸಿದನು. ಮೇಲಿನ ಕಾರಣಗಳಿಂದ ನಾನು ನಿಮ್ಮ ಆಸೆಗಳನ್ನು ನೆರವೇರಿಸಲು ಸಾಧ್ಯವಾಗದು ಎಂದು ಹೇಳಲು ಗುಹನು ದುಃಖಿಸಿದನು. ಸೀತಾ ರಾಮಲಕ್ಷ್ಮಣರ ದಿವ್ಯ ಮಂಗಳ ಮೂರ್ತಿಗಳನ್ನು ನೋಡಿ ಶೃಂಗಿಬೇರಪುರ ವಾಸಿಗಳು ಗುಸುಗುಸು ಮಾತನಾಡ ತೊಡಗಿದರು. "ಆಹಾ! ಇವರ ತಂದೆತಾಯಿಗಳು ಯಾರೋ? ರತಿಮನ್ಮಥರನ್ನೇ ಮರೆಸುವ ಇಂಥ ಮಕ್ಕಳನ್ನು ವನಕ್ಕೆ ಕಳಿಸಲು ಅವರ ಮನಸ್ಸು ಹೇಗೆ ಒಪ್ಪಿತೋ? ವನವಾಸ ಮಾಡಿರೆಂದು ಹೇಳಲು ಅವರಿಗೆ ಬಾಯಿಯಾದರೂ ಹೇಗೆ ಬಂತೋ?" ಎಂದು ಒಬ್ಬನು ಹೇಳಿದರೆ, ಮತ್ತೊಬ್ಬನು, "ಅಯ್ಯೋ ಮೂರ್ಖಾ! ಅವರು ಒಳ್ಳೆಯ ದನ್ನೇ ಮಾಡಿದರು. ಅವರು ಇವರನ್ನು ಅರಣ್ಯಕ್ಕೆ ಕಳಿಸದಿದ್ದರೆ, ನಾವಾದರೂ ಇವರನ್ನು ನೋಡುತ್ತಿದ್ದೆವಾ? ಕಣ್ಣಿಗೆ ಹಬ್ಬವಾಗುತ್ತಿತ್ತೇ? ಇಂದು ನಮ್ಮ ಕಣ್ಣುಗಳಿಗೆ ಹಬ್ಬವಾಯಿತಲ್ಲವೇ?" ಎಂದು ತನ್ನ ಆನಂದವನ್ನು ತೋಡಿಕೊಂಡನು.

ಹೀಗೆ, ಅಲ್ಲಿ ಸೇರಿದ್ದ ಜನರು ಒಬ್ಬೊಬ್ಬರೂ ಇವರ ಸೌಂದರ್ಯ ಸುಕುಮಾರತ್ವ ಗಳನ್ನು ವರ್ಣಿಸುತ್ತಿರಲು, ನಿಷಾದಾಧಿಪತಿಯಾದ ಗುಹನು ತನ್ನ ಪಟ್ಟಣಕ್ಕೆ ರಾಮನ ಪಾದಸ್ಪರ್ಶದ ಪ್ರಾಪ್ತಿ ಇಲ್ಲದುದಕ್ಕೆ ಚಿಂತಿಸಿ, ಅವರ ನೇತ್ರ ದೃಷ್ಟಿಯಾದರೂ ತನ್ನ

ಪಟ್ಟಣದ ಮೇಲೆ ಬಿದ್ದರೆ ಪವಿತ್ರವಾಗಬಹುದೆಂದು ತಿಳಿದು, ಮನೋಹರವಾದ ಒಂದು ಶಿಹಿಂಶುಪಾ ವೃಕ್ಷದ ಮೇಲಕ್ಕೆ ರಾಮನನ್ನು ಕರೆದುಕೊಂಡು ಹೋಗಿ, ತನ್ನ ಪಟ್ಟಣವನ್ನು ತೋರಿಸಿದನು. ಅದನ್ನು ನೋಡಿ ರಾಮನು ಸಂತೋಷಿಸಿದನು. ಬಂದಿದ್ದ ಜನರು ರಾಮಚಂದ್ರನಿಗೆ ನಮಸ್ಕರಿಸಿ ಕತ್ತಲಾಗುವ ಮೊದಲೇ ತಮ್ಮ ತಮ್ಮ ಊರುಗಳನ್ನು ಸೇರಿಕೊಂಡರು. ರಾಮನು ಸಾಯಂಸಂಧ್ಯಾನುಷ್ಠಾನ ಮುಗಿಸುವ ವೇಳೆಗೆ ಗುಹನು ದರ್ಭೆಯನ್ನು ಕೊಯ್ದು ತಂದು ಮೆತ್ತನೆಯ ಒಂದು ಹಾಸಿಗೆ ಯನ್ನು ಸಿದ್ಧಪಡಿಸಿದನು. ತನ್ನ ಪರಿವಾರದವರನ್ನು ಕಳಿಸಿ, ಮೃದು ಮಧುರವಾದ ಫಲಗಳನ್ನು ತರುವಂತೆ ಆಜ್ಞಾಪಿಸಿದನು. ಸೀತಾ, ರಾಮ, ಲಕ್ಷ್ಮಣ, ಸುಮಂತರು ಕಂದಮೂಲ ಫಲಗಳನ್ನು ಭುಜಿಸಿ ವಿಶ್ರಮಿಸಿದರು.

ರಾಮನು ಶಯನಿಸಿದಂತೆ ನಟಿಸಿದನು. ಸೀತೆಯೂ ಕೂಡ ಮೆತ್ತನೆಯ ಆ ದರ್ಭೆಯ ಹಾಸಿಗೆಯ ಮೇಲೆ ಮಲಗಿದಳು. ರಾಮನ ಪಾದಗಳನ್ನು ಒತ್ತಲು ಲಕ್ಷ್ಮಣನು ಅವನ ಪಾದದ ಬಳಿ ಕುಳಿತನು. ತಾನು ಎಚ್ಚರವಾಗಿದ್ದರೆ ಲಕ್ಷ್ಮಣನು ಎಷ್ಟು ಹೊತ್ತಾದರೂ ಪಾದಗಳನ್ನು ಒತ್ತುತ್ತಲೇ ಇರುವನೆಂದು, ಲಕ್ಷ್ಮಣನಿಗೂ ವಿಶ್ರಾಂತಿ ಕೊಡುವುದೊಳ್ಳೆಯದೆಂದು ರಾಮನು ಗಾಢ ನಿದ್ರೆಬಂದವನಂತೆ ನಟಿಸಿ ದೊಡನೆ, ರಾಮನಿಗೆ ನಿದ್ರಾಭಂಗವಾಗುವುದೆಂದು ಲಕ್ಷ್ಮಣನು ಪಾದಗಳನ್ನೊತ್ತು ವುದನ್ನು ನಿಲ್ಲಿಸಿ, ಮೆಲ್ಲಗೆ ಅಲ್ಲಿಂದೆದ್ದು ಹೋಗಿ, ಸ್ವಲ್ಪ ದೂರದಲ್ಲಿ ವೀರಾಸನ ಹಾಕಿಕೊಂಡು ಕುಳಿತು, ನಾಲ್ಕು ಕಡೆಯೂ ದೃಷ್ಟಿ ಹಾಯಿಸುತ್ತಾ ಕ್ರೂರ ಮೃಗಗಳೋ ರಾಕ್ಷಸರೋ ಬಂದು ರಾಮನ ನಿದ್ರೆಗೆ ಭಂಗ ತರಬಹುದೆಂದು ಅತಿ ಜಾಗ್ರತೆಯಿಂದ ಕಾವಲು ಕಾಯುತ್ತಿದ್ದನು. ಇದನ್ನು ನೋಡಿದ ನಿಷಾದಾಧಿಪತಿಯು ರಾಮನ ನಿದ್ರೆಗೆ ಭಂಗ ಉಂಟಾಗದಂತೆ ನೋಡಿಕೊಳ್ಳಬೇಕೆಂದು ತನ್ನ ವಿಶ್ವಾಸಪಾತ್ರರಾದ ಸೇವಕರಿಗೆ ಆಜ್ಞಾಪಿಸಿ, ತಾನು ಸ್ವತಃ ಬತ್ತಳಿಕೆ ಹಿಡಿದು ಲಕ್ಷ್ಮಣನ ಬಳಿ ಬಂದು ಕುಳಿತನು.

**ವಿಶೇಷ ಪ್ರೇಮ**: ರಾಮನ ಮೇಲಿದ್ದ ವಿಶೇಷ ಪ್ರೇಮದಿಂದಾಗಿ, ನಿಷಾದಾಧಿಪತಿ ಯಾದ ಗುಹನು ಕಣ್ಣೀರು ಸುರಿಸುತ್ತಾ ಅತ್ಯಂತ ಭಕ್ತಿ ಶ್ರದ್ಧೆಗಳಿಂದ ಕೈಜೋಡಿಸಿ, ಲಕ್ಷ್ಮಣನನ್ನು ಕುರಿತು, "ಲಕ್ಷ್ಮಣಾ! ದಶರಥ ಮಹಾರಾಜನ ಭವನ ಸ್ವಯಂ ದೇವೇಂದ್ರನ ಭವನಕ್ಕಿಂತ ಅಧಿಕ ಶೋಭಾಯಮಾನವಾಗಿದೆ. ಆ ಮಂದಿರದಲ್ಲಿ ಚಿತ್ರ ವಿಚಿತ್ರವಾದ ಸೌಂದರ್ಯಗಳನ್ನೂ ಅಳವಡಿಸಿಕೊಂಡಿದ್ದಾರೆ. ಸುಗಂಧ ದ್ರವ್ಯ ಗಳು, ಹಂಸತೂಲಿಕಾತಲ್ಪಗಳು, ಮಣಿ ದೀಪಗಳು ಆನಂದ ನೀಡುತ್ತಿವೆ. ಹಾಲ್ನೊರೆ ಯಂತೆ ಮೃದುವಾದ ಬೆಳ್ಳನೆಯ ಹಾಸಿಗೆ, ಅದಕ್ಕೊಪ್ಪುವ ತಲೆದಿಂಬುಗಳೆಲ್ಲಾ ಅಲ್ಲಿವೆ. ಅಂಥ ಒಳ್ಳೆಯ ಭವನದಲ್ಲಿ ಮಲಗುತ್ತಿದ್ದ ಸೀತಾರಾಮರು, ಈ ದಿನ

ಹಾಸಿಗೆ, ತಲೆದಿಂಬು, ಮಂಚಗಳಿಲ್ಲದೆ ಆಯಾಸಗೊಂಡು, ದರ್ಭೆಯ ಮೇಲೆ ಗಾಢ ನಿದ್ರೆ ಹೋದರೆನ್ನುವುದನ್ನು ಯೋಚಿಸಿದರೇ ಮಹಾ ದುಃಖವಾಗುತ್ತದೆ. ಜನನೀ ಜನಕರೂ ದಾಸ ದಾಸಿಯರೂ ಸೀತಾ ರಾಮರನ್ನು ಅನೇಕ ಬಗೆಯಾಗಿ ನೋಡಿ ಕೊಳ್ಳುತ್ತಿದ್ದರು. ಅಂಥ ಸೀತಾ ರಾಮರು ಇಂದು ಅರಣ್ಯದಲ್ಲಿ ಗಟ್ಟಿನೆಲದ ಮೇಲೆ ಮಲಗಿರುವುದು ನನ್ನ ಹೃದಯವನ್ನು ಹಿಂಡಿದಂತಾಗಿದೆ. ಲೋಕ ಪ್ರಖ್ಯಾತವಾದ ಮಿಥಿಲಾಪುರಿ ಚಕ್ರವರ್ತಿಯ ಮಗಳಾದ ಜಾನಕಿಯು, ದೇವೇಂದ್ರನ ಮಿತ್ರನಾದ ದಶರಥ ಮಹಾರಾಜನ ಸೊಸೆಯಾದ ಸೀತಾದೇವಿಯು ಈ ರಾತ್ರಿ ಈ ವಿಧವಾಗಿ ದರ್ಭೆಯ ಮೇಲೆ ಮಲಗಿರುವುದು ಎಂಥ ವಿಧಿ ವೈಪರೀತ್ಯ!

ಸೀತಾ ರಾಮರು ವನವಾಸಕ್ಕೆ ಯೋಗ್ಯರೇ? ಕರ್ಮಫಲ ತಪ್ಪಿದ್ದಲ್ಲವೆನ್ನುವ ಲೋಕ ಸೂಕ್ತಿ ಇದೀಗ ಪರಮಸತ್ಯವಾಗಿ ಸಾಕ್ಷಾತ್ಕಾರಗೊಂಡಿದೆ. ಕೇಕೆಯ ರಾಜಕುಮಾ ರಿಯಾದ ಕೈಕೆಯು ಇಂಥ ಕೆಟ್ಟ ಕೆಲಸ ಮಾಡಿದಳೆಂದರೆ ಯಾರೂ ನಂಬರು. ಒಳ್ಳೆಯ ಸುಖ ಅನುಭವಿಸಬೇಕಾದ ಈ ವಯಸ್ಸಿನಲ್ಲಿ ಸೀತಾ ರಾಮರಿಗೆ ಇಂಥ ಕಷ್ಟವನ್ನು ಕೊಡುವುದು ಎಂಥ ಪಾತಕ. ಪರಮ ವಿರೋಧಿಗಳಿಗೂ ಇಂಥ ಕಷ್ಟ ಬರಬಾರದು. ಕೈಕಾದೇವಿಯು ಸೂರ್ಯವಂಶ ವೃಕ್ಷವನ್ನು ಕೊಡಲಿಯಿಂದ ಕತ್ತರಿಸಿದ್ದಾಳೆ. ಅವಳ ಸ್ವಾರ್ಥವು ಲೋಕವನ್ನೇ ದುಃಖದಲ್ಲಿ ಮುಳುಗಿಸಿದೆ. ಆಹಾ! ನನ್ನ ಹಾಳು ಕಣ್ಣುಗಳು ಈ ಅವಸ್ಥೆಯನ್ನು ನೋಡಬೇಕಾಗಿ ಬಂದಿತಲ್ಲಾ! ಯಾವ ಜನ್ಮದಲ್ಲಿ ಏನು ಪಾಪ ಮಾಡಿದ್ದೆನೋ! ಯಾರ ಸುಖವನ್ನು ನೋಡಿ ನನ್ನ ನೇತ್ರಗಳು ಕರುಬಿದುವೋ! ಈ ದಿನ ನನ್ನ ಪ್ರಾಣ ಸಮಾನನಾದ ರಾಮಚಂದ್ರನ ಕಷ್ಟಗಳನ್ನು ಈ ಕಣ್ಣುಗಳು ನೋಡಬೇಕಾಗಿ ಬಂದಿತು," ಎಂದು ಒತ್ತಿಬರುತ್ತಿದ್ದ ದುಃಖವನ್ನು ತಡೆಯಲಾರದೆ, ಬಾಯಿಯನ್ನು ಕೈಗಳಿಂದ ಮುಚ್ಚಿಕೊಂಡು, ತಲೆ ಬಡಿದುಕೊಂಡು ದುಃಖಿಸುತ್ತಿದ್ದ ಗುಹನನ್ನು ನೋಡಿ ಲಕ್ಷ್ಮಣನೂ ಸಹ ಚಿಂತಾಕ್ರಾಂತನಾದನು.

**ಲಕ್ಷ್ಮಣನ ಬೋಧೆ**: ಸ್ವಲ್ಪ ಧೈರ್ಯ ವಹಿಸಿ, "ಓ! ನಿಷಾದಾಧಿಪತೀ! ಒಬ್ಬ ರಿಂದ ಮತ್ತೊಬ್ಬರಿಗೆ ಸುಖವಾಗಲೀ ದುಃಖವಾಗಲೀ ಹಿತವಾಗಲೀ ಅಹಿತವಾಗಲೀ ಆಗದು. ಆಗಲು ಸಾಧ್ಯವಿಲ್ಲ. ಯಾರು ಯಾರು, ಯಾವ ಯಾವ ನಿಮಿತ್ತವಾಗಿ ಬರುವರೋ ಅದನ್ನು ಅವರ ಪೂರ್ವ ಕರ್ಮಫಲದ, ಮಹತ್ತರ ಸಂಕಲ್ಪದ ಸ್ವರೂಪವು. ಸ್ವಪ್ನದಲ್ಲಿ ಭಿಕ್ಷುಕನು ರಾಜನಾಗುವನು, ರಾಜನು ಭಿಕ್ಷುಕನಾಗುವನು. ಎಚ್ಚರವಾದ ಮೇಲೆ ಭಿಕ್ಷುಕನಿಗಾದ ಲಾಭವೂ ಇಲ್ಲ, ರಾಜನಿಗಾದ ನಷ್ಟವೂ ಇಲ್ಲ. ಹಾಗೆಯೇ ಲೋಕವೆಲ್ಲಾ ಮಿಥ್ಯೆಯೆಂದು ತಿಳಿ, ರಾಮಚಂದ್ರನಿಗೆ ಸುಖ ದುಃಖಗಳು ಇಲ್ಲಿ ಬರುವುದಿಲ್ಲ. ಅವು ನೋಡುವವರ ಪುಣ್ಯಪಾಪಗಳನ್ನನುಸರಿಸಿ ಪ್ರತಿಬಿಂಬಗಳಂತೆ ಕಷ್ಟ ಸುಖಗಳಾಗಿ ಕಾಣುವುವು," ಎಂದು ಲಕ್ಷ್ಮಣನು ಹಿತವಚನ

ಹೇಳಿದನು. ಕೈಕೆಯ ಮೇಲೆ ಸಿಟ್ಟಾಗಿದ್ದ ಗುಹನು ತಿರುಗಿ ಶಾಂತನಾದನು. ವ್ಯರ್ಥವಾಗಿ ಒಬ್ಬರನ್ನು ನಿಂದಿಸುವುದು ಪರಿಹಾಸ ಮಾಡುವುದು ಒಳ್ಳೆಯದಲ್ಲ. ರಾತ್ರಿಯಲ್ಲಿ ಜನರೆಲ್ಲಾ ನಿದ್ರಿಸುವರು, ಅನೇಕ ಬಗೆಯ ಸ್ವಪ್ನಗಳನ್ನು ಕಾಣುವರು. ಈ ಸಂಸಾರ ರೂಪದ ರಾತ್ರಿಯಲ್ಲಿ ಯೋಗಿಗಳು ಮಾತ್ರ ಎಚ್ಚರವಾಗಿರುವರು. ಅವರಿಗೆ ಪ್ರಪಂಚದ ಪ್ರಯೋಜನವಿಲ್ಲ. ಸಕಲ ವಿಷಯ ಭೋಗಗಳಿಂದ ವಿಮುಖನಾಗುವವರೆಗೆ ಜೀವಿಯು ಎಚ್ಚರಗೊಂಡನೆಂದು ಹೇಳಲು ಸಾಧ್ಯವಿಲ್ಲ. ಜ್ಞಾನ ಲಭಿಸಿದರೆ ಮೋಹ ಪಾಶಗಳು ಕಳಚಿಕೊಳ್ಳುವುವು. ಶ್ರೀರಾಮನ ಚರಣಗಳಲ್ಲಿ ಅನುರಾಗ ಹುಟ್ಟುವುದು ಎಂದು ಗುಹನು ತನ್ನಲ್ಲೇ ವಿಚಾರ ಮಾಡಿದನು. ರಾಮಚಂದ್ರನ ಮಾನವಾತೀತ ವಿಷಯಗಳನ್ನು ಪ್ರಭಾವವನ್ನು ವರ್ಣಿಸುತ್ತಾ, ಗುಹ ಲಕ್ಷ್ಮಣರು ಆ ರಾತ್ರಿಯನ್ನು ಪವಿತ್ರವಾಗಿ ಕಳೆದರು.

**ಸುಮಂತನ ಕರ್ತವ್ಯ**: ಪ್ರಾತಃಕಾಲವಾಯಿತು. ಗುಹ ಲಕ್ಷ್ಮಣರು ಒಬ್ಬರಾದ ಮೇಲೊಬ್ಬರು ಕಾಲಕೃತ್ಯಗಳನ್ನು ತೀರಿಸಿಕೊಂಡು ಸ್ನಾನಸಂಧ್ಯಾದಿಗಳನ್ನು ಮಾಡಿ ಬಂದರು. ಆ ವೇಳೆಗೆ ರಾಮಚಂದ್ರನು ಎಚ್ಚರಗೊಂಡು ಕಣ್ಣುಗಳನ್ನುಜ್ಜುತ್ತಾ ಎದ್ದು, ನಾಲ್ಕು ದಿಕ್ಕುಗಳನ್ನೂ ನೋಡಿದನು. ಸೀತಾದೇವಿಯೂ ಎದ್ದಳು. ಇಬ್ಬರೂ ಗಂಗಾ ನದಿಗೆ ಹೋಗಿ ಸ್ನಾನ ಮಾಡಿ, ಲಕ್ಷ್ಮಣ ಗುಹರಿದ್ದ ಸ್ಥಳಕ್ಕೆ ಬಂದು, ತಮ್ಮನಿಗೆ ಕಳ್ಳಿ ಹಾಲು ತರುವಂತೆ ಆಜ್ಞಾಪಿಸಿದನು. ಲಕ್ಷ್ಮಣನು ಅಣ್ಣನ ಮಾತನ್ನು ಶಿರಸಾವಹಿಸಿ, ಮರುಮಾತಾಡದೆ, ಸ್ವಲ್ಪ ದೂರ ಹೋಗಿ ಒಂದು ದೊನ್ನೆಯಲ್ಲಿ ಕಳ್ಳಿ ಹಾಲನ್ನು ತಂದನು. ಅದನ್ನು ರಾಮನು ತಲೆಗೆ ಹಚ್ಚಿಕೊಂಡೊಡನೆ ತಲೆ ಕೂದಲು ಉಂಡುಂಡೆಯಾಗಿ ಜಟೆಯಾಯಿತು. ಅದನ್ನು ನೋಡಿದ ಸುಮಂತನು ಗೊಳ್ಳೆಂದು ಅಳತೊಡಗಿದನು. ನೋಡಲಾರದೆ ಕಣ್ಣುಗಳನ್ನು ಮುಚ್ಚಿಕೊಂಡನು.

ರಾಮನ ರಾಜ್ಯತಿಲಕವನ್ನು ನೋಡಬೇಕಾಗಿದ್ದ ಕಣ್ಣುಗಳು ಜಟಾಮುಕುಟವನ್ನು ನೋಡಬೇಕಾಯಿತಲ್ಲಾ ಎಂದು ದುಃಖಿಸಿದನು. ಅವನ ಹೃದಯವು ಉರಿದು ಹೋಯಿತು. ಅಸಹಾಯಕತೆಯಿಂದ ಕೈಗಳನ್ನು ಕಟ್ಟಿಕೊಂಡು ರಾಮನ ಮುಂದೆ ನಿಂತು, "ರಾಮಚಂದ್ರಾ! ನನ್ನ ಅದೃಷ್ಟವು ಕ್ಷೀಣಿಸುತ್ತಿದೆ. ನಾನು ಅಷ್ಟು ಕಾಲ ಅರಣ್ಯದಲ್ಲಿರುವ ಪ್ರಾಪ್ತಿ ಸಾಧ್ಯವಿಲ್ಲದಂತಾಗುತ್ತಿದೆ. ಮಹಾರಾಜರು ವಿಧಿಸಿದ ಆಜ್ಞೆಯನ್ನು ಪೂರ್ತಿಯಾಗಿ ಮಾಡಿದ್ದೇನೆ. ಅರಣ್ಯದಲ್ಲಿ ಯಾವುದಾದರೊಂದು ಪವಿತ್ರ ನದಿ ತೀರವು ಸಿಕ್ಕುವವರೆಗೂ ಹೋಗಿ, ಅಲ್ಲಿ ಸೀತಾ ರಾಮ ಲಕ್ಷ್ಮಣರನ್ನು ಬಿಟ್ಟು ನೀನು ರಥದೊಂದಿಗೆ ಹಿಂದಿರುಗಿ ಬಾ ಎಂದು ಅವರು ಹೇಳಿದ ಮಾತನ್ನು ಬಿನ್ನವಿಸಿಕೊಳ್ಳುತ್ತಿದ್ದೇನೆ. ಇನ್ನು ನಿಮ್ಮ ಆಜ್ಞೆಗೆ ಕಾಯುತ್ತಿದ್ದೇನೆ," ಎಂದನು. ಕಣ್ಣೀರು ಸುರಿಸುತ್ತಾ ದೀನನಾಗಿ ನಿಂತಿದ್ದ ಸುಮಂತನನ್ನು ನೋಡಿ, ರಾಮನು,

"ಸುಮಂತಾ! ಚಿಂತಿಸದಿರು. ಮಹಾರಾಜನ ಆಜ್ಞೆಯನ್ನು ಪೂರ್ತಿ ಮಾಡುವುದು ನಿನಗೆ ಮಾತ್ರವಲ್ಲ, ನನಗೂ ಕರ್ತವ್ಯವೇ. ಅವರು ನಿನಗಿತ್ತ ಆಜ್ಞೆಯನ್ನು ನೀನು ನೆರವೇರಿಸಿದ್ದಕ್ಕೆ ನನಗೆಷ್ಟೋ ಆನಂದವಾಗಿದೆ. ಇನ್ನು ಅವರು ನನಗಿತ್ತ ಆಜ್ಞೆಯನ್ನು ನಾನು ಇಂದಿನಿಂದ ಶಿರಸಾವಹಿಸಿ ನಡೆಸುತ್ತೇನೆ. ಕಾಲಹಾರಣ ಮಾಡದೆ ನೀನು ಅಯೋಧ್ಯೆಗೆ ಹಿಂತಿರುಗು. ನಿನಗಾಗಿ ನನ್ನ ತಾಯಿತಂದೆಯರು ಬಹು ಆತುರದಿಂದ ಕಾದಿರುತ್ತಾರೆ. ನೀನಿನ್ನು ರಥವನ್ನು ಹಿಂತಿರುಗಿಸು," ಎಂದು ಹೇಳಿದನು.

ಸುಮಂತನು, "ಓ! ರಾಮಚಂದ್ರಾ! ಅಯೋಧ್ಯಾನಗರವು ಅನಾಥವಾಗದಂತೆ ನೋಡಿಕೊಳ್ಳಿ. ನೀವಿಲ್ಲದಿದ್ದ ಮೇಲೆ ಮಹಾರಾಜರು ಬದುಕಿರುವುದು ಕಷ್ಟ. ಭರತನು ರಾಜ್ಯವಾಳುವುದು ದುಸ್ತರ," ಎಂದು ಮಕ್ಕಳಂತೆ ಅಳುತ್ತಾ ಪಾದಗಳ ಮೇಲೆ ಬಿದ್ದನು. ರಾಮನು ಅವನನ್ನು ಹಿಡಿದೆತ್ತಿ, "ಸುಮಂತಾ! ಸತ್ಯಕ್ಕಿಂತ ಉತ್ಕೃಷ್ಟವಾದ ಧರ್ಮವು ಮತ್ತೊಂದಿಲ್ಲ. ಈ ಸಂಗತಿಯು ವೇದಪುರಾಣೇತಿಹಾಸ ಗಳಲ್ಲಿ ಸುಪ್ರಸಿದ್ಧ. ಅಂಥ ಸರ್ವೋತ್ಕೃಷ್ಟವಾದ ಧರ್ಮವು ನನಗೆ ಸುಲಭವಾಗಿ ಲಭಿಸಿದೆ. ಅದನ್ನು ಬಿಟ್ಟುಬಿಟ್ಟರೆ, ನನಗೂ ನನ್ನ ವಂಶಕ್ಕೂ ಮೂರು ಲೋಕಗಳಲ್ಲಿ ಅಪಕೀರ್ತಿ ಸಂಭವಿಸಬಹುದು. ನೀನು ನನ್ನ ತಂದೆಯವರ ಪಾದಗಳಿಗೆ ನಮಸ್ಕ ರಿಸಿ ನನ್ನ ಬಿನ್ನಪವನ್ನು ವಿಶದಪಡಿಸು. ನನ್ನ ಬಗೆಗಾಗಲೀ ಸೀತಾ ಲಕ್ಷ್ಮಣರ ಬಗೆಗಾಗಲೀ ಅವರು ಚಿಂತಿಸದಂತೆ ನೋಡಿಕೊ," ಎಂದನು.

**ಚಂದ್ರನು ಚಂದ್ರಕಾಂತಿ**: ಅವರ ಸಂವಾದವನ್ನು ಕೇಳುತ್ತಿದ್ದ ಗುಹನೂ ಅವನ ಪರಿವಾರದವರೂ ವ್ಯಾಕುಲಗೊಂಡರು. ಅವರಿಗೆ ತಿಳಿಯದಂತೆಯೇ ಅವರ ಕಣ್ಣುಗಳಿಂದ ಧಾರೆಧಾರೆಯಾಗಿ ನೀರು ಸುರಿಯಿತು. ಲಕ್ಷ್ಮಣನು ತಡೆಯಲಾರದೆ ಕೆಲವು ಕಟು ಮಾತುಗಳನ್ನಾಡಿದನು. ಅವನ ಮಾತುಗಳು ಅನುಚಿತವೆಂದು ಬಗೆದ ರಾಮನು ಮಧ್ಯೆ ಪ್ರವೇಶಿಸಿ, ಮಂತ್ರಿಯನ್ನು ಕುರಿತು "ಸುಮಂತಾ! ಲಕ್ಷ್ಮಣನು ಬಾಲಕ. ಅವನ ಮಾತುಗಳನ್ನು ನನ್ನ ತಂದೆಯ ಮುಂದೆ ಹೇಳದಿರು. ನನ್ನ ಮೇಲೆ ಅವನಿಗಿರುವ ಪ್ರೀತಿಯಿಂದಲೂ ಸೀತೆಯು ಪಡುತ್ತಿರುವ ಬಾಧೆಯನ್ನು ನೋಡಿಯೂ ಅವನ ಮನಸ್ಸು ಬಹುವಾಗಿ ನೊಂದು, ಸೀತಾ ರಾಮರನ್ನು ಅಡವಿಗೆ ಕಳಿಸಿದರಲ್ಲವೇ ಎನ್ನುವ ಏನೋ ಒಂದು ರೀತಿಯ ತಪ್ಪು ಕಲ್ಪನೆಯಿಂದ ಹೀಗೆ ಮಾತಾಡಿದ್ದಾನೆ. ಆದರೆ ಸಹಜವಾಗಿ ಲಕ್ಷ್ಮಣನು ಮಹಾ ಗುಣಶಾಲಿ, ನಿನ್ನ ಸಮಾನನಾದವನು," ಎಂದು ಲಕ್ಷ್ಮಣನ ಗುಣಗಳನ್ನು ಬಣ್ಣಿಸಿದನು.

ತಲೆ ತಗ್ಗಿಸಿಕೊಂಡು ದುಃಖದಿಂದ ಸೊರಗಿ ಹೋಗಿದ್ದ ಸುಮಂತನು ತಲೆಯೆತ್ತಿ, "ಸ್ವಾಮೀ! ಜಾನಕಿಯು ಸುಕುಮಾರಿ, ವನವಾಸದ ಕಷ್ಟಗಳನ್ನು ಸಹಿಸಲಾರಳು.

ಹೇಗೆ ಹೇಳಿದರೆ ಅವಳು ನಗರಕ್ಕೆ ಹಿಂದಿರುಗುವಳೋ ಹಾಗೆ ಹೇಳಿ ಅವಳು ಹಿಂದಿರುಗುವಂತೆ ಮಾಡುವುದೊಳ್ಳೆಯದು. ಅವಳು ಅಯೋಧ್ಯೆಯ ಪ್ರಾಣ, ಅಯೋಧ್ಯೆಯ ರಾಜ್ಯಲಕ್ಷ್ಮಿ. ಒಂದು ವೇಳೆ ಅವಳು ಅಯೋಧ್ಯೆಗೆ ಬರಲು ಒಪ್ಪದಿದ್ದರೆ, ಅಯೋಧ್ಯಾವಾಸಿಗಳು ಜಲವಿಲ್ಲದ ಮೀನುಗಳಂತೆ ಜೀವಿಸುವುದು ಕಷ್ಟ. ಬೇಕಾದರೆ ಅವಳು ತನ್ನಿಷ್ಟದಂತೆ ತಾಯಿಯೊಂದಿಗಾಗಲೀ ಅತ್ತೆಯೊಂದಿಗಾಗಲೀ ಸುಖವಾಗಿರಬಹುದು. ಮಹಾರಾಜರು ನಿಮಗೆ ತಿಳಿಸುವಂತೆ ಪದೇ ಪದೇ ನನಗೆ ಹೇಳಿ ಕಳಿಸಿದ್ದು ಕೂಡ ಇದನ್ನೇ. ನೀವು ಹದಿನಾಲ್ಕು ವರ್ಷಗಳು ವನವಾಸ ಮಾಡಿ ಅಯೋಧ್ಯೆಗೆ ಬಂದ ಮೇಲೆ ಜಾನಕಿಯನ್ನು ಅಯೋಧ್ಯೆಗೆ ಕರೆದುಕೊಂಡು ಬರಬಹುದು," ಎಂದು ಸುಮಂತನು ರಾಮನಿಗೆ ಹೇಳುತ್ತಿರಲು, ರಾಮಚಂದ್ರನು ಸೀತೆಯನ್ನು ನೋಡಿ, "ಚೆನ್ನಾಗಿ ಕೇಳು," ಎಂದು ಸಂಜ್ಞೆ ಮಾಡಿದನು.

ನಂತರ ಸೀತೆಯನ್ನು ಕುರಿತು, "ಸೀತಾ! ತಂದೆಯ ಸಂದೇಶವನ್ನು ಕೇಳಿದೆಯಲ್ಲವೆ? ನೀನು ಮನೆಗೆ ಹೋದರಾದರೂ ನನ್ನ ತಂದೆತಾಯಿಗಳು ನನ್ನ ವಿಯೋಗ ಬಾಧೆಯನ್ನು ಸ್ವಲ್ಪ ಮಟ್ಟಿಗೆ ಮರೆತಾರು. ಈ ವೃದ್ಧಾಪ್ಯದಲ್ಲಿ ಅವರು ಹೆಚ್ಚು ಬಾಧೆ ಸಹಿಸಲಾರರು. ಆದ್ದರಿಂದ, ನೀನು ಮಂತ್ರಿಯೊಂದಿಗೆ ಅಯೋಧ್ಯೆಗೆ ಹಿಂತಿರುಗುವುದು ಬಹಳ ಅಗತ್ಯವಿದೆ," ಎಂದು ಅನೇಕ ವಿಧವಾಗಿ ಬೋಧಿಸುತ್ತಿದ್ದ ರಾಮನನ್ನು ನೋಡಿ ಸೀತೆಯು, "ಪ್ರಾಣನಾಥಾ! ನೀವು ಸರ್ವಜ್ಞರು. ಸರ್ವ ಧರ್ಮಗಳನ್ನು ತಿಳಿದವರು. ನಿಮಗೆ ನಾನು ಹೇಳಬೇಕಾಗಿಲ್ಲ, ನನ್ನ ಪ್ರಾರ್ಥನೆಯನ್ನಿಷ್ಟು ಕೇಳಿ. ನೆರಳು ವಸ್ತುವನ್ನು ಅನುಸರಿಸಿಕೊಂಡೇ ಇರುವುದು ವಿನಾ ಬಿಟ್ಟಿರಲು ಸಾಧ್ಯವಿಲ್ಲ ಅಲ್ಲವೆ? ಸೂರ್ಯನನ್ನು ಬಿಟ್ಟು ಸೂರ್ಯಕಾಂತಿಯೂ ಚಂದ್ರನನ್ನು ಬಿಟ್ಟು ಚಂದ್ರಕಾಂತಿಯೂ ಸಹ ಹೇಗೆ ಇರಲು ಸಾಧ್ಯವಿಲ್ಲವೋ, ಅದೇ ವಿಧವಾಗಿ ರಾಮಚಂದ್ರನನ್ನು ಬಿಟ್ಟು ಸೀತೆಯೆನ್ನುವ ನೆರಳು ಇರಲಾರದು," ಎಂದಳು.

ಸುಮಂತನನ್ನು ಕುರಿತು, "ಸುಮಂತಾ! ನೀನು ನನ್ನ ತಂದೆ, ಮಾವನವರಿಗೆ ಸಮಾನ. ನನ್ನ ಹಿತಕಾರಿಗಳು ಆರ್ಯ ಪುತ್ರನಾದ ನನ್ನ ಪತಿಯ ಪಾದ ಕಮಲಗಳು ವಿನಾ ಇನ್ನಿತರ ಸಂಬಂಧಗಳು ನನಗೆ ಪ್ರಯೋಜನವಿಲ್ಲ. ಸ್ವಂತ ಮಗನಿಗಿಂತ, ಕೊರಗಿನಿಂದ ಬಂದ ಸೊಸೆಯು ಅತ್ತೆ ಮಾವಂದಿರಿಗೆ ಹೆಚ್ಚಲ್ಲ ಎನ್ನುವುದು ಲೋಕಕ್ಕೇ ವಿದಿತ. ನನ್ನನ್ನು ನೋಡಿ ಮಗನ ವಿಯೋಗ ಬಾಧೆಯನ್ನು ಮರೆಯುವರೆನ್ನುವ ಮಾತು ಅರ್ಥವಿಲ್ಲದ್ದು. ಇನ್ನು ತಂದೆಯ ಭೋಗೈಶ್ವರ್ಯಗಳನ್ನು ಹುಟ್ಟಿದಂದಿನಿಂದ ಅನುಭವಿಸಿದೆ. ನನ್ನ ಪತಿ ವಿನಾ ಅವೆಲ್ಲವೂ ತೃಣ ಸಮಾನವೆಂದು ನಾನು ಗ್ರಹಿಸಿದೆ. ನನ್ನ ಪತಿಯನ್ನು ಬಿಟ್ಟು ನನಗೆ ಗತಿಯಿಲ್ಲ. ಆದ್ದರಿಂದ ನೀನು ಬೇರೆ

ಭಾವಿಸದೆ, ನನ್ನನ್ನು ಮತ್ತೆ ಅಯೋಧ್ಯೆಗೆ ಕರೆದೊಯ್ಯುವ ಪ್ರಯತ್ನವನ್ನು ಮರೆತು ಹೊರಡು. ನನ್ನ ಅತ್ತೆ ಮಾವಂದಿರಿಗೆ ನನ್ನ ಹೃದಯಪೂರ್ವಕ ನಮಸ್ಕಾರಗಳನ್ನೂ ನನ್ನ ಬಿನ್ನಹಗಳನ್ನೂ ಹೇಳು. ನನ್ನ ಬಗೆಗೆ ಚಿಂತಿಸದಿರಬೇಕೆಂದು ಹೇಳು. ಸೀತೆಯು ಅತ್ಯಂತ ಆನಂದವಾಗಿ, ಅಂದರೆ, ಅಯೋಧ್ಯೆಯಲ್ಲಿದ್ದುದಕ್ಕಿಂತ ಆನಂದವಾಗಿ, ಮಿಥಿಲಾ ನಗರದಲ್ಲಿ ಅನುಭವಿಸಿದ ವೈಭವಗಳಿಗಿಂತ, ಎಷ್ಟೋ ಸಹಸ್ರ ಪಟ್ಟು ಸಂತೋಷದಿಂದ, ಸುಖದಿಂದ ವನವಾಸವನ್ನು ಅನುಭವಿಸುತ್ತಿದ್ದಾಳೆ ಎಂದು ಹೇಳು.

ನನ್ನ ಪ್ರಾಣೇಶ್ವರನೊಂದಿಗೆ, ಅವರ ಪ್ರಿಯಸೋದರ ವೀರಾಗ್ರಗಣ್ಯ ಲಕ್ಷ್ಮಣನೊಂದಿಗೆ ನಾನು ಯಾವ ಕಷ್ಟ ಭಯ ಆತಂಕಗಳೂ ಇಲ್ಲದೆ, ಆನಂದವಾಗಿ ವನವಾಸ ಮಾಡುತ್ತಿದ್ದೇನೆಂದು ಹೇಳು. ಮಾರ್ಗಾಯಾಸ ಯಾವುದೂ ಇಲ್ಲದೆ, ಇದು ತುಂಬಾ ಅದೃಷ್ಟ ಜೀವಿತವೆಂದು ನಾನು ಭಾವಿಸಿರುವುದಾಗಿ ಹೇಳು," ಎಂದಳು. ಸುಮಂತನು ಆ ದೇವಿಯನ್ನು ತಲೆಯೆತ್ತಿ ನೋಡಲಾರದೆ ಹೋದನು. ಕಿವಿಗಳಿಂದ ಅವಳ ಮಾತುಗಳನ್ನು ಕೇಳಲಾರದೆ ಹೋದನು, ಬಾಯಿಂದ ಉತ್ತರ ಹೇಳಲಾರದೆ ಹೋದನು. ಅವಳ ಗುಣಗಳನ್ನು ಅವಳ ಭಾವನೆಗಳನ್ನು ಕುರಿತು ವಿಚಾರ ಮಾಡುತ್ತಾ, "ಇಂಥ ರಾಜ್ಯಲಕ್ಷ್ಮಿಯನ್ನು ದೂರಮಾಡಿಕೊಂಡ ಪ್ರಜೆಗಳು ಎಂಥ ದುರದೃಷ್ಟವಂತರೋ? ಯಾವ ಜನ್ಮದಲ್ಲಿ ಯಾವ ಪಾಪ ಮಾಡಿದ್ದರೋ? ಸಿಕ್ಕಿದ ಅವಕಾಶವನ್ನು ಕೂಡ ದಕ್ಕಿಸಿಕೊಳ್ಳಲಾರದೆ ಹೋದೆವಲ್ಲಾ," ಎಂದು ತನ್ನಲ್ಲಿ ತಾನು ಚಿಂತಿಸುತ್ತಾ, "ರಾಮಾ! ಹಾಗಾದರೆ ನನಗೊಂದು ಅನುಜ್ಞೆ ದಯಪಾಲಿಸು. ನನ್ನನ್ನೂ ನಿಮ್ಮೊಂದಿಗೆ ಈ ವನದಲ್ಲಿ ಹದಿನಾಲ್ಕು ಸಂವತ್ಸರಗಳು ಇಟ್ಟುಕೊಂಡಿದ್ದು ನನ್ನಿಂದ ಸೇವೆ ಮಾಡಿಸಿಕೊಳ್ಳುವುದಕ್ಕಾದರೂ ಒಪ್ಪಿಗೆ ಕೊಡು," ಎಂದು ಪ್ರಾರ್ಥಿಸಿದನು. ಅದಕ್ಕೆ ರಾಮನು, "ಸುಮಂತಾ, ನಿನಗೆ ರಾಜನೀತಿ ಚೆನ್ನಾಗಿ ತಿಳಿದಿದೆ. ನೀನು ದಶರಥ ಚಕ್ರವರ್ತಿಗೆ ಮಂತ್ರಿಯೇ ವಿನಾ ನನಗಲ್ಲ. ನಿನಗೆ ಆಜ್ಞೆ ಮಾಡಿದ್ದು ದಶರಥನೇ ವಿನಾ ನಾನಲ್ಲ. ಅಷ್ಟೇ ಅಲ್ಲದೆ, ನೀನು ಈ ಸಮಯದಲ್ಲಿ ಮಹಾರಾಜನನ್ನು ಬಿಟ್ಟಿರುವುದು ಧರ್ಮವಲ್ಲ. ನೀನು ಮಹಾರಾಜನಿಗೆ ಬಲಭುಜ ಇದ್ದ ಹಾಗೆ. ಆದ್ದರಿಂದ, ನನ್ನ ಅನುಜ್ಞೆ ಕೋರುವುದನ್ನು ಬಿಟ್ಟು ತಡಮಾಡದೆ ಅಯೋಧ್ಯೆಗೆ ಹೋಗು. ಆದ್ದರಿಂದ ನನಗೂ ನನ್ನ ತಾಯಿತಂದೆಯರಿಗೂ ಎಷ್ಟೋ ಶಾಂತಿ ಕೊಟ್ಟಂಥವನಾಗುವೆ," ಎಂದು, ಹಲವು ಬಗೆಯಾಗಿ ಹೇಳಿದ. ರಾಮ ವಚನವನ್ನು ಮೀರಲಾರದೆ, ಸುಮಂತನು, "ಅಯ್ಯೋ ನನ್ನ ವಿಧಿ ನನ್ನನ್ನು ಬಿಡುತ್ತಿಲ್ಲವಲ್ಲಾ," ಎಂದು ಗೋಳ್ಳೆಂದು ಅಳುತ್ತಾ ಮೂವರ ಪಾದಗಳಿಗೆ ನಮಸ್ಕರಿಸಿ ಹೊರಟನು. ಮರುಕಳಿಸಿ ಬರುತ್ತಿದ್ದ ದುಃಖದಿಂದ ನಡೆಯಲಾರದೆ ಹೆಜ್ಜೆ ಇಡುತ್ತಿದ್ದ

ಸುಮಂತನ ಕೈ ಹಿಡಿದುಕೊಂಡು ರಾಮಚಂದ್ರನು ಅವನನ್ನು ರಥದವರೆಗೂ ಕರೆದೊಯ್ದು, ರಥದಲ್ಲಿ ಕೂರಿಸಿ ಕುದುರೆಗಳನ್ನು ಪ್ರೇಮದಿಂದ ಮೈದಡವಿ, "ಇನ್ನು ಹೊರಡು," ಎಂದು ಆಜ್ಞಾಪಿಸಿದನು.

**ಗಂಗಾ ತೀರ**: ಸುಮಂತನು ಹಿಂದಕ್ಕೆ ತಿರುಗಿ ನೋಡುತ್ತಾ ರಥವನ್ನು ನಡೆಸಿಕೊಂಡು ಹೊರಟನು, ಕುದುರೆಗಳೂ ಸಹ ಹಿಂದಕ್ಕೇ ತಿರುಗಿ ನೋಡುತ್ತಿದ್ದವು. ಏನು ಮಾಡಿದರೂ ಮುಂದೆ ಹೋಗದೆ ಕೆನೆಯುತ್ತಾ ಹಿಂದಕ್ಕೆ ತಿರುತಿರುಗಿ ನೋಡುತ್ತಿದ್ದವು. ರಾಮನನ್ನೇ ನೋಡುತ್ತಾ ಕಣ್ಣೀರು ಒರೆಸಿಕೊಳ್ಳುತ್ತಾ ತಲೆತಗ್ಗಿಸಿ ಹೋಗುತ್ತಿದ್ದ ಸುಮಂತನನ್ನು ನಿಷಾದಾಧಿಪತಿಯಾದ ಗುಹನು ನೋಡಿ, ಒಂದು ಮರಕ್ಕೆ ತಲೆಯನ್ನು ಒರಗಿಸಿ ಬಹುವಾಗಿ ದುಃಖಿಸಿದನು.

ಬಲವಂತದಿಂದ ಸುಮಂತನನ್ನು ಅಯೋಧ್ಯೆಗೆ ಕಳಿಸಿದ ಮೇಲೆ, ರಾಮನು ಪತ್ನಿ ಮತ್ತು ತಮ್ಮನೊಂದಿಗೆ ಗಂಗಾ ತೀರಕ್ಕೆ ಬಂದನು. ಮಾತು ಬಾರದ ಪ್ರಾಣಿಗಳೇ ರಾಮನ ವಿಯೋಗವನ್ನು ಸಹಿಸಲಾರದೆ ಅಳುತ್ತಿವೆಯಲ್ಲವೆ! ಇನ್ನು ರಾಮನ ತಂದೆ ತಾಯಿಗಳು, ಪ್ರಜೆಗಳು ಹೇಗೆ ಅವನ ವಿಯೋಗವನ್ನು ಸಹಿಸಿಯಾರು? ಅಯ್ಯೋ! ಆ ಕೌಸಲ್ಯಾದೇವಿ ಎಷ್ಟು ದುಃಖಿಸುತ್ತಿರುವರೋ ಎಂದು ಗುಹನು ಚಿಂತಿಸುತ್ತಾ ತಾಳಲಾರದ ದುಃಖದಿಂದ ಕಂಪಿಸಿದನು. ಸೀತಾ ರಾಮ ಲಕ್ಷ್ಮಣರು ಗಂಗಾ ತೀರಕ್ಕೆ ನಡೆದು ಹೊಗುತ್ತಿರುವುದನ್ನು ನೋಡಿ, ತಾನೂ ಅವರನ್ನು ಅನುಸರಿಸಿದನು. ನದಿಯ ಆಚೆ ದಡದಲ್ಲಿದ್ದ ನಾವಿಕನಿಗೆ ದೋಣಿಯನ್ನು ಈಚೆ ದಡಕ್ಕೆ ತರುವಂತೆ ಕೂಗು ಹಾಕಿದನು.

**ಅಂಬಿಗನ ಕೋರಿಕೆ**: ತನ್ನ ಯಜಮಾನನ ಕೂಗನ್ನು ಕೇಳಿ, ಅಂಬಿಗನು ದೋಣಿಯನ್ನು ರಾಮಚಂದ್ರನಿದ್ದ ದಡಕ್ಕೆ ನಡೆಸಿಕೊಂಡು ಬಂದನು. ಗುಹನು ಅಂಬಿಗನನ್ನು ಹತ್ತಿರ ಕರೆದು, "ದಶರಥ ಮಹಾರಾಜನ ಮಗನಾದ ಶ್ರೀರಾಮ ಚಂದ್ರನು ಸತೀ ಸೋದರ ಸಮೇತನಾಗಿ ವನವಾಸ ಮಾಡುತ್ತಿದ್ದಾನೆ. ಅವರು ಈಗಲೇ ಗಂಗಾ ನದಿಯನ್ನು ದಾಟಿ ಅಡವಿಯನ್ನು ಪ್ರವೇಶಿಸುವರು. ಆದ್ದರಿಂದ ದೋಣಿಯನ್ನು ಶುಭ್ರ ಮಾಡು," ಎಂದು ಆಜ್ಞಾಪಿಸಿದನು. ಇದಕ್ಕೆ ಮುಂಚೆಯೇ ರಾಮಚಂದ್ರನ ಚರಿತ್ರೆಯನ್ನು ಜನರಿಂದ ಕೇಳಿದ್ದ ಅಂಬಿಗನು, "ಆಗಲಿ, ಆದರೆ, ಅವನ ಪಾದ ಸೋಕಿದಾಕ್ಷಣ ಕಲ್ಲು ಸ್ತ್ರೀ ಆಯಿತೆಂದು ಕೇಳಿದ್ದೆವಲ್ಲಾ, ಆ ರಾಮ ಚಂದ್ರನೇ ಇವನೋ? ಅಥವಾ ಇವನು ಬೇರೆ ರಾಮಚಂದ್ರನೋ?" ಎಂದು ಗುಹನನ್ನು ಪ್ರಶ್ನಿಸಿದನು. ಗುಹನು, "ಅಂಬಿಗಾ! ಏನು ಜ್ಞಾಪಕಶಕ್ತಿಯೋ ನಿನಗೆ! ಎಂದೋ ನಡೆದ ವಿಷಯವನ್ನು ನೀನು ಜ್ಞಾಪಿಸಿಕೊಂಡಿದ್ದಲ್ಲದೆ, ನನಗೂ ಜ್ಞಾಪಕ

ಮಾಡಿದೆ," ಎಂದು, ರಾಮನತ್ತ ತಿರುಗಿ, "ರಾಮಾ! ನೋಡಿದಿರಾ, ನಮ್ಮ ಅಂಬಿಗನು ನಿಮ್ಮ ಮಹತ್ತರ ಶಕ್ತಿಯನ್ನು ಮರೆಯದೆ, ಈ ಸಮಯದಲ್ಲಿ ನನಗೆ ಜ್ಞಾಪಿಸಿ ಕೊಡುತ್ತಿದ್ದಾನೆ. ಅಂದು ಗೌತಮನ ಪತ್ನಿಯಾದ ಅಹಲ್ಯೆಗೆ ಶಾಪ ವಿಮೋಚನೆ ಮಾಡಿದ್ದನ್ನು ನನ್ನ ಪ್ರಜೆಗಳು ಎಷ್ಟು ಚೆನ್ನಾಗಿ ಜ್ಞಾಪಕದಲ್ಲಿಟ್ಟುಕೊಂಡಿದ್ದಾರೆ! ನಿಮ್ಮ ದಿವ್ಯ ಶಕ್ತಿಯನ್ನು ತಿಳಿದುಕೂಂಡ ಜನರು ಅದೆಷ್ಟು ಧನ್ಯರೋ!" ಎಂದು ಅಂಬಿಗನ ಭಕ್ತಿ ಶ್ರದ್ಧೆಗಳನ್ನು ವರ್ಣಿಸುತ್ತಿರಲು, ದೋಣಿಯಲ್ಲಿ ಕುಳಿತುಕೊಳ್ಳಲು ರಾಮನು ದೋಣಿಯತ್ತ ಹೊರಟನು.

**ಪಾದತೀರ್ಥ**: ಆಗ, ಅಂಬಿಗನು ಹತ್ತಿರ ಬಂದು, "ರಾಮಚಂದ್ರಾ! ನನ್ನ ಜನ್ಮ ಧನ್ಯವಾಯಿತು. ಎಂದೋ ಕೇಳಿದ ನಾಮವನ್ನು ಇಂದು ಸಾಕ್ಷಾತ್ತಾಗಿ ದರ್ಶನ ಮಾಡುತ್ತಿದ್ದೇನೆ. ನಿಮ್ಮನ್ನೂ ನಿಮ್ಮ ದೇವಿಯನ್ನೂ ನಿಮ್ಮ ಸೋದರನನ್ನೂ ಗಂಗಾನದಿಯನ್ನು ದಾಟಿಸುವಂತಹ ಅದೃಷ್ಟ ನನಗೆ ಲಭಿಸಿದುದು ಅನೇಕ ಜನ್ಮಗಳ ಪುಣ್ಯಫಲ. ಒಮ್ಮೆ ನಿಮ್ಮ ಪಾದತೀರ್ಥವನ್ನು ತಲೆಯ ಮೇಲೆ ಹಾಕಿಕೊಂಡು ನಂತರ ದೋಣಿ ನಡೆಸುತ್ತೇನೆ. ಮೊದಲು ತಮ್ಮ ಪಾದವನ್ನು ನನ್ನ ಕೈಯಲ್ಲಿರಿಸಿ," ಎಂದು ಪ್ರಾರ್ಥಿಸಿದನು. ಅಂಬಿಗನ ಮಾತನ್ನು ಕೇಳುತ್ತಿದ್ದ ಗುಹನು ತನ್ನ ಸೇವಕನಿಗೆ ರಾಮಚಂದ್ರನ ಮೇಲೆ ಇಷ್ಟು ಭಕ್ತಿ ಶ್ರದ್ಧೆ ಇದೆಯೆನ್ನುವ ವಿಷಯ ಇದಕ್ಕೆ ಮೊದಲು ತನಗೆ ತಿಳಿಯದಿದ್ದುದರಿಂದ ಆಶ್ಚರ್ಯಪಟ್ಟು, ಆಹಾ! ಅಂಬಿಗನದು ಎಂಥ ಅದೃಷ್ಟ ಎಂದು ಆನಂದಿಸಿ, "ಅಂಬಿಗಾ! ರಾಮಚಂದ್ರನನ್ನು ದೋಣಿಯಲ್ಲಿ ಕೂರಿಸಿ, ಒಂದು ಪಾತ್ರೆಯಲ್ಲಿ ಅವನ ಪಾದ ತೊಳೆದು ತೀರ್ಥ ಸ್ವೀಕರಿಸಬಹುದು. ಅವರನ್ನು ನಿಲ್ಲಿಸಿ ಹೀಗೆ ನಡೆದುಕೊಳ್ಳುವುದು ಗೌರವವಲ್ಲ," ಎಂದು ಗದರಿಸಿದನು. ಅದಕ್ಕೆ ಅಂಬಿಗನು, "ಪ್ರಭೂ! ನೀವು ಶ್ರೀಮಂತರು. ನಾನು ಕಡುಬಡವ, ಈ ಕೆಲಸದಿಂದಲೇ ನಾನು ನನ್ನ ಸಂಸಾರವನ್ನು ಪೋಷಿಸುತ್ತಿದ್ದೇನೆ. ಬರುವ ಹಣ, ದಿನದ ನಮ್ಮ ಖರ್ಚಿಗೇ ಸಾಲದು. ಇನ್ನು ಹೊಸಬರು ಬಂದರೆ ಅವರ ಹೊಟ್ಟೆ ಹೊರೆಯುವುದು ಹೇಗೆ? ಆದ್ದರಿಂದ ತಾವು ಬೇರೆ ಭಾವಿಸದೆ, ದೋಣಿಯಲ್ಲಿ ಕೂರುವ ಮೊದಲೇ ಶ್ರೀರಾಮಚಂದ್ರನ ಪಾದಗಳನ್ನು ತೊಳೆಯಲು ಆಜ್ಞೆ ಕೊಡಿ," ಎಂದು ಬೇಡಿಕೊಂಡನು.

**ಸಂಬಂಧವೇನು**?: ಅಂಬಿಗನು ಹೇಳಿದ ಮಾತು ರಾಮನಿಗೆ ಅರ್ಥವಾಯಿತು. ಸೀತೆಯನ್ನು ನೋಡಿ ನಗುತ್ತಾ, "ನೋಡಿದೆಯಾ ಈ ಅಂಬಿಗನ ಭಯ," ಎಂದನು. ಆದರೆ ಗುಹನಿಗೆ ಏನೂ ಅರ್ಥವಾಗಲಿಲ್ಲ. "ವನವಾಸ ಮಾಡಲು ಸಂಕಲ್ಪಿಸಿರುವ ರಾಮಚಂದ್ರನನ್ನು ಗಂಗೆ ದಾಟಿಸುವುದಕ್ಕೂ ನಿನ್ನ ಸಂಸಾರ ತಾಪತ್ರಯಗಳಿಗೂ ಏನು ಸಂಬಂಧ? ದೋಣಿಯಲ್ಲಿ ದಾಟಿಸುವುದಕ್ಕೆ ರಾಮಚಂದ್ರನಿಂದ ಹೆಚ್ಚು ಹಣ

ಬೇಡುತ್ತಿದ್ದೀಯಾ? ಹಾಗೆ ಬೇಡಿದರೆ ನಿನಗೆ ಬುದ್ಧಿ ಕಡಿಮೆಯೆಂದೇ ಹೇಳಬೇಕು. ಇಲ್ಲವೆ ಸಂಸಾರಕ್ಕೆ ಹಣ ಅಗತ್ಯವಾದರೆ ನಾನು ಕೊಡುತ್ತೇನೆ. ರಾಮಚಂದ್ರನನ್ನು ಕೇಳಬೇಡ, ಬೇಗ ಸಿದ್ಧಮಾಡು," ಎಂದು ಕೋಪದಿಂದ ಅವನನ್ನು ಖಂಡಿಸಿದನು. ಆಗ ಅಂಬಿಗನು, "ಪ್ರಭೂ! ರಾಮಚಂದ್ರನ ಪಾದಗಳಲ್ಲಿ ಯಾವುದೋ ಶಕ್ತಿ ಇದೆಯೆಂದು ಕೇಳಿದ್ದೇನೆ. ಅವನ ಪಾದ ಸೋಕಿದಾಕ್ಷಣ ಕಲ್ಲು ಸ್ತ್ರೀ ಆಯಿತಂತೆ. ನನ್ನ ದೋಣಿಯ ಮರದತುಂಡುಗಳು ಸ್ತ್ರೀಯಾಗಿ ಮಾರ್ಪಟ್ಟರೆ, ನನ್ನ ದೋಣಿಯಲ್ಲಿ ಹುಟ್ಟಿದವಳಾದ್ದರಿಂದ ನನಗೇ ಅವರ ಸಂಬಂಧ ಹೊರತು ನಿಮಗೆ ಸಂಬಂಧವಿಲ್ಲ. ನಾನೇ ಅವರೆಲ್ಲರ ಹೊಟ್ಟೆ ಹೊರೆಯಬೇಕಾಗುತ್ತದೆ. ಮೊದಲೇ ಆ ಪಾದಗಳನ್ನು ತೊಳೆದರೆ ನನಗೆ ಆ ಭಯವಿಲ್ಲ. ಅಲ್ಲದೆ, ರಾಮನ ಪಾದತೀರ್ಥವನ್ನು ನನ್ನ ಶಿರಸ್ಸಿನ ಮೇಲೆ ಹಾಕಿಕೊಳ್ಳುವುದರಿಂದ ನನ್ನ ಪಾಪವೂ ನಶಿಸುವುದು. ಆದ್ದರಿಂದ ನೀವು ನನ್ನ ಕೋರಿಕೆಗೆ ಅಡ್ಡಿ ಹೇಳದೆ ಅಪ್ಪಣೆ ಕೊಡಿ," ಎಂದು ಪ್ರಾರ್ಥಿಸಿದನು.

**ನಿನ್ನಿಷ್ಟದಂತಾಗಲಿ**: ಗುಹನು ಇನ್ನೂ ಯೋಚಿಸುತ್ತಿರುವಾಗಲೇ, ರಾಮಚಂದ್ರನು ಮುಗುಳ್ನಗುತ್ತಾ ಅಂಬಿಗನನ್ನು ಹತ್ತಿರ ಕರೆದು, ತನ್ನ ಪಾದಗಳನ್ನು ಅವನ ಅಂಗೈಯಲ್ಲಿ ಇಟ್ಟು, "ನಿನ್ನ ಇಷ್ಟದ ಪ್ರಕಾರ ಪಾದಗಳನ್ನು ತೊಳೆ," ಎಂದು ಆಜ್ಞಾಪಿಸಿದನು. ಅಂಬಿಗನು ಪಾದಗಳನ್ನು ಹಸ್ತದಲ್ಲಿಟ್ಟುಕೊಂಡು, ಗಂಗಾಜಲ ದಿಂದ ಬೆರಳು ಸಂದುಗಳನ್ನೂ ಸಹ ಬಿಡದೆ ಪಾದಗಳನ್ನು ತೊಳೆದು, ಆ ಪವಿತ್ರ ಜಲವನ್ನು ಶಿರಸ್ಸಿನ ಮೇಲೆ ಹಾಕಿಕೊಂಡು, ತನ್ನ ದೋಣಿಯ ಮೇಲೆ ಎಲ್ಲ ಕಡೆಗೂ ಪ್ರೋಕ್ಷಿಸಿದನು. ತೃಪ್ತಿಯಿಂದ ಪರಮಾನಂದ ಭರಿತನಾದನು. ಆಮೇಲೆ, ರಾಮಚಂದ್ರನನ್ನು ತಾನೇ ಕೈ ಹಿಡಿದು ದೋಣಿಗೆ ಹತ್ತಿಸಿದನು. ರಾಮಚಂದ್ರನು ಸೀತೆಯ ಕೈಹಿಡಿದು ಅವಳನ್ನು ದೋಣಿಯೊಳಕ್ಕೆ ಕರೆದುಕೊಂಡನು. ಲಕ್ಷ್ಮಣನನ್ನು ಪಕ್ಕದಲ್ಲಿ ಕೂರಿಸಿಕೊಂಡನು. ಅಂಬಿಗನ ಅಮಾಯಕತೆಯನ್ನೂ ಭಕ್ತಿಯನ್ನೂ ಅವರು ಆನಂದದಿಂದ ಪರಸ್ಪರ ಮಾತಾಡಿಕೊಳ್ಳುತ್ತಿದ್ದರು. ದೋಣಿ ಕದಲಿತು. ರಾಮ ಲಕ್ಷ್ಮಣರು ಗುಹನೊಂದಿಗೆ ಕಾಲಹೋಗಿದ್ದೇ ಗೊತ್ತಾಗದೆ ಮಾತಾಡುತ್ತಾ ದಡವನ್ನು ಸೇರಿದರು.

**ಕೂಲಿಯೆಷ್ಟು**: ದೋಣಿಯಿಂದಿಳಿದು, ಅಂಬಿಗನಿಗೆ ಕೊಡಲು ತನ್ನಲ್ಲಿ ಬಿಡಿ ಕಾಸೂ ಇಲ್ಲದಿದ್ದುದರಿಂದ ರಾಮಚಂದ್ರನು ನಾಚಿಕೆಗೊಂಡವನಂತೆ ನಟಿಸಿದನು. ರಾಮ ಹೃದಯವನ್ನು ಅರಿತ ಜಾನಕಿಯು ತನ್ನ ಬೆರಳಲ್ಲಿದ್ದ ಉಂಗುರವನ್ನು ರಾಮನ ಹಸ್ತದಲ್ಲಿಟ್ಟಳು. "ಅಯ್ಯಾ ಅಂಬಿಗಾ! ಇಗೋ ತೆಗೆದುಕೋ ನಿನ್ನ ಕೂಲಿ," ಎಂದು ರಾಮನು ಕೈ ಚಾಚಿದನು. ಅಂಬಿಗನು ರಾಮಚಂದ್ರನ ಪಾದಗಳ ಮೇಲೆ ಬಿದ್ದು, "ರಾಮಾ, ರಾಮಾ! ಇಂದು ನನ್ನ ಜನ್ಮ ಸಫಲವಾಯಿತು, ನನ್ನ

ಸರ್ವ ಪಾಪಗಳೂ ಭಸ್ಮವಾದುವು, ನನ್ನ ವಿಧಾತರಾದ ನೀವು ನನಗೆ ಸಿಕ್ಕಿ, ನನ್ನ ವಂಶವನ್ನೇ ಉದ್ಧಾರ ಮಾಡಿದಿರಿ. ನಾಥಾ! ನಿಮ್ಮ ಅನುಗ್ರಹವೊಂದಿದ್ದರೆ ಸಾಕು. ನೀವು ಹಿಂದಿರುಗಿ ಬರುವಾಗ ನನ್ನನ್ನು ಮರೆಯದೆ ಮತ್ತೊಮ್ಮೆ ನನಗೆ ಈ ಸೇವಾ ಭಾಗ್ಯವನ್ನು ಅನುಗ್ರಹಿಸಿದರೆ ಧನ್ಯನಾಗುವೆನು," ಎಂದು ಪಾದಗಳ ಮೇಲೆ ಬಿದ್ದು ಆನಂದಬಾಷ್ಪಗಳಿಂದ ಪ್ರಾರ್ಥಿಸಿದನು. ರಾಮಲಕ್ಷ್ಮಣರು ನಾನಾ ರೀತಿಯಾಗಿ ಅಂಬಿಗನಿಗೆ ಸಮಾಧಾನ ಹೇಳಿ, ಬೋಧನೆ ಮಾಡಿ, ನದಿ ದಾಟಿಸಿದ್ದರ ಕೂಲಿಯನ್ನು ತೆಗೆದುಕೊಳ್ಳುವಂತೆ ಒತ್ತಾಯಿಸಿದರು.

**ಮಹಾಸಾಗರವನ್ನು ದಾಟಿಸುವ ದೇವದೇವ**: ಆದರೆ ಅಂಬಿಗನು, "ಸ್ವಾಮೀ! ರಾಮಚಂದ್ರಾ! ನಿಮ್ಮೊಬ್ಬರನ್ನು ಈ ಚಿಕ್ಕ ಗಂಗಾನದಿಯನ್ನು ದಾಟಿಸಿದ್ದಕ್ಕೆ ನಾನು ಕೂಲಿ ತೆಗೆದುಕೊಂಡರೆ, ತಾವು ನನ್ನಂಥ ಮಾನವರನ್ನು ಸಂಸಾರ ಪ್ರವಾಹವನ್ನು ದಾಟಿಸಿ, ಮೋಹ ಸಾಗರವನ್ನು ದಾಟಿಸುತ್ತೀರಲ್ಲಾ, ಅದಕ್ಕೇನು ಕೂಲಿ ತೆಗೆದುಕೊಳ್ಳುತ್ತಿದ್ದೀರಿ? ಈ ಒಂದು ಸಣ್ಣ ಕೆಲಸ ಮಾಡಿ, ನಾನೆಷ್ಟು ಅದೃಷ್ಟವಂತನೆಂದು ಆನಂದಿಸುತ್ತಿರುವ ನನಗೆ, ನನ್ನ ಪ್ರಾಪ್ತಿಯನ್ನು ದೂರ ಮಾಡುವುದು ನಿಮಗೆ ತರವಲ್ಲ," ಎಂದು ದೀನನಾಗಿ ಪ್ರಾರ್ಥಿಸಿದನು. ರಾಮನ ಹೃದಯವು ಕರಗಿತು. ಅವನನ್ನು ತೊಂದರೆಪಡಿಸುವುದು ಒಳ್ಳೆಯದಲ್ಲವೆಂದು, ಹೃದಯಪೂರ್ವಕವಾಗಿ ಅವನನ್ನು ಆಶೀರ್ವದಿಸಿ ಕಳಿಸಿದನು. ನಂತರ ರಾಮ ಲಕ್ಷ್ಮಣರು ತಮ್ಮ ತಮ್ಮ ಬಿಲ್ಲುಗಳನ್ನು ಒಂದು ವಸ್ತ್ರದ ಮೇಲಿಟ್ಟು ಸ್ನಾನ ಮಾಡಿದರು. ಸೀತೆಯೂ ಸ್ನಾನ ಮಾಡಿದಳು. "ನನ್ನ ನಾಥನೊಂದಿಗೆ ಹದಿನಾಲ್ಕು ಸಂವತ್ಸರಗಳನ್ನು ಆನಂದದಿಂದ ಕಳೆದು ಪುನಃ ನಿನ್ನ ದರ್ಶನ ಮಾಡುತ್ತೇನೆ. ಮತ್ತೊಮ್ಮೆ ನಿನ್ನ ನಿರ್ಮಲ ಪ್ರೇಮ ಜಲವನ್ನು ನನ್ನ ಶಿರಸ್ಸಿನ ಮೇಲೆ ಪ್ರೋಕ್ಷಿಸಿಕೊಳುತ್ತೇನೆ," ಎಂದು ಪ್ರಾರ್ಥಿಸಿದಳು. ರಾಮಚಂದ್ರನು ಗುಹನನ್ನು ಕರೆದು, "ಅಯ್ಯಾ ಗುಹಾ! ಈಗಾಗಲೇ ನಿನ್ನ ಕಾಲವನ್ನು ಬಹಳವಾಗಿ ಉಪಯೋಗಿಸಿದ್ದೇನೆ. ಇನ್ನು ನೀನು ನಿನ್ನ ಗ್ರಾಮಕ್ಕೆ ಹೊರಡು," ಎಂದು ಆಜ್ಞಾಪಿಸಿದನು.

**ಗುಹನ ಸೇವಾಭಾಗ್ಯ**: ಆ ಮಾತು ಕೇಳಿದಾಕ್ಷಣ ಗುಹನ ಮುಖವು ಬಾಡಿತು, ಕಣ್ಣೀರು ಹರಿಯಿತು. ಕೈಜೋಡಿಸಿಕೊಂಡು, "ರಾಮಾ! ನನ್ನ ಮಾತುಗಳನ್ನು ಆಲೈಸಿ. ಸ್ವಲ್ಪ ಸಮಯ ನಾನು ನಿಮ್ಮೊಂದಿಗಿದ್ದು, ಈ ಅರಣ್ಯದಲ್ಲಿ ನಿಮಗೆ ದಾರಿ ತೋರಿಸಿ, ನಿಮ್ಮ ಸೇವೆ ಮಾಡಲು ಅವಕಾಶ ಕೊಡಿ, ಇಲ್ಲವೆನ್ನದೆ ಒಪ್ಪಿಕೊಳ್ಳಿ" ಎಂದು ಪ್ರಾರ್ಥಿಸಿದನು. ರಾಮಚಂದ್ರನು ಗುಹನ ಪ್ರೇಮಕ್ಕೂ ಭಕ್ತಿಗೂ ಆನಂದಪಟ್ಟು ಅವನನ್ನು ತನ್ನೊಡನೆ ಕರೆದುಕೊಂಡು ಹೊರಟನು. ಸೀತಾ ರಾಮ ಲಕ್ಷ್ಮಣ ಗುಹರು ಸ್ವಲ್ಪ ದೂರ ನಡೆದು, ಸಾಯಂಕಾಲ ಒಂದು ವಿಶಾಲ ವೃಕ್ಷಛಾಯೆಯಲ್ಲಿ

ತಂಗಿದರು. ಆ ವೃಕ್ಷದ ಕೆಳಗೆ ಸೀತಾರಾಮರು ಕುಳಿತುಕೊಳ್ಳುವುದಕ್ಕೆ ಯೋಗ್ಯವಾಗುವಂತೆ ಲಕ್ಷ್ಮಣ ಗುಹರು ಸ್ಥಳವನ್ನು ಶುಭ್ರ ಪಡಿಸಿದರು. ರಾಮಚಂದ್ರನಿಗೆ ಅರ್ಪಿಸುವ ಸಲುವಾಗಿ ಮುಖಿಗಳನ್ನು ಅರಳಿಸಿಕೊಂಡು ಕಾದಿವೆಯೇನೋ ಎನ್ನುವಂತಿದ್ದ ಫಲಗಳನ್ನೂ, ಗೆಡ್ಡೆಗೆಣಸುಗಳನ್ನೂ ಆರಿಸಿ ತಂದು ಒಂದು ಅಗಲವಾದ ಎಲೆಯಲ್ಲಿಟ್ಟು ಸೀತಾ ರಾಮರಿಗೆ ಅರ್ಪಿಸಿದರು. ರಾಮಚಂದ್ರನು, "ಲಕ್ಷ್ಮಣಾ! ಸಂಧ್ಯಾವಂದನೆ ಮಾಡದೆ ನಾವು ಹಣ್ಣುಗಳನ್ನು ತಿನ್ನಬಹುದೇ?" ಎಂದು ಹೇಳಿ, ಲಕ್ಷ್ಮಣನನ್ನು ಸಂಗಡ ಕರೆದುಕೊಂಡು ತೀರ್ಥರಾಜವಾದ ಪ್ರಯಾಗವನ್ನು ಸಂದರ್ಶಿಸಿ ಸ್ನಾನಸಂಧ್ಯಾದಿಗಳನ್ನು ಪೂರೈಸಿದನು. ಲಕ್ಷ್ಮಣನಿಗೂ ಗುಹನಿಗೂ ಪ್ರಯಾಗದ ಮಹತ್ತರವಾದ ಪ್ರಭಾವವನ್ನು ಹೇಳಿದನು. ಅದರ ವೈಭವವನ್ನೂ, ಮಹತ್ವವನ್ನೂ ಎಷ್ಟು ವರ್ಣಿಸಿದರೂ ಮುಗಿಯುವುದಿಲ್ಲ. ಅದು ಸಮಸ್ತ ಪಾಪಗಳನ್ನೂ ನಾಶ ಮಾಡುವುದು," ಎಂದು ಹೇಳಿದನು.

## ೧೫ ಆಶ್ರಮಗಳಲ್ಲಿ

**ಭರದ್ವಾಜ ಆಶ್ರಮ**: ನಂತರ, ಸೀತಾ ಸಮೇತನಾಗಿ ಲಕ್ಷ್ಮಣ ಗುಹರೊಂದಿಗೆ ರಾಮನು ಭರದ್ವಾಜ ಆಶ್ರಮವನ್ನು ಪ್ರವೇಶಿಸಿದನು. ಎಷ್ಟೋ ಕಾಲದಿಂದ ರಾಮ ದರ್ಶನಕ್ಕಾಗಿ ಕಾದಿದ್ದ ಭರದ್ವಾಜ ಮಹರ್ಷಿಯು ಆಶ್ರಮದಿಂದ ಹೊರಟು ಎದುರಿಗೆ ಬರುತ್ತಿದ್ದುದನ್ನು ನೋಡಿ ರಾಮಚಂದ್ರನು ಅವರಿಗೆ ನಮಸ್ಕರಿಸಿದನು. ಆ ಮುನಿಯು ಅತ್ಯಂತ ಆಪ್ಯಾಯಮಾನವಾಗಿ ರಾಮಚಂದ್ರನನ್ನು ಅಪ್ಪಿಕೊಂಡು ತನ್ನ ಆಶ್ರಮವನ್ನು ಪ್ರವೇಶಿಸಿದನು. ರಾಮಚಂದ್ರನು ಆನಂದಿಸಿದನು. ಮೊದಲೇ ಸಿದ್ಧಪಡಿಸಿದ್ದ ಆಸನಗಳಲ್ಲಿ ಅವರುಗಳನ್ನು ಕೂರಿಸಿ, ಭರದ್ವಾಜ ಮಹರ್ಷಿಯು ಕುಶಲ ಪ್ರಶ್ನೆಗಳನ್ನು ಮಾಡಿದರು, ತಮ್ಮ ಮನೋಭೀಷ್ಟವು ಈ ದಿನ ಈಡೇರಿತೆಂದು ಆನಂದಿಸಿದರು. ತಮ್ಮ ಶಿಷ್ಯರಿಗೆ ಹೇಳಿ ಕಂದ ಮೂಲಗಳನ್ನು ತರಿಸಿ ಸೀತಾ ರಾಮ ಲಕ್ಷ್ಮಣ ಗುಹರಿಗೆ ಕೊಡುವಂತೆ ಹೇಳಿದರು. ರಾಮಾದಿಗಳು ಋಷಿಯ ಸೇವೆಯನ್ನು ಪಡೆದು, ಆ ರಾತ್ರಿಯನ್ನು ಅಲ್ಲೇ ಕಳೆದರು. ಬೆಳಗ್ಗೆ ರಾಮಚಂದ್ರನು ಪ್ರಯಾಗ ಸ್ನಾನಕ್ಕೆ ಹೊರಡುವಾಗ ತಮ್ಮೊಡನೆ ಬರುವಂತೆ ಋಷಿಯನ್ನು ಪ್ರಾರ್ಥಿಸಿದನು. ಭರದ್ವಾಜ ಮಹರ್ಷಿಯು, "ಸ್ವಾಮಿ! ರಾಮಚಂದ್ರಾ! ಯಾವ ದರ್ಶನಕ್ಕಾಗಿ

ನಾನು ಪ್ರಯಾಗ ತೀರದಲ್ಲಿ ವಾಸಮಾಡುತ್ತಾ ತಪಸ್ಸು ಮಾಡಿದೆನೋ ಯಾವ ಪವಿತ್ರ ಸ್ಪರ್ಶಕ್ಕಾಗಿ ನಾನು ಯಜ್ಞ ಯಾಗಾದಿ ಕ್ರತುಗಳನ್ನು ಆಚರಿಸಿದನೋ ಯಾವ ಸಂಭಾಷಣೆಗಾಗಿ ನಾನು ಜಪಧ್ಯಾನಗಳನ್ನು ಮಾಡಿದೆನೋ ಆ ದರ್ಶನ, ಸಂಭಾಷಣ, ಸ್ಪರ್ಶಗಳು ಇಂದು ದೊರಕಿತು. ಇನ್ನು ನನಗೆ ಪವಿತ್ರ ಜಲದ ಸ್ನಾನ ಪಾನಾದಿಗಳು ಬೇಕಿಲ್ಲ. ರೋಗ ತೀರಿದ ಮೇಲೂ ಔಷಧಿಯನ್ನು ಸೇವಿಸುವ ಮೂರ್ಖ ನಾನಲ್ಲ. ನನ್ನ ಭವರೋಗ ತೀರಿತು. ಭಗವಂತನನ್ನು ಕಂಡೆನು," ಎಂದು ತಮ್ಮೊಳಗಿನ ನಿಜ ಭಾವವನ್ನು ಆನಂದಬಾಷ್ಪಗಳೊಂದಿಗೆ ರಾಮಚಂದ್ರನಿಗೆ ನಿವೇದಿಸಿಕೊಳ್ಳುವುದನ್ನು ಕೇಳಿದ ಗುಹನು ಪರಮಾಶ್ಚರ್ಯದಿಂದ, "ಆಹಾ! ನಾನೆಂಥ ಅದೃಷ್ಟವಂತ," ಎಂದು ತನ್ನೊಳಗೇ ಆನಂದಿಸಿದನು.

**ರಾಮ ವಾಕ್ಯಗಳು**: ರಾಮನು ತನ್ನ ದೈವತ್ವವನ್ನು ಮರೆಮಾಚಿಕೊಳ್ಳುತ್ತಾ ತಾನು ಒಬ್ಬ ಸಾಮಾನ್ಯ ಮಾನವನಂತೆ ನಟಿಸಿದನು. ಭರದ್ವಾಜ ಮಹರ್ಷಿಯು ಎಷ್ಟೆಷ್ಟೋ ವಿಧವಾಗಿ ರಾಮನ ವರ್ಣನೆಮಾಡುತ್ತಿದ್ದರು. ಆ ರಾಮನು ಯಾರೋ ಬೇರೆ ರಾಮನಿರಬೇಕು ಎನ್ನುವಂತೆ, "ಓ ಮುನಿರಾಜಾ! ನಿಮ್ಮಿಂದ ಆದರಿಸಲ್ಪಟ್ಟವರೆಲ್ಲರೂ ದೊಡ್ಡವರು! ಅವರೆಲ್ಲರೂ ಸಕಲಗುಣ ಸಂಪನ್ನರು, ಅಲ್ಲವೆ?" ಎಂದನು. ಮುನಿವಾಕ್ಯಗಳನ್ನೂ ರಾಮನ ಉತ್ತರವನ್ನೂ ಆಶ್ರಮವಾಸಿ ಬ್ರಹ್ಮಚಾರಿಗಳೂ ಸಿದ್ಧ ಪುರುಷರೂ ಯೋಗಿಗಳೂ ಮುನಿಗಳೂ ಕೇಳುತ್ತಾ ಆನಂದಿಸುತ್ತಿದ್ದರು, ಆಶ್ಚರ್ಯ ಪಡುತ್ತಿದ್ದರು.

ಪ್ರಯಾಗದಲ್ಲಿ ಸ್ನಾನ ಮಾಡಿ, ಮುನಿಯ ಅಪ್ಪಣೆ ಪಡೆದು ಸೀತಾ ರಾಮ ಲಕ್ಷ್ಮಣರು ಗುಹನೊಂದಿಗೆ ವನಕ್ಕೆ ಪ್ರಯಾಣ ಮಾಡಿದರು. ಭರದ್ವಾಜರು ತಮ್ಮ ಆಶ್ರಮದಿಂದ ಹೊರಟು ಪ್ರಯಾಗದವರೆಗೂ ಬಂದು ರಾಮಚಂದ್ರನನ್ನು ಅಪ್ಪಿಕೊಂಡು ಬೀಳ್ಕೊಟ್ಟರು. ರಾಮಚಂದ್ರನು ಮುನಿಯನ್ನು ಕುರಿತು, "ಸ್ವಾಮೀ! ನಾವು ಯಾವ ಮಾರ್ಗದಲ್ಲಿ ಹೋದರೆ ಒಳ್ಳೆಯದೋ ತಿಳಿಸಬೇಕು, ಎಂದು ಕೇಳಿದನು. ಮುನಿಯು ನಕ್ಕು, "ರಾಮಚಂದ್ರಾ! ನಿನಗೆ ತಿಳಿಯದ ಮಾರ್ಗ ಈ ಲೋಕದಲ್ಲಿಲ್ಲ ಅಲ್ಲವೆ?" ಮಾಯಾಮಾನುಷ ವೇಷಧಾರಿಯಾಗಿ ಇಷ್ಟೊಂದು ನಾಟಕವಾಡುತ್ತಿದ್ದೀಯೇ! ಸರಿ! ಕೇಳಿದೆಯಾದ್ದರಿಂದ ಹೇಳುವುದು ನನ್ನ ಕರ್ತವ್ಯ," ಎಂದರು, ರಾಮನಿಗೆ ದಾರಿ ತೋರಿಸಲು ನಾಲ್ವರು ಶಿಷ್ಯರನ್ನು ಜೊತೆಯಲ್ಲಿ ಕಳಿಸಿದರು.

**ಋಷಿಕುಮಾರರು**: ಈ ನೆಪದಿಂದಲಾದರೂ ರಾಮಚಂದ್ರನೊಂದಿಗೆ ಪ್ರಯಾಣ ಪ್ರಾಪ್ತವಾಯಿತೆಂದು, ಇದು ತಮ್ಮ ಪೂರ್ವ ಜನ್ಮದ ಪುಣ್ಯವೆಂದು, ಆ ನಾಲ್ವರೂ

ಒಳಗೊಳಗೇ ಆನಂದಿಸಿದರು. ಅವರು ದಾರಿ ತೋರಿಸುತ್ತಾ ಮುಂದೆ ಹೋಗು ತ್ತಿದ್ದರು. ಸೀತಾ ರಾಮ ಲಕ್ಷ್ಮಣರು ಗುಹನೊಂದಿಗೆ ಅವರ ಹಿಂದೆ ನಡೆದು ಹೋದರು. ಋಷಿ ಶಿಷ್ಯರು ಯಮುನಾ ತೀರದವರೆಗೆ ಬಂದು ರಾಮಚಂದ್ರನ ಆಜ್ಞೆಯನ್ನು ಪಡೆದುಕೊಂಡು, ಹಿಂದಕ್ಕೆ ಹೋಗಬೇಕಲ್ಲಾ ಎಂದು ಭಾರವಾದ ಮನಸ್ಸಿನಿಂದ ಹಿಂತಿರುಗಿದರು. ಸೀತಾ ರಾಮ ಲಕ್ಷ್ಮಣರು ಆ ಋಷಿ ಶಿಷ್ಯರ ಸಹಾಯಕ್ಕೆ ಸಂತೋಷಪಟ್ಟು ಅವರನ್ನು ಮನಸಾರ ಆಶೀರ್ವದಿಸಿ ಕಳಿಸಿಕೊಟ್ಟರು.

**ಗುಹನಿಗೆ ಬೀಳ್ಕೊಡುಗೆ**: ನಂತರ, ಯಮುನೆಯಲ್ಲಿ ಸ್ನಾನ ಮಾಡಲು ಸಿದ್ಧ ರಾದರು. ಯಮುನಾ ತೀರದಲ್ಲಿ ವಾಸಿಸುತ್ತಿದ್ದ ಹಳ್ಳಿಗರು ಈ ಸುಂದರ ವಿಗ್ರಹ ಗಳನ್ನು ನೋಡಿ, 'ಇವರ್ಯಾರೋ!' 'ಎಲ್ಲಿಂದ ಬಂದರೋ!' 'ಇವರ ನಾಮಧೇಯ ಗಳೇನೋ!' ಎಂದು ಆಶ್ಚರ್ಯಪಡುತ್ತಾ ಕೇಳಲು ಸಂಕೋಚಪಡುತ್ತಾ ತಮ್ಮ ತಮ್ಮೊಳಗೇ ಗುಸು ಗುಸು ಮಾತನಾಡಿಕೊಳ್ಳುತ್ತಿದ್ದರು. ಸೀತಾ ರಾಮ ಲಕ್ಷಣ ರು ಇವರ್ಯಾರನ್ನೂ ಗಮನಿಸದೆ ತಮ್ಮ ಕಾರ್ಯವನ್ನು ಮುಗಿಸಿಕೊಂಡು ದಡಕ್ಕೆ ಬಂದರು. ರಾಮನು ಗುಹನನ್ನು ಕರೆದು, "ಅಯ್ಯಾ, ಗುಹಾ! ನೀನು ಬಂದು ತುಂಬಾ ಸಮಯವಾಯಿತು. ಇನ್ನು ಹೆಚ್ಚು ಸಮಯ ನಮ್ಮೊಂದಿಗೆ ಕಳೆಯುವುದು ಸರಿಯಲ್ಲ. ನಿನ್ನ ಕರ್ತವ್ಯದಲ್ಲಿ ನೀನು ತೊಡಗುವುದೊಳ್ಳೆಯದು. ನೀನಿನ್ನು ಮನೆಗೆ ಹಿಂತಿರುಗು," ಎಂದನು. ಅದನ್ನು ಕೇಳಿ ಗುಹನು ಸಿಕ್ಕಿದ ಚಿಂತಾಮಣಿಯನ್ನು ದಕ್ಕಿಸಿಕೊಳ್ಳದೆ ಬಿಡುವವರೂ ಉಂಟೆ! ನಾನೆಂಥ ಅಭಾಗ್ಯನೊ ಎಂದು ದುಃಖಿಸಿ, ರಾಮಾಜ್ಞೆಗೆ ಪ್ರತಿ ಹೇಳಲಾರದೆ ಸೀತಾ ರಾಮ ಲಕ್ಷ್ಮಣರಿಗೆ ನಮಸ್ಕರಿಸಿ, ಅವರ ಪಾದ ಧೂಳಿಯನ್ನು ಶಿರಸ್ಸಿನಲ್ಲಿ ಧರಿಸಿ, ಬಿಡಲಾರದೆ ಬಿಟ್ಟು ಹೊರಟನು.

ಅವನು ಹೊರಟ ಸ್ವಲ್ಪ ಹೊತ್ತಿನ ನಂತರ, ರಾಮ ಲಕ್ಷ್ಮಣರು ತಮ್ಮ ಪ್ರಯಾಣ ಮುಂದುವರಿಸಿದರು. ಹಾಗೆ ಹೋಗುತ್ತಿರುವಾಗ, ನಾಗಲೋಕವನ್ನೂ ದೇವಲೋಕ ವನ್ನೂ ಮೀರಿಸುವಂಥ ದೊಡ್ಡ ಪಟ್ಟಣವೊಂದು ಕಾಣಿಸಿತು. ಅದು ಯಾವ ಪಟ್ಟಣವಿರಬಹುದೆಂದು ಯೋಚಿಸುತ್ತಾ ಅದನ್ನು ಸಮೀಪಿಸುತ್ತಿದ್ದಂತೆ ಆ ಪಟ್ಟಣದ ಅಂದವೂ ಅದರ ಸುತ್ತಲೂ ಇದ್ದ ಅತಿ ಸುಂದರವಾದ ವನವೂ ಅವರನ್ನು ಆನಂದದಲ್ಲಿ ಮುಳುಗಿಸಿತು. ಇನ್ನೂ ಹತ್ತಿರ ಬಂದಾಗ, ಅದು ಅಮರಾವತೀ ಪಟ್ಟಣವೆಂದು ತಿಳಿದು ಮತ್ತಷ್ಟು ಆನಂದವಾಯಿತು. ನಿಜವಾಗಿಯೂ ಇಲ್ಲಿ ವಾಸಿಸು ವರು ಸುರರೇ ವಿನಾ ಮಾನವರಲ್ಲ ಎನಿಸಿತು. ಆ ಪಟ್ಟಣವನ್ನು ಎವೆಯಿಕ್ಕದೆ ನೋಡುತ್ತಾ, ಮರದ ನೆರಳಿನಲ್ಲಿ ಕುಳಿತ್ತಿದ್ದ ಸೀತಾ ರಾಮ ಲಕ್ಷ್ಮಣರನ್ನು ಆ ಪಟ್ಟಣ ವಾಸಿಗಳು ವಿಚಿತ್ರವಾಗಿ ನೋಡುತ್ತಾ, "ಇವರ್ಯಾರೋ! ದೇವಲೋಕದಿಂದೇನಾ ದರೂ ಇಳಿದು ಬಂದರೋ!" ಎಂದು ಆಶ್ಚರ್ಯಪಡುತ್ತಾ ಪಟ್ಟಣದೊಳಗೆ ಹೋಗಿ,

ಇಂಥವರು ಬಂದಿರುವುದು ನಮ್ಮ ಪಟ್ಟಣಕ್ಕೆ ಎಷ್ಟೋ ಶೋಭೆ ಎಂದು ಹೇಳಿದರು. ಅದನ್ನು ಕೇಳಿ ಜನರು ಗುಂಪುಗುಂಪಾಗಿ ಬಂದು ನೋಡಿದರು. ಅವರಿಗೆ ಹಾಲು ಕೊಟ್ಟರು, ಹಣ್ಣು ಕೊಟ್ಟರು, ರೆಪ್ಪೆ ಆಡಿಸದೆ ಅವರನ್ನು ನೋಡುತ್ತಾ ನಿಂತರು. ಬಂದವರು ಯಾರೂ ಹಿಂದೆ ಹೋಗಲಾರದೆ, ಹೋಗಲೊಲ್ಲದೆ ನಿಂತು ನೋಡು ತ್ತಲೇ ಇದ್ದರು.

ಅವರಲ್ಲೊಬ್ಬನು ಧೈರ್ಯಮಾಡಿ ಮುಂದೆ ಬಂದು ಸೀತಾ ರಾಮಲಕ್ಷ್ಮಣರನ್ನು ಉದ್ದೇಶಿಸಿ, "ಸ್ವಾಮೀ! ನಿಮ್ಮ ಈ ಶರೀರವನ್ನು ನೋಡಿದರೆ ರಾಜಪುತ್ರರ ಲಕ್ಷಣ ಗಳು ಕಾಣಿಸುತ್ತವೆ. ಆದರೆ, ನೀವು ಸುಕುಮಾರಿಯೊಂದಿಗೆ ಪಾದಚಾರಿಗಳಾಗಿ ಈ ದುರ್ಗಮವಾದ ದಾರಿಯಲ್ಲಿ ಪರ್ವತಗಳನ್ನೂ ನದಿಗಳನ್ನೂ ದಾಟಿ ಕಠಿಣವಾದ ಪ್ರಯಾಣ ಮಾಡುತ್ತಿರುವುದನ್ನು ನೋಡಿದರೆ ನೀವು ಸಾಮಾನ್ಯ ಮಾನವರಿರ ಬಹುದೇನೊ ಎಂದು ಅನುಮಾನಪಡಬೇಕಾಗಿದೆ. ಸಿಂಹಗಳೂ ಹುಲಿಗಳೂ ಮದಗಜಗಳೂ ಸಂಚರಿಸುವ ಈ ಘೋರಾರಣ್ಯದಲ್ಲಿ, ಈ ಸುಂದರ ಸುಕುಮಾ ರಿಯೊಂದಿಗೆ ಹೇಗೆ ಪ್ರಯಾಣಮಾಡುತ್ತಿದ್ದೀರೋ ಅರ್ಥವಾಗುತ್ತಿಲ್ಲ. ನಿಮಗೆ ಬಂಧು-ಮಿತ್ರರು ಯಾರೂ ಇಲ್ಲವೇ? ಹೆತ್ತವರು, ಸಾಕಿ ಸಲಹಿದವರು ಇಲ್ಲದೆ ಹೋದರೇ? ನಿಜವಾಗಿಯೂ ಅವರು ಇದ್ದಿದ್ದರೆ ನಿಮ್ಮನ್ನು ಹೀಗೆ ಬಿಡುತ್ತಿದ್ದರೇ?" ಎಂದು ಹಲವು ವಿಧವಾಗಿ ಪ್ರಶ್ನಿಸಿದರು.

ಒಬ್ಬ ಹೆಂಗಸು ಮುಂದೆ ಬಂದು, "ಓ ರಾಜಕುಮಾರಾ! ನನ್ನದೊಂದು ಬಿನ್ನಹ. ಸ್ತ್ರೀಯಾದ್ದರಿಂದ ಕೇಳಲು ಭಯಪಡುತ್ತಿದ್ದೇನೆ. ನನ್ನ ಅವಿನಯವನ್ನು ಮನ್ನಿಸಿ, ನಾವು ಹಳ್ಳಿಗರಾದ್ದರಿಂದ ನಮಗೆ ನಿಮ್ಮ ಮಾತಿನ ರೀತಿ ತಿಳಿಯದು. ನಿಮ್ಮ ದೇಹವನ್ನು ನೋಡಿದರೆ ಕಾಂತಿಯುಕ್ತವಾಗಿವೆ. ಮರಕತದ ಕಾಂತಿಯನ್ನೂ ಬಂಗಾ ರದ ಕಾಂತಿಯನ್ನೂ ಎರವು ಪಡೆದಂತಿವೆ. ಒಬ್ಬರ ಶರೀರ ಶ್ಯಾಮಲ, ಮತ್ತೊಬ್ಬರ ಶರೀರ ಗೌರವರ್ಣ. ನಿಮ್ಮ ಸೌಂದರ್ಯಕ್ಕೆ ಕೋಟಿ ಮನ್ಮಥರು ನಾಚಿಕೆಪಡಬೇಕು. ಇನ್ನು, ಈ ಸುಮುಖಿ ನಿಮಗೇನಾಗಬೇಕೊ ತಿಳಿಯದು. ಆಕೆಯ ಸೌಂದರ್ಯ ವನ್ನು ನೋಡಿದರೆ ಸಾಕ್ಷಾತ್ ರತಿದೇವಿಯೇ ಹುಟ್ಟಿಬಂದಂತೆ ಕಾಣುತ್ತದೆ. ಆಕೆಯ ಗುಣಗಳನ್ನೂ ವಿನಯ ವಿಧೇಯತೆಯನ್ನೂ ನೋಡಿದರೆ ನಮ್ಮ ಬಗ್ಗೆ ನಮಗೇ ನಾಚಿಕೆಯಾಗುತ್ತಿದೆ. ನೀವು ಯಾರೋ ಏನು ಕಾರಣ ಇಲ್ಲಿಗೆ ಬಂದಿದ್ದೀರೋ ತಿಳಿಸಿ ನಮ್ಮ ಅನುಮಾನವನ್ನು ಪರಿಹರಿಸಿ," ಎಂದು ಪ್ರಾರ್ಥಿಸಿದಳು. ಈ ವಿಧವಾಗಿ ಸ್ತ್ರೀ ಪುರುಷರು ಅತಿ ಕುತೂಹಲದಿಂದ ತಮ್ಮನ್ನು ನೋಡುತ್ತಿರುವುದನ್ನೂ ಹಾಕುತ್ತಿದ್ದ ಪ್ರಶ್ನೆಗಳನ್ನೂ ಕೇಳಿ ರಾಮ ಲಕ್ಷ್ಮಣರು ತಮ್ಮೊಳಗೇ ನಗುತ್ತಿದ್ದರು.

**ಜಾನಕೀ ದೇವಿಯ ಮಾತುಗಳು**: ಆಗ ಜಾನಕೀ ದೇವಿಯು ಸ್ತ್ರೀಯರ ಕಡೆಗೆ ತಿರುಗಿ, "ಅಮ್ಮಾ! ಸಹಜ ಸ್ವಭಾವದ ಹಸಿರು ಮೈಬಣ್ಣವುಳ್ಳವನೇ ಲಕ್ಷ್ಮಣ. ಅವನು ನನ್ನ ಮೈದುನ, ಚಿಕ್ಕವನು. ನೀಲಮೇಘ ಛಾಯೆಯಿಂದ ಲೋಕವನ್ನೇ ಮೋಹಗೊಳಿಸುತ್ತಿರುವ ಕಮಲ ಲೋಚನನಾದ ನೀಳವಾದ ಭುಜ ಹೊಂದಿರುವವನು," ಎಂದು ರಾಮನತ್ತ ತಿರುಗಿ, "ಅವರು ನನ್ನ ಪ್ರಾಣನಾಥ," ಎಂದು ನಾಚಿಕೆಯಿಂದ ತಲೆ ತಗ್ಗಿಸಿದಳು. ಆಗ, ಮತ್ತೊಬ್ಬ ಯುವತಿಯು "ಅಮ್ಮಾ! ನಿಮ್ಮ ಹೆಸರನ್ನೇ ಹೇಳಲಿಲ್ಲವಲ್ಲಾ?" ಎನ್ನಲು, ತನ್ನ ಹೆಸರು ಜಾನಕಿ ಎಂದಳು. ಅಲ್ಲಿ ಸೇರಿದವರೆಲ್ಲರೂ ಒಬ್ಬರ ಮುಖವನ್ನು ಒಬ್ಬರು ನೋಡಿ, "ಅಮ್ಮಾ! ಪಾರ್ವತಿ ಪರಮೇಶ್ವರರಂತೆ ನಿಮ್ಮ ದಾಂಪತ್ಯವು ಅನುಕೂಲವಾಗಿ, ಆಚಂದ್ರಾರ್ಕವಾಗಿ, ಆದಿಶೇಷನು ಭೂಮಿಯನ್ನು ಧರಿಸಿರುವವರೆಗೂ ನೀವು ಸೌಭಾಗ್ಯವತಿಯಾಗಿರಿ," ಎಂದು ಏಕಕಂಠದಿಂದ ಆಶೀರ್ವದಿಸಿದರು.

**ರಾಮನು ಕೊಟ್ಟ ಸಮಾಧಾನ**: ರಾಮನು ಅಲ್ಲಿ ನೆರೆದಿದ್ದ ಗಂಡಸರೊಂದಿಗೆ ಕುಶಲ ಪ್ರಶ್ನೆ ಮಾಡಿ, "ನಾವು ಬಂದಿರುವುದು ವನವಿಹಾರಕ್ಕೆ, ನಮ್ಮ ಪ್ರಯಾಣ ನಮಗೆ ಅತ್ಯಂತ ಆನಂದಮಯವಾಗಿದೆ. ನಮಗೆ ಯಾವ ತರಹ ಕಷ್ಟವೂ ಇಲ್ಲ," ಎಂದು ಹೇಳಿ, ಅಲ್ಲಿಂದ ಹೊರಟು ಅರಣ್ಯ ಪ್ರಯಾಣ ಬೆಳೆಸಿದರು. ನೆರೆದಿದ್ದ ಸ್ತ್ರೀ ಪುರುಷರೂ ಗೃಹಾಭಿಮುಖವಾಗಿ ಹೊರಟರು.

**ಅವರ ದಾರಿಯಲ್ಲಿ ನಡೆದರು**: ಸೀತಾರಾಮ ಲಕ್ಷ್ಮಣರು ಆ ಹಳ್ಳಿಯ ಸ್ತ್ರೀ ಪುರುಷರು ಹಾಕಿದ ಪ್ರಶ್ನೆಗಳನ್ನು ಕುರಿತು ಮಾತನಾಡುತ್ತಾ ಆ ಮುಗ್ಧರ ಪ್ರೇಮಾನುರಾಗಗಳನ್ನು ವರ್ಣಿಸುತ್ತಾ ದಾರಿ ನಡೆದರು. ಸೀತೆಯು ಮಾರ್ಗಾಯಾಸದಿಂದ ಬಳಲಿರುವುದನ್ನು ರಾಮನು ಗಮನಿಸಿ, ಒಂದು ವಟವೃಕ್ಷದ ತಂಪಾದ ನೆರಳಿನಲ್ಲಿ ಕುಳಿತು ವಿಶ್ರಮಿಸಿಕೊಂಡರು. ಆ ವೃಕ್ಷದ ಸಮೀಪದಲ್ಲೇ ತಣ್ಣನೆಯ ಪ್ರವಾಹವು ಹರಿಯುತ್ತಿತ್ತು. ಲಕ್ಷ್ಮಣನು ಹೋಗಿ ಹಣ್ಣುಗಳನ್ನು ಆಯ್ದು ತಂದನು. ಮೂವರೂ ಅವುಗಳನ್ನು ತಿಂದು, ರಾತ್ರಿ ಅಲ್ಲಿಯೇ ವಿಶ್ರಮಿಸಿದರು.

**ಆಶ್ರಮ ಪ್ರವೇಶ**: ಬೆಳಗ್ಗೆ ಎದ್ದು, ಸ್ನಾನ ಸಂಧ್ಯಾದಿಗಳನ್ನು ಮುಗಿಸಿ ಪ್ರಯಾಣ ಮುಂದುವರಿಸಿದರು. ದಟ್ಟವಾದ ಅರಣ್ಯ, ಭಯಂಕರವಾದ ಪರ್ವತಗಳನ್ನು, ಪರ್ವತದಿಂದ ಹರಿದು ಬರುವ ಝರಿಗಳ ಹಲವು ಭಯಂಕರ ಶಬ್ದಗಳಿಂದ ಕೂಡಿದ ಅರಣ್ಯ ಗರ್ಭವನ್ನು ಸೇರಿದರು. ಸ್ವಲ್ಪ ದೂರದಲ್ಲಿ ಹೂ ಗಿಡಗಳಿಂದ ತುಂಬಿದ ಒಂದು ಸುಂದರ ಆಶ್ರಮವು ಕಾಣಿಸಿತು. ಅದರತ್ತ ಅವರು ವೇಗವಾಗಿ ನಡೆದರು. ಅದು ವಾಲ್ಮೀಕಿ ಆಶ್ರಮ. ಒಂದು ಕಡೆ ಎತ್ತರವಾದ ಪರ್ವತ, ಇನ್ನೊಂದು

ಕಡೆ ಕಣಿವೆಯಲ್ಲಿ ಹರಿಯುವ ಪ್ರವಾಹ. ಇವೆರಡರ ಮಧ್ಯೆ ಆ ಸುಂದರವಾದ ಆಶ್ರಮವು ಅತಿ ಶೋಭಾಯಮಾನವಾಗಿತ್ತು. ಮನೋಹರವಾದ ಆ ಆಶ್ರಮವನ್ನು ನೋಡಿ ಸೀತೆಯ ಹೃದಯಕ್ಕೆ ತುಂಬಾ ಹಾಯೆನಿಸಿತು. ಅವರು ಆಶ್ರಮದ ಉದ್ಯಾನವನ್ನು ಪ್ರವೇಶಿಸಿದರೆನ್ನುವ ವಾರ್ತೆಯನ್ನು ಶಿಷ್ಯರಿಂದ ತಿಳಿದ ವಾಲ್ಮೀಕಿಯು ಹೊರ ಬಂದರು. ಸೀತಾ ರಾಮ ಲಕ್ಷ್ಮಣರು ಅವರಿಗೆ ನಮಸ್ಕರಿಸಿದರು. ಋಷಿಯು ಕೂಡ ಪರಿಚಯವಿದ್ದವರಂತೆ ಹತ್ತಿರ ಹೋಗಿ ರಾಮನನ್ನು ಅಪ್ಪಿಕೊಂಡು, ಮೂವರನ್ನೂ ಒಳಗೆ ಆಹ್ವಾನಿಸಿದರು.

**ವಾಲ್ಮೀಕಿ ಹೊಂದಿದ ಆನಂದ**: ಪ್ರಾಣಪ್ರಿಯನಾದ ರಾಮನನ್ನೂ ಲಕ್ಷ್ಮಣನನ್ನೂ ಸೀತೆಯನ್ನೂ ಸುಖಾಸನದ ಮೇಲೆ ಕುಳ್ಳಿರಿಸಿ, ಕಂದಮೂಲ ಫಲಗಳನ್ನಿತ್ತರು. ಸೀತಾ ರಾಮಲಕ್ಷ್ಮಣರು ವಾಲ್ಮೀಕಿ ಮುನಿಯ ಕೋರಿಕೆಯಂತೆ ಅದನ್ನು ತಿಂದು ಸಂತೋಷಿಸಿದರು. ಅವರು ಎದುರಿಗೆ ಕುಳಿತು ತಿನ್ನುತ್ತಿರುವಾಗ ವಾಲ್ಮೀಕಿಯು ಕಣ್ಣುಗಳ ಹಸಿವು ತೀರುವವರೆಗೂ ರಾಮಚಂದ್ರನನ್ನು ನೋಡುತ್ತಾ ಅಂತ್ಯವಿಲ್ಲದಷ್ಟು ಆನಂದ ಹೊಂದಿದರು. ಚಿರಕಾಲದ ವಾಂಛೆಯು ನೆರವೇರಿತೆಂದು ಒಳಗೊಳಗೇ ಪರಮಾನಂದ ಭರಿತರಾದರು. ರಾಮಚಂದ್ರನು ಮುನೀಶ್ವರನನ್ನು ಕುರಿತು ವಿನಯದಿಂದ, "ಮುನೀಂದ್ರಾ! ನೀವು ತ್ರಿಕಾಲ ಜ್ಞಾನಿಗಳು. ನಾನು ಯಾವ ಕಾರಣದಿಂದ ಈ ಅರಣ್ಯವನ್ನು ಪ್ರವೇಶಿಸಿದೆನೆನ್ನುವುದು ನಿಮಗೆ ತಿಳಿದಿದೆಯಾದರೂ ನನ್ನ ಕರ್ತವ್ಯವನ್ನು ನಾನು ನೆರವೇರಿಸುವುದು ನನ್ನ ಧರ್ಮ," ಎಂದು, ಕೈಕೆಯು ತನ್ನನ್ನು ವನಕ್ಕೆ ಕಳಿಸಿದ ವಿಷಯವನ್ನೂ ದಶರಥನು ಅವಳಿಗೆ ಇತ್ತಿದ್ದ ವಾಗ್ದಾನವನ್ನೂ ಭರತನ ರಾಜ್ಯಾಭಿಷೇಕವನ್ನು ಅವಳು ಬಯಸಿದ್ದನ್ನೂ ವಿವರವಾಗಿ ಬಿನ್ನವಿಸಿದನು.

ವಾಲ್ಮೀಕಿಯು ಮುಗುಳ್ನಗುತ್ತ, ತಮ್ಮ ಆನಂದವನ್ನು ವ್ಯಕ್ತಪಡಿಸಿ, "ರಾಮಾ! ಕೈಕೆಯ ಕೋರಿಕೆಗಳು ಹೇಗೆ ನೆರವೇರಿದುವೊ ಹಾಗೆಯೇ, ಇಂದು ನನ್ನ ಕೋರಿಕೆಯೂ ಕೂಡ ನೆರವೇರಿತು. ನನ್ನ ತಪಸ್ಸು ಫಲಿಸಿತು. ಕೈಕೆಗೆ ನನ್ನ ಕೃತಜ್ಞತಾ ಪೂರ್ವಕವಾದ ಆನಂದವನ್ನು ತಿಳಿಸುತ್ತೇನೆ," ಎಂದು ಮಾತು ನಿಲ್ಲಿಸಿ, ಕಣ್ಣುಗಳನ್ನು ಮುಚ್ಚಿಕೊಂಡು, ಉಕ್ಕಿ ಬರುತ್ತಿದ್ದ ಆನಂದವನ್ನು ಅದುಮಿಕೊಳ್ಳುತ್ತಾ ಆನಂದಬಾಷ್ಪಗಳನ್ನು ಸುರಿಸಿದರು. ಅವರನ್ನುದ್ದೇಶಿಸಿ, ರಾಮನು, "ಸ್ವಾಮೀ! ಅರಣ್ಯದಲ್ಲಿ ಯಾವ ಸ್ಥಳದಲ್ಲಿ ನಾವು ನೆಲೆಸಬೇಕೆಂದು ನೀವು ಆಜ್ಞಾಪಿಸುವಿರೊ ಅಲ್ಲಿ ಯಾರಿಗೂ ಬಾಧೆ ಉಂಟುಮಾಡದೆ, ಋಷಿಗಳಿಗೆ ಯಾವ ತೊಂದರೆಯನ್ನೂ ಕೊಡದೆ, ನಾವು ನೆಲೆಸುತ್ತೇವೆ. ನಾವು ನಷ್ಟಕಷ್ಟಗಳಿಗೆ ಗುರಿಯಾಗದಂತಿರಲು ಯೋಗ್ಯವಾದ ಸ್ಥಳವನ್ನು ತಿಳಿಸಿದರೆ ಅಲ್ಲಿ ಒಂದು ಪರ್ಣಶಾಲೆಯನ್ನು ಏರ್ಪಡಿಸಿ ಸ್ವಲ್ಪ ಕಾಲ ಕಳೆಯುತ್ತೇವೆ," ಎಂದು ಬಿನ್ನವಿಸಿದನು.

**ರಾಮ ತತ್ತ್ವ**: ರಾಮನು ನಿರ್ಮಲಾಂತಃಕರಣದಿಂದ ಆಡಿದ ಪ್ರಿಯವಚನಗಳನ್ನು ಕೇಳಿ ಮುನಿಯು, "ಓ ರಾಮಾ! ನೀನು ಹೀಗೇಕೆ ಮಾತನಾಡುತ್ತಿರುವೆ? ನೀನು ವೇದ ಮಾರ್ಗವನ್ನು ಪಾಲಿಸುವವನು, ರಕ್ಷಿಸುವವನು. ಜಾನಕಿಯು ನಿನ್ನ ಮಾಯೆ. ನಿನ್ನ ಇಚ್ಛಾನುಸಾರ ಅವಳು ಜಗತ್ತಿನ ಸೃಷ್ಟಿ ಸ್ಥಿತಿ ಸಂಹಾರಗಳನ್ನು ಮಾಡುತ್ತಿರುವಳು. ಚರಾಚರಗಳಿಗೆ ಆಧಾರಭೂತನೂ ಸಹಸ್ರ ಶಿರಸ್ಸುಗಳುಳ್ಳವನೂ ಆದ ಆದಿಶೇಷನೇ ಲಕ್ಷ್ಮಣನು. ನೀನು ಧರ್ಮ ಸಂಸ್ಥಾಪನೆಗಾಗಿ ದೇವತೆಗಳ ಮನೋಭೀಷ್ಟವನ್ನು ಸಾಧಿಸಲು ನರರೂಪ ಧರಿಸಿದೆ. ನೀನು ರಾಕ್ಷಸ ಹೃದಯಿಗಳನ್ನು ತ್ವರೆಯಲ್ಲೇ ನಾಶಮಾಡುವೆ, ಸಾಧುತ್ವವನ್ನು ಪೋಷಿಸುವೆ. ಓ ರಾಮಾ! ಈ ಲೋಕ ವ್ಯಾಪಾರಗಳಿಗೆ ನೀನು ಸಾಕ್ಷೀಭೂತನು. ಜಗತ್ತು ದೃಶ್ಯವು, ನೀನು ಸಾಕ್ಷಿ. ದೇವತೆಗಳು ಸಹಿತ ನಿನ್ನ ತತ್ತ್ವವನ್ನು ಗುರುತಿಸಲಾರರು. ಇನ್ನು, ಸಾಮಾನ್ಯರು ನಿನ್ನನ್ನು ತಿಳಿಯಬಲ್ಲರೆ? ಯಾರಿಗೆ ನಿನ್ನ ವರಪ್ರಸಾದವಾದ ಜ್ಞಾನವು ಲಭಿಸುವುದೋ ಅವರೇ ನಿನ್ನನ್ನು ತಿಳಿಯಬಲ್ಲರು. ನಿನ್ನನ್ನು ತಿಳಿದವರು ಮಾತ್ರವೇ ನಿನ್ನ ಸಾಮೀಪ್ಯ ಹೊಂದುವರು.

ನಿನಗೆ ವಿಕಾರಗಳಿಲ್ಲ. ದೇವಸಜ್ಜನ ಹಿತಾರ್ಥವಾಗಿ ನೀನು ಮನುಜರೂಪವನ್ನು ಧರಿಸಿ ಸಾಧಾರಣ ಒಬ್ಬ ರಾಜನಂತೆ ಮಾತನಾಡುತ್ತಾ ಚರ್ಯೆಗಳನ್ನು ಮಾಡುತ್ತಾ ಇರುವೆ. ನಿನ್ನ ಚರ್ಯೆಗಳನ್ನು ನೋಡಿ ಮೂರ್ಖರು ಮೋಸ ಹೋಗುತ್ತಿದ್ದಾರೆ. ನೀನು ಹೇಳಿದ ಪ್ರಕಾರ ಸಂಚರಿಸುವೆ. ನಿನ್ನ ಮಾತುಗಳಿಗೂ ಕಾರ್ಯಗಳಿಗೂ ಭೇದವಿಲ್ಲ. ನೀನು ಆಡಿಸಿದಂತೆ ನಾವು ಆಡುವವರೇ ವಿನಾ ನಿನ್ನನ್ನು ಹೀಗೆ ಮಾಡು, ಇಂಥಲ್ಲೇ ಇರು, ಎಂದು ಶಾಸಿಸುವವರು ಯಾರು? ರಾಮಾ! ಮಾತಿನಿಂದ ಮುನಿಗಳನ್ನೂ ಮಾಯೆಯಲ್ಲಿ ಕೆಡವಲು ನೋಡುತ್ತಿರುವೆಯಾ? ಏನು ನಿನ್ನ ಲೀಲೆ! ಏನು ನಿನ್ನ ನಟನೆ! ನೀನು ಕಪಟ ನಾಟಕ ಸೂತ್ರಧಾರಿ. ನಿವಾಸ ಯೋಗ್ಯವಾದ ಸ್ಥಳವನ್ನು ತೋರಿಸೆಂದು, ತಿಳಿಸೆಂದು ನೀನು ನನ್ನನ್ನು ಕೇಳುವುದರಲ್ಲಿರುವ ಅರ್ಥವೇನೋ ತಿಳಿಯದು. ನಾನು ಯಾವ ಸ್ಥಳವನ್ನು ತೋರಿಸಬಲ್ಲೆ? ನೀನಿಲ್ಲದ ಸ್ಥಳ ಯಾವುದಾದರೂ ಇದ್ದರೆ ತಾನೆ ತೋರಿಸುವುದು, ಇದಕ್ಕೆ ಉತ್ತರ ಹೇಳು. ಅಂತಹ ಸ್ಥಳವಿದ್ದರೆ ನಾನು ತಪ್ಪದೆ ತೋರಿಸುವೆನು," ಎಂದು, ರಾಮನನ್ನು ನೋಡುತ್ತಾ, ಆನಂದದಿಂದ ಸ್ತಂಭಿಸಿಹೋದರು.

**ರಾಮನ ನಿವಾಸ ಸ್ಥಾನ**: ರಾಮನು ಮುನೀಶ್ವರನ ಪ್ರಿಯ ವಚನಗಳನ್ನು ಕೇಳಿ ಮುಗುಳ್ನಕ್ಕನು. ಮಹಾಮುನಿಯು ಮಂದಹಾಸದಿಂದ ಪುನಃ ಮೃದು ಮಧುರ ಮಾತುಗಳನ್ನಾಡಲಾರಂಭಿಸಿದರು. "ಓ ರಾಮಾ! ನಿನ್ನ ನಿಜ ವಾಸಸ್ಥಾನವು ಭಕ್ತರ ಹೃದಯ. ನರಾಕಾರಕ್ಕೆ ಉತ್ತಮವಾದ ಸ್ಥಾನವನ್ನು ಹೇಳುತ್ತೇನೆ ಕೇಳು. ಅಲ್ಲಿ

ನೀನು ಸೀತಾ ಲಕ್ಷ್ಮಣರೊಂದಿಗೆ ನಿವಸಿಸಬಹುದು. ಯಾರ ಕಿವಿಗಳು ನಿನ್ನ ದಿವ್ಯ ಚರಿತ್ರೆಯಂಥ ಮಹಾನದಿಯನ್ನು ಪ್ರವೇಶಿಸಲು ಸಮುದ್ರದಂತಿರುವುದೋ ಯಾರ ಕಿವಿಗಳು ನಿರಂತರವೂ ನಿನ್ನ ಕಥೆಯಿಂದ ತುಂಬಿರುವುವೋ ಯಾರ ನಾಲಿಗೆಯು ನಿನ್ನ ನಾಮೋಚ್ಚಾರದಿಂದ ಕದಲುತ್ತಾ, ಕಂಠದಿಂದ ಹೊರಡುವ ನಿನ್ನ ಮೃದುಮಧುರ ನಾಮವನ್ನು ಸವಿಯುತ್ತಿರುವುದೋ ಯಾರ ನೇತ್ರಗಳು ನೀಲಮೇಘದಂಥ ನಿನ್ನ ಸ್ವರೂಪವನ್ನು ನೋಡಲು ಚಾತಕಪಕ್ಷಿಗಳಂತೆ ನಾಲ್ಕು ದಿಕ್ಕುಗಳಲ್ಲೂ ಹುಡುಕುತ್ತಿರುವುವೋ ಅನ್ವೇಷಣೆ ಮಾಡುತ್ತಿರುವವೋ ಅಂಥವರಲ್ಲಿ ನೀವು ಮುವರೂ ಸದಾ ವಾಸ ಮಾಡುತ್ತಿರುವಿರಿ. ರಾಮಾ! ಇನ್ನೂ ವಿವರಿಸಿ ಹೇಳಬೇಕೇನು? ಯಾರು ಅವಗುಣಗಳನ್ನು ಬಿಟ್ಟು ಸುಗುಣವನ್ನು ಗ್ರಹಿಸುವರೊ, ಯಾರು ನಿಜಾಯಿತಿಯ ಮಾರ್ಗದಲ್ಲಿ ಸಂಚರಿಸುವರೊ, ಯಾರು ಲೋಕ ಮರ್ಯಾದೆ ಸಂಪಾದಿಸುವರೊ, ಯಾರು ತ್ರಿಕರಣ ಶುದ್ಧಿಯಿಂದ ಸರ್ವವೂ ನಿನ್ನ ಸೃಷ್ಟಿ ಎಂದು ಭಾವಿಸಿ, ಲೋಕವೇ ನಿನ್ನ ಆಕಾರವೆಂದು ತಿಳಿದು ಆಚರಿಸುವರೊ, ಅಂಥವರ ಹೃದಯವು ನಿನ್ನ ನಿವಾಸ.

**ಚಿತ್ರಕೂಟ**: ಆದರೆ, ಸಮಯಾನುಸಾರವಾಗಿ, ಈಗ ನೀನು ಮಾನವಾಕಾರದಲ್ಲಿ ಮಾತಾಪಿತೃಗಳ ಆಜ್ಞೆಯನ್ನು ನೆರವೇರಿಸಲು ಸಂಕಲ್ಪಿಸಿದ್ದೀಯೆ. ನೀನು ಆ ದೃಷ್ಟಿ ಯಿಂದಲೇ ನನ್ನನ್ನು ಕೇಳಿದೆಯಾದ್ದರಿಂದ, ನಾನೂ ಸಾಮಾನ್ಯ ರೀತಿಯಲ್ಲೇ ಹೇಳುತ್ತೇನೆ. ನೀನು ಚಿತ್ರಕೂಟ ಪರ್ವತದಲ್ಲಿ ವಾಸ ಮಾಡಬಹುದು. ಅಲ್ಲಿ ಎಲ್ಲ ಅನುಕೂಲಗಳೂ ಇವೆ. ಅಷ್ಟೇ ಅಲ್ಲ. ಅದು ಪುಣ್ಯ ಸ್ಥಳ, ಮನೋಹರವಾದ ಪ್ರದೇಶ. ಅಲ್ಲಿ ಸಿಂಹಗಳು ಆನೆಗಳು ಸಹಿತ ನಿರ್ವೈರವಾಗಿ ಸಂಚರಿಸುವುವು. ವೇದಗಳಲ್ಲಿ ಹೇಳಿರುವ ಮಂದಾಕಿನಿ ನದಿಯು ಅಲ್ಲಿ ಪ್ರವಹಿಸುತ್ತಿದೆ. ಅತ್ರಿ ಮೊದಲಾದ ಮಹಾ ಮುನಿಗಳು ಅಲ್ಲಿ ವಾಸಮಾಡುತ್ತಿದ್ದಾರೆ. ನೀನು ಹೋಗಿ ಅವರ ಆಶ್ರಮಗಳನ್ನೂ ಪಾವನ ಮಾಡು. ಆ ಪವಿತ್ರ ಪರ್ವತಕ್ಕೆ, ಪುಣ್ಯ ಪಾವನ ನದೀ ಸರೋವರಗಳಿಗೆ ಸಾರ್ಥಕ ನಾಮ ಬರುವಂತೆ ಮಾಡು," ಎಂದರು. ವಾಲ್ಮೀಕಿ ಮುನಿಯ ಪ್ರಿಯವಚನಗಳನ್ನು ಅಂಗೀಕರಿಸಿ, ಮುನಿಯ ಅನುಮತಿ ಪಡೆದು, ಸೀತಾ ಲಕ್ಷ್ಮಣರೊಂದಿಗೆ ರಾಮನು ಪ್ರಯಾಣ ಮಾಡಿದನು.

ಅತಿ ಶೀಘ್ರದಲ್ಲೇ ಅವರು ಮಂದಾಕಿನಿಯ ದರ್ಶನ ಮಾಡಿದರು. ಮೂವರೂ ಆ ನದಿಯಲ್ಲಿ ಸ್ನಾನಾದಿಗಳನ್ನು ಮಾಡಿ ವೃಕ್ಷಛಾಯೆಯಲ್ಲಿ ವಿಶ್ರಮಿಸಿಕೊಂಡು, ಫಲಗಳನ್ನು ತಿಂದು, ಆ ಮನೋಹರವಾದ ವನದ ನಾಲ್ಕು ಮೂಲೆಗಳಲ್ಲೂ ಸುತ್ತಾಡಿದರು. ರಾಮನು, "ಓ ಲಕ್ಷ್ಮಣಾ! ಈ ಮನೋಹರವಾದ ವನದಲ್ಲಿ ಯಾವ ಸ್ಥಳ ಒಳ್ಳೆಯದು, ಯಾವುದು ಕೆಟ್ಟದ್ದು ಎಂದು ನಿರ್ಣಯಿಸಲಾರದೆ

ಹೋಗಿದ್ದೇನೆ. ಈ ವನದಲ್ಲಿ ನಾವು ಸ್ವಲ್ಪ ಕಾಲ ವಾಸ ಮಾಡಬಹುದು. ನಾವಿರಲು ಸ್ಥಳವೊಂದನ್ನು, ನಿರ್ಣಯಿಸಿ ಒಂದು ಪರ್ಣಶಾಲೆಯನ್ನು ನಿರ್ಮಿಸು," ಎಂದು ಆಜ್ಞಾಪಿಸಿದ ತಕ್ಷಣವೆ ಲಕ್ಷ್ಮಣನು ಸಹಿಸಲಾರದ ಬಾಧೆಯಿಂದ ರಾಮನ ಪಾದಗಳ ಮೇಲೆ ಬಿದ್ದು, "ಅಣ್ಣಾ! ನಾನೇನು ಅಪರಾಧ ಮಾಡಿದೆ?" ಎಂದು ದುಃಖಿಸಿದನು. ರಾಮನು ಆಶ್ಚರ್ಯದಿಂದ, "ತಮ್ಮಾ! ಏನಾಯಿತು? ಏಕಿಷ್ಟು ಚಿಂತೆ? ನನಗೆ ಅರ್ಥವಾಗುತ್ತಿಲ್ಲ, ಕಾರಣ ತಿಳಿಸಿ ನನ್ನನ್ನು ಆನಂದ ಪಡಿಸು," ಎನ್ನುತ್ತಲೇ ಲಕ್ಷ್ಮಣನು,"ಅಣ್ಣಾ ನಾನು ಸರ್ವವಿಧದಲ್ಲೂ ನಿಮಗೆ ಅರ್ಪಿತವಾದವನು, ನನಗೆ ನನ್ನ ಇಷ್ಟಾಯಿಷ್ಟಗಳೆನ್ನುವುವು ಬೇರೆ ಇಲ್ಲ. ನಿನ್ನ ಇಷ್ಟವೇ ನನ್ನ ಇಷ್ಟ! ಹಾಗೆ ನನ್ನ ಹೃದಯವನ್ನು ತಿಳಿದೂ ಕೂಡ, ನನ್ನ ಇಷ್ಟ ಬಂದ ಸ್ಥಳದಲ್ಲಿ ಪರ್ಣಶಾಲೆ ನಿರ್ಮಿಸಲು ಹೇಳಿದ್ದರಿಂದ ನನ್ನ ಹೃದಯ ನೊಂದಿದೆ. ನೀವು ಎಲ್ಲಿ ನಿರ್ಮಿಸಬೇಕೆಂದು ಆಜ್ಞಾಪಿಸುವಿರೋ ಅಲ್ಲಿ ನಿರ್ಮಿಸುತ್ತೇನೆ. ದಯವಿಟ್ಟು ಮತ್ತೊಮ್ಮೆ ಅಂಥ ಮಾತುಗಳನ್ನಾಡದೆ ನನ್ನನ್ನು ಅನುಗ್ರಹಿಸಬೇಕು. ನಾನು ನಿಮ್ಮ ಸೇವಕ. ನಿಮ್ಮ ಸೇವೆಗಾಗಿಯೇ ನಿಮ್ಮನ್ನು ಅನುಸರಿಸುತ್ತಿದ್ದೇನೆ. ನಿಮ್ಮ ಇಷ್ಟಾನುಸಾರ ವಾಗಿ ನನ್ನನ್ನು ಉಪಯೋಗಿಸಿಕೊಳ್ಳಿ. ಆಜ್ಞಾಪಿಸಿ ಕೆಲಸ ಮಾಡಿಸಿಕೊಳ್ಳಿ," ಎಂದು ದೀನನಾಗಿ ಪ್ರಾರ್ಥಿಸಿದನು.

ರಾಮನು ಲಕ್ಷ್ಮಣನನ್ನು ಬಹುವಿಧವಾಗಿ ಸಮಾಧಾನಪಡಿಸಿ, "ಲಕ್ಷ್ಮಣಾ! ಇಷ್ಟು ಸಣ್ಣ ವಿಷಯಕ್ಕೆ ನೀನು ಚಿಂತಿಸುವ ಅಗತ್ಯವಿಲ್ಲ. ನಾನು ಸಾಧಾರಣ ರೀತಿಯಲ್ಲಿ ಹಾಗೆ ಆಜ್ಞಾಪಿಸಿದೆ ಅಷ್ಟೆ. ನಿನ್ನ ಹೃದಯ ನಾನು ತಿಳಿಯದ್ದೇನಲ್ಲ. ಬಾ ನನ್ನ ಹಿಂದೆ. ನಾನೇ ನಿರ್ಣಯಿಸುತ್ತೇನೆ," ಎಂದು ಅವನನ್ನು ಜೊತೆಯಲ್ಲಿಟ್ಟುಕೊಂಡು ಸೀತಾಸಮೇತನಾಗಿ ಹೊರಟನು.

**ಪರ್ಣಶಾಲೆ ನಿರ್ಮಾಣ**: ಹೋಗುತ್ತಾ ಹೋಗುತ್ತಾ ಒಂದು ಸ್ಥಳದಲ್ಲಿ, ಮಂದಾಕಿನೀ ನದಿಯ ಉತ್ತರ ತೀರವನ್ನು ತೋರಿಸಿ, "ನೋಡು, ಆ ತೀರವು ಧನುಸ್ಸಿನ ಆಕಾರದಲ್ಲಿದೆ. ಆ ನದಿಯೇ ಧನುಸ್ಸಿನ ಹುರಿ. ಶಮ, ದಮ, ದಾನ ಮೊದಲಾದುವೇ ಬಾಣಗಳು. ಪಾಪವೇ ಅವುಗಳಿಗೆ ಲಕ್ಷ್ಯ. ಚಿತ್ರಕೂಟ ಪರ್ವತವೇ ನಿಶ್ಚಲವಾಗಿ ನಿಂತ ಮಹಾವೀರ. ಅವನು ಹಿಂದೆ ಸರಿಯುವುದಿಲ್ಲ," ಎಂದು ಹೇಳಿ, ಆ ಸ್ಥಳದಲ್ಲಿ ಪರ್ಣಶಾಲೆಯನ್ನು ನಿರ್ಮಿಸುವಂತೆ ಆಜ್ಞಾಪಿಸಿದನು.

ಲಕ್ಷ್ಮಣನು ರಾಮ ಸೀತೆಯರನ್ನು ಒಂದು ವೃಕ್ಷಛಾಯೆಯಲ್ಲಿ ವಿಶ್ರಮಿಸಿಕೊಳ್ಳುವಂತೆ ಪ್ರಾರ್ಥಿಸಿ, ಕ್ಷಣದಲ್ಲಿ ಪರ್ಣಶಾಲೆಗೆ ಬೇಕಾದ ಕಂಬಗಳು, ಎಲೆ, ಕಟ್ಟುವುದಕ್ಕೆ ನಾರು ಮೊದಲಾದವುಗಳನ್ನು ಶೇಖರಿಸಿದನು. ಮೂವರಿಗೆ ಸಾಕಾಗುವಂಥ ಒಂದು

ಸಣ್ಣ ಪರ್ಣಶಾಲೆಯನ್ನು ನಿರ್ಮಿಸಲು ಗುಂಡಿಗಳನ್ನು ಅಗೆದು, ಕಂಬಗಳನ್ನು ನೆಟ್ಟು, ಕೆಲಸವನ್ನು ಮುಂದುವರಿಸಿದನು. ಸೀತಾರಾಮರು ಚೆನ್ನಾಗಿ ವಿಶ್ರಮಿಸಿಕೊಂಡು ಎದ್ದು ನೋಡಿದಾಗ ಸರ್ವಾಂಗ ಸುಂದರ ನಿವಾಸವೊಂದನ್ನು ಲಕ್ಷ್ಮಣನು ನಿರ್ಮಿಸಿ ರುವುದನ್ನು ನೋಡಿ ಆಶ್ಚರ್ಯಪಟ್ಟು, ತಾನು ಅವನಿಗೆ ಸಹಾಯ ಮಾಡಲಿಲ್ಲವಲ್ಲಾ ಎಂದು ರಾಮನು ವ್ಯಥೆ ಪಟ್ಟು, ಮೇಲೆ ಸೊಪ್ಪು ಹೊದಿಸುತ್ತಿದ್ದ ಲಕ್ಷ್ಮಣನಿಗೆ ಕಟ್ಟಲು ನಾರು ಕೊಡುವುದು ಮುಂತಾದ ಸಹಾಯ ಕಾರ್ಯದಲ್ಲಿ ತೊಡಗಿದನು. ಅದನ್ನು ನೋಡಿ, ಸೀತೆಯೂ ಕೂಡ, ಸೊಪ್ಪಿನ ಕಡ್ಡಿಗಳನ್ನು ಸಣ್ಣ ಸಣ್ಣಗೆ ಮುರಿದು ಜೋಡಿಸಿ ರಾಮನ ಕೈಗೆ ಕೊಡುತ್ತಾ ಅವರಿಗೆ ಸಹಾಯ ಮಾಡಿದಳು. ಸೂರ್ಯಾಸ್ತಮದ ಮೊದಲೇ ಪರ್ಣಶಾಲೆಯು ಪೂರ್ತಿಯಾಯಿತು. ರಾಮನು ಮತ್ತೆ ಮತ್ತೆ ಅದನ್ನು ನೋಡುತ್ತಾ ಲಕ್ಷ್ಮಣನನ್ನು ಶ್ಲಾಘಿಸುತ್ತಾ ಸೀತೆಗೆ ತನ್ನ ತಮ್ಮನ ಭಕ್ತಿ ಶ್ರದ್ಧೆಗಳನ್ನು ನಾನಾ ವಿಧವಾಗಿ ವರ್ಣಿಸಿದನು.

ಸೀತೆಯು ಕೂಡ ತಾನು ಎಂದೂ ಇಷ್ಟು ಸುಂದರವಾದ ನಿವಾಸವನ್ನು ನೋಡಿರ ಲಿಲ್ಲವೆಂದೂ ಇಂಥ ಭವನದಲ್ಲಿ ವಾಸಮಾಡಬೇಕೆಂದು ಎಷ್ಟೋ ದಿನಗಳಿಂದ ತಾನು ಆಸೆಪಡುತ್ತಿದ್ದುದಾಗಿಯೂ ಇಂದು ತನ್ನ ಮನೋವಾಂಛೆಯು ತೀರಿ ತೆಂದೂ ರಾಮನಿಗೆ ಹೇಳುತ್ತಾ ಮೈದುನನ ಶ್ರದ್ಧಾಭಕ್ತಿಗಳನ್ನು ತಾನೂ ಕೊಂಡಾಡಿ ದಳು. ಲಕ್ಷ್ಮಣನು ಕೆಳಗಿಳಿದು, ನಾಲ್ಕು ದಿಕ್ಕುಗಳನ್ನೂ ಚೆನ್ನಾಗಿ ಪರಿಶೀಲಿಸಿ, ಅಣ್ಣನ ಅಪ್ಪಣೆ ಪಡೆದು ಮಂದಾಕಿನೀ ನದಿಗೆ ಸ್ನಾನಕ್ಕೆ ಹೊರಟನು. ಸೀತಾರಾಮರು ಕೂಡ ಮಂದಾಕಿನಿಗೆ ಹೋಗಿ ಸ್ನಾನಾದಿಗಳನ್ನು ಆಚರಿಸಿ, ಪರ್ಣಶಾಲೆಗೆ ಬಂದು, ಲಕ್ಷ್ಮಣನು ತಂದಿದ್ದ ಹಣ್ಣುಗಳನ್ನು ತಿಂದು ಪರ್ಣಶಾಲೆಯಲ್ಲಿ ಸುಖವಾಗಿ ನಿದ್ರಿಸಿ ದರು. ಮಾರನೆಯ ದಿನ, ಶ್ರೀರಾಮನು ಸೀತಾ ಲಕ್ಷ್ಮಣ ಸಮೇತನಾಗಿ ಬಂದು ಚಿತ್ರಕೂಟ ಪರ್ವತದಲ್ಲಿ ವಾಸಮಾಡುತ್ತಿದ್ದಾನೆನ್ನುವುದು ಮುನೀಶ್ವರರಿಗೆ ತಿಳಿ ಯಿತು. ಆಗಿನಿಂದ ಗುಂಪು ಗುಂಪಾಗಿ ಋಷಿಗಳೂ ಮುನಿಗಳೂ ಅವರ ಶಿಷ್ಯರು ಗಳೂ ಬಂದು ಹೋಗುತ್ತಿದ್ದರು. ರಾಮನು ಅವರೊಂದಿಗೆ ಕ್ಷೇಮ ಸಮಾಚಾರ ಗಳನ್ನು ವಿಚಾರಿಸುತ್ತಿದ್ದುದರ ಜೊತೆಗೆ ಅವರ ತೊಂದರೆಗಳೇನು ಎನ್ನುವುದನ್ನೂ ಕೇಳುತ್ತಿದ್ದನು. ತನ್ನ ಸೇವೆಯು ಅವಶ್ಯಕವಾದರೆ, ಯಾವ ಸಮಯದಲ್ಲಾದರೂ ತಮ್ಮನೊಂದಿಗೆ ತಾನು ಸಿದ್ಧವಾಗಿರುವುದಾಗಿ ಋಷಿಗಳಿಗೆ ಆಶ್ವಾಸನೆ ಕೊಡು ತ್ತಿದ್ದನು.

ಬಂದವರು ಯಾವ ಆಶಯವನ್ನೂ ಕೋರದೆ, "ರಾಮಾ! ನಿಮ್ಮ ದರ್ಶನವೇ ನಮ್ಮ ಸರ್ವ ಕಷ್ಟಗಳನ್ನೂ ದೂರ ಮಾಡುವುದು. ನಮಗೆ ಯಾವ ಕಷ್ಟವೂ ಇಲ್ಲ. ನಿಮ್ಮ ಅನುಗ್ರಹವೊಂದಿದ್ದರೆ ಸಾಕು," ಎಂದು, ಆ ಸುಂದರ ಮಂಗಳ ವಿಗ್ರಹಗಳನ್ನು

ನೋಡುತ್ತಾ ಸ್ತಂಭೀಭೂತರಾಗುತ್ತಿದ್ದರು. ರಾಮ ಲಕ್ಷ್ಮಣರು, ಬಂದ ಋಷಿಗಳನ್ನು ಯಥಾವಿಧಿಯಾಗಿ ಆದರಿಸಿ, ಸತ್ಕರಿಸುತ್ತಿದ್ದರು. ರಾಮ ದರ್ಶನವು ಮುನಿಗಳಿಗೆ ತಂಪಾದ ಪಾನೀಯ ಕುಡಿದಂತೆ ಹಿತವಾಗಿರುತ್ತಿತ್ತು. ಅದರಿಂದ ತಮ್ಮ ಹೃದಯದ ತಾಪವನ್ನು ಶಾಂತಪಡಿಸಿಕೊಳ್ಳುತ್ತಿದ್ದರು.

**ಚಿತ್ರಕೂಟದ ಅದೃಷ್ಟ**: ರಾಮನಿಗೆ ಪ್ರೇಮವೇ ಪ್ರಧಾನ. ಅವನು ವನವಾಸಿಗಳೆಲ್ಲರನ್ನೂ ಸಂತೋಷಗೊಳಿಸುತ್ತಿದ್ದನು, ಮೃದುಮಧುರವಾಗಿ ಅವರೆಲ್ಲರೊಂದಿಗೆ ಸಂಭಾಷಿಸಿ ಅವರ ಮನಸ್ಸಿಗೆ ಆಪ್ಯಾಯವನ್ನು ಉಂಟುಮಾಡುತ್ತಿದ್ದನು. ಬಂದ ಮುನಿಗಳಿಗೆ, ಕಿರಾತರಿಗೆ, ತಕ್ಕ ರೀತಿಯಲ್ಲಿ ನೀತಿ ಬೋಧನೆ ಮಾಡಿ ಕಳಿಸುತ್ತಿದ್ದನು. ಅವನ ಬಳಿ ಬಂದು ಹೋಗುತ್ತಿದ್ದವರೆಲ್ಲರೂ ಅವನ ಗುಣಗಳನ್ನು ವರ್ಣಿಸುತ್ತಾ ತಮ್ಮ ತಮ್ಮ ನಿವಾಸಕ್ಕೆ ಹಿಂದಿರುಗುತ್ತಿದ್ದರು. ಸೀತಾರಾಮಲಕ್ಷ್ಮಣರು ವನದಲ್ಲಿ ಬಂದು ವಾಸ ಮಾಡಲು ಮೊದಲು ಮಾಡಿದಂದಿನಿಂದ ವನವು ಮಂಗಳದಾಯಕವಾಯಿತು. ಕಣ್ಣುಗಳಿಗೆ ತಂಪಾಗಿ, ಮನಸ್ಸಿಗೆ ತಂಪಾಗಿ ಭಯಾಂದೋಳನಗಳು ದೂರವಾಗಿ ಮುನಿಗಳ ಹೃದಯದಲ್ಲಿ ಆನಂದ ಅಂಕುರಿಸಿತು. ಕಿರಾತಕರು ಸಹಿತ ನೀತಿವಂತರಾಗಿ ಮಾನವ ಜಾತಿಗೆ ಅರ್ಹರಾದರು.

ಚಿತ್ರಕೂಟ ಪರ್ವತಕ್ಕೆ ಇಂಥ ಅದೃಷ್ಟ ಬಂದುದಕ್ಕೆ ವಿಂಧ್ಯ ಪರ್ವತ ಚಿಂತಿಸಿತು. ವಿಂಧ್ಯ ಪರ್ವತ ಒಂದೇನು, ಎಲ್ಲ ಪರ್ವತಗಳೂ ಅವುಗಳಲ್ಲಿನ ವೃಕ್ಷಗಳೂ ಲತೆಗಳೂ ಬಳ್ಳಿಗಳೂ ಸಹ ತಮಗೆ ಅಂಥ ಪ್ರಾಪ್ತಿಯಿಲ್ಲದಂತಾಯಿತಲ್ಲಾ ಎಂದು ಚಿಂತಿಸಿದುವು. ಕ್ಷಣ ಕ್ಷಣವೂ ಸೀತಾರಾಮರ ಚರಣಾರವಿಂದಗಳನ್ನು ನೋಡುತ್ತಾ ಅವಕ್ಕೆ ತನ್ನ ಮೇಲಿರುವ ವಾತ್ಸಲ್ಯದಿಂದ ಲಕ್ಷ್ಮಣನು ಸರ್ವವನ್ನೂ ಮರೆತು ಸಚ್ಚಿದಾನಂದದಲ್ಲಿ ಮುಳುಗಿ ತೇಲುತ್ತಿದ್ದನು. ಸ್ವಪ್ನದಲ್ಲೂ ಸಹ ಅವನ ತಾಯಿಯಾದ ಸುಮಿತ್ರಾದೇವಿಯಾಗಲೀ ಹೆಂಡತಿಯಾದ ಊರ್ಮಿಳೆಯಾಗಲೀ ಮಿಕ್ಕ ಬಂಧುಮಿತ್ರರಾಗಲೀ ಕಾಣಿಸಲಿಲ್ಲ. ಅವರನ್ನು ಲಕ್ಷ್ಮಣನು ಸ್ಮರಿಸಲಿಲ್ಲ.

ನಿರಂತವೂ ರಾಮಚಂದ್ರನ ಮುಖಾರವಿಂದದ ವೀಕ್ಷಣೆಯನ್ನೇ ಕಣ್ಣಿಗೆ ಹಬ್ಬಮಾಡಿಕೊಂಡು, ಬಂದು ಹೋಗುತ್ತಿದ್ದ ಮುನಿಗಳನ್ನೂ ಮುನಿಪತ್ನಿಯರನ್ನೂ ನೋಡುತ್ತಾ ಕಾಲ ಹೋಗುವುದನ್ನೂ ಗಮನಿಸದೆ, ರಾತ್ರಿ ಹಗಲುಗಳ ವ್ಯತ್ಯಾಸ ಗುರುತಿಸದೆ, ಚಂದ್ರನನ್ನು ನೋಡಿದ ಚಕೋರದಂತೆ ರಾಮನನ್ನು ನೋಡುತ್ತಾ ಸೀತಾ ಚಕೋರಿಯು ಅಂತ್ಯವಿಲ್ಲದ ಆನಂದದಿಂದ ಇರುತ್ತಿದ್ದಳು. ತನ್ನ ಮೈದುನನಾದ ಲಕ್ಷ್ಮಣನು ನಿರ್ಮಿಸಿದ ಆ ಪರ್ಣಶಾಲೆಯು ಅಯೋಧ್ಯೆಯ ಅಂತಃಪುರವನ್ನು, ಮಿಥಿಲೆಯ ರಾಣೀವಾಸ ಭವನವನ್ನೂ ಮರೆಸಿತು. ಅದೇ ಅವಳಿಗೆ ದಿವ್ಯ ಭವನವಾಗಿ

ಆನಂದವಾಯಿತು. ಆಗಾಗ ರಾಮನು ಹೇಳುತ್ತಿದ್ದ ಪುರಾಣ ಕಥೆಗಳನ್ನು, ತಪಸ್ಸಿದ್ಧರ ಮಹತ್ತರವಾದ ಚಿತ್ರ ವಿಚಿತ್ರ ವಿಷಯಗಳನ್ನು ಸೀತಾಲಕ್ಷ್ಮಣರು ಅತ್ಯಂತ ಉತ್ಸಾಹ ದಿಂದ ಕೇಳುತ್ತಿದ್ದರು. ಒಮ್ಮೊಮ್ಮೆ ರಾಮನು ತನ್ನ ತಂದೆತಾಯಿಯರ ಜ್ಞಾಪಕ ಮಾಡಿ ಕೊಂಡು, ಅವರು ತಮ್ಮ ವಿಷಯದಲ್ಲಿ ಎಷ್ಟು ಚಿಂತೆ ಮಾಡುತ್ತಿದ್ದಾರೊ ಎಂದು ಹೇಳಿದಾಗ, ಸೀತೆಗೂ ಅತ್ತೆ ಮಾವನ ನೆನಪಾಗಿ, ಕೌಸಲ್ಯೆಯನ್ನು ನೆನೆದು ಕಣ್ಣೀರು ಹಾಕುತ್ತಿದ್ದಳು.

ರಾಮನನ್ನು ನೋಡಿ ಧೈರ್ಯ ತಂದುಕೊಂಡು, ಪುರುಷ ಸಿಂಹದೊಂದಿಗೆ ಇರುವ ನಾನು ದುಃಖಿಸುವುದಾಗಲೀ ಚಿಂತಿಸುವುದಾಗಲೀ ನ್ಯಾಯವಲ್ಲ ಎಂದು ಕೊಳ್ಳುತ್ತಿದ್ದಳು. ಇದೆಲ್ಲ ರಾಮಲೀಲೆ ಎಂದು ಎಲ್ಲವನ್ನೂ ಮರೆಯಲೆತ್ನಿಸುತ್ತಿದ್ದಳು. ರಾಮಲಕ್ಷ್ಮಣರೊಂದಿಗೆ ಪರ್ಣಶಾಲೆಯಲ್ಲಿ ದೇದೀಪ್ಯಮಾನವಾಗಿ ಕಾಲ ಕಳೆಯು ತ್ತಿದ್ದಳು, ವೈದೇಹಿ. ಕಣ್ಣರೆಪ್ಪೆಗಳಂತೆ ರಾಮ ಲಕ್ಷ್ಮಣರು ಸೀತೆಯನ್ನು ಕಾಪಾಡು ತ್ತಿದರು. ಹೀಗೆ, ಅವರು ಚಿತ್ರಕೂಟ ಪರ್ವತದಲ್ಲಿ ಚಿಂತೆಯಿಲ್ಲದೆ ಸಂತಸದಿಂದ ಕಾಲ ಕಳೆಯುತ್ತಿದರು.

# ೧೬ ಅಂಧಕಾರದಲ್ಲಿ ಅಯೋಧ್ಯೆ

**ಇಬ್ಬರ ರೋದನೆಗಳು**: ಇತ್ತ, ರಾಮನನ್ನು ಕಳಿಸಿಕೊಟ್ಟು ಹಿಂತಿರುಗಿ ಬರುತ್ತಿದ್ದ ನಿಷಾದಾಧಿಪತಿಯು ಗಂಗಾತೀರದ ಮರದ ನೆರಳಿನಲ್ಲಿ ರಥವನ್ನು ನಿಲ್ಲಿಸಿ, ಕುದುರೆ ಗಳನ್ನು ಮರಕ್ಕೆ ಕಟ್ಟಿ ರಥವನ್ನು ಆತುಕೊಂಡು ಬಿಕ್ಕಿ ಬಿಕ್ಕಿ ಅಳುತ್ತಿದ್ದ ಸುಮಂತನನ್ನು ನೋಡಿದನು. ತನ್ನಲ್ಲಿ ಉಕ್ಕುತ್ತಿದ್ದ ದುಃಖವು ಸುಮಂತನನ್ನು ನೋಡಿದ ಕ್ಷಣವೇ ನಿಷಾದಾಧಿಪತಿಯೂ ಉಕ್ಕಿಬಂದ ದುಃಖವನ್ನು ತಡೆಯಲಾರದೆ, "ರಾಮಾ," ಎಂದು ಗಟ್ಟಿಯಾಗಿ ಕೂಗುತ್ತಾ ಓಡಿಹೋಗಿ ಸುಮಂತನನ್ನು ತಬ್ಬಿಕೊಂಡನು. ಬಾಯಿಂದ ಮಾತುಹೊರಡದೆ ಇಬ್ಬರೂ ರೋದಿಸಿದರು. ಬೇರು ತುಂಡಾದ ಮರದಂತೆ ಇಬ್ಬರೂ ಆ ಮರದ ನೆರಳಿನಲ್ಲಿ ನಿಂತು ರಾಮಲಕ್ಷ್ಮಣರನ್ನು ನೆನೆ ಯುತ್ತಾ ಕೈಕೆಯನ್ನು ದೂಷಿಸುತ್ತಿದ್ದರು. ಕುದುರೆಗಳೂ ಸಹ ಹುಲ್ಲು ತಿನ್ನದೆ, ನೀರು ಕುಡಿಯದೆ ಕಣ್ಣೀರು ಸುರಿಸುತ್ತಿದುವು. ಸುಮಂತನೂ ನಿಷಾದಾಧಿಪತಿಯೂ,

"ರಾಮಾ," ಎಂದಾಗಲೆಲ್ಲಾ ಆ ಕುದುರೆಗಳು ತಲೆಯೆತ್ತಿ ನಾಲ್ಕು ದಿಕ್ಕುಗಳನ್ನೂ ನೋಡಿ ರಾಮನ ಆಗಮನವನ್ನು ಕಾಣದೆ ಚಿಂತಿಸುತ್ತಿದ್ದುವು. ಕುದುರೆಗಳ ದುಃಖ ವನ್ನು ನೋಡಿ ಸುಮಂತನು ಇನ್ನಷ್ಟು ಸೊರಗಿ ಹೋಗುತ್ತಿದ್ದನು. ಹೀಗೆ ಕೆಲವು ಗಂಟೆಗಳು ಕಳೆದವು.

ಸ್ವಲ್ಪ ಹೊತ್ತಿನ ಮೇಲೆ ನಿಷಾದಾಧಿಪತಿಯು ಧೈರ್ಯ ತಂದುಕೊಂಡು, "ಓ ಮಂತ್ರೀ! ನೀನು ಮಹಾ ಮೇಧಾವಿ, ಗುಣವಂತ, ಪರಮಾರ್ಥವನ್ನು ಬಲ್ಲವನು. ವಿಧಿಯ ಕಾರ್ಯಗಳು ವಿಪರೀತವಾದುವುಗಳಾಗಿ ಪರಿಣಮಿಸಿದಾಗ ಅವುಗಳನ್ನು ಸಹಿಸಬೇಕಲ್ಲವೆ? ಏಳು, ಅಯೋಧ್ಯೆಗೆ ಹೋಗಿ ರಾಮವಾರ್ತೆಗಾಗಿ ಕಣ್ಣು ಮುಚ್ಚದೆ ಕಾದಿರುವ ಕೌಸಲ್ಯೆ ಸುಮಿತ್ರೆಯರಿಗೆ ಸುದ್ದಿಯನ್ನು ತಿಳಿಸು," ಎಂದು ಬಲವಂತ ವಾಗಿ ಸುಮಂತನನ್ನೆಬ್ಬಿಸಿ ರಥದಲ್ಲಿ ಕೂರಿಸಿ, ಕುದುರೆಗಳನ್ನು ರಥಕ್ಕೆ ಕಟ್ಟಿದನು. ನಿಷಾದಾಧಿಪತಿಯ ಮಾತು ಪರಮಸತ್ಯವೆಂದು ಭಾವಿಸಿ ಸುಮಂತನು ಮೊಂಡು ಧೈರ್ಯದಿಂದ ರಥವನ್ನು ಕದಲಿಸಿದನು. ಏನು ಪ್ರಯತ್ನ ಮಾಡಿದರೂ ರಥವನ್ನು ನಡೆಸಲಾಗಲಿಲ್ಲ. ವಿಯೋಗ ದುಃಖದಿಂದ ಅವನ ಶರೀರವು ಕುಂದಿಹೋಗಿತ್ತು. ತೂರಾಡಿ ಬೀಳುತ್ತಾ ಏಳುತ್ತಾ ರಥವನ್ನು ನಡೆಸಲು ಪ್ರಯತ್ನಿಸಿದನು. ಎಷ್ಟು ತಿವಿದರೂ ಕುದುರೆಗಳು ಹಿಂದಕ್ಕೆ ನೋಡುತ್ತಿದ್ದುವೇ ವಿನಾ ಮುಂದಕ್ಕೆ ಹೆಜ್ಜೆ ಇಡಲಿಲ್ಲ.

**ತನಗೆ ತಾನೇ ಪ್ರಶ್ನೋತ್ತರ**: ಸುಮಂತನು ಪರಿತಪಿಸುತ್ತಾ, "ಛೀ, ಛೀ, ರಾಮನಿಲ್ಲದೀ ಬದುಕು ಬದುಕೇ? ಎಂದಾದರೂ ಈ ಶರೀರ ನಶಿಸುವಂತಹುದೇ. ರೋಗದಿಂದಲೋ ಲೋಕಸಂಬಂಧವಾದ ವಿಷಯದಿಂದಲೋ ನಶಿಸುವುದಕ್ಕಿಂತ ರಾಮವಿಯೋಗದಿಂದ ಪ್ರಾಣ ಬಿಡುವುದು ಎಷ್ಟು ಸಾರ್ಥಕ! ಅದಕ್ಕಿಂತ ಬೇರೆ ಕೀರ್ತಿ ಈ ಸುಮಂತನಿಗೇಕೆ? ಆ ಒಂದು ಕೀರ್ತಿ ಪಡೆದುಕೊಂಡರೆ ಸಾಲದೆ? ಸುಮಂತಾ! ನೀನಷ್ಟು ಅದೃಷ್ಟವಂತನಾಗಿದ್ದರೆ ರಾಮನೊಂದಿಗೆ ಇರುತ್ತಿದ್ದೆ. ಅದೃಷ್ಟ ವಿಲ್ಲದ ಮೇಲೆ ಏನು ಮಾಡಿದರೆ ಏನು ಫಲ," ಎಂದು ತನ್ನನ್ನು ತಾನು ನಿಂದಿಸಿಕೊಳ್ಳುತ್ತಾ, "ನಾನು ಅಯೋಧ್ಯೆಗೆ ಯಾವ ಮುಖ ಇಟ್ಟುಕೊಂಡು ಹೋಗಲಿ. ಅಯೋಧ್ಯಾ ಪುರವಾಸಿಗಳು ರಾಮನು ಎಲ್ಲಿ ಎಂದು ಕೇಳಿದರೆ ಏನು ಹೇಳಲಿ? ರಾಮನನ್ನು ಬಿಟ್ಟು ಹೇಗೆ ಬಂದೆಯೆಂದು ಕೇಳಿದರೆ ಏನು ಹೇಳಲಿ? ರಾಮನನ್ನು ಬಿಟ್ಟು ಹೇಗೆ ಬಂದೆಯೆಂದು ಕೇಳಿದರೆ ಅದಕ್ಕಿಂತ ಅವಮಾನ ಉಂಟೆ? ನನ್ನ ಹೃದಯ ಎಷ್ಟು ಕಲ್ಲಾಗಿದೆ, ಏಕೆ ಇನ್ನೂ ನುಚ್ಚು ನೂರಾಗಿಲ್ಲ?" ಎಂದು ತನ್ನ ಬಗ್ಗೆ ಅಸಹ್ಯಪಡುತ್ತಾ, "ಈಗಲೇ ಅಯೋಧ್ಯೆಯನ್ನು ಪ್ರವೇಶಿಸುವುದು ಸರಿಯಲ್ಲ.

ಕತ್ತಲಾಗಿ ಎಲ್ಲರೂ ನಿದ್ರಿಸುವ ಸಮಯದಲ್ಲಿ ಪ್ರವೇಶಿಸಿದರೆ ನನಗೆ ಗೌರವವೇನೊ," ಎಂದು ಯೋಚಿಸಿದನು.

"ಅಯೋಧ್ಯಾ ಪ್ರಜೆಗಳು ನಿದ್ರಿಸುವರೇ? ಇಲ್ಲ! ರಾಮಚಂದ್ರನ ಬರುವಿಗಾಗಿ ದಾರಿ ನೋಡುತ್ತಿರುವರು. ಯಾವಾಗ ಪ್ರವೇಶಿಸಿದರೂ ನನಗೆ ಅವಮಾನ ತಪ್ಪಿದ್ದಲ್ಲ. ರಾಮಾನುಗ್ರಹವನ್ನು ಹೊಂದಲಾರದ ಈ ದುರದೃಷ್ಟನಿಗೆ ಈ ವಿಧವಾದ ಪರಾಭವ ಸರಿಯಾದದ್ದೇ! ಅದನ್ನು ನಾನು ಅನುಭವಿಸುವುದೂ ಒಳ್ಳೆಯದೇ!" ಎಂದು ತನ್ನಲ್ಲೇ ತಾನು ಪ್ರಶ್ನೆಹಾಕಿಕೊಳ್ಳುತ್ತಾ ಉತ್ತರ ಹೇಳಿಕೊಳ್ಳುತ್ತಾ ಮೆಲ್ಲಮೆಲ್ಲಗೆ ಮುಂದೆ ಸಾಗಿ ತಮಸಾನದಿಯ ತೀರವನ್ನು ತಲುಪಿದನು. ಹಗಲು ಕಳೆದ ಮೇಲೆ ಎಲ್ಲರೂ ನಿದ್ರಿಸಬಹುದು, ಆಗ ನಗರವನ್ನು ಪ್ರವೇಶಿಸಬಹುದು ಎಂದುಕೊಂಡು ನದೀ ತೀರದಲ್ಲಿ ಕುದುರೆಗಳನ್ನು ಬಿಚ್ಚಿ, ಒಂದು ಮರಕ್ಕೆ ಕಟ್ಟಿ ಹಾಕಿ, ಅಲ್ಲೇ ಸ್ವಲ್ಪ ಕಾಲ ಕಳೆದು, ಅಲ್ಲಿಂದ ಹೊರಟು ನಗರವನ್ನು ಪ್ರವೇಶಿಸಿದನು. ರಾಜಬೀದಿಯಲ್ಲಿ ಯಾರಿಗೂ ತಿಳಿಯದಂತೆ ಹೋಗಬೇಕೆಂದು ಬಹು ನಿಧಾನವಾಗಿ ಶಬ್ದವಾಗದಂತೆ ಕುದುರೆಗಳನ್ನು ನಡೆಸಿದನು.

**ಮೂಕ ಮಂತ್ರಿ**: ಆದರೆ ರಾಜಬೀದಿಯನ್ನು ಪ್ರವೇಶಿಸಿಸುತ್ತಲೇ ಕುದುರೆಗಳು ತಡೆಯಲಾರದ ದುಃಖದಿಂದ ಸಂಕಟಪಡುತ್ತಾ ಗಟ್ಟಿಯಾಗಿ ಕೆನೆಯಲಾರಂಭಿಸಿದುವು. ರಾಮನ ವಾರ್ತೆಗಾಗಿ ಕಣ್ಣುಗಳನ್ನು ತೆರೆದುಕೊಂಡು ಕಾದಿದ್ದ ಪ್ರಜೆಗಳು ಸುಮಂತನ ರಥವನ್ನು ನೋಡಿ, ಎದ್ದು ಬಂದು ರಸ್ತೆಯ ಇಕ್ಕೆಲಗಳಲ್ಲೂ ಗುಂಪುಗೂಡಿದರು. ಅವರನ್ನು ನೋಡಿದೊಡನೆಯೇ ಸುಮಂತನು ತಲೆತಗ್ಗಿಸಿದನು. ಪ್ರಜೆಗಳು ಅದನ್ನು ನೋಡಿ ರಾಮನು ತಿರುಗಿಬರಲಿಲ್ಲವೆಂದು ಅರ್ಥಮಾಡಿಕೊಂಡು ನಿಲ್ಲಲಾರದೆ ಕುಸಿದು ಹೋದರು. ಕೆಲವರು ಗೊಳೋ ಎಂದು ಅತ್ತರು. ದಾರಿ ಕಾಯುತ್ತಿದ್ದ ರಾಣೀವಾಸದ ಸ್ತ್ರೀಯರು ಕುದುರೆಗಳ ಕಾಲು ಸಪ್ಪಳ ಕೇಳಿದೊಡನೆಯೇ ದಾಸಿಯರನ್ನು ಕಳಿಸಿದರು. ಅವರು ಗುಂಪು ಗುಂಪಾಗಿ ಬಂದು ಮಂತ್ರಿಯನ್ನು ಪ್ರಶ್ನಿಸಿದರು. ಮಂತ್ರಿಯು ಕಣ್ಣೀರು ಸುರಿಸುತ್ತಾ ಮೂಕನಂತೆ ಮಾತು ಹೊರಡದೆ ಸಂಕಟಪಟ್ಟನು. ಕಿವಿ ಕೇಳಿಸದವನಂತೆ ಯಾವುದಕ್ಕೂ ಉತ್ತರ ಕೊಡದೆ ಸ್ತಂಭಿಸಿದನು. "ಮಹಾರಾಜನೆಲ್ಲಿ?" ಎಂದಷ್ಟೆ, ಬಂದವರನ್ನು ಪ್ರಶ್ನಿಸುತ್ತಿದ್ದನು. ಮಂತ್ರಿಯ ಸ್ಥಿತಿಯನ್ನು ಗಮನಿಸಿದ ದಾಸಿಯರು, ರಾಮನು ಬರಲಿಲ್ಲವೆಂದು ಗಮನಿಸಿ, "ಸೀತಾದೇವಿಯನ್ನು ಕಾರಡವಿಯಲ್ಲಿ ಬಿಟ್ಟು ಬಂದಿರಾ ಮಂತ್ರಿ?" ಎಂದು ಗೊಳ್ಳನೆ ಅಳಲಾರಂಭಿಸಿದರು.

ಒಬ್ಬಳು ದಾಸಿಯು ಧೈರ್ಯ ತಂದುಕೊಂಡು, ಮಂತ್ರಿಯನ್ನು ನೇರವಾಗಿ ಕೌಸಲ್ಯಾ ಮಂದಿರಕ್ಕೆ ಕರೆದು ತನ್ನಿ ಎಂದು ಕೌಸಲ್ಯಾ ದೇವಿಯ ಆಜ್ಞೆಯಾಗಿದೆ ಎಂದು ಹೇಳಿದಳು. ವಿಧಿಯಿಲ್ಲದೆ ಮಂತ್ರಿಯು ಕೌಸಲ್ಯಾ ಮಂದಿರದ ಕಡೆಗೆ ಹೊರಟನು. ಕಳಾಹೀನನಾದ ಚಂದ್ರನಂತೆ ಆ ಮಂದಿರದಲ್ಲಿ ಮಲಗಿದ್ದ ರಾಜನನ್ನು ಸಮೀಪಿಸಿ, ಒತ್ತಿ ಬರುತ್ತಿದ್ದ ದುಃಖವನ್ನು ತಡೆದುಕೊಳ್ಳುತ್ತಾ ಅದುರುವ ತುಟಿಗಳಿಂದ, "ಜಯ, ಜಯ," ಎಂದು ನಮಸ್ಕರಿಸಿದನು.

**ನನ್ನ ರಾಮನೆಲ್ಲಿ?**: ಅದನ್ನು ಕೇಳಿ ರಾಜನು ತಟ್ಟನೆ ಎದ್ದು ಕುಳಿತು, "ಸುಮಂತಾ ನನ್ನ ರಾಮನೆಲ್ಲಿ?" ಎಂದು ಕೇಳಿದನು. ಸುಮಂತನು ರಾಜನನ್ನು ಅಪ್ಪಿಕೊಂಡನು. ರಾಜನು ನೀರಿನಲ್ಲಿ ಮುಳುಗುತ್ತಿರುವವನು ಹುಲ್ಲು ಕಡ್ಡಿಯನ್ನು ಹಿಡಿದುಕೊಂಡಂತೆ ಮಂತ್ರಿಯನ್ನು ಹಿಡಿದುಕೊಂಡನು. ಇಬ್ಬರೂ ಮಹಾ ವಿಷಾದದಿಂದ ಅಳುತ್ತಿರುವುದನ್ನು ನೋಡಿ ಕೌಸಲ್ಯೆಯ ದುಃಖ ಹೇಳತೀರದಾಯಿತು. ಉಸಿರೆಳೆಯಲೂ ಶಕ್ತಿ ಇಲ್ಲದೆ, ಕದಲಲಾರದೆ, ಎದೆ ಎದೆ ಬಡಿದುಕೊಳ್ಳುತ್ತಿದ್ದ ಕೌಸಲ್ಯೆಯನ್ನು ದಾಸಿಯರು ಬಹು ವಿಧವಾಗಿ ಸಮಾಧಾನಪಡಿಸುತ್ತಾ ತಾವೂ ದುಃಖಿಸುತ್ತಾ ಸೇವೆ ಮಾಡುತ್ತಿದ್ದರು. ನಂತರ, ದಶರಥನು ಸ್ವಲ್ಪ ಧೈರ್ಯ ತಂದುಕೊಂಡು, ಮಂತ್ರಿಯನ್ನು ಹತ್ತಿರ ಕೂರಿಸಿಕೊಂಡು, "ಸುಮಂತಾ! ನನ್ನ ಸೀತಾರಾಮರ ಕ್ಷೇಮವನ್ನು ತಿಳಿಸು. ಲಕ್ಷ್ಮಣನು ಹೇಗಿದ್ದಾನೆ ಹೇಳು. ನನ್ನ ಸೊಸೆ ಸುಕುಮಾರಿ ಸೀತೆಯು ಸೊರಗಿ ಹೋಗಿರಬೇಕು. ಅವರೆಲ್ಲಿದ್ದಾರೆ ಈಗ? ಹೇಳು, ಹೇಳು," ಎಂದು ಅವನ ಭುಜವನ್ನು ಹಿಡಿದು ಅಲ್ಲಾಡಿಸುತ್ತಾ ಪ್ರಶ್ನಿಸಿದನು. ಸುಮಂತನು ರಾಜನನ್ನು ನೋಡಲಾಗದೆ ತಲೆ ತಗ್ಗಿಸಿಕೊಂಡು ನೆಲವನ್ನೇ ನೋಡುತ್ತಾ ಕಣ್ಣೀರು ಸುರಿಸಿದನು. ಅವನು ಮಾತನಾಡದಿರುವುದನ್ನು ನೋಡಿ ದಶರಥನು, "ಓ ರಾಮಾ! ನಿನ್ನಂಥ ಮಗನನ್ನು ಬಿಟ್ಟಿದ್ದರೂ ಪ್ರಾಣಹೋಗದೆ ಇದೆ. ಲೋಕದಲ್ಲಿ ನನ್ನಂಥ ಪಾಪಿ ಮತ್ತೊಬ್ಬನಿಲ್ಲ. ಸುಮಂತಾ! ನನ್ನ ಸೀತಾರಾಮ ಲಕ್ಷ್ಮಣರು ಈಗೆಲ್ಲಿದ್ದಾರೆ? ಈಗಿಂದೀಗಲೇ ನನ್ನನ್ನು ಅವರಿರುವ ಸ್ಥಳಕ್ಕೆ ಕರೆದುಕೊಂಡು ಹೋಗು, ಈ ಒಂದು ಉಪಕಾರವನ್ನು ಮಾಡು. ಈ ಒಂದು ನನ್ನ ಕೋರಿಕೆಯನ್ನು ನೆರವೇರಿಸು. ಅವರನ್ನು ನೋಡದೆ ಇನ್ನೊಂದು ಕ್ಷಣವೂ ನಾನು ಜೀವಿಸಲಾರೆ," ಎಂದು, "ರಾಮಾ, ಶ್ರೀರಾಮಾ, ಒಂದು ಸಾರಿ ನಿನ್ನನ್ನು ನೋಡುತ್ತೇನೆ, ಕಾಣಿಸೆಯಾ?" ಎಂದು ಕೂಗತೊಡಗಿದನು.

**ಮಂತ್ರಿಯ ಬೋಧೆ**: ನಿದ್ರಾಹಾರಗಳನ್ನು ಬಿಟ್ಟು ಮಂದಿರದ ಹೊರಗೆ ನಿಂತಿದ್ದ ದಾಸ ದಾಸಿಯರು ರಾಜನ ಮಾತುಗಳನ್ನು ಕೇಳಿ, ದುಃಖದಿಂದ ಸೊರಗುತ್ತಿದ್ದರು. ರಾಜನ ಅವಸ್ಥೆಯನ್ನು ನೋಡಿ ಸುಮಂತನು, "ರಾಜಾಧಿರಾಜಾ! ನೀವು ಮಹಾ

ಜ್ಞಾನಿಗಳು, ವೀರರು, ದುರಂಧರರು, ದೇವಾಂಶ ಸಂಭೂತರು, ಸಾಧು ಸಮಾಜ ವನ್ನು ಸದಾ ಸೇವಿಸಿದವರು. ಸುಖದುಃಖ, ಸಂಯೋಗ ವಿಯೋಗ ಮೊದಲಾದು ವುಗಳು ಹಗಲು ರಾತ್ರಿಗಳಂತೆ ಒಂದಾದಮೇಲೊಂದು ಬರುವುವು. ಸುಖ ಬಂದಾಗ ಸಂತೋಷಿಸುವುದು, ದುಃಖ ಬಂದಾಗ ಚಿಂತಿಸುವುದು ಮೂರ್ಖರ ಪದ್ಧತಿ. ಆದರೆ, ನಿಮ್ಮಂಥ ಪಂಡಿತರು ಎರಡನ್ನೂ ಸಮವಾಗಿ ನೋಡುತ್ತಾ ನಿಶ್ಚಿಂತರಾಗಿರ ಬೇಕಲ್ಲವೆ? ನೀವು ಎಲ್ಲವನ್ನೂ ಬಲ್ಲವರು. ನಿಮಗೆ ಧೈರ್ಯವಾಗಿರಿ ಎಂದು ಬೋಧಿಸಲು ನಾನು ಅರ್ಹನಲ್ಲ. ಹೇ ಲೋಕೋಪಕಾರೀ! ನನ್ನ ಪ್ರಾರ್ಥನೆಯನ್ನು ಕೇಳಿ, ದುಃಖವನ್ನು ಬಿಟ್ಟು ಏಳಿ, ನಮ್ಮ ಪ್ರಯಾಣದ ವಿವರ ಹೇಳುತ್ತೇನೆ," ಎಂದೊಡನೆ ಮಲಗಿದ್ದ ಕೌಸಲ್ಯೆಯೂ ದಾಸಿಯರ ಸಹಾಯದಿಂದ ಎದ್ದು, ಅವರನ್ನು ಒರಗಿಕೊಂಡು ಕುಳಿತಳು.

**ಪ್ರಯಾಣದ ವಿವರಗಳು**: ಸುಮಂತನು, "ರಾಜಾ, ಮೊದಲ ದಿನ ತಮಸಾ ನದಿಯ ತೀರದಲ್ಲಿ ಉಳಿದುಕೊಂಡೆವು. ಸೀತಾ ರಾಮ ಲಕ್ಷ್ಮಣರು ನದೀ ಸ್ನಾನ ಮಾಡಿ, ಜಲವನ್ನು ಮಾತ್ರ ಕುಡಿದು. ವೃಕ್ಷಛಾಯೆಯಲ್ಲಿ ವಿಶ್ರಮಿಸಿದರು. ಮಾರ ನೆಯ ದಿನ ಗಂಗಾತೀರವನ್ನು ಸೇರಿದೆವು. ಕತ್ತಲಾಗುತ್ತಿತ್ತು. ರಾಮಾಜ್ಞೆಯ ಪ್ರಕಾರ ರಥವನ್ನು ನಿಲ್ಲಿಸಿದೆವು. ಮೂವರೂ ಗಂಗಾಸ್ನಾನ ಮಾಡಿ, ಮರಳ ಮೇಲೆ ವಿಶ್ರಮಿಸಿಕೊಂಡರು. ಬೆಳಗಾಗುತ್ತಲೇ ರಾಮನು, ಆಲದ ಹಾಲನ್ನು ತರುವಂತೆ ಲಕ್ಷ್ಮಣನಿಗೆ ಆಜ್ಞಾಪಿಸಿದನು. ಲಕ್ಷ್ಮಣನು ರಾಮಾಜ್ಞೆಯನ್ನು ನೆರವೇರಿಸಿದನು. ಅವನು ತಂದ ಆಲದ ಹಾಲಿನಿಂದ ರಾಮನು ತಾನೇ ಜಟಾ ಮುಕುಟ ಮಾಡಿ ಕೊಂಡನು. ಅಷ್ಟರಲ್ಲಿ, ರಾಮನ ಸ್ನೇಹಿತ ನಿಷಾದಾಧಿಪತಿ ಗುಹನು ದೋಣಿಯನ್ನು ತೆಗೆದುಕೊಂಡು ಬಂದನು. ಆ ದೋಣಿಯಲ್ಲಿ ಮೊದಲು ಸೀತಾದೇವಿಯನ್ನು ಕೂರಿಸಿ, ನಂತರ ರಾಮನು ಕುಳಿತನು. ನಂತರ ಅವರೊಂದಿಗೆ ಧನುರ್ಬಾಣ ಧಾರಿಯಾಗಿ ಲಕ್ಷ್ಮಣನು ದೋಣಿಯಲ್ಲಿ ಕುಳಿತುಕೊಳ್ಳುವ ಮೊದಲು ನನ್ನ ಹತ್ತಿರ ಬಂದು, 'ನಮ್ಮ ತಂದೆ ತಾಯಿಯರಿಗೆ ನಮ್ಮ ನಮಸ್ಕಾರಗಳನ್ನು ತಿಳಿಸು. ನಮ್ಮನ್ನು ಆಶೀರ್ವದಿಸುವಂತೆ ಪ್ರಾರ್ಥಿಸಿದೆನೆಂದು ಹೇಳು. ಧೈರ್ಯವಾಗಿರುವಂತೆ ಹೇಳು,' ಎಂದನು.

**ರಾಮ ಸಂದೇಶ**: ರಾಮನು, 'ಮಾವನವರಿಗೆ ನನ್ನ ವಂದನೆಗಳನ್ನು ತಿಳಿಸು. ತಂದೆಯವರು ಚಿಂತಿಸದಂತೆ ಹೇಳು,' ಎಂದು ಹೇಳಿದನು. ನನ್ನನ್ನು ಹತ್ತಿರ ಕರೆದು, 'ಮಂತ್ರೀ! ಪುರಜನರನ್ನು, ರಾಜ ಬಂಧುಗಳನ್ನು ಕರೆದು ನನ್ನ ಬಿನ್ನಪವನ್ನು ಹೇಳು. ನನ್ನ ತಂದೆಯು ಸುಖವಾಗಿ ಜೀವಿಸಿರುವಂತೆ ಪ್ರಯತ್ನಿಸುವವನೇ ನನ್ನ ಹಿತಕಾರಿ ಎಂದು ಅವರೆಲ್ಲರಿಗೂ ತಿಳಿಸು. ಭರತನು ಬಂದನಂತರ ಅವನಿಗೆ

ನನ್ನ ಆಶೀರ್ವಾದಗಳನ್ನು ತಿಳಿಸು. ರಾಜ್ಯಾಧಿಪತ್ಯವನ್ನು ವಹಿಸಿಕೊಂಡು, ನೀತಿ ಜಾತಿಗಳನ್ನು ಬಿಡದೆ, ತ್ರಿಕರಣ ಶುದ್ಧಿಯಿಂದ ಪ್ರಜೆಗಳನ್ನು ಪಾಲಿಸುವಂತೆ, ಜನನೀ ಜನಕರನ್ನು ಸೇವಿಸಿ, ನಾನಿಲ್ಲದ ಕೊರತೆಯು ಅವರಿಗೆ ಇರದಂತೆ ನೋಡಿಕೊಂಡು ತಂದೆಯ ಸೇವೆ ಮಾಡುವಂತೆ ಹೇಳು,' ಎಂದು ಹೇಳಿದನು. 'ಅವರು ನಮ್ಮ ವಿಯೋಗದ ದುಃಖವನ್ನು ಮರೆತಂತೆ ಇರಬೇಕೆಂದು ನಾನು ಆಶಿಸಿದೆನೆಂದು ಮತ್ತೆ ಮತ್ತೆ ಹೇಳು. ಜಾನಕಿಯು ಮುಗುಳ್ನಗುತ್ತಾ, 'ನಾನು ರಾಮಲಕ್ಷ್ಮಣರೊಂದಿಗೆ ಆನಂದವಾಗಿ ಕಾಲ ಕಳೆಯುತ್ತಿದ್ದೇನೆಂದು ಹೇಳು. ನನ್ನ ಹೃದಯಪೂರ್ವಕ ನಮಸ್ಕಾರಗಳನ್ನು ಅತ್ತೆಮಾವಂದಿರಿಗೂ ಬಂಧುಗಳಿಗೂ ತಿಳಿಸು. ನನಗೆ ಯಾವ ಕೊರತೆಯೂ ಇಲ್ಲದೆ, ಅತ್ಯಂತ ಆನಂದದಿಂದ ವನವಾಸ ಮಾಡುತ್ತಿರುವುದಾಗಿಯೂ ಅತ್ತೆ ಮಾವಂದಿರು ನಮಗಾಗಿ ವೃಥಾ ದುಃಖಿಸದೆ, ಧೈರ್ಯವಾಗಿದ್ದು ನಮ್ಮನ್ನು ಆಶೀರ್ವದಿಸುತ್ತಿರಬೇಕೆಂದು ನಾನು ಮತ್ತೆ ಮತ್ತೆ ಕೋರಿದುದಾಗಿಯೂ ಹೇಳು,' ಎಂದಳು.

ಆ ವೇಳೆಗೆ, ರಾಮನ ಮನೋಭಿಪ್ರಾಯವನ್ನು ಗಮನಿಸಿ, ಅಂಬಿಗನು ಮೆಲ್ಲಗೆ ದೋಣಿಯನ್ನು ನಡೆಸಲಾರಂಭಿಸಿದನು. ಹೀಗೆ ರಾಮನು ಪ್ರಯಾಣ ಮಾಡಿದನು. ನಾನು ಎದೆಯನ್ನು ಕಲ್ಲುಮಾಡಿಕೊಂಡು ಅವರ ಪ್ರಯಾಣವನ್ನು ನೋಡುತ್ತಾ ನದೀ ತೀರದಲ್ಲಿ ನಿಂತಿದ್ದೆನು. ರಾಮಾಜ್ಞೆಯನ್ನು ನೆರವೇರಿಸಲು ನಾನು ಹಿಂದಕ್ಕೆ ಬಂದೆನೇ ವಿನಾ ಇಲ್ಲದಿದ್ದರೆ, ನಾನು ಗಂಗೆಯಲ್ಲಿ ಬಿದ್ದು ಪ್ರಾಣ ಕಳೆದುಕೊಳ್ಳುತ್ತಿದ್ದೆ. ರಾಮನ ಸಂದೇಶವನ್ನು ತಿಳಿಸುವ ಸಲುವಾಗಿ ನಾನು ಬದುಕಬೇಕಾಯಿತು. ರಾಮನಿಲ್ಲದ ಈ ಅಯೋಧ್ಯೆಯು ಘೋರಾರಣ್ಯವಾಗಿ ಕಾಣಿಸುತ್ತಿದೆ," ಎಂದು ಹೇಳಿ ಚಿಂತಾಕ್ರಾಂತನಾದನು. ಸುಮಂತನ ಮಾತುಗಳನ್ನು ಕೇಳುತ್ತಾ ರಾಮನು ಹೇಳಿದ ಮೃದು ಮಧುರ ವಾಕ್ಯಗಳನ್ನು ಸ್ಮರಿಸುತ್ತಾ ರಾಜನು ಮೂರ್ಛಿತನಾದನು.

**ದುಃಖ, ಕೋಲಾಹಲ**: ಕೆಸರಿನಲ್ಲಿ ಬಿದ್ದು ಹೊರ ಬರಲು ಒದ್ದಾಡುವ ಮೀನಿನಂತೆ, ಕುಮಾರರ ವಿಯೋಗ ದುಃಖದಿಂದ ರಾಜನ ಪ್ರಾಣವು ಒದ್ದಾಡಿತು. ಮಹಾರಾಣಿಯರು ಗೊಳೋ ಎಂದು ಅತ್ತರು. ಆ ಮಹಾ ವಿಪತ್ತನ್ನು ಬಣ್ಣಿಸಲು ಸಾಧ್ಯವಿಲ್ಲ. ಅವರ ಗೋಳನ್ನು ನೋಡಿ ದುಃಖವು ಸಹಿತ ದುಃಖಿಸುವಂತಾಯಿತು. ರಾಣಿಯರ ದುಃಖ, ರಾಜರ ದುಃಖ, ದಾಸ ದಾಸಿಯರ ದುಃಖ, ಜನರ ದುಃಖದಿಂದ ಇಡೀ ನಗರದಲ್ಲೆಲ್ಲಾ ಕೋಲಾಹಲ ವ್ಯಾಪಿಸಿತು. ನಿಶಾ ರಾತ್ರಿಯ ವೇಳೆ ಕಾಡಿನಲ್ಲಿ ಸಿಡಿಲು ಬಡಿದಾಗ ಚಡಪಡಿಸುವ ಪಕ್ಷಿಗಳಂತೆ ನಗರವಾಸಿಗಳು ವ್ಯಾಕುಲ ಚಿತ್ತರಾದರು. ನೀರಿನಿಂದ ಹೊರತಂದ ತಾವರೆಯಂತೆ ಕ್ಷಣ ಕ್ಷಣಕ್ಕೆ ಮಹಾರಾಜನ

ದೇಹವು ಬಾಡಲಾರಂಭಿಸಿತು. ಅವನ ಕಂಠದಿಂದ ಮಾತು ಹೊರಡದಾಯಿತು. ನಾಲಗೆ ಒಣಗಿತು. ಸರ್ವೇಂದ್ರಿಯಗಳೂ ಉಡುಗುತ್ತಾ ಬಂದುವು.

ದಶರಥನ ಅವಸ್ಥೆಯನ್ನು ನೋಡಿ ಕೌಸಲ್ಯೆಯು ಸೂರ್ಯ ಕುಲದ ಸೂರ್ಯನು ಮುಳುಗುತ್ತಿದ್ದಾನೆನ್ನುವುದನ್ನು ತಿಳಿದು ಧೈರ್ಯ ತಂದುಕೊಂಡು, ಹತ್ತಿರ ಬಂದು, ಪತಿಯ ಶಿರಸ್ಸನ್ನು ತನ್ನ ತೊಡೆಯ ಮೇಲಿಟ್ಟುಕೊಂಡು, ನಿಧಾನವಾಗಿ ಅವನಿಗೆ ಕೇಳಿಸುವಂತೆ ಹೇಳತೊಡಗಿದಳು. "ನಾಥಾ, ಬೇಗನೆ ಸೀತಾ ರಾಮ ಲಕ್ಷ್ಮಣ ರು ಬಂದು ನಮ್ಮನ್ನು ನೋಡುತ್ತಾರೆ. ನನ್ನ ಮಾತು ಕೇಳಿ, ಧೈರ್ಯದಿಂದಿರಿ," ಎಂದು ದೀನಳಾಗಿ ಪ್ರಾರ್ಥಿಸಿದಳು. ರಾಜನು ಕಣ್ಣುಗಳನ್ನು ತೆರೆದು, ಕೌಸಲ್ಯೆಯನ್ನು ನೋಡಿ, "ಕೌಸಲ್ಯಾ! ನನ್ನ ರಾಮನೆಲ್ಲಿ? ನನಗೆ ತೋರಿಸು. ಇಲ್ಲದಿದ್ದರೆ ನನ್ನನ್ನು ರಾಮನ ಬಳಿ ಕರೆದುಕೊಂಡು ಹೋಗು. ನನ್ನ ಮುದ್ದು ಸೊಸೆ ಈ ಸಮಯದಲ್ಲಿ ನನ್ನ ಬಳಿ ಇಲ್ಲವಲ್ಲಾ! ಲಕ್ಷ್ಮಣನು ಕಾಣಿಸುತ್ತಿಲ್ಲವಲ್ಲಾ, ಅಯ್ಯೋ!" ಎನ್ನುತ್ತಾ ಮತ್ತೆ ತಲೆಯನ್ನು ಹಿಂದಕ್ಕೆ ಹಾಕಿದನು. ಸ್ವಲ್ಪ ಸಮಯದ ನಂತರ ಎಚ್ಚರಗೊಂಡು, ಕುರುಡನೂ ತಪಶ್ಶಾಲಿಯೂ ಆದ ಶ್ರವಣನ ತಂದೆಯು ಹಿಂದೆ ತನಗೆ ಕೊಟ್ಟ ಶಾಪದ ನೆನಪಾಯಿತು. ಎದ್ದು ಕುಳಿತು ಆ ವೃತ್ತಾಂತವನ್ನೆಲ್ಲಾ ಕೌಸಲ್ಯೆಗೆ ಹೇಳಲಾರಂಭಿಸಿದನು.

**ಋಷಿ ಶಾಪ**: "ಕೌಸಲ್ಯಾ! ಒಮ್ಮೆ ಬೇಟೆಗಾಗಿ ನಾನು ಕಾಡಿಗೆ ಹೋಗಿದ್ದೆ. ನನ್ನೊಂದಿಗೆ ಅನೇಕ ಮಂದಿ ಸೈನಿಕರು ಬಂದಿದ್ದರು. ಮೃಗಗಳು ಸಿಕ್ಕದಿದ್ದುದ ರಿಂದ ಬೇಟೆ ಇಲ್ಲದೆ ನಗರಕ್ಕೆ ಪ್ರವೇಶಿಸುವುದಿಲ್ಲವೆಂದು ನಿರ್ಧರಿಸಿ, ಆ ರಾತ್ರಿ ಮತ್ತೆ ವನವನ್ನು ಪ್ರವೇಶಿಸಿದೆವು. ಬೆಳಕು ಹರಿಯುವ ಹೊತ್ತಿಗೆ ನಾವು ಒಂದು ಸರೋವರದ ಬಳಿ ಹೋಗುತ್ತಿದ್ದೆವು. ಪೊದೆಗಳ ಮಧ್ಯೆ ಏನೋ ಚಲಿಸುತ್ತಿರುವುದು ಕಾಣಿಸಿತು, ಶಬ್ದ ಕೇಳಿಸಿತು. ಶಬ್ದವನ್ನು ಆಲೈಸಿ, ಒಂದು ದೊಡ್ಡ ಪ್ರಾಣಿ ಇರಬೇಕು ಎಂದು ಭಾವಿಸಿದೆ. ನಾನು ಶಬ್ದವೇದಿಯಾಗಿದ್ದುದರಿಂದ, ಬಾಣ ಹೂಡಿ ಪ್ರಯೋಗಿ ಸಿದೆ. ಬಾಣವು ಸೊಂಯ್ಯನೆ ಹೋಗಿ, ಚಲಿಸುತ್ತಿದ್ದ ಪ್ರಾಣಿಗೆ ತಗುಲಿತು. 'ಹಾ' ಎಂದು ಕೂಗಿದ ಶಬ್ದ ಕೇಳಿಸಿತು. ನಾನು ತಕ್ಷಣ ಸೇವಕರೊಂದಿಗೆ ಧಾವಿಸಿದೆ. ಅದು ಮೃಗವಾಗಿರದೆ ಒಬ್ಬ ಋಷಿಕುಮಾರನಾಗಿದ್ದನು. ಹತ್ತಿರ ಹೋಗಿ ಕ್ಷಮಿಸಬೇಕೆಂದು ಪ್ರಾರ್ಥಿಸಿದೆ.

ಆ ಋಷಿ ಕುಮಾರನು, 'ಓ ರಾಜಾ! ಶೋಕಿಸಬೇಡ. ನನ್ನ ಅಭೀಷ್ಟವನ್ನು ನೆರವೇರಿಸಿ, ನನ್ನನ್ನು ಹೊಡೆದ ಪಾಪವನ್ನು ಪರಿಹಾರ ಮಾಡಿಕೊ. ನಾನು ಶ್ರವಣನು. ನನ್ನ ತಂದೆ ತಾಯಿಗಳು ಅಂಧರು. ನಾನು ಅವರ ಸೇವೆಯನ್ನು ಮಾಡಿ

ಕೊಂಡಿದ್ದೆ. ಅವರಿಂದ ಸಕಲ ಸುಖಗಳೂ ದೊರೆತವು. ದಿವ್ಯಜ್ಞಾನ ಕೂಡ ಲಭಿಸಿತು. ಅವರು ಬಾಯಾರಿಕೆಯಿಂದ ಬಾಧೆಪಡುತ್ತಿದ್ದಾರೆ. ಅವರಿಗೆ ನೀರು ತೆಗೆದುಕೊಂಡು ಹೋಗಲೆಂದು ನಾನಿಲ್ಲಿಗೆ ಬಂದೆ. ನನ್ನನ್ನು ನೀನು ಮೃಗವೆಂದು ತಿಳಿದು ಹೊಡೆದೆ. ವಿಧಿಯನ್ನು ಯಾರು ಮೀರಬಲ್ಲರು? ನಾನಿನ್ನು ಈ ನೀರನ್ನು ಅವರಿಗೆ ಕೊಡಲಾರೆ. ಆದ್ದರಿಂದ ಈ ನೀರನ್ನು ಬೇಗ ತೆಗೆದುಕೊಂಡು ಹೋಗಿ, ಉತ್ತರ ದಿಕ್ಕಿನಲ್ಲಿ ಒಂದು ಗುಡಿಸಲಿನಲ್ಲಿರುವ ನನ್ನ ತಂದೆ ತಾಯಿಗಳಿಗೆ ಕೊಡು. ಅವರು ನೀರು ಕುಡಿದ ಮೇಲೆ ನನಗಾದ ಪ್ರಮಾದವನ್ನು ಹೇಳು. ನೀರು ಕುಡಿಯುವುದಕ್ಕೆ ಮುಂಚೆ ಹೇಳಬೇಡ,' ಎಂದು ಹೇಳಿ, ಆ ಪಾತ್ರೆಯನ್ನು ನನ್ನ ಕೈಯಲ್ಲಿಟ್ಟು ಪ್ರಾಣವನ್ನು ಬಿಟ್ಟನು.

ಕೌಸಲ್ಯಾ! ಆ ಬಾಲಕನು ತಂದೆ ತಾಯಿಗಳಿಗಾಗಿ ಎಷ್ಟು ಪರಿತಪಿಸಿದನೋ! ಅವನು ತನ್ನ ಪ್ರಾಣ ಹೋಗುತ್ತಿದ್ದರೂ ಲೆಕ್ಕಿಸದೆ, ನನ್ನ ಬಗ್ಗೆ ದುರ್ಭಾಷೆಯಿಡದೆ, ಹೇಳಿದ ಮೃದು ಮಧುರವಾದ ಮಾತುಗಳು ಈಗಲೂ ನನ್ನ ಕಿವಿಯಲ್ಲಿ ಗುಂಯ್ ಗುಟ್ಟುತ್ತಿವೆ, ಪ್ರಾಣವನ್ನು ಬಿಡುವ ಮೊದಲು ಮೂರು ಸಲ 'ಓಂ' ಎಂದು ಸ್ಮರಿಸಿ ಪ್ರಾಣ ಬಿಟ್ಟನು. ಅವನ ಅಭೀಷ್ಟವನ್ನು ನೆರವೇರಿಸಿ ನನ್ನ ಪಾಪವನ್ನು ತೀರಿಸಿಕೊಳ್ಳೋಣವೆಂದು, ಆ ಪಾತ್ರೆಯನ್ನು ಶೀಘ್ರವಾಗಿ ತೆಗೆದುಕೊಂಡು ಹೋಗಿ, ಏನೊಂದು ಮಾತನಾಡದೆ ಅವನ ತಂದೆ ತಾಯಿಗಳಿಗೆ ನೀರನ್ನು ಕೊಟ್ಟೆನು. 'ಅಪ್ಪಾ! ಕುಮಾರಾ! ಏಕಿಷ್ಟು ತಡವಾಯಿತು,' ಎನ್ನುತ್ತಾ ಕೈಗಳನ್ನು ತಡುವುತ್ತಾ ನನ್ನನ್ನು ಹಿಡಿದುಕೊಳ್ಳಲು ಪ್ರಯತ್ನಪಟ್ಟರು. ನಾನು ಹಿಂದೆ ಸರಿದೆ. ಆಗ ಆ ವೃದ್ಧರು, 'ಓ ಕುಮಾರಾ! ಮಾತಾಡುತ್ತಿಲ್ಲ? ನೀನು ಮಾತಾಡದೆ ಹೋದರೆ ನಾವು ನೀರು ಕುಡಿಯುವುದಿಲ್ಲ,' ಎಂದು ನೆಲದ ಮೇಲೆ ಬಿದ್ದರು.

ಶ್ರವಣನ ಕಳೇಬರವನ್ನು ತರುವಂತೆ ನಾನು ಸೈನಿಕರಿಗೆ ಹೇಳಿದೆ. ಅವರು ಕಳೇಬರ ವನ್ನು ಆ ವೇಳೆಗೆ ಅಲ್ಲಿಗೆ ತಂದಿದ್ದರು. ಅದನ್ನು ಆ ವೃದ್ಧರ ಮುಂದಿಟ್ಟು ನಡೆದ ಸಂಗತಿಯನ್ನೆಲ್ಲ ಅವರಿಗೆ ತಿಳಿಸಿದೆ. ಮಗನ ಕಳೇಬರವನ್ನು ಮುಂದಿಟ್ಟುಕೊಂಡು ಅವರು ಬಹುವಾಗಿ ದುಃಖಿಸಿದರು. ಅವರ ಈ ಘೋರ ದುಃಖವನ್ನು ನಾನು ನೋಡಲಾರದೆ ಹೋದೆ. ಆ ತಾಯಿಯು ಧೈರ್ಯ ತಂದುಕೊಂಡು, 'ಓ ರಾಜಾ! ನಮ್ಮ ಕುಮಾರನಿಲ್ಲದೆ ನಾವಿನ್ನು ಜೀವಿಸಿ ಪ್ರಯೋಜನವಿಲ್ಲ. ನಾವು ವೃದ್ಧರು. ನಮ್ಮನ್ನು ಯಾರು ನೋಡಿಕೊಳ್ಳುವರು? ಅವನೊಂದಿಗೆ ನಮ್ಮ ಪ್ರಾಣವನ್ನೂ ತೆಗೆದು ಬಿಡು. ಇಲ್ಲದಿದ್ದರೆ ಕಟ್ಟಿಗೆಯನ್ನು ಸಿದ್ಧಪಡಿಸು, ನಾವೇ ಪ್ರಾಣ ತ್ಯಾಗ ಮಾಡುತ್ತೇವೆ,' ಎಂದು ಹೇಳಿದರು. ಆ ವೃದ್ಧ ದಂಪತಿಗಳ ಆಜ್ಞಾನುಸಾರ ಕ್ಷಣದಲ್ಲಿ ಕಟ್ಟಿಗೆಯನ್ನು ಸಿದ್ಧಪಡಿಸಿದೆ. ಆ ದಂಪತಿಗಳು ತಮ್ಮ ಕುಮಾರನ

ಕಳೆಬರದೊಂದಿಗೆ ಅದರ ಮೇಲೆ ಕುಳಿತುಕೊಂಡು, ಯೋಗಾಗ್ನಿಯಿಂದ ತಮ್ಮ ದೇಹಗಳನ್ನು ದಹಿಸಿಕೊಂಡರು.

ಅವರು ದಹಿಸಿ ಹೋಗುವ ಮೊದಲು ನನಗೊಂದು ಮಾತು ಹೇಳಿದರು. ಅದು ಈಗ ಅಕ್ಷರಶಃ ನಡೆಯುತ್ತಿದೆ. ಆ ಪವಿತ್ರ ಋಷಿ ಶಾಪವು ಇಂದು ಸತ್ಯ ಸ್ವರೂಪವನ್ನು ಧರಿಸುತ್ತಿದೆ," ಎಂದು ಮಾತು ನಿಲ್ಲಿಸಿದನು. ಕೌಸಲ್ಯೆಯು ಅವನನ್ನು ಸಮಾಧಾನಪಡಿಸುತ್ತಾ, "ಸ್ವಾಮೀ, ಆ ಶಾಪ ಏನೆನ್ನುವುದನ್ನು ತಿಳಿಸಿ ನನ್ನ ಕುತೂಹಲವನ್ನು ತೃಪ್ತಿಪಡಿಸಿ," ಎಂದು ಪ್ರಾರ್ಥಿಸಿದಳು. ದಶರಥನು ಸಮಾಧಾನ ತೆಗೆದುಕೊಂಡು, "ಕೌಸಲ್ಯಾ! ಏನೆಂದು ಹೇಳಲಿ? ಆ ವೃದ್ಧ ಮುನಿ ದಂಪತಿಗಳು, 'ಓ ರಾಜಾ! ಈಗ ನಾವು ನಮ್ಮ ಕುಮಾರನ ವಿಯೋಗದಿಂದ ಹೇಗೆ ಪ್ರಾಣ ಬಿಡುತ್ತಿದ್ದೇವೋ ನೀನೂ ಹಾಗೆಯೇ ಪುತ್ರ ವಿಯೋಗದಿಂದ ಪ್ರಾಣ ಬಿಡುವೆ,' ಎಂದು ಹೇಳಿ ಪ್ರಾಣಬಿಟ್ಟರು. ಆಗ ನನಗೆ ಮಕ್ಕಳಿರಲಿಲ್ಲವಾದ್ದರಿಂದ ಋಷಿಯ ಮಾತುಗಳು ಹೇಗೆ ಸತ್ಯವಾಗುವುದು ಎನ್ನುವ ಸಂಶಯ ಒಂದು ಕಡೆ, ಈ ಋಷಿಯ ಮಾತುಗಳು ಸತ್ಯವಾಗುವುದೇ ಆದಲ್ಲಿ, ನನಗೆ ಮಕ್ಕಳಾಗಲೇಬೇಕು, ಮಕ್ಕಳಾದರಲ್ಲವೆ ನನಗೆ ಪುತ್ರ ವಿಯೋಗವಾಗುವುದು! ನನಗೇನು ಸಂಭವಿಸಿದರೂ ಸರಿಯೆ, ಪುತ್ರರು ಹುಟ್ಟಿದರೆ ಸಾಕು ಎನ್ನುವ ಸಂತೋಷ, ಇನ್ನೊಂದು ಕಡೆ.

**ದಶರಥನ ಮರಣ**: ಈ ಮರ್ಮವನ್ನು ನಾನು ಇದುವರೆಗೂ ಹೇಳಲಿಲ್ಲ. ಈಗ ಆ ಪವಿತ್ರ ಋಷಿ ವಚನಗಳು ಪರಮ ಸತ್ಯವೆಂದು ಗ್ರಹಿಸುವಂತಾಯಿತು. ರಾಮ ವಿಯೋಗ ಬಾಧೆಯೇ ನನ್ನ ಅಂತ್ಯ. ನಾನಿನ್ನು ಬದುಕುವುದಿಲ್ಲ. ಶ್ರವಣನ ಕಥೆಯು ಜ್ಞಾಪಕಕ್ಕೆ ಬಂದ ಮೇಲೆ, ಇನ್ನು ನಾನು ಬದುಕುವೆನೆನ್ನುವ ಯಾವ ಧೈರ್ಯವೂ ಇಲ್ಲ," ಎಂದು ಪೂರ್ವ ವೃತ್ತಾಂತವನ್ನು ನೆನೆದು ದುಃಖಿತನಾದನು. "ರಾಮಾ, ರಾಮಾ, ರಾಮಾ" ಎಂದು ಮೂರು ಸಾರಿ ಸ್ಮರಿಸಿ, ದಶರಥನು ಕೌಸಲ್ಯೆಯತ್ತ ವಾಲಿದನು. ಅವನನ್ನು ನೋಡಿ ಕೌಸಲ್ಯೆಯು ಚೀರಿದಳು. ದಾಸ ದಾಸಿಯರ ಗುಂಪು ಸೇರಿತು. ದಶರಥ ಮಹಾರಾಜನು ಕೊನೆಯುಸಿರೆಳೆದುದನ್ನು ನೋಡಿದರು. ಕ್ಷಣದಲ್ಲಿ ಈ ವಾರ್ತೆಯು ನಗರದಲ್ಲೆಲ್ಲಾ ಹರಡಿತು. ಎಲ್ಲರೂ ರಾಜಭವನವನ್ನು ಪ್ರವೇಶಿಸಿದರು. ಬೀದಿಗಳೆಲ್ಲಾ ಕಿಕ್ಕಿರಿದು ತುಂಬಿದುವು. ರೋದನ ಹೆಚ್ಚಿತು. ಆ ಜನರು ಕೈಕೆಯನ್ನು ಸ್ವೇಚ್ಛೆಯಾಗಿ ದೂಷಿಸಿದರು. ಅವಳಿಂದಾಗಿ ರಾಜ್ಯದ ಕಣ್ಣುಗಳೇ ಹೋದುವೆಂದು ವ್ಯಥೆಪಟ್ಟರು.

**ಅರ್ಥವಾಗದ ಆವೇದನೆ**: ಇಷ್ಟರಲ್ಲಿ, ವಸಿಷ್ಠ ಮಹಾಮುನಿಯು ಬಂದರು. ಅವರು ಸಮಯೋಚಿತವಾಗಿ ಉಪಶಾಂತಿಯ ಮಾತುಗಳನ್ನು ಹೇಳಿ, ಕೌಸಲ್ಯಾ,

ಸುಮಿತ್ರೆಯರಿಗೆ ಸಮಾಧಾನ ಹೇಳಿದರು. ಜನನ ಮರಣಗಳು ಪ್ರತಿ ಪ್ರಾಣಿಗೂ ತಪ್ಪಿದ್ದಲ್ಲವೆನ್ನುವುದನ್ನು ಅವರಿಗೆ ಒತ್ತಿ ಹೇಳಿದರು. ಕಳೇಬರಕ್ಕೆ ಅಂತ್ಯ ಕ್ರಿಯೆಗಳನ್ನು ಮಾಡುವ ಪುತ್ರರು ಯಾರೂ ಇಲ್ಲದಿದ್ದುದರಿಂದ, ಬೇರೆ ಯಾರೂ ಆ ಕಾರ್ಯ ವನ್ನು ಮಾಡಲಾಗದ್ದರಿಂದ, ವಸಿಷ್ಠರ ಆಜ್ಞಾನುಸಾರವಾಗಿ ಮಹಾರಾಜನ ದೇಹ ವನ್ನು ತೈಲದಲ್ಲಿ ಮುಳುಗಿಸಿಟ್ಟರು. ವಸಿಷ್ಠರು ಒಬ್ಬ ದೂತನನ್ನು ಕರೆದು, "ಅಯ್ಯಾ! ನೀನು ಶೀಘ್ರವಾಗಿ ಭರತನ ಬಳಿಗೆ ಹೋಗಿ, ರಾಜನು ಸ್ವರ್ಗಸ್ಥನಾದ ವಿಷಯವನ್ನು ಹೇಳದೆ, ನೀವಿಬ್ಬರು ಅಣ್ಣ ತಮ್ಮಂದಿರೂ ಕೂಡಲೇ ಅಯೋಧ್ಯೆಗೆ ಬಿಜಯ ಮಾಡುವಂತೆ ಗುರುಗಳು ಹೇಳಿಕಳಿಸಿದ್ದಾರೆಂದು ಹೇಳು," ಎಂದು ಆಜ್ಞಾಪಿಸಿದರು.

ಮುನಿಯ ಆಜ್ಞೆಯಂತೆ, ಮಂತ್ರಿಗಳ ಅಪ್ಪಣೆ ಪಡೆದು ಆ ದೂತನು ವೇಗವಾಗಿ ರಥವನ್ನು ನಡೆಸಿದನು. ಅಯೋಧ್ಯೆಯಲ್ಲಿ ಅನರ್ಥಗಳು ಪ್ರಾರಂಭವಾಯಿತು. ಮೊದಲು ಭರತನಿಗೆ ದುಃಸ್ವಪ್ನಗಳು ಬೀಳುತ್ತಿದ್ದುವು. ಅವುಗಳನ್ನು ಕಂಡು ಎಚ್ಚರ ಗೊಳ್ಳುತ್ತಿದ್ದನು. ಆ ಹಿಂದಿನ ದಿನ ಭರತನು ರಾತ್ರಿ ಪೂರ್ತಿ ನಿದ್ರಿಸದೆ ಭಯಪಡುತ್ತಾ ಏನೋ ಅನಿಷ್ಟಗಳು ಬರುತ್ತಿವೆಯೆಂದು ಯೋಚಿಸುತ್ತಾ ಕುಳಿತುಬಿಡುತ್ತಿದ್ದನು. ಬೆಳಗಾಗುತ್ತಲೇ ಸ್ನಾನಮಾಡಿ ಅನಿಷ್ಟ ಪರಿಹಾರಾರ್ಥವಾಗಿ ಅನೇಕ ರೀತಿಯ ದಾನಗಳನ್ನು ಕೊಟ್ಟನು, ಪ್ರಾರ್ಥನೆಗಳನ್ನು ಮಾಡಿದನು. ಇಷ್ಟಾದರೂ ತನ್ನಲ್ಲಿ ಯಾವುದೋ ಅರ್ಥವಾಗದ ಆವೇದನೆ ಒಳಗೊಳಗೇ ಕಾಡಿಸುತ್ತಿತ್ತು. ಈ ರೀತಿ ಹದಿನಾಲ್ಕು ದಿನ ಪ್ರತಿದಿನವೂ ದುಃಸ್ವಪ್ನಗಳು ಬಿಡದೆ ಬರುತ್ತಿದ್ದುದರಿಂದ ಅವನ ಧೈರ್ಯವು ಕುಂದಿತು. ಇಷ್ಟರಲ್ಲಿ ಅಯೋಧ್ಯೆಯಿಂದ ಹೊರಟ ರಾಜದೂತನು ಹನ್ನೊಂದನೆಯದಿನ ಕೈಕಯ ರಾಜ್ಯವನ್ನು ಸೇರಿದನು. ಸಿಂಹದ್ವಾರದಲ್ಲಿ ತಾನು ಬಂದಿರುವುದನ್ನು ಭರತನಿಗೆ ಹೇಳಿ ಕಳಿಸಿದನು.

ಭರತನು ಸಮಾಚಾರವನ್ನು ತಿಳಿಯುವ ಆತಂಕದಿಂದ ಅತಿ ಶೀಘ್ರವಾಗಿ ಬಳಿಗೆ ಬರುವಂತೆ ಅವನಿಗೆ ಹೇಳಿಕಳಿಸಿದನು. ದೂತನು ಬಂದು, ಭರತನಿಗೆ ನಮಸ್ಕರಿಸಿ, ಗುರುವಿನ ಆಜ್ಞೆಯ ಪ್ರಕಾರ ಅಯೋಧ್ಯೆಗೆ ಕೂಡಲೆ ಬಿಜಯಿಸಬೇಕೆಂದು ಭರತ ನನ್ನು ಪ್ರಾರ್ಥಿಸಿದನು. ಭರತನು ಹಲವು ಬಗೆಯಾಗಿ ಯೋಗಕ್ಷೇಮವನ್ನು ವಿಚಾರಿ ಸಿದನು. ಮತ್ತೇನೂ ವಿಷಯವಿಲ್ಲವೆಂದು ದೂತನು ಗುರುವಿನ ಆಜ್ಞಾನುಸಾರವಾಗಿ ತಾನು ಬಂದೆನೆಂದೂ ಗುರುಗಳು ಬೇರೆ ಏನನ್ನೂ ತನಗೆ ತಿಳಿಸಲಿಲ್ಲವೆಂದೂ ಬಿನ್ನವಿಸಿದನು. ದೂತರು ರಾಜನೊಂದಿಗೆ ಹೆಚ್ಚಾಗಿ ಮಾತಾಡುವುದಿಲ್ಲ, ರಾಜರೂ ಕೂಡ ದೂತರನ್ನು ಮೇಲಿಂದ ಮೇಲೆ ಪ್ರಶ್ನೆ ಮಾಡುವುದಿಲ್ಲ. ಇದು ದೂತರ ವಿಷಯದಲ್ಲಿ ಆ ದಿನದ ರಾಜರ ಪದ್ಧತಿ.

**ದುಶ್ಶಕುನಗಳು**: ಭರತನು ಸೋದರಮಾವನಿಗೆ ತಿಳಿಸಿ, ಅವನ ಅಪ್ಪಣೆ ಪಡೆದು ಶತ್ರುಘ್ನನೊಂದಿಗೆ ರಥವನ್ನೇರಿ ಅಯೋಧ್ಯೆಗೆ ಹೊರಟನು. ಅವರು ರಥವನ್ನು ವೇಗವಾಗಿ ನಡೆಸುತ್ತಾ ಪರ್ವತಗಳನ್ನೂ, ಕಾಡು ಗುಡ್ಡಗಳನ್ನೂ ಶರವೇಗದಿಂದ ದಾಟುತ್ತಾ ಹೋದರು. ಅವರ ಪ್ರಯಾಣ ಎಷ್ಟು ವೇಗವಾಗಿ ಸಾಗಿತ್ತೋ ಅಷ್ಟೇ ವೇಗವಾಗಿ ಭರತನಲ್ಲಿ ದುಃಖ ಉಕ್ಕಿಬರುತ್ತಿತ್ತು. ಅರ್ಥವಾಗದ ಯಾವುದೋ ವೇದನೆ ಅವನನ್ನು ಹಿಂಡುತ್ತಿತ್ತು. ಏನನ್ನೂ ತಿನ್ನದೇ ನೀರನ್ನು ಕುಡಿಯದೇ ವೇಗವಾಗಿ ಹೋಗಿ ಅಯೋಧ್ಯೆಯನ್ನು ಸೇರಬೇಕೆಂದು ತವಕಿಸುತ್ತಿದ್ದ ಅಣ್ಣನನ್ನು ನೋಡಿ ಶತ್ರುಘ್ನನಿಗೆ ಅಚ್ಚರಿಯಾಯಿತು. ಹೊಟ್ಟೆಗೆ ಏನಾದರೂ ಆಹಾರ ತೆಗೆದುಕೊ ಎಂದು ಒಂದೆರಡು ಬಾರಿ ಹೇಳಿದರೂ ಅಣ್ಣನು ಗಮನಿಸದಿರುವುದನ್ನು ನೋಡಿ ಶತ್ರುಘ್ನನು ಸುಮ್ಮನಾದನು. ಕ್ಷಣ ಕ್ಷಣಕ್ಕೂ ದುಶ್ಶಕುನಗಳು ಕಾಣಿಸಿದವು. ಅಶುಭ ಸ್ಥಾನದಲ್ಲಿ ಕುಳಿತು ಕಾಗೆಗಳೂ ನಾಯಿಗಳೂ ಭಯಂಕರವಾಗಿ ಕೂಗುತ್ತಿದ್ದವು.

**ಅಮಂಗಳ**: ಇಷ್ಟು ಕಾಲವೂ ಏನೊಂದೂ ಯೋಚಿಸದೆ ಧೈರ್ಯವಾಗಿದ್ದ ಶತ್ರುಘ್ನನ ಮನಸ್ಸು ಕೂಡ ಕಲಕಿತು. ಅಯೋಧ್ಯಾ ನಗರದ ಸಿಂಹದ್ವಾರವು ಹಾಳುಬಿದ್ದಂತೆ ಭಯಂಕರವಾಗಿದ್ದುದನ್ನು ನೋಡಿದರು. ಎಂದೋ ಕಟ್ಟಿದ್ದ ಮಾವಿ ನೆಲೆಯ ತೋರಣವು ಒಣಗಿ ಚಟಪಟ ಶಬ್ದ ಮಾಡುತ್ತಾ ತೂಗಾಡುತ್ತಿತ್ತು. ಅದನ್ನು ನೋಡಿ ಅಮಂಗಳಕರವಾದುದೇನೋ ಕಾದಿದೆ ಎನ್ನುವುದು ಅವರಿಗೆ ಮತ್ತಷ್ಟು ದೃಢವಾಯಿತು. ನಿತ್ಯವೂ ಹಚ್ಚಹಸಿರು ತೋರಣದಿಂದ ಶೋಭಿಸುತ್ತಿದ್ದ ನಗರದ ಸಿಂಹದ್ವಾರಕ್ಕೆ ಹಳೆಯ ತೋರಣ ತೆಗೆಯದೆ ಹೊಸದನ್ನು ಕಟ್ಟದಿರುವುದರ ಅಂತರಾರ್ಥವನ್ನು ಸೋದರರಿಬ್ಬರೂ ಗುರುತಿಸಿದರು. ನಗರವನ್ನು ಪ್ರವೇಶಿಸಿ ದೊಡನೆಯೇ ಭರತನಿಗೆ ಹೃದಯಕ್ರಿಯೆಯು ನಿಂತಿತೇನೋ ಎನ್ನುವಷ್ಟು ದಿಗ್ಭ್ರಾಂತಿ ಯಾಯಿತು. ಕುದುರೆಗಳೂ ಆನೆಗಳೂ ಕದಲದೆ, ಕತ್ತು ಕೆಳಗೆ ಹಾಕಿ ಕಣ್ಣೀರು ಸುರಿಸುತ್ತಿದ್ದುವು. ಮಾವುತರೂ ರಾವುತರೂ ಕೆಲಸದವರೂ ದುಃಖದಿಂದ ತಲೆ ತಗ್ಗಿಸಿದರು.

ಭರತ ಶತ್ರುಘ್ನರು ಇನ್ನೂ ಮುಂದೆ ಹೋದಾಗ, ರಾಜ ಬೀದಿಯಲ್ಲಿ ಎಲ್ಲ ಮನೆಗಳ ಬಾಗಿಲುಗಳು ಹಾಕಿದ್ದುದನ್ನು ನೋಡಿದರು. ಇಡೀ ಬೀದಿಯೇ ಧೂಳಿನಿಂದ ತುಂಬಿ ಹೋಗಿತ್ತು. ಪುರಜನರು ರಥವನ್ನು ಕಂಡು ಅಶುಭವಾದಂತೆ ತಲೆ ತಗ್ಗಿಸಿದರು. ಕಣ್ಣೀರು ಹಾಕಿದರು, ವಜ್ರದಂಗಡಿಗಳು ಮತ್ತಿತರ ಅಂಗಡಿಗಳು ಮುಚ್ಚಿದ್ದುವು. ಇದಕ್ಕೆಲ್ಲಾ ಕಾರಣವೇನೆಂದು ಯಾರನ್ನಾದರೂ ಕೇಳುವುದಕ್ಕೆ ಸಹ ಭರತನಿಗೆ ಬಾಯಿಬರದೆ ಸ್ತಂಭಿಸಿಹೋದನು. ನೇರವಾಗಿ ಹೋಗಿ ರಾಜಭವನ ವನ್ನು ಸೇರಿದನು. ಅಲ್ಲಿ, ದ್ವಾರಪಾಲಕರು ಜಯ ಜಯ ಧ್ವನಿ ಮಾಡದೆ ಪತಾಕೆ

ಗಳನ್ನು ಕೆಳಗೆ ಮಾಡಿ ತಲೆ ತಗ್ಗಿಸಿದರು. ಏನೋ ಅಶುಭವು ಸಂಭವಿಸಿರುವುದು ಖಚಿತವೆಂದುಕೊಂಡು ಒಳಹೊಕ್ಕರು. ಕೈಕೆಯು ತನ್ನ ಕುಮಾರನ ಆಗಮನವನ್ನು ಕಂಡು ಆನಂದದಿಂದ ಅವನನ್ನು ಎದುರುಗೊಂಡಳು. ಆದರೆ, ಅವಳೊಂದಿಗಿದ್ದ ದಾಸದಾಸಿಯರು ದುಃಖಪೀಡಿತರಾಗಿದ್ದರು. ಅವರ ಮುಖಗಳನ್ನು ನೋಡಿ ಭರತನು ಚಿಂತೆಯಿಂದ ಏನನ್ನೂ ಹೇಳದೆ ಮಂಕು ಹಿಡಿದವನಂತೆ ನಿಂತು ಬಿಟ್ಟನು.

**ದಾಸಿಯರ ರೋದನೆ**: ಕೈಕೆಯು, "ಮಗೂ! ಭರತಾ! ನಿನ್ನ ಸೋದರ ಮಾವ ಮತ್ತಿತರರು ಕ್ಷೇಮವೇ?" ಎಂದು ಕ್ಷೇಮ ಸಮಾಚಾರವನ್ನು ವಿಚಾರಿಸಿದಳು. ಭರತನು ಏನೋ ಉತ್ತರ ಹೇಳಿ, "ಅಪ್ಪಾ, ಅಣ್ಣ, ದೊಡ್ಡಮ್ಮಂದಿರೆಲ್ಲ ಕ್ಷೇಮವೇ?" ಎಂದು ಕೇಳಿದನು. ಕೈಕೆಯು ಉತ್ತರಿಸದೆ ಸುಮ್ಮನಿದ್ದುದನ್ನು ಗಮನಿಸಿದನು. ತಾಯಿಯು ಏನನ್ನೋ ಮರೆಮಾಚುತ್ತಿದ್ದಾಳೆನ್ನುವುದನ್ನು ಗ್ರಹಿಸಿ, "ಅಮ್ಮಾ! ತಂದೆ ಎಲ್ಲಿ," ಎಂದು ಕೇಳುತ್ತಲೇ ದಾಸಿಯರು ಗೊಳ್ಳೆಂದು ಅತ್ತರು. ಇನ್ನು ಮರೆಮಾಚುವುದು ಒಳ್ಳೆಯದಲ್ಲವೆಂದು ಕೈಕೆಯು ತಾನೂ ಕಣ್ಣೀರು ಸುರಿಸುತ್ತಾ ಕಪಟ ದುಃಖವನ್ನು ಪ್ರದರ್ಶಿಸಿದಳು. ಭರತನಿಗೆ ಏನೊಂದೂ ಅರ್ಥವಾಗದೆ ಯಾರಿಗೆ ಏನಾಯಿತೋ ಎನ್ನುವ ಆತಂಕದಿಂದ, ವಿಷಯ ಏನೆಂದು ತಿಳಿಸುವಂತೆ ದೀನನಾಗಿ ತಾಯಿಯನ್ನು ಪ್ರಾರ್ಥಿಸಿದನು.

ಆಗ ಕೈಕೆಯು, "ಮಗೂ, ಏನು ಹೇಳಲಿ? ಮಂಥರೆಯ ಸಹಾಯದಿಂದ ನಾನು ಎಲ್ಲ ಕಾರ್ಯವನ್ನು ಸಾಧಿಸಿದೆ ಎಂದು ಎಷ್ಟೋ ಸಂತೋಷದಿಂದಿದ್ದೆ. ಆದರೆ ಪ್ರಾರಂಭದಲ್ಲೇ ಕೆಲಸವೆಲ್ಲವೂ ಕೆಟ್ಟು ನಾಶವಾಯಿತು. ದೈವವು ಒಂದು ಸಣ್ಣ ಆಟವಾಡಿತು. ನಿನ್ನ ಪ್ರಿಯ ತಂದೆ, ಮಹಾರಾಜ, ಸ್ವರ್ಗಸ್ಥರಾದರು," ಎಂದು ಅತ್ತಳು. ಅದನ್ನು ಕೇಳಿದಾಕ್ಷಣ ಸಿಂಹನಾದ ಕೇಳಿದ ಕಾಡಾನೆಯಂತೆ, ಭರತನು, "ಹಾ ತಂದೇ!" ಎಂದು ನೆಲಕ್ಕುರುಳಿದನು. ಶತ್ರುಘ್ನನು ಸಿಡಿಲು ಬಡಿದ ಮರದಂತೆ ನೆಲದ ಮೇಲೆ ಬಿದ್ದನು. ಅವರ ಗೋಳು ವರ್ಣನಾತೀತವಾಯಿತು.

ಭರತನು ತಲೆ ಚೆಚ್ಚಿಕೊಳ್ಳುತ್ತಾ, "ಅಪ್ಪಾ! ಏನು ನಮ್ಮ ದುರದೃಷ್ಟ! ನಿಮ್ಮ ಪ್ರಾಣ ಪ್ರಯಾಣ ಸಮಯದಲ್ಲೂ, ನಿಮ್ಮ ಬಳಿ ಇರದೆ ಹೋದೆವಲ್ಲಾ! ನಾವೆಂತಹ ಪಾಪಾತ್ಮರು. ಹುಟ್ಟಿದ ನಾಲ್ಕು ಜನ ಮಕ್ಕಳಿಗೂ ಒಂದೇ ಪ್ರಾಪ್ತಿ ಇಲ್ಲವಾಯಿತಲ್ಲಾ! ಅಂತ್ಯ ಸಮಯದಲ್ಲಿ ನಿಮ್ಮ ಬಳಿ ಇದ್ದ ರಾಮ ಲಕ್ಷ್ಮಣರೇ ಧನ್ಯರು. ಎಲ್ಲರಿಗಿಂತ ಅಧಮರು ಈ ಭರತ ಶತ್ರುಘ್ನರು. ಅಯ್ಯೋ! ನಾನೆಂಥ ದುರದೃಷ್ಟವಂತನು. ಅಂತ್ಯ ಸಮಯದಲ್ಲಿ ನಮ್ಮನ್ನು ನೀವೆಷ್ಟು ನೆನೆದರೋ! ನಮಗೇನು ಹೇಳಬೇಕೆಂದಿದ್ದಿರೋ! ನಮಗೆ ಹೇಳಬೇಕೆಂದಿದ್ದ ವಿಷಯಗಳನ್ನು ನಮ್ಮ ಪ್ರಾಣ ಸಮಾನನಾದ ರಾಮನಿಗೆ

ಹೇಳಿರಬೇಕು. ಅವನಲ್ಲಿಗಾದರು ಹೋಗಿ ತಿಳಿದು ಸ್ವಲ್ಪ ಶಾಂತಿ ಪಡೆಯುತ್ತೇವೆ. ತಮ್ಮಾ! ಬಾ, ರಾಮನ ಬಳಿಗೆ ಹೋಗೋಣ," ಎಂದನು. "ಅಮ್ಮಾ! ಅಣ್ಣ ರಾಮನು ಎಲ್ಲಿದ್ದಾನೆ?" ಎಂದು ತಾಯಿಯನ್ನು ಕೇಳಿದನು. "ರಾಮನೇ ಇಲ್ಲಿದ್ದಿದ್ದರೆ ನಿಮ್ಮ ತಂದೆಯು ತೀರಿಕೊಳ್ಳುತ್ತಿದ್ದರೆ? ರಾಮನು ನಗರದಲ್ಲಿಲ್ಲವಪ್ಪಾ!" ಎಂದು ಕೈಕೆಯು ಉತ್ತರವಿತ್ತಳು. ಗಾಯಕ್ಕೆ ವಿಷ ತಗುಲಿದಂತೆ ಭರತನಿಗೆ ಹೊಸದೊಂದು ಚಿಂತೆ ಪ್ರಾರಂಭವಾಯಿತು. "ಅಮ್ಮಾ! ನಮ್ಮ ಪ್ರಾಣ ಸಮಾನನಾದ ರಾಮನು ಇಲ್ಲಿರದೆ ಮತ್ತೆಲ್ಲಿಗೆ ಹೋದನು?" ಎಂದು ಗಾಬರಿಯಿಂದ ಕೇಳಿದನು. ತಕ್ಷಣವೇ ಕೈಕೆಯು "ಎಲ್ಲಿಗೆಂದೆಯಾ? ಅರಣ್ಯಕ್ಕೆ," ಎಂದಳು. "ಅರಣ್ಯಕ್ಕೆ ಹೋದ ರಾಮನು ಇಷ್ಟು ದಿನಗಳಾದರೂ ಬರದಿರಲು ಕಾರಣವೇನು?" ಎಂದು ಮತ್ತೆ ಆತುರದಿಂದ ಕೇಳಿದನು.

**ರಾಮನ ವನವಾಸದ ವಾರ್ತೆ**: ಕೈಕೆಯು, "ಮಗೂ! ಆ ಕಥೆಯನ್ನು ಹೇಳಲು ಈಗ ಸಮಯವಿಲ್ಲ. ಮೊದಲು ನಿನ್ನ ತಂದೆಯ ಅಂತ್ಯಕ್ರಿಯೆಯನ್ನು ನಡೆಸಲು ಏರ್ಪಾಟು ಮಾಡು," ಎಂದುದನ್ನು ಕೇಳಿ, ಭರತನು ತನ್ನ ತಾಯಿ ಏನನ್ನೋ ಮರೆಮಾಚುತ್ತಿದ್ದಾಳೆನ್ನುವುದನ್ನು ಗಮನಿಸಿದನು. "ಅತ್ತಿಗೆ ಸೀತಾದೇವಿ ಎಲ್ಲಿ? ಲಕ್ಷ್ಮಣನೆಲ್ಲಿ? ಎಂದು ಮೇಲಿಂದ ಮೇಲೆ ಪ್ರಶ್ನೆಮಾಡಿದನು. "ಅವರಿಬ್ಬರೂ ರಾಮನೊಂದಿಗೆ ಅರಣ್ಯಕ್ಕೆ ಹೋದರು. ಅವರಿನ್ನೂ ಹದಿನಾಲ್ಕು ವರ್ಷಗಳವರೆಗೂ ನಗರವನ್ನು ಪ್ರವೇಶಿಸುವುದಿಲ್ಲ. ಇದು ನಿಮ್ಮ ತಂದೆಯ ಆಜ್ಞೆ," ಎಂದು ಕೈಕೆಯು ಕಟುವಾಗಿ ನುಡಿದಾಗ, ಭರತನಿಗೆ, ಏನೋ ಘಟನೆ ನಡೆದಿದೆ ಎನ್ನುವುದು ಸ್ಪಷ್ಟವಾಗಿ ಅತ್ಯಂತ ದುಃಖದಿಂದ ನೆಲಕ್ಕೆ ಕುಸಿಯುತ್ತಿದ್ದ ಅವನನ್ನು ಕೈಕೆಯು ಹತ್ತಿರ ಕರೆದುಕೊಂಡು, "ಮಗೂ! ಭರತಾ! ನಿನ್ನ ತಂದೆಯ ಬಗ್ಗೆ ಚಿಂತಿಸುವ ಅಗತ್ಯವಿಲ್ಲ. ಅವರು ಅನೇಕ ಸತ್ಕರ್ಮಗಳನ್ನು ಮಾಡಿದರು. ಕೀರ್ತಿ ಪ್ರತಿಷ್ಠೆಗಳಿಸಿದರು. ಸುಖವಾಗಿ ಜೀವಿಸಿದರು. ಕೊನೆಗೆ ಸ್ವರ್ಗ ಸೇರಿದರು. ತಂದೆಯಂತೆ ನೀನೂ ಕೀರ್ತಿಗಳಿಸಿ, ಸತ್ಕರ್ಮಗಳನ್ನು ಮಾಡಿ, ಸುಖವಾಗಿ ರಾಜ್ಯವಾಳು. ಅವರ ಹೆಸರು ಪ್ರತಿಷ್ಠೆಗಳನ್ನು ನಿಲ್ಲಿಸು," ಎಂದು ಮಗನನ್ನು ಸಮಾಧಾನಪಡಿಸಲೆತ್ನಿಸಿದಳು.

**ಕೌಸಲ್ಯೆಯ ವಿಲಾಪ**: ಅವಳ ಮಾತುಗಳು ಭರತನ ಹೃದಯವನ್ನು ಕತ್ತಿಯ ಅಲುಗಿನಂತೆ ತಿವಿದವು, ತಲೆಯನ್ನು ಸುತ್ತಿಗೆಯಂತೆ ಬಡಿದವು. ಕೈಕೆಯ ಮಾತುಗಳಿಂದ ಶತ್ರುಘ್ನನ ಶರೀರವು ತಲ್ಲಣಿಸಿತಾದರೂ ಅವನು ತಾಯಿಯನ್ನೆದುರಿಸಿ ಮಾತನಾಡಿಲಿಲ್ಲ. ನಾಟಕವಾಡುತ್ತಿದ್ದಾಳೆಂದು ಸತ್ಯವನ್ನು ತಿಳಿಯುವುದೊಳ್ಳೆಯದೆಂದು, ದುಃಖಿಸುತ್ತಾ ಶತ್ರುಘ್ನನೊಂದಿಗೆ ಹೊರಟು, ಕೌಸಲ್ಯಾ ಮಂದಿರವನ್ನು ಪ್ರವೇಶಿಸಿದನು. ಕೌಸಲ್ಯೆಯು ಧೂಳು ಹಿಡಿದ ಬಟ್ಟೆಗಳಲ್ಲಿ, ನೆಲದ ಮೇಲೆ ಬಿದ್ದು

ಕೊಂಡು, "ನಾಥಾ! ನಾಥಾ! ರಾಮಾ, ರಾಮಾ!" ಎಂದು ಗೋಳಿಡುತ್ತಿದ್ದಳು. ದಾಸಿಯರೂ ದುಃಖದಿಂದ, ಕಣ್ಣುಗಳನ್ನೊರೆಸುತ್ತಾ ಅವಳ ಸೇವೆ ಮಾಡುತ್ತಿದ್ದರು. ಆ ದೃಶ್ಯವನ್ನು ನೋಡಿ ಭರತನು, "ಅಮ್ಮಾ, ಅಮ್ಮಾ" ಎಂದು ಅವಳ ಪಾದಗಳ ಮೇಲೆ ಬಿದ್ದನು. ಭರತ ಶತ್ರುಘ್ನರನ್ನು ನೋಡಿ ಕೌಸಲ್ಯಾ ಸುಮಿತ್ರೆಯರು ಮತ್ತಷ್ಟು ರೋದಿಸಿದರು. ಮೂರ್ಛೆ ಹೋದರು. ಅವರು ಒಬ್ಬರನ್ನೊಬ್ಬರು ತಬ್ಬಿಕೊಂಡು ಅಳುತ್ತಿದ್ದುದನ್ನು ನೋಡಿದರೆ ಕಠಿಣವಾದ ಕಲ್ಲಾದರೂ ಕರಗುತ್ತಿತ್ತು, ರೋದಿಸಿ, ರೋದಿಸಿ ಎಲ್ಲರೂ ಸೊರಗಿದ್ದರು. ಭರತನು, "ಅಮ್ಮಾ, ನಮ್ಮ ಅಣ್ಣನನ್ನು ತೋರಿಸು, ನಮ್ಮ ತಂದೆಯ ಸಾವಿಗೆ ಕಾರಣ ತಿಳಿಸು. ನನ್ನ ಪ್ರಿಯಸೋದರರು, ರಾಮ ಲಕ್ಷ್ಮಣರು, ಸೀತಾ ಸಮೇತರಾಗಿ ಕಾಡಿಗೇಕೆ ಹೋದರು? ನನಗೇನೂ ಅರ್ಥವಾಗುತ್ತಿಲ್ಲ. ಎಲ್ಲವನ್ನೂ ತಿಳಿಸಿ ನನ್ನ ದುಃಖವನ್ನು ಹೋಗಲಾಡಿಸು," ಎಂದು ಕೌಸಲ್ಯೆಯ ಪಾದಗಳ ಮೇಲೆ ಬಿದ್ದು ರೋದಿಸಿದನು.

ಕೌಸಲ್ಯೆಯು ಭರತನನ್ನು ಅಪ್ಪಿಕೊಂಡು, "ಮಗೂ! ನೀನು ಬಂದಿದ್ದರಿಂದ ನನಗೆ ಸ್ವಲ್ಪ ಶಾಂತಿ ಸಿಕ್ಕಿತು. ನಿನ್ನನ್ನು ನೋಡಿ ನನ್ನ ರಾಮನ ವಿಯೋಗವನ್ನು ಮರೆಯುತ್ತೇನೆ. ನೀನು ನನ್ನ ರಾಮನಿಗೆ ಸಮಾನ, ನನಗೆ ಭೇದವಿಲ್ಲ," ಎಂದಳು. ಮಧ್ಯೆ, "ಹಾ ರಾಮಾ! ಇನ್ನು ಹದಿನಾಲ್ಕು ವರ್ಷ ನಿನ್ನನ್ನು ನೋಡದೆ ನಾನು ಬದುಕಿರಬಲ್ಲೆನೆ! ನಿನ್ನ ತಂದೆಯಂತೆ ನಿನ್ನ ಚಿಂತೆಯಲ್ಲೇ ನನ್ನನ್ನೂ ಭಸ್ಮ ಮಾಡುವೆಯಾ? ಅಯ್ಯೋ! ನಾನೆಂಥ ದುರದೃಷ್ಟವಂತೆ," ಎಂದು ನಿಟ್ಟುಸಿರು ಹುಯ್ಯುತ್ತಿದ್ದಳು. ಅವಳ ಮಾತುಗಳಿಂದ ಭರತನಿಗೆ ಮತ್ತಷ್ಟು ಸಂಕಟವಾಯಿತು. ವಿಷಯ ತಿಳಿಯದೆ, ಅನೇಕ ವಿಧವಾದ ವಿಪರೀತ ಭಾವನೆಗಳ ಸುಳಿಗೆ ಸಿಕ್ಕಿದ್ದ ಅವನು ಧೈರ್ಯ ತಂದುಕೊಂಡು, "ಅಮ್ಮಾ ನನ್ನನ್ನು ನಂಬು. ನನ್ನ ರಾಮಚಂದ್ರನು ಅಡವಿಗೆ ಹೋಗುವುದಕ್ಕೂ ನನ್ನ ತಂದೆ ಪ್ರಾಣ ಬಿಡುವುದಕ್ಕೂ ಕಾರಣವೇನು ತಿಳಿಸಿ ನನ್ನನ್ನು ಈ ಪರಿಸ್ಥಿತಿಯಿಂದ ಕಾಪಾಡು ಎಂದು ಪ್ರಾರ್ಥಿಸಿದನು.

**ದೂಷಿಸಿ ಪ್ರಯೋಜನವಿಲ್ಲ**: ಕೌಸಲ್ಯೆಯು ಸರಳ ಸ್ವಭಾವದವಳಾದ್ದರಿಂದ, ಭರತನನ್ನು ಹಿಂತಿರುಗಿ ಬಂದ ರಾಮನೇ ಎಂದು ಭಾವಿಸಿ, ಕಣ್ಣೀರು ಸುರಿಸುತ್ತಾ, "ಮಗೂ! ಭರತ! ಧೈರ್ಯವಾಗಿರು. ಆಗಿಹೋದುದಕ್ಕೆ ಚಿಂತಿಸಿ ಪ್ರಯೋಜನವಿಲ್ಲ. ಕಾಲ ಕರ್ಮಗಳ ಗತಿ ವಿಚಿತ್ರ. ಒಬ್ಬರನ್ನು ದೂಷಿಸಿ ಪ್ರಯೋಜನವಿಲ್ಲ, ದೂಷಿಸಬಾರದು. ಇಂಥ ದುಃಖ ಅನುಭವಿಸುತ್ತಾ ಜೀವಿಸು ಎಂದು ನನ್ನ ವಿಧಿ ಬರಹ ಶಾಪಿಸಿದೆ. ನನ್ನ ವಿಧಿಯನ್ನು ನಾನು ಅನುಭವಿಸುವುದು ತಪ್ಪದು. ನೀವು ಚಿಕ್ಕವರು. ಪ್ರಾತಃಕಾಲದ ಸೂರ್ಯನಂಥ ಜೀವಿತ ನಿಮ್ಮದು. ನಿಮ್ಮ ತಂದೆಯ ಆಜ್ಞೆಯಂತೆ ನನ್ನ ಮುದ್ದು ರಾಮನು ನಾರುವಸ್ತ್ರ ಧಾರಿಯಾಗಿ ಜಟಾಜೂಟಗಳನ್ನು ಧರಿಸಿ

ಅರಣ್ಯದಲ್ಲಿ ಸಂಚರಿಸುತ್ತಿದ್ದಾನೆ. ಅವನನ್ನು ಬಿಟ್ಟು ಕ್ಷಣಕಾಲವೂ ಇರಲಾರದ ಜಾನಕಿಯು ಕೂಡ ಅವನೊಂದಿಗೆ ವಲ್ಕಲಾಂಬರಗಳನ್ನು ಧರಿಸಿ ಹೊರಟಳು. ಲಕ್ಷ್ಮಣನು ರಾಮನ ವನವಾಸವನ್ನು ತಪ್ಪಿಸಲು ಅನೇಕ ವಿಧವಾಗಿ ಪ್ರಯತ್ನಿಸಿ ವಿಫಲನಾಗಿ, 'ನೀನಿಲ್ಲದ ಅಯೋಧ್ಯೆ ನನಗೆ ಅರಣ್ಯ ಸಮಾನ,' ಎಂದು ರಾಮನಿಗೆ ಹೇಳಿ, ಅವನೂ ಜೊತೆಯಲ್ಲೇ ಹೊರಟನು.

ಇದೆಲ್ಲವೂ ನನ್ನ ಕಣ್ಣೆದುರು ನಡೆಯಿತು. ನಾನೆಂಥ ಪಾಪಾತ್ಮಳೊ! ಇಷ್ಟೆಲ್ಲವನ್ನು ನೋಡಿಯೂ ನನ್ನ ಪ್ರಾಣವೂ ಹೋಗದೆ ಇದೆ. ನಾನೂ ಅವರೊಂದಿಗೆ ಹೋಗದೆ ಹೋದೆ, ನನ್ನ ಪ್ರಾಣವೂ ಅವರೊಂದಿಗೆ ಹೋಗದೆ ಹೋಯಿತು. ನನ್ನ ನಿರ್ಭಾಗ್ಯ ಸ್ಥಿತಿಯನ್ನು ನಾನೇನೆಂದು ಹೇಳಲಿ? ನನ್ನ ಹೃದಯವು ನಿಜವಾಗಿಯೂ ಪಾಷಾಣ. ಇಂಥ ಪಾಷಾಣ ಹೃದಯಿಯ ಹೊಟ್ಟೆಯಲ್ಲಿ ಕೋಮಲಹೃದಯಿಯಾದ ರಾಮನು ಹುಟ್ಟಿದ್ದರಿಂದಲೇ ರಾಮನಿಗೆ ಈ ಗತಿ. ಅಯ್ಯೋ! ರಾಮಾ! ಆ ಭೀಕರಾರಣ್ಯದಲ್ಲಿ ರಾತ್ರಿ ಹಗಲು ಕಂದಮೂಲಾದಿಗಳನ್ನು ತಿಂದು ಹೇಗೆ ಜೀವಿಸುತ್ತಿದ್ದೀಯೋ ಏನೋ!" ಎಂದು ಕಿರಿಚುತ್ತಾ ನೆಲಕ್ಕುರುಳಿದಳು. ಅವಳ ಶೋಕವನ್ನೂ, ದುಃಖದ ಮಾತುಗಳನ್ನೂ ಕೇಳಿ, ನಡೆದ ವಿಷಯವೇನೆನ್ನುವುದನ್ನು ತಿಳಿಯಲಾರದೆ, ಕೇಳಿ ತಿಳಿದುಕೊಳ್ಳಲಾರದೆ, ಭರತನು ಗೊಂದಲದ ಸ್ಥಿತಿಯಲ್ಲಿ ತೊಳಲಾಡಿದನು.

ಅಷ್ಟರಲ್ಲಿ ಗುರು ವಸಿಷ್ಠರು ಬರಹೇಳಿದ್ದಾರೆಂದು ಭರತನಿಗೆ ತಿಳಿಸಲು ಬಂದ ಸುಮಂತನು ಭರತ ಶತ್ರುಘ್ನರನ್ನು ನೋಡಿದ ತಕ್ಷಣವೇ ಗೊಳ್ಳೆಂದು ಅಳುತ್ತಾ ಭರತನನ್ನು ತಬ್ಬಿಕೊಂಡನು. ಭರತ ಶತ್ರುಘ್ನರೂ ದುಃಖವನ್ನು ಅದುಮಿಕೊಳ್ಳ ಲಾಗದೆ ದುಃಖಿಸಿದರು. ಭರತನು ಧೈರ್ಯ ತಂದುಕೊಂಡು, ಸುಮಂತನಾದರೂ ವಿಷಯವನ್ನು ತಿಳಿಸಬಹುದೆಂದುಕೊಂಡನು. ಆದರೆ, ಭರತ ಶತ್ರುಘ್ನರಿಗೆ ಆಗಲೇ ವಿಷಯವು ತಿಳಿದಿರಬೇಕೆಂದು ಭಾವಿಸಿದ ಸುಮಂತನು ಏನೂ ಹೇಳಲಿಲ್ಲ.

**ಗುರು ಬೋಧೆ**: ಎಲ್ಲರೂ ಕೂಡಿ ಗುರು ವಸಿಷ್ಠರ ಬಳಿಗೆ ಬಂದರು. ತಮ್ಮ ಪಾದಗಳ ಮೇಲೆ ಬಿದ್ದು ಗೋಳಾಡುತ್ತಿದ್ದ ಭರತ ಶತ್ರುಘ್ನರನ್ನು ವಸಿಷ್ಠರು ಮೇಲಕ್ಕೆಬ್ಬಿಸಿ, ಹಲವು ಬಗೆಯಾಗಿ ನೀತಿ ಬೋಧಿಸಿ ಸಮಾಧಾನಪಡಿಸಿದರು. "ಈಗಾಗಲೇ ಕಾಲ ಮೀರಿದೆ, ಇನ್ನು ಕಾಲಹರಣ ಮಾಡುವುದೊಳ್ಳೆಯದಲ್ಲ. ಪಿತೃವಿನ ಅಂತ್ಯಕ್ರಿಯೆಗಳನ್ನು ಮಾಡಲು ಸಿದ್ಧತೆ ಮಾಡಿಕೊ," ಎಂದು ಭರತನಿಗೆ ಉಪದೇಶಿಸಿದರು.

**ಅಂತ್ಯಕ್ರಿಯೆ** : ಭರತನು ದೀರ್ಘವಾಗಿ ಆಲೋಚಿಸಿ, "ಸ್ವಾಮೀ, ಪ್ರಥಮ ಪುತ್ರನಾದ ರಾಮಚಂದ್ರನು ಮಾಡಬೇಕಾದ ಈ ಕಾರ್ಯಗಳನ್ನು ನನ್ನ ತಲೆಯ ಮೇಲೆ ಹೊರಿಸುತ್ತಿದ್ದೀರಲ್ಲಾ ಇದು ನ್ಯಾಯವೇ? ಇಷ್ಟು ದಿನಗಳೇ ಕಳೇಬರವನ್ನು ಇಟ್ಟು ಕೊಂಡಿದ್ದೀರಿ. ಇನ್ನು ಎರಡು ಮೂರು ದಿನಗಳು ಇಟ್ಟುಕೊಳ್ಳಿ. ಇಂದೇ ನಾನು ಸೋದರನಾದ ಶತ್ರುಘ್ನನೊಂದಿಗೆ ನನ್ನ ರಾಮನಿರುವಲ್ಲಿಗೆ ಹೋಗಿ ಅವನನ್ನು ಕರೆದುಕೊಂಡು ಬರುತ್ತೇನೆ. ಆಜ್ಞೆ ದಯಪಾಲಿಸಿ," ಎಂದು ಪ್ರಾರ್ಥಿಸಿದನು. ವಸಿಷ್ಠರು, "ಅಪ್ಪಾ! ನಿನಗೆ ತಿಳಿಯದು. ರಾಮಚಂದ್ರನು ತನಗೆ ನೇಮಿಸಿದಷ್ಟು ಕಾಲವನ್ನು ಅರಣ್ಯದಲ್ಲಿ ಕಳೆಯದೆ ಮುಂಚಿತವಾಗಿ ಬರಲು ಇಷ್ಟಪಡುವುದಿಲ್ಲ. ಅವನು ಏಕವಾಕ್ಯ ಪರಿಪಾಲಕ. ನೀನೆಷ್ಟು ಹೇಳಿದರೂ ರಾಮನು ಹದಿನಾಲ್ಕು ವರ್ಷ ಅರಣ್ಯವಾಸ ಮಾಡದೆ ಅಯೋಧ್ಯೆಗೆ ಹಿಂತಿರುಗುವವನಲ್ಲ, ತಂದೆಯ ಅಂತ್ಯಕ್ರಿಯೆಗಳನ್ನು ಪೂರೈಸಿ, ನಂತರ ನಿನ್ನ ಇಷ್ಟ ಪ್ರಕಾರ ನಡೆದುಕೊ," ಎಂದು ಮತ್ತೆ ಮತ್ತೆ ಅನೇಕ ವಿಧವಾಗಿ ಬೋಧಿಸಿದರು. ಭರತನು ಬೇರೆ ಮಾರ್ಗವಿಲ್ಲದೆ ಒಪ್ಪಿಕೊಂಡು, ವೇದೋಕ್ತ ಪ್ರಕಾರ ತಂದೆಯ ಕಳೇಬರಕ್ಕೆ ಸ್ನಾನ ಮಾಡಿಸಿ, ಅದನ್ನು ತೆಗೆದುಕೊಂಡು ಹೋಗಲು ತಕ್ಕ ಏರ್ಪಾಟುಗಳನ್ನು ಮಾಡಿದನು.

ಅಷ್ಟರಲ್ಲಿ, ಮನಸ್ಸಿನಲ್ಲಿ ಏನೋ ಆಲೋಚನೆ ಸುಳಿದು, ಸರಸರನೆ ಅಂತಃಪುರಕ್ಕೆ ಹೋಗಿ, ಕೌಸಲ್ಯೆ ಸುಮಿತ್ರೆಯರ ಪಾದಗಳಿಗೆ ನಮಸ್ಕರಿಸಿ, "ತಾಯಿಯರೇ! ನೀವು ಸಹಗಮನಕ್ಕೆ ಪ್ರಯತ್ನಿಸಕೂಡದು. ಹಾಗೇನಾದರೂ ಪ್ರಯತ್ನಿಸುವ ಪಕ್ಷದಲ್ಲಿ ನಾನು ತಂದೆಯ ಅಂತ್ಯಕ್ರಿಯೆಯನ್ನೇ ಮಾಡುವುದಿಲ್ಲ," ಎಂದು ಹೇಳಿ, ವಚನವನ್ನು ಪಡೆದನು. ಅವರು ಕುಮಾರನ ಪ್ರೇಮಾನುರಾಗಗಳಿಗೆ ಸಂತೋಷಿಸಿ, "ಅಪ್ಪಾ! ನಿನ್ನ ಇಷ್ಟ ಪ್ರಕಾರವೇ ಆಗಲಿ," ಎಂದು ಮಾತು ಕೊಟ್ಟ ಮೇಲೆ, ತೀವ್ರ ದುಃಖದಿಂದ ಕಳೇಬರದೊಂದಿಗೆ ಸರಯೂ ನದಿ ತೀರದಲ್ಲಿ ಗಂಧದ ಚಕ್ಕೆಗಳಿಂದ ಮಾಡಿದ ಚಿತೆಯ ಬಳಿ ಹೋಗಿ, ವಸಿಷ್ಠರು ಆಶಿಸಿದುದಕ್ಕಿಂತ ಸಾವಿರ ಪಾಲು ಅಧಿಕವಾಗಿ ವೇದೋಕ್ತವಾದ ರೀತಿಯಲ್ಲಿ ತಂದೆಯ ಅಂತ್ಯಕ್ರಿಯೆಗಳನ್ನು ನಡೆಸಿದನು.

ತಂದೆಯ ಹೆಸರಿನಲ್ಲಿ ಷೋಡಶ ಮಹಾದಾನಗಳನ್ನು ಮಾಡಿದನು. ಗೋದಾನ, ಭೂದಾನ, ಸುವರ್ಣದಾನ, ವಸ್ತ್ರದಾನ, ಅನ್ನದಾನ, ಗೃಹದಾನ, ಅಶ್ವದಾನ, ಗಜದಾನ, ಧನದಾನ ಇತ್ಯಾದಿ ದಾನಗಳನ್ನು ಅದ್ದೂರಿಯಾಗಿ ಮಾಡಿದನು. ಭರತನ ಶ್ರದ್ಧೆಯನ್ನೂ ಅವನು ಮಾಡಿದ ಪಿತೃ ಕಾರ್ಯವನ್ನೂ ಪ್ರಜೆಗಳು, ಬಾಯ್ತುಂಬಾ ಹೊಗಳಿದರು.

**ರಾಮ ವಿಯೋಗ ಬಾಧೆ**: ಆದರೆ ಪ್ರಜೆಗಳಲ್ಲಿ, ಪಂಡಿತರಲ್ಲಿ, ರಾಜರಲ್ಲಿ ರಾಮನಿಲ್ಲದ ಕೊರತೆ ತುಂಬಲಿಲ್ಲ. ರಾಮವಿಯೋಗ ಬಾಧೆಯು ಕ್ಷಣಕ್ಷಣಕ್ಕೂ ಅವರ ಹೃದಯಗಳಲ್ಲಿ ಬಾಧಿಸುತ್ತಲೇ ಇತ್ತು. ರಾಮನು ಏಕವಾಕ್ಯ ಪರಿಪಾಲಕ ನೆನ್ನುವುದನ್ನು ಬಲ್ಲ ಅವರು, ಏನು ಮಾಡಿದರೂ ಅವನು ಹದಿನಾಲ್ಕು ವರ್ಷ ಮುಗಿಯುವವರೆಗೂ ಅಯೋಧ್ಯೆಗೆ ಬರುವುದಿಲ್ಲವೆಂದು ನಿಶ್ಚಯಿಸಿಕೊಂಡರು. ರಾಮನು ಅಯೋಧ್ಯೆಗೆ ಹಿಂತಿರುಗುವವರೆಗೂ ತಾವು ಬದುಕಿರಲೇಬೇಕೆಂದು ತಮ್ಮ ಹೃದಯಗಳನ್ನು ಕಲ್ಲು ಮಾಡಿಕೊಂಡು ಅಲ್ಲಿಯವರೆಗೆ ಕಾಲವನ್ನು ಕಳೆಯ ಬೇಕೆಂದು ನಿಶ್ಚಯಿಸಿದರು.

**ಮಹಾಸಭೆ**: ಗುರುಗಳಾದ ವಸಿಷ್ಠರು ರಾಜರನ್ನೂ ಸಾಮಂತರನ್ನೂ ಮಂತ್ರಿ ಗಳನ್ನೂ ಪುರಪ್ರಮುಖರನ್ನೂ ಪಂಡಿತರನ್ನೂ ಋಷಿಗಳನ್ನೂ ಬರಮಾಡಿಕೊಂಡು ಒಂದು ಸಮಾವೇಶ ನಡೆಸಿ, ಧರ್ಮಾನುಸಾರವಾಗಿ, ರಾಜನೀತಿ ಅನುಸಾರವಾಗಿ, ಭರತ ಶತ್ರುಘ್ನರಿಗೆ ಉಪದೇಶವಿತ್ತರು. ಕೈಕೆಯು ನಡೆಸಿದ ಸನ್ನಾಹದಿಂದ ಹಿಡಿದು ರಾಮನ ವನಾಗಮನದವರೆಗೂ ನಡೆದ ಸಂಗತಿಗಳನ್ನು ವಿವರಿಸಿದರು. ಮಹಾ ರಾಜನ ಸತ್ಯಸಂಧತೆಯನ್ನೂ ಧರ್ಮಪಾಲನೆಯನ್ನೂ ಶೌರ್ಯ, ವೀರ್ಯ ಪರಾ ಕ್ರಮ ಬಲವನ್ನೂ ತ್ಯಾಗ, ಯೋಗ, ಭೋಗಾದಿ ಕರ್ಮ ಕಲಾಪಗಳನ್ನೂ ಅವನ ಯಜ್ಞಯಾಗಾದಿ ವಿಶಿಷ್ಟ ಕಾರ್ಯ ದೀಕ್ಷೆಗಳನ್ನೂ ವರ್ಣಿಸಿದರು. ಮಹಾರಾಜನು ರಾಮನ ಪಟ್ಟಾಭಿಷೇಕಕ್ಕೆ ನಡೆಸಿದ ಪ್ರಯತ್ನಗಳು, ಅದಕ್ಕೆ ಬಂದ ಅಡ್ಡಿ ಆತಂಕ ಗಳನ್ನು ತಿಳಿಸಿ, ಕಟ್ಟ ಕಡೆಗೆ ರಾಮವಿಯೋಗದಿಂದ ಮಹಾರಾಜನು ಪ್ರಾಣವನ್ನೇ ಬಿಟ್ಟನೆಂದೂ ತಿಳಿಸಿದರು.

ಅದುವರೆಗೆ ಯಾವ ವಿವರಗಳೂ ತಿಳಿಯದಿದ್ದ ಭರತ ಶತ್ರುಘ್ನರಿಗೆ, ಗುರುಗಳು ಹೇಳಿದುದನ್ನು ಕೇಳಿದೊಡನೆ ಒಂದು ಕಡೆ ಕೋಪವೂ ಮತ್ತೊಂದು ಕಡೆ ನಾಚಿ ಕೆಯೂ ದುಃಖವೂ ಅವರನ್ನು ಸಂಕಟಕ್ಕೀಡುಮಾಡಿದುವು. ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯಿತು. ಅವರ ಸಂಕಟವನ್ನು ಸಭಾಸದರು ನೋಡಲಾರದೆ ಹೋದರು. ವಸಿಷ್ಠರು ಸಹಿತ ತಮಗೆ ಅರಿವಿಲ್ಲದಂತೆಯೇ ಕಣ್ಣೀರು ಸುರಿಸಿದರು. ಇಡೀ ಸಭೆಯೇ ಮಹಾ ಶೋಕದಲ್ಲಿ ಮುಳುಗಿತು. ಯಾರೂ ಮಾತನಾಡಲಾರದೆ ಹೋದರು. ಕೆಲವು ಕಾಲ ಸಭೆಯು ನಿಶ್ಶಬ್ದದಿಂದ ಸ್ತಂಭಿಸಿತು. ವಸಿಷ್ಠರು ಹೇಳುತ್ತಿ ದ್ದುದೇನನ್ನೂ ಭರತ ಶತ್ರುಘ್ನರು ಲಕ್ಷ್ಯಕೊಟ್ಟು ಕೇಳಲಿಲ್ಲ. ಅವರ ಮನಸ್ಸು ಕೈಕೆಯು ಮಾಡಿದ ಸನ್ನಾಹವನ್ನೇ ಯೋಚಿಸುತ್ತಿತ್ತು. ಇಂಥ ತಾಯಿಯ ಮಗನಾಗಿ ಹುಟ್ಟಿದ್ದು ಎಷ್ಟು ಜನ್ಮದ ಕರ್ಮವೊ ಎಂದು ಭರತನು ತಲೆಯೆತ್ತಲು ಸಹಿತ ನಾಚಿಕೆಪಡುತ್ತಾ

ಸಭೆಯನ್ನೇ ಬಿಟ್ಟು ಹೋಗುವ ಆಲೋಚನೆ ಬಂದು, ಬಾಧೆಪಡುತ್ತಾ ತಲೆತಗ್ಗಿಸಿ ಕುಳಿತಿದ್ದನು.

**ಉಪಶಾಂತಿಯ ಮಾತುಗಳು**: ಭರತ ಶತ್ರುಘ್ನರ ಚಿಂತೆಯನ್ನು ಗಮನಿಸಿದ ವಸಿಷ್ಠರು ಹತ್ತಿರ ಹೋಗಿ, ತಕ್ಕ ಉಪಶಾಂತಿಯ ಮಾತುಗಳಿಂದ ಅವರನ್ನು ಸಮಾಧಾನಪಡಿಸಲೆತ್ನಿಸಿದರು. "ಅಪ್ಪಾ! ಚಿಂತಿಸಿ ಪ್ರಯೋಜನವಿಲ್ಲ. ಆದದ್ದು ಆಗಿ ಹೋಯಿತು. ಮುಂದೆ ಮಾಡಬೇಕಾದ್ದನ್ನು ಯೋಚಿಸುವುದೊಳ್ಳೆಯದು. ಎಲ್ಲ ವಿಧದಲ್ಲೂ ನಿಮ್ಮ ತಂದೆಯವರು ಅದೃಷ್ಟವಂತರು. ಅವರ ಬಗೆಗೆ ಯೋಚಿಸುವುದು ವ್ಯರ್ಥ. ನನ್ನ ಮಾತು ಕೇಳಿ. ನಿಮ್ಮ ತಂದೆಯ ಆಜ್ಞೆಯನ್ನು ಶಿರಸಾ ವಹಿಸಿ. ಮಹಾರಾಜನು ನಿನಗೆ ರಾಜ್ಯಾಧಿಪತ್ಯವಿತ್ತಿದ್ದಾನೆ. ತಂದೆಯ ಮಾತುಗಳನ್ನು ಪಾಲಿಸುವುದೇ ವಿಹಿತ. ಆಡಿದ ಮಾತನ್ನು ತಪ್ಪಲಾರದೆ ನಿಮ್ಮ ತಂದೆಯು ರಾಮನ ವಿಯೋಗಕ್ಕೆ ಒಪ್ಪಿಕೊಂಡು, ಅವನ ಮೇಲಿನ ಪ್ರೇಮಾನುರಾಗದಿಂದ ಪ್ರಾಣವನ್ನು ಬಿಟ್ಟರೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಪ್ರಾಣಕ್ಕಿಂತ ಮಾತೇ ಪ್ರಧಾನವೆಂದು ಭಾವಿಸಿದ್ದರಿಂದಲೇ ಅಲ್ಲವೇ ಮಾತಿಗೆ ತಪ್ಪದೆ ತನ್ನ ಪ್ರಾಣವನ್ನಾದರೂ ಬಿಡಲು ಸಿದ್ಧವಾದದ್ದು? ತಂದೆಯ ಮಾತನ್ನು ನೆರವೇರಿಸುವುದಕ್ಕಾಗಿಯೇ ಅಲ್ಲವೆ ಶ್ರೀರಾಮನು ಕೂಡ ಅಡವಿ ಸೇರಿದ್ದು? ಆದ್ದರಿಂದ, ಈ ಇಕ್ಷ್ವಾಕುಗಳ ಆಟದಲ್ಲಿ ಆಡಿದ ಮಾತನ್ನು ತಪ್ಪದೆ ನಡೆಸುವುದೇ ಪ್ರಧಾನ ನೀತಿ. ಅದೇ ನಿಮ್ಮ ರಾಜಜ್ಯೋತಿಯ ರೀತಿ.

**ಭರತನಿಗೆ ಅದೊಂದು ಶಿಕ್ಷೆ**: ಆದ್ದರಿಂದ ನೀನು ಕೂಡ ತಂದೆಯ ಮಾತನ್ನು ನಡೆಸಲು ಪರಿಪಾಲನಾ ಬಾಧ್ಯತೆಯನ್ನು ವಹಿಸದೆ ತಪ್ಪದು. ನಿನಗೆ ಎಲ್ಲ ವಿಧದಲ್ಲಿ ಮಂಗಳವಾಗಲಿ. ಶುಭ ಉಂಟಾಗಲಿ. ನಿನ್ನ ಮೇಲಿರುವ ವಾತ್ಸಲ್ಯದಿಂದಲೂ ದಯಾನುಗ್ರಹದಿಂದಲೂ ನಾನು ಇಷ್ಟು ಬಗೆಯಾಗಿ ನಿನಗೆ ಬೋಧಿಸುತ್ತಿದ್ದೇನೆ. ಇಲ್ಲದಿದ್ದರೆ, ನಾನು ಇಂಥ ಹೊಣೆಗಾರಿಕೆಯನ್ನು ಹೇರುತ್ತಿದ್ದೆನೆ? ನೀನು ನಿನ್ನ ತಂದೆಯ ಕೀರ್ತಿಯನ್ನು ಉಳಿಸಬಲ್ಲೆ. ಪರಿಪಾಲನಾ ಶಕ್ತಿ, ದಕ್ಷತೆ ನಿನ್ನಲ್ಲಿದೆ. ಸಂಶಯಪಡದೆ ಒಪ್ಪಿಕೊ," ಎಂದು ತಲೆಯನ್ನು ಸವರುತ್ತಾ ಆಶೀರ್ವದಿಸುತ್ತಿದ್ದ ವಸಿಷ್ಠರ ಮಾತುಗಳನ್ನು ಕೇಳಿ, ಭರತನು ತಟ್ಟನೆ ಆಸನ ಬಿಟ್ಟೆದ್ದು, ಅವರ ಪಾದಗಳ ಮೇಲೆ ಬಿದ್ದು, ತಡೆಯಲಾರದ ದುಃಖದಿಂದ, ಅದುರುವ ತುಟಿಗಳಿಂದ, ಕಂಠವೆತ್ತಿ, "ಸ್ವಾಮೀ! ನಿಜವಾಗಿಯೂ ಈ ಮಾತುಗಳು ನನ್ನ ಮೇಲಿರುವ ಪ್ರೇಮಾನುರಾಗದ ಸೂಚನೆಯೇ? ನನಗೆ ನಂಬಿಕೆ ಬರುತ್ತಿಲ್ಲ! ನಿಜವಾಗಿಯೂ ನಿಮಗೆ ನನ್ನ ಮೇಲೆ ಅಷ್ಟು ಪ್ರೇಮಾನುರಾಗಗಳೇ ಇದ್ದಿದ್ದರೆ, ನನಗಿಂಥ ಬಾಧ್ಯತೆಯನ್ನು, ಭಾರವನ್ನು ಹೇರಲು ಒಪ್ಪುತ್ತಿರಲಿಲ್ಲ. ಇದನ್ನು ನನಗೊಂದು ಶಿಕ್ಷೆಯಾಗಿ ವಿಧಿಸುತ್ತಿದ್ದೀರಿ.

ಯಾವ ರಾಜ್ಯವು ಆ ಪವಿತ್ರ ಪಾವನ ಪುರುಷನನ್ನು ಅರಣ್ಯಕ್ಕೆ ಅಟ್ಟಿತೊ, ಯಾವ ರಾಜ್ಯವು ಪ್ರಜೆಗಳು ನಿರಂತರವೂ ಕಣ್ಣೀರು ಸುರಿಸುವಂತೆ ಮಾಡಿತೊ, ಯಾವ ರಾಜ್ಯವು ಮಹಾಧರ್ಮಾತ್ಮನಾದ ರಾಜನನ್ನು ಕಳೆದುಕೊಂಡಿತೊ, ಯಾವ ರಾಜ್ಯವು ಈ ಇಕ್ಷ್ವಾಕುಗಳ ವಂಶಕ್ಕೆ ಕಳಂಕ ತಂದಿತೊ, ಯಾವ ರಾಜ್ಯವು ಮಹಾ ಪತಿವ್ರತೆಯರೂ ಮಹಾ ಮಾತೆಯರೂ ಆದ ಕೌಸಲ್ಯಾ ಸುಮಿತ್ರೆಯರಿಗೆ ವೈಧವ್ಯ ತಂದಿತೊ, ಅಂಥ ರಾಜ್ಯವನ್ನು ಈ ಭರತನಿಗೆ ವಹಿಸುತ್ತಿರುವುದು ನನ್ನ ಪಾಪದ ಫಲ. ಇದು ಕ್ರೂರಾತ್ಮಳಾದ ಕೈಕೆಯ ಗರ್ಭದಲ್ಲಿ ಹುಟ್ಟಿದ ದುರಾದೃಷ್ಟದ ಪರಿಣಾಮ. ನನಗಿಂಥ ಶಿಕ್ಷೆ ಕೊಡುವ ಬದಲು ನನ್ನನ್ನು ನನ್ನ ರಾಮಚಂದ್ರ ಪ್ರಭುವಿರುವ ಸ್ಥಳಕ್ಕೆ ಕಳಿಸಿ ಪುಣ್ಯ ಕಟ್ಟಿಕೊಳ್ಳಿ. ಅವನ ಪಾದ ಸೇವೆಯನ್ನು ಮಾಡುತ್ತಾ ಅವನು ನಡೆದಾಡುವ ದಾರಿಯನ್ನು ಗುಡಿಸಿ ಧನ್ಯನಾಗುತ್ತೇನೆ. ಆದರೆ ಈ ರಾಜ್ಯದಲ್ಲಿ ಮಾತ್ರ ಕ್ಷಣಕಾಲವೂ ಇರಲಾರೆ," ಎಂದು ವಸಿಷ್ಠರಿಗೆ ನಮಸ್ಕರಿಸಿ, ವನಕ್ಕೆ ತೆರಳಲು ಆಜ್ಞೆ ದಯಪಾಲಿಸಿರೆಂದು ಕೋರಿದನು. ಆಗ, ಮಂತ್ರಿಗಳು ಎದ್ದು ನಿಂತು, ಕೈಜೋಡಿಸಿಕೊಂಡು ಭರತನನ್ನು ಕುರಿತು, "ಪ್ರಭೂ! ರಾಜನಿಲ್ಲದ ರಾಜ್ಯ ಬಹು ಕಾಲ ಹಾಗೆಯೇ ಇರುವುದು ಸರಿಯಲ್ಲ. ಗುರುವಾಜ್ಞೆ ಮನ್ನಿಸಿ ನೀವು ಪರಿಪಾಲನಾ ಬಾಧ್ಯತೆಯನ್ನು ವಹಿಸಿಕೊಳ್ಳಲೇಬೇಕು. ರಾಮನು ಬಂದಮೇಲೆ ಸಮಯೋಚಿತವಾಗಿ ವರ್ತಿಸಬಹುದು, ನಮ್ಮ ಪ್ರಾರ್ಥನೆಯನ್ನು ಅಂಗೀಕರಿಸಿ ಪಾಲಿಸಿ, ರಾಜ್ಯ ವಹಿಸಿಕೊಳ್ಳಿ," ಎಂದು ಬಿನ್ನವಿಸಿದರು.

**ತಾಯಿಯರ ಹಿತಬೋಧೆ**: ಮಾತೃದೇವಿಯಾದ ಕೌಸಲ್ಯೆಯನ್ನು ಒಮ್ಮೆ ದರ್ಶನ ಮಾಡಿ ಬರುತ್ತೇನೆಂದು ಭರತನು ಕೋರುತ್ತಲೇ, ವಸಿಷ್ಠರು ಸಮ್ಮತಿಸಿದರು. ಸಮಾವೇಶದಿಂದ ಹೊರಟು ಭರತ ಶತ್ರುಘ್ನರು ಸರಸರನೆ ಕೌಸಲ್ಯೆಯ ಭವನಕ್ಕೆ ಹೋಗಿ ಅವಳ ಪಾದಗಳ ಮೇಲೆ ಬಿದ್ದು, "ಅಮ್ಮಾ! ದುರ್ಮಾರ್ಗಿಯಾದ ಕೈಕೆಯ ಗರ್ಭದಲ್ಲಿ ಜನಿಸಿ, ಇಷ್ಟೊಂದು ಅನಾಹುತಗಳಿಗೆ ಕಾರಣನಾದ ಈ ಭರತನನ್ನು ಮೊದಲು ಕ್ಷಮಿಸು. ರಾಜ್ಯದ ದುರ್ಗತಿಗೆ ಈ ಹಾಳು ಭರತನೇ ಕಾರಣ. ನನ್ನನ್ನು ಅರಣ್ಯಕ್ಕೆ ಕಳಿಸಲು ಆಶೀರ್ವದಿಸು. ಅಪ್ಪಣೆ ಕೊಡು. ನನ್ನ ಪ್ರಭುವಿಲ್ಲದ ಅಯೋಧ್ಯೆಯಲ್ಲಿ ಕ್ಷಣ ಕಾಲವೂ ನಾನು ತಲೆಯೆತ್ತಿ ತಿರುಗಲು ಸಾಧ್ಯವಿಲ್ಲ. ಈ ರಾಜ್ಯಾಧಿಕಾರ ಜ್ಯೇಷ್ಠ ಪುತ್ರನಾದ ರಾಮನದೇ ವಿನಾ ಈ ಅಲ್ಪನಿಗೆ ಏನೂ ಅಧಿಕಾರವಿಲ್ಲ, ನನಗಿದು ಬೇಡ," ಎಂದು ದುಃಖಿಸಿದನು. ಕೌಸಲ್ಯೆಯು ಧೈರ್ಯ ವಹಿಸಿ, "ಭರತ! ಕಾಲ ಗತಿಯನ್ನು ಗ್ರಹಿಸಿ ವಿಷಾದವನ್ನು ಬಿಡು. ಇದು ಅಸ್ಥಿಮಿತವಾಗಿರಲು ಸಮಯವಲ್ಲ. ರಾಮನು ಅಡವಿಯಲ್ಲಿದ್ದಾನೆ. ನಿಮ್ಮ ತಂದೆಯು ಸ್ವರ್ಗ ಸೇರಿದರು. ನಿನ್ನ ತಾಯಿಯರು, ಬಂಧುಗಳು, ಮಿತ್ರರು,

ಜನರು, ಪರಮ ದುಃಖದಲ್ಲಿ ಮುಳುಗಿದ್ದಾರೆ. ಅವರೆಲ್ಲರಿಗೂ ಈಗ ನೀನೇ ಆಧಾರ. ಕಾಲಕರ್ಮಗಳು ಪ್ರತಿಕೂಲವಾಗಿವೆಯೆಂದು ತಿಳಿದು ನೀನು ಧೈರ್ಯ ತಂದುಕೊ, ತಂದೆಯ ಆಜ್ಞೆಯನ್ನು ನೆರವೇರಿಸು. ಗುರುವಾಜ್ಞೆಯನ್ನು ಶಿರಸಾವಹಿಸು. ಪ್ರಜೆಗಳ ಪ್ರಾರ್ಥನೆಯನ್ನು ಮನ್ನಿಸು. ಮಂತ್ರಿಗಳ ಪ್ರಿಯವಚನವನ್ನು ಅನುಸರಿಸು," ಎಂದು ಅವನ ಕೈಗಳನ್ನು ಹಿಡಿದುಕೊಂಡು ಕೌಸಲ್ಯೆಯು ಆಡಿದ ಮಾತುಗಳು ಅವನಿಗೆ ಬಹು ಮಧುರವಾಗಿ ಭಾಸವಾದುವು, ಅವನ ಹೃದಯವನ್ನು ತಣ್ಣಗೆ ಹಾಯಾಗಿ, ಮೃದುವಾಗಿ ನಾಟಿದವು.

**ಕೌಸಲ್ಯೆಯ ವಿಶಾಲ ಹೃದಯ**: ತನ್ನ ತಾಯಿ ನಡೆಸಿದ ಕೃತ್ರಿಮ ವ್ಯಾಪಾರವನ್ನು ಮನಸ್ಸಿಗೆ ತಂದುಕೊಳ್ಳದೆ, ತನ್ನ ಬಗೆಗೆ ಸಂಶಯಪಡದೆ, ಕೌಸಲ್ಯೆಯು ಇಂಥ ಪ್ರಿಯ ವಚನಗಳನ್ನಾಡಿದ್ದು ಅವನಿಗೆ ಅದೆಷ್ಟೋ ತೃಪ್ತಿಯಾಯಿತು. ಕೌಸಲ್ಯೆಯ ವಿಶಾಲ ಹೃದಯಕ್ಕೂ ವಾತ್ಸಲ್ಯ ಭಾವಕ್ಕೂ ಬಹುವಾಗಿ ಸಂತೋಷಿಸಿದನು. ತನ್ನ ಪ್ರಿಯ ಕುಮಾರನಾದ ರಾಮನು ಅಡವಿಗೆ ಹೋದರೂ ಸವತಿಯ ಮಗನಾದ ತನ್ನ ಮೇಲೆ ಅವಳ ಪುತ್ರ ವಾತ್ಸಲ್ಯ ಇಷ್ಟು ಗಾಢವಾಗಿರುತ್ತದೆಂದು ಅವನು ಕನಸಿನಲ್ಲಿಯೂ ತಿಳಿದಿರಲಿಲ್ಲ. ತನ್ನ ತಾಯಿಯಾದ ಕೈಕೆಗೂ ಕೌಸಲ್ಯೆಗೂ ಇರುವ ವ್ಯತ್ಯಾಸ ಹೋಲಿಸಲಾರದಾಯಿತು. ವಿಶಾಲ ಹೃದಯಿಗಳ ಭಾವನೆಗಳು ಪೂರ್ಣತ್ವವನ್ನು ಹೊಂದಿರುತ್ತವೆನ್ನುವ ಸತ್ಯವನ್ನು ಗುರುತಿಸಿದನು. ಕೈ ಜೋಡಿಸಿ, "ಅಮ್ಮಾ! ನಿಮ್ಮ ಪ್ರೇಮ ವಚನಗಳು ನನ್ನ ಹೃದಯಕ್ಕೆ ಪನ್ನೀರಿನ ಹನಿಗಳ ಹಾಗೆ ಹಾಯನ್ನುಂಟು ಮಾಡುತ್ತಿವೆ. ನಾನು ರಾಮನೆಂದು ತಿಳಿದಿದ್ದೀರಿ! ಅಮ್ಮಾ! ಆ ಪವಿತ್ರ ರಾಮನು ನಾನಲ್ಲ. ನಾನು ಕೈಕೆಯ ಕುಮಾರ! ಕುಟಿಲ ಸ್ವಭಾವದವನು! ನಾಚಿಕೆ ಲಜ್ಜೆ ಇಲ್ಲದ ತುಚ್ಛನು! ರಾಮ ಶತ್ರುವು! ನನ್ನಂಥ ಅಧಮನನ್ನು ರಾಮನೆಂದು ಭಾವಿಸಿ, ಸಂಭಾಷಿಸುತ್ತಿದ್ದೀರಾದ್ದರಿಂದ, ನಿಮ್ಮ ಚಿತ್ತವು ರಾಮನಲ್ಲೇ ಐಕ್ಯವಾಗಿದೆ. ಆದ್ದರಿಂದಲೇ ಎಲ್ಲರನ್ನೂ ರಾಮನೆಂದೇ ತಿಳಿಯುತ್ತಿದ್ದೀರಿ. ನಾನು ಸತ್ಯವನ್ನೇ ಹೇಳುತ್ತಿದ್ದೇನೆ. ನನ್ನನ್ನು ಕ್ಷಮಿಸು ತಾಯೀ! ರಾಮಚಂದ್ರನೇ ಪ್ರಭುವು. ಆ ಧರ್ಮಶೀಲನೇ ರಾಜ್ಯಾಧಿಕಾರಿ. ನನ್ನಂಥ ಕುಟಿಲ ಚಿತ್ತನು ರಾಜ್ಯವಾಳಿದರೆ ಭೂಮಿಯು ಪಾತಾಳಕ್ಕೆ ಕುಸಿಯುವುದು. ಸ್ವಾರ್ಥ ಪರರು, ಸಂಕುಚಿತ ಚಿತ್ತರು, ದುರಾಶಾಪರರು, ಆಡಂಬರ ಜೀವಿಗಳು, ಅಹಂಕಾರಿಗಳು, ಅಸೂಯಾಪರರು, ರಾಜ್ಯಾಧಿಕಾರಿಗಳಾಗಲಾರರು. ಅಂತಹವರ ಪರಿಪಾಲನೆ ಪ್ರಜೆಗಳಿಗೆ ಹಾನಿಯನ್ನು ಉಂಟುಮಾಡುವುದು, ಧರ್ಮವನ್ನು ನಾಶ ಮಾಡುವುದು, ದೇಶಕ್ಕೆ ಕೇಡು ತರುವುದು. ಸದಾಚಾರ, ಸಚ್ಛೀಲ, ತ್ಯಾಗ, ಸತ್ಯವಾಕ್ಯ ಪರಿಪಾಲಕರೇ ರಾಜ್ಯಾಧಿಕಾರಿಗಳಾಗಲು ಅರ್ಹರು. ಅಂಥ ಪ್ರಭುವು ಒಬ್ಬ ರಾಮಚಂದ್ರನಲ್ಲದೆ ಬೇರೆ ಯಾರೂ ನನಗೆ ಕಾಣಿಸುತ್ತಿಲ್ಲ. ಆದ್ದ

ರಿಂದ, ನಾನು ಈಗಲೇ ಹೋಗಿ ರಾಮಚಂದ್ರನ ಪಾದಗಳನ್ನು ಹಿಡಿದು ಪ್ರಾರ್ಥಿಸಿ, ಅಯೋಧ್ಯೆಗೆ ಕರೆದುಕೊಂಡು ಬರುತ್ತೇನೆ. ಅನುಜ್ಞೆ ದಯಪಾಲಿಸಿ, ತಡಮಾಡದೆ ಆಶೀರ್ವದಿಸಿ," ಎಂದು ಪಾದಗಳ ಮೇಲೆ ಬಿದ್ದನು.

ಭರತನ ಮಾತುಗಳಿಂದ ಕೌಸಲ್ಯೆಯ ಹೃದಯ ಸ್ವಲ್ಪ ಶಾಂತವಾಯಿತು. "ಮಗೂ! ನನ್ನ ರಾಮನ ಭಾವನೆಗಳೆಲ್ಲವೂ ನಿನ್ನಲ್ಲಿ ಪ್ರತಿಬಿಂಬಿಸುತ್ತಿವೆ. ನಿನ್ನನ್ನು ನೋಡಿಯಾದರೂ ರಾಮ ವಿಯೋಗವನ್ನು ಸಹಿಸಿಕೊಳ್ಳುತ್ತೇನೆ. ನೀನೂ ಅಡವಿಗೆ ಹೋದರೆ ನಮ್ಮ ಗತಿಯೇನು? ಇಲ್ಲಿರಲು ಸಾಧ್ಯವಿಲ್ಲವೆನ್ನುವೆಯಾ? ಹಾಗಾದರೆ ನನ್ನನ್ನೂ ಕೂಡ ಅಡವಿಗೆ ಕರೆದುಕೊಂಡು ಹೋಗು. ನಾನು ಯಾರಿಗಾಗಿ ಅಯೋಧ್ಯೆಯಲ್ಲಿ ಜೀವಿಸಿರಬೇಕು? ಪತಿಯನ್ನು ಕಳೆದುಕೊಂಡು, ಸುತನಿಗೆ ದೂರವಾಗಿ ಈ ಸತಿಯು ಜೀವಿಸುವುದಕ್ಕಿಂತ, ವಿಯೋಗ ದುಃಖದಲ್ಲೇ ನನ್ನ ಪ್ರಾಣವನ್ನು ಲೀನಗೊಳಿಸುವುದೊಳ್ಳೆಯದಲ್ಲವೆ? ಗುರುವಾಜ್ಞೆ ಪಡೆದು ಬಾ. ನಾನೂ ಅರಣ್ಯವನ್ನು ಪ್ರವೇಶಿಸಿ ಸೀತಾರಾಮಲಕ್ಷ್ಮಣರೊಂದಿಗೆ ಸ್ವಲ್ಪ ಕಾಲವಾದರು ಕಳೆದು ನನ್ನ ಜನ್ಮವನ್ನು ಮುಗಿಸುತ್ತೇನೆ," ಎಂದಳು. ಅವಳ ಮಾತುಗಳು ಭರತನಿಗೆ ಶಾಂತಿ ನೀಡಿತು. ಕೌಸಲ್ಯೆ ಸುಮಿತ್ರೆಯರಿಗೆ ನಮಸ್ಕರಿಸಿ ಅವನು ಶತ್ರುಘ್ನನೊಂದಿಗೆ ಕೈಕೆಯ ಭವನಕ್ಕೆ ಹೊರಟನು.

**ಭರತನ ಕೋಪ**: ಕೈಕೆಯು ಮಂಥರೆಯ ಮಾತು ಕೇಳಿ ಇಂಥ ಘಾತಕ ಕೃತ್ಯ ಮಾಡಿದಳಲ್ಲಾ ಎಂದು ಚಿಂತಿಸುತ್ತಾ ಉಕ್ಕಿಬರುತ್ತಿದ್ದ ಕ್ರೋಧವನ್ನು ಅದುಮಿಕೊಳ್ಳುತ್ತಾ ಅವರು ಕೈಕಾ ಭವನವನ್ನು ಪ್ರವೇಶಿಸಿದರು. ಭವನವನ್ನು ಪ್ರವೇಶಿಸುತ್ತಿದ್ದಂತೆಯೇ, ಮಂಥರೆಯು ಚೆನ್ನಾಗಿ ಅಲಂಕಾರ ಮಾಡಿಕೊಂಡು ಅವರ ಆಗಮನವನ್ನೇ ನಿರೀಕ್ಷಿಸುತ್ತಿದ್ದುದನ್ನು ನೋಡಿ, ಶತ್ರುಘ್ನನು ತಾಳಲಾರದೆ ಮಂಥರೆಯ ಕೂದಲನ್ನು ಹಿಡಿದು ಕೆಳಕ್ಕೆ ಕೆಡವಿದನು. ಮಂಥರೆಯು "ಅಯ್ಯೋ! ಅಯ್ಯೋ!" ಎಂದು ಕೂಗಿಕೊಂಡದ್ದು ಕೈಕೆಗೆ ಕೇಳಿಸಿತು. ಅವಳು ತಕ್ಷಣ ಓಡಿ ಬಂದು, ಶತ್ರುಘ್ನನನ್ನು ತರಾಟೆಗೆ ತೆಗೆದುಕೊಂಡಳು. ಅವಕಾಶ ಸಿಕ್ಕಿದ್ದೇ ತಡ, ಭರತನ ಕೋಪ ಸಿಡಿಯತೊಡಗಿತು.

"ಛೀ ಪಾಪಾತ್ಮಳೇ! ಈ ದುರ್ಮಾರ್ಗಿಯ ಮಾತನ್ನು ನಂಬಿ ಮಹಾಪಾಪಕ್ಕೆ ಕೈಹಾಕಿದೆ. ಈ ದುರ್ಬುದ್ಧಿ ನಿನ್ನಲ್ಲಿ ಹುಟ್ಟಿದ ತಕ್ಷಣವೇ ನಿನ್ನ ಹೃದಯವಾದರೂ ಏಕೆ ಚೂರಾಗಲಿಲ್ಲ. ಇಂಥ ಕೋರಿಕೆಗಳನ್ನು ಕೇಳಲು ನಿನ್ನ ನಾಲಗೆಯಾದರು ಹೇಗೆ ಬಂತು? ಅದು ಭಸ್ಮವೇಕಾಗಲಿಲ್ಲ? ಯಾವ ಮುಖ ಇಟ್ಟುಕೊಂಡು ಈ ರಾಜಭವನದಲ್ಲಿ ವಾಸ ಮಾಡುತ್ತಿದ್ದೀಯಾ? ನಾಚಿಕೆ ಇಲ್ಲವೆ! ನಿನ್ನಂಥ

ದುರ್ಮಾರ್ಗಿಯ ಮಾತಿನ ಮೇಲೆ ರಾಜನಿಗೆ ನಂಬಿಕೆಯಾದರೂ ಹೇಗೆ ಬಂತು? ರಾಜನು ಕಾಮಾಂಧನಾಗಿ ಮಗನನ್ನು ಮಾರಿ, ಹೆಂಡತಿಯ ಪ್ರೀತಿ ಪಡೆದುಕೊಳ್ಳು ವಂತೆ ನೀನು ಹೂಡಿದ ಸನ್ನಾಹ ಇದೆಂದು ತೋರುತ್ತದೆ. ರಾಜನ ಪವಿತ್ರ ಹೃದಯವನ್ನು ಹಾಳುಮಾಡಿ, ರಾಜ್ಯಕ್ಕೆ ಬೆಂಕಿ ಹಚ್ಚಿ, ವಂಶ ನಾಶಮಾಡಿ, ರಘು ವಂಶವನ್ನು ನಿರ್ಮೂಲನಮಾಡಲು ಹೊರಟ ಕುಟಿಲಾತ್ಮಳಾದ ನಿನ್ನನ್ನು ತಾಯಿ ಯೆಂದು ಕರೆಯುವುದು ಮಹಾ ಪಾಪ.

ಪರರ ಮಕ್ಕಳಿಗೆ ಕೆಡುಕನ್ನು ಹಾರೈಸಿದರೆ ನಿನ್ನ ಮಕ್ಕಳಿಗೆ ಒಳ್ಳೆಯದಾಗುವುದು ಎಂದು ಹೇಗೆ ತಿಳಿದೆ? ನಿನ್ನ ಮಕ್ಕಳಂತಲ್ಲವೆ ಪರರ ಮಕ್ಕಳು? ಪರರ ಮಕ್ಕಳಿಗೆ ಕೇಡು ಹಾರೈಸುವ ಸ್ತ್ರೀಯರು ತಮ್ಮ ಮಕ್ಕಳಿಗೇ ಕೇಡನ್ನು ತಂದುಕೊಳ್ಳುತ್ತಾರೆನ್ನುವ ಪರಮ ಸತ್ಯವನ್ನು ನೀನು ತಿಳಿಯಲಾರದೆ ಹೋದೆ! ರಾಜವಂಶದಲ್ಲಿ ಹುಟ್ಟಿ ರಾಕ್ಷಸ ಗುಣಗಳನ್ನು ಪಡೆದಿರುವುದು ನಿನ್ನ ಯಾವ ಜನ್ಮದ ಫಲವೋ! ಇದೆಲ್ಲಾ ನನ್ನ ದುರದೃಷ್ಟ. ಅದರಲ್ಲೂ ನಿರ್ಮಲ, ನಿಶ್ಚಲ, ನಿಸ್ವಾರ್ಥಪರನಾದ ನನ್ನ ರಾಮಚಂದ್ರ ಪ್ರಭುವನ್ನು, ಮಹಾ ಸಾಧ್ವೀಮಣಿ ಸೀತಾಮಾತೆಯನ್ನು ಕಾಡಿಗೆ ಕಳಿಸುವುದೆಂದರೆ ಎಂಥ ಘೋರ, ಎಂಥ ಕಠಿಣ ಕೃತ್ಯ. ಛೀ, ಇಂಥ ದುರ್ಮಾರ್ಗಿಯಾದ ನಿನ್ನೊಂದಿಗೆ ಸಂಭಾಷಿಸುವುದು ಕೂಡ ನನ್ನ ಪಾಪದ ಫಲವೇ ಸರಿ.

ನಾನೂ ಸಹ ಯಾವ ಜನ್ಮದಲ್ಲಿ ಎಂಥ ಪಾಪ ಮಾಡಿದ್ದೆನೋ ಏನೋ! ಇಲ್ಲದಿದ್ದರೆ ನಿನ್ನಂಥ ಕುಟಿಲಾತ್ಮಳ ಹೊಟ್ಟೆಯಲ್ಲಿ ಹುಟ್ಟುತ್ತಿದ್ದೆನೇ? ಪಾಪಿಗಳು ಪಾಪಿಗಳೊಂ ದಿಗೇ ಸೇರುವರಲ್ಲದೆ, ಪುಣ್ಯವಂತರು ಸೇರುವುದಿಲ್ಲ, ಅಲ್ಲವೇ? ಸೂರ್ಯವಂಶವು ಹಂಸದಂತೆ ಕಳಂಕರಹಿತವಾದುದು. ನೀನು ನಿಜವಾಗಿಯೂ ನನ್ನ ತಾಯಿಯೇ ಏನು? ನಿನ್ನ ತಾಯಿಯು ತನ್ನ ಮನೋಭೀಷ್ಟವನ್ನು ನೆರವೇರಿಸಿಕೊಳ್ಳಲು ತನ್ನ ಗಂಡನನ್ನು ಕೊಂದಳು. ನೀನೂ ನಿನ್ನ ದುರಾಶೆಯನ್ನು ನೆರವೇರಿಸಿಕೊಳ್ಳಲು ನಿನ್ನ ಗಂಡನನ್ನು ಕೊಂದೆ. ವಂಶಾಚಾರಕ್ಕೆ ವಿರುದ್ಧವಾಗಿ ದೊಡ್ಡವನನ್ನು ಬಿಟ್ಟು ಚಿಕ್ಕವನು ರಾಜ್ಯಭಾರ ಮಾಡುವುದುಂಟೆ? ಈ ದುರ್ಭಾವನೆ ನಿನ್ನಲ್ಲಿ ಇಂದು ಬಂದದ್ದಲ್ಲ. ಅದೇ ಬೀಜರೂಪದಲ್ಲಿ ಮೊದಲಿನಿಂದಲೂ ನಿನ್ನಲ್ಲಿ ಇದ್ದೇ ಇತ್ತು. ಇಲ್ಲದಿದ್ದರೆ ಇಂದು ಹೀಗೆ ವೃಕ್ಷವಾಗಿ ಒಮ್ಮೆಲೇ ಬೆಳೆಯಲು ಸಾಧ್ಯವಿಲ್ಲ. ಈ ಬುದ್ಧಿ ನಿನ್ನಲ್ಲಿ ಮೊದಲೇ ಇತ್ತಾದರೆ ನಾನು ಹುಟ್ಟಿದ ತಕ್ಷಣ ನನ್ನನ್ನು ಕೊಂದು ಹಾಕಿದ್ದರೆ ಈ ರಾಜ್ಯವು ಹೀಗೆ ದುರವಸ್ಥೆಯ ಪಾಲಾಗುತ್ತಿರಲಿಲ್ಲ.

ಹೇಳಿ ಏನು ಪ್ರಯೋಜನ. ಮರವನ್ನು ಕಡಿದು ಕೊಂಬೆಗೆ ನೀರು ಹುಯ್ದು ಬೆಳೆಸುವ ಬುದ್ಧಿ ನಿನ್ನದು. ಮೀನುಗಳು ಬದುಕಿರಲೆಂದು ಬಯಸಿ ಸರೋವರದ ನೀರನ್ನು

ಹೊರಹಾಕಿದ ನಿನ್ನ ಅವಿವೇಕಕ್ಕೆ ನಗಬೇಕೋ ಅಳಬೇಕೋ ಅರ್ಥವಾಗುತ್ತಿಲ್ಲ. ನಿನ್ನೊಂದಿಗೆ ಸಂಭಾಷಿಸಿ ಕಾಲವನ್ನು ಅಪವಿತ್ರ ಮಾಡುವುದಕ್ಕಿಂತ, ನಾನೀಗಲೇ ರಾಮನ ಬಳಿಗೆ ಹೋಗಿ, ಅವನನ್ನು ಅಯೋಧ್ಯೆಗೆ ಬರುವಂತೆ ಪ್ರಾರ್ಥಿಸಿ, ಕರೆತರುತ್ತೇನೆ. ಅವನು ಒಪ್ಪದಿದ್ದರೆ, ನಾನು ಆ ಪ್ರಭು ಸನ್ನಿಧಿಯಲ್ಲಿ ಲಕ್ಷ್ಮಣನ ಹಾಗೆ ಸೇವೆ ಮಾಡುತ್ತಾ ಇದ್ದು ಬಿಡುತ್ತೇನೆ. ನಿನ್ನ ಮುಖವನ್ನು ನೋಡುವುದಿಲ್ಲ," ಎಂದು ಹೇಳಿ ತಮ್ಮನೊಂದಿಗೆ ಹೊರಟನು. ಕೈಕೆಯು ತನ್ನ ತಪ್ಪನ್ನು ತಿಳಿದು, ತನ್ನ ಸನ್ನಾಹವು ಕಡೆಗೆ ಈ ರೀತಿ ಪರಿವರ್ತನೆ ಗೊಂಡಿತಲ್ಲಾ ಎಂದು ವಿಶಾದಿಸಿದಳು. ಕೆಟ್ಟ ಆಲೋಚನೆಗಳು ತಾತ್ಕಾಲಿಕ ತೃಪ್ತಿ ಕೊಡುವುವೇ ವಿನಾ ಕೊನೆಗೆ ಅವೇ ನಮ್ಮ ಪತನಕ್ಕೆ ರಾಜಮಾರ್ಗಗಳಾಗುವುವೆನ್ನುವುದನ್ನು ತಿಳಿದು ದುಃಖಿಸಿದಳು. ಬೇರೆ ಮಾರ್ಗವಿಲ್ಲದೆ, ಮಾತು ಹೊರಡದೆ, ಸ್ತಂಭಿಸಿಹೋದಳು. ಮಂಥರೆಯ ಬಗ್ಗೆ ಬೇಸರ ಹುಟ್ಟಿತು. ಭರತನಾಡಿದ ಮಾತುಗಳ ಅಂತರಾರ್ಥವನ್ನು, ಅದರ ಸತ್ಯವನ್ನು ಗುರುತಿಸಿದಳು. ಭರತನ ಪವಿತ್ರವಾದ ಭಾವನೆಗಳಿಗೆ ಸಂತೋಷಿಸಿದಳು. ತನ್ನ ಪಾಪ ಬುದ್ಧಿಗೆ ನಾಚಿಕೆಪಟ್ಟಳು.

# ೧೭ ಭರತ ಮಿಲನ

**ಭರತನ ಭ್ರಾತೃ ಪ್ರೇಮ**: ಕೈಕೆಯ ಮಂದಿರದಿಂದ ಹೊರಟು ಭರತ ಶತ್ರುಘ್ನರು ನೇರವಾಗಿ ಮಂತ್ರಿಗಳು, ಗುರುಗಳು, ಪುರಪ್ರಮುಖರು ಇದ್ದ ಸಮಾವೇಶಕ್ಕೆ ಹೋದರು. ಇವರ ಆಗಮನವನ್ನೇ ಎದುರು ನೋಡುತ್ತಿದ್ದ ಮಂತ್ರಿಗಳು, ಏನು ನಿರ್ಣಯ ಮಾಡಿದ್ದಾರೆನ್ನುವುದನ್ನು ಕೇಳಲು ಕಾತುರರಾಗಿ, ನಿಶ್ಶಬ್ದವಾಗಿ, ಏಕಾಗ್ರತೆ ಯಿಂದ ಕುಳಿತಿದ್ದರು. ಭರತನು ಗುರುಗಳ ಪಾದಗಳಿಗೆ ನಮಸ್ಕರಿಸಿ, "ಗುರುದೇವಾ! ನಾನು ಪರಮ ಸತ್ಯವನ್ನು ಆಡುತ್ತಿದ್ದೇನೆ. ನಿಷ್ಕಪಟದಿಂದ ವಿವರಿಸುತ್ತೇನೆ. ನನ್ನನ್ನು ನನ್ನ ಮಾತುಗಳನ್ನು ನಂಬುವಿರೆಂದು ಆಶಿಸುತ್ತಿದ್ದೇನೆ. ಕಾರಣಕ್ಕಿಂತ ಕಾರ್ಯವೇ ಕಠಿಣ. ಪಾಷಾಣದಲ್ಲಿ ಹುಟ್ಟಿದ ಲೋಹವು ಪಾಷಾಣಕ್ಕಿಂತ ಗಟ್ಟಿ ಎನ್ನುವುದನ್ನು ನೀವು ಬಲ್ಲಿರಿ. ಕಠಿಣಳಾದ ಕೈಕೆಯ ಗರ್ಭದಲ್ಲಿ ಹುಟ್ಟಿದ ನಾನು ಅವಳಿಗಿಂತ ಕಠಿಣನು. ಆದ್ದರಿಂದಲೇ ರಾಮ ವಿಯೋಗದಿಂದ ನನ್ನ ಪ್ರಾಣವು ಶರೀರವನ್ನು ಬಿಡದೆ ಇರುವುದು. ಪ್ರಜೆಗಳನ್ನು ಅಶಾಂತಿಯಲ್ಲಿ ಮುಳುಗಿಸಿ, ಮಗನನ್ನು ಅಪಕೀರ್ತಿಯ

ಪಾಲು ಮಾಡಿರುವಾಗ ರಾಜ್ಯಕ್ಕೆ ಮಾಯದ ಮಚ್ಚೆಯಾಗಿರುವ ನಾನು ರಾಜ್ಯವಾಳ ಬೇಕೆಂದು ನೀವು ಆಶಿಸುವುದರಲ್ಲಿ ನನಗೆ ಎಷ್ಟು ಮಾತ್ರಕ್ಕೂ ಸಂತೃಪ್ತಿ ಇಲ್ಲ. ನಾನು ಅದಕ್ಕೆ ಅರ್ಹನಲ್ಲ.

ರಾಮಚಂದ್ರನು ಅಡವಿಯಲ್ಲಿ ಸಂಚರಿಸುತ್ತಿರುವಾಗ, ನಾನು ರಾಜ್ಯಾಧಿಕಾರಿಯಾಗಿ ಸಿಂಹಾಸನದ ಮೇಲೆ ಕುಳಿತುಕೊಂಡರೆ ಲೋಕದ ಜನ ನಗುವುದಿಲ್ಲವೇ? ನನ್ನ ಪರಿಪಾಲನೆ ಪ್ರಜೆಗಳಿಗೆ ಹಾನಿಯನ್ನೇ ಉಂಟು ಮಾಡುವುದು. ನೀತಿ ನಿಜಾಯಿತಿ ಗಳನ್ನು ಬಿಟ್ಟು ಅಕ್ರಮವಾಗಿ, ಧರ್ಮ ವಿರುದ್ಧವಾಗಿ ರಾಜ್ಯಾಧಿಪತ್ಯ ವಹಿಸಿಕೊಳ್ಳುವ ವರನ್ನು ಪ್ರಜೆಗಳು ಯಾರೂ ಗೌರವಿಸುವುದಿಲ್ಲ. ಅವರನ್ನು ದಂಡಿಸಲು ಅವನಿಗೆ ಅಧಿಕಾರವಿರುವುದಿಲ್ಲ. ನನ್ನಲ್ಲಿ ದೋಷಗಳನ್ನು ಗುಡ್ಡದಷ್ಟು ಇಟ್ಟುಕೊಂಡು ನಾನು ಇತರರ ದೋಷಗಳನ್ನು ಯಾವ ಮುಖ ಇಟ್ಟುಕೊಂಡು ಹೇಳಲಿ? ನನ್ನ ದೋಷಗಳನ್ನು ನಾನು ಅಧಿಕಾರ ಬಲದಿಂದ ಮುಚ್ಚಿಕೊಂಡಿದ್ದರೂ ಸಮಯ ಬಂದಾಗ ಪ್ರಜೆಗಳು ಅವುಗಳನ್ನು ಬಯಲು ಮಾಡದೆ ಇರುವುದಿಲ್ಲ. ನನ್ನ ತಾಯಿಯ ಕೆಟ್ಟ ನೆನಪುಗಳು ನನ್ನನ್ನು ತಲೆ ಬಗ್ಗಿಸುವಂತೆ ಮಾಡಿತು. ನಾನು ಸೀತಾರಾಮರನ್ನು ನೋಡದೆ ಒಂದು ಕ್ಷಣ ಇಲ್ಲಿರಲಾರೆ. ನನ್ನ ಈ ದಾರುಣವಾದ ದುಃಖವನ್ನು ನಿಮ್ಮೆದುರು ಬಿನ್ನವಿಸಿಕೊಳ್ಳುತ್ತಿದ್ದೇನೆ. ನನ್ನ ದುಃಖವು ರಾಮ ದರ್ಶನ ದಿಂದ ಶಮನವಾಗುವುದೇ ವಿನಾ ಅನ್ಯ ಬೋಧನೆಗಳು ನನ್ನನ್ನು ಸಮಾಧಾನ ಗೊಳಿಸಲಾರವು.

ನಾನು ಕೌಸಲ್ಯಾ ಸುಮಿತ್ರೆಯರ ಅಪ್ಪಣೆ ಪಡೆದು ಬಂದಿದ್ದೇನೆ. ನಾಳೆ ಬೆಳಗ್ಗೆ ನಾನು ನನ್ನ ತಮ್ಮನೊಂದಿಗೆ ನನ್ನ ಪ್ರಭುವಿನ ದರ್ಶನ ಮಾಡಲು ಹೊರಡುವ ನಿಶ್ಚಯ ಮಾಡಿದ್ದೇನೆ. ನನ್ನ ಪಾಪಗಳೆಷ್ಟೇ ಇದ್ದರೂ ರಾಮನ ದೃಷ್ಟಿ ಬಿದ್ದೊಡನೆ ಭಸ್ಮವಾಗುವುವು. ರಾಮಪ್ರಭುವು ನನ್ನನ್ನು ಮಾತನಾಡಿಸದಿದ್ದರೂ ಅವನನ್ನು ದರ್ಶನ ಮಾಡಬಹುದಾದ ಸ್ಥಳದಲ್ಲಿದ್ದುಕೊಂಡು ಕಾಲವನ್ನು ಹಾಯಾಗಿ ಕಳೆಯು ತ್ತೇನೆ. ಓ ಮಹಾಜನರೇ! ನೀವೆಲ್ಲರೂ ನನ್ನ ಶ್ರೇಯಸ್ಸನ್ನು ಕೋರಿ ನನ್ನನ್ನು ಕಳಿಸಿಕೊಡಿ. ಮಂತ್ರಿಗಳೇ! ನಾನು ರಾಮನ ಬಳಿಗೆ ಹೋಗಲು ಅನುಜ್ಞೆ ದಯಪಾಲಿಸಿ. ನಾನು ರಾಮ ಪ್ರಭುವಿನ ದಾಸನು. ನಮಗೆಲ್ಲರಿಗೂ ಅವನೇ ಪ್ರಭುವು," ಎಂದು ಪ್ರಾರ್ಥಿಸಿದನು.

ಅವನ ಮಾತುಗಳನ್ನು ಕೇಳಿದ ಪುರಪ್ರಮುಖರು, ಮಂತ್ರಿಗಳು, ಸಾಮಂತರು ಮಾತನಾಡದಾದರು. ಅವನ ಬಾಧೆಯನ್ನು ಅರ್ಥಮಾಡಿಕೊಂಡರು. ಭರತನು ನಿರ್ಮಲ ಚಿತ್ತನೆಂದೂ ತಾಯಿಯ ಕುಟಿಲ ಸನ್ನಾಹಕ್ಕೆ ಕಟ್ಟುಬಿದ್ದವನಲ್ಲವೆಂದೂ

ತಿಳಿದು, ಅವನ ಮಾತುಗಳ ಪವಿತ್ರತೆಯನ್ನು ಗುರುತಿಸಿದರು. ಪುರಪ್ರಮುಖ ರೊಂದಿಗೆ ಪ್ರಧಾನಿಯು ಎದ್ದು, "ಪ್ರಭೂ, ನಿಮ್ಮೊಂದಿಗೆ ನಾವೂ ಹೊರಟು ಬರುತ್ತೇವೆ. ರಾಮ ವಿಯೋಗವನ್ನು ನಾವು ಕೂಡ ಸಹಿಸಲಾರದೆ ಹೋಗಿದ್ದೇವೆ. ಒಂದು ಸಾರಿ ಆ ಪ್ರಭುವನ್ನು ದರ್ಶನ ಮಾಡಿದರೆ ಸಾಕು, ಆಮೇಲೆ ನಮ್ಮ ಪ್ರಾಣವೇನಾದರೂ ಪರವಾಗಿಲ್ಲ," ಎಂದು ಅಪ್ಪಣೆ ಕೋರಿದರು. ಪ್ರಜೆಗಳು ತಮ್ಮನ್ನೂ ಕರೆದೊಯ್ಯುವಂತೆ ಪ್ರಾರ್ಥಿಸಿದರು.

**ರಾಮದರ್ಶನಕ್ಕೆ ಅಯೋಧ್ಯಾವಾಸಿಗಳ ಪಯಣ**: ಈ ವಾರ್ತೆಯು ಕೆಲವು ನಿಮಿಷಗಳಲ್ಲೇ ನಗರದಲ್ಲೆಲ್ಲಾ ಹರಡಿ ಪ್ರತಿ ಮನೆಯಲ್ಲೂ ಸ್ತ್ರೀ ಪುರುಷ ಬಾಲ ವೃದ್ಧರೆಲ್ಲರೂ ಹೊರಡಲು ಸಿದ್ಧರಾದರು. ಯಾರು ಯಾರನ್ನು ಬೇಡವೆಂದು ನಿಲ್ಲಿಸಿಯಾರು? ರಾಮದರ್ಶನಕ್ಕೆ ಹೋಗಬೇಡವೆಂದು ಹೇಳುವ ಮೂರ್ಖರು ಆಗ ಅಯೋಧ್ಯೆಯಲ್ಲಿ ಒಬ್ಬರೂ ಇರಲಿಲ್ಲ. ಅವರೆಲ್ಲರ ಜೊತೆಗೆ ತಾಯಿಯರಾದ ಕೌಸಲ್ಯಾ ಸುಮಿತ್ರೆಯರೂ ದಾಸಿಯರೊಂದಿಗೆ ಹೊರಟರು. ಆ ವೇಳೆಗೆ, ಕೈಕೆಯು ತನ್ನ ಪಾಪಕ್ಕೆ ಪಶ್ಚಾತ್ತಾಪ ಪಟ್ಟು ತನ್ನನ್ನೂ ಸಹ ವನಕ್ಕೆ ಕರೆದೊಯ್ಯುವಂತೆ ತನ್ನ ತಪ್ಪನ್ನು ಕ್ಷಮಿಸುವಂತೆ ಕೌಸಲ್ಯೆಯನ್ನು ಪ್ರಾರ್ಥಿಸಿ, ರಾಮನು ಅಯೋಧ್ಯೆಗೆ ಹಿಂತಿರುಗಿ ಬರುವಂತೆ ತಾನೂ ಪ್ರಯತ್ನಿಸುವ ಆಸೆಯನ್ನು ತಿಳಿಸಿದಳು. ನಿರ್ಮಲ ಚಿತ್ತಳಾದ ಕೌಸಲ್ಯೆಯು ಕೈಕೆಯ ಬಗೆಗೆ ಏನೊಂದು ಕೆಟ್ಟ ಯೋಚನೆ ಮಾಡದೆ, ಅಂಥ ಕೆಟ್ಟ ಯೋಚನೆ ಮನಸ್ಸಿಗೆ ಬರಗೊಡದೆ ಖಂಡಿತವಾಗಿ ತನ್ನೊಂದಿಗೆ ಬರಬಹುದೆಂದು ಅವಳಿಗೆ ಹೇಳಿ ಕಳಿಸಿದಳು.

ನಗರದಿಂದ ಎಲ್ಲರೂ ಹೊರಡುವವರಿದ್ದಾರೆಂದು ಭರತನಿಗೆ ತಿಳಿದೊಡನೆ ನಗರ ಸಂರಕ್ಷಣೆಗೆ ಕೆಲವರು ಇರಲೇಬೇಕಾದ್ದು ಅನಿವಾರ್ಯವೆಂದು ಮಂತ್ರಿಗೆ ತಿಳಿಸಿ, ಕೆಲವರು ನಗರದಲ್ಲಿರುವಂತೆ ಏರ್ಪಾಟು ಮಾಡಿದನು. ರಾತ್ರಿಯೇ ವಾಹನಗಳು ಪ್ರತಿ ಮನೆಯ ಮುಂದೂ ಸಿದ್ಧವಾಗಿ ಬಂದು ನಿಂತವು. ಎಲ್ಲ ಬಗೆಯ ವಾಹನಗ ಳನ್ನೂ ಸಿದ್ಧಪಡಿಸಿದರು. ಎಲ್ಲರಿಗೂ ದಾರಿಯಲ್ಲಿ ಬೇಕಾಗುವ ಪಾನೀಯಗಳ ಏರ್ಪಾಟು ಮಾಡಿದರು. ಚಕ್ರವಾಕ ಮಿಥುನದಂತೆ ನಗರದ ಸ್ತ್ರೀ ಪುರುಷರು ಪ್ರಾತಃ ಕಾಲಕ್ಕಾಗಿ ಎದುರು ನೋಡುತ್ತಿದ್ದರು. ಅಂದಿನ ರಾತ್ರಿ ಪುರಜನರಿಗೆ ಅದೊಂದು ಮಹಾ ಸುದಿನವಾಗಿತ್ತು. ಯಾವಾಗ ಸೀತಾ ರಾಮಚಂದ್ರರನ್ನು ನೋಡುತ್ತೇವೋ ಎಂದು ಒಂದೇಸಮನೆ ನಿರೀಕ್ಷಿಸುತ್ತಿದ್ದರು. ಚತುರಂಗ ಬಲವನ್ನು ಜೊತೆಗೆ ಸಿದ್ಧವಾ ಗಿಟ್ಟುಕೊಂಡರು. ಅಗ್ನಿಹೋತ್ರಕ್ಕೆ ಬೇಕಾದ ಸಾಮಾನುಗಳನ್ನು ತೆಗೆದುಕೊಂಡರು. ಪಂಡಿತರು ರಥದಲ್ಲಿ, ವಾಹನದಲ್ಲಿ ಸಹಿತ ವೇದ ಪಾರಾಯಣ ಮಾಡುತ್ತಿರ ಬೇಕೆಂದು ಮಂತ್ರಿಯು ಆಜ್ಞಾಪಿಸಿದನು. ಭರತ ಶತ್ರುಘ್ನರ ರಥಗಳು ಮುಂದೂ

ಅವುಗಳ ಹಿಂದೆಯೇ ಕೌಸಲ್ಯೆಯ ಪಲ್ಲಕ್ಕಿಯೂ ಇರುವಂತೆ ವ್ಯವಸ್ಥೆ ಮಾಡಿದರು. ಎಲ್ಲರೂ ಅವರವರಿಗೆ ಗೊತ್ತು ಮಾಡಿದ ವಾಹನಗಳಲ್ಲಿ ಆಸೀನರಾಗುವಂತೆ ಭರತನು ಆಜ್ಞಾಪಿಸಿದನು. ಬೆಳಗಿನ ಸುಮುಹೂರ್ತದಲ್ಲಿ ಎಲ್ಲರೂ ಹೊರಟರು.

ಭರತ ಶತ್ರುಘ್ನರ ರಥಗಳು ಖಾಲಿಯಾಗಿಯೇ ಹೋಗುತ್ತಿದ್ದುವು. ಅವರು ಪಾದ ಚಾರಿಗಳಾಗಿ ರಥಗಳ ಜೊತೆಯಲ್ಲಿ ಬರುತ್ತಿದ್ದರು. ಅವರು ಹಾಗೆ ಸ್ವಲ್ಪ ದೂರ ನಡೆದು ಬರಬಹುದೆಂದು ಎಲ್ಲರೂ ತಿಳಿದಿದ್ದರು. ಆದರೆ, ಎಷ್ಟು ಹೊತ್ತಾದರೂ ಭರತ ಶತ್ರುಘ್ನರು ರಥದಲ್ಲಿ ಕೂರದಿದ್ದುದನ್ನು ನೋಡಿ, ಕೌಸಲ್ಯೆಯು ಭರತನನ್ನು ಕರೆದು, "ಮಗೂ! ನೀನು ಹೀಗೆ ಪಾದಚಾರಿಯಾಗಿ ಬರುವುದನ್ನು ನನ್ನ ಮನಸ್ಸು ಸಹಿಸುತ್ತಿಲ್ಲ. ಸ್ವಲ್ಪ ಹೊತ್ತಾದರೂ ರಥದಲ್ಲಿ ಕುಳಿತುಕೊ, ಬಾ," ಎಂದು ಕೋರಿದಳು. ಭರತನು, "ಅಮ್ಮಾ! ನನ್ನ ಪಾಪ ಪರಿಹಾರಕ್ಕೆ ಇದೊಂದು ಮಾರ್ಗ. ಪಾದಚಾರಿ ಗಳಾಗಿ ಸಂಚರಿಸುತ್ತಿರುವ ಸೀತಾರಾಮಲಕ್ಷ್ಮಣರಿಗಿಲ್ಲದ ಶ್ರಮ ನನಗೇನು! ಅವರ ದಾಸನಾದ ನಾನು ರಥದಲ್ಲಿ ಕುಳಿತುಕೊಳ್ಳುವುದು ಮಹಾದೋಷ. ನಿಮ್ಮಾಜ್ಞೆಯನ್ನು ಮೀರುತ್ತಿದ್ದೇನೆಂದು ಭಾವಿಸದೆ, ಕ್ಷಮಿಸಿ, ನಡೆದು ಬರಲು ಅಪ್ಪಣೆ ಕೊಡಿ," ಎಂದು ಕೋರಿದನು. ಅಷ್ಟರಲ್ಲಿ, ಮುಂದಿನ ರಥದಲ್ಲಿ ಆಸೀನರಾಗಿದ್ದ ಗುರುಗಳಾದ ವಸಿಷ್ಠ ಅರುಂದತಿಯರು ತಮ್ಮ ರಥವನ್ನು ನಿಲ್ಲಿಸಿ, ಭರತನ ದೀಕ್ಷೆಯನ್ನು ತಿಳಿದು ತಮ್ಮ ರಥಕ್ಕೆ ಸಾರಥಿಯಾಗಿಯಾದರೂ ಬಂದು ಕುಳಿತುಕೊಳ್ಳುವಂತೆ ಕೋರಿದರು. ಭರತನು, "ಕ್ಷಮಿಸಿ," ಎನ್ನುತ್ತಾ, "ರಾಮ ರಥಕ್ಕೆ ನಾನು ದಾಸನು. ಮತ್ತು ಅವನ ರಥಕ್ಕೆ ಬಂದಿ. ನನಗೆ ರಾಮನ ರಥಕ್ಕೆ ಸಾರಥಿಯಾಗಲು ಅಮೂಲ್ಯ ಅವಕಾಶ ದೊರಕುವವರೆಗೂ ನಾನು ಯಾವ ರಥವನ್ನೂ ಹತ್ತೆನು, ಯಾವ ಕುದುರೆಯನ್ನೂ ಹಿಡಿಯೆನು. ಇದು ನನ್ನ ಪ್ರತಿಜ್ಞೆ," ಎಂದನು. ಅವನ ರಾಮ ಪ್ರೇಮಕ್ಕೆ ವಸಿಷ್ಠರು ಬಹುವಾಗಿ ಸಂತೋಷಿಸಿದರು.

ಮೊದಲನೆ ದಿನ ರಾತ್ರಿ ತಮಸಾನದೀ ತೀರವನ್ನೂ ಎರಡನೆ ದಿನ ಗೋಮತೀ ತೀರವನ್ನೂ ಸೇರಿದರು. ತಮಸಾ ನದಿಯು ಘೋಘ್ರನದಿಯ ಒಂದು ಉಪನದಿ, ಗೋಮತಿಯು ಗಂಗಾನದಿಯ ಉಪನದಿ. ಕತ್ತಲಾದ ಕೂಡಲೇ ರಥಗಳನ್ನು ನಿಲ್ಲಿಸಿ, ಸ್ತ್ರೀಯರಿಗೂ ಮಕ್ಕಳಿಗೂ ವೃದ್ಧರಿಗೂ ಸರಿಯಾದ ತಿಂಡಿ ತೀರ್ಥಾದಿಗಳನ್ನು ಒದಗಿಸಿರೆಂದು ಮಂತ್ರಿಗೂ ಸಿಪಾಯಿಗಳಿಗೂ ಭರತನು ಆಜ್ಞಾಪಿಸಿದನು. ಅವರ ವರಿಗೆ ನಿಯಮಿಸಿದ ಕೆಲಸಗಳನ್ನು ಅವರವರು ಆಯಾ ವೇಳೆಗೆ ಮಾಡುತ್ತಾ ಮಾರ್ಗ ಮಧ್ಯದಲ್ಲಿ ಯಾರಿಗೂ ಯಾವ ತೊಂದರೆಯೂ ಬರದಂತೆ ನೋಡಿ ಕೊಳ್ಳುತ್ತಾ ಹೋಗುತ್ತಿದ್ದರು. ಮೂರನೇ ದಿನ ಬೆಳಗ್ಗೆ ಹೊರಟು ರಾತ್ರಿ ವೇಳೆಗೆ ಶೃಂಗಿಬೇರಪುರಕ್ಕೆ ಬಂದರು.

**ಭರತನನ್ನು ನೋಡಿದ ಗುಹ**: ಭರತನ ಆಗಮನವನ್ನು ಕೇಳಿದ ನಿಷಾದಾಧಿಪತಿಯು ವಿಷಾದಿಸಿ, ಭರತನು ಅರಣ್ಯಕ್ಕೆ ಹೊರಟಿರುವುದರ ಕಾರಣವೇನು? ಹೊರಟರೂ ಇಷ್ಟು ಸೈನ್ಯದೊಂದಿಗೆ, ಚತುರಂಗಬಲ ಸಮೇತನಾಗಿ ಹೊರಟಿರುವುದರ ಅಂತರಾರ್ಥವೇನು? ಎಂದು ತನ್ನಲ್ಲೇ ಅನೇಕ ವಿಧವಾಗಿ ಅದರ ಅನುಕೂಲ ಪ್ರತಿಕೂಲಗಳ ವಿಚಾರ ಮಾಡಿದನು. ಮರವು ವಿಷವಾದ ಬಳಿಕ ಫಲವು ವಿಷವಾಗದೆ ಇದ್ದೀತೆ. ಎಂದು ನಿರ್ಣಯಿಸಿಕೊಂಡು, ತನ್ನ ಜಾತಿಯವರನ್ನು ಕರೆದು, "ಎಲ್ಲ ದೋಣಿಗಳನ್ನೂ ನೀರಿನಲ್ಲಿ ಮುಳುಗಿಸಬೇಕು. ದೋಣಿ ಮಾರ್ಗವನ್ನು ಮುಚ್ಚಬೇಕು. ಒಂದು ಚಿಕ್ಕ ದೋಣಿಯನ್ನೂ ನಡೆಸಕೂಡದು," ಎಂದು ಆಜ್ಞಾಪಿಸಿದನು. "ಈ ದಿನ ನಾವು ಜಾಗೃತರಾಗಿದ್ದು ಎಲ್ಲದಕ್ಕೂ ಸಂಸಿದ್ಧರಾಗಿದ್ದು, ಯಾರೂ ಆ ಕಡೆಯಿಂದ ಇಲ್ಲಿಗೆ ಬರದಂತೆ ನೋಡಿಕೊಳ್ಳಬೇಕು," ಎಂದು ಆಜ್ಞಾಪಿಸಿದನು. ತನ್ನ ಧನುರ್ಬಾಣಗಳನ್ನು ತರಿಸಿದನು. ಭರತನು ಮಹಾಸೈನ್ಯವುಳ್ಳವನಾದರೂ ರಾಮನಿಗಾಗಿ ತನ್ನ ಕಿಂಚಿತ್ ಶಕ್ತಿಯನ್ನು ಉಪಯೋಗಿಸುವುದಾಗಿ ನಿಶ್ಚಯಿಸಿದನು.

ಗುಹನು, ತನ್ನ ಜಾತಿಯವರನ್ನೆಲ್ಲಾ ಸೇರಿಸಿ, ಯುದ್ಧಕ್ಕೆ ಸರ್ವ ಸಿದ್ಧತೆಗಳನ್ನೂ ಮಾಡಿಕೊಂಡ ಮೇಲೆ ಭರತನು ಮಿತ್ರನೋ ಶತ್ರುವೋ ಮಧ್ಯಸ್ಥನೋ ಎನ್ನುವುದನ್ನು ಮೊದಲು ತಿಳಿಯೋಣವೆಂದು ಹೊರಟನು. ರಾಜನ ದರ್ಶನಕ್ಕೆ ಹೋಗುವಾಗ ತೆಗೆದುಕೊಂಡು ಹೋಗಬೇಕಾದ ವಸ್ತುಗಳನ್ನೆಲ್ಲಾ ಸಿದ್ಧಪಡಿಸಿಕೊಂಡು ಫಲಗಳನ್ನೂ ಪುಷ್ಪಗಳನ್ನೂ ಮೀನು ಮಾಂಸವನ್ನೂ ಬುಟ್ಟಿ ಬುಟ್ಟಿಗಳಲ್ಲಿ ತರಿಸಿದನು. ಕಂದಮೂಲ ಫಲಗಳು ಸತ್ವ ಗುಣ ಸಂಕೇತ. ಅವುಗಳನ್ನು ಸ್ವೀಕರಿಸಿದರೆ ಮಿತ್ರನೆಂದು ತಿಳಿಯುವುದು. ಮೀನು ಮಾಂಸವು ತಮೋ ಗುಣ ಸಂಕೇತ.

ನಿಷಾದಾಧಿಪತಿಯು ಇವುಗಳನ್ನು ಜೊತೆಯಲ್ಲಿ ತೆಗೆದುಕೊಂಡು ಭರತನನ್ನು ನೋಡಲು ಹೊರಟನು. ದಾರಿಯಲ್ಲಿ ಒಳ್ಳೆಯ ಶಕುನವಾಯಿತು. ದೂರದಿಂದ ವಸಿಷ್ಠರನ್ನು ನೋಡಿ, ಅವರ ಬಳಿ ಹೋಗಿ ತನ್ನ ಹೆಸರನ್ನು ಹೇಳಿ ಗುರುವಿಗೆ ದಂಡ ಪ್ರಣಾಮಗಳನ್ನು ಮಾಡಿದನು. ಅವನು ರಾಮನ ಸಖನೆಂದು ತಿಳಿದ ಗುರುವು ಆತನನ್ನು ಸ್ವಾಗತಿಸಿದರು. ಭರತನನ್ನು ಕರೆದು, ನಿಷಾದಾಧಿಪತಿಯನ್ನು ರಾಮನ ಸಖನೆಂದು ಅವನಿಗೆ ಪರಿಚಯ ಮಾಡಿಕೊಟ್ಟರು. ಅದನ್ನು ಕೇಳಿದೊಡನೆ ಭರತನು ನಿಷಾದಾಧಿಪತಿಯನ್ನು ಆಲಂಗಿಸಿಕೊಂಡು ಅನೇಕ ವಿಧವಾದ ಕ್ಷೇಮಸಮಾಚಾರಗಳನ್ನು ವಿಚಾರಿಸಿದನು. "ಇಡೀ ಒಂದು ರಾತ್ರಿ ರಾಮಚಂದ್ರನು ಈ ನದೀ ತೀರದಲ್ಲಿ ನನ್ನೊಂದಿಗೆ ಕಾಲ ಕಳೆದನು," ಎಂದು ಗುಹನು ಹೇಳಿದುದನ್ನು ಭರತನು ಕಣ್ಣು ಕಿವಿಗಳನ್ನು ಅರಳಿಸಿಕೊಂಡು ಕೇಳಿದನು, ಆ ರಾತ್ರಿ ರಾಮನೊಂದಿಗೆ ಕಳೆದ

ಪವಿತ್ರ ಸಮಯವನ್ನು ವರ್ಣಿಸೆಂದು ಗುಹನನ್ನು ಅತ್ಯಂತ ಕುತೂಹಲದಿಂದ ಪ್ರಾರ್ಥಿಸಿದನು.

**ವಿರೋಧಿಗಳಲ್ಲ**: ನಿಷಾದಾಧಿಪತಿಯು ರಾಮನನ್ನು ಬಹುವಾಗಿ ಕೊಂಡಾಡಿ, ಸೀತಾ ರಾಮ ಲಕ್ಷ್ಮಣರ ವಿಶ್ರಾಂತಿಗಾಗಿ ನಿರ್ಮಿಸಿದ ಕುಟೀರವನ್ನು ತೋರಿಸಿದನು. ಲಕ್ಷ್ಮಣನೊಂದಿಗೆ ತಾನು ಆ ರಾತ್ರಿ ನಡೆಸಿದ ಸಂಭಾಷಣೆಯನ್ನು ಭರತನಿಗೆ ಹೇಳುತ್ತಿರುವಾಗ, ಭರತ ಶತ್ರುಘ್ನರ ಕಣ್ಣುಗಳು ಹನಿಗೂಡಿ ಉಕ್ಕಿ ಬರುತ್ತಿದ್ದ ದುಃಖವನ್ನು ಅದುಮಿಕೊಳ್ಳುತ್ತಿದ್ದುದನ್ನು ನೋಡಿ ನಿಷಾದಾಧಿಪತಿಯು ಅವರ ಭಕ್ತಿ ಶ್ರದ್ಧೆಯನ್ನು ಅರ್ಥಮಾಡಿಕೊಂಡು, ಇವರು ನಿಜವಾಗಿಯೂ ರಾಮ ಸೋದರರೇ ವಿನಾ ರಾಮ ವಿರೋಧಿಗಳಲ್ಲವೆಂದು ನಿಶ್ಚಯ ಮಾಡಿಕೊಂಡನು. ಭರತನು ಸೀತಾರಾಮರಿಗಾಗಿ ನಿರ್ಮಿಸಿದ ಕುಟೀರವನ್ನು ದರ್ಶನ ಮಾಡಿ, ಅದನ್ನು ಜಾಗ್ರತೆಯಿಂದ ನೋಡಿಕೊಳ್ಳಬೇಕೆಂದು ಕೋರಿದನು.

ಗುರುವಾಜ್ಞೆಯಂತೆ ತಮ್ಮ ತಾಯಿಯರೊಂದಿಗೆ ಗಂಗಾನದಿಯಲ್ಲಿ ಸ್ನಾನ ಮಾಡಿ, ಮತ್ತೆ ನಿಷಾದಾಧಿಪತಿಯನ್ನು ಕರೆಸಿಕೊಂಡು, ಆ ರಾತ್ರಿ ರಾಮಚಂದ್ರನು ವಿಶ್ರಮಿಸಿದ ಸ್ಥಳವನ್ನು ತೋರಿಸೆಂದು ಕೋರಿದನು. ಗುಹನು ಅವರನ್ನು ಒಂದು ದೊಡ್ಡ ವಟ ವೃಕ್ಷದ ಬಳಿ ಕರೆದುಕೊಂಡು ಹೋಗಿ, ಅಲ್ಲಿ ಗಾಳಿಗೆ ಚದುರಿ ಹೋಗಿದ್ದ ದರ್ಭಾಸನವನ್ನು ತೋರಿಸಿ, ಸೀತಾರಾಮರು ಇಲ್ಲಿ ವಿಶ್ರಮಿಸಿದರೆಂದು ಹೇಳುತ್ತಲೇ ಭರತ ಶತ್ರುಘ್ನರು ಆ ಪವಿತ್ರ ಸ್ಥಳಕ್ಕೆ ನಮಸ್ಕರಿಸಿದರು. ರೇಷ್ಮೆ ಹಾಸಿಗೆಯ ಮೇಲೆ ಮಲಗುತ್ತಿದ್ದ ನನ್ನ ಪ್ರಭು ಇಂಥ ಒರಟು ನೆಲದ ಮೇಲೆ ಹೇಗೆ ಮಲಗಿದನೋ ಆ ಮಹಾತಾಯಿ ಸೀತಾದೇವಿ ಎಷ್ಟು ಶ್ರಮಪಟ್ಟಳೋ ಎಂದು ಇಬ್ಬರೂ ಬಹು ಬಾಧೆಪಡುತ್ತಾ ಅಲ್ಲೇ ಸ್ವಲ್ಪ ಕಾಲ ನಿಂತುಕೊಂಡರು. ತನ್ನ ಪ್ರಭು ಸಂಚರಿಸಿದ ಸ್ಥಳಗಳನ್ನು ತೋರಿಸೆಂದು ಭರತನು ಮತ್ತೆ ಕೋರಲು ನಿಷಾದಾಧಿಪತಿಯು ಅವರಿಗೆ ಶಿಂಶುಪ ವೃಕ್ಷವನ್ನು ತೋರಿಸಿ, ಅದರ ಕೆಳಗೆ ಕುಳಿತು ಫಲಗಳನ್ನು ತಿಂದರೆಂದು ಹೇಳಿದನು. ಭರತ ಶತ್ರುಘ್ನರು ಅಲ್ಲಿಯೂ ಅವರು ಕುಳಿತ ಆ ಸ್ಥಳಕ್ಕೆ ನಮಸ್ಕರಿಸಿದರು. ಆ ಸ್ಥಳಗಳನ್ನು ಸಂದರ್ಶಿಸಿದಷ್ಟು ಕಾಲವೂ ಭರತ ಶತ್ರುಘ್ನರು ಪಟ್ಟ ಬಾಧೆ ಅಷ್ಟಿಷ್ಟಲ್ಲ. ರಾಮ ಪ್ರೇಮಕ್ಕೆ ನಿದರ್ಶನವಾಗಿ ಅವರು ತೋರಿಸಿದ ವಿನಯ, ಭಕ್ತಿ, ಶ್ರದ್ಧೆಗಳು ಗುಹನ ಹೃದಯವನ್ನು ಕರಗಿಸಿದವು. ದಶರಥ ಮಹರಾಜನ ಸೊಸೆ, ಜನಕ ಮಹಾರಾಜನ ಪ್ರೇಮ ಪುತ್ರಿ, ರಾಮಚಂದ್ರನ ಧರ್ಮಪತ್ನಿ, ಸಾಕ್ಷಾತ್ ಲಕ್ಷ್ಮೀದೇವಿಯಾದ ಆ ಸೀತಾ ದೇವಿಯು ಇಷ್ಟು ತೊಂದರೆಗಳಿಗೆ ಒಳಗಾದುದನ್ನು ಭರತನು ಸಹಿಸಲಾರದೆ ಹೋದನು.

"ಅಂಥ ಮಹಾ ಪವಿತ್ರ ಪ್ರಭುವನ್ನು, ಅಂಥ ದಂಪತಿಗಳನ್ನು ಬಿಟ್ಟು ಅಯೋಧ್ಯಾವಾಸಿಗಳು ಇರಲಾರದೆ, ರಾಮನಿಲ್ಲದ ಅಯೋಧ್ಯೆಯು ಅರಣ್ಯದಂತಾದುದರಿಂದ, ಜನರ ದುಃಖವನ್ನು ನೋಡಲಾರದೆ, ನಾವೂ ಅರಣ್ಯದಲ್ಲಿ ವಾಸ ಮಾಡಲು ಹೊರಟಿದ್ದೇವೆ. ರಾಮನಿರುವ ಪ್ರದೇಶವೇ ಅಯೋಧ್ಯೆಯೆಂದು ತಿಳಿದು ಎಲ್ಲರೂ ಸಪರಿವಾರವಾಗಿ ರಾಮ ಸನ್ನಿಧಿಗೆ ಹೊರಟಿದ್ದೇವೆ," ಎಂದು ಭರತನು ಹೇಳಿದ ಮೇಲೆ ನಿಷಾದಾಧಿಪತಿಗೆ ವಿಷಯವು ಪೂರ್ತಿಯಾಗಿ ಅರ್ಥವಾಯಿತು. ರಾಮ ದರ್ಶನಾರ್ಥವಾಗಿ ಚತುರಂಗಬಲ ಸಮೇತನಾಗಿ ಹೊರಡುವುದರಲ್ಲಿ ಅರ್ಥವಿಲ್ಲ. ಇದರಲ್ಲಿ ಏನೋ ಉದ್ದೇಶವಿರಬೇಕೆಂದು ತಾನು ಮೊದಲು ಊಹಿಸಿದ್ದನ್ನು ತಿಳಿಸಿ, ಅದಕ್ಕಾಗಿ ತನ್ನನ್ನು ಕ್ಷಮಿಸಬೇಕೆಂದು ಗುಹನು ಪ್ರಾರ್ಥಿಸಿದನು. ಹಾಗೆ ತಿಳಿದುದರಲ್ಲಿ ತಪ್ಪಿಲ್ಲವೆಂದೂ ತಾನು ಮಹಾ ಕಿರಾತನೆಂದೂ ರಾಮನ ವನವಾಸಕ್ಕೆ ತಾನೇ ಕಾರಣನೆಂದೂ ಅಂಥ ತನ್ನನ್ನು ಕೊಂದರೂ ಪಾಪವಿಲ್ಲವೆಂದೂ ಭರತನು ತನ್ನನ್ನು ತಾನು ನಿಂದಿಸಿಕೊಳ್ಳುತ್ತಾ ನಿಷಾದಾಧಿಪತಿಯನ್ನು ಸಮಾಧಾನಪಡಿಸಿದನು.

**ರಾಮಚಂದ್ರನನ್ನು ಹಿಂದಕ್ಕೆ ಕರೆತನ್ನಿ**: ಭರತನ ಆಗಮನದ ಸುದ್ದಿ ಕೇಳಿ, ಶೃಂಗಿಬೇರಪುರದ ಪ್ರಜೆಗಳು ಗುಂಪು ಗುಂಪಾಗಿ ಬಂದು ಅವರನ್ನು ದರ್ಶನ ಮಾಡಿ, ರಾಮಚಂದ್ರನ ಸೋದರರೆಂದು ಕೇಳಿ ಅನೇಕ ವಿಧವಾಗಿ ಅವರನ್ನು ಸ್ತುತಿಸಿ, ನಮಸ್ಕರಿಸಿದರು. ಕೈಕೆಯನ್ನು ದೂಷಿಸಿದರು, ವಿಧಿಯ ಕಾರ್ಯಕ್ಕಾಗಿ ಬ್ರಹ್ಮನನ್ನು ದೂಷಿಸಿದರು, ಕಣ್ಣೀರು ಹಾಕಿದರು. "ರಾಮಚಂದ್ರನನ್ನು ಹಿಂದಕ್ಕೆ ಕರೆದುತನ್ನಿ," ಎಂದು ಸ್ತ್ರೀ ಬಾಲ ವೃದ್ಧರು ಏಕ ಕಂಠದಿಂದ ಭರತ ಶತ್ರುಘ್ನರನ್ನು ಪ್ರಾರ್ಥಿಸಿದರು.

ಅವರು ರಾಮ ವಿಯೋಗದಿಂದ ಪಡುತ್ತಿದ್ದ ಬಾಧೆಯನ್ನು ಗಮನಿಸಿ ಭರತನು ಮಾತನಾಡಲಾರದೆ ಹೋದನು. ಕಣ್ಣೀರು ಹಾಕಿದನು. "ಪ್ರಾರ್ಥಿಸುವುದು ನನ್ನ ಕೆಲಸ. ಮಿಕ್ಕದ್ದು ರಾಮ ಕೃಪೆ. ನಾನು ದಾಸನೇ ವಿನಾ ರಾಮನನ್ನು ನಿರ್ಬಂಧ ಪಡಿಸಲು ನಾನೆಷ್ಟರವನು? ರಾಮಚಂದ್ರನು ಪುನಃ ಅಯೋಧ್ಯೆಯನ್ನು ಸೇರಬೇಕೆಂದು ನೀವೂ ಸಹ ನಿಮ್ಮ ಹೃದಯಗಳಲ್ಲಿ ಅವನನ್ನು ಪ್ರಾರ್ಥಿಸಿ. ಅಂಥ ನಿಮ್ಮ ಪ್ರಾರ್ಥನೆಯು ನನ್ನ ಪ್ರಾರ್ಥನೆಗೆ ಸಹಾಯವಾಗುವುದು. ನಮ್ಮೆಲ್ಲರ ಪ್ರಾರ್ಥನೆಯಿಂದ ರಾಮನ ಹೃದಯ ಕರಗದೇ ಇರದು. ಇದೇ ನಮ್ಮ ಕರ್ತವ್ಯ. ಲೋಕೋದ್ಧಾರಕನಾದ ರಾಮನು ಜನರ ಅಭೀಷ್ಟವನ್ನು ಇಲ್ಲವೆನ್ನುವುದಿಲ್ಲ, ಅಲ್ಲವೆ?" ಎಂದು ಬಂದಿದ್ದ ಆ ಜನರಿಗೆ ಸಮಾಧಾನ ಹೇಳಿದನು. ಇಷ್ಟರಲ್ಲಿ ಕತ್ತಲಾಯಿತು. ಜನರನ್ನು ಮನೆಗೆ ಹಿಂತಿರುಗುವಂತೆ ಹೇಳೆಂದು ನಿಷಾದಾಧಿಪತಿಗೆ ಹೇಳಿದನು. ಆ

ರಾತ್ರಿ ನಿಷಾದಾಧಿಪತಿಯು ತಂದಿದ್ದ ಫಲಗಳನ್ನು ತಿಂದು, ರಾತ್ರಿಯೆಲ್ಲಾ ರಾಮನ ವಿಷಯವನ್ನೇ ಮಾತನಾಡುತ್ತಾ ಕಾಲ ಕಳೆದರು.

ಬೆಳಕು ಹರಿಯುತ್ತಲೆ ಪ್ರಜೆಗಳೊಂದಿಗೆ ಹೊರಡಲು ಸಿದ್ಧವಾಗುವಂತೆ ಮಂತ್ರಿಗಳಿಗೆ ತಿಳಿಸಿ, ತಮ್ಮನೊಂದಿಗೆ ತಾಯಿಯರೊಂದಿಗೆ ಪವಿತ್ರ ಗಂಗಾಸ್ನಾನ ಮಾಡಿ, ಮುಂದಿನ ಪ್ರಯಾಣಕ್ಕೆ ಸಿದ್ಧರಾದರು. ಗುಹನು ದೋಣಿಗಳ ಏರ್ಪಾಟು ಮಾಡಿ, ಅಯೋಧ್ಯಾ ಪ್ರಜೆಗಳನ್ನೂ ರಥಗಳನ್ನೂ ಕುದುರೆಗಳನ್ನೂ ದಾಟಿಸಿದನು. ಆಚೆಯ ದಡ ಸೇರಿದ ಮೇಲೆ ಎಲ್ಲರೂ ಬಂದಿರುವರೋ ಇಲ್ಲವೋ ಎನ್ನುವುದನ್ನು ನೋಡಿ, ಮುಂದೆ ಹೊರಟರು. ನಿಷಾದಾಧಿಪತಿಯು ಮಾರ್ಗ ತೋರಿಸುತ್ತಾ ಹೊರಟನು. ಭರತನು ಪರಿವಾರದೊಂದಿಗೆ ಅವನನ್ನು ಅನುಸರಿಸಿ ಹೋಗುತ್ತಿದ್ದನು. ಬ್ರಾಹ್ಮಣರು ವಸಿಷ್ಠರೊಂದಿಗೆ ಒಂದು ಗುಂಪಾಗಿ, ಪ್ರಜೆಗಳೆಲ್ಲರೂ ಮತ್ತೊಂದು ಗುಂಪಾಗಿ, ಸ್ವಲ್ಪ ದೂರ ಸೇರಿದರು.

**ತ್ರಿವೇಣಿ ಕ್ಷೇತ್ರ**: ಭರತನು ಎಂದೂ ಇಷ್ಟು ದೂರ ಪಾದಚಾರಿಯಾಗಿ ಪ್ರಯಾಣ ಮಾಡಿರಲಿಲ್ಲವಾದ್ದರಿಂದ ಪಾದಗಳು ಬಿರಿದು ಬಾಧೆಯಾಗುತ್ತಿತ್ತು. ಆದರೂ ಲೆಕ್ಕಿಸದೆ, ತನ್ನ ಬಾಧೆ ಎಲ್ಲವನ್ನೂ ರಾಮನ ಬಾಧೆಯೆಂದು ತಿಳಿದು, ಇಂಥ ಅದೆಷ್ಟು ಬಾಧೆಗಳನ್ನು ರಾಮನು ಅನುಭವಿಸುತ್ತಿರುವನೋ ಎಂದು ದುಃಖಿಸುತ್ತಾ ತನ್ನ ಬಾಧೆಯನ್ನು ಮರೆತನು. ಎಲ್ಲರೂ ಪವಿತ್ರ ತ್ರಿವೇಣಿ ಸ್ನಾನ ಮಾಡಿದರು. ಪ್ರಯಾಗವಾಸಿಗಳಾದ ವೈಖಾನಸರು, ಬ್ರಹ್ಮಚಾರಿಗಳು, ಗೃಹಸ್ಥರು, ಉದಾಸೀನರು, ದಿಗಂಬರರು, ಯೋಗಿಗಳು, ಋಷಿಗಳು ಮೊದಲಾದವರೆಲ್ಲರೂ ಭರತನನ್ನು ನೋಡಿ ಆನಂದಿಸಿದರು. ಇವನ ವರ್ಚಸ್ಸು ಶ್ರೀರಾಮಚಂದ್ರನನ್ನು ಹೋಲುತ್ತದೆ ಎಂದುಕೊಂಡರು. ಇವನೇ ಶ್ರೀರಾಮಚಂದ್ರನೋ ಎನ್ನುವಂತೆ ಅವರ ಕಣ್ಣಿಗೆ ಕಂಡಿತು. ನೋಡಿದವರೆಲ್ಲಾ ರೆಪ್ಪೆಯಾಡಿಸದೆ ನೋಡುತ್ತಾ ನಿಂತರು.

**ಭರದ್ವಾಜ ಮಹರ್ಷಿ**: ರಾಮನ ಸೋದರರಾದ ಭರತ ಶತ್ರುಘ್ನರು ಚತುರಂಗ ಬಲ ಸಮೇತರಾಗಿ ತಾಯಿಯರೊಂದಿಗೆ, ಮಂತ್ರಿಗಳೊಂದಿಗೆ ಪ್ರಯಾಗಕ್ಕೆ ಬಂದಿದ್ದಾರೆನ್ನುವ ವಾರ್ತೆಯು ಭರದ್ವಾಜ ಆಶ್ರಮವಾಸಿಗಳಿಗೆ ತಿಳಿಯಿತು. ಭರದ್ವಾಜ ಮಹರ್ಷಿಗಳು ತಮ್ಮ ಶಿಷ್ಯರನ್ನು ಕಳಿಸಿ ಅವರನ್ನು ಆಶ್ರಮಕ್ಕೆ ಆಹ್ವಾನಿಸಿದರು. ಮಹರ್ಷಿಯ ಆಜ್ಞಾನುಸಾರವಾಗಿ ಭರತನು ತಮ್ಮನೊಂದಿಗೆ ಆಶ್ರಮಕ್ಕೆ ಬಂದನು. ಮುನಿರಾಜರ ಪಾದಗಳಿಗೆ ಇಬ್ಬರೂ ನಮಸ್ಕರಿಸಿದರು. ಭರದ್ವಾಜ ಮಹರ್ಷಿಯು ಅವರನ್ನು ಹಿಡಿದೆತ್ತಿ, ಬಹು ವಾತ್ಸಲ್ಯದಿಂದ ಹತ್ತಿರ ಕೂರಿಸಿಕೊಂಡು, ತಣ್ಣನೆಯ ಪಾನೀಯ ತರಿಸಿತ್ತು ಉಪಚರಿಸಿದರು.

ಮಹರ್ಷಿಯು ತನ್ನನ್ನು ಏನು ಪ್ರಶ್ನೆ ಮಾಡುವರೋ ಎಂದು ಭರತನು ಭಯಪಟ್ಟು, ನಾಚಿಕೆಯಿಂದ ತಲೆ ಎತ್ತದೆ ಚಿಂತಿಸುತ್ತಿದ್ದನು. ಭರತನ ಸ್ಥಿತಿಯನ್ನು ಗಮನಿಸಿ ಮಹರ್ಷಿಯು, "ಭರತಾ! ಭಯಪಡುವ ಕಾರಣವಿಲ್ಲ. ನನಗೆ ಸರ್ವವೂ ವಿದಿತವೇ. ವಿಧಿ ಕೃತ್ಯಗಳು ಒಬ್ಬರ ಅಧೀನವಲ್ಲ, ಅಲ್ಲವೆ? ನಿನ್ನ ತಾಯಿಯು ಕೋರಿದ ಕೋರಿಕೆಗಳನ್ನು ಕುರಿತು ನೀನು ಚಿಂತಿಸಬೇಕಾದ್ದಿಲ್ಲ. ಇದರಲ್ಲಿ ಅವಳ ದೋಷವೇನೂ ಇಲ್ಲ. ದೈವ ಸಂಕಲ್ಪವೇ ಅವಳ ಬುದ್ಧಿಯನ್ನು ಆ ರೀತಿಯಾಗಿ ಮಾರ್ಪಡಿಸಿತು. ಕೈಕೆಗೆ ರಾಮನೆಂದರೆ ಮಹಾ ಪ್ರಾಣ. ಅಂಥ ತಾಯಿಯು ಇಷ್ಟು ಕಠಿಣ ಚರ್ಯೆಗೆ ಮನಸ್ಸು ಮಾಡಬೇಕಾದರೆ, ದೈವಕೃತ್ಯವೇ ವಿನಾ ಮಾನವಮಾತ್ರರ ಪ್ರಯತ್ನವಲ್ಲ. ಲೋಕವಾಡಿಕೆಯಂತೆ ಕೈಕೆಯು ದೋಷಿ. ವೇದಾಚಾರ ಪ್ರಕಾರ ಸರಸ್ವತಿಯು (ವಾಕ್ ಅಧಿದೇವತೆ) ದೋಷಿ. ಇವರಿಬ್ಬರೂ ಪರಮಾತ್ಮನಿಗೆ ಸಮ್ಮತವೇ. ಪ್ರಭುವಿನ ಇಚ್ಛಾನುಸಾರವಾಗಿ ಎಲ್ಲವೂ ನಡೆದಿದೆ. ಭರತಾ! ನಿನ್ನ ನಿರ್ಮಲ ಕೀರ್ತಿಯನ್ನು ಗಾನ ಮಾಡುವುದರಿಂದ ಲೋಕಗಳಿಗೂ ವೇದಗಳಿಗೂ ದೊಡ್ಡಸ್ತಿಕೆ ಬರುವುದು.

ತಂದೆಯು ಯಾವ ಮಗನಿಗೆ ರಾಜ್ಯ ಕೊಡುವನೋ ಅವನೇ ರಾಜ್ಯಭಾರಕ್ಕೆ ಅರ್ಹನೆನ್ನುವುದು ಲೋಕ ಸಿದ್ಧಾಂತ. ಅದೇ ವೇದ ವಾಕ್ಯ. ಆ ಸತ್ಯಸಂಧನೂ ಮಹಾತ್ಮನೂ ಆದ ದಶರಥ ಮಹಾರಾಜನು ನಿನಗೆ ರಾಜ್ಯವಿತ್ತು ರಾಜಧರ್ಮವನ್ನ ನುಸರಿಸಿ ನಡೆದುಕೊ ಎಂದು ಹೇಳಿದ್ದಾನೆ. ರಾಮನ ವನಾಗಮನ ಎಲ್ಲ ಅನರ್ಥ ಗಳಿಗೂ ಮೂಲವಾಯಿತು. ಅದಕ್ಕೆ ಲೋಕವೆಲ್ಲಾ ಚಿಂತಿಸುತ್ತಿದೆ. ಈ ವಿಷಯದಲ್ಲಿ ನಿನ್ನ ಅಪರಾಧವೇನೂ ಇಲ್ಲ. ನೀನು ರಾಜ್ಯವಾಳಿದರೂ ತಪ್ಪಿಲ್ಲ. ನೀನು ರಾಜ್ಯವಾಳುತ್ತಿದ್ದೀಯೆ ಎನ್ನುವುದನ್ನು ಕೇಳಿದರೆ ರಾಮನು ಕೂಡ ಸಂತೋಷಿಸು ತ್ತಾನೆ. ಅಷ್ಟೇ ಅಲ್ಲ, ಈಗ ನೀನು ಮಾಡುತ್ತಿರುವ ಕೆಲಸವೂ ಶ್ಲಾಘನೀಯವೇ. ನಿನ್ನ ಕಾರ್ಯವು ಸರ್ವೋತ್ಕೃಷ್ಟವಾದುದು. ರಾಮನ ಚರಣಾರವಿಂದಗಳಲ್ಲಿ ಅನುರಾಗ ವಿರುವುದೇ ಸಕಲ ಸನ್ಮಂಗಳಗಳಿಗೂ ಮೂಲ. ಭರತಾ! ನಿನ್ನಂಥ ಗುಣಶಾಲಿ ಅದೃಷ್ಟವಂತ ಬೇರೊಬ್ಬನಿಲ್ಲ. ರಾಮನ ಪ್ರಿಯ ತಮ್ಮನೆನ್ನುವ ಸಾರ್ಥಕ ನಾಮ ಪಡೆದುಕೊಂಡೆ.

ಶ್ರೀರಾಮಚಂದ್ರನು ವನಕ್ಕೆ ಹೋಗುವ ಮಾರ್ಗ ಮಧ್ಯದಲ್ಲಿ ನಮ್ಮ ಆಶ್ರಮವನ್ನು ಪವಿತ್ರ ಮಾಡಿದನು. ಆ ದಿನ ಅರ್ಧ ರಾತ್ರಿಯವರೆಗೂ ರಾಮ ಪ್ರಭು ನಿನ್ನ ಗುಣ ಗಳನ್ನೇ ವರ್ಣಿಸಿದನು. ಅವರು ಸ್ನಾನ ಮಾಡಲು ಪ್ರಯಾಗಕ್ಕೆ ನನ್ನೊಂದಿಗೇ ಬಂದರು. ಆಗಲೂ ಕೂಡ ನಿನ್ನನ್ನು ಜ್ಞಾಪಿಸಿಕೊಳ್ಳುತ್ತಾ ಅಯೋಧ್ಯೆಯನ್ನು ಬಿಡುವಾಗ ನನ್ನ ಸೋದರರಾದ ಭರತ ಶತ್ರುಘ್ನರನ್ನು ನೋಡಲಾಗಲಿಲ್ಲ ಎಂದು

ತುಂಬಾ ಚಿಂತಿಸಿದನು. ರಾಮನಿಗೆ ನಿನ್ನ ಮೇಲಿರುವ ಪ್ರೇಮ ಇಷ್ಟೇ ಎಂದು ಹೇಳುವಂತಿಲ್ಲ.

**ರಾಮನು ಪ್ರಣತಾರ್ತಿಹರ**: ಅಷ್ಟೇ ಅಲ್ಲ, ಅವನು ಪ್ರಣತಾರ್ತಿಹರ. ಅವನಿಗೆ ಲೋಕವೇ ಕುಟುಂಬ. ಮೂರ್ತೀಭವಿಸಿದ ರಾಮನ ವಾತ್ಸಲ್ಯವೇ ನೀನು ಎನ್ನುವುದು ನನ್ನ ಅಭಿಪ್ರಾಯ! ಯಾವುದನ್ನು ನೀನು ಕಳಂಕವೆಂದು ಚಿಂತಿಸುತ್ತಿದ್ದೀಯೋ ಅದು ನನ್ನಂಥವರಿಗೆ ಉಪದೇಶವೆಂದೇ ನನ್ನ ಅಭಿಪ್ರಾಯ. ಭರತಾ! ನೀನು ಚಿಂತಿಸಕೂಡದು. ಚಿಂತಾಮಣಿಯನ್ನು ಪಡೆದ ಮೇಲೂ ದಾರಿದ್ರ್ಯವೆಂದು ಚಿಂತಿಸುವುದು ಒಳ್ಳೆಯದಲ್ಲ, ಸೀತಾರಾಮಲಕ್ಷ್ಮಣರನ್ನು ದರ್ಶನ ಮಾಡುವುದೇ ಸಕಲ ಸಾಧನೆಗಳಿಗೂ ಫಲ. ಆ ಫಲ ನನಗೆ ಸಿಕ್ಕಿತು. ಕಣ್ತುಂಬ ಅವರನ್ನು ನೋಡಿದೆ, ಸಂಭಾಷಿಸಿ ಸ್ಪರ್ಶಮಾಡಿದೆ. ಆತಿಥ್ಯವಿತ್ತೆ. ಅಷ್ಟೋ ಇಷ್ಟೋ ಇನ್ನೂ ಫಲ ಪಡೆಯಬೇಕಾದ್ದು ಉಳಿದಿತ್ತು. ಅದು ನಿನ್ನ ದರ್ಶನದಿಂದ ಪೂರ್ತಿಯಾಯಿತು. ನಾನು ಧನ್ಯ. ನನ್ನಂಥ ಮುನಿಗಳನ್ನು ಪವಿತ್ರ ಮಾಡಲೆಂದೇ ರಾಮಚಂದ್ರನು ವನವಾಸ ಮಾಡಿದ್ದಾನೆ. ಅವನ ವನವಾಸದಿಂದ ನಾವು ಮುನಿಗಳು ಧನ್ಯರು!" ಎಂದರು.

**ತಿಳಿಸಲಾಗದ ಬಾಧೆ**: ಈ ವಿಧವಾಗಿ ಭರದ್ವಾಜ ಮಹರ್ಷಿಯು ಭರತನನ್ನು ಅನೇಕ ರೀತಿಯಾಗಿ ಕೊಂಡಾಡಿದರು. ಅವನ ನೇತ್ರಗಳಿಂದ ಆನಂದಬಾಷ್ಪವು ಏಕಧಾರೆಯಾಗಿ ಹರಿಯತೊಡಗಿತು. ಭರತ ಶತ್ರುಘ್ನರು ಅವರ ರಾಮಪ್ರೇಮವನ್ನು ನೋಡಿ, ಇವರು ಅದೃಷ್ಟವಂತರು ಎಂದು ತಮ್ಮೊಳಗೇ ಅಂದುಕೊಳ್ಳುತ್ತಾ, ಅಂಥ ಪ್ರೇಮಸ್ವರೂಪನಿಗೆ ನಾವು ದೂರವಾದೆವಲ್ಲಾ ಎಂದು ದುಃಖಿಸಿದರು.

ಭರತನು ಮಹರ್ಷಿಗೆ ನಮಸ್ಕರಿಸಿ, ಗದ್ಗದ ಕಂಠದಿಂದ, "ಸ್ವಾಮೀ! ನೀವು ತ್ರಿಕಾಲ ಜ್ಞಾನಿಗಳು. ನಿಮ್ಮ ಮಾತು ಪರಮ ಸತ್ಯ. ರಾಮಚಂದ್ರ ಪ್ರಭು ಸಮರ್ಥನು, ಸರ್ವಜ್ಞನು. ಆದರೂ ನಿಮ್ಮ ಸನ್ನಿಧಿಯಲ್ಲಿ ನಾನು ಪರಮ ಸತ್ಯವನ್ನೇ ಹೇಳುತ್ತೇನೆ. ಜನರ ಮನೋಭಿಪ್ರಾಯಗಳು ರಾಮಚಂದ್ರ ಪ್ರಭುವಿಗೆ ಗೊತ್ತು. ನಮ್ಮ ತಾಯಿ ಮಾಡಿದ ದುರ್ವ್ಯಾಪಾರಕ್ಕೆ ನನಗೆ ದುಃಖವಿಲ್ಲ. ಜನರು ನನ್ನನ್ನು ದೂಷಿಸುವರೆನ್ನುವ ಭಯವಿಲ್ಲ. ಪರಲೋಕ ನನಗೆ ದಕ್ಕುವುದಿಲ್ಲವೇನೋ ಎನ್ನುವ ಚಿಂತೆ ಕೂಡ ಇಲ್ಲ. ನಮ್ಮ ತಂದೆ ಕೀರ್ತಿವಂತರು, ಮೃತಜೀವಿ. ಅವರ ಕೀರ್ತಿ ಲೋಕವೆಲ್ಲಾ ವ್ಯಾಪಿಸಿತು. ಪ್ರಾಯ ಪುತ್ರರಾದ ರಾಮಲಕ್ಷ್ಮಣರು ಅವರ ಗರ್ಭದಲ್ಲಿ ಹುಟ್ಟಿದರು. ರಾಮ ವಿಯೋಗ ದುಃಖವನ್ನು ಸಹಿಸಲಾರದೆ ಕ್ಷಣಭಂಗುರವಾದ ಕಾಯವನ್ನು ಅವರು ಕ್ಷಣದಲ್ಲಿ ಬಿಟ್ಟರು. ಆದ್ದರಿಂದ, ಅವರ

ಬಗ್ಗೆ ಚಿಂತಿಸುವ ಅಗತ್ಯವಿಲ್ಲ. ಸೀತಾ ರಾಮ ಲಕ್ಷ್ಮಣರು ಮುನಿವೇಷ ಧರಿಸಿ ವನದಲ್ಲಿ ಪಾದಚಾರಿಗಳಾಗಿ ಅಲೆಯುತ್ತಿದ್ದಾರೆ. ಕುಶ ಪತ್ರಗಳೇ ಅವರ ಆಸನಗಳು. ತರುಛಾಯೆಯೇ ಅವರ ನಿವಾಸ. ಬಿಸಿಲಲ್ಲಿ ಬೆಂದು, ಮಳೆಯಲ್ಲಿ ನೆಂದು, ಚಳಿಗೆ ಮೈಯೊಡ್ಡಿ, ವನದಲ್ಲಿ ಅವರು ತಿರುಗುತ್ತಿರುವರಲ್ಲವೆ? ಅವರ ಕಷ್ಟಗಳೆಲ್ಲಕ್ಕೂ ನಾನೇ ಅಲ್ಲವೆ ಕಾರಣ! ಈ ದುಃಖವೇ ಹಗಲು ರಾತ್ರಿ ನನ್ನನ್ನು ದಹಿಸುತ್ತಿದೆ! ಕಣ್ಣಿಗೆ ನಿದ್ರೆ, ಹೊಟ್ಟೆಗೆ ಆಹಾರ ಸೇರದಾಗಿದೆ. ನನ್ನ ತಾಯಿಯ ಕುಬುದ್ಧಿಯೇ ಪ್ರಾಣ ಸಂಕಟವಾಗಿದೆ. ಅವಳು ನನಗೆ ಹಿತವೆಂದು ಮಾಡಿದ ಕೆಲಸವೇ ನನಗೆ ಮಹಾ ಅಹಿತವಾಗಿ, ಅಪಕಾರವಾಗಿ ಪರಿಣಮಿಸಿದೆ. ನನ್ನ ಈ ಬಾಧೆ ಏನು ಮಾಡಿದರೂ ಹೋಗದು. ಇದಕ್ಕೆ ಮದ್ದೇ ಇಲ್ಲ. ರಾಮಚಂದ್ರನು ಎಂದು ತಿರುಗಿ ಅಯೋಧ್ಯೆಗೆ ಬರುವನೋ ಅಂದೇ ನನ್ನ ಈ ಬಾಧೆ ತೀರುವುದು. ಹಾಗಲ್ಲದೆ ಬೇರೆ ಯಾವ ರೀತಿಯಲ್ಲೂ ನನ್ನ ಬಾಧೆ ನಿವಾರಣೆಯಾಗದು," ಎಂದು ದುಃಖಿಸಿದನು.

ಅವನ ಮಾತುಗಳನ್ನು ಕೇಳಿ ನೆರೆದಿದ್ದ ಮುನಿಗಳು ಹರ್ಷಿಸಿದರು. ಅನೇಕ ವಿಧವಾಗಿ ತಮ್ಮ ಮೆಚ್ಚಿಗೆಯನ್ನು ಸೂಚಿಸಿದರು. "ಅಪ್ಪಾ, ಭರತಾ! ಚಿಂತೆಯನ್ನು ಬಿಡು, ರಾಮಚಂದ್ರನ ಚರಣ ಕಮಲಗಳನ್ನು ಸಂದರ್ಶಿಸಿದೊಡನೆಯೇ ನಿನ್ನ ಚಿಂತೆಗಳೆಲ್ಲ ನಾಶವಾಗುವುದು," ಎಂದು ಅವನನ್ನು ಸಂತೈಸಿದರು.

**ವೈಭವದ ಔತಣ**: ಭರದ್ವಾಜ ಮಹರ್ಷಿಗಳು ತಮ್ಮ ಶಿಷ್ಯರನ್ನು ಕರೆದು, ಭರತ ಶತ್ರುಘ್ನರಿಗೆ ಕಂದಮೂಲ ಫಲಾದಿಗಳನ್ನು ತಂದುಕೊಡುವಂತೆ ಆಜ್ಞಾಪಿಸಿದರು. ರಾಮದರ್ಶನಾಭಿಲಾಷಿಯಾಗಿ ಆನೇಕ ಕಷ್ಟಗಳನ್ನು ಸಹಿಸಿ, ರಾಮ ವಿಯೋಗ ಬಾಧೆಯಿಂದ ಸೊರಗುತ್ತಿದ್ದ ಅಯೋಧ್ಯೆಯ ಪ್ರಜೆಗಳಿಗೆ, ಮಂತ್ರಿಗಳಿಗೆ, ಪರಿವಾರಕ್ಕೆ ತಕ್ಕ ಊಟೋಪಚಾರಗಳನ್ನು ಏರ್ಪಾಟು ಮಾಡುವಂತೆ ಆಜ್ಞಾಪಿಸಿದರು. ಗುರು ವಾಜ್ಞೆಯನ್ನು ಶಿರಸಾವಹಿಸಿ, ಶಿಷ್ಯರು ಕ್ಷಣದಲ್ಲಿ ಪರಿವಾರಕ್ಕೂ ಪ್ರಜೆಗಳಿಗೂ ಮೃಷ್ಟಾನ್ನ ಭೋಜನದ ಏರ್ಪಾಟು ಮಾಡಿದರು. ಭರತನಿಗೂ ಶತ್ರುಘ್ನನಿಗೂ ಅವರ ಕುಟುಂಬದವರಿಗೂ ಮಂತ್ರಿಗಳಿಗೂ ಪಂಡಿತರಿಗೂ ಬ್ರಾಹ್ಮಣರಿಗೂ ಅತ್ಯಂತ ವೈಭವದ ಸತ್ಕಾರವನ್ನು ಏರ್ಪಡಿಸಿದರು. ಮುನಿಯು ತಮ್ಮ ಮಹಾ ಮಹಿಮೆ ಯಿಂದ ಕ್ಷಣದಲ್ಲಿ ಮಾಡಿದ ಅದ್ಭುತವಾದ ಏರ್ಪಾಟಿಗೆ ಭರತನು ಸಂತೋಷಿಸಿ ದನು. ಆದರೆ, ಆ ವೈಭವಗಳೆಲ್ಲಾ ಭರತ ಶತ್ರುಘ್ನರಿಗಷ್ಟೇ ಅಲ್ಲದೆ, ಅಯೋಧ್ಯಾವಾಸಿ ಗಳಿಗೂ ಸಹ ತೃಣ ಸಮಾನವಾಗಿ ಕಂಡಿತು. ಸುಗಂಧ ದ್ರವ್ಯಗಳು, ಪುಷ್ಪಗುಚ್ಛಗಳು, ಫಲಗಳು, ಬಗೆ ಬಗೆಯ ಭೋಜನ ಪದಾರ್ಥಗಳು, ನೋಡಲು ಬಹು ವಿಚಿತ್ರವಾಗಿ ದ್ದವು. ಭರತ ಶತ್ರುಘ್ನರಿಗಾಗಿ ಏರ್ಪಡಿಸಿದ್ದ ಎರಡು ಆಸನಗಳು ವರ್ಣಿಸಲಸದಳ ವಾಗಿದ್ದವು. ಮುನಿ ಆಜ್ಞೆಯನ್ನು ಶಿರಸಾವಹಿಸಿ ಆಯೋಧ್ಯಾವಾಸಿಗಳು, ಪರಿವಾರ

ದವರು, ಮಂತ್ರಿಗಳು, ಪಂಡಿತರು, ಬ್ರಾಹ್ಮಣರು ಮುನಿಯ ಮಹಿಮೆಯಿಂದ ಸೃಷ್ಟಿಯಾದ ಸುಂದರವಾದ ಮಂದಿರವನ್ನು ಪ್ರವೇಶಿಸಿದರು. ವಸಿಷ್ಠರೂ ಅವರ ಪತ್ನಿಯೂ ತಮಗಾಗಿ ಹಾಕಿದ್ದ ಉನ್ನತಾಸನಗಳಲ್ಲಿ ಆಸೀನರಾದರು. ಚಿಂತಾ ಕ್ರಾಂತರಾಗಿ ರಾಣಿಯರು ಪರದಾದೊಳಗೆ ಅವರವರ ಸ್ಥಾನಗಳಿಗೆ ಹೋಗಿ ಕುಳಿತರು.

ಮುನಿ ಶಿಷ್ಯರು ಭರತ ಶತ್ರುಘ್ನರನ್ನು ಆಶ್ರಮದ ಮರ್ಯಾದೆಗಳೊಂದಿಗೆ ಚಾಮರ ಬೀಸುತ್ತಾ ಆ ಭವನದೊಳಕ್ಕೆ ಕರೆದುಕೊಂಡು ಬಂದರು. ಅವರಿಗಾಗಿ ಹಾಕಿದ್ದ ಉನ್ನತಾಸನಗಳ ಬಳಿಗೆ ಬಂದೊಡನೆ ಭರತ ಶತ್ರುಘ್ನರು ಅವುಗಳಿಗೆ ಶಿರಬಾಗಿ, ನಮಸ್ಕರಿಸಿ, ಮುನಿ ಶಿಷ್ಯರ ಕೈಯಲ್ಲಿದ್ದ ಚಾಮರಗಳಿಂದ ಯಾರೂ ಕುಳಿತಿರದ ಆ ಸಿಂಹಾಸನಗಳಿಗೆ ಸೇವೆ ಮಾಡಿದರು. ಯಾರೂ ಕುಳಿತಿರದ ಆ ಸಿಂಹಾಸನಗಳಿಗೆ ಭರತ ಶತ್ರುಘ್ನರು ಸೇವೆ ಮಾಡುತ್ತಿದ್ದುದನ್ನು ನೋಡಿ ಎಲ್ಲರೂ ಆಶ್ಚರ್ಯಪಟ್ಟರು.

ಭರದ್ವಾಜ ಮುನಿಯು ಆ ಸಿಂಹಾಸನಗಳಲ್ಲಿ ಕುಳಿತುಕೊಳ್ಳುವಂತೆ ಭರತ ಶತ್ರುಘ್ನ ರನ್ನು ಕೋರಲು, ಅವರು ನಮಸ್ಕರಿಸಿ, "ಸ್ವಾಮೀ ಈ ಸ್ಥಾನಗಳು ಸೀತಾರಾಮರ ಸ್ಥಾನಗಳೇ ಹೊರತು ನಮ್ಮದಲ್ಲ. ನಮಗೆ ಆ ಅಧಿಕಾರವಿಲ್ಲ. ಮುನಿಯಾಶ್ರಮದಲ್ಲಿ ಲಕ್ಷ್ಮೀನಾರಾಯಣರ ಸಮಾನರಾದ ಸೀತಾರಾಮರಿಗಷ್ಟೇ ಇಂಥ ಆಸನಗಳ ಮೇಲೆ ಕುಳಿತುಕೊಳ್ಳುವ ಅಧಿಕಾರ. ನಾವು ಅವರ ಸೇವಕರು. ನಮಗೆ ಹೀಗೆ ಸೇವೆ ಮಾಡಲು ಅಪ್ಪಣೆಕೊಡಿ," ಎಂದು ಬಿನ್ನವಿಸಿದರು. ಆ ಮಾತುಗಳಿಂದ ಅಲ್ಲಿ ಸೇರಿದ್ದ ಪ್ರಜೆಗಳು, ಋಷಿಗಳು, ಮುನಿ ಶಿಷ್ಯರು ಪರಮಾನಂದಗೊಂಡು ಭರತ ಶತ್ರುಘ್ನರ ರಾಮಭಕ್ತಿಯನ್ನು ವಿಧವಿಧವಾಗಿ ವರ್ಣಿಸಿದರು. ಆನಂದಬಾಷ್ಪ ಸುರಿಸಿದರು. ಅವರ ರಾಮ ಭಕ್ತಿಗೆ ಭರದ್ವಾಜರೂ ಪರಮಾನಂದಗೊಂಡರು. ತಂದಿಟ್ಟ ಫಲಹಾರ ಹಣ್ಣು ಕಂದಮೂಲಾದಿಗಳನ್ನು ಆ ಸಿಂಹಾಸನಕ್ಕೆ ನೈವೇದ್ಯವಾಗಿ ಅರ್ಪಿಸಿ, ಅದರಲ್ಲಿ ಸೀತಾರಾಮರ ಸ್ವರೂಪವನ್ನು ಚಿತ್ರಿಸಿಕೊಂಡು, ಅವರ ಪ್ರಸಾದವೆಂದು ಭಾವಿಸಿ, ಅವುಗಳಿಂದ ಸ್ವಲ್ಪ ಮಾತ್ರ ತೆಗೆದುಕೊಂಡು, ಕಣ್ಣುಗಳಿಗೊತ್ತಿಕೊಂಡು ತಿಂದರು. ಸೀತಾರಾಮರ ವಿಯೋಗ ಬಾಧೆಯಿಂದ ತಾವು ಏನನ್ನೂ ತಿನ್ನಲಾಗುತ್ತಿಲ್ಲವೆಂದೂ ತಮ್ಮನ್ನು ಕ್ಷಮಿಸಬೇಕು ಎಂದೂ ಪ್ರಜೆಗಳೂ ಪರಿವಾರದವರೂ ಭರದ್ವಾಜ ಋಷಿ ಗಳನ್ನು ಕ್ಷಮೆ ಬೇಡಿದರು. ಮುನಿಯು ಎಷ್ಟು ವೈಭವದಿಂದ ಸತ್ಕಾರ ಏರ್ಪಡಿಸಿ ದ್ದರೋ ಅಯೋಧ್ಯಾವಾಸಿಗಳು ಅಷ್ಟೇ ಸುಲಭವಾಗಿ ಅದನ್ನು ತಿರಸ್ಕರಿಸಿದರು. ತಿನ್ನುವ ಮನಸ್ಸಿಲ್ಲವೆಂದೂ ರಾಮದರ್ಶನವೇ ತಮಗೆ ಅಮೃತ ಸಮಾನವೆಂದೂ ಹೇಳಿದರು. ರಾಮ ದರ್ಶನಕ್ಕಾಗಿ ಹಂಬಲಿಸಿದರು. ಮುನಿಯು ವಿಧಿ ಇಲ್ಲದೆ ಒಪ್ಪಬೇಕಾಯಿತು.

**ಯಮುನಾ ತೀರ**: ಬೆಳಕು ಹರಿಯುತ್ತಲೇ ಎಲ್ಲರೂ ಪ್ರಯಾಣಕ್ಕೆ ಸಿದ್ಧರಾಗಿ ಮುನಿಗಳಿಗೆ ನಮಸ್ಕರಿಸಿ, ಅವರ ಅಪ್ಪಣೆ ಪಡೆದು ಆಶ್ರಮವನ್ನು ಬಿಟ್ಟು ಹೊರಟರು. ದಾರಿ ತೋರಿಸುವ ಸೇವಕರು ಮುಂದೆ ಹೋಗುತ್ತಿರಲು, ರಥಗಳೂ ಪಲ್ಲಕ್ಕಿಗಳೂ ಅವರನ್ನು ಅನುಸರಿಸಿದವು. ಹೀಗೆ ನಡೆದು ಹೋಗುತ್ತಾ, ಮೂರ್ತೀಭವಿಸಿದ ಅನುರಾಗವೇ ತಾನೆನ್ನುವಂತೆ, ಭರತನು ನಿಷಾದಾಧಿಪತಿಯ ಹೆಗಲ ಮೇಲೆ ಕೈಹಾಕಿಕೊಂಡು ನಡೆದು ಹೋಗುತ್ತಿದ್ದನು. ಪಾದಗಳಿಗೆ ರಕ್ಷೆಯಾಗಲೀ ತಲೆಗೆ ಛತ್ರಿಯಾಗಲೀ ಇರಲಿಲ್ಲ. ಅವರು ಅವುಗಳನ್ನು ಉಪಯೋಗಿಸಲೊಪ್ಪಲಿಲ್ಲ. ಅದು ಅವರ ವ್ರತ. ಅದನ್ನು ಕಂಡ ಮೋಡವೊಂದು ತಾನೇ ಅವರ ತಲೆಯ ಮೇಲೆ ನೆರಳು ಮಾಡಿತು. ಭೂಮಿ ಕನಿಕರಿಸಿ ಮೃದು ಮಧುರವಾಯಿತು, ಗಾಳಿ ತಂಪಾಗಿ ಬೀಸಿತು. ಆ ದಿನ ಸಾಯಂಕಾಲ ಅವರು ಯಮುನಾ ನದಿ ತೀರವನ್ನು ಸೇರಿ ಅಲ್ಲಿ ವಿಶ್ರಮಿಸಿಕೊಂಡರು. ರಾತ್ರಿ ಲೆಕ್ಕವಿಲ್ಲದಷ್ಟು ದೋಣಿಗಳು ಯಮುನಾ ನದಿಯಲ್ಲಿ ಕಾಣಿಸಿಕೊಂಡವು. ಬೆಳಗಾಗುತ್ತಲೇ ಒಂದೇ ಸಾರಿ ಎಲ್ಲರೂ ನದಿಯನ್ನು ದಾಟಿದರು. ಆಚೆ ದಡದಲ್ಲಿ ಸ್ನಾನಾದಿಗಳನ್ನಾಚರಿಸಿ ನದಿಗೆ ನಮಸ್ಕರಿಸಿ ಪ್ರಯಾಣ ಮಾಡಿದರು. ಅಲ್ಲಿಂದ ಭರತ ಶತ್ರುಘ್ನರು ಸಾಧುಗಳ ವೇಷವನ್ನು ಧರಿಸಿದರು, ಅವರೊಂದಿಗೆ ಮಂತ್ರಿಗಳು, ಮಿತ್ರರು, ಸೇವಕರು ಸೀತಾರಾಮರನ್ನು ಸ್ಮರಿಸುತ್ತಾ ನಡೆದರು.

**ಸ್ತ್ರೀಯರ ಮಾತುಗಳು**: ದಾರಿಯಲ್ಲಿ ಸಿಕ್ಕಿದ ಹಳ್ಳಿಗಳಲ್ಲಿ, ನದಿ ನೀರಿಗೆ ಹೊರಟ ಹೆಂಗಸರು ಬಿಂದಿಗೆಗಳನ್ನು ಕೆಳಗಿಟ್ಟು ರೆಪ್ಪೆಯಾಡಿಸದೆ ಇವರನ್ನು ನೋಡುತ್ತಿದ್ದರು. ಮುಂದೆ ಹೋಗುತ್ತಿರುವವರೇ ರಾಮಲಕ್ಷ್ಮಣರೆಂದು ಕಾಣುತ್ತದೆ, ಆ ದಿನ ಸೀತಾ ಸಮೇತರಾಗಿ ಹೋದರು. ಈ ದಿನ ಚತುರಂಗ ಬಲ ಸಮೇತರಾಗಿ ಬರುತ್ತಿದ್ದಾರೆ ಎಂದು ಮಾತಾಡಿಕೊಂಡರು. ಸೀತೆ ಎಲ್ಲಿರುವಳೋ ಎಂದು ಅವಳಿಗಾಗಿ ಅತ್ತಿತ್ತ ನೋಡಿದರು. ಅವರಲ್ಲಿ ಒಬ್ಬಳು, "ಆ ದಿನ ರಾಮಲಕ್ಷ್ಮಣರು ರೂಪ ವಯಸ್ಸು ಲಾವಣ್ಯಗಳಿಂದ ಮಿರುಗುತ್ತಿದ್ದರು. ಆದರೆ, ಇವರ ಮುಖಗಳು ದುಃಖದಿಂದ ಬಾಡಿವೆ. ಆದ್ದರಿಂದ ಅವರೇ ಇವರಾಗಿರಲಾರರು," ಎಂದಳು. ಅವರ ಸಂಭಾಷಣೆ ಗಳನ್ನು ಗೂಢಚಾರರು ಭರತನಿಗೆ ವರದಿ ಮಾಡಿದರು. ನಂತರ, ಆ ಇಬ್ಬರೂ ರಾಮಚಂದ್ರನ ಸೋದರರೆಂದೂ ಅವನ ದರ್ಶನಾರ್ಥವಾಗಿಯೇ ಹೋಗುತ್ತಿ ದ್ದಾರೆಂದೂ ಆ ಹಳ್ಳಿಗರಿಗೆ ತಿಳಿಯಿತು.

ಅವರಲ್ಲೊಬ್ಬಳು ಧೈರ್ಯಗಾತಿ, ನಿರ್ದಾಕ್ಷಿಣ್ಯವಾಗಿ, "ಸಖೀ! ತಂದೆ ಕೊಟ್ಟ ರಾಜ್ಯ ವನ್ನು ಆಳುತ್ತಾ ತಾನೇ ರಾಜನೆನ್ನುವ ಧೈರ್ಯದಿಂದ, ರಾಮನನ್ನು ಸಂದರ್ಶಿ ಸಲು ಚತುರಂಗ ಬಲ ಸಮೇತನಾಗಿ ಹೋಗಲು ಇವನಿಗೆ ನಾಚಿಕೆಯಾದರೂ

ಆಗುವುದಿಲ್ಲವೆ?" ಎಂದಳು. ಅದಕ್ಕೆ ಮತ್ತೊಬ್ಬಳು, "ಅಕ್ಕಾ! ಹಾಗೆನ್ನಬೇಡ. ನಮ್ಮ ದಶರಥ ಮಹಾರಾಜನಿಗೆ ಅಂಥ ಕಠಿಣ ಬುದ್ಧಿಯ ಮಕ್ಕಳು ಹುಟ್ಟಿಲ್ಲ. ಚತುರಂಗ ಬಲ ಸಮೇತನಾಗಿ ಹೊರಟು ರಾಮಚಂದ್ರನನ್ನು ಪ್ರಾರ್ಥಿಸಿ ಅಯೋಧ್ಯೆಗೆ ಕರೆದೊಯ್ಯುವುದಕ್ಕಾಗಿ ಹೋಗುತ್ತಿರಬಹುದು," ಎಂದಳು. ಮೂರನೆಯವಳು, "ಹೌದು, ಹೌದು! ಯಾವ ಹುತ್ತದಲ್ಲಿ ಯಾವ ಹಾವೋ ಯಾರು ಬಲ್ಲರು! ಯಾರ ಯಾರ ಭಾವನೆಗಳು ಎಷ್ಟೆಷ್ಟು ಉನ್ನತವಾಗಿರುತ್ತದೋ ಹೇಳಬಲ್ಲವರಾರು! ರಾಮಚಂದ್ರನು ಸತ್ಯವಾಕ್ಪರಿಪಾಲಕನಲ್ಲವೆ! ಹದಿನಾಲ್ಕು ಸಂವತ್ಸರಗಳು ಕಳೆದ ಹೊರತು, ಯಾರು ಬಂದು ಎಷ್ಟು ಪ್ರಾರ್ಥಿಸಿದರು ಅವನು ಅಯೋಧ್ಯೆಗೆ ಹಿಂದಿರುಗುವವನಲ್ಲ ಎನ್ನುವುದೇ ನನ್ನ ಅಭಿಪ್ರಾಯ," ಎಂದಳು.

**ದರ್ಶನ ಪಡೆದವರು**: ಹೀಗೆ ಹಳ್ಳಿ ಹೆಂಗಸರು ಮಾತನಾಡಿಕೊಳ್ಳುತ್ತಿದ್ದ ವಿಷಯಗಳೆಲ್ಲವನ್ನೂ ಗೂಢಚಾರರ ಮೂಲಕ ಭರತ ಶತ್ರುಘ್ನರು ತಿಳಿಯುತ್ತಿದ್ದರು. ರಾಮತತ್ವವನ್ನು ಜನರು ಚೆನ್ನಾಗಿ ಗ್ರಹಿಸಿದ್ದಾರೆನ್ನುವುದನ್ನು ತಿಳಿದು ಆನಂದಿಸಿದರು. ತಮ್ಮ ಮತ್ತು ರಾಮನ ಗುಣಗಳನ್ನು ವರ್ಣಿಸುವ ಜನರ ಸಂಭಾಷಣೆಗಳನ್ನು ಕೇಳುತ್ತಾ ಭರತ ಶತ್ರುಘ್ನರು ರಾಮನನ್ನು ಸ್ಮರಿಸುತ್ತಾ ನಡೆದರು. ದಾರಿಯಲ್ಲಿ ಇವರಿಗೆದುರಾಗಿ ಕೆಲವರು ಬ್ರಹ್ಮಚಾರಿಗಳು, ಋಷಿಗಳು, ಮುನಿಗಳು, ಅತ್ಯಂತ ಆನಂದದಿಂದ ರಾಮನ ಗುಣಗಳನ್ನು ವರ್ಣಿಸಿಕೊಂಡು ಬರುತ್ತಿದ್ದರು. ಭರತ ಶತ್ರುಘ್ನರು ಅವರಿಗೆ ನಮಸ್ಕರಿಸಿ, ಅವರೆಲ್ಲಿಂದ ಬರುತ್ತಿದ್ದಾರೆಂದು ವಿಚಾರಿಸಿದರು. ಅವರು ತಮ್ಮ ಆನಂದವನ್ನು ಹೊರಸೂಸುತ್ತಾ ತಾವು ಸೀತಾರಾಮಲಕ್ಷ್ಮಣರನ್ನು ಸಂದರ್ಶಿಸಿ ಬರುತ್ತಿರುವುದಾಗಿ ಹೇಳಿದರು. ಭರತ ಶತ್ರುಘ್ನರು ಸಂತೋಷದಿಂದ ಮೈಮರೆತು, ಆನಂದಬಾಷ್ಪ ಸುರಿಸುತ್ತಾ, "ನೀವೆಷ್ಟು ಧನ್ಯರು! ನಮ್ಮ ಸೀತಾರಾಮ ಲಕ್ಷ್ಮಣರು ಹೇಗಿದ್ದಾರೆ? ಎಲ್ಲಿದ್ದಾರೆ?" ಎಂದು ಆತುರಾತುರವಾಗಿ ಅನೇಕ ಪ್ರಶ್ನೆಗಳನ್ನು ಹಾಕುತ್ತಾ ಅವರ ಉತ್ತರಗಳನ್ನು ಕೇಳಿ ಆನಂದಿಸಿದರು. ಆದರೆ, ಸೀತಾರಾಮಲಕ್ಷ್ಮಣರು ಇರುವ ಸ್ಥಳ ಇನ್ನೂ ಸ್ವಲ್ಪ ದೂರವಿದೆಯೆನ್ನುವುದನ್ನು ಕೇಳಿ ಆ ರಾತ್ರಿ ಅಲ್ಲೇ ಉಳಿದರು.

**ವಿಚಿತ್ರ ಸ್ವಪ್ನ**: ಬೆಳಗಾಗುತ್ತಲೇ ಹೊರಟು ಚಿತ್ರಕೂಟ ಪರ್ವತವು ಸಮೀಪವೇ ಇರುವುದನ್ನು ತಿಳಿದು, ಯಾವಾಗ ರಾಮ ಲಕ್ಷ್ಮಣ ಸೀತಾ ಮಾತೆಯರನ್ನು ನೋಡುವೆವೋ ಎಂದು ತವಕಪಡುತ್ತಾ ಪ್ರಯಾಣ ಸಾಗಿಸಿದರು. ಮಧ್ಯಾಹ್ನದ ಹೊತ್ತಿಗೆ ಮಂದಾಕಿನಿ ನದಿಯ ಶಬ್ದ ಕೇಳಿಸಿತು. ಚಿತ್ರಕೂಟ ಪರ್ವತವು ಕಾಣಿಸಿತು. ಆ ಪರ್ವತವನ್ನು ನೋಡಿದಾಕ್ಷಣ ಅಯೋಧ್ಯಾವಾಸಿಗಳು, ಭರತ ಶತ್ರುಘ್ನರು ಸಾಷ್ಟಾಂಗ ನಮಸ್ಕಾರ ಮಾಡಿದರು. ಮಾರ್ಗಾಯಾಸದಿಂದ ಬಳಲಿದವರೂ

ಕೂಡ ಆನೆಯಂಥ ಬಲ ಪಡೆದು ಬೇಗ ಬೇಗ ನಡೆಯುತ್ತಾ ಹೊರಟರು. ತಮ್ಮ ದೇಹಗಳನ್ನು ಲೆಕ್ಕಿಸದೆ, ರಾಮ ಸಂದರ್ಶನಕ್ಕೆ ಕಾತುರರಾಗಿ ಜಯ ಜಯ ನಾದಮಾಡುತ್ತಾ, ರಾಮಾ! ರಾಮಾ! ಎಂದು ಸ್ಮರಿಸುತ್ತಾ ವೇಗವಾಗಿ ನಡೆಯ ಲಾರಂಭಿಸಿದರು.

ಆ ದಿನ ಬೆಳಗಾಗುವ ಮೊದಲೇ ರಾಮನು ಎದ್ದು, "ಇವತ್ತು ನನಗೆ ಏಕೋ ತಂದೆಯ ನೆನಪು ತುಂಬಾ ಆಗುತ್ತಿದೆ," ಎಂದು ಸೀತೆಗೆ ಹೇಳಿದನು. ಸೀತೆಯು, "ನಾಥಾ! ನನಗೆ ಸ್ವಪ್ನ ಬೀಳುವುದಿಲ್ಲ. ಆದರೆ, ನಿನ್ನೆ ರಾತ್ರಿ ತುಂಬಾ ವಿಚಿತ್ರವಾದ ಒಂದು ಸ್ವಪ್ನವಾಯಿತು. ನಿಮ್ಮ ವಿಯೋಗ ದುಃಖದಿಂದ ಭರತ ಶತ್ರುಘ್ನರು ಕೃಶವಾದಂತೆಯೂ ಅವರು ಕ್ಷಣಕಾಲವೂ ಅಯೋಧ್ಯೆಯಲ್ಲಿರಲು ಇಷ್ಟಪಡದೆ ಹೊರಟು ನಮ್ಮ ಬಳಿಗೆ ಬಂದಂತೆಯೂ ಅವರೊಂದಿಗೆ ಅಯೋಧ್ಯಾವಾಸಿಗಳೇ ಅಲ್ಲದೆ ರಾಣಿಯರಾದ ಕೌಸಲ್ಯೆ, ಸುಮಿತ್ರೆ ಏಕೆ ಕೈಕೆ ಕೂಡ ನಮ್ಮ ಬಳಿಗೆ ಬಂದಂತೆಯೂ ಸ್ವಪ್ನವನ್ನು ಕಂಡೆ," ಎಂದು ಕಣ್ಣೀರು ಹಾಕಿದಳು.

ರಾಮನು ಲಕ್ಷ್ಮಣನನ್ನು ಕರೆದು, "ತಮ್ಮಾ! ಸೀತೆಯ ಸ್ವಪ್ನದ ವಿಷಯ ಕೇಳಿದೆಯ ಲ್ಲವೆ? ಇದು ಶುಭ ಸೂಚನೆಯಲ್ಲ. ಮಿಕ್ಕವರೆಲ್ಲರೂ ಸೀತೆಗೆ ಕಾಣಿಸಿದ್ದಾರೆ, ತಂದೆಯು ಮಾತ್ರ ನನಗೆ ಕಾಣಿಸಿದರು. ಈ ಎಲ್ಲರೊಂದಿಗಿಲ್ಲದೆ ತಂದೆಯು ಬೇರೆಯಾಗಿ ಕಾಣಿಸುವುದು ಅಶುಭ. ಅಶುಭವೆಂದು ತೋಚಿದ ತಕ್ಷಣವೇ ನಾವು ಸ್ನಾನ ಮಾಡುವುದೊಳ್ಳೆಯದು," ಎಂದು ಹೇಳಿ, ಮೂವರೂ ಸ್ನಾನ ಮಾಡಲು ನದಿಗೆ ಹೋದರು. ಆ ಹೊತ್ತಿಗೆ ಆಕಾಶದಲ್ಲಿ ಪಕ್ಷಿಗಳು ಗುಂಪು ಗುಂಪಾಗಿ ಹಾರಿದವು. ಉತ್ತರ ದಿಕ್ಕು ಧೂಳಿನಿಂದ ಮುಸುಕಿತ್ತು. ಅನೇಕ ಮೃಗಗಳು ಅರಚುತ್ತಾ ದಿಕ್ಕು ದಿಕ್ಕಿಗೆ ಓಡುತ್ತಿದ್ದವು. ಕಾರಣವೇನೆಂದು ತಿಳಿಯಲು ಲಕ್ಷ್ಮಣನು ಒಂದು ಮರವನ್ನು ಹತ್ತಿ ಸುತ್ತಲೂ ನೋಡಿದನು. ಯಾರೋ ಒಬ್ಬ ರಾಜನು ಚತುರಂಗಬಲ ಸಮೇತನಾಗಿ ಬರುತ್ತಿರುವುದನ್ನು ನೋಡಿ ರಾಮನಿಗೆ ತಿಳಿಸಿದನು. ಅದು ಸೀತೆಯ ಸ್ವಪ್ನ ದೃಶ್ಯವೇ ಇರಬೇಕೆಂದು ಹೇಳಿ, ರಾಮನು, ತಾವು ಬೇಗ ಪರ್ಣಶಾಲೆಗೆ ಹೋಗುವುದೊಳ್ಳೆಯದೆಂದು ಹೇಳಿದನು.

**ಚತುರಂಗ ಬಲದೊಡನೆ**: ಆ ವೇಳೆಗೆ ಭಿಲ್ಲರೂ ಕಿರಾತರೂ ವನವಾಸಿಗಳೂ ಓಡಿ ಬಂದು, "ರಾಮಾ! ಯಾರೋ ಚತುರಂಗ ಬಲ ಸಮೇತನಾಗಿ ಬರುತ್ತಿದ್ದಾನೆ. ಅವನ ರಥಕ್ಕೊಂದು ಪತಾಕೆ ಇದೆ. ಆ ಪತಾಕೆಯಲ್ಲಿ ಆಲದ ಮರದ ಗುರುತಿದೆ," ಎಂದು ತಿಳಿಸಿದರು. ಸೀತಾ ರಾಮಲಕ್ಷ್ಮಣರು ಅದು ನಿಸ್ಸಂಶಯವಾಗಿಯೂ ಭರತನ ರಥವೆಂದು ತಿಳಿದರು. ಲಕ್ಷ್ಮಣನಿಗೆ ಅನುಮಾನವಾಯಿತು. ನಿಜಕ್ಕೂ

ರಾಮ ದರ್ಶನಾರ್ಥವಾಗಿಯೇ ಭರತನು ಬರುವುದಾಗಿದ್ದರೆ, ಚತುರಂಗಬಲ ಸಮೇತನಾಗಿ ಬರುತ್ತಿದ್ದನೆ? ಇಲ್ಲ, ಆ ದುರ್ಮಾರ್ಗಿಯಾದ ತಾಯಿಯ ಮಾತನ್ನು ಕೇಳಿ ರಾಮನೊಂದಿಗೆ ಹೋರಾಡಿ, ಶಾಶ್ವತವಾಗಿ ರಾಮನು ಅಯೋಧ್ಯೆಯೊಳಗೆ ಕಾಲಿಡದಂತೆ ಮಾಡಲು ಬರುತ್ತಿರಬೇಕೆಂದು ಶಂಕಿಸಿ ರೋಷಗೊಂಡನು. ಅವನ ಕಣ್ಣುಗಳು ಕೆಂಪಾದವು, ಮಾತು ಕಟುವಾಯಿತು. ರಾಮನು ಇದನ್ನು ಅರ್ಥಮಾಡಿ ಕೊಂಡು, "ಲಕ್ಷ್ಮಣಾ! ಶಾಂತನಾಗು. ಭರತನು ಗುಣಶಾಲಿ, ಅವನ ಪ್ರೇಮವನ್ನು ಯಾರೂ ವರ್ಣಿಸಲು ಸಾಧ್ಯವಿಲ್ಲ. ಭರತನು ಇಕ್ಷ್ವಾಕು ವಂಶವೆಂಬ ಸರೋವರಕ್ಕೆ ತಾವರೆಯ ಪುಷ್ಪದ ಹಾಗೆ ಶೋಭೆ ತರುವನು. ಅಂಥ ಪವಿತ್ರನ ಮೇಲೆ ಅಪವಾದ ಹೊರಿಸುವುದು ನ್ಯಾಯವಲ್ಲ," ಎಂದು ಭರತನ ಗುಣಗಳನ್ನು ವರ್ಣಿಸಿ ಲಕ್ಷ್ಮಣ ನನ್ನು ಶಾಂತಪಡಿಸಿದನು.

ಇಷ್ಟರಲ್ಲಿ, ಭರತನೇ ಶತ್ರುಘ್ನನೊಂದಿಗೆ ರಾಮ ದರ್ಶನಾರ್ಥವಾಗಿ ಬರುತ್ತಿದ್ದಾನೆ ನ್ನುವುದು ಅಡವಿವಾಸಿಗಳಿಂದ ತಿಳಿಯಿತು. ಆ ಮಂಗಳ ವಾರ್ತೆಯನ್ನು ಕೇಳಿ ರಾಮನು ಸಂತೋಷಿಸಿದನು. ಶರತ್ಕಾಲದ ಸರೋರುಹಗಳಂತೆ ಅವನ ಕಮಲ ಲೋಚನಗಳು ಜಲಪೂರಿತವಾದುವು. ರಾಮ ಲಕ್ಷ್ಮಣರು ಸ್ನಾನ ಸಂಧ್ಯಾದಿಗಳನ್ನು ಆಚರಿಸಿ ಪರ್ಣಶಾಲೆಗೆ ಬರುವ ಹೊತ್ತಿಗೆ, ಭರತ ಶತ್ರುಘ್ನರು ಅವರನ್ನು ನೋಡಿ, "ರಾಮಾ! ರಾಮಾ!" ಎಂದು ಪರಿತಾಪದಿಂದ ಕೂಗುತ್ತಾ ಓಡಿ ಬಂದು ರಾಮನ ಪಾದಗಳ ಮೇಲೆ ಬಿದ್ದು ಕಣ್ಣೀರಿಟ್ಟರು.

ಅವರ ವಿಯೋಗ ದುಃಖವನ್ನು ಗಮನಿಸಿದ ಲಕ್ಷ್ಮಣನು ತಾನು ಅವರ ಬಗ್ಗೆ ಶಂಕಿಸಿದ್ದು ತಪ್ಪೆನ್ನುವುದನ್ನು ತಿಳಿದು ತನ್ನೊಳಗೇ ಬಾಧೆ ಪಟ್ಟನು. ಭರತ ಶತ್ರುಘ್ನ ರೊಂದಿಗೆ ತಾನೂ ಕಣ್ಣೀರು ಸುರಿಸುತ್ತಾ ಲಕ್ಷ್ಮಣನು ದುಃಖದಿಂದ ತಲೆ ತಗ್ಗಿಸಿದನು. ರಾಮಚಂದ್ರನು ಸೋದರರಾದ ಭರತ ಶತ್ರುಘ್ನರನ್ನು ಸಮಾಧಾನ ಪಡಿಸುತ್ತಾ ಶಾಂತಪಡಿಸುತ್ತಿರಲು, ಚತುರಂಗ ಬಲದೊಂದಿಗೆ ಬಂದ ತಾಯಿ ಕೌಸಲ್ಯೆ, ಸುಮಿತ್ರೆ, ಕೈಕೆ, ಮಂತ್ರಿಗಳು, ಗುರು ವಸಿಷ್ಠರು, ಬ್ರಾಹ್ಮಣರು, ಪಂಡಿತರು, ರಾಮಚಂದ್ರನನ್ನು ನೋಡಿದೊಡನೆಯೇ, ಒಂದು ಕಡೆ ದುಃಖವನ್ನೂ ಮತ್ತೊಂದು ಕಡೆ ಆನಂದ ವನ್ನೂ ತಡೆದುಕೊಳ್ಳಲಾರದೆ, ಆನಂದ ದುಃಖ ಮಿಶ್ರವಾದ ರೋದನ ಮಾಡಿದರು. ಅರಣ್ಯವೆಲ್ಲಾ ತತ್ತರಿಸುವಂಥ "ರಾಮಾ! ರಾಮಾ!" ಎನ್ನುವ ಕೂಗು ಮುಗಿಲು ಮುಟ್ಟಿತು. ರಾಮಚಂದ್ರನು ಎಲ್ಲರ ಕ್ಷೇಮ ಸಮಾಚಾರವನ್ನು ವಿಚಾರಿಸಿ, ಸಾಂತ್ವನ ಗೊಳಿಸಿ, ನೆಮ್ಮದಿಯಿಂದ ತಾಯಿಯರ ಬಳಿಗೆ ಹೋದನು. ಅವರ ಅಮಂಗಲಕರ ವಾದ ಸ್ಥಿತಿಯನ್ನು ನೋಡಲಾರದೆ ಹೋದನು. ಕಾರಣವನ್ನು ತಿಳಿದು, ತಂದೆ ಯನ್ನು ಕಳೆದುಕೊಂಡದ್ದಕ್ಕೆ ವ್ಯಾಕುಲಗೊಂಡು, ಲಕ್ಷ್ಮಣನನ್ನು ಕರೆದು ವಿಷಯ

ವನ್ನು ತಿಳಿಸಿದನು. ಲಕ್ಷ್ಮಣನು ವಿಷಯವನ್ನು ಪೂರ್ತಿಯಾಗಿ ತಿಳಿದುಕೊಳ್ಳಲೆಂದು ಸುಮಂತನನ್ನು ಹತ್ತಿರ ಕರೆದು ಅಯೋಧ್ಯಾ ಪರಿಪಾಲನೆಯ ವಿಷಯವನ್ನೂ ದಶರಥನ ವಿಷಯವನ್ನೂ ಹೇಳಬೇಕೆಂದು ಕೋರಿದನು.

ಸುಮಂತನು ತಡೆಯಲಾರದ ದುಃಖದಿಂದ ಕುಸಿದು, "ಲಕ್ಷ್ಮಣಾ! ಇನ್ನೆಲ್ಲಿಯ ದಶರಥ? ನಿಮ್ಮ ವಿಯೋಗದ ಬಾಧೆಯಿಂದ ದಶರಥನು ಭಸ್ಮವಾದನು. ಅಯೋಧ್ಯೆಯು ಅರಣ್ಯವಾಯಿತು. ಎಲ್ಲಿ ನೋಡಿದರೂ ದುಃಖವೇ ಎಲ್ಲಿ ನೋಡಿದರೂ ಅಳುವೇ. ಕೇವಲ ಜನರು ಮಾತ್ರವಲ್ಲ, ಪಶುಪಕ್ಷಿ ಮೃಗಾದಿಗಳೂ ಸಹಿತ ನಿಮ್ಮ ವಿಯೋಗ ದುಃಖದಿಂದ ಪ್ರಾಣಬಿಟ್ಟವು. ಮಿಕ್ಕವು ನಿಮ್ಮ ಆಗಮನವನ್ನು ನಿರೀಕ್ಷಿಸುತ್ತಿವೆ," ಎಂದೊಡನೆಯೇ ಲಕ್ಷ್ಮಣನ ಕಣ್ಣುಗಳಲ್ಲಿ ನೀರು ಬಳಬಳ ಸುರಿಯಿತು. ಅವನು ಸ್ತಂಭಿಸಿಹೋದನು. ರಾಮನ ಬಳಿಗೆ ಬಂದು ಅಂಥ ಘೋರ ವಿಪತ್ತು ಸಂಭವಿಸುವುದೆಂದು ತಾನು ಕನಸಿನಲ್ಲಿಯೂ ತಿಳಿದಿರಲಿಲ್ಲ ಎಂದು, ಅಂತ್ಯ ಸಮಯದಲ್ಲಿ ತಂದೆಯನ್ನು ನೋಡಲಾಗಲಿಲ್ಲವಲ್ಲಾ ಎಂದು ದುಃಖಿಸಿದನು. ದುಃಖಿಸುತ್ತಿದ್ದ ಲಕ್ಷ್ಮಣನನ್ನು ನೋಡಿ ರಾಮನು, "ಆಗಿಹೋದುದಕ್ಕೆ ಚಿಂತಿಸುವುದು ಅನಗತ್ಯ. ಶರೀರಗಳು ಅನಿತ್ಯ. ಇಂದಲ್ಲದಿದ್ದರೆ ನಾಳೆಯಾದರೂ ಅವುಗಳನ್ನು ಬಿಡುವುದು ತಪ್ಪದು," ಎಂದು ಬೋಧಿಸಿದನು. ನಂತರ ಇಬ್ಬರೂ ಸ್ನಾನ ಮಾಡಲು ನದಿಗೆ ಹೋದರು.

**ನಿರ್ಜಲೋಪವಾಸ**: ಜಾನಕಿಯು ಅತ್ತೆಯರ ದರ್ಶನ ಮಾಡಿ ಅವರ ಪಾದಗಳಿಗೆ, ಗುರುಪತ್ನಿಯ ಪಾದಗಳಿಗೆ ನಮಸ್ಕರಿಸಿ, ಪುರಸ್ತ್ರೀಯರನ್ನು ಆದರಿಸಿ, ಸತ್ಕರಿಸಿದಳು. ಸೀತೆಯನ್ನು ನೋಡಿದೊಡನೆಯೇ ಅತ್ತೆಯರು ಗೊಳೋ ಎಂದು ಅತ್ತರು. ಪುರಸ್ತ್ರೀಯರು ಕೂಡ ಆ ಎಳೆಗುವರಿ ಸುಂದರಿಯ ದುರ್ದಸೆಯನ್ನು ನೋಡಿ ತಡೆಯಲಾರದ ದುಃಖದಿಂದ ಅತ್ತರು. ದಶರಥ ಮಹಾರಾಜನು ಸ್ವರ್ಗಸ್ಥನಾದ ವಿಷಯವನ್ನು ತಿಳಿದು ಜಾನಕಿಯು ಮತ್ತೆ ಮತ್ತೆ ಅತ್ತೆಯವರಿಗೆ ನಮಸ್ಕರಿಸುತ್ತಾ, "ಅಯ್ಯೋ! ನಾನೆಂಥ ದುರಾದೃಷ್ಟಳು. ನಮ್ಮ ಮೇಲಿದ್ದ ಪ್ರೇಮದಿಂದಲ್ಲವೆ ನಮ್ಮ ವಿಯೋಗವನ್ನು ಸಹಿಸಲಾರದೆ ಮಹಾರಾಜರು ಪ್ರಾಣಬಿಟ್ಟದ್ದು," ಎನ್ನುತ್ತಾ, ವಜ್ರಕ್ಕಿಂತ ಕಠಿಣವಾದ ಹೃದಯವನ್ನೂ ಭೇದಿಸುವಂಥ ದುರ್ವಾರ್ತೆಯನ್ನು ಕೇಳಿದ ಜಾನಕಿಯು ರಾಣಿಯರೊಂದಿಗೆ ತಾನೂ ರೋದಿಸಲಾರಂಭಿಸಿದಳು. ಆ ದಿನ ಎಲ್ಲರೂ ನಿರ್ಜಲೋಪವಾಸ ಮಾಡಿ ಚಿಂತೆಯಲ್ಲಿ ಕಾಲ ಕಳೆದರು. ಮಾರನೆ ದಿನ ಪ್ರಾತಃಕಾಲವಾಯಿತು. ಗುರುಗಳ ಆಜ್ಞೆಯಂತೆ ರಾಮನು ಭಕ್ತಿ ಶ್ರದ್ಧೆಯಿಂದ ಪಿತೃ ಕಾರ್ಯವನ್ನು ಶಾಸ್ತ್ರೋಕ್ತವಾಗಿ ಮಾಡಿದನು. 'ಗಂಗೇಚ ಯಮುನೇಚೈವ ಗೋದಾವರೀ ಸರಸ್ವತೀ ನರ್ಮದೇ ಸಿಂಧು ಕಾವೇರೀ ಜಲೇಸ್ಮಿನ್ ಸನ್ನಿಧಿಂ ಕುರು,'

ಎಂದು ಹೇಳಿರುವುದರಿಂದ, ತೀರ್ಥವು ಪರಿಶುದ್ಧವಾದುದರಿಂದಲೂ ರಾಮನೇ ಸ್ವತಃ ಮಾಡಿದ್ದರಿಂದಲೂ ಪಿತೃಕಾರ್ಯಕ್ಕೆ ಪವಿತ್ರತೆ ಬಂದಿತು.

**ಪ್ರಜೆಗಳ ವ್ಯಾಕುಲ**: ರಾಮಲಕ್ಷ್ಮಣ ಭರತಶತ್ರುಘ್ನರು ತಾಯಿಯರೊಂದಿಗೆ ಸೀತಾಮಾತೆಯೊಂದಿಗೆ ಪುರಜನರೊಂದಿಗೆ ಗುರುಗಳಾದ ವಸಿಷ್ಠ ಮಹರ್ಷಿಗಳೊಂದಿಗೆ ಎರಡು ದಿನಗಳ ಕಾಲ ಕಳೆದರು. ನಂತರ, ರಾಮನು ಗುರುಗಳ ಬಳಿಗೆ ಹೋಗಿ, "ಸ್ವಾಮೀ! ಈ ಪ್ರಜೆಗಳೆಲ್ಲರೂ ಕಂದಮೂಲ ಫಲಗಳನ್ನು ತಿಂದು, ನೀರು ಕುಡಿದು ಕಡುಕಷ್ಟ ಪಡುತ್ತಿದ್ದಾರೆ. ಭರತಶತ್ರುಘ್ನರನ್ನು, ತಾಯಿಯರನ್ನು ಈ ಸ್ಥಿತಿಯಲ್ಲಿ ನೋಡುತ್ತಿದ್ದರೆ ಒಂದು ನಿಮಿಷವು ಒಂದು ಯುಗವಾಗಿ ಕಾಣುತ್ತಿದೆ. ತಾವು ದಯಮಾಡಿ ನಗರಕ್ಕೆ ಹಿಂತಿರುಗುವುದೊಳ್ಳೆಯದು. ತಾವೆಲ್ಲರೂ ಇಲ್ಲಿದ್ದೀರಿ, ಮಹಾರಾಜನು ಸ್ವರ್ಗಸ್ಥನಾಗಿದ್ದಾನೆ, ನಾನು ಹೆಚ್ಚು ಹೇಳುವುದು ಸರಿಯಲ್ಲ. ಉಚಿತವೆಂದು ಕಂಡಂತೆ ನಡೆದುಕೊಳ್ಳಬಹುದು," ಎಂದು ನಮಸ್ಕರಿಸಿದನು. ವಸಿಷ್ಠರು, "ರಘುನಾಥಾ! ನೀನು ಹೀಗೇಕೆ ಮಾತಾಡುತ್ತಿದ್ದೀಯೆ? ಎರಡು ದಿನಗಳಿಂದ ಪ್ರಜೆಗಳು ನಿನ್ನ ಮುಖಾರವಿಂದವನ್ನು ನೋಡುತ್ತಾ ಎಷ್ಟು ಸಂತೋಷಿಸಿದ್ದಾರೆನ್ನುವುದನ್ನು ನೀನು ಯೋಚಿಸದೆ ಹೋದೆ!" ಎಂದರು.

ಪ್ರಚಂಡ ಗಾಳಿ ಬೀಸಿದಾಗ ಸಮುದ್ರದ ಮೇಲೆ ಹೋಗುತ್ತಿರುವ ದೋಣಿಯು ತಲ್ಲಣಿಸಿದಂತೆ ರಾಮನ ಮಾತುಗಳನ್ನು ಕೇಳಿದಾಗ ಜನರ ಮನಸ್ಸು ತಲ್ಲಣಿಸಿತು. ಅವರು ವ್ಯಾಕುಲಗೊಂಡರು, ಆದರೆ ಅನುಕೂಲಕರವಾಗಿ ಗಾಳಿ ಬೀಸಿದಾಗ ದೋಣಿಯು ನಿರುಪದ್ರವವಾಗಿ ಸಾಗುವಂತೆ ಮುನೀಶ್ವರನ ಮಂಗಳ ವಚನಗಳನ್ನು ಕೇಳಿ ಅವರು ಸ್ವಸ್ಥಚಿತ್ತರಾದರು. ಮಂದಾಕಿನೀ ನದಿಯಲ್ಲಿ ತ್ರಿಕಾಲಗಳಲ್ಲೂ ಸ್ನಾನ ಮಾಡಿ ಸಾತ್ವಿಕವಾದ, ಹೇರಳವಾಗಿ ದೊರೆಯುವ ವಿವಿಧ ಫಲಗಳನ್ನು ತಿಂದು, ಸೀತಾ ರಾಮಲಕ್ಷ್ಮಣರನ್ನು ಕಣ್ತುಂಬ ನೋಡುತ್ತಾ ನಿತ್ಯವೂ ರಾಮ ಸಂಭಾಷಣೆಯಲ್ಲಿ ಅಯೋಧ್ಯೆಯನ್ನೇ ಮರೆತು ಹಾಯಾಗಿದ್ದ ಜನರಿಗೆ ತಿರುಗಿ ಅಯೋಧ್ಯೆಗೆ ಹೋಗಲು ಮನಸ್ಸೇ ಒಪ್ಪದಾಯಿತು. ಸೀತೆ ಅತ್ತೆಯರ ಸೇವೆ ಮಾಡುತ್ತಾ ಅವರನ್ನು ಸಮಾಧಾನ ಪಡಿಸುತ್ತಾ ತಾನು ಅರಣ್ಯದಲ್ಲಿ ಸಮಸ್ತ ಸುಖಗಳಿಂದ, ಯಾವ ಕೊರತೆಯೂ ಇಲ್ಲದೆ ಹಾಯಾಗಿ ಜೀವಿಸುತ್ತಿರುವುದಾಗಿ ತಿಳಿಸಿ, ಅತ್ತೆಗೆ ಧೈರ್ಯ ಹೇಳುತ್ತಿದ್ದಳು, ಆನಂದ ನೀಡುತ್ತಿದ್ದಳು. ಸೀತೆಯ ಗುಣಗಳು ಅವರಿಗೆ ಅಮಿತವಾದ ಧೈರ್ಯ ನೀಡುತ್ತಿದ್ದವು.

**ವಿಯೋಗ ವಿಲಾಸ**: ಭರತನಿಗೆ ರಾತ್ರಿ ನಿದ್ದೆಯಾಗಲೀ ಹಸಿವಾಗಲೀ ಇರಲಿಲ್ಲ. ಪ್ರಜೆಗಳು ರಾಮನನ್ನು ನೋಡಿ ಎಷ್ಟು ಸಂತೋಷಿಸುತ್ತಿದ್ದರೊ, ಭರತ ಶತ್ರುಘ್ನರು

ರಾಮನನ್ನು ನೋಡಿ ಅಷ್ಟೇ ಚಿಂತಿಸುತ್ತಿದ್ದರು. ನೋಡಿ ಸಹಿಸಲಾರದೆ, ಅಲ್ಲಿ ಕಾಲವನ್ನು ವ್ಯರ್ಥ ಕಳೆಯಲು ಮನಸ್ಸಿಲ್ಲದೆ, ಗುರುಗಳ ಪಾದಗಳ ಮೇಲೆ ಬಿದ್ದು, ರಾಮಚಂದ್ರನನ್ನು ಸೀತಾಸಮೇತನಾಗಿ ಅಯೋಧ್ಯೆಗೆ ಬರುವಂತೆ ಮಾಡಿರೆಂದು ಪ್ರಾರ್ಥಿಸುತ್ತಾ ಬಹು ವಿಧವಾಗಿ ವಾದಿಸಿದರು. ಅವರ ವಿಯೋಗ ವಿಲಾಪವನ್ನು ಗಮನಿಸಿದ ಗುರುಗಳು ರಾಮನ ತತ್ತ್ವ ತಿಳಿದಿದ್ದರೂ ರಾಮನು ಪಿತೃವಾಕ್ಯ ಪರಿಪಾಲನೆಯಲ್ಲಿ ಎಷ್ಟು ಮಾತ್ರಕ್ಕೂ ನಿರ್ಧಾರ ಬದಲಾಯಿಸನೆನ್ನುವುದು, ಆಡಿದ ಮಾತಿಗೆ ತಪ್ಪನೆನ್ನುವುದು ಗೊತ್ತಿದ್ದೂ ಭರತನ ತೃಪ್ತಿಗಾಗಿ ರಾಮನನ್ನು ಬಳಿಗೆ ಕರೆಸಿಕೊಂಡು, "ಓ ರಾಮಾ! ಭರತನ ಬಿನ್ನಹವನ್ನು ಕೇಳು. ಸಾಧುಸಮ್ಮತವಾಗುವಂತೆ ಲೋಕಸಮ್ಮತವಾಗುವಂತೆ ರಾಜನೀತಿಗೆ ಅನುಗುಣವಾಗಿ ನಡೆದುಕೊ," ಎಂದು ಆಜ್ಞಾಪಿಸಿದರು.

ಗುರುಗಳಿಗೆ ಭರತನ ಮೇಲಿರುವ ವಾತ್ಸಲ್ಯವನ್ನು ರಾಮನು ಅರಿತನು. ಭರತನು ಧರ್ಮ ದುರಂಧರನೆಂದೂ ಮನೋವಾಕ್ಕಾಯ ಕರ್ಮಗಳಿಂದ ಅವನು ತನ್ನ ಸೇವಕನೆಂದೂ ರಾಮನಿಗೆ ಗೊತ್ತು. ಗುರುವಾಜ್ಞೆಯನ್ನು ಅನುಸರಿಸಿ ರಾಮನು ಮೃದುಮಧುರವಾದ ಮಂಗಳ ವಾಕ್ಯಗಳನ್ನಾಡಿದನು. "ಸ್ವಾಮೀ! ನೀವೇ ಸಾಕ್ಷಿ. ತಂದೆಯ ಪಾದಗಳೇ ಸಾಕ್ಷಿ! ಲೋಕದಲ್ಲೇ ನನಗೆ ಭರತನಂಥ ತಮ್ಮನು ಮತ್ತೊಬ್ಬನಿಲ್ಲ. ಗುರುವಿನ ಚರಣಗಳಲ್ಲಿ ಅನುರಾಗವುಳ್ಳವರು ಅದೃಷ್ಟವಂತರು. ನಿಮಗೆ ಅವನ ಮೇಲೆ ಇಷ್ಟು ದಯೆಯಿದೆಯಾದ್ದರಿಂದ ಅವನ ಅದೃಷ್ಟ ಎಷ್ಟೆಂದು ಯಾರು ತಾನೆ ಹೇಳಿಯಾರು? ನನಗಿಂತ ಭರತನು ಚಿಕ್ಕವನು. ಅವನ ಮುಖದೆದುರಿನಲ್ಲಿ ಅವನನ್ನು ಹೊಗಳಲು ಹಿಂಜರಿಯುತ್ತಿದ್ದೇನೆ. ಭರತನು ಹೇಳಿದಂತೆ ನಡೆದುಕೊಳ್ಳುವುದು ಉಚಿತವೆಂದು ನನ್ನ ಅಭಿಪ್ರಾಯ," ಎಂದು ನಮಸ್ಕರಿಸಿ ಕುಳಿತನು.

**ನಾಲ್ವರಿಗೂ ಸಮಾನವೇ**: ಮುನಿರಾಜನು ಭರತನನ್ನು ಕುರಿತು, "ಭರತಾ! ಎಲ್ಲ ಸಂಶಯಗಳನ್ನೂ ಬಿಟ್ಟು ಮಾತಾಡು. ಆ ದಯಾಸೋದರ ಶ್ರೀರಾಮನು ನಿನ್ನ ಜ್ಯೇಷ್ಠ ಭ್ರಾತ. ನಿನ್ನ ಮನೋಭೀಷ್ಟವನ್ನು ಅವನಲ್ಲಿ ಹೇಳಿಕೊ," ಎಂದರು. ಮುನಿ ವಚನಗಳನ್ನು ಕೇಳಿ, ರಾಮನ ಮನಸ್ಸನ್ನರಿತು, ಅವರಿಬ್ಬರೂ ತನಗೆ ಅನುಕೂಲವಾಗಿರುವರೆಂದು ತಿಳಿದು ಭರತನು ಸಂತೋಷಿಸಿದನು. ಸಭೆಯಲ್ಲಿ ಅವನು ನಿಶ್ಚೇಷ್ಟಿತನಾಗಿ ನಿಂತಿದ್ದನು. ಕಮಲಗಳಂಥ ಅವನ ಕಣ್ಣುಗಳಲ್ಲಿ ನೀರು ಸುರಿಯುತ್ತಿತ್ತು. "ಹೇಳಬೇಕಾದ್ದನ್ನೆಲ್ಲಾ ಮುನಿಗಳೇ ಹೇಳಿದ್ದಾರೆ. ನಾನು ಪ್ರತ್ಯೇಕವಾಗಿ ಹೇಳಬೇಕಾದ್ದೇನಿದೆ? ನನ್ನ ರಾಮನ ಸ್ವಭಾವ ನನಗೆ ಗೊತ್ತು. ತನಗೆ ಅಪರಾಧ

ಮಾಡಿದವರ ಮೇಲೂ ಅವನು ಕೋಪಿಸನು. ಅವನಿಗೆ ನನ್ನ ಮೇಲೆ ಅಮಿತ ವಾತ್ಸಲ್ಯವಿದೆ. ಅದನ್ನು ನಾನು ಅಲ್ಲವೆನ್ನುವುದಿಲ್ಲ.

ಅನುರಾಗದಿಂದಲೂ ನಾಚಿಕೆಯಿಂದಲೂ ನಾನಿದುವರೆಗೂ ಅವನೊಂದಿಗೆ ಒಂದು ಮಾತೂ ಆಡಿಲ್ಲ. ಅವನನ್ನು ನೋಡಬಯಸಿದ ನನ್ನ ಕಣ್ಣುಗಳು, ಇದುವರೆಗೆ ಇಷ್ಟು ನೋಡಿದರೂ ತೃಪ್ತಿ ಹೊಂದಿಲ್ಲ. ಅವನ ಅನುರಾಗವನ್ನು ನೋಡಿ ಬ್ರಹ್ಮನು ಸಹಿಸಲಾರದೆ ನನ್ನ ತಾಯಿಯ ಮೂಲಕ ನನಗೆ ಈ ಕಷ್ಟವನ್ನು ತಂದೊಡ್ಡಿದ್ದಾನೆ. ಈ ಮಾತು ನನಗೆ ಘನತೆ ತರುವಂಥದಲ್ಲ. ನನ್ನ ತಾಯಿಯ ಮೇಲೆ ದೋಷಾರೋಪಣೆ ಮಾಡಿದರೆ ನನಗೇನು ದೊಡ್ಡಸ್ತಿಕೆ ಬರುವುದು? ಯಾರಾದರೂ ತಮಗೆ ತಾವೇ ತಾವು ನಿರ್ದೋಷಿಗಳೆಂದುಕೊಂಡರೆ ನಿರ್ದೋಷಿ ಗಳಾಗುವರೆ? ನನ್ನ ತಾಯಿ ಮಂದಮತಿಯೆಂದೂ ನಾನು ಸಾಧುವೆಂದೂ ಬುದ್ಧಿ ವಂತನೆಂದೂ ಹೇಳಿಕೊಳ್ಳಲು ನನ್ನ ಹೃದಯದಲ್ಲಿ ನನಗೇ ಸಂಶಯ ಹುಟ್ಟುತ್ತಿದೆ. ಸರೋವರದಲ್ಲಿ ಯಥೇಚ್ಛವಾಗಿರುವ ಬಸವನ ಹುಳುವಿನ ಚಿಪ್ಪಿನಲ್ಲಿ ಮುತ್ತುಗಳು ಹುಟ್ಟುವುವೇ? ನನ್ನ ದುಃಖಕ್ಕೆ ಇತರರನ್ನು ದೂಷಿಸುವುದು ಉಚಿತವಲ್ಲ. ಸಮುದ್ರ ದಂತೆ ನನ್ನ ದೌರ್ಭಾಗ್ಯ ಅಪಾರ. ಇದೆಲ್ಲಾ ನನ್ನ ಪಾಪ ಫಲ. ಈ ದುಃಖದಿಂದ ಹೊರಬರಲು ನಾನು ನಾಲ್ಕೂ ದಿಕ್ಕುಗಳಲ್ಲಿ ಮಾರ್ಗ ಹುಡುಕುತ್ತಿದ್ದೆ. ಒಂದು ಮಾರ್ಗ ವಿನಾ ಬೇರೆ ಯಾವುದೂ ಕಾಣುತ್ತಿಲ್ಲ. ನನ್ನ ಗುರುಗಳು ವಸಿಷ್ಠರು, ನನ್ನ ಪ್ರಭುಗಳು ಸೀತಾರಾಮರು. ಆದ್ದರಿಂದ ಪರಿಣಾಮವು ಶುಭವಾಗುವುದೆಂದೇ ನನ್ನ ನಿಶ್ಚಯ. ನಾನು ನಿನ್ನನ್ನು ಬೇರೇನೂ ಕೋರೆನು, ಕೋರಲಾರೆ.

ಪ್ರಭೂ! ರಾಮಚಂದ್ರಾ, ನಿನ್ನ ದಾಸನ ಒಂದು ಪ್ರಾರ್ಥನೆಯನ್ನು ಮನ್ನಿಸು! ರಾಮ ಲಕ್ಷ್ಮಣ ಭರತಶತ್ರುಘ್ನರು ನಾಲ್ವರು ದಶರಥಮಹಾರಾಜನ ಕಾಮಪುತ್ರರು. ತಂದೆಯಾಜ್ಞೆಯನ್ನು ಶಿರಸಾವಹಿಸುವುದು ನಾಲ್ವರಿಗೂ ಸಮಾನವೇ ವಿನಾ ತಂದೆ ಯಾಜ್ಞೆಯನ್ನು ಇವರೇ ಪಾಲಿಸಬೇಕೆಂದು ನಿಯಮಿಸಲು ಅವಕಾಶವಿಲ್ಲ. ತಂದೆ ಯಾಜ್ಞೆಯನ್ನು ಪಾಲಿಸಲು ನೀನಿದುವರೆಗೆ ಬಾಧ್ಯತೆ ವಹಿಸಿದೆ. ಇನ್ನು ಮುಂದೆ ಸೀತಾ ಲಕ್ಷ್ಮಣ ಸಮೇತನಾಗಿ ಅಯೋಧ್ಯೆಯಲ್ಲಿರು. ಇನ್ನುಳಿದ ನಿನ್ನ ಅರಣ್ಯ ವಾಸದ ಭಾಗವನ್ನು ನಾನೂ ಶತ್ರುಘ್ನನೂ ಅರಣ್ಯದಲ್ಲಿ ಕಳೆದು ಮುಗಿಸುತ್ತೇವೆ," ಎಂದು ಪಾದಗಳ ಮೇಲೆ ಬಿದ್ದನು. ಭರತನ ಬುದ್ಧಿವಂತಿಕೆಯನ್ನು ಗಮನಿಸಿ ವಸಿಷ್ಠರು ಆನಂದಬಾಷ್ಪವನ್ನು ಸುರಿಸಿದರು. ರಾಮನು ಈ ಯುಕ್ತಿಗೆ ಸಿಕ್ಕದೆ, "ಭರತಾ! ನಿನ್ನ ಅಭಿಪ್ರಾಯವು ಅಷ್ಟು ಸಮಂಜಸವಲ್ಲವೆಂದು ನನಗನಿಸುತ್ತದೆ. ಇದನ್ನು ಬಿಟ್ಟು ಬೇರೇನನ್ನಾದರೂ ಕೋರು," ಎಂದನು. ಭರತನು, "ಅಣ್ಣಾ! ಹಾಗಾದರೆ ತಮ್ಮನೊಂದಿಗೆ ಲಕ್ಷ್ಮಣನ ಹಾಗೆ ನಿಮ್ಮ ಸೇವೆ ಮಾಡುತ್ತಾ ಈ ಪವಿತ್ರ

ವನವಾಸ ಮಾಡಲು ಅನುಜ್ಞೆ ನೀಡು," ಎಂದು ಕೋರಿದನು. ಅದಕ್ಕೂ ರಾಮನು ಸಮ್ಮತಿಸದೆ, "ಭರತಾ! ನನಗೂ ನಿನಗೂ ತಂದೆಯಾಜ್ಞೆಯು ಶಿರಸಾವಹಿಸಲು ಯೋಗ್ಯವಾದುದು. ನಿನಗಿತ್ತ ಆಜ್ಞೆಯನ್ನು ನೀನೂ ನನಗಿತ್ತುದನ್ನು ನಾನೂ ನೆರವೇರಿಸುವುದು ಎಲ್ಲಕ್ಕಿಂತಲೂ ಉತ್ತಮವಾದ ಕೆಲಸ," ಎಂದು ಹೇಳಿ, "ಈ ವಿಧವಾಗಿ ಕಾಲಹರಣ ಮಾಡಿ ಪ್ರಜೆಗಳನ್ನು ದುಃಖದಪಾಲು ಮಾಡದೆ, ನಿನಗಿತ್ತಿರುವ ಅಯೋಧ್ಯೆಯನ್ನು ನೀನು ಧರ್ಮದಿಂದ ಪರಿಪಾಲಿಸು. ನನಗಿತ್ತಿರುವ ಅರಣ್ಯವಾಸವನ್ನು ನಾನು ನಿಯಮಬದ್ಧವಾಗಿ ಮಾಡುತ್ತೇನೆ," ಎಂದು ಮರುಮಾತಾಡಲು ಅವಕಾಶವಿಲ್ಲದಂತೆ ಆಜ್ಞಾಪಿಸಿದನು.

**ಭರತನ ವಿಲಾಪ**: ಭರತನು ತಡೆಯಲಾರದ ದುಃಖದಿಂದ, "ಯಾವ ನನ್ನ ತಾಯಿ ಸೀತಾ ರಾಮಲಕ್ಷ್ಮಣರನ್ನು ಶತ್ರುಗಳೆಂದು ಭಾವಿಸಿದಳೋ ಅಂತಹ ತಾಯಿಯ ಮಗನಾದ ನನ್ನನ್ನು ಭಗವಂತನೂ ಕೈಬಿಟ್ಟು ಯಾರೂ ಸಹಿಸಲಾಗದ ದುಃಖಕ್ಕೆ ಈಡು ಮಾಡಿದ್ದಾನೆ. ಅಣ್ಣಾ! ಸೀತಾರಾಮಲಕ್ಷ್ಮಣರು ವನವಾಸ ಮಾಡುತ್ತಿರುವರೆಂದೂ ಪಾದಗಳಿಗೆ ರಕ್ಷೆ ಇಲ್ಲದೆಯೇ ಪಾದಚಾರಿಗಳಾಗಿ ವನಕ್ಕೆ ಹೋದದ್ದರಿಂದ, ಶೂಲದಂತೆ ಇರಿದ ಆ ಸಮಾಚಾರವನ್ನು ಕೇಳಿಯೂ ನನ್ನ ಪ್ರಾಣ ಉಳಿದಿತ್ತು. ಇದಕ್ಕೆಲ್ಲಾ ನಾನು ಕಾರಣನಲ್ಲದಿದ್ದರೆ ನಾನಿದಕ್ಕೆ ಮೊದಲೇ ಪ್ರಾಣ ಬಿಟ್ಟಿರುತ್ತಿದ್ದೆ. ನಾನು ರಘುರಾಮನಿಗೆ ಶತ್ರುವೆಂದು ಬಗೆದು ನಿಷಾದಾಧಿಪತಿಯು ನನ್ನೊಂದಿಗೆ ಯುದ್ಧ ಮಾಡಲು ನನ್ನ ಪ್ರಾಣ ಹೋಗಲಿಲ್ಲ! ವಜ್ರಕ್ಕಿಂತಲೂ ನನ್ನ ಹೃದಯ ಕಠಿಣವಾದ್ದರಿಂದ ಒಡೆಯಲಿಲ್ಲ.

ನಾನು ಕೇಳಿದುದೆಲ್ಲವನ್ನೂ ಈಗ ಕಣ್ಣಾರೆ ನೋಡುತ್ತಿದ್ದೇನೆ. ಆದರೂ ನನ್ನದು ಕಷ್ಟಜೀವವಾದ್ದರಿಂದ ಇಷ್ಟು ದುಃಖವನ್ನು ಸಹಿಸಿದೆ. ಯಾವ ನನ್ನ ತಾಯಿಯನ್ನು ನೋಡಿ ಸರ್ಪಗಳೂ ವೃಶ್ಚಿಕಗಳೂ ತಮ್ಮ ತಮ್ಮ ವಿಷವನ್ನು ಬಿಡುವುವೋ ಅಂಥ ತಾಯಿಯ ಮಗನಾದ ನನ್ನನ್ನು ಇಂಥ ದುಃಖದಿಂದ ತಪ್ಪಿಸಿಕೊಳ್ಳಲು ದೇವರು ಹೇಗೆ ಬಿಟ್ಟಾನು?" ಎಂದು ತನ್ನನ್ನೇ ತಾನು ನಿಂದಿಸಿಕೊಳ್ಳುತ್ತಾ ತನ್ನ ಜೀವಿತವನ್ನೇ ಅಸಹ್ಯವಾಗಿ ಕಾಣುತ್ತಿದ್ದ ಭರತನ ಮಾತುಗಳನ್ನು, ವ್ಯಾಕುಲವನ್ನು ವಿನಯ ಅನುರಾಗಗಳನ್ನು, ಚಾತುರ್ಯವನ್ನು, ಸಭಿಕರೂ ರಾಣಿಯರೂ ಕೇಳಿ ಮಂಜಿನ ಮೇಲೆ ಬಿದ್ದ ಕಮಲದಂತೆ ಶೋಕ ಸಂತಪ್ತವದನರಾದರು. ಮುನಿಯು ಭರತನಿಗೆ ಅನೇಕ ಪುರಾಣ ಕಥೆಗಳನ್ನು ಹೇಳಿ ಸಮಾಧಾನಪಡಿಸಲು ಯತ್ನಿಸಿದರು. ಭರತನ ವ್ಯಾಕುಲತೆಯನ್ನು ನೋಡಿ ರಾಮಚಂದ್ರನು, "ತಮ್ಮಾ! ವ್ಯರ್ಥವಾಗಿ ನೀನು ಚಿಂತಿಸುವುದೇಕೆ? ಕರ್ಮಗತಿಯನ್ನು ಅನುಭವಿಸದೆ ತಪ್ಪದು. ತ್ರಿಕಾಲದಲ್ಲೂ ತ್ರಿಲೋಕದಲ್ಲೂ ಇರುವ ಪುಣ್ಯಶ್ಲೋಕರೆಲ್ಲರೂ ನಿನ್ನ ಅಧೀನರೆಂದು ನನ್ನ ಅಭಿಪ್ರಾಯ. ನೀನು

ಕುಟಿಲ ಬುದ್ಧಿಯವನೆಂದು ದೂರುವವರು ಪುಣ್ಯಲೋಕಗಳಿಗೆ ದೂರವಾಗುವರು. ಸತ್ಸಂಗದಲ್ಲಾಗಲೀ ಸಾಧು ಸಮಾಜದಲ್ಲಾಗಲೀ ಗುರುಗಳ ಬಳಿಯಲ್ಲಾಗಲೀ ಶಿಕ್ಷಣ ಹೊಂದದ ಮೂರ್ಖನೇ ತಾಯಿಯನ್ನು ದೂಷಿಸುವನು.

ನಿನ್ನ ನಾಮವನ್ನು ಸ್ಮರಿಸಿದ ಮಾತ್ರದಿಂದ ಸಕಲ ದುರ್ಗುಣಗಳು ದೂರವಾಗುವುವು. ನೀನು ಈ ಲೋಕಕ್ಕೆ ಕೀರ್ತಿಯನ್ನೂ ಪರಲೋಕಕ್ಕೆ ಸುಖವನ್ನೂ ನೀಡುವವನಾಗಿರುವೆ. ಈ ಭೂಮಿಯು ನಿನ್ನಿಂದಲೇ ನಿಂತಿದೆ. ವೈರವೂ ಪ್ರೇಮವೂ ಬಚ್ಚಿಟ್ಟರೂ ಮರೆಯಾಗಿರಲಾರವು. ನಿನ್ನ ವಿಷಯ ಚೆನ್ನಾಗಿ ಗೊತ್ತು. ಸತ್ಯವಾಕ್ಯವನ್ನು ನೆಲೆಗೊಳಿಸಲು ರಾಜನು ನನ್ನನ್ನು ಬಿಟ್ಟು ಹೋಗಿದ್ದಾನೆ, ನನ್ನ ಮೇಲಿದ್ದ ಪ್ರೀತಿಯಿಂದಾಗಿ ಅವನು ಪ್ರಾಣ ಬಿಟ್ಟನು. ಅಂಥ ಪ್ರಿಯ ತಂದೆಯ ಮಾತುಗಳನ್ನು ಉಲ್ಲಂಘಿಸುವುದು ನನ್ನಂಥ ನಿನ್ನಂಥ ಪುತ್ರರಿಗೆ ಯೋಗ್ಯವಾದುದಲ್ಲ. ನೀನು ಸಂಶಯಪಡದೆ, ಹೇಳಬೇಕಾದುದೇನೋ ಹೇಳಿ, ಕೇಳಬೇಕಾದುದೇನೋ ಕೇಳಿ, ನೀನು ನಿನ್ನ ಹೊಣೆಗಾರಿಕೆ ನಿರ್ವಹಿಸುವುದೊಳ್ಳೆಯದು," ಎಂದು ಖಂಡಿತವಾಗಿ ಹೇಳಿದನು.

**ಕೊನೆಯ ಕೋರಿಕೆ**: ಮಾತನಾಡಲು ಅವಕಾಶವಿಲ್ಲದೆ, ಭರತನು, ಕೊನೆಯ ಕೋರಿಕೆಯಾಗಿ ಒಂದನ್ನು ಕೋರಲು ನಿಶ್ಚಯಿಸಿಕೊಂಡು, "ರಾಮಾ! ಯಾವ ರಾಜ್ಯವು ನಿನ್ನನ್ನು ಅಪಕೀರ್ತಿಗೆ ಗುರಿ ಮಾಡಿತೊ, ಆ ರಾಜ್ಯವು ನಿನಗೆ ಬೇಡವಾದರೆ ನನಗೂ ಬೇಡ. ನಾನು ನಿನ್ನ ಆಜ್ಞೆಯನ್ನು ಎಂದಿಗೂ ಅಲ್ಲವೆನ್ನೆ. ನಿನ್ನ ಮನಸ್ಸಿಗೆ ದುಃಖವಿಲ್ಲದ ರೀತಿಯಲ್ಲಿ ನನ್ನನ್ನು ಅನುಗ್ರಹಿಸಿದರೆ ನಾನು ಧನ್ಯ. ಇಷ್ಟು ಕಾಲ ನಿಮ್ಮ ಸೇವೆ ಮಾಡಿ ಧನ್ಯನಾಗಿರುವ ಲಕ್ಷ್ಮಣನನ್ನು ಶತ್ರುಘ್ನನೊಂದಿಗೆ ಅಯೋಧ್ಯೆಗೆ ಕಳಿಸಿ, ನನ್ನನ್ನು ನಿನ್ನ ಪಾದಗಳ ಬಳಿ ಕರೆದುಕೊ. ಲಕ್ಷ್ಮಣನು ಪರಿಪಾಲನಾ ದಕ್ಷನು. ಆದ್ದರಿಂದ, ಎಲ್ಲ ರೀತಿಯಲ್ಲೂ ತಂದೆಯ ಆತ್ಮಕ್ಕೆ ತೃಪ್ತಿಯಾಗುವಂತೆ ಅಯೋಧ್ಯೆಯನ್ನು ಆಳುವನು. ಈ ಕೋರಿಕೆಯನ್ನು ಆಗದೆನ್ನದೆ ನಡೆಸಿಕೊಟ್ಟು ನನ್ನನ್ನು ಉದ್ಧರಿಸೆಂದು ಪ್ರಾರ್ಥಿಸುತ್ತೇನೆ," ಎಂದು ಪಾದಗಳ ಮೇಲೆ ಬಿದ್ದನು. "ಇಲ್ಲವಾದರೆ, ನೀನು ಸೀತಾ ಸಮೇತನಾಗಿ ಅಯೋಧ್ಯೆಯಲ್ಲಿರು. ನಾವು ಮೂವರು ಅಣ್ಣ ತಮ್ಮಂದಿರು ಅರಣ್ಯದಲ್ಲಿ ವಾಸಿಸುತ್ತೇವೆ. ಯಾವುದು ಮನಸ್ಸಿಗೆ ಒಪ್ಪಿಗೆಯಾಗುವುದೊ ಅದರಂತೆ ನಡೆದುಕೊ. ಆದರೆ, ಇಂಥ ಭಾರವನ್ನು ನನ್ನ ಮೇಲೆ ಹೊರಿಸಿದರೂ ನಾನು ಹೊರಲಾರೆ. ನನ್ನನ್ನು ನಿನ್ನ ಪಾದಗಳ ಬಳಿ ಇಟ್ಟುಕೊಂಡು, ಇದಕ್ಕೂ ಸಾವಿರಪಾಲು ಹೆಚ್ಚಿನ ಭಾರವನ್ನು ತಲೆಯ ಮೇಲೆ ಹೊರಿಸಿದರೂ ನಾನು ಆನಂದವಾಗಿ ಹೊರಬಲ್ಲೆ.

ರಾಜಧರ್ಮವಾಗಲಿ ನ್ಯಾಯಶಾಸ್ತ್ರವಾಗಲಿ ನನಗೆ ತಿಳಿಯದು. ದುಃಖದಲ್ಲಿ ಮುಳು ಗಿದವನಿಗೆ ಜ್ಞಾನವು ಶೂನ್ಯ ಎನ್ನುವುದು ನಿನಗೆ ತಿಳಿಯದೆ ಇಲ್ಲ. ಪ್ರತ್ಯುತ್ತರ ಕೊಡುವ ಸೇವಕರನ್ನು ನೋಡಿ ನಾಚಿಕೆಯೂ ನಾಚಿಕೆಪಟ್ಟುಕೊಳ್ಳುವುದು! ಓ! ರಾಮಚಂದ್ರಾ! ನಾನು ಹೃದಯ ಬಿಚ್ಚಿ ಮಾತಾಡುತ್ತಿದ್ದೇನೆ. ಲೋಕಕ್ಕೆ ಮಂಗಳ ವಾಗಲಿ. ನೀನು ಸಂದೇಹ ಬಿಟ್ಟು ಪ್ರಸನ್ನನಾಗಿ ಯಾರಿಗೆ ಏನು ಆಜ್ಞೆ ಮಾಡು ವಿಯೋ ಅದನ್ನು ನಾವು ಶಿರಸಾವಹಿಸುವೆವು," ಎಂದು ಅಂಗಲಾಚಿದನು. ಭರತ ನಾಡಿದ ಮಾತುಗಳಿಂದ ಸಭಿಕರಿಗೆ ಪರಮಾನಂದವಾಯಿತು. ಅವರ ಹೃದಯಗಳು ಕರಗಿದವು. ಭರತನಿಗೆ ರಾಮನ ಮೇಲಿರುವ ಪ್ರೇಮವನ್ನು ಸಾವಿರ ನಾಲಿಗೆಗಳಿಂದ ಕೊಂಡಾಡಿದರು. ಎಲ್ಲರೂ ಒಂದು ಸಾರಿ, "ಓ ರಾಮಪ್ರಭೂ! ಭರತನ ಪ್ರಾರ್ಥನೆ ಯನ್ನು ಮನ್ನಿಸು. ಹಿಂದಿನ ಸುಖ ಸೌಭಾಗ್ಯಗಳೆಲ್ಲಾ ದಶರಥ ಮಹಾರಾಜನ ಮರಣದೊಂದಿಗೆ ಹೋದುವು. ಲೋಕವು ಅನಾಥವಾಯಿತು. ಅಯೋಧ್ಯೆಯು ದಿಕ್ಕಿಲ್ಲದುದಾಗಿ ಚಿಂತಿಸುತ್ತಿದೆ. ನಾಥನಿಲ್ಲದ ಪತಿವ್ರತೆಯಂತೆ ದುಃಖಿಸುತ್ತಿದೆ," ಎಂದರು.

**ಕೈಕೆಗೆ ಕೃತಜ್ಞತೆ**: ಇಷ್ಟರಲ್ಲಿ ಕೈಕೆ ನಾನೇನು ಹೇಳಲಿ, ಯಾರ ಮೇಲೆ ದೋಷವನ್ನು ಹೊರಿಸಲಿ ಎಂದು ತಪ್ಪಿತಸ್ಥಳಾಗಿ ತನ್ನೊಳಗೆ ತಾನೇ ವಿಚಾರಿಸಿ ರಾಮನು ಒಂಟಿ ಯಾಗಿ ಸಿಕ್ಕಿದರೆ ತನ್ನ ಪಾಪವನ್ನು ಮನ್ನಿಸಬೇಕೆಂದು ಕೋರಲು ಆತುರಪಡುತ್ತಿ ದ್ದಳು. ರಾಮನಿಗೆ ಮುಖ ತೋರಿಸಲು ಕೂಡ ನಾಚಿದಳು. ತನ್ನ ಮಗನಿ ಗಿಂತ ಹೆಚ್ಚಾಗಿ ಪ್ರೇಮಿಸಿದ ತನಗೆ ಈ ವಿಧವಾದ ವಾಂಛೆ ಬಂದದ್ದು ತನ್ನ ದೋಷವಲ್ಲವೆಂದೂ ಪ್ರಾಣಸಮಾನವಾದ ರಾಮನನ್ನು ಇಷ್ಟು ವಿಧವಾದ ಬಾಧೆಗೆ ಗುರಿಮಾಡಿದ್ದು ತಾನಲ್ಲವೆಂದೂ ಯಾವುದೋ ಶಕ್ತಿ ತನ್ನಲ್ಲಿ ಸೇರಿ ಮಾಡಿಸಿದ್ದೆಂದೂ ದೃಢವಾಗಿ ನಂಬಿದ್ದಳು. ಜನರು ತನ್ನ ಮಾತನ್ನು ನಂಬರು ಎಂದು ತನ್ನೊಳಗೇ ಸಂಶಯಪಡುತ್ತಾ ಮುಂದಕ್ಕೆ ಹೋಗಲಾರದೆ, ಹಿಂದಿರುಗಲಾರದೆ, ಕೊರಗಿ ಕೃಶ ವಾಗಿದ್ದ ಕೈಕೆಯ ಮನಸ್ಸಿನ ಸ್ಥಿತಿಯನ್ನು ಗ್ರಹಿಸಿ, ರಾಮನು ಸಮಯ ನೋಡಿ, ಕೈಕೆಗೆ ನಮಸ್ಕರಿಸಲು ತಾನೇ ಅವಳ ಬಳಿ ಹೋದನು.

ಅದೇ ಸರಿಯಾದ ಸಮಯವೆಂದು ತಿಳಿದು, ಕೈಕೆಯು ರಾಮನ ಪಾದಗಳನ್ನು ಹಿಡಿದು, "ಅಪ್ಪಾ! ನೀನು ನನಗಿಂತ ಸಣ್ಣವನು, ನೀನು ಮಗ. ಆದರೂ ಗುಣದಲ್ಲಿ ಜ್ಞಾನದಲ್ಲಿ ಲೋಕಕ್ಕೇ ಹಿರಿಯ ಪ್ರಭು. ಆದ್ದರಿಂದ, ನಿನ್ನ ಪಾದಗಳನ್ನು ಹಿಡಿದರೂ ದೋಷವಿಲ್ಲ. ನನ್ನ ಪಾಪವನ್ನು ಕ್ಷಮಿಸು. ಅಯೋಧ್ಯೆಗೆ ಹೊರಡು. ನನಗೆ ಪ್ರಾಪ್ತವಾದ ಈ ಅಪಕೀರ್ತಿಯನ್ನು ನಿವಾರಿಸು. ಇಲ್ಲವೆ ಭರತನನ್ನು ನಿನ್ನೊಡನೆ ಇಟ್ಟುಕೊಂಡು ನಿನ್ನ ಪಾದ ಸೇವಾ ಭಾಗ್ಯ ಕೊಡು! ನನಗೆ ಅದರಿಂದ

ಮನಶ್ಶಾಂತಿ ಲಭಿಸುವುದು. ಮಹಾ ಕಿರಾತಳಾಗಿ ಕೇಳಬಾರದ ಕೋರಿಕೆಯನ್ನು ನಾನು ಕೋರಿದೆನೆಂದರೆ ನನಗೇ ಆಶ್ಚರ್ಯವಾಗುತ್ತಿದೆ. ನಿಜವಾಗಿಯೂ ನಾನು ಕೈಕೆಯ ರಾಜಪುತ್ರಿಯಾಗಿ ಕೇಳಿದೆನೆ? ಇಲ್ಲವೆ, ನನ್ನನ್ನು ಯಾವುದಾದರೂ ಗ್ರಹ ಹಿಡಿದು ನನ್ನ ಮೂಲಕ ಮಾತಾಡಿತೆ? ನನಗೇ ತಿಳಿಯದಾಗಿದೆ," ಎಂದು ರಾಮನ ಎರಡು ಕೈಗಳನ್ನೂ ಹಿಡಿದುಕೊಂಡು ಗೋಳಾಡಿದಳು. ಅವಳ ಗೋಳು ರಾಮನ ಎದೆಯನ್ನು ನೀರು ಮಾಡಿತು. ಅವನು, "ಅಮ್ಮಾ! ಇದರಲ್ಲಿ ನಿನ್ನ ತಪ್ಪೇನೂ ಇಲ್ಲ. ಲೋಕದ ಜನ ಕಾಗೆಗಳು. ಸತ್ಯವನ್ನು ಗುರುತಿಸದೆ ಹಲವು ಬಗೆಯಾಗಿ ಮಾತಾಡುವರು. ನಿನ್ನ ಕೋರಿಕೆಗಳು ಬುದ್ಧಿಪೂರ್ವಕವಾಗಿ ಕೋರಿದ ಕೋರಿಕೆಗಳಲ್ಲ.

ನನ್ನ ಸಂಕಲ್ಪವೇ ಆ ರೀತಿ ಮಾಡಿಸಿತು. ನಾನು ಅವತರಿಸಿದ ಕಾರ್ಯಕ್ಕೆ, ನಾನು ಸಂಕಲ್ಪಿಸಿದ ಕೆಲಸಕ್ಕೆ ನೀನು ಎಷ್ಟೋ ಉಪಕಾರ ಮಾಡಿದ್ದೀಯೇ ವಿನಾ ನನಗೆ ಅಪಕಾರ ಮಾಡಿಲ್ಲ. ಇದಕ್ಕೆ ನಾನು ಕೃತಜ್ಞತೆ ಹೇಳುವ ಬದಲು ನಿನ್ನಿಂದಲೇ ಪಶ್ಚಾತ್ತಾಪದ ಮಾತುಗಳನ್ನು ಕೇಳುವಂತಾಯಿತಲ್ಲಾ ಎಂದು ವ್ಯಥೆ ಪಡುತ್ತಿದ್ದೇನೆ. ನೀನು ದುಃಖಿಸಿದರೆ ನನ್ನ ಕಾರ್ಯವು ಅಶುಭವಾಗುವುದು. ಆದ್ದರಿಂದ ನನ್ನನ್ನು ಅನುಗ್ರಹಿಸಿ, ನನ್ನ ಮೇಲೆ ವಾತ್ಸಲ್ಯ ತೋರಿಸು, ಆಶೀರ್ವದಿಸು," ಎಂದು ಕೈಕೆಯ ಪಾದಗಳಿಗೆ ನಮಸ್ಕರಿಸಿದನು. ರಾಮನ ಮಾತುಗಳಿಂದ ಕೈಕೆಗೆ ಶಾಂತಿ ಸಿಕ್ಕಿತು. ಅವರ ಸಂಭಾಷಣೆಯನ್ನು ಕೇಳುತ್ತಿದ್ದ ಕೌಸಲ್ಯೆ ಸುಮಿತ್ರೆಯರಿಗೆ, ಕೈಕೆಯದು ಏನೂ ದೋಷವಿಲ್ಲವೆಂದೂ ಇದು ದೈವ ಸಂಕಲ್ಪವೇ ಎನ್ನುವುದೂ ತಿಳಿದು ಕೈಕೆಯನ್ನು ಬಹು ವಿಧವಾಗಿ ಸಮಾಧಾನ ಪಡಿಸಿದರು. ಅದರೂ ಕೈಕೆಯು ಪಟ್ಟು ಬಿಡದೆ, "ರಾಮನು ಮಹಾರಾಜ, ಸೀತೆಯು ಮಹಾರಾಣಿ ಆಗುವುದು ತಪ್ಪದು. ನನ್ನ ಮಗ ಭರತನು ಶತ್ರುಘ್ನ ಲಕ್ಷ್ಮಣ ಸಮೇತನಾಗಿ ಸೀತಾರಾಮರಿಗೆ ಸೇವೆ ಮಾಡುವುದನ್ನು ಈ ಕಣ್ಣುಗಳಿಂದ ನೋಡಿ ಪ್ರಾಣ ಬಿಡಬೇಕು," ಎಂದು ಹೇಳುತ್ತಲೆ ಇದ್ದಳು.

**ಪ್ರಜೆಗಳ ದೃಢ ನಿಶ್ಚಯ** : ಹೀಗೆ, ಅಯೋಧ್ಯಾವಾಸಿಗಳು ಅಳುತ್ತಾ ಒಬ್ಬರನ್ನೊಬ್ಬರು ಸಮಾಧಾನಪಡಿಸುತ್ತಾ ರಾಮನನ್ನು ಅಯೋಧ್ಯೆಗೆ ಬರುವಂತೆ ಪ್ರಾರ್ಥಿಸುತ್ತಾ ರಾಮನ ಪಾದಗಳ ಬಳಿ ಅಡವಿಯಲ್ಲಿ ನಾಲ್ಕು ದಿನಗಳು ಕಾಲ ಕಳೆದರು. ಕಡೆಗೆ, ಅವರನ್ನು ಅಯೋಧ್ಯೆಗೆ ಕರೆದೊಯ್ಯಿರೆಂದು ರಾಮನು ಗುರುವಿಗೂ ಭರತನಿಗೂ ಹೇಳಿದುದನ್ನು ಪ್ರಜೆಗಳೂ ಪಂಡಿತರೂ ಕೇಳಿ ತಾಳಲಾರದ ಬಾಧೆಯಿಂದ, "ನಾವು ಸೀತಾ ರಾಮರನ್ನು ಅಯೋಧ್ಯಾ ನಗರಕ್ಕೆ ಕರೆದುಕೊಂಡು ಹೋಗುವುದೇ ಸರಿ. ಹಾಗಿಲ್ಲದಿದ್ದರೆ, ಸೀತಾರಾಮರೊಂದಿಗೆ ವನವಾಸ ಮಾಡುವುದೇ ಕೋಟಿ ಸ್ವರ್ಗ ಗಳಿಗಿಂತ ಸುಖದಾಯಕ. ಯಾರೂ ಹಿಂತಿರುಗಲು ಇಚ್ಛಿಸುವುದಿಲ್ಲ. ಹಾಗೆ

ಇಚ್ಛೆಸಿದರೆ ವಿಧಾತನು ಅವರಿಗೆ ಪ್ರತಿಕೂಲವಾಗಿರುವನೆಂದೇ ತಿಳಿಯಬೇಕು. ಆಹಾ! ಮಂದಾಕಿನೀ ಸ್ನಾನ, ಮಧುರ ಫಲಗಳ ಆಹಾರ, ಕಣ್ಣುಗಳಿಗಿಂಪಾದ ಸೀತಾರಾಮರ ಸುಂದರ ದರ್ಶನ, ಇದಕ್ಕಿಂತ ಬೇರೆ ಸ್ವರ್ಗವೇ!" ಎಂದು ಮಾತಾಡಿ ಕೊಳ್ಳುತ್ತಾ ರಾಮನನ್ನು ಅಯೋಧ್ಯೆಗೆ ಕರೆದೊಯ್ಯಲೇಬೇಕೆಂದು ದೃಢ ನಿಶ್ಚಯ ಮಾಡಿದರು.

**ವೃದ್ಧ ಬ್ರಾಹ್ಮಣ**: ಹೀಗೆ, ಪ್ರೇಮಪೂರಿತವಾದ ವಚನಗಳಿಂದ ಅವರವರ ಮನೋ ರಥಗಳನ್ನು ಹೇಳಿಕೊಳ್ಳುತ್ತಿರಲು, ಒಬ್ಬ ವೃದ್ಧ ಬ್ರಾಹ್ಮಣನು ಎದ್ದು ನಿಂತು, "ಈ ಅರಣ್ಯದಲ್ಲಿ ಶ್ರೀರಾಮನ ಸನ್ನಿಧಿಯಲ್ಲಿ ನಾವು ಇಂಥ ಶುಭವನ್ನು, ಸುಖವನ್ನು ಅನುಭವಿಸುವ ಯೋಗ್ಯತೆ, ಭಾಗ್ಯ ನಮಗಿರುವಾಗ ರಾಮಚಂದ್ರನು ನಮ್ಮ ಅಭೀಷ್ಟ ವನ್ನು ಅಂಗೀಕರಿಸುವ ಭಾಗ್ಯವೂ ಇರಬಹುದು. ಅಂಥ ಪ್ರಾಪ್ತಿಯೇ ಇಲ್ಲದ ಪಕ್ಷದಲ್ಲಿ, ನಮ್ಮ ದುರದೃಷ್ಟವೇ ರಾಮಚಂದ್ರನ ಮನಸ್ಸನ್ನು ಕಠಿಣಪಡಿಸಿ, ನಮ್ಮನ್ನು ತಿರುಗಿ ಅಯೋಧ್ಯೆಗೆ ಕಳಿಸುವುದು. ರಾಮನೇ ಅನುಗ್ರಹಿಸದಿದ್ದಮೇಲೆ, ಇನ್ನು ಅನುಗ್ರಹಿಸುವವರಾದರೂ ಯಾರು? ಅವನೊಂದಿಗೇ ಇದ್ದು ಕಾಲ ಕಳೆಯದ ಜೀವಿತ ಇನ್ನು ಎಲ್ಲಿದ್ದರೇನು? ಏನಾದರೇನು? ನಾವು ಬದುಕಿಯೂ ಸತ್ತವರಿಗೆ ಸಮ," ಎಂದನು. ಎಲ್ಲರೂ "ಹೌದು ಹೌದು, ಈ ಮಾತು ಪರಮ ಸತ್ಯ," ಎಂದು ಅನುಮೋದಿಸಿದರು.

**ಸೀತಾ ಮಾತೆ**: ಕುಲಗುರುಗಳಾದ ವಸಿಷ್ಠರು ಕಳಿಸಿದ ದಶರಥನ ಮರಣ ವಾರ್ತೆಯು ಜನಕನಿಗೆ ಮುಟ್ಟಿದೊಡನೆ, ಅವನು ಮಹಾರಾಣಿಯ ಸಮೇತನಾಗಿ ಅಯೋಧ್ಯೆಗೆ ಬಂದನು. ಅಲ್ಲಿ ವಿಷಯಗಳೆಲ್ಲವೂ ವಿಶದವಾಯಿತು. ಭರತನು ಅಯೋಧ್ಯೆಗೆ ಬಂದು ರಾಣಿಯರು ಗುರು ಪ್ರಜೆಗಳ ಸಮೇತನಾಗಿ, ರಾಮ ಸಂದ ರ್ಶನಾರ್ಥವಾಗಿ ಚಿತ್ರಕೂಟ ಪರ್ವತಕ್ಕೆ ಹೊರಟಾಗ, ಜನಕನು ಸಹ ಹೊರಟು ತನ್ನ ರಾಣಿಯರೊಂದಿಗೆ ಚಿತ್ರಕೂಟಕ್ಕೆ ಬಂದಿದ್ದನು. ಸಮಯ ನೋಡಿ ಸೀತಾ ರಾಮರೊಂದಿಗೆ ಮಾತನಾಡಲು ಕಾದಿದ್ದನು. ಸೀತಾದೇವಿಯ ತಾಯಿ ಸುನಯ ನೆಯು ಪರಿಚಾರಿಕೆಯನ್ನು ಕರೆದು, ಕೌಸಲ್ಯಾದಿ ಮಹಾರಾಣಿಯರನ್ನು ನೋಡು ವುದು ಯಾವಾಗ ಸಾಧ್ಯವಾಗಬಹುದು ತಿಳಿದು ಬಾ ಎಂದು ಕಳಿಸಿದಳು. ಪರಿಚಾರಿ ಕೆಯು ಕೌಸಲ್ಯಾದಿಗಳನ್ನು ನೋಡಲು ಹೊರಟಳು. ಜ್ಯೇಷ್ಠ ಶುದ್ಧ ಏಕಾದಶಿ ದಿನ ರಾಣಿಯರು ಪರಸ್ಪರ ಭೇಟಿಯಾಗಲು ಸಾಧ್ಯವಾಯಿತು. ಕೌಸಲ್ಯಾದೇವಿಯು ಜನಕ ಮಹಾರಾಜನ ಭಾರ್ಯೆಯಾದ ಸುನಯನೆಯನ್ನು ಸಮಯೋಚಿತವಾಗಿ ಸತ್ಕರಿಸಿ, ಉಪಚರಿಸಿ, ಆಸನದಲ್ಲಿ ಕುಳ್ಳಿರಿಸಿದಳು.

ಆ ಮಹಾರಾಣಿಯರನ್ನು ಸುನಯನೆಯು ಅದೇ ಮೊದಲ ಬಾರಿಗೆ ನೋಡು ತ್ತಿದ್ದುದು. ಸೀತಾ ಕಲ್ಯಾಣದ ಸಮಯದಲ್ಲಿ ರಾಣಿಯರು ಯಾರೂ ಮಿಥಿಲಾಪುರಕ್ಕೆ ಬರಲಿಲ್ಲವಾದ್ದರಿಂದ, ಅವರನ್ನು ನೋಡಿರಲಿಲ್ಲ. ಅಯೋಧ್ಯಾ ನಗರದ ರಾಣಿ ಯರಾದ ಕೌಸಲ್ಯೆ, ಸಮಿತ್ರೆ, ಕೈಕೆಯರ ಸ್ಥಿತಿಯನ್ನೂ ಸೌಶೀಲ್ಯವನ್ನೂ ಸ್ನೇಹವನ್ನೂ ನೋಡಿ ಕಠಿಣವಾದ ವಜ್ರವೂ ಕರಗುತ್ತಿತ್ತು. ಅವರ ಶರೀರಗಳು ಸೊರಗಿ ಹೋಗಿ ದ್ದುವು. ಕಣ್ಣಿರು ಸುರಿಸುತ್ತಾ ನೆಲವನ್ನೇ ನೋಡುತ್ತಾ ಉಕ್ಕಿ ಬರುತ್ತಿದ್ದ ದುಃಖವನ್ನು ತಡೆದುಕೊಳ್ಳಲಾಗದೆ, ಗೊಳ್ಳೆಂದು ಅಳಲಾರಂಭಿಸಿದರು. ಸುನಯನೆಗೆ ಏನು ಹೇಳಲೂ ತೋಚದಾಯಿತು. "ಅಮ್ಮಾ! ಚಿಂತಿಸಿ ಪ್ರಯೋಜನವೇನು, ವಿಧಾತನ ಬುದ್ಧಿ ವಕ್ರವಾಗಿ ಹರಿಯಿತು. ಹಾಲಿನ ಕೆನೆಯನ್ನು ಕತ್ತರಿಸಲು ವಜ್ರದ ಉಪಯೋಗ ಮಾಡಿದಂತಾಯಿತು. ಅಮೃತವನ್ನು ಕೇಳಿದ್ದೇವೆ, ಕಂಡಿಲ್ಲ, ವಿಷವನ್ನು ಮಾತ್ರ ಕಾಣುತ್ತಿದ್ದೇವೆ. ಕಾಗೆ, ಕೊಕ್ಕರೆ, ಹದ್ದು, ಗೂಬೆಗಳನ್ನೇ ನೋಡುತ್ತಿದ್ದೇವೆ. ಮಾನಸ ಸರೋವರದ ರಾಜಹಂಸಗಳನ್ನು ನೋಡಿಲ್ಲ, ಇವೆಯೆಂದು ಕೇಳಿದ್ದೇವೆ ಮಾತ್ರ. ದೇವಿ! ವಿಧಿ ಕೃತ್ಯಗಳು ವಿಪರೀತವಾದವುಗಳು. ವಿಚಿತ್ರವಾದವುಗಳು; ಅವು ಹುಡುಗಾಟಿಕೆಯಂತಿವೆ," ಎಂದು ಸುನಯನೆ ಅವರನ್ನು ಸಮಾಧಾನಗೊಳಿಸುವ ಮಾತನಾಡುತ್ತಾ ತಾನೂ ದುಃಖಿಸಿದಳು.

ಆಗ ಕೌಸಲ್ಯೆಯು, "ಅಮ್ಮಾ! ಸುನಯನೆ! ಇದು ಯಾರ ತಪ್ಪೂ ಅಲ್ಲ. ಸುಖದುಃಖಗಳು, ಲಾಭನಷ್ಟಗಳು ಕರ್ಮಾಧೀನವಾದವುಗಳು. 'ಅವಶ್ಯಮೇವ ಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ'. ಕಠಿಣವಾದ ಕರ್ಮಗತಿಯು ಭಗವಂತ ನಿಗೆ ಗೊತ್ತು. ಶುಭಾಶುಭ ಕರ್ಮಗಳಿಗೆ ತಕ್ಕ ಫಲವನ್ನು ಅವನು ಕೊಡುವನು. ಈಶ್ವರಾಜ್ಞೆಯು ಪ್ರತಿಯೊಬ್ಬರ ತಲೆಯ ಮೇಲೂ ಇದ್ದೇ ಇರುವುದು. ದೇವೀ! ನಾವು ಮೋಹಕ್ಕೆ ವಶವಾಗಿ ವ್ಯರ್ಥವಾಗಿ ಚಿಂತಿಸುತ್ತೇವೇ ವಿನಾ ಪೂರ್ವ ಜನ್ಮದ ಪುಣ್ಯ ಪಾಪಗಳು ನಮ್ಮನ್ನು ಬಿಡುವುದೇನು? ಅನಾದಿ ಕಾಲದಿಂದ ಸೃಷ್ಟಿಯ ಕ್ರಮ ಈ ಪ್ರಕಾರ ನಡೆಯುತ್ತಿರುವಾಗ ನಮಗಾಗಿ ಅವು ಬದಲಾಯಿಸುವುವೇನು? ಹುಚ್ಚಿ!" ಎಂದು ನಿಟ್ಟುಸಿರು ಬಿಟ್ಟಳು. ಸುನಯನೆಯು, "ಅಮ್ಮಾ! ನೀವು ಬಹಳ ಪುಣ್ಯಾತ್ಮರು, ಲೋಕದಲ್ಲಿ ದಶರಥನಿಗೆ ಮಿಗಿಲಾದ ಪುಣ್ಯಾತ್ಮರು ಬೇರೊಬ್ಬರು ಕಾಣಿಸರು. ಅಂಥ ದಶರಥನಿಗೆ ಅರ್ಧಾಂಗಿಯರಾಗಿ, ಧರ್ಮಮೂರ್ತಿ ಪ್ರೇಮಮೂರ್ತಿ ವಿಶಾಲ ಹೃದಯಿ ಸುಗುಣಶೀಲ ಶ್ರೀರಾಮನ ತಾಯಿಯರಾಗಿ ಲೋಕಖ್ಯಾತಿ ಹೊಂದಿದಿರಿ. ನಿಮ್ಮ ಮಾತು ಪರಮ ಸತ್ಯವಾದುದು. ಎಂಥವರಿಗಾದರೂ ಕಷ್ಟಸುಖಗಳು ಇದ್ದದ್ದೆ. ಕಷ್ಟವೇ ಇಲ್ಲದಿದ್ದರೆ ಸುಖದ ಸೌಖ್ಯವೇ ತಿಳಿಯದಲ್ಲವೆ? 'ನ ಸುಖಾತ್ ಲಭ್ಯತೇ ಸುಖಂ'. ಸುಖದಿಂದಲೇ ಸುಖ ಬರುವುದಿಲ್ಲ. ಅಲ್ಲವೆ?" ಎಂದಳು.

**ಭರತನನ್ನು ನೋಡಿ ಭಯ**: ಕೌಸಲ್ಯೆಯು, "ಸೀತಾರಾಮಲಕ್ಷ್ಮಣರು ವನವಾಸ ಮಾಡುವುದರಿಂದ ಅನಂತ ಶುಭ ಉಂಟಾಗುವುದು, ನಿಜ. ಆದರೆ, ರಾಮನ ವಿಯೋಗವನ್ನು ನಾವು ಸಹಿಸಲಾರೆವು. ಭರತನು ಜೀವಿಸಲಾರ. ಸೀತಾರಾಮ ಲಕ್ಷ್ಮಣರಿಗಿಂತ ಭರತನನ್ನು ನೋಡಿ ನನಗೆ ದುಃಖ ಅಧಿಕವಾಗುತ್ತಿದೆ," ಎಂದು ಗದ್ಗದ ಸ್ವರದಿಂದ ನುಡಿದಳು. ಅದನ್ನು ಕೇಳಿ ಸುಮಿತ್ರಾ ಕೈಕೆಯರು "ನಿಜ, ನಿಜ!" ಎಂದು ಕಣ್ಣೀರು ಹಾಕಿದರು. ಸುಮಿತ್ರೆಯು, "ಅಕ್ಕಾ! ನಿಮ್ಮ ಆಶೀರ್ವಾದದಿಂದ ನಮ್ಮ ಮಗ ಮತ್ತು ಸೊಸೆ ಗಂಗೆಯಂತೆ ನಿರ್ಮಲರು. ಇದುವರೆಗೆ ರಾಮನನ್ನು ಕುರಿತು ಹೇಳಿರಲಿಲ್ಲ, ಈಗ ರಾಮನ ಸತ್ಸ್ವಭಾವವನ್ನು ಕುರಿತು ಹೇಳುತ್ತಿದ್ದೇನೆ. ಭರತನ ಗುಣಶೀಲವನ್ನು, ವಿನಯವನ್ನು, ಉದಾರ ಬುದ್ಧಿಯನ್ನು, ಭ್ರಾತೃವಾತ್ಸಲ್ಯ ವನ್ನು, ಭಕ್ತಿ ಶ್ರದ್ಧೆಗಳನ್ನು, ಧೈರ್ಯ ಸ್ಥೈರ್ಯಗಳನ್ನು ಸಂಪೂರ್ಣವಾಗಿ ವರ್ಣಿಸಲು ಸರಸ್ವತಿಗೂ ಸಾಧ್ಯವಿಲ್ಲ. ಕಪ್ಪೆಚಿಪ್ಪಿನಿಂದ ಸಮುದ್ರವನ್ನು ಅಳೆಯಲು ಸಾಧ್ಯವೇ? ಭರತನು ಕುಲದೀಪಕನೆನ್ನುವುದನ್ನು ಗುರುತಿಸಲು ಎಲ್ಲರಿಂದಲೂ ಸಾಧ್ಯವಿಲ್ಲ.

ಪರೀಕ್ಷೆಯಿಂದ ರತ್ನವನ್ನೂ ಒರೆಗಲ್ಲಿನಿಂದ ಬಂಗಾರವನ್ನೂ ಪರೀಕ್ಷಿಸುವಂತೆ, ಸಮಯ ಬಂದಾಗ ಮನುಷ್ಯನನ್ನು ಪರೀಕ್ಷಿಸಬೇಕು. ಈ ಸಮಯದಲ್ಲಿ ಹೀಗೆ ಮಾತನಾಡಬಾರದು. ಶೋಕದಿಂದಲೂ ಪುತ್ರವಾತ್ಸಲ್ಯದಿಂದಲೂ ನನ್ನ ಬುದ್ಧಿ ಕಡಿಮೆಯಾಗಿದೆ," ಎಂದು ಕಣ್ಣೀರು ಒರೆಸಿಕೊಂಡಳು. "ಅಯೋಧ್ಯಾ ರಾಣಿಯರು ಒಬ್ಬರಿಗಿಂತೊಬ್ಬರು ಪವಿತ್ರ ಹೃದಯಿಗಳು. ತಮ್ಮ ಮಕ್ಕಳನ್ನು ವರ್ಣಿಸದೆ ಸವತಿ ಮಕ್ಕಳನ್ನು ಇಷ್ಟು ವಿಧವಾಗಿ ವರ್ಣಿಸಿ ಮೆಚ್ಚಿಕೊಳ್ಳುತ್ತಿರುವುದು ಲೋಕವಿರುದ್ಧವಾದ ರೀತಿ. ದ್ವೇಷ ರಹಿತವಾದ ಈ ರಾಣಿಯರು ಲೋಕಕ್ಕೇ ಆದರ್ಶ ಗೃಹಿಣಿಯರು. ಎಂಥ ವಿಶಾಲ ಹೃದಯ! ಎಂಥ ನಿಸ್ವಾರ್ಥ ಮಾತುಗಳು!" ಎಂದು ಸುನಯನೆಯು ತನ್ನೊಳಗೇ ಅಚ್ಚರಿಪಡುತ್ತಾ ಆನಂದಿಸಿದಳು.

**ಕೌಸಲ್ಯೆಯ ಕೋರಿಕೆ**: ಕೌಸಲ್ಯೆಯು ಸಮಾಧಾನ ತಂದುಕೊಂಡು, "ಓ ಮಿಥಿಲಾ ದೇಶದ ರಾಣಿ! ಜ್ಞಾನ ಸಮುದ್ರನಾದ ಜನಕ ಚಕ್ರವರ್ತಿಯ ಪತ್ನಿ ನೀನು. ನಿನಗೆ ಉಪದೇಶ ಮಾಡುವ ಸಾಹಸ ಯಾರು ಮಾಡಿಯಾರು? ನಮ್ಮದು ಅಜ್ಞಾನದ ಮಾತುಗಳು. ಆದರೂ ನಮ್ಮನ್ನು ಕ್ಷಮಿಸಿ ಸಮಯ ನೋಡಿ ಚಕ್ರವರ್ತಿಗೆ ಇದನ್ನು ತಿಳಿಸು. ಏನೆಂದರೆ, ಲಕ್ಷ್ಮಣನು ಇಷ್ಟುಕಾಲ ರಾಮನೊಂದಿಗೆ ಇದ್ದನಾದ್ದರಿಂದ ಸ್ವಲ್ಪ ಕಾಲ ಭರತನು ರಾಮನೊಂದಿಗೆ ಇರಲು ಅವಕಾಶ ಮಾಡಿಕೊಡಬೇಕೆಂದೂ ಲಕ್ಷ್ಮಣನನ್ನು ಅಯೋಧ್ಯೆಯಲ್ಲಿ ರಾಜ್ಯಕಾರ್ಯಗಳನ್ನು ನೋಡಿಕೊಂಡಿರುವಂತೆ ನೇಮಿಸಬೇಕೆಂದೂ ಅವನೊಂದಿಗೆ ಶತ್ರುಘ್ನನೂ ಅಯೋಧ್ಯೆಯಲ್ಲಿರುವಂತೆಯೂ ನಾನು ಪ್ರಾರ್ಥಿಸಿದೆನೆಂದು ಚಕ್ರವರ್ತಿಗೆ ತಿಳಿಸಿ ರಾಜನಿಗೆ ಹೇಳುವಂತೆ ಮಾಡು.

ರಾಮನು ಈ ಮಾತಿಗೊಪ್ಪಿದರೆ ಮಿಕ್ಕಿದ್ದೆಲ್ಲಾ ತಮಗೆ ತಾವೆ ಸರಿಹೋಗುವುವು. ಭರತನ ವಿಷಯದಲ್ಲಿ ನನಗೆ ತುಂಬಾ ಭಯವಾಗುತ್ತಿದೆ. ಭರತನ ಪ್ರೇಮ ಬಹು ಗಂಭೀರವಾದದ್ದು. ರಾಮನನ್ನು ಬಿಟ್ಟು ಅವನು ಜೀವಿಸನು. ಚಕ್ರವರ್ತಿ ಸ್ವರ್ಗಸ್ಥರಾದರು. ರಾಮನಾದರೊ ವನವಾಸವನ್ನು ಬಿಡ. ಹೀಗಿರುವಾಗ ಭರತ ನೇನಾದರೂ ರಾಮ ವಿಯೋಗವನ್ನು ಸಹಿಸಲಾರದೆ ಗತಿಸಿದರೆ ದೇಶವೇ ಜೀವ ಚ್ಛವವಾಗುವುದು. ಮುಂದೆ ಏನೇನು ಪ್ರಮಾದಗಳು ಸಂಭವಿಸಲಿರುವುವೊ ಎಂದು ನನಗೆ ಬಹು ಭಯವಾಗಿದೆ," ಎಂದು ಸುನಯನೆಯ ಕೈಗಳನ್ನು ಹಿಡಿದುಕೊಂಡು, "ಜನಕರಾಜನಿಗೆ ತಕ್ಕ ರೀತಿಯಲ್ಲಿ ಹೇಳಿ. ಈ ಕೆಲಸವನ್ನು ಹೇಗಾದರೂ ಮಾಡಿ ನಡೆಸಿಕೊಟ್ಟು ನಮ್ಮನ್ನು ಆನಂದಪಡಿಸುವಂತೆ ನಾನು ಪ್ರಾರ್ಥಿಸಿದೆನೆಂದು ಅವರಿಗೆ ಹೇಳು," ಎಂದಳು.

ಕೌಸಲ್ಯೆಯ ಸ್ನೇಹಧರ್ಮಕ್ಕೆ ಸಂತೋಷಪಟ್ಟು ಸುನಯನೆಯು, "ದೇವಿ! ವಿನಯ ಸುಗುಣಗಳು ನಿಮಗುಚಿತವಾಗಿವೆ. ಅಗ್ನಿಯು ಹೊಗೆಯನ್ನು ಧರಿಸುವುದಿಲ್ಲವೆ? ಹಾಗೆ ನೀವು ನಮ್ಮೊಂದಿಗೆ ನಡೆದುಕೊಳ್ಳುತ್ತಿದ್ದೀರಿ. ಚಕ್ರವರ್ತಿಯು ನಿಮ್ಮ ಸೇವಕ, ಸಹಾಯಕ. ದೀಪದ ಸಹಾಯದಿಂದ ಸೂರ್ಯನಿಗೆ ಶೋಭೆ ಬರುವುದೆ? ದೇವ ಕಾರ್ಯಗಳನ್ನು ಸಾಧಿಸಲು ರಾಮನು ವನಕ್ಕೆ ಬಂದಿದ್ದಾನೆ. ಅವನು ಅಯೋಧ್ಯೆಗೆ ತಿರುಗಿ ಬಂದರೆ ನಿಶ್ಚಲವಾಗಿ ರಾಜ್ಯವಾಳಬಲ್ಲನೆ? ರಾಮನ ಬಾಹುಬಲದಿಂದ ನರರು ದೇವತೆಗಳು ನಾಗರು ಸುಖಿಸಿ ಅವರವರ ನಿಜಸ್ಥಾನವನ್ನು ಹೊಂದುವರು. ಇದೆಲ್ಲವನ್ನೂ ಯಾಜ್ಞವಲ್ಕ್ಯ ಮಹರ್ಷಿಯು ಮುಂದಾಗಿಯೇ ನಮಗೆ ಹೇಳಿದ್ದಾರೆ. ಋಷಿವಾಕ್ಯ ಎಂದೂ ಸುಳ್ಳಾಗದು," ಎಂದು ಕೌಸಲ್ಯೆಯ ಪಾದಗಳಿಗೆ ನಮಸ್ಕರಿಸಿ ದಳು. ಅಲ್ಲಿಂದ ಹೊರಟು ಸೀತೆಯನ್ನು ನೋಡುವ ಸಲುವಾಗಿ ಪರ್ಣಶಾಲೆ ಯೊಳಗೆ ಹೋಗಿ ಮಗಳು ಸೀತೆಯನ್ನು ನೋಡಿದೊಡನೆ ದುಃಖವನ್ನು ತಡೆದು ಕೊಳ್ಳಲಾಗದೆ ಬಾಚಿ ತಬ್ಬಿಕೊಂಡು ಗಳಗಳನೆ ಅತ್ತಳು. ಸೀತೆಯು ತಾಯಿಯನ್ನು ಅನೇಕ ವಿಧವಾಗಿ ಸಮಾಧಾನಪಡಿಸಿದಳು. ಧೈರ್ಯದ ಮಾತುಗಳನ್ನು ಹೇಳಿ ತಾಯಿಯ ಪಾದಗಳಿಗೆ ನಮಸ್ಕರಿಸಿ ನಿಂತಳು.

ಜಾನಕಿಯು ಧರಿಸಿದ್ದ ತಪಸ್ವಿನಿ ವೇಷವನ್ನು ನೋಡಿ ಸಾಕ್ಷಾತ್ ಪಾರ್ವತಿ ದೇವಿ ಯಾಗಿ ಕಾಣುತ್ತಿದ್ದ ಸೀತೆಯನ್ನುದ್ದೇಶಿಸಿ, "ಅಮ್ಮಾ! ನೀನು ನನ್ನ ಸೀತೆಯೋ ಇಲ್ಲವೆ ಸಾಕ್ಷಾತ್ ಶಂಕರನ ಧರ್ಮಪತ್ನಿಯೋ?" ಎಂದು ಪ್ರಶ್ನಿಸಿದಳು. ಆಶ್ಚರ್ಯ ದಿಂದ ಅವಳನ್ನು ಎವೆಯಿಕ್ಕದೆ ನೋಡುತ್ತಾ ಪರಮಾನಂದ ಪರವಶಳಾಗಿ, "ಓ ಸೀತಾ! ನಿನ್ನ ಮೂಲಕ ತಂದೆತಾಯಿಗಳ ವಂಶ, ಅತ್ತೆ ಮಾವಂದಿರ ವಂಶ ಎರಡೂ ಪವಿತ್ರವಾದವು. ನಿನ್ನ ಕೀರ್ತಿ ಲೋಕವ್ಯಾಪ್ತಿಯಾಗುವುದು. ತಾಯಿ, ನಿನ್ನ

ಕೀರ್ತಿ ಎನ್ನುವ ನದಿಗೆ ಎರಡು ವಂಶಗಳು ಎರಡು ದಡಗಳು. ಗಂಗಾನದಿಗೆ ಭೂಲೋಕದಲ್ಲಿ ಮೂರು ಪುಣ್ಯ ತೀರ್ಥಗಳು ಮಾತ್ರ—ಹರಿದ್ವಾರ, ಪ್ರಯಾಗ ಮತ್ತು ಸಾಗರಸಂಗಮ. ಆದರೆ, ನಿನ್ನ ಕೀರ್ತಿ ಬ್ರಹ್ಮಾಂಡ ಪ್ರವಾಹವಾಗಿ ಹರಿದು. ಸರ್ವರ ಹೃದಯ ಕ್ಷೇತ್ರಗಳಲ್ಲೂ ತೀರ್ಥರೂಪವಾಗಿ ಸಾರ್ಥಕ ಹೊಂದುವುದು," ಎಂದು ವಾತ್ಸಲ್ಯದಿಂದ ನುಡಿದಳು. ಸೀತೆಯು ನಾಚಿಕೆಪಟ್ಟುಕೊಳ್ಳುವವಳಂತೆ ನಟಿಸುತ್ತಾ, "ಅಮ್ಮಾ! ಏನು ಸಂಬಂಧ? ಪವಿತ್ರ ಗಂಗೆಗೂ ನನಗೂ ಎಲ್ಲಿಯ ಹೋಲಿಕೆ?" ಎಂದು ಭಕ್ತಿ ಶ್ರದ್ಧೆಗಳಿಂದ ಗಂಗೆಗೆ ನಮಸ್ಕರಿಸುವವಳಂತೆ ಪ್ರದರ್ಶಿಸಿ ನಿಂತುಕೊಂಡಳು. ತಾಯಿಯು ಅವಳನ್ನು ಅಪ್ಪಿಕೊಂಡು ಶಿರಸ್ಸನ್ನು ಮುದ್ದಾಡಿ, "ಸೀತಾ! ನಿನ್ನ ಗುಣಗಳು ಲೋಕದ ಗೃಹಿಣೀಮಣಿಯರಿಗೆ ಆದರ್ಶವಾದವುಗಳು," ಎಂದು ಹೇಳುತ್ತಿರುವಂತೆ, ಸೀತೆಯು, "ಅಮ್ಮಾ, ನಾನು ನಿಮ್ಮೊಂದಿಗೆ ಕಾಲವನ್ನು ಅಧಿಕವಾಗಿ ಕಳೆಯುವುದರಿಂದ ರಾಮನ ಸೇವಾಕಾರ್ಯಕ್ಕೆ ತಡವಾಗುವುದು. ಆದ್ದರಿಂದ ಅಪ್ಪಣೆ ಕೊಡಿ, ಹೊರಡುತ್ತೇನೆ," ಎಂದಳು. ತಾಯಿಯು ಸೀತೆಯ ಮನೋಭೀಷ್ಟವನ್ನು ತಿಳಿದು ಅದಕ್ಕೆ ಅಡ್ಡಿ ಬರಲೊಲ್ಲದೆ ಹಲವು ಬಾರಿ ಮತ್ತೆ ಮುದ್ದಾಡಿ ಕಳಿಸಿಕೊಟ್ಟಳು. ಸೀತೆಯು ತಾಯಿಗೆ ನಮಸ್ಕರಿಸಿ ರಾಮಸನ್ನಿಧಿಗೆ ಹೊರಟಳು.

ಸುನಯನೆಯು ತನ್ನ ಮಗಳ ಪತಿಭಕ್ತಿಯನ್ನೂ ಗುಣಾತಿಶಯಗಳನ್ನೂ ಸ್ಮರಿಸುತ್ತಾ ಅವಳನ್ನೇ ನೋಡುತ್ತಾ ಅವಳು ಒಳಗೆ ಹೋಗುವವರೆಗೂ ಅಲ್ಲೇ ನಿಂತಿದ್ದಳು. ಪರಿಚಾರಿಕೆಯು, "ಅಮ್ಮಾ, ಸೀತಮ್ಮನವರು ಒಳಗೆ ಹೋದರು. ಇನ್ನು ನಾವು ನಮ್ಮ ಸ್ಥಳಕ್ಕೆ ಹೋಗುವುದೊಳ್ಳೆಯದು," ಎಂದು ಹೇಳಿದ ಮೇಲೆ ಸುನಯನೆಯು ಕಣ್ಣೀರು ಸುರಿಸುತ್ತಾ ವಿಧಿಯಿಲ್ಲದೆ ಅಲ್ಲಿಂದ ಹಿಂದಕ್ಕೆ ತಿರುಗಿ ತನ್ನ ಬಿಡದಿಗೆ ಬಂದಳು. ಇಷ್ಟರಲ್ಲಿ, ಸೂರ್ಯಾಸ್ತವಾದುದರಿಂದ ಲಕ್ಷ್ಮಣ, ಭರತ ಶತ್ರುಘ್ನರು ಸ್ನಾನಸಂಧ್ಯಾದಿ ಕರ್ಮಗಳನ್ನು ಆಚರಿಸಲು ನದಿಗೆ ಹೊರಟಿರುವರೆಂದು ಕೇಳಿ ಪಂಡಿತರು ವಿಪ್ರರು ರಾಜರು ಮಂತ್ರಿಗಳು ಎಲ್ಲರೂ ಅವರೊಂದಿಗೆ ನದೀ ತೀರಕ್ಕೆ ಹೊರಟು ಸ್ನಾನಸಂಧ್ಯಾದಿಗಳನ್ನಾಚರಿಸಿ. ಕಂದ ಮೂಲಾದಿಗಳನ್ನು ಭುಜಿಸಿ ವೃಕ್ಷಗಳ ಕೆಳಗೆ ನಿಶ್ಚಿಂತೆಯಿಂದ ನಿದ್ರಿಸಿದರು.

**ಭರತನ ಕುತೂಹಲ**: ಬೆಳಗ್ಗೆ ನಿತ್ಯ ಕಾರ್ಯಗಳನ್ನು ಮುಗಿಸಿಕೊಂಡು, ಎಲ್ಲರೂ ಪರ್ಣಶಾಲೆಯ ಸುತ್ತಲೂ ಸೇರಿದರು. ಶ್ರೀರಾಮಚಂದ್ರನು ಅವರೆಲ್ಲರನ್ನೂ ನೋಡಿ, ಮಂದಹಾಸದಿಂದ ಅವರ ಯೋಗಕ್ಷೇಮವನ್ನು ವಿಚಾರಿಸುತ್ತಾ ಬರುತ್ತಿದ್ದನು. ಭರತನು ರಾಮನಿಗೆ ನಮಸ್ಕರಿಸಿ, "ಸ್ವಾಮಿ! ನನ್ನ ಮನಸ್ಸಿನಲ್ಲೊಂದು ಅಭೀಷ್ಟ ಚಿಗುರಿದೆ. ಭಯದಿಂದಲೂ ಸಂಕೋಚದಿಂದಲೂ ಅದನ್ನು ಹೇಳಲಾರದೆ ಹೋಗಿ

ದ್ದೇನೆ," ಎಂದನು. ಶ್ರೀರಾಮನು ಅವನ ತಲೆಯನ್ನು ಸವರುತ್ತಾ, "ನನ್ನೊಂದಿಗೆ ಸಂಕೋಚವೇಕೆ, ಖಂಡಿತವಾಗಿ ಹೇಳು," ಎಂದು ಪ್ರೋತ್ಸಾಹಿಸಿದನು. ಆಗ ಭರತನು, "ಅಣ್ಣಾ! ಈ ಚಿತ್ರಕೂಟ ಪರ್ವತದಲ್ಲಿರುವ ಋಷ್ಯಾಶ್ರಮಗಳನ್ನೂ ಪವಿತ್ರ ತೀರ್ಥಗಳನ್ನೂ ತೊರೆಗಳನ್ನೂ ಜಲಪಾತಗಳನ್ನೂ ಸಂದರ್ಶಿಸಲು ಕುತೂಹಲ ವಾಗಿದೆ. ಅಲ್ಲಿರುವ ತಮ್ಮ ಪಾದ ಚಿಹ್ನೆಗಳ ದರ್ಶನ ಮಾಡಿ ಬರಬೇಕೆನ್ನುವ ಆಸೆ ಅಯೋಧ್ಯಾವಾಸಿಗಳಿಗೆ ಸಹ ಉಂಟಾಗಿದೆ," ಎಂದು ಪ್ರಾರ್ಥಿಸಿದನು.

ರಾಮನು, "ತಮ್ಮಾ, ನಿನ್ನ ಅಪೇಕ್ಷೆ ಬಹಳ ಉತ್ತಮವಾದುದೇ. ಅತ್ರಿ ಮಹಾ ಮುನಿಯ ದರ್ಶನ ಪಡೆದು, ನಿರ್ಭಯವಾಗಿ ಅರಣ್ಯದಲ್ಲಿ ಸಂಚರಿಸಿ ಬನ್ನಿ," ಎಂದನು. ಭರತನು ಸಂತೋಷಿಸಿ, ಮುನಿ ಚರಣಗಳಿಗೆ ನಮಸ್ಕರಿಸಿ, ರಾಮನಿಗೆ ನಮಸ್ಕರಿಸಿ ಶತ್ರುಘ್ನನೊಂದಿಗೆ ಮಂತ್ರಿಗಳೊಂದಿಗೆ ವನಸಂಚಾರಕ್ಕೆ, ಆಶ್ರಮ ಸಂದ ರ್ಶನಕ್ಕೆ ಹೊರಟನು. ಹಾಗೆ, ಅರಣ್ಯವನ್ನೆಲ್ಲಾ ಸುತ್ತಾಡಿ ಬರುತ್ತಿರುವಾಗ ಪರ್ವತದ ಸಮೀಪದಲ್ಲೊಂದು ಕೂಪ ಕಾಣಿಸಿತು. ಸಕಲ ಪುಣ್ಯ ತೀರ್ಥಗಳ ಪವಿತ್ರ ಜಲ ಅದರಲ್ಲಿತ್ತು. ಅವರು ಅದರತ್ತ ಹೊರಟರು. ಅಲ್ಲಿ ಅತ್ರಿ ಮಹಾಮುನಿಯ ಶಿಷ್ಯನು ಭರತನಿಗೆ ಆ ಪವಿತ್ರ ಜಲವನ್ನು ಕುರಿತು ವಿವರಿಸಿದನು. ಭರತನು ಆ ಪವಿತ್ರ ಜಲವನ್ನು ಶಿರಸ್ಸಿಗೆ ಪ್ರೋಕ್ಷಿಸಿಕೊಂಡು ನಮಸ್ಕರಿಸಿದನು. ಅದರಲ್ಲಿ ಬಿದ್ದಿದ್ದ ಕಸಕಡ್ಡಿ ಗಳನ್ನು ತನ್ನ ಕೈಗಳಿಂದಲೇ ತೆಗೆದು ಅದನ್ನು ಪರಿಶುಭ್ರಗೊಳಿಸಿದನು. ಅದೇ ಇಂದು ಭರತ ಕೂಪ ಎನ್ನುವ ಹೆಸರಿನಿಂದ ಪ್ರಸಿದ್ಧವಾಗಿದೆ.

# ೧೮ ಪಾದುಕಾ ಪಟ್ಟಾಭಿಷೇಕ

**ಭರತನ ಪ್ರಾರ್ಥನೆ**: ಆರನೆ ದಿನ ಪ್ರಾತಃಕಾಲ ಸ್ನಾನಸಂಧ್ಯಾದಿಗಳನ್ನು ಪೂರೈಸಿ, ಶತ್ರುಘ್ನನೊಂದಿಗೆ, ಪರಿವಾರದೊಂದಿಗೆ ಸಮಾವೇಶಗೊಂಡು ದಂಡಪ್ರಣಾಮ ಮಾಡಿ, ಕೈಗಳನ್ನು ಜೋಡಿಸಿ, ಭರತನು ರಾಮನನ್ನು ಕುರಿತು, "ಹೇ ಇಕ್ಷ್ವಾಕು ಕುಲತಿಲಕಾ! ಎಲ್ಲ ರೀತಿಯಲ್ಲೂ ನನ್ನ ಕೋರಿಕೆಯನ್ನು ನೀವು ನೆರವೇರಿಸಿದಿರಿ. ನನ್ನ ನಿಮಿತ್ತವಾಗಿ ನೀವು ದುಃಖಪಡುತ್ತಿದ್ದೀರಿ, ಕಷ್ಟಗಳನ್ನು ಅನುಭವಿಸುತ್ತಿದ್ದೀರಿ. ಓ ನಾಥಾ! ನಿಮ್ಮ ಆಜ್ಞೆಯನ್ನು ಪಾಲಿಸಿ ಹದಿನಾಲ್ಕು ಸಂವತ್ಸರಗಳವರೆಗೂ ನಿಮ್ಮ

ಆಗಮನವನ್ನು ನಿರೀಕ್ಷಿಸುತ್ತಾ ನಾನು ನಗರದಲ್ಲಿ ನಿಮ್ಮ ಸೇವೆ ಮಾಡುತ್ತಿರುತ್ತೇನೆ. ಅವಧಿ ದಾಟಿದ ಮೇಲೆ ನಿಮ್ಮ ಚರಣಾರವಿಂದಗಳನ್ನು ದರ್ಶನ ಮಾಡುತ್ತೇನೆ. ಈ ಹದಿನಾಲ್ಕು ಸಂವತ್ಸರಗಳವರೆಗೆ ನಾನು ಹೇಗೆ ಧೈರ್ಯದಿಂದ ಇರಬೇಕೊ ನೀವೇ ತಿಳಿಸಿ.

ರಾಮಾ! ನಿಮ್ಮ ಪುರಜನರು, ನಿಮ್ಮ ಕುಟುಂಬ, ನಿಮ್ಮ ಪ್ರಜೆಗಳು ಪವಿತ್ರರು, ಸಜ್ಜನರು. ಬ್ರಾಹ್ಮಣರು, ಪಂಡಿತರು ನಿಮ್ಮಲ್ಲಿ ಬದ್ಧಾನುರಾಗಿಗಳು. ಈ ಸಂಸಾರ, ದುಃಖ ತಾಪಗಳನ್ನು ನಿಮ್ಮ ನಿಮಿತ್ತವಾಗಿ ಸಹಿಸುತ್ತೇನೆ. ಪರಮ ಪದವಾದರೂ ನೀವಿಲ್ಲದೆ ಅದು ನನಗೆ ವ್ಯರ್ಥ. ನಿಮ್ಮ ಸೇವಕರ ಮನೋಭಿಪ್ರಾಯಗಳು, ಭಾವನೆ ಗಳು, ಕೋರಿಕೆಗಳು ನಿಮಗೆ ವಿಶದವೇ. ಉಭಯ ಲೋಕಗಳಲ್ಲೂ ನೀವೇ ನನ್ನನ್ನು ಕಾಪಾಡುವವರು. ಇದೇ ನನಗಿರುವ ಮನೋಧೈರ್ಯ. ಆದ್ದರಿಂದ, ನನಗೆ ಈ ದುಃಖವೆಲ್ಲಾ ತೃಣಪ್ರಾಯವಾಗಿ ಕಾಣುವುದು. ಇದುವರೆಗೂ ದುಃಖವನ್ನು ಸಹಿಸಲಾರದೆ ನನಗೆ ತೋಚಿದಂತೆ ಮಾತಾಡಿದೆ. ನನ್ನ ಎಲ್ಲಾ ಲೋಪಗಳನ್ನು ಕ್ಷಮಿಸಿ, ಕೈಬಿಡದೆ ಕಾಪಾಡಿ," ಎಂದು ಪ್ರಾರ್ಥಿಸಿದನು. ಭರತನು ಮಾಡಿದ ಪ್ರಾರ್ಥನೆಯನ್ನು ಕೇಳಿ ಸಭಿಕರು ಹರ್ಷಿಸಿದರು, ಆನಂದದಿಂದ ಅವನನ್ನು ಕೊಂಡಾಡಿದರು.

**ಶ್ರೀರಾಮನು ಹಿತವಚನಗಳು**: ನೀರಿನಿಂದ ಕ್ಷೀರವನ್ನು ಬೇರ್ಪಡಿಸುವ ಹಂಸ ದಂತೆ ಸತ್ಯವನ್ನು ಅಸತ್ಯದಿಂದ ಪ್ರತ್ಯೇಕಿಸಿ ನಿರ್ಮಲ ಅಂತಃಕರಣದಿಂದ ಭರತ ನಾಡಿದ ಮಾತನ್ನು ದೀನಬಂಧುವಾದ ರಾಮನು ಕೇಳಿ ದೇಶ ಕಾಲ ಸಮಯಾನು ಸಾರವಾಗಿ ಹೀಗೆ ಹೇಳಿದನು. "ತಮ್ಮಾ, ಭರತಾ, ಮನೆಯಲ್ಲಿರುವ ನಿನ್ನ ಯೋಗ ಕ್ಷೇಮವನ್ನೂ ವನದಲ್ಲಿರುವ ನಮ್ಮ ಯೋಗಕ್ಷೇಮವನ್ನೂ ಸಕಲ ಜನರ ಯೋಗ ಕ್ಷೇಮವನ್ನೂ ಕಾಪಾಡುವವರು ಯಾರೋ ಅವರೇ ನಿನ್ನನ್ನು ಕಾಪಾಡುವರು. ಅಲ್ಲದೆ, ಲೋಕರೀತಿಯಾಗಿ ಗುರುಗಳಾದ ವಸಿಷ್ಠರೂ ಜನಕ ಚಕ್ರವರ್ತಿಯೂ ನಿನಗೆ ಆಸರೆಯಾಗಿರುವರು. ಸ್ವಪ್ನದಲ್ಲೂ ಸಹ, ನನಗಾಗಲಿ, ನಿನಗಾಗಲಿ ಕಷ್ಟವೆನ್ನುವುದು ಕಾಣಿಸಲು ಸಾಧ್ಯವಿಲ್ಲ, ಕಾಣಿಸದು. ನಮ್ಮ ತಂದೆಯ ಆಜ್ಞೆಯನ್ನು ಪರಿಪಾಲಿಸು ವುದು ನಮಗೆ ಪರಮ ಪುರುಷಾರ್ಥ, ಸರ್ವಶ್ರೇಯೋದಾಯಕ, ಶಾಶ್ವತ ಕೀರ್ತಿ ಪ್ರದಾಯಕ ಹಾಗೂ ವೇದ ಸಮ್ಮತ. ಯಾರು ಗುರುವಿನ ಆಜ್ಞೆಯನ್ನೂ ತಂದೆ ತಾಯಿಯ ಆಜ್ಞೆಯನ್ನೂ ಮನ್ನಿಸಿ, ಸನ್ಮಾರ್ಗದಲ್ಲಿ ನಡೆಯುವರೋ ಅವರ ಪಾದಗಳು ತಪ್ಪು ಮಾರ್ಗಕ್ಕೆ ಹೋಗವು.

ಈ ಸತ್ಯವನ್ನು ಗುರುತಿಸಿ ದುಃಖವನ್ನು ದೂರಮಾಡಿ ಆನಂದದಿಂದ ನೀತಿ ನಿಜಾಯತಿಗಳಿಂದ ಹದಿನಾಲ್ಕು ಸಂವತ್ಸರಗಳು ರಾಜ್ಯವನ್ನು ನಡೆಸು. ರಾಜನಾದ ವನು ಮುಖದಂತಿರಬೇಕು. ಅನ್ನಪಾನಾದಿಗಳನ್ನು ಮಾಡುವುದು ಮುಖ. ಅದು ಸಕಲ ಅಂಗಗಳನ್ನೂ ಯಥಾವಿಧಿಯಾಗಿ ಪುಷ್ಟಿಗೊಳಿಸುವುದು. ಹಾಗೆಯೇ ರಾಜರ ಮೂಲಕ ರಾಜ್ಯಾಂಗಗಳಿಗೆ ಪುಷ್ಟಿ ಬರುವುದು. ಸಕಲ ಮನೋರಥಗಳೂ ಮನಸ್ಸಿ ನಲ್ಲಿ ನೆಲೆಸಿರುವಂತೆ, ಸಕಲ ರಾಜಧರ್ಮಗಳೂ ರಾಜನೀತಿಗಳೂ ರಾಜರಲ್ಲಿ ನೆಲೆಸಿರುತ್ತವೆ," ಎಂದು ರಾಮನು ಅನೇಕ ವಿಧವಾಗಿ ಭರತನಿಗೆ ಬೋಧಿಸಿದನು. ಆದರೆ ಮನಸ್ಸನ್ನು ಗಟ್ಟಿ ಮಾಡಲು ಆಧಾರವಿಲ್ಲದ ಅವನಿಗೆ ಶಾಂತಿಯಿಲ್ಲವಾಯಿತು. ರಾಮನ ಮೇಲಿನ ಪ್ರೇಮಕ್ಕೆ ವಶರಾಗಿ, ಮಂತ್ರಿಗಳೂ ಗುರುಗಳೂ ತಾಯಿಯರೂ ಪಂಡಿತರೂ ಏಕಾಭಿಪ್ರಾಯವುಳ್ಳವರಾಗಿ ಸುಮ್ಮನಿದ್ದರು. ಆಗ ರಾಮಪ್ರಭುವು ಕೃಪೆದೋರಿ ತನ್ನ ಪಾದುಕೆಗಳನ್ನು ತೆಗೆದು ಭರತನಿಗಿತ್ತನು.

**ಪವಿತ್ರ ಪಾದುಕೆಗಳು**: ಭರತನು ಆದರ ಪೂರ್ವಕವಾಗಿ ಪಾದುಕೆಗಳನ್ನು ತನ್ನ ಹಸ್ತದಲ್ಲೆತ್ತಿಕೊಂಡು ಶಿರಸ್ಸಿನ ಮೇಲೆ ಧರಿಸಿದನು. ಎರಡೂ ಕಣ್ಣುಗಳಲ್ಲೂ ಗಂಗಾ ಯಮುನೆಯಂತೆ ಆನಂದಜಲ ಧಾರಾಕಾರವಾಗಿ ಸುರಿಯತೊಡಗಿತು. "ಇವು ಕರುಣಾ ಸಮುದ್ರನು ಧರಿಸಿದ ಪಾದುಕೆಗಳಷ್ಟೇ ಅಲ್ಲ, ಸಕಲ ಜನರ ಪ್ರಾಣ ರಕ್ಷಿಸುವ ರಕ್ಷೆಗಳು, ಭರತನ ಸ್ನೇಹರತ್ನವನ್ನು ಕಾಪಾಡುವ ಸಂಪುಟ, ರಘುಕುಲವನ್ನು ರಕ್ಷಿಸುವ ಎರಡು ಕವಾಟಗಳು, ಸತ್ಕರ್ಮಗಳನ್ನು ಮಾಡುವ ಎರಡು ಹಸ್ತಗಳು, ಲೋಕ ನೇತ್ರಗಳು. ಈ ಎರಡು ಪಾದುಕೆಗಳು ನಮ್ಮ ಜೊತೆ ಬರುವ ಸೀತಾರಾಮರ ಸಂಕೇತಗಳು," ಎಂದು ಘೋಷಣೆ ಮಾಡುತ್ತಿದ್ದ ಭರತನ ಆನಂದವನ್ನು ವರ್ಣಿ ಸಲು ಯಾರಿಂದ ಸಾಧ್ಯ! ಎಲ್ಲರೂ ಒಮ್ಮೆ ರಾಮ ಪಾದುಕೆಗಳಿಗೆ ನಮಸ್ಕರಿಸಿ ರಾಮನ ಅನುಗ್ರಹವನ್ನು ಕೊಂಡಾಡಿದರು. ರಾಮನಿಗೆ ನಮಸ್ಕರಿಸಿ, ಪ್ರಯಾಣ ಕ್ಕೆ ಅನುಮತಿ ಕೊಡಬೇಕೆಂದು ಪ್ರಾರ್ಥಿಸಿದರು. ರಾಮನು ಭರತನ ಸಂತೋಷ ಸಂತೃಪ್ತಿಗೆ ಮೆಚ್ಚಿ ಪ್ರೇಮದಿಂದ ಗಟ್ಟಿಯಾಗಿ ಅವನನ್ನು ಆಲಂಗಿಸಿಕೊಂಡು, ತಲೆ ಸವರಿ, 'ವಿಜಯೀಭವ,' ಎಂದು ಆಶೀರ್ವದಿಸಿದನು. ಶತ್ರುಘ್ನನು ರಾಮನಿಗೆ ನಮಸ್ಕರಿಸಿದನು. ರಾಮನು ಅವನನ್ನು ಅಪ್ಪಿಕೊಂಡು ಅವನಿಗೆ ಹೇಳಬೇಕಾದ ಧರ್ಮಸೂತ್ರಗಳನ್ನು ಹೇಳಿ, ಭರತನನ್ನೇ ರಾಮನೆಂದು ಭಾವಿಸಿ ಜೊತೆಯಲ್ಲಿದ್ದು ರಾಜಕಲ್ಯಾಣವನ್ನು ತಕ್ಕ ರೀತಿಯಲ್ಲಿ ಮಾಡಬೇಕೆಂದು ಹೇಳಿದನು. ಭರತ ಶತ್ರು ಘ್ನರು ಲಕ್ಷ್ಮಣನನ್ನು ಅಪ್ಪಿಕೊಂಡು, "ನಿನ್ನ ಭಾಗ್ಯವೇ ಭಾಗ್ಯ. ನಿನ್ನಂಥ ಅದೃಷ್ಟ ವಂತರು ಲೋಕದಲ್ಲೇ ಇಲ್ಲ," ಎಂದು ಕೊಂಡಾಡಿ, ಹೊರಡಲು ಅಪ್ಪಣೆ ಬೇಡಿದರು.

ಲಕ್ಷ್ಮಣನು ಭರತ ಶತ್ರುಘ್ನರನ್ನು ಕುರಿತು, "ರಾಮಚಂದ್ರನ ಪಾದುಕೆಗಳು ಸಕಲ ಮಂಗಳಕ್ಕೂ ಮೂಲವಾದವುಗಳು. ಅವುಗಳನ್ನು ಪಡೆದ ನಿಮಗಿಂತ ಧನ್ಯರು ಬೇರೊಬ್ಬರಿಲ್ಲ. ಅಂಥ ಭಾಗ್ಯವನ್ನು ಭದ್ರವಾಗಿ ಕಾಪಾಡಿಕೊಳ್ಳುವುದೇ ನಿಮ್ಮ ಕರ್ತವ್ಯ," ಎಂದು ಎಚ್ಚರಿಸಿದನು. ಭರತ ಶತ್ರುಘ್ನರು ಸೀತಾದೇವಿಯ ಸಮೀಪಕ್ಕೆ ಹೋಗಿ, ಅವಳ ಪಾದಗಳ ಮೇಲೆ ಬಿದ್ದು, ದುಃಖವನ್ನು ತಡೆಯಲಾರದೆ ಗೊಳ್ಳೆಂದು ಅತ್ತರು. ಸೀತಾದೇವಿಯು ಅವರನ್ನು ಅನೇಕ ವಿಧವಾಗಿ ಸಮಾಧಾನಪಡಿಸಿ, "ರಾಮರಕ್ಷೆಗಿಂತ ಬೇರೊಂದಿದೆಯೆ ಲೋಕದಲ್ಲಿ? ಅಪ್ಪಾ! ನೀವು ಧನ್ಯರು. ಈ ಹದಿನಾಲ್ಕು ವರ್ಷಗಳು ನಿಮಿಷಗಳಂತೆ ಅತಿ ಶೀಘ್ರವಾಗಿ ಕಳೆದುಹೋಗಿ, ರಾಮಾಗಮನದಿಂದ ರಾಜ್ಯವು ಕಲಕಲ ಕಿಲಕಿಲ ಆಡುವುದು. ತಾಳ್ಮೆಯಿಂದಿದ್ದು, ರಾಮನ ಆಜ್ಞೆಯ ಗೆರೆ ದಾಟದೆ ನಿಮ್ಮ ಅಭೀಷ್ಟವನ್ನು ನೆರವೇರಿಸಿಕೊಂಡು ಆನಂದಿಸಿರಿ," ಎಂದು ಆಶೀರ್ವದಿಸಿದಳು.

**ಜನಕ ಮಹಾರಾಜ**: ಅಲ್ಲಿಂದ, ಅವರು ನೇರವಾಗಿ ಜನಕಮಹಾರಾಜನ ಬಳಿಗೆ ಬಂದು ಅವನ ಪಾದಗಳಿಗೆ ನಮಸ್ಕರಿಸಿದರು. ಭರತನು, "ಓ ರಾಜಾ! ನಮ್ಮ ಮೇಲೆ ನಿಮಗಿರುವ ದಯಾ ಪ್ರೇಮಾನುಗ್ರಹಗಳಿಂದಾಗಿ, ನೀವು ನಮ್ಮ ತಂದೆಯ ಮರಣ ವಾರ್ತೆಯನ್ನು ಕೇಳಿ, ರಾಮನ ವನವಾಸ ವಾರ್ತೆಯನ್ನು ಕೇಳಿ ಅಯೋಧ್ಯೆಗೆ ಬಂದಿರಿ. ನಮ್ಮ ಪರಿಸ್ಥಿತಿಯನ್ನು ಕೇಳಿ, ನಮ್ಮ ಪರಿಸ್ಥಿಯನ್ನು ಸ್ವತಃ ಗುರುತಿಸಿ, ನಮ್ಮನ್ನು ಅನೇಕ ವಿಧವಾಗಿ ಸಮಾಧಾನಪಡಿಸಿ, ಧೈರ್ಯದಿಂದಲೂ ಅನೇಕ ಸಲಹೆಗಳನ್ನಿತ್ತಿರಿ. ನಮ್ಮ ಅಭೀಷ್ಟದಂತೆ ಇಷ್ಟೊಂದು ಶ್ರಮವಹಿಸಿ ನಮ್ಮೊಂದಿಗೆ ಅರಣ್ಯಕ್ಕೆ ಕೂಡ ದಯಮಾಡಿಸಿದಿರಿ. ರಾಮನಿಗೆ ಬಿನ್ನವಿಸಬೇಕಾದ ವಿಷಯಗಳ ಬಗ್ಗೆ ನಮಗೆ ಎಷ್ಟೋ ತಿಳಿವಳಿಕೆ ಕೊಟ್ಟು, ನಮ್ಮ ದುಃಖ ಪರಿಹಾರಕ್ಕೆ ಕಾರಣರಾಗಿ ನಮ್ಮನ್ನು ರಾಮಾನುಗ್ರಹ ಹೊಂದುವ ವ್ಯಕ್ತಿಗಳನ್ನಾಗಿ ಮಾಡಿದಿರಿ. ನಿಮಗೆ ಅನೇಕ ಧನ್ಯವಾದಗಳನ್ನರ್ಪಿಸುತ್ತಿದ್ದೇವೆ. ಇದಕ್ಕಿಂತ ಬೇರೇನು ನಾವು ಮಾಡಬಲ್ಲೆವು. ನಿಮ್ಮ ಆಶೀರ್ವಾದ ಬಲವೇ ನಮಗೆ ಈ ದಿನ ಇಷ್ಟು ತೃಪ್ತಿ ನೀಡಿದೆ," ಎಂದನು. ಜನಕನು ಆ ಯುವಕರ ಪ್ರೇಮವಾಕ್ಯಗಳನ್ನು ಹೃದಯಪೂರ್ವಕ ಸ್ವೀಕರಿಸಿ, ಅವರ ಗುಣಗಳನ್ನು ಬಹುವಾಗಿ ಮೆಚ್ಚಿಕೊಂಡು, ಶಿರಸ್ಸನ್ನು ಮುದ್ದಾಡಿ, "ಮಕ್ಕಳೇ! ರಾಮಚಂದ್ರನ ಆಜ್ಞಾನುಸಾರ ಜೀವಿಸಿ ಅವನ ಅನುಗ್ರಹಕ್ಕೆ ಪಾತ್ರರಾಗಿರಿ. ನಾನಿಲ್ಲಿಂದಲೇ ಮಿಥಿಲೆಗೆ ಹೋಗುತ್ತೇನೆ," ಎಂದು, ಅವರ ಅಪ್ಪಣೆ ಪಡೆದು ತನ್ನ ಸತಿಯೊಂದಿಗೆ, ಪರಿವಾರದೊಂದಿಗೆ ಹೊರಡಲು ಸಿದ್ಧನಾದನು.

**ಅಪ್ಪಣೆ ಪಡೆದರು**: ಮಂತ್ರಿಗಳು, ಸಾಮಂತರು, ಪ್ರಜೆಗಳು, ಬ್ರಾಹ್ಮಣರು, ಋಷಿಗಳು, ಒಬ್ಬರಾದಮೇಲೊಬ್ಬರು ಸೀತಾ ರಾಮ ಲಕ್ಷ್ಮಣರಿಂದ ಅಪ್ಪಣೆ ಪಡೆದು,

ಭಾರವಾದ ಹೃದಯದಿಂದ ಬಿಡಲಾರದೆ ಬಿಟ್ಟು, ಅಯೋಧ್ಯೆಗೆ ಹೊರಡಲು ಅಣಿಯಾದರು. ಸೀತಾರಾಮರು ತಾಯಿಯರಾದ ಕೌಸಲ್ಯೆ, ಸುಮಿತ್ರೆ, ಕೈಕೆಯರ ಬಳಿ ಹೋಗಿ ಅವರಿಗೆ ನಮಸ್ಕರಿಸಿ, "ನಮ್ಮ ವಿಷಯವಾಗಿ ಏನೂ ಚಿಂತಿಸದೆ, ನಿಮ್ಮ ನಿಮ್ಮ ಕರ್ತವ್ಯಗಳನ್ನು ನೀವು ಸಕ್ರಮವಾಗಿ ಮಾಡುತ್ತಾ ತಂದೆ ದಶರಥನ ಅಭೀಷ್ಟವನ್ನನುಸರಿಸಿ ಧನ್ಯರಾಗಿರಿ," ಎಂದು ಪ್ರಾರ್ಥಿಸಿದರು. "ನಾವು ಯಾವ ತೊಂದರೆಗೂ ಗುರಿಯಾಗದೆ ಆನಂದವಾಗಿ ಹದಿನಾಲ್ಕು ಸಂವತ್ಸರಗಳನ್ನು ಹದಿನಾಲ್ಕು ಕ್ಷಣಗಳಂತೆ ಕಳೆದು ಬಂದು ಅಯೋಧ್ಯೆಯನ್ನು ಸೇರಿಕೊಳುತ್ತೇವೆ. ತಂದೆ ಯಾಜ್ಞೆಯನ್ನು ನೆರವೇರಿಸುವುದೇ ಪುತ್ರನ ಪರಮ ಧ್ಯೇಯ. ಆ ನಿಮಿತ್ತವಾಗಿ ನಾವು ಈ ಪವಿತ್ರ ವನದಲ್ಲಿ ಆನಂದವಾಗಿ ಕಾಲ ಕಳೆಯುತ್ತೇವೆ," ಎಂದು ತಾಯಿಯರಿಗೆ ಧೈರ್ಯ ಹೇಳಿದರು.

ಕೈಕೆಗೆ ನಮಸ್ಕರಿಸಿ, ತಾವು ಅರಣ್ಯವಾಸ ಮಾಡಲು ಆಕೆ ಎಷ್ಟು ಮಾತ್ರಕ್ಕೂ ಕಾರಣಳಲ್ಲವೆಂದೂ ಆಕೆ ತಮಗೆ ಸದಾ ಪೂಜನೀಯಳೇ ವಿನಾ ಕೇಡು ಬಗೆದವಳಲ್ಲವೆಂದೂ ಆಕೆಯ ಉಪಕಾರವನ್ನು ಮರೆಯುವುದಿಲ್ಲವೆಂದೂ ಹೇಳಿದರು. ತಮ್ಮ ಬಗ್ಗೆ ಚಿಂತಿಸದೆ, ಭರತನಿಗೆ ಬೆಂಬಲವಾಗಿದ್ದು, ಧೈರ್ಯ ಹೇಳುತ್ತಾ ಅವನನ್ನು ಚೆನ್ನಾಗಿ ಕಾಪಾಡಿಕೊಳ್ಳಬೇಕೆಂದರು. "ಬಿಸಿ ರಕ್ತದ ಉದ್ರೇಕದಲ್ಲಿ ತಂದೆಯ ಮರಣವನ್ನೂ ನನ್ನ ವಿಯೋಗವನ್ನೂ ಸಹಿಸಲಾರದೆ ತಾಯಿಯಾದ ನಿಮ್ಮನ್ನು ಅನೇಕ ವಿಧವಾಗಿ ನಿಂದಿಸಿದ್ದು ಭರತನ ತಪ್ಪೆಂದು ಭಾವಿಸದೆ, ಪಡಲಾರದ ಹಿಂಸೆ ಕಲ್ಪಿಸಿದ ನನ್ನನ್ನು, ಅವನನ್ನು ಕ್ಷಮಿಸಬೇಕು," ಎಂದು ಕೈಕೆಯನ್ನು ಬೇಡಿಕೊಂಡರು. ಇಂಥ ಪವಿತ್ರವಾದ ಮಾತುಗಳನ್ನಾಡುತ್ತಿದ್ದ ರಾಮನ ಮುಖವನ್ನು ಕೈಕೆಯು ನಾಚಿಕೆಯಿಂದ ನೋಡಲಾರದೆ ಹೋದಳು.

ಇಂಥ ವಿಶಾಲಭಾವದ ಪವಿತ್ರ ಹೃದಯದ ಬಂಗಾರದಂಥ ನನ್ನ ರಾಮನನ್ನು ನಾನು ಎಷ್ಟು ಹಿಂಸಿಸಿದೆನಲ್ಲಾ, ಈ ಭಯಂಕರ ಅರಣ್ಯದಲ್ಲಿ ಅವರು ವಾಸ ಮಾಡುವಂತೆ ನಾನು ಮಾಡಿದೆನೋ, ಇಲ್ಲವೆ ರಾಮ ಸಂಕಲ್ಪವೇ ನನ್ನಿಂದ ಆ ರೀತಿ ಮಾಡಿಸಿತೋ! ಏನಾದರೇನಂತೆ, ನಾನು ಮಹಾ ಪಾಪಿ, ಎಂದು ತನ್ನನೇ ತಾನು ನಿಂದಿಸಿಕೊಂಡು ಸೀತೆಯನ್ನು ಹತ್ತಿರ ಕರೆದು, ಆ ದಿನ ತಾನು ಮಾಡಿದ ತಪ್ಪನ್ನು ಕ್ಷಮಿಸೆಂದು ಕೋರಿದಳು. ಅವಳ ಎರಡು ಹಸ್ತಗಳನ್ನೂ ಗಟ್ಟಿಯಾಗಿ ಹಿಡಿದುಕೊಂಡು, "ನನ್ನನ್ನು ನೀನು ಕ್ಷಮಿಸುವುದು ನ್ಯಾಯವಲ್ಲ," ಎಂದು ಬಹುವಾಗಿ ದುಃಖಿಸಿದಳು. ತನ್ನ ತಪ್ಪನ್ನು ತಾನೇ ಹೃದಯ ಪೂರ್ವಕವಾಗಿ ತಿಳಿದು ಬಾಧೆ ಪಟ್ಟಳು. ಹೀಗೆ, ಎಲ್ಲರೂ ಅವರವರ ಸ್ಥಾನ ಅನುಸರಿಸಿ, ತಕ್ಕಂತೆ ಸೀತಾರಾಮರಿಂದ ಅಪ್ಪಣೆ ಪಡೆದು, ಅವರವರ ರಥದಲ್ಲಿ ಕುಳಿತರು. ಸೀತಾರಾಮ

ಲಕ್ಷ್ಮಣರು ಪ್ರತಿಯೊಂದು ರಥದ ಬಳಿಗೂ ಹೋಗಿ, ಎಲ್ಲರನ್ನೂ ಮತ್ತೊಮ್ಮೆ ಮಾತನಾಡಿಸಿ, ಧೈರ್ಯ ಹೇಳಿ, ಒಂದೊಂದೇ ರಥವನ್ನು ಹೊರಡಿಸುತ್ತಾ ಬಂದರು.

**ವಸಿಷ್ಠರು**: ಗುರುಗಳಾದ ವಸಿಷ್ಠರ ಪಾದಗಳಿಗೆ ನಮಸ್ಕರಿಸಿ, ನಿಮಗೂ ನಿಮ್ಮ ಧರ್ಮಪತ್ನಿಗೂ ನಮ್ಮಿಂದಾಗಿ ತುಂಬಾ ಶ್ರಮವಾಯಿತು. ಈ ಅಡವಿಯಲ್ಲಿ ನಿಮ್ಮ ಸೇವೆಯನ್ನು ಮಾಡಬೇಕಾದ ರೀತಿಯಲ್ಲಿ ಮಾಡಲಾಗದ್ದಕ್ಕೆ ಕ್ಷಮಿಸಬೇಕೆಂದೂ, ತಾವಿನ್ನು ನಿಲ್ಲಲು ಅಪ್ಪಣೆ ಕೊಡಬೇಕೆಂದೂ ಪ್ರಾರ್ಥಿಸಿದರು. ಬ್ರಹ್ಮರ್ಷಿಯೂ ಜ್ಞಾನಿಯೂ ಆದ ವಸಿಷ್ಠರಿಗೆ ಕೂಡ ಅವರ ಭಕ್ತಿ ಶ್ರದ್ಧೆಗಳನ್ನೂ ಧರ್ಮಮಾರ್ಗವನ್ನೂ ವರ್ಣಿಸಲು ಸಾಧ್ಯವಾಗದೆ ಹೋಯಿತು. ಅವರನ್ನು ಬಿಟ್ಟು ಮುಂದೆ ಹೋಗಲಾಗಲಿಲ್ಲ. ಅರುಂಧತಿ ವಸಿಷ್ಠರಿಗೆ, ಸೀತಾರಾಮಲಕ್ಷ್ಮಣರು ಮೂವರೂ ಒಂದು ಕಡೆ ನಿಂತು ಹಸ್ತಗಳನ್ನು ಜೋಡಿಸಿ ಕದಲುತ್ತಿದ್ದ ರಥಗಳಲ್ಲಿದ್ದವರಿಗೆ ನಮಸ್ಕರಿಸುತ್ತಿದ್ದ ದೃಶ್ಯವು ಎಂಥ ಕಲ್ಲನ್ನಾದರೂ ಕರಗಿಸುವಂತೆ ತೋರಿತು.

**ಜನಕ ಮಹಾರಾಜನ ಬೋಧೆ**: ನಂತರ ರಾಮನು ನಿಷಾದಾಧಿಪತಿಯನ್ನೂ ಅವನ ಪರಿವಾರವನ್ನೂ ನೋಡಿ ಆತನನ್ನು ಸೋದರನಿಗಿಂತ ಹೆಚ್ಚಿನ ಪ್ರೇಮದಿಂದ ಆಲಂಗಿಸಿಕೊಂಡು, ಅನೇಕ ವಿಧವಾಗಿ ಅವನಿಗೆ ಸಮಾಧಾನ ಹೇಳಿದನು. ಗುಹನು ವಿಧಿಯಿಲ್ಲದೆ ಹೃದಯವನ್ನು ಗಟ್ಟಿಮಾಡಿಕೊಂಡು ರಾಮ ಪಾದಗಳಿಗೆ ನಮಸ್ಕರಿಸಿ ಹೊರಟನು. ಹಿಂದಕ್ಕೆ ತಿರುತಿರುಗಿ ನೋಡುತ್ತಾ ಮುಂದೆ ನಡೆದನು. ಅವರೆಲ್ಲರೂ ಹೊರಡುವವರೆಗೂ ಸೀತಾರಾಮಲಕ್ಷ್ಮಣರು ಒಂದು ಮರದ ನೆರಳಿನಲ್ಲಿ ನಿಂತಿದ್ದರು. ಜನಕ ಮಹಾರಾಜನೂ ಸಹ ತನ್ನ ಪರಿವಾರದೊಂದಿಗೆ ಹೊರಟನು. ರಾಮಲಕ್ಷ್ಮಣರು ಅತ್ತೆಮಾವಂದಿರಿಗೆ ನಮಸ್ಕರಿಸಿದ ಮೇಲೆ, ಸೀತೆಯು ನಮಸ್ಕರಿಸಿದಳು. ತಂದೆತಾಯಿಗಳು ಅವಳನ್ನು ಅಪ್ಪಿಕೊಂಡು, ಶಿರಸ್ಸನ್ನು ಮುದ್ದಾಡಿ, "ಅಮ್ಮಾ ನಿನ್ನ ಸಹನೆ, ನಿನ್ನ ಪತಿಭಕ್ತಿ ನಮಗೆ ಕೀರ್ತಿ ತಂದಿವೆ. ನಿನ್ನಿಂದ ನಮ್ಮ ವಂಶ ಪಾವನವಾಯಿತು. ನಿನ್ನಂಥ ಪುತ್ರಿಯನ್ನು ಪಡೆಯಲು ನಾವು ಯಾವ ಜನ್ಮದಲ್ಲಿ ಏನು ಮಹಾ ಪುಣ್ಯಕಾರ್ಯ ಮಾಡಿದ್ದೆವೋ, ಅದರ ಫಲವಾಗಿಯೇ ಇಂದು ಇಂಥ ಕೀರ್ತಿ ಪಡೆದಿದ್ದೇವೆ," ಎಂದು ಅವಳನ್ನು ಅನೇಕ ಬಗೆಯಾಗಿ ವರ್ಣಿಸಿದರು. "ರಾಮಚಂದ್ರನು ನಿನಗೆ ಪ್ರಾಣ. ಅವನ ನೆರಳಿನಂತಿರುವ ನಿನಗೆ ಯಾವ ಕೊರತೆಯೂ ಬಾರದೆನ್ನುವುದು ನಮಗೆ ಗೊತ್ತು. ಆದರೂ ಉಪಾಧಿ ಭೇದದಿಂದ ಇಂಥ ಸಮಸ್ಯೆಗಳು ಆಗಾಗ ಬರುವುದು ದೈವಲೀಲೆ," ಎಂದು ಅನೇಕ ವಿಧವಾಗಿ ವೇದಾಂತವನ್ನು ಬೋಧಿಸಿ, ಅವರೂ ಅವರ ಪರಿವಾರದವರೂ ಅಲ್ಲಿಂದ ಹೊರಟರು.

**ಚಿತ್ರಕೂಟದಲ್ಲಿ**: ಎರಡು ರಾಜ್ಯಗಳ ಪರಿವಾರವೂ ಹೊರಟು ಸ್ವಲ್ಪ ದೂರ ಹೋಗುವವರೆಗೂ ಸೀತಾರಾಮಲಕ್ಷ್ಮಣರು ಮರದ ನೆರಳಿನಲ್ಲಿ ನೋಡುತ್ತಾ ನಿಂತಿದ್ದು, ನಂತರ ಪರ್ಣಶಾಲೆಗೆ ಹಿಂತಿರುಗಿದರು. ಭರತ ಶತ್ರುಘ್ನರ ಭಕ್ತಿ ಶ್ರದ್ಧೆಗಳನ್ನೂ ಅವರ ಪ್ರೇಮ ಆದರ್ಶಗಳನ್ನೂ ಪ್ರಜೆಗಳ ಅಭಿಮಾನವನ್ನು ಕುರಿತು ಹಲವು ಬಗೆಯಾಗಿ ರಾಮನು ವರ್ಣಿಸಿದ್ದನ್ನು ಸೀತಾಲಕ್ಷ್ಮಣರು ಕೇಳಿದರು. ಇಬ್ಬರೂ ತಮ್ಮ ಸ್ಥಿತಿಗೆ ಚಿಂತಿಸುತ್ತಾ ಮಧ್ಯೆ ದಶರಥನನ್ನು ಜ್ಞಾಪಿಸಿಕೊಂಡು ತಮ್ಮ ಕೃತಜ್ಞತಾರೂಪವಾದ ಪ್ರೇಮವನ್ನು ಸೂಚಿಸುತ್ತಾ ಕಣ್ಣೀರು ಹಾಕುತ್ತಿದ್ದರು. ಅದನ್ನು ನೋಡಿ ರಾಮನು ಮುಗುಳ್ನಗುತ್ತಾ, ಅವರಿಗೆ ಜೀವನ ರಹಸ್ಯವನ್ನು ಬೋಧಿಸಿ, ಶಾಂತಪಡಿಸಿದನು. ಹೀಗೆ ಅವರು ಆ ದಿನ ಕಾಲ ಕಳೆದರು.

**ತಿರುಗಿ ಪ್ರಯಾಣ**: ಇತ್ತ, ಮುನಿಗಳು, ಬ್ರಾಹ್ಮಣರು, ಋಷಿಗಳು, ಭರತ ಶತ್ರುಘ್ನರು, ಕೌಸಲ್ಯಾ ಸುಮಿತ್ರೆ ಕೈಕೆಯಾದಿ ರಾಣಿಯರು, ಮಂತ್ರಿಗಳು, ಪ್ರಜೆಗಳು ರಾಮನ ವಿಯೋಗವನ್ನು ಸಹಿಸಲಾರದೆ ಚಿಂತಾಕ್ರಾಂತಾರಾಗಿ, ಅಯೋಧ್ಯೆಯತ್ತ ಪ್ರಯಾಣ ಮಾಡುತ್ತಿದ್ದರು. ಆ ಐದು ದಿನಗಳಲ್ಲಿ ರಾಮಲಕ್ಷ್ಮಣಸೀತಾದಿ ತ್ರಿಮೂರ್ತಿಗಳು ತೋರಿಸಿದ ಆದರ್ಶವನ್ನು, ಅವರ ಪ್ರೇಮ, ಕರುಣೆ, ದಯಾರಸವನ್ನು, ಅವರ ವಾಗಾಮೃತವನ್ನು ನೆನೆಯುತ್ತಾ ಆಹಾರ ನಿದ್ರೆಗಳನ್ನು ಮರೆತು, ರಾತ್ರಿ ಹಗಲೆಂದು ನೋಡದೆ, ಮಾರ್ಗದಲ್ಲೆಲ್ಲೂ ನಿಲ್ಲದೆ ಪ್ರಯಾಣ ಮಾಡಿ, ಎರಡನೆಯ ದಿನ ಗಂಗಾನದಿಯನ್ನು ದಾಟಿದರು. ಅಲ್ಲಿ ನಿಷಾದಾಧಿಪತಿಯು ಆ ಪರಿವಾರಕ್ಕೆ ಭೋಜನಾದಿಗಳ ಏರ್ಪಾಟು ಮಾಡಿದನು. ಆದರೆ, ರಾಮ ಲಕ್ಷ್ಮಣ ಸೀತಾ ವಿಯೋಗದಿಂದ ದುಃಖಿಸುತ್ತಿದ್ದ ಅವರು ಯಾರೂ ಏನನ್ನೂ ತಿನ್ನಲಿಲ್ಲ. ಗುಹನ ತೃಪ್ತಿಗಾಗಿ ತಿಂದಂತೆ ಮಾಡುತ್ತಿದ್ದರು.

**ಅಯೋಧ್ಯಾವಾಸಿಗಳ ಕಾತುರ**: ಕುದುರೆಗಳು ಸಹಿತ ಮೇಯಲಿಲ್ಲ. ಇದನ್ನು ನೋಡಿದ ವಸಿಷ್ಠರು, ಶ್ರೀರಾಮನು ಸರ್ವಭೂತಾಂತರಾತ್ಮನು, ಅವನೇ ಸರ್ವಭೂತಗಳಲ್ಲೂ ಪ್ರಜ್ಞಾನಸ್ವರೂಪನಾಗಿ ಚೈತನ್ಯ ನೀಡುತ್ತಿರುವನು, ಎಂದು ಅವರೆಲ್ಲರಿಗೂ ಬೋಧಿಸಿ ಸಮಾಧಾನ ಹೇಳಿದರು. ತಿರುಗಿ ಎಲ್ಲೂ ನಿಲ್ಲದೆ, ರಾಮಚಂದ್ರನ ಪವಿತ್ರ ಪಾದುಕೆಗಳನ್ನು ಪ್ರಜೆಗಳಿಗೆ ದರ್ಶನ ಮಾಡಿಸಿ ಧನ್ಯರಾಗಿಸಬೇಕೆನ್ನುವ ಇಚ್ಛೆಯಿಂದ ಅವರು ಪ್ರಯಾಣ ಮುಂದುವರಿಸಿದರು. ಮಾರನೆ ದಿನ, ಸರಯೂ ನದಿಯನ್ನೂ ಗೋಮತಿಯನ್ನೂ ದಾಟಿ ನಾಲ್ಕನೆ ದಿನ ಅಯೋಧ್ಯಾ ನಗರವನ್ನು ಸಮೀಪಿಸಿದರು.

ಭರತ ಶತ್ರುಘ್ನರು ರಾಮ ಲಕ್ಷ್ಮಣ ಸೀತಾದೇವಿ ಸಹಿತವಾಗಿ ಯಾವಾಗ ಅಯೋಧ್ಯೆಯನ್ನು ಪ್ರವೇಶಿಸುವರೋ ಎಂದು ನಿದ್ರೆ ಬಿಟ್ಟು ಕಣ್ಣುಗಳೂದುವಂತೆ ಕಾದಿದ್ದ ವೃದ್ಧ ಬ್ರಾಹ್ಮಣರು, ಸ್ತ್ರೀಯರು ಮತ್ತು ಮಕ್ಕಳು ರಥದ ಶಬ್ದ ಕೇಳಿದೊಡನೆ ಬೀದಿಗಳಲ್ಲಿ ಪ್ರವೇಶಿಸಿ, "ರಾಮಚಂದ್ರ ಪ್ರಭುವೆಲ್ಲಿ? ಸೀತೆ ಎಲ್ಲಿ?" ಎಂದು ಆತುರಾತುರದಿಂದ ಎಲ್ಲ ರಥಗಳನ್ನೂ ನೋಡುತ್ತಾ ಬಂದರು. ಕತ್ತಲಾಗುತ್ತಾ ಬಂದಿದ್ದುರಿಂದ ಕಾಣಿಸದೆ ಅವರು ಬೆಳಗ್ಗೆ ಬರಬಹುದೆನ್ನುವ ಆಶೆಯಿಂದ, ಬೆಟ್ಟದಂಥ ಪ್ರೇಮದಿಂದ, ರಾತ್ರಿಯೆಲ್ಲಾ ನಿರೀಕ್ಷಿಸುತ್ತಿದ್ದರು. ಬೆಳಗಾಗುತ್ತಲೇ ಸೀತಾ ರಾಮಲಕ್ಷ್ಮಣರು ಬರಲಿಲ್ಲವೆಂದೂ ಅವರ ಪಾದುಕೆ ಮಾತ್ರವೇ ಅಯೋಧ್ಯೆಯನ್ನು ತಲುಪಿವೆಯೆಂದೂ ಕೇಳಿ, ಅವರಿಗೆ ಸ್ವಲ್ಪ ನಿರಾಶೆಯೂ, ಸ್ವಲ್ಪ ಸಂತೋಷವೂ ಆಯಿತು. ಭರತನು ಅಯೋಧ್ಯೆಗೆ ಬಂದವನೆ, ಗುರುಗಳನ್ನೂ, ಮಂತ್ರಿಗಳನ್ನೂ ಬರಮಾಡಿಕೊಂಡು ರಾಜ್ಯ ಸೂತ್ರಗಳನ್ನೊಪ್ಪಿಸಿ ಅವರಿಗೆ ತಕ್ಕ ತಿಳಿವಳಿಕೆ ಇತ್ತು, ಶತ್ರುಘ್ನನನ್ನು ಕರೆದು ತಾಯಿಯರ ಸಂರಕ್ಷಣಾರ್ಥವಾಗಿ ತಕ್ಕ ಏರ್ಪಾಟು ಮಾಡಬೇಕೆಂದು ಅವನಿಗೆ ತಿಳಿಸಿದನು. ಬ್ರಾಹ್ಮಣರಿಗೂ ಪಂಡಿತರಿಗೂ ಕೈ ಜೋಡಿಸಿ ನಮಸ್ಕರಿಸಿ, "ನಿಮ್ಮ ಆಜ್ಞೆಯ ಪ್ರಕಾರ ನಾನು ನಡೆದುಕೊಳ್ಳುತ್ತೇನೆ. ಸಣ್ಣದಿರಲಿ ದೊಡ್ಡದಿರಲಿ, ಸಂಶಯ ಪಡದೆ ನಿಮ್ಮ ಕೋರಿಕೆಗಳನ್ನು ತಿಳಿಸಿ, ಅವುಗಳನ್ನು ನಾನು ನೆರವೇರಿಸುತ್ತೇನೆ," ಎಂದು ಹೇಳಿದನು.

**ಪಾದುಕಾ ಪಟ್ಟಾಭಿಷೇಕ**: ಪ್ರಜೆಗಳಿಗೆ ಸೂಕ್ತವಾದುದನ್ನು ಹೇಳಿ, ರಾಮನ ಸಂಭಾಷಣೆಯ ಸಾರಾಂಶವನ್ನು ತಿಳಿಸಿದನು. "ಹದಿನಾಲ್ಕು ಸಂವತ್ಸರಗಳು ರಾಮ ಪಾದುಕೆಗಳೇ ನಮಗೆ ರಕ್ಷೆಯೆಂದು ಭಾವಿಸಿ, ಪಾದುಕೆಗಳೇ ಪರಿಪಾಲಿಸುತ್ತಿವೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು, ಹೃದಯದಲ್ಲಿ ದೃಢ ಮಾಡಿಕೊಂಡು, ನಾವು ರಾಮ ಚಿಂತನೆಮಾಡುತ್ತಾ ಜೀವಿಸಬೇಕು. ನಂತರ, ಶ್ರೀರಾಮನು ಬಂದು ನಮ್ಮ ಪರಮ ಪ್ರಭುವಾಗಿ ನಿಂತು, ಪತ್ಯಕ್ಷ ಪರಿಪಾಲನೆ ಮಾಡುವನು. ಆ ಪ್ರಿಯವಾದ ದಿನಕ್ಕಾಗಿ ಕಾದಿರುವುದೇ ನಮ್ಮ ಕರ್ತವ್ಯ," ಎಂದು ತಿಳಿಸಿದನು. ಗುರುಗಳು, ಪಂಡಿತರು, ಋಷಿಗಳು, ಪುರೋಹಿತರು, ಮಂತ್ರಿಗಳು, ಪುರಪ್ರಮುಖರು, ಪ್ರಜೆಗಳು ಇವರೆಲ್ಲರ ಅಭಿಪ್ರಾಯವನ್ನು ಪಡೆದು, ಅವರೆಲ್ಲರೂ ಒಪ್ಪಿಕೊಂಡ ಮೇರೆಗೆ, ರಾಮಪಾದುಕೆಗಳನ್ನು ಸಿಂಹಾಸನದಲ್ಲಿ ಪ್ರತಿಷ್ಠಿಸಲು ಮೂಹೂರ್ತ ಗೊತ್ತು ಮಾಡಿ ಆ ಉತ್ಸವವನ್ನು ವೈಭವದಿಂದ ನಡೆಸಿದನು.

**ನಂದಿಗ್ರಾಮ**: ತಾಯಿಯರಾದ ಕೌಸಲ್ಯೆ ಸುಮಿತ್ರೆ ಕೈಕೆಯರಿಗೆ ನಮಸ್ಕರಿಸಿ, ಪಾದುಕೆಗಳನ್ನು ಶಿರಸ್ಸಿನಲ್ಲಿ ಧರಿಸಿ ಕೆಳಗಿಟ್ಟು, ಇನ್ನು ತನ್ನ ಸರ್ವ ಬಾಧ್ಯತೆಗಳನ್ನೂ ಪಾದುಕೆಗಳೇ ವಹಿಸಿ ಪರಿಪಾಲನೆ ಮಾಡುವುವು ಎಂದು, ಅವುಗಳಿಗೆ ನಮಸ್ಕರಿಸಿ,

ಗುರುವಿನ ಅನುಮತಿ ಪಡೆದು ನಂದಿಗ್ರಾಮದಲ್ಲಿ ಒಂದು ಸಣ್ಣ ಪರ್ಣಶಾಲೆ ನಿರ್ಮಿಸಿಕೊಂಡು, ರಾಮಲಕ್ಷ್ಮಣರ ಹಾಗೆ ಜಟಾವಲ್ಕಲಗಳನ್ನು ಧರಿಸಿ, ನೆಲದ ಕೆಳಗೊಂದು ಗುಹೆಯನ್ನು ನಿರ್ಮಿಸಿ ಅಲ್ಲಿರುತ್ತಾ ಆಹಾರ ಪಾನೀಯಗಳಲ್ಲೂ ವಸ್ತ್ರಧಾರಣೆಯಲ್ಲೂ ಮುನಿಗಳಂತೆ ಕಠಿಣ ವ್ರತವನ್ನು ಕೈಗೊಂಡು, ದೇವೇಂದ್ರನು ಕೂಡ ಕೊಂಡಾಡುವ ಅಯೋಧ್ಯೆಯ ಭೋಗಗಳನ್ನು ತೃಣ ಸಮಾನವೆಂದು ತಿಳಿದು, ವೈರಾಗ್ಯದಿಂದ ನಂದಿಗ್ರಾಮ ಕುಟೀರದಲ್ಲಿ ಪ್ರಕಾಶಿಸಿದನು. ಇತರರ ಕಣ್ಣಿಗೆ ಬೀಳದೆ, ರಾಮಚಂದ್ರನು ಅಯೋಧ್ಯೆ ಸೇರುವವರೆಗೂ ತಾನು ಯಾರನ್ನೂ ನೋಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದನು. ರಾಮಚಂದ್ರನ ಆಗಮನದವರೆಗೆ ರಾಮಚಿಂತನೆಯನ್ನೇ ಮಾಡುತ್ತಾ ಕಾಲ ಕಳೆಯಲಾರಂಭಿಸಿದನು. ಅವನ ದೇಹವು ದಿನದಿನಕ್ಕೆ ದುರ್ಬಲವಾಗುತ್ತಾ ಬಂದಿತು. ಅವನ ತೇಜಸ್ಸು ಅಧಿಕವಾಯಿತು. ಮುಖವರ್ಚಸ್ಸು ದೇದೀಪ್ಯಮಾನವಾಯಿತು. ರಾಮಭಕ್ತಿ ದಿನದಿನಕ್ಕೆ ವರ್ಧಿಸಿತು. ಮನಸ್ಸು ಪರಿಶುದ್ಧವಾದ ಹಾಲಿನಂತಾಯಿತು. ತಾರಾಗಣಗಳು ಹೃದಯಾಂತರಾಳದಲ್ಲಿ ಪ್ರಕಾಶಿಸಿದವು.

# ೧೯ ದಂಡಕಾರಣ್ಯ

**ಜಯಂತನು**: ಭರತನು ಈ ರೀತಿಯಾಗಿ ನಂದಿಗ್ರಾಮದಲ್ಲಿ ರಾಮಚಿಂತನೆಯಲ್ಲಿ ಕಾಲ ಕಳೆಯುತ್ತಿರಲು, ಅತ್ತ, ಚಿತ್ರಕೂಟ ಪರ್ವತದಲ್ಲಿ ವಾಸಮಾಡುತಿದ್ದ ಸೀತಾ ರಾಮಲಕ್ಷ್ಮಣರು, ಭರತನ ಭಕ್ತಿ ಪ್ರಪತ್ತಿಗಳನ್ನು ಕೊಂಡಾಡುತ್ತಾ ಕಾಲ ಕಳೆಯುತ್ತಿದ್ದರು. ಹೀಗಿರುವಲ್ಲಿ, ಇರುವೆಯೊಂದು ಸಮುದ್ರದ ತಳ ನೋಡಲು ಆಶೆಪಟ್ಟಂತೆ ಒಬ್ಬ ಮೂರ್ಖ, ಜಯಂತನೆನ್ನುವವನು ಕಾಗೆಯ ರೂಪ ಧರಿಸಿ, ರಾಮಚಂದ್ರನ ಸಮೀಪದಲ್ಲಿ ಕುಳಿತು ಪ್ರಕೃತಿ ಸೌಂದರ್ಯವನ್ನು ನೋಡುತ್ತಿದ್ದ ಸೀತಾದೇವಿಯ ಪಾದಗಳನ್ನು ಕುಕ್ಕಿ ಗಾಯ ಮಾಡಿದನು. ಗಾಯದಿಂದ ರಕ್ತ ಹರಿಯಲಾರಂಭಿಸಿತು. ಇದನ್ನು ನೋಡಿದ ರಾಮಚಂದ್ರನು ಒಂದು ಗರಿಕೆ ಹುಲ್ಲನ್ನು ಕೈಗೆತ್ತಿಕೊಂಡು ಆ ಕಾಗೆಯ ಮೇಲೆ ಎಸೆದನು.

ಜಯಂತನು ಇಂದ್ರನ ಮಗ. ಅವನು ರಾಮ ದ್ರೋಹಿಯಾದನಲ್ಲಾ ಎಂದು ಇಂದ್ರನು ಚಿಂತಿಸಿದನು. ಅಪರಾಧ ಮಾಡದೆ ಯಾರನ್ನೂ ರಾಮನು ಹಿಂಸಿಸು ವವನಲ್ಲ. ಸಮಯ ಬಂದಾಗ ರಾಹುವು ಚಂದ್ರನನ್ನು ಕೂಡ ನುಂಗುವನು. ಆದರೆ, ರಾಮನು ನಿರಪರಾಧಿಗಳನ್ನು ಎಷ್ಟು ಮಾತ್ರಕ್ಕೂ ಹಿಂಸಿಸುವುದಿಲ್ಲ. ಅವನೆಸೆದ ಹುಲ್ಲುಕಡ್ಡಿಯು ಮಹಾಗ್ನಿಯ ರೂಪತಾಳಿ ಜಯಂತನ ಮೇಲೆರಗಿತು, ಅವನನ್ನು ಅಟ್ಟಿಸಿಕೊಂಡು ಹೋಯಿತು. ಜಯಂತನು ಭಯಪಟ್ಟು ತನ್ನ ನಿಜಸ್ವರೂಪವನ್ನು ಧರಿಸಿ, "ರಾಮಾ, ಕಾಪಾಡು," ಎಂದು ಪಾದಗಳ ಮೇಲೆ ಬಿದ್ದು ಪ್ರಾರ್ಥಿಸಿದನು. "ನಾನೊಬ್ಬ ಮೂರ್ಖ, ನನ್ನನ್ನು ಕ್ಷಮಿಸು," ಎಂದು ಬೇಡಿದನು. ಅವನ ದೈನ್ಯತೆ ಯನ್ನು ನೋಡಿ, ರಾಮನು ಕನಿಕರಿಸಿ, ಅವನನ್ನು ಏಕಾಕ್ಷನನ್ನಾಗಿ ಮಾಡಿ ಬಿಟ್ಟು ಕಳಿಸಿದನು. ಅಗ್ನಿರೂಪವಾದ ಆ ಕಡ್ಡಿಯನ್ನು ಉಪಸಂಹಾರ ಮಾಡಿದನು. ರಾಮ ಚಂದ್ರನು ಕೇವಲ ಅಲ್ಪಶಿಕ್ಷೆಯಿತ್ತು ತನ್ನನ್ನು ಕಳಿಸಿದನಲ್ಲಾ ಎನ್ನುವ ಕೃತಜ್ಞತಾ ಭಾವನೆಯಿಂದ ಜಯಂತನು ಬಹಳ ಕಾಲ ಸೀತಾರಾಮಲಕ್ಷ್ಮಣರು ವಾಸಿಸುತ್ತಿದ್ದ ಚಿತ್ರಕೂಟ ಪರ್ವತದಲ್ಲೇ ವಾಸವಾಗಿದ್ದನು. ರಾಮನು ಮಾರ್ಗಶಿರ ಶುದ್ಧ ದಶಮಿ ಯಂದು ಜಯಂತನನ್ನು ಕರೆದು ದಕ್ಷಿಣ ದಿಕ್ಕಿಗೆ ಪ್ರಯಾಣ ಮಾಡೆಂದು ಆಜ್ಞಾಪಿಸಿ ದನು.

**ಅತ್ರಿ ಮಹರ್ಷಿಯ ಆಶ್ರಮ**: ನಂತರ, ಸೀತಾ ರಾಮ ಲಕ್ಷ್ಮಣರು ಚಿತ್ರಕೂಟ ಪರ್ವತವನ್ನು ಬಿಟ್ಟು ಅತ್ರಿ ಮಹಾಮುನಿಯ ಆಶ್ರಮಕ್ಕೆ ಹೊರಟರು. ಅವರ ಆಗಮನವನ್ನು ಶಿಷ್ಯರ ಮೂಲಕ ತಿಳಿದ ಅತ್ರಿ ಮಹಾಮುನಿಯು ಅವರನ್ನು ಎದುರುಗೊಂಡು ತನ್ನ ಆಶ್ರಮಕ್ಕೆ ಕರೆದೊಯ್ದರು. ರಾಮನ ಆಗಮನದಿಂದ ಅತ್ರಿ ಮಹಾಮುನಿಯ ಆನಂದಕ್ಕೆ ಪಾರವೇ ಇಲ್ಲ. ಆನಂದಾಶ್ರುಗಳನ್ನು ಸುರಿಸುತ್ತಾ ತನ್ನ ಜನ್ಮ ಪಾವನವಾಯಿತೆಂದು, ಅನೇಕ ಜನ್ಮಗಳ ತಪಸ್ಸು ಇಂದು ಫಲಿಸಿತೆಂದು ಹೇಳಿ ರಾಮನನ್ನು ಸ್ತುತಿಸಿದರು. ಸಾಯಂಕಾಲ ಅತ್ರಿ ಮಹಾಋಷಿಯು ತನ್ನ ಶಿಷ್ಯರನ್ನೆಲ್ಲಾ ಸೇರಿಸಿ ರಾಮನಿಗೆ ಉನ್ನತಾಸನ ಏರ್ಪಡಿಸಿದರು. ಅತ್ರಿ ಮಹಾಮುನಿಯ ಪತ್ನಿ ಅನಸೂಯೆಯು ಸೀತೆಗೆ ಅಗತ್ಯವಾದ ಏರ್ಪಾಟುಗಳನ್ನು ಮಾಡಿ ಸೀತೆಯ ಸೇವೆ ಮಾಡಿದಳು. ಎಂದಿನ ಸಾಧನೆಯೋ ಇಂದು ಫಲಿಸಿತೆಂದು ಆನಂದಿಸಿದಳು. ಅತ್ರಿ ಮಹಾಮುನಿಯು ಅಲ್ಲಿ ಸೇರಿದ್ದ ಶಿಷ್ಯವರ್ಗಕ್ಕೆ ಸೀತಾರಾಮಲಕ್ಷ್ಮಣರ ಪವಿತ್ರ ಶಕ್ತಿಗಳನ್ನು, ಅವರ ಅವತಾರ ಕಾರ್ಯಗಳನ್ನು ವರ್ಣಿಸಿದರು.

ಅನಸೂಯೆಯು ಪತಿಭಕ್ತಿಯ ವಿಷಯವನ್ನೂ ಸ್ತ್ರೀ ಧರ್ಮವನ್ನೂ ಅನೇಕ ವಿಧವಾಗಿ ಸೀತೆಗೆ ತಿಳಿಸಿದಳು. ಸೀತೆಯ ಗುಣಗಳನ್ನು ಸಾವಿರ ಬಗೆಯಾಗಿ ಕೊಂಡಾಡಿದಳು. ಸೀತೆಯು ಲೋಕದಲ್ಲಿ ಜನಿಸಿದ ಪ್ರತಿ ಪ್ರಾಣಿ, ಪ್ರತಿ ಜೀವಿ, ಪ್ರತಿ

ಭೂತವೂ ಸ್ತ್ರೀ ತತ್ತ್ವವುಳ್ಳದ್ದೆ, ಜಗನ್ನಾಟಕ ರಂಗದಲ್ಲಿ ಸ್ತ್ರೀ ಪುರುಷರಾಗಿ ಬೇರೆಯಾಗಿ ಕಾಣಿಸಿದರೂ ಬಲದಲ್ಲಿ, ಭಾವರಾಗದಲ್ಲಿ, ಕಷ್ಟ ಸುಖಗಳಲ್ಲಿ ಎಲ್ಲರೂ ಸ್ತ್ರೀಯರೆ ಎಂದೂ, ತನ್ನ ಪತಿ ರಾಮನೊಬ್ಬನೇ ಪುರುಷನೆಂದೂ ಹೇಳಿದಳು. ರಾಮನಲ್ಲಿ ದ್ವಂದ್ವ ಭಾವ ಎಷ್ಟು ಮಾತ್ರಕ್ಕೂ ಇಲ್ಲವೆಂದೂ ಬರುವುದಿಲ್ಲವೆಂದೂ ಅವನು ಅಭಯ ಸ್ವರೂಪನೆಂದೂ ಪ್ರಕೃತಿಗೇ ಪುರುಷನಾಗಿ ಪ್ರಕೃತಿಯನ್ನು ವರಿಸಿದ್ದಾನೆಂದೂ ವಿವಿಧ ನಾಮ ರೂಪಗಳಿಂದ ಗೋಚರಿಸುವ ಈ ಜಗತ್ತು ಏಕತ್ವಸ್ವರೂಪವೇ ಎಂದೂ ಅನಸೂಯೆಗೆ ರಾಮ ತತ್ತ್ವವನ್ನು ಸ್ಪಷ್ಟವಾಗಿ ಉಪದೇಶಿಸಿದಳು.

**ಪ್ರಬೋಧೆ**: ಸೀತಾರಾಮಲಕ್ಷ್ಮಣರು ಅತ್ರಿ ಮಹಾಮುನಿಯ ಆಶ್ರಮದಲ್ಲಿ ಆನಂದವಾಗಿ ಕಾಲ ಕಳೆದರು. ಆಶ್ರಮವಾಸಿಗಳಿಗೆ ಧರ್ಮ ಮಾರ್ಗವನ್ನು ಬೋಧಿಸಿದರು. ಮಹಾಋಷಿಯ ಅನುಮತಿ ಪಡೆದು ಅಲ್ಲಿಂದ ಹೊರಟರು. ಆಶ್ರಮವಾಸಿಗಳು ರಾಮಚಂದ್ರನನ್ನು ಬಿಡಲಾರದೆ ಕಣ್ಣೀರಿಟ್ಟರು. ವಿಧಿ ಇಲ್ಲದೆ ಆಶ್ರಮದಲ್ಲಿದ್ದರೇ ವಿನಾ ಎಲ್ಲರೂ ರಾಮಚಂದ್ರನ ಜೊತೆಯಲ್ಲೇ ಇರಲು ಸಿದ್ಧರಿದ್ದರು. ಹೀಗೆ, ಹೃದಯೇಶ್ವರನಾದ ರಾಮಚಂದ್ರನು ಸೀತಾ ಲಕ್ಷ್ಮಣರೊಂದಿಗೆ ಅತ್ರಿ ಆಶ್ರಮದಿಂದ ಹೊರಟು ಅಡವಿ ಪ್ರವೇಶಿಸಿದನು. ಆ ಭೀಕರಾರಣ್ಯದಲ್ಲಿ ಕ್ರೂರ ಮೃಗಗಳ ಗರ್ಜನೆ ಭಯಂಕರವಾಗಿ ಕೇಳಿಸುತ್ತಿತ್ತು. ವಿವಿಧ ಆಕೃತಿಯ ಪಕ್ಷಿಗಳು ವಿಚಿತ್ರವಾದ ವಿನೋದಕರವಾದ ಧ್ವನಿಗೈಯ್ಯುತ್ತಿದ್ದವು. ಅದೇ ಒಂದು ಬೇರೆ ಲೋಕದಂತಿತ್ತು. ಅಲ್ಲಿ ಪ್ರಯಾಣ ಮಾಡುತ್ತಾ ಮಾಡುತ್ತಾ ಹೋಗುತ್ತಿರುವಾಗ ಒಂದು ಸುಂದರವಾದ ಆಶ್ರಮ ಗೋಚರಿಸಿತು. ಅಲ್ಲಿಗೆ ಹೋಗಲು, ಲಕ್ಷ್ಮಣನು ದಾರಿಯಲ್ಲಿ ಅಡ್ಡವಾಗಿದ್ದ ಪೊದೆಗಳನ್ನು ಸರಿಸಿ, ಮುಳ್ಳನ್ನು ತೆಗೆದು ಸೀತಾರಾಮರಿಗೆ ದಾರಿ ಮಾಡಿಕೊಡುತ್ತಾ ಮುಂದೆ ಹೋದನು.

**ನೇತ್ರಾನಂದ**: ಆಶ್ರಮದ ಸಮೀಪಕ್ಕೆ ಹೋದಾಗ ನಾಲ್ಕು ಕಡೆಯಲ್ಲೂ ರಸಾಲ, ಸಾಲ, ಪುನ್ನಾಗ ಹೂ ಗಿಡಗಳು ಹಣ್ಣಿನಗಿಡಗಳು ಕಾಣಿಸಿದವು. ಆ ವೈವಿಧ್ಯಮಯವಾದ ಪ್ರಕೃತಿ ಸೌಂದರ್ಯವನ್ನು ಕಂಡು ಸೀತೆಯು ಸರ್ವಸ್ವವನ್ನೂ ಮರೆತು, ನೇತ್ರಾನಂದದಲ್ಲಿ ಲೀನಳಾಗಿ ರಾಮನ ಜಾಡನ್ನು ಅನುಸರಿಸುತ್ತಾ ಹೋಗುತ್ತಿದ್ದಳು. ಆಗ, ಇವರು ಬರುತ್ತಿರುವುದನ್ನು ಗಮನಿಸಿದ ಆಶ್ರಮವಾಸಿಗಳು ಓಡಿ ಹೋಗಿ, ತಮ್ಮ ಗುರುವಿಗೆ ಸಮಾಚಾರ ತಿಳಿಸಿದರು. ಗುರುವು ಬಂದು, ಆಶ್ರಮದ ಸಿಂಹ ದ್ವಾರದಲ್ಲಿ ನಿಂತು ಆನಂದಬಾಷ್ಪಗಳಿಂದ ಸೀತಾ ರಾಮಲಕ್ಷ್ಮಣರಿಗೆ ಸ್ವಾಗತ ನೀಡಿದನು. ಅವರನ್ನು ಯಥಾವಿಧಿಯಾಗಿ ಸತ್ಕರಿಸಿ ಒಳಗೆ ಕರೆದೊಯ್ದು ತಣ್ಣನೆಯ ಪಾನೀಯವನ್ನೂ ಕಂದಮೂಲ ಫಲಗಳನ್ನೂ ಇತ್ತು ಸತ್ಕರಿಸಿದನು. ಸೀತಾರಾಮ ಲಕ್ಷ್ಮಣರು ಅಮಿತಾನಂದದಿಂದ ಅವರ ಸೇವೆಯನ್ನು ಸ್ವೀಕರಿಸಿ, ಹಣ್ಣುಗಳನ್ನು

ತಿಂದು, ವಿಶ್ರಾಂತಿ ತೆಗೆದುಕೊಂಡರು. ಸಂಜೆ ಸ್ನಾನ ಸಂಧ್ಯಾಧಿಗಳನ್ನಾಚರಿಸಿ ಮುನೀಶ್ವರನೇರ್ಪಡಿಸಿದ ವೇದಿಕೆಯ ಮೇಲೆ ಆಸೀನರಾಗಿ ಆಶ್ರಮವಾಸಿಗಳಿಗೆ ರಾಮನು ಧರ್ಮವನ್ನು ಕುರಿತು ಹೇಳಿದನು.

ಸಂಶಯಗಳನ್ನು ತಿಳಿಸಲು, ಶಾಸ್ತ್ರಾರ್ಥಗಳನ್ನು ಕೇಳಲು ಅವರಿಗೆ ಅನುಮತಿ ಇತ್ತನು. ಋಷಿಗಳು ಅಮಿತೋತ್ಸಾಹದಿಂದ ಪ್ರಶ್ನೆಗಳನ್ನು ಕೇಳಲಾರಂಭಿಸಿದರು. ರಾಮಚಂದ್ರನು ಎಲ್ಲಾ ತಿಳಿಯುವಂತೆ ಹೇಳಿದನು. ಆಶ್ರಮವಾಸಿಗಳು, "ಸ್ವರ್ಗ ಬೇರೊಂದಿದೆಯೇ? ರಾಮ ಸನ್ನಿಧಿಯೇ ನಿಜವಾದ ಸ್ವರ್ಗವಲ್ಲವೆ?" ಎಂದು ತಮ್ಮ ತಮ್ಮ ಅನುಭವವನ್ನು ಕುರಿತು ಮಾತಾಡಿಕೊಳ್ಳುತ್ತಾ ಆ ದಿನ ಕಾಲಕಳೆದರು. ಬೆಳಗಾಗುತ್ತಲೇ ಸ್ನಾನ ಸಂಧ್ಯಾದಿಗಳನ್ನು ಪೂರೈಸಿ, ಆಶ್ರಮವಾಸಿಗಳು ಎಷ್ಟು ಪ್ರಾರ್ಥಿಸಿದರೂ ಕೇಳದೆ, ತನ್ನ ನಿಯಮಕ್ಕೆ ಅಡ್ಡಿಯಾಗಬಾರದೆಂದು ತಿಳಿಸಿ ರಾಮ ಚಂದ್ರನು ಸೀತಾಲಕ್ಷ್ಮಣರೊಂದಿಗೆ ಪುನಃ ಅರಣ್ಯಕ್ಕೆ ಪ್ರಯಾಣ ಬೆಳೆಸಿದನು. ಒಂದು ರಾತ್ರಿಗಿಂತ ಹೆಚ್ಚು ಕಾಲ ಯಾವ ಆಶ್ರಮದಲ್ಲೂ ನಿಲ್ಲದೆ, ಆ ಭಯಂಕರ ಅರಣ್ಯದಲ್ಲಿ ಸೀತಾಲಕ್ಷ್ಮಣರೊಂದಿಗೆ ಸಂಚರಿಸಿದನು.

**ವಿರಾಧ**: ಹೀಗೆ ಪ್ರಯಾಣ ಮಾಡುತ್ತಿದ್ದಾಗ, ಒಂದು ದಿನ, ಭಯಂಕರಾಕಾರದ ವಿರಾಧನೆನ್ನುವ ಒಬ್ಬ ರಾಕ್ಷಸನು ಕರ್ಣ ಕಠೋರವಾಗಿ ಗರ್ಜಿಸುತ್ತಾ ಇವರತ್ತ ಓಡಿ ಬಂದನು. ಅದನ್ನು ನೋಡಿ ಸೀತೆಯು ಒಂದು ಕಡೆ ಭಯದಿಂದಲೂ ಮತ್ತೊಂದು ಕಡೆ ಪುರುಷಸಿಂಹನಾದ ರಾಮನನ್ನು ಪಕ್ಕದಲ್ಲಿಟ್ಟುಕೊಂಡು ಈ ಗುಳ್ಳೆ ನರಿಗಳ ಗರ್ಜನೆಗಳಿಗಂಜುವುದೇ ಎನ್ನುವ ಧೈರ್ಯದಿಂದಲೂ ರಾಮನ ಪಕ್ಕದಲ್ಲಿ ನಿಂತು ನೋಡುತ್ತಿದ್ದಳು.

ಅಷ್ಟರಲ್ಲಿ, ಲಕ್ಷ್ಮಣನು ಅವನ ಮೇಲೆ ಬಾಣ ಪ್ರಯೋಗ ಮಾಡಿದನು. ಆ ಅಂಬಿನ ಬಾಧೆ ತಾಳಲಾರದೆ ಆ ರಾಕ್ಷಸನು ಮತ್ತಷ್ಟು ಕ್ರೋಧದಿಂದ ತಾಮ್ರಾಕ್ಷನಾಗಿ, ಆಕರ್ಣಾಂತವಾಗಿ ತ್ರಿಶೂಲವನ್ನು ಹಿಡಿದು ಕಾಲನಂತೆ ಲಕ್ಷ್ಮಣನ ಮೇಲೆ ಬಿದ್ದನು. ಲಕ್ಷ್ಮಣನು ಆಯಾಸಗೊಂಡಿದ್ದಾನೆಂದು ತಿಳಿದು, ರಾಮನು ಅವನ ಸಹಾಯಕ್ಕೆ ಹೋಗಿ, ರಾಕ್ಷಸನ ಮೇಲೆ ಬಾಣ ಪ್ರಯೋಗಿಸಿದನು. ಅದು ರಾಕ್ಷಸನ ತ್ರಿಶೂಲವನ್ನು ಚೂರು ಚೂರು ಮಾಡಿ, ಅವನ ಶಿರಸ್ಸನ್ನು ಕತ್ತರಿಸಿತು. ಆ ಬಾಣವು ಕಂಠಕ್ಕೆ ತಗುಲಿದ ತಕ್ಷಣವೇ ರಾಕ್ಷಸನು ನೆಲಕ್ಕೆ ಬಿದ್ದನು. ಆಗ, ಅವನ ದೇಹದಿಂದ ಒಂದು ದಿವ್ಯ ರೂಪವು ಹೊರ ಬಂದಿತು. ಆ ರಾಕ್ಷಸನು ಪೂರ್ವದಲ್ಲಿ ಒಬ್ಬ ಗಂಧರ್ವನಾಗಿದ್ದನು. ಕುಬೇರನ ಶಾಪದಿಂದ ಅವನಿಗೆ ರಾಕ್ಷಸತ್ವ ಬಂದಿತ್ತು. ಈಗ ರಾಮಬಾಣದಿಂದ ಅವನ ಶಾಪ ವಿಮೋಚನೆಯಾಗಿತ್ತು. ಅವನ ದೇಹದಿಂದ

ಹೊರಬಂದ ಆ ದಿವ್ಯ ರೂಪವು ರಾಮನ ಪಾದಗಳ ಮೇಲೆ ಬಿದ್ದು, ಅನೇಕ ಬಗೆಯಾಗಿ ಅವನನ್ನು ಸ್ತುತಿಸಿ, ರಾಮಾಜ್ಞೆ ಪಡೆದು ಸ್ವಧಾಮಕ್ಕೆ ಹಿಂತಿರುಗಿತು. ರಾಮಚಂದ್ರನು ಆ ರಾಕ್ಷಸ ಕಳೇಬರವನ್ನು ಭೂಮಿಯಲ್ಲಿ ಸಮಾಧಿ ಮಾಡಿ ಅಂತ್ಯಕ್ರಿಯೆಯನ್ನು ಮಾಡಿದನು. ರಾಮಚಂದ್ರನು ಮಾಡಿದ ಈ ಕಾರ್ಯಕ್ಕೆ ದೇವತೆಗಳು ಕೂಡ ಆನಂದಬಾಷ್ಪ ಸುರಿಸಿದರೇನೋ ಎನ್ನುವಂತೆ ಆಕಾಶದಿಂದ ಮಳೆ ಹನಿಗಳು ಬಿದ್ದವು.

**ಶರಭಂಗ**: ರಾಮಚಂದ್ರನು ಅಲ್ಲಿಂದ ಹೊರಟು, ಶರಭಂಗ ಮಹಾಮುನಿಯ ಆಶ್ರಮವನ್ನು ಪ್ರವೇಶಿಸಿದನು. ಆಗ ಅಲ್ಲಿ ರಾವಣನ ಕುರಿತಾದ ವೃತ್ತಾಂತಗಳು, ಸಂಭಾಷಣೆಗಳು ನಡೆಯುತ್ತಿದವು. ಅದೇ, ಸಮಯಕ್ಕೆ ಸರಿಯಾಗಿ ಸೀತಾಲಕ್ಷ್ಮಣ ಸಮೇತನಾಗಿ ರಾಮಚಂದ್ರನು ಅಲ್ಲಿಗೆ ಪ್ರವೇಶಿಸಿದೊಡನೆ ಋಷಿಗಳು ಅದರ ಸಂಕೇತವನ್ನು ಗುರುತಿಸಿದರು. ರಾಮಚಂದ್ರನ ದಿವ್ಯ ಮಂಗಳ ವಿಗ್ರಹವನ್ನು ನೋಡಿ ಶರಭಂಗನು ಇದು ನಿಜವೋ ಕನಸೋ ಸಮಾಧಿ ಸ್ಥಿತಿಯೋ ಎಂದು ಭ್ರಮಿಸಿದನು. ಸ್ವಲ್ಪ ಹೊತ್ತಾದ ಮೇಲೆ ಸಾಕ್ಷಾತ್ ರಾಮಚಂದ್ರನೇ ಅವನನ್ನು ಗುರುತಿಸಿ, ಅಮಿತಾನಂದದಿಂದ ಮೂವರನ್ನೂ ಸತ್ಕರಿಸಿ ಆದರಿಸಿ, "ರಾಮಾ! ಋಷಿ ಮಾನಸ ಸರೋವರದಲ್ಲಿ ಸಂಚರಿಸುವ ರಾಜಹಂಸ ನೀನು. ಆಹಾ! ಇಂದು ನನ್ನ ಜನ್ಮ ಧನ್ಯವಾಯಿತು," ಎಂದು ಅನೇಕ ವಿಧವಾಗಿ ಸ್ತುತಿಸಿದನು.

"ರಾಮಾ! ನಾನು ಯಾವ ಸಾಧನೆಯನ್ನೂ ಮಾಡಿಲ್ಲ. ಕೇವಲ ಮುಗ್ಧ ಪ್ರೇಮದಿಂದ ಮಾತ್ರ ನಿನ್ನನ್ನು ಪಡೆದಿದ್ದೇನೆ. ನಿನ್ನನ್ನು ನೋಡಿದ ಮೇಲೆ ಈ ನೇತ್ರಗಳು ಬೇರೇ ನನ್ನೂ ನೋಡಲೊಪ್ಪುತ್ತಿಲ್ಲ. ನೀನು ಋಷಿ ಅಭೀಷ್ಟಗಳನ್ನೂ ನೆರವೇರಿಸುತ್ತೇನೆಂದು ಆ ದಿನ ಮಾತು ಕೊಟ್ಟಿದ್ದೆ. ನಿನ್ನ ಪ್ರತಿಜ್ಞೆಯನ್ನು ಉಳಿಸಿಕೊ. ನಾನು ಶರೀರವನ್ನು ಬಿಟ್ಟು ಹೋಗುವವರೆಗೂ ನೀನು ನನ್ನ ಎದುರಿಗೇ ನಿಂತಿರು. ನಿನ್ನನ್ನು ನೋಡುತ್ತಾ ಈ ಕಾಯವನ್ನು ಬಿಡುತ್ತೇನೆ," ಎಂದು ಹೇಳಿ, ಕ್ಷಣದಲ್ಲಿ ಚಿತೆಯನ್ನು ಸಿದ್ಧಗೊಳಿಸಿ, ಅದನ್ನೇರಿದನು. ನಿಶ್ಚಿಂತೆಯಿಂದ ಮುಗುಳ್ನಗುತ್ತಾ ರೆಪ್ಪೆಯಾಡಿಸದೆ ಸೀತಾರಾಮ ಲಕ್ಷ್ಮಣರನ್ನೇ ನೋಡುತ್ತಾ ಕಾಯವನ್ನು ಭಸ್ಮ ಮಾಡಿಕೊಂಡನು. ಈ ರೀತಿ ಶರಭಂಗನು ರಾಮ ಪ್ರೇಮರಸವನ್ನು ಹೃದಯ ಪೂರ್ತಿಯಾಗಿ ಕುಡಿದು, ರಾಮ ಚಂದ್ರನ ಪ್ರತ್ಯಕ್ಷ ಆಶೀರ್ವಾದಗಳನ್ನು ಪಡೆದು, ಅವನ ನೀಲಮೇಘ ಛಾಯೆಯನ್ನು ತನ್ನ ಹೃದಯ ಸರೋವರದಲ್ಲಿ ಸೇರಿಸಿಕೊಂಡು, ಆ ದೃಶ್ಯದಲ್ಲೇ ಲೀನವಾಗಿ ಪರಮ ಪದವಿಯನ್ನು ಸೇರಿದನು. ಆಶ್ರಮವಾಸಿಗಳು ಮೊದಲು ಗುರು ವಿಯೋಗಕ್ಕೆ ಚಿಂತಿಸಿದರೂ, ಆಮೇಲೆ, ತಮ್ಮ ಗುರುವಿಗೆ ಇಂಥ ಪವಿತ್ರ ಸ್ಥಿತಿ ದೊರಕಿತಲ್ಲಾ ಎಂದು ಸಂತೋಷಿಸಿದರು. ಸಾಕ್ಷಾತ್ ಶ್ರೀಮನ್ನಾರಾಯಣನೇ ಸಾಕಾರ ರೂಪನಾಗಿ

ಬಂದು ತಮ್ಮ ಗುರುವನ್ನು ತನ್ನಲ್ಲಿ ಸೇರಿಸಿಕೊಂಡನಲ್ಲಾ ಎಂದು ಅಮಿತಾನಂದ ದಿಂದ ರಾಮನನ್ನು ಸ್ತುತಿಸುತ್ತಾ ತಮ್ಮ ಜನ್ಮ ಸಾರ್ಥಕವಾಯಿತೆಂದು ಭಾವಿಸಿದರು. ಜಯ ಜಯ ಧ್ವನಿ ಮಾಡುತ್ತಾ ತಮ್ಮ ಗುರುವಿನ ಕಳೇಬರದ ಭಸ್ಮವನ್ನು ಹಣೆಗೆ ಹಚ್ಚಿಕೊಂಡರು.

ಈ ವಾರ್ತೆಯನ್ನು ಕೇಳಿ, ಸಮೀಪದಲ್ಲಿದ್ದ ಆಶ್ರಮವಾಸಿಗಳು ಧಾವಿಸಿ ಬಂದು, ರಾಮಚಂದ್ರನ ಪಾದಗಳ ಮೇಲೆ ಬಿದ್ದು, "ಹೇ ನಾಥಾ, ಶರಭಂಗ ಅದೆಷ್ಟು ಧನ್ಯ. ಮಿಕ್ಕ ಋಷಿಗಳು ರಾಕ್ಷಸರ ಬಾಯಿಗೆ ಬಿದ್ದು ಪ್ರಾಣಗಳನ್ನು ಬಿಡುತ್ತಿರುವಾಗ, ಶರಭಂಗನು ಪರಮಾತ್ಮನ ದೃಷ್ಟಿಗೆ ಬಿದ್ದು ಕಾಯವನ್ನು ಪರಮಾತ್ಮನಿಗೇ ಅಂಕಿತ ಮಾಡಿಕೊಂಡನು. ದೇವಾ! ನಮ್ಮನ್ನು ರಾಕ್ಷಸರ ಬಾಧೆಯಿಂದ ಕಾಪಾಡಿ, ನಮ್ಮ ಸಾಧನೆಗೂ ತಪಸ್ಸಿಗೂ ಯಾವ ಅಡಚಣೆಯೂ ಬರದಂತೆ ಮಾಡಿ, ಅಂತ್ಯದಲ್ಲಿ ನಮ್ಮ ತಪಃಫಲವಾಗಿ ತಮ್ಮ ಸಾನ್ನಿಧ್ಯವನ್ನು ಅನುಗ್ರಹಿಸಿ," ಎಂದು ಪ್ರಾರ್ಥಿಸಿದರು.

**ಸುತೀಕ್ಷಣ**: ಆ ವೇಳೆಗೆ, ಸುತೀಕ್ಷಣನೆನ್ನುವ ಮುನಿ ಅಲ್ಲಿಗೆ ಬಂದು ರಾಮಚಂದ್ರನ ಪಾದಗಳ ಮೇಲೆ ಬಿದ್ದನು. ಅವನು ಅಗಸ್ತ್ಯ ಮಹಾಮುನಿಯ ಶಿಷ್ಯನು. ರಾಮ ಚಂದ್ರನನ್ನು ಬಹುವಾಗಿ ಪ್ರೀತಿಸಿದವನು. ಪ್ರೇಮದಿಂದಲೇ ಪರಮಾತ್ಮನನ್ನು ಪಡೆ ಯಬೇಕೆನ್ನುವ ತೀವ್ರ ಸಂಕಲ್ಪ ಇದ್ದವನು. ರಾಮನಲ್ಲದೆ ಅನ್ಯರೂಪಗಳನ್ನು ಅವನು ಸ್ವಪ್ನದಲ್ಲೂ ಊಹಿಸದವನು. ಅವನು ರಾಮನ ಮುಖ ಪದ್ಮವನ್ನು ರೆಪ್ಪೆಯಾಡಿ ಸದೇ ನೋಡುತ್ತಾ, "ಓ ನಾಥಾ! ನನ್ನನ್ನು ಕಟಾಕ್ಷಿಸಲೆಂದೇ ಇಲ್ಲಿಗೆ ಬಂದೆಯಾ? ನನ್ನನ್ನು ನಿನ್ನ ಪ್ರೇಮದಲ್ಲಿ ಸೇರಿಸಿಕೊಳ್ಳೆಯಾ? ಪ್ರತ್ಯಕ್ಷವಾಗಿ ಸಾಕಾರನಾದರೂ ಇನ್ನೂ ನನ್ನನ್ನು ನಿರಾಕಾರಾಧನೆಯಲ್ಲೇ ಇರು ಎನ್ನುವುದು ನಿನಗೆ ಇಷ್ಟವೆ? ಯಾವ ಯಜ್ಞ ಯಾಗಾದಿ ಕರ್ಮಗಳೂ ನನಗೆ ತಿಳಿಯವು. ನಿನ್ನ ಪ್ರೇಮ ಸ್ವರೂಪವನ್ನು ಹೊಂದುವ ಪರಿತಾಪವೇ ನನ್ನ ತಪಸ್ಸೆಂದು ಭಾವಿಸಿ, ನಿನ್ನನ್ನು ಪ್ರೇಮಿಸುತ್ತಿದ್ದೇನೆ. ಇದು ಸಾಲದೆ?

ಓ ಭವಮೋಚನಾ! ಪ್ರಭುವನ್ನು ಪ್ರೇಮದಿಂದ ಸೇವಿಸುವುದಕ್ಕಿಂತ ಅಧಿಕವಾದ ಭಜನೆಯೊಂದಿಲ್ಲ ಅಲ್ಲವೆ? ನಿನ್ನ ಗುಣಗಣಗಳನ್ನು ಗಾನ ಮಾಡುತ್ತಾ ಚಿಂತನೆ ಮಾಡುತ್ತಾ ಆನಂದಪರವಶವಾಗುವುದಕ್ಕಿಂತ ಬೇರೆ ಆನಂದವಿದೆಯೆ?" ಎಂದು ಅನೇಕ ಬಗೆಯಾಗಿ ಪ್ರಾರ್ಥಿಸುತ್ತಾ ತಾನೆಲ್ಲಿರುವೆನೋ ಏನು ಮಾಡುತ್ತಿರುವೆನೋ ಎನ್ನುವುದನ್ನೇ ತಿಳಿಯದ ಸ್ಥಿತಿಯಲ್ಲಿ, ದಿಕ್ಕು ತೋಚದವನಂತೆ, ಹುಚ್ಚನಂತಾಡುತ್ತಾ ಕಣ್ಣೀರು ಸುರಿಸುತ್ತಾ ಸೀತಾರಾಮಲಕ್ಷ್ಮಣರನ್ನು ನೋಡುತ್ತಿದನು. ರಾಮನು ಅವನ ನಿಶ್ಚಲ ಭಕ್ತಿಯನ್ನು ಕಂಡು, ಹತ್ತಿರ ಹೋಗಿ, ಬಹುಪರಿಯಾಗಿ ಅವನನ್ನು ಸಮಾಧಾ

ನಪಡಿಸುತ್ತಾ ಆಲಂಗಿಸಿಕೊಂಡನು. ಮುನೀಶ್ವರನು ತನ್ನನ್ನು ತಾನು ಮರೆತು, ರಾಮನ ತೋಳುಗಳಲ್ಲಿ ಪರಮಾನಂದದಿಂದ ಸಮಾಧಿನಿಷ್ಠನಾದನು. ಬೊಂಬೆ ಯಂತೆ ಕದಲದೆ ನಿಂತು ಬಿಟ್ಟನು. ರಾಮನು ಅವನನ್ನು ಅನೇಕ ವಿಧವಾಗಿ ಸಮಾಧಾನಪಡಿಸಿದ ಮೇಲೆ ಪ್ರಜ್ಞೆ ತಂದುಕೊಂಡು ರಾಮನ ಪಾದಗಳ ಮೇಲೆ ಬಿದ್ದು, ಸಾಷ್ಟಾಂಗ ನಮಸ್ಕಾರ ಮಾಡಿದನು.

"ನಾಥಾ! ಮೋಹವೆನ್ನುವ ದಟ್ಟವಾದ ಅರಣ್ಯವನ್ನು ದಹಿಸುವ ಬಡಬಾಗ್ನಿ ನೀನು. ಸಜ್ಜನರೆನ್ನುವ ಕಮಲಗಳು ಅರಳುವಂತೆ ಮಾಡುವ ಸಾಕ್ಷಾತ್ ಸೂರ್ಯ ನೀನು. ರಾಕ್ಷಸರೆನ್ನುವ ಆನೆಗಳನ್ನು ಸಂಹರಿಸುವ ಮೃಗರಾಜ ನೀನು. ಸಂಸಾರವೆನ್ನುವ ಹಕ್ಕಿಯನ್ನು ಹಿಡಿದು ಕೊಲ್ಲುವ ಗಿಡಗ ನೀನು. ಓ ನಾಥಾ! ನಿನ್ನ ನೇತ್ರಗಳು ರಾಜೀವಗಳು, ನಿನ್ನ ದಿವ್ಯ ಮಂಗಳ ವಿಗ್ರಹವನ್ನು ನೋಡಲು ಈ ಎರಡು ಕಣ್ಣುಗಳು ಸಾಲದು. ಜಾನಕಿಯ ನಯನ ಚಕೋರಗಳಿಗೆ ನೀನು ಚಂದ್ರನು. ಋಷಿಗಳ ಮಾನಸ ಸರೋವರದಲ್ಲಿ ಸಂಚರಿಸುವ ರಾಜಹಂಸ ನೀನು. ಸಂಶಯ ಸರ್ಪಗಳನ್ನು ಭಕ್ಷಿಸುವ ಗರುಡ ನೀನು. ಕಷ್ಟ, ವಿಷಾದ, ಕರ್ಕಶಗಳು ನಿನ್ನ ಕಟಾಕ್ಷದಿಂದ ಭಸ್ಮವಾಗಿ ಹೋಗುವುವು," ಎಂದು, ಇನ್ನೂ ಅನೇಕ ಬಗೆಯಾಗಿ ರಾಮಚಂದ್ರನನ್ನು ವರ್ಣಿಸುತ್ತಾ ತೃಪ್ತಿಯಾಗುವವರೆಗೆ ರಾಮನನ್ನು ನೊಡುತ್ತಾ ಕಾಲದ ಪರಿವೆಯಿಲ್ಲದೆ, ಕಾಯವನ್ನು ಮರೆತು, ಕಣ್ಣು ರೆಪ್ಪೆಯಾಡಿಸದೆ ಸ್ತುತಿಸುತ್ತಿದ್ದನು. ರಾಮನು ಅವನನ್ನೆತ್ತಿ, "ಸುತೀಕ್ಷ್ಣಾ! ನೀನು ಸಕಲ ಗುಣ ಸಂಪನ್ನ, ನಿನಗೇನು ಬೇಕೋ ಕೇಳು, ಅನುಗ್ರಹಿಸುತ್ತೇನೆ," ಎಂದೊಡನೆ, ಮುನಿಯು, "ಓ ದೀನಬಂಧೂ! ಸೀತಾ ಲಕ್ಷ್ಮಣರೊಂದಿಗೆ ಧನುರ್ಧಾರಿಯಾಗಿ, ನನ್ನ ಹೃದಯದ ಅಂತರಾಳದಲ್ಲಿ ಸದಾ ನೆಲೆಸಿರು," ಎಂದು ಪ್ರಾರ್ಥಿಸಿದನು. ರಾಮನು "ತಥಾಸ್ತು," ಎಂದು ಹೇಳಿ, ಸೀತಾ ಲಕ್ಷ್ಮಣ ಸಮೇತವಾಗಿ ಮುನಿಯನ್ನು ಜೊತೆಯಲ್ಲಿಟ್ಟು ಕೊಂಡು ಅಗಸ್ತ್ಯನ ಆಶ್ರಮಕ್ಕೆ ಪ್ರಯಾಣ ಮಾಡಿದನು.

**ಅಗಸ್ತ್ಯ:** ಸ್ವಲ್ಪ ದೂರ ನಡೆದ ಮೇಲೆ ಒಂದು ನದಿ ಶಬ್ದ ಕೇಳಿಸಿತು. ಆ ನದಿಯನ್ನು ಹುಡುಕುತ್ತಾ ಹೊರಟಾಗ, ಆ ನದಿಯ ಮೇಲ್ಭಾಗದಲ್ಲಿ ಎತ್ತರವಾದ ಪರ್ವತವೊಂದು ಕಾಣಿಸಿತು. ಅವೆರಡಕ್ಕೂ ಮಧ್ಯೆ ಸುಂದರವಾದೊಂದು ಹೂ ತೋಟವಿತ್ತು. ಆ ಹೂದೋಟದ ಮಧ್ಯೆ, ಕೊಳದ ಮಧ್ಯದಲ್ಲಿರುವ ತಾವರೆ ಪುಷ್ಪದಂತಹ ಅಗಸ್ತ್ಯಾಶ್ರಮವನ್ನು ಅವರು ಕಂಡರು. ಆ ಆಶ್ರಮವು ಎಷ್ಟು ಮನೋಹರವಾಗಿತ್ತೆನ್ನುವುದನ್ನು ವರ್ಣಿಸಲಾರದೆ ಹೋದರು. ಆ ವಾತಾವರಣವು ವರ್ಣನಾತೀತವಾಗಿತ್ತು. ಜಲಚರಗಳು ಭೂಚರಗಳು ಸಹಜ ವೈರವನ್ನು ಬಿಟ್ಟು

ಅತ್ಯಂತ ಮೈತ್ರಿಯಿಂದ ಜೀವಿಸುತ್ತಿದ್ದವು. ಸಿದ್ಧರು, ಮುನೀಶ್ವರರು ಆ ನದಿ ತೀರದಲ್ಲಿ ನಿಶ್ಶಬ್ದವಾಗಿ ತಪಸ್ಸನ್ನಾಚರಿಸುತ್ತಿದ್ದರು.

ಆಶ್ರಮವನ್ನು ಸಮೀಪಿಸುತ್ತಿದ್ದಂತೆ ಸುತೀಕ್ಷಣನು ಮೊದಲು ಆಶ್ರಮದೊಳಕ್ಕೆ ಓಡಿ ಹೋಗಿ ಗುರುವಿನ ಪಾದಗಳ ಮೇಲೆ ಬಿದ್ದು ನಮಸ್ಕರಿಸಿ, "ಓ ದಯಾಳೂ! ಅಯೋಧ್ಯಾಪತಿಯ ಕುಮಾರನಾದ ಆ ಜಗದಾಧಾರನು ಸೀತಾಲಕ್ಷ್ಮಣ ಸಮೇತ ನಾಗಿ ನಮ್ಮ ಆಶ್ರಮವನ್ನು ಪ್ರವೇಶಿಸಿದ್ದಾನೆ. ನೀವು ಹಗಲು ರಾತ್ರಿ ಯಾರನ್ನು ಕುರಿತು ಧ್ಯಾನಿಸುತ್ತಿದ್ದೀರೋ ಅವನೇ ಪ್ರತ್ಯಕ್ಷನಾಗಿ ನಿಮ್ಮ ಬಳಿಗೆ ಬರುತ್ತಿದ್ದಾನೆ. ಆಹಾ! ಎಂಥ ಸುದಿನ, ಎಂಥ ಭಾಗ್ಯ," ಎಂದು ಹೇಳುತ್ತಾ ಮೈಮರೆತು ಆನಂದಾತಿರೇಕದಲ್ಲಿ ಮುಳುಗಿಹೋದನು. ಅದನ್ನು ಕೇಳಿ ಅಗಸ್ತ್ಯನು ತಟ್ಟನೆ ಎದ್ದು, ಹುಡುಕುತ್ತಿದ್ದ ಬಳ್ಳಿ ಕಾಲಿಗೇ ಸುತ್ತಿಕೊಂಡಂತಾಯಿತೆಂದು ಭಾವಿಸಿ ವೇಗವಾಗಿ ಹೊರಕ್ಕೆ ನಡೆದನು. ಎದುರಿಗೆ ಬರುತ್ತಿದ್ದ ಸೀತಾರಾಮಲಕ್ಷ್ಮಣರನ್ನು ನೋಡಿ ಕಣ್ಣೀರು ಧಾರೆಹರಿಸುತ್ತಾ, "ನಾಥಾ, ನಾಥಾ!" ಎಂದು ಓಡೋಡಿ ಹೋಗಿ, ರಾಮನನ್ನು ಗಾಢಾಲಿಂಗನ ಮಾಡಿಕೊಂಡು, ಕೆಲವು ಕ್ಷಣ ವೃಕ್ಷವನ್ನು ಆತುಕೊಂಡ ಲತೆಯಂತೆ ನಿಂತುಬಿಟ್ಟನು.

**ಅಗಸ್ತ್ಯಾಶ್ರಮ**: ಆತನ ಆನಂದಕ್ಕೆ ಪಾರವೇ ಇಲ್ಲ. ನಂತರ, ಸೀತಾರಾಮಲಕ್ಷ್ಮಣ ರನ್ನು ಆಶ್ರಮಕ್ಕೆ ಕರೆದೊಯ್ದು, ಉನ್ನತಾಸನಗಳಲ್ಲಿ ಕುಳ್ಳಿರಿಸಿ, ಫಲ ಪಾನೀಯ ಗಳನ್ನು ತರಿಸಿತ್ತು ಆದರಿಸಿದನು. ಕುಶಲ ಪ್ರಶ್ನೆ ಮಾಡುತ್ತಿದ್ದ ಅಗಸ್ತ್ಯನು ಕಣ್ಣುಗಳನ್ನು ಮುಚ್ಚಿಕೊಂಡು ನಸುನಗುತ್ತಾ ಆನಂದಬಾಷ್ಪಗಳನ್ನು ಸುರಿಸುತ್ತಾ, "ನಾಥಾ! ನನ ಗಿಂತ ಅದೃಷ್ಟವಂತನಿಲ್ಲವೆಂದು ಭಾವಿಸುತ್ತಿದ್ದೇನೆ. ಸಾಕ್ಷಾತ್ ನಾರಾಯಣನು ನನ್ನ ಬಳಿಗೆ ಬಂದು ನನ್ನ ಆಶ್ರಮದಲ್ಲಿ ಇರುವುದು ಇದೇನು ಕನಸೋ ಅಥವಾ ಸತ್ಯವೋ ಎನಿಸುತ್ತಿದೆ," ಎಂದು ಸಾವಿರ ವಿಧವಾಗಿ ತನ್ನ ಸಂತೋಷವನ್ನು ತೋಡಿ ಕೊಂಡನು.

ಅದಕ್ಕೆ ರಾಮಚಂದ್ರನು, "ಮುನಿರಾಜಾ! ನಿಮ್ಮೊಂದಿಗೆ ನನಗೆ ಸಂಕೋಚವಿಲ್ಲ. ನಾನು ವನಕ್ಕೆ ಬರಲು ಕಾರಣ ನಿಮಗೆ ವಿಶದವೇ ಇದೆ. ನಾನು ಪ್ರತ್ಯೇಕವಾಗಿ ಪ್ರಕಟ ಮಾಡಿಕೊಂಡಿಲ್ಲ. ಋಷಿಗಳಿಗೂ ಮುನಿಗಳಿಗೂ ತಪೋಭಂಗ ಉಂಟುಮಾಡು ತ್ತಿರುವ ರಾಕ್ಷಸರನ್ನು ಹೇಗೆ ಸಂಹರಿಸಬೇಕೋ ದೈವದಾಸರುಗಳನ್ನು ಹೇಗೆ ರಕ್ಷಿಸ ಬೇಕೋ ತಾವು ತಿಳಿಸಿದರೆ ಅದರಂತೆ ಮಾಡುತ್ತೇನೆ. ಓ ಮುನೀ! ಹೇಮಂತ ಋತುವಿನಲ್ಲಿ ಕಮಲಗಳು ನಶಿಸುವ ಕಾಲ ಈಗ ಬಂದಿದೆ," ಎಂದು ಹೇಳುತ್ತಲೇ ಅಗಸ್ತ್ಯನು ನಸುನಗುತ್ತಾ, "ಓ ನಾಥಾ! ನಿಮಗೆ ಎಲ್ಲವೂ ವಿದಿತವೇ. ಆದರೂ ಹೀಗೇಕೆ ನನ್ನನ್ನು ಪ್ರಶ್ನಿಸುತ್ತಿರುವಿರೋ ಅರ್ಥವಾಗುತ್ತಿಲ್ಲ. ಇದು ನನ್ನನ್ನು ಅನು

ಗ್ರಹಿಸುವ ಮಾತುಗಳೋ ಇಲ್ಲವೆ ಪರೀಕ್ಷಿಸುವ ಮಾತುಗಳೋ ತಿಳಿಯಲಾರ ದವನಾಗಿದ್ದೇನೆ. ಆದರೆ ನಿಮ್ಮ ದರ್ಶನ ಸ್ಪರ್ಶನ ಸಂಭಾಷಣೆಗಳ ಪ್ರಭಾವದಿಂದ ನಿಮ್ಮ ಭಾವನೆಗಳನ್ನು ಕೆಲಮಟ್ಟಿಗೆ ತಿಳಿಯುವ ಸಾಮರ್ಥ್ಯ ಪಡೆದಿದ್ದೇನೆ. ಅದೂ ನಿಮ್ಮ ಕಟಾಕ್ಷವೇ. ನಿಮ್ಮ ಮಾಯೆ ನಿಮ್ಮ ಪಾದದಡಿಯಲ್ಲಿ ಆಜ್ಞಾಪಾಲನೆಗಾಗಿ ಬಿದ್ದುಕೊಂಡಿದೆ, ನಿಮ್ಮ ಕಣ್ಣುಗಳ ಆದೇಶವನ್ನು ನಿರೀಕ್ಷಿಸುತ್ತಿದೆ. ಆ ಮಾಯೆಯೇ ನಿಮ್ಮ ಪ್ರಭಾವದಿಂದ ಸಮಸ್ತ ದೇವಗಣಗಳನ್ನು ಸೃಷ್ಟಿಸಿದೆ. ನಿಮ್ಮ ಮಾಯೆ ಅಜೇಯವಾದುದು. ನಿಮ್ಮ ಮಾಯೆ ಜೀವಿಗಳನ್ನು ಅದೆಷ್ಟು ಕಷ್ಟಪಡಿಸುತ್ತಿದೆ ಎನ್ನುವ ಸಂಗತಿ ಲೋಕಪ್ರಸಿದ್ಧವಾಗಿದೆ.

ಕಟಾಕ್ಷಿಸಿ ನನ್ನ ಬಿನ್ನಪವನ್ನು ಆಲೈಸಿ. ನಿಮ್ಮ ಮಾಯೆಯು ಅತ್ತಿ ಮರದಂತೆ. ಮಾಯಾಕಲ್ಪಿತ ಬ್ರಹ್ಮಾಂಡ ಸಮಸ್ತವು ಅದರ ಹಣ್ಣುಗಳು. ಈ ಬ್ರಹ್ಮಾಂಡದಲ್ಲಿರುವ ಚರಾಚರ ಜಂತು ಜಾಲಗಳು ಹಣ್ಣಿನಲ್ಲಿರುವ ಹುಳುಗಳ ಹಾಗೆ. ಅದರ ಅಂದವು ಮೇಲ್ನೋಟಕ್ಕೆ ಚಿತ್ರವಾಗಿರುವುದು. ಸಿಪ್ಪೆಯನ್ನು ತೆಗೆದು ನೋಡಿದರೆ ಲೆಕ್ಕವಿಲ್ಲದಷ್ಟು ಹುಳುಗಳು. ಫಲದಲ್ಲಿ ಆಸಕ್ತಿಯುಳ್ಳವರು ಕಾಲಸ್ವರೂಪರಾದ ನಿಮ್ಮನ್ನು ನೋಡಿ ಭಯಪಡುವರು. ರಾಮಾ! ನೀವು ಲೋಕಾರಾಧ್ಯರು. ಮನುಷ್ಯ ಮಾತ್ರರಂತೆ ನೀವು ನನ್ನನ್ನು ಹೀಗೆ ಪ್ರಶ್ನಿಸುವುದು, ಪ್ರಶಂಸಿಸುವುದು ಯೋಗ್ಯವೆ? ನನಗೇನೂ ಬೇಕಾಗಿಲ್ಲ. ಸೀತಾ ಲಕ್ಷ್ಮಣ ಸಮೇತರಾಗಿ ನೀವು ನನ್ನ ಹೃದಯದಲ್ಲಿ ನೆಲೆಸಿ, ಅದೇ ಸಾಕು. ಈ ಒಂದು ವರವನ್ನು ನನಗೆ ಅನುಗ್ರಹಿಸಿ. ನಿಮ್ಮ ಸಗುಣ ರೂಪ ಧ್ಯಾನವೇ ನನಗೆ ಪರಮ ಸಂತೋಷ, ಅದೇ ನನ್ನ ಮತ, ಅಭಿಮತ ವ್ರತ. ಆದ್ದರಿಂದ ನನ್ನನ್ನು ಕಟಾಕ್ಷಿಸಿ, ಕರುಣಿಸಿ.

ನಿಮ್ಮ ದಾಸರಿಗೆ ದೊಡ್ಡತನ ಕೊಟ್ಟು, ಏನೂ ಅರಿಯದ ಪಾಮರನಂತೆ ಹಿಂದೆ ಸ ರಿಯುವುದು ನಿಮ್ಮ ಘನ ಲೀಲೆಗಳಲ್ಲಿ ಪ್ರಧಾನವಾದ ಲೀಲೆಯಾದ್ದರಿಂದ ನನ್ನನ್ನು ಹಾಗೆ ಪ್ರಶ್ನಿಸಿದಿರಿ. ನಿಮ್ಮ ಅಭೀಷ್ಟವನ್ನು ಅನುಸರಿಸುವುದೊಂದೇ ನನ್ನ ಕರ್ತವ್ಯ. ಬಾರಿ ಬಾರಿಗೆ ನನ್ನನ್ನು ನಿನ್ನ ಮಾಯೆಯಲ್ಲಿ ಕೆಡವಿ ಪರೀಕ್ಷಿಸದಿರು ತಂದೆ!" ಎಂದು ಪ್ರಾರ್ಥಿಸಿದನು. ರಾಮಚಂದ್ರನು, "ಮುನಿವರ್ಯ! ಈ ಪ್ರಾಂತವು ನಿಮಗೆ ಪರಿಚಯ. ಆದ್ದರಿಂದ, ನಾನು ಸೀತಾಲಕ್ಷ್ಮಣರೊಂದಿಗೆ ವಾಸಿಸಲು ಯಾವ ಸ್ಥಳ ಯೋಗ್ಯವೆನ್ನುವುದನ್ನು ನೀವು ನಿರ್ಣಯಿಸುವುದರಲ್ಲಿ ತಪ್ಪೇನಿದೆ? ಇದು ಲೋಕ ರೀತಿಯ ನಡವಳಿಕೆ ಅಲ್ಲವೆ?" ಎನ್ನಲು, ಅಗಸ್ತ್ಯನು, "ನಾಥಾ! ಕೇಳಿದಿರಾದ್ದರಿಂದ ನಿಮ್ಮ ಆಜ್ಞೆಯನ್ನು ಮೀರದೆ ಹೇಳುತ್ತೇನೆ.

**ದಂಡಕಾರಣ್ಯ**: ಅತಿ ಸಮೀಪದಲ್ಲಿ ಗೋದಾವರಿ ಪ್ರವಹಿಸುತ್ತಿದೆ. ಆ ಮಹಾ ನದಿಯು ಯುಗಯುಗಗಳಿಂದ ಜೀವನದಿಯಾಗಿ ಪ್ರವಹಿಸುತ್ತಿದೆ. ಅದರ ಸಮೀಪ ದಲ್ಲಿ ದಂಡಕಾರಣ್ಯವಿದೆ. ಆ ದಂಡಕಾರಣ್ಯವನ್ನು ಪವಿತ್ರ ಮಾಡಿದರೆ ಋಷಿಗಳಿಗೆ ನೀವು ಸಮಸ್ತ ಸುಖಗಳನ್ನು ತಂದುಕೊಟ್ಟಂತಾಗುವುದು. ಕಾರಣವೇನೆಂದರೆ, ಆ ವನವು ಮುನಿರಾಜನ ಶಾಪದಿಂದ ತಪಿಸುತ್ತಿದೆ," ಎಂದು ಹೇಳಿದನು. ಆಗ, ರಾಮನು, "ಅಗಸ್ತ್ಯ! ಆ ಶಾಪ ವೃತ್ತಾಂತವನ್ನು ಸೀತೆ ಕೇಳಲಿಚ್ಛಿಸುತ್ತಿದ್ದಾಳೆ. ವಿವರವಾಗಿ ತಿಳಿಸಿ," ಎಂದು ಪ್ರಾರ್ಥಿಸಿದನು. ಅಗಸ್ತ್ಯನು, "ಓ ನಟನ ಸೂತ್ರಧಾರಿ! ಒಂದು ಸಮಯದಲ್ಲಿ ಪಂಚವಟೀ ತೀರದಲ್ಲಿ ದುರ್ಭಿಕ್ಷ ತಲೆದೋರಿತು. ಆಗ ಮುನಿಗಳೆಲ್ಲರೂ ಗೌತಮ ಋಷಿಯನ್ನು ಆಶ್ರಯಿಸಿದರು. ಅವನು ತನ್ನ ತಪೋ ಮಹಿಮೆಯಿಂದ ಆಶ್ರಯಿಸಿದ ಮುನಿಗಳೆಲ್ಲರನ್ನೂ ಬಹಳ ಕಾಲ ಪೋಷಿಸಿದನು. ದುರ್ಭಿಕ್ಷ ಕಾಲ ತೀರುತ್ತಲೇ ಋಷಿಗಳೆಲ್ಲರೂ ತಮ್ಮ ತಮ್ಮ ಸ್ವಸ್ಥಾನಕ್ಕೆ ಹೊರಡಲು ನಿಶ್ಚಯಿಸಿದರು.

ಆದರೆ, ವೇಷಧಾರಿಗಳಾದ ಕೆಲವು ಋಷಿಗಳು, ಗೌತಮನ ಶಕ್ತಿ ಸಾಮರ್ಥ್ಯಗಳನ್ನು ನೋಡಿ ಸಹಿಸಲಾರದೆ, ಅವನನ್ನು ಹೇಗಾದರೂ ಮಾಡಿ ದೋಷಾರೋಪಣೆಗೆ ಗುರಿಮಾಡಬೇಕೆಂದು ಸಂಚು ಹೂಡಿದರು. ಆಗಲೋ ಈಗಲೋ ಸಾಯುವ ಸ್ಥಿತಿಯಲ್ಲಿರುವ ಒಂದು ಗೋವನ್ನು ಹುಡುಕಿ, ಆಶ್ರಮದ ಆಕರ್ಷಣೀಯವಾದ ಹಚ್ಚ ಹಸಿರು ಪ್ರದೇಶದಲ್ಲಿ ಅದನ್ನು ತಂದು ಮಲಗಿಸಿದರು. ಗೌತಮನು ಹೊರಗೆ ಬಂದು ನೋಡಿದಾಗ ಆ ಗೋವು ಕಾಣಿಸಿತು. ಅದು ಹೂವಿನ ಮೊಗ್ಗುಗಳನ್ನು ತಿನ್ನುತ್ತಿರುವುದೆಂದು ಭಾವಿಸಿ, ಅದನ್ನು ಎಬ್ಬಿಸಿ ಆಚೆಗೋಡಿಸುವ ಸಲುವಾಗಿ ಅಲುಗಾಡಿಸಿದಾಕ್ಷಣ ಅದು ಪ್ರಾಣ ಬಿಟ್ಟಿತು. ಆ ಕುತಂತ್ರಿಗಳಾದ ವೇಷಧಾರಿ ಋಷಿಗಳು ಗೌತಮನ ಮೇಲೆ ಗೋಹತ್ಯಾ ದೋಷಾರೋಪಣೆ ಮಾಡಿದರು. ಅವನನ್ನು ದೂಷಿಸಿದರು. ಆಗ ಗೌತಮನು, ಆ ಗೋವು ಬಿಟ್ಟಿದ್ದನ್ನು ಕುರಿತು ಅದು ಸಹಜವಾದ ಸಾವೇ ಅಥವ ತನ್ನಿಂದಾದದ್ದೇ ಎನ್ನುವುದನ್ನು ಧ್ಯಾನನಿಷ್ಠನಾಗಿ ತಿಳಿದನು. ಇದು ಋಷಿಗಳು ಹೂಡಿದ ಕಪಟ ನಾಟಕವೆನ್ನುವುದನ್ನು ತಿಳಿದು, ಆ ವನದಲ್ಲಿ ಇಂಥ ಕಪಟ ಋಷಿಗಳು ವಾಸ ಮಾಡಬಾರದೆಂದು ನಿಶ್ಚಯಿಸಿ, 'ಈ ವನವು ಭ್ರಷ್ಟವಾಗಲಿ, ಈ ವನದಲ್ಲಿ ರಾಕ್ಷಸರು ಮಾತ್ರ ವಾಸಮಾಡಲಿ,' ಎಂದು ಶಪಿಸಿದರು. ಅಲ್ಲದೆ, ಹಿಂದೆ, ದಂಡಕನೆನ್ನುವ ರಾಜನು ಒಮ್ಮೆ ಗುರುಪುತ್ರಿಯನ್ನು ಬಲಾತ್ಕರಿಸಿದನು, ಭೋಗಿಸಿದನು. ಅವಳು ಭೃಗು ಮಹಾಮುನಿಯ ಮಗಳು. ಅವಳು ತಂದೆಗೆ ವಿಷಯವನ್ನು ತಿಳಿಸಲು, ತಂದೆಯಾದ ಭೃಗುಮಹರ್ಷಿಯು ಕೋಪೋದ್ರಿಕ್ತನಾಗಿ, ಅವನ ರಾಜ್ಯದ ಮೇಲೆ ಧೂಳಿನ ಮಳೆಗರೆದರು. ಆ ರಾಜ್ಯವು

ಧೂಳುಮಯವಾಗಿ ವನವಾಯಿತು. ದಂಡಕನ ರಾಜ್ಯ ಅರಣ್ಯವಾಗಿ ಪರಿಣಮಿಸಿದ್ದರಿಂದ ಇದಕ್ಕೆ ದಂಡಕಾರಣ್ಯವೆಂದು ಹೆಸರಾಯಿತು.

**ಶಾಪವಿಮೋಚನೆ**: ಓ ರಘುವಂಶ ತಿಲಕ! ನೀವು ಆ ವನದಲ್ಲಿ ವಾಸಮಾಡಿದರೆ, ಅಲ್ಲಿರುವ ರಾಕ್ಷಸರು ನಾಶವಾಗುವರು. ಆ ಪ್ರದೇಶವು ಶಾಪ ವಿಮುಕ್ತವಾಗುವುದು, ಋಷಿಗಳ ಸತ್ಸಂಕಲ್ಪವು ಹೆಚ್ಚುವುದು, ಅನೇಕ ವಿಧವಾದ ಲೋಕೋಪಕಾರವಾಗುವುದು, ಋಷಿಗಳ ಶಾಪ ತೀರುವುದರಿಂದ, ಶಪಿಸಿದ ಋಷಿಗಳಿಗೆ ಸಹ ಆನಂದವು ಉಂಟಾಗುವುದು," ಎಂದು ಅಗಸ್ತ್ಯನು ಪ್ರಾರ್ಥಿಸಿದನು. ರಾಮಚಂದ್ರನು ಆಗಲಿ ಎಂದು ಒಪ್ಪಿ, ಸೀತಾಲಕ್ಷ್ಮಣರೊಂದಿಗೆ ದಂಡಕಾರಣ್ಯಕ್ಕೆ ಹೊರಡಲನುವಾದನು. ಅಗಸ್ತ್ಯನು, ರಾಮಚಂದ್ರನಿಗೆ ನಮಸ್ಕರಿಸಿ, ಎಷ್ಟೋ ಕಾಲದಿಂದ ತನ್ನ ಬಳಿ ಇಟ್ಟುಕೊಂಡಿದ್ದ ಕೆಲವು ಅಸ್ತ್ರಗಳನ್ನು, ತನಗೆ ಉಪಯೋಗಿಸಲು ಅವಕಾಶವೇ ಇಲ್ಲದಿದ್ದುದರಿಂದ ರಾಮಚಂದ್ರನಿಗೆ ಅರ್ಪಿಸಿದನು. "ನನ್ನ ಸರ್ವ ಬಲವೂ ನೀನೇ. ಈ ಅಸ್ತ್ರಬಲ ನನ್ನನ್ನು ರಕ್ಷಿಸದು. ರಾಮಾನುಗ್ರಹ ಬಲವೇ ನಿಜ ಬಲ, ನಿಜರಕ್ಷೆ," ಎನ್ನುತ್ತಾ ಆ ಅಸ್ತ್ರಗಳನ್ನು ಸ್ವೀಕರಿಸುವಂತೆ ರಾಮನನ್ನು ಪ್ರಾರ್ಥಿಸಿದನು. ಅಗಸ್ತ್ಯನ ಪ್ರಾರ್ಥನೆಯನ್ನು ಮನ್ನಿಸಿ, ರಾಮನು ಆ ಅಸ್ತ್ರಗಳನ್ನು ಸ್ವೀಕರಿಸಿ ಆಶ್ರಮದಿಂದ ತೆರಳಿದನು. ಸೀತಾರಾಮಲಕ್ಷ್ಮಣರು ದಂಡಕಾರಣ್ಯ ಪ್ರವೇಶಿಸಿದ ಮೇಲೆ, ಅಲ್ಲಿಯವರೆಗೂ ಒಣಗಿದ್ದ ವೃಕ್ಷಗಳು ಚಿಗುರಲಾರಂಭಿಸಿದವು. ಬಾಡಿದ್ದ ಬಳ್ಳಿಗಳು ಪುಷ್ಪಗಳನ್ನು ಹೊತ್ತು ನಿಂತವು. ಅರಣ್ಯವೆಲ್ಲಾ ಹಚ್ಚ ಹಸುರಾಗಿ, ರಂಗು ರಂಗಾಗಿ ಪ್ರಕೃತಿ ಸೌಂದರ್ಯದಿಂದ ಶೋಭಿಸಿತು. ಅಲ್ಲಿ ನಿವಾಸಕ್ಕೆ ಯೋಗ್ಯವಾದ ಪ್ರದೇಶವೊಂದನ್ನು ಅವರು ಹುಡುಕುತ್ತಾ ಪಂಚವಟೀ ತೀರಕ್ಕೆ ಸೇರಿದರು.

**ಜಟಾಯು**: ಆ ಪ್ರದೇಶದಲ್ಲಿ ವೃದ್ಧ ಜಟಾಯುವನ್ನು ಕಂಡರು. ಆ ವೃದ್ಧ ರಾಜನು ಪೂರ್ವದಲ್ಲಿ ದಶರಥನ ಮಿತ್ರನಾಗಿದ್ದನು. ಆದ್ದರಿಂದ, ಶ್ರೀರಾಮನು ಅವನಿಗೆ ದಶರಥನ ಮರಣ ವಾರ್ತೆಯನ್ನು ತಿಳಿಸಿ, ತನ್ನ ಪರಿಚಯವನ್ನು ತಾನೇ ಮಾಡಿಕೊಂಡನು. ಅವರು ಗೋದಾವರಿ ತೀರದಲ್ಲಿ ಒಂದು ಪರ್ಣಶಾಲೆ ನಿರ್ಮಿಸಲು ನಿಶ್ಚಯಿಸಿದರು. ಜಟಾಯುವಿನಿಂದ ಅಲ್ಲಿಯ ವಾತಾವರಣ, ಆ ಪ್ರದೇಶದ ಸ್ಥಿತಿಗಳನ್ನು ಚೆನ್ನಾಗಿ ತಿಳಿದುಕೊಂಡನು. ಆ ರಾತ್ರಿಯನ್ನು ಅಲ್ಲೇ ಕಳೆದರು.

# ೨೦ ಪಂಚವಟಿ

**ಲಕ್ಷ್ಮಣನ ಭಕ್ತಿ**: ಪಂಚವಟೀ ತೀರದಲ್ಲಿ ಹೆಚ್ಚು ಕಾಲ ವಾಸಮಾಡಬೇಕೆಂದು ಬಯಸಿ, ಸೀತಾರಾಮರು ಒಂದು ತಂಪಾದ ಮರದ ನೆರಳಿನಲ್ಲಿ ವಿಶ್ರಮಿಸಿದರು. ರಾಮನು ಲಕ್ಷ್ಮಣನನ್ನು ಕರೆದು, "ತಮ್ಮಾ! ಈ ಪ್ರದೇಶದಲ್ಲಿ ಎಲ್ಲ ವಿಧವಾದ ಸೌಕರ್ಯವುಳ್ಳ ಒಂದು ಸ್ಥಳವನ್ನು ನೋಡಿ, ನಿನಗಿಷ್ಟವಾದ ರೀತಿಯಲ್ಲಿ ಅಲ್ಲೊಂದು ಪರ್ಣಶಾಲೆ ನಿರ್ಮಿಸು," ಎಂದು ಆಜ್ಞಾಪಿಸಿದನು. ರಾಮನ ಮಾತುಗಳು ಲಕ್ಷ್ಮಣನಿಗೆ ಕತ್ತಿಯ ಮೊನೆಯಂತೆ ಭಾಸವಾಯಿತು. ಆ ಮಾತುಗಳನ್ನು ಸಹಿಸಲಾರದೆ ಹೋದನು. "ರಾಮಾ! ಇಂಥ ಕಠಿಣವಾದ ಮಾತುಗಳನ್ನು ಕೇಳಲು ನಾನೇನು ತಪ್ಪು ಮಾಡಿದೆನೊ ಹೇಳು," ಎಂದು ಪಾದಗಳ ಮೇಲೆ ಬಿದ್ದು ಪ್ರಾರ್ಥಿಸಿದನು. ಸೀತಾರಾಮರು ಆಶ್ಚರ್ಯದಿಂದ, "ಲಕ್ಷ್ಮಣಾ! ಏತಕ್ಕೆ ಇಷ್ಟೊಂದು ಚಿಂತೆ ಮಾಡುತ್ತಿದ್ದೀಯೊ ಅರ್ಥವಾಗುತ್ತಿಲ್ಲ. ನನ್ನ ಬಾಯಿಂದ ಕಠಿಣವಾದ ಮಾತುಗಳನ್ನು ಎಂದಾದರೂ ಕೇಳಿದ್ದೀಯಾ? ಕಠಿಣವಾದ ಮಾತಾಡಲು ನನಗೇನು ಹುಚ್ಚು ಹಿಡಿದಿದೆಯೇ? ಪ್ರಾಣ ಸಮಾನವಾಗಿ ನೋಡಿಕೊಳ್ಳುತ್ತಾ ನನ್ನ ಆಶಯಗಳನ್ನು ಶಿರಸಾವಹಿಸಿ ನಡೆಸುತ್ತಿರುವ ನಿನ್ನ ಬಗ್ಗೆ ನಾನು ಕಠಿಣವಾದ ಮಾತುಗಳನ್ನಾಡುವುದರಲ್ಲಿ ಅರ್ಥವಿಲ್ಲ. ನಾನೇನೆಂದೆ? ನಿನಗಿಷ್ಟವಾದ ಸ್ಥಳವೊಂದನ್ನು ಆರಿಸಿ ಪರ್ಣಶಾಲೆ ನಿರ್ಮಿಸು ಎಂದಿಷ್ಟೆ ಹೇಳಿದೆನಲ್ಲವೆ!"ಎಂದನು.

ಲಕ್ಷ್ಮಣನು, "ರಾಮ ರಾಮ, ನಾನೀ ಮಾತುಗಳನ್ನು ಕೇಳಲಾರೆ," ಎಂದು ಕಿವಿಗಳನ್ನು ಮುಚ್ಚಿಕೊಂಡಿದ್ದನ್ನು ರಾಮನು ಆಶ್ಚರ್ಯದಿಂದ ನೋಡುತ್ತಿರಲು, ಲಕ್ಷ್ಮಣನು ಕೈಗಳನ್ನು ಕಟ್ಟಿಕೊಂಡು, "ಸ್ವಾಮೀ! ನನ್ನ ಸರ್ವಸ್ವವೂ ಸೀತಾರಾಮರೇ ಎಂದು ತಿಳಿದಿದ್ದೇನೆ. ಬೇರೆ ಯಾರೂ ನನ್ನವರಿಲ್ಲ. ರಾಮಾಜ್ಞೆಯೇ ನನ್ನ ಇಷ್ಟವೆಂದು ತಿಳಿದು, ಏನನ್ನೂ ಲೆಕ್ಕಿಸದೆ ರಾಮಜ್ಞೆಯನ್ನು ನಡೆಸಿಕೊಂಡು ಬರುತ್ತಿರುವ ದಾಸನಾಗಿ ನಾನಿರುವಾಗ, ನನ್ನಿಷ್ಟವೆನ್ನುವುದೊಂದಿದೆ ಎನ್ನುವಂತೆ ನೀವು ಮಾತನಾಡಿದರೆ, ನಾನು ಕೇಳಿ ಸಹಿಸುವುದಾದರೂ ಹೇಗೆ? ನನ್ನಿಷ್ಟವೆನ್ನುವುದೊಂದು ಪ್ರತ್ಯೇಕವಾಗಿದ್ದರೆ ನಾನು ರಾಮಸೇವೆಗೆ ಅರ್ಹನಾಗುವೆನೆ? ಇಲ್ಲ. ಅನರ್ಹನು. ರಾಮಸೇವೆಗೆ ಅನರ್ಹನೆಂದಾದ ಮೇಲೆ, ನಾನಿನ್ನು ಲೋಕಕ್ಕೇ ಅನರ್ಹನು."

ಸೀತೆಯು ವಿಷಯವನ್ನು ಅರ್ಥ ಮಾಡಿಕೊಂಡು, "ಸೋದರಾ! ನಿನ್ನ ಹೃದಯ ಬಹು ಪವಿತ್ರವಾದುದು. ಏನೋ ಲೋಕಸಾಮಾನ್ಯವಾದ ರೀತಿಯಲ್ಲಿ ನಿನ್ನ ಅಣ್ಣ

ಹಾಗೆ ಹೇಳಿದ್ದಾರೆ, ಅಷ್ಟೆ. ನಿನ್ನ ಹೃದಯವನ್ನು ನಿಮ್ಮ ಅಣ್ಣ ತಿಳಿಯದೇ ಇಲ್ಲ, ಇಷ್ಟಕ್ಕೇ ನೀನಿಷ್ಟು ದುಃಖಿಸಬಾರದು, ಏಳು," ಎಂದು ಸಮಾಧಾನಪಡಿಸಿದಳು. ರಾಮನು ನಗುತ್ತ, "ತಮ್ಮಾ! ನಿನ್ನ ಸೂಕ್ಷ್ಮತೆಯನ್ನು ಕಂಡು ನನಗೆ ತುಂಬಾ ಆನಂದವಾಯಿತು. ನಿನ್ನ ಭಾವನೆಗಳು ಬಹು ಪರಿಶುದ್ಧ, ಪವಿತ್ರ. ಇನ್ನು ಇಂಥ ಮಾತುಗಳನ್ನಾಡಿ ನಿನ್ನನ್ನು ನೋಯಿಸುವುದಿಲ್ಲ. ಲೋಕಸಾಮಾನ್ಯವಾದ ರೀತಿಯಲ್ಲಿ ನಾನು ಆಡಿದ ಮಾತುಗಳೇ ವಿನಾ ಅವು ಬೇರೆ ಅಲ್ಲ. ಬಾ, ಹೋಗಿ ನೋಡೋಣ," ಎಂದನು.

ತಮ್ಮನನ್ನು ಜೊತೆಯಲ್ಲಿಟ್ಟುಕೊಂಡು ಕೆಲವು ಸ್ಥಳಗಳನ್ನು ನೋಡಿ, ಕೊನೆಗೊಂದು ಸ್ಥಳವನ್ನು ತೋರಿಸಿ, "ಇಲ್ಲಿ ಪರ್ಣಶಾಲೆ ನಿರ್ಮಿಸು," ಎಂದು ಹೇಳಿದೊಡನೆ, ಲಕ್ಷ್ಮಣನು, "ನಾನು ಧನ್ಯ. ಇಂಥ ಆಜ್ಞೆಯನ್ನು ನೆರವೇರಿಸುವುದೇ ನನ್ನ ಕರ್ತವ್ಯ. ಹಾಗಲ್ಲದೆ, ನಾನೇ ನನ್ನ ಇಷ್ಟ ಎನ್ನುವುದೊಂದನ್ನು ಸೃಷ್ಟಿಸಿಕೊಳ್ಳುವ ಅಧಿಕಾರ ನನಗಿಲ್ಲ. ನಾನು ನಿನ್ನವನು, ನಿನ್ನ ದಾಸನು," ಎಂದು ಅಣ್ಣನಿಗೆ ನಮಸ್ಕರಿಸಿ, ಪರ್ಣಶಾಲೆಗೆ ಬೇಕಾದ ಸೊಪ್ಪನ್ನು ಕಡಿಯಲು ಪ್ರಾರಂಭಿಸಿದನು. ಲಕ್ಷ್ಮಣನು ಬಹು ಸೂಕ್ಷ್ಮಬುದ್ಧಿಯವನೆಂದು ತಿಳಿದು ಸೀತಾರಾಮರು ಅವನ ಭಕ್ತಿ ಶ್ರದ್ಧೆಗೆ ಬಹಳವಾಗಿ ಆನಂದಿಸಿದರು. ಲಕ್ಷ್ಮಣನಂಥ ತಮ್ಮನು ತಮ್ಮೊಂದಿಗಿರುವುದ ರಿಂದಲೇ ವನವಾಸವು ತಮಗೆ ಹಾಯಾಗಿದೆಯೆಂದೂ ಯಾವ ಅನನುಕೂಲವೂ ಇಲ್ಲದೆ, ಅಯೋಧ್ಯೆಗಿಂತ ಸುಖವಾಗಿದೆಯೆಂದೂ ಸೀತೆಯು ಪದೇ ಪದೇ ರಾಮ ನಿಗೆ ಹೇಳುತ್ತಿದ್ದಳು.

**ಕುಟೀರ**: ಅತಿ ಸುಂದರವಾಗಿ, ಮನೋಹರವಾಗಿ, ನಿರ್ಮಿಸಲ್ಪಟ್ಟಿದ್ದ ಕುಟೀರ ಗಳನ್ನು ಸೀತಾರಾಮರು ನೋಡಿ ಬಹಳ ಆನಂದಿಸಿದರು. ಸೀತಾ ದೇವಿಯು ಪರಮಾಶ್ಚರ್ಯದಿಂದ ನೋಡುತ್ತಾ ಮೈದುನನ ಶಕ್ತಿ ಯುಕ್ತಿಗಳನ್ನು ಕೊಂಡಾ ಡಿದಳು. ಅವರು ಬಹಳ ಸುಖವಾಗಿ ಅದರಲ್ಲಿ ಕಾಲವನ್ನು ಕಳೆಯುತ್ತಾ ಬಂದರು. ರಾಮಚಂದ್ರನು ಪಂಚವಟೀ ತೀರದಲ್ಲಿ ಪರ್ಣಶಾಲೆ ನಿರ್ಮಿಸಿಕೊಂಡು ವಾಸ ಮಾಡುತ್ತಿದ್ದಾನೆಂದು ಕೇಳಿ, ದಿನವೂ ಅನೇಕ ಮಂದಿ ಮುನಿಗಳು ಋಷಿಗಳು ಅವರ ಶಿಷ್ಯಕೋಟಿಯೊಂದಿಗೆ ಬಂದು ಕೆಲವರು ಶಾಸ್ತ್ರ ಧರ್ಮಗಳ ಮರ್ಮಗಳನ್ನು ತಿಳಿಯಬಯಸಿ ರಾಮಚಂದ್ರನಿಗೆ ಅನೇಕ ಬಗೆಯ ಪ್ರಶ್ನೆಗಳನ್ನು ಕೇಳುತ್ತಿದ್ದರು. ಇನ್ನು ಕೆಲವರು, ತಾವು ಮಾಡುತ್ತಿರುವ ತಪಸ್ಸು ಸಕ್ರಮವಾಗಿದೆಯೆ, ಇಲ್ಲದಿದ್ದರೆ ಅದರ ದೋಷಗಳೇನು ಹೇಳಬೇಕೆಂದು ಕೇಳುತ್ತಿದ್ದರು. ರಾಮನು ಸರ್ವಧರ್ಮ ಪ್ರವೀಣನಾದ್ದರಿಂದ, ಸರ್ವಶಾಸ್ತ್ರಗಳನ್ನು ತಿಳಿದವನಾದ್ದರಿಂದ, ಅವನನ್ನು ಈ ರೀತಿ ಉಪಯೋಗಿಸಿಕೊಂಡು ಋಷಿಗಳೂ ಮುನಿಗಳೂ ಪರಮಾನಂದಪಡುತ್ತಿದ್ದರು.

**ಪ್ರಶ್ನೆಗಳು**: ಪ್ರಶ್ನೆಗಳನ್ನು ಕೇಳಲು, ತುಚ್ಛ, ಕನಿಷ್ಟ, ಮಧ್ಯಮ, ಉತ್ತಮ, ಹೀಗೆ ನಾಲ್ಕು ಕಾರಣಗಳಿರುತ್ತವೆ. ಒಬ್ಬನನ್ನು ಅವಹೇಳನ ಮಾಡಲು ಪ್ರಶ್ನೆ ಹಾಕುವುದು ತುಚ್ಛ. ವಾಕ್ಚಾತುರ್ಯ ಪ್ರದರ್ಶಿಸಲು ಪ್ರಶ್ನೆ ಹಾಕುವುದು ಕನಿಷ್ಠ. ಬುದ್ಧಿ ಚಾತುರ್ಯ ತೋರಿಸಲು ಪ್ರಶ್ನೆ ಹಾಕುವುದು ಮಧ್ಯಮ. ಸಂದೇಹಗಳನ್ನು ನಿವಾರಿಸಿಕೊಳ್ಳಲು ಪ್ರಶ್ನೆಹಾಕುವುದು ಉತ್ತಮ.

ಅನೇಕ ಮಂದಿ ಋಷಿಗಳು ಈ ನಾಲ್ಕನೇ ವರ್ಗಕ್ಕೆ ಸೇರಿದವರು. ಈ ಋಷಿಗಳನ್ನು ನೋಡಿ ರಾಮಲಕ್ಷ್ಮಣರು ಅಮಿತಾನಂದ ಪಡುತ್ತಿದ್ದರು. ಕೆಲವರು ರಾಮಚಂದ್ರನು ಹೇಳುತ್ತಿದ್ದ ಅತಿ ಸುಲಭವಾದ ಆಚರಣಯೋಗ್ಯವಾದ ಶಾಸ್ತ್ರಸಮ್ಮತವಾದ ಧರ್ಮ ವಿರುದ್ಧವಲ್ಲದ ಆ ಉತ್ತರಗಳಿಗೆ ಮೆಚ್ಚಿ ತಲೆದೂಗಿ, "ಓ ನಾಥಾ! ತ್ರಿಕಾಲಜ್ಞಾನ ಸಂಪನ್ನಾ! ನಿಮಗಿಂತ ಬೇರೆ ಪ್ರಭು ಯಾರು? ಋಷಿಮಾನಸಸಂಚಾರರಾದ ನೀವು ನಮ್ಮ ತಪಸ್ಸಿನ ಫಲವಾಗಿ ಸಿಕ್ಕಿದಿರಿ. ನಾವೆಷ್ಟು ಧನ್ಯರೊ!" ಕೆಲವರು ಅಲ್ಲಲ್ಲೆ ಮರದ ಕೆಳಗೆ ಇದ್ದುಬಿಡುತ್ತಿದ್ದರು. ಕಂದಮೂಲಾದಿಗಳನ್ನು ತಿಂದು. ತಮ್ಮ ತಮ್ಮ ಆಶ್ರಮಗಳನ್ನೂ ಮರೆತು, ಆಗಾಗ ರಾಮಚಂದ್ರನು ಹೊರಗೆ ಸಂಚರಿಸುತ್ತಿರುವಾಗ, ಮರಗಳ ಸಂದಿನಿಂದ ದರ್ಶನ ಮಾಡುತ್ತಾ ಆನಂದವಾಗಿ ಕಾಲಕಳೆಯುತ್ತಿದ್ದರು.

ಈ ವಿಧವಾಗಿ ರಾಮನು ಮುನಿಗಳ ಚಿತ್ತಗಳನ್ನು ಅಪಹರಿಸಿ, ಅವರನ್ನು ಉನ್ಮತ್ತರನ್ನಾಗಿಸಿ, ಎಲ್ಲ ಸಾಧನೆಗಳನ್ನೂ ಬಿಟ್ಟು ರಾಮ ಚಿಂತನೆಯೇ ನಿಜವಾದ ತಪಸ್ಸೆಂದು ಭಾವಿಸುವಂತೆ ಮಾಡಿ, ರಾತ್ರಿ ಹಗಲು ಧರ್ಮಬೋಧನೆ ಮಾಡುತ್ತಾ ಆಗಾಗ ಲಕ್ಷ್ಮಣನೊಂದಿಗೆ, "ತಮ್ಮಾ, ನನ್ನ ಕೆಲಸ ಇದೇ. ಇಂಥ ಪವಿತ್ರ ಕಾರ್ಯಕ್ಕಾಗಿಯೇ ನಾನು ಬಂದಿರುವಾಗ ಅಯೋಧ್ಯೆಯಲ್ಲಿ ಕುಳಿತರೆ ಲೋಕಾಭಿರಾಮಾಯಣ ಮುಂದುವರಿಯುವುದು ಹೇಗೆ? ನನ್ನ ಸಂಕಲ್ಪ ಕಾರ್ಯವು ಇದೇ, ನನ್ನ ಆಗಮನದ ಗುರಿ ಇದೇ. ಸಾಧು ಸಂರಕ್ಷಣೆ, ಲೋಕಕಂಟಕರನ್ನು ನಾಶಮಾಡಿ ಧರ್ಮಾಚರಣೆಯನ್ನು ಅಭಿವೃದ್ಧಿಗೊಳಿಸುವುದು, ಇವೀಗ ಪ್ರಾರಂಭವಾಗಿವೆ," ಎಂದು ತನ್ನ ಸಂಕಲ್ಪಗಳನ್ನೂ ಅವತಾರೋದ್ದೇಶಗಳನ್ನೂ ತಿಳಿಸುತ್ತಿದ್ದನು.

**ಉಪದೇಶ**: ಒಂದೊಂದು ವೇಳೆ, ಲೋಕ ಕಲ್ಯಾಣ ನಿಮಿತ್ತವಾಗಿ ಲಕ್ಷ್ಮಣನನ್ನು ನಿಮಿತ್ತವಾಗಿಟ್ಟುಕೊಂಡು ನೀತಿಗಳನ್ನು ಬೋಧಿಸುತ್ತಿದ್ದನು. "ಲಕ್ಷ್ಮಣಾ! ದೇಹದ ಮೇಲೆ ಅಭಿಮಾನ, ಪದಾರ್ಥಗಳ ಮೇಲೆ ಆಸಕ್ತಿ, ನೀನು ನಾನು ಎನ್ನುವ ಮಮಕಾರ, ಏಷಣತ್ರಯ ಮೊದಲಾದವುಗಳು ಮಾಯಾ ಕಲ್ಪಿತವಾದವುಗಳು. ಮಾಯೆಯ ಸ್ವರೂಪವು ಅತಿ ಗೋಪ್ಯ, ವಿಚಿತ್ರ, ಅದ್ಭುತ. ಮಾಯೆಯು ಚರಾಚರ ಪ್ರಪಂಚವನ್ನು, ಜಂತುಜಾಲವನ್ನು ತನ್ನ ವಶಮಾಡಿಕೊಂಡಿದೆ. ಹತ್ತು ಇಂದ್ರಿಯ

ಗಳೂ ತಮ್ಮ ತಮ್ಮ ಅಧಿಷ್ಠಾನ ಸ್ಥಾನಗಳನ್ನನುಸರಿಸಿ ಅಧಿಷ್ಠಾನ ದೇವತೆಗಳಿಂದ ಭೋಗವನ್ನು ಅನುಭವಿಸುತ್ತವೆ. ಒಂದೊಂದು ವಿಷಯ ಭೋಗವೂ ಮಾಯಾ ಕಲ್ಪಿತವಾದುದು.

ಈ ಮಾಯೆಗೆ ಎರಡು ಭೇದಗಳುಂಟು—ಅವಿದ್ಯಾಮಾಯೆ ಮತ್ತು ವಿದ್ಯಾಮಾಯೆ. ಇವುಗಳಲ್ಲಿ ಎರಡು ಭೇದಗಳುಂಟು. ಅವಿದ್ಯಾಮಾಯೆ ಮಹಾ ದುಷ್ಟೆ. ಅವಳು ಮೂಲತಃ ಬಹುದುಃಖಕಾರಿಣಿ. ಅವಳಿಗೆ ವಶವಾದ ಜೀವಿಗಳು ಸಂಸಾರ ಕೂಪ ದಲ್ಲಿ ಮುಳುಗಿದವರು. ವಿದ್ಯಾರೂಪಿಯಾದ ಮಾಯೆ ಪ್ರಭುವಿನ ಪ್ರೇರಣೆಯಿಂ ದಾಗಿ ಅನೇಕ ಬ್ರಹ್ಮಾಂಡಗಳನ್ನು ರಚಿಸಿದಳು. ಆ ಮಾಯೆಗೆ ಸ್ವತಂತ್ರ ಶಕ್ತಿ ಇಲ್ಲ. ಪರಮೇಶ್ವರನ ಸನ್ನಿಧಿಯಲ್ಲಿ ಇದ್ದುದರಿಂದಾಗಿ ಆ ಮಾಯೆ ತ್ರಿಗುಣಾತ್ಮಕವಾದ ಪ್ರಪಂಚವನ್ನು ಸೃಷ್ಟಿಸಿದಳು. ವರ್ಣಾಶ್ರಮ ಧರ್ಮಗಳನ್ನು ಬಿಟ್ಟು, ಸರ್ವವೂ ಬ್ರಹ್ಮಸ್ವರೂಪವೆಂದು ತಿಳಿದು ಭೇದಬುದ್ಧಿಯನ್ನು ಬಿಟ್ಟವನೇ ಜ್ಞಾನಿ ಎಂದು ಹೇಳುವಳು. 'ಸರ್ವಂ ಖಲ್ವಿದಂ ಬ್ರಹ್ಮ, ಇಹನಾದ ಅಸ್ತಿ ಕಿಂಚನ' ಎನ್ನುವುದು ಪ್ರಮಾಣ. ಈ ಜಗತ್ತು ಬ್ರಹ್ಮಸ್ವರೂಪವೆಂದೂ, ನಾನಾ ವಿಧ ಪದಾರ್ಥಗಳೆಲ್ಲವೂ ಒಂದೇ ಎಂದೂ ತಿಳಿದವನೇ ಜ್ಞಾನಿ. ಲಕ್ಷ್ಮಣಾ! ರಜೋಗುಣವು ಬ್ರಹ್ಮನಿಂದಲೂ ಸತ್ವಗುಣವು ವಿಷ್ಣುವಿನಿಂದಲೂ ಮತ್ತು ತಮೋಗುಣವು ರುದ್ರನಿಂದ ಸಿದ್ಧಿಸುವುದು. ಈ ಮೂರು ಗುಣಗಳೇ ಪ್ರಪಂಚಕ್ಕೆ ಕಾರಣ. ಈ ಮೂರು ತೃಣಸಮಾನವೆಂದು ತಿಳಿದು ಬಿಟ್ಟವನೇ ವಿರಾಗಿಯಾಗಬಲ್ಲ. ಈತನೇ ವೈರಾಗಿ ಎನ್ನುವ ಹೆಸರಿಗೆ ಅರ್ಹ," ಎಂದು ಲಕ್ಷ್ಮಣನಿಗೆ ಹೇಳುತ್ತಿದ್ದನು.

**ಜ್ಞಾನ**: ಒಮ್ಮೊಮ್ಮೆ ಸೀತಾಲಕ್ಷ್ಮಣರಿಬ್ಬರನ್ನೂ ಹತ್ತಿರ ಕೂರಿಸಿಕೊಂಡು ಅನೇಕ ವಿಷಯಗಳನ್ನು ಹೇಳುತ್ತಿದ್ದನು. "ಜೀವಿಯು ತನಗೂ ಮಾಯೆಗೂ ಪರಮಾತ್ಮ ನಿಗೂ ಇರುವ ಸಂಬಂಧವನ್ನು ಎಲ್ಲಿಯವರೆಗೂ ತಿಳಿದುಕೊಳ್ಳುವುದಿಲ್ಲವೊ, ಅಲ್ಲಿ ಯವರೆಗೂ ಜೀವಿ ಜೀವಿಯಾಗಿಯೇ ಇರುವನು, ಮಾಯೆಗೆ ವಶನಾಗಿಯೇ ಇರುವನು. ಜೀವಿ ತನಗೂ ಪರಮಾತ್ಮನಿಗೂ ಭೇದವಿಲ್ಲವೆಂದೂ ಪರಮಾತ್ಮನ ಪ್ರತಿಬಿಂಬವೇ ತಾನೆಂದೂ ಯಾವಾಗ ತಿಳಿಯುವನೋ ಆಗ ಮಾಯೆ ಅವನನ್ನು ಬಿಟ್ಟು ಹೋಗುವುದು. ಅದೇ ಆತ್ಮಜ್ಞಾನ. ಜೀವಾತ್ಮನಿಗೂ ಮಾಯೆಗೂ ಪರಮಾತ್ಮ ನಿಗೂ ಇರುವ ಸಂಬಂಧವನ್ನು ತಿಳಿಯುವುದು ಅತ್ಯವಶ್ಯಕ. ಸ್ವಧರ್ಮದಿಂದ ವಿರಕ್ತಿ ಹುಟ್ಟುವುದು, ಯೋಗದಿಂದ ಜ್ಞಾನ ಲಭಿಸುವುದು. ಜ್ಞಾನವೇ ಮೋಕ್ಷಪ್ರಾಪ್ತಿಗೆ ಮೊದಲ ಮೆಟ್ಟಲು. ಪರಮಾತ್ಮನ ಮೇಲೆ ಅತ್ಯಂತ ಪ್ರೇಮವಿರುವುದೇ ಭಕ್ತಿ. ಅಂಥ ಭಕ್ತನಿಗೇ ನಾನು ಪ್ರಸನ್ನನಾಗುವುದು; ಸುಖವನ್ನೂ ಪ್ರೇಮವನ್ನೂ ಕೊಡುವುದು. ಭಕ್ತಿ ಸ್ವತಂತ್ರವಾದುದು; ಅದು ಪರಾಧೀನವಲ್ಲ. ಜ್ಞಾನ ವಿಜ್ಞಾನಗಳು ಅದಕ್ಕೆ ಅಧೀನ.

ನಿರುಪಮಾನವಾದ ಸುಖಕ್ಕೆ ಭಕ್ತಿಯೇ ಮೂಲ. ಸತ್ಪುರುಷರ ಕಟಾಕ್ಷವೇ ಈ ಭಕ್ತಿ ಭಾವಗಳು ಬರುವುದಕ್ಕೆ ಆಧಾರ. ಈ ಮಾರ್ಗದಿಂದಲೇ ಜೀವಿಗಳು ನನ್ನನ್ನು ತ್ವರೆಯಿಂದ ಸೇರಲು ಸಾಧ್ಯ," ಎಂದು ಬೋಧಿಸುತ್ತಿದ್ದನು.

ಈ ವಿಧವಾದ ಮಾತುಗಳನ್ನು ಸೀತಾಲಕ್ಷ್ಮಣರು ಆನಂದದಿಂದ ಶ್ರವಣ ಮಾಡುತ್ತಿದ್ದರು. ಅವರೆಲ್ಲರೂ ತಾವೆಲ್ಲಿರುವೆನ್ನುವುದನ್ನೇ ಮರೆತು ಅಂತರ್ಮುಖಿಗಳಾಗುತ್ತಿದ್ದರು. ಒಮ್ಮೆ ರಾಮಚಂದ್ರನು ಹೀಗೆ ಆತ್ಮದ ಸ್ವರೂಪ ಲಕ್ಷಣಗಳನ್ನು ಬೋಧಿಸಿ, ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ಸಮಯದಲ್ಲಿ ಲಕ್ಷ್ಮಣನು ಹೊರಗೆ ಕಾವಲು ಕಾಯುತ್ತಾ ಸುಮ್ಮನಿರಲು ಮನಸ್ಸಾಗದೆ, ರಾಮವಾಕ್ಯಗಳನ್ನು ಸ್ಮರಿಸುತ್ತಾ ಅತ್ತಿತ್ತ ತಿರುಗುತ್ತಿದ್ದಾಗ ಆ ವೃಕ್ಷಛಾಯೆಯಲ್ಲಿ ಒಂದು ನಿಂಬೆಯ ಸಸಿ ಕಾಣಿಸಿತು.

**ಶೂರ್ಪಣಖಿ**: ಅದನ್ನು ಅಲ್ಲಿಂದ ಕಿತ್ತು, ಪರ್ಣಶಾಲೆಯ ಸಮೀಪದಲ್ಲಿ ನೆಟ್ಟು, ಎಚ್ಚರಿಕೆಯಿಂದ ಬೆಳೆಸಬೇಕೆನ್ನುವ ಉದ್ದೇಶದಿಂದ ಅದನ್ನು ಜಾಗರೂಕತೆಯಿಂದ ಕೀಳುತ್ತಿದ್ದ ಸಮಯದಲ್ಲಿ, ರಾವಣನ ಸೋದರಿಯಾದ ಶೂರ್ಪಣಖಿ ಎನ್ನುವ ದುಷ್ಟೆ ದುರ್ಮಾಗಿಣಿ ಅವನತ್ತ ಓಡಿ ಬಂದಳು. ಲಕ್ಷ್ಮಣನ ಸುಂದರ ಕಾಯವನ್ನು, ವರ್ಚಸ್ಸನ್ನು ನೋಡಿ ಅವನನ್ನು ಮೋಹಿಸಿದಳು. ಬಾಯಲ್ಲಿ ಮಾತು ಹೊರಡದಾಯಿತು. ತನ್ನ ವಿಕಾರ ಸ್ವರೂಪವನ್ನು ಬಿಟ್ಟು ಸುಂದರ ದೇಹವನ್ನು ಧರಿಸಿ ಕಾಮಚೇಷ್ಟೆಗಳನ್ನು ಪ್ರದರ್ಶಿಸಿದಳು. ಆದರೆ, ಲಕ್ಷ್ಮಣನು ಅವಳನ್ನು ಗಮನಿಸದೆ, ಆಸಕ್ತಿ ತೋರಿಸದೆ ತನ್ನ ಕೆಲಸದಲ್ಲಿ ನಿರತನಾಗಿದ್ದನು. ಶೂರ್ಪಣಖಿಯು ತಾಳಲಾರದೆ, ಲಕ್ಷ್ಮಣನನ್ನು ಸಮೀಪಿಸಿ, "ನಾಥಾ! ನನ್ನನ್ನೇಕೆ ನಿರಾಶೆಗೆ ಗುರಿಮಾಡುತ್ತಿರುವಿರಿ. ನಿಮ್ಮ ತಂಪು ದೃಷ್ಟಿಯನ್ನು ನನ್ನ ಮೇಲೆ ಹರಿಸಿ ನನ್ನ ತಾಪವನ್ನು ತಣಿಸಿ," ಎಂದು ದೀನಳಾಗಿ ಪ್ರಾರ್ಥಿಸಿದಳು. ಲಕ್ಷ್ಮಣನು ಅದನ್ನು ಕೇಳಿಯೂ ಕೇಳದವನಂತೆ ನಟಿಸುತ್ತಾ ಆ ರಾಕ್ಷಸಿಯ ಮುಖವನ್ನು ಕೂಡ ನೋಡದೆ, ತನ್ನೊಳಗೇ ತಾನು ನಗುತ್ತಾ ಅವಳನ್ನೇ ಗಮನಿಸುತ್ತಿದ್ದನು.

ಅವಳು ತಾಳಲಾರದೆ ಇನ್ನೇನು ಅವನ ಮೇಲೆ ಬೀಳಬೇಕೆನ್ನುವಷ್ಟರಲ್ಲಿ ಲಕ್ಷ್ಮಣನು ಅವಳನ್ನು ತಡೆದು, ಶಾಂತವಚನಗಳಿಂದ, "ಅಮ್ಮಾ! ನಾನು ಶ್ರೀರಾಮನ ದಾಸನು, ನಾನು ಸ್ವತಂತ್ರನಲ್ಲ. ಆದ್ದರಿಂದ, ಎಂಥ ಸಣ್ಣ ಕಾರ್ಯವನ್ನೂ ಸಹ, ರಾಮಾಜ್ಞೆ ಇಲ್ಲದೆ ನಾನು ಮಾಡೆನು," ಎಂದು ಅವಳೊಡನೆ ಸಂಭಾಷಣೆಯನ್ನೂ ಪ್ರಾರಂಭಿಸಿದನು. ಅವರ ಮಾತನ್ನು ಕೇಳಿ ಸೀತಾರಾಮರು ಹೊರಗೆ ಬಂದು ನೋಡಿದರು. ಅವಳು ಮಾಯಾರೂಪದ ಶೂರ್ಪಣಖಿ ಎನ್ನುವುದನ್ನು ರಾಮನು ಗಮನಿಸಿ ಜಾಗ್ರತೆಯಿಂದಿದ್ದನು. ಇಷ್ಟರಲ್ಲಿ ಶೂರ್ಪಣಖಿಯು ಲಕ್ಷ್ಮಣನ ಔದಾಸೀನ್ಯ

ವನ್ನು ನೋಡಿ. "ಹೇಡಿ, ಅಯೋಗ್ಯಾ," ಎಂದೆಲ್ಲಾ ರೋಷದಿಂದ ಬೈಯ್ಯಲಾರಂಭಿಸಿದಳು. ಅಪಹಾಸ್ಯ ಮಾಡಲಾರಂಭಿಸಿದಳು. ಅವಳು ಶ್ರೀರಾಮನನ್ನು ಗಮನಿಸಲೇ ಇಲ್ಲ. ಅವಳ ದೃಷ್ಟಿಯೆಲ್ಲಾ ಲಕ್ಷ್ಮಣನ ಮೇಲಿತ್ತು. "ಓ ಸುಂದರಾಂಗಾ! ನನ್ನನ್ನು ವರಿಸು. ನಾನು ನಿನಗೆ ಬೇಕಾದಂಥ ಸುಖ ಕೊಡುವೆ. ಆದರಿಸುವೆ," ಎಂದು ಬಹು ವಿಧವಾಗಿ ಕಾಡಿದಳು. ಲಕ್ಷ್ಮಣನು ಅವಳಿಗೆ ಮಾತು ಮುಂದುವರಿಸಲು ಅವಕಾಶ ಕೊಡದೆ, "ಓ, ಸುಂದರೀ! ನಾನು ದಾಸನು. ದಾಸನಾದ ನನ್ನನ್ನು ನೀನು ವಿವಾಹವಾದರೆ, ನೀನೂ ದಾಸಿಯಾಗಬೇಕಾಗುವುದು. ಪ್ರಭುವಾದ ರಾಮನನ್ನು ವಿವಾಹವಾದರೆ ನಿನಗೆ ನಾನು ದಾಸನಾಗುವೆನು. ಆದ್ದರಿಂದ, ಹೋಗು, ಅವನನ್ನು ವಿವಾಹವಾಗು," ಎಂದು ಪರಿಹಾಸ್ಯ ಮಾಡಿದನು.

**ಹಾಸ್ಯ**: ಇದನ್ನು ನಿಜವೆಂದು ಭಾವಿಸಿದ ಶೂರ್ಪಣಖಿಯು ಅತ್ತಿತ್ತ ತಿರುಗಿ ನೋಡಿದಳು. ಪರ್ಣಶಾಲೆಯ ಮುಂದೆ ಒಬ್ಬ ಸುಂದರ ಸ್ತ್ರೀಯೊಂದಿಗೆ ನಗುತ್ತಾ ನಿಂತಿದ್ದ ಮಹಾಸುಂದರ ಪುರುಷನನ್ನು ನೋಡಿದಳು. ಸರಸರನೆ ಅವನೆಡೆಗೆ ಧಾವಿಸಿ, "ಓ, ಮನ್ಮಥಾ ನನ್ನನ್ನು ನಿನ್ನ ದಾಸಿ ಮಾಡಿಕೊ," ಎಂದು ದೀನಳಾಗಿ ಪ್ರಾರ್ಥಿಸಿದಳು. ರಾಮನು ಕೂಡ ಆ ರಾಕ್ಷಸಿಗೆ ಬುದ್ಧಿ ಕಲಿಸಬೇಕೆಂದುಕೊಂಡು, ಅವಳಿಗೆ ನಿರಾಶೆಯಾಗುವಂತೆ ಪರಿಹಾಸ್ಯವಾಗಿ, ಮಾತನಾಡಲಾರಂಭಿಸಿದನು.

"ಓ ಸುಂದರಿ! ನನ್ನನ್ನು ವಿವಾಹವಾಗಲು ಅವಕಾಶವಿಲ್ಲ. ನಾನು ಏಕಪತ್ನೀ ವ್ರತಸ್ಥ. ನನ್ನ ತಮ್ಮ ಲಕ್ಷ್ಮಣನ ಸತಿ ಈಗ ಅವನ ಸಂಗಡ ಇಲ್ಲ. ಆದ್ದರಿಂದ, ಅವನನ್ನು ಮದುವೆಯಾಗು. ನಿನಗೆ ಶಾಂತಿ ಸಿಕ್ಕುವುದು. ಅವನು ಎಲ್ಲ ವಿಧದಲ್ಲೂ ನಿನಗೆ ಸರಿಯಾದವನಾದ್ದರಿಂದ, ಹೋಗು ಅವನನ್ನೇ ವಿವಾಹವಾಗು," ಎಂದು ಕಳಿಸಿದನು.

ಅವಳು ತಿರುಗಿ ಲಕ್ಷ್ಮಣನ ಬಳಿಗೆ ಬಂದು, "ನಿಮ್ಮಣ್ಣನ ಅನುಮತಿ ಸಿಕ್ಕಿತು. ಆದ್ದರಿಂದ ನೀನಿನ್ನು ಕಾಲಹರಣ ಮಾಡದೆ ನನ್ನನ್ನಂಗೀಕರಿಸು," ಎಂದು ವಿನಯ ವಿಧೇಯತೆಗಳನ್ನು ಪ್ರದರ್ಶಿಸಿದ್ದನ್ನು ನೋಡಿ, ಲಕ್ಷ್ಮಣನು ಮತ್ತಷ್ಟು ನಾಚಿ, ಅವಳನ್ನು ಇನ್ನಷ್ಟು ನಿರಾಶೆಗೊಳಿಸಿಸುವ ಸಲುವಾಗಿ ಪುನಃ ರಾಮನ ಬಳಿಗೆ ಕಳಿಸುತ್ತಿದ್ದುದರಿಂದ ಶೂರ್ಪಣಖಿ ಬೇಸತ್ತು, ಸಹಿಸಲಾರದೆ, ಕಾಮಾಂಧಳಾಗಿ, ದುರ್ಬುದ್ಧಿಗೆ ಗುರಿಯಾಗಿ, ಈ ಸ್ತ್ರೀಯು ರಾಮನೊಂದಿಗೆ ಇರುವುದರಿಂದಲ್ಲವೆ ರಾಮನು ನನ್ನನ್ನು ಒಲ್ಲೆ ಎನ್ನುವುದು! ಇವಳನ್ನು ಕೊಂದು ನುಂಗಿಬಿಟ್ಟರೆ, ರಾಮನು ನನ್ನನ್ನೇ ತಪ್ಪದೆ ಮೋಹಿಸುವನು ಎಂದು ಬಗೆದು, ರೌದ್ರ ತಾಳಿ, ಸೀತೆಯ ಮೇಲೆ ಬೀಳಹೋದಳು. ಇದನ್ನು ನೋಡಿ ಲಕ್ಷ್ಮಣನು ಅವಳನ್ನೆದುರಿಸಲು

ಸಿದ್ಧನಾಗಿ ರಾಮಾಜ್ಞೆಗಾಗಿ ಅವನ ಮುಖಚರ್ಯೆಯನ್ನು ಗಮನಿಸಿದನು. ರಾಮನು ಮಿತಿಮೀರಿದ ಈ ರಾಕ್ಷಸಿಯು ಏನು ಮಾಡುವುದಕ್ಕೂ ಹೇಸಳು ಎಂದು ತಿಳಿದು, ಉಗುರಿನಲ್ಲಿ ಹೋಗುವುದಕ್ಕೆ ಕೊಡಲಿ ಏಕೆ ಎಂದು, ತನ್ನ ಹಸ್ತವನ್ನು ಮೇಲೆತ್ತಿ, ಬೆರಳುಗಳಿಂದ ನಾಲ್ಕು ಎಣಿಸಿ ಲಕ್ಷ್ಮಣನಿಗೆ ಸಂಜ್ಞೆ ಮಾಡಿದನು.

ಸೂಕ್ಷ್ಮಬುದ್ಧಿಯ ಲಕ್ಷ್ಮಣನು ನಾಲ್ಕು ಬೆರಳು ನಾಲ್ಕು ವೇದಗಳೆಂದೂ, ಇವುಗಳೇ ಶ್ರುತಿಗಳೆಂದೂ, ಶ್ರುತಿಗಳೆಂದರೆ ಕಿವಿಗಳೆಂದೂ, ಹಸ್ತವನ್ನು ಮೇಲೆತ್ತಿದ್ದರಿಂದ ಅದು ಆಕಾಶದ ಸಂಜ್ಞೆ ಎಂದೂ, ಆಕಾಶವೆಂದರೆ ಶಬ್ದವೆಂದೂ, ಅದೇ ಬ್ರಹ್ಮವೆಂದೂ, ಅದೇ ಸ್ವರ್ಗವೆಂದೂ, ಸ್ವರ್ಗಕ್ಕೆ ನಾಕ ಎನ್ನುವ ಮತ್ತೊಂದು ಹೆಸರು ಉಂಟೆಂದೂ, ನಾಕ ಎಂದರೆ ಮೂಗು ಎಂದಾಗುವುದೆಂದೂ ಸಂಜ್ಞೆಯನ್ನು ಅರ್ಥೈಸಿದನು. ಶ್ರುತಿಗಳೆಂದರೆ ಕಿವಿಗಳು, ನಾಕವೆಂದರೆ ಮೂಗು ಎಂದು ನಿರ್ಣಯಿಸಿ, ಕ್ಷಣದಲ್ಲಿ ಕತ್ತಿಯಿಂದ ಅವಳ ಮೂಗು ಕಿವಿಗಳನ್ನು ಕೊಯ್ದು ಹಾಕಿದನು. ಶೂರ್ಪಣಖಿಯು ಅರಣ್ಯವೆಲ್ಲಾ ತತ್ತರಿಸುವಂತೆ ರೋದಿಸಿದಳು.

ರೌದ್ರಾಕಾರ ತಾಳಿ, "ಮೋಹಿಸಿ ಬಂದ ಸ್ತ್ರೀಗೆ ಹೀಗೆ ಮಾಡುವುದು ನ್ಯಾಯವೇ? ಇರಲಿ, ನನ್ನ ಅಣ್ಣ ರಾವಣನನ್ನು ಕರೆದುಕೊಂಡು ಬಂದು ತಕ್ಕ ಶಾಸ್ತಿ ಮಾಡಿಸು ತ್ತೇನೆ," ಎಂದು ಪ್ರತಿಜ್ಞೆ ಮಾಡಿ ಬಿರಬಿರನೆ ಹೊರಟಳು. ನೇರವಾಗಿ ಖರದೂಷಣಾ ದಿಗಳ ಬಳಿಗೆ ಬಂದು, "ಸೋದರಿಗೆ ಇಂಥ ಪರಾಭವ ಸಂಭವಿಸಿರುವಾಗ ನೀವು ಹೇಗೆ ತಾನೆ ಸಹಿಸಿಕೊಂಡಿದ್ದೀರಿ? ಓ ತಮ್ಮಂದಿರಾ! ನಿಮ್ಮ ಭುಜಬಲ ಇರುವುದೇತಕ್ಕೆ, ಅದನ್ನು ಸುಡಿ. ನೀವು ಪುರುಷರಲ್ಲವೆ?" ಎಂದು ಗೋಳಿಟ್ಟಳು. ವಿಷಯ ಏನೆನ್ನುವುದು ಖರದೂಷಣಾದಿಗಳಿಗೆ ತಿಳಿಯದೆ, "ಸೋದರೀ! ಏನಿದು ವಿಕಾರ? ಯಾರು ನಿನ್ನನ್ನು ವಿಕಾರಗೊಳಿಸಿದರು? ವಿಷಯವೇನು ಹೇಳು. ಆಮೇಲೆ ನಮ್ಮ ಬಲ ಪರಾಕ್ರಮಗಳನ್ನು ನೋಡುವೆಯಂತೆ," ಎಂದು ವಿಚಾರಿಸಿದರು. ಶೂರ್ಪಣಖಿಯು ರಾಮ ಲಕ್ಷ್ಮಣರ ರೂಪ ಸೌಂದರ್ಯವನ್ನೇ ಬಹಳ ಹೊತ್ತು ಅವರಿಗೆ ವರ್ಣಿಸುತ್ತಾ ಹೋದಳು. ಅವರು ಸಿಟ್ಟುಗೊಂಡು, "ಏನು ನಡೆಯಿತು ಹೇಳೆಂದರೆ, ಅವರ ಸೌಂದರ್ಯ ವರ್ಣನೆಯಲ್ಲೇ ಕಾಲಹರಣ ಮಾಡುತ್ತೀ ಯಲ್ಲಾ!" ಎಂದು ಗದರಿಸಿದ ಬಳಿಕ, ಅವಳು ಅಡವಿಯಲ್ಲಿ ನಡೆದ ವೃತ್ತಾಂತ ವನ್ನೆಲ್ಲಾ ಸೋದರರಿಗೆ ತಿಳಿಸಿದಳು.

**ಅಪಶಕುನ**: ಖರದೂಷಣಾದಿಗಳು ತಮ್ಮ ಸೋದರಿಯ ಕಿವಿ ಮೂಗುಗಳನ್ನು ಕೊಯ್ದ ರಾಮಲಕ್ಷ್ಮಣರ ಮೇಲೆ, ಹದಿನಾಲ್ಕು ಸಾವಿರ ರಾಕ್ಷಸ ವೀರರೊಂದಿಗೆ ದಂಡೆತ್ತಿ ಹೋದರು. ಆ ರಾಕ್ಷಸವೀರರು ಸ್ವಪ್ನದಲ್ಲೂ ಸೋಲನ್ನನುಭವಿಸದವರು.

ರೆಕ್ಕೆಗಳಿರುವ ಪರ್ವತಗಳೋ ಎನ್ನುವಂತೆ, ಅವರೆಲ್ಲರೂ ಭೂಮಿ ತತ್ತರಿಸುವಂತೆ ಗುಂಪು ಗುಂಪಾಗಿ ಓಡುತ್ತಾ ಹೊರಟರು. ನಾನಾ ವಿಧದ ಆಯುಧಗಳನ್ನು ಧರಿಸಿ, ಮೂಗು ಕಿವಿಗಳಿಲ್ಲದ ಆ ವಿಧವೆಯನ್ನು ಮುಂದಿಟ್ಟುಕೊಂಡು ಆ ವೀರರೆಲ್ಲರೂ ಅವಳನ್ನು ಅನುಸರಿಸಿ ಹೋಗುತ್ತಿದ್ದರು. ರಕ್ತ ಸುರಿಯುತ್ತಿದ್ದ ಅಂಗಹೀನ ವಿಧ ವೆಯು ಮುಂದೆ ಹೋಗುವುದು ಅಪಶಕುನ, ಅಶುಭವೆನ್ನುವುದು ಅವರಿಗೆ ತಿಳಿಯದು. ರಾಕ್ಷಸರು ತಮ್ಮ ಭೌತಿಕ ಬಲವನ್ನು ದುಷ್ಟ ರಾಕ್ಷಸ ಶಕ್ತಿಯನ್ನು ಮಾತ್ರವೇ ಲಕ್ಷ್ಯದಲ್ಲಿಟ್ಟುಕೊಳ್ಳುವರಲ್ಲದೆ, ಶುಭಾಶುಭಗಳನ್ನು ಅವರು ಯೋಚಿ ಸರು. ಇದು ರಾಕ್ಷಸರ ಲಕ್ಷಣ. ಆದ್ದರಿಂದಲೇ ಅವರಿಗೆ ಅಮಿತ ಬಲ ಶಕ್ತಿಗಳಿದ್ದೂ ದೈವವನ್ನು ಧರ್ಮವನ್ನು ಜಯಿಸಲಾರರು. ಧರ್ಮ ಬಲಕ್ಕಿಂತ ಮಿಗಿಲಾದ ದಾನವ ಬಲವಾಗಲೀ ದೈವಬಲಕ್ಕಿಂತ ಮಿಗಿಲಾದ ಶಕ್ತಿಯಾಗಲೀ ಲೋಕದಲ್ಲಿ ಬೇರೊಂ ದಿಲ್ಲ. ಆದರೆ, ದೈವವನ್ನು ಧರ್ಮವನ್ನು ಅವರು ಚಿಂತಿಸದೆ ಕೇವಲ ಅವರವರ ಭುಜಬಲವನ್ನು ವರ್ಣಿಸಿಕೊಳ್ಳುತ್ತಾ ಹೊಗಳಿಕೊಳ್ಳುತ್ತಾ ರಣಭೇರಿ ಬಾರಿಸುತ್ತಾ ಕೇಕೆ ಹಾಕುತ್ತಾ ಸಿಂಹಗಳಂತೆ ಆನೆಗಳಂತೆ ಗರ್ಜಿಸುತ್ತಾ ಹೋಗುತ್ತಿದ್ದರು. ಗುಬ್ಬಿಯು ಹದ್ದಿನೊಡನೆ ಹೋರಾಡಲು ಹೊರಟಂತಿತ್ತು ಅವರ ಉತ್ಸಾಹ.

**ಸೋದರರು**: ದೂರದಿಂದ ಶೂರ್ಪಣಖಿಯು ರಾಮನ ಪರ್ಣಶಾಲೆಯನ್ನು ತನ್ನ ಸೋದರನಿಗೆ ತೋರಿಸುತ್ತಾ ಸೈನ್ಯಕ್ಕೆ ಉತ್ಸಾಹವಾಗುವಂತೆ ಆ ಇಬ್ಬರು ಅಣ್ಣತಮ್ಮಂದಿರನ್ನು ಕೊಲ್ಲಿ, ಹಿಡಿಯಿರಿ, ಸದೆಬಡಿಯಿರಿ ಎಂದು ಕೂಗುತ್ತಿದ್ದಳು. ಖರದೂಷಣಾದಿಗಳು, "ಓ ದುರ್ಮಾರ್ಗನೇ, ದೌರ್ಭಾಗ್ಯನೇ ನಮ್ಮ ಸೋದರಿ ಯನ್ನು ಪರಾಭವಗೊಳಿಸಿದೆಯಾ? ಇನ್ನು ನಿನ್ನ ಪ್ರಾಣವನ್ನು ರಕ್ಷಿಸಿಕೋ," ಎಂದು ಗರ್ಜಿಸುತ್ತಾ ಪರ್ಣಶಾಲೆಯನ್ನು ಸೇರಿದರು. ಆಕಾಶವೆಲ್ಲವೂ ಧೂಳಿನಿಂದ ಆವರಿ ಸಿತು.

ಇದನ್ನು ಮೊದಲೇ ನಿರೀಕ್ಷಿಸುತ್ತಿದ್ದ ರಾಮನು, ಲಕ್ಷ್ಮಣನನ್ನು ಕರೆದು, "ಸೀತೆ ಯನ್ನು ಗುಹೆಯಲ್ಲಿಟ್ಟುಕೊಂಡು ಕಾಪಾಡುತ್ತಿರು. ನನಗೆ ಅಣು ಮಾತ್ರವೂ ಅಪಾಯ ವಿಲ್ಲ, ಭಯವಿಲ್ಲ," ಎಂದು ಹೇಳಿದನು. ಹೀಗೆ ಹೇಳಿದೊಡನೆ ಲಕ್ಷ್ಮಣನು ರಾಮನ ಶಕ್ತಿಯನ್ನು ತಿಳಿದವನಾದ್ದರಿಂದ ಆತಂಕಗೊಳ್ಳದೆ ಧನುರ್ಬಾಣಗಳನ್ನು ಧರಿಸಿ ಸೀತೆಯೊಂದಿಗೆ ಗುಹೆಯನ್ನು ಪ್ರವೇಶಿಸಿದನು. ರಾಮನು ಕೋದಂಡಧಾ ರಿಯಾಗಿ ಕಿರುನಗೆಯನ್ನು ಸೂಸುತ್ತಾ ಪರ್ಣಶಾಲೆಯ ಮುಂದೆ ನಿಂತಿದ್ದನು. ತನ್ನ ಜಟೆಯ ಮೇಲೆ ಎರಡೂ ಕೈಗಳನ್ನು ನಿಧಾನವಾಗಿ ಎಳೆಯುತ್ತಿದ್ದಾಗ ಅವುಗಳಿಂದ ಕೋಟ್ಯನುಕೋಟಿ ಮಿಂಚಿನಂಥ ಕಿರಣಗಳು ಹೊರಟು ರಾಕ್ಷಸರ ಕಣ್ಣುಗಳು ಕೋರೈಸುವಂತೆ ಮಾಡಿದವು. ರಾಕ್ಷಸರು ಆ ತೇಜಸ್ಸನ್ನು ಕಣ್ಣುಗಳಿಂದ ನೋಡ

ಲಾರದೆ ಹೋದರು. ರಾಮನ ಹಸ್ತಗಳು ಸರ್ಪಗಳ ವಿಶಾಲವಾದ ಹೆಡೆಗಳಂತೆ ಕಂಡವು. ಮದಗಜಗಳನ್ನು ನೋಡಿ ಸಿಂಹವು ಕೋರೆದಾಡೆಯನ್ನು ಸವರಿಕೊಳ್ಳು ವಂತೆ ಆ ರಾಕ್ಷಸತ್ವವನ್ನು ನಾಶಮಾಡಲು ಸಂಸಿದ್ಧನಾಗಿ ನಿಂತಿದ್ದನು. "ಇವನೇ ಸೋದರಿಯ ಮೂಗು ಕಿವಿಗಳನ್ನು ಕೊಯ್ದವನು. ಹಿಡಿಯಿರಿ, ಹೊಡೆಯಿರಿ," ಎಂದು ರಾಕ್ಷಸರು ಅರಚುತ್ತಿದ್ದರೇ ವಿನಾ ಒಬ್ಬರಾದರೂ ಹತ್ತಿರ ಬರಲಿಲ್ಲ. ಎಷ್ಟು ಪ್ರಯತ್ನ ಮಾಡಿದರೂ ಅವರಲ್ಲಿ ಒಬ್ಬನಾದರೂ ರಾಮನ ಬಳಿ ಬರುವ ಧೈರ್ಯ ಮಾಡಲಿಲ್ಲ.

**ಸುಂದರ ರೂಪಿ**: ರಾಕ್ಷಸರ ಆರ್ಭಟಕ್ಕೆ ದಂಡಕಾರಣ್ಯದ ಕ್ರೂರ ಮೃಗಗಳು ಕಂಗಾಲಾಗಿ ಓಡುತ್ತಾ ಪ್ರಾಣರಕ್ಷಣೆಗಾಗಿ ಸಿಕ್ಕ ಸಿಕ್ಕ ಗುಹೆಗಳಲ್ಲಿ ಹೊಕ್ಕಿಕೊಳ್ಳುತ್ತಿದ್ದವು. ಕೆಲವು ಮೃಗಗಳು ಸೀತಾ ಲಕ್ಷ್ಮಣರಿದ್ದ ಗುಹೆಯನ್ನೂ ಹೊಕ್ಕವು. ಅವರು ಅವುಗ ಳನ್ನು ಹೊರಗಟ್ಟದೆ ಅವುಗಳಿಗೂ ಜಾಗ ಕೊಟ್ಟು ರಕ್ಷಿಸಿದರು. ರಾಮನನ್ನು ಸುತ್ತು ವರಿದ ರಾಕ್ಷಸರು ರಾಮನ ಸುಂದರ ವಿಗ್ರಹವನ್ನು, ಆ ತೇಜಸ್ಸನ್ನು, ನೋಡುತ್ತಾ ವರ್ಣಿಸುತ್ತಾ ಮೋಹಿಸುತ್ತಾ ಸ್ತಂಭಿಸಿಹೋದರೇ ವಿನಾ ಒಬ್ಬರಾದರೂ ಆಯುಧ ವನ್ನು ಎತ್ತಲಿಲ್ಲ. ಕ್ರೌರ್ಯವನ್ನು ತೋರಿಸಲಿಲ್ಲ. ಶೂರ್ಪಣಖಿಯು, "ಸೋದರಾ! ಇಂಥ ಅಗಾಧವಾದ ಸೌಂದರ್ಯಸ್ವರೂಪವನ್ನು ನಾನಿಲ್ಲಿಯವರೆಗೆ ಎಲ್ಲಿಯೂ ನೋಡಲಿಲ್ಲ. ಇವನನ್ನು ಸಂಹರಿಸದೆ ಹಿಡಿದು ನನಗೊಪ್ಪಿಸು," ಎಂದು ಪ್ರಾರ್ಥಿಸಿ ದಳು. ಅದನ್ನು ಕೇಳಿ ಖರದೂಷಣಾದಿಗಳೂ ಕೂಡ, "ಸೋದರೀ! ಇಂಥ ಅಪ್ರತಿಮ ರೂಪಲಾವಣ್ಯವುಳ್ಳ ವ್ಯಕ್ತಿಯನ್ನು ನಾವು ಕೂಡ ಇದುವರೆಗೆ ನೋಡಿಲ್ಲ. ಅವನನ್ನು ಸಮೀಪಿಸಿದಂತೆ ನಮಗೂ ಅವನ ಮೇಲೆ ಮೋಹವಾವರಿಸುತ್ತಿದೆ. ದ್ವೇಷ ಕ್ರೋಧಗಳೇ ಉಂಟಾಗುತ್ತಿಲ್ಲ. ಅವನನ್ನು ನೋಡುತ್ತಿದ್ದರೆ ಹೃದಯದಲ್ಲಿ ಸಂತೋಷ ಉಕ್ಕಿಬರುತ್ತಿದೆ. ಆನಂದವೆಂದರೆ ಬಹುಶಃ ಇದೇ ಇರಬೇಕು," ಎಂದು ವರ್ಣಿಸಲಾರಂಭಿಸಿದರು. ನಂತರ, ಖರನು ತಾನೇ ರಾಮನೊಡನೆ ಮಾತನಾಡಲು ಇಷ್ಟಪಡದೆ, ಒಬ್ಬ ದೂತನನ್ನು ಕರೆದು, ಅವನು ಯಾರು, ಅವನ ಹೆಸರೇನು, ಎಲ್ಲಿಂದ ಬಂದು ಈ ಅರಣ್ಯ ಪ್ರವೇಶಿಸಿದ್ದಾನೆ, ಈ ವೃತ್ತಾಂತವನ್ನೆಲ್ಲಾ ವಿವರವಾಗಿ ತಿಳಿದುಕೊಂಡು ಬಾ ಎಂದು ಕಳಿಸಿದನು.

**ಸಮ್ಮೋಹನಾಸ್ತ್ರ**: ಆ ದೂತನು ಬಂದು ರಾಮನನ್ನು ವಿಚಾರಿಸಲು, ರಾಮನು ಮುಗುಳ್ನಗುತ್ತಾ, "ಎಲವೊ! ನಾನು ನಿಮ್ಮಂಥ ಮೃಗಗಳನ್ನು ಸಂಹರಿಸಲು ಈ ಅರಣ್ಯಕ್ಕೆ ಬಂದವನು, ಕಾಲನಿಗೂ ಕೂಡ ಅಂಜೆನು. ನಿಮ್ಮಲ್ಲಿ ಬಲವಿದ್ದರೆ ನನ್ನ ಮೇಲೆ ಯುದ್ಧಕ್ಕೆ ಸಿದ್ಧರಾಗಿ, ಇಲ್ಲದೆ ಹೋದರೆ, ನಿಮ್ಮ ನಿಮ್ಮ ಮನೆಗಳಿಗೆ ಕ್ಷೇಮವಾಗಿ ಹೋಗಿ ಸೇರಿಕೊಳ್ಳಿ. ಯುದ್ಧ ಒಲ್ಲದವರನ್ನು ನಾನು ಸಂಹರಿಸು

ವುದಿಲ್ಲ," ಎಂದು ಹೇಳಿದನು. ದೂತನು ಹೋಗಿ ಖರದೂಷಣಾದಿಗಳಿಗೆ ಅದೇ ಮಾತನ್ನು ತಿಳಿಸಿದನು. ಶೂರ್ಪಣಖಿಯ ಸೋದರರು ಕೆರಳಿ ಪರಶು, ಶೂಲ, ತ್ರಿಶೂಲ, ಕೃಪಾಣಗಳನ್ನೂ ಶಸ್ತ್ರಾಸ್ತ್ರಗಳನ್ನೂ ಧರಿಸಿ ಯುದ್ಧಕ್ಕೆ ಸಿದ್ಧರಾದರು. ಅವರ ಆರ್ಭಟವು ಭೂನಭೋಂತರಾಳಗಳನ್ನು ತುಂಬಿತು. ರಾಮನ ಮೇಲೆ ಶಸ್ತ್ರಾಸ್ತ್ರಗಳ ಮಳೆಗರೆದರು. ರಾಮನು ಅವೆಲ್ಲವನ್ನೂ ಒಂದೇ ಬಾಣದಿಂದ ಖಂಡಿಸುತ್ತಾ ಬಂದನು. ಅವನು ಬಿಡುತ್ತಿದ್ದ ಒಂದೊಂದು ಬಾಣವೂ ಸರ್ಪದಂತೆ ಸಿಡಿಲಿನಂತೆ ರಾಕ್ಷಸರ ಮೇಲೆ ಬೀಳುತ್ತಿರಲು, 'ಅಮ್ಮಾ', ' ಅಪ್ಪಾ', 'ಅಯ್ಯೋ' ಎಂದು ಅರಚುತ್ತಾ ವೀರಾಧಿವೀರರು ಹಿಂದೆ ಸರಿದರು.

ಇದನ್ನು ನೋಡಿ ಖರ ದೂಷಣ ತ್ರಿಶಿರ ಈ ಮೂವರು ಅಣ್ಣ ತಮ್ಮಂದಿರೂ, "ರಾಕ್ಷಸರೇ! ಯುದ್ಧದಿಂದ ನೀವು ಓಡಬಾರದು. ಹಾಗೆ ಓಡುವವರನ್ನು ನಾವೇ ಹಿಡಿದು ಕೊಲ್ಲುತ್ತೇವೆ," ಎಂದು ಬೆದರಿಕೆ ಹಾಕಿದರು. ಆದ್ದರಿಂದ, ಹಿಮ್ಮೆಟ್ಟುತ್ತಿದ್ದ ರಾಕ್ಷಸರು ರಾಮನ ಕೈಯ್ಯಿಂದಲೇ ಸಾಯುವುದೊಳ್ಳೆಯದೆಂದು ನಿಶ್ಚಯಿಸಿ, ರಾಮ ಬಾಣಕ್ಕೆ ಗುರಿಯಾಗುವುದಕ್ಕಾಗಿ ಉತ್ಸಾಹದಿಂದ ಮುಂದೆ ನುಗ್ಗಿದರು. ರಾಮನನ್ನು ಮೋಹಿಸಿ, ಅವನನ್ನೇ ನೋಡುತ್ತಾ ಆನಂದಿಸಿದರು. ಇಷ್ಟರಲ್ಲಿ, ರಾಮನು ಸಮ್ಮೋಹನಾಸ್ತ್ರವನ್ನು ಅವರ ಮೇಲೆ ಪ್ರಯೋಗಿಸಿದನು. ಅದರಿಂದಾಗಿ, ಅವರಲ್ಲೇ ಒಬ್ಬರು ಇನ್ನೊಬ್ಬರಿಗೆ ರಾಮನಾಗಿ ಕಾಣಿಸಿದರು. 'ಇಗೋ ರಾಮ', 'ಅಗೋ ರಾಮ' ಎಂದು ತಮ್ಮ ತಮ್ಮಲ್ಲೆ ಒಬ್ಬರನ್ನೊಬ್ಬರು ಕೊಲ್ಲುತ್ತಾ ಬಂದರು. ಆ ಪ್ರದೇಶವೆಲ್ಲಾ ತುಂಡುತುಂಡಾದ ದೇಹಗಳಿಂದ ತುಂಬಿ ಹೋಯಿತು. ಅರಣ್ಯದಲ್ಲೆಲ್ಲಾ ರಕ್ತ ಪ್ರವಾಹ ಹರಿಯಿತು. ಕಾಗೆ ಹದ್ದುಗಳು ಸಹಸ್ರ ಸೇರಿದವು. ರಾಕ್ಷಸರು ಹದಿನಾಲ್ಕು ಸಾವಿರ; ರಾಮನು ಒಬ್ಬನೇ. ಪ್ರತಿಯೊಬ್ಬ ರಾಕ್ಷಸನೂ, "ರಾಮಾ, ರಾಮಾ, ರಾಮಾ," ಎಂದು ಅರಚುತ್ತಾ ಕೆಳಗುರುಳುತ್ತಿದ್ದನು.

**ಋಷಿಗಳ ಆನಂದ**: ಹೀಗೆ, ರಾಮನು ಖರದೂಷಣಾದಿ ಚತುರ್ದಶ ಸಹಸ್ರ ರಾಕ್ಷಸರನ್ನು ಕ್ಷಣ ಮಾತ್ರದಲ್ಲಿ ಸಂಹರಿಸಿದನು. ಈ ಘೋರ ದೃಶ್ಯವನ್ನು ಕಣ್ಣಾರೆ ನೋಡಿದ ಋಷಿಗಳೂ ಮುನಿಗಳೂ ರಾಮಶಕ್ತಿಯನ್ನು ಗುರುತಿಸಿ, ಖಂಡಿತವಾಗಿಯೂ ರಾವಣನನ್ನು ಕೂಡ ಕ್ಷಣದಲ್ಲಿ ಸಂಹರಿಸುವನೆಂದು ತಮ್ಮ ತಮ್ಮೊಳಗೆ ಆನಂದಿಸಿದರು. ರಾಕ್ಷಸ ಸಂಹಾರ ಮಾಡಿ ಲೋಕ ಕಲ್ಯಾಣ ಮಾಡುವ ಪರಮೇಶ್ವರನೇ ರಾಮನೆಂದು ನಿಶ್ಚಯಿಸಿದರು. ಈ ಘೋರ ಸಂಗ್ರಾಮ ಶಾಂತವಾದೊಡನೆಯೇ ಸೀತಾ ಲಕ್ಷ್ಮಣರು ಬಂದು ರಾಮನಿಗೆ ನಮಸ್ಕಾರ ಮಾಡಿದರು. ರಾಮನು ಲಕ್ಷ್ಮಣನನ್ನು ಆಲಂಗಿಸಿಕೊಂಡು ತಾನು ಎರಡು ಗಂಟೆ ಕಾಲ ರಾಕ್ಷಸರೊಂದಿಗೆ ಹೋರಾಡಿದ ವಿವರಗಳನ್ನು ನಸುನಗುತ್ತಾ ಅವನಿಗೆ ಹೇಳಿದನು. ಸೀತೆಯು

ಪರಮಾನಂದಭರಿತಳಾದಳು. ರಾಮನ ದೇಹಕ್ಕೇನಾದರೂ ಗಾಯವಾಗಿದೆಯೇ ಎಂದು ಪ್ರತಿ ಅಂಗವನ್ನೂ ಪರೀಕ್ಷಿಸಿದಳು.

ಎರಡನೇ ದಿನ, ಅನೇಕ ಮಂದಿ ತಾಪಸಿಗಳು ಈ ಮಂಗಳವಾರ್ತೆಯನ್ನು ಕೇಳಿ ಪಂಚವಟೀ ತೀರಕ್ಕೆ ಶಿಷ್ಯವೃಂದದೊಂದಿಗೆ ಗುಂಪು ಗುಂಪಾಗಿ ಬಂದು ರಾಮಚಂದ್ರನನ್ನು ಕೊಂಡಾಡಿದರು. "ಅವರಲ್ಲಿ ಸ್ವಲ್ಪ ಜಾಗ್ರತೆ ವಹಿಸಬೇಕಾಗುವುದು. ರಾಕ್ಷಸರು ನೀತಿ ನಿಜಾಯತಿಗೆ ಅತಿ ವಿರುದ್ಧವಾದವರು. ತಮ್ಮ ಪಾಪವನ್ನು ಯೋಚಿಸರು. ಪರರಿಗೆ ಅಪಕಾರ ಮಾಡುವುದೇ ಅವರ ನಿತ್ಯ ವ್ರತ. ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವುದೇ ಅವರ ಪರಮೋದ್ದೇಶ. ಅವರಿಗೆ ರಾವಣನೆನ್ನುವ ಮತ್ತೊಬ್ಬ ಶಕ್ತಿವಂತ ಅಣ್ಣನಿದ್ದಾನೆ. ಅವನಲ್ಲಿ ಲಕ್ಷಗಟ್ಟಲೆ ಸೈನ್ಯವಿದೆ. ಈ ಹಟಮಾರಿ ಸೋದರಿ ಶೂರ್ಪಣಖಿಯು ಹೋಗಿ ಅವನಿಗೆ ತಿಳಿಸದೆ ಇರುವುದಿಲ್ಲ. ಅವನು ಬಂದೇ ಬರುವನು," ಎಂದು ಹೇಳಿ ಮುನ್ನೆಚ್ಚರಿಕೆ ವಹಿಸಿಸುವಂತೆ ತಿಳಿಸಿದರು. ರಾಮನು, "ಹೌದು, ಹೌದು, ನನಗೆ ತಿಳಿಯದೆ ಇಲ್ಲ. ನಾನು ಬಂದಿರುವುದೇ ಅದಕ್ಕಾಗಿ. ಆ ಶುಭ ಸಮಯಕ್ಕಾಗಿಯೇ ನಾನು ಕಾಯುತ್ತಿದ್ದೇನೆ," ಎಂದು ಹೇಳಿ, ಏನೂ ತಿಳಿಯದವನಂತೆ ನಟಿಸುತ್ತಾ, "ಲಕ್ಷ್ಮಣಾ ಕೇಳಿದೆಯಲ್ಲವೆ?" ಎಂದು ಲಕ್ಷ್ಮಣನನ್ನು ಸೂಚ್ಯವಾಗಿ ನೋಡಿದನು. ಬರಲಿರುವ ಅಪಾಯಕ್ಕೆ ತಾನು ಸಿದ್ಧನಾಗಿರುವುದಾಗಿಯೂ ಅದಕ್ಕೆ ಅವರು ಯೋಚಿಸಬೇಕಾಗಿಲ್ಲವೆಂದೂ ಮುನಿಗಳಿಗೆ ಭರವಸೆಯಿತ್ತು, ಆನಂದವಚನಗಳಿಂದ ಅವರಿಗೆ ಉತ್ಸಾಹವಿತ್ತು ಕಳಿಸಿದನು.

**ಸೋದರಿಯ ವಿಲಾಪ**: ಇತ್ತ, ಮುನಿಗಳು ಮತ್ತು ರಾಮನು ನಿರೀಕ್ಷಿಸಿದಂತೆಯೇ ಶೂರ್ಪಣಖಿಯು ಗೋಳಿಡುತ್ತಾ ವೀರಾಧಿವೀರ ರಾವಣನ ಬಳಿಗೆ ಬಂದಳು. ಅವಳ ಗೋಳನ್ನು ಕೇಳಿ ಲಂಕೆಯ ರಾಕ್ಷಸರೆಲ್ಲರೂ ಆಶ್ಚರ್ಯದಿಂದ ಲಂಕೆಗೇನು ಪ್ರಮಾದ ಬಂದಿತೋ ಎಂದು ತಮ್ಮ ತಮ್ಮಲ್ಲೆ ಗುಂಪು ಗುಂಪಾಗಿ ಬೀದಿಗಳಲ್ಲಿ ಮಾತಾಡಿಕೊಂಡರು. ಶೂರ್ಪಣಖಿಯು ರಾವಣನ ಆಸ್ಥಾನವನ್ನು ಪ್ರವೇಶಿಸಿ, ಮಹಾ ರೋಷ ಹುಟ್ಟಿಸುವ ಮಾತುಗಳನ್ನಾಡಲಾರಂಭಿಸಿದಳು. ಅವಳ ರೂಪ ವಿಕಾರವಾಗಿದೆ, ದೇಹ ರಕ್ತಮಯವಾಗಿದೆ, ಮಾತಿನಲ್ಲಿ ಆಕ್ರೋಶ ತುಂಬಿದೆ. ಇದನ್ನು ನೋಡಿ ರಾವಣನು ಇವಳಿಗೆ ಯಾರೋ ಕೇಡು ಮಾಡಿದ್ದಾರೆಂದು ಊಹಿಸಿ, "ಸೋದರಿ! ತಡಮಾಡದೆ ವಿಷಯ ಏನೆನ್ನುವುದನ್ನು ಹೇಳು," ಎಂದು ಗರ್ಜಿಸಿದನು. ಶೂರ್ಪಣಖಿಯು, "ಅಣ್ಣಾ! ನೀನು ನಿಜವಾಗಿಯೂ ವೀರನೇ ಆದರೆ, ನಿನ್ನ ತಪಶಕ್ತಿ ಪ್ರಬಲವಾದುದೇ ಆದರೆ, ನೀನು ಪರಾಕ್ರಮಿಯೇ ಆದರೆ, ಈ ನಿನ್ನ ಧೈರ್ಯ ಪರಾಕ್ರಮ ವೀರ್ಯಗಳನ್ನು ಪ್ರದರ್ಶಿಸುವ ಸಮಯ

ಬಂದಿದೆ. ಮುಂದೆ ನಿನಗೆ ಬರಲಿರುವ ತೊಂದರೆಗಳನ್ನು ಯೋಚಿಸಿದೆ, ಮದ್ಯಪಾನ ಮತ್ತನಾಗಿ ಸರ್ವವನ್ನೂ ಮರೆತು ನಿದ್ರಿಸುತ್ತಿದ್ದೀಯೆ. ಪಂಚವಟೀ ತೀರದಲ್ಲಿ ಏನಾಗುತ್ತಿದೆ, ಅಲ್ಲಿಗೆ ಯಾರು ಬಂದಿದ್ದಾರೆ, ಅವರು ಏನು ದೀಕ್ಷೆ ಸಾಧಿಸಲು ಬಂದಿದ್ದಾರೆ, ಎನ್ನುವುದನ್ನು ಸ್ವಲ್ಪವೂ ವಿಚಾರಿಸದೆ ಇದ್ದೀಯೆ. ರಾಕ್ಷಸ ಸಂಹಾರಕರಾದ ರಾಜಕುಮಾರರು ದಂಡಕಾರಣ್ಯವನ್ನು ಪ್ರವೇಶಿಸಿದ್ದಾರೆ. ಸಹಸ್ರಗಟ್ಟಲೆ ಸೈನ್ಯವನ್ನು ಕ್ಷಣದಲ್ಲಿ ಧ್ವಂಸ ಮಾಡುತ್ತಿದ್ದಾರೆ.

ಸೋದರರಾದ ಖರದೂಷಣಾದಿಗಳನ್ನು ತುಂಡರಿಸಿದ್ದಾರೆ. ಸಹಸ್ರ ಸಹಸ್ರ ಸಂಖ್ಯೆಯ ಸೈನ್ಯವನ್ನು ಕಣ್ಣು ಮುಚ್ಚಿ ತೆರೆಯುವುದರೊಳಗೆ ನಿರ್ನಾಮ ಮಾಡಿದ್ದಾರೆ. ಅವರ ಪರಾಕ್ರಮ ವರ್ಣನಾತೀತ. ಅವರ ರೂಪವೋ, ಅಬ್ಬಾ!" ಎಂದು, ಕಣ್ಮುಚ್ಚಿ ಕ್ಷಣಕಾಲ ಮಾತನಾಡದೆ ನಿಂತಳು. ರಾವಣನು ರೌದ್ರನಾಗಿ, ಹಲ್ಲುಗಳನ್ನು ಕಟಕಟ ಕಡಿಯುತ್ತಾ, ತೊಡೆಗಳನ್ನು ತಟ್ಟುತ್ತಾ, "ಏನು! ಆ ದುರ್ಮಾರ್ಗಿಗಳು ಖರದೂಷಣಾದಿಗಳನ್ನು ಕೊಂದರೆ? ನನ್ನ ಹೆಸರನ್ನೇ ಅವರು ಕೇಳಿಲ್ಲವೆಂದು ಕಾಣುತ್ತದೆ. ನನ್ನ ಪ್ರತಾಪವನ್ನು ಅವರು ಎಂದೂ ನೋಡಿಲ್ಲವೆಂದು ಕಾಣುತ್ತದೆ," ಎಂದು ತನ್ನ ಪ್ರತಾಪವನ್ನೇ ವರ್ಣಿಸಿಕೊಳ್ಳುತ್ತಿದ್ದುದನ್ನು ನೋಡಿ ಶೂರ್ಪಣಖಿಯು, "ಅಯ್ಯೋ ದೌರ್ಭಾಗ್ಯನೇ! ಶತ್ರುವು ಬಂದು ನೆತ್ತಿಯ ಮೇಲೆ ನೃತ್ಯ ಮಾಡುತ್ತಿರುವಾಗ, ನಿನ್ನ ಪೌರುಷವನ್ನು ನೀನೇ ವರ್ಣಿಸಿಕೊಳ್ಳುತ್ತಾ ಉನ್ಮತ್ತನಂತಾಡುವುದು ರಾಜನ ಲಕ್ಷಣವಲ್ಲ. ಸಾಂಗತ್ಯದಿಂದ ಸನ್ಯಾಸಿಗಳೂ ಮಂತ್ರಿಗಳಿಂದ ರಾಜರೂ ನಾಶವಾಗುವರೆನ್ನುವುದನ್ನೂ ದುರಭಿಮಾನದಿಂದ ಜ್ಞಾನವೂ ಮದ್ಯದಿಂದ ನಾಚಿಕೆಯೂ ನಾಶವಾಗುವೆನ್ನುವುದನ್ನೂ ನೀನು ತಿಳಿದಿಲ್ಲವೆಂದು ಕಾಣುತ್ತದೆ. ಎಲೌ ಸೋದರಾ! ಅಗ್ನಿ, ರೋಗ, ಶತ್ರು, ಹಾವು, ಪಾಪ ಇವು ಸಣ್ಣವೆಂದು ತಾತ್ಸಾರ ಮಾಡಬಾರದು. ಇವು ಪ್ರಬಲವಾದರೆ ಎಂಥ ಭಾರಿ ಅಪಾಯವನ್ನಾದರೂ ಮಾಡಬಲ್ಲವು. ಆದ್ದರಿಂದ, ಆಲಸ್ಯ ಮಾಡದಿರು, ತ್ವರೆಮಾಡು," ಎಂದು ರೋಷಕಾರಿದಳು.

**ದಿವ್ಯ ಮಂಗಳ ವಿಗ್ರಹ**: ಆಗ ಕುಂಭಕರ್ಣನು, "ಸೋದರೀ, ನಿನ್ನ ಕಿವಿ ಮೂಗುಗಳನ್ನು ಕೊಯ್ದವರು ಯಾರು?" ಎಂದು ಮಂದಹಾಸದಿಂದ ಕೇಳಿದನು. "ಆ ರಾಜಕುಮಾರರೇ," ಎಂದಳು ಶೂರ್ಪಣಖಿ. ನಂತರ ರಾವಣನು ಅವಳನ್ನು ಸಮಾಧಾನಪಡಿಸಿ, "ಸೋದರೀ! ಮೂಗಿರುವುದು ಒಂದು ಕಡೆ, ಕಿವಿಗಳಿರುವುದು ಮತ್ತೊಂದು ಕಡೆ, ಎರಡನ್ನೂ ಒಂದೇ ಸಾರಿ ತುಂಡರಿಸುವುದು ಸಾಧ್ಯವಿಲ್ಲ, ಅಲ್ಲವೆ? ಹಾಗಾದರೆ, ಒಂದೊಂದನ್ನೂ ಬೇರೆ ಬೇರೆಯಾಗಿ ಕೊಯ್ಯುವಾಗ ನೀನೇನು ನಿದ್ರೆ ಮಾಡುತ್ತಿದ್ದೀಯಾ?" ಎಂದು ಕೇಳಿದನು. "ಇದು ಪರಮಾಶ್ಚರ್ಯ

ಕರವಾಗಿದೆಯಲ್ಲಾ!" ಎಂದು ಸಭಾಸದರನ್ನುದ್ದೇಶಿಸಿ ಹೇಳಿದನು. ಆ ವೇಳೆಗೆ ಶೂರ್ಪಣಖಿಯು ಮುಚ್ಚಿದ್ದ ಕಣ್ಣುಗಳನ್ನು ತೆರೆದು, "ಅಣ್ಣಾ, ಅವರ ಮೃದುಮಧುರ ವಾದ ಹಸ್ತಗಳು ನನ್ನ ದೇಹಕ್ಕೆ ಸೋಕಿದ ತಕ್ಷಣವೇ ನಾನು ನನ್ನ ದೇಹವನ್ನೆ, ಅಷ್ಟೇಕೆ, ದೇಶವನ್ನೇ ಮರೆತುಹೋದೆ! ಕಣ್ಣುಗಳಿಗೆ ಹತ್ತಿರವಾಗಿ ಪರಮ ಸುಂದರ ಮೋಹನ ಮುಖವನ್ನು ನೋಡುತ್ತಿದ್ದರೆ, ಏನು ಕೊಯ್ದರೋ ಏನು ಮಾಡಿದರೋ ನನಗೇ ತಿಳಿಯದು! ಅವರ ದರ್ಶನವೇ ಅಂಥ ತನ್ಮಯತೆ ಬರಿಸುವುದು! ಅವರ ಸ್ಪರ್ಶ ಮೈಮರೆಸುವುದು! ಅವರೊಂದಿಗೆ ಸಂಭಾಷಣೆ ಮಾಡಿದರಂತೂ ಕೇಳಬೇಕಾ ಗಿಯೇ ಇಲ್ಲ. ಸದಾ ಮುಗುಳ್ನಗೆಯಿಂದ ಕೂಡಿದ ಪ್ರಸನ್ನತೆಯಲ್ಲದೆ ಅವರಲ್ಲಿ ಬೇರೆ ಭಾವವೇ ಗೋಚರಿಸದು. ಪುರುಷರೂ ಕೂಡ ಅವರನ್ನು ನೋಡಿ ಮೋಹಿಸುವರು! ಅವರು ಸಾಕ್ಷಾತ್ ಮನ್ಮಥರೇ. ಅಂಥ ಸೌಂದರ್ಯವನ್ನು ನಾವಿದುವರೆಗೂ ನೋಡಿಲ್ಲ. ನಮ್ಮ ರಾಕ್ಷಸ ಶಕ್ತಿ ಕ್ಷುದ್ರವಾದುದು. ನಮ್ಮ ರೂಪ ಬಹು ವಿಕಾರ, ಅಸಹ್ಯ.

ನೀನು ಒಂದು ಸಾರಿ ಅವರನ್ನು ನೋಡಿದೆಯಾದರೆ ನಿನಗೇ ತಿಳಿಯುವುದು. ಗತಿಸಿದ ಖರದೂಷಣಾದಿ ಸೋದರರು ಸಹಿತ ಅವರೊಂದಿಗೆ ಯುದ್ಧ ಮಾಡಲು ಒಲ್ಲೆವೆಂದರು. ಸೋದರೀ! ಇಂಥ ದಿವ್ಯ ಮಂಗಳ ವಿಗ್ರಹಗಳೊಂದಿಗೆ ಹೇಗೆ ವಿರೋಧ ಕಟ್ಟಿಕೊಳ್ಳುವುದು, ಮನಸ್ಸೊಪ್ಪುತ್ತಿಲ್ಲವಲ್ಲಾ, ಎಂದರು," ಎಂದು ರಾಮ ಲಕ್ಷ್ಮಣರ ರೂಪಲಾವಣ್ಯಗಳನ್ನು ವರ್ಣಿಸಿ ಸಭಾಸದರನ್ನು ಆನಂದಪಡಿಸಿದಳು. ಶೂರ್ಪಣಖಿಯ ಮಾತುಗಳಿಂದ ರಾವಣನೂ ಭ್ರಮಿಸುವಂತಾಯಿತು. ಅವಳಾಡು ತ್ತಿದ್ದ ಮಾತುಗಳು ಅವನಿಗೆ ಬಹಳ ಹಾಯಾಗಿತ್ತು. ಆ ಸುಂದರ ವಿಗ್ರಹಗಳನ್ನು ನೋಡಬೇಕೆಂದು ಒಳಗೊಳಗೇ ಅವನಿಗೆ ತೀವ್ರ ಆಸೆಯಾಗುತ್ತಿತ್ತು. ಅವನಲ್ಲಿ ಉದ್ರೇಕಗೊಂಡಿದ್ದ ಕ್ರೋಧಾಗ್ನಿ ತಣ್ಣಗಾಗುತ್ತಾ ಬರುತ್ತಿತ್ತು. ಶಾಂತನಾಗಿ, ಅವರನ್ನು ಸಂಧಿಸಿ ವಿಷಯವೇನೆಂದು ತಿಳಿದುಕೊಳ್ಳುವುದು ಒಳ್ಳೆಯದೆಂದು ತನ್ನೊಳಗೇ ತೀರ್ಮಾನಿಸಿದನು. ನಂತರ, "ಸೋದರೀ! ಪಂಚವಟಿಯಲ್ಲಿ ಅವರಿಬ್ಬರು ರಾಜ ಕುಮಾರರು ಮಾತ್ರವೇ ವಾಸ ಮಾಡುತ್ತಿದ್ದರೋ ಅಥವಾ ಅವರ ಪರಿವಾರವೂ ಇದೆಯೋ?" ಎಂದು ಪ್ರಶ್ನಿಸಿದನು.

ಶೂರ್ಪಣಖಿಯು, "ಅಣ್ಣಾ, ಪರಿವಾರ, ಬಂಧು ಬಳಗ ಯಾರೂ ಅವರೊಂದಿ ಗಿಲ್ಲ. ಅವರಲ್ಲಿ ಹಿರಿಯವನಾದ ರಾಮನಿಗೆ ಲೋಕ ಸುಂದರಿಯಾದ ಒಬ್ಬಳು ಪತ್ನಿ ಇದ್ದಾಳೆ. ಅವರನ್ನು ಮೀರಿಸಿದ ಸೌಂದರ್ಯ ಅವಳದು, ಅವಳು ಸಾಕ್ಷಾತ್ ರತಿಯೇ. ಅವಳೊಂದಿಗೆ ಅವರಿಬ್ಬರೂ ಪಂಚವಟಿಯಲ್ಲಿ ನಿರ್ಭಯವಾಗಿ, ಸ್ವೇಚ್ಛೆ ಯಾಗಿ ಸಂಚರಿಸುತ್ತಿದ್ದಾರೆ. ನಿಜವಾಗಿಯೂ ನೀನಂಥ ಸ್ತ್ರೀಯನ್ನು ಎಂದೂ ಯಾವ ಲೋಕದಲ್ಲೂ ನೋಡಿಲ್ಲವೆಂದೇ ಹೇಳುತ್ತೇನೆ," ಎಂದಳು.

# ೨೧ ಮಾಯಾವಿ

**ಯೋಗ ಭ್ರಷ್ಟರು**: ಶೂರ್ಪಣಖಿಯ ಮಾತುಗಳನ್ನು ಕೇಳಿದ ಮರುಗಳಿಗೆಯೇ ಕಾಮಾಂಧನಾದ ರಾವಣನು ದುರ್ಬುದ್ಧಿಗೆ ಬದ್ಧನಾಗಿ, ರಾಮಲಕ್ಷ್ಮಣಾದಿಗಳ ಮೇಲಿನ ಕ್ರೋಧವನ್ನು ಬಿಟ್ಟು, ಸೀತಾಪಹರಣಕ್ಕಾಗಿ ಚಿತ್ರ ವಿಚಿತ್ರವಾದ ಸನ್ನಾಹಗಳನ್ನು ಯೋಚಿಸಲಾರಂಭಿಸಿದನು. ನಿದ್ರಾಹಾರಗಳನ್ನು ಸಹಿತ ಬಿಟ್ಟು ಆ ಒಂದೇ ಯೋಚನೆಯಲ್ಲಿ ಮುಳುಗಿದನು.

ಆ ಸಭೆಯಲ್ಲಿ ರಾಮಲಕ್ಷ್ಮಣರ ಸೌಂದರ್ಯ ಗುಣಾತಿಶಯಗಳನ್ನು ಸೋದರಿ ಶೂರ್ಪಣಖಿಯು ಹೇಳಿದ್ದನ್ನು ವಿಭೀಷಣನು ಅತ್ಯಂತ ಆನಂದದಿಂದ ಕೇಳುತ್ತಾ ಆನಂದಬಾಷ್ಪಗಳನ್ನು ಸುರಿಸುತ್ತಾ ಮೈಮರೆತು, ಆ ಸುಂದರ ವಿಗ್ರಹಗಳನ್ನು ತನ್ನ ಹೃದಯದಲ್ಲಿ ಪ್ರತಿಷ್ಠಿಸಿಕೊಂಡು, ಅವರನ್ನು ಪ್ರತ್ಯಕ್ಷವಾಗಿ ಎಂದು ನೋಡುವೆನೋ ಅವರನ್ನೆಂದು ಸೇರುವೆನೋ ಎಂದು ಚಿಂತಿಸಿದನು. ಅವರು ಸಾಕ್ಷಾತ್ ದೈವ ಸ್ವರೂಪರೇ; ಕೇವಲ ರಾಕ್ಷಸ ಸಂಹಾರಕ್ಕಾಗಿ ಅವತರಿಸಿದ ನರರೂಪಿಗಳು ಎಂದು ದೃಢ ಮಾಡಿಕೊಂಡನು. ಅವರಿಗೆ ತನ್ನ ಸರ್ವಸ್ವವನ್ನೂ ಅರ್ಪಿಸಿ ಅಂದಿನಿಂದ ಅವರನ್ನೇ ಸ್ಮರಿಸುತ್ತಾ ಜೀವಿಸಲಾರಂಭಿಸಿದನು.

ರಾವಣನು ಯೋಗಭ್ರಷ್ಟನಾದ್ದರಿಂದ ರಾಕ್ಷಸಾಕಾರನಾಗಿ, ರಾಕ್ಷಸನಾಯಕನಾಗಿ ಸನ್ಚರಿಸುತ್ತಿದ್ದನು. ಆದರೆ ಅವನು ಪರಮಾತ್ಮನ ಪರಮಭಕ್ತ. ಅವನಿಗೆ ಶ್ರೀಮನ್ನಾರಾಯಣನ ತತ್ತ್ವ ತಿಳಿಯದ್ದೇನಲ್ಲ. ರಾಮನು ಸಾಕ್ಷಾತ್ ಶ್ರೀಮನ್ನಾರಾಯಣನೆನ್ನುವುದನ್ನು ಅವನು ಗುರುತಿಸಿದ್ದನು. ದೇವತೆಗಳಿಗೆ ಸಂತೋಷವುಂಟುಮಾಡಲು, ಲೋಕದಲ್ಲಿ ರಾಕ್ಷಸತ್ವವನ್ನು ನಾಶಮಾಡಲು ಅವನು ನಾರಾಯಣನನ್ನು ಹೊಂದುವ ಅನ್ಯಮಾರ್ಗವಿಲ್ಲದೆ, ಈ ವಿಧವಾದ ಹಠತೊಟ್ಟು, ಅವನೊಂದಿಗೆ ವಿರೋಧವನ್ನು ಬಲಪಡಿಸಿಕೊಂಡು, ಅವನ ಬಾಣದಿಂದಲೇ ತಾನು ಸಾಯಬೇಕೆಂದು ಆಶಿಸಿದ್ದನು. ಆ ತಾಮಸ ಶರೀರದಿಂದಲೇ ಅವನನ್ನು ಭಜಿಸಿ ಭವಸಾಗರವನ್ನು ದಾಟಬೇಕೆನ್ನುವುದು ಅವನ ಸ್ಥಿರ ಸಂಕಲ್ಪವಾಗಿತ್ತು. ಆದರೆ, ರಾಕ್ಷಸನ ಬುದ್ಧಿ ಪ್ರಭಾವದಿಂದ ಹುಟ್ಟಿ ಬೆಳೆದ ಶರೀರವಾದುದರಿಂದ ದೈವಭಾವವನ್ನು ಮರೆತು ದಾನವ ಗುಣದಿಂದ ವಿಚಾರ ಮಾಡಲಾರಂಭಿಸಿದನು. ದೈವಭಾವ ದಾನವಭಾವಗಳ ಹೊಯ್ದಾಟಕ್ಕೆ

ಸಿಕ್ಕಿದ್ದನಾದ್ದರಿಂದ, ಅವರಾರೋ ರಾಜಪುತ್ರರೆಂದೂ ಆ ರಾಜಪುತ್ರರನ್ನು ಸಂಹರಿಸಿ, ಆ ಸ್ತ್ರೀಯನ್ನು ಹಿಡಿದು ತರುವುದಾಗಿಯೂ ತನ್ನ ಸೋದರಿಗೆ ವಾಗ್ದಾನವಿತ್ತನು.

**ಮಾರೀಚನು**: ಸಭೆಯನ್ನು ಮುಗಿಸಿ, ರಥವನ್ನು ತರುವಂತೆ ಭಟರಿಗೆ ಆಜ್ಞಾಪಿಸಿ, ಆ ರಥದಲ್ಲಿ ಒಂಟಿಯಾಗಿ, ಸಮುದ್ರ ತೀರದಲ್ಲಿದ್ದ ಮಾರೀಚನ ಮನೆಗೆ ಹೊದನು. ನಡೆದ ಸಂಗತಿಯನ್ನೆಲ್ಲಾ ಮಾರೀಚನಿಗೆ ಹೇಳಿ, ಮಾರೀಚನು ತನ್ನ ಕಾರ್ಯದಲ್ಲಿ ಪಾಲ್ಗೊಳ್ಳುವಂತೆ ಆಜ್ಞಾಪಿಸಿದನು. ಆದರೆ ಮಾರೀಚನು ತಾನು ರಾಮಲಕ್ಷ್ಮಣರ ಶಕ್ತಿ ಸಾಮರ್ಥ್ಯವನ್ನು ಈಗಾಗಲೇ ಅನುಭವಿಸಿರುವುದಾಗಿಯೂ ಅವರು ಸಾಮಾನ್ಯ ರಲ್ಲವೆಂದೂ ಅನೇಕ ವಿಧವಾಗಿ ರಾವಣನಿಗೆ ಹೇಳಿದನು. ಕಾಮಾಂಧನಾದ ರಾಕ್ಷಸನಿಗೆ ತನ್ನ ಕರ್ತವ್ಯವನ್ನು ನಿರ್ಣಯಿಸುವ ಶಕ್ತಿಸಾಮರ್ಥ್ಯಗಳು ಶೂನ್ಯವಾಗಿತ್ತಾದ್ದರಿಂದ, ರಾವಣನು ಮಾರೀಚನನ್ನು ಶಿಕ್ಷಿಸುವ ಬೆದರಿಕೆ ಹಾಕಿದನು. ಮಾರೀಚನು, ಈ ರಾಕ್ಷಸನ ಕೈಯಲ್ಲಿ ಸಾಯುವುದಕ್ಕಿಂತ ರಾಮನ ಕೈಗಳಲ್ಲಿ ಪ್ರಾಣ ಬಿಡುವುದೇ ಲೇಸೆಂದು ತನ್ನೊಳಗೇ ಆಲೋಚಿಸಿ, ರಾವಣನ ಇಷ್ಟದಂತೆ ನಡೆಯಲು ಒಪ್ಪಿದನು.

ರಾವಣನು ಮಾರೀಚನನ್ನು ಜೊತೆಯಲ್ಲಿಟ್ಟುಕೊಂಡು ದಂಡಕಾರಣ್ಯಕ್ಕೆ ಹೊರಟನು. ದಾರಿಯಲ್ಲಿ ತಾನು ಯೋಚಿಸಿರುವ ಸನ್ನಾಹವನ್ನು ಮಾರೀಚನಿಗೆ ವಿವರಿಸಿದನು. ತನ್ನ ರಾಕ್ಷಸ ಶಕ್ತಿಯಿಂದ ಮಾರೀಚನು ಜಿಂಕೆಯ ರೂಪತಾಳುವಂತೆಯೂ ಸೀತಾ ರಾಮಲಕ್ಷ್ಮಣರು ವಾಸವಾಗಿದ್ದ ಪರ್ಣಶಾಲೆಯ ಮುಂದೆ ವಿಚಿತ್ರವಾಗಿ ಆಟವಾಡುತ್ತಿರುವಂತೆಯೂ ಆಜ್ಞಾಪಿಸಿದನು. ಬೇರೆ ಮಾರ್ಗವಿಲ್ಲದೆ, ಮಾರೀಚನು ಒಪ್ಪಿದನು. "ರಾಮನು ನಿನ್ನನ್ನು ಹಿಡಿಯಲು ಅಟ್ಟಿಸಿಕೊಂಡು ಬರುವನು. ನೀನು ದೂರದ ಪ್ರದೇಶಕ್ಕೆ ಓಡಿಹೋಗು. ಅಲ್ಲಿ, ಸೀತೆ ಮತ್ತು ಲಕ್ಷ್ಮಣನಿಗೆ ಕೇಳುವ ಹಾಗೆ, 'ಹಾ ಸೀತಾ, ಹಾ ಲಕ್ಷ್ಮಣಾ,' ಎಂದು ರಾಮನ ಕಂಠಸ್ವರದಲ್ಲಿ ಕೂಗು. ಆಮೇಲೆ ಏನು ಮಾಡಬೇಕೋ ಅದನ್ನು ನಾನು ಮಾಡುತ್ತೇನೆ," ಎಂದು ಹೇಳಿದನು. ಇಬ್ಬರೂ ರಥದಲ್ಲಿ ಚಿತ್ರಕೂಟಕ್ಕೆ ಹೊರಟರು.

**ಲೋಕಾಧಾರ ವೃತ್ತಿಗಳು**: ಇತ್ತ, ಚಿತ್ರಕೂಟ ಪರ್ವತದಲ್ಲಿ, ತಾನು ಯೋಚಿಸಿದ ಕಾರ್ಯ ಪ್ರಾರಂಭವಾಯಿತೆನ್ನುವುದನ್ನು ತಿಳಿದ ರಾಮನು, ಕಂದಮೂಲಾದಿ ಫಲಗಳನ್ನು ತರುವಂತೆ ಲಕ್ಷ್ಮಣನಿಗೆ ಆಜ್ಞಾಪಿಸಿದನು. ಇದೇ ಸಮಯವೆಂದು, ಪರ್ಣಶಾಲೆಯಲ್ಲಿ ಸೀತೆಯೊಡನೆ ಸಂಭಾಷಣೆ ಪ್ರಾರಂಭಿಸಿದನು. "ಸಖೀ! ನಿನಗೆ ಎಲ್ಲವೂ ತಿಳಿದಿದೆ. ನಾವು ಯಾವ ಕಾರ್ಯಕ್ಕಾಗಿ ಈ ಭೂಲೋಕಕ್ಕೆ ಬಂದೆವೋ ನಮ್ಮಿಬ್ಬರಿಗೂ ತಿಳಿದಿದೆ. ನಾವು ಬಂದ ಕಾರ್ಯ ಈಗ ಪ್ರಾರಂಭವಾಯಿತು. ನಿನ್ನ ಗುಣಶೀಲಗಳು ಮಹಾ ಪವಿತ್ರವಾದವುಗಳು. ನಾವು ಈ ಕಾಯಗಳನ್ನು

ಪಡೆದಿರುವುದು ಅಗ್ನಿಹೋತ್ರಾದಿ ಕರ್ಮಗಳಿಂದ, ಅಂದರೆ, ಅಗ್ನಿದೇವನು ತಂದ ಪಾಯಸದಿಂದ ನನ್ನ ಕಾಯವೂ ಯಜ್ಞಕಾರ್ಯಕ್ಕೆ ಅಗ್ನಿ ಹೋಮಕುಂಡಗಳನ್ನು ಸ್ಥಾಪಿಸುವ ಪ್ರದೇಶವನ್ನು ನಿನ್ನ ತಂದೆ ಉಳುತ್ತಿದ್ದಾಗ ನಿನ್ನ ಕಾಯವೂ ಬಂದಿತು. ಹೀಗೆ ಅಗ್ನಿಯೇ ನಮ್ಮ ದೇಹಗಳಿಗೆ ಕಾರಣವಾಗಿದೆ. ಆದ್ದರಿಂದ, ನೀನಿನ್ನು ನಿನ್ನ ದಿವ್ಯ ವಿಭೂತಿಗಳೆಲ್ಲವನ್ನೂ ಬಿಟ್ಟು, ಸಾಮಾನ್ಯ ಮಾನವಳಂತೆ ಪ್ರವರ್ತಿಸು.

ನಾನೂ ಸಾಮಾನ್ಯ ಮಾನವ ಮಾತ್ರನಂತೆ ಪ್ರವರ್ತಿಸುತ್ತಾ ನಿನಗಾಗಿ ವಿರಹ ಶೋಕಾದಿಗಳನ್ನು ತೋರಿಸುವೆನು. ಈ ವಿನೋದವನ್ನು ನೋಡುವ ಲೋಕದ ಜನರು ನಮ್ಮ ಸಾಮಾನ್ಯವಾದ ನಡೆವಳಿಕೆಯನ್ನೇ ದೃಷ್ಟಿಯಲ್ಲಿಟ್ಟುಕೊಳ್ಳುವರು. ಅವುಗಳನ್ನೇ ಲೋಕಾಧಾರವಾದ ನಡೆವಳಿಕೆಯೆಂದು ಭಾವಿಸುವರು. ನಾವು ಮಾಡುವ ಪ್ರತಿಕಾರ್ಯವೂ ಸಂಸಾರಿಗಳಿಗೆ ಆದರ್ಶವಾದುದಾಗಿರಬೇಕು. ಸತಿ ಪತಿಯರ ಸಭ್ಯವರ್ತನೆಗೆ ಚ್ಯುತಿ ಬರದಂತೆ, ಸತ್ಯ ಧರ್ಮಗಳಿಗೆ ವಿರುದ್ಧವಾಗಿರ ದಂತೆ, ಶಾಸ್ತ್ರಸಮ್ಮತವಾದ ಮಾರ್ಗ ಬಿಡದಂತೆ, ಸಾಮಾನ್ಯ ಮಾನವರಿಗೆ ಆದರ್ಶ ಪ್ರಾಯವಾದ ಜೀವಿತವನ್ನು ನಡೆಸುತ್ತಾ ರಾವಣ ರಾಕ್ಷಸ ಸಂಹಾರದವರೆಗೆ ನಾವು ಈ ನಾಟಕವನ್ನು ಆಡಬೇಕಾಗಿದೆ. ಅಲ್ಲಿಯವರೆಗೆ ನಿನ್ನ ದಿವ್ಯ ರೂಪವನ್ನು ಅಗ್ನಿಯಲ್ಲಿರಿಸಿ, ಸಾಮಾನ್ಯ ಮಾಯಾ ಮಾನುಷ ವಿಗ್ರಹಧಾರಿಯಾಗಿ ನಡೆದುಕೊ. ಕಾರಣವಿಲ್ಲದ ಕಾರ್ಯ ಲೋಕ ವಿರುದ್ಧವಾದುದು. ನಿಷ್ಕಾರಣವಾಗಿ ರಾಕ್ಷಸರ ಸಂಹಾರ ಆಗಬೇಕಾದರೂ ಧರ್ಮ ವಿರುದ್ಧವಲ್ಲದ ಕಾರಣವನ್ನು ತೋರಿಸಿ ಕಾರ್ಯವೆಸಗಬೇಕು.

ಕಾರ್ಯ ಕಾರಣಗಳಿಗೆ ಅವಿನಾಭಾವ ಸಂಬಂಧವಿದೆ. ನಿನ್ನನ್ನು ರಾವಣ ಅಪಹರಿಸಿ ಕೊಂಡು ಹೋದಂತೆ ತೋರಿಸಿ, ಅವನ ಕಾಮಪ್ರವೃತ್ತಿಯನ್ನು ಲೋಕಕ್ಕೆ ವ್ಯಕ್ತಪಡಿಸ ಬೇಕಾಗುವುದು. ಅಷ್ಟೇ ಅಲ್ಲದೆ, ಅವನ ಭಕ್ತಿ ಪ್ರಪತ್ತಿಗಳೂ ಉತ್ತಮವಾದುವುಗಳಲ್ಲ ಎನ್ನುವುದನ್ನು ಕೂಡ ಆಸ್ತಿಕ ಲೋಕಕ್ಕೆ ತಿಳಿಸುವುದವಶ್ಯಕ. ಚಿತ್ತಶುದ್ಧಿ ಇಲ್ಲದ ಆಚಾರ ವ್ಯವಹಾರಗಳು ಅಲ್ಪಕಾರ್ಯಗಳೆಂದೂ ತಪಸ್ಸು ಯಜ್ಞಯಾಗಾದಿಗಳನ್ನು ಎಷ್ಟು ಘೋರವಾಗಿ, ಎಷ್ಟು ಸಂಭ್ರಮದಿಂದ ಮಾಡಿದರೂ ಅವು ಕ್ಷುದ್ರ ಸಾಧನೆಗಳೆ ನ್ನುವ ಸತ್ಯವನ್ನು ಲೋಕಕ್ಕೆ ಸ್ಪಷ್ಟ ಮಾಡುವುದವಶ್ಯಕ. ರಾಕ್ಷಸ ಸ್ವಭಾವಗಳನ್ನು ಬಿಡದೆ ದೈವಕಾರ್ಯಗಳನ್ನೆಷ್ಟು ಮಾಡಿದರೂ ಕೂಡ ಕಾಲವನ್ನು ಅಪವಿತ್ರ ಮಾಡಿದಂ ತೆಯೇ ಸರಿಯೆನ್ನುವುದನ್ನು, ರಾವಣನನ್ನು ನಿದರ್ಶನವಾಗಿಟ್ಟುಕೊಂಡು ಲೋಕಕ್ಕೆ ನಿರೂಪಿಸಬೇಕು. ಇದೆಲ್ಲದರ ಜೊತೆಗೆ, ಆತನಿಗೆ ಕೊಟ್ಟ ಶಾಪವೂ ಕೂಡ ಅದರ ಕೆಲಸವನ್ನು ಮಾಡುವುದು. ರಾವಣನ ವಿನಾಶ ಕಾಲವು ಪ್ರಾರಂಭವಾಯಿತು. ಇಂದೋ ನಾಳೆಯೋ ನಮ್ಮ ವಿಯೋಗವು ಪ್ರಾರಂಭವಾಗುವುದು. ನಮಗೆಂದಿಗೂ

ವಿಯೋಗ ಬರುವುದಿಲ್ಲ. ಆದರೆ, ಲೋಕವ್ಯವಹಾರಕ್ಕಾಗಿ ಹಾಗೆ ತೋರಿಸಬೇಕಾಗಿದೆ. ತಕ್ಷಣವೇ ಹೋಗಿ ನೀನು ನಿನ್ನ ದಿವ್ಯ ರೂಪವನ್ನು ಅಗ್ನಿಯಲ್ಲಿ ಸೇರಿಸಿ ಬಾ. ಲಕ್ಷ್ಮಣನು ಫಲಗಳೊಂದಿಗೆ ಹಿಂತಿರುಗುವ ಸಮಯವಾಯಿತು. ರಾವಣನೂ ಸಹ ತನ್ನ ವಿಕಾರ ಬುದ್ಧಿಯಿಂದ ಸರ್ವಸಿದ್ಧನಾಗಿದ್ದಾನೆ," ಎಂದು ಹೇಳಿದನು.

ಹಾಗೇ ಮತ್ತೊಂದು ರಹಸ್ಯವಾದ ವಿಷಯವನ್ನೂ ರಾಮನು ತಿಳಿಸಿದನು. "ನೀನು ಅಗ್ನಿಯನ್ನು ಪ್ರವೇಶಿಸಿ, ರಾಕ್ಷಸ ಸಂಹಾರ ಕಾರ್ಯದಲ್ಲಿ ನೀನೂ ಭಾಗವಹಿಸಬೇಕು. ನಿಮಿತ್ತ ಮಾತ್ರವಾಗಿ ಸಾಮಾನ್ಯ ರೂಪದಿಂದ ನೀನು ರಾವಣನ ಅಧೀನದಲ್ಲಿರುವಾಗ, ನಿನ್ನ ಶಕ್ತಿಯು ಅಗ್ನಿಯಲ್ಲಿರುವುದು. ಆ ಅಗ್ನಿರೂಪದ ನೀನು ಲಂಕೆಯನ್ನು ಭಸ್ಮಮಾಡಬೇಕು. ಲಂಕೆಯನ್ನು ಭಸ್ಮಮಾಡುವುದು ಅಗ್ನಿಯಲ್ಲ, ನೀನೇ. ಅಂದರೆ, ಸೀತೆಯೇ ಲಂಕೆಯನ್ನು ಭಸ್ಮಮಾಡಿದ್ದು, ರಾಮನೇ ರಾವಣನನ್ನು ಕೊಂದಿದ್ದು ಎನ್ನುವ ಸತ್ಯವನ್ನು ಲೋಕಕ್ಕೆ ಅರ್ಥವಾಗುವಂತೆ ಮಾಡಬೇಕು. ಈ ಚಮತ್ಕಾರಗಳು ಲಕ್ಷ್ಮಣನಿಗೆ ಸಹ ತಿಳಿಯಬಾರದು. ಲಕ್ಷ್ಮಣನು ನಮ್ಮ ಸಹಾಯಕನೇ ವಿನಾ ಅನ್ಯಶಕ್ತಿಯ ಸಂಬಂಧ ಅವನಿಗಿಲ್ಲ. ಈ ಕಾರ್ಯವು ಪೂರ್ತಿಯಾದ ಮೇಲೆ ನಾವು ಮತ್ತೆ ಅಯೋಧ್ಯೆಯನ್ನು ಪ್ರವೇಶಿಸುವ ಕಾಲದಲ್ಲಿ ನಿನ್ನನ್ನು ಅಗ್ನಿಯಿಂದ ಸ್ವೀಕರಿಸುತ್ತೇನೆ. ಅದೂ ಕೂಡ ಲೋಕಕ್ಕೆ ಒಂದು ಆದರ್ಶವೇ ಆಗುವಂತೆ ನಿರೂಪಿಸುತ್ತೇನೆ," ಎಂದು ಹೇಳಿದನು. ತಮ್ಮ ನಾಟಕ ಇಂದಿನಿಂದ ಪ್ರಾರಂಭವಾಗುವುದೆಂದು ಇಬ್ಬರೂ ಸಿದ್ಧ ಮಾಡಿಕೊಂಡು, ರಾವಣನ ಆಗಮನಕ್ಕಾಗಿ ಸಿದ್ಧರಾದರು. ಅಂದಿನಿಂದ ಸೀತಾರಾಮರು ಅನುಭವಿಸಿದ ಲೌಕಿಕ ವಿಯೋಗ ತೊಂದರೆ ಶೋಕ ವೇದನೆಗಳು ಕೇವಲ ನಾಟಕವೇ ವಿನಾ ಸತ್ಯವಾದುದಲ್ಲ. ಅವರಿಬ್ಬರಿಗೂ ವಿಯೋಗವೇ ಇಲ್ಲ. ವಿಯೋಗದ ಮೂಲಕ ಮಾನವರಿಗೆ ನೀತಿಯನ್ನು ಬೋಧಿಸುವುದು ಇದರ ಉದ್ದೇಶ.

**ಸ್ವರ್ಣ ಮೃಗ**: ಇಷ್ಟರಲ್ಲಿ, ಲಕ್ಷ್ಮಣನು ಫಲಗಳೊಂದಿಗೆ ಪ್ರವೇಶಿಸಿದನು. ಎಲ್ಲರೂ ಆ ಫಲಗಳನ್ನು ತಿಂದು ನೀರು ಕುಡಿದು, ಪ್ರಕೃತಿ ಸೌಂದರ್ಯವನ್ನೂ ರಾಕ್ಷಸರ ಪ್ರವರ್ತನೆಯನ್ನೂ ಕುರಿತು ಮಾತನಾಡುತ್ತಾ ಅರಣ್ಯವಾಸ ಬಹು ಆನಂದದಾಯಕವಾಗಿದೆ ಎನ್ನುವಂತೆ ಸಂತೋಷದಿಂದಿದ್ದರು. ಆಶ್ರಮವನ್ನು ಸಮೀಪಿಸಿದ ರಾವಣ ಮಾರೀಚರು ಹೇಗೆ ಪ್ರವೇಶಿಸಬೇಕೆಂದು ತಮ್ಮ ತಮ್ಮೊಳಗೆ ವಿಚಾರಮಾಡುತ್ತಿದ್ದರು. ಮಾರೀಚನು ದುಷ್ಟನಾದ ರಾವಣನ ದುರ್ಬುದ್ಧಿಗೆ ಅಸಹ್ಯಪಟ್ಟು, ಅವನನ್ನು ಎದುರಿಸುವ ಶಕ್ತಿಯಿಲ್ಲದೆ ಅವನ ಕೈಯಲ್ಲಿ ಸಾಯಲೊಲ್ಲದೆ, ಏನೂ ಮಾಡಲಾರದ ಸ್ಥಿತಿಯಲ್ಲಿ ರಾವಣನ ಇಷ್ಟದಂತೆ ನಡೆಯಲು ಸಿದ್ಧನಾದನು.

ಸೀತಾ ರಾಮರನ್ನು ಆಕರ್ಷಿಸಲು ಒಂದು ಸುಂದರವಾದ ಜಿಂಕೆ ರೂಪವನ್ನು ಧರಿಸಿ, ಮಾರೀಚನು ತನ್ನಲ್ಲೇ ಹೀಗೆ ಯೋಚಿಸುತ್ತಾನೆ; "ಆಹಾ! ಈ ದಿನ ಎಂಥ ಸುದಿನ. ಕೆಲವೇ ನಿಮಿಷಗಳಲ್ಲಿ ಅತಿ ಲೋಕಸುಂದರವಾದ ತ್ರಿಮೂರ್ತಿಗಳನ್ನು ದರ್ಶಿಸುತ್ತೇನೆ. ಸೀತೆಯ ದೃಷ್ಟಿ ನನ್ನ ಮೇಲೆ ಗಾಢವಾಗಿ ಬೀಳುವುದು. ಆಮೇಲೆ, ರಾಮನು ಧನುರ್ಬಾಣ ಧಾರಿಯಾಗಿ ನನ್ನನ್ನು ಅಟ್ಟಿಸಿಕೊಂಡು ನನ್ನ ಹಿಂದೆ ಬರುವನು. ರಾಮನನ್ನು ಅನುಸರಿಸಬೇಕಾದ ದಾಸನಾದ ನನ್ನನ್ನು ರಾಮನೇ ಅನುಸರಿಸುವನೆಂದ ಮೇಲೆ ನಾನೆಷ್ಟು ಧನ್ಯ! ನಾನು ಮಾಡುತ್ತಿರುವುದು ಮಹಾ ಪಾಪವಾದರೂ ಬುದ್ಧಿ ಪೂರ್ವಕವಾಗಿ ನಾನು ಮಾಡುತ್ತಿಲ್ಲ. ಬಲಾತ್ಕಾರಕ್ಕೊಳಗಾಗಿ ಮಾಡುತ್ತಿದ್ದೇನೆ. ಆದ್ದರಿಂದ ಇದು ನನ್ನ ತಪ್ಪಲ್ಲ. ರಾಮಬಾಣ ರಾಮ ಹಸ್ತದಿಂದ ಹೊರಟು ನನ್ನ ಕಾಯವನ್ನು ಸೋಕುವುದು. ಆಗ ಈ ಮಾಯಾದೇಹವನ್ನು ಬಿಡುವೆನು. ಅದೇ ನನ್ನ ಮಹಾಪ್ರಾಪ್ತಿ. ಇದು ಎಲ್ಲರಿಗೂ ಸಾಧ್ಯವೇ? ಅಷ್ಟೇ ಅಲ್ಲ, ನಾನು ಕಾಯವನ್ನು ಬಿಡುವಾಗ ನನ್ನ ಕಣ್ಣುಗಳು ರಾಮನನ್ನು ನೋಡುತ್ತಿರುವುವು. ಆ ಸುಂದರ ವಿಗ್ರಹವೇ ನನ್ನ ಮುಂದಿರುವುದು. ಆ ಮಂಗಳ ನಾಮವೇ ನನ್ನ ನಾಲಗೆಯ ಮೇಲಿರುವುದು. ಆಹಾ! ಎಷ್ಟು ಧನ್ಯ! ನನಗಿಂತ ಪುಣ್ಯಾತ್ಮ ಮತ್ತೊಬ್ಬನಿಲ್ಲ," ಎಂದು ತನ್ನಲೇ ಸದ್ವಿಚಾರ ಮಾಡುತ್ತಾ ಪರ್ಣಶಾಲೆಯತ್ತ ಹೊರಟನು. ಅತ್ತ, ಸರ್ವಜ್ಞರಾದ ಸೀತಾರಾಮರು ಅವರ ಬರುವಿಗಾಗಿ ಕಾದಿದ್ದರು.

**ಸೀತೆಯ ಕೋರಿಕೆ**: ಪರ್ಣಶಾಲೆಯ ಮುಂದೆ ಆ ಕಪಟ ಮೃಗವು ಚಿಮ್ಮುತ್ತಾ ಬೆದರುತ್ತಾ ಅತ್ತಿತ್ತ ಓಡುತ್ತ, ದೃಷ್ಟಿಯನ್ನು ಮಾತ್ರ ಸೀತಾರಾಮರ ಮೇಲಿಟ್ಟು ಅವರನ್ನೇ ನೋಡುತ್ತಾ ಓಡಿ ಪೊದೆಯೊಳಗೆ ಮರೆಯಾಗುತ್ತಾ ಮತ್ತೆ ಕಾಣಿಸಿ ಕೊಳ್ಳುತ್ತಾ ಹೀಗೆ ಆಟವಾಡಲಾರಂಭಿಸಿತು. ಸೀತಾರಾಮಲಕ್ಷ್ಮಣರು ಮುಗುಳ್ನುತ್ತಾ ಆ ಮೃಗದ ಸೌಂದರ್ಯವನ್ನು ವರ್ಣಿಸತೊಡಗಿದರು. ಸುವರ್ಣ ಚರ್ಮದ ಜಿಂಕೆಯಾದ್ದರಿಂದ ಅದೊಂದು ನೂತನ ಜಾತಿಯ ಜಿಂಕೆಯೆಂದು ಮಾತನಾಡಿ ಕೊಂಡರು. ಸೀತೆಯು, "ನಾಥಾ! ಎಂಥ ಸುಂದರ ವಿಗ್ರಹವಿದು! ಇದನ್ನು ನಮ್ಮ ಜೊತೆಯಲ್ಲಿಟ್ಟುಕೊಂಡರೆ, ನನಗೆ ಕಾಲವು ಆನಂದವಾಗಿ ಹೋಗುವುದಲ್ಲವೆ? ಒಂದೊಂದು ಸಾರಿ ನೀವಿಬ್ಬರೂ ಕೆಲಸಕಾರ್ಯಗಳಲ್ಲಿ ಮಗ್ನರಾಗಿರುವಾಗ ನಾನು ಈ ಮೃಗದೊಂದಿಗೆ ಆಡಿಕೊಳ್ಳುತ್ತಾ ಕಾಲಕಳೆಯಬಹುದಲ್ಲವೆ? ದಯಮಾಡಿ ಆ ಮೃಗವನ್ನು ಹಿಡಿಯುವಿರಾ? ನನ್ನ ವಿನೋದಕ್ಕಾಗಿ ಈ ಒಂದು ಸಣ್ಣ ಸಹಾಯ ಮಾಡುವಿರಾ?" ಎಂದು ಅತ್ಯಂತ ಪ್ರೀತಿಯಿಂದ ಕೇಳಿಕೊಳ್ಳುತ್ತಿದ್ದುದನ್ನು ನೋಡಿ, ಲಕ್ಷ್ಮಣನು, "ತಾಯೀ, ನಾನು ಹಿಡಿದು ತರುತ್ತೇನೆ," ಎಂದು ಎದ್ದು ನಿಂತನು. ರಾಮನು ಅವನನ್ನು ತಡೆದು ನಿಲ್ಲಿಸಿ ಜಿಂಕೆಯ ಕಪಟ ನಾಟಕವನ್ನು ಲಕ್ಷ್ಮಣನು

ತಿಳಿಯದವನಾದ್ದರಿಂದ, ಅವನಿಗೆ ಅದು ದಕ್ಕದೆನ್ನುವುದನ್ನರಿತು, "ತಮ್ಮಾ! ಅದಕ್ಕೆ ಏನೊಂದೂ ಗಾಯವಾಗದಂತೆ, ಅಪಾಯವಾಗದಂತೆ ಹಿಡಿಯಬೇಕು. ಅದನ್ನು ನಾನೇ ನೆರವೇರಿಸಬೇಕು," ಎಂದು ಹೇಳಿ ಅವನನ್ನು ಅಲ್ಲೇ ಇರುವಂತೆ ಆಜ್ಞಾಪಿಸಿದನು.

ಅಷ್ಟೇ ಅಲ್ಲ, ಬರಲಿರುವ ಘಟನೆಗಳು, ನಡೆಯಲಿರುವ ನಾಟಕವು ಗೊತ್ತಿದ್ದುದರಿಂದ ಗುಟ್ಟಾಗಿ ಒಳಗೆ ಕರೆದು, "ಲಕ್ಷ್ಮಣಾ, ಈ ಅಡವಿಯಲ್ಲಿ ರಾಕ್ಷಸರ ನಿವಾಸ, ಎರಡು ದಿನಗಳಿಗೆ ಮುಂಚೆ ಸಂಭವಿಸಿದ ಖರದೂಷಣಾದಿಗಳ ವಧೆಯನ್ನು ಮನಸ್ಸಿನಲ್ಲಿಟ್ಟುಕೊಂಡು, ತಿರುಗಿ ಅವರ ಬಂಧು ಮಿತ್ರರು ನಮ್ಮ ಪರ್ಣಶಾಲೆಯ ಮೇಲೆ ದಂಡೆತ್ತಿ ಬರಬಹುದು. ಆದ್ದರಿಂದ, ನೀನು ಬಾಣ ಹೂಡಿಕೊಂಡು ಸರ್ವಸಿದ್ಧನಾಗಿದ್ದು, ನಾಲ್ಕು ದಿಕ್ಕಿನಲ್ಲೂ ಕಾವಲು ಕಾಯುತ್ತಿರಬೇಕು. ಸೀತೆಯನ್ನು ಕಾಪಾಡಿಕೊಂಡಿರಬೇಕು. ಎಂಥ ಸಂದರ್ಭದಲ್ಲೂ ಸೀತೆಯನ್ನು ಒಂಟಿಯಾಗಿ ಬಿಟ್ಟು ಹೋಗಬೇಡ. ಈ ಮೃಗವು ಸಿಕ್ಕದೆ ದೂರ ಓಡಿಹೋಗಬಹುದು, ನಿಧಾನವಾಗಬಹುದು. ಆದ್ದರಿಂದ, ಜಾಗ್ರತೆಯಿಂದ, ಸಮಯೋಚಿತವಾಗಿ ಬುದ್ಧಿಬಲ, ದೇಹಬಲವನ್ನು ಉಪಯೋಗಿಸಿ ಸೀತೆಯನ್ನು ಕಾಪಾಡುತ್ತಿರು," ಎಂದು ಹೇಳಿ, ಮಾಯಾಮೃಗವನ್ನು ಹಿಂಬಾಲಿಸಿ ಹೊರಟನು.

**ಹಾ! ಲಕ್ಷ್ಮಣಾ**: ಅವನು ಆ ಮೃಗವನ್ನು ಬೆನ್ನಟ್ಟಿ ಹೋಗುತ್ತಿದ್ದಾಗ, ಆ ಮೃಗವು ಮುಂದೆ ನೋಡದೆ, ತನ್ನ ಮೇಲೆ ದೃಷ್ಟಿಯಿಟ್ಟು ಓಡುತ್ತಿದ್ದುದನ್ನು ನೋಡಿ ರಾಮನಿಗೆ ಆನಂದವಾಯಿತು. ಅವನು ಮಾರೀಚನೆನ್ನುವುದು ರಾಮನಿಗೆ ಗೊತ್ತು. ಮಾರೀಚನು ಪರಮ ಭಕ್ತ. ರಾಮ ತತ್ತ್ವವನ್ನು, ರಾಮ ಶಕ್ತಿಯನ್ನು ಮೊದಲೇ ಅನುಭವಿಸಿದವನು. ರಾಮನೂ ಕೂಡ ಓಡುತ್ತಿದ್ದ ಮಾರೀಚನ ಮೇಲೆ ದೃಷ್ಟಿಯಿಟ್ಟು, ವಿನೋದ ರೀತಿಯಾಗಿ ಅದನ್ನು ಅಟ್ಟಿಸಿಕೊಂಡು ಹೋಗುತ್ತಿದ್ದನು. ಒಂದೊಂದು ಸಾರಿ ರಾಮನಿಗೆ ಸಿಕ್ಕುವಂತೆ ಜಿಂಕೆ ಸಮೀಪಿಸುತ್ತಿತ್ತು. ಮತ್ತೊಂದು ಸಾರಿ ದೂರವಾಗಿ ಓಡಿ ಹೋಗುತ್ತಿತ್ತು. ಈ ಬಗೆಯ ಆಟವನ್ನು ನೋಡಿ ರಾಮನು ಬಹಳ ಉಲ್ಲಾಸದಿಂದ ಅದರೊಂದಿಗೆ ಆಟವಾಡುವವನಂತೆ ಮುಂದೆ ಹೋಗುತ್ತಿದ್ದನು. ದೂರದ ಒಂದು ಸ್ಥಳಕ್ಕೆ ಹೋದೊಡನೆ, ರಾಮನು ಅಮೋಘ ಅಸ್ತ್ರವೊಂದನ್ನು ಪ್ರಯೋಗಿಸಿದನು. ಅದು ತಗುಲಿದೊಡನೆ ಆ ಮಾಯಾ ಮೃಗವು, "ಹಾ! ಲಕ್ಷ್ಮಣಾ," ಎಂದು ಗಟ್ಟಿಯಾಗಿ ಕೂಗುತ್ತಾ ನೆಲಕ್ಕುರುಳಿತು. ಆ ಪ್ರಶಾಂತ ವಾತಾವರಣದಲ್ಲಿ ಆ ಕೂಗು ಸೀತಾಲಕ್ಷ್ಮಣರ ಕಿವಿಯನ್ನು ಬಡಿಯಿತು.

ಆ ಕೂಗು ಕೇಳಿದೊಡನೆ, ಸೀತೆಯು, "ಲಕ್ಷ್ಮಣಾ, ಕೇಳಿದೆಯಾ ನಿನ್ನ ಅಣ್ಣನವರ ಧ್ವನಿ? ನಿನ್ನನ್ನು ಕರೆಯುತ್ತಿದ್ದಾರೆ. ಹೊರಡು, ತಕ್ಷಣವೇ ಹೋಗಿ ಅವರನ್ನು ಕಾಪಾಡು. ಈ ರಾಕ್ಷಸರು ಮಾಯಾಧಾರಿಗಳು. ಕಪಟ ವೇಷ ಧರಿಸಿ ಅನೇಕ ಗಂಡಾಂತರಗಳಿಗೆ ಗುರಿ ಮಾಡುವರು," ಎಂದು ಕಳವಳ ವ್ಯಕ್ತಪಡಿಸುತ್ತಾ, ಲಕ್ಷ್ಮಣ ನನ್ನು ಕಳಿಸಲೆತ್ನಿಸಿದಳು. ಆದರೆ ಲಕ್ಷ್ಮಣನು ಬುದ್ಧಿಶಾಲಿಯಾದ್ದರಿಂದ, ರಾಮಾಜ್ಞೆ ಯನ್ನೇ ಪ್ರಧಾನವೆಂದು, ಪ್ರಾಣಸಮಾನವೆಂದು ತಿಳಿದು ಆಚರಿಸುತ್ತಿದ್ದವನಾದ್ದ ರಿಂದ, "ತಾಯೀ! ರಾಮಚಂದ್ರನಿಗೆ ಏನೂ ಕಷ್ಟ ಬರುವುದಿಲ್ಲ. ರಾಮಚಂದ್ರ ನನ್ನು ಯಾವ ರಾಕ್ಷಸನೂ ಏನೂ ಮಾಡಲಾರ. ಸಹಸ್ರಾರು ರಾಕ್ಷಸರನ್ನು ಕ್ಷಣ ಕಾಲದಲ್ಲಿ ವಧಿಸಿದ ದೃಶ್ಯವನ್ನು ಎರಡು ಮೂರು ದಿನಗಳಿಗೆ ಮೊದಲು ನೀವೇ ನೋಡಲಿಲ್ಲವೆ? ನೀವು ಕಂಗಾಲಾಗದೆ ಧೈರ್ಯವಾಗಿರಿ. ಅವರು ಬೇಗನೆ ಪರ್ಣಶಾಲೆಗೆ ಹಿಂದಿರುಗುವರು," ಎಂದು ಅವಳಿಗೆ ಧೈರ್ಯ ಹೇಳುತ್ತಾ, ಜಾಗ ಬಿಟ್ಟು ಕದಲದೆ ನಿಂತಿದ್ದನು.

**ಕಠಿಣ ವಾಕ್ಯಗಳು**: ಇಷ್ಟರಲ್ಲಿ, ಮತ್ತೊಮ್ಮೆ, "ಹಾ ಸೀತಾ! ಹಾ ಲಕ್ಷ್ಮಣಾ!" ಎನ್ನುವ ಕೂಗು ಕೇಳಿಸಿತು. ಸೀತೆ ಇನ್ನಷ್ಟು ಗಾಬರಿಗೊಂಡವಳಂತೆ ಕಳವಳಪಟ್ಟು, "ಲಕ್ಷ್ಮಣಾ! ನೀನೇಕೆ ಹೀಗೆ ಮೊಂಡು ಹಿಡಿದಿದ್ದೀಯೆ? ನಿನ್ನ ಉದ್ದೇಶ ನನಗರ್ಥ ವಾಗುತ್ತಿಲ್ಲ. ಬೇಗ ಹೋಗು. ನಿನ್ನ ಅಣ್ಣನಿಗೆ ಬಂದಿರುವ ಆಪತ್ತನ್ನು ನಿವಾರಿಸು, ಸಹಾಯ ಮಾಡು. ಹೋಗು, ಹೋಗು," ಎಂದು ಅನೇಕ ಬಗೆಯಾಗಿ ತನ್ನ ಕಳವಳವನ್ನು ವ್ಯಕ್ತಪಡಿಸಿದಳು. ರಾಮನಿಗೇನೂ ಪ್ರಮಾದ ಸಂಭವಿಸಲಿಲ್ಲವೆನ್ನು ವುದು ಸೀತೆಗೂ ಗೊತ್ತು. ಆದರೆ, ಮುಂದೆ ನಡೆಯುವ ನಾಟಕಕ್ಕೆ ಇವೆಲ್ಲಾ ಆಧಾರವೆಂದು ತಿಳಿದು, ಅಸಹಾಯಕಳಂತೆ ಗಾಬರಿಗೊಂಡವಳಂತೆ ನಟಿಸಲಾರಂ ಭಿಸಿದಳು. ತಾನು ಎಷ್ಟು ಧೈರ್ಯದ ಮಾತುಗಳನ್ನು ಹೇಳಿದರೂ ಸೀತೆಯು ಕಿವಿಯ ಮೇಲೆ ಹಾಕಿಕೊಳ್ಳದಿದ್ದುದನ್ನು ನೋಡಿ ಲಕ್ಷ್ಮಣನು, "ತಾಯೀ! ನನಗೆ ರಾಮಾಜ್ಞೆಯು ಪ್ರಾಣ ಸಮಾನ. ಸೀತೆಯನ್ನು ನೋಡಿಕೊಳ್ಳುತ್ತಾ, ಎಂಥ ಸಮಯ ದಲ್ಲೂ ಅವಳನ್ನು ಬಿಟ್ಟು ಹೋಗಬೇಡ ಎನ್ನುವ ರಾಮಾಜ್ಞೆಯನ್ನು ನೀವು ಕೇಳಲಿಲ್ಲವೆ? ಆದ್ದರಿಂದ, ಏನೇ ಆಗಲಿ, ನಾನಿಲ್ಲಿಂದ ಒಂದು ಹೆಜ್ಜೆ ಸಹ ಕದಲೆನು," ಎಂದು ಸ್ಪಷ್ಟವಾಗಿ ಹೇಳಿದನು.

ಅವನನ್ನು ಹೇಗಾದರೂ ಅಲ್ಲಿಂದ ಹೊರಡಿಸಿ, ರಾವಣನು ಬರಲು ಅವಕಾಶ ಮಾಡಿಕೊಟ್ಟು, ಮುಂದೆ ರಾಕ್ಷಸ ಸಂಹಾರಕ್ಕೆ ದಾರಿ ಮಾಡಿಕೊಡಬೇಕೆನ್ನುವುದು ರಾಮನ ಯೋಜನೆಯೇ. ಆದ್ದರಿಂದ, ರಾಮನ ಸಂಕಲ್ಪವನ್ನು ನೆರವೇರಿಸುವ ಸಲುವಾಗಿ ಅವಳೂ ಪಟ್ಟು ಹಿಡಿದು ಕಠೋರವಾದ ಮಾತುಗಳನ್ನಾಡಲು ಮೊದಲು

ಮಾಡಿದಳು. ಲಕ್ಷ್ಮಣನು, ಕಿವಿಗಳನ್ನು ಮುಚ್ಚಿಕೊಂಡು, "ತಾಯೀ! ನಾನು ನಿನ್ನ ಮಗ, ತಾಯಿ ಏನೆಂದರೂ ನಾನು ಸಹಿಸಿಕೊಳ್ಳುತ್ತೇನೆ," ಎಂದನು. ಆದರೂ, ಸೀತೆಯು ಕಠಿಣ ನುಡಿಗಳನ್ನು ಬಿಡದೆ, "ನೀನು ಹೋಗದಿದ್ದರೆ ನಾನೇ ಹೋಗುತ್ತೇನೆ," ಎಂದಾಗ ವಿಧಿ ಇಲ್ಲದೆ ಆ ಮಾತುಗಳನ್ನು ಕೇಳಲಾರದೆ, ಅವಳು ಅಡವಿಯಲ್ಲಿ ಹೋಗುವುದನ್ನು ಒಪ್ಪಲಾರದೆ, ಲಕ್ಷ್ಮಣನು ಭಾರವಾದ ಹೃದಯದಿಂದ ಪರ್ಣಶಾಲೆಯನ್ನು ಬಿಟ್ಟು, ರಾಮನನ್ನು ಹುಡುಕುತ್ತಾ ಹೊರಟನು.

**ರಾಮಾಜ್ಞೆಯನ್ನು ಮೀರಿದ್ದು**: ಪರ್ಣಶಾಲೆಯನ್ನು ಬಿಡುವಾಗ, ಸೀತೆಯನ್ನು ಒಳಗೇ ಇರುವಂತೆ ಹಲವು ಬಗೆಯಾಗಿ ಎಚ್ಚರಿಕೆ ಹೇಳಿದನು. ಪರ್ಣಶಾಲೆಯ ಮುಂದೆ ನಾಲ್ಕು ಗೆರೆಗಳನ್ನೆಳೆದು ಮಂತ್ರ ಶಕ್ತಿಯನ್ನು ಅದರಲ್ಲಿ ತುಂಬಿ ಎಂಥ ಪರಿಸ್ಥಿತಿಯಲ್ಲೂ ಅವನ್ನು ದಾಟಬಾರದೆಂದು ಜಾನಕಿಯನ್ನು ಪ್ರಾರ್ಥಿಸಿದನು. ಲಕ್ಷ್ಮಣನು ಮಹಾ ಗುಣವಂತ. ಎರಡು ಆಜ್ಞೆಗಳ ಮಧ್ಯೆ ಸಿಕ್ಕಿಕೊಂಡು, ಯಾವುದನ್ನೂ ಉಲ್ಲಂಘಿಸಲಾರದೆ ಪರಿತಪಿಸಿದನು. ರಾಮನ ಆಜ್ಞೆಯನ್ನು ಮೀರಿದುದಕ್ಕೆ ಭಯ, ಸೀತೆ ಏಕಾಂತದಲ್ಲಿರುವುದಕ್ಕೆ ಭಯ, ಇಂಥ ಸ್ಥಿತಿಯಲ್ಲಿ ವನದೇವತೆಗಳನ್ನು ಪ್ರಾರ್ಥಿಸುತ್ತಾ ಹಿಂತಿರುಗಿ ನೋಡುತ್ತಾ ಇಡಲಾರದ ಹೆಜ್ಜೆ ಇಡುತ್ತಾ ಹೊರಟನು. ಅದೇ ಸಮಯವನ್ನು ಕಾಯುತ್ತಿದ್ದ ರಾವಣನು, ಯಾರ ಹೆಸರನ್ನು ಹೇಳಿದರೆ ಸುರಾಸುರರು ಕೂಡ ಗಡಗಡ ನಡುಗುತ್ತಿದ್ದರೋ ಅಂಥ ಶಕ್ತಿವಂತನು, ಮಾಯಾ ರೂಪದಿಂದ ವೇಷಧಾರಿಯಾಗಿ, ಕದಿಯಲು ಬಂದ ನಾಯಿಯಂತೆ, ನಾಲ್ಕು ದಿಕ್ಕಿನಲ್ಲೂ ನೋಡುತ್ತಾ ಆಶ್ರಮವನ್ನು ಪ್ರವೇಶಿಸಿದನು. ನೇರವಾಗಿ ಆಶ್ರಮದ ಬಾಗಿಲತ್ತ ಬರುತ್ತಿರುವಾಗ, ಲಕ್ಷ್ಮಣನು ಹಾಕಿದ ಗೆರೆಗಳು ಅಗ್ನಿಜ್ವಾಲೆಯಂತೆ ಕಾಣಿಸಿದವು. ಅದನ್ನು ಗಮನಿಸಿ, ಗೆರೆಗಳನ್ನು ದಾಟಿದರೆ ತನ್ನ ಕಾರ್ಯ ಭಂಗವಾಗುವುದಲ್ಲದೆ, ಇನ್ನೇನು ಪ್ರಮಾದ ಸಂಭವಿಸುವುದೋ ಎನ್ನುವ ಭಯದಿಂದ, ಗೆರೆಗಳಾಚೆ ನಿಂತು, "ಭವತಿ ಭಿಕ್ಷಾಂ ದೇಹಿ," ಎಂದು ಭಿಕ್ಷೆ ಕೇಳಿದನು.

**ನಾಲ್ಕು ಗೆರೆಗಳು**: ಸೀತೆಯು ಬಂದವನು ರಾವಣನೇ ಎಂದು ತಿಳಿದು, ಕಂದ ಮೂಲಾದಿಗಳನ್ನು ಹಸ್ತದಲ್ಲಿಟ್ಟುಕೊಂಡು ಬಾಗಿಲು ತೆಗೆದು ಹೊರಗೆ ಬಂದು ನಿಂತಳು. ರಾವಣನು ಬಾಗಿಲ ಬಳಿ ಹೋಗಲು ಭಯಪಟ್ಟು, "ನಾನು ಆಶ್ರಮ ದ್ವಾರಕ್ಕೆ ಬರುವುದಿಲ್ಲ, ಅದು ನನ್ನ ದೀಕ್ಷೆ," ಎಂದು ಸುಳ್ಳಾಡಿ, ಅವಳೇ ತನ್ನ ಬಳಿಗೆ ಬಂದು ಭಿಕ್ಷೆ ಹಾಕಬೇಕೆಂದು ಕೋರಿದನು. ಸೀತೆಯು, "ಅತಿಥೀ! ನನ್ನ ಮೈದುನನು ಹಾಕಿದ ಗೆರೆಗಳನ್ನು ನಾನು ದಾಟಲಾರೆ, ನೀನೇ ಒಳಗೆ ಬಾ," ಎಂದಳು. ಮಾಯಾವೇಷಧಾರಿಯು ಭಯಪಟ್ಟು, "ಅಮ್ಮಾ! ನಾನು ಗೆರೆದಾಟಿ ಒಳಗೆ ಬರಲಾರೆ. ಗೆರೆಯ ಆ ಕಡೆಯಿಂದ ಹಾಕಿದ ಭಿಕ್ಷೆಯನ್ನೂ ನಾನು ಸ್ವೀಕರಿಸಲಾರೆ.

ಇದು ತಾಪಸಿಗಳಿಗೆ ಯುಕ್ತವಲ್ಲ. ಏನು ಮಾಡಲಿ, ಅಯ್ಯೋ! ಹಸಿವು, ಹಸಿವು," ಎಂದು ಕಾಪಟ್ಯ ಪ್ರದರ್ಶಿಸಿದನು. ಆಗ, ಗೆರೆಯನ್ನು ದಾಟಿ ಭಿಕ್ಷೆ ಹಾಕಲು ಸೀತೆಯೇ ಮುಂದೆ ಬಂದಳು. ಅವಳು ಗೆರೆಯನ್ನು ದಾಟಿದಳೋ ಇಲ್ಲವೋ ರಾವಣನು ಅವಳ ಕೈಹಿಡಿದು ಎತ್ತಿಕೊಂಡು ಹೋಗಿ, ರಥದೊಳಗೆ ಕೂರಿಸಿದನು. ಅವಳೆಷ್ಟು ಅರಚುತ್ತಿದ್ದರೂ ಗಮನಿಸದೆ ವೇಗವಾಗಿ ರಥವನ್ನು ನಡೆಸಿದನು. ಸೀತೆಯು, "ಹಾ ರಾಮಾ! ಹಾ ಲಕ್ಷ್ಮಣಾ! ಬೇಗ ಬನ್ನಿ. ನನ್ನನ್ನು ಈ ದುರಾತ್ಮನ ಕೈಯಿಂದ ತಪ್ಪಿಸಿ," ಎಂದು ಕೂಗಿಕೊಳ್ಳುತ್ತಿದ್ದಳು. ಆ ಕೂಗನ್ನು ಕೇಳಿ ಓಡಿಬಂದ ಪಂಚವಟೀ ತೀರದಲ್ಲಿದ್ದ ಋಷಿಗಳೂ ಮುನಿಗಳೂ ವನಚರರೂ ಏನೂ ಮಾಡಲಾರದವರಾಗಿ, ಆ ಮಹಾ ಪಾಪಕಾರ್ಯಕ್ಕೆ ದುಃಖಿಸಿದರು. "ಓ ರಾಮಾ! ನಾಥಾ! ಕರುಣಿಸು, ರಕ್ಷಿಸು, ಈ ದುರ್ಮಾರ್ಗಿಯನ್ನು ನಾಶಮಾಡು," ಎಂದು ಬಹುವಾಗಿ ರೋದಿಸಿದಳು.

**ದೀನಾಲಾಪ**: ಅವಳ ದೀನಾಲಾಪವನ್ನು ಕೇಳಿ ಚರಾಚರ ಜಂತುಜಾಲವು ಸಹಿತ ದುಃಖಿಸಿತು. ಅವಳು, "ಓ ರಾವಣಾ, ನಿನ್ನ ವಿನಾಶಕ್ಕೆ ರಾಜಮಾರ್ಗ ಮಾಡಿಕೊಳ್ಳುತ್ತಿದ್ದೀಯೆ. ನಿನ್ನ ರಾಜ್ಯ, ನಿನ್ನ ಪ್ರಜೆಗಳು, ನಿನ್ನ ರಾಕ್ಷಸ ವಂಶ ಎಲ್ಲವನ್ನೂ ಸಂಪೂರ್ಣವಾಗಿ ನಾಶಮಾಡಿಕೊಳ್ಳುತ್ತಿದ್ದೀಯೆ, ನಗುನಗುತ್ತಾ ಮಾಡುತ್ತಿರುವ ಈ ದುರಾಚಾರಕ್ಕೆ ಶೀಘ್ರದಲ್ಲೇ ಅಳುವ ಪ್ರಸಂಗ ಬರುವುದು. ನೀಚಾ! ನಿನ್ನಂಥ ತಪಸ್ಸಂಪನ್ನನಿಗೆ ಇದು ಸರಿಯಲ್ಲ," ಎಂದು ರಾವಣನನ್ನು ಬೈಯ್ದು ಬುದ್ಧಿ ಹೇಳುತ್ತಾ, ಮಧ್ಯೆ ರಾಮನನ್ನು ಕೂಗುತ್ತಾ ರೋದಿಸುತ್ತಿದ್ದಳು.

**ಜಟಾಯುವಿನ ಉಪದೇಶ**: ಗೃಧ್ರರಾಜ ಜಟಾಯುವು ರಾವಣನ ರಥವನ್ನು ಗುರುತಿಸಿ ಸೀತೆಯ ವಿಲಾಪವನ್ನು ಕೇಳಿ, ಅವಳು ಶ್ರೀರಾಮನ ಪತ್ನಿ ಎನ್ನುವುದನ್ನು ತಿಳಿದು, "ಅಯ್ಯೋ! ನಾನು ಮುಪ್ಪನ್ನನುಭವಿಸುತ್ತಿದ್ದೇನೆ. ಈಗ ನನ್ನ ಬಲ ಆ ದುರ್ಮಾರ್ಗಿಯೊಂದಿಗೆ ಹೋರಾಡುವಷ್ಟಿಲ್ಲ. ಏನು ಮಾಡಲಿ? ನೋಡುತ್ತಾ ಸುಮ್ಮನಿರುವುದೂ ಸರಿಯಲ್ಲ. ಪರಸ್ತ್ರೀ ಅಪಹರಣವನ್ನು ಭಗ್ನಗೊಳಿಸುವುದರಲ್ಲಿರುವ ಪವಿತ್ರತೆ ಬೇರೆ ಯಾವುದರಲ್ಲಿಯೂ ಇಲ್ಲ ಅಲ್ಲವೆ? ಆದ್ದರಿಂದ, ಈ ಪವಿತ್ರ ಕಾರ್ಯದಲ್ಲಿ ನನ್ನ ಪ್ರಾಣ ಹೋದರೂ ಸರಿಯೆ, ನನ್ನ ಶಕ್ತಿ ಇದ್ದಷ್ಟು ಸೀತೆಗೆ ಸಹಾಯ ಮಾಡುತ್ತೇನೆ," ಎಂದು, "ಓ ಸೀತಾ! ಭಯ ಪಡಬೇಡ. ಈ ದುರ್ಮಾರ್ಗಿಯನ್ನು ಸದೆಬಡಿದು ನಿನ್ನನ್ನು ಬಿಡಿಸುತ್ತೇನೆ, ರಾಮನಿಗೆ ಹೋಗಿ ಹೇಳುತ್ತೇನೆ," ಎಂದು ಕೂಗುತ್ತಾ ರಾವಣನ ರಥಕ್ಕೆ ಅಡ್ಡವಾಗಿ ಹೋಗಿ, ತನ್ನ ಚೂಪಾದ ಕೊಕ್ಕಿನಿಂದ ರಾವಣನನ್ನು ಅನೇಕ ವಿಧವಾಗಿ ಹಿಂಸಿಸಿ, ರಥವನ್ನು ಧ್ವಂಸ ಮಾಡಲು ಮೊದಲು ಮಾಡಿದನು. ಅಲ್ಲದೆ, ಅನೇಕ ವಿಧವಾಗಿ ರಾವಣನಿಗೆ

ಉಪದೇಶ ಮಾಡಿದನು. "ರಾವಣಾ, ಇದು ನಿನಗೆ ಒಳ್ಳೆಯದಲ್ಲ, ಸೀತೆಯನ್ನು ಬಿಟ್ಟು ಬಿಡು. ಇಲ್ಲದಿದ್ದರೆ, ಅಗ್ನಿಯಲ್ಲಿ ಬಿದ್ದ ಹುಳುಗಳಂತೆ ನೀನೂ ನಿನ್ನ ವಂಶವೂ ರಾಮ ಕ್ರೋಧಾಗ್ನಿಯಲ್ಲಿ ಬಿದ್ದು ನಾಶವಾಗುವಿರಿ. ನಿನ್ನ ಪೊಗರು ನಿನ್ನನ್ನೇ ಹಿಂಸಿಸುವುದು. ಪಾಪಿಯಾದವನೇ ಪರಸ್ತ್ರೀಯನ್ನು ಬಯಸುವನು. ನಾಯಿ ನರಿಗಳಿಗಿಂತ ಹೀನವಾದವನೇ ಹಿಂದೆ ನಿನ್ನ ತಂದೆ ತಾಯಿಗಳು ಮಾಡಿದ ಪಾಪದಿಂದ ನೀನು ಕಾಮಾಂಧನಾಗಿ, ಕಣ್ಣು ಕಾಣದೆ, ಮುಂದೆ ಬರಲಿರುವ ಕೇಡನ್ನು ಯೋಚಿಸದೆ, ಸಂಪೂರ್ಣ ಉನ್ಮತ್ತನಂತೆ ವರ್ತಿಸುತ್ತಿದ್ದೀಯೆ. ನಿನ್ನ ಬಲವನ್ನೂ ಧನವನ್ನೂ ಜನವನ್ನೂ ನೋಡಿ ಬೀಗುತ್ತಿದ್ದೀಯೆ.

ಅದೆಲ್ಲವನ್ನೂ ಇದು ಭಸ್ಮ ಮಾಡುವುದು. ನಿನ್ನ ತಪಶ್ಶಕ್ತಿ ಕೂಡ ಕ್ಷಣದಲ್ಲಿ ಅದೃಶ್ಯವಾಗುವುದು. ನಿನ್ನ ಸತಿಯನ್ನು ಪರರಾಕ್ಷಸರು ಅಪಹರಿಸಿದರೆ, ಆಶಿಸಿದರೆ, ನೀನು ಸುಮ್ಮನಿರುವೆಯಾ? ನನ್ನ ಸತಿ, ಪರ ಸತಿ ಎನ್ನುವುದರ ಸತ್ಯವನ್ನು ಗುರುತಿಸದವನು ದೌರ್ಭಾಗ್ಯಕ್ಕೆ ಗುರಿಯಾಗುವನು," ಎಂದು ಅನೇಕ ಬಗೆಯಾಗಿ ಬೋಧಿಸುತ್ತಾ ರಥದೊಂದಿಗೆ ತಾನೂ ವೇಗವಾಗಿ ಹಾರುತ್ತಾ ರಾವಣನನ್ನು ಹಿಂಬಾಲಿಸಿದನು. ಜಟಾಯುವಿನ ಮಾತುಗಳು, ಅವನು ಹೇಳಿದ ನೀತಿಗಳು ಸೀತೆಗೆ ಎಷ್ಟೋ ಶಾಂತಿ ಇತ್ತವು. ಅವಳು ಮನಸ್ಸಿನಲ್ಲೇ ಆನಂದಿಸಿದಳು. ವೃದ್ಧ ಜಟಾಯುವು ರಥವನ್ನು ನಿಲ್ಲಿಸಿ, ಸೀತೆಯನ್ನು ರಥದಿಂದಿಳಿಸಿ ಒಂದು ಮರದ ಕೆಳಗೆ ಕೂರಿಸಿ, ರಾವಣನೊಂದಿಗೆ ಹೋರಾಡಿದನು. ಪಾಪ! ವೃದ್ಧಾಪ್ಯವಾದುದರಿಂದ ಜಟಾಯುವು ಸ್ವಲ್ಪ ಹೊತ್ತಿನಲ್ಲೇ ಆಯಾಸಗೊಂಡನು. ಆದರೂ ರಾವಣನ ಕಿರೀಟವನ್ನು ಹಾರಿಸಿ, ಅವನ ಶಿರೋಬಲವನ್ನು ಕುಗ್ಗಿಸಿದನು. ದೇಹವನ್ನೆಲ್ಲಾ ಘಾಸಿಗೊಳಿಸಿ ರಕ್ತಮಯಮಾಡಿದನು. ರಾವಣನು ಎಷ್ಟೇ ಬಲ ಪ್ರಯೋಗಿಸಿದರೂ ತನ್ನ ಕೊಕ್ಕು ರೆಕ್ಕೆಗಳಿಂದ ಅದೆಲ್ಲವನ್ನೂ ಖಂಡಿಸಿದನು. ರಾವಣನು ಏನೂ ಮಾಡಲಾರದೆ ತನ್ನ ರಕ್ಷಣೆಯ ನಿಮಿತ್ತವಾಗಿ ಚಕ್ರಾಯುಧವನ್ನು ಪ್ರಯೋಗಿಸಿ ಜಟಾಯುವಿನ ರೆಕ್ಕೆಗಳನ್ನು ತುಂಡರಿಸಿದನು. ಜಟಾಯುವಿಗೆ ರೆಕ್ಕೆಗಳೇ ಪ್ರಾಣ. ಅವು ಹೋದಮೇಲೆ ಜಟಾಯುವು, "ರಾಮಾ, ರಾಮಾ," ಎನುತ್ತಾ ನೆಲಕ್ಕುರುಳಿದನು. "ಸ್ವಾಮಿ ಕಾರ್ಯಕ್ಕಾಗಿ ನನ್ನ ಪ್ರಯತ್ನ ಲೋಪವಾಗದಂತೆ ಹೋರಾಡಿದೆ. ಆದರೆ, ಫಲವಿಲ್ಲದೆ ಹೋಯಿತು. ಇದು ರಾಮ ಸಂಕಲ್ಪವೇ! ಇದರಿಂದ ಅವನು ಲೋಕಕ್ಕೆ ಏನು ಉಪಕಾರ ಮಾಡಲಿರುವನೋ ಇಲ್ಲದಿದ್ದರೆ, ಸೀತಾಪಹರಣವು ಪ್ರಯೋಜನವಿಲ್ಲ. ಇನ್ನು ಈ ವಾರ್ತೆಯನ್ನು ರಾಮನಿಗೆ ತಿಳಿಸುವವರೆಗಾದರೂ ನನ್ನ ಪ್ರಾಣ ಇರುವಂತೆ ಅವನನ್ನೇ ನಾನು ಪ್ರಾರ್ಥಿಸುತ್ತೇನೆ. ಇದಕ್ಕಿಂತ ಬೇರೇನೂ ಮಾಡಲು ನನಗೆ ಸಾಧ್ಯವಿಲ್ಲ," ಎಂದು ಕಣ್ಣುಗಳನ್ನು ಮುಚ್ಚಿಕೊಂಡು ರಾಮನನ್ನು

ಪ್ರಾರ್ಥಿಸಿದನು. ಇಷ್ಟರಲ್ಲಿ, ರಾವಣನು ತಿರುಗಿ ಸೀತೆಯನ್ನು ರಥದಲ್ಲಿ ಕೂರಿಸಿ ಕೊಂಡು ಹೊರಟನು. ಜಟಾಯುವು ಅದನ್ನು ಕಣ್ಣಲ್ಲಿ ನೋಡುತ್ತಾ ಸೀತಾ ವಿಲಾಪವನ್ನು ಕೇಳುತ್ತಾ ಅಸಹಾಯಕನಾಗಿ ಕಣ್ಣೀರು ಹಾಕುತ್ತಾ ರಾಮನನ್ನು ಪ್ರಾರ್ಥಿಸಿದನು. ಮೃತ್ಯು ಸಮೀಪಿಸಿದಾಗ, ವಿನಾಶಕಾಲ ಸಮೀಪಿಸಿದಾಗ ವಿಪರೀತ ವಾದ ಬುದ್ಧಿ ಹುಟ್ಟುವುದು ಸಹಜ. ಹಾಗೇ, ರಾವಣನ ವಿನಾಶಕಾಲ ಸಮೀಪಿಸಿದೆ, ರಾಕ್ಷಸ ವಂಶ ನಾಶವಾಗಲಿದೆ ಎಂದುಕೊಳ್ಳುತ್ತಾ ಸಂಭವಿಸಲಿರುವ ರಾವಣನ ದುಃಸ್ಥಿತಿಗೆ ಮರುಗಿ, ರಾಮನು ಬರುವುದನ್ನೇ ಕಾಯುತ್ತಾ ಕದಲಲಾರದ ಸ್ಥಿತಿಯಲ್ಲಿ ಬಿದ್ದಿದ್ದನು.

**ಸಂಕಲ್ಪವೇ ಆದರೂ** ... : ಇತ್ತ, ಪಂಚವಟೀ ತೀರದಲ್ಲಿ ಮಾಯಾ ಮೃಗವನ್ನು ಕೊಂದು ಹಿಂದಿರುಗಿ ಬರುತ್ತಿರುವಾಗ ರಾಮನು ತನ್ನಲ್ಲೇ, "ನಡೆಯಬೇಕಾದು ದೆಲ್ಲಾ ನಡೆದಿದೆ. ಇದು ನನ್ನ ಸಂಕಲ್ಪವೇ ಆದರೂ ಜನಸಾಮಾನ್ಯರಿಗೆ ಇದು ದೈವತ್ವವೆನ್ನುವುದು ಅರ್ಥವಾಗದಿರುವಂತೆ ಇನ್ನು ಮುಂದೆ ಸಾಮಾನ್ಯ ಮಾನವ ನಂತೆ ವರ್ತಿಸಬೇಕು," ಎಂದು ಯೋಚಿಸಿ ಬರುತ್ತಿರಲು ಸ್ವಲ್ಪ ದೂರದಲ್ಲಿ ಲಕ್ಷ್ಮಣನು ಬರುತ್ತಿರುವುದನ್ನು ಕಂಡು, "ಲಕ್ಷ್ಮಣನಿಗೂ ಕೂಡ ಈ ನನ್ನ ಮರ್ಮ ವನ್ನು ತಿಳಿಯಗೊಡಬಾರದು," ಎಂದು, ಚಿಂತಾಕ್ರಾಂತನಾಗಿ ಬರುತ್ತಿದ್ದ ಅವನನ್ನು ನೋಡಿ, "ತಮ್ಮಾ! ನನ್ನ ಮಾತನ್ನುಲ್ಲಂಘಿಸಿ ಸೀತೆಯನ್ನು ಒಂಟಿಯಾಗಿ ಬಿಟ್ಟು ಬರಲು ನಿನ್ನ ಮನಸ್ಸು ಹೇಗಾದರೂ ಒಪ್ಪಿತು. ನಿತ್ಯವೂ ನಡೆಯುತ್ತಿರುವ ರಾಕ್ಷಸ ಕೃತ್ಯಗಳನ್ನು ನೋಡಿಯೂ ಸೀತೆಯನ್ನು ಒಂಟಿಯಾಗಿ ಬಿಟ್ಟು ಬರುವುದು ಸ ರಿಯೇ? ಅಯ್ಯೋ, ಸೀತೆಯ ಗತಿ ಏನಾಗಿದೆಯೋ ನನಗೆ ಅನುಮಾನವಾಗುತ್ತಿದೆ. ಪರ್ಣಶಾಲೆಯಲ್ಲಿ ಸೀತೆ ಇಲ್ಲವೆಂದೇ ನನಗನಿಸುತ್ತಿದೆ. ಇನ್ನೇನು ಗತಿ!" ಎಂದು ಚಿಂತಾಕ್ರಾಂತನಾದನು. ಲಕ್ಷ್ಮಣನು ರಾಮನ ಪಾದಗಳ ಮೇಲೆ ಬಿದ್ದು, "ಅಣ್ಣಾ! ನನ್ನ ಮನಸ್ಸು ನಿಮಗೆ ತಿಳಿದಿದೆ. ಎಂಥ ಸಮಯದಲ್ಲೇ ಆಗಲಿ, ನನ್ನ ಪ್ರಾಣವನ್ನಾ ದರೂ ನಗುತ್ತಾ ನಿಮ್ಮ ಪಾದಗಳಿಗೆ ಅರ್ಪಿಸುವೆನೇ ವಿನಾ ನಿಮ್ಮ ಆಜ್ಞೆ ಮೀರೆನು. ಆದರೆ, ಸಂದರ್ಭ ಹಾಗೆ ಬಂದಿತು. ಇದು ನನ್ನ ವಿಧಿ. 'ಹಾ ಸೀತಾ! ಹಾ ಲಕ್ಷ್ಮಣಾ!' ಎನ್ನುವ ಮಾಯಾ ಮೃಗದ ಕೂಗು ಪರ್ಣಶಾಲೆಗೆ ಮುಟ್ಟಿತು. ಅದನ್ನು ಕೇಳಿದಾಕ್ಷಣವೇ ತಾಯಿ ಸೀತಾದೇವಿಯು ಭಯಪಟ್ಟು, ನಿನ್ನ ಅಣ್ಣನಿಗೇನೋ ಪ್ರಮಾದ ಸಂಭವಿಸಿದೆ, ಕೂಡಲೇ ಹೊರಡು ಎಂದು ನನ್ನನ್ನು ಅನೇಕ ವಿಧವಾಗಿ ಒತ್ತಾಯಿಸಿದಳು.

ರಾಕ್ಷಸರ ಮಾಯೆ ನನಗೆ ತಿಳಿದಿದೆಯಾದ್ದರಿಂದ, ಏನೂ ಪ್ರಮಾದ ಸಂಭವಿಸಿಲ್ಲ ವೆಂದು ಹೇಳಿ. ಹೊರಡಲು ಒತ್ತಾಯಿಸದಂತೆ ಕೈ ಮುಗಿದು ಪ್ರಾರ್ಥಿಸಿದೆ,

ಬೇಡಿಕೊಂಡೆ. ರಾಮನಿಗೆ ಏನೂ ಅಪಾಯ ಸಂಭವಿಸದೆಂದೂ ಇದು ಕೇವಲ ರಾಕ್ಷಸ ಮಾಯೆಯೆಂದೂ ನನಗೆ ತಿಳಿದಿತ್ತು. ಮತ್ತೆ ಎರಡನೇ ಬಾರಿ, 'ಹಾ ಸೀತಾ! ಹಾ ಲಕ್ಷ್ಮಣಾ!' ಎನ್ನುವ ನಿಮ್ಮ ಧ್ವನಿಯನ್ನು ಹೋಲುವ ಕೂಗು ಕೇಳಿಸಿತು. ಆಗ ಸೀತೆಯು ತನ್ನ ತತ್ತ್ವವನ್ನೇ ತಾನು ಮರೆತು, ಲೆಕ್ಕಮಾಡದೆ ಅನ್ನಬಾರದ, ಕೇಳಬಾರದ ಮಾತುಗಳನ್ನು ಉಪಯೋಗಿಸಿದ್ದರಿಂದ, ನಾನು ಅದನ್ನು ಸಹಿಸಲಾರದೆ, ಹೇಳಬೇಕಾದುದನ್ನೆಲ್ಲಾ ಹೇಳಿ, ಮಾಡಬೇಕಾದ ಭದ್ರತೆಯನ್ನೆಲ್ಲಾ ಮಾಡಿ, ಪರ್ಣಶಾಲೆಯನ್ನು ಬಿಟ್ಟು ಬರಬೇಕಾಯಿತು. ಅದಕ್ಕಾಗಿ ಎಂಥ ಶಿಕ್ಷೆಗಾದರೂ ನಾನು ಸಿದ್ಧ," ಎಂದು ನಮಸ್ಕರಿಸಿದನು. ಆಗ ರಾಮನು, "ಲಕ್ಷ್ಮಣಾ, ಏನೇ ಆದರೂ ನೀನು ಸೀತೆಯೊಬ್ಬಳನ್ನೇ ಬಿಟ್ಟು ಬರಬಾರದಾಗಿತ್ತು. ಸೀತೆಯು ಪರ್ಣಶಾಲೆಯಲ್ಲಿಲ್ಲವೆಂದೇ ನನ್ನ ಭಾವನೆ. ಅರಣ್ಯಕ್ಕೆ ಬಂದು ಸೀತೆಯನ್ನು ರಾಕ್ಷಸರಿಗೊಪ್ಪಿಸುವುದರಲ್ಲಿ ನಮ್ಮ ಪುರುಷಾರ್ಥವೇನಿದೆ? ರಾಮನು ತನ್ನ ಹೆಂಡತಿಯನ್ನು ಕಾಪಾಡಿಕೊಳ್ಳಲಾರದೆ ಹೋದನೆನ್ನುವ ಮಾತನ್ನು ನೀನು ಸಹಿಸುವೆಯಾ? ಅಯ್ಯೋ! ಸೀತಾ ವಿಯೋಗವನ್ನು ನಾನು ಹೇಗೆ ತಾಳಲಿ," ಎಂದು ಹಲವು ರೀತಿಯಾಗಿ ಪರಿತಪಿಸಿದನು. ಅಸಹಾಯಕತೆಯನ್ನು ವ್ಯಕ್ತಪಡಿಸಿದನು. ಇಬ್ಬರೂ ಹೊರಟು ವೇಗವಾಗಿ ಬಂದು ಪರ್ಣಶಾಲೆಯನ್ನು ಸೇರಿದರು.

**ತಡೆಯಲಾರದ ವ್ಯಾಕುಲತೆ**: ರಾಮನು ಹೇಳಿದಂತೆ ಅಲ್ಲಿ ಜಾನಕಿಯು ಕಾಣಿಸಲಿಲ್ಲ. ರಾಮನು ಸಹಿಸಲಾರದ ವ್ಯಾಕುಲತೆಯಲ್ಲಿ ಮುಳುಗಿದನು. ಲಕ್ಷ್ಮಣನು ನಿಲ್ಲಲಾರದೆ ಕುಸಿದುಹೋದನು. ಈ ಅಪರಾಧವು ತನ್ನಿಂದಲೇ ಆದದ್ದು, ಈ ದುರವಸ್ಥೆಗೆ ತಾನೇ ಕಾರಣ, ಆದ್ದರಿಂದ, ತನ್ನ ಪ್ರಾಣವನ್ನು ಕಳೆದುಕೊಳ್ಳುವುದೇ ಸರಿಯೆಂದು ಯೋಚಿಸಿದನು. ಆದರೆ, ಸೀತೆಯು ರಾಮನೊಂದಿಗಿಲ್ಲ. ಜೊತೆಗೆ ತಾನೂ ಪ್ರಾಣವನ್ನು ಕಳೆದುಕೊಂಡರೆ ರಾಮನ ಯೋಗಕ್ಷೇಮ ನೋಡುವವರು ಯಾರು? ಈ ಸಮಯದಲ್ಲಿ ರಾಮನನ್ನು ಕಷ್ಟಕ್ಕೆ ಸಿಕ್ಕಿಸಿದ ಹಾಗಾಗುವುದು. ಅವನಿಗೆ ಅಪಕಾರ ಮಾಡಿದವನಾಗುವೆನು. ಈ ಕಾರಡವಿಯಲ್ಲಿ ರಾಮನು ಏಕಾಂಗಿಯಾಗಿ ತಿರುಗಬೇಕಾಗುವುದು. ಅವನಿಗೆ ಫಲಪಾನೀಯಗಳನ್ನು ಕೊಡುವವರೂ ಸಹ ಯಾರೂ ಇಲ್ಲವಾಗುವುದು. ಆದ್ದರಿಂದ ನಾನು ಸಾಯುವುದು ಸರಿಯಲ್ಲ ಎಂದುಕೊಂಡು, ಜೀವಚ್ಛವದಂತೆ ನಿಂತು, ರಾಮನ ವ್ಯಾಕುಲತೆಯನ್ನು ನೋಡಲಾರದೆ ಹೋದನು. ಬಾಯಲ್ಲಿ ಮಾತು ಹೊರಡದಾಯಿತು. ಸೀತಾ ವಿಯೋಗದಿಂದ ತನ್ನ ಪ್ರಾಣವೇ ಹೋದಂತೆ ಭಾಸವಾಯಿತು. ಸ್ವಲ್ಪ ಯೋಚಿಸಿದ ಮೇಲೆ, ಇದೆಲ್ಲಾ ರಾಮ ಸಂಕಲ್ಪವೇ ವಿನಾ ಬೇರೆಯಲ್ಲ. ರಾಮನು ಸಾಮಾನ್ಯ ಮಾನವ ಮಾತ್ರನಲ್ಲ. ಇದು ಲೋಕ ಕಲ್ಯಾಣ ನಿಮಿತ್ತವಾಗಿ ಏರ್ಪಟ್ಟ ನಾಟಕ ಎಂದು ಲಕ್ಷ್ಮಣನು ನಿಶ್ಚಯಿಸಿದನು.

ಪರರ ದುಃಖಗಳನ್ನು ಅಪಹರಿಸುವ ಪವಿತ್ರನು, ಲೇಶವೂ ದುಃಖ ಪಡದ ಲೋಕಪಾಲಕನು, ಪತ್ನಿ ವಿಯೋಗಕ್ಕೆ ಹೀಗೆ ಸಾಧಾರಣ ಮಾನವ ಮಾತ್ರರಂತೆ ದುಃಖಿಸುತ್ತಿದ್ದಾನೆಂದರೆ ಇದು ನಾಟಕವೇ ಹೌದು ಎಂದು ಕ್ಷಣದಲ್ಲಿ ಅರ್ಥಮಾಡಿಕೊಂಡನು. ಸೀತೆಯ ನಿಸ್ವಾರ್ಥತೆ, ನಿಷ್ಕಳಂಕ ಗುಣ, ನಿರುಪಮ ಶೀಲ, ಲಕ್ಷ್ಮಣನಿಗೆ ಗೊತ್ತು. ಅಂಥ ಸದ್ಗುಣ ಸತ್ ಶೀಲವಂತೆಗೆ ಇಂಥ ವಿಪತ್ತು ಬಂತೆಂದರೆ ಇದೂ ಕೂಡ ರಾಮಕಾರ್ಯದ ಒಂದು ಭಾಗ ಎಂದು ತಿಳಿದನು. ರಾಮಾಜ್ಞೆ ಇಲ್ಲದೆ ಯಾವೊಂದು ಸಣ್ಣ ಕಾರ್ಯವು ಯಾರಿಂದಲೂ ಆಗಲು ಸಾಧ್ಯವಿಲ್ಲ. ಲೋಕದಲ್ಲಿ ಮಾನವ ಮಾತ್ರನಂತೆ ಅವತರಿಸಿ, ಮಾನವರಲ್ಲಿ ನೀತಿ ನಿಜಾಯಿತಿ, ತ್ಯಾಗ, ಶೀಲಗಳನ್ನು, ಧರ್ಮ ಪ್ರಪತ್ತಿಗಳನ್ನು ಉಳಿಸಲು ತಾನು ಆಚರಿಸಿ ಆದರ್ಶಗಳನ್ನು ಬೋಧಿಸುವ ಸಲುವಾಗಿ ಸೀತಾ ರಾಮರು ಈ ವಿಧವಾಗಿ ನಾಟಕವಾಡುತ್ತಿದ್ದಾರೆ ಎನ್ನುವುದನ್ನು ದೃಢಮಾಡಿಕೊಂಡನು. ಈ ನಾಟಕಲ್ಲಿ ತಾನೂ ಒಬ್ಬ ಪಾತ್ರ ಧಾರಿಯೇ ಆದ್ದರಿಂದ, ತನಗೆ ವಹಿಸಿದ ಪಾತ್ರವನ್ನು ತಾನು ಕೂಡ ಸರಿಯಾಗಿ ನಟಿಸಬೇಕೆಂದು ನಿಶ್ಚಯಿಸಿಕೊಂಡನು.

ಧೈರ್ಯವಾಗಿ ಹೋಗಿ ರಾಮನ ಪಾದಗಳನ್ನು ಹಿಡಿದು, "ಅಣ್ಣಾ! ಓ ನಾಥಾ! ನೀನು ಜಗನ್ನಾಟಕ ಸೂತ್ರಧಾರಿ. ನಿನಗೆ ತಿಳಿಯದಿರುವುದು, ನಿನ್ನಿಂದ ಆಗದಿರುವುದು ಯಾವುದೂ ಇಲ್ಲ. ಎಲ್ಲ ನಿನ್ನ ಸಂಕಲ್ಪದಲ್ಲೇ ಸೇರಿರುವಂಥವು: ಇದೆಲ್ಲಾ ಲೋಕ ಕಲ್ಯಾಣ ನಿಮಿತ್ತವಾಗಿ, ರಾಕ್ಷಸ ನಾಶಕ್ಕಾಗಿ ನೀವು ಆಡುತ್ತಿರುವ ನಾಟಕ ಎಂದು ನನ್ನ ಮನಸ್ಸು ನಿಸ್ಸಂಶಯವಾಗಿ ಹೇಳುತ್ತಿದೆ. ಇದು ಪರಮ ಸತ್ಯ, ನಿಜವನ್ನು ಹೇಳಿ ನನ್ನ ಮನಸ್ಸನ್ನು ಶಾಂತಪಡಿಸಿ," ಎಂದು ಪ್ರಾರ್ಥಿಸಿದನು.

**ನಿಮಿತ್ತ ಮಾತ್ರನು**: ರಾಮನು ಮುಗುಳ್ನಕ್ಕು, "ಲಕ್ಷ್ಮಣಾ, ನೀನು ನನ್ನ ಒಂದು ಅಂಗವಾದ್ದರಿಂದ ನಿನ್ನಲ್ಲಿ ಮುಚ್ಚುಮರೆಯೇನಿಲ್ಲ. ನಿನ್ನ ಮಾತು ನಿಜ. ಧರ್ಮ ಸಂಸ್ಥಾಪನಾರ್ಥವಾಗಿ ಅವತರಿಸಿದ ನಾನು ಧರ್ಮವನ್ನು ಆಚರಿಸಿ ಇತರರಿಗೆ ಬೋಧಿಸಲು ನಾನಿಷ್ಟು ವಿಧವಾಗಿ ಲೀಲೆಗಳನ್ನು ಮಾಡಬೇಕಾಗಿದೆ. ಅಳುವ ಹಠಮಾರಿ ಮಗುವನ್ನು ಆಡಿಸಿ, ಹಾಡಿ, ಮುದ್ದಿಟ್ಟು, ಆಟದ ಸಾಮಾನುಗಳನ್ನು ಕೊಟ್ಟು, ಕಥೆ ಹೇಳಿ, ಹಾಲು ಕುಡಿಸಿ, ಅಳದಂತೆ ಮಾಡಲು ತಾಯಿಯಾದವಳು ಅನೇಕ ಯುಕ್ತಿಗಳನ್ನನುಸರಿಸುವುದು ಲೋಕಸಾಮಾನ್ಯ. ಇದರಲ್ಲಿ ಹಾಲನ್ನು ಕುಡಿಸಿ, ಅಳುವನ್ನು ನಿಲ್ಲಿಸುವುದೇ ಅವಳ ಮುಖ್ಯ ಉದ್ದೇಶವಲ್ಲವೆ? ಆದರೆ ಈ ಆಟ ಪಾಟಗಳು, ಆಟದ ಬೊಂಬೆಗಳು, ಕಟ್ಟು ಕಥೆಗಳು ಹಾಲು ಕುಡಿಸಲು, ಅಳು ನಿಲ್ಲಿಸಲು ಸಹಾಯಕವಾಗುವುವಲ್ಲವೇ? ಹಸಿವು ಹೋಗಿಸಿ, ಅಳು ನಿಲ್ಲಿಸಲು ಇವೆಲ್ಲ ಆಧಾರವಾಗುವುವಲ್ಲವೆ? ಇವೆಲ್ಲ ಒಟ್ಟುಗೂಡಿ ಹಸಿವನ್ನು ಹೋಗಿಸಿವೆ,

ದುಃಖವನ್ನು ದೂರ ಮಾಡಿವೆ. ಹಾಗೇ, ಧರ್ಮಸಂಸ್ಥಾಪನೆ ಮಾಡಿ, ಅಧರ್ಮ ನಾಶ ಮಾಡುವ ಸಲುವಾಗಿ ನಾನು ಇಷ್ಟು ಬಗೆಯಾಗಿ ನಾಟಕ ಮಾಡಬೇಕಾಗಿದೆ. ಇವೆಲ್ಲವೂ ದುಃಖ ನಿವೃತ್ತಿಗೆ. ಆನಂದ ಪ್ರಾಪ್ತಿಗೆ ಉಪಾಂಗಗಳೇ ವಿನಾ ಬೇರೆ ಅಲ್ಲ. ಲೋಕಸಾಮಾನ್ಯರು ಆದರ್ಶವನ್ನು ಮಾತ್ರವೇ ಆಧಾರವಾಗಿ ಮಾಡಿ ಕೊಂಡು ಅನುಸರಿಸುವರಾದ್ದರಿಂದ, ಅಧಿಕಾರಿಯಾದ ನಾನು, ನಾಯಕನಾದ ನಾನು, ಆದರ್ಶವನ್ನು ಆಚರಿಸಿದರೇ ಲೋಕದ ಜನರು ಅದನ್ನು ಅನುಸರಿಸುವರು. ನಾಯಕನು ಆಚರಿಸದೆ ಜನರನ್ನು ಮಾತ್ರ ಆಚರಿಸಿರೆಂದು ಹೇಳಿದರೆ ಅವನು ನಾಯಕನಾಗಲು ಅರ್ಹನಲ್ಲ. ಅಂಥ ಅನರ್ಹನು ಯಾವಾಗ ನಾಯಕನಾಗು ವನೋ ಆಗಲೇ ಧರ್ಮನಾಶವಾಗುವುದು, ಅನ್ಯಾಯ ಪ್ರಾರಂಭವಾಗುವುದು. ಅಧಿಕಾರಿಯಾದವನು, ನಾಯಕನಾದವನು ತಾನು ಹೇಳಿದ ಮಾತುಗಳನ್ನು, ತಾನು ಆಶಿಸುವ ಉತ್ತಮ ಸ್ಥಿತಿಯನ್ನು, ತಾನು ಆಚರಿಸಿ, ಅನುಭವಿಸಿ, ಇತರರಿಗೆ ಹೇಳಬೇಕು. ಇದೇ ಮಾನವ ನೀತಿ. ಇದೇ ದೈವ ಪ್ರೀತಿ.

ಸೀತೆಗೂ ಈ ನೀತಿ ಚೆನ್ನಾಗಿ ತಿಳಿದಿದೆ. ನಿಮಿತ್ತಮಾತ್ರವಾಗಿ ನಮ್ಮ ಈ ರೀತಿ ಪ್ರಕಟಿಸುವುವೇ ವಿನಾ ಇವು ನಿಜವಾದುವಲ್ಲ. ನನ್ನ ಅವತಾರ ತತ್ತ್ವಕ್ಕೆ ಇವು ಕೆಲವು ನಿಬಂಧನೆಗಳು, ಆದ್ದರಿಂದ ನಿನಗೆ ನನ್ನ ತತ್ತ್ವವನ್ನು ತಿಳಿಸುತ್ತಿದ್ದೇನೆ. ನೀನೂ ಕೂಡ ನಿನ್ನ ಸ್ಥಾನದಲ್ಲಿ, ಕಾಲ ಕರ್ಮ ಕಾರಣಗಳನ್ನು, ದೇಶ ಕಾಲ ಪಾತ್ರಗಳನ್ನು ಅನುಸರಿಸಬೇಕಾಗುತ್ತದೆ. ದೈವರಹಸ್ಯ ಅನ್ಯರಿಗೆ ಅರ್ಥವಾಗದು. ಆದ್ದ ರಿಂದ ನೀನೂ ನನ್ನಂತೆ ಸ್ವಲ್ಪ ನಾಟಕವಾಡು. ನಾವು ಬಂದ ಕಾರ್ಯವನ್ನು ಪೂರ್ತಿ ಮಾಡೋಣ," ಎಂದು ತಮ್ಮನಿಗೆ ದೈವತ್ವವನ್ನು ಪೂರ್ತಿಯಾಗಿ ಹೇಳಿ, ಸಾಮಾನ್ಯ ಮಾನವರಂತೆ ಸೀತಾನ್ವೇಷಣೆಯನ್ನು ಪ್ರಾರಂಭಿಸಿದರು. ಅಷ್ಟೇ ಅಲ್ಲ, ಸೀತಾಮಾತೆ ಕೂಡ ಮಹಾ ಪವಿತ್ರತೆಯನ್ನು ಪ್ರದರ್ಶಿಸುತ್ತಾ, ಧೈರ್ಯ ಸಾಹಸಗಳಿಂದ, ಸತ್ಯಕ್ಕೆ ಭಯವಿಲ್ಲ ಎನ್ನುವಂತೆ ವರ್ತಿಸುತ್ತಾಳೆ. ಘೋರ ರಾಕ್ಷಸರು ಹೆದರಿಸಿ ಬೆದರಿಸಿದರೂ ಧೈರ್ಯಗೆಡದೆ ತನ್ನ ದೀಕ್ಷೆಯನ್ನು ಬಿಡದೆ, ಒಂದೇ ಮನಸ್ಸಿನಿಂದ ಗುರಿ ಸಾಧಿಸುವ ದೀಕ್ಷೆಯನ್ನು ಅದ್ಭುತವಾಗಿ ಪ್ರಕಟಿಸುತ್ತಾಳೆ.

**ರಾಮಾಯಣ**: ಇವರಾಡುವ ನಾಟಕವು ಪ್ರತಿ ಗೃಹಸ್ಥನಿಗೂ ಪ್ರತಿ ವ್ಯಕ್ತಿಗೂ ಪ್ರತಿ ಗೃಹಿಣಿಗೂ ಧರ್ಮಾಧರ್ಮಗಳನ್ನು ತಿಳಿಸುತ್ತಿದೆ. ತಂದೆ ತಾಯಿ, ಗಂಡ ಹೆಂಡತಿ, ಸೋದರ ಮಿತ್ರರು, ಇವರೆಲ್ಲರೂ ತಮ್ಮ ಮಾತನ್ನು, ಶೀಲವನ್ನು ಹೇಗೆ ಕಾಪಾಡಿಕೊಂಡು ಸಾರ್ಥಕ್ಯ ಹೊಂದಬೇಕೆನ್ನುವುದನ್ನು ಚೆನ್ನಾಗಿ ನಿರೂಪಿಸುತ್ತಾರೆ. ಸಾವಿರಾರು ವರ್ಷಗಳು, ರಾಮಾಯಣವು ಜೀವಿತ ಸಮಸ್ಯೆಗಳೆಲ್ಲವನ್ನೂ ದೂರ ಮಾಡುವುದು. ಮಾನವತ್ವವನ್ನು ಸಾರ್ಥಕ ಮಾಡಿಕೊಳ್ಳುವಂತೆ ನಿರೂಪಿಸುವುದು.

ರಾಮಾಯಣದಲ್ಲಿರುವ ನೀತಿ ಬೇರೊಂದರಲ್ಲಿಲ್ಲ. ನಿತ್ಯ ಜೀವನದಲ್ಲಿ ಮಾನವನು ಯಾವ ಯಾವ ಸಂದರ್ಭದಲ್ಲಿ ಹೇಗೆ ಹೇಗೆ ನಡೆದುಕೊಳ್ಳಬೇಕೋ ಪರಿಪಾಲನೆ ಮಾಡಬೇಕೋ ಪ್ರಜೆಗಳಿಗೆ ಬೋಧಿಸಬೇಕೋ ಶಾಸನಗಳನ್ನು ಮಾಡಬೇಕೋ ಎಲ್ಲವೂ ಒಂದು ರಾಮಾಯಣದಲ್ಲಿ ಅಡಕವಾಗಿದೆ. ರಾಮಾಯಣವೊಂದನ್ನು ಪೂರ್ತಿಯಾಗಿ ಅರ್ಥಮಾಡಿಕೊಂಡರೆ ಲೋಕ ಕಲ್ಯಾಣಕ್ಕೆ ಎಂಥ ಅಡ್ಡಿ ಆತಂಕವೂ ಬರದು.

**ಜಟಾಯು**: ರಾಮಲಕ್ಷ್ಮಣರು ಸೀತೆಯನ್ನು ಹುಡುಕಲು ಪರ್ಣಶಾಲೆಯನ್ನು ಬಿಟ್ಟು ಹೊರಟರು. ಸರ್ವಾಯುಧಗಳನ್ನೂ ತೆಗೆದುಕೊಂಡು, ಪರ್ವತಗಳನ್ನೂ ಕೊಳಗಳನ್ನೂ ಗುಹೆಗಳನ್ನೂ ಶೋಧಿಸುತ್ತಾ ಹೋದರು. ಎಲ್ಲಿಯೂ ಸೀತೆಯ ಸುಳಿವು ಸಿಕ್ಕಲಿಲ್ಲ.  ಹಾಗೇ ಹೋಗುತ್ತಿರುವಾಗ ಮಾರ್ಗ ಮಧ್ಯದಲ್ಲಿ ಒಂದು ಕಡೆ ಮರದ ಕೊಂಬೆಗಳು ಮುರಿದು ಬಿದ್ದಿರುವುದನ್ನೂ ಆ ಪ್ರದೇಶದಲ್ಲಿ ಏನೋ ಹೋರಾಟ ನಡೆದಂತಿದ್ದುದನ್ನೂ ಕೆಲವು ಧನುರ್ಬಾಣಗಳು ಮುರಿದು ಬಿದ್ದಿರುವು ದನ್ನೂ ಗಮನಿಸಿದರು. ಅದನ್ನು ನೋಡಿ, ರಾಮನು, "ತಮ್ಮಾ! ಇಲ್ಲಿ ಯಾರೋ ಯುದ್ಧ ಮಾಡಿದಂತಿದೆ," ಎಂದು ಅತ್ತಿತ್ತ ನೋಡುತ್ತಿದ್ದಾಗ, ಗೃಧ್ರರಾಜನು ಬಹಳ ಬಲಹೀನನಾಗಿ ಬಿದ್ದುಕೊಂಡು, "ರಾಮಾ, ರಾಮಾ," ಎನ್ನುತ್ತಾ ಕಣ್ಣುಗಳನ್ನು ಮುಚ್ಚಿಕೊಂಡಿರುವುದನ್ನು ನೋಡಿ, ಇಬ್ಬರೂ ಜಟಾಯುವನ್ನು ಸಮೀಪಿಸಿ ಅದರ ಶಿರಸ್ಸನ್ನು ತಮ್ಮ ಹಸ್ತದಲ್ಲಿಟ್ಟುಕೊಂಡರು. ಆ ಹಸ್ತ ಸ್ಪರ್ಶದಿಂದ ಜಟಾಯುವಿಗೆ ಹಾಯೆನಿಸಿತು. ಸ್ವಲ್ಪ ಬಲ ಬಂದಿತು. ಕಣ್ತೆರೆಯಿತು. ಕಣ್ಮುಂದೆ ಜಗನ್ಮೋಹನ ವಿಗ್ರಹ ಕಾಣಿಸಿತು. ತಡೆಯಲಾರದ ಆನಂದ ದುಃಖಗಳು ಒಮ್ಮೆಲೇ ಉಕ್ಕಿ ಬಂದು, ಕದಲಲಾರದ ಸ್ಥಿತಿಯಲ್ಲಿದ್ದುದರಿಂದ, ಅತ್ತಿತ್ತ ಹೊರಳಲಾಗದೆ, ಹಾಗೇ ರಾಮನ ಪಾದಗಳ ಮೇಲೆ ಬಿದ್ದಿತು.

ರಾಮನು ಅದನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಸಂತೈಸುತ್ತಿರಲು, ಜಟಾ ಯುವು, "ಓ ನಾಥಾ! ದುರ್ಮಾರ್ಗಿಯಾದ ರಾವಣನು ದುಷ್ಟಬುದ್ಧಿಗೆ ಸಿಕ್ಕಿ ನೀತಿ ನಿಜಾಯಿತಿಗಳಿಗೆ ಬೆಂಕಿ ಹಚ್ಚಿ ತಪಶ್ಶಕ್ತಿಗೆ ತರ್ಪಣವಿತ್ತು ಸೀತಾದೇವಿಯನ್ನು ನಾಯಿಯಂತೆ ಅಪಹರಿಸಿಕೊಂಡು ನರಿಯಂತೆ ವನ ಮಧ್ಯದಲ್ಲಿ ಹೋಗುತ್ತಿದ್ದನು. ಆ ಜಗಜ್ಜನನಿ ಜಾನಕಿಯು, 'ರಾಮಾ, ರಾಮಾ' ಎಂದು ರೋದಿಸುತ್ತಿದ್ದಳು. ಅವಳ ರೋದನ ಕೇಳಿ ನಾನು ತಿರುಗಿ ನೋಡಿದೆ. ಅದು ತಾಯಿ ಸೀತಾಮಾತೆ! ನನಗೆ ಸಹಿಸಲಾಗಲಿಲ್ಲ. ವೃದ್ಧಾಪ್ಯವಾದರೂ ನಿನ್ನ ನಾಮ ಚಿಂತನೆ ಮಾಡುತ್ತಾ ಅವನೊಂದಿಗೆ ಅನೇಕ ವಿಧವಾಗಿ ಹೋರಾಡಿದೆ. ಅವನ ಕಾಯವನ್ನೆಲ್ಲಾ ರಕ್ತ ಮಯ ಮಾಡಿದೆ. ಸೀತೆಯನ್ನು ರಥದಿಂದ ಕರೆದೊಯ್ದು ಒಂದು ಮರದ

ನೆರಳಿನಲ್ಲಿರಿಸಿ, ರಾವಣನೊಂದಿಗೆ ಘೋರವಾದ ಯುದ್ಧ ಮಾಡಿದೆ. ಆದರೆ, ನನ್ನ ಪ್ರಯತ್ನವೆಲ್ಲಾ ವ್ಯರ್ಥವಾಯಿತು. ಅವನು ಚಕ್ರಾಯುಧವನ್ನು ತೆಗೆದು ನನ್ನ ರೆಕ್ಕೆಗಳು ಚೂರಾಗುವಂತೆ ಹೊಡೆದನು. ನಾನು ಇನ್ನೇನೂ ಮಾಡಲಾಗದೆ, ಈ ಸ್ಥಿತಿಯಲ್ಲಿ ನಿಮ್ಮ ಆಗಮನಕ್ಕಾಗಿ ಕಾಯುತ್ತಿದ್ದೇನೆ. ಕಣ್ಣಲ್ಲಿ ನೋಡಿಯೂ ಆ ತಾಯಿಯನ್ನು ರಕ್ಷಿಸಿಕೊಳ್ಳಲಾರದೆ ಹೋದ ದುರ್ಭಾಗ್ಯನಾದೆ," ಎಂದು ಕಣ್ಣೀರು ಸುರಿಸಿತು.

ರಾಮನೂ ಕೂಡ ದುಃಖವನ್ನು ಪ್ರಕಟಿಸುತ್ತಾ, "ಓ ಪಕ್ಷಿರಾಜಾ! ನಿನ್ನ ಉಪಕಾರ ವನ್ನು ನಾನು ಮರೆಯುವುದಿಲ್ಲ. ನೀನು ಮಾಡಿದ ಸತ್ಕರ್ಮವೇ ನಿನಗೆ ಸದ್ಗತಿ ದೊರಕಿಸುವುದು, ಚಿಂತಿಸದಿರು," ಎಂದು ಅದರ ರೆಕ್ಕೆಗಳಿಗೆ ಅಂಟಿಕೊಂಡಿದ್ದ ಮಣ್ಣನ್ನು ತನ್ನ ಜಟೆಯಿಂದ ಒರೆಸುತ್ತಾ ತಲೆಯನ್ನು ಸವರುತ್ತಿರಲು, ಲಕ್ಷ್ಮಣನು ಹೋಗಿ ನೀರು ತಂದನು. ರಾಮನು ಜಟಾಯುವಿನ ಬಾಯೊಳಗೆ ನೀರನ್ನು ಸ್ವಲ್ಪ ಸ್ವಲ್ಪವಾಗಿ ಹಾಕುತ್ತಿರಲು, ಜಟಾಯುವು ನನ್ನ ಭಾಗ್ಯವೇ ಭಾಗ್ಯ ಎಂದು ಆನಂದಿಸಿತು. "ರಾಮಾ ನಿನ್ನ ಸ್ವಂತ ತಂದೆಗೆ ಕೂಡ ಲಭಿಸದ ಮಹಾಪ್ರಾಪ್ತಿ ನನಗೆ ಲಭಿಸಿತು. ನಿನ್ನ ಸುವರ್ಣ ಹಸ್ತದಿಂದ ನೀರು ಕುಡಿಯುವಂಥ ಪ್ರಾಪ್ತಿ ನನಗೆ ಲಭಿಸಿತು. ಈಗ, ನಿನ್ನ ತೊಡೆಯ ಮೇಲೆ ವಿಶ್ರಮಿಸಿಕೊಂಡು, ನಿನ್ನ ಹಸ್ತಗಳಿಂದ ಅಮೃತವನ್ನು ಕುಡಿಯುತ್ತಾ ನನ್ನ ನೇತ್ರಗಳು ನಿನ್ನ ಮುಖ ಪದ್ಮವನ್ನೇ ನೋಡುತ್ತಿರುವಾಗ ನನ್ನ ಪ್ರಾಣ ಹೋದರೆ, ಅದು ನಿನ್ನಲ್ಲೇ ಸೇರಿ ಹೋಗುವು ದಲ್ಲವೇ? ನಾನೆಷ್ಟು ಧನ್ಯ," ಎನ್ನುತ್ತಾ, "ರಾಮಾ, ದುರ್ಮಾರ್ಗಿಯಾದ ರಾವಣನು ದಕ್ಷಿಣ ದಿಕ್ಕಿಗೆ ಹೋದನು. ಬಹುಶಃ ಲಂಕೆಗೇ ಹೋಗಿರಬೇಕು. ಆದ್ದರಿಂದ, ನೀವು ನೇರವಾಗಿ ಲಂಕೆಗೇ ಹೋಗಿ, ಆ ದುರ್ಮಾರ್ಗಿಯನ್ನು ಕೊಂದು ಆ ತಾಯಿಯನ್ನು ಪಡೆದುಕೊಳ್ಳಿ," ಎಂದು ಒಮ್ಮೆ ಗಟ್ಟಿಯಾಗಿ ಉಚ್ಚರಿಸಿ ಪ್ರಾಣಬಿಟ್ಟಿತು. ರಾಮನು ಜಟಾಯುವಿನ ಪ್ರಾಣವನ್ನು ತನ್ನಲ್ಲಿ ಸೇರಿಸಿಕೊಂಡನು. ಅದರ ಕಾಯಕ್ಕೆ ಸಲ್ಲಿಸಬೇಕಾದ ಅಂತ್ಯಕ್ರಿಯೆಗಳನ್ನು ನಡೆಸಿ, ಇಬ್ಬರೂ ಸ್ನಾನ ಮಾಡಿದರು.

**ಕಬಂಧ ವಧೆ**: ಜಟಾಯು ಹೇಳಿದ ಗುರುತನ್ನು ಮನಸ್ಸಿನಲ್ಲಿ ಚಿತ್ರಿಸಿಕೊಂಡು ದಕ್ಷಿಣ ದಿಕ್ಕಿಗೆ ಹೊರಟರು. ಹೀಗೆ ಹೋಗುತ್ತಿರುವಾಗ, ಅಜಾಮುಖಿ ಎನ್ನುವ ಭಯಂಕರ ರೂಪಿಯಾದ ಒಬ್ಬಳು ರಾಕ್ಷಸಿಯು ದಾರಿಗೆ ಅಡ್ಡ ಬಂದು, "ಆಹಾ ಎಂಥ ಸುಂದರರು ನೀವು! ನಿಮ್ಮನ್ನು ಅನುಭವಿಸುವವರು ಎಂಥ ಧನ್ಯಾತ್ಮರು. ಈ ದಿನ ನನ್ನ ವ್ರತ ಫಲಿಸಿತು. ಮನೋಭೀಷ್ಟ ನೆರವೇರಿತು," ಎಂದು ಲಕ್ಷ್ಮಣನ ಕೈಗಳನ್ನು ಹಿಡಿದುಕೊಂಡಳು. ಲಕ್ಷ್ಮಣನು ಆ ರಾಕ್ಷಸಿಯ ಉದ್ದೇಶವನ್ನು ತಿಳಿದು, ಇವಳೂ ಕೂಡ ಶೂರ್ಪಣಖಿಯ ಮನಸ್ಸಿನವಳೇ ಎಂದು ನಿಶ್ಚಯಿಸಿ, ಅವಳ ಅಂಗಗಳನ್ನು ತುಂಡರಿಸಿದನು. ಆ ಅರಣ್ಯವೂ ಕೂಡ ರಾಕ್ಷಸರಂತೆ ಭಯಂಕರವಾಗಿತ್ತು. ಅನೇಕ

ಕ್ರೂರ ಮೃಗಗಳಿಂದ ತುಂಬಿತ್ತು. ಭಯಂಕರ ಶಬ್ದದಿಂದ ಕೂಡಿ ಎಂಥವರನ್ನೂ ಭಯಗೊಳಿಸುವಂತಿತ್ತು. ಹೀಗೆ, ರಾಮ ಲಕ್ಷ್ಮಣರು ಪ್ರಯಾಣ ಮಾಡುತ್ತಿರಲು, ವಿಕಾರ ರೂಪದ ಕಬಂಧನೆನ್ನುವ ರಾಕ್ಷಸನು ಅಡ್ಡ ಬಂದು, ಭೂಮಿ ಆಕಾಶಗಳು ತತ್ತರಿಸುವಂತೆ ನಗುತ್ತಾ ರಾಮಲಕ್ಷ್ಮಣರ ಮೇಲೆ ಬಿದ್ದನು.

ಕಬಂಧನ ಕೈಗಳು ಬಹಳ ಉದ್ದವಾಗಿದ್ದವು. ಅವನಿಗೆ ಶಿರಸ್ಸಿರಲಿಲ್ಲ. ಅವನು ತಿನ್ನುವ ಬಾಯಿ ಹೊಟ್ಟೆಯ ಮೇಲಿತ್ತು. ಅಮಾನುಷರೂಪದ ಅವನು ಅತ್ಯಂತ ವಿಚಿತ್ರ ಆಕಾರವುಳ್ಳವನಾಗಿದ್ದನು. ಅವನು ಆ ಅಡವಿಯಲ್ಲಿ ಅನೇಕ ವಿಧವಾಗಿ ಪ್ರಾಣಿಗಳನ್ನು ಹಿಂಸಿಸುತ್ತಿದ್ದನು. ರಾಮನು ಅವನನ್ನು ಸಂಹರಿಸಿ, ವನಚರರ ಭಯವನ್ನು ನಿವಾರಿಸಿದನು. ಪ್ರಾಣ ಬಿಡುವ ಮೊದಲು ಆ ಕಬಂಧನು, "ಓ ನಾಥಾ! ನಿಮ್ಮ ದರ್ಶನ ಸ್ಪರ್ಶನ ಸಂಭಾಷಣೆಗಳಿಂದ ನನ್ನ ಶಾಪ ಪಾಪಗಳು ಪೂರ್ತಿ ನಾಶವಾದುವು. ನಾನು ಧನ್ಯನಾದೆ," ಎನ್ನುತ್ತಾ, "ರಾಮಾ! ನಿನ್ನ ಕಾರ್ಯವು ಯಾವ ಅಡ್ಡಿ ಆತಂಕಗಳೂ ಇಲ್ಲದೆ ದಿಗ್ವಿಜಯ ಹೊಂದುವುದು," ಎಂದು ನಮಸ್ಕರಿಸಿ ಪ್ರಾಣ ಬಿಟ್ಟನು.

**ಶಬರಿ**: ಉದಾರಚಿತ್ತನಾದ ರಾಮನು ಅಲ್ಲಿಂದ ಹೊರಟು, ಪಾದಚಾರಿಯಾಗಿ ತಮ್ಮನೊಂದಿಗೆ ಬರುತ್ತಿರಲು, ಬಾಗಿದ ಬೆನ್ನು, ಹಣ್ಣುಗೂದಲು, ಗುಳಿಬಿದ್ದ ಕಣ್ಣುಗಳು, ನಡುಗುವ ಕೈಗಳ ಒಬ್ಬ ವೃದ್ಧ ಸ್ತ್ರೀ ತಲೆಯ ಮೇಲೊಂದು ಹಣ್ಣಿನ ಬುಟ್ಟಿಯನ್ನಿಟ್ಟುಕೊಂಡು ಇವರತ್ತ ಬರುತ್ತಿದಳು. ಈ ಸುಂದರ ರೂಪಿಗಳನ್ನು ನೋಡಿ, ಮುನೀಶ್ವರರು ವರ್ಣಿಸುತ್ತಿದ್ದ ಆ ರಾಮಲಕ್ಷ್ಮಣರು ಇವರೇ ಇರಬಹುದೇನೋ ಎಂದು ಊಹಿಸಿ, ಒಂದು ಮರದ ಬಳಿ ಬುಟ್ಟಿಯನ್ನು ಕೆಳಗಿಟ್ಟು ಕೈಜೋಡಿಸಿ, "ರಾಮಾ, ರಾಮಾ," ಎಂದು ಸ್ಮರಣೆ ಮಾಡುತ್ತಾ ನಿಂತಳು. ಲಕ್ಷ್ಮಣನು, "ಇದೂ ಒಂದು ಮಾನವಾಕಾರ ಧರಿಸಿದ ರಾಕ್ಷಸಿಯೇ," ಎನ್ನಲು ರಾಮನು, "ನಿನ್ನ ಊಹೆ ಸರಿಯಲ್ಲ," ಎಂದನು. ಇಬ್ಬರೂ ವಿಶ್ರಮಿಸಿಕೊಳ್ಳುವುದಕ್ಕಾಗಿ ಮರದ ಕೆಳಗೆ ಬಂದು ನಿಂತರು. ಸಮೀಪದಲ್ಲೇ ಶಬರಿಯ ಆಶ್ರಮವೂ ಇತ್ತು. ಕಮಲದಂಥ ಕಣ್ಣುಗಳು, ಗುಂಗುರು ಗುಂಗುರು ಮುಂಗುರುಳು, ಶ್ಯಾಮಲ ವರ್ಣದ ಆ ಆಜಾನುಬಾಹುಗಳನ್ನು ನೋಡಿ ಶಬರಿಯು ಕುತೂಹಲ ತಡೆಯಲಾರದೆ ಬಂದು ಅವರ ಪಾದಗಳ ಮೇಲೆ ಬಿದ್ದು, "ನಾಥಾ! ನಾಥಾ! ನೀವು! ಎಲ್ಲಿಂದ ಬರುತ್ತಿದ್ದೀರಿ, ನಿಮ್ಮ ಹೆಸರೇನು?" ಎಂದು ಕೇಳಿದಳು. ಶ್ರೀರಾಮನು ಮುಗುಳ್ನಗುತ್ತಾ, "ಅಮ್ಮಾ, ನಾವು ಅಯೋಧ್ಯೆಯಿಂದ ಬಂದೆವು. ಅರಣ್ಯದಲ್ಲಿ ವಾಸಿಸುತ್ತಿದ್ದೇವೆ. ನನ್ನನ್ನು ರಾಮನೆಂದು, ಈ ನನ್ನ ತಮ್ಮನನ್ನು ಲಕ್ಷ್ಮಣನೆಂದು ಕರೆಯುವರು," ಎಂದೊಡನೆಯೇ, "ತಂದೆಯೇ! ನನ್ನ ಚಿರಕಾಲದ ಆಸೆ ತೀರಿತು.

ಜನ್ಮ ಸಾರ್ಥಕವಾಯಿತು. ರಾತ್ರಿ ಹಗಲು ಕಣ್ಣುಗಳು ಕಾಯಗಳು ನಿಮ್ಮನ್ನೇ ಎದುರು ನೋಡುತ್ತಿದ್ದವು. ನನ್ನ ಪ್ರಯತ್ನ ಫಲಿಸಿತು. ನನ್ನ ತಪಸ್ಸು ಸಿದ್ಧಿಸಿತು, ಆಹಾ! ನಾನೆಂಥ ಧನ್ಯಾತ್ಮಳು. ಇದು ನನ್ನ ಗುರುವಿನ ಅನುಗ್ರಹವೇ, ದೈವ ಪ್ರೇರಣೆಯೇ," ಎಂದು ಆನಂದಬಾಷ್ಪಗಳನ್ನು ಸುರಿಸುತ್ತಾ ಓಡಿಹೋಗಿ, ಹಿಡಿಯಲಾರದಷ್ಟು ಆನಂದದಿಂದ ಬುಟ್ಟಿಯನ್ನು ಅವರ ಬಳಿಗೆ ತಂದಳು. ರಾಮನು "ಅಮ್ಮಾ! ನಿನ್ನ ಗುರು ಯಾರು?" ಎಂದು ಅವಳನ್ನು ಪ್ರಶ್ನಿಸಿದನು. "ನನ್ನ ಗುರು ಮತಂಗ ಮುನಿ. ಈ ಅರಣ್ಯದಲ್ಲಿ ಸ್ತ್ರೀಯರಿಗೆ ಆಶ್ರಮಗಳಲ್ಲಿ ಸ್ಥಳ ನೀಡಲು ಯಾರೂ ಒಪ್ಪದಿದ್ದುದ ರಿಂದ ಅವರು ನೀಡುತ್ತಿದ್ದ ಉಪದೇಶಗಳನ್ನು ಮರದ ಕೆಳಗೆ ಪೊದೆಗಳಲ್ಲಿ ಇದ್ದುಕೊಂಡು ಕೇಳುತ್ತಿದ್ದೆ. ಬೆಳಗಾಗುತ್ತಲೇ, ಋಷಿ ಮುನಿಗಳು ಸ್ನಾನ ಸಂಧ್ಯಾದಿ ಗಳಿಗಾಗಿ ನದಿಗೆ ಹೋಗುವ ದಾರಿಯನ್ನು ಗುಡಿಸುತ್ತಿದ್ದೆ. ಕಲ್ಲು ಮುಳ್ಳುಗಳನ್ನು ಆಯ್ದು ತೆಗೆಯುತ್ತಿದ್ದೆ. ಹೀಗೆ ಪರೋಕ್ಷ ಸೇವೆ ಮಾಡುತ್ತಾ ಕಂದಮೂಲಾದಿಗಳನ್ನು ತಿನ್ನುತ್ತಾ ಕಾರಡವಿಯಲ್ಲಿ ಕಾಲವನ್ನು ಕಳೆಯುತ್ತಿದ್ದೆ. ನನ್ನ ಮನಸ್ಸನ್ನು ತಿಳಿದ ಮಹಾನುಭಾವ ಮತಂಗ ಮುನಿ, 'ಅಮ್ಮಾ ನಿನ್ನ ಕಾಯವು ಪಕ್ವವಾದ ಸ್ಥಿತಿಗೆ ಬಂದಿದೆ. ಹೀಗೆ ನೀನು ಇನ್ನೂ ಶ್ರಮಪಡುತ್ತಿದ್ದರೆ ಬಹಳ ಆಯಾಸಗೊಳ್ಳುತ್ತೀಯೆ. ಆಶ್ರಮದಲ್ಲಿದ್ದು ವಿಶ್ರಾಂತಿ ತೆಗೆದುಕೋ,' ಎಂದು ಹೇಳಿದರು.

ಅವರ ಪವಿತ್ರ ಆಜ್ಞೆಯನ್ನು ಶಿರಸಾವಹಿಸಿ ಆಶ್ರಮದ ಸೇವೆ ಮಾಡುತ್ತಾ ಇರಲು, ಋಷಿಯು ಕಾಯವನ್ನು ಬಿಡಲುದ್ದೇಶಿಸಿ ಒಂದು ದಿನ ನನ್ನನ್ನು ಹತ್ತಿರ ಕರೆದು, 'ಶಬರೀ, ನಾನು ಬಂದ ಕಾರ್ಯ ಪೂರ್ತಿಯಾಯಿತು. ನಾನಿನ್ನು ಕಾಯವನ್ನು ಬಿಡುವವನಿದ್ದೇನೆ. ನೀನು ಈ ಆಶ್ರಮದಲ್ಲೇ ಇರು. ಸ್ವಲ್ಪ ಕಾಲದಲ್ಲೇ ರಾಮಚಂದ್ರನು ಈ ಅಡವಿಗೆ ಬರುತ್ತಾನೆ. ಅವನನ್ನು ಆಶ್ರಮಕ್ಕೆ ಕರೆತಂದು, ಅವನ ಸೇವೆಯನ್ನು ಮಾಡಿ, ಅವನ ಪಾದಸ್ಪರ್ಶದಿಂದ ಆಶ್ರಮವನ್ನು ಪವಿತ್ರ ಮಾಡು,' ಎಂದು ಆಜ್ಞಾಪಿಸಿದರು. ಅಂಥಾ ಪವಿತ್ರವಾದ ಗುರುಮೂರ್ತಿ ಇಲ್ಲದ ಆಶ್ರಮದಲ್ಲಿ ನಾನು ಜೀವಿಸುವುದಾದರೂ ಹೇಗೆ? ನನ್ನನ್ನೂ ನಿಮ್ಮೊಂದಿಗೆ ಕರೆದುಕೊಂಡು ಹೋಗಿ ಎಂದು ಬಹು ವಿಧವಾಗಿ ಪ್ರಾರ್ಥಿಸಿದೆ. ಗುರು ಏನೆಂದರೂ ಕೇಳದೆ, ರಾಮನ ಆಗಮನ ನಿಮಿತ್ತವಾಗಿ ನೀನು ಇಲ್ಲಿ ಇರಲೇಬೇಕು ಎಂದು ಆಜ್ಞಾಪಿಸಿ, ಪ್ರಾಣ ಬಿಟ್ಟರು. ಅಂದಿನಿಂದ ನಿಮ್ಮ ಆಗಮನಕ್ಕಾಗಿ ಕಾಯುತ್ತಿದ್ದೇನೆ. ಈ ವೃದ್ಧಕಾಯದಿಂದ ಕಾಲ ಕಳೆಯುತ್ತಿದ್ದೇನೆ. ಓ ರಾಮಾ! ಓ ನಾಥಾ! ಓ ಆರ್ತತ್ರಾಣ ಪರಾಯಣಾ! ಓ ಋಷಿಮಾನಸ ಸಂಚಾರಿ! ಇಂದಿಗೆ ನನ್ನ ವ್ರತ ಫಲಿಸಿತು. ಗುರುಸಂಕಲ್ಪ ಫಲಿಸಿತು. ಕೆಲವೇ ಹೆಜ್ಜೆ ದೂರದಲ್ಲಿ ಆಶ್ರಮವಿದೆ. ದಯಮಾಡಿ ನನ್ನೊಂದಿಗೆ ಬಂದು ಅದನ್ನು ಪಾವನ ಮಾಡಬೇಕು," ಎಂದು ರಾಮನ ಪಾದಗಳ ಮೇಲೆ ಬಿದ್ದಳು. ಶ್ರೀರಾಮನು

ಸಹಜಪ್ರೇಮಸ್ವರೂಪನಾದ್ದರಿಂದ ಶಬರಿಯ ಭಕ್ತಿ ಪ್ರಪತ್ತಿಗಳಿಗೆ ಆನಂದಿಸಿ, ಲಕ್ಷ್ಮಣನೊಂದಿಗೆ ಮತಂಗ ಆಶ್ರಮಕ್ಕೆ ಹೋದನು. ಆಹಾ! ಶಬರಿಯ ಆನಂದಕ್ಕೆ ಪಾರವೇ ಇಲ್ಲ. ಅವಳ ಆನಂದ ಮೇರೆ ಮೀರಿ ಹರಿಯಿತು. ನಡೆಯಲಾರದ ನಿಶ್ಶಕ್ತಿಯ ನಾರೀಮಣಿಗೆ ಸಾವಿರ ಆನೆಯ ಬಲ ಬಂದಿತು. ಸಟಸಟ ಹೋಗಿ ನದಿಯಿಂದ ನಿರ್ಮಲವಾದ ನೀರು ತಂದು, ತಾನು ರುಚಿ ನೋಡಿ ತಂದ ಫಲಗಳನ್ನು ರಾಮಲಕ್ಷ್ಮಣರ ಮುಂದಿಟ್ಟು ಅವರ ಮುಖ ಕಮಲಗಳನ್ನು ತೃಪ್ತಿಯಾಗುವಷ್ಟು ನೋಡುತ್ತಾ, ರಾಮನ ಪಾದಗಳನ್ನು ತೊಳೆದು, ಆ ತೀರ್ಥವನ್ನು ಶಿರಸ್ಸಿನ ಮೇಲೆ ಪ್ರೋಕ್ಷಿಸಿಕೊಂಡು, ಕುಡಿದು, "ಸ್ವಾಮೀ, ನನ್ನ ಕೋರಿಕೆ ತೀರಿತು. ಇನ್ನು ನಾನೇತಕ್ಕಾಗಿ ಬದುಕಿರಬೇಕು? ರಾಮ ದರ್ಶನಕ್ಕಾಗಿ ಬದುಕಿದ್ದೆ. ರಾಮನನ್ನು ನೋಡಿದ್ದಾಯಿತು. ಇನ್ನು ಈ ಪ್ರಾಣವನ್ನು ತಮ್ಮ ಪಾದಗಳಲ್ಲಿ ಸೇರಿಸಿಕೊಳ್ಳಿ. ನಿಮ್ಮ ಅಪಾರವಾದ ಕೀರ್ತಿಯನ್ನು ಕೇಳಿದ್ದೆ. ಇಂದು ನಿಮ್ಮನ್ನು ನೋಡಿದೆ, ಧನ್ಯಳಾದೆ," ಎಂದು ಪ್ರಾರ್ಥಿಸಿದಳು. ರಾಮನು ಅವಳು ಕೊಟ್ಟ ಹಣ್ಣುಗಳನ್ನು ಅತ್ಯಂತ ಪ್ರೀತಿಯಿಂದ ತಿನ್ನುತ್ತಾ, "ಅಮ್ಮಾ, ನಿನ್ನ ಮನಸ್ಸೆಷ್ಟು ಮಧುರವೋ ನಿನ್ನ ಫಲಗಳೂ ಅಷ್ಟೇ ಮಧುರವಾಗಿದೆ. ನಿಜವಾಗಿ ಇವು ಮರದ ಫಲಗಳಲ್ಲ. ಅಡವಿಯ ಮರಗಳ ಫಲ ಇಷ್ಟು ಮಧುರವಾಗಿರುವುದಿಲ್ಲ. ನಿನ್ನ ಜೀವಿತ ವೃಕ್ಷದ ಮನೋಫಲಗಳೇ ಇವು," ಎಂದು ಫಲಗಳ ರುಚಿಯನ್ನು ವರ್ಣಿಸುತ್ತಾ ತಿನ್ನುತ್ತಿದ್ದನು. ಅದನ್ನು ನೋಡಿ ಲಕ್ಷ್ಮಣನಿಗೆ ಅತ್ಯಂತ ಆನಂದವಾಯಿತು.

ಏಕೆಂದರೆ, ಸೀತಾ ವಿಯೋಗ ಸಂಭವಿಸಿದ ದಿನದಿಂದ ರಾಮನು ತಾನಾಗಿ ಇಷ್ಟದಿಂದ ಫಲಗಳನ್ನು ತಿಂದಿರಲಿಲ್ಲ, ಲಕ್ಷ್ಮಣನು ಬಲವಂತದಿಂದ ತಿನ್ನಿಸಬೇಕಾಗಿತ್ತು. ಆಗಲೂ ಅರ್ಧವೋ ಒಂದೋ ಹಣ್ಣನ್ನು ತಿನ್ನುತ್ತಿದ್ದನೇ ವಿನಾ ಹೊಟ್ಟೆ ತುಂಬುವಷ್ಟು, ಲಕ್ಷ್ಮಣನಿಗೆ ತೃಪ್ತಿಯಾಗುವಷ್ಟು ತಿನ್ನುತ್ತಿರಲಿಲ್ಲ. ಶಬರಿಯು ಮರದ ಕೆಳಗೆ ಬಿದ್ದಿದ್ದ ಹಣ್ಣುಗಳನ್ನು ಆಯ್ದು, ತೊಳೆದು, ಶುಭ್ರ ಮಾಡಿ, ರುಚಿ ನೋಡಿ, ಮಧುರವಾದ ಫಲಗಳನ್ನೇ ಆರಿಸಿ ದಿನವೂ ರಾಮನಿಗಾಗಿ ಎದುರು ನೋಡುತ್ತಿದ್ದು, ಕಡೆಗೆ ರಾಮನ ಪ್ರಸಾದವೆಂದು ತಾನೇ ತಿನ್ನುತ್ತಿದ್ದಳು. ಹೀಗೆ ದಿನವೂ ರಾಮನಿಗಾಗಿ ಹೊಸ ಫಲಗಳನ್ನು ಆಯ್ದಿಡುತ್ತಿದ್ದಳು. ಶಬರಿಯು ತನ್ನ ಪ್ರೇಮ ರಸವನ್ನು ಆ ಫಲ ರಸದೊಂದಿಗೆ ಐಕ್ಯಗೊಳಿಸಿದ್ದಳಾದ್ದರಿಂದ ರಾಮಚಂದ್ರನು ಆ ಫಲದ ರಸವನ್ನು ಪ್ರೀತಿಯಿಂದ ತೃಪ್ತಿಯಾಗುವಂತೆ ಕುಡಿಯುತ್ತಿದ್ದಾನೆಂದು ಲಕ್ಷ್ಮಣನು ಆನಂದಪಟ್ಟು ಶಬರಿಯ ಭಕ್ತಿಯನ್ನು ಮೆಚ್ಚಿದನು. ಆಕೆಯ ವೃದ್ಧಾಪ್ಯದಲ್ಲಿದ್ದ ದೈವ ರಸವನ್ನು ಅರ್ಥಮಾಡಿಕೊಂಡು ಆನಂದಿಸಿದನು.

ಅವಳು ಕೈ ಜೋಡಿಸಿಕೊಂಡು, “ಓ ನಾಥಾ! ನಾನು ನೀಚ ಜಾತಿಯಲ್ಲಿ ಜನಿಸಿದ ಸ್ತ್ರೀ, ಮಂದಮತಿ, ಮೂರ್ಖೆ, ವಿದ್ಯೆ ಇಲ್ಲದ ಅಜ್ಞಾನಿ. ನನ್ನ ವಿಷಯ ಏನೆಂದು ಹೇಳಲಿ. ನಾನು ಅಧಮಾಧಮರಲ್ಲಿ ಅಧಮಳು, ಅಶಕ್ತಳು. ಮಾತುಬಲ್ಲವಳಲ್ಲ, ತಿಳಿವಳಿಕೆ ಶೂನ್ಯ, ತಪಶ್ಶಕ್ತಿ ಇಲ್ಲ. ಕೇವಲ ದೈವ ಪ್ರೀತಿಯೊಂದಲ್ಲದೆ, ಅನ್ಯ ಶಕ್ತಿಗಳಲ್ಲಿ ಅತಿ ಕೆಳಮಟ್ಟದವಳಾದ ನನ್ನನ್ನು ಆದರಿಸಿ ಆನಂದವಿತ್ತ ನಿನ್ನ ಕರುಣೆಯೇ ನನ್ನನ್ನು ಅನುಗ್ರಹಿಸಿತಲ್ಲದೆ, ನನ್ನ ಭಕ್ತಿ ಶಕ್ತಿಗಳಲ್ಲ,” ಎಂದು ರಾಮಚಂದ್ರನ ಪ್ರೇಮ ದಯೆಗಳನ್ನು ಕೊಂಡಾಡಿದಳು. ಅವಳ ಮಾತನ್ನು ಕೇಳುತ್ತಿದ್ದ ರಾಮನು, ಶಬರಿಯ ಶಿರಸ್ಸನ್ನು ಸವರುತ್ತಾ, “ಅಮ್ಮಾ! ನನಗೆ ಭಕ್ತಿಯೊಂದೇ ಪ್ರಧಾನ ವಿನಾ ವಿದ್ಯೆ, ಪ್ರತಿಭೆ, ಜನ್ಮ, ವಂಶಗಳನ್ನು ನಾನು ಲೆಕ್ಕಕ್ಕೆ ತೆಗೆದುಕೊಳ್ಳುವುದೇ ಇಲ್ಲ. ಸಮಸ್ತ ತಪಶ್ಶಕ್ತಿಗಿಂತ ಪ್ರೇಮ ಪೂರಕವಾದ ಭಕ್ತಿಯೇ ನನಗೆ ಮಧುರ, ನಾನು ಅದನ್ನು ಮಾತ್ರವೇ ಆಶಿಸುವುದು, ಶೀಲವಿಲ್ಲದ ಮನುಷ್ಯನು ಎಂಥವನಾದರೂ, ನನಗೆ, ಭಗವತ್ ಪ್ರೀತಿಗೆ, ಅತಿ ದೂರವಾದವನೇ. ಓ ಶಬರಿ! ನವವಿಧ ಭಕ್ತಿ ಮಾರ್ಗಗಳಲ್ಲಿ ಯಾವ ಒಂದು ಮಾರ್ಗವನ್ನವಲಂಬಿಸಿದರೂ ಸಾಕು. ಆದರೆ, ನೀನು ನವವಿಧ ಮಾರ್ಗಗಳನ್ನೂ ಅವಲಂಬಿಸಿರುವೆ. ಭಕ್ತರಲ್ಲಿ ನಿನಗಿಂತಲೂ ಅಧಿಕವಾದವರು ನನಗೆ ಯಾರೂ ಕಂಡು ಬರುತ್ತಿಲ್ಲ.

ಹೃದಯದಿಂದ ಹರಿದು ಬಂದ ನಿನ್ನ ನಿರ್ಮಲ, ನಿಶ್ಚಲ, ನಿಸ್ವಾರ್ಥ ಪ್ರೇಮ ಪ್ರವಾಹವೇ ನನ್ನನ್ನು ಎಲ್ಲ ರೀತಿಯಿಂದಲೂ ತೃಪ್ತಿಪಡಿಸಿತು. ಸ್ವಲ್ಪದಲ್ಲೂ ಸಹ ನೀನು ಪರರನ್ನು ನೋಯಿಸಲಿಲ್ಲ. ಇಂಥ ಸ್ವಚ್ಛವಾದ ಚಿತ್ತಕ್ಕಿಂತ ಮಿಗಿಲಾದ ಚಿತ್ತ ಬೇರೊಂದಿಲ್ಲ. ಒಳ್ಳೆಯದಕ್ಕೆ ಉಬ್ಬಿ, ಕೆಟ್ಟದ್ದಕ್ಕೆ ಕುಗ್ಗಿ ಕೃಶವಾಗುವ ಚಂಚಲ ಸ್ವಭಾವ ನಿನ್ನದಲ್ಲ. ನೀನು ಎಲ್ಲ ವಿಷಯದಲ್ಲೂ ಧನ್ಯಳಾದೆ,” ಎಂದು ಹೇಳಿದನು. ರಾಮನಾಡಿದ ಮಾತುಗಳನ್ನು ಕೇಳಿ, ಶಬರಿಯು, “ರಾಮಾ, ದೈವವನ್ನು ಪ್ರೀತಿಗೊಳಿಸುವುದಕ್ಕಿಂತ ಭಕ್ತನಿಗೆ ಬೇರೊಂದು ಪ್ರಿಯವಾದ ಮಾರ್ಗ ಇಲ್ಲ, ಅಲ್ಲವೆ? ಯಾರು ಪ್ರೀತರಾಗಲಿ, ಆಗದೆ ಹೋಗಲಿ, ನಿನ್ನ ಮನಸ್ಸನ್ನು ತೃಪ್ತಿಗೊಳಿಸುವುದೊಂದಲ್ಲದೆ ಬೇರೇನೂ ನನಗೆ ಬೇಡ, ಇವೊತ್ತು ನನ್ನ ತಂದೆ, ನನ್ನ ಪರಮಾತ್ಮ, ನನ್ನ ಪ್ರಾಣನಾಥ, ಜಗನ್ನಾಥ, ಲೋಕನಾಥ, ವಿಶ್ವನಾಥ ನೀನು ನನಗೆ ಪ್ರಸನ್ನನಾದೆಯಲ್ಲವೆ? ಓ ಜಾನಕೀವಲ್ಲಭಾ,” ಎಂದೊಡನೆ ರಾಮನಿಗೆ ಜಾನಕಿಯ ನೆನಪು ಮಾಡಿಕೊಟ್ಟಂತಾಯಿತು.

ಆಗ, ರಾಮನು, “ಶಬರೀ! ಇಷ್ಟು ಹೊತ್ತು ಯಾರ ಚಿಂತೆಯೂ ಇಲ್ಲದೆ, ಆನಂದದಲ್ಲಿ ಮುಳುಗಿದ್ದ ನಮ್ಮನ್ನು ಮತ್ತೆ ಚಿಂತೆಯಲ್ಲಿ ಮುಳುಗಿಸಿದೆಯಲ್ಲಾ,” ಎನ್ನುತ್ತಲೇ ಶಬರಿಯು ತಲೆ ಎತ್ತಿ, “ನಾಥಾ! ಏನಂದೆ? ನನ್ನ ಅಪರಾಧವನ್ನು ಮನ್ನಿಸು,”

ಎಂದು ಪಾದಗಳ ಮೇಲೆ ಬಿದ್ದಳು. ರಾಮನು, "ಶಬರೀ, ಜಾನಕಿಯ ಸಮಾಚಾರ ನೀನೇನಾದರೂ ಕೇಳಿ ಬಲ್ಲೆಯಾ?" ಎಂದು ಕೇಳಿದನು. ಶಬರಿಯು, "ಜಾನಕಿ ನನಗೆ ಗೊತ್ತಿಲ್ಲವೇ? ರಾಮತತ್ತ್ವವನ್ನು ತಿಳಿದ ಪ್ರತಿ ಸ್ತ್ರೀಯೂ ಜಾನಕಿ ತತ್ತ್ವವನ್ನು ತಿಳಿಯದೆ ಇಲ್ಲ. ಆ ಮಹಾ ಸಾಧ್ವೀಮಣಿ, ವನಿತಾ ರತ್ನ, ಸ್ತ್ರೀಜಾತಿ ಜ್ಯೋತಿ, ಆ ತಾಯಿ, ಎಷ್ಟು ಅದೃಷ್ಟವಂತಳೋ! ಅವಳು ರಾಮನ ನೆರಳಲ್ಲವೆ? ರಾಮಾ! ಮತಂಗ ಮಹರ್ಷಿಗಳು ಹೇಳಿದ ಸೀತಾ ತತ್ತ್ವವನ್ನು ನಿಮಗೆ ಬಿನ್ನವಿಸುತ್ತೇನೆ. ನಿಮಗೆ ತಿಳಿಯದದ್ದೇನೂ ಇಲ್ಲ.

**ಜಾನಕಿ ತತ್ತ್ವ**: ಕೇಳಿದ್ದರಿಂದ ನುಡಿಯುವೆನು; 'ರಾಮನು ರಾಕ್ಷಸ ಸಂಹಾರ ನಿಮಿತ್ತವಾಗಿ, ಒಂದು ನೆಪ ಮಾಡಿಕೊಂಡು ಮಂಥರೆ ಕೈಕೆಯರಲ್ಲಿ ಮಾಯೆಯನ್ನು ಪ್ರವೇಶ ಮಾಡಿಸುವನು. ಸೀತಾರಾಮಲಕ್ಷ್ಮಣರು ಅಯೋಧ್ಯೆಯನ್ನು ಬಿಟ್ಟು ಅರಣ್ಯ ಪ್ರವೇಶಿಸುವರು. ಅವರು ಸ್ವಲ್ಪಕಾಲ ದಂಡಕಾರಣ್ಯದಲ್ಲಿ ಋಷಿಗಳನ್ನು ಅನುಗ್ರಹಿಸಿ ಅವರ ತಪಸ್ಸಾಧನೆಗಳಿಗೆ ಅಡ್ಡಿಮಾಡುವ ರಾಕ್ಷಸರನ್ನು ಹತಮಾಡಿ, ಋಷ್ಯಾಶ್ರಮ ಗಳನ್ನು ಕಾಪಾಡುತ್ತಾ ರಾಕ್ಷಸನಾದ ರಾವಣನೊಂದಿಗೆ ಸಂಬಂಧವೇರ್ಪಡಿಸಿ ಕೊಳ್ಳುವ ಸಲುವಾಗಿ ನಾಟಕವಾಡುವರು. ಆ ನಾಟಕದಲ್ಲಿ ರಾವಣನು ಸೀತೆಯನ್ನು ಅಪಹರಿಸುವಂತೆ ರಾಮನೇ ಸಂಕಲ್ಪಿಸುವನು. ರಾವಣನು ಅಪಹರಿಸಿದ ಸೀತೆಯು ನಿಜವಾದ ಸೀತೆಯಲ್ಲ. ಆದರೆ, ಲೋಕದೃಷ್ಟಿಗೆ ಅವಳೇ ಸೀತೆಯಾಗಿ ಕಾಣುವುದು. ಆ ನೆಪದಲ್ಲಿ ರಾಮನು ಸೀತಾನ್ವೇಷಣೆ ಮಾಡುತ್ತಾ ನಮ್ಮ ಆಶ್ರಮವನ್ನು ಪ್ರವೇಶಿಸು ವನು. ಆಗ ನಿನಗೆ ಮಹಾಭಾಗ್ಯ ಲಭಿಸುವುದು,' ಎಂದು ಮತಂಗ ಋಷಿಗಳು ಹೇಳಿದರು. ಅಷ್ಟೇ ಅಲ್ಲ. 'ನಮ್ಮ ಆಶ್ರಮದಿಂದ ಹೊರಟು, ಅಣ್ಣನೊಂದಿಗೆ ದ್ವೇಷ ಮಾಡಿಕೊಂಡು ಸಮೀಪದ ಋಷ್ಯಮೂಕ ಪರ್ವತದಲ್ಲಿ ಅರಣ್ಯವಾಸ ಮಾಡುತ್ತಿರುವ ಸುಗ್ರೀವನೊಂದಿಗೆ ಸ್ನೇಹ ಮಾಡಿಕೊಂಡು, ಅವನ ಮೂಲಕ ಸೀತಾನ್ವೇಷಣೆ ಮಾಡಿ ರಾವಣ ಸಂಹಾರ ಮಾಡುವನು,' ಎಂದೂ ಹೇಳಿದರು. ಲೀಲಾನಾಟಕ ಸೂತ್ರಧಾರಿಯಾದ ನಿನ್ನ ಚರ್ಯೆಯನ್ನು ಅವರಂದೇ ಹೇಳಿದ್ದರು. ನಿನ್ನ ನಟನೆಯು ಲೋಕ ನಟನೆ, ನಿನ್ನ ಸಂಕಲ್ಪವಿಲ್ಲದೆ ಯಾವ ಸಣ್ಣ ಕಾರ್ಯವೂ ಜರುಗದು.

ನಾಥಾ! ಏನೂ ತಿಳಿಯದವನಂತೆ ನಟಿಸುತ್ತಾ ಸೀತೆಗಾಗಿ ಚಿಂತಿಸುವವನಂತೆ ತೋರಿಸಿಕೊಳ್ಳುವುದನ್ನು ಪಾಮರರು, ಆತ್ಮವಿಶ್ವಾಸಿಗಳು, ನಾಸ್ತಿಕರು ಸಾಮಾನ್ಯ ದೃಷ್ಟಿಯಲ್ಲಿ ನೋಡುವರೇ ಹೊರತು, ದೈವತ್ವವನ್ನು ತಿಳಿದವರು ಆತ್ಮವಿಶ್ವಾಸವುಳ್ಳ ಸಾಧಕರು, ಭಕ್ತರು, ನಿನ್ನ ನಟನೆಗಳನ್ನು ನಂಬುವುದಿಲ್ಲ. ಎಲ್ಲಕ್ಕೂ ನೀನೇ ಕರ್ತ. ನಿನ್ನ ಸಂಕಲ್ಪಕ್ಕೆ ವಿರುದ್ಧವಾಗಿ ನಡೆಯುವುದು ಯಾರಿಂದಲೂ ಸಾಧ್ಯವಿಲ್ಲ.

ಒಳ್ಳೆಯದಾಗಲೀ ಕೆಟ್ಟದ್ದಾಗಲೀ ಅವರವರಲ್ಲಿ ಆಯಾ ಭಾವನೆಗಳನ್ನು ಕೂಡ, ಆಯಾ ಸಮಯಕ್ಕೆ ತಕ್ಕ ರೀತಿಯಲ್ಲಿ ನೀನೇ ಸಂಕಲ್ಪಿಸುತ್ತೀಯೆ ವಿನಾ ಅವರು ಎಷ್ಟು ಮಾತ್ರಕ್ಕೂ ಕರ್ತರಲ್ಲ. ಅಜ್ಞಾನಿಗಳು ಕೆಲವರು ನಾವೇ ನಮ್ಮ ಕೆಲಸಗಳಿಗೆ ಕರ್ತರೆಂದು ಭಾವಿಸುವರು. ನಿಜಕ್ಕೂ ಅದೇ ಅಜ್ಞಾನ. ರಾಮ, ನನ್ನ ಅತಿ ಭಾಷಣವನ್ನು ಕ್ಷಮಿಸಿ, ನನ್ನನ್ನು ಅನುಗ್ರಹಿಸು," ಎಂದು ಪಾದಗಳ ಮೇಲೆ ಬಿದ್ದಳು. ಯೋಗಾಗ್ನಿಯು ಅವಳ ದೇಹವನ್ನು ಭಸ್ಮ ಮಾಡಿತು. ಅವಳ ಪ್ರಾಣವು ರಾಮ ಪಾದಗಳಲ್ಲಿ ಸೇರಿತು.

# ೨೨ ಸುಗ್ರೀವ ಸಖ್ಯ

**ಋಷ್ಯಮೂಕ ಪರ್ವತ**: ಶಬರಿಗೆ ಮೋಕ್ಷವನ್ನನುಗ್ರಹಿಸಿ ರಾಮ ಲಕ್ಷ್ಮಣರು ಮತಂಗ ಆಶ್ರಮದಿಂದ ಹೊರಟು ಶಬರಿಯ ಭಕ್ತಿ ಪ್ರಪತ್ತಿಗಳನ್ನೂ ದೃಢವಿಶ್ವಾಸ ವನ್ನೂ ವರ್ಣಿಸುತ್ತಾ ಇಬ್ಬರೂ ಸಿಂಹದ ಜೋಡಿಯಂತೆ ಅರಣ್ಯಮಾರ್ಗದಲ್ಲಿ ಪ್ರಯಾಣ ಮಾಡಿದರು. ಹೀಗೆ ಪ್ರಯಾಣ ಮಾಡುತ್ತಾ ಋಷ್ಯಮೂಕ ಪರ್ವತವನ್ನು ಸಮೀಪಿಸಿದರು. ಅಲ್ಲಿ ಸುಗ್ರೀವನು ಮಂತ್ರಿಗಳೊಂದಿಗೆ ವಾಸಿಸುತ್ತಿದ್ದನು. ಈ ಬಲಸಂಪನ್ನರಾದ ಸದ್ವಂಶ ಸಾರ್ವಭೌಮರಾದ ಈ ಇಬ್ಬರು ತಮ್ಮಂದಿರು ಅಲ್ಲಿಗೆ ಬರುತ್ತಿರುವುದನ್ನು ಸುಗ್ರೀವನು ಪರ್ವತದ ಮೇಲಿನಿಂದ ನೋಡಿದನು. ಅವನು, ತನ್ನನ್ನು ಕೊಲ್ಲಲು ತನ್ನ ಅಣ್ಣ ವಾಲಿಯು ಯಾರನ್ನು ಕಳಿಸುವನೋ ಎನ್ನುವ ಭಯದಿಂದ ನಿರಂತರವೂ ದಾರಿಯನ್ನು ನೋಡುತ್ತಿದ್ದನು. ಇವರ ನಡಿಗೆ, ಇವರ ತೇಜಸ್ಸನ್ನು ನೋಡಿ, ಸುಗ್ರೀವನು ಭಯಪಟ್ಟು, ಹನುಮಂತನನ್ನು ಕರೆದು, "ವೀರಾ! ಆ ಮಹಾ ವೀರಪುರುಷರನ್ನು ನೋಡಿದೆಯಾ? ನೀನು ತಡಮಾಡದೆ ಹೋಗಿ, ಅವರ ವೃತ್ತಾಂತವನ್ನು ತಿಳಿದುಕೊಂಡು ಬಾ. ಒಂದು ವೇಳೆ ಅವರು ವಾಲಿಯಿಂದ ಕಳಿಸಲ್ಪಟ್ಟವರಾದರೆ, ನೀನು ಮುಖವನ್ನು ಮುಚ್ಚಿಕೊ, ಅದರಿಂದ ಅವರು ವಾಲಿಯ ಕಡೆಯವರೆಂದು ನಾನು ಗ್ರಹಿಸುತ್ತೇನೆ. ತಕ್ಷಣವೇ ಈ ಪರ್ವತವನ್ನು ಬಿಟ್ಟು ಹೊರಡುತ್ತೇನೆ," ಎಂದು ಹೇಳಿದನು.

ಹನುಮಂತನು ಕುಣಿಯುತ್ತಾ ಹೊರಟು, ಪರ್ವತಾಭಿಮುಖವಾಗಿ ನಡೆದು ಬರುತ್ತಿದ್ದ ಮಹಾ ತೇಜೋವಂತರಾದ ರಾಮಲಕ್ಷ್ಮಣರ ಎದುರಿಗೆ ನಿಂತು, ಅವರಿಗೆ ನಮಸ್ಕರಿಸಿ, "ಓ ತೇಜೋರಾಶಿಗಳಾದ ಕುಮಾರರೇ! ನೀವು ಯಾರು? ನಿಮ್ಮ ರೂಪ ಬಹಳ ರಮಣೀಯವಾಗಿದೆ. ನೀವು ಸುಕುಮಾರರಾಗಿ ಕಾಣುತ್ತಿದ್ದೀರಿ. ನೀವು ಮಾನವ ಮಾತ್ರರಲ್ಲ. ಸಾಕ್ಷಾತ್ ನರನಾರಾಯಣರಾಗಿ ಧರೆಗೆ ಇಳಿದು ಬಂದಂತಿದೆ. ಈ ಭಯಂಕರಾರಣ್ಯದಲ್ಲಿ ಏಕಾಂಗಿಗಳಾಗಿ ಸಂಚರಿಸುತ್ತಿರುವುದರ ಉದ್ದೇಶವೇನು ತಿಳಿಸುವಿರಾ?" ಎಂದು ವಿನಯ ಗೌರವಗಳಿಂದ ಪ್ರಶ್ನಿಸಿದನು. ಅವನ ವಿನಯ ವಿಧೇಯತೆಗಳನ್ನು ನೋಡಿ ರಾಮಚಂದ್ರನು ಮುಗುಳ್ನಕ್ಕು, "ಮಾರುತೀ! ವೀರಾ! ನಾವು ಅಯೋಧ್ಯಾಧಿಪತಿಯಾದ ದಶರಥ ಮಹಾರಾಜನ ಪುತ್ರರು. ಪಿತೃವಾಕ್ಯ ಪರಿಪಾಲನೆಗಾಗಿ ನಾವು ಅರಣ್ಯವನ್ನು ಪ್ರವೇಶಿಸಿದೆವು. ಇವನು ನನ್ನ ತಮ್ಮ ಲಕ್ಷ್ಮಣ. ನನ್ನನ್ನು ಶ್ರೀರಾಮನೆಂದು ಕರೆಯುವರು. ನನ್ನೊಂದಿಗೆ ನನ್ನ ಧರ್ಮಪತ್ನಿಯು ಕೂಡ ಬಂದಿದ್ದಳು. ವಿಧಿವಶಾತ್ ನಾವು ಚಿತ್ರಕೂಟ ಪರ್ವತದಲ್ಲಿ ವಾಸಮಾಡುತ್ತಿದ್ದಾಗ, ನಾವು ಪರ್ಣಶಾಲೆಯಲ್ಲಿ ಇಲ್ಲದ ಸಮಯವನ್ನು ನೋಡಿ ಯಾರೋ ರಾಕ್ಷಸನು ಆ ಗೃಹಿಣಿಯನ್ನು ಅಪಹರಿಸಿದನು. ಈಗ ನಾವು ಅವಳನ್ನು ಹುಡುಕುತ್ತಾ ತಿರುಗುತ್ತಿದ್ದೇವೆ," ಎಂದು ಇದ್ದುದನ್ನು ಇದ್ದಂತೆ ಹೇಳಿ, "ಓ ವೀರ ಹನುಮಾ! ನಮ್ಮ ಪೂರ್ವೋತ್ತರಗಳನ್ನು ಹೇಳಿದೆವು. ನಿನ್ನ ಪೂರ್ವೋತ್ತರಗಳನ್ನೂ ಕೇಳಲಿಚ್ಛಿಸುತ್ತೇವೆ," ಎಂದನು.

**ಹನುಮದ್ಭಕ್ತಿ**: ಇವರ ವೃತ್ತಾಂತಗಳನ್ನು ತಿಳಿದುಕೊಂಡ ಹನುಮಂತನು, ಇವರೇ ತನ್ನ ಪ್ರಭುಗಳೆಂದು ಗ್ರಹಿಸಿ, ಅವರ ಪಾದಗಳ ಮೇಲೆ ಬಿದ್ದು, ಎದ್ದು ನಿಂತು, ಕಣ್ಣುಗಳಿಂದ ಧಾರಾಕಾರವಾಗಿ ಆನಂದಬಾಷ್ಪಗಳನ್ನು ಸುರಿಸುತ್ತಾ ಕೈಜೋಡಿಸಿಕೊಂಡು ನಿಂತನು. ಬಾಯಿಂದ ಮಾತು ಹೊರಡಲಿಲ್ಲ. ಸ್ವಲ್ಪ ಹೊತ್ತಿನ ನಂತರ ಧೈರ್ಯ ತಂದು ಕೊಂಡು, "ಓ ನಾಥಾ! ನಾನೊಬ್ಬ ಬುದ್ಧಿಹೀನ ಜ್ಞಾನಹೀನನಾದ್ದರಿಂದಲೇ ನಿಮ್ಮನ್ನು ಹೀಗೆ ಪ್ರಶ್ನಿಸಿದೆ. ನನ್ನ ಅಪರಾಧವನ್ನು ಕ್ಷಮಿಸಿ, ಓ ರಾಜಾಧಿರಾಜಾ! ಸಾಧಾರಣ ಮನುಷ್ಯರಂತೆ ನೀವು ನನ್ನ ಪೂರ್ವೋತ್ತರಗಳನ್ನು ಪ್ರಶ್ನಿಸುವುದು ಧರ್ಮವೇ? ನಾನು ನಿಮ್ಮ ಮಾಯೆಗೆ ಬದ್ಧನಾದುದರಿಂದ ನಿಮ್ಮನ್ನು ಗುರುತಿಸಲಾರದೆ ಹೋದೆ. ನನ್ನ ಪ್ರಭುಗಳು ಸಮರ್ಥರು. ಎಲ್ಲಾದರೂ ಸೇವಕನು ಸ್ವಾಮಿಗಿಂತ ಹೆಚ್ಚಿನವನಾಗಬಲ್ಲನೆ? ನಾಥಾ! ಸಕಲ ಜೀವಿಗಳು ನಿನ್ನ ಮಾಯೆಯಿಂದ ಮೋಹಿತರಾಗುವರು. ನಾನೊಂದು ಮಾತು ಹೇಳಬೇಕೆಂದಿದ್ದೇನೆ. ಅದಕ್ಕೆ ನನ್ನ ನಾಥನಾದ ನೀವೇ ಪ್ರಮಾಣ. ನಾನು ನನ್ನ ನಾಥನನ್ನು ಭಜಿಸುವುದಲ್ಲದೆ ಬೇರೇನನ್ನೂ ತಿಳಿಯೆ. ನಾಥನ ಬಲವನ್ನು ನೋಡಿಕೊಂಡೇ ಸೇವಕನು ಪ್ರವರ್ತಿಸು

ವನು. ಪೋಷಿಸಲು, ಶಿಕ್ಷಿಸಲು ಪ್ರಭು ಇರುವಾಗ ಸೇವಕನಿಗೆ ಭಯವೇಕೆ?" ಎಂದು ಹನುಮಂತನು, ತನ್ನ ನಿಜ ಸ್ವರೂಪವನ್ನು ಧರಿಸಿದನು. ರಾಮನು ಆ ರೂಪವನ್ನು ನೋಡಿ ಪರಮಾನಂದದಿಂದ ಅವನನ್ನು ಆಲಂಗಿಸಿಕೊಂಡು, "ಹನುಮಂತಾ! ನೀನೂ ಲಕ್ಷ್ಮಣನಂತೆಯೇ ನನಗೆ ಅತ್ಯಂತ ಪ್ರಿಯನು," ಎಂದು ತಲೆಯನ್ನು ಸವರುತ್ತಾ, "ಓ ಹನುಮಂತಾ! ಅನ್ಯಗತಿ ಇಲ್ಲವೆಂದು ನನ್ನನ್ನು ಸೇವಿಸುವಂಥ ಸೇವಕರೇ ನನಗೆ ಅಧಿಕ ಪ್ರಿಯರು," ಎಂದು ರಾಮನು ತಿಳಿಸಿದ ತಕ್ಷಣ ಹನುಮಂತನು, "ಓ ನಾಥಾ! ಸುಗ್ರೀವನೆನ್ನುವ ವಾನರ ರಾಜನು ಅನೇಕ ಕಾರಣಗಳಿಂದ ತನ್ನ ಅಣ್ಣನಾದ ವಾಲಿಯೊಂದಿಗೆ ವಿರೋಧ ಕಟ್ಟಿಕೊಂಡು, ರಾಜ್ಯದಿಂದ ಓಡಿಸಲ್ಪಟ್ಟು, ಈ ಪರ್ವತದಲ್ಲಿ ವಾಸಿಸುತ್ತಿದ್ದಾನೆ. ಅವನೂ ಕೂಡ ನಿಮ್ಮ ದಾಸನೇ. ಅವನು ನಿಮ್ಮ ಸ್ನೇಹಕ್ಕೆ ತಕ್ಕವನು. ನೀವು ಆ ವಾನರ ರಾಜನಿಗೆ ಅಭಯವಿತ್ತು ಅವನ ಭೀತಿಯನ್ನು ಹೋಗಲಾಡಿಸಬೇಕು. ಅವನು ಸೀತಾನ್ವೇಷಣೆಯ ನಿಮಿತ್ತವಾಗಿ ಕೋಟ್ಯಂತರ ವಾನರರನ್ನು ನಾಲ್ಕು ದಿಕ್ಕುಗಳಿಗೂ ಕಳಿಸಿ ವಿಜಯವನ್ನು ಸಾಧಿಸಬಲ್ಲ ಸಮರ್ಥನು," ಎಂದು ಹೇಳಿ, ಸುಗ್ರೀವನ ರಾಜ ತಂತ್ರಜ್ಞತೆಯನ್ನೂ ಗುಣಗಣಗಳನ್ನೂ ವಿವರಿಸಿದನು.

**ಸುಗ್ರೀವ ಸಖ್ಯ**: ಸುಗ್ರೀವನೊಂದಿಗೆ ಸ್ನೇಹ ಮಾಡಿಸಲು ಹನುಮಂತನು ಶ್ರೀರಾಮಲಕ್ಷ್ಮಣರನ್ನು ತನ್ನ ಭುಜದ ಮೇಲೆ ಕೂರಿಸಿಕೊಂಡು ಕ್ಷಣಾರ್ಧದಲ್ಲಿ ಪರ್ವತದ ಮೇಲಕ್ಕೆ ಹಾರಿದನು. ರಾಮಲಕ್ಷ್ಮಣರ ದರ್ಶನ ಮಾತ್ರದಿಂದಲೇ ಕೃತಾರ್ಥನಾದೆನೆಂದು ಸುಗ್ರೀವನು ಆನಂದಿಸಿದನು. ಇವರ ಸ್ಥಿತಿಯನ್ನು ಅವರೂ ಅವರ ಸ್ಥಿತಿಯನ್ನು ಇವರೂ ಅರ್ಥಮಾಡಿಕೊಂಡರು. ಪರಸ್ಪರ ಸಹಾನುಭೂತಿ ವ್ಯಕ್ತಪಡಿಸಿದರು. ಅನ್ಯೋನ್ಯ ಸಂಬಂಧ ಕಲ್ಪಿಸಿಕೊಂಡರು. ಸುಗ್ರೀವನು ರಾಮ ಲಕ್ಷ್ಮಣರ ಪಾದಗಳಿಗೆರಗಿ ಸತ್ಕರಿಸಿದನು. ಸುಗ್ರೀವನ ಪರಿಸ್ಥಿತಿಯನ್ನು ಚೆನ್ನಾಗಿ ಅರ್ಥಮಾಡಿಕೊಂಡ, ಅವನ ರೀತಿ ನೀತಿಗಳನ್ನು ಮೆಚ್ಚಿಕೊಂಡ ರಾಮನು ಅವನಿಗೆ ಅಭಯವಿತ್ತನು. ಸುಗ್ರೀವನೂ ಕೂಡ ರಾಮ ಸೇವೆಯಲ್ಲಿ ತನ್ನ ಪ್ರಾಣವನ್ನಾದರೂ ಅರ್ಪಿಸಲು ಸಿದ್ಧನೆಂದು ವಾಗ್ದಾನವಿತ್ತನು. ಈ ಪ್ರಕಾರವಾಗಿ ಅವರಿಬ್ಬರೂ ಅಗ್ನಿ ಸಾಕ್ಷಿಯಾಗಿ ಸ್ನೇಹಿತರಾದರು.

ಅಗ್ನಿಯು ಸಕಲ ಜೀವರಾಶಿಗಳ ಹೃದಯಗಳಲ್ಲೂ ಇರುವುದು. ಮನೋವಿಕಾರ ಗಳು ಹುಟ್ಟಿದೊಡನೆ ಅವನ್ನು ದಹಿಸುವುದು. ರಾಮಾಯಣದಲ್ಲಿ ಅಗ್ನಿಯು ಬಹು ಪ್ರಧಾನವಾಗಿದೆ. ಅಗ್ನಿಹೋತ್ರನ ಪ್ರಸಾದದಿಂದ ರಾಮನು ಹುಟ್ಟಿದನು. ಅಗ್ನಿಸಾಕ್ಷಿಯಾಗಿ ರಾಮನು ಸೀತೆಯನ್ನು ಮದುವೆಯಾದನು. ಅಗ್ನಿಯ ಮೂಲಕ ರಾಮನ ಹೃದಯ ಪರಿಶುದ್ಧವಾಯಿತೆನ್ನುವುದು ಇದೆಲ್ಲದರ ಸೂಚನೆ. ಜ್ಞಾನವೇ

ರಾಮ, ಧರ್ಮವೇ ರಾಮ. ಈ ಕಾರಣದಿಂದಲೇ ಸುಗ್ರೀವನು ಕೂಡ ಅಗ್ನಿ ಸಾಕ್ಷಿಯಾಗಿ ಸ್ನೇಹಮಾಡಿಕೊಂಡನು. ಲಕ್ಷ್ಮಣನು ಕೂಡ ಸುಗ್ರೀವನಿಗೆ ರಾಮನ ವೃತ್ತಾಂತವನ್ನು ಆಗಾಗ ಹೇಳುತ್ತಿದ್ದನು.

**ಆಭರಣಗಳು**: "ಸೀತೆಯು ಮಿಥಿಲಾಪತಿಯ ಮಗಳು. ಮಥಿಸಲ್ಪಟ್ಟ ವಂಶವಾದ್ದರಿಂದ ಅದಕ್ಕೆ ಮಿಥಿಲಾವಂಶವೆನ್ನುವ ನಾಮ. ಆದ್ದರಿಂದಲೇ ಅವಳು ವಿಶೇಷ ಮಥನವಿಲ್ಲದೆ ದೊರಕುವವಳಲ್ಲ," ಎಂದು ಲಕ್ಷ್ಮಣನು ಸುಗ್ರೀವನಿಗೆ ಸೀತೆಯ ವೃತ್ತಾಂತವನ್ನೆಲ್ಲಾ ತಿಳಿಸಿದನು. ಅದನ್ನು ಕೇಳಿ ಸುಗ್ರೀವನು ಕಣ್ಣೀರು ಸುರಿಸುತ್ತಾ, "ಓ ನಾಥಾ! ಒಂದಾನೊಂದು ದಿನ ನಾನು ಮಂತ್ರಿಗಳೊಂದಿಗೆ ಸಮಾಲೋಚನೆ ನಡೆಸುತ್ತಿದ್ದಾಗ ಆಕಾಶಮಾರ್ಗದಲ್ಲಿ ಪುಷ್ಪಕ ವಿಮಾನವೊಂದು ಹೋಯಿತು. ಅದರಿಂದ, 'ರಾಮಾ ರಾಮಾ,' ಎನ್ನುವ ಕೂಗು ಕೇಳಿಬಂತು. ನಾವು ಆ ವಿಚಿತ್ರವನ್ನು ನೋಡುತ್ತಿದ್ದಂತೆಯೇ ಆಕೆಯು ಒಂದು ವಸ್ತ್ರದಲ್ಲಿ ತನ್ನ ಆಭರಣಗಳನ್ನು ಗಂಟು ಕಟ್ಟಿ, ಈ ಪರ್ವತದ ಮೇಲೆ ನೋಡುತ್ತಾ ನಿಂತಿದ್ದ ನಮ್ಮತ್ತ ಒಗೆದಳು. ಅದು ಆಭರಣಗಳ ಗಂಟಾದುದರಿಂದ ಭದ್ರವಾಗಿ ಇಟ್ಟಿದ್ದೇವೆ. ಬಹುಶಃ ರಾವಣನೇ ಆಕೆಯನ್ನು ಅಪಹರಿಸಿಕೊಂಡು ಹೋಗಿರಬೇಕು. ಆ ದುರ್ಮಾರ್ಗಿಯು ಮಾಡದೇ ಇರುವುದು ಯಾವುದೂ ಇಲ್ಲ," ಎಂದು ಸುಗ್ರೀವನು ರಾವಣನ ಮೇಲಿನ ಸಿಟ್ಟಿನಿಂದ ಕಟ ಕಟ ಹಲ್ಲು ಕಡಿದನು. ರಾಮನು, "ಸುಗ್ರೀವಾ! ಎಲ್ಲಿ? ಆ ಆಭರಣಗಳ ಗಂಟನ್ನು ತರಿಸು," ಎಂದು ಆಜ್ಞಾಪಿಸಿದನು.

ಸುಗ್ರೀವನು ತಾನೇ ಹೋಗಿ ಗುಹೆಯಲ್ಲಿ ಭದ್ರವಾಗಿಟ್ಟಿದ್ದ ಆ ಗಂಟನ್ನು ತಂದು ರಾಮನ ಮುಂದಿಟ್ಟನು. ಆಭರಣಗಳನ್ನು ಕಟ್ಟಿದ್ದ ಆ ವಸ್ತ್ರವು ವನವಾಸಕ್ಕೆ ಹೊರಡುವಾಗ ಕೈಕೆಯು ಸೀತೆಯ ಮೇಲೆ ಒಗೆದಿದ್ದ ನಾರುವಸ್ತ್ರ ಎನ್ನುವುದನ್ನು ಗುರುತಿಸಿದ ತಕ್ಷಣ ಲಕ್ಷ್ಮಣನು ದುಃಖದಿಂದ ಕಣ್ಣೀರು ಹಾಕಿದನು. ಅವನನ್ನು ನೋಡಿ ಸುಗ್ರೀವ ಹನುಮಂತ ಮೊದಲಾದವರೂ ದುಃಖಿಸಿದರು. ರಾಮನು ಆ ಗಂಟನ್ನು ಬಿಚ್ಚಿ, ಆ ಆಭರಣಗಳನ್ನು ಲಕ್ಷ್ಮಣನಿಗೆ ತೋರಿಸಿ, "ಇವು ಜಾನಕಿಯ ಆಭರಣಗಳೇ ನೋಡು?" ಎಂದನು. ಲಕ್ಷ್ಮಣನು, "ಅಣ್ಣಾ! ಎಲ್ಲ ಒಡವೆಗಳೂ ಸೀತೆಯವು ಹೌದೋ ಅಲ್ಲವೋ ನನಗೆ ತಿಳಿಯದು. ನಾನೆಂದೂ ಸೀತೆಯ ಆಭರಣಗಳನ್ನು ಕಣ್ಣೆತ್ತಿ ನೋಡಿದವನಲ್ಲ," ಎನ್ನುತ್ತಾ, ಕಾಲುಂಗುರಗಳನ್ನು ಮಾತ್ರ ಕೈಗೆತ್ತಿಕೊಂಡು, "ಅಣ್ಣಾ, ಇವು ತಾಯಿಯ ಕಾಲುಂಗುರಗಳೇ ಹೌದು. ನನಗೆ ಸಂಶಯವಿಲ್ಲ. ನಿತ್ಯವೂ ಬೆಳಗ್ಗೆ ಅವರ ಪಾದಗಳಿಗೆ ನಮಸ್ಕಾರ ಮಾಡುವ ಸಮಯದಲ್ಲೂ ವನವಾಸ ಕಾಲದಲ್ಲಿ ಮುಂದೆ ನೀವೂ ನಿಮ್ಮ ಹಿಂದೆ ಸೀತೆಯೂ ನಡೆದು ಹೋಗುತ್ತಿದ್ದ ಸಮಯದಲ್ಲಿ, ನಾನು ಹಿಂದೆ ಆಕೆಯ ಪಾದಗಳನ್ನೇ ನೋಡುತ್ತಾ

ಅನುಸರಿಸುತ್ತಾ ನಡೆದು ಬರುತ್ತಿದ್ದಾಗಲೂ ಅವುಗಳನ್ನು ಚೆನ್ನಾಗಿ ನೋಡಿದ್ದರಿಂದ ಅವುಗಳನ್ನು ಗುರುತಿಸಬಲ್ಲೆ," ಎಂದನು. ಸೀತೆಯನ್ನು ಜ್ಞಾಪಿಸಿಕೊಂಡು ಸ್ವಲ್ಪ ಹೊತ್ತು ರಾಮಲಕ್ಷ್ಮಣರಿಬ್ಬರೂ ಚಿಂತಾಕ್ರಾಂತರಾದರು. ಅದನ್ನು ನೋಡಿ ಸುಗ್ರೀವನೂ ಹನುಮಂತನೂ ಅವರನ್ನು ಸಮಾಧಾನಪಡಿಸಿದರು.

ಸುಗ್ರೀವನು ಅವರ ಮುಖವನ್ನು ನೋಡಲಾರದೆ, "ನಾಥಾ! ದುಃಖಿಸಬೇಡ. ಇಂದಿನಿಂದಲೇ ಅದಕ್ಕೆ ಬೇಕಾದ ಪ್ರಯತ್ನ ನಡೆಸಿ, ಸೀತೆ ಇರುವ ಸ್ಥಳ ತಿಳಿದೊಡನೆಯೇ ರಾವಣನನ್ನು ಕೊಂದು, ಸೀತೆಯನ್ನು ನಿಮಗೆ ತಂದೊಪ್ಪಿಸುತ್ತೇವೆ. ಇದು ನನ್ನ ಪ್ರತಿಜ್ಞೆ," ಎಂದು ರಾಮನಿಗೆ ವಾಗ್ದಾನವಿತ್ತನು. ಸುಗ್ರೀವನ ವಾಗ್ದಾನಕ್ಕೆ ರಾಮನು ಸಂತೋಷಪಟ್ಟು, "ಗೆಳೆಯಾ! ನೀನು ಈ ಅಡವಿಯಲ್ಲಿ ವಾಸ ಮಾಡಲು ಕಾರಣವೇನೆನ್ನುವುದನ್ನು ವಿವರವಾಗಿ ತಿಳಿಸು," ಎಂದನು. ಸುಗ್ರೀವನನ್ನು ತನ್ನ ತಂದೆ ಯಾರು, ತನ್ನ ನಿಜ ನಿವಾಸವಾವುದು, ತನ್ನ ಅಣ್ಣನಿಗೂ ತನಗೂ ವಿರೋಧವುಂಟಾಗಲು ಕಾರಣವೇನು ಎನ್ನುವುದೆಲ್ಲವನ್ನು ಚಾಚೂ ತಪ್ಪದೆ ಹೇಳಿದನು. ರಾಮನು ಅವನ ಚರಿತ್ರೆಯು ಸ್ವಲ್ಪ ಹೆಚ್ಚು ಕಡಿಮೆ ತನ್ನ ಚರಿತ್ರೆಯನ್ನು ಹೋಲುವಂತೆಯೇ ಇದೆ ಎಂದುಕೊಂಡನು. ಪತ್ನಿ ವಿಯೋಗದಲ್ಲೂ ರಾಜ್ಯಭ್ರಷ್ಟತೆಯಲ್ಲೂ ಇಬ್ಬರದೂ ಒಂದೇ ಪರಿಸ್ಥಿತಿ ಎಂದುಕೊಂಡನು. ಅವನ ಮಾತಿನಿಂದ, ಸುಗ್ರೀವನು ನೀತಿ ನಿಯಮಗಳುಳ್ಳವನೆನ್ನುವುದನ್ನು ಗುರುತಿಸಿದನು. ತಮ್ಮನ ಹೆಂಡತಿಯನ್ನು ಅಣ್ಣನಾದವನು ಅಪಹರಿಸುವುದು ಕೋತಿ ಜಾತಿಗೆ ವಿರುದ್ಧವಾದುದೆಂದೂ ಇಂಥ ಧರ್ಮವಿರುದ್ಧವಾದ ಮಾರ್ಗವನ್ನನುಸರಿಸಿರುವುದರಿಂದ ವಾಲಿಯು ಶಿಕ್ಷಾರ್ಹನೆಂದೂ ನಿಶ್ಚಯಿಸಿದನು.

**ವಾಲಿ ಸುಗ್ರೀವರು**: ನಂತರ ಸುಗ್ರೀವನನ್ನು ಕುರಿತು, "ನಿನ್ನ ಜನ್ಮ ವೃತ್ತಾಂತವನ್ನು ಕೇಳಬಯಸುತ್ತೇನೆ," ಎಂದನು. ಸುಗ್ರೀವನು "ನಾಥಾ! ನನ್ನ ವಂಶದ ಪೂರ್ವೋತ್ತರವೆಲ್ಲವನ್ನೂ ನಿಮ್ಮ ಪಾದಗಳಲ್ಲಿ ಇಡಬಯಸುತ್ತೇನೆ. ಆಲೈಸಬೇಕು," ಎಂದು, ಹೇಳಲು ಮೊದಲು ಮಾಡಿದನು. "ಒಂದು ದಿನ ಸೃಷ್ಟಿಕರ್ತನು ಒಂದು ಸಣ್ಣ ಕೋತಿಯ ರೂಪವನ್ನು ಸೃಷ್ಟಿಸಿದನು. ಅದು ಬಹು ಬಲಶಾಲಿ, ಆದರೆ, ಚಂಚಲ ಸ್ವಭಾವದ್ದಾಗಿತ್ತು. ಅದು ತನ್ನ ಸಮಾನವಾದುದಾದರೂ ಚಂಚಲ ಸ್ವಭಾವದ್ದಾದುದರಿಂದ, ಬ್ರಹ್ಮನು ಅದಕ್ಕೆ ವೃಕ್ಷರಾಜ ಎಂದು ಹೆಸರಿಟ್ಟನು. ಆ ವಾನರನು ಬ್ರಹ್ಮನಿಗೆ ನಮಸ್ಕರಿಸಿ, 'ಸ್ವಾಮಿ! ನಿಮ್ಮ ಆಜ್ಞೆ ಏನು?' ಎಂದು ಪ್ರಾರ್ಥಿಸಿದನು. ಬ್ರಹ್ಮನು, 'ವಾನರಾ, ನೀನು ಅಡವಿಯಲ್ಲಿ ಸ್ವೇಚ್ಛೆಯಾಗಿ ಫಲಗಳನ್ನು ತಿನ್ನು. ನಿನ್ನ ಕೈಗೆ ಸಿಕ್ಕಿದ ರಾಕ್ಷಸರನ್ನು ಸಂಹರಿಸು,' ಎಂದನು.

ನಂತರ, ವೃಕ್ಷರಾಜನು ದಕ್ಷಿಣ ದೇಶಕ್ಕೆ ಹೊರಟನು. ಒಂದು ದಿನ ವಾನರನು ವನದಲ್ಲಿ ಸಂಚರಿಸುತ್ತಿದ್ದಾಗ, ಒಂದು ಕೊಳಕ್ಕೆ ನೀರು ಕುಡಿಯಲು ಹೋದನು. ಆ ಕೊಳದ ನೀರಿನಲ್ಲಿ ಯಾರೋ ತನ್ನಂತೆಯೇ ಇರುವ ಒಬ್ಬ ಶತ್ರು ಅಡಗಿರುವನೆಂದು ಭಾವಿಸಿ ಚಿಂತಿಸತೊಡಗಿದನು. ಆ ಶತ್ರುವಿನ ಮೇಲಿನ ಕೋಪದಿಂದ ಆ ಕೊಳದ ಸುತ್ತಲೂ ತಿರುಗುತ್ತಿದ್ದನು. ಅವನು ಮಾಡುತ್ತಿದ್ದುದಕ್ಕೆಲ್ಲಾ ನೀರಿನಿಂದ ಪ್ರತಿಧ್ವನಿ ಹೊರಡುತ್ತಿತ್ತು. ಅದಕ್ಕೆ ಪ್ರತಿಯಾಗಿ ಆ ವಾನರನು ಗಟ್ಟಿಯಾಗಿ ಗರ್ಜಿಸುತ್ತಿದ್ದನು. ಆಗ ನೀರಿನಲ್ಲಿದ್ದ ಆ ಪ್ರತಿಬಿಂಬವೂ ಗಟ್ಟಿಯಾಗಿ ಗರ್ಜಿಸುತ್ತಿತ್ತು. ಅದನ್ನು ಸಹಿಸಲಾರದೆ ವಾನರನು ನೀರಿಗೆ ಹಾರಿದನು. ಆ ಕ್ಷಣವೇ ಅವನು ಸ್ತ್ರೀಯಾಗಿ ಮಾರ್ಪಟ್ಟನು. ಆ ಸ್ತ್ರೀಯು ದಡಕ್ಕೆ ಬಂದು, 'ದೈವವೇ ಏನಿದು ವಿಚಿತ್ರ?' ಎಂದು ಸೂರ್ಯನತ್ತ ತಿರುಗಿ ಪ್ರಾರ್ಥಿಸುತ್ತಾ ಇಂದ್ರನನ್ನು ಮನಸಾರೆ ಸ್ಮರಿಸಿದಳು. ಅವಳಿಗೆ ಇಂದ್ರನ ವರಪ್ರಸಾದದಿಂದ ಒಬ್ಬ ಕುಮಾರನೂ ಸೂರ್ಯನ ವರಪ್ರಸಾದದಿಂದ ಒಬ್ಬ ಕುಮಾರನೂ ಹುಟ್ಟಿದರು. ಇಂದ್ರನ ವರಪ್ರಸಾದವಾದ ಮಗುವಿಗೆ ವಾಲಿಯೆಂದು, ಸೂರ್ಯನ ವರಪ್ರಸಾದದಿಂದ ಹುಟ್ಟಿದ ಮಗುವಿಗೆ ಸುಗ್ರೀವನೆಂದು ಹೆಸರಾಯಿತು.

ಈ ಇಬ್ಬರೂ ಹುಟ್ಟಿದ ತಕ್ಷಣವೇ ವೃಕ್ಷರಾಜನ ಸ್ತ್ರೀರೂಪವು ಹೋಗಿ ಅವನು ಪುನಃ ವೃಕ್ಷರಾಜನಾದನು. ಅವನು ಈ ಇಬ್ಬರೂ ಮಕ್ಕಳನ್ನು ಜೊತೆಯಲ್ಲಿಟ್ಟು ಕೊಂಡು, ಬ್ರಹ್ಮನಿಗೆ ತನ್ನ ಕಥೆಯನ್ನೆಲ್ಲಾ ಹೇಳಿಕೊಳ್ಳುತ್ತಾ ಅವನನ್ನು ಪ್ರಾರ್ಥಿಸಿದನು. ಆಗ, 'ಓ! ವಾಲಿಸುಗ್ರೀವರುಗಳಿರಾ! ನೀವು ಅಣ್ಣ ತಮ್ಮಂದಿರಿಬ್ಬರೂ ದಕ್ಷಿಣ ದಿಕ್ಕಿಗೆ ಹೋಗಿ ಕಿಷ್ಕಿಂಧಾಪುರದಲ್ಲಿ ವಾಸಮಾಡಿ. ಚರಾಚರ ಜಗನ್ನಾಥನೂ ಅನೇಕ ನಾಮನೂ ಆದ ಶ್ರೀರಾಮನು ರಘುವಂಶದಲ್ಲಿ, ದಶರಥ ಮಹಾರಾಜನಲ್ಲಿ ಜನಿಸಿ, ತಂದೆಯಾಜ್ಞೆಯನ್ನನುಸರಿಸಿ ವನಕ್ಕೆ ಬರುವನು. ಅತಿಮಾನುಷ ಚರ್ಯೆಗಳನ್ನು ಮಾಡುತ್ತಾ ಕೇವಲ ಮಾನವನಂತಿದ್ದು ಲೀಲೆಗಳನ್ನು ಮಾಡುತ್ತಾ ತಿರುಗುತ್ತಾ ನೀವಿರುವ ಕಿಷ್ಕಿಂಧೆಗೆ ಬರುವನು. ಆಗ ಅವನೊಂದಿಗೆ ಸ್ನೇಹವೇರ್ಪಟ್ಟು, ಅವನ ದರ್ಶನ ಸ್ಪರ್ಶನ ಸಂಭಾಷಣೆಗಳಿಂದ ನಿಮ್ಮ ಜನ್ಮಗಳು ಸಾರ್ಥಕವಾಗುವುವು,' ಎಂದನು.

**ಮಾಯಾವಿ ವಧೆ**: ರಾಮಚಂದ್ರಾ! ಬ್ರಹ್ಮನ ಅಶರೀರ ವಾರ್ತೆಯನ್ನು ನಾವಿಬ್ಬರೂ ಕೇಳಿ, ಸಂತೋಷಪಟ್ಟೆವು. ನಾವು ಯಾವ ಜಪ ತಪ ಯಜ್ಞಯಾಗಾದಿ ಕರ್ಮಗಳೇನನ್ನೂ ಮಾಡಲಿಲ್ಲ. ಬ್ರಹ್ಮನ ಪ್ರಭಾವವೇ ನಮ್ಮ ಸರ್ವ ಶಕ್ತಿ ಸಾಮರ್ಥ್ಯಗಳು. ಆದ್ದರಿಂದ, ಆ ಶಬ್ದಬ್ರಹ್ಮಕ್ಕೆ ನಮಸ್ಕರಿಸಿ ಕಿಷ್ಕಿಂಧೆಯನ್ನು ಸೇರಿದೆವು. ಆ ಅಡವಿಯಲ್ಲಿನ ರಾಕ್ಷಸರನ್ನು ಸಂಹರಿಸಿದೆವು. ಅವರಲ್ಲಿ, ಮಾಯನೆನ್ನುವ ರಾಕ್ಷಸನಿಗೆ ಮಾಯಾವಿ, ದುಂದುಭಿ ಎನ್ನುವ ಕುಮಾರರಿಬ್ಬರು ಇದ್ದರು. ಅವರು ಮಹಾ ರಣವೀರರು.

ಒಂದು ದಿನ, ಮಾಯಾವಿಯು ನಮ್ಮೊಂದಿಗೆ ಘೋರ ಯುದ್ಧ ಮಾಡಲು ಸಂಸಿದ್ಧನಾಗಿ ಬಂದನು. ನಡುರಾತ್ರಿಯಲ್ಲಿ ನಮ್ಮ ನಿವಾಸದ ಸಮೀಪಕ್ಕೆ ಬಂದು ಬೊಬ್ಬೆ ಹಾಕಿದನು. ಶತ್ರುಗಳ ಪೊಗರನ್ನು ನನ್ನ ಅಣ್ಣ ವಾಲಿ ಸಹಿಸುವವನಲ್ಲ. ಆ ಕ್ಷಣವೇ ಹೊರಟು ವಾಲಿಯು ಅವನನ್ನೆದುರಿಸಿದನು. ವಾಲಿಯನ್ನು ನೋಡಿ ಮಾಯಾವಿಯು ಓಡಿ ಹೋದನು. ವಾಲಿಯು ಅವನ ಬೆನ್ನಟ್ಟಿದನು. ಆಗ ಅವನು ಹೋಗಿ ಒಂದು ಗವಿಯಲ್ಲಿ ಅಡಗಿಕೊಂಡನು. ನಾನೂ ಅಣ್ಣನಾದ ವಾಲಿಯು ಜೊತೆ ಹೋಗಿದ್ದೆ. ವಾಲಿಯು ನನ್ನನ್ನು ಕರೆದು, 'ತಮ್ಮಾ! ನಾನು ಅವನನ್ನು ಕೊಲ್ಲಲು ಇದರೊಳಗೆ ಹೋಗುತ್ತೇನೆ, ಅವನು ಹೊರಗೆ ಹೋಗದಂತೆ ಕಾದಿರು,' ಎಂದು ಹೇಳಿದನು. ಎಷ್ಟು ಸಮಯ ನಾನಿಲ್ಲಿ ಕಾದಿರಬೇಕೆಂದು ಅಣ್ಣನನ್ನು ಕೇಳಿದೆ. ಅದಕ್ಕೆ ಅವನು, 'ಹದಿನೈದು ದಿನಗಳಾದರೂ ನೀನಿಲ್ಲಿರಬೇಕು. ಒಂದು ವೇಳೆ ಹದಿನಾರನೆ ದಿನ ತಿರುಗಿ ಬರದಿದ್ದ ಪಕ್ಷದಲ್ಲಿ, ಅವನು ನನ್ನನ್ನು ಸಂಹರಿಸಿದ್ದಾನೆಂದು ತಿಳಿದು ಹಿಂತಿರುಗು,' ಎಂದು ಹೇಳಿ ಗವಿಯನ್ನು ಪ್ರವೇಶಿಸಿದನು. ನಾನು ಮೂವತ್ತು ದಿನಗಳು ಕಾದರೂ ವಾಲಿಯೂ ಬರಲಿಲ್ಲ. ಆ ವೇಳೆಗೆ ಗುಹೆಯಿಂದ ರಕ್ತದ ವಾಸನೆ ಬಂದಿತು. ಆ ವಾಸನೆಯು ನನ್ನ ಅಣ್ಣ ವಾಲಿಯದೆಂದು ಗುರುತಿಸಿದೆ.

ಇನ್ನು ಅಲ್ಲಿದ್ದು ಪ್ರಯೋಜನವಿಲ್ಲವೆಂದು ನಿಶ್ಚಯಿಸಿ ಆ ರಾಕ್ಷಸನು ತಿರುಗಿ ಹೊರಗೆ ಬರದಂತೆ ಒಂದು ದೊಡ್ಡ ಬಂಡೆಯನ್ನು ಆ ಗುಹೆಯ ಬಾಗಿಲಿಗೆ ಅಡ್ಡ ಇಟ್ಟು, ದುಃಖದಿಂದ ಕಾಲ ಕಳೆಯುತ್ತಿದ್ದೆ. ವಾಲಿಯು ಮಹಾ ಬಲಶಾಲಿ. ಅಂಥ ಬಲ ಶಾಲಿಯು ಮಾಯಾವಿಯಾದ ಆ ರಾಕ್ಷಸನಿಂದ ಕೊಲ್ಲಲ್ಪಟ್ಟನೆಂದರೆ, ಇನ್ನು ಆ ಮಾಯಾವಿಗೆ ನಾನೊಂದು ಲೆಕ್ಕವೆ? ಯಾವ ಕ್ಷಣದಲಿ ನನ್ನ ಪ್ರಾಣ ತೆಗೆಯುವನೊ ಎಂದು ಅದುರುತ್ತಾ ಬೆದರುತ್ತಾ ಕಾಲ ಕಳೆಯುತ್ತಿದ್ದೆ. ಪುರವಾಸಿಗಳು ಸಹ ಭಯಭ್ರಾಂತರಾಗಿದ್ದರು. ಅವರೆಲ್ಲರೂ ಸೇರಿ, ನಮಗೆ ಯಾರಾದರೂ ಒಬ್ಬರೂ ನಾಯಕರಿರಲೇಬೇಕಲ್ಲವೆ? ನಿಮ್ಮ ಅಣ್ಣನಾದ ವಾಲಿಯು ಮರಣ ಹೊಂದಿರುವರಾದ್ದರಿಂದ ಆ ಸ್ಥಾನಕ್ಕೆ ನೀವೇ ಬಂದು ನಮ್ಮನ್ನು ರಕ್ಷಿಸಿರೆಂದು ನನ್ನನ್ನು ಕೋರಿದರು. ನನಗೆ ಅಂಥ ನಾಯಕತ್ವದ ಮೇಲೆ ಇಷ್ಟವಿರಲಿಲ್ಲ. ಆದರೂ, ಪ್ರಜೆಗಳು ಬಲ ವಂತಪಡಿಸಿ ನನನ್ನು ನಾಯಕನನ್ನಾಗಿ ಮಾಡಿದರು. ಇದಾದ ಎರಡು ಮೂರು ದಿನಗಳಲ್ಲೆ ಅಣ್ಣ ವಾಲಿಯು ಮಾಯಾವಿಯನ್ನು ಕೊಂದು ವಿಜಯಿಯಾಗಿ ನಗರವನ್ನು ಪ್ರವೇಶಿಸಿದನು.

**ವಾಲಿಯ ಕ್ರೋಧ**: ನಾನು ನಾಯಕನಾಗಿದ್ದುದನ್ನು ತಿಳಿದ ವಾಲಿಯು ನನ್ನ ಮೇಲೆ ವಿಪರೀತ ಕ್ರೋಧ ಕಾರಿದನು. ಅವನನ್ನು ಕೊಂದು ನಾನು ನಾಯಕನಾಗ ಬೇಕೆಂಬ ಉದ್ದೇಶದಿಂದ ಅವನು ಗುಹೆಯಿಂದ ಹೊರಗೆ ಬರದಂತೆ ಗುಹೆಗೆ

ಅಡ್ಡಲಾಗಿ ನಾನು ಕಲ್ಲುಬಂಡೆ ಸರಿಸಿದ್ದೆನೆಂದು ಭಾವಿಸಿದನು. ಅಂದಿನಿಂದ ನನ್ನ ಮೇಲೆ ವೈರವನ್ನು ಸಾಧಿಸಲಾರಂಭಿಸಿದನು. ನನ್ನನ್ನು ಶತ್ರುವೆಂದು ಭಾವಿಸಿ ಪ್ರತಿ ಸಣ್ಣ ವಿಷಯದಲ್ಲೂ ನನ್ನನ್ನು ಹೀನಾತಿಹೀನವಾಗಿ ಅವಮಾನ ಮಾಡುತ್ತಾ ಬಂದನು. ನನ್ನ ಎಲ್ಲ ಅಧಿಕಾರಗಳನ್ನೂ ಕಿತ್ತುಕೊಂಡು ನನ್ನನ್ನು ಒಬ್ಬ ಕೆಲಸದಾಳಿನಂತೆ ಸಹ ಕಾಣದೆ ನನ್ನನ್ನು ಭವನದಿಂದ ಹೊರಹಾಕಿ, ನನ್ನ ಹೆಂಡತಿಯನ್ನು ತನ್ನ ಸ್ವಾಧೀನಮಾಡಿಕೊಂಡನು. ಹೀಗಿರುವಾಗ ಒಂದು ದಿನ ನನ್ನನ್ನು ಕೊಲ್ಲಲು ನಿಶ್ಚಯಿಸಿ, ನನ್ನೊಂದಿಗೆ ಹೋರಾಡಿದನು. ಅವನ ಬಲಕ್ಕೆ ನಾನು ಸರಿಸಮನಲ್ಲವಾದ್ದರಿಂದ ನಾನು ಕಿಷ್ಕಿಂಧೆಯನ್ನು ಬಿಟ್ಟು ಹೊರಟು ಬರಬೇಕಾಯಿತು. ಕೆಲವರು ನನ್ನ ಅಭಿಮಾನಿಗಳೂ ನನ್ನ ಕಷ್ಟವನ್ನು ನೋಡಿ ನನಗೆ ಸಹಾಯ ಮಾಡುತ್ತಿದ್ದ ಮಂತ್ರಿಗಳೂ ನನ್ನ ಅನುಚರರೂ ಕಿಷ್ಕಿಂಧೆಯಲ್ಲಿ ಇರಬಾರದೆಂದು ವಾಲಿಯ ಕಠಿಣವಾಗಿ ಆಜ್ಞೆ ಮಾಡಿದ್ದರಿಂದ, ಅವರೂ ಕಿಷ್ಕಿಂಧೆಯನ್ನು ಬಿಟ್ಟು ನನ್ನೊಂದಿಗೆ ಬಂದರು. ನನ್ನ ಹೆಂಡತಿಯೂ ನನ್ನೊಂದಿಗೆ ಬರಲು ಎಷ್ಟು ಪ್ರಯತ್ನಪಟ್ಟರೂ ವಾಲಿಯು ಅವಳನ್ನು ಬಿಡದೆ, ಹಿಂಸಿಸಿ, ತನ್ನ ಹೆಂಡತಿಯಾಗಿ ಸ್ವೀಕರಿಸಿ, ಅಲ್ಲೇ ಇಟ್ಟುಕೊಂಡನು," ಎಂದು ಸುಗ್ರೀವನು ಕಣ್ಣೀರು ಹಾಕಿದನು.

ರಾಮನು ಅವನನ್ನು ಸಮಾಧಾನಪಡಿಸಿ, ಅವನನ್ನು ರಕ್ಷಿಸುವುದಾಗಿ ಮತ್ತೆ ವಾಗ್ದಾನ ಮಾಡಿದನು. "ಬೇರೆ ಮಾರ್ಗವಿಲ್ಲದೆ ನಾನು ಈ ಪರ್ವತದಲ್ಲಿ ವಾಸಮಾಡುತ್ತಿದ್ದೇನೆ. ಮುನಿ ಶಾಪದಿಂದಾಗಿ ವಾಲಿಯು ಈ ಪರ್ವತಕ್ಕೆ ಬರುವುದು ಸಾಧ್ಯವಿಲ್ಲ. ಆದ್ದರಿಂದ, ನಾವು ಇಷ್ಟು ಧೈರ್ಯದಿಂದ ಇಲ್ಲಿ ಜೀವಿಸಲು ಸಾಧ್ಯವಾಗಿದೆ," ಎಂದು ಸುಗ್ರೀವನು ಹೇಳಿದನು. ರಾಮನು, "ಸಖನೇ! ಮುನಿ ಶಾಪವೆಂದೆಯಲ್ಲಾ, ಕಾರಣವೇನು?" ಎಂದು ಕೇಳಲು, ಸುಗ್ರೀವನು, "ನಾಥಾ! ಮಾಯಾವಿಯ ಸೋದರನಾದ ದುಂದುಭಿಯು ಮಹಾ ಶೂರ. ಅವನ ಸಮಾನ ಬಲಶಾಲಿಗಳು ಯಾರೂ ಇಲ್ಲ. ಅವನು ತನ್ನ ಬಲವನ್ನು ಪರೀಕ್ಷಿಸಿಕೊಳ್ಳುವುದಕ್ಕಾಗಿ ಪರ್ವತದೊಂದಿಗೆ ಸಮುದ್ರದೊಂದಿಗೆ ಹೋರಾಡುತ್ತಿದ್ದನು. ಒಂದು ದಿನ ಅವನು ನನಗಿಂತ ಬಲಶಾಲಿ ಲೋಕದಲ್ಲೇ ಇಲ್ಲವೆಂದು ಗರ್ವಿಸುತ್ತಿದ್ದಾಗ, ಅಶರೀರವಾಣಿಯೊಂದು, "ದುಂದುಭೀ! ನೀನಿಷ್ಟು ಗರ್ವಿಸಬೇಡ. ನಿನಗಿಂತ ಬಲಶಾಲಿಯಾದವನೊಬ್ಬನಿದ್ದಾನೆ. ಅವನು ಪಂಪಾ ಸರೋವರದಲ್ಲಿ ವಾಲಿ ಎನ್ನುವ ಹೆಸರಿನಿಂದ ನಾಯಕನಾಗಿ ಸ್ವೇಚ್ಛಾವಿಹಾರಿಯಾಗಿದ್ದಾನೆ," ಎಂದಿತು. ಅದನ್ನು ಕೇಳಿದಾಕ್ಷಣ ದುಂದುಭಿಯು ಕಿಷ್ಕಿಂಧೆಯನ್ನು ಪ್ರವೇಶಿಸಿ ಮಹಿಷ ರೂಪವನ್ನು ಧರಿಸಿ ಗರ್ಜಿಸುತ್ತಾ ಕೊಂಬುಗಳಿಂದ ನೆಲವನ್ನು ಬಗೆಯುತ್ತಾ ಭಯಭೀತಿ ಇಲ್ಲದೆ ಆರ್ಭಟಿಸುತ್ತಿದ್ದನು. ಅವನು ಭೂಮಿಯನ್ನು ಬಗೆಯುತ್ತಿದ್ದರಿಂದ ವೃಕ್ಷಗಳು ನೆಲಕ್ಕುರುಳುತ್ತಿದ್ದುವು.

ಅವನ ಸಿಂಹನಾದ ಹೃದಯವನ್ನು ನಡುಗಿಸುತ್ತಿತ್ತು. ಮಾಯಾವಿಯು ಆರ್ಭಟಿಸುತ್ತಿರಲು, ಚಂದ್ರನನ್ನು ರಾಹು ಹಿಡಿದಂತೆ, ವಾಲಿಯು ಬಂದು ಅವನ ಮೇಲೆರಗಿದನು. ಅವರಿಬ್ಬರೂ ಎರಡು ಮದಿಸಿದ ಆನೆಗಳಂತೆ ಕಾಣುತ್ತಿದ್ದರು. ಇಬ್ಬರೂ ಮಲ್ಲಯುದ್ಧ ಪ್ರಾರಂಭಿಸಿದರು. ನಾಲ್ಕು ಯಾಮಗಳು ಹೊರಾಡಿದರು. ಕೊನೆಗೆ ವಾಲಿಯು ದುಂದುಭಿಯನ್ನು ಅಪ್ಪಳಿಸಿದನು. ಆ ಹೊಡೆತಕ್ಕೆ ಅವನು ಗಿರಗಿರನೆ ತಿರುಗಿ ಪರ್ವತದಂತೆ ನೆಲಕ್ಕುರುಳಿದನು.

ಅವನ ಕಳೇಬರವು ನೆಲಕ್ಕೆ ಬೀಳುತ್ತಲೇ ಕೆಲವು ವೃಕ್ಷಗಳು ಅವನ ದೇಹವನ್ನು ಎರಡು ಭಾಗವಾಗಿಸಿದುವು; ದಕ್ಷಿಣೋತ್ತರ ದಿಕ್ಕುಗಳಿಗೆ ಒಂದೊಂದು ಭಾಗವು ಹೋಗಿ ಬಿದ್ದವು. ಒಂದು ಭಾಗವು ಮತಂಗ ಮುನಿಯ ಆಶ್ರಮಕ್ಕೆ ಹೋಗಿ ಬಿದ್ದಿತು. ಆಶ್ರಮವೆಲ್ಲಾ ರಕ್ತಮಯವಾಯಿತು. ಜಪತಪಾದಿಗಳಲ್ಲಿ ನಿರತರಾಗಿದ್ದ ಆಶ್ರಮವಾಸಿಗಳ ಮೇಲೆ ದುಂದುಭಿಯ ರಕ್ತ ಬಿಂದುಗಳು ಬಿದ್ದವು. ಮತಂಗ ಮುನಿಯು ಸ್ನಾನಮಾಡಿ ಬಂದು ನೋಡಿದರು. ಆಶ್ರಮದಲ್ಲಿ ಎಲ್ಲಿ ನೋಡಿದರೂ ರಕ್ತದ ಬಿಂದುಗಳೇ. ಒಂದು ಮಹಾ ಭಯಂಕರವಾದ ದೇಹದ ಅರ್ಧಭಾಗ ತನ್ನ ಆಶ್ರಮದಲ್ಲಿ ಬಂದು ಬಿದ್ದಿರುವುದನ್ನು ನೋಡಿ ಸಹಿಸಲಾರದೆ ಹೋದರು. ಆನಂದದಲ್ಲಿ ಮುಳುಗಿರಬೇಕಾದ ತನ್ನ ಶಿಷ್ಯರು ರಕ್ತದಲ್ಲಿ ಮುಳುಗಿ, ಅತಿ ಅಸಹ್ಯವಾದ ರೀತಿಯಲ್ಲಿ ಬಾಧೆಪಡುತ್ತಿರುವುದನ್ನು ನೋಡಿ ಉದ್ರೇಕಗೊಂಡರು. ಇಂಥ ಪಾಪ ಕಾರ್ಯವೆಸಗಿದವರು ಯಾರೆಂದು ವಿಚಾರಮಾಡಿ, ಹಿಡಿಸಲಾರದ ಕೋಪದಿಂದ, ಹಿಂದು ಮುಂದು ಯೋಚಿಸದೆ, ಆ ಪಾಪಾತ್ಮನಾದ ವಾಲಿಯು ಈ ಪರ್ವತವನ್ನು ಪ್ರವೇಶ ಮಾಡಿದರಾಗಲೀ ಪರ್ವತವನ್ನು ನೋಡಿದರಾಗಲೀ ಅವನ ಶಿರಸ್ಸು ಎರಡು ಹೋಳಾಗಲಿ ಎಂದು ಶಪಿಸಿದರು. ಆ ಮುನಿಶಾಪಕ್ಕೆ ಹೆದರಿ ವಾಲಿಯು ಈ ಪರ್ವತದ ಕಡೆಗೇ ಬರುವುದಿಲ್ಲ. ಆ ಧೈರ್ಯದಿಂದಲೇ ನಾನು ಈ ಪರ್ವತದಲ್ಲಿ ನಿರ್ಭಯವಾಗಿ ಇರುತ್ತಾ ಪತ್ನಿವಿಯೋಗದಿಂದ ಬಂಧುವಿಯೋಗದಿಂದ ಚಿಂತಿಸುತ್ತಾ ಕಾಲ ಕಳೆಯುತ್ತಿದ್ದೇನೆ," ಎಂದು ಸುಗ್ರೀವನು ತನ್ನ ವೃತ್ತಾಂತವನ್ನೆಲ್ಲಾ ರಾಮನಿಗೆ ಬಿನ್ನವಿಸಿದನು.

**ಸುಗ್ರೀವನ ಸಖ್ಯ:** ವಾಲಿಯ ಧರ್ಮವಿರುದ್ಧವಾದ ಕಾರ್ಯಗಳನ್ನು ರಾಮನು ಕೇಳಿ ಸಹಿಸಲಾರದೆ ಹೋದನು. "ಕೇವಲ ಪಶುಬಲವನ್ನು ಆಧಾರಮಾಡಿಕೊಂಡು ಧರ್ಮಬಲವನ್ನೂ ದೈವಬಲವನ್ನೂ ಮರೆತು ಪ್ರವರ್ತಿಸುತ್ತಿರುವ ವಾಲಿಯ ಗತಿ ಏನಾಗುವುದೋ ನೋಡುವಿಯಂತೆ," ಎಂದು ಸುಗ್ರೀವನಿಗೆ ಧೈರ್ಯ ಹೇಳಿದನು. ಹದಿನಾಲ್ಕು ಲೋಕಗಳು ಅಡ್ಡಬಂದರೂ ತನ್ನ ಪ್ರತಿಜ್ಞೆ ನಡೆಸೇ ತೀರುವೆನೆಂದೂ ಒಂದೇ ಬಾಣದಿಂದ ವಾಲಿಯನ್ನು ನೆಲಕ್ಕುರುಳಿಸುವೆನೆಂದೂ ಶಪಥ ಮಾಡಿದನು.

"ಮಿತ್ರನ ದುಃಖವನ್ನೂ ಶತ್ರುವಿನ ಅಸಂಬದ್ಧ ಪ್ರಲಾಪವನ್ನೂ ನೋಡಿ ಸುಮ್ಮನಿರುವವನ ಮುಖವನ್ನು ಸಹ ನೋಡಬಾರದು. ತಾತ್ಕಾಲಿಕ ಪ್ರಯೋಜನ ಹೊಂದುವ ಸಲುವಾಗಿ, ತನ್ನ ಆಸೆಗಳನ್ನು ತೀರಿಸಿಕೊಳ್ಳಲು ಕೆಟ್ಟ ಮಾರ್ಗದಲ್ಲಿ ಹೋಗಲು ಪ್ರೋತ್ಸಾಹಿಸುವವನನ್ನು ಮಿತ್ರನನ್ನಾಗಿ ಮಾಡಿಕೊಳ್ಳವುದು ಸರಿಯಾದ ಮಿತ್ರತ್ವವಲ್ಲ. ಮಿತ್ರರಲ್ಲಿ ಪರಸ್ಪರ ಅನುರಾಗವಿರಬೇಕು. ಹೃದಯದಲ್ಲಾಗಲಿ, ಮನಸ್ಸಿನಲ್ಲಾಗಲಿ, ವಾಕ್ಕಿನಲ್ಲಾಗಲಿ, ಕಡೆಗೆ ಮುಖದಲ್ಲಾಗಲಿ ಪ್ರೇಮವಿಲ್ಲದವನು ಕುಮಿತ್ರನೆಂದು ಗ್ರಹಿಸಬೇಕು. ಅಂಥವರ ಹೃದಯ ಕಪಟವಾದುದು, ಮಾಲಿನ್ಯದಿಂದ ಕೂಡಿದ್ದು. ಮೂರ್ಖ ಸೇವಕ, ಲೋಭಿರಾಜ, ಅಪವಿತ್ರ ಪತ್ನಿ, ಕಪಟ ಮಿತ್ರ—ಈ ನಾಲ್ವರೂ ಶೂಲಪ್ರಾಯರು.

ಸಖನೇ! ಸುಗ್ರೀವಾ! ನೀನು ಚಿಂತಿಸದಿರು. ನಾನು ಯಥಾಶಕ್ತಿ ಮನೋವಾಕ್ಕಾಯಗಳಿಂದ ನಿನಗೆ ಸಹಾಯ ಮಾಡುತ್ತೇನೆ. ವಾಲಿ ಎಷ್ಟು ಬಲಶಾಲಿಯಾದರೇನು. ನನ್ನ ಬಲ ನಿನಗೆ ತಿಳಿಯದು. ಅವನ ಬಲವನ್ನೇ ನೀನು ದೊಡ್ಡದಾಗಿ ಪರಿಗಣಿಸಿ ನನ್ನ ಪ್ರತಿಜ್ಞೆಯ ಬಗ್ಗೆ ಸಂದೇಹ ಪಡುವಿಯೇನೊ! ಮೊದಲು ನನ್ನ ಬಲದ ಪರೀಕ್ಷೆ ಮಾಡಿ. ನನ್ನ ಮೇಲಿನ ನಿನ್ನ ವಿಶ್ವಾಸವನ್ನು ಬಲಪಡಿಸಿಕೊಳ್ಳಲು ಇಷ್ಟಪಡುವಿಯೇನೊ! ಹಾಗಾದರೆ, ಏನು ಬೇಕಾದರೂ ಕೇಳು, ಅದನ್ನು ನೆರವೇರಿಸುವುದರ ಮೂಲಕ ನನ್ನ ಬಲವನ್ನು ತೋರಿಸುತ್ತೇನೆ. ನಿನ್ನಲ್ಲಿ ಧೈರ್ಯ ಸಾಹಸಗಳನ್ನು ಉಂಟುಮಾಡುತ್ತೇನೆ. ವಾಲಿಯೊಂದಿಗೆ ಹೋರಾಟಕ್ಕೆ ನಿನ್ನನ್ನು ಸಿದ್ಧಮಾಡುತ್ತೇನೆ," ಎಂದು ಸುಗ್ರೀವನ ತಲೆ ಸವರಿ, ಧೈರ್ಯ ಹೇಳಿದನು. ರಾಮನಾಡಿದ ಮಾತುಗಳು ಸುಗ್ರೀವನನ್ನು ಬಹುವಾಗಿ ತೃಪ್ತಿಪಡಿಸಿದವು. ತನ್ನ ಧೈರ್ಯದ ಸಲುವಾಗಿ, ರಾಮನ ಶಕ್ತಿಯನ್ನು ನೋಡಬಯಸಿ ಸುಗ್ರೀವನು, "ರಾಮಚಂದ್ರ! ಒಂದಾನೊಂದು ಸಮಯದಲ್ಲಿ ನಾನೂ ನನ್ನ ಅಣ್ಣನೂ ಪರಿಹಾಸ್ಯಕ್ಕಾಗಿ ನಮ್ಮ ಬಲಾಬಲಗಳನ್ನು ಪರೀಕ್ಷಿಸಲು ಏಳು ತಾಳೆ ಮರಗಳನ್ನು ಒಂದೇ ಬಾಣದಿಂದ ಹೊಡೆದುರುಳಿಸುವ ಕಾರ್ಯದಲ್ಲಿ ತೊಡಗಿದೆವು. ಚಂದ್ರಮಂಡಲಾಕಾರವಾಗಿದ್ದ ಆ ತಾಳೆಮರಗಳ ಪೈಕಿ ಮೂರನ್ನು ಮಾತ್ರ ನಾನೂ ಹೊಡೆದುರುಳಿಸಿದೆ. ವಾಲಿಯು ಐದು ಮರಗಳನ್ನು ಒಂದೇ ಬಾಣದಿಂದ ಹೊಡೆದುರುಳಿಸಿದನು. ಅದು ಅವನ ಬಲ. ಅದಕ್ಕಿಂತ ಯಾರು ಹೆಚ್ಚು ಬಲಶಾಲಿಯೋ ಅವನು ಮಾತ್ರ ವಾಲಿಯನ್ನು ಸೋಲಿಸಬಲ್ಲ. ನೀವು ಎಷ್ಟು ತಾಳೆ ಮರಗಳನ್ನು ಹೊಡೆದುರುಳಿಸಬಲ್ಲಿರೆನ್ನುವುದನ್ನು ನೋಡ ಬಯಸುತ್ತೇನೆ," ಎಂದನು.

**ಸಪ್ತ ತಾಳೆ ವೃಕ್ಷಗಳು** : ತಾಳೆಯ ಮರಗಳಿದ್ದಲ್ಲಿಗೆ ರಾಮಚಂದ್ರನನ್ನು ಕರೆದೊಯ್ದು ಅವುಗಳನ್ನು ಬಾಣ ಹೊಡೆದು ಉರುಳಿಸುವಂತೆ ಕೋರಿದನು. "ಈ ತಾಳೆ

ಮರಗಳು ವಾಲಿ ಹೊಡೆದುರುಳಿಸಿದ ಮರಗಳಂತಿಲ್ಲ. ಒಂದೊಂದೂ ಅವಕ್ಕಿಂತ ನಾಲ್ಕೈದರಷ್ಟು ದೊಡ್ಡದಾಗಿದೆ. ಆದ್ದರಿಂದ ಇವುಗಳಲ್ಲಿ ಎರಡನ್ನು ಹೊಡೆದುರುಳಿಸಿದರೂ ವಾಲಿಗಿಂತ ಬಲಶಾಲಿಯೇ ಎನ್ನಬಹುದು," ಎಂದು ತಮ್ಮ ತಮ್ಮೊಳಗೇ ಸುಗ್ರೀವಾದಿಗಳು ಮಾತಾಡಿಕೊಂಡರು. ರಾಮನು ನಸುನಕ್ಕು, "ಸುಗ್ರೀವಾ! ಈ ತಾಳೆಮರಗಳು ನನ್ನ ದೃಷ್ಟಿಯಲ್ಲಿ ಅಲ್ಪವಾದವುಗಳು," ಎನ್ನುತ್ತಾ ಸುನಾಯಾಸವಾಗಿ ಬಾಣ ಹೊಡೆದು, ಆ ಎಲ್ಲ ತಾಳೆ ಮರಗಳನ್ನೂ ಉರುಳಿಸಿದ್ದಲ್ಲದೆ, ಅವುಗಳ ಹಿಂದಿದ್ದ ಪರ್ವತದ ಬಂಡೆಗಳನ್ನೂ ಸೀಳಿದನು. ಅದನ್ನು ನೋಡಿದ ಸುಗ್ರೀವನು, ರಾಮನ ಪಾದಗಳ ಮೇಲೆ ಬಿದ್ದು, "ರಾಮಚಂದ್ರಾ! ನೂರು ವಾಲಿಗಳು ಸೇರಿದರೂ ಈ ಕಾರ್ಯ ಸಾಧಿಸಲಾರರು. ನಿಮ್ಮಂಥ ಶಕ್ತಿ ಸಂಪನ್ನರಾದವರು ನನ್ನ ಮಿತ್ರರಾದದು ನನ್ನ ಭಾಗ್ಯ. ನನ್ನ ಜನ್ಮ ಸಾರ್ಥಕವಾಯಿತು. ಒಬ್ಬ ವಾಲಿ ದೂರನಾದರೂ ನೂರು ವಾಲಿಗಳು ನನಗೆ ಮಿತ್ರರಾದಂತೆ ಭಾವಿಸುತ್ತೇನೆ. ನನ್ನ ಅಪರಾಧವನ್ನು ಕ್ಷಮಿಸು. ನಿಮ್ಮನ್ನು ಶಂಕಿಸ ಹೊರಟಿದ್ದು ನನ್ನ ಅಲ್ಪತ್ವವೆಂದು ನಾಚಿಕೆಯಾಗುತ್ತಿದೆ. ಸಾಕ್ಷಾತ್ ಪರಮಾತ್ಮನನ್ನು ಮಿತ್ರನೆಂದು ಭಾವಿಸುವುದು, ಅವನೇ ಮಿತ್ರನಾಗಿ ಬಂದಿರುವುದು ನನ್ನ ಭಾಗ್ಯವೇ ಭಾಗ್ಯ. ಇಂದಿಗೆ ನನ್ನ ಚಿಂತೆ ಕಳೆಯಿತು. ನಾನು ಕಿಷ್ಕಿಂಧೆಯನ್ನು ಸೇರುವೆನೆನ್ನುವ ಆಶೆ ನನ್ನಲ್ಲಿ ಅಂಕುರಿಸಿತು. ನನ್ನ ಸತೀಸುತರೊಂದಿಗೆ ಸುಖ ಜೀವನ ನಡೆಸುವೆನೆನ್ನುವ ನಿರೀಕ್ಷೆ ನನ್ನನ್ನು ಆನಂದಪಡಿಸಿದೆ," ಎಂದು ಹೇಳಿದನು.

ಆದರೆ, ಅದು ಎಂದಿಗೋ ಎಷ್ಟು ನಿಮಿಷಗಳ ಮೇಲೋ ಎಷ್ಟು ಗಂಟೆಗಳ ಮೇಲೋ ಎನ್ನುವುದು ಗೊಂದಲವಾಗಿದೆ. ಅದು ರಾಮೇಚ್ಛೆ, ಅವನ ಅನುಗ್ರಹ. ಯಾವ ನಿಮಿಷ ಅವನು ಸಂಕಲ್ಪಿಸುವನೋ ಎಂದು, ರಾಮನಲ್ಲದೆ ತನಗೆ ಅನ್ಯಮಾರ್ಗವಿಲ್ಲವೆಂದು ಮನಸ್ಸಿನಲ್ಲಿ ದೃಢಮಾಡಿಕೊಂಡನು. ರಾಮನಿಗೆ ನಮಸ್ಕರಿಸಿ, "ರಾಮಾ! ನಿನ್ನ ಇಷ್ಟ. ನೀನು ಕೃಪೆ ಮಾಡಿ ಯಾವ ನಿಮಿಷದಲ್ಲಿ ನನ್ನನ್ನು ಈ ಬಾಧೆಯಿಂದ ವಿಮುಕ್ತಗೊಳಿಸುವೆಯೋ," ಎಂದು ಪ್ರಾರ್ಥಿಸುತ್ತಾ ಕುಳಿತನು. "ನಾನು ಇದುವರೆಗೂ ವಾಲಿಯು ನನ್ನ ಪರಮ ಶತ್ರುವೆಂದು ಭಾವಿಸಿದ್ದೆ. ಇಂದಿನಿಂದ ವಾಲಿಯೂ ನನ್ನ ಶತ್ರುವಲ್ಲ, ನನ್ನ ಪರಮ ಮಿತ್ರ, ಹಿತೈಷಿ ಎಂದು ಭಾವಿಸುತ್ತೇನೆ. ಅವನಿಂದಾಗಿ ನಾನು ಈ ಪರ್ವತದಲ್ಲಿ ವಾಸ ಮಾಡಬೇಕಾಯಿತು. ಅದರಿಂದಾಗಿ ನಿಮ್ಮ ದರ್ಶನವಾಯಿತು. ನಿಮ್ಮೊಂದಿಗೆ ಮೈತ್ರಿಯುಂಟಾಯಿತು. ಇದಕ್ಕೆಲ್ಲ ವಾಲಿಯೇ ಕಾರಣ. ಆದ್ದರಿಂದಲೇ ಅವನನ್ನು ಇಂದಿನಿಂದ ನನ್ನ ಹಿತೈಷಿಯೆಂದು ಭಾವಿಸುತ್ತೇನೆ.

**ಜ್ಞಾನೋದಯ**: ರಾಮಾ! ಸ್ವಪ್ನದಲ್ಲಿ ಒಬ್ಬನ ಮೇಲೆ ಪರಮ ದ್ವೇಷದಿಂದ ಅವನೊಂದಿಗೆ ನಾನಾ ವಿಧವಾಗಿ ಹೋರಾಡಿ, ನಿದ್ದೆಯಿಂದೆದ್ದ ಮೇಲೆ ಅದು ಮಿಥ್ಯೆಯೆಂದು ತೋಚುವಂತೆ ನಿಮ್ಮ ದರ್ಶನವಾಗುವ ಮೊದಲು, ಸ್ವಪ್ನದಂತೆ, ಅಜ್ಞಾನವಶಾತ್ ವಾಲಿಯ ಮೇಲೆ ದ್ವೇಷ ಸಾಧಿಸುತ್ತಿದ್ದೆ. ನಿಮ್ಮ ದರ್ಶನ ಪ್ರಾಪ್ತ ವಾದುದರಿಂದ, ನಿಮ್ಮೊಂದಿಗೆ ಸಂಭಾಷಣೆ ಮಾಡಿದ್ದರಿಂದ ನಿದ್ರೆಯಿಂದೆದ್ದವನಂತೆ, ಅಜ್ಞಾನದಿಂದ ಎಚ್ಚೆತ್ತಂತೆ ನಿಮ್ಮ ಪವಿತ್ರ ಪಾದಸ್ಪರ್ಶದಿಂದ ನನಗೆ ಜ್ಞಾನೋದಯ ವಾಯಿತು. ಈ ತಮ್ಮ ಸೇವಾ ಭಾಗ್ಯ ನನಗೆ ಲಭಿಸುವ ಮೊದಲು ನನ್ನ ದ್ವೇಷಾಸೂ ಯೆಗಳಿಂದ ವಾಲಿಯೊಂದಿಗೆ ವಿರೋಧ ಕಟ್ಟಿಕೊಂಡೆ. ಕೊರಗಿ, ಕೃಶವಾಗಿ, ಒಳ್ಳೆಯ ಕಾಲ ಬರುವುದೇ ಎಂದು ಪರಿತಪಿಸಿದೆ. ನನ್ನ ತಾಪವೇ ತಪಸ್ಸಾಗಿ, ಕ್ರೋಧವೇ ಪ್ರೇಮವಾಗಿ ಪರಿಣಮಿಸಿತು. ನನ್ನ ನಾಥಾ! ನಿಮ್ಮ ಕಟಾಕ್ಷವಾದರೆ ಸಾಕು. ನನಗೆ ರಾಜ್ಯ ಬೇಡ, ಹೆಂಡತಿ ಮಕ್ಕಳು ಬೇಡ. ಅವರವರ ಪ್ರಾಪ್ತಿ ಇದ್ದಂತೆ ಬದುಕುವರು. ಅವರ ಚಿಂತೆಯೂ ನನಗೆ ಬೇಡ. ನಿರಂತರವೂ ತಮ್ಮ ಸೇವೆ ಮಾಡುತ್ತಾ ತಮ್ಮೊಂದಿಗಿರಲು ಅಪ್ಪಣೆ ಕೊಟ್ಟರೆ ಸಾಕು," ಎಂದು ಪ್ರಾರ್ಥಿಸಿದನು.

ರಾಮನು ಸುಗ್ರೀವನ ತಲೆಯನ್ನು ಸವರುತ್ತಾ, "ನೀನಾಡಿದ ಮಾತುಗಳು ಸತ್ಯವೇ. ರಾಜ್ಯಗಳು, ಸುಖದುಃಖಗಳು, ಕೋಪ ತಾಪಗಳು, ವಸ್ತು ವಾಹನಾದಿಗಳು, ಒಳ್ಳೆಯದು ಕೆಟ್ಟದ್ದು ಎಲ್ಲವೂ ಸ್ವಪ್ನ ದೃಶ್ಯಗಳು. ದೈವಸನ್ನಿಧಿ, ದೈವಭಾವಗಳೇ ಸತ್ಯವಾದವುಗಳು. ಆದರೆ, ನನ್ನ ವಾಗ್ದಾನ, ನನ್ನ ಪ್ರತಿಜ್ಞೆ ನಿಷ್ಪ್ರಯೋಜಕವಾಗದು ಅಲ್ಲವೆ? ಹೇಗಾದರೂ ನಿನಗೆ ರಾಜ್ಯ ಬಂದೇ ಬರುವುದು. ಅದನ್ನಾಳುವುದು ತಪ್ಪದು. ಇಂದು ವಾಲಿಯೊಂದಿಗೆ ಯುದ್ಧವೂ ತಪ್ಪದು. ಸಿದ್ಧನಾಗು," ಎಂದನು. ಹನುಮಂತಾದಿಗಳನ್ನು ಆ ಪರ್ವತದಲ್ಲೇ ಇರುವಂತೆ ಹೇಳಿ, ಧನುರ್ಬಾಣಗಳನ್ನು ಧರಿಸಿ, ಸುಗ್ರೀವನ ಜೊತೆಯಲ್ಲಿ ರಾಮ ಲಕ್ಷ್ಮಣರು ಕಿಷ್ಕಿಂಧೆಗೆ ಹೊರಟರು. ರಾಮನು ದಾರಿಯಲ್ಲಿ ಸುಗ್ರೀವನಿಗೆ ಹೇಳಬೇಕಾದುದನ್ನೆಲ್ಲಾ ಹೇಳಿದನು. ಕಿಷ್ಕಿಂಧಾ ಪುರದ ಸಿಂಹದ್ವಾರದ ಬಳಿ ಹೋಗಿ, ಸುಗ್ರೀವನು ಭೂಮಿಯು ತತ್ತರಿಸುವಂತೆ ಕೇಕೆ ಹಾಕಿದನು. ಆ ಕೇಕೆಯನ್ನು ಕೇಳಿದೊಡನೆ, ವಾಲಿಯು ಹೆಡೆ ತುಳಿದ ಹಾವಿನಂತೆ ಬುಸುಗುಟ್ಟುತ್ತಾ ತನ್ನ ತಮ್ಮನ ಮೇಲೆ ಯುದ್ಧಕ್ಕೆ ಹೊರಟನು.

**ತಾರೆಯ ಬೋಧೆ**: ಆಗ, ಅವನ ಪತ್ನಿಯಾದ ತಾರೆಯು ಅವನ ಪಾದಗಳನ್ನು ಹಿಡಿದುಕೊಂಡು, ಅಂಗದನು ಪೂರ್ವದಲ್ಲಿ ಹೇಳಿದ ಮಾತುಗಳನ್ನು ಹೇಳಿ, "ನಾಥಾ! ಸುಗ್ರೀವನ ಸ್ನೇಹ ಮಾಡಿರುವ ಅಣ್ಣ ತಮ್ಮಂದಿರು ಸಾಮಾನ್ಯರಲ್ಲ. ಅವರು ಮಹಾಬಲರು. ಇಷ್ಟು ಕಾಲ ಅಡಗಿಕೊಂಡಿದ್ದ ಸುಗ್ರೀವನು ಈಗ ಇಷ್ಟು ಧೈರ್ಯವಾಗಿ ಯುದ್ಧಕ್ಕೆ ಸಿದ್ಧವಾಗಿದ್ದಾನೆಂದರೆ, ಅವರ ಬಲವನ್ನು ಚೆನ್ನಾಗಿ

ತಿಳಿದು, ಅವರ ಸಹಾಯದೊಂದಿಗೆ ಬಂದಿದ್ದಾನೇ ಹೊರತು, ಹಿಂದು ಮುಂದು ಯೋಚಿಸದೆ ಬಂದಿಲ್ಲ. ರಾಜಪುತ್ರರಾದ ಆ ರಾಮಲಕ್ಷ್ಮಣರು ದೈವಶಕ್ತಿಯಿಂದ ಕೂಡಿದವರು. ಅವರ ಮೇಲೆ ಯುದ್ಧ ಮಾಡುವುದು ನಿಮಗೆ ಒಳ್ಳೆಯದಲ್ಲ," ಎಂದು ಬಹಳವಾಗಿ ಬೇಡಿಕೊಂಡಳು. ಅವಳ ದೀನಾಲಾಪವನ್ನು ಕೇಳಿ ವಾಲಿಯು ಗೊಳ್ಳನೆ ನಕ್ಕು, "ಓ ಭಯಸ್ಥಳೇ! ಶ್ರೀರಾಮನು ಸಮದರ್ಶಿಯೆಂದು ಹೇಳಿದೆ. ಹಾಗಾದರೆ, ಅವನು ನಮ್ಮಿಬ್ಬರನ್ನೂ ಸಮವಾಗಿ ಕಾಣುವನು. ನಾನೇನೂ ಅವನಿಗೆ ಅಪಕಾರ ಮಾಡಿಲ್ಲವಲ್ಲವೇ? ಹಾಗೊಮ್ಮೆ ರಾಮನು ನನ್ನನ್ನು ಸಂಹರಿಸಿದರೂ ನನ್ನ ಜನ್ಮ ಸಫಲವಾಗುವುದು, ಅಷ್ಟೇ ತಾನೆ!" ಎಂದನು. ಒಂದೆಡೆ ವಾಲಿಯ ಮಾತುಗಳಿಂದ ತಾರೆಗೆ ಸಂತೋಷವಾದರೂ ರಾಮನನ್ನು ಎದುರಿಸುವ ಅವನ ನಿರ್ಧಾರ ಸಹಿಸಲಾರದೆ, ಅವನನ್ನು ತಡೆಯಲು ಮತ್ತಷ್ಟು ಪ್ರಯತ್ನಿಸಿದಳು. "ನಾಥಾ, ಸ್ತ್ರೀಯು ಅಡ್ಡಿ ಮಾಡುವುದು ಅಪಶಕುನವಲ್ಲವೆ?" ಎಂದು ಎಷ್ಟೋ ಹೇಳಿದರೂ, "ಯುದ್ಧ ಸಮಯದಲ್ಲಿ ಶಕುನಗಳು ಕೆಲಸಕ್ಕೆ ಬರುವುದಿಲ್ಲ. ತನ್ನ ಪ್ರಾಣವನ್ನು ಕಳೆದುಕೊಳ್ಳುವುದೋ ಇಲ್ಲವೇ ಶತ್ರುವಿನ ಪ್ರಾಣವನ್ನು ತೆಗೆಯುವುದೋ ಸಂಭವಿಸಲೇಬೇಕು. ನಾನು ಅವನ್ನೆಲ್ಲಾ ಪರಿಗಣಿಸುವವನಲ್ಲ," ಎಂದು, ತಾರೆಯನ್ನು ಪಕ್ಕಕ್ಕೆ ತಳ್ಳಿ, ಮಾಹಾಕ್ರೋಧದಿಂದ ಯುದ್ಧಕ್ಕೆ ಹೊರಟು, ಸಿಂಹದ್ವಾರವನ್ನು ಸಮೀಪಿಸಿದನು. ಅಲ್ಲಿ ಸುಗ್ರೀವನೊಬ್ಬನನ್ನೇ ನೋಡಿ ವಾಲಿಯು ಕುಪ್ಪಳಿಸಿ ಸುಗ್ರೀವನ ಮೇಲೆ ಬಿದ್ದು ಮುಷ್ಟಿ ಯುದ್ಧ ಪ್ರಾರಂಭಿಸಿದನು. ವಾಲಿಯ ಮುಷ್ಟಿಯ ಹೊಡೆತಗಳನ್ನು ಸುಗ್ರೀವನು ಸಹಿಸಲಾರದೆ ಹೋದನು. ಓಡಿ ಹೋಗಲು ಸಿದ್ಧನಾದನು. ವಾಲಿಯು ತನ್ನ ಬಲವನ್ನೆಲ್ಲಾ ಉಪಯೋಗಿಸಿ ಕಾಲುಗಳಿಂದ ಒದ್ದು, ಕೈಗಳಿಂದ ಗುದ್ದಿ ಹಿಂಸಿಸಿದ್ದರಿಂದ ತಾಳಲಾರದೆ ಸುಗ್ರೀವನು ಓಡಿ ಹೋದನು. ವಾಲಿಯು ತೊಡೆಗಳನ್ನು ತಟ್ಟುತ್ತಾ ಹಿಂತಿರುಗಿದನು.

**ಅಂತರಾರ್ಥ**: ಓಡಿ ಹೋಗುತ್ತಿದ್ದ ಸುಗ್ರೀವನು ಬಹಳ ನಿರಾಶೆಯಿಂದ, ನೋವಿನಿಂದ, ಭಯದಿಂದ ರಾಮನಿಗೆ ನಮಸ್ಕರಿಸಿ, "ಸ್ವಾಮೀ! ನೀವೇಕೆ ನನ್ನನ್ನು ಹೀಗೆ ಪರಾಭವಗೊಳ್ಳುವಂತೆ ಮಾಡಿದಿರೋ ಅರ್ಥವಾಗುತ್ತಿಲ್ಲ. ನೀವು ಸಹಾಯ ಮಾಡುತ್ತೀರೆನ್ನುವ ಬೆಟ್ಟದಂಥ ಆಶೆಯಿಂದ, ನಾನು ಹೋದೆ. ನಿಮ್ಮ ಅಂಬು ಯಾವಾಗ ವಾಲಿಯ ಮೇಲೆ ಬೀಳುವುದೊ ಎಂದು ಕ್ಷಣಕ್ಷಣವೂ ಧೈರ್ಯದಿಂದ ವಾಲಿಯೊಂದಿಗೆ ಹೋರಾಡುತ್ತಿದ್ದೆ. ನಂತರ, ತಾಳಲಾರದೆ ಓಡಿ ಬರಬೇಕಾಯಿತು. ನನ್ನ ಅಣ್ಣನು ಮಹಾ ಬಲಶಾಲಿ. ಅವನ ಗುದ್ದುಗಳನ್ನು ಸಹಿಸಲಾರದೆ ಹೋದೆ," ಎಂದು ದುಃಖಿಸಿದನು. ಆಗ ರಾಮನು, "ಸುಗ್ರೀವಾ! ದುಃಖಿಸದಿರು. ನಾನು ಅವನನ್ನು ಹೊಡೆಯದಿದ್ದುದಕ್ಕೆ ಕಾರಣವನ್ನು ಕೇಳು. ನೀವಿಬ್ಬರೂ ನನಗೆ

ಸಮಾನವಾಗಿ ಕಂಡಿರಿ. ಸಮಾನ ರೂಪ, ಸಮಾನ ಬಲದವರಾದ್ದರಿಂದ ನಾನು ಅವನನ್ನು ಕೊಲ್ಲಲಾಗಲಿಲ್ಲ," ಎಂದನು.

ಅಂದರೆ, ಅದರ ಅಂತರಾರ್ಥ ವಾಲಿಯು ಕೂಡ ನನ್ನ ದಯೆಯನ್ನು ಆಶಿಸಿದವನೇ ಎನ್ನುವ ಅರ್ಥದಲ್ಲಿ, "ಇಬ್ಬರೂ ನನಗೆ ಸಮಾನವಾಗಿ ಕಂಡಿರಿ," ಎಂದು ಹೇಳಿದನು. ಸುಗ್ರೀವನು ಆ ಅಂತರಾರ್ಥವನ್ನು ತಿಳಿಯದೆ, "ರಾಮಾ! ಇಷ್ಟು ತಿಳಿದಂಥ ನಿನಗೆ ವಾಲಿ ಯಾರೋ ಸುಗ್ರೀವ ಯಾರೋ ಎಂದು ಯುದ್ಧದಲ್ಲಿ ಕಂಡುಹಿಡಿಯಲಾಗಲಿಲ್ಲವೇ! ಈ ಮಾತನ್ನು ನಾನು ನಂಬೆನು. ಇದಕ್ಕೆ ಬೇರೇನೊ ಕಾರಣ ಇರಬೇಕು. ಅಥವಾ ನನ್ನ ಪೌರುಷವನ್ನು ನಾನು ಉಪಯೋಗಿಸಬೇಕೆನ್ನುವ ಉದ್ದೇಶ ನಿಮಗೆ ಇದ್ದಿರಬೇಕು. ಅದನ್ನು ಮುಂಚಿತವಾಗಿಯೇ ತಿಳಿಸಿದ್ದರೆ, ನಾನು ಮೊದಲಿನಿಂದಲೇ ತಕ್ಕ ರೀತಿಯಲ್ಲಿ ಹೋರಾಡುತ್ತಿದ್ದೆ. ರಾಮನು ಹೇಗೂ ನೋಡಿ ಕೊಳ್ಳುತ್ತಾನಲ್ಲವೆ ಎಂದು ಅಲಕ್ಷ್ಯವಾಗಿದ್ದೆ," ಎಂದು ನಿಟ್ಟುಸಿರು ಹುಯ್ದನು. ರಾಮನು ನಿರಾಶನಾಗಿದ್ದ ಸುಗ್ರೀವನ ಹತ್ತಿರ ಹೋಗಿ, ಹಲವು ರೀತಿಯಾಗಿ ಅವನನ್ನು ಸಮಾಧಾನಪಡಿಸಿ, ಅವನ ಮೈಯನ್ನು ತನ್ನ ಅಮೃತ ಹಸ್ತದಿಂದ ತಡವಿದನು. ಸುಗ್ರೀವನಿಗಾಗಿದ್ದ ಗಾಯಗಳು ಕ್ಷಣದಲ್ಲಿ ಮಾಯವಾಗಿ ನೋವೆಲ್ಲಾ ಹೋಗಿ ಹಾಯೆನಿಸಿತು.

ಅವನು ಪರಮಾಶ್ಚರ್ಯದಿಂದ, "ರಾಮಚಂದ್ರಾ! ಸಮಸ್ತವೂ ನಿಮ್ಮ ಹಸ್ತದಲ್ಲೇ ಇದೆ. ಈ ಸೃಷ್ಟಿ ಸ್ಥಿತಿ ಲಯಗಳು ನಿಮ್ಮ ಸ್ವಾಧೀನದಲ್ಲಿವೆ. ಅಂಥ ನೀವೇ ನನಗೆ ಸಿಕ್ಕಿರುವಾಗ ಈ ರಾಜ್ಯಾಧಿಕಾರದ ವಾಂಛೆ ನನಗೆ ಬೇಡ. ನಿಮ್ಮ ಕೃಪೆ ಮುಂದೆ ಇದೆಷ್ಟರದು," ಎಂದು ತೀವ್ರ ವೈರಾಗ್ಯ ವ್ಯಕ್ತಪಡಿಸಿದನು. ಆದರೆ, ರಾಮನು, "ಈ ಮಾತುಗಳು ತಾತ್ಕಾಲಿಕವಾದವುಗಳು. ನನ್ನ ಶಕ್ತಿ ಸಾಮರ್ಥ್ಯಗಳನ್ನು ದರ್ಶನ ಮಾಡಿದ ಸಮಯದಲ್ಲಿ ಬಂದ ಸಮಾಧಾನದ ಮಾತುಗಳು. ನಾನು ಇದನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಹೃದಯದಿಂದ ಲೀಲಾಶಕ್ತಿಗಳನ್ನು ವರ್ಣಿಸುವ ಸಮಯದಲ್ಲಿ ಸರ್ವವನ್ನೂ ಮರೆತು ಅದಕ್ಕಿಂತ ಅಧಿಕವಾದುದು ಲೋಕದಲ್ಲಿ ಬೇರೆ ಯಾವುದೂ ಇಲ್ಲವೇ ಇಲ್ಲ ಎಂದು ಸಾರುವರು. ಸ್ವಲ್ಪ ತಡವಾದಲ್ಲಿ ಇಲ್ಲವೇ ಅವರ ಮನೋ ವಾಂಛೆಗಳು ವಿಫಲವಾದಲ್ಲಿ ಅದಕ್ಕೆ ವಿರೋಧವಾದ ಭಾವವನ್ನು ತಾಳಿ ತಾವು ನೋಡಿದ್ದೆಲ್ಲಾ ಅನುಭವಿಸಿದ್ದೆಲ್ಲಾ ಸತ್ಯ ಎನ್ನುವ ಅನುಮಾನಕ್ಕೆ ಗುರಿ ಯಾಗುವರು. ಇದು ಆಸ್ತಿಕ ಲೋಕದಲ್ಲಿ ಕಾಣಬರುವ ಪೊರೆತೆರೆಗಳು. ಈ ನಿನ್ನ ವೈರಾಗ್ಯವನ್ನು ನಾನು ಪುರಸ್ಕರಿಸುವುದಿಲ್ಲ. ನೀನು ತಿರುಗಿ ನಿನ್ನ ಅಣ್ಣನೊಂದಿಗೆ ಹೋರಾಡಲು ಸಿದ್ಧನಾಗಲೇಬೇಕು," ಎಂದು ಬಲವಂತಪಡಿಸಿದನು.

**ಕುತ್ತಿಗೆಗೆ ಮಾಲೆ**: ಆದರೆ, ಸುಗ್ರೀವನು ಮನಸ್ಸಿನ ಒಳಗೊಳಗೆ ಯುದ್ಧಕ್ಕೆ ಇಷ್ಟಪಡದಿದ್ದರೂ ಈ ಸಾರಿ ರಾಮನು ಖಂಡಿತವಾಗಿಯೂ ವಾಲಿಯನ್ನು ಸಂಹರಿಸುವನೆನ್ನುವ ಧೈರ್ಯದಿಂದ, ರಾಮನ ಭರವಸೆಯ ಮಾತುಗಳು ಗಟ್ಟಿಯೆಂದು ನಂಬಿಕೆ ಬಂದುದರಿಂದ, ನಿರುತ್ಸಾಹಗೊಳ್ಳದೆ ಹೊರಡಲು ಸಿದ್ಧನಾದನು. ರಾಮನು ಲಕ್ಷ್ಮಣನಿಗೆ ಹೇಳಿ, ಪುಷ್ಪಗಳನ್ನು ತರಿಸಿ, ಮಾಲೆಮಾಡಿ, ಅದನ್ನು ಸುಗ್ರೀವನ ಕತ್ತಿಗೆ ಹಾಕಿಸಿದನು. ರಾಮನು ಸಮದರ್ಶಿಯಾದ್ದರಿಂದಲೇ ಮೊದಲನೆ ಸಾರಿ ವಾಲಿಯನ್ನು ಕೊಲ್ಲಲಿಲ್ಲ. ಈಗ ವಾಲಿಗಿಂತ ಸುಗ್ರೀವನ ಮೇಲೆ ತನಗೆ ಅಧಿಕ ಪ್ರೇಮವಿದೆ ಎನ್ನುವುದನ್ನು ಸೂಚಿಸಲು ಅವನಿಗೆ ಹಾರ ಹಾಕಿಸಿದ್ದನು. ಇಬ್ಬರೂ ಅವನಿಗೆ ಸಮವೇ. ಆದರೆ ಹಾರವೇ ಅಧಿಕವು, ಅದೇ ಪ್ರೇಮ ಮಾಲೆ. ಅದನ್ನು ಕಂಠದಲ್ಲಿ ಧರಿಸೆಂದು ರಾಮನು ಸುಗ್ರೀವನಿಗೆ ಬೋಧಿಸಿದನು. "ಪ್ರೇಮಕ್ಕೆ ಮರಣವಿಲ್ಲ. ಏಕೆಂದರೆ ಪ್ರೇಮ ಸ್ವಾರ್ಥರಹಿತವಾದುದು," ಎಂದು ಬೋಧಿಸಿದನು.

ಹೀಗೆ ಸುಗ್ರೀವನಿಗೆ ಧೈರ್ಯ ಸಾಹಸಗಳನ್ನಿತ್ತು ಪುರದ್ವಾರದಲ್ಲಿ ಅವನಿಂದ ಮತ್ತೆ ಕೇಕೆ ಹಾಕಿಸಿ, ರಾಮಲಕ್ಷ್ಮಣರಿಬ್ಬರೂ ಮರಗಳ ಮರೆಯಲ್ಲಿ ನಿಂತರು. ಭೂಮಿ ತತ್ತರಿಸುವಂತೆ ಆರ್ಭಟಿಸುತ್ತಾ ವಾಲಿಯು ಓಡಿ ಬಂದನು. ಸುಗ್ರೀವನು ಬೆದರುತ್ತಾ ರಾಮನನ್ನು ಸ್ಮರಿಸುತ್ತಾ ಯುದ್ಧಕ್ಕೆ ಸಿದ್ಧನಾದನು. ತನ್ನ ಪೌರುಷವನ್ನು ಸಾರ್ಥಕ ಮಾಡಿಕೊಳ್ಳುವ ಸಲುವಾಗಿ ದೇಹದಲ್ಲಿ ಬಲವಿರುವವರೆಗೂ ವಾಲಿಯೊಂದಿಗೆ ಹೋರಾಡಿದನು. ಬಲವು ಕುಗ್ಗಿ ಆಯಾಸಗೊಂಡ ತಕ್ಷಣವೇ, "ರಾಮಾ!" ಎಂದು ಒಂದು ಸಾರಿ ಕೂಗು ಹಾಕಿದನು. ರಾಮನು ಭಕ್ತ ಸಂರಕ್ಷಣ ದೀಕ್ಷೆಯುಳ್ಳವನಾದ್ದರಿಂದ ವಾಲಿಯ ಮೇಲೆ ಬಾಣ ಪ್ರಯೋಗಿಸಿದನು. ವಾಲಿಯು ದುರಭಿಮಾನಿಯಾದ್ದರಿಂದ ರಾಮಬಾಣವು ಅವನನ್ನು ಭೇದಿಸಿತು. ಅವನು ಗಿರಗಿರನೆ ತಿರುಗಿ ನೆಲಕ್ಕುರುಳಿದನು. ರಾಮನು ವಾಲಿಯನ್ನು ಸಮೀಪಿಸಿ ಅವನಿಗೆ ತನ್ನ ದಿವ್ಯ ದರ್ಶನವನ್ನು ಅನುಗ್ರಹಿಸಿದನು.

**ವಿಷಮ ಕಾರ್ಯ**: ನೆಲಕ್ಕುರುಳಿದ ವಾಲಿಯು ಮಹಾ ಬಲಶಾಲಿಯಾದ್ದರಿಂದ, ಎದ್ದು ಕುಳಿತು ಕೈಜೋಡಿಸಿ ಆ ಶ್ಯಾಮಲ ಶರೀರವನ್ನು, ಆ ರಾಜೀವಲೋಚನನನ್ನು ಕಣ್ತುಂಬ ನೋಡುತ್ತಾ ಆನಂದಬಾಷ್ಪಗಳನ್ನು ಸುರಿಸುತ್ತಾ, "ಓ ರಾಮಾ! ಇಂಥ ದಿವ್ಯ ಮಂಗಳ ವಿಗ್ರಹನಾಗಿ ಸಾಕ್ಷಾತ್ ಪರಮೇಶ್ವರನಾಗಿ ಇಂಥ ವಿಷಮ ಕಾರ್ಯವನ್ನೇಕೆ ಮಾಡಿದೆ? ನನಗೆ ತಿಳಿಸಿ ನನ್ನನ್ನು ವಧಿಸಿದ್ದರೆ ನಾನೆಷ್ಟು ಸಂತೋಷಪಡುತ್ತಿದ್ದೆ. ಸುಗ್ರೀವನು ನಿನಗೆ ಮಾಡಬಲ್ಲ ಹಿತವನ್ನು ನಾನು ಮಾಡಲಾರದವನಾಗಿದ್ದೆನೆ?" ಎಂದನು. ಇದರಲ್ಲೇನೋ ಕಾರಣ ಇಲ್ಲದಿಲ್ಲ. ಕಾರಣವಿಲ್ಲದ ಕಾರ್ಯವಿಲ್ಲದ ಕಾರ್ಯವನ್ನು ಭಗವಂತನು ಮಾಡನು. ಬಾಹ್ಯದೃಷ್ಟಿಯಿಂದ ನೋಡುವವರೆಗೂ

ನಮ್ಮ ಭಾವಗಳಿಗೆ ವಿರುದ್ಧವಾಗಿ ಕಾಣಿಸುವುದು, ಅಂತರ್ದೃಷ್ಟಿಯಿಂದ ನೋಡಿದಾಗಲೇ ಅದು ಸತ್ಯಸ್ವರೂಪವನ್ನು ಧರಿಸುವುದು. ಪರಮಾತ್ಮನ ಚರ್ಯೆಗಳನ್ನು ಲೋಕದೃಷ್ಟಿಯಿಂದ ನೋಡಕೂಡದು. ಆತನು ಗುಣಾತೀತನಾದ್ದರಿಂದ ಆ ಗುಣಾತೀತವಾದ ದೃಷ್ಟಿಯಿಂದಲೇ ನೋಡಬೇಕು.

ಗುಣಾತೀತ ಕಾರ್ಯಗಳನ್ನು ಗುಣದೃಷ್ಟಿಯಿಂದ ನೋಡಿದರೆ ವಿರುದ್ಧವಾಗಿ ಕಾಣದೆ ಮತ್ತೇನಾದೀತು ಎಂದು ಮಹಾ ಮೇಧಾವಿಯಾದ ವಾಲಿಯು ಯೋಚಿಸಿ, ರಾಮನನ್ನು ಕುರಿತು, "ಓ ನಾಥಾ! ನಿನ್ನ ಶಕ್ತಿ ಸಾಮರ್ಥ್ಯಗಳನ್ನು ನಾ ಬಲ್ಲೆ. ಒಂದು ಬಾಣದಿಂದ ಒಬ್ಬ ವಾಲಿಯನ್ನೇ ಅಲ್ಲ, ವಿಶ್ವವನ್ನೇ ನಾಶ ಮಾಡಬಲ್ಲೆ! ವಿಶ್ವವನ್ನೇ ಸೃಷ್ಟಿಸಬಲ್ಲೆ! ಆದರೆ, ನನ್ನನ್ನು ನೀನು ವಧಿಸಲು ನನ್ನ ಅಪರಾಧವೇನೋ ಗುರುತಿಸಬಯಸುತ್ತೇನೆ. ಧರ್ಮಸಂಸ್ಥಾಪನೆ ಮಾಡಲು ನೀನು ಲೋಕದಲ್ಲಿ ನರಾಕಾರ ಧರಿಸಿದೆಯಲ್ಲವೆ? ಬೇಟೆಗಾರನಂತೆ ಗಿಡಮರಗಳ ಮರೆಯಲ್ಲಿದ್ದು ನನ್ನನ್ನು ಹೊಡೆದುದರಲ್ಲಿ ಅಂತರಾರ್ಥವೇನೋ ತಿಳಿಸಿದರೆ ನಾನು ಕೃತಾರ್ಥನಾಗುವೆ," ಎಂದು ಪ್ರಾರ್ಥಿಸಿದನು.

**ಪಾಪಾತ್ಮನು**: ರಾಮನು ವಾಲಿಯ ಬಳಿ ಕುಳಿತು. "ವಾಲೀ! ನನ್ನ ಚರ್ಯೆಗಳು ಸ್ವಾರ್ಥರಹಿತವಾದುವೆಂದು ನಿನಗೆ ಗೊತ್ತು. ಕೇವಲ ಸೀತಾನ್ವೇಷಣೆ ನಿಮಿತ್ತನಾಗಿ ಸುಗ್ರೀವನ ಸ್ನೇಹ ಮಾಡಿದೆನೆಂಬ ದುರಭಿಪ್ರಾಯವನ್ನು ಬಿಡು. ಧರ್ಮಸ್ಥಾಪನೆಗಾಗಿ ಬಂದ ನರಾಕಾರವೆಂದು ನೀನೇ ಹೇಳಿದೆಯಲ್ಲವೆ. ನೀನು ಮಾಡುವ ಅಧರ್ಮ ಅಕ್ರಮ ಅನ್ಯಾಯಗಳನ್ನು ನೋಡುತ್ತಾ ಸುಮ್ಮನಿರುವುದು ಸರಿಯೆ? ತಮ್ಮನ ಹೆಂಡತಿಯು, ಸೋದರಿಗೆ ಸೊಸೆಗೆ ಮಗಳಿಗೆ ಸಮಾನಳು. ಅವಳನ್ನು ಪಾಪ ದೃಷ್ಟಿಯಿಂದ ನೋಡಿದವನು ಮಹಾ ಪಾಪಿ. ಅಂಥ ಪಾಪಾತ್ಮನನ್ನು ಸಂಹರಿಸುವುದರಲ್ಲಿ ಯಾವ ಪಾಪವೂ ಇಲ್ಲ. ನೀನು ಸತ್ಯವನ್ನು ಗುರುತಿಸದೆ, ಸುಗ್ರೀವನು ನಿನ್ನನ್ನು ಕೊಲ್ಲುವಸಲುವಾಗಿ ಗುಹೆಗೆ ಬಂಡೆ ಮುಚ್ಚಿದನೆಂದು ತಿಳಿದು ಅವನ ಮೇಲೆ ವೈರ ಸಾಧಿಸಿದ್ದು ಎಂಥ ಅನ್ಯಾಯ? ನೀನು ಹದಿನೈದು ದಿನಗಳೆಂದು ಹೇಳಿದ್ದರೂ ಅವನು ಒಂದು ತಿಂಗಳು ನಿನಗಾಗಿ ಗುಹೆಯಾಚೆ ಕಾದಿದ್ದನು. ಅವನು ನಿನ್ನ ಆಜ್ಞೆಯನ್ನು ಮೀರಲಿಲ್ಲ. ಕಡೆಗೆ, ರಕ್ತದ ವಾಸನೆ ಬಂದಿದ್ದರಿಂದ ತನ್ನ ಅಣ್ಣನನ್ನು ರಾಕ್ಷಸನು ಹತಮಾಡಿದ್ದಾನೆಂದು ತಿಳಿದು, ಅಂಥ ರಾಕ್ಷಸನೊಂದಿಗೆ ಹೋರಾಡಲು ನಿನಗೇ ಸಾಧ್ಯವಾಗದಿದ್ದಾಗ, ಇನ್ನು ತನ್ನ ಕೈಯಲ್ಲಿ ಸಾಧ್ಯವಾಗುವುದೇ ಎಂದು ಆಲೋಚಿಸಿ, ಆ ರಾಕ್ಷಸನು ಹೊರಗೆ ಬರದಂತೆ ಗುಹೆಯ ದ್ವಾರಕ್ಕೆ ಬಂಡೆಯನ್ನು ಮುಚ್ಚಿ ಬಂದನು. ಪುರಪ್ರಜೆಗಳು ಅವನನ್ನು ತಮ್ಮ ಪ್ರಭುವಾಗಬೇಕೆಂದು ಒತ್ತಾಯ ಮಾಡಿ, ಪ್ರಭು ಮಾಡಿಕೊಂಡರು.

ಇದರಲ್ಲಿ ಸುಗ್ರೀವನ ತಪ್ಪೇನಿಲ್ಲವೆನ್ನುವುದನ್ನು ನೀನು ಯೋಚಿಸದೆ ಹೋದೆ. ನಿನ್ನ ಮೇಲಿನ ಪ್ರೇಮದಿಂದ ನಿನ್ನ ಆಜ್ಞೆಯನ್ನು ಗೆರೆದಾಟದೆ ಪಾಲಿಸಿ, ಸತ್ಯ ಮಾರ್ಗ ಅವಲಂಬಿಸಿದ ತಮ್ಮನನ್ನು ನೀನು ದುರಭಿಮಾನದಿಂದ ನಿಷ್ಕಾರಣವಾಗಿ ಹೊರದೂಡಿ ಅಡವಿ ಪಾಲು ಮಾಡಿದೆ. ಇದನ್ನು ತಪ್ಪೆನ್ನುವಿಯೋ ಇಲ್ಲವೋ? ಹೋಗಲಿ, ಅವನನ್ನು ಹೊರಗಟ್ಟುವಾಗ ಅವನ ಹೆಂಡತಿಯನ್ನು ತನ್ನ ಹೆಂಡತಿ ಮಾಡಿಕೊಳ್ಳುವುದು ಮಹಾ ಪಾಪ ಎನ್ನುತ್ತೀಯೋ ಇಲ್ಲವೋ? ಅದಕ್ಕಿಂತಲೂ ಮಹಾಪಾಪ ಬೇರೊಂದುಂಟೆ? ಅದರಲ್ಲೂ ಪ್ರಭುವಾದ ನೀನು, ಪರಿಪಾಲಕನಾದ ನೀನು, ಇಂಥ ಪಾಪಗಳಿಗೆ ಗುರಿಯಾದರೆ, ಇತರರನ್ನು ಶಿಕ್ಷಿಸುವ ಅಧಿಕಾರ ನಿನಗೆಲ್ಲಿದೆ?" ಎಂದು ಪ್ರೀತಿಯಿಂದ ಮಾತನಾಡಿ ಅವನ ತಪ್ಪುಗಳನ್ನು ಕನ್ನಡಿಯಲ್ಲಿ ತೋರಿಸಿದ ಹಾಗೆ ಅವನಿಗೆ ತೋರಿಸಿದನು. ವಾಲಿಯು ಅರಿತು, "ಓ ನಾಥಾ! ನಿಮ್ಮ ಬಳಿ ನನ್ನ ಚಮತ್ಕಾರ ವ್ಯರ್ಥವಾಯಿತು. ನನ್ನ ಬಿನ್ನಪವನ್ನು ಕೇಳಿ. ನಾನು ಪಾಪಾತ್ಮನಲ್ಲ. ಹಾಗೆ ಪಾಪಾತ್ಮನೇ ಆಗಿದ್ದಿದ್ದರೆ ಅಂತ್ಯಕಾಲದಲ್ಲಿ ಸಾಕ್ಷಾತ್ ಪರಮಾತ್ಮನ ಕೈಗಳಿಂದ ಪೆಟ್ಟು ತಿಂದು, ಅವನನ್ನೇ ನೋಡುತ್ತಾ ಅವನ ದಿವ್ಯ ವಾಣಿಯನ್ನು ಕೇಳುತ್ತಾ ಪ್ರಾಣ ಬಿಡುತ್ತಿದ್ದೆನೇ? ಇದು ಪಾಪಾತ್ಮರಿಗೆ ಸಂಭವಿಸು ವುದೇ? ಇಂಥ ಭಾಗ್ಯವನ್ನು ಪಾಪಾತ್ಮರಿಗೆ ಪರಮಾತ್ಮ ಅನುಗ್ರಹಿಸುವನೇ?" ಎಂದು ಪ್ರೇಮೋತ್ಸಾಹಗಳಿಂದ, ಭಕ್ತಿ ಪ್ರಪತ್ತಿಗಳಿಂದ ಜ್ಞಾನಿಯಂತೆ ಆಡಿದ ಮಾತುಗಳು ರಾಮನನ್ನು ಪ್ರಸನ್ನಗೊಳಿಸಿದವು.

**ನಿಜ ವೈರಾಗ್ಯ**: ವಾಲಿಯ ನಿಜ ವೈರಾಗ್ಯವನ್ನು ಲೋಕಕ್ಕೆ ತಿಳಿಸುವ ಸಲುವಾಗಿ, "ವಾಲೀ! ನಿನ್ನ ಪ್ರಾಣಗಳನ್ನು ನಿನಗೆ ಕೊಟ್ಟಿದ್ದೇನೆ. ಕಾಯವನ್ನು ಉಳಿಸಿಕೊ, ಇನ್ನು ನಿನಗೆ ಜರಾ ಮರಣಗಳಿಲ್ಲ," ಎಂದು ಅವನ ಶಿರಸ್ಸಿನ ಮೇಲೆ ಹಸ್ತವನ್ನಿಟ್ಟು ಆಶೀರ್ವದಿಸಿದನು. ಅದಕ್ಕೆ ವಾಲಿಯು, "ಓ ಕೃಪಾ ಸಮುದ್ರನೇ! ನನ್ನ ಬಿನ್ನಹವನ್ನು ಕೇಳು. ಜನ್ಮ ಜನ್ಮಾಂತರಗಳಲ್ಲಿ ಏನು ಪ್ರಯತ್ನ ಮಾಡಿದರೂ ಪ್ರಾಣ ಪ್ರಯಾಣ ಸಮಯ ಬರದೇ ತೀರದು. ಅಂಥ ಸಮಯದಲ್ಲಿ ಮುನೀಶ್ವರರಿಗೆ ಸಹಿತ ಅವರ ಬಾಯಿಯಿಂದ ನಿನ್ನ ನಾಮ ಹೊರಡದು. ಆದರೆ, ನಿನ್ನ ಸಂಭಾಷಣೆ, ನಿನ್ನ ಸ್ಪರ್ಶ, ಇಷ್ಟೂ ಈ ಅಂತ್ಯ ಸಮಯದಲ್ಲಿ ನನಗೆ ಅಯಾಚಿತವಾಗಿ ಲಭಿಸಿದೆ. ಇವನ್ನು ನಾನು ದುರ್ವಿನಿಯೋಗ ಮಾಡಿಕೊಂಡರೆ, ಇನ್ನು ನಾನು ಎಷ್ಟು ಕಾಲ ಬದುಕಿದ್ದರೆ ಏನು ಪ್ರಯೋಜನ? ಆದ್ದರಿಂದ, ಈ ಕಾಯವನ್ನು ಉಳಿಸಿಕೊಳ್ಳುವುದರಿಂದ ನಾನು ಯಾವ ಘನ ಕಾರ್ಯವನ್ನೂ ಸಾಧಿಸಲಾರೆ. ಓ ನಾಥಾ! ವೇದಗಳು ಸಹ 'ನ ಇತಿ, ನ ಇತಿ,' ಎಂದು ಹೇಳುತ್ತಿರುವಾಗ. ನನ್ನ ಅದೃಷ್ಟದಿಂದ, 'ಇದು ಅಲ್ಲ, ಇದು ಅಲ್ಲ,' ಎಂದು ಹುಡುಕುತ್ತಾ ಕಡೆಗೆ, 'ಇದೇ, ಇದೇ,' ಎನ್ನುವ ಆ ವಸ್ತು, ಕಡೆಯ ನಿಷ್ಕರ್ಷ

ಸ್ಥಾನವ್ಯಾವುದೋ ಅದೇ ನನ್ನ ಕೈಗೆ ಸಿಕ್ಕಿರುವಾಗ, ನಾನು ಅದನ್ನು ಕೈಬಿಡುವೆನೇ? ಕಲ್ಪವೃಕ್ಷವನ್ನು ಬಿಟ್ಟು ಕಾಡುಮರವನ್ನು ಕೋರುವಂಥ ಮೂರ್ಖನೇ ಈ ವಾಲಿ? ಬ್ರಹ್ಮನ ಮಾನಸ ಪುತ್ರನೆಂದು ಮಹಾ ಬಲಶಾಲಿಯೆಂದು, ಜ್ಞಾನಿ ಎಂದು ಹೆಸರು ಗಳಿಸಿ, ಈ ಪ್ರಾಣವು ತುಚ್ಛಕಾಯದ ಮೇಲೆ ಭ್ರಾಂತಿಯನ್ನು ಅಭಿವೃದ್ಧಿಗೊಳಿಸಿ ದರೂ ಅಪಕೀರ್ತಿಗೆ ಗುರಿಯಾದವನಾಗಿರುವೆನು. ಅಷ್ಟೇಕೆ, ಇದು ಆತ್ಮ ತೃಪ್ತಿ ಇಲ್ಲದೆ ಪಡೆದುಕೊಂಡ ಅನ್ಯತೃಪ್ತಿಯೇ ಅಲ್ಲವೇ?

ನಾಥಾ! ನಿಮ್ಮ ದರ್ಶನದಿಂದ ನನ್ನಲ್ಲಿ ಭೇದದೃಷ್ಟಿ ಹೋಯಿತು, ಅನನ್ಯ ದೃಷ್ಟಿ ಪ್ರಾಪ್ತವಾಯಿತು. ನನ್ನ ಪಾಪ ಫಲಗಳು ಈ ಕಾಯದೊಂದಿಗೇ ಹೋಗಲಿ. ಮತ್ತೊಂದು ಕಾಯವನ್ನು ಬರಿಸಬೇಡ," ಎಂದು ಪ್ರಾರ್ಥಿಸುತ್ತಾ ಕುಮಾರನನ್ನು ಕರೆಯಿಸಿ, "ಇವನು ಇಷ್ಟು ಕಾಲವೂ ಈ ಕಾಯದ ಕಾಮಪುತ್ರನಾಗಿ ಬೆಳೆದನು. ಇವನು ಮಹಾ ಬಲವಂತ, ಗುಣವಂತ. ವಿನಯ ವಿಧೇಯತೆಗಳಲ್ಲಿ ಮಹಾ ಗುಣಶೀಲ. ಇವನನ್ನು ಇಂದಿನಿಂದ ನಿನ್ನ ಪ್ರೇಮಪುತ್ರನಂತೆ ನೋಡಿಕೊ. ಇವನನ್ನು ನಿನ್ನ ಹಸ್ತದಲ್ಲಿಡುತ್ತಿದ್ದೇನೆ," ಎಂದು ಕುಮಾರನ ಕೈ ಹಿಡಿದುಕೊಂಡು ರಾಮನ ಕೈಗಿತ್ತನು. ರಾಮನು ಅಂಗದನನ್ನು ಆದರಿಸಿ, ಆಶೀರ್ವದಿಸಿ, ಹತ್ತಿರವಿಟ್ಟು ಕೊಂಡನು. ಅದನ್ನು ನೋಡಿ ವಾಲಿಯು ಆನಂದಬಾಷ್ಪಗಳನ್ನು ಸುರಿಸುತ್ತಾ ಕಣ್ಣು ಮುಚ್ಚಿದನು. ಕೊರಳಿನಿಂದ ಹೂಮಾಲೆ ಜಾರಿ ಕೆಳಗೆ ಬಿದ್ದರೂ ಆನೆಗೆ ಲಕ್ಷ್ಯವಿರುವುದಿಲ್ಲ ಅಲ್ಲವೆ? ಹಾಗೇ ವಾಲಿಯು ಅಲಕ್ಷ್ಯವಾಗಿ, ಯೋಚನೆಯೇ ಇಲ್ಲದೆ ಪ್ರಾಣವನ್ನು ಬಿಟ್ಟನು.

**ತಾರೆಯ ವಿಲಾಪ**: ಪಂಪಾಪುರ ವಾಸಿಗಳು ವಾಲಿಯ ಮರಣ ವಾರ್ತೆಯನ್ನು ಕೇಳಿ ಬಹಳ ದುಃಖದಿಂದ ಗೋಳಾಡುತ್ತಾ ಗುಂಪು ಗುಂಪಾಗಿ ಬಂದು ಸೇರಿದರು. ವಾಲಿಯ ಹೆಂಡತಿ ತಾರೆಯು ಪರಿವಾರದೊಂದಿಗೆ ಬಂದು, ವಾಲಿಯ ಕಳೇಬರದ ಮೇಲೆ ಸ್ಮೃತಿತಪ್ಪಿ ಬಿದ್ದಳು. ಗಂಡನ ವಿಯೋಗ ಬಾಧೆಯನ್ನು ತಾಳಲಾರದೆ ಗೋಳಾಡುತ್ತಿದ್ದ ಅವಳ ದುಃಖವು ಕಲ್ಲನ್ನಾದರೂ ಕರಗಿಸುವಂತಿತ್ತು. ಅವಳ ತಲೆಗೂದಲು ಕೆದರಿ ಹೋಗಿತ್ತು. ಒಮ್ಮೊಮ್ಮೆ ಸ್ಮೃತಿ ಬಂದಾಗ ಗಂಡನ ಮುಖವನ್ನು ನೋಡುತ್ತಾ, "ಓ ನಾಥಾ! ಎಷ್ಟೋ ವಿಧವಾಗಿ ನಾನು ಹಿತವನ್ನು ಬೋಧಿಸಿದರೂ ಕೇಳದೆ ಹೋದೆ. ಯಾವ ಸತಿಯೇ ಆಗಲಿ ಪತಿಯ ಹಿತವನ್ನು ಲಕ್ಷ್ಯದಲ್ಲಿಟ್ಟು ಕೊಂಡೇ ಅವನಿಗೆ ಏನನ್ನಾದರೂ ಹೇಳುವಳಲ್ಲವೆ? ಸತಿಗಿಂತ ಹಿತರಾದವರು ಪತಿಗೆ ಬೇರೊಬ್ಬರಿಲ್ಲ ಅಲ್ಲವೆ? ಯಾವ ಮಹನೀಯರಾದರೂ ಸ್ವಲ್ಪ ಸ್ವಾರ್ಥವಿಟ್ಟು ಕೊಂಡು ಬೋಧಿಸಬಹುದು. ಆದರೆ, ಸತಿ ಹಾಗಲ್ಲ ಅಲ್ಲವೆ? ಅವಳು ಪತಿ ಕ್ಷೇಮವನ್ನೇ ಲಕ್ಷ್ಯದಲ್ಲಿಟ್ಟುಕೊಂಡು ಹೇಳುವಳಲ್ಲವೆ? ಅಯ್ಯೋ, ನಾಥಾ! ವಿಧಿ

ಯಿಂದಾಗಿ ನನ್ನ ಬೋಧನೆ ನಿನ್ನ ಮನಸ್ಸಿಗೆ ಹಿಡಿಯಲಿಲ್ಲ. ನಾಥಾ! ಈ ಕುಮಾರನನ್ನು, ಕೊಲ್ಲದೆ ಬಿಡುವರೆ? ಇನ್ನು ನಮಗೆ ದಾರಿ ತೋರಿಸುವವರು ಯಾರು? ನಾಥಾ! ನಮ್ಮನ್ನು ಬಿಟ್ಟು ಪರಲೋಕಕ್ಕೆ ಹೋಗಲು ಮನಸ್ಸು ಹೇಗೆ ಒಪ್ಪಿತು? ಇನ್ನು ನಾನು ಯಾರಿಗಾಗಿ ಜೀವಿಸಲಿ," ಎನ್ನುತ್ತ, "ಓ ರಾಮಚಂದ್ರಾ! ಪ್ರಾಣ ಸಮಾನನಾದ ನನ್ನ ಪತಿಯನ್ನು ಪರಲೋಕಕ್ಕೆ ಕಳಿಸಿ ನಮ್ಮನ್ನು ಪರಾಧೀನ ದಲ್ಲಿ ಬಾಳಬೇಕೆನ್ನುವೆಯಾ? ಇವು ನಿನ್ನಂತಹ ಗುಣಶಾಲಿಗೆ, ಧರ್ಮಮೂರ್ತಿಗೆ ಸರಿಯೆ? ನೀನು ನಮಗೆ ಒಳ್ಳೆಯದನ್ನು ಮಾಡ ಬಯಸುವಿಯೇನು? ಹಾಗಾದರೆ ನನ್ನನ್ನೂ ನನ್ನ ಕುಮಾರನನ್ನೂ ಅವನೊಂದಿಗೆ ಕಳಿಸು. ಬಲಶಾಲಿಯನ್ನು ಸಂಹರಿ ಸಿದ ನಿನ್ನ ಬಾಣ ಅಬಲರನ್ನು ಸಂಹರಿಸಲಾರದೆ?" ಎಂದು ರಾಮನ ಪಾದಗಳ ಮೇಲೆ ಬಿದ್ದು ಗೋಳಾಡಿದಳು.

**ಶ್ರೀರಾಮನ ಬೋಧೆ**: ರಾಮನು, "ತಾರಾ! ಏಕೆ ಗೋಳಾಡುತ್ತಿ? ವೀರಪತ್ನಿ ಯಾದ ನಿನಗೆ ಈ ವಿಲಾಪ ಕೀರ್ತಿ ತರದು, ಶಾಂತಿ ನೀಡದು. ಶರೀರ ಅನಿತ್ಯವಾ ದುದು. ನಿಕೃಷ್ಟವಾದುದು. ವಾಲಿಯೇ ತನ್ನ ಕಾಯವನ್ನು ತುಚ್ಛವಾಗಿ ಭಾವಿಸಿದನು. ಎಂದಾದರೂ ಕಾಯ ಬೀಳಲೇ ಬೇಕು. ಹೋಗಲೇ ಬೇಕು. ಪರಮ ಲಕ್ಷ್ಯದ ಸಲುವಾಗಿ ಕಾಯವು ಬೇಕೇ ವಿನಾ ಲಕ್ಷ್ಯವಿಲ್ಲದ ಕಾಯ ಇದ್ದಲಿಗೆ ಸಮಾನ. ಹೋಗಲಿ, ಆತ್ಮಕ್ಕಾಗಿ ದುಃಖಿಸುತ್ತಿದ್ದೀಯಾ? ಆತ್ಮ ನಿತ್ಯವಾದುದು. ಅದಕ್ಕೆ ಯಾವ ಪರಿಣಾಮಗಳೂ ಇಲ್ಲ. ಆತ್ಮ ತಿಳಿಯದವರಿಗೇ ಕಾಯದ ಮೇಲೆ ಭ್ರಾಂತಿ. ದೇಹ ಭ್ರಾಂತಿ, ಅಜ್ಞಾನ. ಆತ್ಮ ಭ್ರಾಂತಿ ಜ್ಞಾನ. ಮಣ್ಣಿನಲ್ಲಿ ಮಾಣಿಕ್ಯ ಸಿಕ್ಕಿದಂತೆ, ಹಂಸ ದೇಹದಲ್ಲಿ ದೇಹಿ ಸಿಕ್ಕುತ್ತಾನೆ. ದೇಹಿಯ ನಿಮಿತ್ತವಾಗಿ ದೇಹವೇ ಹೊರತು, ದೇಹದ ನಿಮಿತ್ತವಾಗಿ ದೇಹಿ ಬಾರನು. ಕ್ಷಣ ಭಂಗುರವಾದ ಮಲಿನವಾದ, ದುರ್ಗಂಧಗಳಿಂದ, ಮಲಮೂತ್ರಗಳಿಂದ ತುಂಬಿದ ಈ ದೇಹವನ್ನು ಯಾರಾ ದರೂ ಒಂದಾನೊಂದು ದಿನ ಬಿಡುವುದು ತಪ್ಪದು. ಈ ಕಾಯದಿಂದ ಸಾಧಿಸಿದ ಕಾರ್ಯಗಳೇ ನಮ್ಮ ಮಾನವತ್ವಕ್ಕೆ ಶೋಭೆ ತರುವುವು. ನಿನ್ನ ಪತಿ ಮಹಾ ಘನಕಾರ್ಯ ಮಾಡಿದ್ದಾನೆ. ರಾಜ್ಯಪಾಲನೆಯಲ್ಲಿ ತನ್ನ ಅನುಚರರನ್ನು, ನಂಬಿದವ ರನ್ನು, ಪ್ರಾಣಸಮಾನವಾಗಿ ನೋಡಿಕೊಂಡಿದ್ದಾನೆ. ರಾಕ್ಷಸರನ್ನು ಹತಮಾಡಿದ್ದಾನೆ. ಅವನಲ್ಲಿ ದೈವಭಕ್ತಿ ಇತ್ತು. ಅವನ ಒಂದೇ ಒಂದು ಪಾಪವೆಂದರೆ ತನ್ನ ಸೋದರನಿಗೆ ಅಪಕಾರ ಮಾಡಿದ್ದು. ಅದೊಂದನ್ನು ಬಿಟ್ಟು ಅವನು ಬೇರೇನೂ ಪಾಪ ಮಾಡಿಲ್ಲ. ಆ ಪಾಪಕ್ಕೆ ತಕ್ಕ ಫಲವಾಗಿಯೇ ಈಗ ನನ್ನ ಕೈಯಿಂದ ಪ್ರಾಣ ಬಿಟ್ಟನು. ಆದ್ದರಿಂದ, ಆ ಪಾಪವೂ ಪರಿಹಾರವಾಗಿದೆ. ಇನ್ನು ನೀನು ಚಿಂತಿಸಕೂಡದು," ಎಂದು ಅನೇಕ ವಿಧವಾಗಿ ತಾರೆಗೆ ಜ್ಞಾನೋದಯವಾಗುವಂತೆ ಬೋಧಿಸಿದನು.

ಇನ್ನು ಆಲಸ್ಯ ಒಳ್ಳೆಯದಲ್ಲವೆಂದು, ತಾರೆಯನ್ನು ದೂರ ಸರಿಯುವಂತೆ ಹೇಳಿ, ಸುಗ್ರೀವನಿಂದ ವಾಲಿಗೆ ನಡೆಸಬೇಕಾದ ಉತ್ತರ ಕ್ರಿಯೆಗಳನ್ನು ನಡೆಸಿದನು. ಅಂಗದನನ್ನು ಪ್ರೀತಿಯಿಂದ ಕಾಣಬೇಕೆಂದು ಸುಗ್ರೀವನಿಗೆ ಹೇಳಿದನು. ಲಕ್ಷ್ಮಣನನ್ನು ಕಿಷ್ಕಿಂಧೆಗೆ ಕಳಿಸಿ, ಸುಗ್ರೀವನಿಗೆ ರಾಜ್ಯದ ಅಧಿಕಾರ ವಹಿಸಿಕೊಟ್ಟನು. ಹನುಮಾದಿಗಳು ರಾಮನ ಆಜ್ಞೆಯನ್ನು ಶಿರಸಾವಹಿಸಿ ಕಿಷ್ಕಿಂಧಾ ನಗರವನ್ನು ಪ್ರವೇಶಿಸಿ ಸುಗ್ರೀವನಿಗೆ ಮಂತ್ರಿಗಳಾಗಿದ್ದು, ರಾಜ್ಯದ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದರು.

**ಸುಗ್ರೀವನ ವಿಷಾದ**: ಸುಗ್ರೀವನು ಅಧಿಕಾರ ವಹಿಸಿಕೊಂಡ ತಕ್ಷಣವೇ ವಾನರ ನಾಯಕರನ್ನು ಬರಮಾಡಿಕೊಂಡು ಸೀತಾನ್ವೇಷಣೆಗೆ ಬೇಕಾದ ಪ್ರಯತ್ನವನ್ನು ಪ್ರಾರಂಭಿಸಬೇಕೆಂದು ಆದೇಶಿಸಿದನು. ಅವನಿಗೆ ರಾಜ್ಯದ ಅಧಿಕಾರ ಕೈಗೆ ಸಿಕ್ಕಿತೆನ್ನುವ ಸಂತೋಷವಿರಲಿಲ್ಲ. ಅಣ್ಣನನ್ನು ಕಳೆದುಕೊಂಡ ದುಃಖ ಅವನನ್ನು ಒಳಗೊಳಗೇ ಕೊರೆಯುತ್ತಿತ್ತು. "ಕೋಪವು ಎಂಥ ಮಹಾ ಪಾಪ ಕಾರ್ಯವನ್ನಾದರೂ ಮಾಡಿಸುವುದು. ದ್ವೇಷವನ್ನು ಬೆಳೆಸಿ ಪ್ರೇಮವನ್ನೇ ಕೊಲ್ಲುವುದು. ಛೀ! ಕೋಪದ್ವೇಷಗಳು ನಮ್ಮನ್ನು ಎಂಥ ಗತಿಗೆ ತರುವುದು. ರಾಮನನ್ನು ಕೊಂಡಾಡಿದ ನನ್ನ ಅಣ್ಣನ ಮಾತುಗಳು ನನ್ನ ಹೃದಯವನ್ನು ಹಿಂಡುತ್ತಿವೆ. ಅಣ್ಣನಲ್ಲಿ ಇಂಥ ಭಕ್ತಿ ಪ್ರಪತ್ತಿಗಳಿದ್ದುವೆಂದು ನಾನು ಕನಸಿನಲ್ಲಿಯೂ ತಿಳಿದಿರಲಿಲ್ಲ. ಅವನ ಜ್ಞಾನ ಅಪಾರ, ಕ್ರೋಧವು ಅಂಥ ಜ್ಞಾನವನ್ನೂ ಸಹ ಮರೆಮಾಡಿ ಕ್ರೂರತ್ವವನ್ನು ಅಭಿವೃದ್ಧಿಪಡಿಸಿ ದಿವ್ಯತ್ವವನ್ನು ಕೊಲ್ಲುವುದು. ಕಾಮಕ್ರೋಧಗಳು ಜೀವಿತವನ್ನು ಅನರ್ಥದ ಪಾಲು ಮಾಡುವುದು," ಎಂದು ತನ್ನೊಳಗೇ ಯೋಚಿಸಿದನು. ಸಮಸ್ತ ರಾಜ್ಯ ಪರಿಪಾಲನಾ ವಿಧಾನವನ್ನು ಲಕ್ಷ್ಮಣನಿಂದ ತಿಳಿದುಕೊಂಡನು. ಶ್ರೀರಾಮನನ್ನು ನಗರ ಪ್ರವೇಶಿಸುವಂತೆ ಬಹು ವಿಧವಾಗಿ ಪ್ರಾರ್ಥಿಸಿದನು. ಆದರೆ, ಪಿತೃವಾಕ್ಯ ಪರಿಪಾಲನೆಯ ನಿಮಿತ್ತ, ಹದಿನಾಲ್ಕು ಸಂವತ್ಸರಗಳು ಯಾವ ನಗರವನ್ನೂ ಪ್ರವೇಶಿಸುವುದಿಲ್ಲವೆಂದು ರಾಮಚಂದ್ರನು ಸ್ಪಷ್ಟವಾಗಿ ತಿಳಿಸಿದನು. ಸುಗ್ರೀವನು ಸೀತಾನ್ವೇಷಣೆಯ ವಿಷಯವನ್ನು ವಾನರ ನಾಯಕರೊಂದಿಗೆ ಸಮಾಲೋಚಿಸಿದನು. ಈಗ ಗ್ರೀಷ್ಮ ಋತು. ಇನ್ನು ಮುಂದೆ ವರ್ಷ ಋತುವಾದ್ದರಿಂದ ಮಳೆ ಹೆಚ್ಚಾಗಿರುವುದು. ವಾನರರು ಚಳಿ ಮಳೆಯನ್ನು ತಾಳಲಾರರು, ಶರದೃತು ಪ್ರಾರಂಭವಾದೊಡನೆ ತೀವ್ರ ಅನ್ವೇಷಣೆ ನಡೆಸೋಣ ಎಂದು ವಾನರ ನಾಯಕರು ತಿಳಿಸಿದ ವಿಷಯವನ್ನು ಸುಗ್ರೀವನು ರಾಮಲಕ್ಷ್ಮಣರಿಗೆ ನಿವೇದಿಸಿದನು. ರಾಮನು ಅದಕ್ಕೆ ಸಮ್ಮತಿಸಿದನು. ಆ ಮಳೆಗಾಲದಲ್ಲಿ ರಾಮಲಕ್ಷ್ಮಣರು ಋಷ್ಯಮೂಕ ಪರ್ವತದಲ್ಲಿ ವಾಸವಾಗಿದ್ದರು.

**ವರ್ಷಕಾಲ**: ಯಾವಾಗಲೂ ಕೆಲಸವಿಲ್ಲ, ಜೊತೆಗೆ, ಧಾರಾಕಾರವಾಗಿ ಬಿಡದೆ ಸುರಿಯುತ್ತಿದ್ದ ಮಳೆಯಿಂದಾಗಿ ರಾಮಲಕ್ಷ್ಮಣರಿಗೆ ಸಕಾಲದಲ್ಲಿ ಹಣ್ಣು ಹಂಪಲು ಸಹ ಸಿಕ್ಕುತ್ತಿರಲಿಲ್ಲ. ಹೊರಗೆ ಬರುವುದಕ್ಕೇ ಆಗುತ್ತಿರಲಿಲ್ಲ. ಸೂರ್ಯಕಾಂತಿ ಅಪರೂಪವಾಗಿರುತ್ತಿತ್ತು. ಇಂಥ ಪರಿಸ್ಥಿತಿಯಲ್ಲಿ, ರಾಮನು ಆಗಾಗ ಲಕ್ಷ್ಮಣನಿಗೆ ಏನಾದರೂ ಉಪದೇಶ ಮಾಡುತ್ತಿದ್ದನು. "ಲಕ್ಷ್ಮಣಾ! ಕುಪುತ್ರನು ಹುಟ್ಟುವುದರಿಂದ ಕುಲಧರ್ಮ ನಶಿಸುವುದು. ಪ್ರಚಂಡವಾದ ಗಾಳಿ ಬೀಸಿದರೆ ಕುಸುಮಗಳು ಚದುರಿ ಹೋಗುವುದು. ದುರ್ಜನರ ಸಹವಾಸದಿಂದ ಜ್ಞಾನ ನಶಿಸುವುದು, ಸಜ್ಜನರ ಸಾಂಗತ್ಯದಿಂದ ಜ್ಞಾನವು ವಿಕಸಿಸುವುದು. ಹಾಗೆಯೇ ಕೆಲವೊಮ್ಮೆ ಮೇಘಗಳಿಂದ ಸೂರ್ಯನೂ ಮರೆಯಾಗುವನು. ಮೇಘಗಳು ಸರಿದ ಮೇಲೆ ಸೂರ್ಯನು ಪ್ರಕಾಶಿಸುವನು," ಎಂದೆಲ್ಲಾ ಲಕ್ಷ್ಮಣನಿಗೆ ಉಪದೇಶಿಸುತ್ತಿದ್ದನು. ಹೀಗೆ, ಜ್ಞಾನ ಸಂಬಂಧವಾದ ವಿಷಯಗಳಲ್ಲಿ ಇಬ್ಬರೂ ಕಾಲ ಕಳೆಯುತ್ತಿದ್ದರು. ಗ್ರೀಷ್ಮಋತು ಕಳೆಯಿತು. ಮಳೆ ನಿಂತಿತು. ಶರದೃತು ಪ್ರಾರಂಭವಾಯಿತು. ಪೃಥ್ವಿಯೆಲ್ಲಾ ಹಚ್ಚ ಹಸುರಿನಿಂದ ಶೋಭಿಸಿತು. ಮಳೆಗಾಲಕ್ಕೆ ವೃದ್ಧಾಪ್ಯ ಬಂದಂತೆ, ಹುಲ್ಲು, ಹೂಗಳು ಹುಟ್ಟಿದವು. ಸಂತೋಷದಿಂದ ಲೋಭವು ಕ್ಷೀಣಿಸಿದಾಗ ಮನಸ್ಸು ನಿರ್ಮಲವಾಗುವಂತೆ, ನದೀ ಸರೋವರಗಳ ಜಲವು ನಿರ್ಮಲವಾಯಿತು. ಆಗ ರಾಮನು, "ಲಕ್ಷ್ಮಣಾ! ಒಂದು ಸಾರಿ ಸುಗ್ರೀವನನ್ನು ಎಚ್ಚರಿಸುವುದೊಳ್ಳೆಯದು," ಎಂದು ಆಜ್ಞಾಪಿಸಿದನು.

# ೨೩ ಅನ್ವೇಷಣೆ ಸಫಲ

ಅದರಂತೆ, ಲಕ್ಷ್ಮಣನು ನಿತ್ಯವೂ ಬಂದು ಹೋಗುತ್ತಿದ್ದ ಹನುಮಂತನೊಂದಿಗೆ ಆ ವಿಷಯವನ್ನು ತಿಳಿಸಿ, ಸುಗ್ರೀವನನ್ನು ಎಚ್ಚರಿಸೆಂದು ಹೇಳಿ ಕಳಿಸಿದನು. ಹನುಮಂತನು ರಾಮ ಕಾರ್ಯದಲ್ಲಿ ಬಹಳ ಜಾಗೃತನಾಗಿದ್ದುದರಿಂದ ಸುಗ್ರೀವನನ್ನು ತೀವ್ರವಾಗಿ ಎಚ್ಚರಿಸಿದನು. ಸುಗ್ರೀವನು ವಾನರ ನಾಯಕರನ್ನು ಬರಮಾಡಿಕೊಂಡು ಸೀತಾನ್ವೇಷಣೆಗೆ ತಕ್ಕ ಏರ್ಪಾಟುಗಳನ್ನು ಮಾಡಿದನು. ಅಂಗದನೂ ಹನುಮಂತನೂ ವಾನರರೊಂದಿಗೆ ಹೋಗಲೊಪ್ಪಿದರು. ಸುಗ್ರೀವನು ಅವರಿಗೆ ತಕ್ಕ ಬಲವನ್ನೂ ಧೈರ್ಯವನ್ನೂ ಇತ್ತು, ರಾಮ ಕಾರ್ಯ ಸಾಧಿಸಬೇಕೆನ್ನುವ

ಉತ್ಸಾಹವನ್ನು ತುಂಬಿ ಅವರನ್ನು ನಾಲ್ಕು ದಿಕ್ಕುಗಳಿಗೂ ಕಳಿಸಿದನು. ವಾನರರ ಬಾಧ್ಯತೆಯನ್ನೆಲ್ಲಾ ಹನುಮಂತನಿಗೇ ವಹಿಸಿದನು. ವಾನರರೆಲ್ಲರೂ ಒಂದು ಸಾರಿ, "ಸುಗ್ರೀವನಿಗೆ ಜೈ, ಶ್ರೀರಾಮಚಂದ್ರನಿಗೆ ಜೈ," ಎಂದು ಹೇಳಿ, ಅತ್ಯಂತ ಉತ್ಸಾಹ ಪ್ರಕಟಿಸುತ್ತಾ ಹರ್ಷೋದ್ಗಾರ ಮಾಡುತ್ತಾ ಹನುಮಂತನು ಗೊತ್ತುಪಡಿಸಿದ ರೀತಿಯಲ್ಲಿ ಒಂದೊಂದು ಗುಂಪು ಒಂದೊಂದು ದಿಕ್ಕಿಗೆ ಹೊರಟಿತು.

**ಸೀತಾನ್ವೇಷಣೆ**: ಹನುಮಂತನು ತನ್ನ ಪರಿವಾರದೊಂದಿಗೆ ದಕ್ಷಿಣಕ್ಕೆ ಹೊರಟನು. ಸುಖಷೇನ ಮೈಂದವರೂ ತಮ್ಮ ಪರಿವಾರದೊಂದಿಗೆ ಹೊರಟರು. ಗಂಧಮಾದನ, ಸುಮೇರು, ಅರ್ಜುನ, ನೀಲಗಿರಿ ಪರ್ವತಗಳನ್ನೂ ಅವುಗಳಲ್ಲಿನ ಗುಹೆಗಳನ್ನೂ ಶೋಧಿಸುತ್ತಾ ಹೊರಟರು. ಹುಡುಕುತ್ತಾ ಹೋಗಿ ಉತ್ತರ ಸಮುದ್ರ ತೀರವನ್ನು ಸೇರಿದರು. ಇತ್ತ ದಕ್ಷಿಣಕ್ಕೆ ಹೊರಟ ಹನುಮಂತಾದಿ ವಾನರರು ನಿದ್ರಾಹಾರಗಳನ್ನು ಬಿಟ್ಟು, ರಾಮ ಕಾರ್ಯ ನಿಮಿತ್ತವಾಗಿ ತಮ್ಮ ಪ್ರಾಣಗಳನ್ನೂ ಕೊಡಲು ಸಿದ್ಧರಾಗಿ, ಸಣ್ಣವನಿಂದ ಹಿಡಿದು ದೊಡ್ಡ ನಾಯಕನವರೆಗೆ ಎಲ್ಲರೂ ಒಂದೇ ದೀಕ್ಷೆಯಿಂದ, ರಾಮ, ರಾಮ, ರಾಮ ಎನ್ನುತ್ತಾ ಅರಣ್ಯಗಳು, ಬೆಟ್ಟಗಳು, ಗುಹೆಗಳು, ನದಿಗಳು, ಕಂದರಗಳು, ಅದೇನು ಇದೇನು, ಮನುಷ್ಯರು ವಾಸಮಾಡಬಹುದಾದ ಸ್ಥಳಗಳನ್ನೆಲ್ಲಾ ಜಾಲಾಡುತ್ತಾ ಮಾರ್ಗಮಧ್ಯದಲ್ಲಿ ಅಡ್ಡ ಬಂದ ರಾಕ್ಷಸರನ್ನು ಕೊಲ್ಲುತ್ತಾ ಒಂದು ಸರೋವರವನ್ನು ಬಂದು ಸೇರಿದರು.

**ಸ್ವಯಂಪ್ರಭೆ**: ಅಲ್ಲಿ, ಸ್ವಯಂಪ್ರಭೆ ಎಂಬ ಸ್ತ್ರೀ ತಪಸ್ಸು ಮಾಡುತ್ತಿದ್ದಳು. ಅವರು ದೂರದಿಂದಲೇ ಅವಳಿಗೆ ನಮಸ್ಕರಿಸಿದರು. ಅವಳು ಕಣ್ತೆರದು ಅವರನ್ನು ನೋಡಿ, "ಓ ವಾನರರೇ! ನೀವು ಬಹಳ ಬಳಲಿದಂತೆ ಕಾಣುತ್ತಿದ್ದೀರಿ," ಎಂದು ಹೇಳಿ ಫಲಗಳನ್ನಿತ್ತು, ವಿಶ್ರಮಿಸಿಕೊಳ್ಳುವಂತೆ ಕೋರಿದಳು. ವಾನರರೆಲ್ಲರೂ ಫಲಗಳನ್ನು ತಿಂದರು. ಸೀತಾನ್ವೇಷಣೆಯ ವಿಷಯವನ್ನು ಅವಳಿಗೆ ಹೇಳಿದರು. ನಂತರ, ಅವಳು ತನ್ನ ವೃತ್ತಾಂತವನ್ನು ಅವರಿಗೆ ಹೇಳಲಾರಂಭಿಸಿದಳು, "ಓ ವಾನರರೇ! ರಾಮನು ವಾಸ ಮಾಡುವ ಸ್ಥಳಕ್ಕೆ ನಾನು ಹೊರಟಿದ್ದೇನೆ. ನನ್ನ ಹೆಸರು ಸ್ವಯಂಪ್ರಭೆ, ನಾನು ಒಬ್ಬ ಗಂಧರ್ವನ ಮಗಳು. ನಾನು ತಪಸ್ಸನ್ನಾಚರಿಸುತ್ತಿದ್ದಾಗ ಬ್ರಹ್ಮನು ನನಗೆ ಪ್ರತ್ಯಕ್ಷನಾಗಿ ಬೇಕಾದ ವರವನ್ನು ಕೇಳು ಎಂದನು. ಆಗ ನಾನು, ಭಗವಂತನನ್ನು ಮಾನವಾಕಾರನಾಗಿ, ಮಾನವ ಮಾತ್ರನಂತೆ ಸಂಚರಿಸುತ್ತಿರುವುದನ್ನು ದರ್ಶನ ಮಾಡಬೇಕೆಂದು ಕೋರಿದೆ. ಅದಕ್ಕೆ ಅವನು, 'ನೀನು ಈ ಸ್ಥಳದಲ್ಲಿ ತಪಸ್ಸನ್ನು ಆಚರಿಸು. ಈ ಪ್ರದೇಶಕ್ಕೆ ಮಹಾ ಬಲವಂತರಾದ ವಾನರರು ಬರುವರು. ಅವರಿಂದ, ಮಾನವಾಕಾರ ಧರಿಸಿದ ರಾಮನ ವೃತ್ತಾಂತವನ್ನು ಕೇಳುವೆ. ಆಮೇಲೆ ರಾಮನ ದರ್ಶನ ಮಾಡುವೆ,' ಎಂದು ವರವಿತ್ತನು. ಆಹಾ! ಆ ವರದ ಪ್ರಥಮ,

ದ್ವಿತೀಯ ಚಿಹ್ನೆಗಳು ಪ್ರಕಟವಾದವು. ಮಹಾ ವೀರರಾದ ವಾನರರು ನನ್ನ ಬಳಿಗೆ ಬಂದದ್ದು ಮೊದಲನೆಯದು. ನೀವು ರಾಮನ ವಾಸ ಸ್ಥಾನವನ್ನು ತಿಳಿಸಿದ್ದು, ರಾಮ ಕಥೆಯನ್ನು ಹೇಳಿದ್ದು ಎರಡನೆಯದು. ಉಳಿದಿರುವುದು ರಾಮ ದರ್ಶನ ಮಾತ್ರ. ಅದೂ ಕೂಡ ಇನ್ನೇನು ಆದಂತೆಯೇ ಎನ್ನುವ ತೃಪ್ತಿ ಉಂಟಾಗಿದೆ," ಎಂದು ಆನಂದಬಾಷ್ಪಗಳನ್ನು ಸುರಿಸುತ್ತಾ ಅವಳು ತನ್ನ ಸಂತೋಷಕ್ಕೆ ಮೇರೆ ಇಲ್ಲದಂತೆ ಆನಂದಪಡುತ್ತಿದ್ದುದನ್ನು ನೋಡಿ ವಾನರರೂ ಬಹಳ ಆನಂದಿಸಿದರು. ನಂತರ, ಅವಳು ಕಣ್ಣುಗಳನ್ನು ಮುಚ್ಚಿಕೊಂಡು, ಏನೋ ಯೋಚಿಸಿ, "ವಾನರರೇ! ಸಮುದ್ರ ತೀರದ ಒಂದು ದಿವ್ಯವಾದ ಪಟ್ಟಣದಲ್ಲಿ, ಸುಂದರವಾದೊಂದು ವನದಲ್ಲಿ ಸೀತೆಯು ಏಕಾಂತವಾಗಿ ದುಃಖಿಸುತ್ತಿದ್ದಾಳೆ. ನೀವು ತಪ್ಪದೆ ಅವಳನ್ನು ನೋಡು ವಿರಿ, ಚಿಂತಿಸದಿರಿ," ಎಂದು ಆಶೀರ್ವದಿಸಿದಳು.

ಅಂಗದಾದಿ ವಾನರರು, "ಸುಗ್ರೀವನು ಕೊಟ್ಟ ಅವಧಿ ಇನ್ನು ಎರಡು ದಿನಗಳಲ್ಲೇ ಮುಗಿದು ಹೋಗುವುದು, ಆದರೂ ನಮಗಿನ್ನೂ ಸೀತೆ ಸಿಕ್ಕಲಿಲ್ಲವಲ್ಲಾ," ಎಂದು ಚಿಂತಿಸಿದರು, ಕಣ್ಣೀರು ಹಾಕಿದರು. ಅಲ್ಲಿಂದ ಹೊರಟು, ಸಮುದ್ರ ತೀರವನ್ನು ಸೇರಿ, ಸಮುದ್ರವನ್ನು ದಾಟಲು ಸಾಧ್ಯವಾಗದೆ, ಮರಳು ದಿಣ್ಣೆಯ ಮೇಲೆ ಗುಂಪು ಗುಂಪಾಗಿ ಕುಳಿತು ಚಿಂತಿಸುತ್ತಿದ್ದರು. ಅಂಗದನ ದುಃಖವನ್ನು ನೋಡಿ ಜಾಂಬವಂತನು ಹಲವು ವಿಧವಾಗಿ ಸಮಾಧಾನ ಪಡಿಸಿದನು. "ನಮ್ಮ ಪ್ರಯತ್ನ ದಲ್ಲಿ ಯಾವ ಲೋಪವೂ ಆಗಿಲ್ಲ. ಶಕ್ತಿ ಲೋಪವಿಲ್ಲದೆ, ಅನ್ನ ಪಾನಾದಿಗಳನ್ನು ಆಶಿಸದೆ ಒಂದು ಕ್ಷಣವನ್ನೂ ವ್ಯರ್ಥಮಾಡದೆ, ಸೀತೆಯನ್ನು ಹುಡುಕುತ್ತಲೇ ಇದ್ದೇವೆ. ನಮ್ಮ ಪ್ರಭು ಸುಗ್ರೀವನು ನಮ್ಮ ಪ್ರಯತ್ನಗಳನ್ನು ತಿಳಿಯದೇ ಹೋದರೂ ರಾಮನು ನಮ್ಮ ಪ್ರಯತ್ನಗಳನ್ನು ನೋಡುತ್ತಿದ್ದಾನೆ. ಆದ್ದರಿಂದ, ರಾಮನು ನಮಗೆ ಯಾವ ಶಿಕ್ಷೆಯನ್ನೂ ಕೊಡನು. ಭಯಪಡುವುದು ಬೇಡ, ಅವನ ಕೆಲಸವಾದ್ದ ರಿಂದ, ಅವನ ನಾಮವನ್ನು ಸ್ಮರಿಸುತ್ತಾ ನಮ್ಮ ಪ್ರಯತ್ನವನ್ನು ನಾವು ಮಾಡೋಣ," ಎಂದು ಸಮಾಧಾನ ಹೇಳಿದನು.

**ಸಂಪಾತಿ ಚರಿತ್ರೆ**: ಆ ವೇಳೆಗೆ, ಒಂದು ದೊಡ್ಡ ವೃದ್ಧ ಪಕ್ಷಿ, ತನ್ನ ಸೋದರನಿಗೆ ತಿಲೋದಕವನ್ನೀಯುವ ಸಲುವಾಗಿ ಅಲ್ಲಿಗೆ ಬಂದಿತು. ವಾನರರು ಅದರ ಸುತ್ತಲೂ ಸೇರಿ, ಇದು ಯಾರಿರಬಹುದು, ರಾಕ್ಷಸನಾಗಿರಬಹುದೇ ಎಂದು ಶಂಕಿಸಲು ಪ್ರಾರಂಭಿಸಿದರು. ಆಗ, ಆ ಪಕ್ಷಿಯು "ವಾನರರೇ! ನನ್ನ ಹೆಸರು ಸಂಪಾತಿ. ನಾನೂ ಜಟಾಯುವೂ ಸೋದರರು. ಚಿಕ್ಕವರಾಗಿದ್ದಾಗ ನಾನೂ ಅವನೂ ಪಂದ್ಯ ಕಟ್ಟಿಕೊಂಡು ಸೂರ್ಯನ ಬಳಿಗೆ ಹಾರಿದೆವು. ಜಟಾಯುವು ಸೂರ್ಯನ ತಾಖ ವನ್ನು ಸಹಿಸಲಾರದೆ ಹಿಂದಿರುಗಿದನು. ಆದರೆ, ನಾನು ದುರಭಿಮಾನದಿಂದ

ಹಿಡಿದ ಹಠ ಬಿಡದೆ, ಮೇಲು ಮೇಲಕ್ಕೆ ಹಾರಿದೆ. ಈ ವಿಧವಾಗಿ ಅನೇಕ ಪರ್ಯಾಯ ಪ್ರಯತ್ನದ ಫಲವಾಗಿ ನನ್ನ ರೆಕ್ಕೆಗಳು ಸುಟ್ಟು ಹೋದವು. ಆಕಾಶ ದಿಂದ ಡಬ್ಬನೆ ಕೆಳಗೆ ಬಿದ್ದೆ. ಆ ದಾರಿಯಲ್ಲಿ ಚಂದ್ರನೆನ್ನುವ ಒಬ್ಬ ಮುನಿ ಹೋಗುತ್ತಿದ್ದನು. ಅವನು ನನ್ನ ದುರವಸ್ಥೆಯನ್ನು ನೋಡಿ ಕನಿಕರಪಟ್ಟು ಅನೇಕ ಬಗೆಯಾಗಿ ನನಗೆ ಜ್ಞಾನೋಪದೇಶ ಮಾಡಿದನು. ಅವನ ಉಪದೇಶದಿಂದ ನನಗೆ ದುರಭಿಮಾನ ಹೋಯಿತು. ಆ ಮುನಿಯು, 'ಓ ಪಕ್ಷಿರಾಜಾ! ನನ್ನ ಮಾತು ಕೇಳು! ತ್ರೇತಾಯುಗದಲ್ಲಿ ಶ್ರೀಮನ್ನಾರಾಯಣನು ನರಾಕಾರ ಧರಿಸಿ ಅವತರಿಸುವನು. ಅವನ ಹೆಂಡತಿಯನ್ನು ರಾವಣನು ಅಪಹರಿಸುವನು. ಅವಳನ್ನು ಹುಡುಕಲು ವಾನರ ಸೈನ್ಯ ಬರುವುದು. ಆ ರಾಮದೂತರಾದ ವಾನರರನ್ನು ನೋಡಿ ನೀನು ಪವಿತ್ರನಾಗುವೆ. ಅದರಿಂದ ನಿನ್ನ ರೆಕ್ಕೆಗಳು ನಿನಗೆ ತಿರುಗಿ ಬರುವುದು. ಆಗ ಸೀತಾ ವೃತ್ತಾಂತವನ್ನು ಅವರಿಗೆ ತಿಳಿಸು,' ಎಂದು ಆದೇಶಿಸಿದನು. ಈ ದಿನ ನನ್ನ ಅದೃಷ್ಟದಿಂದ ನನ್ನ ಸೋದರ ಜಟಾಯುವಿಗೆ ತರ್ಪಣ ಕೊಡಲು ಇಲ್ಲಿಗೆ ಬಂದೆ. ನೀವು ನನಗೆ ಮುನಿಯ ವಚನಗಳನ್ನು ಜ್ಞಾಪಕಕ್ಕೆ ತಂದು ಕೊಟ್ಟಿರಿ. ಅವುಗಳ ಜ್ಞಾಪಕವಷ್ಟೆ ಅಲ್ಲ. ಆ ವಚನಗಳು ಈಗ ನೆರವೇರುವುವು ಸಹ," ಎಂದಿತು.

**ಸುಪರ್ಣ**: ಅದನ್ನು ಕೇಳಿ ವಾನರರು ಆತುರಾತುರದಿಂದ, "ಸಂಪಾತೀ! ನಿನ್ನ ಚರಿತ್ರೆ ಹಾಗಿರಲಿ, ನಮ್ಮ ಅವಧಿ ಮುಗಿಯುತ್ತಿದೆಯಾದ್ದರಿಂದ ಸೀತೆ ಇರುವ ಸ್ಥಳವನ್ನು, ಸೀತೆಯ ವಾರ್ತೆಯನ್ನು ತಿಳಿಸು," ಎಂದು ಪ್ರಾರ್ಥಿಸಿದರು. ಸಂಪಾತಿಯು, "ಓ ವಾನರರೇ! ಕೇಳಿ! ಒಂದು ದಿನ ನನಗೆ ವಿಪರೀತ ಹಸಿವಾದಾಗ ನನ್ನ ಕುಮಾರನಾದ ಸುಪರ್ಣನನ್ನು ಕರೆದು, ಬೇಗ ಹೋಗಿ ಏನಾದರೂ ಆಹಾರ ತೆಗೆದುಕೊಂಡು ಬಾ, ನನಗೆ ವೃದ್ಧಾಪ್ಯವಾದ್ದರಿಂದ, ಮೇಲಾಗಿ ರೆಕ್ಕೆಗಳಿಲ್ಲದ್ದರಿಂದ ನಾನು ಹೋಗಲಾರೆ ಎಂದು ಹೇಳಲು, ಸುಪರ್ಣನು ಅಡವಿಗೆ ಹೋದನು. ಎಷ್ಟು ಹೊತ್ತಾದರೂ ಅವನು ಹಿಂತಿರುಗಲಿಲ್ಲ, ನನಗೆ ಚಿಂತೆಯಾಯಿತು, ಹಸಿವು ಹೆಚ್ಚಾಯಿತು. ಕಡೆಗೆ, ಕುಮಾರನು ಮೃಗದ ಮಾಂಸವನ್ನು ತೆಗೆದುಕೊಂಡು ಬಂದನು. ಹಸಿವಿನಿಂದಲೂ ಅಜ್ಞಾನದಿಂದಲೂ ವಿಪರೀತ ತಡಮಾಡಿ ಬಂದನಲ್ಲಾ ಎನ್ನುವ ಬೇಜಾರಿನಿಂದಲೂ ನಾನು ಕೋಪವನ್ನು ತಡೆಯಾಲಾರದೆ ಅವನನ್ನು ಬಯ್ಯಲಾರಂಭಿಸಿದೆ. ಆಗ ಕುಮಾರನು ನನ್ನ ಎರಡು ಕಾಲುಗಳನ್ನೂ ಹಿಡಿದು ಕೊಂಡು, 'ಅಪ್ಪಾ! ನಾನು ಒಂದು ಕ್ಷಣವನ್ನೂ ಸುಮ್ಮನೆ ಕಳೆಯಲಿಲ್ಲ. ನನ್ನ ಬಿನ್ನಹವನ್ನು ಕೇಳು, ನನ್ನನ್ನು ಕ್ಷಮಿಸು,' ಎಂದು ಮಾಂಸವನ್ನು ಮುಂದಿಟ್ಟನು. ಅದನ್ನು ತಿಂದು ತೃಪ್ತಿಯಾದ ಮೇಲೆ, ಅವನು ತಡವಾಗಿ ಬಂದುದಕ್ಕೆ ಕಾರಣವೇನೆಂದು ಕೇಳಿದೆ.

ಆಗ ಅವನು, 'ತಂದೆಯೇ! ನಾನು ಕಾಡಿಗೆ ಹೋದಾಗ, ಇಪ್ಪತ್ತು ಭುಜಗಳು, ಹತ್ತು ತಲೆಗಳಿದ್ದ ಪುರುಷನೊಬ್ಬ ರಥದಲ್ಲಿ ಹೋಗುತ್ತಿದ್ದನು. ಅವನೊಂದಿಗೆ ಒಬ್ಬಳು ಸುಂದರ ಸ್ತ್ರೀ ಇದ್ದಳು. ಅವಳ ರೋದನವನ್ನು ಕೇಳಲಾರದೆ ಹೋದೆ. ಅವನೊಂದು ಪಶುವೆಂದು ಭಾವಿಸಿ ಮೊದಲು ಅವನನ್ನು ಹಿಡಿದೆ. ಆಮೇಲೆ ಒಳಗಿದ್ದ ಸ್ತ್ರೀ ಕಾಣಿಸಿದಳು. ಅವಳ ಬಾಯಿಂದ, 'ರಾಮಾ ರಾಮಾ,' ಎನ್ನುವುದಲ್ಲದೆ ಬೇರೇನೂ ಬರುತ್ತಿರಲಿಲ್ಲ. ನಾನು ಅವನೊಂದಿಗೆ ಹೋರಾಡಿದೆ. ಅದರಿಂದ ವಿಳಂಬವಾಯಿತು,' ಎಂದು ಹೇಳಿದನು. ಅವನ ಮಾತುಗಳನ್ನು ಕೇಳಿದೊಡನೆ, 'ಅಯ್ಯೋ, ನನಗೆ ರೆಕ್ಕೆಗಳಿಲ್ಲವಾಯಿತೆ! ವೃದ್ಧಾಪ್ಯ ಬೇರೆ ಬಂದಿದೆಯಲ್ಲಾ ಏನು ಮಾಡಲಿ!' ಎಂದು ನನ್ನೊಳಗೇ ನಾನು ದುಃಖಿಸಿದೆ. ಅವನು ಯಾರೋ ರಾಕ್ಷಸನೇ ಇರಬೇಕೆಂದು ಅನಿಸಿ, 'ಮಗೂ! ಆ ದಶಕಂಠನು ಯಾವ ದಿಕ್ಕಿನಲ್ಲಿ ಹೋದ?' ಎಂದು ಕೇಳಿದೆ. ಅವನು ದಕ್ಷಿಣ ದಿಕ್ಕಿಗೆ ಹೋದನೆಂದು ಕುಮಾರನು ಹೇಳಿದ. ಅಯ್ಯೋ! ಅವರು, ಮುನಿ ಹೇಳಿದ ಹಾಗೆ, ರಾವಣ ಮತ್ತು ಸೀತಾ ಮಾತೆಯೇ! ಇದರಲ್ಲಿ ಏನೂ ಸಂಶಯವಿಲ್ಲ. ಸೀತೆಯನ್ನು ಅಪಹರಿಸಿ, ರಾವಣನು ನಾಯಿ ನರಿಗಳ ಹಾಗೆ ಕದ್ದೊಯ್ಯುತ್ತಿದ್ದಾನೆ ಎಂದು ಕೆಂಡ ಕಾರಿದೆ. ಅದಕ್ಕಿಂತ ಹೆಚ್ಚೇನು ನಾನು ಮಾಡಬಲ್ಲೆ?" ಎಂದು ನಡೆದ ಸಂಗತಿಯನ್ನು ಸಂಪಾತಿ ಹೇಳಿದನು.

"ಮುನೀಶ್ವರನ ವಚನದಂತೆ, ಅವಳನ್ನು ಹುಡುಕಲು ವಾನರರು ಬರುತ್ತಾರೆಂದು ನಿಮಿಷ ನಿಮಿಷವನ್ನೂ ಲೆಕ್ಕ ಮಾಡುತ್ತಿದ್ದೆ. ಇಂದು ನನ್ನ ಜನ್ಮ ಧನ್ಯವಾಯಿತು. ನಿಮ್ಮ ದರ್ಶನವಾಯಿತು," ಎಂದು ಆನಂದದಿಂದ ಉನ್ಮತ್ತನಾದನು. "ಓ ವಾನರರೇ! ಸಮುದ್ರ ತೀರದಲ್ಲಿ ತ್ರಿಕೂಟ ಪರ್ವತದ ಮೇಲೆ ಲಂಕಾ ನಗರವಿದೆ. ಆ ನಗರದಲ್ಲಿ ಅಶೋಕ ವನವೆನ್ನುವ ಒಂದು ಸುಂದರ ಉದ್ಯಾನವಿದೆ. ಅದರಲ್ಲಿ ಸೀತೆ ದುಃಖಿಸು ತ್ತಿದ್ದಾಳೆ. ನೀವು ಬರುವುದನ್ನೇ ಎದುರು ನೋಡುತ್ತಿದ್ದಾಳೆ. ಆದ್ದರಿಂದ ದಕ್ಷಿಣ ದಿಕ್ಕಿಗೆ ಪ್ರಯಾಣ ಬೆಳಸಿ," ಎಂದು ಹೇಳಿದನು. "ಅವಳು ಅಶೋಕ ವನದಲ್ಲಿ ಮರದ ಕೆಳಗೆ ದುಃಖಿಸುತ್ತಿದ್ದಾಳೆನ್ನುವುದು ನಿಮಗೆ ಹೇಗೆ ತಿಳಿಯಿತು?" ಎಂದು ಅಂಗದನು ಅವನನ್ನು ಪ್ರಶ್ನಿಸಲು, "ಅಪ್ಪಾ! ಗೃಧ್ರಗಳ ದೃಷ್ಟಿ ನಾನೂರು ಯೋಜನಗಳ ದೂರ ಹೋಗುವುದು. ನನಗೆ ವೃದ್ಧಾಪ್ಯವಿಲ್ಲದಿದ್ದರೆ ನಿಮಗೆ ಎಷ್ಟೋ ಸಹಾಯ ಮಾಡುತ್ತಿದ್ದೆ. ವಾನರರೇ! ನೂರು ಯೋಜನಗಳನ್ನು ದಾಟಬಲ್ಲ ಬಲವಂತನು ಬುದ್ಧಿವಂತನು ಮಾತ್ರ ಕಾರ್ಯವನ್ನು ಸಾಧಿಸಬಲ್ಲ. ನಿಮ್ಮಲ್ಲಿ ಅಂಥವನೊಬ್ಬ ಇರುವುದಾದರೆ ನಿಮ್ಮ ಕಾರ್ಯ ಸಿದ್ಧಿಸುವುದು," ಎಂದು ಹೇಳುತ್ತಿರುವಂತೆ,

ಸಂಪಾತಿಯ ರೆಕ್ಕೆಗಳು ಸ್ವಲ್ಪ ಅಲುಗಿದ ಚಿಹ್ನೆಗಳು ಕಾಣಿಸಿತು. ಪರಮಾಶ್ಚರ್ಯ ದಿಂದ ಸಂಪಾತಿಯು ರೆಕ್ಕೆಗಳನ್ನು ಆಡಿಸಿದನು, ಸ್ವಲ್ಪ ಹಾರಿದನು.

ಮುನಿವಾಕ್ಯ ಸತ್ಯವಾಯಿತು! "ವಾನರ ವೀರರೇ! ನೀವು ರಾಮ ಕಾರ್ಯಕ್ಕೆ ಎಷ್ಟೋ ಉತ್ಸಾಹದಿಂದ ನಿದ್ರಾಹಾರಗಳನ್ನು ಬಿಟ್ಟು ಭಕ್ತಿ ಶ್ರದ್ಧೆಗಳಿಂದ ಜೀವಿತವನ್ನು ಧಾರೆ ಎರೆದಿದ್ದೀರಿ. ನಿಮಗೆ ರಾಮನೇ ಸರ್ವಶಕ್ತಿಗಳನ್ನಿತ್ತು ತನ್ನ ಕಾರ್ಯ ಮಾಡಿಸಿ ಕೊಳ್ಳುವನು. ಅವನನ್ನು ಮನಸಾರೆ ತೃಪ್ತಿಯಾಗುವಷ್ಟು ಸ್ಮರಿಸುವುದೇ ನೀವು ಮಾಡಬೇಕಾದ ಮುಖ್ಯ ಕೆಲಸ. ಹಾಗೆ ಮಾಡಿದರೆ ತಪ್ಪದೆ ನೀವು ಸಮುದ್ರವನ್ನು ದಾಟುವಿರಿ. ಸೀತೆಯನ್ನು ನೋಡುವಿರಿ, ರಾಮನ ಮನಸ್ಸನ್ನು ತೃಪ್ತಿಪಡಿಸುವಿರಿ. ಭಗವತ್ ತೃಪ್ತಿ ನಿಮ್ಮ ಜನ್ಮವನ್ನು ಸಾರ್ಥಕಗೊಳಿಸುವುದು. ದೈವವನ್ನು ತೃಪ್ತಿಪಡಿ ಸಿದ ಜನ್ಮವೇ ಜನ್ಮ. ಅಂಥ ಜನ್ಮವೇ ಲೆಕ್ಕಕ್ಕೆ ಬರುವುದು. ಮಿಕ್ಕ ಜನ್ಮಗಳು ಅನ್ನಕ್ಕೆ ಅಧಿಕ, ಭೂಮಿಗೆ ಭಾರವೆ ವಿನಾ ಬೇರೆ ಫಲವಿಲ್ಲ," ಎಂದು ಹೇಳಿ, ಮೇಲಕ್ಕೆ ಹಾರಿತು. ಅದನ್ನು ನೋಡುತ್ತಿದ್ದ ವಾನರರು ಸಂಪಾತಿಯ ಶಕ್ತಿಗೆ ಸಂತೋಷಪಟ್ಟರು. ಆಶ್ಚರ್ಯಪಟ್ಟರು.

**ಬಲ ಪರೀಕ್ಷೆ :** 'ಮೂಕಂ ಕರೋತಿ ವಾಚಾಲಂ ಪಂಗುಂ ಲಂಘಯತೇ ಗಿರಿಂ,' ಎನ್ನುವಂತೆ ರಾಮನಾಮವು ಎಂಥ ಕಾರ್ಯವನ್ನಾದರೂ ಮಾಡಿಸುವುದು. ರೆಕ್ಕೆ ಇಲ್ಲದ ಸಂಪಾತಿಗೆ ಶಕ್ತಿ ಬಂದಿದ್ದನ್ನು ವಾನರರು ಕಣ್ಣಾರೆ ಕಂಡರು. ಅದರ ಆಧಾರದ ಮೇಲೆ ತಮ್ಮ ತಮ್ಮ ಬಲವನ್ನು ಪರೀಕ್ಷಿಸಿಕೊಂಡರು. ಆಗ, ಜಾಂಬವಂತನು ವಾನರರನ್ನು ಕುರಿತು, "ಮಿತ್ರರೇ, ನನಗೆ ವೃದ್ಧಾಪ್ಯ ಬಂದಿದೆ. ಹಿಂದಿನ ಬಲ ಈಗಿಲ್ಲ. ರಾಮಕಾರ್ಯವನ್ನು ಸಂತೋಷದಿಂದ ರಾಮಾನುಗ್ರಹದಿಂದ ಏನೋ ಇಷ್ಟಾದರೂ ಮಾಡುವಂತಾಯಿತು. ಪರಮೇಶ್ವರ ತ್ರಿವಿಕ್ರಮಾವತಾರ ಸಮಯದಲ್ಲಿ ನಾನು ಪೂರ್ಣ ಬಲದಿಂದ ಕೂಡಿದ ವಯಸ್ಸಿನವನಾಗಿದ್ದೆ," ಎಂದನು. ವಾನರರು ಯುವರಾಜನಾದ ಅಂಗದನ ಸುತ್ತಲೂ ಸೇರಿ, "ಓ ರಾಜಾ! ಸಮುದ್ರ ಹಾರಲು ಏನಾದರೂ ಮಾರ್ಗ ಆಲೋಚಿಸಿ. ನಮ್ಮಲ್ಲಿ ಸಮುದ್ರವನ್ನು ದಾಟಬಲ್ಲ ಬಲವಂತ ಯಾರೋ ನೀವೇ ನಿರ್ಣಯಿಸಿ. ನಿಮ್ಮ ಆಜ್ಞೆಯನ್ನು ಶಿರಸಾವಹಿಸಿ ಮುಂದಿನ ಪ್ರಯತ್ನ ಮಾಡುತ್ತೇವೆ," ಎಂದರು. ಅಂಗದನು ಎಲ್ಲರನ್ನೂ ಒಂದೆಡೆ ಸೇರಿಸಿ ಯಾರ ಯಾರ ಶಕ್ತಿ ಎಷ್ಟೊ ತಿಳಿಸಬೇಕೆಂದು ಕೋರಿದನು.

ವಿಕಟನು ಎದ್ದು, "ರಾಜಾ! ನಾನು ಮೂವತ್ತು ಯೋಜನಗಳನ್ನು ದಾಟಬಲ್ಲೆ," ಎಂದನು. ನೀಲನು, "ರಾಜಾ! ನಾನು ನಲವತ್ತು ಯೋಜನಗಳನ್ನು ದಾಟಬಲ್ಲೆ. ಅದರ ಮುಂದೆ ಸ್ವಲ್ಪವೂ ಹೋಗಲಾರೆ," ಎಂದನು. ಧುರ್ಧುಕನು, "ರಾಜಾ!

ನಾನು ಐವತ್ತು ಯೋಜನಗಳನ್ನು ದಾಟಬಲ್ಲೆ," ಎಂದನು. ಅಷ್ಟರಲ್ಲಿ ಕೈಯೆತ್ತಿ ಗರ್ವಿಸುತ್ತಾ ನಾನು ಅರವತ್ತು ಯೋಜನಗಳು ದಾಟುವೆನೆಂದು ನಳನು ಹೇಳಿದನು. ಹೀಗೆ ಒಬ್ಬೊಬ್ಬರೂ ತಮ್ಮ ತಮ್ಮ ಬಲವನ್ನು ಹೇಳಿಕೊಳ್ಳಲು, ಅಂಗದನು, "ಓ ವಾನರುಗಳಿರಾ! ನಾನು ಸಮುದ್ರವನ್ನು ದಾಟಬಲ್ಲೆ. ಸಮುದ್ರವನ್ನು ದಾಟುವುದು ಮಾತ್ರವಲ್ಲ, ಅಲ್ಲಿ ರಾಕ್ಷಸರೊಂದಿಗೆ ಹೋರಾಡಬೇಕಲ್ಲವೆ? ಆ ಹೋರಾಟದಲ್ಲಿ ನನ್ನ ಬಲವೆಲ್ಲಾ ಹೋಗಿಬಿಡುವುದು. ಆದ್ದರಿಂದ, ಹೋಗಿಬರುವುದಕ್ಕೆ, ಅಲ್ಲಿ ಹೋರಾಡುವುದಕ್ಕೆ ನನ್ನಲ್ಲಿ ಸಾಕಷ್ಟು ಬಲವಿಲ್ಲ," ಎಂದು ನಿರುತ್ಸಾಹದಿಂದ ಹೇಳಿದನು. ಜಾಂಬವಂತ ಮೊದಲಾದ ನಾಯಕರು ಎದ್ದು, "ಓ ರಾಜಾ! ನೀವು ಯುವರಾಜರು. ನಿಮಗೆ ಸಾಮರ್ಥ್ಯವಿರಲಿ, ಇಲ್ಲದಿರಲಿ ನೀವು ಯೋಚಿಸ ಬೇಕಾದುದಲ್ಲ. ಏಕೆಂದರೆ ನೀವೇ ಸ್ವತಃ ಹೋಗುವುದು ಸರಿಯಲ್ಲ. ಅದು ರಾಜಧರ್ಮಕ್ಕೆ ವಿರುದ್ಧ. ಆ ಕೆಲಸವನ್ನು ಸೇವಕರು ಮಾಡುವರು. ಇಷ್ಟು ಕೋಟಿ ತಮ್ಮ ಸೇವಕರಿರುವಾಗ ನಿಮ್ಮನ್ನು ಕಳಿಸುವುದು ನಮಗೆ ನೀತಿಯಲ್ಲ. ಆದ್ದರಿಂದ ಇದಕ್ಕಾಗಿ ನೀವು ಯಾರನ್ನಾದರೂ ನೇಮಿಸಿ," ಎಂದು ಪ್ರಾರ್ಥಿಸಿದರು.

ಅಂಗದನು ಯಾರನ್ನು ನೇಮಿಸುವುದೆಂದು ಯೋಚಿಸಿ ಅತ್ತಿತ್ತ ನೋಡಿ, "ಅಯ್ಯಾ! ವಾಯುಪುತ್ರ! ನೀನು ರಾಮನ ಭಂಟ, ಮಹಾ ಭಕ್ತ, ರಾಮನನ್ನು ಪ್ರಥಮವಾಗಿ ಪರಿಚಯ ಮಾಡಿಕೊಂಡವನು. ನಿನ್ನ ಶಕ್ತಿ, ಯುಕ್ತಿ, ಭಕ್ತಿಗಳಿಂದಲೇ ರಾಜನಾದ ಸುಗ್ರೀವನಿಗೆ ರಾಮನ ಮೈತ್ರಿ ಉಂಟಾಯಿತು. ಅಂತಹ ನೀನು ಈ ರಾಮಕಾರ್ಯ ದಲ್ಲಿ ಮೌನವಾಗಿರುವುದರ ಅಂತರಾರ್ಥವೇನೋ ನಮಗೆ ಅರ್ಥವಾಗುತ್ತಿಲ್ಲ," ಎಂದು ಹಲವು ಬಗೆಯಾಗಿ ವಾಯುಪುತ್ರನನ್ನು ವರ್ಣಿಸಿದನು. "ನೀನು ಸಾಧಿಸ ಲಾರದ ಕಾರ್ಯ ಯಾವುದೂ ಇಲ್ಲ. ಬುದ್ಧಿವಂತ, ಗುಣವಂತ, ಬಲವಂತ ಹನುಮಂತನು ನೀನು. ನಿನ್ನ ಶಕ್ತಿಯನ್ನು ಜ್ಞಾಪಿಸಿಕೊ," ಎಂದು ಅವನನ್ನು ಕೊಂಡಾಡಿದನು. ಅಂಗದನ ಮಾತುಗಳು ಹನುಮಂತನಿಗೆ ಅವನ ಪೂರ್ವದ ಶಕ್ತಿಯನ್ನು ಜ್ಞಾಪಕಕ್ಕೆ ತಂದುಕೊಟ್ಟಂತಾಯಿತು. ಧಿಗ್ಗನೆ ಎದ್ದು, "ವಾನರ ಸೋದ ರರೇ! ನಾನು ಹಿಂತಿರುಗಿ ಬರುವುದನ್ನೇ ಎದುರು ನೋಡುತ್ತಾ ನೀವು ಇಲ್ಲೇ ಇರಿ. ನೀವು ಇಷ್ಟು ಕಾಲ ವನಗಳಲ್ಲಿ ಪರ್ವತಗಳಲ್ಲಿ ತಿರುಗಿ ವಿಶ್ರಾಂತಿ ಇಲ್ಲದೆ ಬಳಲಿದ್ದೀರಿ. ಇಲ್ಲೇ ಕಂದಮೂಲಾದಿಗಳನ್ನು ತಿನ್ನುತ್ತಾ ವಿಶ್ರಾಂತಿ ತೆಗೆದುಕೊಳ್ಳಿ. ನಾನು ಈಗಲೇ ಸಮುದ್ರವನ್ನು ದಾಟಿ, ಲಂಕೆಯನ್ನು ಪ್ರವೇಶಿಸಿ, ಸೀತೆಯನ್ನು ನೋಡಿ ಬರುತ್ತೇನೆ. ನನಗೆ ರಾಮಕಾರ್ಯಕ್ಕಿಂತ ಇಷ್ಟವಾದ ಕಾರ್ಯ ಮತ್ತೊಂದಿಲ್ಲ. ಅವನ ಅನುಗ್ರಹಕ್ಕೆ ಪಾತ್ರನಾಗುವುದಕ್ಕಿಂತ ಜನ್ಮಕ್ಕೆ ಬೇರೆ ಸಾರ್ಥಕತೆ ಏನಿದೆ?" ಎಂದು ಹೇಳಿ, ಎಲ್ಲರಿಗೂ ನಮಸ್ಕರಿಸಿ, ಅಂಗದನ ಅನುಮತಿ ಪಡೆದು, "ಜೈ ರಾಮ!"

ಎಂದು ವಾನರರು ಜಯಘೋಷ ಮಾಡುತ್ತಿರಲು, ಹನುಮಂತನು ಮನಸ್ಸಿನಲ್ಲಿ ರಾಮಚಂದ್ರನನ್ನು ಸ್ಮರಿಸಿ, ಒಂದು ಸಾರಿ ಕುಪ್ಪಳಿಸಿ ಮೇಲಕ್ಕೆ ಹಾರಿದನು.

**ಸಮುದ್ರೋಲ್ಲಂಘನೆ**: ಹನುಮಂತನು ಕುಪ್ಪಳಿಸಿ ಹಾರಿದ ವೇಗಕ್ಕೆ ಪರ್ವತಗಳ ಮೇಲಿದ್ದ ವೃಕ್ಷಗಳು ಅಲುಗಿ, ಅವೂ ಅಂತರಿಕ್ಷಕ್ಕೆ ಹಾರಿದವು. ಅವನು ಹಾರಿದ ರಭಸಕ್ಕೆ ಅವನು ನಿಂತಿದ್ದ ಪರ್ವತವು ಭೂಮಿಯೊಳಕ್ಕೆ ಇಳಿಯಿತು. ಅತಿ ಎತ್ತರದಲ್ಲಿ ಹಾರಿ ಹೋಗುತ್ತಿದ್ದ ಹನುಮಂತನನ್ನು ನೋಡಿ ಸಮುದ್ರವು, "ಈ ಹನುಮಂತನು ರಾಮದೂತ. ರಾಮಕಾರ್ಯಾರ್ಥವಾಗಿ ಹೊರಟಿದ್ದಾನೆ. ಆಹಾ! ಇವನೆಷ್ಟು ಅದೃಷ್ಟವಂತ! ರಾಮಕಾರ್ಯವನ್ನು ಜಯಗೊಳಿಸುವ ಭಕ್ತಿ ಶಕ್ತಿಗಳಿರುವ ಇವನು ರಾಮಸೇವಕರಲ್ಲಿ ಪ್ರಧಾನನೆನ್ನುವ ಸಾರ್ಥಕನಾಮ ಪಡೆಯುವನು," ಎಂದು ಆನಂದಿಸಿದನು. ಸಮುದ್ರದಲ್ಲಿ ಮುಳುಗಿದ್ದ ಮೈನಾಕವೆನ್ನುವ ಪರ್ವತವು ವೇಗವಾಗಿ ಹೋಗುತ್ತಿದ್ದ ಹನುಮಂತನನ್ನು ನೋಡಿ, ನೀರಿನಿಂದ ಮೇಲೆದ್ದು ಹನುಮಂತನ ರಾಮಕಾರ್ಯದಲ್ಲಿ ತಾನೂ ಕೂಡ ಸೇವಾ ಭಾಗ್ಯವನ್ನು ಅನುಭವಿಸಬೇಕೆಂದು ಭಾವಿಸಿ, "ವಾಯುಪುತ್ರಾ! ಇಷ್ಟು ದೂರ ಒಂದೇ ವೇಗದಲ್ಲಿ ಹೋಗುವುದು ಬಹಳ ಶ್ರಮವಾಗಬಹುದು. ಆದ್ದರಿಂದ, ನನ್ನ ತಲೆಯ ಮೇಲೆ ಸ್ವಲ್ಪ ವಿಶ್ರಮಿಸಿಕೊ. ನನಗೂ ರಾಮ ಕಾರ್ಯದಲ್ಲಿ ಒಂದು ಭಾಗ ಕೊಡು," ಎಂದು ಪ್ರಾರ್ಥಿಸಿದನು. ಮೈನಾಕನ ಪ್ರಾರ್ಥನೆಯನ್ನು ಮನ್ನಿಸಿದ ಹನುಮಂತನು, ಅದನ್ನು ಕೈಯಲ್ಲಿ ಮುಟ್ಟಿ, ಅವನಿಗೆ ನಮಸ್ಕರಿಸಿ, "ಓ ಮೈನಾಕವೇ! ರಾಮ ಕಾರ್ಯಾರ್ಥವಾಗಿ ನಾನು ಹೋಗುತ್ತಿದ್ದೇನೆ. ರಾಮಕಾರ್ಯವು ಪೂರ್ತಿಯಾಗುವವರೆಗೂ ಆಹಾರ ನಿದ್ರೆಗಳು ನನಗೆ ಅವಶ್ಯಕವಿಲ್ಲ. ವಿಶ್ರಾಂತಿ ಈಗ ಉಚಿತವಲ್ಲ. ಕಾಲಹರಣ ಮಾಡುವುದು ಸರಿಯಲ್ಲ," ಎಂದು ಹೇಳಿ, ರಾಮನನ್ನು ಸ್ಮರಿಸುತ್ತಾ ಅದೇ ವೇಗದಲ್ಲಿ ನೇರವಾಗಿ ಲಂಕೆಯತ್ತ ಧಾವಿಸಿದನು.

ಮಾರ್ಗಮಧ್ಯದಲ್ಲಿ ಸುರಸ ಎನ್ನುವ ನಾಗಮಾತೆಯೂ ಸಿಂಹಿಕ ಎನ್ನುವ ರಾಕ್ಷಸಿಯೂ ಆತಂಕಗಳನ್ನೊಡ್ಡಿದರೂ ಲೆಕ್ಕಿಸದೆ, ಅವರೊಂದಿಗೆ ಹೋರಾಡಿ ಜಯಿಸಿ ಆಚೆಯ ದಡವನ್ನು ಸೇರಿದನು. ಅಲ್ಲಿ ಸಮುದ್ರ ತೀರದಲ್ಲಿದ್ದ ಉದ್ಯಾನವನಗಳೂ ವಿನೋದ ಭವನಗಳೂ ಹನುಮಂತನನ್ನು ಮೈಮರೆಸಿದವು, ಪರಮಾನಂದಗೊಳಿಸಿದವು. ಆ ವನಗಳಲ್ಲಿದ್ದ ವಿವಿಧ ಜಾತಿಯ ಬಣ್ಣ ಬಣ್ಣದ ಪಕ್ಷಿಗಳ ಗುಂಪುಗಳು ಹನುಮಂತನನ್ನು ಭ್ರಮೆಗೊಳಿಸಿದವು. ಲೀಲಾಜಾಲವಾಗಿ ಹಾರಿ, ಪಕ್ಕದಲ್ಲೆ ಇದ್ದ ಒಂದು ಸುಂದರವಾದ ಪರ್ವತದ ಮೇಲೆ ಕುಳಿತು ಇದೆಲ್ಲಾ ಎಷ್ಟು ಮಾತ್ರಕ್ಕೂ ನನ್ನ ಸಾಮರ್ಥ್ಯವಲ್ಲ. ಇದು ರಾಮನ ಕೃಪಾ ಕಟಾಕ್ಷವೇ, ಎಂದು ತನ್ನೊಳಗೇ ತಾನು ಆಲೋಚಿಸಿದನು. ಅಲ್ಲಿಂದ ಲಂಕಾ ನಗರವನ್ನು ವೀಕ್ಷಿಸಿದನು.

**ಲಂಕಾ ಪ್ರವೇಶ**: ಚಿತ್ರ ವಿಚಿತ್ರವಾದ ಭವನಗಳು, ಎತ್ತರವಾದ ರಾಜಭವನಗಳು. ಉದ್ಯಾನವನಗಳು, ಸ್ವರ್ಗವನ್ನೇ ಮರೆಯುವಂತೆ ಮಾಡಿದವು. ಒಂದು ಕ್ಷಣ, ಇದು ವೈಕುಂಠವೋ ಲಂಕೆಯೋ ಎನ್ನುವ ಸಂದೇಹ ಉಂಟಾಯಿತು. ಎಲ್ಲಿ ನೋಡಿದರೂ ಬಲವಾದ ರಾಕ್ಷಸ ಸೈನ್ಯವು ಬೀದಿಗಳಲ್ಲಿ ಸಂಚರಿಸುತ್ತಿದ್ದುವು. ಅಲ್ಲಿ ಸಹಸ್ರಾರು ದೇವ, ನಾಗ, ಗಂಧರ್ವ, ಮನುಜ ಕನ್ಯೆಯರು ರಾವಣನ ಅಧೀನದಲ್ಲಿ ಪರಿತಪಿಸುತ್ತಿದ್ದರು. ಭಯದಿಂದ ಸೊರಗುತ್ತಾ ಕಾಲ ಕಳೆಯುತ್ತಿದ್ದರು. ಅಲ್ಲಿದ್ದ ರಾಕ್ಷಸ ಸಮೂಹವನ್ನು ನೋಡಿ, ಹನುಮಂತನು ತನ್ನ ನಿಜರೂಪದಲ್ಲಿ ಪ್ರವೇಶಿಸುವುದು ಒಳ್ಳೆಯದಲ್ಲವೆಂದು ನಿಶ್ಚಯಿಸಿ, ಸೂಕ್ಷ್ಮ ರೂಪವನ್ನು ಧರಿಸಿ ಲಂಕೆಯನ್ನು ಪ್ರವೇಶಿಸಿದನು.

**ಲಂಕಿಣಿ**: ಹೊರಗಿನವರು ಯಾರೂ ಲಂಕೆಯನ್ನು ಪ್ರವೇಶಿಸದಂತೆ ನೋಡಿ ಕೊಳ್ಳುತ್ತಾ ಲಂಕಾ ನಗರವನ್ನು ಕಾಪಾಡುತ್ತಿದ್ದ ಲಂಕಿಣಿಯು ವಿಚಿತ್ರ ರೂಪವನ್ನು ಧರಿಸಿದ್ದ ಹನುಮಂತನನ್ನು ನೋಡಿ, "ಎಲವೋ! ಯಾರು ನೀನು! ಎಲ್ಲಿಂದ ಬಂದೆ? ಲಂಕೆಯಲ್ಲಿ ಈ ಆಕಾರದ ಮೃಗವನ್ನು ನಾನು ಇದುವರೆಗೂ ನೋಡಿಲ್ಲ. ಹೊರಗಿನಿಂದ ಬಂದವನೆಂದು ಹೇಳೋಣವೆಂದರೆ ಸುತ್ತಲೂ ಸಮುದ್ರವಿದೆ. ನಿನ್ನನ್ನು ನೋಡಿದರೆ ಸಾಮಾನ್ಯನಂತೆ ಕಾಣುವುದಿಲ್ಲ, ಸಮುದ್ರವನ್ನು ಹೇಗೆ ದಾಟಿದೆ? ನನ್ನನ್ನು ಧಿಕ್ಕರಿಸಿ ನೀನು ಹೋಗುವುದಾದರೂ ಹೇಗೆ? ನಿಲ್ಲು, ನಿಲ್ಲು," ಎಂದು ಗರ್ಜಿಸಿದಳು. ಹನುಮಂತನು ಲಂಕಿಣಿಯ ಮಾತನ್ನು ಲೆಕ್ಕಿಸದೆ, ಅವಳ ಮಾತು ಕೇಳಿಸದವನಂತೆ, ಬಾಲವನ್ನೆತ್ತಿಕೊಂಡು ಹೋದನು. ಲಂಕಿಣಿ ಮತ್ತಷ್ಟು ಕೋಪದಿಂದ, "ಎಲವೋ ಮೂರ್ಖ! ನಾನು ಹೇಳಿದ್ದು ಕೇಳಿಸಲಿಲ್ಲವೇನು?" ಎಂದು ಗರ್ಜಿಸಿದಳು. ಅದಕ್ಕೂ ಹನುಮಂತನು ಕಿವಿಗೊಡದೆ ತನ್ನೊಳಗೇ ತಾನು ನಗುತ್ತಾ ಮುಂದೆ ನಡೆದನು. ಲಂಕಿಣಿಯ ತಾಳ್ಮೆ ಹೋಯಿತು. "ಎಲವೋ ವಾನರಾ! ನನ್ನ ಆಜ್ಞೆಯನ್ನು ಧಿಕ್ಕರಿಸಿ ಹೋಗುವವನು ನನಗೆ ಆಹಾರವಾಗುವನು. ಕ್ಷಣದಲ್ಲಿ ನಿನ್ನನ್ನು ನುಂಗಿಬಿಟ್ಟೇನು, ಜಾಗ್ರತೆ," ಎನ್ನುತ್ತಾ ಸೂಕ್ಷ್ಮಾಕಾರ ಧರಿಸಿದ ಹನುಮಂತನನ್ನು ಹಿಡಿದುಕೊಳ್ಳಲು ಓಡಿದಳು. ಹನುಮಂತನು ತನ್ನ ಮುಷ್ಠಿ ಯಿಂದ ಅವಳನ್ನು ಒಂದು ಸಾರಿ ಗುದ್ದಿದನು. ಆ ಹೊಡೆತಕ್ಕೆ ಲಂಕಿಣಿ ರಕ್ತಕಾರ ತೊಡಗಿದಳು. ಎಚ್ಚರ ತಪ್ಪಿ ಕೆಳಗೆ ಬಿದ್ದಳು.

ಸ್ವಲ್ಪ ಹೊತ್ತಾದ ಮೇಲೆ ಎಚ್ಚರಗೊಂಡು, ಮತ್ತೆ ಹನುಮಂತನ ಮೇಲೆ ಬಿದ್ದು, ಅವನನ್ನು ಹಿಡಿಯಲು ಹೋದಳು. ಹನುಮಂತನು ಮತ್ತೊಂದು ಗುದ್ದು ಗುದ್ದಿ ದನು. ಲಂಕಿಣಿ ಕದಲಲಾರದೆ ಹೋದಳು. ಆ ಏಟಿನಿಂದ ಅವಳಿಗೆ ಜ್ಞಾನೋದ ಯವುಂಟಯಿತು. ಕದಲಲಾರದ ಸ್ಥಿತಿಯಲ್ಲಿ ಕೈಜೋಡಿಸಿಕೊಂಡು, "ಎಲವೋ

ಆಶ್ಚರ್ಯ ರೂಪಿಯೇ. ಪೂರ್ವದಲ್ಲಿ ಬ್ರಹ್ಮದೇವನು ರಾವಣನಿಗೆ ವರಗಳನ್ನಿತ್ತು ಹೊರಡುವ ಸಮಯದಲ್ಲಿ, ನನ್ನನ್ನು ನೋಡಿ ಹೀಗೆಂದನು: 'ಎಲೌ ಲಂಕಿಣೀ! ಎಂದು ನೀನು ವಾನರನೊಬ್ಬನ ಗುದ್ದಿನಿಂದ ಸಂಕಟಪಡುವಿಯೋ ನಿರ್ವೀರ್ಯ ಳಾಗುವಿಯೋ ನಿನ್ನ ಶಕ್ತಿ ನಶಿಸುವುದೋ ಆಗಲೇ ರಾವಣನಿಗೆ ಮರಣ ಕಾಲ ಸನ್ನಿಹಿತವಾಯಿತೆಂದು ತಿಳಿ. ಅಷ್ಟೇ ಅಲ್ಲ, ಆ ವಾನರನು ಭಗವತ್ ಕಾರ್ಯ ನಿಮಿತ್ತವಾಗಿ ದೈವಾಜ್ಞೆಯನ್ನು ಶಿರಸಾವಹಿಸಿ ಲಂಕೆಯಲ್ಲಿ ಪ್ರವೇಶಿಸುವನು. ಅವನ ಆಗಮನ, ಲಂಕೆಯ ರಾಕ್ಷಸರನ್ನು ಕೊಲ್ಲುವುದಕ್ಕಾಗಿಯೇ ಎಂದು ತಿಳಿ. ಅಂದಿ ನಿಂದ ರಾಕ್ಷಸರ ವಿನಾಶಕಾಲ ಹತ್ತಿರವಾಯಿತೆಂದು ತಿಳಿ,' ಎಂದು ಹೇಳಿದನು. ಆದ್ದ ರಿಂದ, ಎಲವೋ ವಾನರಾ! ನಾನು ಪುಣ್ಯಾತ್ಮಳಾದೆ. ನನ್ನ ದೃಷ್ಟಿ ಪವಿತ್ರವಾಯಿತು. ಭಗವಂತ ಕಳಿಸಿದ ದೂತನ ದರ್ಶನವಾಯಿತು. ಅಷ್ಟೇ ಅಲ್ಲ, ಆ ದೂತನ ಹಸ್ತದಿಂದ ನನ್ನ ಶರೀರ ಪಾವನವಾಯಿತು. ಆಹಾ, ಆ ಗುದ್ದು ಎಷ್ಟು ಹಿತವಾಗಿದೆ! ಎಷ್ಟು ಆಪ್ಯಾಯಮಾನವಾಗಿದೆ!" ಎಂದು ಹನುಮಂತನು ಗುದ್ದಿದ ಸ್ಥಳವನ್ನು ಪದೇ ಪದೇ ಸವರಿಕೊಳ್ಳುತ್ತಾ ಆನಂದಭರಿತಳಾದಳು.

**ಲಂಕೆಯಲ್ಲಿ ಹರಿಮಂದಿರ**: ಹನುಮಂತನು ಲಂಕಿಣಿಯ ಮಾತುಗಳನ್ನು ಗಮನಿ ಸದೆ, ಹೊಗಳಿಕೆಗೆ ಹಿಗ್ಗದೆ, ಬೈಗುಳಕ್ಕೆ ಬಗ್ಗದೆ, ರಾಮನಾಮವನ್ನು ಸ್ಮರಿಸುತ್ತಾ ಲಂಕೆಯನ್ನು ಪ್ರವೇಶಿಸಿದನು. "ಲಂಕೆಯಲ್ಲಿ ಜಾನಕಿಯ ಸಮಾಚಾರವನ್ನು ತಿಳಿಸು ವವರು ಯಾರು? ಸೀತೆಯನ್ನು ಗುರುತಿಸುವುದು ಹೇಗೆ? " ಎಂದು ತನ್ನೊಳಗೆ ಆಲೋಚಿಸುತ್ತಾ ಸೂಕ್ಷ್ಮರೂಪದಲ್ಲಿ ಮರಗಳ ಮೇಲಿದ್ದು, ಬೀದಿಗಳಲ್ಲಿ ಅತ್ತಿಂದಿತ್ತ ಓಡಾಡುತ್ತಿದ್ದ ಭಯಂಕರ ರಾಕ್ಷಸರನ್ನು ನೋಡುತ್ತಾ ಅವರ ಕಣ್ಣಿಗೆ ಬೀಳದಂತಿ ದ್ದನು. ಇಷ್ಟರಲ್ಲಿ ಒಂದು ಹರಿ ಮಂದಿರ ಕಾಣಿಸಿತು. ಅದರ ಮುಂದೂ ಹಿಂದೂ ತುಳಸೀ ವನವಿತ್ತು. ಮುಖ ದ್ವಾರದಲ್ಲಿ ಹರಿನಾಮವು ಬರೆದಿತ್ತು. ಅದು ಸಾಕ್ಷಾತ್ ದೈವ ನಿಲಯವಾಗಿಯೇ ಕಂಗೊಳಿಸುತ್ತಿತ್ತು. ಏನಿದು ವಿಚಿತ್ರ? ಲಂಕೆಯಲ್ಲಿ ಹರಿನಾಮ ಬರೆದಿರುವುದೆಂದರೇನು! ಇದು ಯಾವುದೋ ಒಂದು ಪವಿತ್ರವಾದ ಮಂದಿರವೇ ಇರಬೇಕು ಎಂದುಕೊಂಡು, ಯಾರಿಗೂ ತಿಳಿಯದ ರೀತಿಯಲ್ಲಿ ಸೂಕ್ಷ್ಮ ರೂಪವನ್ನು ಧರಿಸಿ ಆ ಭವನದ ಮೇಲೆ ಕುಳಿತು ಒಳಗೆ ಇಣುಕಿ ನೋಡಿದನು. ಅಲ್ಲಿ, ಹಾಸಿಗೆಯಲ್ಲಿ ಅತ್ತಿಂದಿತ್ತ ಹೊರಳುತ್ತಾ ಮಲಗಿದ್ದ ಒಬ್ಬ ವ್ಯಕ್ತಿ ಹರಿನಾಮ ಸ್ಮರಣೆಮಾಡುತ್ತಾ ಎದ್ದನು. ಹರಿನಾಮ ಕಿವಿಗೆ ಬೀಳುತ್ತಲೇ ಹನುಮಂತನಿಗೆ ಪರಮಾನಂದವಾಯಿತು. ಲಂಕೆಯಲ್ಲಿ ಕೂಡ ಹರಿನಾಮ ಮಾಡು ವವರಿದ್ದಾರೆನ್ನುವ ಸಂತೋಷದಿಂದ ಹನುಮಂತನು ಸ್ವಲ್ಪ ನಿರ್ಭಯವಾಗಿಯೇ ಅಲ್ಲಿ ಓಡಾಡಿದನು. ಇವನು ಯಾರೋ ಸತ್ಪುರುಷನಂತೆ ಕಾಣುತ್ತಾನೆ.

ಇವನನ್ನು ಆಶ್ರಯಿಸಿದರೆ ಸೀತೆಯ ಸುಳಿವು ಸಿಕ್ಕಬಹುದು. ಅಲ್ಲದೆ, ನಾನೂ ಹರಿದಾಸ. ಇವನೂ ಹರಿದಾಸನಾದ್ದರಿಂದ ನಮ್ಮಿಬ್ಬರಿಗೂ ಸುಲಭವಾಗಿ ಸ್ನೇಹ ಉಂಟಾಗಬಹುದು ಎನ್ನುವ ಪೂರ್ಣ ವಿಶ್ವಾಸದಿಂದ, ತನ್ನ ಆಕಾರವನ್ನು ಮರೆ ಮಾಚಿಕೊಂಡು ಒಬ್ಬ ಬ್ರಾಹ್ಮಣನ ವೇಷದಿಂದ ವಿಭೀಷಣನ ಮನೆಯನ್ನು ಪ್ರವೇಶಿಸಿದನು. ಆ ಬ್ರಾಹ್ಮಣನನ್ನು ನೋಡಿ ವಿಭೀಷಣನು ಈ ಅಪರಿಚಿತ ಬ್ರಾಹ್ಮಣನು ಯಾರಿರಬಹುದು ಎಂದು ಯೋಚಿಸಿ, ಯಾರಾದರೇನು, ಬ್ರಾಹ್ಮಣನಲ್ಲವೆ ಎಂದು ಅವನಿಗೆ ನಮಸ್ಕರಿಸಿದನು. "ಸ್ವಾಮಿ! ನೀವು ಯಾರು? ಎಲ್ಲಿಂದ ಬಂದಿರಿ? ಬೀದಿಗಳಲ್ಲಿದ್ದ ರಾಕ್ಷಸರನ್ನು ಹೇಗೆ ತಪ್ಪಿಸಿಕೊಂಡು ಇಲ್ಲಿಯ ತನಕ ಬಂದಿರಿ?" ಎಂದು ಹಲವು ಬಗೆಯಾಗಿ ರಾಕ್ಷಸರ ಕೃತ್ಯಗಳನ್ನು ಅವನಿಗೆ ವರ್ಣಿಸುತ್ತಾ ಅವರ ಕಣ್ಣುತಪ್ಪಿಸಿಕೊಂಡು ಬಂದ ಹನುಮಂತನ ಧೈರ್ಯ ಸಾಹಸಗಳನ್ನು ವರ್ಣಿಸಿದನು. ಹನುಮಂತನು ತಾನೊಬ್ಬ ಹರಿದಾಸನೆಂದೂ ತನ್ನ ಹೆಸರು ಹನುಮಂತನೆಂದೂ ರಾಮಚಂದ್ರನ ಗುಣಗಳ ವರ್ಣನೆ ಮಾಡಿದನು. ಆ ಮಾತುಗಳನ್ನು ಕೇಳುತ್ತಿದ್ದಷ್ಟು ಕಾಲ ವಿಭೀಷಣನ ಕಣ್ಣುಗಳಲ್ಲಿ ಆನಂದಬಾಷ್ಪಗಳು ಧಾರಾಕಾರವಾಗಿ ಸುರಿಯುತ್ತಿದ್ದವು. ಇಂದು ಎಂಥ ಸುದಿನ. ನಾನೆಷ್ಟು ಭಾಗ್ಯವಂತ. ಬೆಳಗಾಗುತ್ತಲೇ ಇಂಥ ಶುಭವಾರ್ತೆ ಕೇಳಿದೆನಲ್ಲಾ! ಎಂದು ಹಿಗ್ಗಿದನು.

**ವಿಭೀಷಣನ ಭಕ್ತಿ**: ಹನುಮಂತನು ಇದೆಲ್ಲವೂ ರಾಮಾನುಗ್ರಹವೇ ಎಂದುಕೊಂಡು, ಈ ಭಯಂಕರವಾದ ಲಂಕೆಯಲ್ಲಿ ಇಂಥ ನಿರ್ಭಯನಾದ ಹರಿದಾಸನೊಬ್ಬ ಕೂಡ ಇದ್ದಾನಲ್ಲಾ ಎಂದು ಆಶ್ಚರ್ಯಪಟ್ಟು, "ಸ್ವಾಮಿ, ನೀವು ಈ ಲಂಕೆಯಲ್ಲಿ ಬದುಕುತ್ತಿರುವುದಾದರೂ ಹೇಗೆ?" ಎಂದು ಪ್ರಶ್ನಿಸಿದನು. ಅದಕ್ಕೆ ವಿಭೀಷಣನು, "ಎಲ್ಲಾ ದೈವಕೃಪೆ. ಎಷ್ಟು ಕಾಲ ಜೀವಿಸಬೇಕೆಂದು ದೈವ ಸಂಕಲ್ಪಿಸಿದೆಯೋ ಅಷ್ಟು ಕಾಲ ಜೀವಿಸಬೇಕು. ಅದು ತಪ್ಪಿದ್ದಲ್ಲ. ಪ್ರಕೃತಿಗೆ ಪ್ರಭುವಾದ ದೇವರ ನಾಮವನ್ನು ಯಾರೂ ಧಿಕ್ಕರಿಸಲಾರರು, ಬದಲಾಯಿಸಲಾರರು. ಹಲ್ಲುಗಳ ಮಧ್ಯೆ ನಾಲಗೆ ಜೀವಿಸುತ್ತಿಲ್ಲವೇ. ಇದು ಯಾರ ಸಂಕಲ್ಪ? ಆದ್ದರಿಂದ, ನಾನು ಬದುಕಿರುವುದು ಹೇಗೆಂದು ನೀವು ಆಶ್ಚರ್ಯಪಡಬೇಕಾಗಿಲ್ಲ. ನೀವು ಯಾವ ಕಾರಣದಿಂದ ಇತ್ತ ಕಡೆ ಬಂದಿರೋ ಹೇಳಬೇಕು," ಎಂದು ವಿಭೀಷಣನು ಕೈ ಜೋಡಿಸಿ ಪ್ರಾರ್ಥಿಸಿದನು.

ನಿಮ್ಮಂಥ ಸಜ್ಜನರ ಸಮಾಗಮದಿಂದ ಏನೋ ಒಂದು ಘನ ಕಾರ್ಯ ಸಾಧಿತವಾಗುವುದು ಎಂದು ಹಲವು ಬಗೆಯಾಗಿ ಒಳ್ಳೆಯ ಮಾತುಗಳನ್ನಾಡುತ್ತಿದ್ದ ವಿಭೀಷಣನನ್ನು ನೋಡಿ ಹನುಮಂತನು ತನ್ನೊಳಗೇ ಹಿರಿಹಿರಿಹಿಗ್ಗುತ್ತಾ ಕ್ಷಣಕ್ಷಣಕ್ಕೂ 'ರಾಮಾ ರಾಮಾ' ಎಂದು ಉಚ್ಚರಿಸುತ್ತಿರುವ ಇಂಥ ಮಿತ್ರನೊಂದಿಗೆ ನಾನು

ಗುಟ್ಟು ಮಾಡುವುದೊಳ್ಳೆಯದಲ್ಲ ಎಂದುಕೊಂಡು, ಮನಸ್ಸು ಬಿಚ್ಚಿ ಮಾತನಾಡುವುದು ಒಳ್ಳೆಯದೆಂದು ಯೋಚಿಸಿ, "ಸ್ವಾಮಿ! ನಿಮ್ಮ ಹೆಸರೇನು? ಈ ಲಂಕೆಯಲ್ಲಿ ನೀವೇನು ಮಾಡುತ್ತಿದ್ದೀರಿ?" ಎಂದು ವಿನಯದಿಂದ ಪ್ರಶ್ನೆ ಮಾಡಿದನು. ವಿಭೀಷಣನು, "ಅಯ್ಯಾ! ನಾನೊಬ್ಬ ದೌರ್ಭಾಗ್ಯ. ನಾನು ರಾವಣನ ಸಹೋದರ. ನನ್ನ ಹೆಸರು ವಿಭೀಷಣ. ಸ್ವೇಚ್ಛೆಯಾಗಿ ಹರಿನಾಮ ಹೇಳಲಾರದ ದುಃಸ್ಥಿತಿಯಲ್ಲಿದ್ದೇನೆ," ಎಂದನು, ಹನುಮಂತನು, ತನ್ನ ಉದ್ದೇಶ ಸಾಧನೆಯಾಯಿತೆಂದು ತಿಳಿದು, ಸಂತೋಷದಿಂದ ಕೇಕೆ ಹಾಕಿ, "ನಾನು ರಾಮದೂತ. ಸೀತಾನ್ವೇಷಣೆ ನಿಮಿತ್ತವಾಗಿ ಲಂಕೆಯನ್ನು ಪ್ರವೇಶಿಸಿದೆ," ಎಂದು ಹೇಳಿದಾಕ್ಷಣ, ವಿಭೀಷಣನು ಹನುಮಂತನಿಗೆ ನಮಸ್ಕಾರ ಮಾಡಿ, "ಅಯ್ಯಾ! ನನ್ನ ರಾಮನೆಲ್ಲಿ? ಅವನನ್ನು ದರ್ಶನ ಮಾಡಲು ಸಾಧ್ಯವೆ? ನನ್ನ ಪ್ರಭುವಿನ ಕಾರ್ಯಕ್ಕಾಗಿ ಬಂದೆಯಾ? ಅಯ್ಯೋ! ನೀನೆಷ್ಟು ಧನ್ಯಶಾಲಿ, ಪುಣ್ಯವಂತ. ಅವನನ್ನು ನೋಡಲು ನನ್ನಲ್ಲಿ ಅಂಥ ಉತ್ತಮ ಗುಣ ಗಳಿಲ್ಲವಾಯಿತಲ್ಲಾ. ನನ್ನ ವಂಶ ರಾಕ್ಷಸ ವಂಶ. ನಾನು ಯಾವ ಸಾಧನೆಯನ್ನಾ ಗಲೀ ತಪಸ್ಸನ್ನಾಗಲೀ ಮಾಡುವ ಸ್ವಾತಂತ್ರ ಇದ್ದವನಲ್ಲ, ಯಾವ ಅರ್ಹತೆಯೂ ಇಲ್ಲದ ನನ್ನನ್ನು ರಾಮನು ನೋಡುವನೆ? ಅವನ ಅನುಗ್ರಹವನ್ನು ನಾನು ಪಡೆಯುವೆನೆ?" ಎಂದು ರಾಮದರ್ಶನಾರ್ಥವಾಗಿ ಹಂಬಲಿಸುತ್ತಿದ್ದ ವಿಭೀಷಣನ ಪರಿತಾಪವನ್ನು ನೋಡಿ ಹನುಮಂತನ ಹೃದಯ ಕರಗಿತು.

**ಶ್ರೀರಾಮನ ಕರುಣಾ ಹೃದಯ** : ಅವನು ವಿಭೀಷಣನನ್ನು ಸಮಾಧಾನಪಡಿಸುತ್ತ, "ವಿಭೀಷಣಾ! ರಾಮಚಂದ್ರನು ನಿನ್ನ ಹೃದಯವನ್ನು ಮಾತ್ರವೇ ನೋಡುವನಲ್ಲದೆ, ನಿನ್ನ ವಂಶ, ಕುಲ, ಮತ, ಸಾಧನಾದಿಗಳನ್ನು ನೋಡುವುದಿಲ್ಲ. ರಾಮನು ಭಾವಪ್ರಿಯನು. ನಿನ್ನ ಭಾವ ಶುದ್ಧಿಯನ್ನು ಮೆಚ್ಚಿ ಅವನು ಖಂಡಿತವಾಗಿ ಅನುಗ್ರಹಿ ಸುವನು, ದರ್ಶನವೀಯುವನು ಯೋಚಿಸಬೇಡ. ಈ ವಿಷಯದಲ್ಲಿ ನಾನೇ ನಿದರ್ಶನ, ಬೇರೆ ನಿದರ್ಶನಗಳೇಕೆ? ನಾನು ಕೋತಿ ಜಾತಿಗೆ ಸೇರಿದವನು. ಚಂಚಲತ್ವಕ್ಕೆ ತೌರುಮನೆ ನಮ್ಮ ಜಾತಿ. ವೇದಶಾಸ್ತ್ರಗಳು ನನಗೇನೂ ತಿಳಿಯದು. ತಪಸ್ಸೆಂದರೇನೋ ನನಗೆ ತಿಳಿಯದು. ಜಪಧ್ಯಾನಗಳನ್ನು ನಾನು ಮಾಡಿದವನಲ್ಲ. ಹೀಗಿರುವಾಗ ಅವನು ನನ್ನನ್ನು ಅನುಗ್ರಹಿಸುವುದು ಹೇಗೆ? ಆದರೆ, ಅವನು ನನ್ನ ಭಾವನೆಯನ್ನು, ಪ್ರೇಮವನ್ನು ನೋಡಿ ಅನುಗ್ರಹಿಸಿದ್ದಾನೆ. ಆದ್ದರಿಂದ ನೀನು ಧೈರ್ಯವಾಗಿರು," ಎಂದು ಹಲವು ಬಗೆಯಾಗಿ ವಿಭೀಷಣನನ್ನು ಸಮಾಧಾನ ಪಡಿಸಿದನು. ನಂತರ, ವಿಭೀಷಣನು ಸೀತೆಗೆ ಸಂಬಂಧಿಸಿದ ವಿವರಗಳನ್ನೆಲ್ಲಾ ಹನುಮಂತನಿಗೆ ತಿಳಿಸಿದನು. ಹನುಮಂತನು ವಿಭೀಷಣನ ಅಪ್ಪಣೆಯನ್ನು ಕೋರಿ, ಸೀತೆಯನ್ನು ನೋಡುವವರೆಗೆ ತನಗೆ ಆಹಾರ ಪಾನೀಯಗಳು ಬೇಡವೆಂದು ಹೇಳಿ,

ಅಲ್ಲಿಂದ ಹೊರಡಲನುವಾದನು. ಆಗ, ವಿಭೀಷಣನು ಅವನನ್ನು ತಡೆದು ಆತುರ ಸಲ್ಲದೆಂದು ಹೇಳಿ, ಲಂಕೆಯ ವಿಷಯವನ್ನು ಪೂರ್ತಿಯಾಗಿ ತಿಳಿದುಕೊಂಡು ಮುಂದುವರಿಯುವುದು ಒಳ್ಳೆಯದೆಂದು ಹೇಳಿದನು. ಲಂಕೆಯ ಮರ್ಮವನ್ನೆಲ್ಲಾ ವಿವರವಾಗಿ ಅವನಿಗೆ ತಿಳಿಸಿ ಹೊರಡಲು ಅನುಮತಿಯಿತ್ತನು.

ಹನುಮಂತನು ಸೀತೆಯು ಲಂಕೆಯಲ್ಲಿರುವಳೆನ್ನುವ ವಿಷಯವನ್ನು ತಿಳಿದುಕೊಂಡನು. ಆದರೆ ಎಲ್ಲಿರುವಳೆನ್ನುವುದನ್ನು ಕೇಳಲು ಮರೆತು, ಹಲವಾರು ಗೃಹಗಳನ್ನು ಶೋಧಿಸಿದನು. ಅಂತಃಪುರವನ್ನು ಶೋಧಿಸುವಾಗ ಅನೇಕ ವಿಧದ ಭೋಗ ಭಾಗ್ಯಗಳಿಂದ ಉನ್ಮತ್ತರಾಗಿದ್ದವರನ್ನು ನೋಡಿದನು. ಸೀತೆಯು ಇಂತಹ ಭೋಗ ಭಾಗ್ಯಗಳನ್ನು ಅನುಭವಿಸುವವಳಲ್ಲವೆನ್ನುವುದನ್ನು ಮನಗಂಡು, ರಾಮನು ತಿಳಿಸಿದ್ದ ಸೀತೆಯ ಎಲ್ಲ ಗುಣ ಲಕ್ಷಣಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು, ಒಬ್ಬೊಬ್ಬ ಸ್ತ್ರೀಯನ್ನೂ ನೋಡುತ್ತಾ ಹೋದನು. ಎಲ್ಲಿಯೂ ಸೀತೆಯ ಸುಳಿವು ಸಿಕ್ಕಲಿಲ್ಲ. ನಿರಾಶೆಯಿಂದ ಬಂದು ತಿರುಗಿ ಪರ್ವತದ ಮೇಲೆ ಕುಳಿತು, ನಾನಾ ಬಗೆಯಾಗಿ ಯೋಚಿಸಿದನು. ಸೀತೆಯನ್ನು ನಾನು ಕಾಣದೆ ರಾಮನನ್ನು ನೋಡುವುದು ಹೇಗೆ ಎಂದು ಪರಿತಪಿಸಿದನು. ಅವಳನ್ನು ನೋಡದೆ ಹಿಂದಿರುಗುವುದಕ್ಕಿಂತ ಈ ಸಮುದ್ರದಲ್ಲಿ ಬಿದ್ದು ಪ್ರಾಣ ಕಳೆದುಕೊಳ್ಳುವುದೇ ಒಳ್ಳೆಯದು. ನನ್ನ ಜೀವಿತ ವ್ಯರ್ಥವಾಯಿತು ಎಂದು ತನ್ನ ಮೇಲೆ ತಾನು ಜಿಗುಪ್ಸೆಗೊಂಡು ದುಃಖಿಸಿದನು. ಆ ವೇಳೆಗೆ, ದೂರದಲ್ಲೊಂದು ಸುಂದರವಾದ ಉದ್ಯಾನವನ ಕಾಣಿಸಿತು. ಅಲ್ಲಿಗೆ ಹೋಗೋಣವೆಂದು ಕೆಳಗಿಳಿದನು. ಆದರೆ, ಆ ಎತ್ತರದ ಕಟ್ಟಡಗಳ ಸಮೂಹದಲ್ಲಿ ಅದು ಎಲ್ಲಿರುವುದೆನ್ನುವುದೇ ಗೊತ್ತಾಗಲಿಲ್ಲ. ನಿರುಪಾಯನಾಗಿ ಮತ್ತೆ ವಿಭೀಷಣನ ಭವನಕ್ಕೆ ಹೊರಟನು. ಅಲ್ಲಿ ವಿಭೀಷಣನು ರಾಮನಾಮ ಜಪಿಸುತ್ತಾ ಕಾಲ ಕಳೆಯುತ್ತಿದನು. ಹನುಮಂತನು ಬಂದುದನ್ನು ನೋಡಿ ವಿಭೀಷಣನು ಪರಮಾನಂದದಿಂದ ಹತ್ತಿರ ಬಂದು, "ಹನುಮಂತಾ, ಸೀತೆಯನ್ನು ನೋಡಿದೆಯಾ?" ಎಂದು ಕೇಳಿದನು. ಹನುಮಂತನು ತನ್ನ ನಿರಾಶೆಯನ್ನು ಆತಂಕವನ್ನು ತೋಡಿಕೊಂಡನು. ಆಗ ವಿಭೀಷಣನು, "ಹನುಮಂತಾ, ಅಶೋಕವನವೆನ್ನುವ ಒಂದು ಸುಂದರ ಉದ್ಯಾನವನವಿದೆ. ಅಲ್ಲಿ ಅನೇಕ ಮಂದಿ ಬಲಿಷ್ಠ ರಾಕ್ಷಸರ ಮಧ್ಯೆ ಸೀತೆಯು ರಾಮ ಚಿಂತನೆ ಮಾಡುತ್ತಾ ಕಾಲ ಕಳೆಯುತ್ತಿದ್ದಾಳೆ. ನನ್ನ ಪತ್ನಿ ಪುತ್ರಿಯರಿಬ್ಬರೂ ಆ ದೇವಿಯ ಸೇವೆ ಮಾಡುತ್ತಾ ಇದ್ದಾರೆ," ಎಂದು ಹೇಳಿ, ಅಲ್ಲಿಗೆ ಹೋಗುವ ಮಾರ್ಗವನ್ನು ತಿಳಿಸಿದನು.

**ಅಶೋಕ ವನ**: ಹನುಮಂತನು ಒಂದು ಕ್ಷಣವೂ ತಡಮಾಡದೆ ಕೂಡಲೆ ಅಶೋಕವನಕ್ಕೆ ಹೊರಟನು. ಮಾರ್ಗ ಮಧ್ಯದಲ್ಲಿ ಅವನ ರೂಪ ನೋಡಿದವ

ರೆಲ್ಲರೂ ವಿಚಿತ್ರವಾಗಿ ಕೇಕೆ ಹಾಕುತ್ತಿದ್ದರು. ಅದನ್ನು ನೋಡಿ, ಹನುಮಂತನು ತನ್ನ ಕಾರ್ಯಕ್ಕೆ ಭಂಗ ಬಂದೀತೆಂದು ತಿಳಿದು ಅತಿ ಸೂಕ್ಷ್ಮರೂಪವನ್ನು ಧರಿಸಿ, ಮರದ ಕೊಂಬೆಗಳ ಮೇಲೆ ಎಲೆಗಳ ಹಿಂದೆ ಮರೆಯಾಗಿ ಹೊಗುತ್ತಾ ಅಶೋಕವನ ಸೇರಿದನು. ಅಲ್ಲಿ, ಒಂದು ಮರದ ಕೆಳಗೆ ನಿದ್ರಾಹಾರಗಳಿಲ್ಲದೆ ಕೊರಗಿ ಕೃಶವಾಗಿದ್ದ ಒಬ್ಬ ಸ್ತ್ರೀಯನ್ನು ನೋಡಿದನು. ಅವಳ ಸುತ್ತಲೂ ಬಲಿಷ್ಠರಾದ ರಾಕ್ಷಸ ಸ್ತ್ರೀಯರು ಅವಳನ್ನು ಬೆದರಿಸುತ್ತಾ, ಅವಳು ಸಮ್ಮತಿಸುವಂತೆ ಮಾಡಲು ಏನೇನೋ ಮಾತು ಗಳನ್ನು ಹೇಳುತ್ತಿದ್ದರು. ಅದೇ ಸಮಯಕ್ಕೆ ದೊಡ್ಡ ಭೇರಿಯ ಶಬ್ದದೊಂದಿಗೆ ಅಲ್ಲಿಗೆ ಒಂದು ಮೆರವಣಿಗೆ ಬಂದಿತು. ಅದರ ಹಿಂದೆ ಸರ್ವಾಲಂಕಾರ ಭೂಷಿತನಾದ ರಾಜನೊಬ್ಬನು ಬಂದನು. ಬಗೆ ಬಗೆಯ ಸುಗಂಧ ದ್ರವ್ಯಗಳೊಂದಿಗೆ, ವಸ್ತ್ರ ಆಭರ ಣಗಳೊಂದಿಗೆ, ನೂರಾರು ದಾಸ ದಾಸಿಯರು ಮೆರವಣಿಗೆಯಲ್ಲಿ ಬಂದರು. ಇದನ್ನೆಲ್ಲಾ ಮರದ ಮೇಲಿದ್ದ ಹನುಮಂತನು ನೋಡಿದನು.

**ಸೀತಾ ವಿಲಾಪ**: ಬಂದವನು ರಾವಣನೆಂದು ತಿಳಿಯಿತು. ತನ್ನನ್ನು ಪ್ರೇಮಿಸೆಂದು ರಾವಣನು ಹಲವು ಬಗೆಯಾಗಿ ಆ ಕೃಶವಾದ ಸ್ತ್ರೀಯನ್ನು ಒತ್ತಾಯಿಸುವುದನ್ನು, ಬೆದರಿಕೆ ಹಾಕುವುದನ್ನು ಹನುಮಂತನು ನೋಡಿದನು. ಆ ಸ್ತ್ರೀ ತಲೆ ಎತ್ತಿ ಕೂಡ ನೋಡದೆ, "ಮೂರ್ಖಾ, ಚಂಡಾಲಾ, ರಾಮಚಂದ್ರನೊಬ್ಬನಿಗಲ್ಲದೆ ನನ್ನ ಮೇಲೆ ಯಾರಿಗೂ ಅಧಿಕಾರವಿಲ್ಲ. ನನ್ನ ದೇಹ ಶ್ರೀರಾಮನ ಚಿಂತೆಯಲ್ಲೇ ಭಸ್ಮವಾಗುವುದೇ ವಿನಾ ದಾರಿ ತಪ್ಪಿ ಹೋಗದೆನ್ನುವುದನ್ನು ತಿಳಿ," ಎಂದು ಕಠಿಣ ನುಡಿಗಳನ್ನಾಡುತ್ತಿದ್ದಳು. ಇವಳೇ ಸೀತೆ ಎಂದು ಹನುಮಂತನು ದೃಢ ಮಾಡಿ ಕೊಂಡನು. ಮನಸ್ಸಿಗೆ ಸಮಾಧಾನವಾಯಿತು. ಸ್ವಲ್ಪ ಹೊತ್ತಾದ ಮೇಲೆ, ರಾವಣನು ನಿರಾಶೆಯಿಂದ, ಉದ್ರೇಕದಿಂದ, ಅವಳಿಗೆ ಬೆದರಿಕೆ ಹಾಕಿ, ಒಂದು ತಿಂಗಳು ವಾಯಿದೆಕೊಟ್ಟು ಹೊರಟನು. ಅವನೊಂದಿಗೆ ಅವನ ಪರಿವಾರವೂ ಹೊರಟಿ ತು. ಅವರೆಲ್ಲರೂ ಹೊರಟ ಮೇಲೆ, ಸೀತೆ ತಲೆಯನ್ನು ಮೇಲೆತ್ತಿ, "ರಾಮಾ! ರಾಮಾ! ಇನ್ನೂ ನಿನಗೆ ದಯೆ ಬರಲಿಲ್ಲವೆ? ನನ್ನನ್ನೇಕೆ ಹೀಗೆ ಸಿಕ್ಕಿದವರ ಪಾಲು ಮಾಡುತ್ತಿದ್ದೀಯೆ," ಎಂದು ಅಳಲಾರಂಭಿಸಿದಳು.

**ಸ್ವಪ್ನ ಕಥೆ**: ಸೀತೆಯೊಂದಿಗೆ ಅಶೋಕವನದಲ್ಲಿ ತ್ರಿಜಟೆಯೆನ್ನುವ ರಾಕ್ಷಸ ಸ್ತ್ರೀ ಯೊಬ್ಬಳು ಕಾವಲುಗಾರಳಾಗಿದ್ದಳು. ಅವಳಿಗೆ ರಾಮಚರಣಾರವಿಂದಗಳಲ್ಲಿ ಅಮಿತ ಪ್ರೀತಿ, ಭಕ್ತಿ. ಅವಳಿಗೆ ವಿಷಯ ಜ್ಞಾನದೊಂದಿಗೆ ದೈವ ಜ್ಞಾನವೂ ಇತ್ತು. ಅವಳು ರಾಕ್ಷಸ ಸ್ತ್ರೀಯರನ್ನುದ್ದೆಶಿಸಿ, "ಸಖಿಯರೇ! ರಾತ್ರಿ ನನಗೊಂದು ಸ್ವಪ್ನವಾಯಿತು. ಮೊದಲು ಜಾನಕಿಯನ್ನು ಸೇವಿಸಿ ಅವಳ ಕಟಾಕ್ಷವನ್ನು ಪಡೆಯೋಣ. ಆಮೇಲೆ ಸ್ವಪ್ನದ ವಿವರಗಳನ್ನು ಸಾವಧಾನವಾಗಿ ಕೇಳುವಿರಂತೆ," ಎಂದಳು. ನಂತರ ಸ್ವಪ್ನದ

ವಿವರಗಳನ್ನು ಹೀಗೆ ಹೇಳಿದಳು: "ಕನಸಿನಲ್ಲಿ, ಒಬ್ಬ ವಾನರನು ಲಂಕೆಗೆ ಬಂದು ರಾಕ್ಷಸರನ್ನು ಸಂಹರಿಸಿ ಲಂಕೆಯನ್ನು ದಹಿಸಿದುದನ್ನು ನಾನು ಕಂಡೆ, ರಾಮನು ತಾನು ಬಂದು ಸೀತೆಯನ್ನು ಕರೆದೊಯ್ಯುವುದಾಗಿ ಆ ವಾನರನೊಂದಿಗೆ ಅವಳಿಗೆ ವರ್ತಮಾನ ಕಳಿಸಿದ್ದನು. ರಾವಣನು ದಿಗಂಬರನಾಗಿ ಕತ್ತೆಯ ಮೇಲೆ ಕುಳಿತು ದಕ್ಷಿಣ ದಿಕ್ಕಿಗೆ ಹೋಗುತ್ತಿದ್ದನು. ಅವನ ತಲೆಯನ್ನು ಬೋಳಿಸಲಾಗಿತ್ತು. ಕೈಗಳನ್ನು ತುಂಡರಿಸಲಾಗಿತ್ತು. ವಿಭೀಷಣನಿಗೆ ಲಂಕಾ ರಾಜ್ಯದ ಪಟ್ಟಾಭಿಷೇಕ ಮಾಡಿದ್ದನ್ನು ಕಂಡೆ. ರಾಮನಾಮವನ್ನು ನಗರದಲ್ಲೆಲ್ಲಾ ಹೇಳುತ್ತಿದ್ದರು. ರಾಕ್ಷಸರೇ ಇದು ನಿಜ, ನಂಬಿ. ನನಗೆಂದೂ ಸ್ವಪ್ನ ಬೀಳುವುದಿಲ್ಲ. ಬಿದ್ದರೆ, ಅದು ನಿಜವಾಗದೆ ಇರುವುದಿಲ್ಲ. ಇನ್ನು ಹೆಚ್ಚು ದಿನಗಳಿಲ್ಲ. ನಾಲ್ಕೈದು ದಿನಗಳಲ್ಲೇ ಇಷ್ಟೆಲ್ಲಾ ಸಂಭವಿಸುವುದು," ಎಂದು ತನ್ನ ಸ್ವಪ್ನ ವೃತ್ತಾಂತವನ್ನು ಹೇಳಿದಳು. ರಾಕ್ಷಸ ಸ್ತ್ರೀಯರು ಈ ವಿಷಯವನ್ನು ಕೇಳಿ ಸೀತಾ ದೇವಿಗೆ ನಮಸ್ಕರಿಸಿದರು. ಅನಂತರ, ಕಾವಲಿಗಾಗಿ ನಾಲ್ಕು ದಿಕ್ಕಿಗೂ ಹೊರಟರು.

ಜಾನಕಿ ತ್ರಿಜಟೆಯನ್ನು ನೋಡಿ, "ತ್ರಿಜಟಾ! ರಾಮನೇ ನಿನ್ನನ್ನು ಕಳಿಸಿದ್ದಾನೆ. ನಿಜವಾಗಿ ನಿನ್ನಂಥ ಸ್ತ್ರೀ ಈ ಲಂಕೆಯಲ್ಲಿರುವುದರಿಂದಲೇ ನನ್ನಂಥ ಸ್ತ್ರೀಯರು ಇಲ್ಲಿ ಮಾನಸಂರಕ್ಷಣೆ ಮಾಡಿಕೊಳ್ಳಲು ಸಾಧ್ಯವಾಗಿದೆ. ಇಲ್ಲದಿದ್ದರೆ, ನನ್ನಂಥವರ ಗತಿ ಏನಾಗುತ್ತಿತ್ತೋ! ಕೇಳಿದೆಯಲ್ಲವೆ ರಾವಣನಾಡಿದ ಮಾತುಗಳನ್ನು? ಒಂದು ತಿಂಗಳು ಅವಧಿ ಕೊಟ್ಟಿದ್ದಾನೆ. ಅಷ್ಟರಲ್ಲಿ ನನ್ನ ರಾಮನು ಬರದಿದ್ದರೆ, ನನ್ನ ದೇಹ ತುಂಡು ತುಂಡಾಗಿ ಕಾಗೆ ಹದ್ದುಗಳ ಪಾಲಾಗುವುದು. ನಾನು ರಾಮನ ಪತ್ನಿಯಾಗಿ, ಅಂತ್ಯದಲ್ಲಿ ನನ್ನ ದೇಹ ಇಂಥ ದುಃಸ್ಥಿತಿಗೆ ಗುರಿಯಾಗುವುದನ್ನು ನಾನು ಸಹಿಸಲಾರೆ. ಅದಕ್ಕೆ ಮೊದಲೇ ಏನಾದರೊಂದು ಉಪಾಯ ತಿಳಿಸು. ನಾನು ದೇಹ ತ್ಯಾಗ ಮಾಡುತ್ತೇನೆ," ಎಂದು ದುಃಖದಿಂದ ಹೇಳಿದ್ದನ್ನು ಹನುಮಂತನು ಕೇಳಲಾರದೆ ಹೋದನು.

**ಮುದ್ರೆಯುಂಗುರ**: ಸೀತೆಯ ಮಾತುಗಳನ್ನು ಕೇಳಿ ತ್ರಿಜಟೆ ನಮಸ್ಕರಿಸಿ, "ತಾಯೀ ಚಿಂತಿಸಬೇಡಿ. ರಾಮನು ಸಾಮಾನ್ಯನಲ್ಲ. ಅವನ ಪ್ರತಾಪ ಪರಾಕ್ರಮಗಳು ಈ ಲೋಕದಲ್ಲಿ ಮಾತ್ರವಲ್ಲ, ಯಾವ ಲೋಕದಲ್ಲೂ ಯಾರಿಗೂ ಇಲ್ಲ. ನಿಮ್ಮನ್ನು ಅವನೇ ಕಾಪಾಡುವನು. ಅವನೇ ಬೇಗ ಬಂದು ನಿಮ್ಮ ಕೈ ಹಿಡಿಯುವನು, ಅಧೈರ್ಯಪಡಬೇಡಿ," ಎಂದು ಪ್ರೀತಿಯ ಮಾತುಗಳನ್ನು ಹೇಳಿ ತನ್ನ ಮನೆಗೆ ಹೋದಳು. ಈ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಲು ಹನುಮಂತನು ತೀರಾ ಕೆಳಗಿನ ಒಂದು ಕೊಂಬೆಗೆ ಧುಮುಕಿ ಅಲ್ಲಿ ಕುಳಿತು, ಸೀತೆಗೆ ಕಾಣುವಂತೆ, ಬೆಂಕಿ ಕಿಡಿಯಂಥ ಪ್ರಕಾಶಮಾನವಾದ ಮುದ್ರೆ ಉಂಗುರವನ್ನು ಕೆಳಕ್ಕೆ ಹಾಕಿ

ರಾಮನಾಮ ಗಾನ ಮಾಡಲು ಮೊದಲು ಮಾಡಿದನು. ಸೀತೆಯು ತನ್ನ ಮುಂದೆ ಬಿದ್ದ ಆ ಮುದ್ರೆಯುಂಗುರವನ್ನು ನೋಡಿ ಪರಮಾಶ್ಚರ್ಯಪಟ್ಟು, ಅದು ನಿಜವೋ ಕನಸೋ ಎನ್ನುವುದನ್ನು ತಿಳಿಯಲಾರದೆ ಹೋದಳು. ಲಂಕೆಯಲ್ಲಿ ರಾಮನ ದಿವ್ಯ ಬೆರಳುಗಳು ಧರಿಸಿದ ಈ ಸ್ವರ್ಣದುಂಗುರ ಕಾಣಿಸುವುದೆಂದರೇನು? ಇದು ರಾಕ್ಷಸ ಮಾಯೆಯೋ, ನನ್ನ ಭ್ರಮೆಯೋ ಎಂದು ತನ್ನೊಳಗೇ ಸಂಶಯಪಡತ್ತಾ ಏನಾದರೇನು, ರಾಮಚಂದ್ರನ ಉಂಗುರವೆಂದು ತನ್ನ ಕೈಯಲ್ಲಿ ತೆಗೆದುಕೊಂಡು, ಕಣ್ಣುಗಳಿಗೊತ್ತಿಕೊಂಡು ಆನಂದಬಾಷ್ಪಗಳನ್ನು ಸುರಿಸುತ್ತಾ, "ರಾಮಾ! ನನಗೆ ಈ ಉಂಗುರದ ಮೂಲಕ ನಿನ್ನ ದರ್ಶನ ಕೊಡುತ್ತಿದ್ದೀಯಾ?" ಎಂದು ತಲೆ ಎತ್ತಿ ನೋಡಿದೊಡನೆ ಚಿಕ್ಕ ವಾನರವೊಂದು, "ರಾಮಾ, ರಾಮಾ," ಎಂದು ಸ್ಮರಿಸುತ್ತಿರುವುದು ಕಂಡಿತು.

ತಕ್ಷಣ ತ್ರಿಜಟೆ ಹೇಳಿದ ಮಾತನ್ನು ಜ್ಞಾಪಿಸಿಕೊಂಡು, "ಆಹಾ, ನನ್ನ ಸುದಿನಗಳು ಸಮೀಪಿಸುತ್ತಿದ್ದಂತಿವೆ. ಹತ್ತು ತಿಂಗಳು ರಾಮನಾಮವನ್ನೇ ಕೇಳದ ಈ ಲಂಕೆಯಲ್ಲಿ ಇಂದು ರಾಮನಾಮ ಸ್ಮರಿಸುವ ಜೀವಿಯನ್ನು ಕಂಡೆ. ರಾಮನ ಮುದ್ರೆಯುಂಗುರ ವನ್ನು ಪಡೆದೆ," ಎಂದು ಆನಂದದಿಂದ ಹಿಗ್ಗಿದಳು. ತನ್ನ ಆನಂದವನ್ನು ತಡೆದು ಕೊಳ್ಳಲಾರದೆ ಹೋದಳು. ಎಂದೂ ಯಾರೊಂದಿಗೂ ಒಂದು ಮಾತನ್ನೂ ಆಡದ ಸೀತೆ, ಆ ವಾನರಾಕಾರವನ್ನು ನೋಡಿ, "ಓ ವಾನರಾ, ನೀನು ಯಾರು? ಈ ಉಂಗುರ ನಿನಗೆಲ್ಲಿಂದ ಬಂತು?" ಎಂದು ಪ್ರಶ್ನಿಸಿದಳು. ಬಹು ವಿಧವಾದ ರಾಕ್ಷಸರ ಮಾಯೆಯನ್ನು ಅನುಭವಿಸಿದವಳಾದ್ದರಿಂದ ವಾನರನನ್ನು ಹೀಗೆ ಪ್ರಶ್ನಿಸಿದಳು. ಮಧ್ಯೆ ಮಧ್ಯೆ ರಾಮಚಂದ್ರನ ಕ್ಷೇಮ ಸಮಾಚಾರವನ್ನು ವಿಚಾರಿಸುತ್ತಾ ಕಣ್ಣೀರು ಹಾಕಿದಳು. ಹೀಗೆ ಹರ್ಷ ವಿಷಾದಗಳಿಂದ ಡೋಲಾಯಮಾನ ಸ್ಥಿತಿಯಲಿದ್ದ ಸೀತೆಯನ್ನು ನೋಡಿ, ಹನುಮಂತನು ತನಗೂ ರಾಮನಿಗೂ ಇದ್ದ ಸಂಬಂಧ ಬಾಂಧವ್ಯಗಳನ್ನು ತನ್ನೊಳಗೆ ಅಡಗಿಸಿಟ್ಟುಕೊಳ್ಳಲಾರದೆ, ರಾಮನ ಹುಟ್ಟು ಹಾಗೂ ಪೂರ್ವೋತ್ತರಗಳನ್ನೂ ತನ್ನ ಜೀವಿತ ಚರಿತ್ರೆಯನ್ನೂ ವಿವರವಾಗಿ ಹೇಳಿದನು.

**ರಾಮ ಚರಿತೆ**: ಅದನ್ನು ಕೇಳುತ್ತಿದಾಗ, ಸಾಕ್ಷಾತ್ ರಾಮಚಂದ್ರನೇ ನಿಜವಾಗಿ ಅವಳ ಮುಂದೆ ನಿಂತಂತೆ, ಅವಳು ರಾಮನೊಂದಿಗೆ ಅಯೋಧ್ಯೆಯಲ್ಲಿ, ಅರಣ್ಯ ದಲ್ಲಿದ್ದಂತೆ ಭಾಸವಾಗಿ, ತನುವನ್ನೇ ಮರೆತು ಆನಂದಿಸಿದಳು. ಹನುಮಂತನನ್ನು ಕುರಿತು, "ಓ ವಾನರಾ! ಇಷ್ಟೆಲ್ಲಾ ಹೇಳಿದೆ, ಆದರೆ, ನೀನು ವಾನರನಾಗಿ ಇಂಥ ಕಷ್ಟಕರವಾದ ಲಂಕೆಯನ್ನು ಹೇಗೆ ಪ್ರವೇಶಿಸಿದೆ? ರಾಕ್ಷಸರ ಕೈಗೆ ಸಿಕ್ಕದಂತೆ ಹೇಗೆ ಓಡಾಡುತ್ತಿದ್ದೀಯೆ?" ಎಂದು ಅವನ ಶಕ್ತಿ ಸಾಮರ್ಥ್ಯಗಳನ್ನು ಪರೀಕ್ಷಿಸುವ ಸಲುವಾಗಿ ಕೇಳಿದಳು. ಹನುಮಂತನು, "ತಾಯೀ! ಇದರಲ್ಲಿ ನನ್ನದೇನೂ ಇಲ್ಲ.

ನಾನು ರಾಮನ ಭಂಟ, ರಾಮದಾಸ, ಎಲ್ಲಾ ರಾಮನೇ ಮಾಡುತ್ತಿದ್ದಾನೆ. ಅವನಿಲ್ಲದೆ ಕ್ಷಣ ಕಾಲವೂ ನಾನಿಲ್ಲಿರಲಾರೆ. ನಾನೊಂದು ಬೊಂಬೆ. ಅವನು ಆಡಿಸಿದಂತೆ ಆಡುವೆನೇ ವಿನಾ ನನ್ನದೇನಿದೆ?" ಎಂದು, ರಾಮನನ್ನು ಬಹು ವಿಧವಾಗಿ ವರ್ಣಿಸುತ್ತಾ ತನ್ನ ಭಕ್ತಿ ಪ್ರಪತ್ತಿಗಳನ್ನು ಶ್ರವಣಾನಂದಕರವಾಗಿ ವಿವರಿಸಿದನು. ಇತರರಿಗೆ ತಿಳಿಯದ ಕೆಲವು ವಿಷಯಗಳನ್ನು ಹನುಮಂತನಿಗೆ ರಾಮನು ತಿಳಿಸಿದ್ದನು. "ಒಂದು ವೇಳೆ ಸೀತೆ ನಿನ್ನನ್ನು ನಂಬದೆ ಹೋದರೆ, ಈ ಅಮೂಲ್ಯ ವಿಷಯಗಳನ್ನು ಅವಳಿಗೆ ಜ್ಞಾಪಕ ಮಾಡಿಕೊಡು," ಎಂದು ರಾಮನು ಮೊದಲೇ ಹೇಳಿದ್ದನು.

**ಕಾಕಾಸುರ**: ಈ ಅವಕಾಶವನ್ನುಪಯೋಗಿಸಿಕೊಂಡು ಹನುಮಂತನು, "ತಾಯೀ, ಜಾನಕೀ! ಕಾಕಾಸುರನು ನಿಮ್ಮನ್ನು ಹಿಂಸಿಸಿದಾಗ ನಿಮಗೆ ರಾಮನು ಮಾಡಿದ ಸಹಾಯ, ಕಾಕಾಸುರನನ್ನು ಸಂಹರಿಸಲು ಅವನು ಮಾಡಿದ ಪ್ರಯತ್ನಗಳನ್ನು ಜ್ಞಾಪಿಸಿಕೊಳ್ಳಿ," ಎಂದನು. ಅದನ್ನು ಕೇಳಿದಾಕ್ಷಣ ಸೀತೆಯು ಗೊಳ್ಳನೆ ಅಳಲಾರಂಭಿಸಿದಳು. "ಹನುಮಂತಾ! ನನ್ನ ರಾಮನು ಆ ದಿನ ನನ್ನನ್ನು ಎಲ್ಲ ವಿಧದಲ್ಲೂ ಕಾಪಾಡಿದನು. ಆದರೆ, ಈಗೇಕೆ ಇಷ್ಟು ಆಲಸ್ಯ ಮಾಡುತ್ತಿದ್ದಾನೆ? ರಾಮನು ಕರುಣಾಸಮುದ್ರನಲ್ಲವೆ? ನನ್ನ ವಿಷಯದಲ್ಲಿ ಅವನ ಕರುಣೆ ಕಠಿಣವಾಯಿತೆ? ಅಯ್ಯೋ, ಅದು ನನ್ನ ತಪ್ಪು ಕಲ್ಪನೆ. ರಾಮಚಂದ್ರನು ದಯಾಮಯ. ಲೋಕನಾಟಕವನ್ನು ತಾನು ಇಚ್ಛಿಸಿದಂತೆ ಆಡಿ ತೋರಿಸಬೇಕಾಗಿದೆ. ಇತರರಿಂದ ಆಡಿಸಬೇಕಾಗಿದೆ. ಹನುಮಂತಾ! ನೀನು ಸಾಮಾನ್ಯನಲ್ಲ. ಸಾಮಾನ್ಯರೊಂದಿಗೆ ರಾಮನು ಇಷ್ಟು ಗಾಢ ಸ್ನೇಹ ಮಾಡುವುದಿಲ್ಲ. ತನ್ನ ಮುದ್ರೆಯುಂಗುರವನ್ನು ಕಳಿಸುವುದಿಲ್ಲ. ನೀನೆಷ್ಟು ಅದೃಷ್ಟವಂತ. ಒಂದು ಸಾರಿ ನಿನ್ನ ಪೂರ್ಣ ರೂಪವನ್ನು ತೋರಿಸು," ಎಂದು ಪ್ರಾರ್ಥಿಸಿದಳು.

ಹನುಮಂತನು ಮರದಿಂದ ಕೆಳಕ್ಕೆ ಧುಮುಕಿ, ಸೀತೆಯ ಮುಂದೆ ಕೈ ಜೋಡಿಸಿ ನಿಂತು, ತನ್ನ ಮಹಾ ಆಕಾರವನ್ನು ತೋರಿಸಿದನು. ಸೀತೆಯು ಭಯಪಟ್ಟು, ಇದು ರಾವಣನ ಮಾಯೆಯೇ ಇರಬೇಕೆಂದು ತಿಳಿದು, ಕಣ್ಣುಗಳನ್ನು ಮುಚ್ಚಿಕೊಂಡು ಹಿಂದಕ್ಕೆ ತಿರುಗಿದಳು. ಹನುಮಂತನು ಅವಳ ಅನುಮಾನವನ್ನು ಗ್ರಹಿಸಿ, "ತಾಯೀ! ನಾನು ರಾವಣನ ಕಡೆಯವನಲ್ಲ, ರಾಕ್ಷಸನಲ್ಲ. ಪವಿತ್ರ ಮಂಗಳ ಸ್ವರೂಪನಾದ ರಾಮನ ಭಂಟ ನಾನು. ಅವನೇ ನನ್ನ ಪ್ರಾಣ. ನಾನು ಸತ್ಯವನ್ನು ಹೇಳುತ್ತಿದ್ದೇನೆ. ನೀವು ನನ್ನನ್ನು ನಂಬುವುದಿಲ್ಲವೆನ್ನುವ ಕಾರಣದಿಂದಲೇ ರಾಮನು ತನ್ನ ಬೆರಳಲ್ಲಿದ್ದ ಮುದ್ರೆಯುಂಗುರವನ್ನು ತೆಗೆದು ನನಗೆ ಕೊಟ್ಟು ಕಳಿಸಿದ್ದಾನೆ. 'ನಿನ್ನನ್ನು ಸೀತೆ ನಂಬಲು ಆಧಾರವಾಗಿ ಇದನ್ನು ತೆಗೆದುಕೊಂಡು ಹೋಗು,' ಎಂದು ಕೊಟ್ಟನು.

ನನ್ನೊಂದಿಗೆ ಜಾಂಬವಂತ ಅಂಗದ ಇನ್ನೂ ಸಾವಿರಾರು ವಾನರರು ಬಂದರು. ನಾನು ಮಾತ್ರವೇ ರಾಮಾನುಗ್ರಹದಿಂದ ಸಮುದ್ರವನ್ನು ದಾಟಲು ಸಮರ್ಥನಾದೆ. ಮಿಕ್ಕವರು ಆಚೆ ದಡದಲ್ಲಿದ್ದಾರೆ.

ನಿಮ್ಮನ್ನು ಈ ಕಿರಾತ ಕೊಂಡೊಯ್ದ ವಿಷಯವನ್ನು ನಾವು ಶಬರಿ ಜಟಾಯು ಗಳಿಂದ ತಿಳಿದೆವು. ಮೂರು ದಿನಗಳ ಕೆಳಗೆ ಸಂಪಾತಿ ಹೇಳಿದ್ದನ್ನು ಕೇಳಿ ನಿಮ್ಮನ್ನು ನೋಡಿದಷ್ಟೇ ಆನಂದವಾಯಿತು. ರಾಮಲಕ್ಷ್ಮಣರು ಈ ವಾರ್ತೆಯನ್ನು ಕೇಳುವುದಕ್ಕಾಗಿ ಕಾದಿದ್ದಾರೆ. ನೀವು ಅಪ್ಪಣೆ ಕೊಟ್ಟೊಡನೆ ಹಿಂದಿರುಗಿ ಹೋಗಿ, ಪ್ರಭುವಿಗೆ ನಿಮ್ಮ ಕ್ಷೇಮ ಸಮಾಚಾರವನ್ನು ತಿಳಿಸುತ್ತೇನೆ," ಎಂದನು. ಅದನ್ನು ಕೇಳಿ ಸೀತೆಯು, "ಹನುಮಂತಾ! ತಿರುಗಿ ಬರುತ್ತೀಯೋ ಇಲ್ಲವೋ? ಆದ್ದರಿಂದ, ಇನ್ನೂ ಒಂದು ದಿನ ಇದ್ದು ರಾಮನ ಸುಕ್ಷೇಮ ವಾರ್ತೆಯನ್ನು ತಿಳಿಸಿ ನನ್ನನ್ನು ಆನಂದಪಡಿಸು," ಎಂದು ಪ್ರಾರ್ಥಿಸಿದಳು. ಇಷ್ಟರಲ್ಲಿ, ರಾಕ್ಷಸರು ತಮಗೆ ನೇಮಿಸಿದ ಕೆಲಸಗಳಿಗಾಗಿ ಗುಂಪು ಗುಂಪಾಗಿ ಬರುತ್ತಿದ್ದುದರಿಂದ, ತಿರುಗಿ ಹನುಮಂತನು ಸೂಕ್ಷ್ಮ ರೂಪವನ್ನು ಧರಿಸಿ, ವೃಕ್ಷದ ಮೇಲೇರಿ ಕುಳಿತನು.

**ಸುರಮೆ**: ಸೀತೆಯು ಹನುಮಂತನು ಹೇಳಿದ ಮಾತುಗಳನ್ನೆಲ್ಲಾ ಜ್ಞಾಪಿಸಿಕೊಳ್ಳುತ್ತಾ ತನ್ನಲ್ಲೆ ತಾನು ಆನಂದಿಸುತ್ತಾ ಆಗಾಗ ಆ ವಾನರನನ್ನು ನೋಡುತ್ತಿದ್ದಳು. ಆ ದಿನ, ನೀರನ್ನೂ ಕುಡಿಯದೆ, ರಾಕ್ಷಸರು ತಂದಿಟ್ಟ ಫಲಜಲಗಳನ್ನೂ ಮುಟ್ಟದೆ ಸೀತೆಯು ದುಃಖಿಸುತ್ತಿದ್ದುದನ್ನು ಹನುಮಂತನು ನೋಡಲಾರದೆ ಹೋದನು. ಕಾವಲು ಕಾಯುತ್ತಿದ್ದ ಕ್ರೂರ ರಾಕ್ಷಸರು ಸೀತೆಯನ್ನು ಬೆದರಿಸುತ್ತಿದ್ದುದನ್ನು, ಅವರು ಆಡುತ್ತಿದ್ದ ಮಾತುಗಳನ್ನು ಸಹಿಸಲಾರದೆ ಹೋದನು. ಮಧ್ಯೆ ತಾಳಲಾರದ ಕೋಪದಿಂದ ಹಲ್ಲು ಕಡಿಯುತ್ತಿದ್ದನು. ವಿಧಿಯಿಲ್ಲದೆ ಸೀತೆಯ ಆಜ್ಞೆಗಾಗಿ ಕಾಯು ತ್ತಿದ್ದನು. ಸ್ವಲ್ಪ ಹೊತ್ತಾದ ಮೇಲೆ ವಿಭೀಷಣನ ಹೆಂಡತಿ ಸುರಮೆ, ಅವನ ಮಗಳು ತ್ರಿಜಟೆ ಇಬ್ಬರೂ ಬಂದು ಸೀತೆಗೆ ನಮಸ್ಕರಿಸಿ ಅವಳ ಕ್ಷೇಮ ಸಮಾಚಾರವನ್ನು ವಿಚಾರಿಸಿದರು. ಸೀತೆಯು ಅವರಿಗೆ ವಾನರನು ಬಂದಿರುವ ಸಮಾಚಾರವನ್ನು ತಿಳಿಸಿ, ತ್ರಿಜಟೆಯ ಕನಸು ನಿಜವಾಯಿತೆಂದು ಹೇಳಿದಳು. ಅವರು ಬಹಳ ಆಶ್ಚರ್ಯದಿಂದ, ನಡೆದ ಸಂಗತಿಯನ್ನೆಲ್ಲಾ ತಿಳಿಸುವಂತೆ ಸೀತೆಯನ್ನು ಪರಿಪರಿ ವಿಧವಾಗಿ ಕೋರಿದರು. ಸೀತೆಯು ಮರದಮೇಲಿದ್ದ ವಾನರನನ್ನು ತೋರಿಸಿ, ಅವನು ತಂದಿದ್ದ ಉಂಗುರವನ್ನು ತೋರಿಸಿದಳು. ಅವರು ಆ ಉಂಗುರವನ್ನು ಕಣ್ಣುಗಳಿಗೊತ್ತಿಕೊಂಡು ಆನಂದಿಸಿದರು. ಸೀತೆಯು ಒಬ್ಬಳೇ ಇರುವಾಗ ಹನು ಮಂತನು ಕೆಳಗಿಳಿದು ಬಂದು, "ತಾಯೀ! ಚಿಂತಿಸಬೇಡಿ. ನನ್ನ ಹೆಗಲ ಮೇಲೆ

ಕುಳಿತುಕೊಂಡರೆ, ಕ್ಷಣ ಮಾತ್ರದಲ್ಲಿ ನಾನು ನಿಮ್ಮನ್ನು ರಾಮಸನ್ನಿಧಿಗೆ ಕರೆದೊಯ್ಯುತ್ತೇನೆ," ಎಂದು ಹೇಳಿ, ಸಮ್ಮತಿಸುವಂತೆ ಬಹು ವಿಧವಾಗಿ ಪ್ರಾರ್ಥಿಸಿದನು.

ಅದಕ್ಕೆ ಸೀತೆಯು "ಹನುಮಂತಾ! ನಿನ್ನ ಮಾತುಗಳು ನನ್ನನ್ನು ಅದೆಷ್ಟೋ ಆನಂದಪಡಿಸುತ್ತಿವೆ. ವಿರಹ ಸಮುದ್ರದಲ್ಲಿ ಮುಳುಗಿ ತಪಿಸುತ್ತಿರುವ ನನಗೆ ನಿನ್ನ ತಂಪಾದ ಮಾತುಗಳು ದೋಣಿಯಂತೆ ಸಹಾಯ ಮಾಡುತ್ತಿವೆ. ನಾನು ಪರಪುರುಷನನ್ನು ಮುಟ್ಟೆನೆನ್ನುವುದು ನಿನಗೆ ತಿಳಿಯದೆ? ಆದ್ದರಿಂದ, ನಿನ್ನ ಹೆಗಲ ಮೇಲೆ ನಾನು ಕುಳಿತುಕೊಳ್ಳುವೆನೇ ಯೋಚಿಸು!" ಎಂದಳು. ಸೀತೆಯ ಮಾತುಗಳು ಹನುಮಂತನ ಹೃದಯವನ್ನು ಬಾಣದಂತೆ ನಾಟಿದವು. ಅವನು, "ಅಮ್ಮಾ! ನಾನು ನಿನ್ನ ಮಗನಲ್ಲವೆ? ತಾಯಿಯನ್ನು ಹೆಗಲಮೇಲೆ ಕೂರಿಸಿಕೊಳ್ಳುವುದರಲ್ಲಿ ತಪ್ಪೇನಿದೆ? ಅದರ ದೋಷವೆಲ್ಲಿಂದ ಬಂತು?" ಎಂದು ಸಮ್ಮತಿಸುವಂತೆ ಹಲವು ವಿಧವಾಗಿ ಪ್ರಾರ್ಥಿಸಿದನು.

**ರಾಮನ ಕೀರ್ತಿ**: ಆದರೆ ಸೀತೆಯು ಸಮ್ಮತಿಸದೆ, "ಹನುಮಂತಾ! ನನ್ನಲ್ಲೂ ನಿನ್ನಲ್ಲೂ ಮಾತಾ ಪುತ್ರ ಭಾವನೆ ಇರಬಹುದು. ಆದರೆ ಲೋಕವೇನೆನ್ನುವುದೋ ಯೋಚಿಸು. ಲೋಕವನ್ನು ಕೂಡ ನಾವು ನೋಡಬೇಕಲ್ಲವೆ? ಆದರ್ಶವಾದ ಜೀವನವನ್ನು ನಿರೂಪಿಸುವ ವ್ಯಕ್ತಿಗಳಾಗಿ ನಾವು ಬದುಕಬೇಕೇ ವಿನಾ ಬೇರೆಯವರು ಬೆಟ್ಟು ತೋರಿಸುವಂಥ ಕೆಲಸ ಮಾಡಬಾರದು. ಆತ್ಮಕ್ಕೆ ತೃಪ್ತಿ ಇಲ್ಲದ ಕೆಲಸವನ್ನು ನಾನೊಪ್ಪೆನು. ನನ್ನ ಪ್ರಾಣ ಹೋದರೂ ಸರಿ, ರಾಮನೇ ನನ್ನನ್ನು ಕರೆದೊಯ್ಯಬೇಕು. ಅನ್ಯರ ಸಹಾಯ ನನಗೆ ಅಗತ್ಯವಿಲ್ಲ. ಅಷ್ಟೇ ಅಲ್ಲ. ನನ್ನನ್ನು, ಇಷ್ಟು ರೀತಿಯಲ್ಲಿ ಬಾಧೆಪಡಿಸಿದ ಈ ಕಿರಾತನನ್ನು ಕೊಲ್ಲಲು ನನ್ನ ರಾಮನೇ ಸರಿ. ಅವನೇ ಈ ಲಂಕೆಗೆ ಬಂದು ರಾವಣನನ್ನು ಕೊಂದು ಈ ಸೀತೆಯನ್ನು ಕೈ ಹಿಡಿಯುವುದರಲ್ಲಿ ಒಂದು ಪರಾಕ್ರಮವಿದೆ. ರಾವಣನು ಕಳ್ಳವೇಷ ಹಾಕಿಕೊಂಡು ಮೋಸದಿಂದ ನನ್ನನ್ನಿಲ್ಲಿಗೆ ತಂದ. ಆದರೆ, ರಾಮನು ಧರ್ಮ ಸ್ವರೂಪನು. ನೀತಿ ನಿಯಮಗಳನ್ನು ಪಾಲಿಸುವವನು. ಸತ್ಯವಾಕ್ಯ ಪರಿಪಾಲಕನು. ಅಂಥ ರಾಮನೂ ಕೂಡ, ತನ್ನ ದೂತನನ್ನು ಕಳಿಸಿ ರಾವಣನಿಗೆ ತಿಳಿಯದಂತೆ ಸೀತೆಯನ್ನು ಕದ್ದೊಯ್ದನೆನ್ನುವುದು ರಾಮನಿಗೆ ಕೀರ್ತಿ ತರುವುದಿಲ್ಲ. ಇಂಥ ಕೆಲಸದಲ್ಲಿ ತೊಡಗುವುದು ರಾಮದ್ರೋಹವಾಗುವುದು. ಆದ್ದರಿಂದ, ಮೋಸದ ಮಾರ್ಗವನ್ನಾಗಲೀ ಠಕ್ಕ ಕೆಲಸವನ್ನಾಗಲೀ ನಾವು ಅವಲಂಬಿಸಕೂಡದು. ರಾಮ ಗೌರವ ನಮ್ಮ ಪ್ರಾಣ. ರಾಮ ಕೀರ್ತಿ ನಮ್ಮ ಹೃದಯ ಮೂರ್ತಿ. ಅವುಗಳನ್ನು ಕಾಪಾಡುವಂಥ ಕೆಲಸ ಕೈಗೊಳ್ಳುವುದು ಒಳ್ಳೆಯದು. ನಿನ್ನ ಮಾತು ನನಗೆ ಅಷ್ಟು ತೃಪ್ತಿಕರವೆನಿಸುತ್ತಿಲ್ಲ," ಎಂದು ಹನುಮಂತನ ಸಲಹೆಯನ್ನು ತಿರಸ್ಕರಿಸಿದಳು.

ಅವಳ ಮಾತುಗಳಿಗೆ ಹನುಮಂತನು ಸಂತೋಷಿಸಿ ಸೀತೆಯ ಗುಣಗಳನ್ನು ತನ್ನಲ್ಲೇ ತಾನು ಹೊಗಳುತ್ತಾ ಆನಂದಿಸಿ, "ತಾಯೀ ನನ್ನನ್ನು ಕ್ಷಮಿಸು. ನಿಮ್ಮ ಬಾಧೆಯನ್ನೂ ರಾಮನ ವಿರಹವನ್ನೂ ಕಣ್ಣಾರೆ ಕಂಡವನಾದ್ದರಿಂದ ಎಷ್ಟು ಬೇಗ ಸಾಧ್ಯವಾದರೆ ಅಷ್ಟು ಬೇಗ ನಿಮ್ಮನ್ನು ರಾಮನ ಬಳಿ ಸೇರಿಸಬೇಕೆನ್ನುವ ಆತಂಕದಿಂದ ನಾನು ಹಾಗೆ ಪ್ರಾರ್ಥಿಸಿದೆ. ಅದು ತಪ್ಪಾದರೆ ಕ್ಷಮಿಸಿ," ಎಂದು ಮತ್ತೆ ಸೀತೆಗೆ ನಮಸ್ಕರಿಸಿದನು. ಸೀತೆಯು ಮತ್ತೆ ಮತ್ತೆ ಅವನನ್ನು, "ರಾಮಲಕ್ಷ್ಮಣರು ಕ್ಷೇಮವೇ?" ಎಂದು ಕೇಳುತ್ತಾ, "ಗಂಡಸರಿಗೇನು? ಅವರು ಹೇಗಾದರೂ ಸಹಿಸಿಕೊಳ್ಳುವರು. ಅವರು ಸ್ತ್ರೀಯರನ್ನು ಬಿಟ್ಟಿರಬಲ್ಲರು. ಹೆಂಗಸರದೇ ಹಾಳು ಜನ್ಮ. ಗಂಡನನ್ನು ಬಿಟ್ಟು ಹೆಂಡತಿ ಜೀವಿಸುವುದು ಮಹಾ ಘೋರ!" ಎಂದು ಗಂಡಸರ ಬಗ್ಗೆ ನಿಷ್ಠೂರವಾಗಿ ಮಾತನಾಡಿದುದನ್ನು ನೋಡಿ ಹನುಮಂತನು, "ತಾಯೀ! ರಾಮಲಕ್ಷ್ಮಣರು ಕ್ಷೇಮವಾಗಿದ್ದಾರೆ, ಆದರೆ, ಮಿಕ್ಕ ಗಂಡಸರೊಂದಿಗೆ ಅವರನ್ನು ಹೋಲಿಸುವುದು ನ್ಯಾಯವಲ್ಲ ತಾಯೀ! ರಾಮನು ಕ್ಷಣಕ್ಷಣಕ್ಕೂ ನಿಮ್ಮನ್ನು ನೆನೆಯುತ್ತಾ ಅನ್ನ ಪಾನಾದಿಗಳನ್ನು ಸಹಿತ ತೆಗೆದುಕೊಳ್ಳುತ್ತಿಲ್ಲ. ಲಕ್ಷ್ಮಣನ ಬಲವಂತದಿಂದ ಸ್ವಲ್ಪ ಫಲ ಪಾನೀಯಗಳನ್ನು ತೆಗೆದುಕೊಳ್ಳುತ್ತಿದ್ದಾರಲ್ಲದೆ ತಾವಾಗಿ ಒಂದು ಗುಟುಕು ನೀರು ಕುಡಿದದ್ದನ್ನು ಸಹ ನಾನು ಕಂಡಿಲ್ಲ.

ದುಃಖಿಸದಿರಿ, ಅವರನ್ನು ಅನುಮಾನಿಸದಿರಿ, ತಾಯಿ. ಲಕ್ಷ್ಮಣನು ಅಣ್ಣನ ಪ್ರಾಣಕ್ಕೆ ಪ್ರಾಣವಾಗಿ, ಒಂದು ಕಡೆ ನಿಮ್ಮ ವಿಯೋಗವನ್ನು, ಮತ್ತೊಂದು ಕಡೆ ರಾಮನ ದುಃಖವನ್ನು ಸಹಿಸಿಕೊಳ್ಳದವರಾಗಿ, ಮೊಂಡು ಬಂಡೆಯಂತೆ ಧೈರ್ಯದಿಂದ್ದಾರೆ. ರಾಮನನ್ನು ಕಣ್ಣ ರೆಪ್ಪೆಗಳಂತೆ ನೋಡಿಕೊಳ್ಳುತ್ತಾ ಧೈರ್ಯ ಹೇಳುತ್ತಾ ಕಾಲಕಳೆಯುತ್ತಿದ್ದಾರೆ, ಈ ಹತ್ತು ತಿಂಗಳೂ ರಾಮನಿಗೆ ನಿದ್ರೆ ಇಲ್ಲ. ಆಹಾರವಿಲ್ಲ," ಎಂದು ರಾಮನ ವಿಷಾದಕರವಾದ ವಿಯೋಗದುಃಖವನ್ನು ವಿವರಿಸುತ್ತಿದ್ದಾಗ, ಸೀತೆಯು ನಿಜವಾಗಿಯೂ ರಾಮಚಂದ್ರನಿಗೆ ನನ್ನ ಮೇಲೆ ಇಷ್ಟು ಪ್ರೀತಿಯೇ ಇಷ್ಟು ದಯೆಯೇ ಎಂದು ತನಗೆ ಅದು ತಿಳಿಯದವಳಂತೆ ಆಶ್ಚರ್ಯವನ್ನು ನಟಿಸುತ್ತಾ ವ್ಯಂಗ್ಯವಾಗಿ, "ಗಂಡಸರು ಗಂಡಸರನ್ನೇ ವರ್ಣಿಸುವರು, ಮೆಚ್ಚಿಕೊಳ್ಳುವರು. ಹೆಂಗಸರ ಬಾಧೆ ಗಂಡಸರಿಗೇನು ಗೊತ್ತು," ಎಂದು ಗಂಡಸರನ್ನು ನಿಂದಿಸುತ್ತಿದ್ದಳು. ಒಂದೊಂದು ಸಾರಿ, ಹನುಮಂತನು ಹೇಳುತ್ತಿದ್ದ ವಿಷಯಗಳನ್ನು ನಂಬುತ್ತಿರಲಿಲ್ಲ. ತನ್ನೊಂದಿಗೆ ರಾಮಚಂದ್ರನು ಸ್ನೇಹ ಬೆಳೆಸಿದ ಸನ್ನಿವೇಶವನ್ನು ಹನುಮಂತನು ವಿವರಿಸಿದಾಗ, ಸೀತೆ ಬಹುವಾಗಿ ಆನಂದಪಟ್ಟಳು.

ಹನುಮಂತನ ಮಾತುಗಳಲ್ಲಿ ಅವಳಿಗೆ ವಿಶ್ವಾಸ ಹುಟ್ಟಿತು. ಅವನ ಶಕ್ತಿ ಸಾಮರ್ಥ್ಯಗಳನ್ನು ಬಹುವಾಗಿ ಮೆಚ್ಚಿಕೊಂಡಳು. ಮತ್ತೆ ಮತ್ತೆ, ಹನುಮಂತನು, "ತಾಯೀ

ಏಕಿಂಥ ಭೇದ, ಪುತ್ರನ ಮೇಲೆ. ವ್ಯಥೆಯಲ್ಲೇಕೆ ವೃಥಾ ಕಾಲ ಕಳೆಯುತ್ತೀರಿ. ನನ್ನ ಹೆಗಲ ಮೇಲೆ ಕುಳಿತುಕೊಂಡರೆ ಕ್ಷಣ ಮಾತ್ರದಲ್ಲಿ ರಾಮ ಸನ್ನಿಧಿಗೆ ಸೇರಿಸುತ್ತೇನೆ," ಎಂದು ಹೇಳುತ್ತಲೇ ಇದ್ದನು. ತಾನು ಎಷ್ಟು ವಿಧವಾಗಿ ಹೇಳಿದರೂ ಕೇಳದಿದ್ದ ಹನುಮಂತನ ಆತುರವನ್ನು ಗಮನಿಸಿದ ಸೀತೆಯು, "ಹನುಮಂತಾ, ನೀನು ರಾಮನ ಆಜ್ಞೆಯನ್ನು ಶಿರಸಾವಹಿಸುವವನಲ್ಲವೆ?" ಎಂದು ಸ್ವಲ್ಪ ಚುರುಕಾಗಿ ಪ್ರಶ್ನೆ ಮಾಡಿದಳು. ಹನುಮಂತನು "ತಾಯೀ, ನನ್ನ ಪ್ರಾಣವನ್ನಾದರೂ ಬಿಟ್ಟೇನು, ಆದರೆ, ರಾಮಾಜ್ಞೆಯನ್ನು ಮೀರಲಾರೆ," ಎಂದು ಪ್ರಮಾಣ ಪೂರ್ವಕವಾಗಿ ಎದೆ ತಟ್ಟಿ ಹೇಳಿದನು. ಆಗ ಸೀತೆಯು, "ಹಾಗಾದರೆ ರಾಮನು ನನ್ನನ್ನು ನೋಡಿ ಬಾ ಎಂದು ಮಾತ್ರವೇ ಆಜ್ಞಾಪಿಸಿರುವನೊ, ಅಥವಾ ಕರೆದುಕೊಂಡು ಬಾ ಎಂದು ಆಜ್ಞಾಪಿಸಿರುವನೊ, ಯೋಚಿಸಿ ನೋಡು," ಎಂದಳು. ಆ ಮಾತಿನಿಂದ ಹನುಮಂತನ ಬಾಯಿ ಕಟ್ಟಿತು. "ತಾಯೀ ನಾನದನ್ನು ಯೋಚಿಸದಿದ್ದುದಕ್ಕೆ ಕ್ಷಮಾಪಣೆ ಕೋರುತ್ತೇನೆ," ಎಂದು ಸುಮ್ಮನಾದನು. ಮತ್ತೆ ಆ ಮಾತನ್ನೆತ್ತಲಿಲ್ಲ. ಇನ್ನು ವೃಥಾ ಕಾಲವನ್ನು ಕಳೆಯುವುದು ಸರಿಯಲ್ಲವೆಂದು ಯೋಚಿಸಿ, ಎಷ್ಟು ಬೇಗ ಸಾಧ್ಯವಾದರೆ ಅಷ್ಟು ಬೇಗ ಸೀತೆಯ ಸುಕ್ಷೇಮ ವಾರ್ತೆಯನ್ನು ರಾಮನಿಗೆ ತಿಳಿ ಸುವುದೊಳ್ಳೆಯದೆಂದು ಹೊರಡಲು ಸೀತೆಯ ಅನುಮತಿ ಕೋರಿದನು. ಸೀತೆಯು, "ಕ್ಷೇಮವಾಗಿ ಹೋಗಿ, ಶೀಘ್ರವಾಗಿ ರಾಮನೇ ಸ್ವತಃ ಬಂದು ನನ್ನನ್ನು ಕರೆದೊಯ್ಯ ಬೇಕೆಂದು ಹೇಳು," ಎಂದು ಕಣ್ಣೀರು ಹಾಕುತ್ತಾ ಹೇಳಿದಳು. ಆ ಮಾತು ಹನುಮಂತನ ಹೃದಯವನ್ನು ಕರಗಿಸಿತು, ಕದಲಿಸಿತು. ಹನುಮಂತನು, "ತಾಯೀ! ವಾನರ ಸೈನ್ಯದೊಂದಿಗೆ ರಾಮಚಂದ್ರನು ಅತಿ ಶೀಘ್ರವಾಗಿ ಬಂದು ಲಂಕೆಯನ್ನು ಮುತ್ತಿ ರಾಕ್ಷಸರನ್ನು ಹತ ಮಾಡಿ ನಿಮ್ಮನ್ನು ಅಯೋಧ್ಯೆಗೆ ಕರೆದೊಯ್ಯುವನು," ಎಂದು ಆಶ್ವಾಸನೆಯಿತ್ತನು.

## ೨೪ ಲಂಕಾ ದಹನ

ಸೀತೆಯು, "ಹನುಮಾ, ವಾನರರು ಸಾಮಾನ್ಯರು. ಅವರು ಈ ಬಲಿಷ್ಠರಾದ ರಾಕ್ಷಸರನ್ನು ಸಂಹರಿಸಬಲ್ಲರೇ? ಇಷ್ಟು ಮಾಯಾ ಶಕ್ತಿಯುಳ್ಳ ಈ ರಾಕ್ಷಸರೆದುರು ರಾಮಲಕ್ಷ್ಮಣರಿಬ್ಬರು ಏನು ತಾನೆ ಮಾಡಬಲ್ಲರು? ಇದು ಬರಿ ಕನಸಿನ ಮಾತು

ಕಡೆಗೆ ನನ್ನ ಪ್ರಾಣ ಹೋಗುವುದೇ ಖಂಡಿತ. ಇಷ್ಟೊಂದು ಜನ ನೀವು ಯುದ್ಧದಲ್ಲಿ ಕೊಲ್ಲಲ್ಪಡುವುದರ ಬದಲು ನಾನೇ ನನ್ನ ಪ್ರಾಣವನ್ನು ಬಿಡುವುದೊಳ್ಳೆಯದಲ್ಲವೆ?" ಎಂದು ಅತ್ತಳು. ಹನುಮಂತನು, "ಅಮ್ಮಾ, ಸೀತಾಮಾತೆ! ನೀವು ಹಾಗೆ ತಿಳಿಯ ಬಾರದು. ನಾವು ರಾಮದೂತರು ಅವನ ನಾಮವನ್ನೇ ನಮ್ಮ ಸರ್ವ ಬಲವೆಂದು ತಿಳಿದವರು. ರಾಮನಾಮವಲ್ಲದೆ ಅನ್ಯ ಪ್ರಾಣ ನಮಗಿಲ್ಲ. ಆದ್ದರಿಂದ, ಶತ್ರುಗಳು ರಾಕ್ಷಸರಾದರೂ ಸರಿ, ನಮ್ಮ ವಾನರರೇ ಸಂಹರಿಸಬಲ್ಲರು, ಜಯಿಸಬಲ್ಲರು. ನಾವು ಸಾಮಾನ್ಯ ರೂಪ ಧರಿಸಿರುವುದರಿಂದ ನೀವು ನಮ್ಮ ಶಕ್ತಿ ಸಾಮರ್ಥ್ಯಗಳನ್ನು ಶಂಕಿಸುತ್ತಿದ್ದೀರಿ. ಇಗೋ! ನೋಡಿ," ಎಂದು ಹನುಮಂತನು ಸುವರ್ಣ ಪರ್ವತ ಸಮಾನವಾದ ತನ್ನ ಆಕಾರವನ್ನು ತೋರಿಸಿದೊಡನೆ, ಸೀತೆ ಆಶ್ಚರ್ಯಪಟ್ಟು, "ಹನುಮಂತಾ! ಸಾಕು, ಸಾಕು ನಿನ್ನ ರೂಪವನ್ನು ಮರೆಮಾಚಿಕೊ. ರಾಕ್ಷಸರೇನಾ ದರೂ ನೋಡಿದರೆ ತಿರುಗಿ ನಿನ್ನನ್ನು ಹಿಂದಕ್ಕೆ ಹೋಗಲು ಬಿಡುವುದಿಲ್ಲ," ಎಂದು ಭಯಗೊಂಡವಳಂತೆ ನಟಿಸಿದಳು. ಹನುಮಂತನು ಸೀತೆಗೆ ನಮಸ್ಕರಿಸಿ, ತನ್ನ ಉಗ್ರರೂಪವನ್ನು ಸೌಮ್ಯಗೊಳಿಸಿಕೊಂಡು ಸೂಕ್ಷ್ಮರೂಪವನ್ನು ಧರಿಸಿ, ಹಿಂದಕ್ಕೆ ಹೊರಟನು.

ಸೀತೆಯ ಪರಿಸ್ಥಿತಿ ಹನುಮಂತನ ಹೃದಯದಲ್ಲಿ ಅಚ್ಚೊತ್ತಿದಂತೆ ನಿಂತಿತು. ಅವ ಳನ್ನು ಬಿಡಲಾರದೆ ಬಿಟ್ಟು ಹೊರಟನು. ಮಾರ್ಗದಲ್ಲಿ ಒಂದು ಫಲವನವನ್ನು ಹೊಕ್ಕಿ, ಹಣ್ಣುಗಳನ್ನು ಕಿತ್ತು ಹೊಟ್ಟೆ ತುಂಬ ತಿಂದು, ಕೆಲವನ್ನು ಕಿತ್ತು ಕೆಳಗೆ ಹಾಕುತ್ತಿದ್ದನು. ಕಾವಲು ಕಾಯುತ್ತಿದ್ದ ರಾಕ್ಷಸಿಯು ಅದನ್ನು ನೋಡಿ ಅವನನ್ನು ಹೊಡೆಯಲು ಹೋದಳು. ಹನುಮಂತನು ಅವಳನ್ನು ಬಲವಾಗಿ ಗುದ್ದಿ ಕೆಳಗುರುಳಿ ಸಿದನು. ಅವಳು ಹೇಗೋ ಚೇತರಿಸಿಕೊಂಡು, ಓಡಿ ಹೋಗಿ ತನ್ನ ಮುಖ್ಯಸ್ಥಳಿಗೆ ವಿಷಯ ತಿಳಿಸಿದಳು. ಮುಖ್ಯಸ್ಥಳು ತನ್ನ ಮೇಲಧಿಕಾರಿಗೆ ತಿಳಿಸಿದಳು.

ಹೀಗೆ ವಿಷಯ ಒಬ್ಬರಿಂದೊಬ್ಬರಿಗೆ ಹೋಗಿ, ಕೊನೆಗೆ ರಾವಣನ ಕಿವಿಗೆ ಬಿದ್ದಿತು. ರಾವಣನಿಗೆ ಅದು ಅಶುಭವೆನಿಸಿತು. ಕೋಪ ನೆತ್ತಿಗೇರಿತು. ಕೆಲವು ಸಹಸ್ರ ರಾಕ್ಷಸ ರನ್ನು ವಾನರನನ್ನು ಹಿಡಿಯಲು ಕಳಿಸಿದನು. ಅವರು ಸೋತು ಹಿಮ್ಮೆಟ್ಟಿದರು. ನಂತರ, ಆ ವಾನರನನ್ನು ಹಿಡಿಯಲು ಒಳ್ಳೆ ಶಕ್ತಿ ಸಾಮರ್ಥ್ಯವುಳ್ಳ, ತರಬೇತಾದ ಸಹಸ್ರಾರು ರಾಕ್ಷಸರನ್ನು ಆಯುಧಗಳೊಂದಿಗೆ ಕಳಿಸಿದನು. ಅವರಿಗೂ ವಾನರ ನನ್ನು ಕದಲಿಸಲಾಗಲಿಲ್ಲ. ಹನುಮಂತನು ಒಂದು ಮರದ ಕೊಂಬೆ ಮುರಿದು, ಅದನ್ನು ಕೈಯ್ಯಲ್ಲಿ ಹಿಡಿದು, "ರಾಮ, ರಾಮ," ಎನ್ನುತ್ತಾ ರಾಕ್ಷಸರ ಆಯುಧಗಳ ನ್ನೆಲ್ಲಾ ಆ ಮರದ ರೆಂಬೆಯಿಂದಲೇ ಮುರಿದು ಹೊಡೆದು ಹಿಮ್ಮೆಟ್ಟಿಸುತ್ತಿದ್ದನು. ರಾಕ್ಷಸರು ಆಶ್ಚರ್ಯಪಟ್ಟು ಇವನು ಯಾರೋ ದೇವದೂತನಿರಬೇಕೆಂದು ಶಂಕಿಸಿ

ದರು. ಇದು ಲಂಕೆಗೆ ಅಪಾಯ ತರುವುದೇ ಎಂದು ಭಯಪಟ್ಟರು. ಒಳಗೊಳಗೇ ಕೊರಗಿದರು, ರಾವಣನಿಗೆ ಈ ಸಮಾಚಾರ ತಿಳಿಸಲು ಅವರಿಗೆ ಧೈರ್ಯ ಸಾಲದಾಯಿತು. ಎಷ್ಟೆಷ್ಟೋ ವಿಧದ, ಲೆಕ್ಕವಿಲ್ಲದಷ್ಟು ರಾಕ್ಷಸರನ್ನು ಕಳಿಸಿದರೂ ಫಲವಿಲ್ಲದಂತಾಯಿತು. ಹನುಮಂತನು ಒಂದು ಸಾರಿ ಗರ್ಜಿಸಿದರೆ ಸಾಕು, ನೂರಾರು ರಾಕ್ಷಸರು ಸಾಯುತ್ತಿದ್ದರು, ಭೂಮಿ ತತ್ತರಿಸುತ್ತಿತ್ತು. ವಿಧಿಯಿಲ್ಲದೆ, ಸೈನ್ಯಾಧಿಕಾರಿಗಳು ರಾವಣನಿಗೆ ಈ ವಾರ್ತೆಯನ್ನು ತಿಳಿಸಿದರು. "ಈ ವಾನರ ಸಾಮನ್ಯನಲ್ಲ. ಇದು ನಮ್ಮನ್ನು ಯಾವುದೋ ಭಯಂಕರ ಸ್ಥಿತಿಗೆ ಕರೆದೊಯ್ಯುತ್ತಿದೆ. ಇದನ್ನು ಹೀಗೇ ಬಿಟ್ಟರೆ ಬಹಳ ಅಪಾಯದ ಪರಿಸ್ಥಿತಿಯೇ ಬರಬಹುದು. ಆದ್ದರಿಂದ ಬಲವಾದ ಕ್ರಮವನ್ನೇ ತೆಗೆದುಕೊಳ್ಳಬೇಕು," ಎಂದು ಇದ್ದುದನ್ನು ಇದ್ದ ಹಾಗೆ ಹೇಳಿದರು.

ಆಗ ರಾವಣನು ವಾನರನೊಂದಿಗೆ ಯುದ್ಧ ಮಾಡಲು ಅಕ್ಷಯಕುಮಾರನನ್ನು ಕಳಿಸಿದನು. ಅವನೊಂದಿಗೆ ಹಲವು ಸಾವಿರ ಯೋಧರನ್ನೂ ಕಳಿಸಿದನು. ಹನುಮಂತನು ಆ ಸಹಸ್ರಾರು ಯೋಧರನ್ನೂ ಅಕ್ಷಯಕುಮಾರನನ್ನೂ ಕ್ಷಣ ಮಾತ್ರದಲ್ಲಿ ಕೊಂದು ಹಾಕಿದನು. ಆ ವಿಚಿತ್ರ ಚರ್ಯೆಯನ್ನು ನೋಡಿ ಇಡೀ ಲಂಕೆಯೇ ನಡುಗಿ ಹೋಯಿತು. ಇವನು ಯಾವುದೋ ಬಹು ಶಕ್ತಿಶಾಲಿ ದೈವಶಕ್ತಿಯೇ ವಿನಾ ಇವನೊಬ್ಬ ಸಾಮನ್ಯ ವಾನರನಲ್ಲ ಎಂದು ರಾಕ್ಷಸರು ಗುಸುಗುಸು ಮಾತನಾಡಿಕೊಂಡರು. ಕಡೆಗೆ ಇದು ಸೀತಾಪಹರಣ ಪಾಪದ ಫಲವೇ ಎಂದು ದೃಢ ಮಾಡಿಕೊಂಡು, ಒಳಗೊಳಗೇ ಸೀತೆಯನ್ನು ಪ್ರಾರ್ಥಿಸಿದರು.

ಅಕ್ಷಯಕುಮಾರನ ಮರಣ ವಾರ್ತೆಯನ್ನು ಕೇಳಿ ರಾವಣನು ದುಃಖತಪ್ತನಾದನು. ಉಕ್ಕಿ ಬರುತ್ತಿದ್ದ ಕೋಪವನ್ನು ತಾಳಲಾರದೆ ಹೋದನು. ಮೇಘನಾದನನ್ನು ಕರೆದು, ಅವನ ಸಹಾಯಕ್ಕೆ ಕೆಲವು ಸಹಸ್ರಯೋಧರನ್ನು ಕೊಟ್ಟು ಕಳಿಸಿದನು. ಮೇಘನಾದನು ರಥವನ್ನೇರಿ ಭೂಮಿ ಆಕಾಶ ತತ್ತರಿಸುವಂತೆ ರಥವನ್ನೋಡಿಸುತ್ತಾ ಹೋಗುತ್ತಿದ್ದುದನ್ನು ನೋಡಿದರೆ ಎದೆ ಝಲ್ಲೆನಿಸುತ್ತಿತ್ತು. ವಾನರನು ಒಂದು ಕೊಂಬೆಯ ಮೇಲೆ ಕುಳಿತು, ನಿರ್ಲಕ್ಷ್ಯದಿಂದ ನೋಡುತ್ತಿದ್ದನು. ಇಷ್ಟರಲ್ಲಿ, ಆ ಸೈನ್ಯವು ಅವನನ್ನು ಸುತ್ತುವರಿದು ನಾಲ್ಕು ದಿಕ್ಕಿನಿಂದಲೂ ಬಾಣದ ಮಳೆಗೆರೆಯಿತು. ಕಪಿರಾಜನು ರೊಚ್ಚಿಗೆದ್ದು ಸಿಂಹನಾದ ಮಾಡಿದನು. ಒಂದು ದೊಡ್ಡ ಮರವನ್ನು ಬೇರು ಸಹಿತ ಕಿತ್ತು, ಅದನ್ನು ಒಂದು ಕೈಯ್ಯಲ್ಲಿ ಹಿಡಿದು ನಾಲ್ಕು ದಿಕ್ಕಿನಿಂದಲೂ ಬರುತ್ತಿದ್ದ ಬಾಣ ಸಮೂಹವನ್ನು ಕ್ಷಣದಲ್ಲಿ ಹಿಂದಕ್ಕೆ ಕಳಿಸುತ್ತಿದ್ದನು. ಅವು ತಿರುಗಿ ರಾಕ್ಷಸರಿಗೇ ತಗುಲಿ, ಕಣ್ಣುರೆಪ್ಪೆ ಆಡಿಸುವುದರೊಳಗೆ ಅವರು ಪ್ರಾಣ ಬಿಡುತ್ತಿದ್ದರು. ಮೇಘನಾದನು ಒಂದು ಗುದ್ದು ತಿಂದು, ಕೆಳಗೆ ಬಿದ್ದು ರಕ್ತ ಕಾರಿದನು. ಬೇರೇನೂ ಮಾರ್ಗವಿಲ್ಲದೆ, ಬ್ರಹ್ಮಾಸ್ತ್ರವನ್ನು ಕೈಯಲ್ಲಿ ಹಿಡಿದು, ನರ

ವಾನರರಿಂದಲೇ ರಾವಣನಿಗೆ ಮೃತ್ಯುವೆಂದು ಬ್ರಹ್ಮನೇ ತಿಳಿಸಿದ್ದನು ಎಂದು ಯೋಚಿಸುತ್ತಾ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದನು. ಹನುಮಂತನು ಬ್ರಹ್ಮಾಸ್ತ್ರವನ್ನು ಧಿಕ್ಕರಿಸಬಾರದೆಂದು, ಅದನ್ನು ವಿರೋಧಿಸದೆ ಗೌರವದಿಂದ ಅದಕ್ಕೆ ನಮಿಸಿದನು.

ಒಡನೆ ಇಂದ್ರಜಿತು ನಾಗಪಾಶದಿಂದ ಹನುಮಂತನನ್ನು ಬಂಧಿಸಿದನು. ಹನುಮಂತನು ನಾಗಪಾಶಕ್ಕೆ ವಶನಾದನು. ರಾಕ್ಷಸರು ಓಡಿಹೋಗಿ ವಾನರನನ್ನು ಬಂಧಿಸಿದೆವೆಂದು ರಾವಣನಿಗೆ ತಿಳಿಸಿದರು. ಕಟ್ಟಿ ಹಾಕಿದ ಈ ವಾನರನನ್ನು ನೋಡಲು ಲಕ್ಷಗಟ್ಟಲೆ ರಾಕ್ಷಸರು ಬೀದಿಗಳಲ್ಲಿ ಕಿಕ್ಕಿರಿದರು. ರಾವಣನ ದರ್ಬಾರಿಗೆ ಕರೆದೊಯ್ಯಲ್ಪಡುತ್ತಿದ್ದ ವಾನರ ನಾಯಕನು ನಿರ್ಲಕ್ಷ್ಯವಾಗಿ ಯಾವ ಭಯವಿಲ್ಲದೆ ಹೋಗುತ್ತಾ ರಾವಣನ ಆಸ್ಥಾನವನ್ನು ಸೇರಿದನು. ಅಲ್ಲಿ, ರಾವಣನ ಶಕ್ತಿ ಸಾಮರ್ಥ್ಯಗಳನ್ನು ನೋಡಿಯೂ ಅವನು ರಾಜನಿಗೆ ಕೊಡಬೇಕಾದ ಗೌರವವನ್ನು ಕೊಡದಿದ್ದುದನ್ನು ನೋಡಿ ಅಧಿಕಾರಿಗಳು ಆಶ್ಚರ್ಯಪಟ್ಟರು. ರಾವಣನು ಈ ವಾನರನನ್ನು ನೋಡಿಗೊಳ್ಳನೆ ನಕ್ಕನಾದರೂ ಒಳಗೊಳಗೆ ತನ್ನ ಮರಣದ ಬಗ್ಗೆ ಚಿಂತಿಸಿದನು. ಆದರೆ, ರಾಕ್ಷಸನಾದ್ದರಿಂದ ಮರಣದ ವಿಷಯ ಅವನನ್ನು ಅಷ್ಟು ಪೀಡಿಸಲಿಲ್ಲ. "ಎಲವೋ ವಾನರ! ನೀನು ಯಾರು? ನೀನು ಉಪಯೋಗಿಸುವ ಶಕ್ತಿ ಯಾರದ್ದು? ಏತಕ್ಕಾಗಿ ಈ ವನವನ್ನು ಧ್ವಂಸ ಮಾಡಿದೆ? ನಾಚಿಕೆ ಇಲ್ಲದೆ ಮುಖವೆತ್ತಿ ನೋಡುತ್ತಿದ್ದೀಯಲ್ಲಾ? ಸರಿಯಾದ ಉತ್ತರ ಕೊಡು," ಎಂದು ಮೂದಲಿಸಿದನು. ಹನುಮಂತನು ನಕ್ಕು, ಇತರ ರಾಕ್ಷಸರಿಗೆ ಅರ್ಥವಾಗದಂತೆ ಪಾಂಡಿತ್ಯ ಭಾಷೆ ಉಪಯೋಗಿಸಿ ಸರಿಯಾದ ಉತ್ತರವಿತ್ತನು.

ರಾವಣನು ಮಹಾ ವ್ಯಾಕರಣ ಪಂಡಿತನಾದ್ದರಿಂದ ಅವನ ಮಾತನ್ನು ಅರ್ಥಮಾಡಿಕೊಂಡು ಮುಂದೆ ಚಿತ್ರ ವಿಚಿತ್ರವಾದ ಮಾಯೆಯನ್ನು ಸೃಷ್ಟಿಸಿ ತೋರಿಸಿದನು. ಅದನ್ನು ನೋಡಿ ಹನುಮಂತನು, "ಓ ರಾವಣಾ! ನಿನ್ನ ವಿಷಯ ನನಗೆ ಗೊತ್ತು. ನೀನು ವಾಲಿಯೊಂದಿಗೆ ಹೋರಾಡಿದ ವಿಷಯ ನನಗೆ ತಿಳಿದಿದೆ. ನನಗೆ ಹಸಿವಾದ್ದರಿಂದ ಹಣ್ಣುಗಳನ್ನು ಕಿತ್ತು ತಿಂದೆ. ನಿನ್ನ ಭಟರು ಪರಮ ದುರ್ಮಾರ್ಗಿಗಳು. ಅವರು ನನ್ನನ್ನು ಹಿಂಸಿಸಿದ್ದರಿಂದ ಅವರನ್ನು ಸಂಹರಿಸಿದೆ. ಪ್ರತಿಯೊಬ್ಬರಿಗೂ ಅವರವರ ಮೇಲೆ ಅಭಿಮಾನವಿರುತ್ತದೆ. ಆತ್ಮಸಂರಕ್ಷಣೆಗಾಗಿ ನಾನು ಹೋರಾಡಿದೆ. ನಿನ್ನ ಕುಮಾರನ ಅಸ್ತ್ರ ನನ್ನನ್ನು ಬಂಧಿಸಿತು. ಅದರಿಂದ ನನಗೇನೂ ತೊಂದರೆಯಿಲ್ಲ. ನನ್ನ ಸ್ವಾಮಿ ಕಾರ್ಯವನ್ನು ನಾನು ಸಾಧಿಸಬಲ್ಲೆ. ಸಾವಧಾನವಾಗಿ ಕೇಳು. ನಿನ್ನ ಅಭಿಮಾನ ಬಿಡು. ನೀನು ಎಂಥ ದೊಡ್ಡ ವಂಶದಲ್ಲಿ ಹುಟ್ಟಿರುವೆ ಎನ್ನುವುದನ್ನು ಯೋಚಿಸು. ಬ್ರಹ್ಮನಿಗೆ ನೀನು ಪ್ರಪೌತ್ರ, ಪುಲಸ್ತ್ಯನಿಗೆ ನೀನು ಪೌತ್ರ, ವಿಶ್ವವಸುವಿಗೆ

ನೀನು ಪುತ್ರ. ಭ್ರಮೆಯನ್ನು ಬಿಡು. ಆ ಭಕ್ತ ಭಯಹರನಾದ, ಆ ಇಕ್ಷ್ವಾಕು ಕುಲತಿಲಕನಾದ, ಆ ರಘುವಂಶ ರತ್ನನಾದ ರಾಮನೊಂದಿಗೆ ವೈರ ಸರಿಯಲ್ಲ.

ನನ್ನ ಮಾತು ಕೇಳಿ, ಜಾನಕಿಯನ್ನು ನನ್ನ ಪ್ರಭುವಿಗೆ ಒಪ್ಪಿಸು. ರಾಮನ ಚರಣಾರವಿಂದಗಳನ್ನು ಧ್ಯಾನ ಮಾಡು. ಲಂಕಾ ರಾಜ್ಯವನ್ನು ಶಾಶ್ವತವಾಗಿ ಪರಿಪಾಲಿಸು, ಪುಲಸ್ತ್ಯನ ಕೀರ್ತಿ ಪ್ರತಿಷ್ಠೆಗಳನ್ನು ಆಚಂದ್ರಾರ್ಕವಾಗಿ, ನಿಷ್ಕಳಂಕವಾಗಿ ಬೆಳಗಿಸು. ಅವರ ಕೀರ್ತಿಗೆ ಮಸಿ ಬಳಿಯಬೇಡ. ನಿನ್ನ ಮದ ಮೋಹಾದಿಗಳನ್ನು ಬಿಡು. ಓ ರಾಕ್ಷಸ ರಾಜಾ! ಪರ್ವತದಲ್ಲಿ ಹುಟ್ಟಿದ ನದಿಗಳು ಮಳೆಗಾಲದಲ್ಲಿ ಉಕ್ಕಿ ಹರಿಯುವುವು. ಕೊನೆಗೆ ಬತ್ತಿ ಹೋಗುವುವು. ಹಾಗೇ ನಿನ್ನ ಸಿರಿ ಸಂಪತ್ತುಗಳು ಶೀಘ್ರವಾಗಿ ನಶಿಸುವುವು. ರಾಮಚಂದ್ರನನ್ನು ಆಧಾರ ಮಾಡಿಕೊಂಡವರ ಸಿರಿ ಸಂಪದಗಳು ವೃದ್ಧಿಯಾಗುವುವು. ಅವರಿಗೆ ನಷ್ಟವೆನ್ನುವುದಿಲ್ಲ. ರಾಜಾ! ನಾನು ಮನಬಿಚ್ಚಿ ಮಾತನಾಡುತ್ತಿದ್ದೇನೆ. ರಾಮನನ್ನು ವಿರೋಧಿಸಿದವನನ್ನು ರಕ್ಷಿಸುವವರು ಯಾರೂ ಇಲ್ಲ. ನನ್ನ ಮಾತು ಕೇಳು," ಎಂದು ಬಹು ವಿಧವಾಗಿ ರಾವಣನಿಗೆ ವಿವೇಕ ನೀತಿಗಳನ್ನು ಬೋಧಿಸಿದನು. ರಾವಣನು, "ಓ ಮೂರ್ಖಾ! ನೀನಾ ನನಗೆ ಉಪದೇಶಿಸುವವನು? ಛಿ, ಛಿ, ನಿನಗೆ ಮೃತ್ಯು ಸಮೀಪಿಸಿದೆ. ಇಲ್ಲದಿದ್ದರೆ ನನ್ನೆದುರಿಗೆ ಇಷ್ಟು ಧೈರ್ಯವಾಗಿ ನೀನು ಉಪನ್ಯಾಸ ಮಾಡುತ್ತಿರಲಿಲ್ಲ. ಛೀ, ಮುಚ್ಚುಬಾಯಿ," ಎಂದು ಆರ್ಭಟಿಸಿದನು. ಹನುಮಂತನು, "ಓ ರಾವಣಾ! ನಿನ್ನ ಮಾತುಗಳೇ ನಿನಗೆ ವಿರೋಧವಾಗುವುವು. ನಿನ್ನ ಬುದ್ಧಿ ಕೆಟ್ಟಿದೆ. ಮೃತ್ಯು ಸಮೀಪಿಸಿರುವುದು ನಿನಗೋ ನನಗೋ ಎನ್ನುವುದು ಕ್ರಮೇಣ ನಿನಗೇ ಗೊತ್ತಾಗುವುದು," ಎಂದು ತಡೆಬಡೆಯಿಲ್ಲದೆ ಧೀರನಂತೆ ಮಾತನಾಡಿದನು. ಹನುಮಂತನ ಮಾತುಗಳಿಂದ ರಾವಣನು ಉಗ್ರನಾಗಿ, ತೊಡೆತಟ್ಟಿ, "ಎಲೌ ರಾಕ್ಷಸರುಗಳಿರಾ, ಏನು ನೋಡುತ್ತಿದ್ದೀರಿ? ಈಗಲೇ ಕೊಲ್ಲಿ ಅವನನ್ನು," ಎಂದು ಆಜ್ಞಾಪಿಸಿದನು.

ತಕ್ಷಣವೇ ರಾಕ್ಷಸರು ರಾಜಾಜ್ಞೆಯ ಪ್ರಕಾರ ವಾನರನನ್ನು ಸಂಹರಿಸಲು ಸಿದ್ಧರಾದರು. ಆ ಹೊತ್ತಿಗೆ ಮಂತ್ರಿಗಳೊಡಗೂಡಿ ವಿಭೀಷಣನು ಸಭೆಯನ್ನು ಪ್ರವೇಶಿಸಿದನು. ಅವನು ರಾವಣನಿಗೆ ನಮಸ್ಕರಿಸಿ, "ಓ ನಾಥಾ, ದೂತನನ್ನು ವಧಿಸುವುದು ರಾಜಧರ್ಮಕ್ಕೆ ವಿರುದ್ಧ. ಬೇರೆ ಯಾವ ರೀತಿಯಲ್ಲಾದರೂ ಅವನಿಗೆ ಶಿಕ್ಷೆ ವಿಧಿಸು," ಎಂದನು. ಮಂತ್ರಿಗಳೂ ಅದನ್ನು ಅನುಮೋದಿಸಿದರು. ರಾವಣನು ನಕ್ಕು, "ವಾನರನನ್ನು ಅಂಗವಿಕಾರಗೊಳಿಸಿ ಕಳಿಸಿ," ಎಂದು ಆಜ್ಞಾಪಿಸಿದನು. ಅಲ್ಲಿದ್ದ ರಾಕ್ಷಸ ಶ್ರೇಷ್ಠರು ಆಲೋಚಿಸಿ, ವಾನರನಿಗೆ ಬಾಲದ ಮೇಲೆ ತುಂಬಾ ಅಭಿಮಾನ. ಆದ್ದರಿಂದ, ಎಣ್ಣೆಯಲ್ಲಿ ಅದ್ದಿದ ಬಟ್ಟೆಯನ್ನು ಅವನ ಬಾಲಕ್ಕೆ ಸುತ್ತಿ, ಬೆಂಕಿ ಹಚ್ಚಿದರೆ ಸರಿಹೋಗುವುದು ಎಂದು ಸಲಹೆ ಇತ್ತರು. ಮಂತ್ರಿಗಳು, "ಹೌದು, ಹಾಗೆ

ಮಾಡಿದರೆ ಈ ವಾನರನು ತನ್ನ ಬಾಲವನ್ನ ಕಳೆದುಕೊಂಡು, ನಮ್ಮ ಪ್ರಭುವಿನ ಶೂರತ್ವವನ್ನೂ ನೋಡಬಹುದು," ಎಂದರು.

ಸಭೆಯಲ್ಲಿ ಪ್ರಮುಖರು ತಮ್ಮಲ್ಲೆ ಗುಸುಗುಸು ಮಾತನಾಡಿಕೊಂಡರು. ಇವರ ಮಾತುಗಳನ್ನೂ ಗುಸುಗುಸುವನ್ನೂ ಕೇಳುತ್ತಿದ್ದ, ನೋಡುತ್ತಿದ್ದ ಹನುಮಂತನು ಗೊಳ್ಳನೆ ನಕ್ಕನು. ಇದರಿಂದ ರಾಕ್ಷಸರಿಗೆ ಮತ್ತಷ್ಟು ಕೋಪ ಬಂದು ತಕ್ಷಣವೇ ಎಣ್ಣೆಯ ಬಟ್ಟೆಗಳನ್ನು ತರಿಸಿ ಹನುಮಂತನ ಬಾಲಕ್ಕೆ ಚೆನ್ನಾಗಿ ಸುತ್ತಲಾರಂಭಿಸಿದರು. ಅವರು ಬಟ್ಟೆ ಸುತ್ತುತ್ತಿದ್ದಂತೆ ಬಾಲ ದೊಡ್ಡದಾಗುತ್ತಾ ಹೋಯಿತು. ಎಷ್ಟು ಎಣ್ಣೆ ಎಷ್ಟು ಬಟ್ಟೆ ತರಿಸಿದರೂ ಸಾಲದಾಯಿತು. ಈ ವಿಚಿತ್ರವನ್ನು ನೋಡಲು ಲಂಕೆಯ ರಾಕ್ಷಸ ಸ್ತ್ರೀ ಪುರುಷರೆಲ್ಲರೂ ಗುಂಪು ಗುಂಪಾಗಿ ಬಂದರು. ಇಷ್ಟರಲ್ಲಿ ವಾದ್ಯಗಳು ಮೊಳಗಿದವು, ಕರತಾಳ ಪ್ರಾರಂಭವಾಯಿತು. ನಗರ ಬೀದಿಗಳಲ್ಲಿ ಹನುಮಂತನನ್ನು ತಿರುಗಿಸಿದರು. ಪುರಮಧ್ಯದ ಬೀದಿಯಲ್ಲಿ ನಿಲ್ಲಿಸಿ ಬಾಲಕ್ಕೆ ಬೆಂಕಿ ಹಚ್ಚಿದರು. ಬೆಂಕಿ ಹಚ್ಚಿದ ತಕ್ಷಣವೇ ಹನುಮಂತನು ಸೂಕ್ಷ್ಮರೂಪಿಯಾದನು. ಅವನ ಬಂಧನಗಳೆಲ್ಲಾ ತನ್ನಷ್ಟಕ್ಕೆ ತಾನೇ ಕಳಚಿ ಹೋದವು. ಕೂಡಲೇ ಹನುಮಂತನು, "ರಾಮ, ರಾಮ," ಎಂದು ಗಟ್ಟಿಯಾಗಿ ಸ್ಮರಿಸುತ್ತಿದ್ದನು. ಆ ಶಬ್ದಕ್ಕೆ ವಾಯುವು ಪ್ರಚಂಡವಾಗಿ ಬೀಸತೊಡಗಿತು. ಹನುಮಂತನು ಅಟ್ಟಹಾಸದಿಂದ ಲಾಗಹಾಕುತ್ತಾ ಅಲ್ಲಿಂದಿಲ್ಲಿಗೆ ಹಾರಲು ಮೊದಲು ಮಾಡಿದನು. ಬೆಂಕಿ ಹತ್ತಿದ ಬಾಲದೊಂದಿಗೆ ಒಂದು ಮನೆಯಿಂದ ಇನ್ನೊಂದು ಮನೆಗೆ ದಾಟುತ್ತಾ ಮನೆಮನೆಗೆ ಬೆಂಕಿ ಹತ್ತಿಸಿದನು.

ಲಂಕಾಪಟ್ಟಣದ ಮನೆಗಳು ಉರಿದು ಕೆಳಗುರುಳಿ ಭಸ್ಮವಾದವು. ರಾಕ್ಷಸರು, ಹೆಂಗಸರು, ಮಕ್ಕಳು ಮನೆಗಳಿಂದ ಹೊರಬಂದು ಪ್ರಾಣ ಸಂರಕ್ಷಣೆಗಾಗಿ ಓಡ ತೊಡಗಿದರು. ಭಯಂಕರವಾದ ಕೂಗುಗಳಿಂದ ಲಂಕಾ ಪಟ್ಟಣವೆಲ್ಲಾ ತುಂಬಿ ಹೋಯಿತು. "ಅಯ್ಯೋ," "ಅಮ್ಮಾ," "ಕಾಪಾಡಿ," ಎನ್ನುವ ಸ್ತ್ರೀ ಪುರುಷರ ಕೂಗು ಮುಗಿಲು ಮುಟ್ಟಿತು. ಆ ಕೂಗು ಮಂಡೋದರಿಯ ಕಿವಿಗೆ ಬಿದ್ದಿತು. ಮಂಡೋದ ರಿಯು ಹೆಂಗಸರ ಗೋಳನ್ನು ಕೇಳಿ, ಹೆಂಗಸರು ಮಕ್ಕಳನ್ನು ರಕ್ಷಿಸುವಂತೆ ಆಜ್ಞಾಪಿಸಿ ರಾಜಭವನದ ಸಿಪಾಯಿಗಳನ್ನು ಕಳಿಸಿದಳು. "ಅಯ್ಯೋ! ರಾವಣನ ಮೂರ್ಖತನ ದಿಂದಾಗಿ ಈ ರಾಕ್ಷಸ ವಂಶ ನಾಶವಾಗಲು ಪ್ರಾರಂಭವಾಯಿತು. ನಾನೂ ವಿಭೀಷ ಣನೂ ಎಷ್ಟೋ ಬುದ್ಧಿ ಹೇಳಿದೆವು, ಪ್ರಾರ್ಥಿಸಿದೆವು, ಕೇಳಲಿಲ್ಲ. ವಂಶಕ್ಷಯವಾಗು ವುದನ್ನು ತಪ್ಪಿಸು ಎಂದು ಮೊರೆಯಿಟ್ಟೆವು. ವಿನಾಶಕಾಲೇ ವಿಪರೀತ ಬುದ್ಧಿಃ ಎನ್ನುವಂತೆ ಅವನ ಕೇಡುಗಾಲ ಇಷ್ಟೊಂದು ವಿಪರೀತ ಘಟನೆಗೆ ಮೂಲಕಾರಣ ವಾಯಿತು," ಎಂದು ಮಂಡೋದರಿ ತನ್ನ ವ್ಯಥೆಯನ್ನು ದಾಸಿಯೊಂದಿಗೆ ಹೇಳಿ ಕೊಳ್ಳುತ್ತಾ ಕಂಗಾಲಾಗಿ ಅತ್ತಳು. ಎಲ್ಲಿ ನೋಡಿದರೂ ನಾಲಗೆ ಚಾಚುತ್ತಾ ಉರಿಯು

ತ್ತಿದ್ದ ಬೆಂಕಿಯ ಜ್ವಾಲೆಗಳೇ ಕಾಣಿಸುತ್ತಿದ್ದವು. ಎಲ್ಲ ಕಡೆಯೂ ಹನುಮಂತನೇ ಕಾಣಿಸುತ್ತಿದ್ದನು. ಪ್ರತಿಯೊಂದು ಮನೆಯವರೂ ಹನುಮಂತನನ್ನು ಪ್ರಾರ್ಥಿಸ ತೊಡಗಿದರು. ಮಕ್ಕಳನ್ನು ಕಾಪಾಡೆಂದು ಕೈಜೋಡಿಸಿ ಬೇಡಿಕೊಂಡರು. ಕುಂಭ ಕರ್ಣನ ಪತ್ನಿಯು, "ಓ ರಾಮದೂತಾ! ನನ್ನ ಪತಿ ಗಾಢ ನಿದ್ರೆಯಲ್ಲಿದ್ದಾನೆ. ನನ್ನ ಮನೆಯನ್ನು ಸುಡಬೇಡ, ನನ್ನ ಪತಿಯನ್ನು ಕಾಪಾಡು," ಎಂದು ಪ್ರಾರ್ಥಿಸಿದಳು. ಲಂಕೆಯೆಲ್ಲಾ ಕೋಲಾಹಲಮಯವಾಯಿತು. ಕ್ಷಣದಲ್ಲಿ ಸುದ್ದಿಯು ರಾವಣನಿಗೆ ಮುಟ್ಟಿತು. ಅವನು ಶಸ್ತ್ರಾಸ್ತ್ರ ಫಿರಂಗಿಗಳಿಂದ ವಾನರನ ಹುಟ್ಟಡಗಿಸಿರೆಂದು ಆಜ್ಞಾಪಿಸಿ, ರಾಕ್ಷಸರನ್ನು ಕಳಿಸಿದನು. ಹನುಮಂತನು ಉರಿಯುತ್ತಿದ್ದ ಬಾಲದಿಂದ ಅವರೆಲ್ಲರನ್ನೂ ಅಪ್ಪಳಿಸಿದೊಡನೆ ಪ್ರಾಣ ರಕ್ಷಣೆಗಾಗಿ ಅವರು ದಿಕ್ಕು ದಿಕ್ಕಿಗೆ ಓಡಿದರು. ಕೆಲವರು ಬೆಂಕಿಯಲ್ಲಿ ಬಿದ್ದು ಪ್ರಾಣ ಬಿಟ್ಟರು. ಅನೇಕ ಸ್ತ್ರೀಯರು, "ಓ ಮೋಡಗಳೇ, ನೀವು ತಕ್ಷಣವೇ ಮಳೆಗರೆದು ಲಂಕಾಪುರವನ್ನು ತಣ್ಣಗೆ ಮಾಡಿ," ಎಂದು ಮೋಡಗಳನ್ನು ಪ್ರಾರ್ಥಿಸಿದರು.

ಇವರ ದುರ್ದೆಶೆಯನ್ನು ನೋಡಿ ಮಾಲ್ಯವಂತನು ತನ್ನೊಳಗೆ, "ಇದು ಬೆಂಕಿಯಲ್ಲ, ದೈವದ ಕ್ರೋಧಾಗ್ನಿ ಅಥವಾ ಜಾನಕಿಯ ನಿಟ್ಟುಸಿರು," ಎಂದು ಚಿಂತಿಸಿದನು. ಕೆಲವರು, "ಇದು ರಾವಣನ ಪಾಪಾಗ್ನಿ, ಲಂಕೆಯನ್ನು ಭಸ್ಮ ಮಾಡುತ್ತಿದೆ," ಎಂದುಕೊಂಡರು. ಕಪೀಶ್ವರನ ಶರೀರ ಮಹೋನ್ನತವಾಗಿದ್ದರೂ ಲೇಶವಾದರೂ ಶ್ರಮವಿಲ್ಲದೆ ಅವನು ಮನೆಯಿಂದ ಮನೆಗೆ ಹಾರುತ್ತಿದ್ದನು. ನಗರದಲ್ಲೆಲ್ಲಾ ಜ್ವಾಲೆಯ ಚಿಟಚಿಟ ಶಬ್ದ ಗಗನ ಮುಟ್ಟುತ್ತಿತ್ತು. ಈ ವಾರ್ತೆ ಸೀತೆಯ ಕಿವಿಮುಟ್ಟಿತು. ಅವಳು ತಲೆಯೆತ್ತಿ ಲಂಕೆಯತ್ತ ನೋಡಿದಳು. ಆಕಾಶವೆಲ್ಲಾ ಹೊಗೆಯಿಂದ ಕಪ್ಪಿಟ್ಟಿತ್ತು. ಬೆಂಕಿಯ ತಾಪದಿಂದ ಅಶೋಕವನವೂ ಬಿಸಿಯಾಯಿತು. ಸೀತೆಯು, "ಹನುಮಂತನು ನಿಜವಾಗಿಯೂ ರಾಮನ ಪರಮ ಭಕ್ತ. ಅವನನ್ನು ರಕ್ಷಿಸು," ಎಂದು ಅಗ್ನಿಯನ್ನು ಪ್ರಾರ್ಥಿಸಿದಳು. ಅವಳ ಸಂಕಲ್ಪ ಪವಿತ್ರವಾದುದು. ಆದ್ದರಿಂದ, ತಕ್ಷಣವೇ ಅಗ್ನಿಯು ಹನುಮಂತನಿಗೆ ಸುಡದಂತೆ ಶೀತಲವಾದನು. ದೊಡ್ಡವರ ಮಾತನ್ನು ಧಿಕ್ಕರಿಸಿದ್ದಕ್ಕಾಗಿ, ದೂತನ ಮಾತನ್ನು ಕಡೆಗಣಿಸಿದ್ದಕ್ಕಾಗಿ ರಾವಣನು ಅದರ ಫಲವನ್ನು ಅನುಭವಿಸಿದನು. ರೆಪ್ಪೆಯಾಡಿಸುವುದರೊಳಗಾಗಿ ನಗರವೆಲ್ಲಾ ಭಸ್ಮವಾಯಿತು. ನಿದ್ರಿಸುತ್ತಿದ್ದ ಕುಂಭಕರ್ಣನ ಮತ್ತು ಪರಮ ಭಕ್ತನಾದ ವಿಭಿಷಣನ ಮನೆಯನ್ನು ಬಿಟ್ಟು, ಎಲ್ಲ ಮನೆಗಳೂ ನೆಲಸಮವಾದುವು. ಹನುಮಂತನು ಲಂಕೆಯನ್ನು ಪೂರ್ತಿಯಾಗಿ ಭಸ್ಮ ಮಾಡಿ ಒಂದು ಸಾರಿ ಜಿಗಿದು ಸಮುದ್ರದಲ್ಲಿ ಮುಳುಗಿ, ತನ್ನ ಬಾಲದ ಬೆಂಕಿಯನ್ನು ಆರಿಸಿಕೊಂಡನು. ಒಂದು ಮರಿ ಕೋತಿಯ ರೂಪ ಧರಿಸಿ, ಸೀತೆಯ ಬಳಿಗೆ ಬಂದು ಅವಳಿಗೆ ನಮಸ್ಕರಿಸಿದನು. "ತಾಯೀ!

ನಿಮ್ಮ ಅಪ್ಪಣೆ ಪ್ರಕಾರ ನಿಮ್ಮ ಕ್ಷೇಮ ಸಮಾಚಾರವನ್ನು ರಾಮನಿಗೆ ಬಿನ್ನವಿಸುತ್ತೇನೆ. ನಿಮ್ಮನ್ನು ನೋಡಿದ್ದಕ್ಕೆ ಸಾಕ್ಷಿಯಾಗಿ ಏನಾದರೊಂದು ಕುರುಹನ್ನು ದಯಪಾಲಿಸಿದರೆ ನಾನು ಧನ್ಯನಾಗುವೆ," ಎಂದು ಪ್ರಾರ್ಥಿಸಿದನು.

ಸೀತೆಯು ಸ್ವಲ್ಪ ಹೊತ್ತು ಯೋಚಿಸಿ, ಚೂಡಾಮಣಿಯನ್ನು ತೆಗೆದು ಹನುಮನ ಕೈಯಲ್ಲಿಟ್ಟಳು. ಹನುಮಂತನು ಅದನ್ನು ಕಣ್ಣಿಗೊತ್ತಿಕೊಂಡು ಸಂತೋಷಭರಿತನಾಗಿ ಸೀತೆಗೆ ನಮಸ್ಕರಿಸಿದನು. ಸೀತೆಯು ಹನುಮಂತನನ್ನು ಆಶೀರ್ವದಿಸಿ, "ರಾವಣನು ನನಗೆ ಕೊಡುತ್ತಿರುವ ಹಿಂಸೆಯನ್ನೆಲ್ಲಾ ನೀನು ಪ್ರತ್ಯಕ್ಷವಾಗಿ ನೋಡಿದ್ದೀಯೆ. ಆದ್ದರಿಂದ ನಾನು ಪ್ರತ್ಯೇಕವಾಗಿ ಏನನ್ನೂ ಹೇಳಬೇಕಾಗಿಲ್ಲ. ಸ್ವಾಮಿ ತ್ವರೆಯಿಂದ ಬಂದು ನನಗೆ ದರ್ಶನ ಕೊಡಬೇಕೆಂದು ಪುನಃ ಪುನಃ ನಾನು ಪ್ರಾರ್ಥಿಸಿದೆನೆಂದು ಹೇಳು. ಒಂದು ತಿಂಗಳು ದಾಟುವ ಮೊದಲೇ ಲಕ್ಷ್ಮಣ ಸಮೇತನಾಗಿ ಲಂಕೆಯನ್ನು ಮುಟ್ಟಬೇಕೆಂದು ತಿಳಿಸು. ಮಾರುತೀ! ಈ ಮೂರು ದಿನ ನಿನ್ನನ್ನು ನೋಡಿ ಎಲ್ಲವನ್ನೂ ಮರೆತು, ರಾಮ ವಾರ್ತೆಯನ್ನು ಕೇಳಿ ಎಷ್ಟೋ ಆನಂದವಾಗಿದ್ದೆ. ನನ್ನ ಹೃದಯ ತಣಿದಿತ್ತು. ನೀನು ಹೋದ ಮೇಲೆ ನಾನು ಹೇಗೆ ಹಗಲು ರಾತ್ರಿಗಳನ್ನು ಕಳೆಯುತ್ತೇನೋ ತಿಳಿಯದು; ನೀರಿಲ್ಲದ ಮೀನಿನಂತೆ ಸ್ವಾಮಿಯ ದರ್ಶನವಿಲ್ಲದೆ ಪರಿತಪಿಸುತ್ತಿರುವ ನನ್ನ ಬಾಧೆ ರಾಮನಿಗೇ ಗೊತ್ತು. ಸರ್ವಜ್ಞನಾದ ನನ್ನ ರಾಮನು ಕ್ಷಣ ಕ್ಷಣವೂ ನನ್ನನ್ನು ನೋಡುತ್ತಲೇ ಇದ್ದಾನೆ. ಆದರೆ, ನಾನು ಸ್ವಾಮಿಯ ನೇತ್ರಾರವಿಂದಗಳನ್ನು ಎಂದು ನೋಡುವೆನೋ," ಎಂದು ದುಃಖಿಸಿದಳು. ಹನುಮಂತನು ಅವಳಿಗೆ ಧೈರ್ಯದ ಮಾತುಗಳನ್ನು ಹೇಳಿದನು. ಮತ್ತೆ ಮತ್ತೆ ಜಾನಕಿಯ ಚರಣಗಳಿಗೆ ನಮಸ್ಕರಿಸಿ, ಹೊರಟನು. ಅಶೋಕವನವನ್ನು ಬಿಡುವ ಮೊದಲು ಹನುಮಂತನು ಒಮ್ಮೆ ಸಿಂಹನಾದ ಮಾಡಿದನು. ಆ ಗರ್ಜನೆಯನ್ನು ಕೇಳಿ ರಾಕ್ಷಸರು, ಸ್ತ್ರೀಯರು, ಶಿಶುಗಳು ತತ್ತರಿಸಿದರು. ಹನುಮಂತನು ವಿಳಂಬ ಮಾಡಲಿಚ್ಛಿಸದೆ, ಕ್ಷಣದಲ್ಲಿ ಸಮುದ್ರ ತೀರವನ್ನು ಸೇರಿ ರಾಮನನ್ನು ಧ್ಯಾನಿಸಿ ಒಂದು ಸಾರಿ ಜಿಗಿದನು.

ಆ ದಿನ ಕಾರ್ತಿಕ ಶುದ್ಧ ಪೌರ್ಣಮಿ. ಚಂದ್ರನು ಹೃದಯವನ್ನು ಆಹ್ಲಾದಗೊಳಿಸುತ್ತಿರಲು, ಹನುಮಂತನು ರಾಮನನ್ನು ಸ್ಮರಿಸುತ್ತಾ ಸಮುದ್ರವನ್ನು ದಾಟಿದನು. ಹಿಂದಿರುಗಿ ಬರುತ್ತಿದ್ದ ಹನುಮಂತನನ್ನು ದೂರದಿಂದಲೇ ನೋಡಿ ವಾನರರು ಹಿಗ್ಗಿದರು. ಅವರ ಮುಖಗಳು ಅರಳಿದವು. ಶರೀರಗಳು ಕಾಂತಿಯಿಂದ ತುಂಬಿದುವು. ರಾಮಕಾರ್ಯವನ್ನು ಸಾಧಿಸಿದೆವೆಂದು ಉಬ್ಬಿದರು. ನಿರಾಶೆಯಿಂದ ಒಣಗಿ ಹೋಗಿದ್ದ ಅವರ ಹೃದಯಗಳು ಚಿಗುರತೊಡಗಿದವು. ಹಿಂತಿರುಗಿ ಬರುತ್ತಿದ್ದ ಹನುಮಂತನನ್ನು ಆಲಂಗಿಸಲು ಎಲ್ಲರೂ ಓಡುತ್ತಾ ಸಮುದ್ರ ತೀರಕ್ಕೆ ಹೋದರು.

ಹನುಮಂತನು ದಡವನ್ನು ಸೇರುತ್ತಲೇ ಲಂಕಾನಗರದ ವೃತ್ತಾಂತ, ಸೀತೆಯ ಕ್ಷೇಮ ಸಮಾಚಾರಗಳನ್ನು ಆತುರಾತುರವಾಗಿ ವಿಚಾರಿಸತೊಡಗಿದರು. ಹನುಮಂತನು ಸೀತೆಯ ಯೋಗಕ್ಷೇಮ, ಲಂಕೆಯ ಸ್ಥಿತಿಗತಿಗಳನ್ನು ಸಂತೋಷದಿಂದ ಹೇಳ ತೊಡಗಿದನು. ಎಲ್ಲರೂ ಪಂಪಾಪುರಕ್ಕೆ ಹೊರಟರು. ದಾರಿಯಲ್ಲಿ ಸುಗ್ರೀವನ ಮಧುವನವನ್ನು ಪ್ರವೇಶಿಸಿ ಅದರಲ್ಲಿದ್ದ ಹಣ್ಣುಗಳನ್ನು ತಿಂದರು.

ವನ ರಕ್ಷಕರು ವಾನರರನ್ನು ತಡೆದರಾದರೂ ಅವರು ಕೇಳಲಿಲ್ಲ. ಕಾವಲು ಗಾರರು ಓಡಿ ಹೋಗಿ ಸುಗ್ರೀವನಿಗೆ ಸಮಾಚಾರ ತಿಳಿಸಿದರು. ಅದನ್ನು ಕೇಳಿ, ಅವರು ರಾಮಕಾರ್ಯವನ್ನು ಸಾಧಿಸಿದ್ದಾರೆಂದು ಗ್ರಹಿಸಿದನು. "ಜಾನಕಿಯನ್ನು ನೋಡದೆ ಅವರು ಹಣ್ಣುಗಳನ್ನು ತಿನ್ನುವವರಲ್ಲ, ಮಧುವನ ಪ್ರವೇಶಿಸುವವರಲ್ಲ. ಆದ್ದರಿಂದ, ಇದು ಆನಂದೋತ್ಸವ. ಚಿಂತಿಸಬೇಡಿ, ಹೋಗಿ," ಎಂದು ಕಾವಲು ಗಾರರನ್ನು ಹಿಂದಕ್ಕೆ ಕಳಿಸಿದನು. ಅಷ್ಟರಲ್ಲಿ, ವಾನರರು ಬಂದು ರಾಜನ ಪಾದಗಳಿಗೆ ನಮಸ್ಕರಿಸಿದರು. ಸುಗ್ರೀವನು, "ವಾನರರೇ! ನಿಮ್ಮ ಸಾಹಸ ಫಲಿಸಿತೆಂದು ಭಾವಿಸು ತ್ತೇನೆ," ಎಂದು ಮುಗುಳ್ನಕ್ಕನು. ವಾನರರು, "ನಾಥಾ! ನಿಮ್ಮ ಕೃಪಾಕಟಾಕ್ಷದಿಂದ ಕಾರ್ಯವನ್ನು ಸಾಧಿಸಿದೆವು. ಮಹಾವೀರನಾದ ಮಾರುತಿಯೇ ಈ ಕಾರ್ಯವನ್ನು ಸಾಧಿಸಿದವನು. ಅವನೇ ನಮ್ಮ ಪ್ರಾಣಗಳನ್ನು ಉಳಿಸಿದ್ದು. ಈಗ ನಾವಿಲ್ಲಿ ಜೀವ ಸಹಿತ ನಿಮ್ಮ ಮುಂದೆ ನಿಂತು ಮಾತನಾಡುತ್ತಿದ್ದೇವೆಂದರೆ, ಇದಕ್ಕೆ ಹನುಮಂತನೇ ಕಾರಣ," ಎಂದು, ಲಂಕೆಯ ವಾರ್ತೆಯನ್ನೂ ಸೀತೆಯ ಯೋಗಕ್ಷೇಮವನ್ನೂ ಸುಗ್ರೀವನಿಗೆ ಬಿನ್ನವಿಸಿದರು. ಈ ಶುಭ ವಾರ್ತೆಯನ್ನೂ ಕೇಳಿ ಸುಗ್ರೀವನು, "ಇನ್ನು ನಾವು ಕಾಲಹರಣ ಮಾಡ ಕೂಡದು," ಎನ್ನುತ್ತಾ ತಟ್ಟನೆ ಎದ್ದು, ಅವರೊಂದಿಗೆ ರಾಮನ ಬಳಿಗೆ ಹೊರಟನು.

ಕಾರ್ಯ ಸಾಧಿಸಿಕೊಂಡು ಬರುತ್ತಿದ್ದ ಅವರನ್ನು ರಾಮಲಕ್ಷ್ಮಣರು ಒಂದು ದೊಡ್ಡ ಬಂಡೆಗಲ್ಲಿನ ಮೇಲೆ ಕುಳಿತು ನೋಡುತ್ತಿದ್ದರು. ವಾನರರು ಓಡೋಡಿ ಬಂದು ರಾಮನ ಪಾದಗಳ ಮೇಲೆ ಬಿದ್ದರು. ರಾಮನು ಮೊದಲು ಅವರ ಯೋಗಕ್ಷೇಮ ವಿಚಾರಿಸಿದನು. ನಂತರ, ಜಾಂಬವಂತನು ಎದ್ದು ನಿಂತು ರಾಮನನ್ನು ಕುರಿತು, "ಓ ನಾಥಾ! ನಿಮ್ಮ ಕೃಪೆ ಇದ್ದವನೇ ಧನ್ಯನು, ಅವನೇ ವಿಜಯಿ, ಅವನೇ ಸಕಲಗುಣ ಸಂಪನ್ನ. ಅವನ ಕೀರ್ತಿ ಮೂರು ಲೋಕಗಳಲ್ಲೂ ವ್ಯಾಪಿಸುವುದು," ಎಂದು ಹೇಳಿ, ಹನುಮಂತನನ್ನು ಅನೇಕ ವಿಧವಾಗಿ ವರ್ಣಿಸಿದನು. ಹನುಮಂತನು ರಾಮನಿಗೆ ನಮಸ್ಕರಿಸಿ, ಲಂಕೆಯ ವೃತ್ತಾಂತವನ್ನೆಲ್ಲಾ ವಿವರವಾಗಿ ತಿಳಿಸಿದನು. ಸೀತೆಯ ಯೋಗಕ್ಷೇಮವನ್ನು ಆನಂದಬಾಷ್ಪಗಳಿಂದ ತಿಳಿಸುತ್ತಾ ಬಹು ಭದ್ರವಾಗಿ ಇಟ್ಟುಕೊಂಡು ತಂದ ಚೂಡಾಮಣಿಯನ್ನು ರಾಮನ ಹಸ್ತದಲ್ಲಿರಿಸಿದನು. ರಾಮನು

ಹನುಮಂತನನ್ನು ಆಲಂಗಿಸಿಕೊಂಡು, "ವಾಯುಪುತ್ರಾ! ಜಾನಕಿಯ ಯೋಗ ಕ್ಷೇಮವನ್ನು ಮತ್ತಷ್ಟು ವಿವರಿಸಿ ಹೇಳು," ಎಂದನು.

ಹನುಮಂತನು "ಪ್ರಾಣನಾಥಾ! ತ್ರಿಕೂಟ ಪರ್ವತದ ಮೇಲಿರುವ ಲಂಕಾ ನಗರವನ್ನು, ಅದರ ಸೌಂದರ್ಯವನ್ನು ವಿವರಿಸಲು ಸಾಧ್ಯವಿಲ್ಲ. ನಾಥಾ! ಸೀತಾದೇವಿ ಅಸ್ಥಿಪಂಜರವಾಗಿದ್ದಾಳೆ. ನಿಮ್ಮ ದರ್ಶನಕ್ಕಾಗಿ ಕ್ಷಣ ಕ್ಷಣವನ್ನೂ ಎಣಿಸುತ್ತಿದ್ದಾಳೆ. ಕ್ಷಣಕ್ಷಣವೂ ನಿಮ್ಮ ನಾಮವೊಂದಲ್ಲದೆ ಅನ್ಯ ಚಿಂತೆ ಅವಳಿಗಿಲ್ಲ. ಹೊಟ್ಟೆಗೆ ಆಹಾರವಾಗಲೀ ಕಣ್ಣಿಗೆ ನಿದ್ರೆಯಾಗಲೀ ಅವಳಿಗಿಲ್ಲ. ಅವಳು ಮತ್ತೆ ಮತ್ತೆ ನಿಮಗೆ ನಮಸ್ಕಾರಗಳನ್ನು ತಿಳಿಸಿದಳು, ಲಕ್ಷ್ಮಣನನ್ನು ಸ್ಮರಿಸಿದಳು, ಕಣ್ಣೀರು ಹಾಕಿದಳು. ಅವಳ ಸ್ಥಿತಿ ನನ್ನ ಹೃದಯವನ್ನು ದಹಿಸಿತು. ಪ್ರತಿದಿನವೂ ಬೆಳಗ್ಗೆ ಮತ್ತು ಸಂಜೆ ರಾವಣನು ಬಂದು ಅವಳಿಗೆ ಹೇಳುತ್ತಿದ್ದ ಶೂಲದಂಥ ಮಾತುಗಳನ್ನು ಕಿವಿಯಾರ ಕೇಳಿದೆ. ಆ ತಾಯಿಯಾದರೋ ಯಾವುದನ್ನೂ ಲೆಕ್ಕಿಸದೆ, ನಿಮ್ಮ ಚಿಂತೆಯಲ್ಲೇ ಸೊರಗುತ್ತಿದ್ದಾಳೆ," ಎಂದನು. ರಾವಣನು ಸೀತೆಗೆ ಹೇಳಿದ್ದ ಮಾತುಗಳನ್ನು ತಿಳಿಸಿದನು. "ತಕ್ಷಣವೇ ಹೋಗಿ ಕಾಪಾಡಿ," ಎಂದು ರಾಮನ ಪಾದಗಳ ಮೇಲೆ ಬಿದ್ದು ಪ್ರಾರ್ಥಿಸಿದನು. ಅವನ ಮಾತುಗಳನ್ನು ಕೇಳುತ್ತಿದ್ದ ಲಕ್ಷ್ಮಣನು ಒಂದು ಕಡೆ ಉಗ್ರವಾಗಿ ಮತ್ತೊಂದು ಕಡೆ ಕಣ್ಣೀರು ಸುರಿಸುತ್ತಾ, "ಅಣ್ಣಾ, ಆಲಸ್ಯ ಮಾಡದೆ ಅತ್ತಿಗೆಯನ್ನು ರಕ್ಷಿಸು," ಎಂದು ಪ್ರಾರ್ಥಿಸಿದನು.

ರಾಮನು ಮುಗುಳ್ನಗುತ್ತಾ, "ಲಕ್ಷ್ಮಣಾ! ದುಃಖಿಸಬೇಡ. ಎಲ್ಲವುದಕ್ಕೂ ಕಾಲ ಪ್ರಧಾನವಾದುದು. ದುಃಖಕ್ಕೆ ಕುಗ್ಗದೆ, ಸುಖಕ್ಕೆ ಹಿಗ್ಗದಿರುವ ಸ್ಥಿತಿಯನ್ನು ಸದಾ ಹೊಂದಿರಬೇಕು," ಎಂದು ಲಕ್ಷ್ಮಣನನ್ನು ಸಮಾಧಾನಪಡಿಸಿದನು. ಹನುಮಂತನನ್ನು ಹತ್ತಿರ ಕರೆದು, "ವಾನರಾ! ಬಾ ಇಲ್ಲಿ. ನನ್ನ ಹತ್ತಿರ ಕುಳಿತುಕೊ," ಎಂದು ಕಪೀಶ್ವರನನ್ನು ತನ್ನ ಪಾದಗಳ ಬಳಿ ಕೂರಿಸಿಕೊಂಡು. "ಹನುಮಾನ್! ರಾವಣನ ಪ್ರಭುತ್ವ ಹೇಗಿದೆ? ನೀನು ಲಂಕೆಯನ್ನು ದಹಿಸಿದ್ದು ಹೇಗೆ?" ಎಂದು ಕೇಳಿದನು. ಆ ಮಹಾವೀರನು, "ನಾಥ! ನೀವು ಸರ್ವಜ್ಞರು. ವಾನರರಾದ ನಮಗೆಲ್ಲಿ ಬಲವಿದೆ. ನಾವು ಕೇವಲ ಶಾಖಾಹಾರಿಗಳು. ಮರದ ಕೊಂಬೆಗಳನ್ನು ಮಾತ್ರ ಹಾರಬಲ್ಲೆವು. ಸಮುದ್ರವನ್ನು ಹಾರುವುದು, ರಾಕ್ಷಸರನ್ನು ಸಂಹರಿಸುವುದು, ನಗರವನ್ನು ದಹಿಸುವುದು, ಈ ಮೊದಲಾದ ಕಾರ್ಯಗಳು ನಿಮ್ಮ ಪ್ರತಾಪದಿಂದಲೇ ಸಂಭವಿಸಿದವು. ನಿಮ್ಮ ನಾಮ ಮಹಿಮೆಯಿಂದಲೇ ನಾನು ಅವುಗಳನ್ನು ಮಾಡಿದೆ. ಇದರಲ್ಲಿ ನನ್ನ ಸಾಮರ್ಥ್ಯ ಸೊನ್ನೆ. ನಿಮ್ಮ ಮುದ್ರೆಯುಂಗುರ ನನ್ನ ಬಳಿ ರಕ್ಷೆಯಾಗಿದ್ದು ನನ್ನನ್ನು ರಕ್ಷಿಸಿತೇ ವಿನಾ ನನ್ನ ಬಲವಲ್ಲ. ಸ್ವಾಮೀ! ನಿಮ್ಮ ಮುದ್ರೆಯುಂಗುರವನ್ನು ನೋಡಿ ತಾಯಿ ಎಷ್ಟು ಆನಂದಿಸಿದಳೋ! ಇದು ಕನಸೋ ಅಥವಾ

ನಿಜವಾಗಿಯೂ ನನ್ನ ರಾಮನು ಕಳಿಸಿದ್ದೋ ಎಂದು ಸಂಶಯಪಟ್ಟಳು. ನೀವೇ ಕಳಿಸಿದ್ದೆಂದು ತಿಳಿದು ಸಮಾಧಾನಗೊಂಡಳು. ಅವಳ ಶೋಕಾಗ್ನಿಯೇ ಲಂಕೆಯನ್ನು ದಹಿಸಿತಲ್ಲದೆ, ಈ ವಾನರನಲ್ಲ. ನನ್ನನ್ನು ಒಂದು ನಿಮಿತ್ತ ಮಾತ್ರವಾಗಿ ನೀವು ಕಳಿಸಿ, ನನ್ನಿಂದ ಇಂಥ ಘನಕಾರ್ಯ ಮಾಡಿಸಿದಿರಿ. ಇದು ಭಕ್ತವತ್ಸಲನ ಪರಮಾನುಗ್ರಹವೇ ವಿನಾ ಬೇರೆ ಅಲ್ಲ. ರಾಮಾ! ನಿಮ್ಮ ಕಟಾಕ್ಷವಿದ್ದರೆ ದುಸ್ಸಾಧ್ಯವಾದುದು ಇಲ್ಲ," ಎಂದು ನಿಗರ್ವದಿಂದ ಆಡಿದ ಹನುಮಂತನ ಮಾತುಗಳಿಗೆ ರಾಮಚಂದ್ರನು ಆನಂದಿಸಿ, "ಸೋದರಾ! ವಿಳಂಬ ಮಾಡದೆ ಸಮರ ಸಿದ್ಧತೆ ಮಾಡು," ಎಂದು ಲಕ್ಷ್ಮಣನಿಗೆ ಆಜ್ಞಾಪಿಸಿದನು. ಜಾಂಬವಂತ, ಸುಗ್ರೀವ ಮೊದಲಾದ ವಾನರರ ಸಮರ ಸನ್ನಾಹವನ್ನು ನೋಡಿ ದೇವತೆಗಳು ಸಂತೋಷಿಸಿದರು. ವಾನರ ಯೋಧರು ರಾಮನ ಚರಣ ಕಮಲಗಳಿಗೆ ನಮಸ್ಕರಿಸಿ ಸಿಂಹನಾದ ಮಾಡಿದರು.

ರಾಮನು ವಾನರರನ್ನು ಕೃಪಾಕಟಾಕ್ಷದಿಂದ ನೋಡಿ ಆದರಿಸಿ, ಆಶೀರ್ವದಿಸಿದನು. ಪರ್ವತಗಳಿಗೆ ರೆಕ್ಕೆ ಬಂದಿತೇನೋ ಎನ್ನುವಂತೆ ವಾನರರು ಬಲವಂತರಾಗಿ ವಿಜೃಂಭಿಸಿ ಪ್ರಯಾಣ ಮಾಡಿದರು. ಅವರು ಹೊರಟೊಡನೆ ಅನೇಕ ಶುಭ ಶಕುನಗಳು ಕಾಣಿಸಿದವು. ಅಶೋಕವನದಲ್ಲಿದ್ದ ಜಾನಕಿಯ ಮನಸ್ಸಿನಲ್ಲಿ ಆ ಸಮಯದಲ್ಲಿ ಒಂದು ವಿಧವಾದ ಶುಭ ಭಾವನೆ ಉಂಟಾಯಿತು. ಅವಳಿಗೆ ಅನೇಕ ಶುಭಶಕುನಗಳಾದವು. ರಾವಣನಿಗೆ ಅಶುಭಗಳು ಕಾಣಿಸಿಕೊಂಡವು. ಜಾಂಬವಂತಾದಿಗಳು ಪರ್ವತಗಳನ್ನು ವೃಕ್ಷಗಳನ್ನು ಆಯುಧಗಳನ್ನಾಗಿ ಧರಿಸಿ ಸ್ವೇಚ್ಛೆಯಾಗಿ ಕೇಕೆ ಹಾಕುತ್ತಾ ಭೂಮಿ ತತ್ತರಿಸುವಂತೆ ಆರ್ಭಟಿಸುತ್ತಾ ಹೊರಟರು. ಮಧ್ಯೆ ರಾಮಚಂದ್ರ ಪ್ರಭುವಿಗೆ ಜೈ ಜೈಕಾರ ಮಾಡುತ್ತಾ ಮುಂದುವರಿದರು. ಅತ್ತ ಲಂಕೆಯಲ್ಲಿ ಎಲ್ಲ ರಾಕ್ಷಸರೂ ಯೋಚಿಸುತ್ತಾ ಮುಂದೆ ಇನ್ನೆಂಥ ದುರಂತಗಳು ಸಂಭವಿಸುವುವೋ ಎಂದು ಕೊರಗಿದರು. ರಾಕ್ಷಸ ವಂಶಕ್ಕೆ ವಿನಾಶ ಹತ್ತಿರವಾಯಿತೆಂದು ದೃಢ ಮಾಡಿಕೊಂಡರು. ರಾಮದೂತನಾದ ವಾನರನು ನಗರಕ್ಕೆ ಬಂದು ಇಷ್ಟು ಅನರ್ಥ ಮಾಡಿದನಲ್ಲಾ, ಇನ್ನು ಅವನ ಪ್ರಭುವೇ ಬಂದರೆ ಅದೆಷ್ಟು ಅನರ್ಥವಾಗುವುದೋ! ಇಂತಹವನು ದೂತನಾಗಿರುವಾಗ ಇನ್ನು ಪ್ರಭುವೆಂತಹವನೋ ಎಂದು ರಾಕ್ಷಸರು ಅಲ್ಲಲ್ಲಿ ಗುಂಪು ಗುಂಪಾಗಿ ಸೇರಿ ಮಾತನಾಡಿಕೊಳ್ಳುತ್ತಿದ್ದರು.

**ಮಂಡೋದರಿಯ ವ್ಯಾಕುಲತೆ**: ಅವರ ಮಾತುಗಳನ್ನು ಗೂಢಚಾರಿಣಿಯರು ಕೇಳಿ ಮಂಡೋದರಿಗೆ ತಿಳಿಸಿದರು. ಅವಳ ಮನಸ್ಸು ವ್ಯಾಕುಲಗೊಂಡಿತು. ಇದು ನಿಜವೆನ್ನುವುದು ಅವಳಿಗೂ ಅರ್ಥವಾಯಿತು. ತನ್ನ ಪತಿ ಏಕಾಂತದಲ್ಲಿ ಉಲ್ಲಾಸ

ವಾಗಿರುವ ಸಮಯವನ್ನು ನೋಡಿ, ಅವಳು ಕೈ ಜೋಡಿಸಿಕೊಂಡು, "ನಾಥಾ! ಸರ್ವಜ್ಞನೊಂದಿಗೆ ವಿರೋಧ ಬೇಡ. ರಾಮನು ಸಾಮಾನ್ಯ ಮಾನವನಲ್ಲವೆಂದು ಅನೇಕ ಬಾರಿ ಹೇಳಿದ್ದೀರಿ. ಶೂರ್ಪಣಖಿಯ ಕಿವಿ ಮೂಗು ಕೊಯ್ದಾಗಲೇ ನಿಮ್ಮ ಸೈನ್ಯ ಏನೂ ಮಾಡಲಾರದೆ ಹೋಯಿತು. ಕೇವಲ ರಾಮಲಕ್ಷ್ಮಣರಿಬ್ಬರನ್ನು ಲಕ್ಷಾದಿ ರಾಕ್ಷಸರು ಕದಲಿಸಲಾರದೆ ಹೋದರು. ಈಗ ಮಹಾ ಬಲಶಾಲಿಗಳಾದ ವಾನರ ವೀರರು ಅವರೊಂದಿಗಿರುವಾಗ ನಮ್ಮ ರಾಕ್ಷಸರು ಏನು ತಾನೆ ಮಾಡಿಯಾರು? ದೂತನೇ ಇಷ್ಟೊಂದು ಕೆಲಸ ಮಾಡಿರುವಾಗ, ಇನ್ನು ಲಕ್ಷಗಟ್ಟಲೆ ವಾನರರು ಏನು ಬೇಕಾದರೂ ಮಾಡಿಯಾರು. ಆದ್ದರಿಂದ, ನನ್ನ ಪ್ರಾರ್ಥನೆಯನ್ನು ಮನ್ನಿಸಿ, ಮಂತ್ರಿಯ ಸಹಾಯದಿಂದ, ಇಲ್ಲವೆ ನಿಮ್ಮ ತಮ್ಮನಾದ ವಿಭೀಷಣನ ಸಹಾಯ ದಿಂದ, ರಾಮನ ಪತ್ನಿಯನ್ನು ಕಳಿಸಿಕೊಡಿ. ಜಾನಕಿ ಸಾಮಾನ್ಯ ಸ್ತ್ರೀಯಲ್ಲ. ಮಹಾ ಪತಿವ್ರತೆ, ದಿವ್ಯಶಕ್ತಿ ಸ್ವರೂಪಿಣಿ. ಅಂಥವಳನ್ನು ಹಿಂಸಿಸುವುದು ನಿಮಗೆ ಒಳ್ಳೆಯದಲ್ಲ.

ನನ್ನ ಮಾತು ಕೇಳಿ ಸೀತೆಯನ್ನು ರಾಮನಿಗೊಪ್ಪಿಸಿ. ನಿಮಗೂ ನಿಮ್ಮ ರಾಕ್ಷಸ ಜಾತಿಗೂ ಶುಭವಾಗುವುದು. ಸರ್ಪಗಳು ಕಪ್ಪೆಯನ್ನು ನುಂಗುವಂತೆ ರಾಮ ಬಾಣಗಳು ರಾಕ್ಷಸರನ್ನು ನುಂಗುವುದು. ನಿಮ್ಮ ಮೊಂಡಾಟ, ಅಹಂಕಾರಗಳನ್ನು ಬಿಟ್ಟು, ಸೀತೆಯನ್ನು ರಾಮನಿಗರ್ಪಿಸಿ, ಅವನೊಂದಿಗೆ ಬೇಗ ಸಂಧಿ ಮಾಡಿ ಕೊಳ್ಳಿ," ಎಂದು ಪಾದಗಳನ್ನು ಹಿಡಿದು ಪ್ರಾರ್ಥಿಸಿದಳು. ಮೂರ್ಖ ರಾವಣನು ಫಕ್ಕನೆ ನಕ್ಕು, "ಛೆ! ಅಬಲ ಸ್ತ್ರೀಯರು ಸಹಜವಾಗಿಯೇ ಭಯ ಸ್ವಭಾವದವರು. ಅವರ ಮಾತುಗಳಿಂದ ಶುಭಗಳು ಅಶುಭಗಳಾಗುವುವು. ವಾನರರು ನಮ್ಮ ತಂಟೆಗೆ ಬಂದರೆ ನಮ್ಮ ರಾಕ್ಷಸರು ಅವರನ್ನು ನುಂಗಿಹಾಕದೆ ಬಿಡುವರೆ? ನನ್ನ ಹೆಸರು ಕೇಳಿದಾಕ್ಷಣ ದೇವತೆಗಳೇ ಗಡಗಡ ನಡುಗುವಾಗ, ನಿನಗೇಕಿಷ್ಟು ಭಯ? ಒಳಗೆ ಹೋಗು," ಎಂದು ಗರ್ಜಿಸಿದನು. ಅಲ್ಲಿಂದ ಹೊರಟು, ಮೂರ್ತೀಭವಿಸಿದ ದುರಭಿಮಾನದಿಂದ ರಾಜಸಭೆಯನ್ನು ಪ್ರವೇಶಿಸಿದನು. ಅವನು ಹೋದೊಡನೆ, ಇತ್ತ ಮಂಡೋದರಿಯು, "ಆಹಾ! ವಿಧಿ ವಿಲಾಸ ವಿಪರೀತವಾಗಿದೆ. ನನಗೇನು ದುರ್ಗತಿ ಬರುವುದೋ ಏನೋ? ನಾನೇನು ಮಾಡಬಲ್ಲೆ," ಎಂದು ಚಿಂತಿಸುತ್ತಾ, ಶಯನ ಗೃಹಕ್ಕೆ ಹೋಗಿ ಹಲವು ಬಗೆಯಾಗಿ ದುಃಖಿಸಿದಳು.

**ಮಂತ್ರಿಗಳಿಂದ ಸಲಹೆ**: ರಾಜಸಭೆಯನ್ನು ಪ್ರವೇಶಿಸಿದ ರಾವಣನು ಮಂತ್ರಿಗಳನ್ನು ಕರೆದು, "ರಾಮದೂತನು ಉಂಟು ಮಾಡಿದ ದುರ್ಗತಿ ನಿಮಗೆ ತಿಳಿದಿದೆ. ಇನ್ನು ಮುಂದೆ ಏನಾಗಲಿದೆಯೋ ಅದಕ್ಕೆ ನಾವೇನು ಮಾಡಬೇಕೋ, ಭಯ ಬಿಟ್ಟು ನಿಮ್ಮ ನಿಮ್ಮ ಅಭಿಪ್ರಾಯಗಳನ್ನು ತಿಳಿಸಿ," ಎಂದು ಹೇಳಿದನು. ಮಂತ್ರಿಗಳು ಒಬ್ಬರ

ಮುಖವನ್ನೊಬ್ಬರು ನೋಡುತ್ತಾ ನಕ್ಕು ಸುಮ್ಮನಾದರು. ಆ ದಿನ ಕುಂಭಕರ್ಣ ಎಚ್ಚರವಾಗಿದ್ದನು. ಸಭೆಯಲ್ಲಿದ್ದ ಅವನು, "ಆಹಾ! ಮೂರು ಲೋಕದಲ್ಲಿ ನನ್ನಂಥ ವರು ಇಲ್ಲ. ನನ್ನೆದುರು ನಿಲ್ಲಬಲ್ಲವರಾರಾದರೂ ಇದ್ದಾರೆಯೇ? ಛೀ, ಯಾವನೋ ಒಬ್ಬ ಸಣ್ಣ ವಾನರನು ಲಂಕೆಯನ್ನು ಪ್ರವೇಶಿಸಿ ಮನೆಗಳನ್ನು ಭಸ್ಮ ಮಾಡಿದರೆ ನೀವೆಲ್ಲಾ ಸುಮ್ಮನಿದ್ದಿರಾ? ಅವನನ್ನು ಹೇಗೆ ಬಿಟ್ಟಿರಿ?" ಎಂದು ಹಲ್ಲು ಕಡಿಯುತ್ತಾ ಮನೆಗೆ ಹೋದನು. ಅತಿಕಾಯನು ಎದ್ದು, "ರಾಜಾ! ನಿಮ್ಮ ಆಜ್ಞಾನುಸಾರವಾಗಿ ನಡೆಯುತ್ತೇವೆ. ನಿಮ್ಮ ಕಟಾಕ್ಷವಿದ್ದರೆ ಲೋಕದಲ್ಲಿ ಮನುಷ್ಯರನ್ನೂ ವಾನರರನ್ನೂ ನಿಶ್ಶೇಷವಾಗಿ ಸಂಹರಿಸುತ್ತೇವೆ. ಹೆಚ್ಚು ಮಾತೇಕೆ?" ಎಂದು ಹೂಂಕರಿಸಿದನು. ಮೇಘನಾದನು ಎದ್ದು, "ಮಹಾ ಪ್ರಭು! ನನ್ನ ಪ್ರತಾಪ ಲೋಕ ವಿಖ್ಯಾತವಾದುದು. ದೇವತೆಗಳೇ ನನ್ನ ಸ್ವಾಧೀನರಾಗಿದ್ದಾರೆ. ಅವರಿಗಿಂತ ಬಲಿಷ್ಠರು ಲೋಕದಲ್ಲೇ ಇಲ್ಲ ಅಲ್ಲವೇ? ಇನ್ನು ನರವಾನರರ ಮಾತೇಕೆ," ಎಂದು ಜಂಭಕೊಚ್ಚಿಕೊಂಡನು. ಹೀಗೆಯೇ, ಕುಂಭಕರ್ಣನ ಮಕ್ಕಳಾದ ಪಾಷಂಡರು, ಪೊಗರು, ಪೋತರು, ಶುಂಭ ನಿಶುಂಭರು ಮತ್ತು ಅಕಂಪ ಇತ್ಯಾದಿ ವೀರರು ಗರ್ಜಿಸಿದರು.

ಮಹೋದರನೆದ್ದು ತೋಡೆಗಳನ್ನು ತಟ್ಟಿ ಹಲ್ಲುಗಳನ್ನು ಕಟಕಟ ಕಡಿದನು. ಹೀಗೆ ಆ ಸಭೆಯಲ್ಲಿ ಒಬ್ಬರಾದ ಮೇಲೊಬ್ಬರು ಅವರವರ ಪ್ರತಾಪಗಳನ್ನೂ ಜಂಭವನ್ನೂ ಕೊಚ್ಚಿಕೊಂಡರು. ಒಳಗೊಳಗೇ ಭಯಪಡುತ್ತಾ ರಾವಣನನ್ನು ಪ್ರಸನ್ನಗೊಳಿಸಲು ಪ್ರತಾಪದ ಮಾತುಗಳನ್ನಾಡುತ್ತಿದ್ದರು. ಮಕರಾಕ್ಷನೆನ್ನುವವನು ಎದ್ದು, "ಸಾರ್ವ ಭೌಮಾ! ನಾನು ಬ್ರಾಹ್ಮಣ ವೇಷ ಧರಿಸಿ, ರಾಮಲಕ್ಷ್ಮಣರನ್ನು ಭೋಜನಕ್ಕೆ ಕರೆದು, ಅವರು ಮನೆಯನ್ನು ಪ್ರವೇಶಿಸಿದೊಡನೆಯೇ ಅವರನ್ನು ಗಟ್ಟಿಯಾಗಿ ಅವುಚಿ ಕೊಲ್ಲುತ್ತೇನೆ. ಈ ಉಪಾಯ ನಿಮಗೆ ಇಷ್ಟವಾದರೆ ನಾನು ಮಾಡುತ್ತೇನೆ," ಎಂದನು.

**ವಿಭೀಷಣನ ಹಿತ ಬೋಧೆ**: ಹೀಗೆ ಮಂತ್ರಿಗಳಾಡಿದ ಮಾತುಗಳು ರಾವಣನಿಗೆ ಹಿತವೆನಿಸಿತು. ಆ ವೇಳೆಗೆ ವಿಭೀಷಣನು ಸಭೆಯನ್ನು ಪ್ರವೇಶಿಸಿ, ರಾವಣನಿಗೆ ನಮಸ್ಕರಿಸಿ, ಆಸನದಲ್ಲಿ ಕುಳಿತನು. ರಾವಣನು ಅವನನ್ನು ನೋಡಿ, "ಸೋದರಾ! ಈ ನರ ವಾನರರ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು?" ಎಂದು ಕೇಳಿದನು. ವಿಭೀಷಣನು, "ಕೃಪಾಳೂ ನನಗೆ ತೋಚಿದಂತೆ ಹೇಳುತ್ತೇನೆ. ಸಾವಧಾನವಾಗಿ ಕೇಳಬೇಕೆಂದು ಕೋರುತ್ತೇನೆ. ನನ್ನನ್ನು ಕ್ಷಮಿಸಿ. ಓ ನಾಥಾ! ನೀವು ಸದ್ಗತಿಯನ್ನು ಸತ್ಕೀರ್ತಿಯನ್ನು ಶುಭವನ್ನು ಸುಖವನ್ನು ಬಯಸುವುದಾದರೆ, ಪರಸ್ತ್ರೀಯರ ಮುಖವನ್ನು ನೋಡಕೂಡದು. ಹದಿನಾಲ್ಕು ಲೋಕಗಳ ಅಧಿಪತಿಯನ್ನು ಒಬ್ಬ ಜೀವಿ ಎದುರಿಸಿ ಜೀವಿಸಬಲ್ಲನೆ? ಅಂಥವನಿಗೆ ಶುಭವೆಲ್ಲಿಯದು? ಎಷ್ಟು ಗು

ಣಗಳಿದ್ದರೂ ಲೋಭ ಗುಣದಿಂದ ಮನುಷ್ಯನಿಗೆ ಏಳಿಗೆಯಿಲ್ಲ. ರಾಜಾ! ಕಾಮ ಕ್ರೋಧಾದಿಗಳು ಅಧಮ ಮಾರ್ಗಕ್ಕೆ ದ್ವಾರಗಳು. ರಾಮನು ಸಾಮಾನ್ಯನಲ್ಲ. ಅವನು ಕಾಲನಿಗೆ ಕಾಲ, ಅನಾಮಯ, ಅಜ. ಅಂಥವನೊಂದಿಗೆ ವೈರವನ್ನು ಬಿಟ್ಟು ಅವನನ್ನು ಸೇವಿಸುವುದೊಳ್ಳೆಯದು. ಅವನ ಪತ್ನಿಯಾದ ಜಾನಕಿಯನ್ನು ಅವನಿಗೆ ಸಮರ್ಪಿಸಿ. ಅವನ ಕಟಾಕ್ಷವನ್ನು ಸಂಪಾದಿಸಿ. ನಿಮ್ಮ ಚರಣಗಳಿಗೆ ನಮಸ್ಕರಿಸಿ ಮತ್ತೆ ಮತ್ತೆ ಅದೇ ಬಿನ್ನವಿಸಿಕೊಳ್ಳುತ್ತೇನೆ," ಎಂದನು. ವಿಭೀಷಣನ ಮಾತಿಗೆ ಮಾಲ್ಯವಂತನೆನ್ನುವ ವೃದ್ಧ ಮಂತ್ರಿಯೂ ಸಮ್ಮತಿಸಿದನು. ಅವನೆದ್ದು, "ಓ ಮಹಾರಾಜಾ! ನಿಮ್ಮ ತಮ್ಮನಾಡಿದ ಮಾತುಗಳು ನೀತಿಯುಕ್ತವಾದವುಗಳು. ಅವುಗಳನ್ನು ನೀವು ಮನ್ನಿಸುವುದು ನಿಮಗೆ ಶ್ರೇಯಸ್ಸು," ಎಂದನು.

ಇವರ ಮಾತುಗಳನ್ನು ಕೇಳಿ ರಾವಣನು ಉಗ್ರನಾದನು. "ನೀವಿಬ್ಬರು ಮೂರ್ಖರು. ನಮ್ಮ ಪರಮ ಶತ್ರುವನ್ನು ಹೊಗಳುತ್ತಿದ್ದೀರಿ, ನೀವು ಈ ಸಭೆಯಲ್ಲಿರಲು ಯೋಗ್ಯರಲ್ಲ. ಇವರನ್ನು ಸಭೆಯಿಂದ ಹೊರದೂಡಿ," ಎಂದು ಆಜ್ಞಾಪಿಸಿದನು. ಮಾಲ್ಯವಂತನು ತಟ್ಟನೆ ಎದ್ದು ಮನೆಗೆ ಹೊರಟನು. ವಿಭೀಷಣನು ಅಣ್ಣನಿಗೆ ನಮಸ್ಕರಿಸಿ, ಕೈ ಜೋಡಿಸಿಕೊಂಡು, "ರಾಜಾ! ಪ್ರತಿ ಮನುಷ್ಯನ ಹೃದಯದಲ್ಲೂ ಸುಮತಿಯೂ ಕುಮತಿಯೂ ಎರಡೂ ವಾಸವಾಗಿರುವುದೆಂದು ವೇದಶಾಸ್ತ್ರಗಳು ಹೇಳುತ್ತವೆ. ಕುಮತಿ ಇದ್ದರೆ ಸಕಲ ವಿಪತ್ತುಗಳೂ ಉಂಟಾಗುವುವು. ನಿಮ್ಮ ಹೃದಯದಲ್ಲಿ ಕುಮತಿ ಇದೆ. ಆದ್ದರಿಂದ ಒಳ್ಳೆಯ ಮಾತು ಹೇಳಿದವರನ್ನು, ಹಿತ ಕೋರಿದವರನ್ನು ನೀವು ಶತ್ರುಗಳೆಂದು ಭಾವಿಸುತ್ತೀರಿ. ರಾಕ್ಷಸ ಕುಲಕ್ಕೆ ಕಾಳರಾತ್ರಿಯಂತಿರುವ ಸೀತೆಯ ಮೇಲೆ ನಿಮಗೆ ದಯವಿಲ್ಲ. ಅದೇ ನಿಮ್ಮ ಕುಬುದ್ಧಿ. ನಾನೊಂದು ವರವನ್ನು ಕೇಳುತ್ತಿದ್ದೇನೆ. ನನ್ನ ಮಾತು ಮನ್ನಿಸಿ, ರಾಮನಿಗೆ ಸೀತೆಯನ್ನರ್ಪಿಸಿ. ನಿಮಗೆ ಸಕಲ ಕಲ್ಯಾಣಗಳೂ ಉಂಟಾಗುವುವು," ಎಂದು ಪ್ರಾರ್ಥಿಸಿದನು.

ರಾವಣನು ದಿಢೀರನೆ ಎದ್ದು, "ಎಲವೋ ಮೂರ್ಖ! ನಿನಗೆ ಮೃತ್ಯು ಸಮೀಪಿಸಿದೆ. ನನ್ನಿಂದಾಗಿ ನೀನಿಷ್ಟುಕಾಲ ಜೀವಿಸಿದ್ದೆ. ಈಗ ನಿನಗೆ ಶತ್ರುಗಳು ಉಪಕಾರಿಗಳಾದರಲ್ಲವೆ? ಅವನ ಮೇಲೆ ನಿನಗೇಕೆ ಇಷ್ಟು ಅಭಿಮಾನವೊ ಅರ್ಥವಾಗುತ್ತಿಲ್ಲ. ನನ್ನ ಭುಜಬಲದಿಂದ ಗೆಲ್ಲಲಾಗದ ಮನುಷ್ಯನೊಬ್ಬನು ಲೋಕದಲ್ಲಿದ್ದಾನೆಯೇ? ನನ್ನ ಅನ್ನವನ್ನು ತಿನ್ನುತ್ತಾ ನನ್ನ ಮನೆಯಲ್ಲಿ ವಾಸ ಮಾಡುತ್ತಾ ನನ್ನ ನೆರಳಿನಲ್ಲಿ ಬದುಕುತ್ತಾ ಶತ್ರುಗಳನ್ನು ಹೊಗಳುವೆಯಾ? ಎಲ್ಲಿಯಾದರೂ ತಪಶ್ಶಾಲೆಗೆ ಹೋಗಿ ನಿನ್ನ ನೀತಿಗಳನ್ನು ಅವರಿಗೆ ಹೇಳು," ಎಂದು ಪಾದಗಳ ಬಳಿ ಕುಳಿತಿದ್ದ ತಮ್ಮನ ತಲೆಯನ್ನು ಕಾಲಿನಿಂದ ಒದ್ದನು. ಆದರೂ ವಿಭೀಷಣನು ಬಿಡದೆ, ರಾವಣನ ಪಾದಗಳನ್ನು ಹಿಡಿದು, "ರಾಜಾ! ರಾಮನು ಸತ್ಯ ಸಂಕಲ್ಪನು. ನಿನ್ನಂತೆ ನಿನ್ನ

ಅನುಚರರಿಗೂ ಕೂಡ ಕಾಲ ಸಮೀಪಿಸಿದೆ. ನಾನು ಈಗಲೇ ಹೋಗಿ ರಾಮನನ್ನು ಶರಣು ಹೋಗುತ್ತೇನೆ. ನನ್ನಲ್ಲೇನೂ ದೋಷವಿಲ್ಲ," ಎಂದು ಹೇಳಿ ಅಲ್ಲಿಂದ ಹೊರಟನು.

**ಶರಣಾಗತಿ**: ವಿಭೀಷಣನು 'ರಾಮಾ ರಾಮಾ' ಎಂದು ಹೇಳುತ್ತಾ ಸಮುದ್ರವನ್ನು ದಾಟಿ ಆಚೆಯ ದಡಕ್ಕೆ ಬಂದನು. ಅವನ ಆಗಮನವನ್ನು ನೋಡಿ, ಅವನು ರಾವಣನ ದೂತನೆಂದು ಶಂಕಿಸಿ ವಾನರರು ಸುಗ್ರೀವನಿಗೆ ತಿಳಿಸಿದರು. ವಿಭೀಷಣ ನನ್ನು ಪಾಳಯದೊಳಕ್ಕೆ ಬಿಡದೆ, ಹೋಗಿ ರಾಮನಿಗೆ, "ರಾವಣನ ತಮ್ಮನು ನಿಮ್ಮ ದರ್ಶನಕ್ಕಾಗಿ ಬಂದಿದ್ದಾನೆ," ಎಂದು ವಿಭೀಷಣನ ವೃತ್ತಾಂತವನ್ನು ಅವನಿಗೆ ಹೇಳಿದರು. ಆಗ ರಾಮನು, "ಸುಗ್ರೀವಾ ಈ ವಿಷಯದಲ್ಲಿ ನಿನ್ನ ಅಭಿಪ್ರಾಯ ವೇನು?" ಎಂದು ಪ್ರಶ್ನಿಸಿದನು. ಸುಗ್ರೀವನು, "ರಾಕ್ಷಸರ ಮಾಯೆಯನ್ನು ತಿಳಿಯು ವುದು ಕಷ್ಟ. ಅವರು ಕಾಮರೂಪಿಗಳು. ವಿಭೀಷಣ ಏತಕ್ಕಾಗಿ ನಿಮ್ಮ ಬಳಿಗೆ ಬಂದಿದ್ದಾನೊ ತಿಳಿಯದು. ನನಗೂ ಅಂಗದನಿಗೂ ನಿಮ್ಮೊಡನೆ ಮಿತ್ರಭೇದ ಉಂಟುಮಾಡಲು ಬಂದಂತಿದೆ. ಅವನನ್ನು ತಕ್ಷಣ ಬಂಧಿಸುವುದೊಳ್ಳೆಯದು," ಎಂದನು. ಆಗ ರಾಮನು, "ಸ್ನೇಹಿತನೇ! ನಿನ್ನ ಮಾತು ನಿಜ, ಶಾಸ್ತ್ರಾನುಸಾರವಾಗಿ ಮಾತನಾಡಿದೆ. ಆದರೂ ನನ್ನ ಪ್ರತಿಜ್ಞೆಗೆ ಅದು ವಿರೋಧವಾಗಿದೆ. ಶರಣಾಗತರು ನಮಗೆ ಶತ್ರುಗಳಾದರೂ ಅವರನ್ನು ಬಂಧಿಸುವುದು ಉಚಿತವಲ್ಲ. ಕೋಟಿ ಬ್ರಹ್ಮಹತ್ಯಾ ಪಾಪ ಮಾಡಿದ್ದರೂ ನನ್ನನ್ನು ಶರಣು ಹೋದದ್ದಾದರೆ ನಾನು ಅವನನ್ನು ಬಿಟ್ಟು ಕೊಡುವುದಿಲ್ಲ. ಹಾಗೆ ನಮ್ಮಲ್ಲಿ ಮಿತ್ರಭೇದ ಉಂಟು ಮಾಡಲು ರಾವಣನು ಕಳಿಸಿದ್ದರೂ ನನಗೇನೂ ಭಯವಿಲ್ಲ. ಒಂದು ವೇಳೆ ಅವನು ಭಯದಿಂದಲೇ ಶರಣು ಹೋದರೆ, ಅವನನ್ನು ನನ್ನ ಪ್ರಾಣ ಸಮಾನವಾಗಿ ರಕ್ಷಿಸುತ್ತೇನೆ. ಆದ್ದರಿಂದ, ಬೇಗ ಹೋಗಿ ಅವನನ್ನು ಕರೆದುಕೊಂಡು ಬನ್ನಿ," ಎಂದು ಆಜ್ಞಾಪಿಸಿದನು. ಹನುಮಂತನು ಕ್ಷಣ ಮಾತ್ರದಲ್ಲಿ ಹೋಗಿ ವಿಭೀಷಣನನ್ನು ಕರೆತಂದು ರಾಮನ ಮುಂದೆ ನಿಲ್ಲಿಸಿದನು. ರಾಮನ ಮುಖಾರವಿಂದಗಳನ್ನು ನೋಡಿದೊಡನೆ ವಿಭೀಷಣನ ಕಣ್ಣುಗಳಿಂದ ಆನಂದಬಾಷ್ಪಗಳು ಧಾರಕಾರವಾಗಿ ಸುರಿದವು. ಅವನು ನಿಲ್ಲಲಾರದೆ ಹೋದನು. "ನಾಥಾ!" ಎಂದು ಕೂಗುತ್ತಾ ರಾಮನ ಪಾದಗಳ ಮೇಲೆ ಬಿದ್ದನು. "ರಕ್ಷಿಸು, ನಾ ನಿಮ್ಮ ದಾಸ," ಎಂದು ಮೊರೆಯಿಟ್ಟನು. "ದೇವರಕ್ಷಕಾ! ರಾಕ್ಷಸ ವಂಶದಲ್ಲಿ ಹುಟ್ಟಿ, ರಾಕ್ಷಸರನ್ನು ಪರಿಪಾಲಿ ಸುವ ರಾವಣನ ತಮ್ಮ ನಾನು. ನನ್ನ ಹೆಸರು ವಿಭೀಷಣ. ನಾನು ಮಹಾ ಪಾಪಿ. ತಮೋಗುಣ ಪ್ರಧಾನವಾದವನು. ಗೂಬೆಯು ಕತ್ತಲನ್ನು ಆಶಿಸಿದಂತೆ ನಾನು ತಮಸ್ಸನ್ನೇ ಆಶಿಸುವವನು. ನೀವು ಶರಣಾಗತ ರಕ್ಷಕರು. ನಿಮ್ಮ ಆಶ್ರಯ ಕೋರಿ

ಬಂದಿದ್ದೇನೆ. ನೀವಲ್ಲದೆ ಬೇರೆ ರಕ್ಷಕರು ನನಗಿಲ್ಲ," ಎಂದು ರಾಮನ ಮುಂದೆ ನಿಂತು ದೀನನಾಗಿ, ಅತಿ ವಿನಯದಿಂದ ಪ್ರಾರ್ಥಿಸಿದನು. ವಿಭೀಷಣನನ್ನು ನೋಡಿ, ರಾಮನು ಪ್ರಸನ್ನನಾಗಿ ಅವನನ್ನು ಹತ್ತಿರ ಕರೆದುಕೊಂಡು, ಬೆನ್ನು ಸವರುತ್ತಾ, "ಅಪ್ಪಾ ವಿಭೀಷಣಾ! ಚಿಂತಿಸಬೇಡ, ನನ್ನ ದರ್ಶನದಿಂದ ನಿನ್ನ ನಿಶಾಚರತ್ವ ನಾಶವಾಗಿದೆ. ನನಗೆ ಲಕ್ಷ್ಮಣ ಸುಗ್ರೀವಾದಿಗಳು ಹೇಗೋ, ನೀನೂ ಹಾಗೆಯೇ," ಎಂದು ಸಾಂತ್ವನ ಹೇಳಿದನು. ಅದನ್ನು ಕೇಳಿದೊಡನೆ ವಿಭೀಷಣನಿಗೆ ಭಯ ಹೋಯಿತು. ನಂತರ ರಾಮನು, "ಲಂಕೇಶಾ! ನಿನ್ನ ಪರಿವಾರವೆಲ್ಲಾ ಕುಶಲವೇ? ಅನೇಕ ಕೋಟಿ ರಾಕ್ಷಸರ ಮಧ್ಯೆ ನೀನು ಹೇಗೆ ಜೀವಿಸಿದೆ? ನಿನ್ನ ಭಕ್ತಿ ಪ್ರಪತ್ತಿಗಳನ್ನು ಹೇಗೆ ಉಳಿಸಿಕೊಂಡಿದ್ದೆ?" ಎಂದು ಅನೇಕ ಧರ್ಮ ಕರ್ಮಗಳ ವಿಷಯವಾಗಿ ಪ್ರಶ್ನಿಸಿದನು.

ವಿಭೀಷಣನು, "ಓ ರಘುನಾಥಾ! ನೀವು ಧನುರ್ಬಾಣಗಳನ್ನು ಧರಿಸಿ ಹೃದಯ ವನ್ನು ಪ್ರವೇಶಿಸುವವರೆಗೆ ಕಾಮಾದಿಗಳ ಬಾಧೆ ಇರುವುದು. ಎಲ್ಲಿಯವರೆಗೆ ನಿಮ್ಮ ಜ್ಞಾನ ಉದಯವಾಗದೊ, ಅಲ್ಲಿಯವರೆಗೆ ಕಾಮ ಕ್ರೋಧ ರಾಗ ದ್ವೇಷ ಮುಂತಾದ ಗೂಬೆಗಳಿಗೆ ತಕ್ಕಂಥ ಕತ್ತಲು ಜೀವಿಗಳ ಹೃದಯವನ್ನು ಆವರಿಸಿರುವುದು. ಓ ನಾಥ! ನಿಮ್ಮ ಚರಣಗಳನ್ನು ದರ್ಶಿಸಿದ್ದರಿಂದ, ಸ್ಪರ್ಶಿಸಿದ್ದರಿಂದ ಜನ್ಮ ಸಫಲವಾಯಿತು. ನನ್ನ ಭಯ ಶೋಕಗಳು ನಾಶವಾದವು. ನಾನೆಂದೂ ಶುಭಕರ್ಮಗಳನ್ನಾಚರಿಸಿದ ವನಲ್ಲ. ಅಂಥ ನನ್ನನ್ನು ನೀವು ಆಲಂಗಿಸಿಕೊಂಡಿರಿ. ಏನು ನನ್ನ ಭಾಗ್ಯ," ಎಂದು ಕಣ್ಣುಗಳಿಂದ ಆನಂದ ಬಿಂದುಗಳನ್ನು ಜಳಜಳ ಸುರಿಸಿದನು.

**ಲಂಕಾಧಿಪತಿ**: ರಾಮನು, "ವಿಭೀಷಣಾ! ನೀನು ಸಕಲ ಗುಣ ಸಂಪನ್ನ. ಇಲ್ಲದಿದ್ದರೆ, ನನ್ನ ಸ್ಪರ್ಶನ ಸಂಭಾಷಣೆಗಳು ನಿನಗೆ ಸಿಗುತ್ತಿರಲಿಲ್ಲ," ಎಂದನು. ವಿಭೀಷಣನಿಗೆ ಅದನ್ನು ಕೇಳಿ ಅತ್ಯಂತ ಸಂತೋಷವಾಯಿತು. ಪುನಃ ಪುನಃ ರಾಮನ ಪಾದಗಳ ಮೇಲೆ ಬಿದ್ದನು. ನಂತರ ರಾಮನು "ವಿಭೀಷಣಾ! ಬೇಗ ಹೋಗಿ ಸಮುದ್ರ ಸ್ನಾನ ಮಾಡಿ ಬಾ," ಎಂದು ಆಜ್ಞಾಪಿಸಿದನು. ವಿಭೀಷಣನು ಸಮುದ್ರ ಸ್ನಾನಕ್ಕೆ ಹೊರಟನು. ರಾಮನು ವಾನರ ಶ್ರೇಷ್ಠನಾದ ಹನುಮಂತನನ್ನು ಕರೆದು, ಸಮುದ್ರ ಜಲವನ್ನು ತರುವಂತೆ ಹೇಳಿ ಕಳಿಸಿದನು. ವಿಭೀಷಣನು ಸ್ನಾನ ಮಾಡಿ ಬಂದು, ರಾಮನ ಪಾದಗಳ ಮೇಲೆ ಬಿದ್ದನು. ಹನುಮಂತನು ತಂದ ಸಮುದ್ರ ಜಲವನ್ನು ರಾಮನು ಕೈಯಲ್ಲಿ ಹಿಡಿದು ವಿಭೀಷಣನ ಶಿರಸ್ಸಿನ ಮೇಲೆ ಪ್ರೋಕ್ಷಿಸಿ, "ನಿನಗೆ ಲಂಕಾರಾಜ್ಯದ ಅಭಿಷೇಕ ಮಾಡಿದ್ದೇನೆ," ಎಂದನು. ವಿಭೀಷಣನು, "ರಾಮಾ! ನನಗೆ ಆ ರಾಜ್ಯವೇಕೆ? ನಿಮ್ಮ ಪಾದಾರವಿಂದಗಳಲ್ಲಿ ನನಗೆ ಸ್ಥಾನ ಸಿಕ್ಕರೆ ಸಾಕು," ಎನ್ನಲು, ರಾಮನು, "ತಮ್ಮಾ, ನೀನು ಒಪ್ಪಲೇಬೇಕು," ಎಂದು

ಆಜ್ಞಾಪಿಸಿದನು. "ನಿಮ್ಮ ಆಜ್ಞೆಯನ್ನು ಶಿರಸಾವಹಿಸಿದ್ದೇನೆ," ಎಂದು ವಿಭೀಷಣನು ಕೈ ಜೋಡಿಸಿ, ಎದ್ದು ನಿಂತನು. ವಾನರ ವೀರರು ಆಶ್ಚರ್ಯಪಡುತ್ತಾ ರಾಮನ ಶರಣಾಗತ ವಾತ್ಸಲ್ಯವನ್ನು ಕಂಡು ಒಳಗೊಳಗೇ ಆನಂದಿಸಿದರು.

# ೨೫ ಲಂಕೆಗೆ ಸೇತುವೆ

**ಶುಕಸಾರಣ**: ಶ್ರೀರಾಮನು ಸೇನಾಧಿಪತಿಯನ್ನು ಕುರಿತು, "ಓ ಕಪೀಶಾ! ಈ ವಿಭೀಷಣನನ್ನು ನಿಮ್ಮೊಂದಿಗೆ ಸೇರಿಸಿಕೊ. ಇವನನ್ನು ಬೇರೆಯವನೆಂದು ಭಾವಿಸದೆ ನಿಮ್ಮ ಸಖನೆಂದು ತಿಳಿ. ಇವನು ನನ್ನವನು," ಎಂದು ಪ್ರಿಯ ವಚನಗಳನ್ನಾಡಿದನು. ಎಲ್ಲರೂ ಹೊರಟು ಸಮುದ್ರ ತೀರವನ್ನು ಸೇರಿದರು. ಸಮುದ್ರವನ್ನು ನೋಡಿ ರಾಮನು ಅದನ್ನು ದಾಟುವುದು ಹೇಗೆಂದು ಪ್ರಶ್ನಿಸಿದನು. ವಾನರರು ಒಬ್ಬೊಬ್ಬರು ಒಂದೊಂದು ವಿಧವಾಗಿ ಹೇಳಿದರು. ವಿಭೀಷಣನೆದ್ದು, "ಓ ನಾಥಾ! ಸಮುದ್ರ ನಿಮ್ಮ ಕುಲಗುರು. ಸಾಗರ ಪುತ್ರರಿಂದ ಅದು ಹುಟ್ಟಿತು. ನೀವು ಸಂಕಲ್ಪಿಸಿದರೆ ಏನೂ ಪ್ರಯಾಸವಿಲ್ಲದೆ ವಾನರರು ಅದನ್ನು ದಾಟಬಲ್ಲರು," ಎಂದನು. ಆ ಸಮಯದಲ್ಲಿ ರಾವಣನು ಕಳಿಸಿದ ಗೂಢಚಾರನೊಬ್ಬ ವಿಭೀಷಣನಿಗೆ ಕಾಣಿಸಿದನು. ವಿಭೀಷಣನು ಅವನನ್ನೊಯ್ದು ರಾಮನೆದುರು ನಿಲ್ಲಿಸಿದನು. ರಾಮನು ಏನೊಂದೂ ಹೇಳದಿದ್ದುದನ್ನು ನೋಡಿ, ವಾನರರು ಅವನನ್ನು ಸುಗ್ರೀವನೆಡೆಗೆ ಕರೆದೊಯ್ದರು. ಸುಗ್ರೀವನು ಅವನ ಅಂಗಗಳನ್ನು ಕತ್ತರಿಸಿರೆಂದು ಆಜ್ಞಾಪಿಸಿದನು. ಅದರಂತೆ ವಾನರರು ಅವನಿಗೆ ಅನೇಕ ವಿಧವಾದ ಬಾಧೆಗಳನ್ನಿತ್ತರು. ಆ ಬಾಧೆಗಳನ್ನು ಸಹಿಸಲಾರದೆ ಅವನು ಗೋಳಾಡಿದನು. "ಓ ವಾನರರೇ! ರಾಮನಾಣೆ! ನನ್ನ ಮೂಗು ಕಿವಿಗಳನ್ನು ಮಾತ್ರ ಕೊಯ್ಯದೆ ಬಿಡಿ," ಎಂದು ಪ್ರಾರ್ಥಿಸಿದನು. ಅವನ ಗೋಳನ್ನು ಕೇಳಿ ಲಕ್ಷ್ಮಣನು, "ಅವನನ್ನು ಕರೆದು ತನ್ನಿ," ಎಂದು ಆಜ್ಞಾಪಿಸಿದನು. ಅವನೊಂದಿಗೆ ಶಾಂತವಚನಗಳನ್ನಾಡಿ ಗೂಢಚಾರನನ್ನು ಹಿಂಸಿಸುವುದು ತರವಲ್ಲವೆಂದು ವಾನರರಿಗೆ ಹೇಳಿ, ಒಂದು ಪತ್ರವನ್ನು ಬರೆದು, ಗೂಢಚಾರನ ಕೈಗಿತ್ತು, "ಈ ಪತ್ರವನ್ನು ರಾವಣನಿಗೆ ಕೊಡು, ಮತ್ತು ಅವನಿಗೆ, 'ಎಲೌ ಕುಲಘಾತುಕಾ! ಈಗಲಾದರೂ ನಿನ್ನ ಹೃದಯವನ್ನು ಪರಿವರ್ತಿಸಿಕೊಂಡು ರಾಮನ ಪಾದಗಳ ಮೇಲೆ ಬೀಳು! ಅವನು ಕ್ಷಮಿಸುತ್ತಾನೆ. ಸುಮ್ಮನೆ ವಂಶವನ್ನೇ ನಾಶಮಾಡಿಕೊಳ್ಳಬೇಡ. ಹಾಗೆ ಮಾಡದಿದ್ದಲ್ಲಿ,

ನಿನ್ನ ಕಾಲ ಸಮೀಪಿಸಿದೆ,' ಎಂದು ನಾನು ಹೇಳಿದೆನೆಂದು ಹೇಳು," ಎಂದು ಹೇಳಿ ಅವನನ್ನು ಹಿಂದಕ್ಕೆ ಕಳಿಸಿದನು.

ಆ ದೂತನು ಸದ್ಯ ಬದುಕಿದೆನೆಂದು ಸಂತೋಷಿಸಿ, "ರಾಮಚಂದ್ರ ಪ್ರಭುವಿಗೆ ಜೈ," ಎಂದು ರಾಮರೂಪವನ್ನು ಸ್ಮರಿಸುತ್ತಾ ಲಂಕೆಯನ್ನು ಸೇರಿ, ನಡೆದ ವೃತ್ತಾಂತವನ್ನೆಲ್ಲಾ ರಾವಣನಿಗೆ ಹೇಳಿ, ರಾಮನ ಸುಂದರ ವಿಗ್ರಹವನ್ನು ಅನೇಕ ವಿಧವಾಗಿ ವರ್ಣಿಸಿ, ಲಕ್ಷ್ಮಣನ ಪತ್ರವನ್ನು ಅವನ ಕೈಗಿತ್ತನು. ರಾವಣನು ವಿಭೀಷಣನ ಕ್ಷೇಮ ಸಮಾಚಾರವನ್ನು ವಿಚಾರಿಸಿದನು. "ಅವನಿಗೆ ಮೃತ್ಯು ಸಮೀಪಿಸಿದೆ. ಕಾಲಿಗೆ ಹೂಳು ಹಿಡಿದ ಹಾಗೆ, ಆ ನಿರ್ಭಾಗ್ಯನು ಲಂಕಾರಾಜ್ಯವನ್ನು ಬಿಟ್ಟು ನನ್ನ ಶತ್ರುವನ್ನು ಶರಣು ಹೋಗಿದ್ದಾನೆ," ಎಂದು ರೋಷಕಾರಿದನು. ದೂತನನ್ನು ಕುರಿತು, "ಎಲವೋ ಶುಕಾ! ನಿನಗೆ ಅವರ ದರ್ಶನ ಹೇಗಾಯಿತು? ನನ್ನ ತೇಜೋಬಲವನ್ನು ಅವರಿಗೆ ತಿಳಿಸಿದೆಯಾ? ಅವರ ತೇಜೋಬಲವನ್ನು ವಿವರವಾಗಿ ತಿಳಿಸು," ಎಂದು ಆಜ್ಞಾಪಿಸಿದನು. ದೂತನು ಕೈಜೋಡಿಸಿಕೊಂಡು, "ಓ ನಾಥಾ! ನೀವು ಕಟಾಕ್ಷಿಸಿ ಶಾಂತವಾಗಿ ನನ್ನ ಮಾತುಗಳನ್ನು ಕೇಳಬೇಕೆಂದು ಬಿನ್ನವಿಸುತ್ತೇನೆ. ಯಾವಾಗ ನಿಮ್ಮ ಸೋದರನು ರಾಮನೊಂದಿಗೆ ಸಖ್ಯ ಮಾಡಿಕೊಂಡನೋ, ಆಗಲೇ ನಿಮ್ಮ ತಮ್ಮನಿಗೆ ರಾಮನು ಲಂಕಾ ರಾಜ್ಯದ ಪಟ್ಟ ಕಟ್ಟಿದನು. ನಾನು ನಿಮ್ಮ ದೂತನೆನ್ನುವುದನ್ನು ತಿಳಿದು ವಾನರರು ನನ್ನನ್ನು ಅನೇಕ ವಿಧವಾಗಿ ಬಾಧಿಸಿದರು. ನಾನು ರಾಮನ ಮೇಲೆ ಆಣೆ ಮಾಡಿದ್ದರಿಂದ ನನ್ನ ಮೂಗು ಕಿವಿಗಳನ್ನು ಕೊಯ್ಯದೆ ಬಿಟ್ಟರು.

**ವಾನರ ಸೈನ್ಯ ಬಲ:** ಸಾವಿರ ಮುಖದಿಂದಲೂ ಸಹ ನಾನು ಆ ವಾನರರ ದಳವನ್ನು, ಅವರ ಬಲವನ್ನು ವರ್ಣಿಸಲಾರೆ. ಅವರಲ್ಲಿ ಬಣ್ಣ ಬಣ್ಣದ ವಾನರರಿದ್ದಾರೆ. ಜಾಂಬವಂತರಿದ್ದಾರೆ. ಅವರನ್ನು ನೋಡಿದರೆ ಸಾಕು, ನೆನೆದರೆ ಸಾಕು, ಭಯವಾಗುವುದು. ನಿಮ್ಮ ಕುಮಾರನನ್ನು ಕೊಂದು, ಲಂಕಾನಗರವನ್ನು ದಹಿಸಿದವನು ಕೇವಲ ಒಬ್ಬ ವಾನರ ಮಾತ್ರ. ಏನು ಅವನ ಆ ಬಲ! ರಾಮನ ಪ್ರತಾಪದಿಂದ ಅತ್ಯಲ್ಪನಾದ ವಾನರ ಸಹಿತ ಮಹಾ ಬಲವಂತನಾಗಿದ್ದಾನೆ. ಅನೇಕ ಹೆಸರುಗಳುಳ್ಳ ವಾನರ ಯೋಧರಿದ್ದಾರೆ. ಒಬ್ಬೊಬ್ಬನಿಗೂ ಹಲವು ಆನೆಗಳ ಬಲವಿದೆ. ದ್ವಿವಿದ, ಮೈಂದ, ನೀಲ, ನಲ, ಅಂಗದ, ವಿಕಟ, ದಧಿಮುಖ, ಕೇಸರಿ, ಕುಮುದ, ಗಜ, ಗವಾಕ್ಷ, ಜಾಂಬವಂತ ಎನ್ನುವ ಈ ಮಹಾಬಲರು ಸೇನಾಧಿಪತಿಗಳು. ಅವರೆಲ್ಲರೂ ಸುಗ್ರೀವನ ಸರಿ ಸಮಾನ ಬಲಶಾಲಿಗಳು. ಅಂಥ ಸರಿಸಮಾನ ಬಲಶಾಲಿಗಳು ಅವರಲ್ಲಿ ಇನ್ನೂ ಎಷ್ಟೋ ಲಕ್ಷೋಪಲಕ್ಷ ಮಂದಿ ಇದ್ದಾರೆ. ಲೆಕ್ಕಕ್ಕೆ ಮೀರಿದಷ್ಟು ವಾನರರನ್ನು ಲೆಕ್ಕ ಮಾಡುವುದು ಸಾಧ್ಯವಿಲ್ಲ. ಅವರೆಲ್ಲರೂ

ಅತಿ ಪರಾಕ್ರಮಶಾಲಿಗಳು. ಮೂರು ಲೋಕಗಳನ್ನೂ ಕ್ಷಣ ಮಾತ್ರದಲ್ಲಿ ತೃಣ ಸಮಾನವಾಗಿ ಜಯಿಸಬಲ್ಲರು.

ಓ ರಾಜಾ! ಅದು ಹದಿನೆಂಟು ಪದ್ಮಗಳ ವಾನರ ಸೈನ್ಯವೆಂದು ಕೇಳಿದ್ದೇನೆ. ಅವರಿಗೆ ಬೇರೆ ಬೇರೆ ಸೇನಾಧಿಪತಿಗಳಿದ್ದಾರೆ. ಯುದ್ಧದಲ್ಲಿ ನಿಮ್ಮನ್ನು ಜಯಿಸಲು ಅಸಾಧ್ಯವೆಂದು ಅಧೈರ್ಯಪಟ್ಟ ವಾನರನೊಬ್ಬನಾದರೂ ಅವರಲ್ಲಿಲ್ಲ. ಅವರೆಲ್ಲ ಈ ಪಟ್ಟಣದ ಮೇಲೆ ಬೀಳಲು ಸಿದ್ಧರಾಗಿ ಕೈ ಮಸೆದುಕೊಳ್ಳುತ್ತಿದ್ದಾರೆ. ಇದುವರೆಗೂ ಇನ್ನೂ ರಾಮನ ಆಜ್ಞೆಯಾಗಿಲ್ಲ. ಸಮುದ್ರವು ದಾರಿ ಮಾಡಿಕೊಡಲಿ, ಬಿಡಲಿ, ಅವರು ಸಮುದ್ರಕ್ಕೆ ಕಲ್ಲುಕಟ್ಟಿ ತಮ್ಮ ಕಾರ್ಯ ಸಾಧಿಸಲು ಸಿದ್ಧವಾಗಿದ್ದಾರೆ. ರಾವಣನನ್ನು ಒಂದು ಕ್ಷಣದಲ್ಲಿ ಸುಟ್ಟು ಭಸ್ಮಮಾಡುತ್ತೇವೆಂದು ವಾನರರು ಹಲ್ಲು ಕಡಿಯುತ್ತಿದ್ದಾರೆ. ಅವರ ಗರ್ಜನೆ, ಅವರ ವೀರಾಲಾಪಗಳನ್ನು ಕೇಳಿದರೆ ಭಯವಾಗುವುದು. ರಾವಣನ ಹೆಸರನ್ನು ಕೇಳಿದೊಡನೆ ನೆಲದಿಂದ ಮರದ ತುದಿಯವರೆಗೆ ಹಾರುತ್ತಾ ಚೆಂಡಿನಂತೆ ನೆಗೆಯುತ್ತಿದ್ದಾರೆ. ಆ ವಾನರ ಭಲ್ಲೂಕ ಮಹಾಶೂರರು ಲಂಕಾನಗರವನ್ನು ಭಕ್ಷಿಸಲು ಹಾತೊರೆಯುತ್ತಿದ್ದಾರೆ. ಅವರೆಲ್ಲರಿಗೂ ರಾಮನೇ ಯಜಮಾನ. ಅವರು ಕೋಟಿ ಕಾಲಾಂತಕರನ್ನು ಒಂದು ಕ್ಷಣದಲ್ಲಿ ನುಂಗಬಲ್ಲರು. ಇನ್ನು ರಾಮನ ತೇಜೋಬಲವನ್ನೂ ಬುದ್ಧಿಯನ್ನೂ ಶತಸಹಸ್ರ ಶೇಷರೂ ಸಹ ವರ್ಣಿಸಲಾರರು. ಅವನು ಒಂದು ಬಾಣದಿಂದಲೇ ಸಮುದ್ರವನ್ನು ಶೋಧಿಸಬಲ್ಲ. ನಿಮ್ಮ ತಮ್ಮನು ಮೊದಲು ಹೇಳಿದಂತೆ ಅವನು ಕೃಪಾಳು," ಎಂದು ಶುಕಸಾರಣನು ವರ್ಣಿಸಿದನು.

ಇದನ್ನು ಕೇಳಿ ರಾವಣನು ಗೊಳ್ಳನೆ ನಕ್ಕು, "ಓಹೋ! ಅವನು ಅಂಥ ಬುದ್ಧಿವಂತನೇ? ಅವನ ಸೈನಿಕರು ವಾನರರೇ? ವಿಭೀಷಣನಂತೆ ತಲೆಕೆಟ್ಟು ನೀನೂ ಆ ಮೂರ್ಖನನ್ನು ಇಷ್ಟು ವರ್ಣಿಸುತ್ತಿರುವೆಯೇನು? ಆ ಕೋತಿಗಳ ಬಲ ತೇಜೋಸಂಪತ್ತನ್ನು ಇಷ್ಟು ವರ್ಣಿಸುವುದರಲ್ಲಿ ಅರ್ಥವಿಲ್ಲ. ನಿನ್ನ ಬಕವಾದವನ್ನು ಸಾಕು ಮಾಡು. ಅಷ್ಟು ಬಲಶಾಲಿಗಳೇ ಆ ವಾನರರು? ಛೀ, ಛೀ, ಸಾಕು! ಸಾಕು! ನಾನು ಈ ಮೊದಲೇ ಸುಗ್ರೀವನ ಬಲವನ್ನು ಕುರಿತು ಕೇಳಿದ್ದೆ. ತಲೆಕೆಟ್ಟ ವಿಭೀಷಣನು ರಾಮನ ಮಂತ್ರಿತ್ವ ಮಾಡಿದ ಮೇಲೆ ಶ್ರೀ, ವಿಜಯ, ವಿಭೂತಿಗಳು ರಾಮನಿಗೆ ಲಭಿಸುವುದಿಲ್ಲ," ಎಂದನು. ರಾವಣನ ಮಾತನ್ನು ಕೇಳಿ ಶುಕಸಾರಣನು ತನ್ನೊಳಗೆ ಅವನ ವಿಪರೀತ ಬುದ್ಧಿಗೆ ಮರುಗಿ ಕೈಜೋಡಿಸಿಕೊಂಡು ನಿಂತನು. ರಾವಣನು ತನಗಿತ್ತ ಪತ್ರವನ್ನೊಡೆದು ಓದಿ ವಿಕಟವಾಗಿ ನಗುತ್ತಾ ಮಂತ್ರಿಯ ಕೈಗಿತ್ತು, "ಎಲೋ ಮೂರ್ಖ! ಹೆಚ್ಚು ಮಾತಿನಿಂದ ಪ್ರಯೋಜನವಿಲ್ಲ. ಕೌಜಗನ ಹಕ್ಕಿ ತನ್ನ ಮರಿಗಳನ್ನು ರಕ್ಷಿಸಲು, ಆಕಾಶ ಕೆಳಗೆ ಬೀಳದಂತೆ ತಲೆಯನ್ನು ಮೇಲೆತ್ತುವಂತೆ. ಈ

ತಪಶ್ಯಾಲರು, ಈ ಅರ್ಭಕರು ಮಾತಿನಿಂದ ನನ್ನನ್ನು ಬೆದರಿಸುತ್ತಿದ್ದಾರೆ. ಮಾತಿನಿಂದ ನನ್ನನ್ನು ಯಾರಾದರೂ ಜಯಿಸುವರೆ!" ಎಂದು ಗರ್ಜಿಸಿದನು.

ಶುಕನು, "ಓ ನಾಥಾ! ಇದೆಲ್ಲವು ಸತ್ಯ. ಆ ಪತ್ರದಲ್ಲಿ ಬರೆದಿರುವ ವಿಷಯಗಳನ್ನೆಲ್ಲಾ ಚೆನ್ನಾಗಿ ಆಲೋಚಿಸಿ ನಿಮ್ಮ ಅಭಿಮಾನವನ್ನು ಬಿಟ್ಟು ನನ್ನ ಮಾತನ್ನು ಕೇಳಿ. ರಾಮನೊಂದಿಗೆ ವೈರಬೇಡ. ಅವನ ಸ್ವಭಾವ ಅತಿ ಕೋಮಲ. ಅವನು ತ್ರಿಲೋಕಾಧಿಪತಿ. ನೀವು ಅವನಲ್ಲಿ ಶರಣು ಹೋದದ್ದೇ ಆದರೆ, ಅವನು ನಮ್ಮನ್ನು ರಕ್ಷಿಸುವನು. ನಿಮ್ಮ ಅಪರಾಧವನ್ನು ಮನ್ನಿಸುವನು. ಜಾನಕಿಯನ್ನು ಅವನಿಗರ್ಪಿಸಿ. ನನ್ನ ಬಿನ್ನಪವನ್ನು ಕೇಳಿ," ಎಂದು ಬಹು ವಿಧವಾಗಿ ಬೇಡಿ ಕೊಂಡನು. ರಾವಣನು ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು, "ಏನು? ನನ್ನನ್ನು ಅಪರಾಧಿ ಎಂದು ತಿಳಿದೆಯಾ? ಮೂರ್ಖ! ನಾನು ಹೋಗಿ ಆ ಅರ್ಭಕನಲ್ಲಿ ಶರಣು ಹೋಗಬೇಕೆಂದು ಹೇಳಿದೆಯಾ? ಎಷ್ಟು ಧೈರ್ಯ ನಿನಗೆ!" ಎಂದು ಅವನನ್ನು ಕಾಲಿನಿಂದ ಒದ್ದು ಕೆಡವಿದನು. ಶುಕಸಾರಣನು ಅಲ್ಲಿಂದ ಹೊರಟು, ಲಂಕೆಯನ್ನು ತ್ಯಜಿಸಿ, ರಾಮನ ಚರಣಗಳ ಬಳಿ ಸೇರಿದನು. ಅವನನ್ನು ಪುನಃ ನೋಡಿದ ವಾನರರು ಉದ್ರೇಕವನ್ನು ಹೊರಗೆಡವದೆ ರಾಮಜ್ಞೆಗಾಗಿ ಕಾದರು. ಸುಗ್ರೀವನು ಅವನನ್ನು ರಾಮನ ಸನ್ನಿಧಿಗೆ ಕರೆದೊಯ್ದನು. ಶುಕನು ರಾಮನ ಪಾದಗಳ ಮೇಲೆ ಬಿದ್ದು ತನ್ನ ಕಥೆಯನ್ನೆಲ್ಲಾ ಹೇಳಿ, ವಿಭೀಷಣನಂತೆ ತಾನೂ ಶರಣು ಬಂದಿರುವುದಾಗಿಯೂ ತನ್ನನ್ನು ಕಾಪಾಡಬೇಕೆಂದೂ ಪರಿಪರಿಯಾಗಿ ಪ್ರಾರ್ಥಿಸಿದನು. ಕರುಣಾ ಸ್ವಭಾವದವನಾದ ರಾಮನು ಶುಕನನ್ನು ಮನ್ನಿಸಿದನು. ವಾನರ ವೀರರನ್ನು ಬರಮಾಡಿಕೊಂಡು ಶುಕನನ್ನು ಕೂಡ ಸೋದರನಾಗಿ ಭಾವಿಸ ಬೇಕೆಂದು ಆಜ್ಞಾಪಿಸಿದನು. ಶುಕನು ರಾಮನನ್ನು ಅನೇಕ ವಿಧವಾಗಿ ಕೊಂಡಾಡಿ ದನು, ರಾಮ ಲಕ್ಷ್ಮಣರಿಗೆ ನಮಸ್ಕರಿಸಿ ಧನ್ಯನಾದನು.

**ನಲ, ನೀಲ:** ನಂತರ, ರಾಮನು ಲಕ್ಷ್ಮಣನನ್ನು ಕರೆದು, "ಧನುರ್ಬಾಣ ಗಳನ್ನು ತೆಗೆದುಕೊಂಡು ಬಾ, ಅಗ್ನಿ ಬಾಣದಿಂದ ಸಮುದ್ರವನ್ನು ಒಣಗಿಸುತ್ತೇನೆ," ಎಂದನು. "ಮೂರ್ಖರಿಗೆ ವಿನಯವನ್ನು, ಕುಟಿಲ ಸ್ವಭಾವದವರಿಗೆ ನ್ಯಾಯವನ್ನು, ಕೃಪಣರಿಗೆ ನೀತಿ ಬೋಧೆಯನ್ನು, ಮಮಕಾರವುಳ್ಳವರಿಗೆ ಜ್ಞಾನವನ್ನು, ಲೋಭಿ ಗಳಿಗೆ ವೈರಾಗ್ಯವನ್ನು, ಕೋಪಿಷ್ಠರಿಗೆ ಶಾಂತಿಯನ್ನು, ಕಾಮಾತುರರಿಗೆ ಹರಿಕಥೆ ಯನ್ನು ಹೇಳುವುದು ಕಲ್ಲು ನೆಲದ ಮೇಲೆ ಬೀಜ ಚೆಲ್ಲಿದಂತೆ ವ್ಯರ್ಥ," ಎಂದು ಹೇಳಿ, ಧನುಸ್ಸನ್ನೆತ್ತಿ ಹೆದೆ ಏರಿಸಿ, ಬಾಣ ಹೂಡಿದನು. ಅವನ ಪರಾಕ್ರಮವನ್ನು ನೋಡಿ ಲಕ್ಷ್ಮಣನು ಭಯಗೊಂಡನು. ರಾಮನು ಬಾಣ ಹೂಡಿದ್ದನ್ನು ನೋಡಿ ಸಮುದ್ರನಿಗೆ ಎದೆ ಬಡಿದುಕೊಳ್ಳಲಾರಂಭಿಸಿತು. ಮೀನು ಮೊಸಳೆ ಮೊದಲಾದುವು

ಗಳು ವ್ಯಾಕುಲಪಟ್ಟಿತು. ಸಮುದ್ರನು ಭಯಪಟ್ಟನೊ ಎನ್ನುವಂತೆ ನೀರು ಬತ್ತಿತು. ಸಮುದ್ರನು ರಾಮ ಚರಣಗಳಿಗೆ ನಮಸ್ಕರಿಸುತ್ತಿದ್ದಾನೊ ಎನ್ನುವಂತೆ ರಾಮನು ಕುಳಿತಿದ್ದ ಸ್ಥಳಕ್ಕೆ ಅಲೆಗಳು ಒಂದರಮೇಲೊಂದು ಬಂದು ಅವನ ಪಾದಗಳನ್ನು ಸ್ಪರ್ಶಿಸುತ್ತಿದ್ದವು.

ಆಗ ಒಂದು ಅಶರೀರವಾಣಿ ನುಡಿಯಿತು. "ನಾಥಾ! ನಿಮ್ಮ ಸೈನ್ಯದಲ್ಲಿ ನಲ ನೀಲ ಎನ್ನುವವರಿಬ್ಬರು ಸೇನಾಧಿಪತಿಗಳಿದ್ದಾರೆ. ಚಿಕ್ಕ ವಯಸ್ಸಿನಲ್ಲಿ ಅವರಿಗೆ ಮುನಿ ಶಾಪ ಉಂಟಾಯಿತು. ಆ ಶಾಪವೇ ಈಗ ಆಶೀರ್ವಚನವಾಗಿದೆ. ಆ ಪೂರ್ವ ವೃತ್ತಾಂತವನ್ನು ಹೇಳುತ್ತೇನೆ ಕೇಳಿ. ನದೀ ತೀರದ ಋಷ್ಯಾಶ್ರಮವೊಂದರಲ್ಲಿ ಋಷಿಯೊಬ್ಬ ತಪಸ್ಸು ಮಾಡುತ್ತಿದಾಗ ಚಿಕ್ಕ ವಯಸ್ಸಿನ ಈ ನಲ ನೀಲರು ಅವನ ಸಾಲಿಗ್ರಾಮಗಳನ್ನು ಅಪಹರಿಸಿ, ಅವುಗಳನ್ನು ನೀರಿನಲ್ಲಿ ಎಸೆದರು. ಆಗ ಋಷಿಯು ಕೋಪಗೊಂಡು, 'ಎಲವೋ, ಬಾಲಕರೇ! ನೀವು ನೀರಿಗೆಸೆದ ವಸ್ತುಗಳೆಲ್ಲವು ಮುಳುಗದೆ ಹೋಗಲಿ. ಕದಲದೆ ತೇಲಲಿ,' ಎಂದು ಶಪಿಸಿದನು. ಆದ್ದರಿಂದ ಅವರು ನೀರಿನಲ್ಲೆಸೆದ ಪ್ರತಿಯೊಂದು ಕಲ್ಲೂ ತೇಲುವುದು. ಆ ಕಲ್ಲುಗಳ ಮೇಲೆ ನಿಮ್ಮ ನಾಮವನ್ನು ಬರೆಸಿ ಹಾಕಿ. ಹಾಗೆ ಮಾಡಿದರೆ ಪರ್ವತಗಳೂ ಕೂಡ ನನ್ನಲ್ಲಿ ತೇಲಾಡುವುವು. ಜೊತೆಗೆ ನಾನೂ ನಿಮಗೆ ಸಹಾಯ ಮಾಡುತ್ತೇನೆ. ಸತ್ಯಾನ್ವೇಷಣೆಗೆ ಪ್ರಕೃತಿ ಕೂಡ ಸಹಾಯ ಮಾಡುವುದು," ಎಂದು ಸಮುದ್ರನು ಹೇಳಿದನು. ಹೂಡಿದ ಬಾಣವನ್ನು ಹಿಂತೆಗೆದುಕೊಳ್ಳಲಾಗದಾದ್ದರಿಂದ ರಾಮನು ಬಾಣವನ್ನು ಪ್ರಯೋಗಿಸಿದನು. ಆ ಅಗ್ನಿ ಬಾಣದ ಪ್ರಭಾವದಿಂದ ಆ ಪ್ರದೇಶ ಜಲ ಶೂನ್ಯವಾಯಿತು. ಆ ಪ್ರದೇಶವು ಪ್ರಕೃತಿ ಸಂಪತ್ತಿನಿಂದ ತುಂಬಿತು.

**ಸೇತುವೆಯ ನಿರ್ಮಾಣ**: ನಂತರ, ರಾಮನು ಮಂತ್ರಿಗಳನ್ನು ಕರೆದು, "ತಡ ಮಾಡದೆ ಸೇತುವೆ ನಿರ್ಮಾಣ ಮಾಡಿ," ಎಂದು ಆಜ್ಞಾಪಿಸಿದನು. ಹನುಮಂತನು, "ರಾಮಾ! ನಿಮ್ಮ ನಾಮವೇ ಜೀವಿಗಳಿಗೆ ಭದ್ರವಾದ ಸೇತುವೆ. ಅದಕ್ಕೆ ಮಿಗಿಲಾದದ್ದು ಬೇರೇನಿದೆ?" ಎಂದನು. ಜಾಂಬವಂತನು, "ಓ ನಾಥಾ! ನಿಮ್ಮ ಪ್ರತಾಪವೆನ್ನುವ ಬಡಬಾಗ್ನಿಯಿಂದ ಈ ಸಮುದ್ರವು ಬತ್ತಿ ಹೋಯಿತು. ಯುದ್ಧದಲ್ಲಿ ನಿಮ್ಮಿಂದ ಸಂಹರಿಸಲ್ಪಡುವ ರಾಕ್ಷಸರ ಹೆಂಡಿರ ಕಣ್ಣೀರಿನಿಂದ ತಿರುಗಿ ಈ ಸಮುದ್ರವು ತುಂಬುವುದು. ಆದ್ದರಿಂದ ಅದರ ಜಲ ಕಡಿಮೆಯಾಗದು," ಎಂದು ಕೈಜೋಡಿಸಿ ಹೇಳಿದನು. ಆ ಮಹಾವೀರನ ವಚನಗಳನ್ನು ಕೇಳಿ ರಾಮನು ಮುಗುಳ್ನಕ್ಕನು. ಜಾಂಬವಂತನು ನಲ ನೀಲರನ್ನು ಕರೆದು, ಅಶರೀರವಾಣಿಯಾಗಿ ಸಮುದ್ರ ಹೇಳಿದ ಮಾತುಗಳನ್ನು ಅವರಿಗೆ ಜ್ಞಾಪಿಸಿ, "ರಾಮನನ್ನು ಧ್ಯಾನಿಸುತ್ತಾ ಪರ್ವತಗಳನ್ನೂ ಗುಡ್ಡ ಬಂಡೆಗಳನ್ನೂ ತಂದು ಸಮುದ್ರದಲ್ಲಿ ಹಾಕಿ," ಎಂದು ಆಜ್ಞಾಪಿಸಿದನು.

ವಾನರರು ಕೇಕೆ ಹಾಕುತ್ತಾ ಬೆಟ್ಟಗಳನ್ನು ಚೆಂಡಿನಂತೆತ್ತಿ, 'ರಾಮ' 'ರಾಮ' ಎನ್ನುತ್ತಾ ಬೀಸಿ ಸಮುದ್ರದಲ್ಲಿ ಒಗೆಯತೊಡಗಿದರು. ದೊಡ್ಡ ದೊಡ್ಡ ಮರಗಳನ್ನು ಬೇರು ಸಮೇತ ಕಿತ್ತು ಸಮುದ್ರದಲ್ಲಿ ಬಿಸಾಡಿದರು. ಆ ದಿನವೆಲ್ಲಾ ವಿಶ್ರಾಂತಿ ಇಲ್ಲದೆ, ಆಹಾರ ಸಹ ತೆಗೆದುಕೊಳ್ಳದೆ, ವಾನರ ವೀರರು ತಂದ ಗುಡ್ಡೆ ಬಂಡೆಗಳನ್ನು ನಲ ನೀಲರು ತಮ್ಮ ಕೈಗೆ ತೆಗೆದುಕೊಂಡು ಸಮುದ್ರದಲ್ಲಿ ಹಾಕಿ ದಾರಿ ಮಾಡುತ್ತಾ ಬಂದರು. ಆ ದಿನ ಹದಿನಾಲ್ಕು ಯೋಜನ ಉದ್ದದ ಸೇತುವೆ ನಿರ್ಮಿಸಿದರು.

ರಾತ್ರಿ ಚೆನ್ನಾಗಿ ವಿಶ್ರಾಂತಿ ತೆಗೆದುಕೊಂಡು ಬೆಳಗ್ಗೆ ಬ್ರಹ್ಮ ಮುಹೂರ್ತದಲ್ಲೇ ಎದ್ದು, "ಶ್ರೀ ರಾಮ ಪ್ರಭುವಿಗೆ ಜೈ," ಎಂದು ಕೂಗುತ್ತಾ ನಾಲ್ಕು ದಿಕ್ಕಿಗೂ ಓಡಿ, ಪರ್ವತಗಳನ್ನು ತಂದು ದಡದಲ್ಲಿ ಸೇರಿಸಿದರು. ಆ ದಿನ ಇಪ್ಪತ್ತು ಯೋಜನ ಉದ್ದ, ಮೂರನೆಯ ದಿನ ಇಪ್ಪತ್ತೊಂದು ಯೋಜನ ಉದ್ದ, ನಾಲ್ಕನೆಯ ದಿನ ಇಪ್ಪತ್ತೆರಡು ಯೋಜನ ಉದ್ದ, ಐದನೆಯ ದಿನ ಇಪ್ಪತ್ತಮೂರು ಯೋಜನ ಉದ್ದ, ಹೀಗೆ ನೂರು ಯೋಜನ ಉದ್ದದ ಸೇತುವೆಯನ್ನು ನಲ ನೀಲರು ಉತ್ಸಾಹದಿಂದ, ವಿಶ್ರಾಂತಿ ಬಯಸದೆ, ರಾಮ ಕಾರ್ಯ ಪ್ರಧಾನವೆನ್ನುವ ದೃಢ ಸಂಕಲ್ಪದಿಂದ ರಾಮನನ್ನು ಸ್ಮರಿಸುತ್ತಾ ಆತನ ದರ್ಶನ ಮಾಡುತ್ತಾ ಪೂರ್ತಿ ಮಾಡಿದರು.

**ರೋದಿಸಿದ ಪರ್ವತ**: ತಾವು ಸಂಕಲ್ಪಿಸಿದ ನೂರು ಯೋಜನಗಳ ಸೇತುವೆ ಪೂರ್ತಿಯಾಯಿತೆಂದು ಸುಗ್ರೀವನ ಮೂಲಕ ರಾಮನಿಗೆ ವಾರ್ತೆ ತಿಳಿಸಿದರು. ಅದನ್ನು ಕೇಳಿ ರಾಮ ಲಕ್ಷ್ಮಣರು ಸಂತೋಷಿಸಿದರು. ವಾನರರು ಇನ್ನೂ ತರುತ್ತಿದ್ದ ಪರ್ವತಗಳನ್ನು ಅಲ್ಲಲ್ಲೇ ಹಾಕಿ ವಿಶ್ರಾಂತಿ ತೆಗೆದುಕೊಳ್ಳಲೆಂದು ರಾಮನು ಸುಗ್ರೀವನ ಮೂಲಕ ವಾನರರಿಗೆ ಆಜ್ಞೆ ಕಳಿಸಿದನು ಇನ್ನೂ ಗುಡ್ಡ ಬಂಡೆಗಳನ್ನು ಹೊತ್ತು ತರುತ್ತಿದ್ದ ವಾನರರಿಗೆ ಸುಗ್ರೀವನು ರಾಮಾಜ್ಞೆಯನ್ನು ತಿಳಿಸಿದನು. ಆ ಸಮಯದಲ್ಲಿ ಹನುಮಂತನು ಅತಿ ದೂರದಿಂದ ಒಂದು ಪರ್ವತವನ್ನು ಹೊತ್ತು ತರುತ್ತಿದ್ದನು. ಅವನು ರಾಮನ ಆಜ್ಞೆಯನ್ನು ಕೇಳಿ ಆ ಪರ್ವತವನ್ನು ಬೃಂದಾವನದ ಬಳಿ ಹಾಕಿದನು. ಆ ಪರ್ವತವು, "ಅಯ್ಯೋ, ನಾನು ರಾಮಕಾರ್ಯದಲ್ಲಿ ಪಾಲ್ಗೊಳ್ಳದಂತಾಯಿತೆ," ಎಂದು ಗೋಳೋ ಎಂದು ಅತ್ತಿತು. ಹನುಮಂತನು ಬಂದು ಈ ವಿಷಯವನ್ನು ರಾಮನಿಗೆ ತಿಳಿಸಿದನು. ರಾಮ ಕಾರ್ಯದಲ್ಲಿ ಪಾಲ್ಗೊಳ್ಳಲು ಪರ್ವತಗಳು ಸಹ ತವಕಪಡುತ್ತಿವೆಯಲ್ಲವೆ ಎಂದು ಸಂತೋಷಿಸಿ, "ಹನುಮಾನ್, ನೀನು ಶೀಘ್ರವಾಗಿ ಹೋಗಿ, ಚಿಂತಿಸಬೇಡವೆಂದು ಆ ಪರ್ವತಕ್ಕೆ ಹೇಳು. ದ್ವಾಪರ ಯುಗದಲ್ಲಿ ನಾನು ಏಳು ದಿನಗಳ ಕಾಲ ಅದನ್ನು ಕೈಯಲ್ಲಿ ಎತ್ತಿ ಹಿಡಿಯುವೆನೆಂದು ತಿಳಿಸು!" ಎಂದು ಹೇಳಿ ಕಳಿಸಿದನು. ಇದನ್ನು ಕೇಳಿ ಪರ್ವತಕ್ಕೆ ಆನಂದವಾಯಿತು.

ದ್ವಾಪರ ಯುಗದಲ್ಲಿ ಗೋವರ್ಧನ ಪರ್ವತವೆಂದು ಪ್ರಸಿದ್ಧವಾದ ಪರ್ವತವೇ ಅದು.

**ರಾಮಲಿಂಗೇಶ್ವರ**: ಐದನೆಯ ದಿನ ರಾಮನು ಸಮುದ್ರ ತೀರಕ್ಕೆ ಬಂದು ಸೇತುವೆಯನ್ನು ನೋಡಿ ಸಂತೋಷಿಸಿ, "ಓ ವಾನರ ವೀರರೇ! ನಿಮ್ಮ ಸೇವೆ ವರ್ಣನಾತೀತವಾದುದು. ನಿಮ್ಮ ಭಕ್ತಿ ಪ್ರಪತ್ತಿಗಳು ನನ್ನನ್ನು ಮುಗ್ಧನನ್ನಾಗಿ ಮಾಡಿವೆ," ಎಂದನು. ವಿಭೀಷಣನು, "ಸ್ವಾಮೀ! ನಾಳೆಯ ದಿನ ನಾವು ಲಂಕಾನಗರವನ್ನು ಪ್ರವೇಶಿಸಬೇಕು. ಅದಕ್ಕೆ ನನ್ನದೊಂದು ಪ್ರಾರ್ಥನೆ ಇದೆ, ಕೇಳಬೇಕು," ಎಂದನು. ರಾಮನು, "ಏನದು ಹೇಳು," ಎಂದನು. ಆಗ ವಿಭೀಷಣನು, "ರಾವಣನು ಶಿವಪ್ರಜಾದುರಂಧರ. ಅವನಿಗೆ ಶಿವನೆಂದರೆ ಪರಮ ಪ್ರೇಮ. ರಾವಣನು ನಿಮ್ಮ ಕೈಯಿಂದ ಸಾಯುವುದು ಖಂಡಿತ. ಆದ್ದರಿಂದ ಅವನ ಜ್ಞಾಪಕಾರ್ಥವಾಗಿ, ನಾವು ಲಂಕೆಗೆ ಹೊರಡುವ ಮೊದಲು, ಸೇತುವೆಯನ್ನು ದಾಟುವ ಮೊದಲು ಒಂದು ಶಿವಲಿಂಗವನ್ನು ತಮ್ಮ ಹಸ್ತದಿಂದ ಪ್ರತಿಷ್ಠಿಸಿದರೆ, ಉತ್ತರೋತ್ತರ ಲಂಕೆಯನ್ನು ಪ್ರವೇಶಿಸುವವರು ರಾಮನು ಪ್ರತಿಷ್ಠಿಸಿದ ಲಿಂಗೇಶ್ವರನನ್ನು ಸ್ಮರಿಸಿ, ಪೂಜಿಸಿ, ಲಂಕೆಯನ್ನು ಪ್ರವೇಶಿಸುವ ಅದೃಷ್ಟಶಾಲಿಗಳಾಗುವರು. ಅದು 'ರಾಮಲಿಂಗೇಶ್ವರ' ಎನ್ನುವ ಹೆಸರಿನಿಂದ ಖ್ಯಾತಿ ಪಡೆದು ಕಾಲಾಂತರದಲ್ಲಿ ನಮ್ಮ ಸೇತುವೆ ನಾಶವಾದರೂ ಅದರ ಗುರುತಾಗಿ ಅದು ಇರುವುದು," ಎಂದು ಹೇಳಿದನು. ರಾಮನು ಅವನ ಅಪೇಕ್ಷೆಗೆ ಸಂತೋಷಿಸಿ, "ನಿನ್ನ ಇಷ್ಟ ಪ್ರಕಾರ ಮಾಡುತ್ತೇನೆ. ಉತ್ತರೋತ್ತರ ಕಾಲದಲ್ಲಿ ನೀನೇ ಲಂಕೆಗೆ ರಾಜನಾಗುವೆಯಾದ್ದರಿಂದ ನಿನಗೆ ಸಂತೋಷವಾಗುವ ಯಾವ ಕಾರ್ಯ ಮಾಡಲೂ ನಾನು ಸಿದ್ಧ," ಎಂದು ಹೇಳಿದನು.

ಸುಗ್ರೀವನನ್ನೂ ಇತರ ವಾನರರನ್ನೂ ಕರೆದು ಲಿಂಗ ಪ್ರತಿಷ್ಠೆಗೆ ತಕ್ಕ ಸ್ಥಳವನ್ನು ಹುಡುಕಿರೆಂದು ಹೇಳಿದನು. ಹನುಮಂತನನ್ನು ಕಳಿಸಿ ಶಿವಲಿಂಗವೊಂದನ್ನು ತರಿಸಿದನು. ಸಮುದ್ರ ಜಲದಿಂದ ಅದಕ್ಕೆ ಅಭಿಷೇಕ ಮಾಡಿದನು. ರಾಮವಾಕ್ಯವೇ ಮಂತ್ರ. ಅದಕ್ಕಿಂತ ಬೇರೆ ಮಂತ್ರವಿಲ್ಲ. ವಾನರರು ಜೈಜೈಕಾರ ಮಾಡಿದರು. ರಾಮನಾಮವೆನ್ನುವ ಮಂತ್ರ ಹೇಳಿದರು. ರಾಮನು ಲಕ್ಷ್ಮಣ ಸುಗ್ರೀವಾದಿಗಳ ಸಹಾಯದಿಂದ ಲಿಂಗ ಪ್ರತಿಷ್ಠೆ ಮಾಡಿದನು. ನಂತರ, ವಾನರರು ರಾಮನನ್ನು ಮನಸ್ಸಿನಲ್ಲೇ ಸ್ಮರಿಸಿ ಸೇತುವೆಯ ಮೇಲೆ ಸಾಲಾಗಿ ನಡೆದರು. ಆ ವಾನರರ ಒಯ್ಯಾರ ಹೇಳತೀರದು. ರಾಮಲಕ್ಷ್ಮಣರು ಸೇತುವೆಯ ಮೇಲೆ ನಿಂತು ಎರಡು ಕಡೆಯ ಸಮುದ್ರವನ್ನೂ ನೋಡಿದರು. ಆ ಕರುಣಾ ಸಮುದ್ರನನ್ನು ನೋಡಿ ಜಲ ಸಮುದ್ರ ಆನಂದದಿಂದ ಉಬ್ಬಿದನು. ಜಲಚರಗಳು ಅಲೆಗಳ ಮೇಲೆ ತೇಲಾಡುತ್ತಾ ರಾಮಚಂದ್ರನನ್ನು ದರ್ಶಿಸುವುದಕ್ಕಾಗಿ ತಮ್ಮ ತಮ್ಮ ಸ್ವಭಾವಗಳನ್ನು ಬಿಟ್ಟು ತದೇಕ

ದೃಷ್ಟಿಯಿಂದ ರಾಮನ ದರ್ಶನ ಮಾಡಿದವು. ವಾನರರು ಮುಂದೆ ನಡೆದು, ಲಂಕೆಯನ್ನು ಪ್ರವೇಶಿಸುವ ಮೊದಲು ಒಂದು ಶಿಬಿರವನ್ನು ಏರ್ಪಡಿಸಿದರು. ವಾನರ ಸೈನ್ಯವು ಸಮುದ್ರವನ್ನು ದಾಟಿ ಲಂಕೆಯನ್ನು ಸುತ್ತುವರಿದಿದೆಯೆನ್ನುವ ವಾರ್ತೆ ಕ್ಷಣದಲ್ಲಿ ಲಂಕೆಯಲ್ಲಿದ್ದವರಿಗೆಲ್ಲಾ ತಿಳಿಯಿತು. ರಾಮಲಕ್ಷ್ಮಣ ವಿಭೀಷಣ ಸುಗ್ರೀವಾದಿಗಳು ಮೆಲ್ಲಗೆ ನಡೆದು ಲಂಕೆಯ ಸಿಂಹದ್ವಾರವನ್ನು ಸೇರಿದರು. ರಾಮಾಜ್ಞೆಯನ್ನು ಪಡೆದು, ವಾನರರು ಕೇಕೆ ಹಾಕುತ್ತಾ ಮರಗಳನ್ನು ಹತ್ತಿ, ಹಣ್ಣುಗಳನ್ನು ತಿಂದು ಸಿಪ್ಪೆಯನ್ನು ಲಂಕೆಯೊಳಕ್ಕೆ ಎಸೆದರು. ಕಾವಲು ಕಾಯುತ್ತಿದ್ದ ರಾಕ್ಷಸರ ಕೊರಳು ಹಿಡಿದು ಗೋಳಾಡಿಸಿದರು. ಅವರ ಚೇಷ್ಟೆ ಮಿತಿ ಮೀರಿತು.

**ದಶಕಂಠಗಳಿಂದ**: ಈ ವಾರ್ತೆ ರಾವಣನಿಗೆ ತಿಳಿಯಿತು. ರಾವಣನಿಗೆ ದಶಕಂಠಗಳಿದ್ದರೂ ಸಾಮಾನ್ಯವಾಗಿ ಒಂದೇ ಕಂಠದಿಂದ ಮಾತನಾಡುತ್ತಿದ್ದನು. ಈ ವಾರ್ತೆ ಕೇಳಿದೊಡನೆ ಅವನು ದಿಗಿಲುಗೊಂಡು ರಾಕ್ಷಸರನ್ನು ಕರೆದು ಹತ್ತು ಕಂಠಗಳಿಂದಲೂ ಮಾತನಾಡಿದನು, ಗರ್ಜಿಸಿದನು. ಹತ್ತು ಮುಖಗಳಿಂದಲೂ ಮಾತನಾಡುವುದು ಅಶುಭ ಸೂಚನೆ. ಅವನಿಗೆ ಗೊತ್ತಿಲ್ಲದೆಯೇ ಅದು ನಡೆಯಿತು. ಹತ್ತು ಮುಖಗಳಿಂದಲೂ ಮಾತನಾಡಿದಾಗ ಅವನ ಮೃತ್ಯು ಸಮೀಪಿಸುವುದೆಂದು ಅವನಿಗಿದ್ದ ಶಾಪವನ್ನು ನೆನೆದು ರಾವಣನು ತನ್ನೊಳಗೇ ದಿಗಿಲುಗೊಂಡನು. ತಡೆಯಲು ಅವನೆಷ್ಟು ಪ್ರಯತ್ನಿಸಿದರೂ ಆಗದೆ ಹತ್ತು ಕಂಠಗಳೂ ತಮ್ಮಷ್ಟಕ್ಕೇ ಮಾತನಾಡುತ್ತಿದ್ದುವು. ಈ ಆಶ್ಚರ್ಯವನ್ನು ಗಮನಿಸಿದ ರಾಕ್ಷಸರು ತಮ್ಮ ಅಂತ್ಯಕಾಲ ಸಮೀಪಿಸಿತೆಂದು ದೃಢಮಾಡಿಕೊಂಡರು. ತಮ್ಮ ಹೆಂಡತಿ ಮಕ್ಕಳೊಂದಿಗೆ ದುಃಖಿಸಿದರು. ಇಂದೋ ನಾಳೆಯೋ ತಮ್ಮ ಜೀವ ಹೋಗುವುದೆಂದು ತಿಳಿದು ತಮ್ಮ ಇಷ್ಟಗಳನ್ನು ನೆರವೇರಿಸಿಕೊಂಡರು. ವಿನಾಶಕಾಲೇ ವಿಪರೀತ ಬುದ್ಧಿಃ ಎನ್ನುವಂತೆ, ರಾವಣನು ತನ್ನ ಶಾಪ ವೃತ್ತಾಂತ ತಿಳಿದೂ ಆ ಶಾಪ ನನ್ನನ್ನೇನು ಮಾಡಿತು ಎಂದು ಅಲಕ್ಷಿಸಿ, ಅಂತಃಪುರದೊಳಗೆ ಹೋದನು. ಅಷ್ಟೇ ಅಲ್ಲ, ಅವನ ರೂಪವೇ ಬದಲಾಗುತ್ತಿತ್ತು. ಅವನ ಭೀತಿ ಭ್ರಾಂತಿಗಳನ್ನು ನೋಡಿ ಮಂತ್ರಿಗಳು ದಿಗಿಲುಗೊಳ್ಳುವರೇನೋ ಎಂದು ರಾವಣನು ತನ್ನೊಳಗೇ ಕುಗ್ಗಿ ಹೋಗಿದ್ದನು. ತನ್ನ ಸೋದರಿಗಾದ ದುರವಸ್ಥೆಯಂತೆ ತನಗೂ ಹತ್ತು ಮುಖಗಳ ಮೂಗು ಕಿವಿಗಳನ್ನು ಕೊಯ್ಯುವರೇನೋ ಹತ್ತು ಕೊರಳುಗಳನ್ನೂ ಕೊಯ್ಯುವರೇನೋ ಎಂದು ಒಳಗೊಳಗೇ ಚಿಂತಿಸಿದನು.

**ಮಂಡೋದರಿ ಸುಬೋಧೆ**: ಅಂತಃಪುರದಲ್ಲಿ ರಾವಣನ ಸ್ಥಿತಿಯನ್ನು ನೋಡಿ ಮಂಡೋದರಿಯು ಅವನು ಪೂರ್ತಿ ದಿಗಿಲುಗೊಂಡಿರುವುದನ್ನು ಗುರುತಿಸಿದಳು. ಈ ಸಮಯದಲ್ಲಿ ಹಿತೋಪದೇಶ ಮಾಡುವುದೊಳ್ಳೆಯದೆಂದು ಭಾವಿಸಿ ರಾವಣನ

ಕೈಗಳನ್ನು ಹಿಡಿದುಕೊಂಡು, ಮೃದು ಮಧುರ ವಚನಗಳಿಂದ, "ನಾಥಾ! ಕೋಪ ವನ್ನು ಬಿಟ್ಟು ನನ್ನ ಮಾತುಗಳನ್ನು ಸಾವಧಾನವಾಗಿ ಆಲೈಸಿ. ಯಾರನ್ನು ಬುದ್ಧಿಯಿಂದ, ಭಕ್ತಿಯಿಂದ ಗೆಲ್ಲಬೇಕೋ ಅಂಥ ಪವಿತ್ರರೊಂದಿಗೆ ವಿರೋಧದಿಂದ ಗೆಲ್ಲಲು ಹೊರಡುವುದು ಒಳ್ಳೆಯದಲ್ಲ. ರಾಮನೊಂದಿಗೆ ಹೋರಾಡಲಾರಿರಿ. ಸೂರ್ಯನಿಗೂ ಮಿಣುಕು ಹುಳುವಿಗೂ ಹೋಲಿಕೆಯುಂಟೆ? ನನ್ನ ಮಾತು ಕೇಳಿ ಈಗಲಾದರೂ ಜಾನಕಿಯನ್ನು ಕರೆದೊಯ್ದು ರಾಮನಿಗರ್ಪಿಸಿ, ಅವನಿಗೆ ನಮಸ್ಕರಿಸಿ ಕ್ಷಮಾ ಭಿಕ್ಷೆಯನ್ನು ಕೇಳಿ. ನಿಮ್ಮ ಜಾತಿಯನ್ನು ನಾಶಮಾಡಿಕೊಳ್ಳಬೇಡಿ. ಸ್ತ್ರೀ ಬಾಲ ವೃದ್ಧರನ್ನು ಬಲಿಕೊಡಬೇಡಿ. ನಿಮ್ಮ ಭಕ್ತಿ ಪ್ರಪತ್ತಿಗಳಿಗೆ ಇದು ಸರಿಯಲ್ಲ. ಈ ಕ್ರೂರ ಕೃತ್ಯದಿಂದ ನಿಮ್ಮ ಆರಾಧನಾ ದೈವವಾದ ಈಶ್ವರನು ಕೂಡ ನಿಮಗೆ ವಿರೋಧಿಯಾಗುವನು. ಒಳ್ಳೆಯ ಕಾರ್ಯದಿಂದ ಮಾತ್ರ ದೇವರು ಪ್ರಸನ್ನನಾಗುವನು. ಇಂಥ ಪಾಪ ಕೃತ್ಯವನ್ನು ದೈವ ಮೆಚ್ಚದು," ಎಂದು ಅನೇಕ ವಿಧವಾಗಿ ಬುದ್ಧಿ ಹೇಳಿದಳು.

"ಪ್ರಾಣನಾಥಾ! ರಾಮಚಂದ್ರನು ಸಾಮಾನ್ಯನಲ್ಲ. ಮಧು ಕೈಟಭರನ್ನು ಸಂಹರಿಸಿ ದ್ದಾನೆ. ಹಿರಣ್ಯಾಕ್ಷ ಹಿರಣ್ಯಕಶಿಪುಗಳನ್ನು ವಧಿಸಿದ್ದಾನೆ. ಬಲಿಚಕ್ರವರ್ತಿಯನ್ನು ಬಂಧಿಸಿದವನು, ಸಹಸ್ರ ಬಾಹುಗಳ ಕಾರ್ತವೀರ್ಯಾರ್ಜುನನ ಗರ್ವಭಂಗ ಮಾಡಿದವನು ಅವನೇ. ಇಪ್ಪತ್ತು ಭುಜಗಳ ನೀವು ಏನು ಮಹಾ! ಆ ಲೋಕಾರಾ ಧ್ಯನು ಸಕಲ ಮಂಗಳ ಸ್ವರೂಪನು. ಭೂಭಾರವನ್ನು ಹರಿಸಲು ರಾಮನಾಗಿ ಅವತರಿಸುವನೆಂದು ಬ್ರಹ್ಮನು ನಿಮಗೆ ಹೇಳಿದ್ದನ್ನು ನೀವೇ ಹಿಂದೊಮ್ಮೆ ನನಗೆ ತಿಳಿಸಿದ್ದಿರಿ. ಇಷ್ಟೆಲ್ಲಾ ತಿಳಿದೂ ನೀವೇಕೆ ಇನ್ನೂ ಈ ಮಾರ್ಗ ಬಿಡದೆ, ಸತ್ಯವನ್ನು ಗುರುತಿಸದೆ ಸುಮ್ಮನಿದ್ದೀರಿ? ಬೇಗನೆ ನೀವು ಆ ತ್ರಿಲೋಕ ಸುಂದರಿಯನ್ನು, ಆ ಸಾಧ್ವೀಮಾತೆ, ಆ ಪತಿವ್ರತಾ ಶಿರೋಮಣಿ ಜಾನಕಿಯನ್ನು ಆ ಪ್ರಭುವಿಗರ್ಪಿಸಿ. ನಾವು ಕುಮಾರನಿಗೆ ಪಟ್ಟಕಟ್ಟಿ ರಾಮ ಸನ್ನಿಧಿಯಲ್ಲಿ ನಮ್ಮ ಜೀವಿತವನ್ನು ಪ್ರಶಾಂತ ವಾಗಿ ಕಳೆಯಬಹುದು. ನಿಮ್ಮ ಸೋದರ ಎಷ್ಟು ಧನ್ಯ. ರಾಮ ಸನ್ನಿಧಿ ಸೇರಿ ತಂಪು ನೆರಳಿನಲ್ಲಿ ಕಾಲ ಕಳೆಯುತ್ತಿದ್ದಾನೆ. ಈಗಲೂ ಕಾಲ ಮೀರಿಲ್ಲ. ತಕ್ಷಣವೇ ನೀವು ಹೋಗಿ ಲಂಕೆಗೆ ಬರುತ್ತಿರುವ ರಾಮನ ಪಾದಗಳ ಮೇಲೆ ಬಿದ್ದು ಕ್ಷಮಾಭಿಕ್ಷೆ ಬೇಡಿ," ಎಂದು ಕಣ್ಣೀರು ಸುರಿಸುತ್ತಾ ದೀನಳಾಗಿ ಪಾದಗಳನ್ನು ಹಿಡಿದು ಬೇಡಿಕೊಂಡಳು.

ರಾವಣನು ಅವಳ ಕಣ್ಣೀರೊರೆಸುತ್ತಾ, "ಪ್ರಿಯೆ, ಇಷ್ಟು ಕಳವಳವೇಕೆ? ಇಷ್ಟು ಅಧೈರ್ಯವೇಕೆ? ಲೋಕದಲ್ಲಿ ನನಗಿಂತ ಬಲವಂತನಿಲ್ಲ. ಅಷ್ಟದಿಕ್ಪಾಲಕರನ್ನು ನನ್ನ ಭುಜ ಬಲದಿಂದ ಗೆದ್ದೆ. ಕಾಲನು ಸಹಿತ ನನ್ನ ಸಮೀಪ ಬರುವುದಿಲ್ಲ. ನೀನು ದಿಗಿಲು ಪಡಬೇಡ. ನನ್ನ ಬಲ ಪರಾಕ್ರಮಗಳನ್ನು ಸರಿಯಾಗಿ ಗುರುತಿಸದೆ

ನೀನು ಅಬಲನಾದ ಆ ರಾಮನನ್ನು ವರ್ಣಿಸುತ್ತಿದ್ದೀಯೆ," ಎಂದು ಸಮಾಧಾನ ಹೇಳಿ, ಹಜಾರಕ್ಕೆ ಬಂದು ಸಿಂಹಾಸನದ ಮೇಲೆ ಕುಳಿತನು. ಮಂಡೋದರಿಯು ತನ್ನೊಳಗೇ, "ಛಿ, ಎಂಥ ಮೂರ್ಖರು ಇವರು! ದುರಭಿಮಾನ ಬಿಡದವರ ಗತಿಯೆಲ್ಲಾ ಹೀಗೇ. ಒಳ್ಳೆಯ ಮಾತುಗಳು ಮನಸ್ಸಿಗೆ ಹಿಡಿಸುವುದಿಲ್ಲ. ವಿಷ ಜ್ವರ ಬಂದವನಿಗೆ ಸಿಹಿ ಪದಾರ್ಥಗಳೂ ಕಹಿಯಾಗಿಯೇ ಇರುವುದು. ಹಾಗೇ, ದುರಭಿಮಾನವೆನ್ನುವ ವಿಷಜ್ವರದಿಂದ ನರಳುತ್ತಿರುವ ಇವರಿಗೆ ನನ್ನ ಅಮೃತ ವಚನಗಳು ರುಚಿಸುತ್ತಿಲ್ಲ, ಈಗ ನಾನೇನು ಮಾಡಲಿ?" ಎಂದು ಬರಲಿರುವ ಪ್ರಮಾದಗಳನ್ನು ಯೋಚಿಸುತ್ತಾ ಆ ಘೋರ ದೃಶ್ಯಗಳನ್ನು ನೋಡಿ ಸಾಯುವುದ ಕ್ಕಿಂತ ಮೊದಲೇ ಸಾಯುವುದೊಳ್ಳೆಯದೆಂದು ರಾಮನನ್ನು ಸ್ಮರಿಸುತ್ತಾ ಶಯ್ಯಾಗೃಹ ಪ್ರವೇಶಿಸಿದಳು.

**ಕುಮಾರನ ಸದ್ಬೋಧೆ**: ಸಿಂಹಾಸನದಲ್ಲಿ ಕುಳಿತು ರಾವಣನು ಮಂತ್ರಿಗಳನ್ನು ಕರೆದು, ಸಮರ ಸನ್ನಾಹದ ಸಮಾಲೋಚನೆ ನಡೆಸಿದನು. "ರಾಕ್ಷಸರೇ! ವಾನರರು ಜಾಂಬವಂತರು ಮನುಷ್ಯರು ನಮ್ಮ ತಿಂಡಿಗೆ ಸಾಕಾಗುವುದಿಲ್ಲ. ನೀವು ಭಯಪಡದೆ ಎದುರು ಮಾತು ಹೇಳದೆ ಯುದ್ಧಕ್ಕೆ ಸಿದ್ಧರಾಗಬೇಕು," ಎಂದು ಗರ್ಜಿಸಿದನು. ಅದನ್ನು ಕೇಳಿ ಪ್ರಹಸ್ತನನೆದ್ದು ಕೈ ಜೋಡಿಸಿಕೊಂಡು, "ರಾಕ್ಷಸರೇ! ನೀತಿ ಮಾರ್ಗ ಬಿಡಬೇಡಿ. ರಾಜಾ! ಈ ಮಂತ್ರಿಗಳು ನಿಮ್ಮ ಮನಸ್ಸಿನಂತೆ ಮಾತಾಡುವರು, ಅದ ರಿಂದಲೇ ಶುಭವಾಗದು. ಒಬ್ಬ ವಾನರನು ಸಮುದ್ರವನ್ನು ದಾಟಿ ಬಂದು ಏನೇನು ವಿಚಿತ್ರಗಳನ್ನೆಲ್ಲಾ ಮಾಡಿದ! ಆಗ ನಿಮ್ಮ ಮಂತ್ರಿಗಳು, ನಿಮ್ಮ ಸೈನ್ಯ ಏನು ಮಾಡಿತು? ಈ ನಿಶಾಚರರಿಗೆ ಆಗ ಹಸಿವಾಗಿರಲಿಲ್ಲವೆ? ಆ ವಾನರನು ಲಂಕಾನಗರವನ್ನು ದಹಿಸಿದಾಗ ಈ ಮಂತ್ರಿಗಳೇಕೆ ಅವನನ್ನು ಹಿಡಿದು ತಿನ್ನಲಿಲ್ಲ? ರಾಜಾ! ನಿಮ್ಮ ಮಂತ್ರಿಗಳು ಹೇಳುವ ಮಾತು ನಿಮಗೆ ಈಗ ಹಿತವಾಗಿ ಕಂಡರೂ, ಮುಂದೆ ನಿಮಗೆ ಅದರಿಂದ ಕೇಡಾಗುವುದು.

ಚೆನ್ನಾಗಿ ಯೋಚಿಸಿ. ನಿರಾಯಾಸವಾಗಿ ಸಮುದ್ರವನ್ನು ಬಂಧಿಸಿ ವಾನರ ಸೈನ್ಯದೊಂದಿಗೆ ದಾಟಿ ಬಂದು, ಸುವೇಲಾಚಲದ ಮೇಲೆ ಬಿಡದಿ ಮಾಡಿರುವ ರಾಮನು ಮನುಜ ಮಾತ್ರನೆನ್ನುವ ನಿಮ್ಮ ಅಭಿಪ್ರಾಯವನ್ನು ಬಿಡಿ. ಬಾಯಿಗೆ ಬಂದಂತೆ ಮಾತನಾಡುವುದನ್ನು ಬಿಟ್ಟು ಮಂತ್ರಿಗಳ ಮಾತಿಗೆ ಕಿವಿಗೊಡದೆ, ನಾನು ತಲೆಕೆಟ್ಟ ಮೂರ್ಖನೆಂದು ಭಾವಿಸದೆ, ನನ್ನ ಮಾತುಗಳಲ್ಲಿ ವಿಶ್ವಾಸವಿಟ್ಟು ಕಾಲ ಮೀರುವ ಮೊದಲೇ ಈಗಿಂದೀಗಲೇ ನೀವೇ ಸ್ವತಃ ಸೀತೆಯನ್ನು ಕರೆದೊಯ್ದು ರಾಮನಿಗರ್ಪಿಸಿ ಶರಣು ಹೋದರೆ ಲಂಕೆಯನ್ನು ನಾವು ಕಾಪಾಡಿಕೊಂಡವರಾಗು ತ್ತೇವೆ. ನಮ್ಮ ಜಾತಿಯನ್ನು ನಾವು ಉಳಿಸಿಕೊಂಡವರಾಗುತ್ತೇವೆ. ಇದೇ ನಮ್ಮ

ವಿಜಯವೆಂದು ಭಾವಿಸಿ, ಮುಂದಿನ ಪ್ರಯತ್ನ ನಡೆಸಿದರೆ, ನಿಮ್ಮ ಕೀರ್ತಿಯೂ ಆಚಂದ್ರಾರ್ಕವಾಗಿ ನಿಲ್ಲುವುದು. ಸೂರ್ಯಚಂದ್ರಾದಿಗಳಿರುವವರೆಗೂ ನಿಲ್ಲುವಂಥ ಕೆಟ್ಟ ಹೆಸರನ್ನು ಸಂಪಾದಿಸಿಕೊಳ್ಳಬೇಡಿ," ಎಂದು ಪ್ರಾರ್ಥಿಸಿದನು.

ಪ್ರಹಸ್ತನನ ಮಾತುಗಳನ್ನು ಕೇಳಿ ರಾವಣನು ಉಗ್ರನಾಗಿ ಗರ್ಜಿಸಿ, ಹೂಂಕರಿಸಿ, "ಎಲವೋ ಮೂರ್ಖ, ಇದನ್ನು ನಿನಗೆ ಯಾರು ಹೇಳಿಕೊಟ್ಟರು? ಬಿದಿರು ಮಳೆಯಲ್ಲಿ ಅಗ್ನಿ ಹುಟ್ಟಿದ ಹಾಗೆ ನನ್ನ ವಂಶದಲ್ಲಿ ನೀನು ಹುಟ್ಟಿದೆ," ಎಂದು ಹಲ್ಲು ಕಡಿದು, ಕರ್ಣಕಠೋರವಾದ ಮಾತುಗಳನ್ನಾಡಿ ಕಾಲಿನಿಂದೊದೆದನು. ತಂದೆಯ ಗರ್ವವನ್ನು, ದುರಭಿಮಾನವನ್ನು ಅನೇಕ ವಿಧವಾಗಿ ಖಂಡಿಸಿ, "ಕೈಯಾರ ವಂಶವನ್ನು ನಾಶಮಾಡಿಕೊಳ್ಳುವ ಈ ದುರ್ಬುದ್ಧಿ ನಿಮ್ಮ ವಿನಾಶಕ್ಕೇ ಬಂದಿದೆ," ಎಂದು ಪ್ರಹಸ್ತನನು ಜೋರಾಗಿಯೇ ಎದುರಾಡಿದನು. ಬೇರೆ ಏನೂ ದಾರಿ ಕಾಣದೆ ಒಳಗೊಳಗೇ ದುಃಖಿಸಿದನು. "ಮರಣ ಸಮೀಪಿಸಿದವರಿಗೆ ಎಂಥ ದಿವ್ಯೌಷಧವೂ ಕೆಲಸ ಮಾಡುವುದಿಲ್ಲ. ಹಾಗೇ, ನನ್ನ ಹಿತವಾದ ಮಾತುಗಳು ನನ್ನ ತಂದೆಗೆ ಅಪಥ್ಯವಾಯಿತು, " ಎಂದು ತಾಯಿಯ ಬಳಿ ಹೋಗಿ, ರಾವಣನ ಮೂರ್ಖ ಬುದ್ಧಿಯನ್ನು ತಾಯಿಗೆ ತಿಳಿಸಿದನು. ಇಬ್ಬರೂ ರಾಮನನ್ನು ಸ್ಮರಿಸಿದರು.

**ರಾಮಚಂದ್ರ, ಚಂದ್ರ**: ಇತ್ತ, ವಾನರ ಸೈನ್ಯ ಸುವೇಲಾಚಲದ ಮೇಲೆ ಒಳ್ಳೆಯ ಒಂದು ವೇದಿಕೆ ರಚಿಸಿ, ರಾಮಲಕ್ಷ್ಮಣರಿಗೆ ಮೆತ್ತನೆಯ ಆಸನಗಳನ್ನು ನಿರ್ಮಿಸಿ, ಅದರ ಮೇಲೆ ಎಲೆ ಹೂವುಗಳನ್ನು ಹರಡಿದರು. ಅದರ ಮೇಲೆ ರಾಮನು ಬಂದು ಕುಳಿತನು. ಆಚೀಚೆ ಧನುರ್ಬಾಣಗಳನ್ನಿರಿಸಿ, ಸ್ವಲ್ಪ ಸಮಯದ ನಂತರ ಸುಗ್ರೀವನ ತೊಡೆಯ ಮೇಲೆ ತಲೆಯಿಟ್ಟು ರಾಮನು ವಿಶ್ರಮಿಸಿದನು, ವಾನರರು ಕೈಕೈ ಉಜ್ಜಿಕೊಳ್ಳುತ್ತಾ ರಾವಣನ ವಧೆಗಾಗಿ ರಾಮಾಜ್ಞೆಗೆ ಕಾದು ನಿಂತಿದ್ದರು. ಅದೃಷ್ಟಶಾಲಿಗಳಾದ ಹನುಮಂತ ಮತ್ತು ಅಂಗದರು ಪಾದಗಳನ್ನೊತ್ತುತ್ತಿದ್ದರು. ಲಕ್ಷ್ಮಣನು ಧನುರ್ಬಾಣಗಳನ್ನು ಹಿಡಿದು, ತದೇಕ ದೃಷ್ಟಿಯಿಂದ ರಾಮಚಂದ್ರನನ್ನು ನೋಡುತ್ತಾ ಪಾದಗಳ ಬಳಿ ನಿಂತಿದ್ದನು. ಆ ವೇಳೆಗೆ ಚಂದ್ರೋದಯವಾಗುತ್ತಿತ್ತು, ರಾಮನು ಪೂರ್ವ ದಿಕ್ಕಿನಲ್ಲಿ ಉದಯಿಸುತ್ತಿದ್ದ ಚಂದ್ರನನ್ನು ನೋಡಿ, "ಓ ಸಖರೇ! ನೋಡಿ, ಆ ಚಂದ್ರನಲ್ಲೇನೋ ಒಂದು ಮಚ್ಚೆ ಕಾಣಿಸುತ್ತಿದೆ. ಅದೇನೆಂದು ಹೇಳಬಲ್ಲಿರಾ?" ಎಂದು ಪ್ರಶ್ನಿಸಿದನು. ಒಬ್ಬೊಬ್ಬರು ಒಂದೊಂದು ಉತ್ತರವಿತ್ತರು. ಹನುಮಂತನು, "ನಾಥಾ! ಅದರಲ್ಲಿ ನನಗೇನೂ ಕಾಣಿಸುತ್ತಿಲ್ಲ, ಅದು ಶುದ್ಧವಾದ ಒಂದು ಕನ್ನಡಿ. ನಿಮ್ಮ ಮುಖಕ್ಕೆ ಎದುರಾಗಿರುವುದರಿಂದ ನಿಮ್ಮ ಮುಖಬಿಂಬ ಅದರಲ್ಲಿ ನನಗೆ ಕಾಣಿಸುತ್ತಿದೆ," ಎಂದನು.

**ಅಂಗದನ ರಾಯಭಾರ**: ರಾಮಚಂದ್ರನು ಆ ರಾತ್ರಿಯೆಲ್ಲಾ ಈ ವಿಧವಾಗಿ ವಾನರರೊಂದಿಗೆ ಆನಂದದಿಂದ ಕಾಲ ಕಳೆದನು. ಬೆಳಗಾಗುತ್ತಲೇ ಸಮುದ್ರದಲ್ಲಿ ಸ್ನಾನ ಸಂಧ್ಯಾದಿಗಳನ್ನು ಮಾಡಿ ಮಂತ್ರಿಗಳನ್ನು ಕರೆದು ಮುಂದೇನು ಮಾಡಬೇಕೆನ್ನುವುದರ ಬಗ್ಗೆ ಸಮಾಲೋಚಿಸಿದನು. ಆಗ, ಎಲ್ಲರೂ ಒಮ್ಮತದಿಂದ ಅಂಗದನನ್ನು ರಾವಣನ ಬಳಿಗೆ ರಾಯಭಾರಿಯಾಗಿ ಕಳಿಸುವುದು ಒಳ್ಳೆಯದೆಂದು ನಿರ್ಣಯಿಸಿದರು. ಅಂಗದನನ್ನು ಕರೆದು ರಾಮನು, "ಅಂಗದಾ! ನೀನು ಗುಣವಂತ, ಬಲವಂತ. ನೀನು ರಾಮಕಾರ್ಯ ನಿಮಿತ್ತ ರಾವಣನ ಬಳಿಗೆ ಹೋಗಿ ಬಾ. ರಾವಣನಿಗೆ ಹಿತವನ್ನುಂಟು ಮಾಡು. ಉದ್ರೇಕದಿಂದ ಅವನೊಂದಿಗೆ ಮಾತನಾಡಬೇಡ," ಎಂದು ಹೇಳಿ, ಹೇಳಬೇಕಾದ ಸಂಧಿ ಮಾತುಗಳನ್ನು ತಿಳಿಸಿದನು. ಅಂಗದನು ರಾಮನಿಗೆ ನಮಸ್ಕರಿಸಿ, ಕೈ ಮುಗಿದು "ನಾಥಾ! ನೀವು ಕಟಾಕ್ಷಿಸಬೇಕು. ನಿಮ್ಮ ಕಾರ್ಯ ಮಾಡುವಂಥ ಅದೃಷ್ಟ ನನಗೆ ಸಿಕ್ಕಿದ್ದು ನನ್ನ ಭಾಗ್ಯ. ಈ ಕಾರ್ಯದಲ್ಲಿ ಏನಾದರೂ ಸರಿಯೆ, ನನ್ನ ಪ್ರಾಣವನ್ನಾದರೂ ಸರಿಯೆ ಅರ್ಪಿಸುತ್ತೇನೆ," ಎಂದನು. ರಾಮನ ಹೃದಯ ಕರಗಿತು.

ಅಂಗದನನ್ನು ಆಲಂಗಿಸಿಕೊಂಡು, ತಲೆ ಸವರಿ, ಆಶೀರ್ವದಿಸಿದನು. ಅತ್ಯಂತ ಉತ್ಸಾಹದಿಂದ ಅಂಗದನು ರಾಮನನ್ನು ಸ್ಮರಿಸುತ್ತಾ ಹೊರಟು ಲಂಕೆಯನ್ನು ಸೇರಿದನು. ಮಹಾದ್ವಾರದಲ್ಲಿ ಅಡ್ಡ ಬಂದವರನ್ನು ಪಕ್ಕಕ್ಕೆ ತಳ್ಳಿ, ರಾಜನಗರವನ್ನು ಪ್ರವೇಶಿಸಿದನು. ಅಲ್ಲಿದ್ದ ರಾವಣನ ಕುಮಾರನು ಇವನನ್ನು ನೋಡಿ, "ಓ ವಾನರಾ! ನೀನು ಯಾರು?" ಎಂದು ಕೇಳಿದನು. ಅಂಗದನು, "ನಾನು ರಾಮನ ದೂತ," ಎಂದು ಉತ್ತರವಿತ್ತನು. ರಾವಣ ಕುಮಾರನು ಅವನನ್ನು ಕಾಲಿನಿಂದ ತಳ್ಳಿ ಹೋದನು. ಅಂಗದನು ಅವನ ಕಾಲುಗಳನ್ನು ಹಿಡಿದು ಗಿರಗಿರನೆ ಸುತ್ತಿ ನೆಲಕ್ಕೆ ಬಡಿದನು. ಇದನ್ನು ನೋಡಿ ರಾಕ್ಷಸರು ಭಯಪಟ್ಟು, "ಇವನು ಮಹಾ ಭಯಂಕರ ವಾನರ. ಈ ಮೊದಲು ಲಂಕೆಯನ್ನು ದಹಿಸಿದ ವಾನರನೇ ಪುನಃ ಬಂದಿದ್ದಾನೆ," ಎಂದುಕೊಂಡರು. ಕ್ಷಣದಲ್ಲಿ ಲಂಕೆಯಲ್ಲೆಲ್ಲಾ ಕೋಲಾಹಲವುಂಟಾಯಿತು.

**ರಾವಣನ ಸಭೆಯಲ್ಲಿ**: ಅಂಗದನು ಎಲ್ಲಿ ಹೋದರೂ ಅಲ್ಲಿ ರಾಕ್ಷಸರು ಗುಂಪು ಗುಂಪಾಗಿ ನಿಂತು ಭಯಭ್ರಾಂತರಾಗಿ ನೋಡುತ್ತಿದ್ದರು. ಮೊದಲೇ ಅವನಿಗೆ ದಾರಿ ಮಾಡಿಕೊಟ್ಟು ತಪ್ಪಿಸಿಕೊಳ್ಳುತ್ತಿದ್ದರು. ಹೀಗೆ, ಅಂಗದನು ನಿರ್ಭಯವಾಗಿ ಹೋಗಿ ರಾವಣನ ಸಭೆಯನ್ನು ಪ್ರವೇಶಿಸಿದನು. ಒಬ್ಬ ದೂತನು ಓಡಿಹೋಗಿ ಅಂಗದನ ಆಗಮನವನ್ನು ರಾವಣನಿಗೆ ಬಿನ್ನವಿಸಿದನು. ಅವನನ್ನು ತನ್ನ ಸಮಕ್ಷಮಕ್ಕೆ ಕರೆದು ತರುವಂತೆ ರಾವಣನು ಆಜ್ಞಾಪಿಸಿದನು. ಅಂಗದನು ರಾವಣನನ್ನು ನೋಡಿ, ಅವನೊಂದು ಶಕ್ತಿಶಾಲಿಯಾದ ಪರ್ವತವೆಂದು ಭಾವಿಸಿದನು. ನಿರ್ಭಯವಾಗಿ

ಅವನೆದುರು ಹೋಗಿ ನಿಂತನು. ಅವನನ್ನು ನೋಡಿ ಸಭೆಯಲ್ಲಿದ್ದ ರಾಕ್ಷಸರೆಲ್ಲರೂ ಒಳಗೊಳಗೇ ದಿಗಿಲುಗೊಂಡರು. ಮಾತನಾಡದ ಸ್ಥಿತಿಯಲ್ಲಿದ್ದರು.

ರಾವಣನು, "ಎಲ್ಲವೋ ವಾನರಾ! ನೀನಾರು?" ಎಂದು ಪ್ರಶ್ನಿಸಿದನು. ಅಂಗದನು, "ರಾಜಾ! ನಾನು ರಾಮನ ದೂತನು," ಎಂದು ಉತ್ತರವಿತ್ತನು. "ನಿನ್ನ ಆಗಮನಕ್ಕೆ ಕಾರಣವೇನು?" ಎಂದು ರಾವಣ ಕೇಳಿದನು. ಅಂಗದನು, "ಓ ರಾವಣಾ! ಪೂರ್ವದಲ್ಲಿ ನನ್ನ ತಂದೆಗೂ ನಿನಗೂ ಸ್ನೇಹವಿತ್ತು. ನಿನ್ನ ಒಳ್ಳೆಯದನ್ನು ಬಯಸಿ ನಿನಗೆ ಬುದ್ಧಿ ಹೇಳುವ ಸಲುವಾಗಿ ರಾಮಾಜ್ಞೆ ಪಡೆದು ಬಂದಿದ್ದೇನೆ," ಎಂದು ಸಾವಧಾನವಾಗಿ ಹೇಳಿದನು. "ಓ ರಾವಣಾ! ಅಭಿಮಾನದಿಂದಲೋ ಮೋಹದಿಂದಲೋ ಇಲ್ಲವೆ ರಾಜತ್ವದ ಮದಾಂಧತೆಯಿಂದಲೋ ನೀನು ಆ ಜಗದಂಬೆಯನ್ನು, ಆ ಲೋಕ ಮಾತೆಯನ್ನು, ಆ ಜಾನಕಿಯನ್ನು ಕರೆತಂದೆ. ಅದು ಒಳ್ಳೆಯದಲ್ಲ. ಏನೋ ಆದದ್ದಾಯಿತು. ಈಗಲಾದರೂ ನೀನು ಸತ್ಯವನ್ನು ಗುರ್ತಿಸಿ, ನಾನು ಹೇಳಿದಂತೆ ಮಾಡಿದರೆ ನಿನ್ನ ಅಪರಾಧವನ್ನು ಕ್ಷಮಿಸಬಹುದು. ತಕ್ಷಣ ನೀನು ಈ ಕೆಲಸ ಮಾಡು. ಇಲ್ಲದಿದ್ದರೆ ಕೈಯ್ಯಾರೆ ನಿನ್ನ ವಂಶವನ್ನು, ನಿನ್ನ ರಾಜ್ಯವನ್ನು ಮಣ್ಣುಪಾಲು ಮಾಡಿಕೊಳ್ಳುವೆ," ಎಂದನು. ಅಂಗದನ ಮಾತನ್ನು ಕೇಳಿ ರಾವಣನು, "ಓ ವಾನರಾಧಮಾ! ನೀನು ಮೂರ್ಖ. ನಾನು ದೇವ ಶತ್ರುವೆನ್ನುವುದು ನಿನಗೆ ತಿಳಿಯದು. ಇರಲಿ, ನಿನ್ನ ಹೆಸರೇನು? ನಿನ್ನ ತಂದೆಯ ಹೆಸರೇನು? ನಿನಗೂ ನನಗೂ ಇರುವ ಸಂಬಂಧವೇನು? ಕಣ್ಣು ತೆರೆದು ನೋಡು," ಎಂದು ಗರ್ಜಿಸಿದನು. ಅಂಗದನು ಫಕ್ಕನೆ ನಕ್ಕು, "ಓ ರಾಕ್ಷಸ ರಾಜಾ! ನನ್ನ ಹೆಸರು ಅಂಗದ, ನನ್ನ ತಂದೆಯ ಹೆಸರು ವಾಲಿ. ನಿಮ್ಮಿಬ್ಬರಿಗೂ ಸಖ್ಯವಿತ್ತು," ಎಂದನು. ಅಂಗದ ಮಾತನ್ನು ಕೇಳಿ ರಾವಣ ನಿಶ್ಚೇಷ್ಟಿತನಾದನು. "ಸತ್ಯ! ಸತ್ಯ! ವಾಲಿ ಎನ್ನುವ ಒಬ್ಬ ವಾನರ ಪೂರ್ವ ಕಾಲದಲ್ಲಿದ್ದನು. ಅವನ ಮಗನೇನು ನೀನು? ಓಹೋ! ಅಂಗದಾ, ನನ್ನ ವಂಶವನ್ನು ಧ್ವಂಸ ಮಾಡುವುದಕ್ಕೆಂದೇ ನೀನು ಬೆಂಕಿಯಾಗಿ ಬಂದೆಯಾ?" ಎಂದು ರಾವಣನು ವಿಕಟವಾಗಿ ನುಡಿದನು.

**ವಾಗ್ಯುದ್ಧ**: ಅಂಗದನು ನಕ್ಕು, "ಓ ರಾವಣಾ! ನಿನಗೆ ಅಂತ್ಯಕಾಲ ಸಮೀಪಿಸಿದೆ. ಬೇಗನೆ ನೀನೂ ವಾಲಿಯ ಬಳಿಗೆ ಹೋಗುವೆ. ರಾಮನನ್ನು ವಿರೋಧಿಸುವುದರಿಂದ ಲಭಿಸುವ ಸುಖವನ್ನು ನಿನಗಲ್ಲಿ ವಾಲಿ ವಿವರವಾಗಿ ತಿಳಿಸುವನು. ಇಪ್ಪತ್ತು ಕಣ್ಣುಗಳು, ಇಪ್ಪತ್ತು ಕಿವಿಗಳಿದ್ದೂ ನೀನು ಕುರುಡನಾದೆ, ಕಿವುಡನಾದೆ. ಅಜ್ಞಾನಾಂಧಕಾರದಿಂದಾಗಿ ನಿನಗೆ ನೀನೇ ದೊಡ್ಡವನೆಂದು ಗರ್ವಿಸುತ್ತಿದ್ದೀಯೆ. ಯಾವ ಕುಲವನ್ನು ನೀನು ರಕ್ಷಿಸ ಹೊರಟಿರುವಿಯೋ ಅದನ್ನು ನಾನು ನಾಶ ಮಾಡಲು ಹೊರಟಿದ್ದೇನೆ. "ಪಾತಕೀ! ಕಿರಾತಕಾ! ಮದಾಂಧಾ! ರಾಕ್ಷಸಾ!" ಎಂದು ಆರ್ಭಟಿ

ಸಿದನು, ಹಲ್ಲುಕಡಿದನು. ರಾವಣನು ತಟ್ಟನೆದ್ದು, "ಎಲವೋ ಕುಲಪಾತಕಾ! ಎಲವೋ ಮರ್ಕಟಾ! ರಾಜಧರ್ಮ ತಿಳಿದವನಾದ್ದರಿಂದ ನಿನ್ನ ಮಾತುಗಳನ್ನು ಸಹಿಸಿಕೊಂಡಿದ್ದೇನೆ. ಜಾಗ್ರತೆಯಿಂದ ಮಾತನಾಡು," ಎಂದು ಮೀಸೆ ತಿರುಗಿಸಿದನು. ಅಂಗದನು ಆ ವಿಕಾರವನ್ನು ನೋಡಿ, "ಎಲವೋ ರಾಕ್ಷಸ ರಾಜಾ! ನಿನ್ನ ಧರ್ಮವನ್ನು, ನಿನ್ನ ಸೌಶೀಲ್ಯವನ್ನು, ನಿನ್ನ ರಾಜನೀತಿಯನ್ನು ಕೇಳಿದ್ದೆ. ನಿನ್ನ ಧರ್ಮ ಎಂಥ ಘನಕಾರ್ಯ ಮಾಡಿದೆಯೋ ಯೋಚಿಸು. ಪರಸ್ತ್ರೀಯನ್ನು ಅಪಹರಿಸುವುದು, ನಿನ್ನ ಅಣ್ಣ ಕುಬೇರನು ಕಳಿಸಿದ ದೂತನನ್ನು ನಿನ್ನ ಕಣ್ಮುಂದೆಯೇ ಭಕ್ಷಿಸುವುದು, ಇವೆಲ್ಲಾ ನಿನ್ನ ರಾಜನೀತಿ! ನಾಚಿಕೆ ಇಲ್ಲದೆ ರಾಜನೀತಿಯನ್ನು ಮಾತನಾಡುತ್ತಿದ್ದೀಯೆ. ದೂತನಾಗಿ ಬಂದ ವಾನರನ ಬಾಲಕ್ಕೆ ಬೆಂಕಿ ಹತ್ತಿಸಿದ ರಾಜನೀತಿ ನಿನ್ನದು! ಇದು ರಾಕ್ಷಸ ಧರ್ಮ! ನಿನಗೆ ರಾಜ ನೀತಿಯ ಬಗ್ಗೆ ಮಾತನಾಡಲೂ ಸಹ ಹಕ್ಕಿಲ್ಲ. ನೀನು ಮಹಾಪಾಪಿ," ಎಂದು ನಿರ್ಭಯವಾಗಿ, ಸ್ಪಷ್ಟವಾಗಿ ಪ್ರತ್ಯುತ್ತರವಿತ್ತನು. ಸಭೆಯಲ್ಲಿದ್ದವರೆಲ್ಲರೂ ತಮ್ಮೊಳಗೇ ಭಯಭ್ರಾಂತರಾಗಿ ಏನು ಸಂಭವಿಸುವುದೋ ಎಂದು ನಡುಗಿದರು.

ರಾವಣನು, "ಎಲವೋ ವಾನರಾ! ನನ್ನೊಂದಿಗೆ ಯುದ್ಧ ಮಾಡಬಲ್ಲವರು ನಿಮ್ಮ ಸೈನ್ಯದಲ್ಲಿ ಒಬ್ಬರಾದರೂ ಇರುವರೇನೋ? ನಿನ್ನ ಪ್ರಭು ಪತ್ನಿವಿಯೋಗದಿಂದ ಸೊರಗಿದ್ದಾನೆ. ಅವನ ತಮ್ಮನು ಅಣ್ಣನ ದುಃಖವನ್ನು ನೋಡಿ ನೋಡಿ ಕೃಶವಾಗಿದ್ದಾನೆ. ನೀನು ಮತ್ತು ಸುಗ್ರೀವ, ನೀವಿಬ್ಬರೂ ನನ್ನೊಂದಿಗೆ ವಿರೋಧ ಮಾಡಿಕೊಂಡು ನದಿ ದಡದಲ್ಲಿ ಕಚ್ಚಾಡುವ ಎರಡು ಹಕ್ಕಿಗಳಂತೆ ಇಬ್ಬರೂ ಕಚ್ಚಾಡಿ ಪ್ರವಾಹಕ್ಕೆ ಬಿದ್ದು ಸಾಯುವಿರಿ. ನಿಮ್ಮಿಬ್ಬರಿಗೂ ರಾಜ್ಯಾಕಾಂಕ್ಷೆಯಲ್ಲದೆ ಬೇರೆ ಆಕಾಂಕ್ಷೆ ಇಲ್ಲ. ನೀವು ನನ್ನೊಂದಿಗೆ ಹೋರಾಡಬಲ್ಲಿರಾ? ನನ್ನ ತಮ್ಮ ಅಂಜುಬುರುಕ; ಜಾಂಬವಂತ ವಯೋವೃದ್ಧನು; ನಲ ನೀಲರು ಶಿಲ್ಪಕಲಾ ಪ್ರವೀಣರು; ಅವರಿಗೆ ಕತ್ತಿ ಹಿಡಿಯುವುದೇ ತಿಳಿಯದು," ಎಂದು ವ್ಯಂಗ್ಯವಾಡಿದನು. ಅಂಗದನು ಘಕಘಕನೆ ನಕ್ಕು, "ಎಲವೋ ರಾವಣಾ! ಒಂದು ಚಿಕ್ಕ ಕೋತಿ ನಿನ್ನ ಲಂಕೆಗೆ ಬೆಂಕಿ ಹಚ್ಚಿತೆಂದರೆ ಯಾವ ಮೂರ್ಖನೂ ನಂಬುವುದಿಲ್ಲ. ಆ ಚಿಕ್ಕ ಕೋತಿ ಮಹಾವೀರನಲ್ಲ ಎನ್ನುತ್ತಿದ್ದೀಯೆ. ನಿನ್ನೊಂದಿಗೆ ಯುದ್ಧ ಮಾಡಬಲ್ಲ ವೀರನು ನಮ್ಮ ಸೈನ್ಯದಲ್ಲಿಲ್ಲವೆಂದು ನೀನು ಹೇಳಿದ್ದರಿಂದ ನನಗೆ ಕೋಪವಿಲ್ಲ. ಸ್ನೇಹವನ್ನಾಗಲೀ ವೈರವನ್ನಾಗಲೀ ಸರಿಸಮಾನರೊಂದಿಗೆ ಮಾತ್ರ ಮಾಡಬೇಕೆಂದು ಧರ್ಮಶಾಸ್ತ್ರ ಹೇಳುತ್ತದೆ. ಸಿಂಹವು ಕಪ್ಪೆಯನ್ನು ಕೊಂದರೆ ಯಾರೂ ಹೊಗಳುವುದಿಲ್ಲ. ರಾಮನು ನಿನ್ನನ್ನು ಸಂಹರಿಸಲು ಪ್ರಯತ್ನಿಸುವುದು ಅವನ ಮರ್ಯಾದೆಗೆ ಲೋಪವಾದಂತೆ. ನಿನ್ನಂಥ ಕ್ಷುದ್ರನನ್ನು ಸಂಹರಿಸುವುದು ಅವನ ಪೌರುಷಕ್ಕೆ ತಕ್ಕದಲ್ಲ. ಕ್ಷತ್ರಿಯ ಧರ್ಮ ಮಹಾ

ಕಠಿಣ. ನೀನು ಪರಸ್ತ್ರೀಯನ್ನು ಅಪಹರಿಸಿದ ಮಹಾಪಾಪಿ. ನಿನ್ನನ್ನು ಕೋತಿಗಳೇ ಕೊಲ್ಲಬೇಕು, ಮಹಾ ಪಾಪಿಯೇ ಕೋತಿಗಳ ಕೈಯಲ್ಲಿ ಸಾವನ್ನಪ್ಪುವನು," ಎಂದನು.

ರಾವಣನು ನಕ್ಕು, "ಎಲವೋ ವಾನರಾ! ವಾನರರು ತಮ್ಮ ಯಜಮಾನನ ಇಷ್ಟದಂತೆ ನಾಚಿಕೆಯಿಲ್ಲದೆ ಕುಣಿಯುವರು. ಯಾವ ಆಟ ಆಡೆಂದು ಯಜಮಾನ ಹೇಳುವನೋ ಆ ಆಟವಾಡುವರು. ಎಲವೋ ಅಂಗದಾ! ಸ್ವಾಮಿ ಇಷ್ಟದಂತೆ ನಡೆಯುವುದು ನಿನ್ನ ಜಾತಿಯ ಲಕ್ಷಣ!" ಎಂದು ವಿಕಟವಾಗಿ ನುಡಿದನು. ಅಂಗದ, "ಎಲವೋ ರಾವಣ! ನಿನಗೆ ಪ್ರಾಣಿಗಳ ವಿಷಯ ತಿಳಿದಿದೆಯೇ ವಿನಾ ಪ್ರಭುವಿನ ದೈವಸ್ವರೂಪವನ್ನು ನೀನು ತಿಳಿದುಕೊಳ್ಳಲಾರದೆ ಹೋದೆ. ನಿನ್ನ ಪರಾಕ್ರಮ, ನಿನ್ನ ರಾಜನೀತಿಯನ್ನು ನಮ್ಮ ವಾನರನು ಈಗಾಗಲೇ ನಮಗೆ ಬೇಕಾದಷ್ಟು ತಿಳಿಸಿದ್ದಾನೆ. ನಿನ್ನ ಮಗನನ್ನು ಕೊಂದು, ವನವನ್ನು ಚೆಲ್ಲಾಪಿಲ್ಲಿ ಮಾಡಿ, ಲಂಕೆಯನ್ನು ಭಸ್ಮ ಮಾಡಿದರೂ ನೀನು ಅವನಿಗೆ ತಕ್ಕ ಶಿಕ್ಷೆ ಮಾಡಲಾರದೆ ಬಿಟ್ಟು ಬಿಟ್ಟೆ. ನಿನ್ನ ಹೃದಯ ಅಷ್ಟು ಸರಳವಾದುದೆಂದೇ ನಾನಿಷ್ಟು ಮಾತನಾಡಿದೆ. ನಿನಗೆ ನಾಚಿಕೆಯಿಲ್ಲ, ರೋಷವಿಲ್ಲ, ನೀತಿಯಿಲ್ಲ, ನಿಯಮವಿಲ್ಲ. ವಿಭೀಷಣನು ಹೇಡಿಯೆಂದು ಹಲ್ಲು ಕಡಿಯುತ್ತಿದ್ದೀಯೆ. ನಿನ್ನ ಬದುಕು ಭೂಮಿಗೆ ಭಾರ. ನಿನ್ನ ಗುಣ ಬೀದಿ ನಾಯಿಗಳಿಗೂ ಇರುವುದಿಲ್ಲ. ನಿನಗಿಂತ ನಾಯಿಗಳು ಉತ್ತಮವೆನ್ನುವುದನ್ನು ತಿಳಿಯದೆ ಹೋಗಿದ್ದೀಯೆ," ಎಂದು ಮರ್ಯಾದೆ ಕೊಡದೆ ಮಾತನಾಡಿದನು. ರಾವಣನು, "ಎಲವೋ ಅಂಗದಾ! ಯಾರು ಸ್ವಭುಜ ಪರಾಕ್ರಮದಿಂದ ಕೈಲಾಸ ಪರ್ವತವನ್ನು ಮೇಲಕ್ಕೆತ್ತಿದನೋ ಯಾರು ಪುಷ್ಪಗಳಿಗೆ ಬದಲು ಶಿರಸ್ಸುಗಳಿಂದ ಶಿವನನ್ನು ಪೂಜಿಸಿದನೋ ಯಾರ ಶೌರ್ಯ ಶಿವನಿಗೆ ತಿಳಿದಿದೆಯೋ ಯಾರ ಹೆಸರನ್ನು ಕೇಳಿದಾಕ್ಷಣ ಎದೆ ಒಡೆಯುವುದೋ ಆ ಶೂರನೇ ಆ ರಣಧೀರನೇ ಈ ರಾವಣ! ನಿನ್ನ ಜಂಭವನ್ನು ಕಟ್ಟಿಡು," ಎಂದನು.

**ನಾಲ್ಕು ಕಿರೀಟಗಳು**: ಅದಕ್ಕೆ ಅಂಗದನು, "ಎಲವೋ ದುರಭಿಮಾನಿ! ಹೆಚ್ಚು ಮಾತಾಡದೆ ರಾಮನನ್ನು ಭಜಿಸು. ಅವನನ್ನು ಶರಣು ಹೋಗು. ಇಲ್ಲದಿದ್ದರೆ ರಾಮಬಾಣದಿಂದ ನಿನ್ನ ತಲೆಗಳು ಚೆಂಡಿನಂತೆ ಕೆಳಗುರುಳುವುವು. ವಾನರರು ಅವುಗಳನ್ನು ಒದೆದಾಡುವರು. ನಾನು ಸುಗ್ರೀವನ ದೂತ. ರಾಮನ ಆಜ್ಞೆ ಇಲ್ಲದಿರುವುದರಿಂದ, ಅವನ ಗೌರವಕ್ಕೆ ಧಕ್ಕೆ ಬರುವುದೆಂದು ಸುಮ್ಮನಿದ್ದೇನೆ. ಇಲ್ಲದಿದ್ದರೆ ಲೀಲಾಜಾಲವಾಗಿ ನಿನ್ನನ್ನು ಕ್ಷಣದಲ್ಲಿ ಸಂಹರಿಸಿ ಸಮುದ್ರದಲ್ಲೆಸೆಯುತ್ತಿದ್ದೆ," ಎಂದು ಉಗ್ರನಾಗಿ ಸಿಂಹದಂತೆ ಎರಡು ಕೈಗಳನ್ನು ನೆಲಕ್ಕೆ ಬಡಿದನು. ಅದಕ್ಕೆ ಭೂಮಿ ಅದುರಿತು. ರಾವಣನು ಗಿರಗಿರನೆ ತಿರುಗಿ ಬಿದ್ದನು. ಅವನ ಹತ್ತು ಕಿರೀಟಗಳು

ನೆಲಕ್ಕುರುಳಿದವು. ಅಂಗದನು ನಾಲ್ಕು ಕಿರೀಟಗಳನ್ನು ತೆಗೆದುಕೊಂಡು ರಾಮನ ಬಳಿಗೆ ಎಸೆದನು. ಹಾರಿ ಬರುತ್ತಿದ್ದ ಅವುಗಳನ್ನು ನೋಡಿ ವಾನರರು ವಿಚಿತ್ರವಾಗಿ ತಮಗೆ ತೋಚಿದಂತೆ ವರ್ಣಿಸತೊಡಗಿದರು. ರಾಮನು ಅವುಗಳನ್ನು ನೋಡಿ, ಅವು ರಾವಣನ ಕಿರೀಟಗಳೆಂದೂ ಅಂಗದನು ಅಲ್ಲಿಂದ ಎಸೆದಿರುವನಾದ್ದರಿಂದ ಅವು ರಾಹು ಕೇತು ಗ್ರಹಗಳಂತೆ ಹಾರಿ ಬರುತ್ತಿವೆಯೆಂದೂ ಹೇಳಿ ವಾನರರನ್ನು ಸಮಾಧಾನಪಡಿಸಿದನು.

**ಪಾದಗ್ರಹಣ**: ಇತ್ತ, ರಾವಣನು, "ಈ ವಾನರನನ್ನು ಬಿಡದೆ ಕಟ್ಟಿಹಾಕಿ ತನ್ನಿ," ಎಂದು ಆಜ್ಞಾಪಿಸಿ ಅಲ್ಲಿಂದ ಹೊರಟನು. ಅದನ್ನು ಕೇಳಿ ಅಂಗದನು, "ರಾವಣಾ! ನಾಚಿಕೆಯಿಲ್ಲದೆ ಓಡಿ ಹೋಗುತ್ತಿದ್ದೀಯೆ. ಯಾಕೆ ಈ ಶೌರ್ಯ? ಇದಕ್ಕಿಂತ ಮುಖ ಮುಚ್ಚಿಕೊಂಡು ಸಮುದ್ರದಲ್ಲಿ ಮುಳುಗಿ ಪ್ರಾಣ ಬಿಡಬಹುದು. ಸ್ತ್ರೀ ಚೋರಾ! ಮಂದಮತೀ! ಕಾಮುಕಾ! ಯುದ್ಧದಲ್ಲಿ ನಿನ್ನ ನಾಲಗೆಯನ್ನು ಕಿತ್ತು ಕಾಗೆಗಳಿಗೆ ಹಾಕುತ್ತೇನೆ, ಜಾಗ್ರತೆ!" ಎಂದು ಹಲ್ಲುಗಳನ್ನು ಕಟಕಟ ಕಡಿದನು. ರಾವಣನು "ಎಲವೋ ರಾಕ್ಷಸರೇ! ಇವನ ಕಾಲುಗಳನ್ನು ಹಿಡಿದು ನೆಲಕ್ಕೆ ಬಡಿಯಿರಿ, ಶಿರಸ್ಸನ್ನು ಹೋಳುಮಾಡಿ," ಎಂದು ಆಜ್ಞಾಪಿಸಿದನು. ಒಡನೆ ಮೇಘನಾದನೆದ್ದು ಅಂಗದನ ಕಾಲುಗಳನ್ನು ಹಿಡಿದೆಳೆದನು. ಅವು ಕದಲಲಿಲ್ಲ. ಎಷ್ಟು ಜನ ಬಂದು ಎಳೆದರೂ ಅವನ ಕಾಲುಗಳನ್ನು ಕದಲಿಸಲಾಗಲಿಲ್ಲ. ಅವರು ನಾಚಿಕೆಪಟ್ಟು, ಅಸಹಾಯಕರಾಗಿ ಕುಳಿತರು. ದೇವಕಂಠನು ಹೋಗಿ ಅಂಗದನ ಕಾಲುಗಳನ್ನು ಕದಲಿಸಲು ಪ್ರಯತ್ನಿಸಿದನು. ಅವನಿಗೂ ಆಗಲಿಲ್ಲ. ಆಗ, ರಾವಣನೇ ಸ್ವತಃ ಅಂಗದನ ಕಾಲುಗಳನ್ನು ಹಿಡಿದೆಳೆದನು. ಅಂಗದನು ನಕ್ಕು, "ರಾವಣಾ! ನೀನು ಹಿಡಿಯಬೇಕಾದದ್ದು ರಾಮಪಾದ! ಅದನ್ನು ಹಿಡಿ ನಿನಗೆ ಮುಕ್ತಿ ದೊರೆಯುವುದು," ಎಂದು ಕಾಲನ್ನು ಜಾಡಿಸಿದೊಡನೆ, ಅದರ ಆಘಾತಕ್ಕೆ ರಾವಣನು ನೆಲಕ್ಕುರುಳಿ ಮೂರ್ಛೆ ಹೋದನು. ಅವನ ಕಳೆ ಕಾಂತಿಗಳು ನಶಿಸಿದುವು. ನಾಚಿಕೆಯಿಂದ ರಾವಣನು ಹಗಲಿನ ಚಂದ್ರನಂತೆ ತೇಜೋಹೀನನಾದನು. ಅದನ್ನು ನೋಡಿ ಅಂಗದನು, ನಾನಿನ್ನು ಇವನೊಂದಿಗೆ ಹೆಚ್ಚು ಮಾತನಾಡುವುದು ಸರಿಯಲ್ಲ, ಇವನಿಗೆ ಬುದ್ಧಿ ಹೇಳೆಂದು ಮಾತ್ರವೇ ರಾಮ ನನಗೆ ಆಜ್ಞೆ ಮಾಡಿ ಕಳಿಸಿದ್ದಾನೆ. ಅದರೆ, ಇವನು ಬುದ್ಧಿ ಮಾತುಗಳಿಗೆ ಬಗ್ಗುವವನಲ್ಲ, ಮೂರ್ಖತನ ಬಿಡುವವನಲ್ಲ. ಇವನಿಗೆ ಯುದ್ಧವೇ ತಕ್ಕ ಚಿಕಿತ್ಸೆ ಎಂದು ಯೋಚಿಸಿ, ರಾಮನ ಚರಣ ಸನ್ನಿಧಿಗೆ ಹೊರಟು ವಿಷಯವನ್ನು ರಾಮನಿಗೆ ಬಿನ್ನವಿಸಿದನು.

ನಾಚಿಕೆಯಿಂದಲೂ ಅಂಗದನ ಬಲಪರಾಕ್ರಮಗಳ ಭಯದಿಂದಲೂ ಅಂತಃಪುರವನ್ನು ರಾವಣನು ಪ್ರವೇಶಿಸಿದನು. ಅವನ ಕಳಾಹೀನ ಮುಖವನ್ನು ನೋಡಿ

ಮಂಡೋದರಿ, "ನಾಥಾ! ಈಗಲಾದರೂ ನನ್ನ ಮಾತು ಕೇಳಿ ಮೂರ್ಖತನವನ್ನು ಬಿಡಿ. ರಾಮನನ್ನು ವಿರೋಧಿಸುವುದರಿಂದ ರಾಜ್ಯಕ್ಕೆ ಕೇಡಾಗುವುದು. ಲಕ್ಷ್ಮಣ ಎಳೆದ ಗೆರೆಯನ್ನೇ ನೀವು ದಾಟದಾದಿರಿ. ನಿಮ್ಮ ಶಕ್ತಿ ಸಾಮರ್ಥ್ಯಗಳು ಅದರೆದುರು ತರಗೆಲೆಯಂತೆ. ಅವನ ದೂತರನ್ನೇ ಸೋಲಿಸಲಾಗದ ನಿಮ್ಮ ಅನುಚರರು, ಕೋಟಿ, ಕೋಟಿ ವಾನರರನ್ನು ಗೆಲ್ಲಬಲ್ಲರೇ? ಅಂಗದನ ಪಾದವನ್ನೇ ಕದಲಿಸಲಾರದ ನೀವು, ಅಷ್ಟೊಂದು ವಾನರರನ್ನು ಎದುರಿಸಬಲ್ಲಿರಾ? ಇಷ್ಟು ಅನುಭವವಾದರೂ ನೀವೇಕೆ ಹಿಡಿದ ಪಟ್ಟು ಬಿಡದಿರುವಿರೋ ನನಗೆ ದುಃಖವಾಗುತ್ತಿದೆ. ವಾನರನೊಬ್ಬ ನಿಮ್ಮ ಕುಮಾರನನ್ನು ಕೊಂದ, ಲಂಕೆಯನ್ನು ಭಸ್ಮ ಮಾಡಿದ. ಅನೇಕ ರಾಕ್ಷಸರನ್ನು ಚಂಡಿನಂತೆ ಮೇಲಕ್ಕೆಗರಿಸಿ ಕೊಂದ. ಆಗ ನಿಮ್ಮ ಶಕ್ತಿ ಸಾಮರ್ಥ್ಯಗಳು ನಿದ್ರಿಸುತ್ತಿದ್ದುವೇನು? ನಿಮ್ಮ ಪೊಳ್ಳು ಜಂಭ ವಾನರರನ್ನು ಏನೂ ಮಾಡಲಾರದು.

**ಮಂಡೋದರಿಯ ಮಾತುಗಳು**: ನಾಥಾ! ನನ್ನ ಮಾತುಗಳನ್ನು ಮನ್ನಿಸಿ. ರಾಮನನ್ನು ಭಜಿಸಿ. ರಾಮನನ್ನು ಮನುಷ್ಯ ಮಾತ್ರನನ್ನಾಗಿ ಭಾವಿಸುವುದರಿಂದ ತಪ್ಪು ಮಾಡುತ್ತಿದ್ದೀರಿ. ಅವನು ಜಗನ್ನಾಥ, ಮಹಾವೀರ. ಅವನ ಬಲ ಪರಾಕ್ರಮಗಳು ಮಾರೀಚನಿಗೆ ಗೊತ್ತಲ್ಲವೆ? ಅವನು ಹೇಳಿದುದನ್ನು ಮತ್ತೊಮ್ಮೆ ಸ್ಮರಿಸಿಕೊಳ್ಳಿ. ಜನಕನ ಸಭೆಯಲ್ಲಿ ಅನೇಕ ರಾಜರುಗಳು ಕುಳಿತಿದ್ದಾಗ, ನೀವು ನಿಮ್ಮ ಬಲ ಗರ್ವದಿಂದ ಆ ಸಭೆಯನ್ನು ಪ್ರವೇಶಿಸಿದಿರಿ. ನೀವು ಶಿವ ಧನುಸ್ಸನ್ನು ಕದಲಿಸಲಾರದೆ ಹೋದಿರಿ. ರಾಮನು ಅಂಥ ಧನುಸ್ಸನ್ನು ಲೀಲಾಜಾಲವಾಗಿ ಎತ್ತಿ ಎರಡು ಮಾಡಿ ಎಸೆದ. ಅದು ಕಣ್ಣಾರೆ ಕಂಡ ಅವನ ಬಲವಲ್ಲವೆ? ಇಷ್ಟು ನೋಡಿಯೂ ನೀವು ಮೂರ್ಖತನ ಬಿಡದಿರುವುದನ್ನು ನೋಡಿದರೆ ನಿಮಗೆ ವಿನಾಶಕಾಲ ಸನ್ನಿಹಿತವಾಯಿತೆಂದೇ ತೋರುತ್ತದೆ. ಕಾಕಾಸುರನು ಅಜ್ಞಾನದಿಂದ ನಿಮ್ಮಂತೆಯೇ ಮೂರ್ಖತನ ಮಾಡಿದ್ದಕ್ಕೆ ಅವನಿಗಾದ ಗತಿ ಗೊತ್ತಿದೆಯಲ್ಲವೆ? ಲಕ್ಷ್ಮಣನು ನಿಮ್ಮ ತಂಗಿ ಶೂರ್ಪಣಖಿಗೆ ಮೂಗು ಕಿವಿಗಳನ್ನು ಕೊಯ್ದನು. ಆಗ ನೀವೇನು ಮಾಡಿದಿರಿ? ನಾಚಿಕೆಯಿಲ್ಲದೆ ಇನ್ನೂ, 'ನನ್ನ ಬಲ, ನನ್ನ ಶೌರ್ಯ,' ಎಂದು ಗರ್ಜಿಸುತ್ತೀರಿ. ರಾಮನು ಒಂದು ಬಾಣದಿಂದ ವಾಲಿಯನ್ನು ಕೊಂದನು. ವಾಲಿ ಏನು ಸಾಮಾನ್ಯನೇ! ರಾಮನು ವಾನರ ಸೈನ್ಯದೊಂದಿಗೆ ಸುವೇಲಾಚಲದ ಮೇಲೆ ಬಿಡದಿ ಮಾಡಿದ್ದಾನೆ. ರಾಮನು ಮಹಾ ಧರ್ಮಮೂರ್ತಿ. ಇಲ್ಲದಿದ್ದರೆ, ನಿಮಗೆ ಕ್ಷೇಮ ಕೋರಿ ದೂತನನ್ನು ಕಳಿಸುತ್ತಿರಲಿಲ್ಲ. ಅವನು ಎಷ್ಟೋ ರೀತಿಯಲ್ಲಿ ಶಾಂತಿ ಮಾರ್ಗದಿಂದ ನಿಮ್ಮೊಂದಿಗೆ ಸಂಧಿಗೆ ಪ್ರಯತ್ನಿಸಿದರೂ ನೀವು ನಿಮ್ಮ ದುರಭಿಮಾನವನ್ನು ಬಿಡದೆ, ರಾಮನ ಧರ್ಮ ತತ್ತ್ವವನ್ನು ವಿಚಾರ ಮಾಡದೆ, ಆ

ಪರಮ ಪವಿತ್ರನ ಗುಣಗಳನ್ನು ಯೋಚಿಸದೆ, ನಿಮಗೆ ನೀವೇ ನಿಮ್ಮ ರಾಜ್ಯ, ವಂಶ ನಾಶ ಮಾಡಿಕೊಳ್ಳುತ್ತಿದ್ದೀರಿ.

ಇಂದು ನಿಮ್ಮ ಸಭೆಗೆ ಬಂದ ಅಂಗದನಿಗೆ ನೀವೇನು ಮಾಡಿದಿರಿ? ಅವನಿಗಿಂತ ಎಷ್ಟೋ ಬಲಶಾಲಿಗಳಾದ ವಾನರರು ಸಹಸ್ರಾರು, ಲಕ್ಷೋಪಲಕ್ಷ ಇದ್ದಾರೆ. ನನ್ನ ಮಾತು ಕೇಳಿ, ನಿಮ್ಮ ರಾಕ್ಷಸ ಬುದ್ಧಿಯನ್ನು ಬಿಟ್ಟು ರಾಮನನ್ನು ಶರಣು ಹೋಗಿ," ಎಂದು, ಹಿಂದಿನ ಪೂರ್ಣ ವೃತ್ತಾಂತವನ್ನು ರಾವಣನಿಗೆ ಜ್ಞಾಪಿಸಿಕೊಟ್ಟು ಹೇಳಿದ ಮಾತುಗಳು ರಾವಣನಿಗೆ ಬಾಣದಂತೆ ಹೃದಯಗಳಲ್ಲಿ ನಾಟಿದವು. ಅಷ್ಟು ಹೊತ್ತಿಗೆ ಬೆಳಗಾಯಿತು. ರಾವಣನು ಸಭೆಯನ್ನು ಪ್ರವೇಶಿಸಿ, ಮೂರ್ತೀಭವಿಸಿದ ದುರಭಿಮಾನಿಯಾಗಿ ಸಿಂಹಾಸನದ ಮೇಲೆ ಕುಳಿತನು. ಅಂಗದನ ಮಾತುಗಳನ್ನೂ ಮಂಡೋದರಿಯ ಮಾತುಗಳನ್ನೂ ಕೇಳಿ ತಲೆ ಗಿರ್ರನೆ ಸುತ್ತುತ್ತಿತ್ತು. ಭೂಮಿ ಆಕಾಶಗಳು ತಿರುಗಿದಂತಾಗಿ, ಅವನಲ್ಲಿ ಅನೇಕ ಆಲೋಚನೆಗಳೂ ಭಯವೂ ಒಮ್ಮೆಲೆ ಹುಟ್ಟಿದುವು.

**ವಿನಾಶಕಾಲೇ ವಿಪರೀತ ಬುದ್ಧಿ**: ಆದರೆ, ವಿನಾಶಕಾಲ ಸನ್ನಿಹಿತವಾಗಿದ್ದುದರಿಂದ ಅವನಲ್ಲಿ ಒಳ್ಳೆಯ ಬುದ್ಧಿ ಬರದೆ ಹೋಯಿತು. ವಿದ್ಯುಜ್ಜಿಹ್ವನೆನ್ನುವ ರಾಕ್ಷಸನನ್ನು ಕರೆದು, "ಎಲವೋ! ನೀನು ನಿನ್ನ ಮಾಯಾಶಕ್ತಿಯಿಂದ ರಾಮನ ಶಿರಸ್ಸನ್ನೂ ಧನುರ್ಬಾಣಗಳನ್ನೂ ಸೃಷ್ಟಿಸಿ ತೆಗೆದುಕೊಂಡು ಬಾ! ಜಾನಕಿ ಅವುಗಳನ್ನು ನೋಡಿ ಅವು ನಿಜವಾದುವೆಂದು ಭಾವಿಸಿ ದುಃಖಿಸುವಳು," ಎಂದು ಆಜ್ಞಾಪಿಸಿದನು. ವಿದ್ಯುಜ್ಜಿಹ್ವನು ತಟ್ಟನೆದ್ದು ಹೊರಟನು. ರಾಮನ ಮಾಯಾಶಿರಸ್ಸನ್ನೂ ಮಾಯಾ ಧನುರ್ಬಾಣಗಳನ್ನೂ ಸೃಷ್ಟಿಸಿ ತಂದು ಕೊಟ್ಟನು. ಅವು ರಾಮನ ನಿಜವಾದ ಶಿರಸ್ಸಿನಂತೆ ಧನುರ್ಬಾಣಗಳಂತೆ ಇದ್ದುದನ್ನು ನೋಡಿ ರಾವಣನು ಸಂತೊಷದಿಂದ ದಿಢೀರನೆ ಎದ್ದು ಅಶೋಕವನಕ್ಕೆ ಹೋಗಿ, ಅವುಗಳನ್ನು ಸೀತೆಯ ಮುಂದಿಟ್ಟು, "ಎಲೌ ಸೀತೆ! ಯಾರ ಗುಣಗಳನ್ನು ನೀನು ಹಗಲು ರಾತ್ರಿ ಗಾನ ಮಾಡುತ್ತಿದ್ದೆಯೋ ಆತನ ಶಿರಸ್ಸನ್ನೂ ಧನುರ್ಬಾಣಗಳನ್ನೂ ನೋಡು. ವಾನರ ಸೈನ್ಯವನ್ನು ನಿಶ್ಶೇಷವಾಗಿ ಸಂಹರಿಸಿದೆ. ಲಕ್ಷ್ಮಣನು ಪ್ರಾಣ ಉಳಿಸಿಕೊಂಡು ಓಡಿ ಹೋದ. ನಿನಗೆ ನಂಬಿಕೆ ಬರಲೆಂದು, ಇಗೋ ನೋಡು ರಾಮನ ಶಿರಸ್ಸನ್ನೂ ಧನುರ್ಬಾಣಗಳನ್ನೂ ತಂದಿದ್ದೇನೆ," ಎಂದನು.

ಸೀತೆಗೆ ಕ್ಷಣಕಾಲ ಚಿಂತೆ ಕವಿದರೂ ರಾಮನ ಶಿರಸ್ಸನ್ನು ಕತ್ತರಿಸುವವನು ಹದಿನಾಲ್ಕು ಲೋಕದಲ್ಲಿ ಯಾರೂ ಇಲ್ಲವೆಂದು ತಿಳಿದು, ಇದೆಲ್ಲಾ ತನ್ನನ್ನು ಬೆದರಿಸಲು ಹೂಡಿದ ಮಾಯಾ ನಾಟಕವೆಂದು ಭಾವಿಸಿ, ಅವನ ಮಾತುಗಳಿಗೆ ಗಮನ

ಕೊಡದೆ, "ರಾವಣಾ! ನಿನಗೆ ವಿನಾಶ ಕಾಲ ಸಮೀಪಿಸಿದೆ. ಇಲ್ಲದಿದ್ದರೆ ನಿನಗೆ ಈ ರೀತಿ ದುರ್ಬುದ್ಧಿ ಹುಟ್ಟುತ್ತಿರಲಿಲ್ಲ. ನನ್ನ ರಾಮನ ಹತ್ತಿರ ಸುಳಿಯಲೂ ನಿನಗೆ ಅಧಿಕಾರವಿಲ್ಲ. ಅಂಥವವನನ್ನು ನೀನು ಕೊಲ್ಲುವುದುಂಟೆ? ಕನಸಿನಲ್ಲಿಯೂ ಅದು ಅಸಾಧ್ಯ. ಇದು ನಿನ್ನ ಮಾಯಾ ನಾಟಕ," ಎಂದು ಛೀಮಾರಿಹಾಕುತ್ತಿದ್ದಂತೆಯೇ ನಾಲ್ಕು ದಿಕ್ಕುಗಳಿಂದಲೂ ಜಯ ಜಯ ಘೋಷ ಕೇಳಿ ಬಂತು. "ರಾಮ ಪ್ರಭುವಿಗೆ ಜೈ," ಎಂದು ಕೇಕೆ ಹಾಕುತ್ತಾ ವಾನರರು ಲಂಕೆಯನ್ನು ನಾಲ್ಕು ಮೂಲೆಗಳಿಂದಲೂ ಮುತ್ತುತ್ತಿದ್ದರು. ಆ ಶಬ್ದವನ್ನು ಕೇಳಿ ರಾವಣನು ರೊಯ್ಯನೆ ಅಲ್ಲಿಂದ ಹೊರಟನು. ಅವನು ಹೋದ ಮೇಲೆ ವಿಭೀಷಣನ ಹೆಂಡತಿ ಸುರಮೆ ಸೀತೆಯ ಬಳಿ ಬಂದು, "ತಾಯೀ! ಅದೆಲ್ಲಾ ರಾವಣನ ಮಾಯೆ. ರಾಮನ ಶಿರಸ್ಸನ್ನು ಕತ್ತರಿಸಲು ಯಾರಿಗೂ ಸಾಧ್ಯವಿಲ್ಲ. ರಾಮನು ತನ್ನ ವಾನರ ಸೈನ್ಯದೊಂದಿಗೆ ಲಂಕೆಯನ್ನು ಪ್ರವೇಶಿಸಿದನು. ವಾನರರು ಜಯ ಜಯ ಧ್ವನಿಯಿಂದ ಲಂಕೆಯನ್ನು ಚೆಲ್ಲಾಪಿಲ್ಲಿ ಮಾಡುತ್ತಿದ್ದಾರೆ," ಎಂದಳು.

## ೨೬ ಮುತ್ತಿಗೆ

**ಲಂಕಾ ಪ್ರವೇಶ**: ರಾಮನು ಶತ್ರುಗಳ ಸಮಾಚಾರವನ್ನು ಅಂಗದನ ಮೂಲಕ ತಿಳಿದು ಮಂತ್ರಿಗಳನ್ನು ಕರೆದು, "ಲಂಕಾನಗರಕ್ಕೆ ನಾಲ್ಕು ದ್ವಾರಗಳಿವೆ. ಅವುಗಳ ಮೇಲೆ ಹೇಗೆ ಮುತ್ತಿಗೆಹಾಕಬೇಕೆನ್ನುವುದನ್ನು ಆಲೋಚಿಸಿ, ನಂತರ ಲಂಕೆಯನ್ನು ಪ್ರವೇಶಿಸಿ," ಎಂದು ಆಜ್ಞಾಪಿಸಿದನು. ರಾಮಾಜ್ಞೆಯನ್ನು ಅನುಸರಿಸಿ ಕಪಿರಾಜನೂ ಭಲ್ಲೂಕ ರಾಜನೂ ರಾಕ್ಷಸ ರಾಜನೂ ರಾಮನಿಗೆ ನಮಸ್ಕರಿಸಿ, ವಾನರ ಸೈನ್ಯವನ್ನು ನಾಲ್ಕು ಭಾಗ ಮಾಡಿದರು. ಯಥಾಯೋಗ್ಯವಾಗಿ ಅವುಗಳಿಗೆ ಸೇನಾಧಿಪತಿಗಳನ್ನು ನೇಮಿಸಿದರು. ಸೇನಾಧಿಪತಿಗಳು ಸಿಂಹನಾದ ಮಾಡುತ್ತಾ ಯುದ್ಧಕ್ಕೆ ಹೊರಟರು. ರಾಮನನ್ನು ಸ್ಮರಿಸುತ್ತಾ ವಾನರರು ಪರ್ವತಗಳನ್ನೂ ವೃಕ್ಷಗಳನ್ನೂ ಬಂಡೆಗಳನ್ನೂ ಹಿಡಿದು ನಡೆದರು. ರಾಕ್ಷಸರನ್ನು ಎದುರಿಸಿದರು. ಲಂಕಾನಗರವು ದುರ್ಗಮವೂ ಅಭೇದ್ಯವೂ ಆದರೂ ರಾಮನ ಅನುಗ್ರಹದಿಂದ ನಿರ್ಭಯವಾಗಿ ಲಂಕೆಯನ್ನು ಪ್ರವೇಶಿಸಿದರು. ಪೂರ್ವ ಭಾಗದಲ್ಲಿ ನಲನೂ ದಕ್ಷಿಣ ಭಾಗದಲ್ಲಿ ಅಂಗದನೂ ಪಶ್ಚಿಮ ಭಾಗದಲ್ಲಿ ಮಹಾವೀರನೂ ಉತ್ತರ ಭಾಗವನ್ನು ಕಾಪಾಡುತ್ತಿದ್ದ ದಶಕಂಠ

ನೊಂದಿಗೆ ಸ್ವತಃ ರಾಮನೂ ಹೋರಾಡಿದರು. ವಾನರರಿಗೆ ರಣಭೇರಿ ಇರಲಿಲ್ಲ. ರಾಮನಾಮವೇ ಸಕಲ ಭೇರಿಗಳಿಗೆ ಸಮಾನವಾಗಿ ಮುಗಿಲು ಮುಟ್ಟಿತು.

ಲಂಕಾನಗರದಲ್ಲಿ ಬಹಳ ಕೋಲಾಹಲವಾಯಿತು. ರಾವಣನು ಆ ಹಾಹಾಕಾರ ವನ್ನು ಕೇಳಿ, ದುರಭಿಮಾನವನ್ನು ಬಿಡದೆ, ಇಂದು ರಾಕ್ಷಸರಿಗೆ ದೊಡ್ಡ ಔತಣವಾಯಿ ತೆಂದು ನಗುತ್ತಾ ದುರಹಂಕಾರದಿಂದ ಬೀಗಿದನು. ಮೇರು ಪರ್ವತದ ಶಿಖರವನ್ನಾ ವರಿಸಿದ ಮೇಘಗಳಂತೆ ರಾಕ್ಷಸರು ಕೋಟೆ ಬುರುಜುಗಳನ್ನಾವರಿಸುತ್ತಿದ್ದರು. ರಣಭೇರಿಗಳನ್ನು ಮೊಳಗಿಸುತ್ತಿದ್ದರು. ಒಂದು ಕಡೆ ರಾಕ್ಷಸರು ಬಂಡೆಗಳನ್ನೂ ವೃಕ್ಷಗಳನ್ನೂ ಎಸೆಯುತ್ತಿದ್ದರು. ಅವು ಕೆಳಗೆ ಬೀಳುವ ಮೊದಲೇ ವಾನರರು ಅವುಗಳನ್ನು ಹಿಡಿದು, ಅವುಗಳನ್ನೇ ರಾಕ್ಷಸರ ಮೇಲೆ ಎಸೆಯುತ್ತಿದ್ದರು. ರಾಮನ ಅನುಗ್ರಹದಿಂದ ವಾನರರ ಬಲ ಅಧಿಕವಾಯಿತು. ವಾನರರು ರಾಕ್ಷಸರನ್ನು ಸಿಕ್ಕ ಸಿಕ್ಕಲ್ಲಿ ಕೊಲ್ಲುತ್ತಾ ಹೋದರು. ಚಂಡಮಾರುತ ಬೀಸಿದಾಗ ಮೇಘಗಳ ಸಮೂಹ ನಾಲ್ಕು ದಿಕ್ಕಿಗೂ ಚೆದುರುವಂತೆ, ವಾನರರ ಪ್ರತಾಪದ ಫಲವಾಗಿ ರಾಕ್ಷಸರ ಸೈನ್ಯಗಳು ದಿಕ್ಕುಗೆಟ್ಟು ಚೆದುರಿದವು. ಲಂಕಾನಗರದಲ್ಲಿ ಹಾಹಾಕಾರ ಹುಟ್ಟಿತು.

ರಾಕ್ಷಸ ಸ್ತ್ರೀಯರು, ವೃದ್ಧರು, ಮಕ್ಕಳು ರಾವಣನನ್ನು ಹಲವು ವಿಧವಾಗಿ ದೂಷಿಸಲಾ ರಂಭಿಸಿದರು. ಕೆಲವು ರಾಕ್ಷಸರು ಯುದ್ಧವನ್ನು ಬಿಟ್ಟು ತಮ್ಮ ತಮ್ಮ ಕುಟುಂಬಗಳೊಂ ದಿಗೆ ಪ್ರಾಣ ರಕ್ಷಣೆಗಾಗಿ ಓಡಿದರು. ಅದನ್ನು ನೋಡಿ ರಾವಣನು ಹಲ್ಲು ಕಡಿಯುತ್ತಾ, "ತಲೆ ಕೆಟ್ಟ ಹೇಡಿಗಳೇ! ಬೆನ್ನು ತೋರಿಸಿ ಓಡುವವನನ್ನು ನನ್ನ ಚಂದ್ರಾಯುಧದಿಂದ ಕತ್ತರಿಸುತ್ತೇನೆ," ಎಂದು ಗರ್ಜಿಸಿದನು. ಆಗ ಕೆಲವರು ಭಯಪಟ್ಟು, ವಿಧಿಯಿಲ್ಲದೆ ಮತ್ತೆ ಯುದ್ಧದಲ್ಲಿ ಸೇರಿಕೊಂಡರು. ವಾನರರು ವೀರಾವೇಶದಿಂದ ರಾಮನ ಸ್ಮರಣೆ ಮಾಡುತ್ತಾ ರಾವಣನ ದುರ್ಗವನ್ನು ಪ್ರವೇಶಿಸಿ ಅದನ್ನು ನೆಲಸಮ ಮಾಡಿದರು. ಒಂದು ಬಂಗಾರದ ತೋರಣಗಂಬವನ್ನು ಕಿತ್ತು ಅದನ್ನೇ ಆಯುಧ ಮಾಡಿ ಕೊಂಡು ಮಾರಣ ಹೋಮ ಪ್ರಾರಂಭಿಸಿದರು. ಒಬ್ಬೊಬ್ಬ ರಾಕ್ಷಸನನ್ನೂ ಕೊಂದು ಅವನ ತಲೆಯನ್ನು ಕತ್ತರಿಸಿ ಎಸೆಯಲಾರಂಭಿಸಿದರು. ಅವು ರಾವಣನೆದುರು ಬಂದು ಬೀಳುತ್ತಿದ್ದುವು. ಹೀಗೆ ವಾನರರು ಶತ್ರು ಸೈನ್ಯದ ಮೇಲೆ ಬಿದ್ದು ಭುಜಬಲ ಪ್ರದರ್ಶಿಸುತ್ತಾ ಸುನಾಯಾಸವಾಗಿ ರಾಕ್ಷಸರನ್ನು ಸಂಹರಿಸಿ ಹಿಂತಿರುಗಿ ರಾಮನ ಬಳಿಗೆ ಬಂದರು. ಅಷ್ಟರಲ್ಲಿ ರಾತ್ರಿ ಪ್ರಾರಂಭವಾಯಿತು. ರಾಕ್ಷಸರ ಬಲ ಅಧಿಕವಾ ಯಿತು. ರಾಕ್ಷಸರು, "ರಾವಣನಿಗೆ ಜೈ," ಎಂದು ಸಿಂಹನಾದ ಮಾಡಿದರು. ವಾನರರು ತಿರುಗಿ ಯುದ್ಧಕ್ಕೆ ಹೊರಟರು.

ವಾನರ ರಾಕ್ಷಸ ಸೈನ್ಯಗಳು ಹೋರಾಡಿದುವು. ರಾಕ್ಷಸ ಸೈನ್ಯ ಹಿಮ್ಮೆಟ್ಟಿತು. ಆಗ, ಅಕಂಪ ಮತ್ತು ಅತಿಕಾಯರು ರಾಕ್ಷಸ ಮಾಯೆಯನ್ನು ಸೃಷ್ಟಿಸಿದರು. ಅವರ ಮಾಯೆಯ ಫಲವಾಗಿ ಕ್ಷಣದಲ್ಲಿ ನಾಲ್ಕು ದಿಕ್ಕಿನಲ್ಲೂ ಗಾಢಾಂಧಕಾರ ವ್ಯಾಪಿಸಿತು. ರಕ್ತ, ಧೂಳು ಮತ್ತು ಕಲ್ಲಿನ ಮಳೆ ಸುರಿಯಿತು. ವಾನರರಿಗೆ ಒಬ್ಬರಿಗೊಬ್ಬರು ಕಾಣಿಸದೆ ಯಾರು ವಾನರರೋ ಯಾರು ರಾಕ್ಷಸರೋ ತಿಳಿಯದೆ ಹೋಯಿತು. ಇದರಿಂದ ವಾನರರಿಗೆ ಭಯವಾಯಿತು. "ರಾಮಾ, ರಾಮಾ," ಎಂದು ಮೊರೆಯಿಟ್ಟರು. ಅದನ್ನು ಕೇಳಿ ರಾಮನು ಅಂಗದ ಹನುಮಂತರನ್ನು ಕರೆದು ರಾಕ್ಷಸರು ಸೃಷ್ಟಿಸಿದ ಮಾಯೆಯನ್ನು ಅವರಿಗೆ ತಿಳಿಸಿದನು. ಅವರು ಕೋಪದಿಂದುರಿದರು. ರಾಮನು ವಾನರರ ಮೇಲೆ ದಯೆತೋರಿ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿದನು. ಅದರಿಂದ ರಾಕ್ಷಸರ ಮಾಯಾಕತ್ತಲೆ ಮಾಯವಾಯಿತು. ರಣರಂಗ ಪ್ರಕಾಶಮಾನವಾಯಿತು, ದಶದಿಕ್ಕುಗಳೂ ಪ್ರಕಾಶಿಸಿದ್ದರಿಂದ ವಾನರ ಭಲ್ಲೂಕಗಳು ಹಿಂದಿನ ಶ್ರಮವನ್ನೆಲ್ಲಾ ಮರೆತು ಉತ್ಸಾಹದಿಂದ ಯುದ್ಧವನ್ನಾರಂಭಿಸಿದರು. ಅಂಗದ ಹನುಮಂತರು ಗರ್ಜಿಸುತ್ತಾ ಯುದ್ಧಮಾಡುತ್ತಿದ್ದ ಸ್ಥಳಗಳನ್ನು ಬಿಟ್ಟು ರಾಕ್ಷಸರು ಓಡಲಾರಂಭಿಸಿದರು. ಓಡುತ್ತಿದ್ದ ರಾಕ್ಷಸರನ್ನು ವಾನರರು ತಡೆದು ಕಾಲುಗಳನ್ನು ಹಿಡಿದು ಸಮುದ್ರಕ್ಕೊಗೆಯುತ್ತಿದ್ದರು. ಸತ್ತ ರಾಕ್ಷಸರ ಶವಗಳನ್ನು ಸಮುದ್ರಕ್ಕೆಸೆಯುತ್ತಿದ್ದರು. ಹೀಗೆ ಶತ್ರು ಸೈನ್ಯವನ್ನು ವಾನರರು ಸದೆಬಡಿದು ಸಿಂಹನಾದ ಮಾಡಿದರು. ಇಷ್ಟರಲ್ಲಿ ಕತ್ತಲೆ ನಾಲ್ಕು ದಿಕ್ಕುಗಳಿಗೂ ವ್ಯಾಪಿಸಿತು. ವಾನರರು ರಾಮನ ಬಳಿಗೆ ಬಂದರು. ರಾಮನ ಕಟಾಕ್ಷದೃಷ್ಟಿ ಅವರೆಲ್ಲರ ಮೇಲೆ ಬಿದ್ದ ಮಾತ್ರಕ್ಕೆ ಅವರ ಶ್ರಮವೆಲ್ಲಾ ಹೋಯಿತು.

**ಮಾಲ್ಯವಂತ**: ಅತ್ತ ಲಂಕೆಯಲ್ಲಿ ರಾವಣನು ಮಂತ್ರಿಗಳನ್ನು ಬರಮಾಡಿಕೊಂಡು, "ಮಂತ್ರಿಗಳೇ! ಈ ದಿನ ಅನೇಕ ರಾಕ್ಷಸರು ಹತರಾದರು. ಸಹಸ್ರ ಸಂಖ್ಯೆಯ ಸೈನ್ಯವನ್ನು ವಾನರರು ಸಂಹರಿಸಿದರು. ನಾವಿನ್ನು ಅನುಸರಿಸಬೇಕಾದ ಮಾರ್ಗವೇನೆನ್ನುವುದನ್ನು ಆಲೋಚಿಸಿ," ಎಂದು ಆಜ್ಞಾಪಿಸಿದನು. ರಾವಣನ ಮಾತಾಮಹನೂ ರಾವಣನ ತಂದೆಗೂ ಮಂತ್ರಿಯಾಗಿದ್ದ ಮಾಲ್ಯವಂತನೆನ್ನುವ ರಾಕ್ಷಸ ವೃದ್ಧ ಮಂತ್ರಿ ಎದ್ದು, ರಾವಣನಿಗೆ ಅನೇಕ ನೀತಿ ಮಾರ್ಗಗಳನ್ನು ಉಪದೇಶಿಸಿದನು. "ಓ ರಾವಣಾ! ನನ್ನ ಮಾತನ್ನು ಶಾಂತವಾಗಿ ಆಲೈಸು. ನನ್ನನ್ನು ಕ್ಷಮಿಸು. ಜಾನಕಿಯನ್ನು ತಂದಾಗಿನಿಂದ ಮೊದಲುಗೊಂಡು ದುಶ್ಶಕುನಗಳು ಕಾಣುತ್ತಿವೆ. ಅವುಗಳನ್ನು ಪ್ರತ್ಯೇಕವಾಗಿ ಹೇಳಲು ಸಾಧ್ಯವಿಲ್ಲ. ಮಹಾಪುರುಷನಾದ ರಾಮನ ಪ್ರತಾಪವನ್ನು ವೇದಗಳು ಕೂಡ ವರ್ಣಿಸಲಾರವು. ಅಂಥ ವಿರಾಟಪುರುಷನನ್ನು ಎದುರಿಸುವುದರಿಂದ ಶ್ರೇಯಸ್ಸಾಗದು. ನೀನು ಶಾಂತವಾಗಿ ಆಲೋಚಿಸುವುದೊಳ್ಳೆ

ಯದು. ಆ ಮಹಾಪುರುಷನೇ ಹಿರಣ್ಯಕಶಿಪು ಹಿರಣ್ಯಾಕ್ಷರನ್ನು ಸಂಹರಿಸಿದವನು. ಕಾಲ ಸ್ವರೂಪನಾಗಿ ಆಗಾಗ ದುಷ್ಟರನ್ನು ಸಂಹರಿಸುವನು. ಅವನು ಸಕಲಗುಣ ಧಾಮನು. ಅವನೊಂದಿಗೆ ನಿನಗೆ ವೈರ ಸಲ್ಲದು. ರಾಜಾ! ಲಂಕೆಯನ್ನು ಕಾಪಾಡು. ಸೀತೆಯನ್ನು ರಾಮನಿಗೊಪ್ಪಿಸು. ಕಾಲಹರಣ ಮಾಡುವುದೊಳ್ಳೆಯದಲ್ಲ," ಎಂದು ಹೇಳಿ ನಮಸ್ಕರಿಸಿದನು.

**ಪುತ್ರನ ವೀರಾವೇಶ**: ಮಾಲ್ಯವಂತನ ಮಾತುಗಳು ಬಾಣದಂತೆ ರಾವಣನನ್ನು ತಾಕಿತು. ರಾವಣನು ಉಗ್ರನಾಗಿ, "ಎಲವೋ! ನೀನು ಕಾಲನ ಮುಖವನ್ನು ಪ್ರವೇಶಿಸಲು ಹವಣಿಸಿದಂತಿದೆ. ನಿನ್ನು ವೃದ್ಧನಾದ್ದರಿಂದ ಕ್ಷಮಿಸಿದ್ದೇನೆ. ಇಲ್ಲದಿದ್ದರೆ ತುಂಡು ತುಂಡು ಮಾಡುತ್ತಿದ್ದೆ. ಇನ್ನು ನನ್ನೆದುರಿಗಿರಬೇಡ, ತೊಲಗು!" ಎಂದು ಬುಸುಗುಟ್ಟಿದನು. ರಾವಣನ ಅಹಂಕಾರಕ್ಕೆ, ಅಜ್ಞಾನಕ್ಕೆ ಮಾಲ್ಯವಂತನು ಒಳಗೇ ನಗುತ್ತಾ, "ಈ ದುರ್ಮಾರ್ಗನ ಅಂತ್ಯಕಾಲ ಹತ್ತಿರವಾಗುತ್ತಿದೆ. ಒಳ್ಳೆಯ ಮಾತುಗಳನ್ನು ಹೃದಯಕ್ಕೆ ಸೇರಿಸಿಕೊಳ್ಳದೆ ವಿಪರೀತ ಬುದ್ಧಿವಿಕಾರ ಚೇಷ್ಟೆಗಳಿಗೆ ಗುರಿಯಾಗುತ್ತಿದ್ದಾನೆ," ಎಂದು ಚಿಂತಿಸಿದನು. ನಂತರ, ಮೇಘನಾದನೆದ್ದು, "ತಂದೆಯೇ! ಚಿಂತಿಸಬೇಡಿ. ನಾಳೆ ಬೆಳಗ್ಗೆ ನನ್ನ ರಣಕೌಶಲವನ್ನು ನೋಡುವಿರಂತೆ. ನಾನು ಆಡಿ ತೋರಿಸುವುದಕ್ಕಿಂತ ಹೆಚ್ಚು ಮಾಡಿ ತೋರಿಸುತ್ತೇನೆ," ಎಂದು ಹೇಳಿದನು. ಅವನ ಮಾತುಗಳು ರಾವಣನನ್ನು ಸ್ವಲ್ಪ ಶಾಂತಪಡಿಸಿತು. ಅವನಲ್ಲಿ ಧೈರ್ಯೋತ್ಸಾಹ ಹುಟ್ಟಿತು. ಮಗನನ್ನು ಹತ್ತಿರ ಕರೆದು, ಅವನ ಶಿರಸ್ಸನ್ನು ಮುದ್ದಾಡಿ, ಅವನ ಧೈರ್ಯ ಸಾಹಾಸಗಳನ್ನು ಕೊಂಡಾಡಿದನು. ಅರ್ಧರಾತ್ರಿಯ ವೇಳೆಗೆ ಸಭೆಯನ್ನು ಮುಗಿಸಿ ಎಲ್ಲರೂ ತಮ್ಮ ಮನೆಗಳಿಗೆ ಹೊರಟರು. ಅವರು ಮನೆಯಲ್ಲಿ ಮಲಗಿದರೇ ವಿನಾ ನಿದ್ರೆಹತ್ತಲಿಲ್ಲ. ಬಾಯಿಗೆ ತಿಂಡಿ ರುಚಿಸಲಿಲ್ಲ. ಯಾವ ನಿಮಿಷ ಏನು ಆಂದೋಳನವೋ ಎಂದು ಎಲ್ಲರಿಗೂ ತಳಮಳ. ಭಯದಿಂದ ಚಿಂತಿಸುತ್ತಿರುವಂತೆಯೇ ಅರುಣೋದಯವಾಯಿತು. ವಾನರ ಭಲ್ಲೂಕಗಳು ನಗರವನ್ನು ನಾಲ್ಕು ದಿಕ್ಕುಗಳಿಂದಲೂ ಮುತ್ತಿದುವು. ಲಂಕೆಯಲ್ಲಿ ಕೋಲಾಹಲ ಉಲ್ಬಣಿಸಿತು. ವಾನರರ ಕೂಗಿನಿಂದ ಭೂಮಿ ಅದುರಿತು. ಅವರ ಗರ್ಜನೆ ಮುಗಿಲು ಮುಟ್ಟಿತು. ರಾಕ್ಷಸ ವೀರರು ಕೂಡ ಗರ್ಜಿಸಿದರು. ವಾನರರು ಎಸೆದ ಬಂಡೆಗಳ ಹೊಡೆತಕ್ಕೆ ಸಿಕ್ಕಿ ರಾಕ್ಷಸರ ಶರೀರಗಳು ಜರ್ಝರಿತವಾದವು.

**ಇಂದ್ರಜಿತ್**: ವಾನರರು ನಗರವನ್ನು ಪ್ರವೇಶಿಸುತ್ತಿರುವರೆನ್ನುವ ವಾರ್ತೆ ಕೇಳಿ ಮೇಘನಾದನು ರೌದ್ರಾಕಾರ ತಾಳಿ ಆಯುಧಗಳನ್ನು ಹಿಡಿದು ಹೊರಟನು. ರಾಕ್ಷಸರು ರಣಭೇರಿ ಬಾರಿಸಿದರು. ಇಂದ್ರಜಿತ್ ಅತಿರಥ ಶ್ರೇಷ್ಠ! ಅವನನ್ನು ನೋಡಿ ವಾನರರು ಓಡಿದರು. ಓಡುತ್ತಿದ್ದ ವಾನರರನ್ನು ನೋಡಿ ಮೇಘನಾದನು

ರೌದ್ರಾಕಾರನಾಗಿ ವೀರಾಲಾಪ ಮಾಡುತ್ತಾ ಬಾಣಗಳನ್ನು ಹೂಡಿ ಆಕರ್ಣಾಂತ ಅವುಗಳನ್ನೆಳೆದು ಪ್ರಯೋಗಿಸಿದನು. ರೆಕ್ಕೆಗಳುಳ್ಳ ಕಾಲ ಸರ್ಪಗಳಂತೆ ಆ ಬಾಣಗಳು ನಾಲ್ಕು ದಿಕ್ಕಿಗೂ ಹೋದವು. ವಾನರರು ಅವನೆದುರು ಬರಲು ಭಯಪಟ್ಟರು. ನಿರುತ್ಸಾಹ ಹೊಂದಿದರು. ಯುದ್ಧ ಬಿಟ್ಟು ಹಿಂದಿರುಗಿದರು. ಕೆಲವರು ಆ ಬಾಣಗಳ ಹೊಡೆತಕ್ಕೆ ನೆಲಕ್ಕುರುಳಿದರು, ಮೂರ್ಛೆ ಹೋದರು. ವಾನರ ಸೈನ್ಯದ ಈ ವ್ಯಾಕುಲತೆಯನ್ನು ನೋಡಿ ಹನುಮಂತನು ಕೋಪಗೊಂಡು ಮೇಘನಾದನ ಮೇಲೆ ಕಾಲನಂತೆ ಎರಗಿದನು. ಸಮೀಪದಲ್ಲಿದ್ದ ಪರ್ವತವನ್ನೆತ್ತಿ ಅವನ ಮೇಲೆ ಎಸೆದನು. ಕಾಲಾಂತಕನಂತೆ ಬರುತ್ತಿದ್ದ ಆ ಪರ್ವತವನ್ನು ನೋಡಿ ಮೇಘನಾದನು ಅಂತರಿಕ್ಷಕ್ಕೆ ಹಾರಿದನು. ಪರ್ವತದ ಕೆಳಗೆ ಸಿಕ್ಕಿ ರಥ ನುಚ್ಚು ನೂರಾಯಿತು. ರಥಾಶ್ವಗಳು ಸತ್ತವು. ಸಾರಥಿಯೂ ಮಡಿದನು. ಮೇಘನಾದನು ಅನೇಕ ವಿಧವಾಗಿ ರಾಕ್ಷಸ ಮಾಯೆಯನ್ನು ಸೃಷ್ಟಿಸಿದನು. ಸಣ್ಣ ಹಾವು ಒಂದು ಗರುತ್ಮಂತನನ್ನು ಬೆದರಿಸಿದಂತೆ ಅವನು ಹನುಮಂತನನ್ನು ಬೆದರಿಸಿದನು. ಆಕಾಶದಿಂದ ಬೆಂಕಿಯ ಮಳೆ ಸುರಿಸಿದನು. ಹಾಡುಹಗಲಿನಲ್ಲಿ ಗಾಢಾಂಧಕಾರ ವ್ಯಾಪಿಸಿತು. ಅವರವರ ಕೈ ಅವರಿಗೇ ಕಾಣಿಸದಂತಾಯಿತು. ಇಂಥ ಮಾಯೆಯಿಂದ ವಾನರರು ಮತ್ತಷ್ಟು ವ್ಯಾಕುಲಗೊಂಡರು. ಇಂದಿಗೆ ತಮ್ಮ ಆಯುಷ್ಯ ಮುಗಿಯಿತೆಂದುಕೊಂಡರು. ರಾಕ್ಷಸ ಮಾಯೆಯನ್ನು ನೋಡಿ ರಾಮನು ತನ್ನೊಳಗೇ ನಕ್ಕು, ವಾನರರ ಅಧೈರ್ಯವನ್ನು ಕಂಡು, ಒಂದು ಬಾಣ ಪ್ರಯೋಗಿಸಿದನು. ಸೂರ್ಯೋದಯದಿಂದ ಅಂಧಕಾರ ತೊಲಗುವಂತೆ ರಾಕ್ಷಸ ಮಾಯೆ ತೊಲಗಿತು. ರಾಮನು ವಾನರರನ್ನು ಕೃಪಾ ದೃಷ್ಟಿಯಿಂದ ನೋಡಿದನು. ಅದರಿಂದ ವಾನರರ ಆಯಾಸ ನಿವಾರಣೆಯಾಯಿತು. ಅವರು ಪ್ರಬಲರಾಗಿ ಪುನಃ ಯುದ್ಧಕ್ಕೆ ಹೊರಟರು. ಒಂದು ಸಾರಿ, "ರಾಮಚಂದ್ರ ಪ್ರಭುವಿಗೆ ಜೈ," ಎಂದು ಜೈಕಾರ ಮಾಡಿ ರಣಕ್ಕೆ ಧುಮುಕಿದರು. ಅವರನ್ನು ತಡೆಯಲು ರಾಕ್ಷಸರಿಗೆ ಸಾಧ್ಯವಾಗದೆ ಹೋಯಿತು.

**ಶಕ್ತಿ**: ರಾಮಾಜ್ಞೆಯ ಪ್ರಕಾರ ಲಕ್ಷ್ಮಣನೂ ಧನುರ್ಬಾಣಗಳನ್ನು ಹಿಡಿದು ಹನುಮನ ಸಹಿತ ಮೇಘನಾದನ ಮೇಲೆ ಯುದ್ಧಕ್ಕೆ ಹೊರಟನು. ಲಕ್ಷ್ಮಣನು ಮೇಘನಾದನನ್ನು ಎದುರಿಸಿದ್ದಾನೆನ್ನುವುದನ್ನು ಕೇಳಿ, ರಾವಣನು ತನ್ನ ಮಗನ ಸಹಾಯಕ್ಕೆ ಇನ್ನೂ ಕೆಲವು ಜನ ರಾಕ್ಷಸರನ್ನು ಕಳಿಸಿದನು. ವಾನರರಿಗೆ ವೃಕ್ಷಗಳು ಶಿಲೆಗಳೇ ಆಯುಧಗಳಾದವು. ಉಭಯ ಸೈನ್ಯಗಳೂ ಉದ್ದಂಡ ಪರಾಕ್ರಮದಿಂದ ವಿಜೃಂಭಿಸುತ್ತಾ ದ್ವಂದ್ವ ಯುದ್ಧದಲ್ಲಿ ತೊಡಗಿದವು. ವಾನರರು ರಾಕ್ಷಸರನ್ನು ಮುಷ್ಠಿಯಿಂದ ಗುದ್ದಿ, ಬಾಯಿಂದ ಕಚ್ಚಿ, ಅದುಮಿ ಸಾಯಿಸಿದರು. ತಲೆಗಳನ್ನು ಹಾರಿಸಿದರು. ಭುಜಗಳನ್ನು ಕಿತ್ತರು. ವಾನರರು ಮಾಡುತ್ತಿದ್ದ ಆರ್ಭಟ ನವದ್ವೀಪಗಳಲ್ಲಿ ಕೇಳಿಸಿತು.

ಶಿರವಿಲ್ಲದ ರಾಕ್ಷಸರ ಮುಂಡಗಳು ಓಡುತ್ತಿದ್ದುದನ್ನು ನೋಡಿ ವಾನರರು ನಗುತ್ತಾ ಆಶ್ಚರ್ಯಪಡುತ್ತಾ ಕೇಕೆ ಹಾಕುತ್ತಿದ್ದರು. ರಣಭೂಮಿಯಲ್ಲೂ ಲಂಕೆಯ ಬೀದಿಗಳಲ್ಲೂ ರಕ್ತ ಹರಿಯಿತು.

ಲಕ್ಷ್ಮಣ ಮೇಘನಾದರು ಭಯಂಕರವಾಗಿ ಹೋರಾಡಿದರು. ಹೋರಾಟದಲ್ಲಿ ಅವರು ಒಬ್ಬರಿಗೊಬ್ಬರು ಸರಿಸಮರಾಗಿ ಕಂಡು ಬಂದರು. ಇಂದ್ರಜಿತು ಮಾಯೋಪಾಯದಿಂದ ಲಕ್ಷ್ಮಣನನ್ನು ಜಯಿಸಲು ಪ್ರಯತ್ನಿಸಿದನು. ಆದರೆ ಅವನ ಪ್ರಯತ್ನಗಳು ವಿಫಲವಾದುವು. ಲಕ್ಷ್ಮಣನು ಉಗ್ರನಾಗಿ ಇಂದ್ರಜಿತುವಿನ ರಥವನ್ನು ಪುಡಿಪುಡಿಮಾಡಿ ಸಾರಥಿಯನ್ನು ಕೊಂದನು. ಇಂದ್ರಜಿತು ಇನ್ನು ತನ್ನ ಪ್ರಾಣ ಉಳಿಯುವುದಿಲ್ಲವೆಂದು ತಿಳಿದು, ದೇದೀಪ್ಯಮಾನನಾಗಿ ಬೆಳಗುತ್ತಿದ್ದ ಬ್ರಹ್ಮದತ್ತವಾದ ಮಹಾಶಕ್ತಿಯನ್ನು ತೆಗೆದು ಲಕ್ಷ್ಮಣನ ಹೃದಯಕ್ಕೆ ಗುರಿಯಿಟ್ಟು ಪ್ರಯೋಗಿಸಿದನು. ಅದು ಬಂದು ಲಕ್ಷ್ಮಣನ ಹೃದಯಕ್ಕೆ ನಾಟಿದ ತಕ್ಷಣ ಲಕ್ಷ್ಮಣನು ಮೂರ್ಛೆ ಹೋದನು. ಇಂದ್ರಜಿತನು ಧೈರ್ಯವಾಗಿ, ನೆಲದ ಮೇಲೆ ಬಿದ್ದಿದ್ದ ಲಕ್ಷ್ಮಣನ ಬಳಿಗೆ ಬಂದನು. ಇಂದ್ರಜಿತುವೂ ಅವನ ಸಮಾನವಾದ ಬಲವಂತರೂ ಲಕ್ಷ್ಮಣನ ಶರೀರವನ್ನೆತ್ತಲು ಪ್ರಯತ್ನಿಸಿದರು. ಅವರ ಯತ್ನವು ವಿಫಲವಾಯಿತು. ಕೋಟ್ಯಂತರ ರಾಕ್ಷಸರು ಬಂದರೂ ಎತ್ತಲು ಸಾಧ್ಯವಾಗಲಿಲ್ಲ. ಆದಿಶೇಷನನ್ನು ಎತ್ತಬಲ್ಲ ಬಲವಂತರುಂಟೆ? ಯಾರು ಬಂದರೂ ಲಕ್ಷ್ಮಣನ ದೇಹವನ್ನು ಕದಲಿಸಲಾಗಲಿಲ್ಲ. ರಾಮನ ಕಟಾಕ್ಷವುಳ್ಳವರಿಗೇ ಲಕ್ಷ್ಮಣನನ್ನು ಕದಲಿಸಲು ಸಾಧ್ಯ, ಬೇರೆಯವರಿಗೆಲ್ಲಿ ಸಾಧ್ಯ? ಆ ವೇಳೆಗೆ ಸಾಯಂಕಾಲವಾಯಿತು. ಉಭಯ ಸೈನ್ಯಗಳು ತಮ್ಮ ತಮ್ಮ ಬಿಡದಿಗೆ ಹಿಂದಿರುಗಿದುವು. ರಾಮನು ಲಕ್ಷ್ಮಣನನ್ನು ಕಾಣದೆ ಲಕ್ಷ್ಮಣನೆಲ್ಲಿ ಎಂದು ವಾನರರನ್ನು ಪ್ರಶ್ನಿಸಿದನು. ಅಷ್ಟರಲ್ಲಿ ಹನುಮಂತನು ಮೂರ್ಛೆ ಹೋದ ಲಕ್ಷ್ಮಣನ ದೇಹವನ್ನು ಹೆಗಲ ಮೇಲೆ ಹೊತ್ತು, "ರಾಮ ರಾಮ," ಎನ್ನುತ್ತಾ ಅಲ್ಲಿಗೆ ಬಂದನು. ಅದನ್ನು ನೋಡಿ ರಾಮನು ಕಳವಳಗೊಂಡವನಂತೆ ನಟಿಸಿದನು. ಲಕ್ಷ್ಮಣನ ದೇಹವನ್ನು ತೊಡೆಯ ಮೇಲಿಟ್ಟುಕೊಂಡು ಅನೇಕ ವಿಧವಾಗಿ ಅವನನ್ನು ಪರೀಕ್ಷಿಸಿದನು.

**ಸುಷೇಣ**: ಆಗ, ಜಾಂಬವಂತನು, "ನಾಥಾ! ಕಾಲಹರಣ ಮಾಡದೆ ಲಂಕೆಯಲ್ಲಿರುವ ಸುಷೇಣನೆನ್ನುವ ವೈದ್ಯನನ್ನು ಕರೆತರುವುದೊಳ್ಳೆಯದು," ಎಂದು ಪ್ರಾರ್ಥಿಸಿದನು. ಒಡನೆಯೇ ಹನುಮಂತನು ಸೂಕ್ಷ್ಮ ರೂಪ ಧರಿಸಿ ಲಂಕೆಯನ್ನು ಪ್ರವೇಶಿಸಿದನು. ಆದರೆ, ತಾನು ಕರೆದರೆ ಸುಷೇಣ ಬರುವನೋ ಇಲ್ಲವೋ ಎನ್ನುವ ಅನುಮಾನ ಉಂಟಾಯಿತು. ಏನಾದರಾಗಲಿ ಎಂದು ಸುಷೇಣನ ಮನೆಯನ್ನೇ ಬುಡ ಸಹಿತ ಕಿತ್ತು, ಹೊತ್ತು ರಾಮನ ಪಾಳೆಯದೊಳಕ್ಕೆ ತಂದನು. ಸುಷೇಣನು

ರಾಮನಿಗೆ ನಮಸ್ಕರಿಸಿ, ಔಷಧಿಯ ಹೆಸರನ್ನೂ ಅದು ಸಿಕ್ಕುವ ಪರ್ವತದ ಹೆಸರನ್ನೂ ಹೇಳಿದನು. ಅದನ್ನು ತರಬಲ್ಲವರು ಯಾರೆಂದು ಯೋಚಿಸುತ್ತಿರುವಂತೆಯೇ, ಹನುಮಂತನು ರಾಮನ ಪಾದಾರವಿಂದಗಳಿಗೆ ನಮಸ್ಕರಿಸಿ, "ಅಪ್ಪಣೆಯಾದರೆ ಹೋಗಿ ತರುತ್ತೇನೆ," ಎಂದು ಪ್ರಾರ್ಥಿಸಿದನು. ರಾಮನು ಅನುಮತಿ ಇತ್ತನು.

**ಕಾಲನೇಮಿಯ ಕಥೆ**: ಸುಷೇಣನು ರಾಮಸನ್ನಿಧಿಯಲ್ಲಿರುವನೆನ್ನುವುದು ಒಬ್ಬ ಗೂಢಚಾರನ ಮೂಲಕ ರಾವಣನಿಗೆ ತಿಳಿಯಿತು. ಅವನನ್ನು ಕೊಂಡಯ್ದವನು ಹನುಮಂತನಾದ್ದರಿಂದ ಅವನನ್ನೆದುರಿಸುವಂತೆ ಕಾಲನೇಮಿಗೆ ಹೇಳಿದನು. ಕಾಲನೇಮಿಯು, "ರಾವಣಾ! ನಿನ್ನ ಕಣ್ಣೆದುರಿನಲ್ಲೇ ಹನುಮಂತನು ಲಂಕೆಯನ್ನು ಧ್ವಂಸ ಮಾಡಿದನಲ್ಲವೆ? ಅಂತಹ ಹನುಮಂತನನ್ನು ಸೋಲಿಸಲು ನನ್ನಲ್ಲೇನು ಶಕ್ತಿ ಇದೆ? ಈಗಲಾದರೂ ಕಾಲ ಮಿಂಚಿ ಹೋಗಿಲ್ಲ. ರಾಮನನ್ನು ಜಯಿಸುತ್ತೇನೆನ್ನುವ ನಿನ್ನ ಭ್ರಾಂತಿಯನ್ನು ಬಿಡು. ರಾಮನ ಚರಣಗಳಾನ್ನಾಶ್ರಯಿಸು. ಅದರಿಂದ ನಿನಗೆ ಒಳ್ಳೆಯದಾಗುವುದು. ನಿನ್ನ ಅಹಂಕಾರವನ್ನು, ಮದವನ್ನು ಬಿಡು," ಎಂದು ರಾವಣನಿಗೆ ಹಿತೋಪದೇಶ ಹೇಳಿದನು. ರಾವಣನು ಕೋಪಗೊಂಡು ಅವನನ್ನು ಧಿಕ್ಕರಿಸಿ, "ನನ್ನ ಆಜ್ಞೆಯಂತೆ ಮಾಡುತ್ತೀಯೋ ಇಲ್ಲವೆ ನಿನ್ನನ್ನು ಹತಮಾಡೆನ್ನುತ್ತೀಯೋ?" ಎಂದು ಗರ್ಜಿಸಿದನು. "ರಾಮನ ಕೈಯಲ್ಲಿ ಸಾಯುವುದೇ ಮೇಲು, ಇವನ ಕೈಯಲ್ಲೇಕೆ ಸಾಯಬೇಕು," ಎಂದು ಯೋಚಿಸಿ ಕಾಲನೇಮಿ ಅಲ್ಲಿಂದ ಹೊರಟನು. ಮಾಯೆಯಿಂದ ದಾರಿಯಲ್ಲಿ ಒಂದು ಸರೋವರವನ್ನೂ ಉದ್ಯಾನವನವನ್ನೂ ಸೃಷ್ಟಿಸಿ ಋಷಿ ವೇಷವನ್ನು ಧರಿಸಿ ಧ್ಯಾನನಿಷ್ಠನಾಗಿ ಕುಳಿತನು. ಹನುಮಂತನು ಯುದ್ಧದಿಂದ ಬಿಡದಿಗೆ ಬಂದವನು ವಿಶ್ರಾಂತಿಯನ್ನೂ ತೆಗೆದುಕೊಳ್ಳದೆ, ರಾಮಾಜ್ಞೆಯನ್ನು ಶಿರಸಾವಹಿಸಿ ಔಷಧಿ ತರಲು ಹೊರಟನು.

ದಾರಿಯಲ್ಲಿ ಬಳಲಿ ಬಾಯಾರಿ ಕಾಲನೇಮಿ ಸೃಷ್ಟಿಸಿದ ಸುಂದರವನವನ್ನೂ ಆಶ್ರಮವನ್ನೂ ನೋಡಿ, ದಾಹ ತೀರಿಸಿಕೊಂಡು ದಣಿವಾರಿಸಿಕೊಂಡು ಮುಂದೆ ಹೋಗೋಣವೆಂದು ಆ ಆಶ್ರಮವನ್ನು ಪ್ರವೇಶಿಸಿ ಮುನಿಗೆ ನಮಸ್ಕರಿಸಿದನು. ಅವನನ್ನು ನೋಡಿ, ಆ ಕಪಟ ವೇಷಧಾರಿಯು ರಾಮನ ಗುಣಗಣಗಳನ್ನು ಗಾನ ಮಾಡಲಾರಂಭಿಸಿದನು. ಹನುಮಂತನು ಆಶ್ಚರ್ಯಪಟ್ಟು ತಾನೂ ರಾಮನಾಮ ಸ್ಮರಣೆ ಮಾಡಿದನು. ಆಗ ಕಪಟ ವೇಷಧಾರಿಯಾದ ಕಾಲನೇಮಿಯು, "ವಾನರಾ, ರಾಮರಾವಣರಿಗೆ ಯುದ್ಧ ನಡೆಯುತ್ತಿದೆ. ನಿತ್ಯವೂ ನಾನು ಇಲ್ಲಿಂದಲೇ ನೋಡುತ್ತಿದ್ದೇನೆ. ಖಂಡಿತವಾಗಿ ರಾಮನಿಗೆ ಜಯವಾಗುವುದು, ಸಂದೇಹವಿಲ್ಲ," ಎಂದನು. ಹನುಮಂತನು ಆ ಮಾತಿಗೆ ಸಂತೋಷಪಟ್ಟನು. ತನಗೆ ಬಾಯಾರಿಕೆಯಾಗಿದೆ

ಯೆಂದು ಹೇಳಿದನು. ವೇಷಧಾರಿಯಾದ ಋಷಿ ತನ್ನ ಕಮಂಡಲದಲ್ಲಿ ಒಳ್ಳೆಯ ನೀರಿದೆಯೆಂದೂ ಅದನ್ನು ಕುಡಿಯಬೇಕೆಂದೂ ಹೇಳಿ ಕಮಂಡಲವನ್ನು ಅವನ ಕೈಗಿತ್ತನು. ಹನುಮಂತನು, "ಸ್ವಾಮೀ ಇಷ್ಟು ನೀರು ನನಗೆ ಏನೇನೂ ಸಾಲದು," ಎನ್ನಲು ಕಾಲನೇಮಿಯು ಹತ್ತಿರವಿದ್ದ ಸರೋವರವನ್ನು ತೋರಿಸಿ, "ಅಲ್ಲಿ ನಿನ್ನ ಶ್ರಮ ತೀರಿಸಿಕೊಂಡು ತೃಪ್ತಿಯಾಗುವಷ್ಟು ನೀರು ಕುಡಿದು ಬಾ," ಎಂದನು. ಹನುಮಂತನು ಕಾಲುಗಳನ್ನು ಸರೋವರದೊಳಗಿಟ್ಟೊಡನೆ ಒಂದು ಮೊಸಳೆ ಅವನ ಕಾಲುಗಳನ್ನು ಬಲವಾಗಿ ಹಿಡಿಯಿತು. ಹನುಮಂತನು ಅದರ ಹಿಡಿತದಿಂದ ತಪ್ಪಿಸಿಕೊಂಡು, ಅದನ್ನು ಹೊರಗೆಳೆದು ಬಡಿದು ಕೊಂದನು. ಆಗ, ಆ ಮೊಸಳೆ ತನ್ನ ಶರೀರವನ್ನು ಬಿಟ್ಟು, ಒಬ್ಬ ದಿವ್ಯ ಪುರುಷನಾಗಿ ಎದುರು ನಿಂತಿತು. ಹನುಮಂತನು ಆಶ್ಚರ್ಯಪಟ್ಟು, "ನೀನ್ಯಾರು?" ಎಂದು ಅವನನ್ನು ಪ್ರಶ್ನಿಸಿದನು.

ಅವನು, "ಓ ರಾಮದಾಸಾ! ನಿಮ್ಮ ದರ್ಶನ ಸ್ಪರ್ಶನಗಳಿಂದ ನನ್ನ ಪಾಪ ನಶಿಸಿತು. ನನ್ನ ಶಾಪ ನಿವಾರಣೆಯಾಯಿತು. ನಾನೂ ಕಾಲನೇಮಿಯೂ ಪೂರ್ವ ಜನ್ಮದಲ್ಲಿ ಗಂಧರ್ವರಾಗಿದ್ದೆವು. ಇಂದ್ರನ ಸಭೆಯಲ್ಲಿ ಗಾನ ಮಾಡುತ್ತಿದ್ದೆವು. ಆ ಸಮಯದಲ್ಲಿ ದುರ್ವಾಸರೆನ್ನುವ ಮಹಾಮುನಿ ಒಂದು ಸಾರಿ ಸಭೆಗೆ ಬಂದರು. ಅವರ ರೂಪವನ್ನು ನೋಡಿ ನಾವು ನಕ್ಕೆವು. ಅದರಿಂದ ಅವರು ಕೋಪಿಸಿಕೊಂಡು, ರಾಕ್ಷಸರಾಗಿ ಹುಟ್ಟಿರೆಂದು ನಮ್ಮನ್ನು ಶಪಿಸಿದರು. ನಾವು ಚಿಂತೆಗೊಂಡು ಅವರ ಪಾದಗಳನ್ನು ಹಿಡಿದು ಪ್ರಾರ್ಥಿಸಿದೆವು. ಆಗ, ಮಹಾಮುನಿ ಕರುಣಿಸಿ, 'ನೀವಿಬ್ಬರೂ ರಾಕ್ಷಸರಾಗಿ ಲಂಕಾನಗರದಲ್ಲಿ ಜನಿಸುವಿರಿ. ತ್ರೇತಾಯುಗದ ಚತುರ್ಥ ಪಾದದಲ್ಲಿ ರಾಮನು ಅವತಾರ ಮಾಡುವನು. ಆಗ ನಿಮ್ಮ ಲಂಕೆಯಲ್ಲಿ ದೊಡ್ಡ ಯುದ್ಧ ನಡೆಯುವುದು. ಆ ಯುದ್ಧದಲ್ಲಿ ಶಕ್ತಿಯೊಂದು ತಗಲಿ ಲಕ್ಷ್ಮಣನು ಮೂರ್ಛೆ ಹೋಗುವನು. ಅವನ ಚಿಕಿತ್ಸೆಗೆ ಸಂಜೀವಿನಿಯನ್ನು ತರಲು ಹನುಮಂತನು ಈ ಮಾರ್ಗವಾಗಿ ಬರುವನು. ಅವನಿಂದ ನಿಮ್ಮ ಶಾಪ ವಿಮೋಚನೆಯಾಗುವುದು,' ಎಂದು ಹೇಳಿದನು. ಎಲೌ ವೀರನೇ! ಸಮೀಪದಲ್ಲಿರುವ ಸುಂದರ ವನದಲ್ಲಿ ವಾಸ ಮಾಡುತ್ತಿರುವ ಮುನಿ ವೇಷದಲ್ಲಿರುವ ರಾಕ್ಷಸನೇ ಕಾಲನೇಮಿ. ನನ್ನ ಮಾತನ್ನು ನಂಬು," ಎಂದು ಆ ಗಂಧರ್ವನು ಬಿನ್ನವಿಸಿದನು.

ಹನುಮಂತನು ಆ ಕಪಟ ಮುನಿಯ ಬಳಿಗೆ ಹೋಗಿ, "ಓ ಗುರುಸ್ವಾಮೀ! ನನ್ನ ಗುರುದಕ್ಷಿಣೆ ಸ್ವೀಕರಿಸಿ," ಎಂದನು. ನೀರು ಕುಡಿಯಲು ಹೋದ ಹನುಮಂತನು ಹಿಂತಿರುಗಿ ಬರಲು ಎಷ್ಟು ತಡವಾದುದೇಕೆ ಎಂದು ರಾಕ್ಷಸ ಕಾಲನೇಮಿಯು ಯೋಚಿಸಿ, ಆ ಕೊಳದಲ್ಲಿದ್ದ ತನ್ನ ಮಿತ್ರನು ತನ್ನ ಗುಟ್ಟನ್ನು ಹೇಳಿರಬಹುದೇನೋ ಎಂದು ಶಂಕಿಸಿ, ತನ್ನೆದುರು ಬಂದು ನಿಂತಿದ್ದ ಹನುಮಂತನನ್ನು ನೋಡಿಯೂ

ನೋಡದವನಂತಿದ್ದನು. ಹನುಮಂತನು ಇವನ ಗುಟ್ಟನ್ನು ತಿಳಿದು, ಕಣ್ಣುಮುಚ್ಚಿ ಕುಳಿತಿದ್ದ ಆ ಕಪಟ ಸನ್ಯಾಸಿಯ ಕುತ್ತಿಗೆಗೆ ಬಾಲವನ್ನು ಸುತ್ತಿ, ಅವನನ್ನು ಗಿರಗಿರನೆ ತಿರುಗಿಸಿ ನೆಲಕ್ಕಪ್ಪಳಿಸಿದನು. ಕಾಲನೇಮಿಯು, "ರಾಮಾ ರಾಮಾ," ಎನ್ನುತ್ತಾ ಪ್ರಾಣ ಬಿಟ್ಟನು.

**ಭರತನ ಬಾಣ**: ನಂತರ, ಹನುಮಂತನು ದ್ರೋಣ ಪರ್ವತಕ್ಕೆ ಹೊರಟನು. ಅಲ್ಲಿ ಅವನು ಸಂಜೀವಿನಿ ಪರ್ವತವನ್ನು ನೋಡಿದ್ದನೇ ವಿನಾ ಔಷಧಿಯನ್ನು ಗುರುತಿಸಲಾರದೆ ಹೋದನು. ಆಲಸ್ಯ ಮಾಡಿದರೆ ರಾಮಾಜ್ಞೆ ಮೀರಿದಂತಾಗುವುದೆಂದು ಬಗೆದು, ಆ ಪರ್ವತವನ್ನೇ ಹಸ್ತದಲ್ಲಿಟ್ಟುಕೊಂಡು, ಅಯೋಧ್ಯಾ ಮಾರ್ಗವಾಗಿ ಬರುತ್ತಿದ್ದನು. ಆ ಸಮಯದಲ್ಲಿ ಭರತನು, ಏಕಾಕಿಯಾಗಿ ಕುಳಿತು ರಾಮ ಚಿಂತನೆ ಮಾಡುತ್ತಿದ್ದನು. ಮೇಲೆ ಹೋಗುತ್ತಿದ್ದ ಹನುಮಂತನ ನೆರಳು ಭರತನ ಮೇಲೆ ಬಿದ್ದಿತು. ಭರತನು ತಲೆ ಎತ್ತಿ ನೋಡಿದನು. ದೊಡ್ಡ ಪರ್ವತವನ್ನು ಕೈಯಲ್ಲಿಟ್ಟುಕೊಂಡು ವೇಗವಾಗಿ ಹಾರಿ ಹೋಗುತ್ತಿದ್ದ ಒಂದು ಕಪಿಯನ್ನು ನೋಡಿ, ಅದು ಯಾವುದೋ ರಾಕ್ಷಸ ರೂಪವೆಂದು ತಿಳಿದು, ಈ ರಾಕ್ಷಸನು ಇತರರಿಗೆ ಉಪದ್ರವ ಉಂಟುಮಾಡುವ ಮೊದಲೇ ಅವನ ರೂಪನಾಶ ಮಾಡುವುದೊಳ್ಳೆಯದೆಂದು ನಿಶ್ಚಯಿಸಿ, ಬಳಿಯಲ್ಲಿದ್ದ ಧನುಸ್ಸನ್ನು ಎತ್ತಿಕೊಂಡು ಬಾಣ ಹೂಡಿ ಆಕರ್ಣಾಂತವಾಗಿ ಧನುಸ್ಸನ್ನೆಳೆದು ಪ್ರಯೋಗಿಸಿದನು. ಆ ಬಾಣವು ತಗಲಿದೊಡನೆ ಹನುಮಂತನು, "ಹಾ! ರಾಮಾ," ಎಂದು ಕೂಗಿದನು. ಆ ರಾಮ ಶಬ್ದವನ್ನು ಕೇಳಿ ಭರತನು ತಟ್ಟನೆ ಎದ್ದು ಕೆಳಗೆ ಬಿದ್ದ ವಾನರನ ಬಳಿ ಹೋಗಿ, ಅವನ ವೃತ್ತಾಂತವನ್ನು ಕೇಳಿ ದುಃಖಿಸಿದನು. ಹನುಮಂತನನ್ನು ಆಲಂಗಿಸಿಕೊಂಡು ತನ್ನ ತಪ್ಪನ್ನು ಕ್ಷಮಿಸಬೇಕೆಂದು ಕೋರಿ ಕಣ್ಣೀರು ಹಾಕಿದನು. "ಮನೋವಾಕ್ಕಾಯಗಳಿಂದ ನಾನು ಹೃದಯಪೂರ್ವಕವಾಗಿ ರಾಮನನ್ನು ಸ್ಮರಿಸುತ್ತಿರುವುದು ಸತ್ಯವಾಗಿದ್ದಲ್ಲಿ, ಈ ವಾನರನನ್ನು ರಾಮನು ರಕ್ಷಿಸಿ ಯಥಾರೀತಿಯಾಗಿ ಶಕ್ತಿ ಕೊಡಲಿ," ಎಂದು ಪ್ರಾರ್ಥಿಸಿದನು.

**ಭರತನೂ ಹನುಮಂತನೂ**: ಭರತನು ಹೀಗೆ ಶಪಥ ಮಾಡಿದೊಡನೆಯೇ ಹನುಮಂತನ ಬಾಧೆ ಹೋಗಿ, ಅವನು ಮೊದಲಿನಂತೆ ಎದ್ದು ನಿಂತನು. ಭರತನನ್ನು ಪರೀಕ್ಷಿಸುವ ಸಲುವಾಗಿ, "ರಾಮಚಂದ್ರ ಪ್ರಭುವಿಗೆ ಜೈ! ರಘುರಾಮನಿಗೆ ಜೈ!" ಎಂದು ಜೈಕಾರ ಮಾಡಿದನು. ಅದನ್ನು ಕೇಳಿ ಭರತನು ದುಃಖವನ್ನು ಅದುಮಿಕೊಳ್ಳಲಾಗದೆ ಗೊಳ್ಳೆಂದು ಅತ್ತನು. "ಓ ಕಪೀಶ್ವರಾ! ನಮ್ಮ ಸೀತಾರಾಮಲಕ್ಷ್ಮಣರು ಕುಶಲವೇ? ನಮ್ಮ ತಾಯಿ ಜಾನಕೀದೇವಿ ಕುಶಲವೇ?" ಎಂದು ಆನಂದಬಾಷ್ಪ ಸುರಿಸುತ್ತಾ ಕೇಳಿದನು. ಆಂಜನೇಯನು ಎಲ್ಲ ವೃತ್ತಾಂತವನ್ನೂ ಭರತನಿಗೆ ತಿಳಿಸಿ

ದನು. ಹಿಂದಿನ ಘಟನೆಗಳನ್ನೆಲ್ಲಾ ಸ್ಮರಿಸುತ್ತಾ ಲಕ್ಷ್ಮಣನ ಮೂರ್ಛೆಯ ವಿಷಯ ಕೇಳಿ ಭರತನು ನೆಲಕ್ಕೆ ಕುಸಿದನು. ನಂತರ ಚೇತರಿಸಿಕೊಂಡೆದ್ದು, "ಹನುಮಂತಾ! ನನ್ನ ತಪ್ಪನ್ನು ಮನ್ನಿಸು. ಈ ಸಮಯದಲ್ಲಿ ನಾನು ನಿನ್ನನ್ನು ತಡೆದು ನಿಲ್ಲಿಸುವುದು ಸರಿಯಲ್ಲ. ಬೇಗನೆ ಸಂಜೀವಿನಿಯನ್ನು ತೆಗೆದುಕೊಂಡು ಹೋಗು," ಎಂದು ಆಜ್ಞಾಪಿಸಿದನು. ಹನುಮಂತನು ಭರತನಿಗೆ ನಮಸ್ಕರಿಸಿ, ಪರ್ವತವನ್ನೆತ್ತಿಕೊಂಡು ಆಕಾಶದಲ್ಲಿ ಹೊರಟನು. ಅವನು ಕಣ್ಣಿಗೆ ಕಾಣಿಸುವವರೆಗೂ ಭರತನು ಕಣ್ಣು ರೆಪ್ಪೆಯಾಡಿಸದೆ ಅವನನ್ನೇ ನೋಡುತ್ತಿದ್ದನು. ರಾಮನ ಕ್ಷೇಮ ಸಮಾಚಾರ ತಿಳಿಯಿತಲ್ಲಾ ಎಂದು ಒಂದು ಕಡೆ ಆನಂದ, ಸೀತಾ ಲಕ್ಷ್ಮಣರ ಪರಿಸ್ಥಿತಿಯನ್ನು ನೆನೆದು ಇನ್ನೊಂದು ಕಡೆ ಸಹಿಸಲಾರದ ದುಃಖ, ಇಂಥ ಸ್ಥಿತಿಯಲ್ಲಿ ಭರತನು ಅರಮನೆಗೆ ಹೋಗಿ ತಾಯಿಯರಿಗೆ ಈ ವಾರ್ತೆಯನ್ನು ತಿಳಿಸಿದನು.

ತಾಯಿ ಸುಮಿತ್ರೆ ಮೊದಲು ಸ್ವಲ್ಪ ಚಿಂತಿಸಿದಳಾದರೂ ನಂತರ, ರಾಮನು ಜೊತೆಯಲ್ಲಿದ್ದಾನಲ್ಲವೇ ಎಂದು ಧೈರ್ಯ ತಂದುಕೊಂಡಳು. ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನು ರಾಮ ಕಾರ್ಯನಿಮಿತ್ತವಾಗಿ ತನ್ನ ದೇಹವನ್ನು ಉಪಯೋಗಿಸಿದನಲ್ಲವೆ? ಅಷ್ಟೇ ಸಾಕು. ನನ್ನ ಜನ್ಮ ಸಫಲವಾಯಿತು ಎಂದು ಸಂತೋಷಿಸಿದಳು. ಆದರೆ, ಈ ಸಮಯದಲ್ಲಿ ಲಕ್ಷ್ಮಣನ ಮೂರ್ಛೆಯಿಂದಾಗಿ ರಾಮನಿಗೆ ಎಷ್ಟು ದುಃಖವಾಗಿದೆಯೋ ತಮ್ಮನ ವಿಯೋಗದಿಂದ ಅವನೆಷ್ಟು ಚಿಂತಿಸುತ್ತಿದ್ದಾನೋ ಎಂದು ಯೋಚಿಸಿ, ಶತ್ರುಘ್ನನನ್ನು ಕರೆದು, "ಮಗೂ! ನೀನು ಕೂಡಲೇ ರಾಮನ ಸಹಾಯಕ್ಕಾಗಿ ಹೋಗು," ಎಂದಳು. ಶತ್ರುಘ್ನನು ಥಟ್ಟನೆದ್ದು, ಅದಕ್ಕಿಂತ ಹೆಚ್ಚಿನ ಮಹಾಭಾಗ್ಯ ಯಾವುದು ಎಂದು ಹೊರಡಲು ಸಿದ್ಧನಾದನು. ಆಗ ಭರತನು, "ರಾಮಾಜ್ಞೆ ಇಲ್ಲದೆ ನಿನ್ನನ್ನು ಕಳಿಸುವುದು ಸರಿಯಲ್ಲ. ನೀನೀಗ ಹೋದರೆ ರಾಮನು ಬೇಸರಗೊಳ್ಳಬಹುದು. ಅವನಾಜ್ಞೆಯನ್ನು ಶಿರಸಾವಹಿಸುವುದೇ ನಮ್ಮ ಕರ್ತವ್ಯ," ಎಂದು ಅವನನ್ನು ಸಮಾಧಾನಪಡಿಸಿದನು.

**ರಾಮನ ವಿಲಾಪ**: ಇತ್ತ, ಲಂಕಾಪಟ್ಟಣದಲ್ಲಿ ರಾಮನು ಲಕ್ಷ್ಮಣನನ್ನು ಕಾಪಾಡುತ್ತಿದ್ದನು. ಅರ್ಧರಾತ್ರಿಯಾಗಿತ್ತು, ವಾನರೆಲ್ಲರೂ ರಾಮನನ್ನು ಸುತ್ತುವರಿದಿದ್ದರು. ರಾಮನು ತಾನು ಮಾನವ ಮಾತ್ರನೆಂಬಂತೆ, "ಓ ವಾನರರೇ, ಅರ್ಧರಾತ್ರಿ ಆಗಿ ಹೋಯಿತು, ಇಲ್ಲಿಯವರೆಗೂ ಹನುಮಂತನ ಸುಳಿವಿಲ್ಲ. ಅವನಿಗೆ ದ್ರೋಣಗಿರಿ ಪರ್ವತದ ದಾರಿ ಗೊತ್ತಾಗದೆ ಕಂಗಾಲಾಗಿದ್ದಾನೋ ಏನೋ! ನನ್ನ ತಮ್ಮನು ದೀರ್ಘ ಮೂರ್ಛೆಯಲ್ಲಿದ್ದಾನೆ," ಎಂದು, ಲಕ್ಷ್ಮಣನನ್ನು ನೋಡಿ, ಅವನ ಮುಖವನ್ನು ಮುದ್ದಾಡಿದನು. "ತಮ್ಮಾ! ಎಂದೂ ಕೂಡ ಇಷ್ಟು ದೀರ್ಘಕಾಲ ನನ್ನನ್ನು ನೋಡದೆ ನೀನು ಇದ್ದವನಲ್ಲ. ನಿನ್ನೆಯಿಂದ ನನ್ನನ್ನು ಸಮಾಧಾನ

ಪಡಿಸುವವರಿಲ್ಲದೆ, ನಿನ್ನ ಮಾತನ್ನು ಕೇಳದೆ, ನಾನು ಸೊರಗಿದ್ದೇನೆ," ಎಂದು, ಸಾಮಾನ್ಯ ಮನುಷ್ಯನಂತೆ ದುಃಖಿಸಿದನು. "ಓ ಲಕ್ಷ್ಮಣಾ! ನನ್ನ ಸಲುವಾಗಿ ತಂದೆ ತಾಯಿಗಳನ್ನು ಬಿಟ್ಟು ನನ್ನೊಂದಿಗೆ ಕಾಡಿಗೆ ಬಂದೆ. ಪಡಬಾರದ ಕಷ್ಟಗಳನ್ನೆಲ್ಲಾ ಪಟ್ಟೆ. ನನ್ನ ಕಷ್ಟಗಳನ್ನು ಲೇಶ ಮಾತ್ರವೂ ಸಹಿಸಲಾರದೆ ಹೋದೆ. ನಿನ್ನ ಸ್ವಭಾವ ಕೋಮಲ. ನನಗಾಗಿ ಬಿಸಿಲಿನಲ್ಲಿ ಬೆಂದು, ಮಳೆಯಲ್ಲಿ ನೆಂದು, ಚಳಿಯನ್ನನುಭ ವಿಸಿ, ಹೊತ್ತು ಹೊತ್ತಿಗೆ ಆಹಾರವಿಲ್ಲದೆ ಸಿಕ್ಕಿದ ಅಷ್ಟಿಷ್ಟು ಆಹಾರವನ್ನು ನನಗೆ ಕೊಟ್ಟು ನೀನು ಉಪವಾಸ ಇರುತ್ತಿದ್ದೆಯಲ್ಲವೇ! ಲಕ್ಷ್ಮಣಾ! ಅಂಥ ನಿನ್ನ ಪ್ರೇಮವನ್ನು ಹನ್ನೆರಡು ಗಂಟೆ ಕಾಲ ನಾನು ಅನುಭವಿಸದೆ ಹೋದೆನಲ್ಲಾ! ಲಕ್ಷ್ಮಣಾ! ಒಂದು ಸಾರಿ ನನ್ನನ್ನು ಕಣ್ತೆರದು ನೋಡು," ಎಂದು ತಮ್ಮನ ಗಲ್ಲವನ್ನು ಹಿಡಿದು ಪ್ರಲಾಪಿಸುತ್ತಿದ್ದ ರಾಮನನ್ನು ನೋಡಿ ವಾನರರು ಕಣ್ಣೀರು ಹಾಕಿದರು. ಕೆಲವರು ರಾಮನ ದುಃಖವನ್ನು ನೋಡಲಾರದೆ ಪರ್ವತಗಳನ್ನೂ ಮರಗಳನ್ನೂ ಹತ್ತಿ ಹನುಮಂತನ ದಾರಿ ಕಾಯತೊಡಗಿದರು.

ಇಷ್ಟರಲ್ಲಿ, ಹನುಮಂತನು ಸಂಜೀವಿನಿ ಪರ್ವತವನ್ನು ಹೊತ್ತು ಪ್ರತ್ಯಕ್ಷನಾದನು. ಕರುಣಾರಸದೊಂದಿಗೆ ವೀರರಸ ಬೆರೆತಂತೆ, ಹನುಮಂತನು ಬಂದು ವಾನರರೊಂ ದಿಗೆ ಕೂಡಿಕೊಂಡನು. ಹನುಮಂತನನ್ನು ನೋಡಿ ವಾನರರು, "ಧನ್ಯರಾದೆವು, ನೀನು ಬೆಳಗಾಗುವುದರೊಳಗೆ ಬರದೆ ಇದ್ದಿದ್ದರೆ, ನಾವು ಸಮುದ್ರದಲ್ಲಿ ಬಿದ್ದು ಪ್ರಾಣ ಕಳೆದುಕೊಳ್ಳುತ್ತಿದ್ದೆವು. ಲಕ್ಷ್ಮಣನ ವಿಯೋಗಭಾದೆಯನ್ನು ನಾವು ಸಹಿಸಲಾರೆವು. ನಮ್ಮ ಪ್ರಾಣಗಳನ್ನು ಕಾಪಾಡಿದೆ. ನಿನ್ನ ಋಣವನ್ನು ನಾವು ತೀರಿಸುವುದೆಂತು," ಎಂದರು. ಸಂಜೀವಿನಿ ಪರ್ವತವನ್ನು ತಂದ ಹನುಮಂತನನ್ನು ನೋಡಿ ರಾಮನು ಪರಮಾನಂದ ಭರಿತನಾದನು. ವಿಶಲ್ಯಕರಿಣಿ, ಸಂಧಾನಕರಿಣಿ, ಸುವರ್ಣಕರಿಣಿ, ಸಂಚಾರಕರಿಣಿ ಎನ್ನುವ ನಾಲ್ಕು ವಿಧದ ಮೂಲಿಕೆಗಳನ್ನು ಸುಷೇಣನು ಲಕ್ಷ್ಮಣನಿಗೆ ಸ್ಪರ್ಶ ಮಾಡಿಸಿದನು. ಲಕ್ಷ್ಮಣನು ತಕ್ಷಣ ಎದ್ದು ಕುಳಿತನು.

ರಾಮನು ಪರಮಾನಂದದಿಂದ ಅವನನ್ನು ಆಲಂಗಿಸಿಕೊಂಡು, "ಲಕ್ಷ್ಮಣಾ! ಇಷ್ಟು ಕಾಲ ಎಲ್ಲಿ ಹೋಗಿದ್ದೆ?" ಎಂದು ಆನಂದಬಾಷ್ಪಗಳನ್ನು ಸುರಿಸುತ್ತಾ ಬ್ರಹ್ಮಾನಂದ ದಲ್ಲಿ ಮುಳುಗಿದನು. ಸಂಜೀವಿನಿ ಪರ್ವತದ ಗಾಳಿ ಬೀಸಿದೊಡನೆ ಸತ್ತು ಬಿದ್ದಿದ್ದ ವಾನರರೆಲ್ಲರೂ ಸಹ ಎದ್ದು ಕುಳಿತರು. ಬದುಕಿ ಬಂದ ಅವರನ್ನು ಆಲಂಗಿಸಿ ಕೊಂಡು ವಾನರರು ಬ್ರಹ್ಮಾನಂದದಲ್ಲಿ ಮುಳುಗಿದರು. ಹನುಮಂತನನ್ನು ಬಗೆ ಬಗೆಯಾಗಿ ಕೊಂಡಾಡಿದರು. ರಾಮನು ಪ್ರಜ್ಞೆ ತಳೆದು ಎದ್ದ ಲಕ್ಷ್ಮಣನನ್ನು ಆಶೀರ್ವದಿಸಿ, ಸುಷೇಣನಿಗೆ ರಾವಣನಿಂದ ಯಾವ ಕೇಡೂ ಆಗದಂತೆ ಕಾಪಾಡು ವೆನೆಂದು ಪ್ರತಿಜ್ಞೆ ಮಾಡಿದನು. ಸುಷೇಣನಿಗೆ ಸಂಜೀವಿನಿಯನ್ನು ಕೊಟ್ಟು ಅವನ

ಮನೆಯನ್ನು ಲಂಕೆಯಲ್ಲಿ ಅದರ ಸ್ಥಳದಲ್ಲಿ ಇಟ್ಟು ಬರುವಂತೆ ಆಜ್ಞಾಪಿಸಿದನು. ಹನುಮಂತನು ಆನಂದದಿಂದ ಕೇಕೆ ಹಾಕುತ್ತಾ ತನ್ನ ಸೋದರ ವಾನರರೂ ತನ್ನ ಪ್ರಭುವೂ ಬದುಕಿದ್ದಕ್ಕಾಗಿ ಪರಮಾನಂದ ಹೊಂದಿ, ಸುಷೇಣನನ್ನು ಕೊಂಡಾಡಿದನು. ಅವನಿಗೆ ಅನೇಕ ವಿಧವಾಗಿ ಕೃತಜ್ಞತೆ ಹೇಳುತ್ತಾ ಲಂಕೆಯಲ್ಲಿ ಅವನನ್ನು ಅವನ ಸ್ಥಳದಲ್ಲಿ ಸೇರಿಸಿದನು.

**ರಣಭೇರಿ**: ಬೆಳಗಾಯಿತು, ಲಂಕೆಯಲ್ಲಿ ಮತ್ತೆ ರಣಭೇರಿಗಳು ಮೊಳಗಿದವು. ವಾನರರು ಅಮಿತೋಲ್ಲಾಸದಿಂದ ರಾಮಕಟಾಕ್ಷ ಬಲವನ್ನು ಕೊಂಡಾಡುತ್ತಾ ಹಲವು ಆನೆಗಳ ಬಲದಿಂದ ಕೇಕೆ ಹಾಕಿದರು. ಆ ದಿನ ಬಲಶಾಲಿಯಾದ ಧೂಮ್ರಾಕ್ಷನು ಯುದ್ಧಕ್ಕೆ ಬಂದನು. ಮಹಾವೀರರಾದ ವಾನರರು ಅವನನ್ನು ಎದುರಿಸಿ, ಎರಡನೆ ದಿನ ಅವನನ್ನು ವಧಿಸಿದರು. ಅವನ ನಂತರ, ಆಕಂಪನನು ಯುದ್ಧಕ್ಕೆ ಬಂದನು. ಅವನೂ ಮಹಾವೀರ. ಅವನು ಪರಿಪರಿ ವಿಧವಾಗಿ ಭಯಂಕರವಾಗಿ ಯುದ್ಧ ಮಾಡಿದನು. ಅಂಗದನು ಅವನೊಂದಿಗೆ ಹೋರಾಡಿ ಅವನನ್ನು ಕೊಂದನು. ಆಕಂಪನನ ಮರಣ ವಾರ್ತೆಯನ್ನು ಕೇಳಿದೊಡನೆಯೇ ಪ್ರಹಸ್ತನು ಉಗ್ರನಾಗಿ ಝೇಂಕಾರ ಮಾಡುತ್ತಾ ಬಂದನು. ನಲನು ಅವನನ್ನು ಎದುರಿಸಿ, ಘೋರ ಯುದ್ಧ ಮಾಡಿದನು. ರಾಮನನ್ನು ಸ್ಮರಿಸಿ, ಪ್ರಹಸ್ತನನ್ನು ಎತ್ತಿ ನೆಲಕ್ಕೆ ಕುಕ್ಕಿ ಸಂಹರಿಸಿದನು. ಪ್ರಹಸ್ತನು ನೆಲಕ್ಕುರುಳಿದೊಡನೆ ಮಹೋದರನು ಗರ್ಜಿಸುತ್ತಾ ಬಂದನು. ಹನುಮಂತನು ಅವನನ್ನು ಕೊಲ್ಲಲು ಸಿದ್ಧನಾಗಿ, ಮಹಾ ವೀರಾವೇಶದಿಂದ ಗರ್ಜಿಸುತ್ತಾ ಕಟಕಟ ಹಲ್ಲು ಕಡಿಯುತ್ತಾ ಮಹೋದರನ ಮೇಲೆ ಬಿದ್ದು ಅವನನ್ನು ತುಂಡು ತುಂಡು ಮಾಡಿದನು.

ನಂತರ ಕುಂಭಕರ್ಣನ ಕುಮಾರನಾದ ಕುಂಭ ನಿಕುಂಭರು ಅನೇಕ ಮಂದಿ ರಾಕ್ಷಸ ವೀರರೊಡಗೂಡಿ ಐದು ದಿನಗಳು ವಾನರರೊಂದಿಗೆ ಹೋರಾಡಿದರು. ಆರನೆಯ ದಿನ ಕುಂಭ ನಿಕುಂಭರು ವೀರಸ್ವರ್ಗ ಹೊಂದಿದರು. ಈ ಘೋರವನ್ನು ನೋಡಿ ಲಂಕೆಯಲ್ಲಿಯ ರಾಕ್ಷಸರು ಭಯಭ್ರಾಂತರಾಗಿ ತಮ್ಮ ಪ್ರಾಣ ಯಾವ ನಿಮಿಷ ಹೋಗುವುದೋ ಎಂದು ದಿಗಿಲುಗೊಂಡು ಪ್ರಾಣರಕ್ಷಣೆಗಾಗಿ ಕೆಲವರು ಓಡಿದರು, ಕೆಲವರು ವಾನರರ ಶರಣು ಹೋದರು, ರಾವಣನನ್ನು ಅನೇಕ ವಿಧವಾಗಿ ಬೈದರು. ಮಂಡೋದರಿಯ ಬಳಿ ಮೊರೆಯಿಟ್ಟರು. ಮಂಡೋದರಿ ಕೂಡ ರಾವಣನ ದುರ್ಬುದ್ಧಿಗೆ ವ್ಯಥೆಪಟ್ಟು ರಾಮನನ್ನು ಪ್ರಾರ್ಥಿಸಿದಳು. ಇಷ್ಟರಲ್ಲಿ, ಮಹಾಯೋಧನಾದ ಮಕರಾಕ್ಷನು ಯುದ್ಧಕ್ಕೆ ಬಂದನು. ಲಕ್ಷ್ಮಣನು ಅವನನ್ನು ಎದುರಿಸಿ ಸಂಹರಿಸಿದನು. ಲಕ್ಷ್ಮಣನು ಮಕರಾಕ್ಷನನ್ನು ಸಂಹರಿಸಿದುದನ್ನು ಕೇಳಿ

ವಾನರರು ಜೈ ಜೈಕಾರ ಮಾಡಿದರು. ಮಹಾಯೋಧರೆಲ್ಲರೂ ನೆಲಕ್ಕುರುಳಿದ ರೆನ್ನುವ ವಾರ್ತೆ ಕೇಳಿ ರಾವಣನು ದುಃಖಿಸಿದನು.

**ನಿದ್ರೆಯಿಂದೆಚ್ಚರಗೊಳಿಸಿದ್ದು**: ರಾಕ್ಷಸರು ಕುಂಭಕರ್ಣನ ಬಳಿಗೆ ಹೋಗಿ ಅವನನ್ನೆಬ್ಬಿಸುವ ಅನೇಕ ಪ್ರಯತ್ನಗಳನ್ನು ಮಾಡಿದರು. ಕುಂಭಕರ್ಣನ ಕಿವಿಗಳ ಬಳಿ ಭೇರಿ ಮೃದಂಗಗಳನ್ನು ಬಾರಿಸಿದರು. ಕದಲದ ಕುಂಭಕರ್ಣನನ್ನು ಕಂಡು ರಾವಣನು ಕೋಪಗೊಂಡು, ಹಲವು ಜನ ಮುಷ್ಠಿ ಯುದ್ಧದ ಮಲ್ಲರನ್ನು ಕರೆಸಿ, ಗದೆಯಿಂದ, ಮುಷ್ಠಿಯಿಂದ ಅವನ ತೊಡೆಗಳಿಗೆ ಹೊಡೆಸಿದನು. ಕುಂಭಕರ್ಣನು ಎಚ್ಚರ ಗೊಂಡು ಕಣ್ಣು ತೆರೆದು ನೋಡಿದನು. ಆಗ, ರಾವಣನು ತನ್ನ ಗೋಳನ್ನು ಹೇಳಿಕೊಂಡನು. ಕುಂಭಕರ್ಣನ ಮಕ್ಕಳ ಮರಣ ವಾರ್ತೆಯನ್ನು ತಿಳಿಸಿದನು. ಕುಂಭಕರ್ಣನು ತನ್ನ ಮಕ್ಕಳ ಮರಣ ವಾರ್ತೆ ಕೇಳಿದೊಡನೆಯೆ ಕಾಲನಂತೆ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು, "ಲೋ ಮೂರ್ಖ! ಜಾನಕಿಯು ಜಗಜ್ಜನನಿ. ಅವಳನ್ನು ಕದ್ದ ನಿನಗೆ ಶುಭವಾಗುವುದೇ? ನೀನು ಮಾಡಿರುವುದು ಎಷ್ಟು ಮಾತ್ರಕ್ಕೂ ಸಹಿಸಲಾಗದ ಕೆಲಸ. ನಿನ್ನ ದುರ್ಬುದ್ಧಿಯಿಂದ ಲಂಕೆಯನ್ನೇ ನಾಶ ಮಾಡಿಕೊಳ್ಳುತ್ತಿದ್ದೀಯೆ. ಇನ್ನಾದರೂ ಅಭಿಮಾನ ಬಿಟ್ಟು ರಾಮನನ್ನು ಶರಣು ಹೋಗು. ನಿನಗೆ ಶುಭವಾಗುವುದು. ಮಾನ ಮರ್ಯಾದೆಗಳನ್ನು ಬಿಟ್ಟು, ಧರ್ಮವನ್ನು ಜರಿದು, ಪರಸ್ತ್ರೀಯರನ್ನು ಅಪಹರಿಸುವುದು ರಾಜಧರ್ಮವೇ? ಇದು ಪರಮಾರ್ಥವೇ? ನಿನಗೆ ತಕ್ಕ ಫಲವೇ ಸಿಕ್ಕಿದೆ. ರಾವಣಾ! ರಾಮನು ಸಾಮಾನ್ಯನಲ್ಲ. ಮೋಹದಿಂದ ಕಾಮಾಂಧಳಾಗಿ ಶೂರ್ಪಣಖಿ ತನ್ನ ಸ್ವಾರ್ಥ ಸಾಧನೆಗೆ ಸನ್ನಾಹ ಮಾಡಿದ್ದರಿಂದಲೇ ಆ ಕಾಮಾಂಧೆಯು ತನ್ನ ಶಿಕ್ಷೆ ಅನುಭವಿಸಿ, ನಿನ್ನಿಂದ ಈ ಕಿರಾತ ಚರ್ಯೆ ಮಾಡಿಸಿ ನಿನ್ನನ್ನೂ ಹಾಳು ಮಾಡಿದಳು. ಹೆಂಗಸಿನ ಮಾತು ಕೇಳಿ, ನ್ಯಾಯಾನ್ಯಾಯವನ್ನು ಮರೆತು, ಕೈಯಾರ ಕೇಡು ತಂದುಕೊಂಡೆ, ಛಿ!" ಎಂದು ರಾವಣನನ್ನು ಬೈದನು.

ರಾವಣನು ತನ್ನ ತಪ್ಪನ್ನು ಮುಚ್ಚಿಕೊಂಡು, "ಈ ಆಪತ್ಸಮಯದಲ್ಲಿ ನನ್ನನ್ನು ಬಿಡುವುದು ಸರಿಯಲ್ಲ. ಏನೇ ಆಗಲಿ, ನೀನು ಯುದ್ಧಕ್ಕೆ ಸಿದ್ಧನಾಗಲೇಬೇಕು. ನನ್ನ ಪ್ರಾಣವನ್ನು ಕಾಪಾಡಲೇಬೇಕು," ಎಂದು ಕುಂಭಕರ್ಣನನ್ನು ಪರಿಪರಿ ವಿಧ ವಾಗಿ ಬೇಡಿಕೊಂಡನು. ವಿಧಿಯಿಲ್ಲದೆ, ಸೋದರನ ಮೇಲಿನ ಅಭಿಮಾನದಿಂದ ಕುಂಭಕರ್ಣನು ಯುದ್ಧಕ್ಕೆ ಸಿದ್ಧನಾದನು. ಬಿಂದಿಗೆ ಬಿಂದಿಗೆ ಕಳ್ಳು, ಬುಟ್ಟಿ ಬುಟ್ಟಿ ಮಾಂಸವನ್ನು ತಂದು ಅವನ ಮುಂದಿಟ್ಟರು. ಕಾಲಹರಣ ಮಾಡದೇ ಕುಂಭ ಕರ್ಣನು ಮಾಂಸ ಮದ್ಯಪಾನಗಳನ್ನು ಮುಗಿಸಿ ರಣರಂಗಕ್ಕೆ ಹೊರಟನು.

ಅವನು ಬರುತ್ತಿರುವುದನ್ನು ನೋಡಿ ವಿಭೀಷಣನು ಅವನೆದುರು ಹೋಗಿ ಪಾದಗಳಿಗೆ ನಮಸ್ಕರಿಸಿ ತನ್ನ ಹೆಸರು ಹೇಳಿದನು. ಕುಂಭಕರ್ಣನು ತಮ್ಮನಾದ ವಿಭೀಷಣನನ್ನು ಆಲಂಗಿಸಿಕೊಂಡನು. ಆಗ ವಿಭೀಷಣನು, "ಅಣ್ಣಾ! ರಾವಣನು ನನ್ನನ್ನು ಸಭೆಯಲ್ಲಿ ಕಾಲಿನಿಂದ ತಳ್ಳಿ ಅವಮಾನ ಮಾಡಿದನು. ನಾನು ಪೂರ್ವೋತ್ತರಗಳನ್ನು ಆಲೋಚಿಸಿ ಅವನಿಗೆ ಎಷ್ಟೋ ಹಿತೋಪದೇಶ ಮಾಡಿದೆ. ಆದರೆ, ಧೂರ್ತರಾದ ಮಂತ್ರಿಗಳ ಮಾತು ಕೇಳಿ, ಅವರ ಮುಂದೆ ನನ್ನ ಬಗ್ಗೆ ಸಹಿಸಲಾಗದಷ್ಟು ಅವಮಾನದ ಮಾತುಗಳನ್ನಾಡಿದನು. ತಾಳಲಾರದೆ ನಾನು ರಾಮನನ್ನು ಶರಣು ಹೋದೆ. ರಾಮನು ಸರ್ವಜ್ಞನಾದುದರಿಂದ, ನಾನು ದೀನನೆನ್ನುವುದನ್ನರಿತು ನನ್ನನ್ನು ಸ್ವೀಕರಿಸಿದನು," ಎಂದನು. ಅದಕ್ಕೆ ಕುಂಭಕರ್ಣನು, "ತಮ್ಮಾ, ರಾವಣನಿಗೆ ಮೃತ್ಯು ಸನ್ನಿಹಿತವಾಗಿದೆ. ಆದ್ದರಿಂದ ಯಾರ ಹಿತೋಪದೇಶವನ್ನು ಅವನು ಕೇಳುವುದಿಲ್ಲ. ನಿಜವಾಗಿಯೂ ನೀನು ಧನ್ಯ, ರಾಕ್ಷಸ ಕುಲಕ್ಕೆ ಭೂಷಣಪ್ರಾಯನು. ಆ ಸುಖಸಾಗರನನ್ನು, ಆ ರಘುಕುಲ ರಾಮನನ್ನು ನೀನು ಸೇವಿಸುವುದರಿಂದ ರಾಕ್ಷಸ ಕುಲವೆಲ್ಲವೂ ಪವಿತ್ರವಾಯಿತು. ಹೋಗು, ರಾಮನನ್ನು ಸೇವಿಸು," ಎಂದು ತಮ್ಮನನ್ನು ಸಮಾಧಾನಪಡಿಸಿ, "ತಮ್ಮಾ! ನನ್ನ ಪಕ್ಷ ಶತ್ರುಪಕ್ಷವೆಂದು ಚಿಂತಿಸದಿರು. ನಾನು ಯುದ್ಧ ಮಾಡಬಲ್ಲೆ. ನನಗೂ ಸಹಿತ ಕಾಲ ಸನ್ನಿಹಿತವಾಗಿದೆ. ನನ್ನ ಮನಸ್ಸು ರಾವಣನಿಗೆ ಗೊತ್ತಿದೆ. ನೀನು ಸ್ವಪಕ್ಷ ಪರಪಕ್ಷವೆನ್ನುವ ಭೇದ ಮಾಡದೆ ರಾಮನನ್ನು ಸೇವಿಸು," ಎಂದನು. ಹೀಗೆ, ವಿಭೀಷಣನು ಕುಂಭಕರ್ಣನ ಅಪ್ಪಣೆ ಪಡೆದು ಹೊರಟನು. ರಾಮನ ಬಳಿಗೆ ಬಂದು, "ಓ ನಾಥಾ! ಆ ಪರ್ವತಾಕಾರ, ಆ ರಣಧೀರ ಕುಂಭಕರ್ಣನು ನಿಮ್ಮೊಂದಿಗೆ ಹೋರಾಡಲು ಬಂದಿದ್ದಾನೆ," ಎಂದು ಹೇಳಿದನು.

ವಾನರರು ವೃಕ್ಷಗಳನ್ನೂ ದೊಡ್ಡ ದೊಡ್ಡ ಬಂಡೆಗಳನ್ನೂ ಕುಂಭಕರ್ಣನ ಮೇಲೆ ಎಸೆಯತೊಡಗಿದರು. ಆದರೆ, ಕುಂಭಕರ್ಣನ ಮನಸ್ಸು ವಿಚಲಿತವಾಗಲಿಲ್ಲ, ದೇಹ ಕದಲಲಿಲ್ಲ. ಮದಗಜವನ್ನು ಕಣ್ಣು ರೆಪ್ಪೆಯಿಂದ ಹೊಡೆದಂತಾಯಿತು. ವಾನರರು ಅವನನ್ನು ಎಷ್ಟು ಮಾತ್ರಕ್ಕೂ ಕದಲಿಸಲಾರದೆ ಹೋದರು. ಆಗ, ಮಹಾವೀರನು ಹೂಂಕರಿಸಿ ಕುಂಭಕರ್ಣನನ್ನು ಬಲವಾಗಿ ಗುದ್ದಿದನು. ಕುಂಭಕರ್ಣನು ನಿಶ್ಚೇಷ್ಟಿತನಾಗಿ ಎಚ್ಚರತಪ್ಪಿ ಬಿದ್ದನು. ಸ್ವಲ್ಪ ಹೊತ್ತಿನ ಮೇಲೆ ಎಚ್ಚರ ತಂದುಕೊಂಡು ಮಹಾವೀರನನ್ನು ಬಲವಾಗಿ ಗುದ್ದಿದನು. ಮಹಾವೀರನು ನೆಲಕ್ಕುರುಳಿದನು. ನಂತರ, ನಲ–ನೀಲರು ಕೂಡಿ ಕುಂಭಕರ್ಣನ ಮೇಲೆ ಬಿದ್ದು ಹೋರಾಡಿದರು. ಆದರೆ, ಅವನ ಬಲವನ್ನು ಎದುರಿಸಲಾರದೆ ಹೋದರು. ವಾನರರು ಭಯಗೊಂಡರು. ಅವನೆದುರು ನಿಲ್ಲಲಾರದೆ ಹಿಮ್ಮೆಟ್ಟಿದರು. ಸುಗ್ರೀವ ಅಂಗದಾದಿಗಳು ಸಹಿತ ಎದುರಿಸಲಾರದೆ ನೆಲಕ್ಕೆ ಬಿದ್ದರು. ಕುಂಭಕರ್ಣನು ಸುಗ್ರೀವನನ್ನು ಕಂಕುಳಲ್ಲಿ

ಇರಿಸಿಕೊಂಡು ಹೊರಟನು. ಕಪಿರಾಜನನ್ನು ಸೆರೆಹಿಡಿದುಕೊಂಡು ಹೋದುದರಿಂದ ವಾನರ ಸೈನ್ಯವನ್ನು ಜಯಿಸಿದಂತಾಯಿತೆಂದು ಭಾವಿಸಿದನು.

**ಕುಂಭಕರ್ಣನ ವಧೆ**: ಇಷ್ಟರಲ್ಲಿ, ವಾಯುಪುತ್ರನಿಗೆ ಪ್ರಜ್ಞೆ ಬಂದು ಸುಗ್ರೀವನನ್ನು ಹುಡಕಲಾರಂಭಿಸಿದನು. ಸುಗ್ರೀವನು ಮೂರ್ಛೆಯಿಂದ ಎಚ್ಚೆತ್ತು ಕುಂಭಕರ್ಣನ ಹಿಡಿತದಿಂದ ತಪ್ಪಿಸಿಕೊಳ್ಳಲು ಅನೇಕ ವಿಧವಾಗಿ ಪ್ರಯತ್ನಿಸುತ್ತಿದ್ದುದನ್ನು ನೋಡಿ ಹನುಮಂತನು ಅವನ ಸಹಾಯಕ್ಕಾಗಿ ಅವನನ್ನು ಸಮೀಪಿಸಿದನು. ಸುಗ್ರೀವನು ಕುಂಭಕರ್ಣನ ಕಿವಿ ಮೂಗುಗಳನ್ನು ಕತ್ತರಿಸಿದನು. ದೊಡ್ಡ ಶರೀರವಾದ್ದರಿಂದ ಕುಂಭಕರ್ಣನು ಉಸಿರಾಡಲಾರದೆ ಬಹು ಬಾಧೆಪಟ್ಟನು. ಆ ವೇಳೆಗೆ "ರಾಮ ಜಯಂ, ರಾಮಜಯಂ" ಎನ್ನುತ್ತಾ ವಾನರರು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸೇರಿ ಮರ ಬಂಡೆಗಳ ಮಳೆಗರೆದರು. ಕುಂಭಕರ್ಣನು ಉಗ್ರನಾಗಿ ವಾನರರ ಮೇಲೆ ಬಿದ್ದು, ಅನೇಕ ವಾನರರನ್ನು ಹಿಡಿದು ತಿಂದನು. ಅನೇಕರು ಅವನ ಕೈಯಲ್ಲಿ ಸಿಕ್ಕಿ ನಲುಗಿದರು. ಕುಂಭಕರ್ಣನು ವಾನರ ಸೈನ್ಯವನ್ನು ಚೆಲ್ಲಾಪಿಲ್ಲಿ ಮಾಡಿದನು.

ಇದನ್ನು ನೋಡಿ ರಾಮನು, "ಇನ್ನು ಸಹಿಸಲಾರೆ, ಸ್ವತಃ ಯುದ್ಧಕ್ಕಿಳಿಯದೆ ವಿಧಿಯಿಲ್ಲ. ಲಕ್ಷ್ಮಣಾ! ಆ ಅಕ್ಷಯ ಬತ್ತಳಿಕೆಯನ್ನು ಇತ್ತ ಕೊಡು," ಎಂದನು. ರಾಮನು ಕೋದಂಡವನ್ನು ಧರಿಸಿ, ಸಿಂಹದಂತೆ ಯುದ್ಧ ಭೂಮಿಗೆ ಹೊರಟನು. ಲಕ್ಷ್ಮಣ, ಸುಗ್ರೀವ, ಹನುಮಂತ, ಜಾಂಬವಂತ ಮೊದಲಾದವರು ಅವನನ್ನು ಅನುಸರಿಸಿ ಹೊರಟರು. ರಾಮನು ರೆಕ್ಕೆಗಳುಳ್ಳ ಕಾಲಸರ್ಪಗಳಂಥ ಬಾಣಗಳನ್ನು ಪ್ರಯೋಗಿಸಿದನು. ಆ ಬಾಣಗಳು ವಾಯುವೇಗದಲ್ಲಿ ನಾಲ್ಕು ದಿಕ್ಕಿನಲ್ಲೂ ತುಂಬಿಕೊಂಡವು. ಕೋಟಿಗಟ್ಟಲೆ ರಾಕ್ಷಸ ವೀರರನ್ನು ರಾಮನು ಸಂಹರಿಸಿದನು. ಅವನ ಬಾಣಗಳ ಹೊಡೆತವನ್ನು ತಾಳಲಾರದೆ ರಾಕ್ಷಸರು ಓಡಿ ಹೋದರು. ಬಿಟ್ಟ ಬಾಣಗಳು ಮತ್ತೆ ಬಂದು ಅವನ ಬತ್ತಳಿಕೆಯನ್ನು ಸೇರುತ್ತಿದ್ದವು. ರಾಮನು ರಾಕ್ಷಸರ ಅಂತ್ಯ ಮಾಡುವನೆಂದು ತಿಳಿದು ಕುಂಭಕರ್ಣನು ಕೋಪೋದ್ದೀಪಿತನಾಗಿ ಸಿಂಹನಾದ ಮಾಡುತ್ತಾ ತಿರುಗಿ ಯುದ್ಧಕ್ಕೆ ಬಂದನು. ಅವನು ಬರುವುದನ್ನು ಕಂಡ ವಾನರರು ಓಡಲಾರಂಭಿಸಿದರು. ಇದನ್ನು ನೋಡಿ ರಾಮನು ವಿಧಿಯಿಲ್ಲದೆ ಅವನ ಮೇಲೆ ಬಾಣಗಳ ಪ್ರಯೋಗ ಮಾಡಿದನು. ಅವು ಹೋಗಿ ಕುಂಭಕರ್ಣನ ಭುಜಗಳನ್ನು ಕತ್ತರಿಸಿದುವು.

ರೆಕ್ಕೆಯಿಲ್ಲದ ಮಂದರ ಪರ್ವತದಂತೆ ಭುಜಗಳಿಲ್ಲದ ಕುಂಭಕರ್ಣನು ಪ್ರಕಾಶಿಸಿದನು. ಸಿಂಹನಾದ ಮಾಡುತ್ತಾ ರಾಮನತ್ತ ಧಾವಿಸಿದನು. ರಾಮನು ಆಕರ್ಣಾಂತವಾಗಿ ಧನುಸ್ಸನ್ನೆಳೆದು ಮುಖ ಮುಚ್ಚಿ ಹೋಗುವಂತೆ ಬಾಣಗಳ ಪ್ರಯೋಗ

ಮಾಡಿದನು. ಆದರೂ ಕುಂಭಕರ್ಣನು ನೆಲಕ್ಕುರುಳದೆ ನಿಂತಿರುವುದನ್ನು ನೋಡಿ ಮತ್ತೊಂದು ಬಾಣವನ್ನು ಹೊಡೆದನು. ಆ ಬಾಣದಿಂದ ಕುಂಭಕರ್ಣನ ತಲೆ ಕಳಚಿ ಕೆಳಗೆ ಬಿದ್ದಿತು. ಭೂಮಿ ಕಂಪಿಸಿತು. ತಲೆಯಿಲ್ಲದ ಕುಂಭಕರ್ಣನ ಶರೀರ ಕೆಳಗುರುಳುತ್ತಿದ್ದುದನ್ನು ನೋಡಿ, ರಾಮನು ಮತ್ತೊಂದು ಬಾಣ ಹೊಡೆದು ಅದನ್ನು ಎರಡು ಭಾಗವಾಗಿ ತುಂಡರಿಸಿದನು. ಆಗ, ಅವನ ಶರೀರದಿಂದ ಹೊರಟ ಕಾಂತಿಯು ಬಂದು ರಾಮನನ್ನು ಸೇರಿತು. ಆಪತಪಗಳಿಲ್ಲದೆಯೇ ಆ ರಾಕ್ಷಸನನು ಮುಕ್ತಿ ಹೊಂದಿದನು. ಹೀಗೆ ಆ ಜಗದೇಕ ವೀರನಾದ ರಾಮನು ರಣ ರಂಗದಲ್ಲಿ ಪ್ರಕಾಶಿಸಿದನು. ರಾಮನ ಮುಖಾರವಿಂದದ ಮೇಲೆ ಬೆವರು ಹನಿಗಳು ಶೋಭಿಸಿದುವು. ಕುಂಭಕರ್ಣನ ರಕ್ತ ಬಿಂದುಗಳು ರಾಮನ ಶರೀರದ ಮೇಲೆ ಬಿದ್ದು, ಕಮಲದ ಮೇಲೆ ನೀರಿನ ಹನಿಗಳು ನಿಂತಂತೆ ಕಾಂತಿಯಿಂದ ಪ್ರಕಾಶಿಸುತ್ತಿತು.

ಅಷ್ಟರಲ್ಲಿ ಸಂಜೆಯಾಯಿತು. ಉಭಯ ಪಕ್ಷದವರೂ ವಿರಮಿಸದೆ ಖಾಡಾ ಖಾಡಿ ಹೋರಾಡಿದರು. ರಾಮಾನುಗ್ರಹದಿಂದ ವಾನರರ ಬಲ ಅಧಿಕವಾಯಿತು. ಹುಲ್ಲಿನಿಂದ ಅಗ್ನಿ ಪ್ರಜ್ವಲಿಸುವಂತೆ ವಾನರರು ವಿಜೃಂಭಿಸಿದರು. ಅಹೋರಾತ್ರಿ ರಾಕ್ಷಸರು ನಶಿಸಿದರು, ರಾವಣನಿಗೆ ಕುಂಭಕರ್ಣನ ಮರಣ ವಾರ್ತೆ ತಿಳಿದೊಡನೆ ಮಣಿಯನ್ನು ಕಳೆದುಕೊಂಡ ಸರ್ಪದಂತೆ ಬಹಳ ದುಃಖಿಸಿದನು. ಮಾತು ಮಾತಿಗೂ ತಮ್ಮನ ಮೃತ ಶರೀರವನ್ನು ತಬ್ಬಿಕೊಂಡು ಗೋಳಾಡಿದನು. ಮೇಘನಾದ ಬಂದು ತಂದೆಯನ್ನು ಸಮಾಧಾನಪಡಿಸಿದನು. "ನಾಳೆ ನನ್ನ ಪ್ರತಾಪವನ್ನು ತೋರಿಸುತ್ತೇನೆ, ಒಂದೇ ಕ್ಷಣದಲ್ಲಿ ವಾನರ ಸೈನ್ಯವನ್ನು ಸವರಿ ಹಾಕುತ್ತೇನೆ, ಇವೊತ್ತಿನ ದುಃಖಕ್ಕೆ ಮಿಗಿಲಾದ ಸಂತೋಷವನ್ನು ನಾಳೆ ಕೊಡುತ್ತೇನೆ," ಎಂದು ಏನೇನೋ ವ್ಯರ್ಥವಾದ ಮಾತುಗಳನ್ನಾಡಿ ರಾವಣನನ್ನು ಸಮಾಧಾನಪಡಿಸಲು ಯತ್ನಿಸಿದನು.

**ಮೇಘನಾದ**: ಬೆಳಗಾಯಿತು. ವಾನರ ಭಲ್ಲೂಕಗಳು ನಗರವನ್ನು ಮುತ್ತಿವೆಯೆಂದು ಚಾರರ ಮೂಲಕ ತಿಳಿದ ರಾಕ್ಷಸ ವೀರರು ಶೂರರು ಯುದ್ಧಕ್ಕೆ ಸಿದ್ಧರಾಗಿ ಬಂದರು. ಆ ದಿನದ ಎರಡು ಪಕ್ಷದವರ ಯುದ್ಧವೂ ವರ್ಣನಾತೀತ, ಮೇಘನಾದನು ಮಾಯಾರಥವನ್ನೇರಿ ಅಂತರಿಕ್ಷಕ್ಕೆ ಹಾರಿದನು. ಅಂತರಿಕ್ಷದಿಂದ ಪ್ರಳಯಕಾಲದ ಮೇಘದಂತೆ ಗರ್ಜಿಸಿದನು. ಅವನ ಗರ್ಜನೆಯನ್ನು ಕೇಳಿದ ವಾನರರು ಭಯದಿಂದ ತತ್ತರಿಸಿದರು. ಭೂಮಿ ಅದುರಿತು. ಮೇಘನಾದನು ಕ್ಷಣದಲ್ಲಿ ಮಾಯಾ ಸೀತೆಯನ್ನು ಸೃಷ್ಟಿಸಿ, ಅದನ್ನು ರಥದಲ್ಲಿರಿಸಿಕೊಂಡು ಯುದ್ಧ ರಂಗಕ್ಕಿಳಿದನು. ಅದನ್ನು ಮೊದಲು ವಾಯುಪುತ್ರನು ನೋಡಿದನು. ಆಗ ಮೇಘನಾದನು, "ಎಲವೋ ಹನುಮಾ! ಯಾರ ನಿಮಿತ್ತವಾಗಿ ನೀವು ಯುದ್ಧ ಮಾಡುತ್ತಿರುವಿರೋ ಆ ಸೀತೆಯನ್ನು ಇಗೋ ಕೊಲ್ಲುತ್ತಿದ್ದೇನೆ. ಇದರಿಂದ ಯುದ್ಧ ಸಮಾಪ್ತಿ

ಯಾಗುವುದು," ಎಂದು ಕತ್ತಿಯನ್ನು ಹಿರಿದು ಆ ಮಾಯಾ ಸೀತೆಯನ್ನು ಎರಡು ತುಂಡು ಮಾಡಿ ಕೆಳಕ್ಕೆಸೆದನು.

ಹನುಮಂತನು ಕೋಪದಿಂದ ಕುದಿದನು. ವಾನರ ಸೈನ್ಯವನ್ನು ಕರೆದು ನಿಮ್ಮ ಪ್ರಾಣಗಳ ಮೇಲೆ ಆಸೆ ಬಿಟ್ಟು ಹೋರಾಡಿ ರಾಕ್ಷಸರನ್ನು ಹತ ಮಾಡಬೇಕು ಎಂದು ಎಚ್ಚರಿಸಿದನು. ವಾನರರು ಘೋರವಾಗಿ ಯುದ್ಧ ಮಾಡಿದರು. ವಾನರರ ಹೊಡೆತಕ್ಕೆ ನಿಲ್ಲಲಾರದೆ ರಾಕ್ಷಸರು ಲಂಕೆಗೆ ಹಿಂತಿರುಗಿದರು. ಇತ್ತ, ಹನುಮಂತನು ಆ ಕ್ಷಣವೇ ರಾಮನ ಬಳಿಗೆ ಬಂದು ಮೇಘನಾದನು ಮಾಡಿದ ದುರ್ವ್ಯಾಪಾರವನ್ನು ತಿಳಿಸಿದನು. ರಾಮನು ಅದನ್ನು ಕೇಳಿದಾಕ್ಷಣ ದುಃಖಿತನಾದವನಂತೆ ನಟಿಸಿದನು. ಅದು ಮಾಯಾ ಸೀತೆಯೆಂದು ರಾಮನಿಗೆ ತಿಳಿಯದಿರಲಿಲ್ಲ. ಆದರೆ, ಸಾಮಾನ್ಯ ಮಾನವನಂತೆ ಲೀಲಾನಾಟಕವಾಡಿದನು. ಲಕ್ಷ್ಮಣನು, "ಸೀತೆಯೇ ಇಲ್ಲದ ಮೇಲೆ ನಮಗೇಕೆ ಯುದ್ಧ? ಲೋಕಮಾತೆಯಿಲ್ಲದ ಈ ಲೋಕ ನನಗೇಕೆ?" ಎಂದು ದುಃಖಿಸಿದನು.

ಈ ವಾರ್ತೆಯನ್ನು ಕೇಳಿ ವಿಭೀಷಣನು ಬಂದು ರಾಮನಿಗೆ ನಮಸ್ಕರಿಸಿ. "ಓ ನಾಥಾ! ನಿನಗೆ ತಿಳಿಯದುದ್ದೇನಲ್ಲ, ಇದೆಲ್ಲಾ ಸುಳ್ಳು. ಅತಿ ಜಾಗರೂಕತೆಯಿಂದ ಜಾನಕಿ ಕಾಪಾಡಲ್ಪಡುತ್ತಿದ್ದಾಳೆ. ರಾವಣನಲ್ಲದೆ ಬೇರೊಬ್ಬರು ಅತ್ತ ಸುಳಿಯ ಲಾರರು. ನಿಮ್ಮನ್ನು ಮೋಹಗೊಳಿಸಲೆಂದೇ ಮೇಘನಾದನು ಮಾಯಾಸೀತೆ ಯನ್ನು ಸೃಷ್ಟಿಸಿ ಅದನ್ನು ಕೊಂದಿದ್ದಾನೆ. ನಮ್ಮ ರಾಕ್ಷಸರಲ್ಲಿ ಇಂಥದು ಸರ್ವ ಸಾಮಾನ್ಯ. ಇದು ನನಗೆ ಚೆನ್ನಾಗಿ ಗೊತ್ತು," ಎಂದನು. ರಾಕ್ಷಸರ ಮರ್ಮಗಳನ್ನು ಗುಟ್ಟಾಗಿಟ್ಟುಕೊಳ್ಳದೆ ತಮಗೆ ತಿಳಿಸಿದ ವಿಭೀಷಣನನ್ನು ರಾಮಲಕ್ಷ್ಮಣರು ಬಹಳ ಮೆಚ್ಚಿಕೊಂಡರು. ಇದನ್ನು ಕೇಳಿದ ಹನುಮಂತನು ಸೂಕ್ಷ್ಮರೂಪ ಧರಿಸಿ ಲಂಕೆ ಯನ್ನು ಪ್ರವೇಶಿಸಿ ಜಾನಕಿಯನ್ನು ನೋಡಿ ಬಂದನು. ಜಾನಕಿಯ ಕ್ಷೇಮ ಸಮಾಚಾ ರವನ್ನು ಹನುಮಂತನು ವಾನರರಿಗೆಲ್ಲಾ ತಿಳಿಸಿದನು.

ವಾನರರು ಸಂತೋಷಿಸಿ ಮತ್ತೆ ಯುದ್ಧಕ್ಕೆ ಹೊರಟರು. ಮೇಘನಾದನು ಮತ್ತೆ ಬಂದು ಯುದ್ಧ ಮಾಡಲಾರಂಭಿಸಿದನು. ಈ ಬಾರಿ ಅವನು ಬಾಣಗಳು, ಪರಿಘ ಗಳು, ಕೃಪಾಣಗಳು, ಪರಶುಗಳು, ಪ್ರಚಂಡ ಪಾಶಾಣಗಳು ಮೊದಲಾದುವುಗಳ ಮಳೆಗರೆದನು. ಹಿಡಿ, ಹೊಡೆ ಎನ್ನುವ ಭಯಂಕರ ಶಬ್ದಗಳೇ ವಾನರರ ಕಿವಿಗಳ ಮೇಲೆ ಬೀಳುತ್ತಿತ್ತು. ಆದರೆ, ಯಾರು ತಮ್ಮನ್ನು ಹೊಡೆಯುತ್ತಿದ್ದಾರೆನ್ನುವುದೇ ತಿಳಿಯದೆ ಹೋಯಿತು. ವಾನರರು ದಿಗ್ಭ್ರಾಂತರಾದರು. ಎತ್ತಕಡೆ ಹೋಗಲೂ ತೋಚದಾಯಿತು. ಮಹಾ ಬಲವಂತರಾದ ನಲ, ನೀಲ, ಅಂಗದ, ಹನುಮಂತರು

ಸಹಿತ ದಿಗಿಲುಗೊಂಡರು. ಮೇಘನಾದನು ಲಕ್ಷ್ಮಣ, ಸುಗ್ರೀವ, ವಿಭೀಷಣರ ಮೇಲೆ ಬಾಣಗಳನ್ನು ಪ್ರಯೋಗಿಸಿದನು. ಅವರ ಶರೀರಗಳು ಘಾಸಿಗೊಂಡವು. ಆದರೂ ಅವರು ಲೇಶವೂ ಭಯಗೊಳ್ಳದೆ ಎದುರು ಬಿದ್ದು ತಿರುಗಿ ಯುದ್ಧ ಮಾಡಿದರು. ನಂತರ, ಮೇಘನಾದನು ರಾಮನೊಂದಿಗೆ ಯುದ್ಧ ಮಾಡಲಾರಂಭಿಸಿದನು. ಸರ್ಪಗಳಂಥ ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದನು. ಲೀಲಾಮಾನುಷ ಸೂತ್ರಧಾರಿ, ಖರದೂಷಣಾಂತಕ ರಾಮನು ಆ ಸರ್ಪಾಸ್ತ್ರಕ್ಕೆ ಕಟ್ಟು ಬಿದ್ದನು. ಯುದ್ಧಕ್ಕೆ ಗೌರವ ತರಲೋಸುಗ ರಾಮನು ನಾಗಾಸ್ತ್ರದಿಂದ ಬಂಧಿತನಾದನು. ಇದು ರಾಮನ ಸುಗುಣ ಚರಿತ್ರೆ. ಮನೋವಾಕ್ಕಾಯಗಳಿಂದ ಅವನ ಚರಿತ್ರೆಯನ್ನು ತರ್ಕಿಸಲು ಸಾಧ್ಯವಿಲ್ಲ. ರಾಮನು ಬಂಧಿತನಾದ್ದರಿಂದ ವಾನರರು ಕಂಗಾಲಾದರು. ಮೇಘನಾದನು ಇದನ್ನು ನೋಡಿ ದುರ್ವಚನಗಳನ್ನಾಡುತ್ತಾ ಅಲ್ಲಿಗೆ ಬಂದನು. ಜಾಂಬವಂತನು ಅವನನ್ನು ನೋಡಿ, "ಎಲವೋ ದುಷ್ಟಾ! ನಿಲ್ಲು," ಎಂದು ಗರ್ಜಿಸಿದನು. ಅವನ ಮಾತು ಕೇಳಿ ಮೇಘನಾದನು, "ಎಲವೋ ನೀಚಾ! ನೀನು ವೃದ್ಧನಾದರಿಂದ ನಿನ್ನನ್ನು ಬಿಟ್ಟೆ. ಛೀ! ನಿನ್ನ ಮಾತೇನು ಲಕ್ಷ್ಯ ನನಗೆ," ಎಂದು ಜಾಂಬವಂತನನ್ನು ಹಳಿದು, ಅವನ ಮೇಲೆ ಒಂದು ತ್ರಿಶೂಲವನ್ನು ಪ್ರಯೋಗಿಸಿದನು. ಜಾಂಬವಂತನು ಆ ತ್ರಿಶೂಲವನ್ನು ಹಾರಿ ಹಿಡಿದು, ಅದನ್ನು ತಿರುಗಿ ಮೇಘನಾದನ ಮೇಲೆ ಬಲವಾಗಿ ಎಸೆದನು. ಅದು ನೇರವಾಗಿ ಹೋಗಿ ಮೇಘನಾದನ ಹೃದಯಕ್ಕೆ ನಾಟಿತು. ಮೇಘನಾದನು ಗಿರಗಿರನೆ ತಿರುಗಿ, ನೆಲಕ್ಕೆ ಬಿದ್ದನು. ಜಾಂಬವಂತನು ಅವನ ಕಾಲುಗಳನ್ನು ಹಿಡಿದು ಗಿರಗಿರನೆ ತಿರುಗಿಸಿ, "ಎಲವೋ! ನಾನು ವೃದ್ಧನೇ? ಈಗ ನನ್ನ ಬಲ ನಿನಗೆ ತಿಳಿಯುತ್ತದೆ," ಎಂದು ಅವನನ್ನು ನೆಲಕ್ಕೆ ಅಪ್ಪಳಿಸಿದನು.

ಆದರೂ, ಮೇಘನಾದನು ಸಾಯಲಿಲ್ಲ. ಅದನ್ನು ನೋಡಿ ಜಾಂಬವಂತನು ಅವನನ್ನು ಜೋರಾಗಿ ತಿರುಗಿಸಿ ಲಂಕೆಗೆ ಎಸೆದನು. ಕೆಳಗೆ ಬಿದ್ದ ಮೇಘನಾದನು ಪ್ರಜ್ಞೆ ತಂದುಕೊಂಡು, ತನ್ನ ಪ್ರತಿಜ್ಞೆ ಪೂರ್ತಿ ಮಾಡಲಿಲ್ಲವಲ್ಲಾ ಎಂದು ತಂದೆಗೆ ಮುಖ ತೋರಿಸಲು ನಾಚಿ, ರಾಕ್ಷಸರು ಅನೇಕ ತಪಸ್ಸುಗಳನ್ನು ಮಾಡಿ ವರಗಳನ್ನು ಪಡೆದ ನಿಕುಂಭಿಲಾ ಎನ್ನುವ ಉದ್ಯಾನವನಕ್ಕೆ ಹೊರಟನು. ಗುಪ್ತ ವೇಷದಿಂದ ತಿರುಗುತ್ತಿದ್ದ ವಿಭೀಷಣನ ನಾಲ್ವರು ಮಂತ್ರಿಗಳು ಬಂದು ಈ ಸಮಾಚಾರವನ್ನು ವಿಭೀಷಣನಿಗೆ ತಿಳಿಸಿದರು. ವಿಭೀಷಣನು ರಾಮನ ಬಳಿಗೆ ಬಂದು, "ನಾಥಾ! ಈಗೊಂದು ಸಮಾಚಾರ ಕೇಳಿದೆ. ಮೇಘನಾದನು ದುರ್ಮಾರ್ಗಿ, ಮಾಯಾವಿ, ದೇವಕಂಟಕ, ಅವನು ಈಗೊಂದು ಪಾಪ ಯಜ್ಞ ಮಾಡುತ್ತಿದ್ದಾನೆ. ಅವನ ಯಜ್ಞ ಪೂರ್ತಿಯಾಯಿತೆಂದರೆ ಅವನನ್ನು ಜಯಿಸುವುದು ಕಷ್ಟವಾಗುವುದು,"

ಎಂದನು. ಶ್ರೀರಾಮನು ವಿಭೀಷಣನ ಮಾತನ್ನು ಕೇಳಿ ಸಂತೋಷಿಸಿ ಅಂಗದ, ಹನುಮಂತರನ್ನು ಕರೆದು, "ತಮ್ಮಂದಿರೇ! ನೀವೆಲ್ಲರೂ ಲಕ್ಷ್ಮಣನನ್ನು ಕೂಡಿ ಕೊಂಡು ಹೋಗಿ ಅವನ ಯಜ್ಞವನ್ನು ಭಂಗಮಾಡಿ. ಲಕ್ಷ್ಮಣಾ! ನೀನು ಅವನೊಂದಿಗೆ ಯುದ್ಧ ಮಾಡಿ ಅವನನ್ನು ಜಯಿಸಬೇಕು. ದೇವತೆಗಳೆಲ್ಲರೂ ದುಃಖಿಸುತ್ತಿದ್ದಾರೆ," ಎಂದು ಆಜ್ಞಾಪಿಸುತ್ತಿದ್ದಂತೆಯೇ ವಿಭೀಷಣ, ಸುಗ್ರೀವ, ಜಾಂಬವಂತ ಮೂವರೂ ಅನೇಕ ಮಂದಿ ಸೈನಿಕರನ್ನು ಒಟ್ಟುಗೂಡಿಸಿಕೊಂಡು ಲಕ್ಷ್ಮಣನಿಗೆ ಸಹಾಯಕರಾಗಿ ಹೊರಟರು. ಲಕ್ಷ್ಮಣನು ಧನುರ್ಬಾಣಗಳನ್ನು ಧರಿಸಿ ಅಕ್ಷಯ ಬತ್ತಳಿಕೆಯನ್ನು ಕಟ್ಟಿಕೊಂಡು ರಾಮನಿಗೆ ನಮಸ್ಕರಿಸಿ ರಾಮನನ್ನು ಸ್ಮರಿಸುತ್ತಾ ತೆರಳಿದನು.

**ಮೇಘನಾದನ ಮರಣ**: ಅಂಗದ, ನಲ, ನೀಲ, ಮೈಂದ ಮೊದಲಾದ ಯೋಧರೂ ಹನುಮಂತನೊಂದಿಗೆ ಹೊರಟರು. ನಿಕುಂಭಿಲಾ ಯಜ್ಞ ಸ್ಥಳಕ್ಕೆ ಅವರು ಹೋಗುವ ಹೊತ್ತಿಗೆ ಮೇಘನಾದನು ಕೋಣದ ಮಾಂಸ ರಕ್ತಗಳನ್ನು ಹೋಮ ಮಾಡುತ್ತಿದ್ದನು. ಅವರು ಯಜ್ಞವನ್ನು ಧ್ವಂಸ ಮಾಡಲಾರಂಭಿಸಿದರು. ಆದರೂ ಅವನು ದೀಕ್ಷೆಯನ್ನು ಬಿಡಲಿಲ್ಲ. ಆಗ ಅವರು ವ್ಯಾಜಸ್ತುತಿ ಮಾಡಲಾರಂಭಿಸಿದರು. ಆಗಲೂ ಅವನು ಯಜ್ಞವನ್ನು ಬಿಟ್ಟೇಳಲಿಲ್ಲ. ಇದೇ ಸಮಯವೆಂದು ಅವರು ಮೇಘನಾದನ ಜುಟ್ಟನ್ನು ಹಿಡಿದು ಒದ್ದರು. ಆಗ ಅವನು ಸಟ್ಟನೆದ್ದು ತ್ರಿಶೂಲವನ್ನು ಹಿಡಿದು ಅವರ ಮೇಲೆ ಬಿದ್ದನು. ಅಂಗದನೂ ಹನುಮಂತನೂ ಅವನನ್ನೆದುರಿಸಿದರು. ಅವನು ತ್ರಿಶೂಲದಿಂದ ಅವರನ್ನು ಹೊಡೆದನು. ಆ ಹೊಡೆತಕ್ಕೆ ಅವರು ನೆಲಕ್ಕೆ ಬಿದ್ದರು. ಲಕ್ಷ್ಮಣನು ಆ ತ್ರಿಶೂಲವನ್ನು ಹಿಡಿದು ಎರಡು ತುಂಡು ಮಾಡಿದನು. ಅಷ್ಟರಲ್ಲಿ, ಅಂಗದನೂ ಹನುಮಂತನೂ ಎಚ್ಚರ ತಂದು ಕೊಂಡು ಅವನನ್ನು ಬಡಿದರು. ಅದರೆ, ಅವರ ಹೊಡೆತಕ್ಕೆ ಅವನೇನೂ ಜಗ್ಗಲಿಲ್ಲ, ಅದನ್ನು ಗಮನಿಸಲೂ ಇಲ್ಲ. ಲಕ್ಷ್ಮಣನು ಮೃತ್ಯು ಸಮಾನವಾದ ಬಾಣವೊಂದನ್ನು ಅವನ ಮೇಲೆ ಪ್ರಯೋಗಿಸಿದನು. ಪಿಡುಗಿನಂತಹ ಆ ಬಾಣವನ್ನು ನೋಡಿ ಮೇಘನಾದನು ಅಂತರ್ಧಾನನಾದನು. ಅನೇಕ ಮಾಯಾವೇಷಗಳನ್ನು ಧರಿಸಿ ಮೋಸದ ಯುದ್ಧ ಮಾಡಿದನು. ಅದನ್ನು ಲಕ್ಷ್ಮಣನು ಸಹಿಸದೆ ಅಮೋಘವಾದ ಬಾಣವೊಂದನ್ನು ಅನುಸಂಧಾನ ಮಾಡಿ, ರಾಮನ ಪ್ರತಾಪವನ್ನು ಸ್ಮರಿಸಿ ಪ್ರಯೋಗಿಸಿದನು. ಆ ಬಾಣ ಮೇಘನಾದನ ಹೃದಯವನ್ನು ಭೇದಿಸಿ, ಅವನ ಪ್ರಾಣವನ್ನು ತೆಗೆಯಿತು. "ರಾಮಾ! ಲಕ್ಷ್ಮಣಾ!" ಎನ್ನುತ್ತಾ ಅವನು ಪ್ರಾಣ ಬಿಟ್ಟನು. ಅಂತ್ಯ ಸಮಯದಲ್ಲಿ ಅವನು ರಾಮಾ ಲಕ್ಷ್ಮಣಾ ಎಂದು ಸ್ಮರಿಸಿದ್ದರಿಂದ ಅಂಗದ, ಹನುಮಂತ, ವಿಭೀಷಣರು ಮೇಘನಾದನನ್ನು ಕೊಂಡಾಡಿದರು.

# ೨೭ ಪಾತಾಳ ಲೋಕ

ಮಹಾವೀರನು ಅವನ ಕಳೇಬರವನ್ನು ನಿರಾಯಾಸವಾಗಿ ಹೊತ್ತುತಂದು ಲಂಕಾ ದ್ವಾರದ ಬಳಿ ಇಟ್ಟು ಬಂದನು. ಲಕ್ಷ್ಮಣನು ರಾಮನ ಬಳಿಗೆ ಬಂದು ನಮಿಸಿದನು. ರಾಮನು ಪ್ರಸನ್ನವದನನಾಗಿ ಲಕ್ಷ್ಮಣನನ್ನು ನೋಡಿ, ಮೇಘನಾದನ ಮರಣ ವಾರ್ತೆಯನ್ನು ಕೇಳಿ ತಮ್ಮನನ್ನು ಮುದ್ದಾಡಿದನು. ವಿಭೀಷಣ, ಹನುಮಂತ, ನಲ, ನೀಲ ಎಲ್ಲರನ್ನೂ ಹತ್ತಿರ ಕರೆದು ಆಲಂಗಿಸಿಕೊಂಡು ಅವರ ದೇಹಗಳನ್ನು ಸ್ಪರ್ಶಿಸಿದನು. ಅದರಿಂದ ಅವರ ಬಾಧೆಗಳೆಲ್ಲವೂ ನಿವಾರಣೆಯಾಯಿತು. ಅವರ ಮೈಗಾಯಗಳೆಲ್ಲಾ ಒಣಗಿ ಹೋದುವು. ರಾಮನ ಪ್ರಸನ್ನತೆಯನ್ನು ನೋಡಿ ವಾನರರು ಸಂತೋಷಿಸಿದರು. ರಾಮನ ಕಟಾಕ್ಷದೃಷ್ಟಿ ವಾನರರ ಮೇಲೆ ಬಿದ್ದಿತು. ಅವರ ಶ್ರಮವೆಲ್ಲವೂ ಕ್ಷಣದಲ್ಲಿ ನಿವಾರಣೆಯಾಯಿತು.

**ಸುಲೋಚನೆ**: ಇಷ್ಟರಲ್ಲಿ, ಮೇಘನಾದನ ಮರಣ ವಾರ್ತೆ ಅವನ ಹೆಂಡತಿ ಸುಲೋಚನೆಗೆ ಅವಳ ದಾಸಿಯರ ಮೂಲಕ ತಿಳಿಯಿತು. ರಾವಣನು ದುಃಖದಲ್ಲಿ ಮುಳುಗಿ ಕ್ರೋಧದಿಂದ ಹಲ್ಲು ಕಡಿದನು. "ಇಷ್ಟು ಕಾಲವೂ ಈ ಸಣ್ಣ ಕೆಲಸವನ್ನು ಮೇಘನಾದನೂ ಕುಂಭಕರ್ಣನೂ ಸಾಧಿಸಬಲ್ಲರು ಎಂದುಕೊಂಡಿದ್ದೆ. ಅವರ ಪೌರುಷವನ್ನು ನಾನು ಕಣ್ಣಾರೆ ನೋಡಿದ್ದೆ. ವಾನರರಿಂದ ಮೇಘನಾದನು ಸಂಹರಿಸ ಲ್ಪಟ್ಟನೆನ್ನುವುದು ನನಗೆ ನಾಚಿಕೆಗೇಡಾಗಿದೆ. ವಾನರರಿಂದ ಕೊಲ್ಲಲ್ಪಟ್ಟ ಅವರು ಎಂತಹ ವೀರರು! ಎಲೌ ಕುಲವಧೂ! ಶೋಕವನ್ನು ಬಿಡು. ನಾನೂ ಅವರಂತಹ ಒಬ್ಬ ವೀರನೆಂದು ತಿಳಿಯಬೇಡ. ಇನ್ನು ನಾಲ್ಕಾರು ಗಂಟೆಗಳಲ್ಲಿ ನೀನು ಶಾಂತಿ ಹೊಂದುವೆ. ನನ್ನ ಬಲ ಪರಾಕ್ರಮಗಳನ್ನು ಘೋರ ಸಂಗ್ರಾಮದಲ್ಲಿ ನೋಡುವೆ. ನಿನ್ನ ಗಂಡನನ್ನು ಕೊಂದ ಶತ್ರುಗಳ ಶಿರಸ್ಸನ್ನು ತುಂಡರಿಸಿ ತರುತ್ತೇನೆ. ಇದಕ್ಕೆ ಸಂದೇಹ ಬೇಡ," ಎಂದು ಸುಲೋಚನಳ ಬಳಿಗೆ ಹೋಗಿ ಅನುಕಂಪದಿಂದ ಮಾತ ನಾಡಿದನು. ಕೋಪದಿಂದ ಉರಿದನು. ಸೌಶೀಲ್ಯವತಿಯಾದ ಸುಲೋಚನೆಯು, "ಹೇ ದಶಾನನಾ! ಇನ್ನೂ ಶತ್ರುಗಳನ್ನು ಗೆಲ್ಲುವೆ ಎನ್ನುವ ಆಶೆಯುಂಟೆ? ನೀವು ಮಹಾ ಮೋಹಾಂಧಕಾರದಲ್ಲಿ ಬಿದ್ದಿದ್ದೀರಿ. ಮಾವನವರೊಂದಿಗೆ ಎದುರಾಡು ವುದು ಪಾಪವೆಂದು, ನಿರರ್ಥಕವೆಂದು ತಿಳಿದು ನನ್ನೊಳಗೆ ನಾನು ಎಲ್ಲವನ್ನೂ ನುಂಗಿಕೊಂಡಿದ್ದೆ. ನಿಮ್ಮ ರೋಷ ಈ ಲೋಕದಲ್ಲಿ ರಾಕ್ಷಸ ನಾಶಕ್ಕೆ ಮೂಲ ಕಾರಣ.

ನೀವು ರಾಮನನ್ನು ಜಯಿಸಲಾರಿರಿ. ಇದು ಸತ್ಯ, ಸತ್ಯ," ಎಂದು ತಟಕ್ಕನೆ ಎದ್ದು ಮಂಡೋದರಿಯ ಬಳಿಗೆ ಹೋದಳು.

ಅತ್ತೆಯ ಚರಣಗಳನ್ನು ಹಿಡಿದು, "ನನ್ನ ಈ ದುರ್ಗತಿಗೆ ನಿಮ್ಮ ಪತಿಯೇ ಕಾರಣ. ನಿಮಗೂ ಇಂಥ ದುರ್ಗತಿ ಇಂದೋ ನಾಳೆಯೋ ಬರದೆ ಇರುವುದಿಲ್ಲ," ಎಂದು ಕಠಿಣವಾಗಿ ಮಾತನಾಡತೊಡಗಿದಳು. ಮಂಡೋದರಿಯೂ ರಾವಣನ ದುರ್ಬುದ್ಧಿಗೆ ಚಿಂತೆಗೊಂಡು, ಸುಲೋಚನೆ ಆಡಿದ ಮಾತುಗಳು ಪರಮ ಸತ್ಯ ವೆಂದು ಗೋಳಾಡಿದಳು. ಮಂಡೋದರಿ ಸುಲೋಚನೆಯರು ರಾಮನ ಗುಣ ಗಳನ್ನು ವರ್ಣಿಸಿ, ಸೀತೆಯ ಸೌಶೀಲ್ಯವನ್ನು ಕೊಂಡಾಡಿ, ಕಡೆಗೆ ರಾಮನ ದರ್ಶನವಾದರೂ ತಮಗೆ ಸಿಕ್ಕರೆ ಜನ್ಮ ಸಾರ್ಥಕವಾಗುವುದು ಎಂದುಕೊಂಡರು.

ರಾವಣನು ಸೊಸೆ ಸುಲೋಚನೆಯ ದುಃಖವನ್ನು ನೋಡಲಾರದೆ ಹೋದನು. ಅವಳ ಮಾತುಗಳು ಶೂಲಗಳಂತೆ ಹೃದಯವನ್ನು ನಾಟಿದುವು. ವಿಪರೀತವಾಗಿ ದುಃಖಿಸುತ್ತಾ ಅಂಥ ಮಗನನ್ನು ಕಳೆದುಕೊಂಡೆನಲ್ಲಾ ಎಂದು ನೆಲಕ್ಕುರುಳಿ ತಲೆ ಯನ್ನು ಕುಟ್ಟಿಕೊಳ್ಳುತ್ತಾ ರೋದಿಸಿದನು. ದುಃಖ ತಾಳಲಾರದೆ ಶಿವಾಲಯಕ್ಕೆ ಹೋಗಿ ಪ್ರಾರ್ಥಿಸಿದನು. ಆ ವೇಳೆಗೆ ಮಂತ್ರಿಗಳು ಬಂದು, "ರಾಜಾ! ಏಕಿಷ್ಟು ವ್ಯರ್ಥವಾಗಿ ದುಃಖಿಸುವಿರಿ. ಆಕಾಶದ ಮೋಡಗಳಂತೆ ಧನ, ಪುತ್ರರು, ಪತಿಗಳು, ಸತಿಯರು ಮೊದಲಾದುವೆಲ್ಲ ಅಶಾಶ್ವತ. ಮಿಂಚಿನಂತೆ ಜೀವನ ಕ್ಷಣಿಕ. ಇದನ್ನು ತಿಳಿದು ನೀವು ಇಷ್ಟು ಮೋಹದಲ್ಲಿ ಮುಳುಗುವುದು ಒಳ್ಳೆಯದಲ್ಲ. ಮುಂದೆ ಮಾಡಬೇಕಾದ್ದನ್ನು ಆಲೋಚಿಸಿ, ಶತ್ರುಗಳನ್ನು ನಾಶಮಾಡಲು ಉಪಾಯವನ್ನು ಹುಡುಕಿ," ಎಂದು ಹಲವು ವಿಧವಾಗಿ ಸಮಾಧಾನ ಹೇಳಿದರು.

**ಶಿವದೇವಾಲಯ**: ಅಷ್ಟು ಹೊತ್ತಿಗೆ ನಾಲ್ಕು ಗಂಟೆ ರಾತ್ರಿ ಕಳೆಯಿತು. ರಾವಣನು ಇಪ್ಪತ್ತು ಕೈಗಳನ್ನೂ ಜೋಡಿಸಿ, ಶಿವನಿಗೆ ನಮಸ್ಕರಿಸಿದನು. ಆಗ, ಪಾತಾಳದಲ್ಲಿದ್ದ ಅಹಿರಾವಣನ ಮನಸ್ಸು ಭ್ರಮಿಸಿತು. ಏತಕ್ಕಾಗಿ ರಾವಣನ ಮನಸ್ಸು ವ್ಯಾಕುಲ ಗೊಂಡಿದೆ? ಎಂದು ಅವನು ಚಿಂತಿಸಿದನು. ತನ್ನ ಮನಸ್ಸನ್ನು ನಂಬದೆ ಹೋದನು. ಲೋಕವೆಲ್ಲಾ ಅವನಿಗೆ ವಶವಾಗಿದೆ ಅವನನ್ನು ಜಯಿಸುವ ವೀರರೇ ಇಲ್ಲ ಎಂದುಕೊಂಡು ರಾವಣನಿಗೆ ಕೇಡು ಬಂದಿರಲಾರದೆಂದು ಭಾವಿಸಿದನು. ಅಹಿ ರಾವಣನು ಕಾಮದಾದೇವಿಯನ್ನಲ್ಲದೆ ಬೇರೆ ದೇವರನ್ನು ಉಪಾಸಿಸುವವನಲ್ಲ. ಆದ್ದರಿಂದ, ಅವಳನ್ನೇ ಧ್ಯಾನಿಸಿದನು. ಧ್ಯಾನದಲ್ಲಿ ರಾವಣನಿರುವ ಸ್ಥಳವನ್ನು ಕಂಡು, ಅವನಿದ್ದ ಶಿವಾಲಯಕ್ಕೆ ಬಂದನು.

ಅಹಿರಾವಣನು ತನ್ನ ಹೆಸರನ್ನು ಹೇಳಿಕೊಂಡು ರಾವಣನಿಗೆ ನಮಸ್ಕರಿಸಿದನು. ತಂದೆಯನ್ನು ನೋಡಿ ಚಿಂತೆಗೆ ಕಾರಣವೇನೆಂದು ಕೇಳಿದನು. ಶೂರ್ಪಣಖಿಯ ಕಿವಿ ಮೂಗುಗಳನ್ನು ಕೊಯ್ದ ಸಂಗತಿಯಿಂದ ಹಿಡಿದು ಅಂದಿನವರೆಗೆ ನಡೆದ ವಿಷಯಗಳನ್ನೆಲ್ಲಾ ರಾವಣನು ಅವನಿಗೆ ಹೇಳಿದನು. ಅದನ್ನು ಕೇಳಿ ಅಹಿರಾವಣನು ಚಿಂತಾಕ್ರಾಂತನಾಗಿ, "ರಾವಣಾ! ಲೋಕದಲ್ಲಿ ನೀತಿಮಾರ್ಗ ಸರ್ವ ಜನಾದರಣೀಯವಾದುದು. ಆ ಮಾರ್ಗವನ್ನು ಬಿಟ್ಟು ಅಧರ್ಮ ಮಾರ್ಗವನ್ನವಲಂಬಿಸುವುದರಿಂದ ಭಯ ಉಂಟಾಗುವುದು. ಪೂರ್ವೋತ್ತರಗಳನ್ನು ವಿಚಾರಿಸದೆ, ವೈರ ಕಟ್ಟಿಕೊಂಡು ನೀನು ಯುದ್ಧಕ್ಕಿಳಿದೆ. ಅದರಿಂದ ನಿನ್ನ ವಂಶ ನಾಶಮಾಡಿಕೊಂಡೆ. ಮನುಷ್ಯನ ಪ್ರತಾಪ ಪ್ರಭಾವಗಳು ನಿನಗೆ ತಿಳಿಯದು. ಎಲ್ಲರಿಗಿಂತಲೂ ದೊಡ್ಡವನಾದವನನ್ನು ನೀನು ಎಲ್ಲರಿಗಿಂತ ಕಡೆಯಾದವನೆಂದು ಭಾವಿಸಿದೆ. ನಾನು ಈ ಮಾತನ್ನು ಹೇಳಬಾರದು. ನಾನು ರಾಮಲಕ್ಷ್ಮಣರನ್ನು ಅಪಹರಿಸಿ ಪಾತಾಳಕ್ಕೊಯ್ಯುತ್ತೇನೆ. ಅಲ್ಲಿ ನನ್ನ ಕಾಮದಾದೇವಿಗೆ ಬಲಿ ಕೊಡುತ್ತೇನೆ. ರಾಕ್ಷಸ ವಂಶಕ್ಕೆ ಯಶಸ್ಸು ತರುತ್ತೇನೆ," ಎಂದು ಹೇಳಿ ರಾವಣನಿಗೆ ನಮಸ್ಕರಿಸಿ, ದೇವಿಯನ್ನು ಸ್ಮರಿಸಿ, ರಾಮನ ಪಾಳಯಕ್ಕೆ ನಡೆದನು. ಅಹಿರಾವಣನು ಸ್ವಮಾಯಾ ಬಲದಿಂದ ವಾನರ ಸೈನ್ಯವನ್ನು ಗಾಢಾಂಧಕಾರದಲ್ಲಿ ಮುಳುಗಿಸಿದನು. ಅವರ ಕೈ ಅವರಿಗೇ ಕಾಣದಷ್ಟು ದಟ್ಟವಾಗಿ ಕತ್ತಲೆ ವ್ಯಾಪಿಸಿತು. ವಾನರ ಯೋಧರು ಜಾಗರೂಕರಾಗಿದ್ದರು. ಅವರ ಪಾಳಯವನ್ನು ಪ್ರವೇಶಿಸಲು ಕಾಲನಿಗೂ ಆಗುತ್ತಿರಲಿಲ್ಲ. ಆಗ, ಮಹಾವೀರನು ಒಂದು ಉಪಾಯವನ್ನು ಆಲೋಚಿಸಿ, ಬಾಲವನ್ನು ಬೆಳೆಸಿ ಅದರಿಂದ ಗುಂಡಗೆ ಮಹೋನ್ನತವಾದ ಒಂದು ಕೋಟೆಯನ್ನು ಕಟ್ಟಿದನು. ಸುರುಳಿ ಸುತ್ತಿಕೊಂಡು ಸರ್ಪರಾಜನಂತೆ, ಪರ್ವತದಂತೆ ಅದನ್ನು ಮಹೋನ್ನತವಾಗಿ ಕಟ್ಟಿದನು. ಅದರ ಸಿಂಹದ್ವಾರದ ಬಳಿ ತಾನೆ ಕುಳಿತನು. ಅಹಿರಾವಣನು ಆ ದೃಶ್ಯವನ್ನು ನೋಡಿ ಬೆಚ್ಚಿದನು. ಏನೊಂದು ಉಪಾಯವೂ ಅವನಿಗೆ ತೊಚಲಿಲ್ಲ.

ಅವನು ಕಪಟ ವೇಷ ಧರಿಸಲು ಆಲೋಚಿಸಿ, ವಿಭೀಷಣನ ವೇಷ ಧರಿಸಿ ನಿಧಾನವಾಗಿ ಮಹಾವೀರನ ಬಳಿಗೆ ಬಂದನು. ಮಹಾವೀರನು ಸ್ವಭಾವ ಶುದ್ಧವಾಗಿ ಮಹಾ ಪ್ರತಾಪಶಾಲಿ. ಕಪಟವೇಷ ಧರಿಸಿದ ಅಹಿರಾವಣನು, "ಓ ಸಖಾ! ನಾನು ರಾಮನ ಬಳಿಗೆ ಹೋಗಬೇಕು. ನಾನು ರಾಮನ ಅಪ್ಪಣೆ ಪಡೆದು ಸಂಧ್ಯಾವಂದನೆಗೆ ಹೋಗಿದ್ದೆ. ಸಂಧ್ಯಾವಂದನೆಯಾಯಿತು. ಈಗ ರಾಮನ ದರ್ಶನ ನಿಮಿತ್ತವಾಗಿ ಹೋಗಬೇಕಾಗಿದೆ. ಕೂಡಲೇ ಹೋಗದಿದ್ದರೆ ಸ್ವಾಮಿ ಆಜ್ಞೆಯನ್ನು ಮೀರಿದವನಾಗುತ್ತೇನೆ. ಆದ್ದರಿಂದ ನನ್ನನ್ನು ಬೇಗ ಒಳಗೆ ಬಿಡು," ಎಂದು ಕಪಟದ ಮಾತುಗಳನ್ನಾಡಿದನು. ಅವನ ಮಾತು ಸತ್ಯವೆಂದು ತಿಳಿದ ಮಹಾವೀರನು

ಅವನು ನಿಜವಾಗಿಯೂ ವಿಭೀಷಣನೇ ಎಂದು ನಂಬಿ ಒಳಗೆ ಬಿಟ್ಟನು. ಆ ಸಮಯದಲ್ಲಿ ನಲ, ನೀಲ ಸುಗ್ರೀವಾದಿಗಳೂ ಯೋಧರುಗಳೂ ಆಯಾಸದಿಂದ ಮಲಗಿ ನಿದ್ರಿಸುತ್ತಿದ್ದರು. ಶ್ರೀರಾಮನೂ ನಿದ್ರಿಸುತ್ತಿದ್ದನು.

ಶ್ರೀರಾಮನು ಲಕ್ಷ್ಮಣನ ಮೈಮೇಲೆ ಕೈಯಿಟ್ಟುಕೊಂಡು ಮಲಗಿದ್ದನು. ಕಪಟ ವಿಭೀಷಣ ವೇಷಧಾರಿಯಾದ ಅಹಿರಾವಣನು ರಾಮನ ದೃಷ್ಟಿಗೆ ಬೀಳದೆ ಇರಲಿಲ್ಲ. ಆದರೆ, ಲೀಲಾ ಮಾನುಷ ವಿಗ್ರಹನು ರಾಕ್ಷಸರ ಸಂಹಾರಕ್ಕಾಗಿ ಅವತರಿಸಿದ್ದನಾದ್ದರಿಂದ, ರಾವಣನ ಸಂತತಿಯನ್ನೆಲ್ಲಾ ಕೊಲ್ಲಬೇಕಾಗಿತ್ತು. ಆದ್ದರಿಂದ, ಏನೂ ತಿಳಿಯದವನಂತೆ, ಸಾಮಾನ್ಯ ಮಾನವರ ರೀತಿಯಲ್ಲಿ ಈ ನಾಟಕವಾಡತೊಡಗಿದ್ದನು. ಯಾವ ಯಾವ ಕಾಲದಲ್ಲಿ, ಯಾವ ಯಾವ ಪ್ರದೇಶದಲ್ಲಿ ಯಾರು ಯಾರನ್ನು ಕೊಲ್ಲಬೇಕೋ ಯಾರನ್ನು ಯಾರಿಂದ ಕೊಲ್ಲಿಸಬೇಕೋ ಅದು ಅವನಿಗೇ ಗೊತ್ತು. ಇತರರಿಂದ ಅದು ಸಾಧ್ಯವಿಲ್ಲ. ತನ್ನ ನಾಟಕದಿಂದಲೇ ತನ್ನ ಆಲೊಚನೆಯಿಂದಲೇ ಅವುಗಳನ್ನು ನಡೆಸಬೇಕಾಗಿತ್ತು. ಪಾಳಯವನ್ನು ಪ್ರವೇಶಿಸಿದ ಅಹಿರಾವಣನು ಮೋಹದ ಮಂತ್ರವನ್ನು ಜಪಿಸಿ, ವಾನರ ಯೋಧರನ್ನು ನಿದ್ರೆಯಲ್ಲಿ ಮುಳುಗಿಸಿ, ರಾಮಲಕ್ಷ್ಮಣರನ್ನು ಬಂಧಿಸಿ ಪಾತಾಳಲೋಕಕ್ಕೆ ಕೊಂಡೊಯ್ದನು. ಸ್ವಲ್ಪ ಹೊತ್ತಿನಲ್ಲೇ ವಾನರ ಯೋಧರು ಎಚ್ಚರಗೊಂಡು ನೋಡಿದಾಗ ರಾಮಲಕ್ಷ್ಮಣರು ಇರಲಿಲ್ಲ. ಅವರು ಮಲಗಿದ್ದ ಸ್ಥಳ ಆಳವಾಗಿ ಕುಸಿದಿತ್ತು. ಇದನ್ನು ನೋಡಿ ವಾನರ ಸೈನಿಕರಲ್ಲಿ ಹಾಹಾಕಾರ ಹುಟ್ಟಿತು. ಅವರು ಚಂದ್ರನಿಲ್ಲದ ರಾತ್ರಿಯಂತೆ, ನೀರಿಲ್ಲದ ಕಮಲಗಳಂತೆ ಕಳಾಹೀನರಾದರು.

**ವಿಭೀಷಣನ ಬುದ್ಧಿವಂತಿಕೆ**: ಅವರ ಮುಖ ಬಿಳಿಚಿಕೊಂಡಿತು. ಒಬ್ಬೊಬ್ಬರು ಒಂದೊಂದು ಕಡೆ ಹುಡುಕಲು ಹೊರಟರು. ಎಲ್ಲೂ ರಾಮಲಕ್ಷ್ಮಣರ ಸುಳಿವೇ ಸಿಕ್ಕಲಿಲ್ಲ. ಧೈರ್ಯಹೀನರಾಗಿ ಶೋಕಸಂತಪ್ತರಾಗಿ, "ರಾಕ್ಷಸರೆಲ್ಲರೂ ನಾಶವಾದರು. ರಾವಣನೊಬ್ಬ ಮಾತ್ರ ಉಳಿದಿದ್ದನು. ಆ ದುರಭಿಮಾನಿಯೊಬ್ಬನೇ ಹತಶೇಷನು. ಇಂಥ ಸಮಯದಲ್ಲಿ. ಅಯ್ಯೋ! ಈ ದೌರ್ಭಾಗ್ಯಕ್ಕೆ ಗುರಿಯಾದೆವಲ್ಲಾ," ಎಂದು ವಾನರ ನಾಯಕರು, ಯೋಧರು ಹಲುಬಿದರು. ಸುಗ್ರೀವನು ಮೂರ್ಛೆ ಹೋದನು. ಇದು ಯಾವುದೂ ವಿಭೀಷಣನಿಗೆ ತಿಳಿದಿರಲಿಲ್ಲ. ವಿಭೀಷಣನೆಲ್ಲಿ ಎಂದು ಹುಡುಕಿದರು. ಅವನು ಸಂಧ್ಯಾವಂದನೆಯನ್ನು ಮುಗಿಸಿಕೊಂಡು, ಒದ್ದೆ ಬಟ್ಟೆಯನ್ನುಟ್ಟು ಸಮುದ್ರತೀರದಿಂದ ಬರುತ್ತಿದ್ದನು. ಅವನನ್ನು ನೋಡಿ ವಾನರರು, ರಾಮಲಕ್ಷ್ಮಣರು ಕಾಣಿಸುತ್ತಿಲ್ಲ ಎಂದು ಅವನಿಗೆ ತಿಳಿಸಿ ಗೋಳಿಟ್ಟರು.

ವಿಭೀಷಣನು ಕೂಡ ಕ್ಷಣ ಕಾಲ ಚಿಂತೆಗೊಳಗಾದನು. ರಾಕ್ಷಸಮಾಯೆ ತನಗೆ ಚೆನ್ನಾಗಿ ತಿಳಿದಿದೆಯೆಂದು ಹೇಳಿ ವಾನರರಿಗೆ, "ಚಿಂತಿಸಬೇಡಿ, ಬನ್ನಿ ಪಾಳಯಕ್ಕೆ ಹೋಗೋಣ," ಎಂದು ಸಮಾಧಾನ ಹೇಳಿ ಪಾಳಯಕ್ಕೆ ಕರೆತಂದನು. ಪಾಳಯದ ದ್ವಾರದಲ್ಲಿ ಮಹಾವೀರನನ್ನು ವಿಚಾರಿಸಿದಾಗ, ಅವನು, "ನೀವೇ ಈ ಮೊದಲು ಬಂದು, ನನ್ನ ಆಜ್ಞೆ ಪಡೆದು ಪಾಳಯದೊಳಕ್ಕೆ ಬರಲಿಲ್ಲವೆ?" ಎಂದು ವಿಭೀಷಣ ನನ್ನು ಮುಗ್ಧನಾಗಿ ಕೇಳಿದನು. ಅದನ್ನು ಗ್ರಹಿಸಿ, ವಿಭೀಷಣನು, "ವಾನರರೇ ಚಿಂತಿಸಬೇಡಿ. ಈ ಮಾಯೆ ರಾವಣನ ಮಗನಾದ ಅಹಿರಾವಣನಿಗೆ ಚೆನ್ನಾಗಿ ತಿಳಿದಿದೆ. ಅವನು ಪಾತಾಳದಲ್ಲಿ ವಾಸಿಸುತ್ತಿದ್ದಾನೆ. ಈ ಸ್ಥಳ ಕುಸಿದಿರುವುದನ್ನು ನೋಡಿದರೆ ಖಂಡಿತವಾಗಿ ಅವನೇ ರಾಮಲಕ್ಷ್ಮಣರನ್ನು ಪಾತಾಳಕ್ಕೆ ಹೊತ್ತು ಕೊಂಡು ಹೋಗಿದ್ದಾನೆ. ಇದರಲ್ಲಿ ಅನುಮಾನವಿಲ್ಲ. ನನ್ನ ವೇಷ ಧರಿಸಬೇಕಾದರೆ ಅವನಲ್ಲದೆ ಬೇರೆಯವರಿಗೆ ಸಾಧ್ಯವಿಲ್ಲ. ಅವನು ಮಹಾ ಮಾಯಾವಿ. ಇನ್ನು ತಡಮಾಡದೆ ನಮ್ಮಲ್ಲಿ ಯಾರಾದರೂ ಬಲವಂತರಾದವರು ಅಲ್ಲಿಗೆ ಹೋಗುವು ದೊಳ್ಳೆಯದು," ಎಂದನು. ವಿಭೀಷಣನು ಅತ್ತಿತ್ತ ನೋಡಿ, "ಓ ಹನುಮಂತಾ! ನಿನ್ನ ಬಲ ಪರಾಕ್ರಮಗಳು ಲೋಕ ವಿದಿತ. ನೀನು ಶೀಘ್ರವಾಗಿ ಹೋಗಿ ಆ ಕೃಪಾಸಾಗರರಿಬ್ಬರನ್ನೂ ಕರೆದುಕೊಂಡು ಬಾ," ಎಂದು ಹೇಳಿ ಪಾತಾಳಲೋಕಕ್ಕೆ ಹೋಗುವ ಮಾರ್ಗವನ್ನು ಅವನಿಗೆ ವಿವರಿಸಿದನು. ಸುಗ್ರೀವ, ಅಂಗದ, ಜಾಂಬ ವಂತರೂ ಹನುಮಂತನನ್ನು ಅನೇಕ ವಿಧವಾಗಿ ಕೇಳಿಕೊಂಡರು. ಹನುಮಂತನು ಮಹಾರಾಜ ಸುಗ್ರೀವನ ಅಪ್ಪಣೆ ಪಡೆದು, ವಾನರ ಯೋಧರಿಗೂ ವಾನರ ನಾಯಕರಿಗೂ ಭಯಪಡದಿರುವಂತೆ ಹೇಳಿದನು. ಯಾರೇ ಆಗಲಿ, ಪ್ರಾಣ ಹೋದರೂ ಸರಿಯೇ ರಾಕ್ಷಸರೊಂದಿಗೆ ಹೋರಾಡಬೇಕೆಂದೂ ರಾಮಾನುಗ್ರಹ ವಿದ್ದರೆ ಕ್ಷಣಕಾಲದಲ್ಲೇ ರಾಮಲಕ್ಷ್ಮಣರೊಂದಿಗೆ ನಿಮ್ಮ ಮುಂದೆ ಬಂದು ನಿಲ್ಲುವೆ ನೆಂದೂ ಭರವಸೆಯಿತ್ತನು. "ಜೈರಾಮ, ಜೈರಾಮ," ಎಂದು ಗರ್ಜಿಸಿ ಹೊರಟನು.

ಅವನು ಹೋಗಿ ಹೋಗಿ, ಆಯಾಸಗೊಂಡು ಒಂದು ಮರದ ಕೆಳಗೆ ಕುಳಿತು ಕೊಂಡನು. ಆ ಮರದಲ್ಲಿ ವಾಸಿಸುತ್ತಿದ್ದ ಎರಡು ಪಕ್ಷಿಗಳು ತಮ್ಮತಮ್ಮಲ್ಲೇ ಮಾತನಾ ಡಿಕೊಳ್ಳುತ್ತಿದ್ದುವು. ಪಕ್ಷಿ ಭಾಷೆ ತಿಳಿದ ಹನುಮಂತನು ಅವುಗಳ ಸಂಭಾಷಣೆಯನ್ನು ಆಲೈಸಿದನು. ಗಂಡು ಪಕ್ಷಿ ಹೆಣ್ಣು ಪಕ್ಷಿಗೆ, "ಪ್ರಿಯೆ, ಅಹಿರಾವಣನು ರಾಮಲಕ್ಷ್ಮಣ ರನ್ನು ನಿನ್ನೆ ತಂದಿದ್ದಾನೆ. ಅವನು ಇಂದೇ ಅವರನ್ನು ಕಾಮದಾದೇವಿಗೆ ಬಲಿಕೊಡು ತ್ತಾನೆ. ಬಲಿಕೊಟ್ಟ ಮೇಲೆ ಅವರ ಕಳೇಬರವನ್ನು ಬಿಸಾಡುವನು. ಪವಿತ್ರವಾದ ಆ ದೇಹಗಳನ್ನು ನಾವು ತಿನ್ನಬಹುದು. ಈ ದಿನ ನಮಗೆ ಹಬ್ಬ," ಎಂದು ಹೇಳಿತು. ಇದನ್ನು ಕೇಳಿ ಮಹಾವೀರನು ತಟ್ಟನೆದ್ದು, ರಾಮನನ್ನು ಸ್ಮರಿಸುತ್ತಾ, ಬಾಲ

ತುಳಿದ ಹಾವಿನಂತೆ ರೌದ್ರನಾಗಿ, ನನ್ನ ರಾಮಪ್ರಭು ಈ ವೇಳೆಗೆ ಏನಾಗಿದ್ದಾನೊ, ತಡಮಾಡಬಾರದೆಂದುಕೊಂಡು ಸೊಯ್ಯನೆ ಜಿಗಿದು ಪಾತಾಳದಲ್ಲಿಳಿದು, ಅಹಿ ರಾವಣನ ನಗರವನ್ನು ಪ್ರವೇಶಿಸಿದನು. ಹೆಬ್ಬಾಗಿಲಿನಲ್ಲಿ ಮಕರಧ್ವಜನೆನ್ನುವ ವಾನ ರನು ನಿಂತಿದ್ದನು. ಅವನು ಇವನನ್ನು ಎದುರಿಸಿದನು. ಹನುಮಂತನು ಅವನ ಹುಟ್ಟು ಪೂರ್ವೋತ್ತರಗಳನ್ನು ವಿಚಾರಿಸಿ, ಒಳ್ಳೆಯ ಮಾತಿನಿಂದಲೇ ರಾಮಲಕ್ಷ್ಮ ಣರ ವಿಷಯವನ್ನು ಅವನಿಂದ ತಿಳಿದುಕೊಂಡನು. "ಈ ದಿನ ಹೊತ್ತು ಮುಳುಗುವು ದರೊಳಗೆ ರಾಮಲಕ್ಷ್ಮಣರನ್ನು ದೇವಿಗೆ ಬಲಿ ಕೊಡಲು ಎಲ್ಲ ಸಿದ್ಧತೆಯೂ ನಡೆದಿದೆ," ಎಂದು ಅವನು ತಿಳಿಸಿದನು.

**ಹೂಮಾಲೆಯಲ್ಲಿ ಹನುಮಂತನು**: ಹನುಮಂತನು, ಅವರು ಇರುವ ಸ್ಥಳ ಯಾವುದೆಂದು ಕೇಳಲು, ಮಕರಧ್ವಜನು ಅವನಿಗೆ ಎಲ್ಲ ವಿವರಗಳನ್ನೂ ತಿಳಿಸಿದನು. "ಆದರೆ, ನಾನು ಪ್ರಭು ಕಾರ್ಯಕ್ಕಾಗಿ ಇಲ್ಲಿ ನೇಮಿಸಲ್ಪಟ್ಟಿರುವೆನಾದ್ದರಿಂದ, ಏನಾ ದರೂ ಸರಿಯೇ ನಿನ್ನನ್ನು ಮಾತ್ರ ಒಳಗೆ ಬಿಡುವುದಿಲ್ಲ. ನನ್ನ ಜಾತಿ ಅಭಿಮಾನದಿಂದ ನಿನ್ನನ್ನೇನಾದರೂ ಒಳಗೆ ಬಿಟ್ಟರೆ, ನನ್ನ ಜಾತಿಗೇ ಅಪಕೀರ್ತಿ ತಂದವನಾಗುವೆ. ನಿನಗೆ ನಿನ್ನ ರಾಮಪ್ರಭು ಎಷ್ಟು ಮುಖ್ಯವೋ ನನಗೆ ನನ್ನ ಪ್ರಭುವಾದ ಅಹಿರಾವಣ ಅಷ್ಟೇ ಮುಖ್ಯ. ನಮ್ಮಿಬ್ಬರಿಗೂ ಎಷ್ಟೇ ಹತ್ತಿರದ ಸಂಬಂಧವಿದ್ದರೂ ನನ್ನ ಪ್ರಭು ವಾಜ್ಞೆಯನ್ನು ನಾನು ಮೀರೆನು. ಆದ್ದರಿಂದ ನೀನು ನನ್ನನ್ನು ಜಯಿಸಿ ಒಳಗೆ ಹೋಗಬಹುದು," ಎಂದು ಮಕರಧ್ವಜನು ನೀತಿಬದ್ಧವಾದ ಮಾತುಗಳನ್ನಾಡಿ ದನು. ಆ ಮಾತಿಗೆ ಹನುಮಂತನು ಸಂತೋಷಿಸಿ, ಯುದ್ಧಕ್ಕೆ ಸಿದ್ಧನಾಗಿ ಅನೇಕ ಬಗೆಯಾಗಿ ಅವನೊಂದಿಗೆ ಹೋರಾಡಿದನು. ಕಾಲಹರಣ ಮಾಡುವುದೊಳ್ಳೆಯದ ಲ್ಲವೆಂದು ತಿಳಿದು, ಮಕರಧ್ವಜನನ್ನು ತನ್ನ ಬಾಲದಿಂದ ಸುತ್ತಿ ದೂರವಾಗಿ ಬಿಸಾಡಿ ಒಳಗೆ ಪ್ರವೇಶಿಸಿದನು. ಆ ಸಮಯದಲ್ಲಿ ಒಬ್ಬ ಮಾಲೆಕಾರನು ಪುಷ್ಪಮಾಲೆ ಯೊಂದನ್ನು ತೆಗೆದುಕೊಂಡು ಒಳಗೆ ಹೋಗುತ್ತಿದ್ದನು. ಇದು ಒಳ್ಳೆಯ ಸಮಯ ವೆಂದು ಹನುಮಂತನು ಅಣುರೂಪವನ್ನು ಧರಿಸಿ, ಆ ಮಾಲೆಯೊಳಗೆ ಸೇರಿ ಕೊಂಡನು. ಸ್ವಲ್ಪವೂ ಭಾರವಿಲ್ಲದಂತೆ, ಬಹು ಹಗುರಾಗಿ ಯಾರಿಗೂ ಕಾಣದಂತೆ, ಅನುಮಾನಕ್ಕೆ ಅವಕಾಶವಿಲ್ಲದಂತೆ ಮಾಲೆಯೊಳಗಿದ್ದನು.

ಅಹಿರಾವಣನು ದೇವಿಯನ್ನು ಪೂಜೆ ಮಾಡಿ ಆ ಮಾಲೆಯನ್ನು ದೇವಿಯ ಕೊರಳಿಗೆ ಹಾಕಿದನು. ಅನೇಕ ಬಗೆಯ ತಿಂಡಿತೀರ್ಥಗಳನ್ನು ದೇವಿಗೆ ನೈವೇದ್ಯ ಮಾಡಿದನು. ಮಾಡಿದ ನೈವೇದ್ಯವನ್ನೆಲ್ಲಾ ಮಹಾವೀರನು ಬಾಯಿ ತೆರೆದು ಭುಜಿಸಿ ದನು. ಇದನ್ನು ನೋಡಿ ಸುತ್ತಲೂ ಸೇರಿದ ರಾಕ್ಷಸರು ಈ ದಿನ ದೇವಿಯು ಮಹಾರಾಜನಿಗೆ ಪ್ರತ್ಯಕ್ಷವಾದಳೆಂದು ಸಂತೋಷಿಸಿದರು. ಮಹಾರಾಜನು ಕೂಡ

ಈದಿನ ಭಾಗ್ಯ ಕೈಗೂಡಿತೆಂದು ಆನಂದಿಸಿದನು. ಆ ವೇಳೆಗೆ, ಬಲಿಪಶುಗಳನ್ನು ಅಲಂಕರಿಸುವಂತೆ ಅಲಂಕರಿಸಿ ರಾಮಲಕ್ಷ್ಮಣರನ್ನು ಬಲಿಪೀಠಕ್ಕೆ ಕರೆದುಕೊಂಡು ಬರುತ್ತಿರುವುದನ್ನು ಮಹಾವೀರನು ನೋಡಿದನು. ರಾಮನನ್ನು ಸ್ಮರಿಸುತ್ತ, ಮನ ದಲ್ಲೇ ಅವನಿಗೆ ನಮಸ್ಕರಿಸಿದನು. ಮಹಾಬಲವಂತರಾದ ರಾಕ್ಷಸರು, ರಾಮಲಕ್ಷ್ಮಣ ರನ್ನು ದೇವಿಯ ಮುಂದೆ ನಿಲ್ಲಿಸಿ, ಅವರ ಕತ್ತುಗಳ ಮೇಲೆ ಕತ್ತಿಗಳನ್ನಿಟ್ಟು ಬಲಿಕೊಡಲು ಸಿದ್ಧರಾದರು.

"ದೇವಿಗೆ ಮಂಗಳಾರತಿಯಾದ ತಕ್ಷಣವೇ ಆಜ್ಞೆ ಮಾಡುತ್ತೇನೆ. ನೀವು ಬಲಿ ಕೊಡಲು ಸಿದ್ಧರಾಗಿರಬೇಕು," ಎಂದು ಅಹಿರಾವಣನು ಆ ರಾಕ್ಷಸರಿಗೆ ಆಜ್ಞಾಪಿಸಿ ದನು. ಲೀಲಾಮಾನುಷ ವಿಗ್ರಹರಾದ ರಾಮಲಕ್ಷ್ಮಣರು ದೇವಿಯ ಕೊರಳಿನಲ್ಲಿದ್ದು ನೈವೇದ್ಯ ಭುಜಿಸುವವನು ಹನುಮಂತನೆಂದು ತಿಳಿದು ಒಳಗೇ ಸಂತೋಷಪಡುತ್ತಿ ದ್ದರು. ಮುಗುಳ್ನಗುತ್ತಿದ್ದ ಅವರನ್ನು ನೋಡಿ ಅಹಿರಾವಣನು ರೌದ್ರನಾಗಿ, "ಕ್ಷಣ ಕಾಲವಿರುವ ಜೀವಿತಕ್ಕೆ ಇಷ್ಟು ಆನಂದಪಡುತ್ತಿರುವರೆ? ಪಡಲಿ. ಇನ್ನು ಕೆಲವೇ ನಿಮಿಷಗಳಲ್ಲಿ ಯಮರಾಜ್ಯದಲ್ಲಿ ಆನಂದಿಸುವರು," ಎಂದು ಆ ದುರ್ಮಾರ್ಗಿಯು ಅವರನ್ನು ನಿರ್ಲಕ್ಷಿಸಿ ಲಘುವಾಗಿ ಮಾತನಾಡುತ್ತಿದ್ದನು. ಅಷ್ಟರಲ್ಲಿ ರಾಕ್ಷಸ ಪುರೋಹಿ ತನು ರಾಜನೀತಿಯನ್ನನುಸರಿಸಿ ರಾಮಲಕ್ಷ್ಮಣರಿಗೆ ಅವರ ರಕ್ಷಿತರನ್ನು ನೆನೆಯಲು ಅವಕಾಶ ಕೊಡಬೇಕೆಂದು ಅಹಿರಾವಣನಿಗೆ ತಿಳಿಸಿದನು. ಆಗ ಅಹಿರಾವಣನೆದ್ದು, "ಎಲೌ! ರಾಜಕುಮಾರರೆ, ನಿಮ್ಮ ಹಿತವನ್ನು ಕೋರುವವರನ್ನು ಸ್ಮರಿಸಿರಿ, ಕಾಲ ಸಮಿಪಿಸುತ್ತಿದೆ," ಎಂದು ಗರ್ಜಿಸಿದನು. ರಾಮಲಕ್ಷ್ಮಣರು ಒಬ್ಬರ ಮುಖವನ್ನೊ ಬ್ಬರು ನೋಡಿ ಮುಗುಳ್ನಕರು. ಸರಿಯಾಗಿ ಆ ಸಮಯಕ್ಕೆ ಮಹಾವೀರನು ಗರ್ಜಿಸಿದನು.

ಆ ಗರ್ಜನೆಯನ್ನು ಕೇಳಿ ರಾಕ್ಷಸರು ದೇವಿ ಪ್ರತ್ಯಕ್ಷವಾದಳೆಂದು ಉಬ್ಬಿದರು. ಮಹಾವೀರನು ದೊಡ್ಡ ಬಾಯಿ ತೆರೆದು, "ಎಲೌ! ಅಹಿರಾವಣಾ, ನೀನು ಮಾಡುತ್ತಿ ರುವ ಕೆಲಸ ಎಷ್ಟು ಮಾತ್ರಕ್ಕೂ ಸರಿಯಾದುದಲ್ಲ. ಕಪಟ ವೇಷ ಧರಿಸಿ ಆ ದೇವನನ್ನು ಇಲ್ಲಿಗೆ ತಂದೆ. ಇಂಥ ದುರ್ಮಾರ್ಗದ ಕೆಲಸವನ್ನು ದೇವಿ ಒಪ್ಪುವಳೇ!" ಎಂದು ಗರ್ಜಿಸಿದನು. ಅದನ್ನು ಕೇಳಿ, ಬಿರುಗಾಳಿ ಬೀಸಿದಾಗ ಜಲವು ಉಲ್ಲೋಲಕಲ್ಲೋಲವಾಗುವಂತೆ ರಾಕ್ಷಸರು ಭಯದಿಂದ ನಡುಗಿದರು. ಒಂದೇ ಕ್ಷಣದಲ್ಲಿ ಭಯಂಕರ ರೂಪ ಧರಿಸಿ ಮಹಾವೀರನಾದ ಹನುಮಂತನು ಆ ದೇವಿಯ ಕೈಯಲ್ಲಿದ್ದ ಹರಿತವಾದ ಖಡ್ಗವನ್ನು ಕೈಗೆ ತೆಗೆದುಕೊಂಡು ಅಹಿರಾವಣ ನನ್ನು ತುಂಡು ಮಾಡಿದಂತೆಲ್ಲಾ ಅವನ ವಜ್ರದೇಹ ಮತ್ತೆ ಮತ್ತೆ ಕೂಡಿಕೊಳ್ಳುತ್ತಿತ್ತು. ಕೊನೆಗೆ ರಾಮನನ್ನು ಮನದಲ್ಲಿ ನೆನೆದು, "ಜೈ ರಾಮ," ಎಂದು ಶಿರಸ್ಸನ್ನು ಒಂದು

ಕೈಯಲ್ಲಿ ಹಿಡಿದು ಮತ್ತೊಂದು ಕೈಯಿಂದ ಕುತ್ತಿಗೆಯನ್ನು ಕತ್ತರಿಸಿ ಹೋಮಕುಂಡ ದಲ್ಲಿ ಹಾಕಿದನು.

ಅಷ್ಟರಲ್ಲಿ ಮಕರಧ್ವಜ ಎದುರಾದನು. ಹನುಮಂತನು ತಕ್ಷಣ ಅಹಿರಾವಣನ ತಲೆಯಲ್ಲಿದ್ದ ಕಿರೀಟವನ್ನು ಮಕರಧ್ವಜನ ತಲೆಯ ಮೇಲಿಟ್ಟು, ಅವನಿಗೆ ರಾಜ್ಯಾಭಿ ಷೇಕ ಮಾಡಿ, ನಿರಂತರವೂ ರಾಮಲಕ್ಷ್ಮಣರನ್ನು ಚಿಂತಿಸುತ್ತಿರು ಎಂದು ಉಪದೇಶಿ ಸಿದನು. ರಾಮಲಕ್ಷ್ಮಣರನ್ನು ತನ್ನ ಭುಜಗಳ ಮೇಲೆ ಕೂರಿಸಿಕೊಂಡು ಒಂದೇ ನೆಗೆತಕ್ಕೆ ಲಂಕೆಯನ್ನು ಸೇರಿದನು. ಸಾವಿರ ಕಣ್ಣುಗಳಿಂದ ಎದುರು ನೋಡುತ್ತಿದ್ದ ವಾನರ ಯೋಧರೂ ವಿಭೀಷಣಾದಿಗಳೂ ರಾಮಲಕ್ಷ್ಮಣರನ್ನು ನೋಡಿ ಹಿಡಿಸಲಾ ರದಷ್ಟು ಆನಂದ ಹೊಂದಿದರು. ಸುಗ್ರೀವನು ಬಂದು ರಾಮಲಕ್ಷ್ಮಣರಿಗೆ ನಮಸ್ಕರಿಸಿ ಹನುಮಂತನನ್ನು ಅಪ್ಪಿಕೊಂಡು, "ನಮ್ಮ ಪ್ರಾಣಗಳನ್ನು ಕಾಪಾಡಿದ ಮಹಾವೀರ ನೀನು, ನಿನ್ನ ಋಣವನ್ನು ಯಾವ ರೀತಿಯಾಗಿಯೂ ನಾವು ತೀರಿಸಲಾರೆವು," ಎಂದನು. ವಾನರರೆಲ್ಲರೂ ಹನುಮಂತನನ್ನು ಬಗೆ ಬಗೆಯಾಗಿ ಹೊಗಳಿ, ಅವ ನನ್ನು ಎತ್ತಿಕೊಂಡು ಮುದ್ದಾಡಿ, ಅಪ್ಪಿಕೊಂಡರು. ಅವರ ಆನಂದಕ್ಕೆ ಪಾರವೇ ಇಲ್ಲವಾಗಿತ್ತು. ವಿಭೀಷಣನು ಆನಂದಬಾಷ್ಪಗಳನ್ನು ಸುರಿಸುತ್ತಾ, "ರಾಮಾ ನಿನ್ನ ಲೀಲೆಗಳು ಅನಂತ. ನಿನ್ನ ಚರ್ಯೆಗಳು ನಿನಗಲ್ಲದೆ ಬೇರೆಯವರಿಗೆ ಅರ್ಥವಾಗದು. ಪಾತಾಳ ಲೋಕದ ರಾಕ್ಷಸರನ್ನು ಕೂಡ ಕೊಲ್ಲಲು ಸಂಕಲ್ಪಿಸಿ ಇಷ್ಟು ನಾಟಕವಾ ಡಿದೆ," ಎಂದು ವರ್ಣಿಸುತ್ತಾ ನಮಸ್ಕರಿಸಿದನು.

**ನರಾಂತಕ**: ರಾಮಲಕ್ಷ್ಮಣರನ್ನು ಹನುಮಂತನು ತಿರುಗಿ ಕರೆತಂದಿದ್ದಾನೆನ್ನುವ ಸುದ್ದಿ ರಾವಣನಿಗೆ ತಿಳಿಯಿತು. ತನ್ನ ಮಗ ಅಹಿರಾವಣನೂ ಸತ್ತನೆನ್ನುವ ಸುದ್ದಿ ರಾವಣನಿಗೆ ತಿಳಿಯಿತು. ತನ್ನ ಮಗ ಅಹಿರಾವಣನೂ ಸತ್ತನೆನ್ನುವುದನ್ನು ತಿಳಿದು ದುಃಖದಿಂದ ನೆಲಕ್ಕುರುಳಿದನು. ಅವನ ಕಣ್ಣುಗಳಿಂದ ನೀರು ಪ್ರವಾಹದಂತೆ ಹರಿಯಿತು. ಮಂಡೋದರಿ ಬಂದು ಬಗೆ ಬಗೆಯಾಗಿ ಅವನನ್ನು ಸಮಾಧಾನ ಪಡಿಸಿದಳು. ಆದರೆ, ಅವನು ಅವಳ ಮಾತನ್ನು ಲೆಕ್ಕಿಸದೆ, ರೌದ್ರನಾಗಿ ಧೈರ್ಯ ತಂದುಕೊಂಡು ದಿಢೀರನೆ ಎದ್ದನು. ಆ ಸಮಯಕ್ಕೆ ಸಿಂಧುರನಾದನೆನ್ನುವ ಮಂತ್ರಿ ಅವನ ಬಳಿಗೆ ಬಂದನು. ಅವನು ವಯೋವೃದ್ಧನಾದ ಮಹಾಜ್ಞಾನಿ. ಅವನು ಇದಕ್ಕೆ ಮೊದಲು ವಿಭೀಷಣನೊಂದಿಗೆ ಯಾವಾಗಲೂ ಇರುತ್ತಿದ್ದವನು. ಅವನು ರಾವಣನಿಗೆ ಅನೇಕ ಹಿತವಚನಗಳನ್ನು ಹೇಳತೊಡಗಿದನು. ಅವನ ಬುದ್ಧಿವಾದ ರಾವಣನ ಕಿವಿಗಳೊಳಗೆ ಹೋಗಲಿಲ್ಲ. ಅದು ಅವನಿಗೆ ಇಂಪಾಗಿರಲಿಲ್ಲ. ಅತಿ ಅಸಹ್ಯವಾಗಿತ್ತು.

ಅವನ ಪ್ರವೃತ್ತಿಗೆ ಮಂತ್ರಿಯು ದುಃಖಿಸಿ, ವಿನಾಶಕಾಲೇ ವಿಪರೀತ ಬುದ್ಧಿಃ, ಇವನಿಗೆ ವಿನಾಶಕಾಲ ಹತ್ತಿರವಾಗಿದೆಯಾದ್ದರಿಂದ ಬುದ್ಧಿವಾದ ಇವನಿಗೆ ಇಷ್ಟವಿಲ್ಲ ದಂತಾಗಿದೆ ಎಂದುಕೊಂಡನು. ರಾವಣನು ತನ್ನ ವಂಶವೇ ನಾಶವಾಯಿತು ಎಂದು ದುಃಖಿಸಿದನು. ಆಗ ಆ ವೃದ್ಧ ಮಂತ್ರಿ, "ಮಹಾರಾಜಾ! ಹೀಗೇಕೆ ಹೇಳುತ್ತಿದ್ದೀರಿ, ನರಾಂತಕನೆನ್ನುವ ಒಬ್ಬ ಕುಮಾರ ಇದ್ದಾನಲ್ಲಾ, ಅವನು ಎಪ್ಪತ್ತೆರಡು ಕೋಟಿ ರಾಕ್ಷಸರಿಗೆ ಪ್ರಭು. ದೂತನನ್ನು ಕಳಿಸಿ ಅವನನ್ನು ಕರೆಸಿ. ಆ ನಿಮ್ಮ ಶತ್ರುಗಳನ್ನು ನಿಶ್ಚಯವಾಗಿಯೂ ಸಂಹರಿಸುವನು," ಎಂದನು. ಅವನ ಮಾತಿಗೆ ರಾವಣನು ಸಂತೋಷಪಟ್ಟು, ಧೂಮಕೇತುವೆನ್ನುವ ದೂತನನ್ನು ಕರೆದು, "ಹೋಗಿ, ಮಹಾ ಚತುರನಾದ ನನ್ನ ಕುಮಾರನನ್ನು ಕರೆದುಕೊಂಡು ಬಾ," ಎಂದು ಆಜ್ಞಾಪಿಸಿ, ಅವನ ಹೆಸರು, ಊರು, ಇತ್ಯಾದಿ ವಿವರಗಳನ್ನೆಲ್ಲಾ ತಿಳಿಸಿ ಕಳಿಸಿದನು. ರಾವಣನ ಆಜ್ಞಾ ಪ್ರಕಾರವಾಗಿ ದೂತನು ಹೋಗಿ, ನಡೆದ ವೃತ್ತಾಂತವನ್ನೆಲ್ಲಾ ನರಾಂತಕನಿಗೆ ಹೇಳಲು, ಅವನು ಆಗಿಂದಾಗಲೇ ಹೊರಟು ಬಂದನು.

ಬಂದವನೇ ವಾನರ ಸೈನ್ಯದ ಮೇಲೆ ಬಿದ್ದನು. ಹನುಮಂತನು ನರಾಂತಕನನ್ನು ನೋಡಿದನು. ನರಾಂತಕನು, "ಎಲೌ ಧೂಮಕೇತು, ಇವನು ಯಾರು? ಇವನ ಶರೀರವು ಇಷ್ಟು ಭಯಂಕರವಾಗಿರುವುದಲ್ಲಾ, ಏನಿದು?" ಎಂದು ಕೇಳಿದ. ಧೂಮಕೇತುವು, "ಸ್ವಾಮೀ, ಇವನೇ ಹನುಮಂತ, ಮಹಾವೀರ, ಬಲವಂತ. ನಿಮ್ಮ ಸೋದರರೆಲ್ಲರನ್ನೂ ಹತಮಾಡಿದವನು, ಲಂಕೆಯನ್ನು ಭಸ್ಮ ಮಾಡಿದವನು ಇವನೇ," ಎಂದನು. ಆಗ ನರಾಂತಕನು ಮಂಡಿಯೂರಿ ಧನುಸ್ಸಿಗೆ ಬಾಣ ಹೂಡಿ ಪ್ರಯೋಗಿಸಿದನು. ಮಹಾವೀರನು ಅದನ್ನು ಹಿಡಿದು ಎರಡು ತುಂಡು ಮಾಡಿ, ಮುಷ್ಟಿಯಿಂದ ಅವನ ಎದೆಯನ್ನು ಬಲವಾಗಿ ಗುದ್ದಿದನು. ಅವನನ್ನೆತ್ತಿ ಗಿರಗಿರನೆ ತಿರುಗಿಸಿ ರಸಾತಲಕ್ಕೆಸೆದನು. ನಂತರ, ಅವನ ದೊಡ್ಡ ಸೈನ್ಯವನ್ನು ಸದೆಬಡಿದು ಸಮುದ್ರಕ್ಕೆಸೆದನು. ರಥಗಳನ್ನೂ ಸಾರಥಿಗಳನ್ನೂ ತುಂಡು ತುಂಡು ಮಾಡಿದನು. ಈ ಘೋರ ವಾರ್ತೆಯನ್ನು ಕೇಳಿ ರಾವಣನು ನಿಲ್ಲಲಾರದೆ ಕುಸಿದು ಬಿದ್ದನು. ಇಂಥ ಘೋರ ಯುದ್ಧ ನಡೆಯುವುದೆಂದು ಅವನು ಕನಸಿನಲ್ಲೂ ತಿಳಿದಿರಲಿಲ್ಲ. ನರಾಂತಕನು ನೆಲಕ್ಕುರುಳಿದನೆನ್ನುವ ಭೀಕರ ವಾರ್ತೆ ಲಂಕೆಯನ್ನೆಲ್ಲಾ ಹಬ್ಬಿತು. ಮಹಾ ಪಂಡಿತರು ಬಂದು ಹಲವು ಬಗೆಯಾಗಿ ರಾವಣನನ್ನು ಸಮಾಧಾನಪಡಿಸಿ ದರು, ಮತ್ತು ಹಿತವಚನಗಳನ್ನಾಡಿದರು. ಅವರಾಡುವ ಮಾತುಗಳು ಯಾವುವೂ ರಾವಣನ ತಲೆಗೆ ಸೇರಲಿಲ್ಲ.

# ೨೮ ರಾವಣ ವಧೆ

**ದುಶ್ಶಕುನಗಳು** : ರಾವಣನು ಮೂರ್ಛೆಯಿಂದೆದ್ದನು. ಸೊಸೆಯಾದ, ನರಾಂತಕನ ಭಾರ್ಯೆಯಾದ ಬಿಂದುಮತಿಯ ರೋದನವನ್ನು ಸಹಿಸಲಾರದೆ, ದುಃಖದಿಂದ, ಉಕ್ಕಿಬರುತ್ತಿದ್ದ ಕೋಪದಿಂದ ದೇಹವನ್ನೇ ಮರೆತನು. ಹೀಗೆ ದುಃಖಿಸುತ್ತಿರುವಾಗ ಬೆಳಗಾಯಿತು. ನಾಲ್ಕು ಸಿಂಹದ್ವಾರಗಳ ಬಳಿ ವಾನರರು ಬಂದು ಯುದ್ಧಕ್ಕೆ ಸಿದ್ಧವಾಗುತ್ತಿದ್ದಾರೆನ್ನುವ ವಾರ್ತೆ ಕೇಳಿದನು. ರಾಕ್ಷಸ ಯೋಧರನ್ನು ಕುರಿತು, "ಎಲೌ ಯೋಧರಿರಾ! ಯುದ್ಧ ಮಾಡುವುದಕ್ಕೆ ನಿಮ್ಮ ಎದೆ ಹಿಂಜರಿದರೆ, ನೀವು ಈಗಲೇ ಹಿಂದಿರುಗುವುದೊಳ್ಳೆಯದು. ಯುದ್ಧ ಮಾಡುತ್ತಾ ಮಧ್ಯದಲ್ಲಿ ನೀವು ಓಡಿಹೋದರೆ ನಾನು ಸಹಿಸುವುದಿಲ್ಲ. ಹಾಗೆ ಓಡಿ ಹೋದರೆ, ನನ್ನ ಕೈಯಿಂದಲೇ ನಿಮ್ಮ ಪ್ರಾಣ ತೆಗೆಯುವೆನು," ಎಂದನು. ವಾಯುವೇಗದಂತಹ ರಥವನ್ನು ಸಜ್ಜುಗೊಳಿಸಿಕೊಂಡು ಹೊರಟನು. ರಣಭೇರಿಗಳು ಮೊಳಗಿದುವು. ಕಪ್ಪನೆಯ ಬೆಟ್ಟಗಳೋ ಎನ್ನುವಂತೆ ಅಪರಿಮಿತ ಬಲಿಷ್ಠರಾದ ರಾಕ್ಷಸ ವೀರರು ಯುದ್ಧಕ್ಕೆ ಹೊರಟರು. ಆಗ, ದುಶ್ಶಕುನಗಳು ಕಾಣಿಸಿದುವು. ಭುಜಬಲದಿಂದ ಗರ್ವಿತನಾದ ರಾವಣನು ಅವುಗಳನ್ನು ಲೆಕ್ಕಿಸಲಿಲ್ಲ.

ಕೈಯಲ್ಲಿದ್ದ ಆಯುಧಗಳು ಜಾರಿ ಕೆಳಗೆ ಬಿದ್ದವು. ನಾಯಿ ನರಿಗಳು ಗೋಳಿಟ್ಟವು. ಲಂಕೆಯವರೆಲ್ಲಾ ರಾವಣನಿಗೆ ಮೃತ್ಯು ಸಮೀಪಿಸಿತೆಂದು ತಿಳಿದರು. ಕಾಲನ ದೂತನೆಂಬಂತೆ ಗೂಬೆ ಅರಚಿತು. ರಥ ಗಜ ತುರಗ ಪದಾತಿಗಳಿಂದ ಕೂಡಿದ ರಾಕ್ಷಸರ ಚತುರಂಗ ಬಲ ಯುದ್ಧಕ್ಕೆ ಹೊರಟಿತು. ಆ ಸೈನ್ಯ ನಡೆದು ಹೋಗುತ್ತಿರಲು ಭೂಮಿ ನಡುಗಿತು. ಆ ಸೈನ್ಯ ವರ್ಣನಾತೀತವಾಗಿತ್ತು, ನಾನಾ ವಿಧದ ಧ್ವಜ ಪತಾಕೆಗಳು ಶೋಭಿಸಿದುವು. ಮದಗಜದಂಥ ಯೋಧರು ಕೋಟಿ ಸಂಖ್ಯೆಯಲ್ಲಿ ಯುದ್ಧಕ್ಕೆ ಹೊರಟರು. ವೀರವಸಂತನು ತನ್ನ ಸೈನ್ಯವನ್ನು ವ್ಯೂಹರಚಿಸಿ ಯುದ್ಧಕ್ಕೆ ನಡೆಸಿಕೊಂಡು ಹೋಗುತ್ತಿದ್ದಾನೋ ಎನ್ನುವಂತೆ ರಾಕ್ಷಸ ಸೈನ್ಯ ಶೋಭಿಸಿತು. ಭೇರಿ, ನಗಾರಿ, ಶಹನಾಯಿ ಮೊದಲಾದ ವಾದ್ಯಗಳು ಧ್ವನಿಗೈದವು. ವೀರರು ಸಿಂಹನಾದ ಮಾಡಿದರು.

**ರಾವಣ ಸೈನ್ಯ**: ಅತ್ತ ವಾನರ ಸೈನ್ಯದಲ್ಲಿ, ಬಾಣಗಳಿಂದ ಘಾಸಿಗೊಂಡ ರೆಕ್ಕೆಯುಳ್ಳ ಪರ್ವತಗಳ ಹಾಗೆ, ಮಹಾಕ್ರೂರರಾಗಿ ವಾನರ ಭಲ್ಲೂಕಗಳು ಕಾಲನಂತೆ ಯುದ್ಧಕ್ಕೆ ಹೊರಟರು. ನಖಗಳನ್ನೂ ದಂತಗಳನ್ನೂ ಪರ್ವತಗಳನ್ನೂ ವೃಕ್ಷಗಳನ್ನೂ ವಾನರರು ಆಯುಧವಾಗಿ ಮಾಡಿಕೊಂಡರು. ಮದಗಜದಂಥ ರಾವಣನನ್ನು ಸಂಹರಿಸಲು ಹೊರಟ ವಾನರರು, "ರಾಮಚಂದ್ರ ಮಹಾರಾಜನಿಗೆ ಜಯವಾಗಲಿ," ಎಂದು ಸಿಂಹನಾದ ಮಾಡಿದರು. ರಾಕ್ಷಸರು ದ್ವಂದ್ವ ಯುದ್ಧ ಆರಂಭಿಸಿದರು. ಸರಿ ಸಮಾನರಾದ ಯೋಧರು ಎರಡು ಕಡೆಯೂ ಹೋರಾಡಿದರು. ರಾವಣನಿಗೆ ಜೈ ಎಂದು ರಾಕ್ಷಸರು, ರಾಮನಿಗೆ ಜೈ ಎಂದು ವಾನರರು ಕೂಗುತ್ತಿದ್ದರು. ಉಭಯ ಸೈನ್ಯಗಳೂ ಎದುರಾದವು. ರಾಕ್ಷಸರು ಕಾಲನಂತೆ ರೌದ್ರಾಕಾರ ತಾಳಿ ವಾನರರನ್ನು ಎದುರಿಸಿದರು. ವಾನರರ ಶರೀರದಿಂದ ರಕ್ತ ಹರಿಯಿತು. ವಾನರರು ರಾಕ್ಷಸ ಸೈನ್ಯವನ್ನು ಘಾಸಿಗೊಳಿಸಿ ಮೇಘಗಳಂತೆ ಗರ್ಜಿಸಿದರು. ರಾಕ್ಷಸರನ್ನು ಹಲ್ಲಿನಿಂದ ಕಚ್ಚಿ ಕಾಲಿನಿಂದ ಒದ್ದರು. ರಾಕ್ಷಸರನ್ನು ಗಟ್ಟಿಯಾಗಿ ಹಿಡಿದುಕೊಂಡು ದವಡೆಯನ್ನು ಸೀಳಿದರು. ರಾಕ್ಷಸರ ಕರುಳನ್ನು ಕಿತ್ತು ಮಾಲೆಯಂತೆ ಧರಿಸಿದರು. ರಾಕ್ಷಸರ ಸೈನ್ಯ ಹಿಮೆಟ್ಟುತ್ತಿದ್ದುದನ್ನು ನೋಡಿ ರಾವಣನು ಕೈಯಲ್ಲಿ ಧನುಸ್ಸನ್ನೂ ಬಾಣಗಳನ್ನೂ ಹಿಡಿದು, ಓಡಿಹೋಗುತ್ತಿದ್ದ ರಾಕ್ಷಸರ ಸೈನ್ಯವು ಯುದ್ಧಕ್ಕೆ ಮರಳುವಂತೆ ಮಾಡಿದನು. ರೌದ್ರಾಕಾರನಾಗಿ ಬರುತ್ತಿದ್ದ ರಾವಣನನ್ನು ನೋಡಿ, ವಾನರರು ಹಾಹಾಕಾರ ಮಾಡಿ ಎದುರಿಸಿದರು. ಪರ್ವತಗಳನ್ನೂ ವೃಕ್ಷಗಳನ್ನೂ ತಂದು ಅವನ ಮೇಲೆ ಪ್ರಯೋಗಿಸಿದರು. ಅವು ವಜ್ರದಂಥ ಅವನ ಶರೀರಕ್ಕೆ ತಾಕಿ ಪುಡಿಪುಡಿಯಾದುವು. ರಾವಣನು ನಾಲ್ಕು ದಿಕ್ಕಿಗೂ ಗಿರಗಿರನೆ ತಿರುಗಿ ವಾನರರನ್ನು ಮರ್ದಿಸಿದನು. ವಾನರರು ಭಯಪಟ್ಟು ನಾಲ್ಕು ದಿಕ್ಕಿಗೂ ಓಡಿದರು. "ಓ ರಾಮಾ! ಓ ಸುಗ್ರೀವಾ! ಕಾಪಾಡು ಕಾಪಾಡು," ಎಂದು ಮೊರೆಯಿಟ್ಟರು. "ಓ ರಘುವೀರಾ! ರಕ್ಷಿಸು, ರಕ್ಷಿಸು," ಎಂದು ಕೂಗಿದರು. ಭೂನಭೋಂತರಾಳಗಳು ಬಾಣಗಳಿಂದ ತುಂಬಿಹೋಯಿತು. ದಶದಿಕ್ಕುಗಳಿಗೂ ವಾನರರು ಓಡಿದರು. ಕೋಲಾಹಲ ತುಂಬಿ ಹೋಯಿತು. ಲಕ್ಷ್ಮಣನು ವಾನರ ಸೈನ್ಯದ ವ್ಯಾಕುಲತೆಯನ್ನು ನೊಡಿ ಕೋಪದಿಂದ, ನಡುಕಟ್ಟಿ, ಧನುರ್ಬಾಣಗಳನ್ನು ಧರಿಸಿ, ರಾಮನ ಚರಣಗಳಿಗೆ ನಮಸ್ಕರಿಸಿ ಯುದ್ಧಕ್ಕೆ ಹೊರಟನು.

**ಪಾತಾಳ ಲೋಕ**: ಲಕ್ಷ್ಮಣನು ರಾವಣನನ್ನು ನೋಡಿ, "ಹೇ ದುರ್ಮಾರ್ಗಿ! ವಾನರ ಭಲ್ಲೂಕಗಳನ್ನು ಕೊಂದರೆ ನಿನಗೇನು ಪ್ರಯೋಜನ? ಕಾಲನಂಥ ನನ್ನನ್ನು ಎದುರಿಸು," ಎಂದ ಗರ್ಜಿಸಿದನು. ರಾವಣನು, "ಎಲವೋ ನೀನು ನನ್ನ ಪುತ್ರ ಘಾತುಕ. ಬಹು ದಿನಗಳಿಂದ ನಿನ್ನನ್ನು ಹುಡುಕುತ್ತಿದ್ದೆ. ಇಂದು ನಿನ್ನನ್ನು ಕೊಂದರೆ

ನನ್ನ ಹೃದಯ ತಣಿಯುವುದು," ಎಂದು ಹೂಂಕರಿಸಿ, ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿದನು. ಲಕ್ಷ್ಮಣನು ಅವುಗಳನ್ನು ನೂರು ತುಂಡಾಗುವಂತೆ ಕತ್ತರಿಸಿದನು. ತೀಕ್ಷ್ಣವಾದ ಬಾಣಗಳನ್ನು ಬಿಟ್ಟು ರಾವಣನ ರಥವನ್ನು, ಸಾರಥಿಯನ್ನು ತುಂಡು ತುಂಡು ಮಾಡಿದನು. ಒಂದೇ ಸಾರಿಗೆ ನೂರು ನೂರು ಬಾಣಗಳನ್ನು ಬಿಡುತ್ತಾ ಬಂದನು. ಅವು ರಾವಣನ ಮುಖವನ್ನೂ ಎದೆಯನ್ನೂ ಘಾಸಿಗೊಳಿಸಿದುವು. ಆ ಘಾಸಿಗೆ ಅವನು ನೆಲಕ್ಕುರುಳಿದನು, ಎಚ್ಚರ ತಪ್ಪಿತು. ನಂತರ, ಎಚ್ಚರ ಬಂದು ಎದ್ದವನೇ ರೌದ್ರಾಕಾರನಾಗಿ ಬ್ರಹ್ಮದತ್ತವಾದ ಪ್ರಚಂಡ ಶಕ್ತಿಯನ್ನು ಲಕ್ಷ್ಮಣನ ಮೇಲೆ ಪ್ರಯೋಗಿಸಿದನು. ಲಕ್ಷ್ಮಣನು ನೆಲಕ್ಕುರುಳಿದನು. ಮಹಾವೀರನು ಇದನ್ನು ನೋಡಿ, ಲಕ್ಷ್ಮಣನ ರಕ್ಷಣೆಗೆ ಧಾವಿಸಿದನು. ಹನುಮಂತನನ್ನು ರಾವಣ ಬಲವಾಗಿ ಗುದ್ದಿದನು. ಮಹಾವೀರನು ತತ್ತರಿಸಿದನು. ಆದರೆ, ಕೆಳಗುರುಳಲಿಲ್ಲ. ಚೇತರಿಸಿಕೊಂಡು ರಾವಣನನ್ನು ಮುಷ್ಠಿಯಿಂದ ಹೊಡೆದನು. ಆಗ ರಾವಣನು ತನ್ನ ಬಲವನ್ನು ದೂಷಿಸುತ್ತಾ, "ಏನು? ನನ್ನ ಪೌರುಷ ಕುಗ್ಗಿತೆ? ವಾನರನ ಮುಷ್ಠಿಯ ಗುದ್ದು ಇಷ್ಟು ಬಲವಾದುದೆ?" ಎಂದು ತನ್ನೊಳಗೇ ತಾನು ಹನುಮಂತನ ಬಲವನ್ನು ವರ್ಣಿಸಿಕೊಂಡನು.

ಅಷ್ಟರಲ್ಲಿ ಲಕ್ಷ್ಮಣನು ದಿಗ್ಗನೆದ್ದು ರಾವಣನನ್ನು ಎದುರಿಸಿದನು. ಅವನ ಹೊಡೆತಕ್ಕೆ ರಾವಣನು ಸ್ಮೃತಿತಪ್ಪಿ ಬಿದ್ದನು. ಸಾರಥಿಯು ಅವನನ್ನು ಬೇರೊಂದು ರಥದಲ್ಲಿ ಹಾಕಿಕೊಂಡು ಲಂಕೆಗೆ ಕರೆದೊಯ್ದನು. ಲಂಕೆಗೆ ಹೋದ ಮೇಲೆ ರಾವಣನು ಮೂರ್ಛೆಯಿಂದೆದ್ದವನೇ ಪಾತಾಳ ಹೋಮ ಮಾಡಲು ಪ್ರಾರಂಭಿಸಿದನು. ಅವನು ಎಂಥ ಮೂರ್ಖ! ರಾಮನನ್ನು ವಿರೋಧಿಸಿ ಜಯಶಾಲಿಯಾಗುವುದುಂಟೆ? ಅವನ್ನು ಮಾಡುತ್ತಿದ್ದ ಪಾತಾಳ ಹೋಮದ ಸುದ್ದಿ ಗೂಢಚಾರರ ಮೂಲಕ ವಿಭೀಷಣನಿಗೆ ತಿಳಿಯಿತು. ತಕ್ಷಣ ವಿಭೀಷಣನು ರಾಮನ ಬಳಿ ಹೋಗಿ ಪಾದಗಳ ಮೇಲೆ ಬಿದ್ದು, "ಪ್ರಭೂ! ಕೂಡಲೇ ವಾನರರನ್ನು ಕಳಿಸಿ, ಮೇಘನಾದನು ಮಾಡುತ್ತಿದ್ದಂತಹ ಪಾತಾಳ ಹೋಮವನ್ನು ಈಗ ರಾವಣ ಮಾಡುತ್ತಿದ್ದಾನೆ. ಅದನ್ನು ವಾನರರಿಂದ ಭಂಗಗೊಳಿಸಿ. ಆ ಯಜ್ಞ ಪೂರ್ತಿಯಾದರೆ ರಾವಣನನ್ನು ಜಯಿಸುವುದು ಅಸಾಧ್ಯ," ಎಂದು ಪ್ರಾರ್ಥಿಸಿದನು.

ಅಷ್ಟರಲ್ಲಿ ಬೆಳಗಾಯಿತು. ರಾಮನ ಆಜ್ಞೆಯಂತೆ ಅಂಗದ, ಹನುಮಂತರು ಯಜ್ಞ ಮಂಟಪಕ್ಕೆ ಹೋದರು. ಕೇಕೆ ಹಾಕುತ್ತಾ ವಾನರ ಸೈನ್ಯ ಲಂಕೆಗೆ ನುಗ್ಗಿತು. ವಾನರರು ರಾವಣನ ಅರಮನೆಯನ್ನು ಪ್ರವೇಶಿಸಿದರು. ಯಜ್ಞ ದೀಕ್ಷೆಯಲ್ಲಿದ್ದ ರಾವಣನನ್ನು ನೋಡಿ, "ಎಲವೋ ಲಜ್ಜಾಹೀನ! ರಣರಂಗವನ್ನು ಬಿಟ್ಟು ಮನೆಗೆ ಓಡಿ ಬಂದು, ಧ್ಯಾನ ಮಾಡುತ್ತಾ ಕುಳಿತೆಯಾ?" ಎಂದು ಮೂದಲಿಸಿದರು.

ಅಂಗದನು ಅವನನ್ನು ಕಾಲಿನಿಂದ ನೂಕಿದನು. ರಾವಣನು ಯಜ್ಞದಲ್ಲಿ ತಲ್ಲೀನ ನಾಗಿದ್ದುದರಿಂದ ಅವರನ್ನು ಗಮನಿಸಲಿಲ್ಲ. ಅಂಗದ ಹನುಮಂತಾದಿಗಳು ಅವನನ್ನು ಹಲ್ಲಿನಿಂದ ಕಡಿದರು. ಜುಟ್ಟು ಹಿಡಿದೆಳೆದರು. ಆಗ, ರಾವಣನು ಕಾಲಾಗ್ನಿ ರುದ್ರನಾಗಿ, ದಿಗ್ಗನೆ ಮೇಲೆದ್ದು, ಅವರ ಕಾಲುಗಳನ್ನು ಹಿಡಿದನು, ಆದರೆ ಅವುಗಳನ್ನು ಕದಲಿಸಲಾರದೆ ಹೋದನು. ಅವಮಾನಗೊಂಡು, ಕ್ರೋಧದಿಂದ ವಾನರರೊಂದಿಗೆ ಹೋರಾಡಿದನು. ಅವರ ಹೋರಾಟದಲ್ಲಿ ಯಜ್ಞವು ಧ್ವಂಸವಾಗಿ, ರಾವಣನು ಚಿಂತಾಕ್ರಾಂತನಾದನು.

**ರಾಮರಾವಣ ಯುದ್ಧ**: ವಾನರರು ರಾಮನಲ್ಲಿಗೆ ಹೋಗಿ ನಡೆದ ವೃತ್ತಾಂತವನ್ನು ಬಿನ್ನವಿಸಿದರು. ವಿಭೀಷಣನು ಸಂತೋಷಿಸಿದನು. ರಾವಣನು ಯಜ್ಞವನ್ನು ಸಾಧಿಸ ಲಾರದೆ ಹೋದನಲ್ಲಾ ಎಂದು ನಿರಾಶನಾಗಿ ಮತ್ತೆ ಯುದ್ಧಕ್ಕೆ ಹೊರಟನು. ಕ್ಷಣದಲ್ಲಿ ಅನೇಕ ದುಶ್ಶಕುನಗಳು ತೋರಿದವು. ಹದ್ದುಗಳು ಅವನ ತಲೆಯ ಮೇಲೆ ಹಾರಾಡಿದವು. ಅವನ ಕಿರೀಟವನ್ನುರುಳಿಸಿದವು. ಆದರೂ ರಾವಣನು ಲಕ್ಷಿಸದೆ ರಣಭೇರಿಯನ್ನು ಮೊಳಗಿಸಲು ಆಜ್ಞಾಪಿಸಿದನು. ತಕ್ಷಣ ಲಕ್ಷೋಪಲಕ್ಷ ರಾಕ್ಷಸರು ಗುಂಪುಗೂಡಿ ಯುದ್ಧ ಮಾಡಲು ರಾವಣನೊಂದಿಗೆ ಹೊರಟರು. ರಾಮನೂ ಸಹ ನಡುವಿಗೆ ತೂಣೀರವನ್ನು ಬಿಗಿದು ಕೈಯಲ್ಲಿ ಧನುಸ್ಸನ್ನು ಹಿಡಿದು ಯುದ್ಧಕ್ಕೆ ಹೊರಟನು. ಆಜಾನುಬಾಹುವೂ, ವಿಶಾಲ ವಕ್ಷವುಳ್ಳವನೂ ಆದ ರಾಮನು ದೇದಿಪ್ಯಮಾನವಾಗಿ ರಣರಂಗವನ್ನು ಬೆಳಗುತ್ತಿದ್ದನು. ರಾಮನ ದಿವ್ಯ ಮಂಗಳ ವಿಗ್ರಹವನ್ನು ನೋಡಿ ದೇವತೆಗಳು ತಮ್ಮ ತಮ್ಮಲ್ಲೇ ಅವನನ್ನು ವರ್ಣಿಸುತ್ತಾ ನಮಸ್ಕರಿಸಿದರು. ವಾನರರು ಬಹು ಜಾಗ್ರತೆಯಿಂದ ರಾಮನನ್ನು ಅನುಸರಿಸುತ್ತಾ ಹೋದರು.

ಗುಡುಗುತ್ತಾ ಸುತ್ತುವರಿಯುವ ಪ್ರಳಯಕಾಲದ ಮೇಘಗಳಂತೆ, ರಾಕ್ಷಸರನ್ನು ನಾಶಮಾಡುವ ನಿಮಿತ್ತವಾಗಿ ವಾನರ ಸೈನ್ಯ ಅವರನ್ನು ಸುತ್ತುಗಟ್ಟಿತು. ಎರಡು ಪಕ್ಷಗಳವರೂ ಎಸೆಯುತ್ತಿದ್ದ ಪರ್ವತಗಳು ಗುಡುಗಿನಂತೆ ಧ್ವನಿ ಮಾಡುತ್ತ ಬೀಳು ತ್ತಿದ್ದುವು. ಕ್ಷಣದಲ್ಲಿ ರಾಕ್ಷಸರ ರಥ, ಗಜ, ತುರಗಗಳು ನೆಲಕ್ಕುರುಳಿದುವು. ರಕ್ತ ನದಿಯಂತೆ ಹರಿಯಿತು. ಆಗ ರಾವಣನು, "ರಾಕ್ಷಸರೆಲ್ಲರೂ ಹತರಾದರು. ನಾನು ಏಕಾಂಗಿಯಾದೆ. ವಾನರ ಭಲ್ಲೂಕಗಳೂ ಅನೇಕವಾಗಿವೆ. ಆದ್ದರಿಂದ ಈಗ ನಾನು ರಾಕ್ಷಸ ಮಾಯೆಯನ್ನು ಬಳಸಬೇಕು" ಎಂದು ತನ್ನೊಳಗೇ ವಿಚಾರಮಾಡಿ, ರಾಕ್ಷಸ ಮಾಯೆಯನ್ನು ಸೃಷ್ಟಿಸಿದನು. ಅದು ರಾಮನನ್ನು ಬಿಟ್ಟು ಬೇರೆಲ್ಲರನ್ನು ವ್ಯಾಪಿಸಿತು. ಆಗ, ರಾಮನು ಸಂಕಲ್ಪಿಸಿ, ಪ್ರತಿ ಮಾಯೆಯನ್ನು ಸೃಷ್ಟಿಸಲು, ಎಲ್ಲೆಲ್ಲಿ ನೋಡಿದರೂ ರಾಮಲಕ್ಷ್ಮಣರು, ಅನೇಕ ಕೋಟಿ ವಾನರರು ಗೋಚರಿಸಿದರು. ಇದನ್ನು ನೋಡಿ,

ರಾಮಣನು ತನ್ನ ಮಾಯಶಕ್ತಿಯಿಂದ ಏನೂ ಉಪಯೋಗವಿಲ್ಲವೆಂದು ನಿಶ್ಚಯಿಸಿದನು. ನಂತರ, ರಾಮನು ವಾನರ ವೀರರನ್ನೂ ಯೋಧರನ್ನೂ ಹತ್ತಿರ ಕರೆದು, "ಎಲೌ ಯೋಧರೇ! ವಾನರರೇ! ನೀವು ಇಷ್ಟು ಕಾಲ ಯುದ್ಧ ಮಾಡಿ ಆಲಸ್ಯಗೊಂಡಿದ್ದೀರಿ. ನೀವು ವಿಶ್ರಾಂತಿ ತೆಗೆದುಕೊಳ್ಳಿ. ಇನ್ನು ಮುಂದೆ ರಾಮ ರಾವಣರ ಯುದ್ಧವನ್ನು ನೋಡುವಿರಂತೆ," ಎಂದು ಗಂಭೀರವಾಗಿ ನುಡಿದನು. ಆ ವೇಳೆಗೆ, ರಾವಣನು ಹಠಾತ್ತಾನೆ ಬಂದು ರಾಮನನ್ನು ಎದುರಿಸಿದನು.

ಆಗ, ರಾಮನು, "ಎಲವೋ ಮೂರ್ಖಾ! ನಾನು ಹೇಳುವ ನೀತಿ ವಾಕ್ಯಗಳನ್ನು ಮೊದಲು ಕೇಳು. ಲೋಕದಲ್ಲಿ ಮೂರು ಬಗೆಯ ಜನರಿದ್ದಾರೆ. ಒಬ್ಬರು, ಪಾಟಲೀ ವೃಕ್ಷದಂಥವರು. ಅವು ಹೂವುಗಳನ್ನು ಬಿಡುವುವೇ ಹೊರತು, ಅವುಗಳಲ್ಲಿ ಹಣ್ಣುಗಳಿಲ್ಲ. ಬರೀ ಮಾತನಾಡುವವರು ಈ ವೃಕ್ಷದಂಥವರು. ಅವರಲ್ಲಿ ಮಾತೇ ಹೊರತು ಕಾರ್ಯವಿಲ್ಲ. ಇನ್ನೊಬ್ಬರು, ರಸಾಲ ವೃಕ್ಷದಂಥವರು. ಅವು ಹೂವನ್ನೂ ಬಿಡುವುವು, ಹಣ್ಣನ್ನೂ ಕೊಡುವುವು. ಹಾಗೇ ಇವರು ಮಾತನಾಡುವರು ಅಲ್ಲದೆ, ಕಾರ್ಯವನ್ನೂ ಮಾಡುವರು. ಮತ್ತೊಬ್ಬರು, ಹಲಸಿನ ವೃಕ್ಷದಂಥವರು, ಅವುಗಳಲ್ಲಿ ಹೂಗಳಿರುವುದಿಲ್ಲ, ಆದರೆ, ಹಣ್ಣುಗಳುಂಟು, ಹಾಗೇ, ಅವರು ಮಾತನಾಡುವುದಿಲ್ಲ,ಆದರೆ ಕಾರ್ಯ ಮಾಡುವರು. ನೀನು ಬರೀ ಪರಾಕ್ರಮದ ಮಾತುಗಳನ್ನಾಡುತ್ತಿದ್ದೀಯೆ ವಿನಾ ಕಾರ್ಯತಃ ಇಲ್ಲ. ನಿನ್ನ ಅನೀತಿ, ನಿನ್ನ ಜಾತಿಗೇ ಕೇಡು ತಂದಿತು," ಎಂದನು. ಅದಕ್ಕೆ ರಾವಣನು, "ಎಲವೋ! ನೀನು ನೀತಿ ಹೇಳುತ್ತೀಯೇನು!" ಎನ್ನುತ್ತಾ ಸಿಡಿಲಿನಂಥ ಬಾಣಗಳನ್ನು ರಾಮನ ಮೇಲೆ ಪ್ರಯೋಗಿಸಿದನು. ಪ್ರತಿಯಾಗಿ, ರಾಮನು ಅಗ್ನೇಯಾಸ್ತ್ರ ಪ್ರಯೋಗಿಸಿದನು. ಅದು ರಾವಣನ ಎಲ್ಲಾ ಬಾಣಗಳನ್ನು ನಾಶಮಾಡಿತು. ರಾವಣನು ಲೆಕ್ಕವಿಲ್ಲದಷ್ಟು ಚಕ್ರಗಳನ್ನೂ ತ್ರಿಶೂಲಗಳನ್ನೂ ರಾಮನ ಮೇಲೆ ಪ್ರಯೋಗಿಸಿದನು. ಆದರೆ, ಅವೆಲ್ಲಾ ವ್ಯರ್ಥವಾಯಿತು. ಅದಕ್ಕೆ ಪ್ರತಿಯಾಗಿ ರಾಮನು ಬಾಣಗಳನ್ನು ಪ್ರಯೋಗಿಸಿದನು. ರಾವಣನ ಶಿರಸ್ಸುಗಳನ್ನು ಕತ್ತರಿಸಿದಂತೆಲ್ಲಾ ಮತ್ತೆ ಶಿರಸ್ಸುಗಳು ಹುಟ್ಟುತ್ತಿದ್ದುದನ್ನು ರಾಮನು ಗಮನಿಸಿದನು.

ರಾವಣನು ತನ್ನ ಮರಣ ಸಮೀಪಿಸಿದೆಯೆನ್ನುವದನ್ನು ಮರೆತು, ಗರ್ವದಿಂದ ಗರ್ಜಿಸಿದನು. ಕೆಳಗೆ ಬಿದ್ದ ರಾವಣನ ಶಿರಸ್ಸುಗಳು, "ರಾಮನೆಲ್ಲಿ, ಲಕ್ಷ್ಮಣನೆಲ್ಲಿ, ಸುಗ್ರೀವನೆಲ್ಲಿ?" ಎಂದು ನೆಲದಲ್ಲಿ ಹುಡುಕುತ್ತಿದ್ದುವು. ಭುಜದ ಮೇಲಿದ್ದ ಶಿರಗಳು ವಿಭೀಷಣನನ್ನು ಕಂಡು, "ಎಲವೋ, ತಮ್ಮಾ! ರಾಜ್ಯದಾಸೆಯಿಂದ ರಾಮನ ಶರಣು ಹೋಗಿ ಸೋದರನ ಮರಣವಾರ್ತೆಗಾಗಿ ಕಾದಿರುವೆಯಾ? ನೀನು ವಿರಾಗಿಯೇ ವಿನಾ ವೀರನಲ್ಲ. ಛೀ! ಹೋಗು, ನಿನ್ನ ಮುಖ ನೋಡಬಾರದು," ಎಂದು

ಅರಚಿದನು. ಹಲವು ಸಾರಿ ಕೆಳಗೆ ಬಿದ್ದು, ಮೇಲೆದ್ದು, ರಾವಣನು ವೀರಾವೇಶದಿಂದ ಭಯಂಕರ ಯುದ್ಧ ಮಾಡಿದನು. ಅವನ ವೀರತ್ವವನ್ನು ಲಕ್ಷ್ಮಣ, ಸುಗ್ರೀವ, ಅಂಗದಾದಿಗಳು ಮೆಚ್ಚಿಕೊಂಡರು, ನೋಡಿ ಆಶ್ಚರ್ಯಪಟ್ಟರು.

**ರಾವಣನ ಸಂಹಾರ**: ರಾಮನು, ಇನ್ನು ಕಾಲಹರಣ ಮಾಡಿದರೆ ಪಾಪಿಷ್ಟನ ಪಾಪ ಕರ್ಮಗಳು ದಿನದಿನಕ್ಕೆ ಪ್ರವರ್ಧಮಾನವಾಗುವುವೆಂದು ಯೋಚಿಸಿದನು. ಇಷ್ಟರಲ್ಲಿ ನಲ ನೀಲಾದಿ ವಾನರ ಯೋಧರು ರಾವಣನ ಮೇಲೆ ಕಲ್ಲು ಬಂಡೆ ಗಳನ್ನು ಎಸೆಯಲಾರಂಬಿಸಿದರು. ಆ ವೇಳೆಗೆ ಕತ್ತಲೆ ವ್ಯಾಪಿಸಿತು. ಎಲ್ಲರೂ ಯುದ್ಧ ನಿಲ್ಲಿಸಿದರು. ಆ ರಾತ್ರಿ ತ್ರಿಜಟೆಯು ಜಾನಕಿಯ ಬಳಿಗೆ ಬಂದು, ರಾಮ ರಾವಣರ ಯುದ್ಧವನ್ನು ವಿವರಿಸಿದಳು. "ರಾಮನು ಎಷ್ಟು ಸಾರಿ ರಾವಣನ ಶಿರಸ್ಸು ಭುಜ ಗಳನ್ನು ಕತ್ತರಿಸಿದರೂ ಮತ್ತೆ ಆ ಎಲ್ಲಾ ಶಿರಸ್ಸುಗಳೂ ಹುಟ್ಟುತ್ತಿವೆ," ಎಂದು ಹೇಳಿದೊಡನೆ, ಸೀತೆಯ ಮುಖ ಬಿಳುಪಿಟ್ಟಿತು. ಚಿಂತೆಯಿಂದ ದುಃಖಿಸಿದಳು, ಅದನ್ನು ಕಂಡು ತ್ರಿಜಟೆಯು, "ತಾಯೀ, ಚಿಂತಿಸಬೇಡಿ. ರಾಮನು ಕತ್ತರಿಸಿದ ಹಾಗೆಲ್ಲಾ ಅವನ ಶಿರಗಳು ಹುಟ್ಟಲು ಕಾರಣ, ರಾವಣನ ಹೃದಯದಲ್ಲಿ ಜಾನಕಿಯ ರೂಪವಿದೆ," ಎಂದೊಡನೆ ಒಮ್ಮೆಲೇ ಜಾನಕಿಗೆ ಹರ್ಷ ವಿಷಾದಗಳುಂಟಾದುವು. ಆಗ ತ್ರಿಜಟೆಯು, "ಎಲೌ ರಾಜಕುಮಾರಿ! ಸಂಶಯ ಬಿಡು! ರಾವಣನಿಗೆ ಸಾವು ಬೇಗನೆ ಬರಲಿದೆ. ರಾಮನಿಗೆ ಜಯವಾಗುವುದು. ರಾಮನು ಬಾಣ ಬಿಡುವಾಗಲೆಲ್ಲಾ ರಾವಣನು ನಿಮ್ಮನ್ನು ಸ್ಮರಿಸುತ್ತಿದ್ದಾನೆ, ಎಂತಲೇ ರಾಮನ ಬಾ ಣಗಳು ಅವನನ್ನು ಏನೂ ಮಾಡುತ್ತಿಲ್ಲ. ನೀವು ಚಿಂತಿಸದಿರಿ. ನಿಮ್ಮನ್ನು ಅವನು ಮರೆಯುವ ಸಂದರ್ಭ ಬರುವುದು. ಯಾವಾಗ ರಾವಣ ನಿಮ್ಮನ್ನು ಮರೆಯುವನೋ ಆಗ ಅವನ ಸಾವು ಖಂಡಿತ. ಆ ಕಾಲ ಬೇಗನೇ ಬರಲಿದೆ," ಎಂದಳು.

ಎರಡನೆಯ ದಿನ, ರಾವಣನು ಮಾಯಾ ಪ್ರಭಾವದಿಂದ ವಿಕೃತ ರೂಪವನ್ನು ಹೊಂದಿದ್ದ ಪ್ರೇತ ಪಿಶಾಚಿ ಗಣಗಳೊಡನೆ ಧನುರ್ಬಾಣಗಳನ್ನು ಧರಿಸಿ ಪ್ರತ್ಯಕ್ಷ ವಾದನು. ಅವು ಒಂದು ಕೈಯಲ್ಲಿ ಕತ್ತಿ ಹಿಡಿದು ಇನ್ನೊಂದು ಕೈಯಲ್ಲಿ ಮನುಷ್ಯರ ತಲೆ ಬುರುಡೆ ಹಿಡಿದು ಅದರಿಂದ ರಕ್ತ ಪಾನ ಮಾಡುತ್ತಾ ನಾಟ್ಯವಾಡುತ್ತಾ ಗಾನ ಮಾಡುತ್ತಾ, "ಹೊಡಿ, ಬಡಿ, ಕೊಲ್ಲು," ಎಂದು ಕೂಗುತ್ತಿದ್ದವು. ವಾನರರು ಎತ್ತ ಓಡಿದರೂ ಉರಿಯುತ್ತಿದ್ದ ಕೊಳ್ಳಿಗಳು ಎದುರು ಬಂದು ನಿಲ್ಲುತ್ತಿದ್ದವು. ವಾನರ ಭಲ್ಲೂಕಗಳು ವ್ಯಾಕುಲಗೊಂಡವು. ರಾವಣನು ಅಷ್ಟಕ್ಕೇ ಬಿಡದೆ, ವಾನರರ ಮೇಲೆ ಮರಳಿನ ಮಳೆಗರೆದನು. ವಾನರರ ವ್ಯಾಕುಲವನ್ನು ಕಂಡು ರಾವಣನು ಸಿಂಹನಾದ ಮಾಡಿದನು. ಲಕ್ಷ್ಮಣ ಸುಗ್ರೀವಾದಿ ವಾನರ ಯೋಧರು ನಿಶ್ಚೇಷ್ಟಿತರಾದರು. "ಹಾ!

ರಾಮ, ಹಾ! ರಾಮ," ಎಂದು ಮೊರೆಯಿಟ್ಟರು. ಆ ಮಾಯಾ ಪ್ರಭಾವದಿಂದ ಅನೇಕ ಹನುಮಂತರು ಪರ್ವತಗಳನ್ನು ಕೈಯಲ್ಲಿ ಹಿಡಿದು ನಾಲ್ಕು ದಿಕ್ಕಿನಿಂದಲೂ ರಾಮನನ್ನು ಮುತ್ತಿಕೊಂಡರು. ಆ ಮಾಯಾ ಹನುಮಂತರು ಬಾಲಗಳನ್ನು ಮೇಲಕ್ಕೆತ್ತಿ ರಾಮನನ್ನು ಸೆರೆಹಿಡಿಯಲು ಪ್ರಯತ್ನಿಸಿದರು. ದಶದಿಕ್ಕುಗಳಲ್ಲೂ ಅವರ ಬಾಲವೇ ಕಾಣಿಸಿತು.

ಆದರೆ, ಶ್ರೀರಾಮನು ಶ್ಯಾಮಲ ಶರೀರನಾಗಿ ದೇದೀಪ್ಯಮಾನವಾಗಿ ಪ್ರಕಾಶಿಸುತ್ತಾ ಇದು ರಾವಣನ ಮಾಯಾಜಾಲವೆಂದು ತಿಳಿದು, ಅವನ ಹುಚ್ಚು ಚೇಷ್ಟೆಗಳನ್ನು ನೋಡಿ ತನ್ನಲ್ಲೇ ನಗುತ್ತಾ ಅವುಗಳನ್ನು ಲಕ್ಷಿಸದೆ, ಒಂದು ಬಾಣವನ್ನು ಪ್ರಯೋಗಿಸಿ ಅವನ ಮಾಯಾಜಾಲವನ್ನು ನಾಶಮಾಡಿದನು. ಆ ಮಾಯೆಯು ಹರಿದೊಡನೆ ವಾನರ ಭಲ್ಲೂಕಗಳೆಲ್ಲಾ ಸಂತೋಷಗೊಂಡುವು. ಸೂರ್ಯೋದಯವಾದೊಡನೆ ಮಂಜು ಕರಗುವಂತೆ ರಾಮನು ಬಾಣ ಪ್ರಯೋಗಿಸಿದೊಡನೆ ರಾವಣ ಮಾಯೆ ಕರಗಿಹೋಯಿತು. ನಂತರ ವಾನರರು ಬೆಟ್ಟದ ಬಂಡೆಗಳನ್ನು ಹಿಡಿದು ರಾವಣನ ಮೇಲೆಸೆಯಲು ಕುಪ್ಪಳಿಸಿದರು. ರಾಮನು ಒಂದು ತೀಕ್ಷ್ಣವಾದ ಬಾಣವನ್ನು ರಾವಣನ ಮೇಲೆ ಹೊಡೆದನು. ಅದು ಪ್ರಕಾಶಮಾನವಾಗಿ ಬೆಳಗುತ್ತಾ ಹೋಗಿ ರಾವಣನ ತಲೆಗಳನ್ನು ಕತ್ತರಿಸಿತು. ಆದರೆ, ಆ ತಲೆಗಳು ಮತ್ತೆ ಹುಟ್ಟಿಕೊಂಡುವು. ಹೀಗೆ, ರಾಮನು ತಲೆಗಳನ್ನು ಕತ್ತರಿಸಿದಂತೆಲ್ಲಾ ಮತ್ತೆ ಮತ್ತೆ ತಲೆಗಳು ಹುಟ್ಟಿಕೊಳ್ಳು ತ್ತಿದ್ದುವು. ರಾಮನಿಗೆ ಇದು ವಿನೋದದ ಆಟದಂತೆ ಕಂಡಿತು. ಲಾಭ ಬಂದಂತೆಲ್ಲಾ ಲೋಭ ಹೆಚ್ಚುವಂತೆ ಅವನ ಶಿರಸ್ಸುಗಳು ಹುಟ್ಟುತ್ತಿದ್ದವು.

ರಾಮರಾವಣರ ಯುದ್ಧಕ್ಕೆ ಸಾಟಿಯಾದುದು ಮತ್ತೊಂದಿಲ್ಲ ಎನ್ನುವಂತಾಯಿತು, 'ಗಗನಂ ಗಗನಾಕಾರಂ ಸಾಗರಸ್ಸಾಗರೋಪಮಃ', ಆಕಾಶಕ್ಕೆ ಆಕಾಶವೇ ಉಪ ಮಾನ, ಸಾಗರಕ್ಕೆ ಸಾಗರವೇ ಉಪಮಾನ. ರಾಮರಾವಣರ ಯುದ್ಧಕ್ಕೆ ರಾಮ ರಾವಣರ ಯುದ್ಧವೇ ಉಪಮಾನ. ರಾಮರಾವಣರ ಯುದ್ಧ ಹದಿನೆಂಟು ದಿನಗಳು ನಡೆಯಿತು. ರಾಮನಿಗೆ ಇದು ಶ್ರಮವೆನಿಸಲಿಲ್ಲ. ಇದು ಒಂದು ಕಲಾ ವಿನೋದವಾ ಗಿತ್ತು. ಕಾರಣ ಹದಿನಾಲ್ಕು ವರ್ಷಗಳ ವನವಾಸ ಪೂರ್ತಿಯಾಗುವುದಕ್ಕೆ ಇನ್ನೂ ಕಾಲವಿದ್ದುದರಿಂದ ಇದನ್ನು ಒಂದು ಆಟವಾಗಿ ರಾವಣನೊಂದಿಗೆ ಆಡಿದನು. ರಾಮನು ಸಂಕಲ್ಪಿಸಿದರೆ ಅವನಿಗೆ ರಾವಣ ಏನು ಮಹಾ! ಹದಿನೆಂಟು ದಿನಗಳು ಕಳೆಯುತ್ತಲೇ ರಾಮನು ಒಂದು ತೀಕ್ಷ್ಣವಾದ ಬಾಣವನ್ನು ಪ್ರಯೋಗಿಸಿದನು. ಆ ಸಮಯದಲ್ಲಿ ರಾವಣನಿಗೆ ಎಲ್ಲೆಲ್ಲೂ ಅಶುಭವೇ ಕಾಣಿಸಿತು. ನರಿಗಳು, ಕತ್ತೆಗಳು ಮೊದಲಾದುವು ಕಿರುಚಿದವು. ಖಗಮೃಗಗಳು ಗೋಳಿಟ್ಟವು. ಅಂತರಿಕ್ಷದಿಂದ ಉಲ್ಕೆಗಳು ಬಿದ್ದವು. ದಶದಿಶೆಗಳಲ್ಲೂ ಬೆಂಕಿ ಜ್ವಾಲೆ ಕಾಣಿಸಿತು. ಮಂಡೋದರಿಯ

ಹೃದಯ ಕಂಪಿಸಿತು. ಲಂಕೆಯಲ್ಲಿನ ಎಲ್ಲ ದೇವಾಲಯಗಳ ವಿಗ್ರಹಗಳೂ ಕಣ್ಣೀರು ಸುರಿಸಿದವು. ಪ್ರಚಂಡ ಗಾಳಿ ಭಯಂಕರವಾಗಿ ಬೀಸಿತು.

ಈ ಉತ್ಪಾತಗಳನ್ನು ನೋಡಿ ಅಂತರಿಕ್ಷದಲ್ಲಿದ್ದ ದೇವತೆಗಳು ಜಯ ಜಯ ಘೋಷ ಮಾಡಿದರು. ಆ ಸಮಯದಲ್ಲಿ ರಾಮನು ಬಿಲ್ಲನ್ನು ಆಕರ್ಣಾಂತವಾಗಿ ಎಳೆದು ಏಕ ಕಾಲದಲ್ಲಿ ಮೂವತ್ತೊಂದು ಬಾಣಗಳನ್ನು ಹೊಡೆದನು. ಆ ಬಾಣ ಗಳು ಕಾಲಸರ್ಪಗಳಂತೆ ಹೊರಟವು. ಒಂದು ರಾವಣನ ನಾಭಿ ಪ್ರದೇಶದಲ್ಲಿದ್ದ ಅಮೃತ ಕಲಶವನ್ನು ಒಡೆಯಿತು. ಮಿಕ್ಕ ಮೂವತ್ತು ಬಾಣಗಳು ಅವನ ಶಿರಸ್ಸು ಬಾಹುಗಳನ್ನು ಖಂಡಿಸಿದವು. ಕೆಳಗೆ ಬಿದ್ದ ಮುಂಡ. ಶಿರಸ್ಸುಗಳು ಬಾಹುಗಳು ಕುಣಿದಾಡತೊಡಗಿದವು. ಸ್ವಲ್ಪ ಹೊತ್ತು ಹಾಗೇ ಚಲಿಸುತ್ತಿದ್ದು, ಚೈತ್ರ ಶುದ್ಧ ಚತುರ್ದಶಿಯಂದು ರಾವಣನು ಸ್ವರ್ಗಸ್ಥನಾದನು.

**ಮಂಡೋದರಿಯ ವಿಲಾಪ**: ದೇವದುಂದುಭಿಗಳು ಮೊಳಗಿದುವು. ರಾವಣನ ತೇಜಸ್ಸು ರಾಮನಲ್ಲಿ ಲೀನವಾಯಿತು. ಅದನ್ನು ನೋಡಿ ವಾನರ ಯೋಧರು ಆಶ್ಚರ್ಯಗೊಂಡರು. ಹದಿನೆಂಟು ದಿನಗಳು ರಾಮನು ತೋರಿದ ಬಲ ಪರಾಕ್ರಮ ಗಳನ್ನು ನೋಡಿ ವಾನರರು ಆಶ್ಚರ್ಯಪಟ್ಟರು. ಜಯಜಯ ಧ್ವನಿ ಮಾಡಿದರು. ರಾವಣನ ಮರಣ ವಾರ್ತೆಯನ್ನು ಕೇಳಿ ಮಂಡೋದರಿ ನೆಲಕ್ಕುರಳಿದಳು. ಅವಳು ದಾಸಿಯೊಂದಿಗೆ ಕಳೇಬರದ ಹತ್ತಿರಕ್ಕೆ ಬಂದು ಆ ಶಿರಸ್ಸುಗಳನ್ನು ಸೇರಿಸಿ ಪ್ರಾಣೇಶ್ವರ ನಿಗೆ ಸಂಭವಿಸಿದ ದುರ್ಗತಿಗೆ ಬಹಳವಾಗಿ ದುಃಖಿಸಿದಳು. ರಾವಣನ ಪ್ರತಾಪಗ ಳನ್ನು ಅನೇಕ ವಿಧವಾಗಿ ವರ್ಣಿಸಿದಳು. "ಓ ನಾಥಾ! ಬ್ರಹ್ಮಸೃಷ್ಟಿಯೆಲ್ಲವೂ ನಿಮಗೆ ವಶವಾಗಿದ್ದಿತು. ಅಷ್ಟದಿಕ್ಪಾಲಕರು ನಿಮಗೆ ನಮಿಸುತ್ತಿದ್ದರು. ಆದರೆ, ಎಷ್ಟು ಬಲವಿದ್ದರೆ ಏನು ಪ್ರಯೋಜನ? ಎಷ್ಟು ತಪಸ್ಸು ಮಾಡಿ ಏನು ಪ್ರಯೋಜನ? ಎಷ್ಟು ಶಕ್ತಿ ಪರಾಕ್ರಮಗಳಿದ್ದು ಏನು ಪ್ರಯೋಜನ? ನೀವು ರಾಮ ವಿಮುಖರಾದಿರಿ. ಆದ್ದರಿಂದಲೇ, ನಿಮಗೆ ಈ ಪಾಡಾಯಿತು. ಕಾಮವನ್ನು ವಶದಲ್ಲಿಟ್ಟುಕೊಳ್ಳದಿದ್ದರೆ, ಕಾಲನಾದರೂ ಈ ರೀತಿ ಬಾಧೆಪಡದೆ ತಪ್ಪದು. ಕಾಮಾಂಧನಿಗೆ ಈ ಕಠಿಣ ಶಿಕ್ಷೆ ತಪ್ಪಿದ್ದಲ್ಲ. ಕಾಮಿಯು ಮಾತ್ರವೇ ರಾಮನನ್ನು ಮರೆಯುವವನು. ಓ ರಾವಣಾ! ರಾಮನು ರಾಕ್ಷಸ ಸಮೂಹವನ್ನೇ ದಹಿಸುವುದಕ್ಕೆ ಅವತರಿಸಿದವನು. ಅವನು ಸಾಮಾನ್ಯ ಮಾನವ ಮಾತ್ರನಲ್ಲವೆಂದು ನಾನೆಷ್ಟೋ ಬಾರಿ ಹೇಳಿದೆ. ಆದರೆ, ನಿಮ್ಮ ಪ್ರಾರಬ್ಧ ನಿಮ್ಮನ್ನು ಬಿಡದೆ ಬೆನ್ನು ಹತ್ತಿತು. ನೀವು ನಿಮ್ಮ ದೇಹಬಲದ ಮೇಲೆ, ಬುದ್ಧಿಬಲದ ಮೇಲೆ, ಧನ ಬಲದ ಮೇಲೆ ಆಧಾರಪಟ್ಟು ಬಹಳ ಭ್ರಾಂತಿ ಪಟ್ಟಿರಿ. ಕರುಣಾ ಸಮುದ್ರನನ್ನು ಶರಣು ಹೋಗಿ, 'ರಾಕ್ಷಸ ವಂಶವನ್ನು ಕಾಪಾಡು,' ಎಂದು ಅವನನ್ನು ಬೇಡಿಕೊಳ್ಳಿರೆಂದು ನಿಮ್ಮ ಪಾದಗಳ ಮೇಲೆ

ಬಿದ್ದು ಪ್ರಾರ್ಥಿಸಿದೆ. ನನ್ನ ಮಾತುಗಳನ್ನು ನೀವು ಕೇಳಲಿಲ್ಲ. ನಿರಂತರವೂ ಪರರಿಗೆ ದ್ರೋಹ ಬಗೆಯುವುದಕ್ಕೆ ನೀವು ಯೋಚಿಸುತ್ತಿದ್ದಿರಿ. ಪರರಿಗೆ ಉಪಕಾರ ಮಾಡುವುದಕ್ಕೆ ಎಂದೂ ಪ್ರಯತ್ನಿಸಲಿಲ್ಲ. ನಿಮ್ಮ ಕಾಯವೋ ನಿರಂತರ ಪಾಪದಲ್ಲಿ ಮುಳುಗಿರುತ್ತಿತ್ತು. ಅಂಥ ನಿಮಗೆ ರಾಮನು ಸಾಕೇತ ಲೋಕವನ್ನು ಕೊಟ್ಟನು. ಅದು ನಿಮ್ಮ ಭಾಗ್ಯ. ಇಲ್ಲದಿದ್ದರೆ, ರಾಮನ ಕೈಯಲ್ಲಿ ಪ್ರಾಣ ಬಿಡುವುದು ಎಲ್ಲರಿಗೂ ಸಾಧ್ಯವಿಲ್ಲ. ಆ ಪ್ರಾಪ್ತಿ ಎಲ್ಲರಿಗೂ ಬಾರದು ಅಲ್ಲವೇ? ಆ ರಾಮನು ನಿಮ್ಮ ಸಂಹಾರಕ್ಕಾಗಿಯೇ ಅವತರಿಸಿದವನು. ರಾಕ್ಷಸ ವಂಶದ ನಾಶಕ್ಕೆ ರಾಕ್ಷಸ ರಾಜನೇ ದಾರಿಯಾದನೆನ್ನುವ ಮಾತು ಶಾಶ್ವತವಾಗಿ ಉಳಿದುಹೋಯಿತು. ಇದೇ ನೀವು ಸಾಧಿಸಿದ್ದು, ಇದೇ ನಿಮ್ಮ ಪರಿಪಾಲನಾ ಚಾತುರ್ಯ. ನಿಮ್ಮ ತಪಃ ಫಲವು ಇಷ್ಟೇಯೆ?" ಎಂದು ಗೋಳಾಡಿದಳು.

"ರಾಮಚಂದ್ರಾ! ಕರ್ಮಫಲ ತಪ್ಪಿದ್ದಲ್ಲವೆನ್ನುವುದನ್ನು ಹೀಗೆ ನಿರೂಪಿಸಿದಿರಾ? ಕರ್ಮ ಫಲ ತಪ್ಪಿದ್ದಲ್ಲವೆನ್ನುವುದಕ್ಕೆ ಇದಕ್ಕಿಂತಲೂ ಬೇರೆ ನಿದರ್ಶನವುಂಟೆ? ಇದೇ ಪ್ರತ್ಯಕ್ಷ ನಿದರ್ಶನವಲ್ಲವೆ?" ಎಂದು ಮಂಡೋದರಿ ದುಃಖಿಸಿದಳು. ಆದರೆ, ಜ್ಞಾನದಿಂದ ರಾಮಚಂದ್ರನು ಪರಬ್ರಹ್ಮನೆಂದು ತಿಳಿದಳು. ಅವಳ ಜ್ಞಾನಕ್ಕೆ ಸುರರು, ಮುನಿಗಳು ಸಂತೋಷಿಸಿದರು. ಮಂಡೋದರಿ ದುಃಖಿಸುತ್ತಿದ್ದುದನ್ನು ನೋಡಿ ವಿಭೀಷಣನೂ ದುಃಖಿಸಿದನು. ಅವಳ ಮಾತು ನಿಜವೆಂದು ಒಪ್ಪಿಕೊಂಡನು. ರಾಮ ಲಕ್ಷ್ಮಣರು ವಿಭೀಷಣನ ಬಳಿಗೆ ಬಂದು ಸಮಾಧಾನಪಡಿಸಿದರು. ರಾಮನು, "ವಿಭೀಷಣಾ! ರಾವಣನಿಗೆ ಯೋಗ್ಯವಾದ ಪರಲೋಕ ಕ್ರಿಯೆಗಳನ್ನು ಆಚರಿಸು," ಎಂದು ಆಜ್ಞಾಪಿಸಿದನು, ರಾಮನ ಆಜ್ಞೆಯಂತೆ ದೇಶ ಕಾಲ ಪಾತ್ರಗಳನ್ನನ್ನುಸರಿಸಿ ವಿಭೀಷಣನು ಮಂಡೋದರಿ ಮತ್ತಿತರ ರಾವಣ ಸತಿಯರು ಬಂದು ತಿಲೋದಕ ವನ್ನಿತ್ತರು.

ನಂತರ, ರಾಮನು ವಿಭೀಷಣನನ್ನು ಹತ್ತಿರ ಕೂರಿಸಿಕೊಂಡು, ಹಲವು ರೀತಿಯಲ್ಲಿ ಸಮಾಧಾನ ಹೇಳಿ, "ನಡೆಯಬೇಕಾದದ್ದು ನಡೆಯಿತೇ ವಿನಾ ವಿರುದ್ಧವಾದು ದೇನೂ ನಡೆದಿಲ್ಲ. ಅವನ ಪಾಪ ಶಾಪಗಳು ಪರಿಪಕ್ವವಾದವು. ಅಂಗದ, ನೀಲ ನಲಾದಿಗಳನ್ನು ಕರೆದು, "ನೀವೆಲ್ಲರೂ ಲಂಕೆಗೆ ಹೋಗಿ, ವಿಭೀಷಣನಿಗೆ ಪಟ್ಟಕಟ್ಟಿ ಬನ್ನಿರಿ," ಎಂದು ಆಜ್ಞಾಪಿಸಿದನು. "ನಮ್ಮ ತಂದೆಯ ಆಜ್ಞೆಯಂತೆ ನಾಳೆಗೆ ಹದಿನಾಲ್ಕು ವರ್ಷಗಳು ಮುಗಿಯುವುವು. ಆದ್ದರಿಂದ ನಾನು ಅಯೋಧ್ಯೆಗೆ ಬೇಗ ಹೊರಡುವೆನು," ಎಂದನು. ವಿಭೀಷಣನು ರಾಮನ ಪಾದಗಳನ್ನು ಹಿಡಿದು ಕೊಂಡು, "ರಾಮಾ, ಈ ರಾಜ್ಯ ನನಗೇಕೆ? ನಿಮ್ಮ ಪಾದಾರವಿಂದ ಸಾಮ್ರಾಜ್ಯದಲ್ಲಿ ನನ್ನನ್ನಿರಿಸಿಕೊಳ್ಳಿ. ನಾಳೆಯಿಂದ ಲಂಕೆ ನಿಮ್ಮದು. ಅದನ್ನು ಅಯೋಧ್ಯೆಯ ಒಂದು

ಭಾಗವೆಂದು ಭಾವಿಸಿ," ಎಂದು ಪ್ರಾರ್ಥಿಸಿದನು. ರಾಮನು ಅದಕ್ಕೆ ಸಮ್ಮತಿಸದೆ ಅನೇಕ ವಿಧವಾಗಿ ರಾಜನೀತಿಯನ್ನು ಬೋಧಿಸಿ, ರಾಮಾಜ್ಞೆ ತಪ್ಪದೆಂದು ಹೇಳಲು, "ಹಾಗಾದರೆ, ಲಂಕೆಯಲ್ಲಿ ನಿಮ್ಮ ಹಸ್ತದಿಂದಲೇ ನನಗೆ ರಾಜ್ಯವನ್ನು ವಹಿಸಿಕೊಡಿ," ಎಂದು ವಿಭೀಷಣನು ಪ್ರಾರ್ಥಿಸಿದನು. "ತಂದೆಯ ಆಜ್ಞೆಯನ್ನು ಹದಿಮೂರು ಸಂವತ್ಸರ ಹನ್ನೊಂದು ತಿಂಗಳು ಇಪ್ಪತ್ತೊಂಬತ್ತು ದಿನಗಳು ನೆರವೇರಿಸಿ, ಒಂದು ದಿನದಲ್ಲಿ ನನ್ನ ವ್ರತವನ್ನು ಹಾಳುಮಾಡಿಕೊಳ್ಳುವುದು ಸರಿಯಲ್ಲ. ನಮ್ಮ ತಂದೆಯ ಆಜ್ಞಾನುಸಾರ ನಾನು ಪಟ್ಟಣವನ್ನು ಪ್ರವೇಶ ಮಾಡಬಾರದೆನ್ನುವುದು ನಿನಗೆ ತಿಳಿದಿದೆಯಲ್ಲವೆ? ಆದ್ದರಿಂದ, ನನ್ನ ಆಶೀರ್ವಾದಗಳನ್ನು ಪಡೆದು ನೀನು ಲಂಕೆಯಲ್ಲಿ ಪಟ್ಟಾಭಿಷೇಕ ಮಾಡಿಕೊ," ಎಂದು ಸಮಾಧಾನಪಡಿಸಿ ಕಳಿಸಿದನು.

**ನೂತನ ಲಂಕಾಧಿಪತಿ**: ರಾಮಾಜ್ಞೆಯನ್ನು ಶಿರಸಾವಹಿಸಿ, ಲಕ್ಷ್ಮಣ, ಸುಗ್ರೀವ, ಅಂಗದ, ನಲನೀಲಾದಿಗಳು ಹೊರಟು ಲಂಕೆಯನ್ನು ಸೇರಿ ವಿಭೀಷಣನಿಗೆ ರಾಜ್ಯ ತಿಲಕವನ್ನಿಟ್ಟರು. ವಿಭೀಷಣನು ನೆರೆದಿದ್ದ ವಾನರ ವೀರರಿಗೆ ನಮಸ್ಕರಿಸಿ, "ನಿಮ್ಮ ಸಹಾಯದಿಂದಲೇ ನನ್ನ ಜೀವಿತವನ್ನು ಸಾರ್ಥಕ ಮಾಡಿಕೊಂಡೆ. ಅದೆಲ್ಲವೂ ರಾಮನ ಪ್ರಸಾದ, ಅವನ ಪ್ರತಿನಿಧಿಯಾಗಿಯೆ ನಾನು ಈ ರಾಜ್ಯವನ್ನು ಪಾಲಿಸುವೆನಲ್ಲದೆ, ಇದು ನನ್ನದಲ್ಲ. ನಾನು ರಾಮಾರ್ಪಿತನಾದೆ," ಎಂದನು. ರಾವಣನೂ ರಾವಣನ ಪುತ್ರರೂ ಅವನ ಯೋಧರೂ ನಡೆಸಿದ ಕ್ರೂರ ಸಂಗ್ರಾಮಕ್ಕೆ ಚಿಂತಿಸಿ, ಎಲ್ಲವೂ ರಾಮಲೀಲೆಯೆಂದು ಭಾವಿಸಿದನು. ಎಲ್ಲರೂ ಪುನಃ ರಾಮನ ಬಳಿಗೆ ಬಂದು ನಮಸ್ಕರಿಸಿದರು.

**ಸೀತಾದೇವಿ**: ಅನಂತರ ಶ್ರೀರಾಮನು ಹನುಮಂತನನ್ನು ಕುರಿತು, "ಮಹಾವೀರ, ನನ್ನ ಕಾರ್ಯ ನಿಮಿತ್ತವಾಗಿ ನೀನು ಲಂಕೆಗೆ ಹೋಗಿ, ನನ್ನ ಸಮಾಚಾರವನ್ನು ಜಾನಕಿಗೆ ಬಿನ್ನವಿಸಿ, ಅವಳ ಯೋಗಕ್ಷೇಮವನ್ನು ತಿಳಿದುಕೊಂಡು ಬಾ," ಎಂದು ಆಜ್ಞಾಪಿಸಿದನು. ಮಹಾವೀರನು ಲಂಕೆಯನ್ನು ಪ್ರವೇಶಿಸಿ, ಜಾನಕಿಯನ್ನು ಕಂಡು ನಮಸ್ಕರಿಸಿದನು. ಅವಳು ಮಹಾವೀರನನ್ನು ನೋಡಿ ರಾಮದೂತನೆಂದು ತಿಳಿದು, "ಓ ವೀರಾ! ರಾಮಲಕ್ಷ್ಮಣರು, ವಾನರ ಸೇನೆ ಕ್ಷೇಮವೇ? ಕೃಪಾಸಾಗರನಾದ ನನ್ನ ರಾಮನು ಕುಶಲವೇ?'"ಎಂದು ಕೇಳಿದಳು. ಮಹಾವೀರನು ಅವಳಿಗೆ ನಮಸ್ಕರಿಸಿ, "ತಾಯೀ! ಎಲ್ಲ ರೀತಿಯಲ್ಲೂ ರಾಮಚಂದ್ರ ಕ್ಷೇಮವಾಗಿದ್ದಾರೆ. ಅವರು ರಾವಣನನ್ನು ಸಂಹರಿಸಿ, ವಿಭೀಷಣನಿಗೆ ಶಾಶ್ವತವಾದ ರಾಜ್ಯವನ್ನಿತ್ತರು," ಎಂದನು. ಜಾನಕಿಯು ರಾಮ ವಿಜಯವನ್ನು, ರಾವಣ ಪರಾಜಯವನ್ನು ಕೇಳಿ ಸಂತೋಷಿಸಿ, ಪ್ರಸನ್ನಳಾಗಿ, ದೇಹ ಪುಲಕಿತಗೊಂಡು ಆನಂದಬಾಷ್ಪಗಳನ್ನು ಸುರಿಸುತ್ತಾ. "ಓ ಕಪೀಶ್ವರ ಈ ಶುಭವಾರ್ತೆಯನ್ನು ಹೇಳಿದ್ದಕ್ಕೆ ನಾನು ಏನು ತಾನೆ

ನಿನಗೆ ಕೊಡಬಲ್ಲೆ! ನೀನಾಡಿದ ಮಾತುಗಳಿಗೆ ಸಮನಾದ ವಸ್ತುವಿಲ್ಲ," ಎಂದಳು. ಅದಕ್ಕೆ ಹನುಮಂತನು, "ತಾಯೀ! ನಿಮ್ಮ ಆನಂದ, ನಿಮ್ಮ ಪ್ರಸನ್ನತೆ ಕಂಡು ನನಗೆ ಮೂರು ಲೋಕಗಳು ಲಭಿಸಿದಷ್ಟು ಆನಂದವಾಯಿತು. ಇಂದು ಶತ್ರುವನ್ನು ಜಯಿಸಿ, ತಮ್ಮನೊಂದಿಗೆ ಕೂಡಿ ನಿರಾತಂಕವಾಗಿರುವ ರಾಮಪ್ರಭುವನ್ನು ನೋಡು ವುದಕ್ಕಿಂತ ಬೇರಾವ ಭಾಗ್ಯವಿದೆ?" ಎಂದು ಜಾನಕಿಗೆ ನಮಸ್ಕರಿಸಿದನು.

ಜಾನಕಿಯು, "ವಾನರೋತ್ತಮಾ! ನಾನು ಈ ಹತ್ತು ತಿಂಗಳು ರಾಮಚಂದ್ರನ ವಿಯೋಗದ ದುಃಖದಲ್ಲಿ ಮುಳುಗಿದ್ದುದರಿಂದ ಹೊರಗಿನ ಪ್ರಪಂಚ ನನಗೆ ಏನೂ ತಿಳಿಯದು. ಇವೊತ್ತು ಏನು ವಾರವೋ ಏನು ತಿಥಿಯೋ ಅದೂ ತಿಳಿಯದು. ಏನೇ ಆಗಲಿ, ಇಂದು ಮಂಗಳಕರವಾದ ವಾರ್ತೆಯನ್ನು ನೀನು ತಿಳಿಸಿದೆಯಾದ್ದರಿಂದ, ಈ ದಿನವನ್ನು ಮಂಗಳವಾರವೆಂದೇ ಕರೆಯುತ್ತೇನೆ. ಈ ದಿನ ನಿನ್ನನ್ನು ಪೂಜಿಸುವ ದಿನವಾಗಲೆಂದು ಆಶೀರ್ವದೀಸುತ್ತೇನೆ," ಎಂದಳು. ಹನುಮಂತನು, "ಇದು ಮಹಾ ಪ್ರಸಾದ," ಎಂದು ಕೈ ಜೋಡಿಸಿ ಸೀತೆಗೆ ನಮಸ್ಕರಿಸಿದನು. ಸೀತೆಯು ಕಣ್ಣೀರು ಹರಿಸುತ್ತಾ, "ಹನುಮಂತಾ, ಆ ಕೋಮಲ ಶ್ಯಾಮಲ ಶ್ರೀರಾಮನಾದ ರಾಮನ ದರ್ಶನ ನನಗೆ ಬೇಗ ಲಭಿಸುವಂತೆ ಪ್ರಯತ್ನಮಾಡು. ಜರುಗಿದ ಯುದ್ಧವೆಲ್ಲಾ ನನಗಾಗಿಯೇ ಅಲ್ಲವೇ? ನನ್ನನ್ನು ಪಡೆಯುವ ನಿಮಿತ್ತವಾಗಿಯೇ ಅಲ್ಲವೆ? ನನ್ನನ್ನು ಬೇಗ ರಾಮನ ಚರಣಗಳಲ್ಲಿ ಸೇರಿಸು," ಎಂದು ದೈನ್ಯದಿಂದ ಕೇಳಿಕೊಂಡಳು. ಅವಳ ಬಾಧೆಯನ್ನು ನೋಡಲಾರದೆ, ಹನುಮಂತನು ರೊಯ್ಯನೆ ಎಗರಿ, ನಡೆದ ವೃತ್ತಾಂತವನ್ನೆಲ್ಲಾ ರಾಮನಿಗೆ ತಿಳಿಸಿದನು. ಹನುಮಂತನ ಮಾತು ಗಳನ್ನು ಕೇಳಿ ರಾಮನು ಅಂಗದ ವಿಭೀಷಣಾದಿಗಳನ್ನು ಕರೆದು, "ಹನುಮಂತ ನೊಂದಿಗೆ ಹೋಗಿ ಸೀತೆಯನ್ನು ಆದರಿಸಿ ಕರೆದುಕೊಂಡು ಬನ್ನಿ," ಎಂದು ಆಜ್ಞಾಪಿಸಿದನು.

ಆ ತಕ್ಷಣವೇ ವಾನರ ಯೋಧರು ಹನುಮಂತನೊಂದಿಗೆ ಅಶೋಕವನಕ್ಕೆ ಹೋಗಿ ವಿಭೀಷಣನ ಆಜ್ಞಾನುಸಾರವಾಗಿ ಸೀತೆಗೆ ಸ್ನಾನಾದಿಗಳನ್ನು ಮಾಡಿಸಿ, ಪೀತಾಂಬರ ವನ್ನುಡಿಸಿ, ಆಭರಣಗಳಿಂದ ಅಲಂಕರಿಸಲು ಅಪೇಕ್ಷಿಸಿದರು. ಆದರೆ, ಸೀತೆ ಅವುಗಳನ್ನು ತಿರಸ್ಕರಿಸುತ್ತಾ, "ನನ್ನ ರಾಮಚಂದ್ರನೇ ನನ್ನ ಭೂಷಣ, ಅವನ ದರ್ಶನವೇ ನನ್ನ ಸ್ನಾನ. ಅವನಿಗೆ ಮಾಡುವ ನಮಸ್ಕಾರವೇ ನನ್ನ ಪೀತಾಂಬರ. ನನಗೆ ರಾವಣನ ವಸ್ತು ವಾಹನಾದಿಗಳು ಅವಶ್ಯಕವಿಲ್ಲ," ಎಂದಳು. ಅವಳ ಇಷ್ಟಪ್ರಕಾರವೇ ಆಗಲಿ ಎಂದು ವಿಭೀಷಣನು ಹೇಳಿದನು. ರಾಮ ಸಂದರ್ಶನಕ್ಕಾಗಿ ಸೀತೆ ತವಕಿಸುತ್ತಿದ್ದಾಳೆಂದು ದಾಸಿಯರು ಹೇಳಿದರು. ವಾನರರು ಕೂಡಲೆ ಪಲ್ಲಕ್ಕಿ ಯನ್ನು ತಂದು ಅವಳನ್ನು ಅದರಲ್ಲಿ ಕೂರಿಸಿ ಹೊತ್ತುಕೊಂಡು ಹೊರಟರು.

ಸೀತೆಯ ದರ್ಶನ ಮಾಡುವುದಕ್ಕಾಗಿ ಲಂಕೆಯಲ್ಲಿ ಅಳಿದುಳಿದ ರಾಕ್ಷಸ ಸ್ತ್ರೀಯರೂ ವಾನರರೂ ದಾರಿಯಲ್ಲಿ ನೆರೆದಿದ್ದರು. ಒಬ್ಬರ ಮೇಲೊಬ್ಬರು ಬಿದ್ದು ಅವಳನ್ನು ನೋಡಲು ಪ್ರಯತ್ನಿಸುತ್ತಿದ್ದರು. ಪಲ್ಲಕ್ಕಿಯಲ್ಲಿ ಕುಳಿತ ಜಾನಕಿ ಆಚೆ ಈಚೆ ನೋಡದೆ, ರಾಮನನ್ನು ಸ್ಮರಿಸುತ್ತಾ ರಾಮ ಸಂದರ್ಶನಕ್ಕಾಗಿ ತವಕಿಸುತ್ತಾ ತಲೆಬಗ್ಗಿಸಿ ಕುಳಿತಳು. ಸ್ವಲ್ಪ ದೂರ ಇರುವಾಗಲೇ, ರಾಮನ ಬಳಿಗೆ ನಡೆದು ಹೊರಟಳು. ಅವಳನ್ನು ನೋಡಿ ವಾನರರು ನಮಸ್ಕರಿಸಿ, ನಿಲ್ಲಿಸಿ, "ಸೀತಾರಾಮಾಚಂದ್ರರಿಗೆ ಜೈ ಜೈ," ಎಂದು ಜಯ ಧ್ವನಿ ಮಾಡಿದರು. ಅವಳು ರಾಮನನ್ನು ಸಮೀಪಿಸುವಷ್ಟರಲ್ಲಿ, ಅವಳನ್ನು ಈಗಲೇ ತನ್ನ ಬಳಿಗೆ ಕರೆತರುವುದಕ್ಕೆ ಅವಕಾಶವಿಲ್ಲವೆಂದೂ ಅವಳನ್ನು ಅಗ್ನಿಪರೀಕ್ಷೆಗೆ ಗುರಿಪಡಿಸಬೇಕಾಗಿದೆಯೆಂದೂ ರಾಮನು ಆಜ್ಞಾಪಿಸಿದನು. ಅದನ್ನು ಕೇಳಿ ವಾನರರು ದಿಗ್ಭ್ರಾಂತರಾಗಿ ಕುಸಿದು ಹೋದರು.

**ಅಗ್ನಿ ಪ್ರವೇಶ**: ರಾಮಾಜ್ಞೆ ಪ್ರಕಾರ ಒಣಗಿದ ಸೌದೆಯನ್ನು ತರಲು ವಾನರರು ಹೊರಟರು. ರಾವಣನೊಂದಿಗೆ ಯುದ್ಧ ಮಾಡುವ ಕಾಲದಲ್ಲಿ ದೊಡ್ಡ ಪರ್ವತ ಗಳನ್ನು ಲೀಲಾಜಾಲವಾಗಿ ಎತ್ತಿದ ವಾನರರಿಗೆ ಈಗ ಸಣ್ಣ ಪುಳ್ಳೆಗಳೇ ಮಹಾಭಾರ ವಾದುವು. ಸೀತಾದೇವಿಗೆ ಇಂಥ ಪರೀಕ್ಷೆಯೇ ಎಂದು ಕೊರಗಿದರು. ಲೋಕ ರೀತಿಯಾಗಿ ಸೀತೆ ಸುಶೀಲೆ ಎನ್ನುವುದು ರಾಮನಿಗೆ ಗೊತ್ತು. ಹಾಗೇ, ಲೊಕವನ್ನು ತೃಪ್ತಿಪಡಿಸುವುದಕ್ಕಾಗಿ ರಾಮನು ಈ ಲೀಲಾ ನಾಟಕವಾಡುತ್ತಿದ್ದಾನೆನ್ನುವುದೂ ವಿಭೀಷಣ, ಅಂಗದ, ಸುಗ್ರೀವಾದಿಗಳಿಗೆ ಗೊತ್ತು. ಇನ್ನೊಂದು ರೀತಿಯಾಗಿ ನೋಡಿದರೆ, ಅರಣ್ಯದಲ್ಲಿದ್ದಾಗ ಜಾನಕಿ ತನ್ನ ಶಕ್ತಿಯನ್ನು ಅಗ್ನಿಹೋತ್ರನ ಬಳಿ ಇಟ್ಟಿದ್ದಳು. ಲಂಕೆಯಲ್ಲಿ ಇದುವರೆಗಿದ್ದ ಸೀತೆ ಮಾಯಾ ಸೀತೆ. ಶಕ್ತಿರಹಿತವಾದ ದೇಹ ಮಾತ್ರ. ಸೀತೆಯ ನಿಜಸ್ವರೂಪ ಅಗ್ನಿಯಲ್ಲಿದ್ದುದರಿಂದ ತನ್ನ ನಿಜ ಶಕ್ತಿ ಪಡೆದು ಬರಲು ರಾಮನು ಅವಳನ್ನು ಅಗ್ನಿಯಲ್ಲಿ ಪ್ರವೇಶಿಸುವಂತೆ ಮಾಡಿದನು. ಅವಳ ಅಂತಃಕರಣ ನಿರ್ಮಲವಾದುದೆಂದು ಲೋಕಕ್ಕೆ ತಿಳಿಸುವುದಕ್ಕಾಗಿ ಅವಳನ್ನು ಅಗ್ನಿಪ್ರವೇಶ ಮಾಡಿಸಿದನು. ಇದರಿಂದ ಸೀತೆ ಆನಂದಿಸಿದಳು. ಆದರೆ, ಲಕ್ಷ್ಮಣನಿಗೆ ದುಃಖವಾಯಿತು.

ಲಕ್ಷ್ಮಣನನ್ನು ಶಾಂತಪಡಿಸುವುದಕ್ಕಾಗಿ ಸೀತೆಯು, "ಲಕ್ಷ್ಮಣಾ! ವಿವಾಹ ಕಾಲದಲ್ಲಿ ಬ್ರಾಹ್ಮಣರು ಅಗ್ನಿಯನ್ನು ಬೆಳಗಿಸಿ ವಿವಾಹ ಮಾಡುವರು. ಈಗ ನನಗೆ ಅಗ್ನಿಯಿಂದ ಪುನರ್ಜನ್ಮ ಲಭಿಸುವುದು. ಮತ್ತೊಮ್ಮೆ ನಾನು ಪ್ರಭುವನ್ನು ವರಿಸುವೆನು. ನೀನು ಧರ್ಮವನ್ನು ವಿಚಾರ ಮಾಡಿ ಅಗ್ನಿಯನ್ನು ಬೆಳಗಿಸು," ಎಂದಳು. ಧರ್ಮವನ್ನೂ ನ್ಯಾಯವನ್ನೂ ಚಾತುರ್ಯವನ್ನೂ ಹೊರಸೂಸುವ ಅವಳ ಮಾತುಗಳನ್ನು ಕೇಳಿ ಲಕ್ಷ್ಮಣನು ಕಣ್ಣೀರು ಸುರಿಸುತ್ತಾ ಕೈ ಜೋಡಿಸಿ ನಿಂತನು. ಏನೊಂದೂ ಮಾತನಾಡ

ಲಾರದೆ ರಾಮನಿಗೆ ಭಯಪಟ್ಟು ಸುಮ್ಮನಿದ್ದನು. ರಾಮನ ಮುಖವನ್ನು ಲಕ್ಷ್ಮಣ ನೋಡಿ ಕಟ್ಟಿಗೆಗೆ ಬೆಂಕಿ ಹತ್ತಿಸಿದನು. ದೊಡ್ಡದಾಗಿ ಹತ್ತಿ ಉರಿಯುತ್ತಿದ್ದ ಬೆಂಕಿಯನ್ನು ನೋಡಿ ಜಾನಕಿಯು ಸಂತೋಷಿಸಿದಳು. ಅವಳಿಗೆ ಸ್ವಲ್ಪವೂ ಭಯವಾಗಲಿಲ್ಲ. "ಓ ಹುತಾಶನಾ! ಮನೋವಚನ ಕರ್ಮಗಳಿಂದ ನಾನು ರಾಮಚಂದ್ರನನ್ನು ಬಿಟ್ಟು ಬೇರೆಯವರನ್ನು ಯೋಚಿಸಿಲ್ಲ. ಓ ಪಾವಕಾ! ನೀನು ಸಕಲ ಜೀವಗಳ ಹೃದಯ ಗಳಲ್ಲಿ ನೆಲೆಸಿದ್ದೀಯೆ. ಶ್ರೀಖಂಡಚಂದನದಂತೆ ನೀನು ನನಗೆ ಶೀತಲವಾಗು," ಎಂದು ಪ್ರಾರ್ಥಿಸಿ ಅಗ್ನಿಯಲ್ಲಿ ಪ್ರವೇಶಿಸಿದಳು. ಅಗ್ನಿಯು ಶ್ರೀಖಂಡಚಂದನದಂತೆ ಶೀತಲವಾದನು. ಅಗ್ನಿದೇವನು ಬ್ರಾಹ್ಮಣ ರೂಪವನ್ನು ಧರಿಸಿ ನಿಜವಾದ ಸೀತೆ ಯನ್ನು ಜೊತೆಯಲ್ಲಿ ಕರೆತಂದು, ಕ್ಷೀರಸಮುದ್ರನು ಮಹಾಲಕ್ಷ್ಮಿಯನ್ನು ವಿಷ್ಣು ಮೂರ್ತಿಗೆ ಸಮರ್ಪಿಸಿದ ಹಾಗೆ ಅವಳನ್ನು ರಾಮನಿಗೆ ಅರ್ಪಿಸಿದನು. ಆಗತಾನೆ ಅರಳಿದ ಕಮಲದಂತೆ ಬಂಗಾರದ ಪದ್ಮದಂತೆ ಸೀತೆಯು ರಾಮನ ಎಡಪಕ್ಕದಲ್ಲಿ ಶೋಭಿಸಿದಳು. ದೇವತೆಗಳು ಸಂತೋಷಿಸಿದರು. ದೇವದುಂದುಭಿ ಮೊಳಗಿತು.

ನಂತರ, ವಿಭೀಷಣನು ನಗರಕ್ಕೆ ಹೋಗಿ, ದಿವ್ಯವಸ್ತುಗಳನ್ನು, ನವರತ್ನಗಳನ್ನು ಪುಷ್ಪಕ ವಿಮಾನದಲ್ಲಿ ತುಂಬಿ ತಂದು ರಾಮನಿಗೆ ಅರ್ಪಿಸಿದನು. ಆಗ ರಾಮನು, "ಓ ಸಖನೇ! ಈ ವಿಮಾನದಲ್ಲಿರುವ ವಸ್ತ್ರಾದಿಗಳ ಸಹಿತ ನೀನು ಅಂತರಿಕ್ಷಕ್ಕೆ ಹಾರಿ ಅವುಗಳನ್ನು ಮೇಲಿನಿಂದ ಸುರಿ," ಎಂದನು. ವಿಭೀಷಣನು ಹಾಗೆಯೇ ಮಾಡಿದನು. ಅವುಗಳನ್ನು ವಾನರರು ಅವರವರ ಮನಸ್ಸು ತೋಚಿದಂತೆ ಬಾಚಿ ಕೊಂಡರು. ಆ ಮಣಿಗಳನ್ನು ನೋಡಿ ವಾನರರು ಅವು ಫಲಗಳೆಂದು ಭ್ರಮಿಸಿದರು. ಅವುಗಳನ್ನು ಕಚ್ಚಿ ನೋಡಿ ಕಲ್ಲೆಂದು ಬಿಸಾಡಿದಾರು. ವಾನರರ ಚೇಷ್ಟೆಯನ್ನು ನೋಡಿ ಸೀತಾರಾಮಲಕ್ಷ್ಮಣರು ನಕ್ಕರು. ವಾನರ ಭಲ್ಲೂಕಗಳು ವಸ್ತ್ರಾಲಂಕಾರ ಗಳನ್ನು ಧರಿಸಿ, ರಾಮನ ಬಳಿಗೆ ಬಂದರು. ಬಣ್ಣ ಬಣ್ಣದ ನಾನಾ ಭಲ್ಲೂಕಗಳನ್ನು ನೋಡಿ ರಾಮನು ಪರಮಾನಂದಭರಿತನಾದನು. ಅವರನ್ನು ಕುರಿತು, "ಓ ವಾನ ರರೇ! ನಿಮ್ಮ ಸಾಮರ್ಥ್ಯದಿಂದಲೇ ನಾನು ರಾವಣನನ್ನು ಕೊಂದೆ, ವಿಭೀಷಣ ನಿಗೆ ರಾಜ್ಯವಿತ್ತೆ. ಇನ್ನು ನೀವು ನಿಮ್ಮ ನಿಮ್ಮ ವಾಸಸ್ಥಳಕ್ಕೆ ಹೋಗಬಹುದು. ನಾನು ಸದಾ ನಿಮ್ಮೊಂದಿಗೇ ಇರುತ್ತೇನೆ. ಭಯಪಡಬೇಡಿ," ಎಂದು ಅಭಯ ಹಸ್ತವಿತ್ತು ಎಲ್ಲರನ್ನೂ ಸಮಾಧಾನಪಡಿಸಿದನು. ರಾಮನ ವಚನಗಳನ್ನು ಕೇಳಿ ವಾನರರು ಪ್ರೇಮಾತಿಶಯದಿಂದ ವ್ಯಾಕುಲರಾಗಿ ಕೈಗಳನ್ನು ಜೋಡಿಸಿ, "ಓ ನಾಥಾ! ನಿಮ್ಮ ಮಾತುಗಳು ನಿಮಗೆ ಶೋಭಾಯಮಾನವಾಗಿವೆ. ನಿಮ್ಮ ಮಾತುಗಳು, ನಮ್ಮ ಮನಸ್ಸನ್ನು ಭ್ರಮಿಸುತ್ತಿವೆ. ನಾವು ದೀನರು. ನಮಗೆ ನಾಥಾ ನೀವೇ ತ್ರಿಲೋಕಾಧಿಪತಿಗಳು. ಎಲ್ಲಾದರೂ ಸೊಳ್ಳೆಯು ಗರುಡನಿಗೆ ಸಹಾಯ ಮಾಡ

ಬಲ್ಲದೆ? ಮಿಣುಕು ದೀಪವೊಂದು ಸೂರ್ಯನನ್ನು ತೋರಿಸಬಲ್ಲುದೆ?" ಎನ್ನುತ್ತಾ ರಾಮನಿಗೆ ನಮಸ್ಕರಿಸಿ ಕಣ್ಣೀರು ಸುರಿಸಿದರು.

## ೨೯ ಆನಂದದಲ್ಲಿ ಅಯೋಧ್ಯೆ

**ಪುಷ್ಪಕ ವಿಮಾನ**: ರಾಮನ ಆಜ್ಞೆಯ ಪ್ರಕಾರ ವಾನರ ಭಲ್ಲೂಕಗಳು ರಾಮನ ರೂಪವನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾ ಹರ್ಷವಿಷಾದಗಳಿಂದ ಕೂಡಿದವರಾಗಿ ಅನೇಕ ವಿಧವಾಗಿ ಬಿನ್ನವಿಸಿಕೊಂಡರು. ಜಾಂಬವಂತ, ನಳ, ನೀಲ, ಸುಗ್ರೀವ, ಹನಮಂತ, ವಿಭೀಷಣ ಮೊದಲಾದ ಮಹಾವೀರರು ಪ್ರೇಮ ಪರವಶರಾಗಿ ಮಾತುಬಾರದೆ ಕಣ್ಣೀರು ಸುರಿಸುತ್ತಾ ರೆಪ್ಪೆಯಾಡಿಸದೆ ರಾಮನನ್ನೇ ನೋಡುತ್ತಾ ನಿಂತಿದ್ದರು. ಅವರ ಪ್ರೇಮಾತಿಶಯಗಳನ್ನು ನೋಡಿ, ರಾಮನು ಅವರನ್ನು ಬಿಡಲಾರದೆ ವಿಮಾನದಲ್ಲಿ ಕೂರಿಸಿಕೊಂಡನು. ವಿಮಾನವು ಉತ್ತರ ದಿಕ್ಕಿಗೆ ಹೊರಟಿತು. ಅದು ಮೇಲಕ್ಕೆ ಹಾರಿದಾಗ ದೊಡ್ಡ ಕೋಲಾಹಲವಾಯಿತು. "ರಾಮಚಂದ್ರನಿಗೆ ಜೈ, ಸೀತಾರಾಮಲಕ್ಷ್ಮಣರಿಗೆ ಜೈ," ಎಂದು ವಾನರರು ಜೈಕಾರ ಮಾಡಿದರು. ಆ ವಿಮಾನದಲ್ಲಿ ಮಾಹೋನ್ನತವಾದ ಸುಂದರವಾದ ಸಿಂಹಾಸನವೊಂದಿತ್ತು. ಅದರ ಮೇಲೆ ಜಾನಕಿರಾಮರು ಕುಳಿತಿದ್ದರು. ಸುಮೇರು ಪರ್ವತ ಶೃಂಗದ ಮೇಲಿನ ಮೋಡಗಳಂತೆ ಅವರು ದೇದೀಪ್ಯಮಾನವಾಗಿ ಕಂಗೊಳಿಸಿದರು. ವಿಮಾನ ವೇಗವಾಗಿ ಹಾರುತ್ತಿತ್ತು. ರಾಮನು ಸೀತೆಯನ್ನು ನೋಡಿ, "ಓ ಜಾನಕೀ! ಇಗೋ ನೋಡು ಇದೇ ರಣ ಸ್ಥಳ. ಇಲ್ಲೇ ಲಕ್ಷ್ಮಣ ಮೇಘನಾದನನ್ನು ಸಂಹರಿಸಿದ್ದು," ಎಂದು ಮುಂತಾಗಿ ಯುದ್ಧ ಭೂಮಿಯನ್ನು ತೋರಿಸಿ ವಿವರಗಳನ್ನು ತಿಳಿಸುತ್ತಿದ್ದನು. ವಾನರರು ಸಮುದ್ರಕ್ಕೆ ಕಟ್ಟಿದ ಸೇತುವೆಯನ್ನೂ ತೋರಿಸಿದನು. ವಾನರರ ಪ್ರತಾಪವನ್ನು ಭಕ್ತಿ ಶ್ರದ್ಧೆಯನ್ನು ಅನೇಕ ವಿಧವಾಗಿ ವರ್ಣಿಸಿದನು. ವಿಮಾನ ಅತಿ ವೇಗವಾಗಿ ದಂಡಕಾರಣ್ಯದ ಬಳಿ ಬಂದಿತು.

ಅಲ್ಲಿ ಅಗಸ್ತ್ಯಾದಿ ಮಹಾಮುನಿಗಳ ಆಶ್ರಮಗಳ ಬಳಿ ವಿಮಾನವನ್ನಿಳಿಸಿ, ರಾಮನು ಸೀತಾಲಕ್ಷ್ಮಣ ವಾನರವೀರರ ಸಹಿತ ಅಗಸ್ತ್ಯಾದಿಗಳನ್ನು ದರ್ಶಿಸಿ ಅವರಿಗೆ ನಮಸ್ಕರಿಸಿದನು. ಅವರ ಅಪ್ಪಣೆ ಪಡೆದು ಅಲ್ಲಿಂದ ಹೊರಟು ಎಲ್ಲರೂ ವಿಮಾನವನ್ನು

ಹತ್ತಿ ಚಿತ್ರಕೂಟ ಪರ್ವತಕ್ಕೆ ಬಂದರು. ಪುನಃ ಅಲ್ಲಿ ಇಳಿದು, ಅಲ್ಲಿ ವಾಸಿಸುತ್ತಿದ್ದ ಮುನಿಗಳನ್ನು ದರ್ಶಿಸಿ ಹೊರಟರು. ಮಾರ್ಗದಲ್ಲಿ ರಾಮನು ಸೀತೆಗೆ ಕಿಷ್ಕಿಂಧಾ ನಗರವನ್ನು, ಪಾವನ ಯಮುನಾ ಗಂಗಾ ನದಿಗಳನ್ನು ತೋರಿಸಿದನು. ಸೀತೆಯು ಮನಸ್ಸಿನಲ್ಲೇ ಅವುಗಳಿಗೆ ನಮಸ್ಕರಿಸಿದಳು. ನಂತರ, ಅವರು ತೀರ್ಥರಾಜನಾದ ಪ್ರಯಾಗವನ್ನು ದರ್ಶಿಸಿದರು. ದೂರದಲ್ಲಿ ಶೋಭಾಯಮಾನವಾಗಿ ಪ್ರಕಾಶಿಸುತ್ತಿದ್ದ ಅಯೋಧ್ಯೆಯನ್ನು ಕಂಡರು. ರಾಮನ ಆಗಮನವನ್ನು ಕಂಡು ನಿಷಾದಾಧಿಪತಿ ಕೆಳಗಿನಿಂದಲೇ ನಮಿಸಿದನು. ವಿಮಾನವು ನದೀ ತೀರದಲ್ಲಿ ಇಳಿದುದನ್ನು ಕಂಡು ನಿಷಾದಾಧಿಪತಿ ಓಡಿ ಬಂದು ರಾಮನ ಪಾದಗಳ ಮೇಲೆ ಬಿದ್ದು ಆನಂದವನ್ನು ತಡೆಯಲಾಗದೆ, ಕಣ್ಣೀರು ಸುರಿಸುತ್ತಾ ರಾಮನನ್ನು ಆಲಂಗಿಸಿಕೊಂಡನು. ಸೀತಾ ರಾಮಲಕ್ಷ್ಮಣರು ನಿಷಾದಾಧಿಪತಿಯನ್ನು ಆಶೀರ್ವದಿಸಿ, ಗಂಗೆಯಲ್ಲಿ ಸ್ನಾನ ಮಾಡಿದರು.

**ಅಯೋಧ್ಯೆಯಲ್ಲಿ ಹನುಮಂತ**: ರಾಮನು ಪುಷ್ಪಕ ವಿಮಾನವನ್ನು ಕುಬೇರನ ಬಳಿಗೆ ಹಿಂದಕ್ಕೆ ಕಳಿಸಿದನು. ನಾವೆಯನ್ನು ತರಹೇಳಿ ಗಂಗೆಯ ಆಚೆಯ ತೀರವನ್ನು ಸೇರಿದರು. ಅಯೋಧ್ಯಾ ನಗರವನ್ನು ಪ್ರವೇಶಿಸಲು ಇನ್ನೂ ಒಂದು ದಿನ ಉಳಿದಿತ್ತು. ರಾಮನು ಹನುಮಂತನನ್ನು ಕುರಿತು, "ಓ ಮಹಾವೀರಾ! ನೀನು ಬ್ರಾಹ್ಮಣ ರೂಪವನ್ನು ಧರಿಸಿ, ಅಯೋಧ್ಯಾನಗರಕ್ಕೆ ಶೀಘ್ರವಾಗಿ ಹೋಗು. ನಮ್ಮ ಕ್ಷೇಮವನ್ನು ಭರತನಿಗೆ ತಿಳಿಸಿ, ಅವನ ಕ್ಷೇಮ ಸಮಾಚಾರವನ್ನು ತಿಳಿದುಕೊಂಡು ಬಾ," ಎಂದು ಹೇಳಿದನು. ಹನುಮಂತನು ಆ ಕೂಡಲೇ ಅಯೋಧ್ಯೆಗೆ ಹೊರಟನು.

ರಾಮನು ಸೀತಾಲಕ್ಷ್ಮಣ ವಾನರ ವೀರರ ಸಮೇತನಾಗಿ ಭರದ್ವಾಜಾಶ್ರಮವನ್ನು ಸೇರಿದನು. ಭರದ್ವಾಜಮುನಿ ರಾಮನನ್ನು ಬರಮಾಡಿಕೊಂಡು, ಸ್ತುತಿಸಿ ಸತ್ಕರಿಸಿದನು. ರಾಮನ ವಿಯೋಗದಿಂದ ಅಯೋಧ್ಯೆಯ ಅಬಾಲವೃದ್ಧರು, ಸ್ತ್ರೀ ಪುರುಷರು ನಿದ್ರಾಹಾರಗಳನ್ನು ಬಿಟ್ಟು ಕೃಶಿಸಿ ಹೋಗಿದ್ದರು. ನಗರದಲ್ಲೆಲ್ಲ ಅವರ ದೀನಾಲಾಪ ಕೇಳಿಸುತ್ತಿತ್ತು, ಎಲ್ಲಿದ್ದವರು ಅಲ್ಲೇ ಇದ್ದರು. ಒಬ್ಬರು ಇನ್ನೊಬ್ಬರ ಬಳಿಗೆ ಹೋಗಲು ಶಕ್ತಿಯಿಲ್ಲದೆ, ಇಷ್ಟವಿಲ್ಲದೆ, ಅಲ್ಲಲ್ಲೇ ಇದ್ದರು. ನಗರದಲ್ಲಿ ಎಲ್ಲಿ ನೋಡಿದರೂ ವಿಷಾದವೇ ಕಾಣಿಸುತ್ತಿತ್ತು. ರಾಮನು ನಗರವನ್ನು ಪ್ರವೇಶಿಸುತ್ತಿದ್ದಾನೆನ್ನುವ ವಾರ್ತೆ ನಗರದಲ್ಲೆಲ್ಲಾ ವ್ಯಾಪಿಸಿತು. ಭರತನ ಬಲಗೈ ಬಲಗಣ್ಣುಗಳು ಅದುರಿದವು. ಇನ್ನು ಒಂದು ದಿನ ಮಾತ್ರ ಉಳಿದಿದೆ ಎಂದು ಯೋಚಿಸುತ್ತಾ ರಾಮನು ಇದುವರೆಗೂ ಏಕೆ ಒಂದಾದರೂ ವಾರ್ತೆ ಕಳಿಸಲಿಲ್ಲವೋ ಎಂದು ಚಿಂತಿಸಿದನು. ಲಕ್ಷ್ಮಣನು ಎಷ್ಟು ಧನ್ಯ, ಎಷ್ಟು ಪುಣ್ಯಾತ್ಮ. ರಾಮನ ಚರಣ ಕಮಲಗಳನ್ನು ಅವನು ಸೇವಿಸುತ್ತಿದ್ದಾನಲ್ಲವೆ? ನಾನು ಕಪಟನೆಂದೂ ಕುಟಿಲನೆಂದೂ ತಿಳಿದು ನಗರವನ್ನೇ

ಬಿಟ್ಟುಹೋದನು. ಸ್ವಾಮಿಯ ಮನಸ್ಸು ಮೃದುಮಧುರ, ಅವನು ದೀನಬಂಧು, ಕೃಪಾಳು, ತಪ್ಪದೆ ನಾಳೆಯೊಳಗೆ ಅವನು ಬಂದೇ ಬರುತ್ತಾನೆ ಎಂದು ಆಲೋಚಿಸು ತ್ತಿರುವಂತೆಯೇ ಮಹಾವೀರ ಹನುಮಂತನು ಬ್ರಾಹ್ಮಣವೇಷದಲ್ಲಿ ಬಂದು ಭರತ ನಿಗೆ ಕಾಣಿಸಿಕೊಂಡನು.

ಭರತನನ್ನು ನೋಡಿ ಮಹಾವೀರನಿಗೆ ಆಶ್ಚರ್ಯವಾಯಿತು. ಅವನ ಶರೀರ ಕೃಶವಾಗಿ ಹೊಗಿತ್ತು. ಅವನ ತಲೆ ಗೂದಲು ಜಟೆಯಾಗಿತ್ತು. ಅವನ ಕಣ್ಣಂಚಿನಲ್ಲಿ ನೀರು ಸುರಿಯುತ್ತಿತ್ತು. ಅವನು ನಿರಂತರವೂ ರಾಮನಾಮವನ್ನು ಸ್ಮರಿಸುತ್ತಿದ್ದನು. ಭರತನನ್ನು ನೋಡಿ ಹನುಮಂತ ಪರಮಾನಂದ ಭರಿತನಾದನು. ಹನುಮಂತನ ಶರೀರ ಪುಲಕಿತವಾಯಿತು. ಅವನು ಬಹುವಿಧವಾಗಿ ಆಲೋಚಿಸಿ, ಅಮೃತೋಪ ಮಾನಂದ ಮಾತುಗಳನ್ನು ಭರತನ ಕಿವಿಯಲ್ಲಿ ಹಾಕಿದನು.

"ಓ ಭರತಾ! ಯಾರ ವಿಯೋಗವನ್ನು ಸಹಿಸಲಾರದೆ ಹಗಲೂ ರಾತ್ರಿಯು ನೀನು ದುಃಖಿಸುತ್ತಿದ್ದೀಯೋ ಯಾರ ಗುಣಗಣಗಳನ್ನು ಹಗಲೂ ರಾತ್ರಿಯೂ ನೀನು ಜಪಿಸುತ್ತಿದ್ದೀಯೋ ಯಾರು ದೇವತೆಗಳನ್ನೂ ಮುನಿಗಳನ್ನೂ ರಕ್ಷಿಸಿದನೋ ಯಾರು ಸರ್ವಧರ್ಮ ಪರಿಪಾಲಕನೋ ಅಂಥ ರಾಮಮೂರ್ತಿ ಸುರಕ್ಷಿತವಾಗಿ ಸೀತಾಲಕ್ಷ್ಮಣರೊಂದಿಗೆ ಇಲ್ಲಿಗೆ ಬರುತ್ತಿದ್ದಾನೆ. ಅವನು ಶತ್ರುಗಳನ್ನು ಸಂಹರಿಸಿ ದ್ದಾನೆ. ಅವನ ಪ್ರತಾಪವನ್ನು ದೇವತೆಗಳೂ ಕೊಂಡಾಡಿದರು," ಎಂದು ಆನಂದ ಬಾಷ್ಪಗಳಿಂದ ತಿಳಿಸಿದನು. ಬಾಯಾರಿ ಬಳಲಿದವನು ನೀರನ್ನು ನೋಡಿ ಆನಂದಿಸು ವಂತೆ, ಹನುಮಂತನ ಮಾತುಗಳನ್ನು ಕೇಳಿ ಭರತನು ಆನಂದಿಸಿದನು. "ಇದು ನನ್ನ ಭ್ರಮೆಯೋ? ಇಲ್ಲವೇ ಎಚ್ಚರವಿದ್ದು ನಿಜವಾಗಿಯೂ ಕೇಳುತ್ತಿದ್ದೇನೋ?" ಎಂದು ಶಂಕಿಸಿದನು. "ಅಯ್ಯೋ, ಇದು ಭ್ರಮೆ ಹೇಗಾದೀತು? ಈ ಶುಭವಾರ್ತೆ ತಂದವರು ನೀವ್ಯಾರು? ಎಲ್ಲಿಂದ ಬಂದಿರಿ?" ಎಂದು ಹನುಮಂತನನ್ನು ಆಲಂಗಿಸಿಕೊಂಡು ಆತುರದಿಂದ ಪ್ರಶ್ನಿಸಿದನು.

ಹನುಮಂತನು, "ಓ ಭರತಾ! ನಾನು ವಾಯುಪುತ್ರ. ನನ್ನ ಹೆಸರು ಹನುಮಂತ. ನೀನು ಮರೆತಿದ್ದೀಯೆ. ಆ ದಿನ ಸಂಜೀವಿನಿ ಪರ್ವತವನ್ನು ಹೊತ್ತು ಹೋಗುತ್ತಿ ದ್ದಾಗ ನೆಲಕ್ಕುರುಳಿದ ವಾನರ ನಾನೇ. ರಾಮನ ಪಾದ ಸೇವಕ," ಎಂದೊಡನೆ, ಭರತ ಆನಂದವನ್ನು ತಡೆದುಕೊಳ್ಳಲಾರದೇ ಮೈಮರೆತನು. ಕಣ್ಣುಗಳಿಂದ ಆನಂದ ಬಾಷ್ಪ ಜಳಜಳ ಸುರಿಯಿತು. ಹನುಮಂತನನ್ನು ಕುರಿತು, "ಓ ಕಪಿವರ್ಯಾ! ನನ್ನ ದುಃಖವನ್ನು ಮಂಗಮಾಯ ಮಾಡಿದೆ. ನಿನ್ನನ್ನು ನೋಡಿದೊಡನೆ ನನ್ನ ಮನಸ್ಸು ಶಾಂತವಾಯಿತು. ಏನು ಭಾಗ್ಯ ನನ್ನದು. ಈ ದಿನ ರಾಮದೂತನನ್ನು ನೋಡಿದೆ,"

ಎಂದನು. ಮಾತಿನ ಮಧ್ಯೆ, "ನನ್ನ ರಾಮಚಂದ್ರ ಕ್ಷೇಮವೆ? ನನ್ನ ತಾಯಿ ಜಾನಕಿ ಹೇಗಿದ್ದಾಳೆ?" ಎಂದು ಮತ್ತೆ ಮತ್ತೆ ವಿಚಾರಿಸಿದನು. "ಓ ವಾನರಾ! ನಿನಗೆ ನಾನೇನು ಇದಕ್ಕೆ ಪ್ರತ್ಯುಪಕಾರ ಮಾಡಬಲ್ಲೆ? ನೀನು ತಂದ ಶುಭ ವರ್ತಮಾನಕ್ಕೆ ಸಮನಾದ ಪ್ರತ್ಯುಪಕಾರ ಲೋಕದಲ್ಲಿ ಯಾವುದೂ ನನ್ನ ಬುದ್ಧಿಗೆ ತೋಚುತ್ತಿಲ್ಲ. ಆದ್ದರಿಂದ ನಾನು ನಿನ್ನ ಋಣವನ್ನು ತೀರಿಸಲಾರೆ. ರಾಮ ಹೇಗಿದ್ದಾನೆ. ಎಲ್ಲಿದ್ದಾನೆ? ಅವನ ಘನಕಾರ್ಯಗಳನ್ನು ನನಗೆ ತಿಳಿಸು," ಎಂದನು. ಅತ್ಯಂತ ಕಾತುರದಿಂದ ವಿಚಾರಿಸಿದ್ದನ್ನು ಹನುಮಂತನು ಭರತನ ಭಕ್ತಿ ಪ್ರಪತ್ತಿಗಳಿಗೆ ಆಶ್ಚರ್ಯಪಟ್ಟು ಅವನ ಪಾದಗಳಿಗೆ ನಮಸ್ಕರಿಸಿ, "ಭರತಾ! ರಾಮನು ಅಯೋಧ್ಯೆಗೆ ಸಮೀಪದಲ್ಲೇ ಇದ್ದಾನೆ, ಕೆಲವು ನಿಮಿಷಗಳಲ್ಲೇ ನೋಡುವೆ. ಆತನ ಕಾರ್ಯಗಳು ವರ್ಣನಾತೀತ. ನಿನಗೆ ತಿಳಿಯದಿದ್ದೇನಲ್ಲ. ನಿನ್ನನ್ನು ನಿರಂತರವೂ ನೆನಪು ಮಾಡಿಕೊಳ್ಳುತ್ತಲೇ ಇದ್ದನು. ನಿನ್ನಂಥ ಪುಣ್ಯಾತ್ಮ, ನಿನ್ನಂಥ ಸಕಲಗುಣ ಸಂಪನ್ನನಾದ ತಮ್ಮನು ಲೋಕದಲ್ಲಿ ಬೇರೊಬ್ಬನಿಲ್ಲವೆಂದು ಜಗನ್ನಾಥ ರಾಮನು ತನ್ನ ಶ್ರೀಮುಖದಿಂದಲೇ ಹೇಳಿದನು. ಅಂದ ಮೇಲೆ ಅದಕ್ಕೆ ವ್ಯತಿರಿಕ್ತವಾಗಿರುವುದುಂಟೆ?" ಎಂದನು.

ಅವನ ಮಾತನ್ನು ಕೇಳಿ ಭರತನು ಸಂತೋಷದಿಂದ, "ಹೌದೆ? ರಾಮನು ನನ್ನನ್ನು ಹೀಗೆ ವರ್ಣಿಸಿದನೇ? ನಾನೆಷ್ಟು ಅದೃಷ್ಟವಂತ!" ಎಂದು ಹನುಮನನ್ನು ಗಾಢವಾಗಿ ಆಲಿಂಗನ ಮಾಡಿಕೊಂಡನು. ಇನ್ನು ಕಾಲಹರಣ ಮಾಡಬಾರದೆಂದು ಹನುಮಂತನು ಭರತನ ಅಪ್ಪಣೆ ಪಡೆದು ರಾಮನ ಬಳಿಗೆ ಹೊರಟನು. ಭರತನ ಎಲ್ಲ ವೃತ್ತಾಂತವನ್ನೂ ರಾಮನಿಗೆ ತಿಳಿಸಿದನು. ಭರತನ ಎರಡು ಕಾಲುಗಳೂ ಒಂದೆಡೆ ನಿಲ್ಲಲಾರದೆ ಹೋದುವು. ತತ್ಕ್ಷಣ ನಂದೀಗ್ರಾಮದಿಂದ ಹೊರಟು ಅಯೋಧ್ಯೆಗೆ ಬಂದು ವಸಿಷ್ಠರಿಗೆ ನಮಸ್ಕರಿಸಿ, ರಾಮನ ವೃತ್ತಾಂತವನ್ನೆಲ್ಲಾ ತಿಳಿಸಿದನು. ಅಂತಃಪುರಕ್ಕೆ ಹೋಗಿ ರಾಮನು ಸೀತಾ ಲಕ್ಷ್ಮಣರೊಂದಿಗೆ ಕ್ಷೇಮವಾಗಿ ನಗರಕ್ಕೆ ಬರುತ್ತಿದ್ದಾನೆಂದು ಹರ್ಷೋದ್ಗಾರ ಮಾಡಿದನು.

**ಅಯೋಧ್ಯಾ ನಗರ ಪ್ರವೇಶ**: ಮೂವರು ರಾಣಿಯರೂ ಅದನ್ನು ಕೇಳಿ ಬೆಚ್ಚಿ, ತಟ್ಟನೆ ಎದ್ದರು, "ಈ ಶುಭವಾರ್ತೆಯನ್ನು ನಗರದಲ್ಲೆಲ್ಲಾ ಸಾರಿ," ಎಂದು ಆಜ್ಞಾಪಿಸಿದರು. ಕೆಲವೇ ಕ್ಷಣದಲ್ಲಿ ಆ ಸುದ್ದಿ ನಗರದಲ್ಲೆಲ್ಲಾ ವ್ಯಾಪಿಸಿತು. ಪ್ರಜೆಗಳು ಸ್ತ್ರೀಯರು ಬಗೆಬಗೆಯ ಪುಷ್ಪಗಳನ್ನು ದಾರಿಯಲ್ಲಿ ಹರಡಿದರು. ಭರತನು ಸುಮಂತ ಮತ್ತಿತರ ಮಂತ್ರಿಗಳನ್ನು, ಕುಲಗುರು ವಸಿಷ್ಠರನ್ನು, ಮೂವರು ತಾಯಂದಿರನ್ನು, ಪಂಡಿತರನ್ನು, ಪುರಜನರನ್ನು, ಚತುರಂಗಬಲವನ್ನು ಜೊತೆಯಲ್ಲಿಟ್ಟುಕೊಂಡು, ತಮ್ಮನಾದ ಶತ್ರುಘ್ನನ ಸಹಿತವಾಗಿ ಸಂತೋಷದಿಂದ ರಾಮದರ್ಶನಕ್ಕೆ ಹೊರಟನು. ರಾಮನನ್ನು ದರ್ಶಿಸಲು ಅನೇಕ ಪುರಸ್ತ್ರೀಯರು ಮಾಳಿಗೆಗಳನ್ನೇರಿದರು. ರಾಮನು

ಅಯೋಧ್ಯಾ ನಗರದ ಸೌಂದರ್ಯವನ್ನು ವಾನರರಿಗೆ ಹೇಳುತ್ತ ಬರುತ್ತಿದ್ದನು. "ಓ ಸುಗ್ರೀವಾ! ಓ ಅಂಗದಾ! ಓ ವಿಭೀಷಣ! ಅಯೋಧ್ಯೆ ಪರಮ ಪವಿತ್ರವಾದ, ಸುಂದರ ನಗರ ..." ಎಂದು ವರ್ಣಿಸುತ್ತಿರುವಂತೆ, ಭರತನು ಚತುರಂಗಬಲ ಸಮೇತನಾಗಿ ಎದುರುಗೊಂಡನು. ಪ್ರಜೆಗಳು, ಪಂಡಿತರು, ತಾಯಿಯರು, ಶರತ್ಕಾಲವು ಬಂದೊಡನೆ ಚಂದ್ರನನ್ನು ನೋಡಿ ಸಮುದ್ರ ಉಕ್ಕೇರುವಂತೆ ರಾಮಚಂದ್ರನನ್ನು ನೋಡಿ ಸಂತೋಷಿಸಿದರು. ಅವರ ಕೋಲಾಹಲ ಮುಗಿಲು ಮುಟ್ಟಿತು. ತಾಯಿಯರು ಹಿಡಿಸಲಾರದ ಆನಂದದಿಂದ ಮಗನನ್ನು ಆಲಂಗಿಸಿಕೊಂಡು ಮೈಮರೆತರು.

ಸೀತಾರಾಮಲಕ್ಷ್ಮಣರು ತಾಯಿಯರಿಗೆ ನಮಿಸಿದರು. ಉಭಯರ ಆನಂದಕ್ಕೆ ಪಾರವೇ ಇಲ್ಲವಾಯಿತು. ರಾಮನ ವಿಯೋಗ ದುಃಖದಿಂದ ಕಳೆಗುಂದಿದ, ಕೃಶವಾಗಿ ಭರತನನ್ನು ನೋಡಿ ರಾಮನು ಅವನನ್ನು ಪ್ರೇಮದಿಂದ ಹತ್ತಿರ ಕರೆದುಕೊಂಡು ಹಲವು ಬಗೆಯಾಗಿ ಅವನನ್ನು ವರ್ಣಿಸಿದನು. ವಸಿಷ್ಠ, ಜಾಬಾಲಿ, ವಾಮದೇವಾದಿ ಮಹರ್ಷಿಗಳನ್ನು ನೋಡಿ ಸೀತಾರಾಮಲಕ್ಷ್ಮಣರು ಅವರ ಪಾದಗಳಿಗೆ ನಮಸ್ಕರಿಸಿದರು. ಮಹಾಋಷಿಗಳಿಗೆ ಕೂಡ ರಾಮನ ದರ್ಶನದಿಂದ ಆನಂದಬಾಷ್ಪ ತಡೆಯಲಾಗಲಿಲ್ಲ. ಪಂಡಿತರು "ಶತಮಾನಂ ಭವತಿ, ಶತಮನಂತಂ ಭವತಿ, ಶತಮೈಶ್ವರ್ಯಂ ಭವತಿ, ಶತ ದೀರ್ಘಮಾಯುಃ" ಎಂದು ಮುಗಿಲು ಮುಟ್ಟುವಂತೆ ಆಶೀರ್ವದಿಸಿದರು. ಭರತ ಶತ್ರುಘ್ನರು ರಾಮನ ಚರಣಾರವಿಂದಗಳಿಗೆ ಸಾಷ್ಟಾಂಗ ದಂಡ ಪ್ರಣಾಮಗಳನ್ನಾಚರಿಸಿದರು. ರಾಮನು ಏಳಿರೆಂದು ಎಷ್ಟು ಹೇಳಿದರೂ ಪಾದಗಳ ಮೇಲೆ ಬಿದ್ದ ಸೋದರರು ಏಳದೇ ಹೋದರು. ರಾಮಲಕ್ಷ್ಮಣರು ಅವರನ್ನು ಮೇಲೆತ್ತಿ ಇಬ್ಬರು ಸೋದರರನ್ನೂ ಆಲಂಗಿಸಿಕೊಂಡು, ಒಬ್ಬರನ್ನೊಬ್ಬರು ನೋಡಿ ಕಣ್ಣುಗಳಲ್ಲಿ ಆನಂದಬಾಷ್ಪಗಳು ಬೆಳಗಿದವು. ಅಣ್ಣತಮ್ಮಂದಿರು ನಾಲ್ವರೂ ಒಂದೇ ವಿಧವಾಗಿ ಕಂಡರು. ಮೂರ್ತೀಭವಿಸಿದ ಸೌಂದರ್ಯ ರಾಶಿಗಳಾಗಿ ಕಂಡರು. ವಿಯೋಗ ದುಃಖವನ್ನು ಮರೆತು ಸಂಯೋಗಾನಂದ ಸಾಗರದಲ್ಲಿ ಮುಳುಗಿದರು.

ಆಗ ವಿಭೀಷಣ, ಸುಗ್ರೀವ, ನಲ, ನೀಲ, ಅಂಗದ ಹನುಮಂತಾದಿಗಳು ಸುಂದರವಾದ ಶರೀರಗಳನ್ನು ಧರಿಸಿದರು. ಅವರನ್ನು ನೋಡಿ ಪುರಜನರು ಬಹುವಾಗಿ ಆನಂದಿಸಿದರು. ಭರತನ ವ್ರತವನ್ನು ಸೌಶೀಲ್ಯವನ್ನು ಪುರಜನರು ಬಾಯಿ ತುಂಬಾ ಕೊಂಡಾಡಿದರು. ಪುರಜನರ ಭಕ್ತಿ ಪ್ರಪತ್ತಿಗಳನ್ನು ರಾಮನು ಬಹಳವಾಗಿ ಮೆಚ್ಚಿದನು. ವಾನರರನ್ನೂ ವಿಭೀಷಣನನ್ನೂ ಕರೆದು, ಅವರಿಗೆ ಸೋದರರನ್ನೂ ಗುರುಗಳನ್ನೂ ಪರಿಚಯ ಮಾಡಿಕೊಟ್ಟನು. ಮೂರು ತಾಯಂದಿರನ್ನೂ ಅವರಿಗೆ ಪರಿಚಯ ಮಾಡಿಕೊಟ್ಟೊಡನೆ, ಅವರು ತಾಯಿಯರಿಗೆ ನೆಲಕ್ಕೆ ಬಾಗಿ ನಮಸ್ಕರಿಸಿ

ದರು. "ಮಹಾ ಧನ್ಯರು, ಸಾಕ್ಷಾತ್ ಪರಮಾತ್ಮನನ್ನೇ ಮಗನಾಗಿ ಪಡೆದ ಪೂಜನೀಯರು ನೀವು," ಎಂದು ಅವರ ಆಶೀರ್ವಾದ ಬೇಡಿದರು. ಕೌಸಲ್ಯಾದೇವಿಯು, "ವಾನರರೇ! ನೀವು ನನ್ನ ಮಗ ರಾಮನ ಸಮಾನರು. ರಾಮನು ನಿಮ್ಮನ್ನು ಎಂದಿಗೂ ಮರೆಯದಂತೆ ಕಾಪಾಡಲಿ," ಎಂದು ಆಶೀರ್ವದಿಸಿದಳು. ಎಲ್ಲರೂ ರಥದಲ್ಲಿ ಕುಳಿತು ನಗರವನ್ನು ಪ್ರವೇಶಿಸಿದರು. ಪುರಜನರು ತಮ್ಮ ತಮ್ಮ ಮನೆಗಳ ಮುಂದೆ ಬಂಗಾರದ ಪಾತ್ರೆಗಳಲ್ಲಿ ಓಕುಳಿಯನ್ನು ತುಂಬಿ ಇಟ್ಟಿದ್ದರು. ಮನೆಗಳಿಗೆ ತೋರಣ ಕಟ್ಟಿದ್ದರು. ರಾಜಬೀದಿಗಳಲ್ಲಿ ಪನ್ನೀರು ಚೆಲ್ಲಿದರು. ಪುರಬೀದಿಗಳಲ್ಲಿ ರಾಮನ ವಿಯೋಗದಿಂದ ಬಾಡಿ ಹೋಗಿದ್ದ ಪುರಜನರ ಮುಖಗಳು, ಸೂರ್ಯೋದಯವನ್ನು ನೋಡಿದ ಕಮಲಗಳಂತೆ ಅರಳಿದವು, ಕಳಕಳ ಶೋಭಿಸಿದವು. ಅವರ ಜಯಜಯ ಧ್ವನಿ ಮುಗಿಲು ಮುಟ್ಟಿತು. ಪುರಬೀದಿಗಳಲ್ಲಿ ರಾಮನ ರಥ ಪ್ರವೇಶಿಸಿತು.

**ಮಹೋತ್ಸವ ಶೃಂಗಾರ**: ಬೀದಿಗಳು ಕಿಲಕಿಲಗುಟ್ಟಿದುವು. ಆಕಾಶದ ಚುಕ್ಕಿಗಳಂತೆ ಮಂಗಳಾರತಿಗಳು ಎಲ್ಲೆಲ್ಲಿ ನೋಡಿದರೂ ಬೆಳಗುತ್ತಿದ್ದುವು. ದಾರಿಯುದ್ದಕ್ಕೂ ಪನ್ನೀರು ಚೆಲ್ಲಿದರು, ಪುಷ್ಪವರ್ಷ ಸುರಿಸಿದರು. ಜನರ ಆನಂದ ಮೇರೆ ಮೀರಿತು. "ಹೀಗೆ ನಾಲ್ವರು ಸೊದರರೊಂದಿಗೆ, ಮೂವರು ತಾಯಂದಿರೊಂದಿಗೆ ಜಾನಕಿ ದೇವಿ ಸಹಿತವಾಗಿ ರಾಮನು ಪುರಬೀದಿಗಳಲ್ಲಿ ಹೋಗುತ್ತಿರುವುದನ್ನು ನೋಡಿದವರ ಕಣ್ಣುಗಳು ಅದೆಷ್ಟು ಧನ್ಯವೋ ಅವರೆಷ್ಟು ಪುಣ್ಯವಂತರೋ," ಎಂದು ಜನ ತಮಗೆ ತಾವೇ ಹೇಳಿಕೊಳ್ಳುತ್ತಿದ್ದರು. ರಾಮಚಂದ್ರಾದಿಗಳು ಅಂತಃಪುರವನ್ನು ಸೇರಿದೊಡನೆಯೆ ಅಂತಃಪುರದ ಸ್ತ್ರೀಯರು ಪರಿಚಾರಕರು ಮಹದಾನಂದದಿಂದ ಪಾದಗಳನ್ನು ತೊಳೆದು ಸ್ವಾಗತಿಸಿದರು. ಅರಮನೆಯನ್ನು ಸೇರಿದೊಡನೆಯೇ ವಸಿಷ್ಠರು ಬ್ರಾಹ್ಮಣರನ್ನು ಕರೆದು, ಈ ಶುಭದಿನ, ಶುಭನಕ್ಷತ್ರ ಶುಭಯೋಗ ಶುಭ ಕರಣ ಶುಭಲಗ್ನದಲ್ಲಿ ರಾಮನು ಪಟ್ಟಾಭಿಷಿಕ್ತನಾಗುವನು. ನೀವೆಲ್ಲರೂ ದಯಮಾಡಿ ಸಹಕರಿಸಬೇಕು," ಎಂದರು. ಬ್ರಾಹ್ಮಣರು, "ರಾಮಪಟ್ಟಾಭಿಷೇಕವು ಜಗನ್ಮಂಗಳದಾಯಕ. ವಿಳಂಬ ಮಾಡದೆ ಶ್ರೀರಾಮನ ಲಲಾಟಾಕ್ಕೆ ಪಟ್ಟವನ್ನು ಕಟ್ಟೋಣ," ಎಂದರು. ವಸಿಷ್ಠರು ಸುಮಂತನನ್ನು ಕರೆದು, "ಮಂತ್ರಿವರ್ಯಾ! ರಾಮನ ಪಟ್ಟಾಭಿಷೇಕ ಮಹೋತ್ಸವವಿರುವುದರಿಂದ ಚತುರಂಗ ಬರಮಾಡು," ಎಂದು ಆಜ್ಞಾಪಿಸಿದರು.

ಸುಮಂತನು ಆನಂದದಿಂದ ಉಬ್ಬಿ ಕೆಲವೇ ಕ್ಷಣಗಳಲ್ಲಿ ಅದಕ್ಕೆ ಬೇಕಾದ ಏರ್ಪಾಟುಗಳನ್ನೆಲ್ಲಾ ಮಾಡಿದನು. ಸೈನಿಕರು ಆನೆಗಳನ್ನೂ ಕುದುರೆಗಳನ್ನೂ ರಥಗಳನ್ನೂ ಅಲಂಕರಿಸಿ, ಸಿಂಹದ್ವಾರದ ಬಳಿ ತಂದು ನಿಲ್ಲಿಸಿದರು. ಪದಾತಿಗಳೂ ರಾಹುತರೂ

ಸಿಂಗರಿಸಿಕೊಂಡು ಬಿಚ್ಚುಗತ್ತಿಗಳನ್ನು ಹಿಡಿದು ಸಿಂಹದ್ವಾರದ ಮುಂದೆ ಸಾಲಾಗಿ ನಿಂತರು. ಮಂಗಳ ದ್ರವ್ಯಗಳನ್ನು ತರಲು ಸೈನಿಕರನ್ನು ನಾಲ್ಕು ದಿಕ್ಕುಗಳಿಗೂ ಕಳಿಸಿ, ಸುಮಂತನು ಬಂದು ಗುರುಚರಣಗಳಿಗೆ ನಮಸ್ಕರಿಸಿ, ಎಲ್ಲವೂ ಸಿದ್ಧವಾಗಿದೆ ಯೆಂದು ಬಿನ್ನವಿಸಿದನು. ಮಹೋತ್ಸವಕ್ಕೆ ಸಿದ್ಧವಾದ ಅಯೋಧ್ಯಾ ನಗರದ ಶೃಂಗಾರವನ್ನು ನೋಡಲು ಎರಡು ಕಣ್ಣುಗಳು ಸಾಲದು. ರಾಮಚಂದ್ರನು ಸೇವಕ ರನ್ನು ಕರೆದು ತನ್ನೊಂದಿಗೆ ಬಂದಿದ್ದ ಸುಗ್ರೀವ, ವಿಭೀಷಣ, ಅಂಗದ, ನೀಲ ನಲರಿಗೆ ಸ್ನಾನಾದಿಗಳಿಗೆ ಬೇಕಾದ ಏರ್ಪಾಟುಗಳನ್ನು ಮಾಡುವಂತೆ ಆಜ್ಞಾಪಿಸಿದನು. ಅವನ ಆಜ್ಞೆಯನ್ನು ಶಿರಸಾವಹಿಸಿ ಸೇವಕರು ನಾಲ್ಕು ದಿಕ್ಕುಗಳಿಗೂ ಧಾವಿಸಿ ಅವರಿಗೆ ಎಲ್ಲ ಅನುಕೂಲಗಳನ್ನೂ ಮಾಡಿಕೊಟ್ಟರು.

## ೩೦ ಪಟ್ಟಾಭಿಷೇಕ

**ಅಭೀಷ್ಟವು ಫಲಿಸಿತು**: ರಾಮನು ಭರತನನ್ನು ಹತ್ತಿರ ಕರೆದು, ಸ್ವಹಸ್ತದಿಂದಲೇ ಭರತನ ಜಟೆಯನ್ನು ಬಿಡಿಸಿದನು. ಮೂವರು ಅಣ್ಣತಮ್ಮಂದಿರಾದ ಭರತ, ಲಕ್ಷ್ಮಣ, ಶತ್ರುಘ್ನರ ಬಳಿ ತಾನೇ ನಿಂತು ಅವರಿಗೆ ಮಂಗಳ ಸ್ನಾನಾದಿಗಳನ್ನು ಮಾಡಿಸಿದನು. ಗುರುಗಳು ಆಜ್ಞೆ ಪಡೆದು, ತನ್ನ ಜಟೆಯನ್ನು ಬಿಚ್ಚಿಕೊಂಡು, ಮಂಗಳಸ್ನಾನ ಮಾಡಿದನು. ಇವರು ಇಲ್ಲಿ ಮಂಗಳ ಸ್ನಾನಾದಿಗಳನ್ನು ಮಾಡುತ್ತಿರುವಾಗಲೇ ಅಲ್ಲಿ ಕೌಸಲ್ಯಾದಿ ಮೂವರು ತಾಯಿಯರು, ಸೀತಾದೇವಿಗೆ ಮಜ್ಜನ ಮಾಡಿಸಿದರು. ಅವಳ ಜಟೆಯನ್ನು ಮೂವರು ಅತ್ತೆಯರೂ ಅಲಂಕರಿಸಿದರು. ಶ್ರೀಮಹಾಲಕ್ಷ್ಮಿ ಯಂತೆ ಬಂದು ಸೀತಾದೇವಿಯು ರಾಮನ ಪಾರ್ಶ್ವವನ್ನಲಂಕರಿಸಿದಳು. ಸೊಸೆ ಯನ್ನೂ ಮಗನನ್ನೂ ನೋಡಿ ಮೂವರು ತಾಯಂದಿರೂ ಬ್ರಹ್ಮಾನಂದ ಹೊಂದಿ ದರು. "ಇಂದಿಗೆ ನಮ್ಮ ಜನ್ಮ ಧನ್ಯವಾಯಿತು, ನಮ್ಮ ಅಭೀಷ್ಟ ಸಫಲವಾಯಿತು. ನಮ್ಮ ಕಣ್ಣುಗಳು ತೃಪ್ತಿಯಾದವು," ಎಂದುಕೊಂಡು, ಲಕ್ಷ್ಮೀನಾರಾಯಣರಂತೆ ಬ್ರಹ್ಮತೇಜದಿಂದ ಪ್ರಕಾಶಿಸುತ್ತಿದ್ದ ಸೀತಾ ರಾಮರನ್ನು ನೋಡಿ ಮೈಮರೆತರು. ಆನಂದವನ್ನು ಅದುಮಿಕೊಳ್ಳಲಾರದೆ ಹೋದರು. ವಸಿಷ್ಠರು ರಾಮಚಂದ್ರನ ದಿವ್ಯ ಮಂಗಳ ವಿಗ್ರಹವನ್ನು ನೋಡಿ ಭ್ರಮಿಸಿದರು, ಆನಂದಿಸಿದರು. ಈ ಮಹಾದ್ಭಾಗ್ಯ ಇಂದು ನೆರವೇರಿತು ಎಂದು ಒಳಗೊಳಗೇ ಆನಂದಿಸಿದರು. ಸೈನಿಕರನ್ನು ಕರೆದು

ರತ್ನ ಖಚಿತವಾದ ಸಿಂಹಾಸನವನ್ನು ತಂದು ಹಜಾರದಲ್ಲಿ ಇರಿಸಿರೆಂದು ಆಜ್ಞಾಪಿಸಿದರು. ಆ ಸಿಂಹಾಸನದ ಸೌಂದರ್ಯ ವರ್ಣನಾತೀತ. ಅದರ ಕಾಂತಿ ಸೂರ್ಯ ಕಾಂತಿಯಾಗಿತ್ತು, ನೋಡುವವರ ಕಣ್ಣು ಕೋರೈಸುತ್ತಿತ್ತು.

ಸೀತಾರಾಮರು ವಸಿಷ್ಠಾದಿ ಋಷಿಗಳಿಗೂ ಬ್ರಾಹ್ಮಣರಿಗೂ ತಾಯಿಯರಿಗೂ ನಮಸ್ಕರಿಸಿ, ಪುರಜನರಿಗೂ ಹಿರಿಯರಿಗೂ ಸಭೆಗೂ ನಮಸ್ಕರಿಸಿ ಸಿಂಹಾಸನವನ್ನೇರಿದರು. ಅವರೀರ್ವರನ್ನು ನೋಡಿ ಋಷಿಮುನಿಗಳೂ ಮಹಾನುಭಾವರೂ ಪ್ರಜೆಗಳೂ ಸಂತೋಷಿಸಿದರು. ಬ್ರಾಹ್ಮಣರು ವೇದಮಂತ್ರಗಳನ್ನು ಪಠಿಸಿದರು. ಪ್ರಜೆಗಳು ಮುಗಿಲು ಮುಟ್ಟುವಂತೆ ಜಯ ಜಯಕಾರ ಮಾಡಿದರು. ವೈಶಾಖ ಬಹುಳ ಸಪ್ತಮಿಯಂದು ರಾಮಚಂದ್ರನು ಪಟ್ಟಭದ್ರನಾದನು. ಬ್ರಾಹ್ಮಣರ ಅಪ್ಪಣೆ ಪಡೆದು ವಸಿಷ್ಠರು ರಾಮನ ಲಲಾಟಕ್ಕೆ ಪಟ್ಟಕಟ್ಟಿದರು. ಕೌಸಲ್ಯೆಯು ಮತ್ತೆ ಮತ್ತೆ ಕುಮಾರನನ್ನು ನೋಡುತ್ತಾ ಪರಮಾನಂದ ಭರಿತಳಾದಳು. ಇನ್ನು, ಸೋದರರಾದ ಭರತ ಲಕ್ಷ್ಮಣ ಶತ್ರುಘ್ನರ ಆನಂದಕ್ಕೆ ಅಂತ್ಯವೇ ಇಲ್ಲ. ಅವರು ಚಾಮರ ಛತ್ರಗಳನ್ನು ಹಿಡಿದು ಸೀತಾರಾಮರಿಗೆ ಸೇವೆ ಮಾಡಲು ನಿಂತರು. ಇಂಥ ಭಾಗ್ಯ ನಮಗಿಂದು ಫಲಿಸಿತೆಂದು ಪರಮಾನಂದ ಹೊಂದಿದರು. ದೇವತೆಗಳು ಆಕಾಶದಲ್ಲಿ ದುಂದುಭಿಯನ್ನು ಮೊಳಗಿದರು. ಗಂಧರ್ವರು ಹಾಡಿದರು. ಅಪ್ಸರೆಯರು ನಾಟ್ಯವಾಡಿದರು. ವಿಭೀಷಣ, ಸುಗ್ರೀವ, ಅಂಗದ, ಹನುಮಂತ, ಜಾಂಬವಂತ, ನಲ, ನೀಲ, ದಧಿಮುಖ, ದ್ವಿವಿಧ, ಮೈಂದ ಮೊದಲಾದ ವಾನರ ಪ್ರಮುಖರೆಲ್ಲರೂ ಧನುರ್ಬಾಣಗಳನ್ನೂ ಕತ್ತಿಗಳನ್ನು, ಶಕ್ತಿ ತೋಮರಗಳನ್ನು ಧರಿಸಿ ಎರಡು ಕಡೆಯೂ ಸಾಲಾಗಿ ವಿನಯ ವಿಧೇಯತೆಗಳಿಂದ ಕುಳಿತು ಆನಂದಿಸಿದರು.

**ಹನುಮಂತನಿಗೆ ರತ್ನಮಾಲೆ**: ಎಡ ಪಾರ್ಶ್ವದ ಸೀತೆಯೊಂದಿಗೆ ಕೂಡಿ ರಾಮನು ಸಿಂಹಾಸನದಲ್ಲಿ ಕುಳಿತು, ಕೋಟಿ ಮನ್ಮಥರ ಲಾವಣ್ಯವನ್ನು ಅಪಹರಿಸಿದ್ದನೊ ಎನ್ನುವಂತೆ ಕಂಗೊಳಿಸುತ್ತಿದ್ದನು. ಆ ರಘುಕುಲ ತಿಲಕನನ್ನು ನೋಡಿ ದೇವತೆಗಳು, ಋಷಿಗಳು ಮೋಹಗೊಂಡರು. ರಾಮನು ಕನಕಾಂಬರ ಕೇಯೂರಗಳನ್ನು ಮಕರ ಕುಂಡಲಗಳನ್ನು ಧರಿಸಿ ತ್ರಿಜಗನ್ಮೋಹನಾಕಾರದಿಂದ ಪ್ರಕಾಶಿಸಿದನು. ಅದನ್ನು ನೋಡಿದವರೇ ಪುಣ್ಯವಂತರು. ಪೂರ್ವದಲ್ಲಿ ಸಮುದ್ರನು ರಾವಣನಿಗೆ ಒಂದು ರತ್ನಮಾಲೆಯನ್ನು ಬಹುಮಾನವಿತ್ತಿದ್ದನು. ವಿಭೀಷಣನು ಆ ಮಾಲೆಯನ್ನು ಹಿಡಿದೆದ್ದು, ಸೀತಾರಾಮರ ಬಳಿಗೆ ಹೋಗಿ ಶಿರಬಾಗಿ ನಿಂತು ಅದನ್ನು ಸೀತಾದೇವಿಗೆ ಅರ್ಪಿಸಿದನು. ಸೀತಾದೇವಿಯು ಅದನ್ನು ಸ್ವೀಕರಿಸಿದಳು. ಆ ಮಾಲೆಯ ಕಾಂತಿ ಸಭಾಭವನವನ್ನೆಲ್ಲಾ ಫಳಫಳ ಹೊಳೆಯುವಂತೆ ಮಾಡಿತು. ಅವಳು ರಾಮನ ಮುಖವನ್ನು ನೋಡಿದಳು. ಅವಳ ಅಂತರಂಗವನ್ನು ಗ್ರಹಿಸಿದ ರಾಮನು, "ಸೀತಾ!

ಈ ಸಭಿಕರಲ್ಲಿ ಯಾರ ಮೇಲೆ ನಿನಗೆ ಪ್ರೀತಿ ಇರುವುದೋ ಅವರಿಗೆ ಇದನ್ನು ಬಹುಮಾನವಾಗಿ ಕೊಡು," ಎಂದನು. ಸೀತೆಯು ಕ್ಷಣಕಾಲ ಯೋಚಿಸಿ ಹನುಮಂತನ ಕಡೆ ನೋಡಿದಳು. ಹನುಮಂತನು ಅವಳ ಕೃಪಾದೃಷ್ಟಿಯನ್ನು ನೋಡಿ, ತಟ್ಟನೆ ಎದ್ದು ಬಂದು ಅವಳೆದುರು ನಿಂತನು. ಸೀತೆ ತನ್ನ ಕೈಗಳಿಂದಲೇ ಆ ಹಾರವನ್ನು ಹನುಮಂತನಿಗಿತ್ತಳು. ಹನುಮಂತನು ಅದನ್ನು ತಿರುಗಿಸಿ ತಿರುಗಿಸಿ ಅದರ ಪ್ರಕಾಶವನ್ನು ಎಲ್ಲ ಕಡೆಯಿಂದ ತಿರುಗಿಸಿಕೊಂಡು ನೋಡುತ್ತಾ ಅಮಿತಾನಂದದಿಂದ, ಇದರಲ್ಲಿ ಏನು ವಿಶೇಷವಿದೆಯೊ ನೋಡಬೇಕು ಎಂದು ಪರೀಕ್ಷಿಸ ತೊಡಗಿದನು. ಹಾರವನ್ನು ಕಿತ್ತು ಒಂದೊಂದೇ ರತ್ನವನ್ನು ತೆಗೆದು ಹಲ್ಲಿನಿಂದ ಕಡಿದು ತುಂಡು ಮಾಡಿ, ಚೂರುಗಳನ್ನು ಕಿವಿಯಲ್ಲಿ ಇಟ್ಟುಕೊಂಡು ಆಲಿಸಿ, ಬಿಸಾಡುತ್ತಿದ್ದನು. ಈ ವಿಚಿತ್ರವನ್ನು ನೋಡಿ ಸಭಿಕರು ನಿಶ್ಚೇಷ್ಟಿತರಾದರು. ಯಾವ ರತ್ನದಲ್ಲೂ ಏನೂ ಇಲ್ಲವೆಂದು ಎಲ್ಲವನ್ನೂ ಕೆಳಕ್ಕೆ ಬಿಸಾಡಿದನು. ಆ ಸಭೆಯಲ್ಲಿ ಅವನನ್ನು ತಡೆಯುವವರು ಯಾರೂ ಇರಲಿಲ್ಲ. ಎಲ್ಲರೂ ತಮ್ಮತಮ್ಮೊಳಗೇ ಗುಸುಗುಸು ಮಾತಾಡಿಕೊಂಡರು.

"ಸೀತಾದೇವಿ ಅಷ್ಟೊಂದು ಪ್ರೇಮದಿಂದ ಕೊಟ್ಟ ಬೆಲೆಬಾಳುವ ರತ್ನಹಾರವನ್ನು ಹೀಗೆ ಹಾಳುಮಾಡಿತಲ್ಲಾ ಈ ಕೋತಿ!" ಎಂದು ತಮ್ಮೊಳಗೇ ಹನುಮಂತನನ್ನು ಬೈದರು. ಆದರೆ ಹೊರಗೆ ಹೇಳದಾದರು. "ಎಂತಹ ಬೆಲೆಬಾಳುವ ರತ್ನಹಾರವನ್ನು ಹನುಮಂತನು ಹೀಗೆ ಹಾಳು ಮಾಡಿದನಲ್ಲಾ! ನನ್ನ ಹಾರಕ್ಕೆ ಇಂಥ ದುರವಸ್ಥೆಯಾಯಿತೇ!" ಎಂದು ವಿಭೀಷಣ ಕೂಡ ಒಳಗೊಳಗೇ ಬಹಳ ವ್ಯಥೆಪಟ್ಟನು. ಸಭೆಯಲ್ಲಿದ್ದವರೆಲ್ಲರಿಗೂ ಇದರಿಂದ ತುಂಬಾ ಬೇಸರವಾಯಿತು, ಅಸಂತೃಪ್ತಿ ಉಂಟಾಯಿತು. ಅವರಲ್ಲಿ ಒಬ್ಬ ರಾಜನು ಧೈರ್ಯ ಮಾಡಿ, ಎದ್ದು ನಿಂತು, "ಓ ಮಹಾವೀರಾ! ಆ ರತ್ನಮಾಲೆಯನ್ನೇಕೆ ಕಿತ್ತು ಹಾಕಿದೆ? ಇದು ನಿನಗೆ ಸರಿಯೆ? ಇದರ ಅಂತರಾರ್ಥವೇನೋ ನಮಗೆ ತಿಳಿಸಿ, ನಮ್ಮನ್ನು ಸಮಾಧಾನಪಡಿಸು," ಎಂದು ಕೇಳಿದನು. ಅದಕ್ಕೆ ಹನುಮಂತನು, "ಓ ರಾಜಾ! ಈ ನೀಲ ಮಾಣಿಕ್ಯಗಳಲ್ಲಿ ಪವಿತ್ರವಾದ ರಾಮನಾಮವಿದೆಯೋ ಇಲ್ಲವೋ ನೋಡೋಣವೆಂದು ಹಾಗೆ ಮಾಡಿದೆ. ಅವುಗಳಲ್ಲಿ ರಾಮನಾಮವಿಲ್ಲ. ರಾಮನಾಮವಿಲ್ಲದ ರತ್ನಗಳು ಕಲ್ಲು ಸಮಾನವೆಂದು ಬಿಸಾಡಿದೆ, ಅಷ್ಟೆ," ಎಂದು ಉತ್ತರವಿತ್ತನು.

ಆ ರಾಜನು, "ಅಯ್ಯೋ! ಹನುಮಂತಾ! ಪ್ರತಿ ವಸ್ತುವಿನಲ್ಲೂ ರಾಮನಾಮವಿರಬೇಕೆನ್ನುವ ನಿನ್ನ ಅಭಿಪ್ರಾಯ ಅಸಾಧ್ಯವಾದುದಲ್ಲವೆ?" ಎಂದು ವಾದಿಸಿದನು. ಹನುಮಂತನು, "ರಾಮನಾಮವಿಲ್ಲದ ಪದಾರ್ಥದಿಂದ ಲಾಭವೇನು? ಅಂಥ ಪದಾರ್ಥವೇ ನನಗೆ ಬೇಕಿಲ್ಲ," ಎಂದು ರಾಜನ ವಾದವನ್ನು ಖಂಡಿಸಿದನು.

ಆಗ, ರಾಜನು, "ಹನುಮಂತಾ! ಒಳ್ಳೆಯದು, ರಾಮನಾಮವಿಲ್ಲದ್ದನ್ನು ನೀನು ಧರಿಸುವುದಿಲ್ಲ ಮತ್ತು ಸಹಿಸುವುದಿಲ್ಲ ಅಲ್ಲವೇ? ಹಾಗಾದರೆ, ನಿನ್ನ ಶರೀರದಲ್ಲಿ ರಾಮನಾಮವಿದೆಯೇ? ಅದನ್ನು ನೀನು ತೋರಿಸಿಕೊಡಬಲ್ಲೆಯಾ?" ಎಂದು ಸವಾಲು ಹಾಕಿದನು. ಹನುಮಂತನು ನಕ್ಕು, "ಕೇಳು," ಎಂದು ತನ್ನ ದೇಹದಿಂದ ಒಂದು ಕೂದಲನ್ನು ಕಿತ್ತು, ಅದನ್ನು ರಾಜನ ಕಿವಿಯ ಬಳಿ ಹಿಡಿದನು. ಅದು 'ರಾಮ', 'ರಾಮ' ಎಂದು ಉಚ್ಚರಿಸುತ್ತಿದ್ದುದನ್ನು ಕೇಳಿ ರಾಜನು ಪರಮಾಶ್ಚರ್ಯ ದಿಂದ ಹನುಮಂತನಿಗೆ ನಮಸ್ಕರಿಸಿ, ತನ್ನನ್ನು ಕ್ಷಮಿಸುವಂತೆ ಪ್ರಾರ್ಥಿಸಿದನು.

**ನನ್ನನ್ನು ನಾನೇ ಕೊಡಲಿಚ್ಛಿಸುತ್ತೇನೆ**: ರಾಮಚಂದ್ರನು ಹನುಮಂತನನ್ನು ತಬ್ಬಿಕೊಂಡು, "ಹನುಮಂತಾ, ನಾನು ನನ್ನ ಪಟ್ಟಾಭಿಷೇಕ ಸಮಯದಲ್ಲಿ ನಿನಗೇನು ಬಹುಮಾನ ಕೊಡಬಲ್ಲೆ? ನಿನಗೆ ಕೊಡಬಹುದಾದ ಬಹುಮಾನ ನನ್ನ ಬಳಿ ಯಾವುದೂ ಇಲ್ಲ. ನನ್ನನ್ನೇ ನಿನಗೆ ಕೊಡುತ್ತೇನೆ, ತೆಗೆದುಕೊ," ಎಂದು ತನ್ನ ದೇಹವನ್ನು ಹನುಮಂತನ ಬಾಹುಗಳಿಗೆ ಅರ್ಪಿಸಿದನು. ಈ ದೃಶ್ಯವನ್ನು ನೋಡಿ ಸಭಿಕರು ಜಯ ಜಯ ಧ್ವನಿ ಮಾಡಿದರು. ಹನುಮಂತನಂಥ ವ್ಯಕ್ತಿ ಲೋಕದಲ್ಲಿಲ್ಲವೆಂದು ಕೊಂಡಾಡಿದರು. ಹನುಮಂತನ ಭಕ್ತಿ ಪ್ರಪತ್ತಿಗಳನ್ನು ವರ್ಣಿಸಿದರು. ರಾಮನು ಸಭೆಯಿಂದ ಹೊರಟು, ಹೊರಗೆ ರಾಮದರ್ಶನಕ್ಕಾಗಿ ಕಿಕ್ಕಿರಿದು ನೆರೆದಿದ್ದ ಜನರಿಗೆ ತನ್ನ ಮಂಗಳ ಸ್ವರೂಪದ ದರ್ಶನ ಮಾಡಿಸಿದನು. ಜನರು ಆ ಸುಂದರ ಸ್ವರೂಪನನ್ನು ನೋಡಿ ಬ್ರಹ್ಮಾನಂದ ಹೊಂದಿದರು. ಪರಿವಾರದವರು ಬಂದವರಿಗೆಲ್ಲಾ ಭೋಜನಾದಿಗಳ ಏರ್ಪಾಟು ಮಾಡಿದರು. ಹೇರಳವಾಗಿ ಧನ, ಕನಕ, ವಸ್ತುವಾಹನಾದಿಗಳನ್ನೂ ಗೃಹಗಳನ್ನೂ ವಸ್ತ್ರಗಳನ್ನೂ ದಾನ ಮಾಡಿದರು. ಈ ವೈಭವವನ್ನು ನೋಡಿ ವಾನರರೂ ವಿಭೀಷಣನೂ ಪರಮಾನಂದದಲ್ಲಿ ಮುಳುಗಿದರು. ಆರು ತಿಂಗಳ ಕಾಲ ಹಗಲು ರಾತ್ರಿ ಎನ್ನದೆ ವಾನರರು ಮತ್ತು ವಿಭೀಷಣ ರಾಮನನ್ನು ಸೇವಿಸಿದರು. ಅವರ ದೃಷ್ಟಿಯಲ್ಲಿ ಆರು ತಿಂಗಳು ಒಂದು ದಿನದಂತೆ ಕಳೆದು ಹೋಯಿತು. ಅವರು ತಮ್ಮ ಮನೆಗಳನ್ನೂ, ರಾಜ್ಯಗಳನ್ನೂ ಮರೆತು ರಾಮನನ್ನು ಸೇವಿಸುತ್ತಿದ್ದರು.

**ಬೀಳ್ಕೊಟ್ಟನು**: ಕಡೆಗೆ, ಒಂದು ದಿನ ರಾಮನು ಸಖರೆಲ್ಲರನ್ನೂ ಹಜಾರದಲ್ಲಿ ಸಮಾವೇಶಗೊಳಿಸಿ, ಅವರನ್ನು ಉಚಿತಾಸನದಲ್ಲಿ ಕುಳ್ಳಿರಿಸಿ, ಮೃಧು ಮಧುರ ವಚನಗಳಿಂದ, "ಓ ಸಖರೇ! ನೀವು ನನಗಾಗಿ ವಿಶೇಷವಾಗಿ ಶ್ರಮಪಟ್ಟಿರಿ, ನಿಮ್ಮೆದುರು ನಿಮ್ಮನ್ನು ಹೊಗಳುವುದು ಸಂಭಾವಿತವಲ್ಲ. ನಿಮ್ಮ ಮನೆಗಳನ್ನು, ನಿಮ್ಮ ಹೆಂಡತಿ ಮಕ್ಕಳನ್ನು, ಆಸ್ತಿ ಪಾಸ್ತಿಗಳನ್ನು ಬಿಟ್ಟು, ನನಗಾಗಿ ಪಾಡುಪಟ್ಟಿರಿ. ನನಗೆ ನಿಮಗಿಂತ ಬೇರೆ ಮಿತ್ರರಿಲ್ಲ. ಎಂತಲೇ, ನಿಮ್ಮಲ್ಲಿ ನನಗೆ ವಿಶೇಷ

ದಯೆ, ಪ್ರೇಮ ಇದೆ. ನನ್ನ ತಂದೆತಾಯಿಗಳಿಗಿಂತ, ನನ್ನ ಸೋದರರಿಗಿಂತ, ನನ್ನ ರಾಜ್ಯಕ್ಕಿಂತ, ನನ್ನ ಪ್ರಜೆಗಳಿಗಿಂತ, ಕಡೆಗೆ, ನನ್ನ ಜಾನಕಿಗಿಂತ ನೀವೇ ನನಗೆ ಪ್ರಿಯರು. ಇದು ನನ್ನ ನಿಶ್ಚಯವು, ಆದ್ದರಿಂದ, ನೀವು ನಿಮ್ಮ ನಿಮ್ಮ ಮನೆಗಳಿಗೆ ಹೋಗಿ ನನ್ನನ್ನು ನಿಮ್ಮ ಹೃದಯದಲ್ಲಿ ಪ್ರತಿಷ್ಠಾಪಿಸಿಕೊಂಡು ಭಕ್ತಿ ಶ್ರದ್ಧೆಯಿಂದ ಸೇವಿಸಿರಿ. ನಿಮ್ಮ ಜೊತೆಯಲ್ಲೇ ನಿಮ್ಮ ಮನೆಯಲ್ಲೇ ನಿಮ್ಮ ಕಣ್ಮುಂದೆಯೇ ಇದ್ದು ಕಾಣಿಸಿಕೊಳ್ಳುವೆನು, ಕರುಣಿಸುವೆನು," ಎಂದು ಹೇಳಿದನು. ಅಂತಹ ದಯಾ ಪ್ರೇಮ ವಚನಗಳನ್ನಾಡಿದ ರಾಮಚಂದ್ರನನ್ನು ನೋಡಿ ವಿಭೀಷಣನೂ ವಾನರರೂ ತಮ್ಮ ದೇಹಗಳನ್ನು ಮರೆತರು. ನಾವೆಲ್ಲಿದ್ದೇವೆ ಎನ್ನುವುದೇ ಅವರಿಗೆ ಮರೆತು ಹೋಯಿತು. ನೆಟ್ಟ ಕಣ್ಣಿನಿಂದ ರಾಮನನ್ನು ನೋಡುತ್ತಾ ಕಣ್ಣೀರು ಸುರಿಸುತ್ತಾ ನಿಂತಿದ್ದರು. ಒಂದು ಮಾತನ್ನೂ ಆಡದಾದರು, ತುಟಿಗಳು ಅದುರುತ್ತಿದ್ದವು. ರಾಮಾಜ್ಞೆಯಂತೆ ಸೇವಕರು ದಿವ್ಯಾಭರಣಗಳನ್ನೂ ವಸ್ತ್ರಗಳನ್ನೂ ತಂದಿರಿಸಿದರು. ರಾಮನು ಅವುಗಳನ್ನು ಲಕ್ಷ್ಮಣ ಭರತ ಶತ್ರುಘ್ನರಿಗಿತ್ತು, "ಈ ವಾನರರನ್ನು ನೀವೇ ಅಲಂಕರಿಸಿ," ಎಂದು ಆಜ್ಞಾಪಿಸಿದನು. ಅವರು ರಾಮಾಜ್ಞೆಯಂತೆ ವಾನರ ವೀರರಿಗೆ ಮತ್ತು ವಿಭೀಷಣನಿಗೆ ಪೀತಾಂಬರಗಳನ್ನುಡಿಸಿ ಅಲಂಕರಿಸಿದರು. ಆಭರಣಗಳನ್ನು ಹಾಕಿದರು. ಆದರೆ, ಸ್ತಂಭಿಸಿ ನಿಂತ ವಾನರರು ಏನು ಮಾಡಿದರೂ ಕದಲದೆ, ಕಣ್ಣೀರು ಸುರಿಸುತ್ತಿದ್ದರು. ಅವರ ದೃಷ್ಟಿ ರಾಮನ ಪಾದಗಳ ಮೇಲೆ ಕೇಂದ್ರೀಕರಿಸಿತ್ತು. ಬೇರೆನೂ ಮಾಡುವುದು ಸಾಧ್ಯವಿಲ್ಲದೆ, ತಲೆಬಗ್ಗಿಸಿ ಎಲ್ಲರೂ ನಮಸ್ಕರಿಸಿದರು.

**ಪ್ರೇಮ ವಚನಗಳು**: ರಾಮನು ಅವರನ್ನು ಒಬ್ಬೊಬ್ಬರನ್ನಾಗಿ ಮೇಲೆತ್ತಿ, ಆಲಂಗಿಸಿಕೊಂಡು, "ಓ ವಾನರರೇ! ಮಿತ್ರರೇ! ನಿಮಗೆ ನನ್ನ ಸಾರೂಪ್ಯ ಮುಕ್ತಿಯನ್ನಿತ್ತಿದ್ದೇನೆ. ಸ್ವಲ್ಪಕಾಲ ಭೂಮಿಯಲ್ಲಿ ನೀವು ನಿಮ್ಮ ನಿಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾ ಬಾಧ್ಯತೆಗಳನ್ನು ನೋಡಿಕೊಳ್ಳುತ್ತಾ ರಾಜ್ಯ ಪರಿಪಾಲನೆ ಮಾಡುತ್ತಿರಿ. ರಾಜಸುಖವನ್ನು ಅನುಭವಿಸುತ್ತಿರಿ," ಎಂದು ಅವರಿಗೆ ಹಿತವಚನ ಹೇಳಿ ಕಳುಹಿಸಿದನು. ಭರತ ಶತ್ರುಘ್ನರು ವಾನರರ ಭಕ್ತಿಯನ್ನು ಮೆಚ್ಚಿದರು. ರಾಮಾಜ್ಞೆಯಂತೆ ಅವರನ್ನು ಬೀಳ್ಕೊಡಲು ಲಕ್ಷ್ಮಣ, ಭರತ, ಶತ್ರುಘ್ನರು ಹೋದರು. ವಾನರರು ರಥಗಳಲ್ಲಿ ಕುಳಿತು, ಕಣ್ಣೀರಿಡುತ್ತಾ ಹಿಂತಿರುಗಿ ಅಯೋಧ್ಯೆಯನ್ನು ನೋಡುತ್ತಾ ಹೋಗುತ್ತಿದ್ದರು. ಲಕ್ಷ್ಮಣ ಭರತ ಶತ್ರುಘ್ನರು ಅವರ ಬಾಧೆಯನ್ನು ನೋಡಲಾರದೆ ಹೋದರು. ಅವರ ಭಾವನೆಯ ಅಂತರಾರ್ಥವನ್ನು ತಿಳಿದು, ಸಾವಿರ ರೀತಿಯಲ್ಲಿ ಅವರನ್ನು ಹೊಗಳಿದರು. ನದಿಯನ್ನು ದಾಟಿಸಿ ಲಕ್ಷ್ಮಣ, ಭರತ, ಶತ್ರುಘ್ನರು ಮತ್ತೆ ಅಯೋಧ್ಯೆಯನ್ನು ಸೇರಿದರು. ಅವರೊಂದಿಗೆ ಹನುಮಂತನು ಹಿಂದಿರುಗಿ ಬಂದನು.

ಹನುಮಂತನು ಹತ್ತು ದಿನಗಳು ಅಯೋಧ್ಯೆಯಲ್ಲಿದ್ದು ರಾಮನನ್ನು ಸೇವಿಸಲು ಅಪ್ಪಣೆ ಕೊಡಬೇಕೆಂದು ಸುಗ್ರೀವನನ್ನು ಅಂಗಲಾಚಿದನು. ಎಷ್ಟು ಬೇಡವೆಂದರೂ ಬಿಡದೆ, ಅವನ ಅಪ್ಪಣೆ ಪಡೆದು ಲಕ್ಷ್ಮಣ ಭರತ ಶತ್ರುಘ್ನರೊಡನೆ ಅಯೋಧ್ಯೆ ಸೇರಿದನು.

**ಭರತನ ಬಿನ್ನಹ**: ಒಂದು ದಿನ, ಅಯೋಧ್ಯೆಯಲ್ಲಿ ರಾಮನು ಸಹೋದರ ರೊಂದಿಗೂ ಪ್ರಿಯನಾದ ಹನುಮಂತನೊಂದಿಗೂ ಕೂಡಿ ಒಂದು ಉದ್ಯಾನ ವವನ್ನು ನೋಡಲು ಹೊರಟನು. ಆ ವನವು ಫಲ ಪುಷ್ಪಗಳಿಂದ ತುಂಬಿತ್ತು. ಅಲ್ಲಿ ರಾಮನು ಒಂದು ಉನ್ನತಾಸನದ ಮೇಲೆ ಕುಳಿತನು. ಅವನ ಅಕ್ಕ ಪಕ್ಕಗಳಲ್ಲಿ ಸೋದರರು ಕುಳಿತರು. ಅವರು ರಾಮನನ್ನು ಏನೋ ಪ್ರಶ್ನೆಮಾಡಲು ಬಯಸಿ ಸಂಕೋಚಪಡುತ್ತಿದ್ದರು. ಅವರು ಹನುಮಂತನನ್ನು ನೋಡಿ, ಅವರ ಮನೋ ಭಾವವನ್ನು ಆತನಿಗೆ ತಿಳಿಸಿದರು. ಹನುಮಂತನು ಪ್ರಶ್ನಿಸಿದರೆ ರಾಮನು ಖಂಡಿತ ಉತ್ತರಿಸುವನೆಂದು ಭಾವಿಸಿದರು. ಸರ್ವಾಂತರ್ಯಾಮಿಯಾದ ಶ್ರೀರಾಮನು ಅದನ್ನು ತಿಳಿದು, "ಹನುಮಂತಾ! ಏನು ಕೇಳಬೇಕೆಂದಿರುವೆಯೋ ಕೇಳು," ಎಂದನು. ಹನುಮಂತನು, "ಓ ದೀನ ರಕ್ಷಕಾ! ಭರತನು ನಿಮ್ಮನ್ನೊಂದು ಪ್ರಶ್ನೆ ಕೇಳಬೇಕೆಂದಿದ್ದಾನೆ. ಆದರೆ, ಕೇಳಲು ನಾಚುತ್ತಿದ್ದಾನೆ," ಎಂದು ಕೈ ಜೋಡಿಸಿ ಬಿನ್ನವಿಸಿದನು. ರಾಮನು "ಓ ವಾಯುಪುತ್ರಾ! ನನ್ನ ಸ್ವಭಾವ ನಿನಗೆ ತಿಳಿದಿದೆಯ ಲ್ಲವೆ? ನನಗೂ ಭರತನಿಗೂ ಯಾವ ಭೇದವೂ ಇಲ್ಲ. ಪ್ರಶ್ನೆ ಕೇಳಲು ಅನುಮಾನಿಸು ವುದೇಕೆ?" ಎಂದನು. ರಾಮನ ವಚನಗಳನ್ನು ಕೇಳಿ ಭರತನು ಅವನ ಪಾದಗಳಿಗೆ ನಮಸ್ಕರಿಸಿ, "ಓ ಪ್ರಣತಾರ್ಥಿಹರಾ, ಕೇಳು, ನನ್ನ ತಪ್ಪುಗಳನ್ನು ಕ್ಷಮಿಸಿ, ನನ್ನನ್ನು ರಕ್ಷಿಸು. ನನಗೆ ಯಾವ ಸಂದೇಹವೂ ಇಲ್ಲ, ಸ್ವಪ್ನದಲ್ಲೂ ನನಗೆ ಶೋಕ ಮೋಹ ಗಳಿಲ್ಲ. ಇದೆಲ್ಲವೂ ನಿನ್ನ ಕರುಣಾ ಕಟಾಕ್ಷ. ಓ ಸ್ವಾಮಿ! ನೀನು ಸಕಲ ಗುಣಸಂಪನ್ನನು. ಸತ್ಪುರುಷರಿಗೂ ದುರ್ಮಾರ್ಗಿಗಳಿಗೂ ಇರುವ ವ್ಯತ್ಯಾಸವನ್ನು ನಾನು ತಿಳಿಯಬೇಕೆಂದಿದ್ದೇನೆ, ವಿವರಿಸಿ ಹೇಳು," ಎಂದು ಪ್ರಾರ್ಥಿಸಿದನು. ರಾಮನು ಹೇಳಲಾರಂಭಿಸಿದನು.

**ಸತ್ಪುಷರು**: "ತಮ್ಮಾ! ವೇದಪುರಾಣಗಳಲ್ಲಿ ಹೇಳಿರುವ ಸತ್ಪುರುಷರ ಗುಣ ಗಳು ಅನಂತ. ಗಂಧದ ಮರಕ್ಕೂ ಕೊಡಲಿಗೂ ಯಾವ ಸಂಬಂಧವಿದೆಯೋ ಸತ್ಪುರುಷರಿಗೂ ದುರ್ಮಾರ್ಗಿಗಳಿಗೂ ಅದೇ ಸಂಬಂಧ. ನೋಡು! ಕೊಡಲಿ ಗಂಧದ ಮರವನ್ನು ಕಡಿಯುವುದು. ಆದರೂ ಗಂಧದ ಮರ ತನ್ನ ಸುಗಂಧವನ್ನು ಕೊಡಲಿಗೂ ಕೊಡುವುದು. ತನ್ನ ಪ್ರಾಣವನ್ನು ತೆಗೆಯಲು ಬಂದವನಿಗೂ ಸಹ ಅದು ಸುಗಂಧ ಕೊಡುವುದು. ಆದ್ದರಿಂದಲೇ ಶ್ರೀಗಂಧ ಸರ್ವಜನ ಸಮ್ಮತ

ವಾದುದು. ದೇವತೆಗಳು ಅದನ್ನು ಶಿರಸ್ಸಿನಲ್ಲಿ ಧರಿಸುವರು. ಆದರೆ, ಸುಗಂಧ ವಿತ್ತ ಮರಕ್ಕೆ ಅಪಕಾರ ಮಾಡಿದ ಕೊಡಲಿಯ ಪಾಡು ನೋಡಿ! ಅದನ್ನು ಬೆಂಕಿಯಲ್ಲಿ ಹಾಕಿ ಕಾಯಿಸಿ ಸುತ್ತಿಗೆಯಿಂದ ಬಡಿಯುವರು. ಹೀಗೇ, ದುಷ್ಟರು ಸತ್ಪುರುಷರಿಗೆ ದುಃಖ ಕೊಡುವರು. ಆದರೂ ಸತ್ಪುರುಷರು ಪ್ರತಿಯಾಗಿ ಅವರಿಗೆ ಉಪಕಾರವನ್ನೇ ಮಾಡುವರು. ಇದರ ಫಲ, ಸತ್ಪುರುಷರು ಸ್ವರ್ಗಕ್ಕೆ ಹೋಗುವರು. ಅಂದರೆ, ನಿರಂತರವೂ ಆನಂದವಾಗಿರುವರು. ಆದರೆ ದುರ್ಜನರು ನಿರಂತರವೂ ಅಸಂತೃಪ್ತಿಯಿಂದ, ದುಃಖದಿಂದ ಸೊರಗುವರು, ನರಕ ಯಾತನೆ ಅನುಭವಿಸು ವರು. ನಿಂದೆ ನಿಷ್ಠೂರಗಳನ್ನು ಮಾಡುತ್ತಾ ಮೇಲ್ನೋಟಕ್ಕೆ ಸಂತೋಷವಾಗಿ ಕಂಡರೂ ಒಳಗೊಳಗೇ ಕೃಶವಾಗುವರು.

ಸತ್ಪುರುಷರ ಗುಣಗಳನ್ನು ಹೇಳುತ್ತೇನೆ ಕೇಳು. ಸತ್ಪುರುಷರು ವಿಷಯಾಸಕ್ತರಲ್ಲ, ಅವರು ಸಕಲ ಗುಣ ಶೀಲ ಸಂಪನ್ನರು. ಇತರರ ಸುಖವನ್ನು ನೋಡಿ ಸಂತೋಷಿ ಸುವರು. ದುಃಖವನ್ನು ನೋಡಿ ದುಃಖಿಸುವರು. ಅವರು ಸಮದರ್ಶಿಗಳು, ಅವರಿಗೆ ಶತ್ರುಗಳಿಲ್ಲ, ಶತ್ರುಬಾಧೆ ಎನ್ನುವುದೇ ಇಲ್ಲ. ಅವರು ಜ್ಞಾನ ವಿಜ್ಞಾನ ವೈರಾಗ್ಯ ಸಂಪನ್ನರು. ಅವರ ಚಿತ್ತ ಕೋಮಲ. ಅವರಿಗೆ ದೀನರ ಬಗ್ಗೆ ದಯೆ. ತ್ರಿಕರಣ ಶುದ್ಧಿ ಯಿಂದ ಅವರು ನನ್ನ ಪಾದಗಳನ್ನು ಸೇವಿಸುವರು. ಅವರಿಗೆ ಮಾನಾಭಿಮಾನಗಳಿ ರುವುದಿಲ್ಲ. ಅವರು ನಿರಂತರವೂ ಪರೋಪಕಾರ ಮಾಡುವರೇ ವಿನಾ ಕನಸಿನಲ್ಲೂ ಸ್ವಾರ್ಥವನ್ನು ಬಯಸರು. ಅವರ ಪ್ರವರ್ತನೆ ಸರಳ. ಅವರ ಹೃದಯ ಶಾಂತವಾಗಿ ರುವುದು ಮತ್ತು ಅವರು ತ್ಯಾಗಶೀಲರು. ಯಾವಾಗಲೂ ಅವರು ಸಂತೋಷವಾ ಗಿಯೇ ಇರುವರು. ತಮ್ಮಾ! ಈ ಲಕ್ಷಣಗಳು ಯಾರಲ್ಲಿರುವುದೋ ಅವರು ಆತ್ಮಸ್ವರೂಪರೆಂದು ತಿಳಿ. ಆತ್ಮಸ್ವರೂಪರಷ್ಟೇ ಅಲ್ಲ, ನಾನೇ ಅವರು, ಅವರೇ ನಾನು ಎಂದು ತಿಳಿ. ಅವರಿಗೆ ದೂಷಣ ಭೂಷಣಗಳು ಸಮಾನ.

**ದುರ್ಜನರು**: ಇನ್ನು, ದುರ್ಜನರ ಲಕ್ಷಣಗಳನ್ನು ಹೇಳುತ್ತೇನೆ ಕೇಳು. ದುರ್ಜನರ ಸಹವಾಸವನ್ನು ಎಲ್ಲ ರೀತಿಯಲ್ಲೂ ಬಿಡಬೇಕು. ಅವರ ಸಹವಾಸದಿಂದ ದುಃಖ ಪ್ರಾಪ್ತವಾಗುವುದು. ಪರರ ಸಂಪತ್ತನ್ನು ನೋಡಿ ಅವರ ಹೃದಯ ಪರಿತಪಿಸುವುದು. ಪರದೂಷಣೆಯನ್ನು ಕೇಳಿ ಅವರು ಸಂಪತ್ತು ಸಿಕ್ಕಿದಷ್ಟು ಸಂತೋಷಪಡುವರು. ಅರಿಷಡ್ವರ್ಗಗಳು ಅವರನ್ನು ಆಶ್ರಯಿಸುವುವು, ಅವು ಹೇಳಿದಂತೆ ಅವರು ಕೇಳಿ ನಡೆಯುವರು. ಅವರಿಗೆ ದಯಾ ದಾಕ್ಷಿಣ್ಯಗಳು ಶೂನ್ಯ. ಅವರು ಕುಟಿಲರು. ಕಾರಣವಿಲ್ಲದೆಯೇ ಪರರೊಂದಿಗೆ ಕಲಹ ಮಾಡುವರು. ಉಪಕಾರ ಮಾಡಿದವರಿಗೆ ಸಹ ಅವರು ಅಪಕಾರ ಮಾಡುವರು. ಅವರ ಮಾತು ಅವರ ಕಾರ್ಯ ಅವರ ಬೋಧನೆ ಅವರ ವ್ಯವಹಾರ ಎಲ್ಲವೂ ಅಸತ್ಯವಾದವುಗಳು. ಅವರ ಹೃದಯ

ಕಠೋರ. ನವಿಲು ನೋಡಲು ಸುಂದರವಾಗಿರುವುದು, ಅದರ ಕೇಕೆ ಕೇಳಲು ಇಂಪಾಗಿರುವುದು. ಆದರೆ ಅದು ಹಾವನ್ನೇ ತಿನ್ನುವುದಲ್ಲವೆ? ಹಾಗೆ ದುರ್ಜನರೂ ಕೂಡ ಎಂದು ತಿಳಿ. ಅವರು ಪರಹಿಂಸಾಪರಾಯಣರು, ಪರಾದರಾಸಕ್ತರು, ಪರನಿಂದಾರತರು. ಈ ಪಾಪಕರ್ಮಿಗಳಿಗೆ, ಪಾಪಿಷ್ಠರಿಗೆ, ಮನುಜಾಧಮರಿಗೆ ಯಮನ ಭಯವಿಲ್ಲ. ಇತರರು ಅಭಿವೃದ್ಧಿ ಹೊಂದುವುದನ್ನು ನೋಡಿ, ಕೇಳಿ ಸಂಕಟಪಡುವರು. ಇತರರ ವಿಪತ್ತನ್ನು ನೋಡಿ, ರಾಜತ್ವ ಸಿಕ್ಕವರಂತೆ ಸಂತೋಷಿ ಸುವರು. ಅವರಿಗೆ ಸ್ವಾರ್ಥವಲ್ಲದೆ ಪರೋಪಕಾರವೆನ್ನುವುದು ಸ್ವಪ್ನದಲ್ಲೂ ಸಹ ಇರದು. ಅವರ ಹೃದಯ ಕಾಮ ಕ್ರೋಧಾದಿಗಳಿಗೆ ತೌರುಮನೆ, ಅವರಿಗೆ ತಂದೆ ತಾಯಿ, ಗುರು ಹಿರಿಯರು ಎನ್ನುವ ಗಮನವೇ ಇರದು. ಸತ್ಪುರುಷರೆಂದರೆ, ಭಗವಂತನೆಂದರೆ ಅವರಿಗೆ ತಲೆನೋವು. ಅವರು ಮಂದಮತಿಗಳು, ಅವಗುಣ ಧಾಮರು, ಕಾಮಾಂಧರು. ಕಲಿಯುಗದಲ್ಲಿ ಅವರನ್ನು ಅಧಿಕವಾಗಿ ನೋಡ ಬಹುದು. ತಮ್ಮಾ! ಪರೋಪಕಾರಕ್ಕಿಂತ ಬೇರೆ ಧರ್ಮವಿಲ್ಲ. ಪರಹಿಂಸೆಗಿಂತ ಅಧಿಕ ಪಾಪವಿಲ್ಲ. ಇದೇ ವೇದ ಪುರಾಣಗಳ ಸಾರ. ಇದೇ ಸತ್ಪುರುಷರ ಮತ. ಮನುಷ್ಯರಾಗಿ ಹುಟ್ಟಿ ಪರಹಿಂಸೆ ಮಾಡುವವರು ಕೊನೆಗೆ ನೀಚಯೋನಿಯಲ್ಲಿ ಹುಟ್ಟಿ ಹಿಂಸೆಪಟ್ಟು ಸಾಯುವರು. ಮನುಷ್ಯರು ಅಜ್ಞಾನಾಂಧಕಾರದಲ್ಲಿ ಬಿದ್ದು ಅನೇಕ ಪಾಪಗಳನ್ನು ಮಾಡುತ್ತಿರುವರು. ಇಂಥವರಿಗೆ ನಾನು ಪ್ರಾರಬ್ಧಕರ್ಮ ಸ್ವರೂಪನಾಗಿ ಕಾಲಾಂತರದಲ್ಲಿ ಪ್ರತ್ಯಕ್ಷನಾಗುವೆನು. ಅಂಥವರನ್ನು ಸಂಸಾರದಲ್ಲಿ ಬೀಳಿಸಿ, ಅವರು ಶುಭ ಅಶುಭ ಕರ್ಮಗಳನ್ನು ಅನುಭವಿಸುವಂತೆ ಮಾಡುವೆನು.

ಓ ಭರತಾ! ದೇವತೆಗಳೂ ಮುನಿಗಳೂ ಮಹಾತ್ಮರೂ ಶುಭ ಅಶುಭ ಫಲಗಳನ್ನು ಕೊಡುವ ಕರ್ಮಗಳನ್ನು ಬಿಟ್ಟು ಸದಾ ನನ್ನನ್ನು ಭಜಿಸುವರು. ಅವರು ನಿಷ್ಕಾಮ ವಾಗಿ ಕರ್ಮಗಳನ್ನಾಚರಿಸುವರು. ಕಾಮ್ಯ ತಪಸ್ಸನ್ನು, ಕಾಮ್ಯ ಕರ್ಮಗಳನ್ನು ಆಚರಿಸಿದಲ್ಲಿ ಅವುಗಳ ಶುಭಾಶುಭ ಫಲಗಳನ್ನು ಅನುಭವಿಸಲು ಜೀವಿಗಳು ದೇಹ ಧರಿಸಿ ಪುನಃ ಸಂಸಾರಕ್ಕೆ ಬರಬೇಕಾಗುವುದು. ಯಾವ ಕರ್ಮ ಮಾಡಿದರೂ ಅದರ ಫಲವನ್ನು ಅಪೇಕ್ಷಿಸದೆ ಮಾಡಿದಲ್ಲಿ ಮನುಷ್ಯನಿಗೆ ಜ್ಞಾನ ಉಂಟಾಗುವುದು, ಭಕ್ತಿ ಪ್ರಪತ್ತಿಗಳು ಅಭಿವೃದ್ಧಿಯಾಗುವುವು. ಅವುಗಳ ಮೂಲಕ ಅವನು ಮುಕ್ತಿಯನ್ನೂ ದೈವ ಸಾಮೀಪ್ಯವನ್ನೂ ಅನುಭವಿಸುವನು. ಈ ವಿಧವಾಗಿ ಸಜ್ಜನ ದುರ್ಜನ ಲಕ್ಷ ಣಗಳನ್ನು ನಿಮಗೆ ವಿಶದಪಡಿಸಿದ್ದೇನೆ. ಈ ಲಕ್ಷಣಗಳನ್ನು ತಿಳಿದುಕೊಂಡವನು ಸಂಸಾರದಲ್ಲಿ ಮುಳುಗಿರಲಾರನು. ತಮ್ಮಾ! ಅನೇಕ ವಿಧವಾದ ಸುಗುಣ ದುರ್ಗು ಣಗಳೆಲ್ಲಾ ಮಾಯಾ ಸಂಕಲ್ಪಿತವಾದುವುಗಳೆಂದು ತಿಳಿ. ಈ ಎರಡು ಬಗೆಯ ಗುಣಗಳನ್ನೂ ಲಕ್ಷಿಸದವನು ಸಜ್ಜನನು, ಮಹಾತ್ಮನು. ಅವನೇ ಆತ್ಮ ಸ್ವರೂಪನು,

ಈ ಎರಡು ಬಗೆಯ ಗುಣಗಳಿಗೆ ವಶನಾಗುವವನು ಮೂರ್ಖನು. ಅದೇ ಅಜ್ಞಾನ," ಎಂದು ವಿವರಿಸಿದನು. ರಾಮನ ಉಪದೇಶದಿಂದ ಅವರು ನೆಮ್ಮದಿ ಪಡೆದರು. ಅಪಾರ ಹೃದಯಗಳು ಪ್ರೇಮದಿಂದ ಉಕ್ಕಿದವು. ಮಾತುಮಾತಿಗೆ ಅವರು ರಾಮನಿಗೆ ಶಿರಬಾಗಿ ನಮಸ್ಕರಿಸುತ್ತಿದ್ದರು. ಎಲ್ಲರಿಗಿಂತ ಮಿಗಿಲಾಗಿ ಹನುಮಂತನು ಬ್ರಹ್ಮಾನಂದ ಭರಿತನಾದನು. ನಂತರ ಅವರು ಅಲ್ಲಿಂದ ಹೊರಟು ರಾಜಮಂದಿರವನ್ನು ಸೇರಿದರು. ರಾಮನ ದಿನಚರ್ಯೆ ಈ ವಿಧವಾಗಿ ಸಾಗುತ್ತಿತ್ತು.

ಹೀಗಿರಲು, ಒಂದು ದಿನ ರಾಮನು ಪುರಜನರಿಗೂ ಗುರು ಬ್ರಾಹ್ಮಣರಿಗೂ ಹೇಳಿ ಕಳಿಸಿದನು. ಅವರೆಲ್ಲರೂ ರಾಜ ಸಭಾಭವನದಲ್ಲಿ ಬಂದು ಸೇರಿದರು. ರಾಮನು ಸುಖಾಸನದಲ್ಲಿ ಕುಳಿತು, ಅವರನ್ನುದ್ದೇಶಿಸಿ ಹೀಗೆ ಹೇಳಿದನು. "ಪುರಜನರೇ! ಗುರು, ಬ್ರಾಹ್ಮಣರೇ ನಮಸ್ಕಾರಗಳು. ನಾನು ಹೇಳಬೇಕೆಂದಿರುವುದನ್ನು ಶಾಂತವಾಗಿ ಕೇಳಿ. ಸ್ವಾರ್ಥಪರನಾಗಿಯೋ ದುರಭಿಮಾನದಿಂದಾಗಿಯೋ ನಾನು ಪ್ರಸಂಗಿಸುತ್ತಿಲ್ಲ. ನಾನು ನಿಮ್ಮ ರಾಜನೆಂದು ಹೇಳುತ್ತಿಲ್ಲ. ನೀವು ಕೆಟ್ಟ ಮಾರ್ಗವನ್ನನುಸರಿತ್ತಿರುವಿರೇನೋ ಎಂದು ಬೋಧಿಸುತ್ತಿಲ್ಲ. ನನ್ನ ಮಾತುಗಳು ಸೂಕ್ತವೆಂದು ನಿಮಗನಿಸಿದರೆ ಆ ಪ್ರಕಾರ ನಡೆಯಿರಿ. ನನ್ನ ಮಾತನ್ನು ಕೇಳಿ ಅದರಂತೆ ನಡೆದುಕೊಳ್ಳುವವನೇ ನನ್ನ ಸ್ನೇಹಿತನು. ಅವನೇ ನನ್ನ ತಮ್ಮನು. ನಾನೊಂದು ತಪ್ಪು ಮಾತು ಹೇಳಿದರೂ ಹಿಂದೆಗೆಯದೆ ನನ್ನ ತಪ್ಪನ್ನು ನನಗೆ ತೋರಿಸಿ. ಎಲ್ಲ ಜನ್ಮಗಳಿಗಿಂತ ನರಜನ್ಮವು ದುರ್ಲಭವು ಎಂಬ ವೇದಪುರಾಣಗಳು, ಮಹನೀಯರುಗಳು ಹೇಳಿರುವರು, ಹೇಳುತ್ತಿದ್ದಾರೆ. ಬಹಳ ಪುಣ್ಯ ಮಾಡದೆ ನರಜನ್ಮವು ಲಭಿಸುವುದಿಲ್ಲ. ಅದು ದೇವತೆಗಳಿಗೂ ದುರ್ಲಭವು. ನರಜನ್ಮವು ಮೋಕ್ಷಕ್ಕೆ ದ್ವಾರ. ಸಕಲ ಸಾಧನೆಗಳಿಗೆ ಅದು ಹೆದ್ದಾರಿ.

ತಮ್ಮಂದಿರಾ! ಈ ಶರೀರವು ವಿಷಯ ಭೋಗಗಳನ್ನೂ ಸರ್ವಭೋಗಗಳನ್ನೂ ಅನುಭವಿಸುವುದಕ್ಕಾಗಿ ಬಂದಿಲ್ಲ. ಇದೆಲ್ಲವೂ ಕ್ಷಣಭಂಗುರ. ಇವುಗಳ ಮೂಲಕ ಜನರು ಪುನಃ ಸಂಸಾರಕ್ಕೆ ಬರುವರು. ಆದಕಾರಣ ಈ ಭೋಗಗಳೆಲ್ಲವೂ ದುಃಖಕ್ಕೆ ಕಾರಣ. ಈ ವಿಷಯ ಭೋಗಗಳಲ್ಲಿ ಆಸಕ್ತಿ ಉಳ್ಳವರು ಮೂರ್ಖರು. ವಿಷಯಗಳು ವಿಷದಂತೆ. ಅಮೃತವನ್ನು ಬಿಟ್ಟು ವಿಷವನ್ನು ಆಶಿಸುವುದು ಸರಿಯೆ? ಅಂತಹ ವಿಷವನ್ನು ಬಯಸುವವನು ಒಳ್ಳೆಯವನಲ್ಲ. ಅದು ಚಿಂತಾಮಣಿಯನ್ನು ಬಿಟ್ಟು ಗಾಜಿನ ಚೂರನ್ನು ಬಯಸಿದಂತೆ. ನರಶರೀರವನ್ನು ಧರಿಸಿಯೂ ಮಾನವನು ಸಂಸಾರ ಸಾಗರ ದಾಟದಿದ್ದರೆ ಅವನಂಥ ದೌರ್ಭಾಗ್ಯನೂ ಮಂದಮತಿಯೂ ಇನ್ನೊಬ್ಬನ್ನಿಲ್ಲ. ಅವನಂತಹ ಆತ್ಮಘಾತಕನೂ ಬೇರೊಬ್ಬನ್ನಿಲ್ಲ. ಆದ್ದರಿಂದ ಮನುಜನಾಗಿ ಹುಟ್ಟಿದವನು ಸರ್ವರಲ್ಲೂ ದೈವವು ಆತ್ಮಸ್ವರೂಪವಾಗಿ ಇರುವುದೆಂಬ

ಸತ್ಯವನ್ನು ಗ್ರಹಿಸಿ, ಜನಸೇವೆ ಮಾಡುತ್ತಾ ಅದನ್ನೇ ದೈವಸೇವೆಯನ್ನಾಗಿ ಭಾವಿಸಿ, ದೈವಾಜ್ಞೆಯನ್ನು ಶಿರಸಾವಹಿಸಿ, ದೈವಾರ್ಪಿತ ಭಾವದಿಂದ ಸರ್ವ ಕರ್ಮಗಳನ್ನೂ ಆಚರಿಸಬೇಕು.

ಪ್ರಜೆಗಳೇ! ಇಹಪರ ಲೋಕ ಸುಖಗಳನ್ನು ಅನುಭವಿಸಲು ಇಚ್ಛಿಸುವವರು, ನನ್ನ ಮಾತುಗಳನ್ನು ಲಕ್ಷ್ಯದಲ್ಲಿರಿಸಿಕೊಂಡು, ಅದನ್ನು ಮರೆಯದೆ ಅನುಸರಿಸಿರಿ. ಸಂಸಾರವನ್ನು ದಾಟಲು ಬೇರೆಲ್ಲ ಮಾರ್ಗಗಳಿಗಿಂತಲೂ ಭಕ್ತಿ ಮಾರ್ಗವೇ ಸುಲಭವು, ಮನೋಹರವು. ಸಂಸಾರವನ್ನು ದಾಟಲು ಜ್ಞಾನ ಮಾರ್ಗವು ಕಷ್ಟವು. ಆ ಮಾರ್ಗದಲ್ಲಿ ಅನೇಕ ವಿಘ್ನಗಳು ಸಂಭವಿಸುವುವು. ಮನೋನಿಗ್ರಹವು ಬಹಳ ದುರ್ಲಭವು. ಜ್ಞಾನಮಾರ್ಗದಲ್ಲಿ ನಡೆಯುವವನಿಗೆ ಭಕ್ತಿ ಇಲ್ಲದಿದ್ದರೆ, ಆತನು ನನಗೆ ಪ್ರಿಯನಲ್ಲ. ಭಕ್ತಿಗಿಂತ ಬೇರೊಂದಿಲ್ಲ; ಅದಕ್ಕೆ ಸ್ವಾತಂತ್ರ್ಯವಿದೆ; ಅದರಿಂದ ಸಕಲ ಸುಖಗಳು ದೊರಕುವುವು. ಸತ್ಸಂಗವಿಲ್ಲದಿದ್ದರೆ ಭಕ್ತಿ ಬಾರದು.

**ದಿವ್ಯ ಬೋಧೆ**: ಓ! ಜನರೇ! ನಿಮಗೆ ಮತ್ತೊಂದು ರಹಸ್ಯವನ್ನು ಹೇಳುವೆನು ಕೇಳಿ. ಶಿವ ಕೇಶವರಲ್ಲಿ ಯಾವ ಭೇದವೂ ಇಲ್ಲ. ಭಗವಂತ ಒಬ್ಬನೇ ಎಂದು ತಿಳಿಯಿರಿ. ಉಪನಾಮಗಳು ಬೇರೆ ಬೇರೆಯೇ ವಿನಾ ದಿವ್ಯಾತ್ಮ ಒಂದೇ. ಅದು ಎಲ್ಲರಲ್ಲೂ ಸಮನಾಗಿಯೇ ಇರುವುದು," ಎಂದು ಹೇಳಿದನು. ರಾಮನ ಅಮೃತವಾಣಿಯಾದ ನುಡಿಗಳನ್ನು ಕೇಳಿ ಪುರಜನರು ಅವನಿಗೆ ಶಿರಬಾಗಿ ನಮಸ್ಕರಿಸಿದರು. "ಓ ಸ್ವಾಮಿ! ನಮ್ಮ ಪ್ರಾಣಗಳಿಗಿಂತ ನಿನ್ನ ಮೇಲಿನ ಆಸೆ ಅತ್ಯಧಿಕ. ನಿನ್ನಿಂದಾಗಿ ನಮ್ಮ ಶರೀರವು ದೃಢವಾಗಿದೆ. ನಮ್ಮ ಮನೆಗಳಲ್ಲಿ ನಿತ್ಯವೂ ಮಂಗಳವು ಜರುಗುತ್ತಿದೆ. ಇದೆಲ್ಲವು ನಿನ್ನ ಪ್ರಭಾವ. ಎಲ್ಲ ವಿಧವಾಗಿ ನಮ್ಮ ದುಃಖಗಳನ್ನು ಹೋಗಲಾಡಿಸಿ ನಮ್ಮನ್ನು ದಡಸೇರಿಸಿದೆ. ಓ ಮಹಾರಾಜಾ, ನೀನಲ್ಲದೆ ನಮಗೆ ಹೀಗೆ ಬೋಧಿಸುವವರಾರು? ನಮ್ಮ ತಾಯಿತಂದೆಯರು ಸ್ವಾರ್ಥಪರರೆ ವಿನಾ ಬೇರಲ್ಲ. ನಮ್ಮಿಂದ ನಿನಗೆ ಪ್ರಯೋಜನವಿಲ್ಲ. ಆದರೆ ನಮ್ಮನ್ನು ಪರಲೋಕಕ್ಕೆ ಅರ್ಹರಾಗುವ ಮಟ್ಟಕ್ಕೆ ತಯಾರು ಮಾಡಿದ್ದೀಯೆ, ಅದೇ ನಮಗೆ ಸಾಕು. ಓ ರಾಕ್ಷಸಾಂತಕಾ, ನೀನೂ ನಿನ್ನ ಸೇವಕರೂ ಲೋಕಕ್ಕೆ ಉಪಕಾರಿಗಳು. ಸ್ವಪ್ನದಲ್ಲೂ ಇಂಥ ಮಿತ್ರನನ್ನು, ಪ್ರಭುವನ್ನು, ತಾಯಿಯನ್ನು, ತಂದೆಯನ್ನು ನಾವು ನೋಡಲಿಲ್ಲ," ಎಂದು ರಾಮನನ್ನು ಸಾವಿರ ಬಗೆಯಾಗಿ ಕೊಂಡಾಡಿದರು. ಅದನ್ನು ಕೇಳಿ ರಾಮನು ಪ್ರಸನ್ನನಾದನು. ರಾಮನ ಅಪ್ಪಣೆಯನ್ನು ಪಡೆದ ಪ್ರಜೆಗಳು ತಮ್ಮ ಮನೆಗಳಿಗೆ ತೆರಳಿದರು.

ಪ್ರಜೆಗಳು ನಿರಂತರವೂ ರಾಮನ ಬೋಧನೆಗಳನ್ನು ಸ್ಮರಿಸುತ್ತಾ ಕಾಲವನ್ನು ಕಳೆಯುತ್ತಿದ್ದರು. ಅಯೋಧ್ಯೆಯಲ್ಲಿ, ಪ್ರತಿ ಗೃಹಸ್ಥನಿಗೂ ಒಂದು ಹೂದೋಟವಿದ್ದಿತು.

ಅವನು, ಅದನ್ನು ಜಾಗ್ರತೆಯಿಂದ ಕಾಪಾಡುತ್ತಿದ್ದನು. ಆ ಹೂದೋಟಗಳಲ್ಲಿ, ಸದಾಕಾಲ ವಸಂತ ಋತುವಿನಂತೆ ಗಿಡಮರಗಳಲ್ಲಿ ಪುಷ್ಪಗಳು ಫಲಿಸುತ್ತಿದ್ದುವು. ಸದಾ ಭ್ರಮರಗಳು ಝೇಂಕರಿಸುತ್ತಿದ್ದುವು. ಮಂದವಾದ, ಸುಗಂಧಪೂರಿತ, ಶೀತಲ ವಾಯುವು ಬೀಸುತ್ತಿದ್ದಿತು. ಅನೇಕ ವಿಧವಾದ ಪಕ್ಷಿಗಳನ್ನು ಬಾಲಕರು ಸಾಕುತ್ತಿದ್ದರು. ಅವು ಇಂಪಾದ ಧ್ವನಿಗೈಯ್ಯುತ್ತಿದ್ದುವು.

**ರಾಮ ರಾಜ್ಯ**: ರಾಮನ ರಾಜ್ಯಭಾರ ಕಾಲದಲ್ಲಿದ್ದ ಜನರ ಸಿರಿಸಂಪದಗಳನ್ನು ಸಹಸ್ರ ನಾಲಗೆಯ ಶೇಷನೂ ವರ್ಣಿಸಲಾರ. ಅವನು ಧರ್ಮದಿಂದ ರಾಜ್ಯವಾಳಿದನು. ಅನೇಕ ಅಶ್ವಮೇಧ ಯಾಗಗಳನ್ನು ಮಾಡಿದನು. ಕೋಟ್ಯಂತರ ಬ್ರಾಹ್ಮಣರಿಗೆ ದಾನವನ್ನು ಕೊಟ್ಟು ತೃಪ್ತಿಪಡಿಸಿದನು. ವೇದಮಾರ್ಗ ಪ್ರವರ್ತಕನೂ ಧರ್ಮ ರಕ್ಷಕನೂ ಗುಣಾತೀತನೂ ಆದ ರಾಮನು, ಸಕಲ ಗುಣ ಸಂಪನ್ನಳಾದ ಸೀತಾ ದೇವಿಯೂ ಧರ್ಮಮಾರ್ಗವನ್ನವಲಂಬಿಸಿ ಶೋಭಿಸುತ್ತಿದ್ದರು. ತಾಪತ್ರಯಗಳು ರಾಮನ ಕಾಲದಲ್ಲಿ ನಶಿಸಿದುವು. ಜನರು ಪರಸ್ಪರ ಅನುರಾಗವುಳ್ಳವರಾಗಿದ್ದರು. ವೇದಗಳಲ್ಲಿ ಹೇಳಿರುವ ಪ್ರಕಾರ ಜನರು ಕುಲ ಧರ್ಮಗಳನ್ನು ಅನುಸರಿಸುತ್ತಿದ್ದರು. ತಪಸ್ಸು, ಧ್ಯಾನ, ಯಜ್ಞ, ಜ್ಞಾನಾರ್ಜನೆ—ಈ ನಾಲ್ಕು ಧರ್ಮಗಳೂ ಯಥಾವಿಧಿಯಾಗಿ ಲೋಕದಲ್ಲಿ ಆಚರಿಸಲ್ಪಡುತ್ತಿದ್ದವು. ಸ್ವಪ್ನದಲ್ಲೂ ಕೂಡ ಜನರು ಪಾಪದ ಯೋಚನೆ ಮಾಡುತ್ತಿರಲಿಲ್ಲ. ಸ್ತ್ರೀ ಪುರುಷರು, ವೃದ್ಧರು, ಬಾಲಕರು, ಸರ್ವರೂ ನಿರಂತರವೂ ರಾಮ ಚಿಂತನೆ ಮಾಡುತ್ತಿದ್ದರು. ಯಾವ ವಿಧವಾದ ಪೀಡೆಯೂ ಇರುತ್ತಿರಲಿಲ್ಲ. ದರಿದ್ರರು, ದುಃಖಿಗಳು, ದೀನರು, ಮೂರ್ಖರು, ಮುಂತಾದವರು ಇರಲಿಲ್ಲ. ಎಲ್ಲರೂ ಸರ್ವಲಕ್ಷಣಸಂಪನ್ನರಾಗಿದ್ದರು. ಯಾರೊಬ್ಬರಿಗೂ ಡಾಂಬಿಕತೆ, ಅಹಾಂಕಾರ, ಅಸೂಯೆ ಇರಲಿಲ್ಲ. ಎಲ್ಲರೂ ಆತ್ಮಜ್ಞಾನಿಗಳು, ಧರ್ಮರತರು, ದಯಾ ದಾಕ್ಷಿಣ್ಯವುಳ್ಳವರಾಗಿದ್ದರು. ಒಬ್ಬರ ಸುಗುಣವನ್ನು ಮೆಚ್ಚಿಕೊಳ್ಳುತ್ತಿದ್ದರೇ ವಿನಾ ಅಸೂಯೆಪಡುತ್ತಿರಲಿಲ್ಲ ಅಥವಾ ಅಹಂಕಾರಕ್ಕೆ ಎಡೆಕೊಡುತ್ತಿರಲಿಲ್ಲ.

ಸಪ್ತದ್ವೀಪಗಳಿಂದ ಕೂಡಿದ ಭೂಮಂಡಲ, ಪೂರ್ತಿಯಾಗಿ ಸಮುದ್ರದವರೆಗೂ ರಾಮನ ಏಕಚಕ್ರಾಧಿಪತ್ಯದೊಳಗಿತ್ತು. ಈ ಸಾಮ್ರಾಜ್ಯಕ್ಕೆ ರಾಮನೇ ಸಾಮ್ರಾಟ. ರಾಮರಾಜ್ಯದಲ್ಲಿ ಸಾಮ, ದಾನಗಳು ಪೂರ್ತಿಯಾಗಿದ್ದುವು. ಭೇದ ದಂಡಗಳು ಇರಲೇ ಇಲ್ಲ. ದಂಡವು ಯತೀಶ್ವರುಗಳ ಕೈಯಲ್ಲಿ ಮಾತ್ರವೇ ಕಾಣಬರುತ್ತಿತ್ತು. ಭೇದವು ರಾಗಗಳಲ್ಲಿಯೂ ನೃತ್ಯಗಳಲ್ಲಿಯೂ ಮಾತ್ರ ಕಾಣುತ್ತಿದ್ದವು. ನಿಗ್ರಹವು ಆತ್ಮ ನಿಗ್ರಹದಲ್ಲಿ ಕಾಣುತ್ತಿತ್ತು. ಇಲ್ಲದಿರುವ ಶತ್ರುಗಳನ್ನು ನಿಗ್ರಹಿಸುವುದೆಂತು? ನಿರುಪಮಾನವಾದ ವಾಪೀಕೂಪ, ತಟಾಕಗಳು ಆ ನಗರದಲ್ಲಿ ಅನೇಕವಾಗಿದ್ದುವು. ಅವುಗಳ ನಿರ್ಮಲವಾದ ಜಲವೇನು? ಅವುಗಳ ನಿಜವಾದ ರೂಪಗಳೇನು? ಅದರ

ಸೊಗಸನ್ನು ನೋಡಿ ಋಷಿಮುನಿಗಳು ಆನಂದಿಸುತ್ತಿದ್ದರು. ವಿವಿಧ ಬಣ್ಣಗಳನ್ನು ಹೊಂದಿದ ಕಮಲಗಳು, ಆ ಸರೋವರಗಳಲ್ಲಿ ವಿಕಸಿಸುತ್ತಿದ್ದವು. ಅದರ ಅಂಚಿನಲ್ಲಿ ಅನೇಕ ಪಕ್ಷಿಗಳು ಧ್ವನಿಗೈಯುತ್ತಿದ್ದವು. ಶುಕ ಪಿಕ ಪಾರಿವಾಳಗಳು ಮಧುರಸ್ವರದಿಂದ ಗಾನ ಮಾಡುತ್ತಿದ್ದವು. ಆ ನಗರವು ಸ್ವರ್ಗಕ್ಕಿಂತ ಅಧಿಕವಾಗಿದ್ದುದರಿಂದ ಎಲ್ಲರೂ ಅದನ್ನು ನೋಡಿ ಭ್ರಮಿಸುತ್ತಿದ್ದರು.

**ವಸಿಷ್ಠ ಪುರೋಹಿತರು** : ಒಂದು ದಿನ ಸಕಲ ಶುಭದಾಯಕನಾದ ಶ್ರೀರಾಮನನ್ನು ದರ್ಶಿಸಲು ವಷಿಷ್ಠರು ರಾಜಮಂದಿರಕ್ಕೆ ಬಂದರು. ಶ್ರೀರಾಮನು ಆತನನ್ನು ಅರ್ಘ್ಯ ಪಾದ್ಯಗಳನ್ನಿತ್ತು ಸತ್ಕರಿಸಿದನು. ವಸಿಷ್ಠರು ರಾಮನೆದುರು ಕೈಜೋಡಿಸಿ ನಿಂತು, “ಹೇ ಕೃಪಾಸಿಂಧೂ! ನನ್ನದೊಂದು ಮನವಿ ಇದೆ. ನಿನ್ನ ಲೀಲಾಮಾನುಷ ಚರ್ಯೆಗಳನ್ನು ಕಣ್ಣಾರೆ ನೋಡುತ್ತಿದ್ದೇನೆ. ನನ್ನ ಮನಸ್ಸಿನಲ್ಲಿ ದೊಡ್ಡ ಸಂದೇಹವು ಹುಟ್ಟಿತು. ನಿನ್ನ ಪ್ರಭಾವ ಅಪಾರವಾದುದು, ವೇದಗಳಿಗೆ ಸಹಿತ ನಿನ್ನ ಸಂಗತಿ ಚೆನ್ನಾಗಿ ತಿಳಿಯದು. ವೇದಶಾಸ್ತ್ರ ಪುರಾಣಗಳು ಪುರೋಹಿತ ವೃತ್ತಿಯನ್ನು ದೂಷಿಸು ತ್ತವೆ. ಯಜಮಾನನ ಶುಭ ಅಶುಭ ಕರ್ಮಗಳ ಅರ್ಧ ಫಲ ಪುರೋಹಿತನಿಗೆ ಬರುವುದರಿಂದ ಅದು ದೋಷಯುಕ್ತ. ಈ ಪುರೋಹಿತ ವೃತ್ತಿಯನ್ನು ಸ್ವೀಕರಿಸಲು ನಾನು ಒಪ್ಪಲಿಲ್ಲ. ಆಗ ಬ್ರಹ್ಮನು, ‘ಮಗೂ! ಮುಂದೆ ನಿನಗೆ ಆಗಲಿರುವ ಸಂಗತಿ ನಿನಗೆ ತಿಳಿಯದು. ಆ ವೃತ್ತಿಯನ್ನು ಹಿಡಿ. ಅದರಿಂದ ಮುಂದೆ ನಿನಗೆ ಲಾಭವಾಗುವುದು, ಪರಬ್ರಹ್ಮವು ರಘುಕುಲದಲ್ಲಿ ಅವತರಿಸುವುದು,’ ಎಂದು ಸ್ಪಷ್ಟವಾಗಿ ತಿಳಿಸಿ, ನನ್ನನ್ನು ಆ ವೃತ್ತಿ ಕೈಗೊಳ್ಳುವಂತೆ ಮಾಡಿದನು. ಆದ್ದರಿಂದ ನಾನು ಒಪ್ಪಿಕೊಂಡೆ. ಯಾವ ಸತ್ಪದಾರ್ಥವನ್ನು ಹೊಂದಲು ಯಾಗ, ಯಜ್ಞ, ಜಪ, ತಪ ಮೊದಲಾದುವನ್ನು ಮಾಡುವರೋ ಅವುಗಳನ್ನು ಮಾಡದೆಯೇ ನಾನು ಆ ಸತ್ಪದಾರ್ಥವನ್ನು ಸುಲಭವಾಗಿ ಹೊಂದುವಂತಾಯಿತು. ಈ ಸತ್ಕರ್ಮಕ್ಕೆ ಪರಮಾರ್ಥವೇ ಲಕ್ಷ್ಯವು. ಇದಕ್ಕಿಂತ ಒಳ್ಳೆಯ ಮಾರ್ಗವನ್ನು ನಾನು ಅನುಸರಿಸು ವೆನು. ಓ! ದೇವ ದೇವಾ! ಜಪ, ತಪ ಯಜ್ಞ, ವ್ರ ನಿಮಗಳೆಲ್ಲವೂ ವೇದ ವಿದಿತ ಕರ್ಮಗಳು. ಜ್ಞಾನ, ಭೂತದಯೆ, ದಮ, ಶಿಷ್ಟಾಚಾರ ಪ್ರವರ್ತನೆಗಳ ಮುಖಾಂತರವೇ ನಿನ್ನ ಸನ್ನಿಧಿ ಲಭಿಸುವುದು. ಓ ನಾಥಾ! ನಾನೊಂದು ವರವನ್ನು ಕೋರುವೆನು, ತಾವು ಕಟಾಕ್ಷಿಸಿ ದಯಮಾಡಬೇಕು. ಎಷ್ಟು ಜನ್ಮಗಳೆತ್ತಿದರೂ ನಿನ್ನ ಪಾದಾರವಿಂದಗಳಲ್ಲಿ ಭಕ್ತಿ ಕಡಿಮೆಯಾಗದಂತೆ ಅನುಗ್ರಹಿಸು,” ಎಂದು ರಾಮನನ್ನು ಪ್ರಾರ್ಥಿಸಿದರು. ನಂತರ ರಾಮನ ಅನುಜ್ಞೆಯನ್ನು ಪಡೆದು ವಸಿಷ್ಠರು ಸ್ವಗೃಹಕ್ಕೆ ತೆರಳಿದರು.

ರಾಮರಾಜ್ಯದಲ್ಲಿ ಪ್ರಜೆಗಳು ಪರಮ ಪವಿತ್ರವಾದ ಮನೋಹರವಾದ ರಾಮನ ಚರಿತ್ರೆಯನ್ನು ಗಾನ ಮಾಡುತ್ತಿದ್ದರು. ವ್ರತಗಳು, ಯಾಗಗಳು ಮಾಡಿದರೂ ಜ್ಞಾನವೈರಾಗ್ಯಗಳನ್ನು ಹೊಂದಿದ್ದರೂ ಪ್ರೇಮವಿಲ್ಲದಿದ್ದರೆ ರಾಮನ ದರ್ಶನವು ದೊರಕದು. ಜ್ಞಾನಿ, ತಪಸ್ವಿ, ಶೂರ, ಕವಿ, ಪಂಡಿತ, ಸಕಲಗುಣರಾಶಿ—ಇವರು ಯಾರನ್ನೂ ಲೋಭವು ಬಾಧಿಸಲಾರದು. ಶ್ರೀರಾಮನ ರಾಜ್ಯದಲ್ಲಿ ಯಾರನ್ನೂ ಲೋಭವು ಬಾಧಿಸುತ್ತಿರಲಿಲ್ಲ. ಧನ ಮದದಿಂದ ಯಾರೂ ತಪ್ಪು ಮಾರ್ಗ ಹಿಡಿಯುತ್ತಿರಲಿಲ್ಲ. ಅಧಿಕಾರ ಬಲದಿಂದ ಯಾರೂ ಕಿವುಡರಾಗಿರಲಿಲ್ಲ. ಯೌವ್ವನ ಜ್ವರದಿಂದ ಬಾಧೆ ಪಡೆದವರಾರು? ಮಮಕಾರದಿಂದ ಕೀರ್ತಿ ನಾಶಮಾಡಿಕೊಳ್ಳು ವವನೆಲ್ಲಿ? ಮತ್ಸರವೆನ್ನುವ ಮಚ್ಚೆ ಇಲ್ಲದವನು, ಶೋಕವೆನ್ನುವ ವಾಯುವಿನಿಂದ ಕಂಪಿಸದವನು, ಚಿಂತೆಯೆಂಬ ಸರ್ಪದಿಂದ ಕಡಿಯಲ್ಪಡದವನು ಎಲ್ಲಿ? ಅವನೇ ಶ್ರೀರಾಮ. ಇವುಗಳಿಗೆ ಕಟ್ಟು ಬೀಳದೆ, ಎಲ್ಲಕ್ಕೂ ಅತೀತನಾಗಿ, ಆತ್ಮರೂಪನಾಗಿ ನಿಂತವನು ಭಗವಂತನೊಬ್ಬನೇ.

ಈ ಲೋಕದಲ್ಲಿ ಮಾಯೆಯ ಪ್ರಚಂಡ ಸೈನ್ಯಗಳು ತಿರುಗುತ್ತಿರುವುದು—ಕಾಮಾದಿ ಗಳು ಯೋಧರು, ಭಟರು; ಪಾಷಂಡ ಮುಂತಾದುವು ಸೇನಾಧಿಪತಿಗಳು. ಆ ಮಾಯೆ ರಘುನಾಥನ ದಾಸಿ. ಆಕೆ ಮಿಥ್ಯೆ. ಅವನ ಕಟಾಕ್ಷ ಅದನ್ನು ನಾಶಗೊಳಿಸುವುದು. ಯಾವ ಮಾಯೆಯು ಚರಾಚರ ಜಂತುಜಾಲವನ್ನಾಡಿಸು ವುದೋ ಮಾಯೆಯ ಪ್ರಭಾವವನ್ನು ತಿಳಿದವರಿಲ್ಲವೋ ಅಂಥ ಮಾಯೆಯು ತನ್ನ ಅನುಚರರಾದ ಕಾಮಾದಿಗಳೊಂದಿಗೆ ಭಗವಂತನ ಭೂ ವಿಲಾಸವನ್ನನುಸರಿಸಿ ನಾಟ್ಯವಾಡುವುದು. ರಘುರಾಮನು ಸಚ್ಚಿದಾನಂದ ಮೂರ್ತಿ, ಘನಶ್ಯಾಮ, ಹುಟ್ಟಿ ಲ್ಲದವನು. ಅಂಥ ಪರಮಾತ್ಮನಲ್ಲಿ ಮಾಯೆ ಲೇಶವೂ ಇರದು.

**ಧರ್ಮ ರಾಜ್ಯ**: ಅಯೋಧ್ಯಾ ನಗರದಲ್ಲಿ ನಿತ್ಯೋತ್ಸವ ಜರುಗುತ್ತಿತ್ತು. ಅನುದಿನವೂ ರಾಮನು ದಾನದ ಮೂಲಕ ಧನವನ್ನು ವಿನಿಯೋಗಿಸುವನು. ಒಬ್ಬರನ್ನೊಬ್ಬರು ನಿಂದಿಸುವುದಾಗಲೀ ದುರ್ಭಾಷೆಗಳನ್ನಾಡುವುದಾಗಲೀ ಇರಲಿಲ್ಲ. ಪ್ರತಿ ಮನೆ ಯಲ್ಲೂ ದಿನವೂ ವೇದಪಾರಾಯಣ, ಪುರಾಣ ಶ್ರವಣ ಜರುಗುತ್ತಿತ್ತು. ಅವರವರ ಕುಲ ಧರ್ಮಗಳನ್ನನುಸರಿಸಿ ಅವರವರು ನಡೆದುಕೊಳ್ಳುತ್ತಿದ್ದರು. ಪರಕುಲಗಳನ್ನು ತಿರಸ್ಕರಿಸುವುದಾಗಲೀ ಕೀಳಾಗಿ ಭಾವಿಸುವುದಾಗಲೀ ರಾಮನ ಪರಿಪಾಲನೆಯಲ್ಲಿ ಎಲ್ಲಿಯೂ ಕಾಣುತ್ತಿರಲಿಲ್ಲ. ರಾಮನಿಗೆ ಪ್ರಜೆಗಳಲ್ಲಿ ದಯಾನುರಾಗಗಳು ಅಧಿಕ ವಾಗಿತ್ತು. ಅವನ ಕಾಲದಲ್ಲಿ ಸ್ತ್ರೀಯರು ಭಕ್ತಿ ಶ್ರದ್ಧೆಗಳಿಂದ ತಮ್ಮ ಪತಿಗಳ ಶುಶ್ರೂಷೆ ಮಾಡುತ್ತಿದ್ದುದನ್ನು ನೋಡಿ ದೇವತಾ ಸ್ತ್ರೀಯರೂ ಕೂಡ ನಾಚಿಕೆಪಡುತ್ತಿದ್ದರು. ಅಂದಿನ ಪತಿಗಳು ಅವರಿಗೆ ತಕ್ಕಂತಹವರಾಗಿದ್ದರು. ಆ ಕಾಲದ ಪತಿಗಳೂ ಸಹ

ಪತ್ನಿಯರ ಕಣ್ಣಲ್ಲಿ ನೀರು ತರಿಸುತ್ತಿರಲಿಲ್ಲ. ಸತಿಪತಿಯರು ಇಬ್ಬರೂ ಅರ್ಧರ್ಧ ದೇಹಗಳೆಂದು ಭಾವಿಸಿ ಒಬ್ಬರನ್ನೊಬ್ಬರು ಅನುಸರಿಸಿ, ಅನ್ಯೋನ್ಯ ಅನುಕೂಲವಾಗಿ ಬಾಳುತ್ತಿದ್ದರು. ಅಸತ್ಯವನ್ನು ರಾಮನ ಕಾಲದಲ್ಲಿ ಯಾವ ಸಮಯದಲ್ಲೂ ಆಡುತ್ತಿರ ಲಿಲ್ಲ. ತಂದೆತಾಯಿಗಳ ಆಜ್ಞೆಯನ್ನು, ಗುರುಗಳ ಆಜ್ಞೆಯನ್ನು ಬಾಲಬಾಲಿಕೆಯರು ಮನ್ನಿಸುತ್ತಿದ್ದರು. ಎಲ್ಲರೂ ದೇವೇಂದ್ರ ಭೋಗಗಳನ್ನನುಭವಿಸುತ್ತಿದ್ದರು. ಜನರಲ್ಲಿ ಕುಬೇರ ಸಮಾನವಾದ ಸಮೃದ್ಧ ಧನ ಧಾನ್ಯ ಇರುತ್ತಿತ್ತು. ಶರತ್ಕಾಲದ ಚಂದ್ರಬಿಂಬ ವನ್ನು ನೋಡಿ ಚಕೋರವು ಸಂತಸಿಸುವಂತೆ ಅಂತಃಪುರದ ಸ್ತ್ರೀಯರು ರಾಮನನ್ನು ನೋಡಿ ಆನಂದಿಸುತ್ತಿದ್ದರು. ರಾಮನ ದಿವ್ಯ ಮಂಗಳ ವಿಗ್ರಹವನ್ನು ಕಣ್ಣಾರೆ ನೋಡಿ ಭರತ, ಲಕ್ಷ್ಮಣ, ಶತ್ರುಘ್ನರ ಮನಸ್ಸು ಆಪ್ಯಾಯಮಾನವಾಗುತ್ತಿತ್ತು.

ರಾಮನ ಪ್ರಭುತ್ವದಲ್ಲಿ ಲೋಕವೆಲ್ಲವೂ ಸಂಪೂರ್ಣ ಕಲೆಗಳಿಂದ ತುಂಬಿತ್ತು. ಪಾಪವೆನ್ನುವ ಮಾತೇ ಇರಲಿಲ್ಲ. ಮುನೀಶ್ವರರು ನಿರ್ಭಯವಾಗಿ ವನಗಳಲ್ಲಿ ಸಂಚರಿಸುತ್ತಿದ್ದರು. ರಾಜನಿಗೂ ಪ್ರಜೆಗಳಿಗೂ ಅನ್ಯೋನ್ಯಾನುರಾಗ ಬೆಳೆದಿತ್ತು. ಭೂಮಿಯೆಲ್ಲಾ ಶೋಭಾಯಮಾನವಾಗಿತ್ತು. ವನಗಳು ಕಳಕಳಿಸುತ್ತಿದ್ದವು. ಪಕ್ಷಿ ಗಳೂ ಮೃಗಗಳೂ ಸ್ವಾಭಾವಿಕ ವಿರೋಧವನ್ನು ಬಿಟ್ಟು ಪರಸ್ಪರ ಮೈತ್ರಿಯಿಂದ ಜೀವಿಸುತ್ತಿದ್ದವು. ರಾಮರಾಜ್ಯದಲ್ಲಿ ವೈರವೆನ್ನುವ ಮಾತೇ ಇರಲಿಲ್ಲ. ಎಲ್ಲರೂ ಪರಮ ಸುಖದಿಂದಿದ್ದರು. ಪ್ರತಿ ವ್ಯಕ್ತಿಯೂ ರಾಮನ ಪ್ರಭಾವವನ್ನು ವರ್ಣಿಸು ವುದರಲ್ಲಿ ಎಷ್ಟೋ ಉಲ್ಲಾಸಗೊಳ್ಳುತ್ತಿದ್ದನು.

**ಬ್ರಾಹ್ಮಣನ ವಿಲಾಪ**: ಇಂಥ ರಾಮರಾಜ್ಯದಲ್ಲಿ ಒಂದು ದಿನ ಹಜಾರದಲ್ಲಿ ರಾಮನು ತಮ್ಮಂದಿರೊಂದಿಗೆ ಸಿಂಹಾಸನಾರೂಢನಾಗಿದ್ದ ಸಮಯದಲ್ಲಿ ಒಬ್ಬ ಬ್ರಾಹ್ಮಣನು ದುಃಖಿಸುತ್ತಾ ರಾಜಸಭೆಗೆ ಬಂದು, ಅನೇಕ ನಿಷ್ಠೂರ ವಾಕ್ಯಗಳನ್ನು ನುಡಿದನು. ದೈನ್ಯದಿಂದ ಮೊರೆಯಿಟ್ಟನು. "ಅಯ್ಯೋ! ಲೋಕದಲ್ಲಿ ಸೂರ್ಯ ವಂಶದ ರಾಜರ ಕೀರ್ತಿ ಪ್ರತಿಷ್ಠೆಗಳು ಇಂದಿಗೆ ಅಂತ್ಯವಾದುವು. ಶಿಬಿ, ರಘು, ದಿಲೀಪ, ಸಗರರ ಕಾಲದಲ್ಲಿ ಇಂಥ ವಿಪರೀತ ಜರುಗಿತೇ? ಎಲ್ಲಿಯಾದರೂ ತಂದೆ ಬದುಕಿರುವಾಗಲೇ ಮಗ ಸತ್ತದ್ದುಂಟೆ? ಇಂದು ಇಂತಹ ವಿಪರೀತವನ್ನು ಕಂಡೆನಲ್ಲಾ," ಎಂದು ಗೋಳಾಡಿದನು. ಸರ್ವಾಂತರ್ಯಾಮಿಯಾದ ರಾಮನು ಅವನ ದುಃಖಕ್ಕೆ ಕಾರಣವನ್ನು ತಿಳಿದು, ಅವನ ಪುತ್ರನು ರಾಜ್ಯಪರಿಪಾಲನಾ ದೋಷದಿಂದ ಸತ್ತಿಲ್ಲವೆಂದೂ ದುಶ್ಚಿಂತೆಯ ಕಾರಣದಿಂದ ಅವನಿಗೆ ದುರ್ಮರಣ ಸಂಭವಿಸಿದೆಯೆಂದೂ ತಿಳಿಸಿದನು. ಅಂದಿನಿಂದ ಅಂಥ ದುಶ್ಚಿಂತನೆ ಪ್ರಜೆಗಳಲ್ಲಿ ಬರದಂತೆ ಕಟ್ಟುನಿಟ್ಟಾದ ಕ್ರಮವನ್ನು ಜಾರಿಗೆ ತಂದನು. ಸ್ವಾರ್ಥವನ್ನು ಬದಿಗಿಟ್ಟು, ಪ್ರಜಾ ಕ್ಷೇಮವೇ ತನ್ನ ಕ್ಷೇಮವೆಂದೂ ಪ್ರಜೆಗಳೇ ತನ್ನ ದೇಹವೆಂದೂ ಭಾವಿಸಿ

ರಾಜ್ಯವಾಳಿದನು. ಪ್ರಜೆಗಳೂ ಸಹ ರಾಮಚಂದ್ರನೇ ತಮ್ಮ ಹೃದಯವೆಂದು ಭಾವಿಸಿದ್ದರು. ರಾಮನು ಪ್ರಜೆಗಳ ಇಷ್ಟಕ್ಕೆ ವಿರುದ್ಧವಾಗಿ ಎಂದೂ ಆಲೋಚಿಸಿದವನಲ್ಲ. ಪ್ರಜೆಗಳೂ ಕೂಡ ಪ್ರಭುವಿನ ಆಜ್ಞೆಯನ್ನು ಸ್ವಪ್ನದಲ್ಲಿ ಸಹ ಗೆರೆ ದಾಟಿದವರಲ್ಲ. ಹೀಗೆ ರಾಮರಾಜ್ಯವು ಹಲವು ವರ್ಷಗಳು ಪ್ರಶಾಂತವಾಗಿ ಸಾಗಿತು.

## ೩೧ ಸೀತಾ ಪರಿತ್ಯಾಗ

**ಗೂಢಚಾರರು**: ದೇಶದಲ್ಲೂ ನಗರದಲ್ಲೂ ಚಾರರು ಗೂಢವಾಗಿ ಸಂಚರಿಸಿ ಪ್ರತಿದಿನ ಸಂಜೆ ಅರಮನೆಗೆ ಬಂದು ಎಲ್ಲ ವೃತ್ತಾಂತವನ್ನೂ ಪ್ರಭುವಿಗೆ ತಿಳಿಸುವುದು ಪರಿಪಾಠವಾಗಿತ್ತು. ಅವರು ಹೇಳಿದ ವಿಷಯಗಳನ್ನು ರಾಜನು ಕೇಳುತ್ತಿದ್ದನು. ಹೀಗಿರುವಲ್ಲಿ ಒಮ್ಮೆ ಚಾರನೊಬ್ಬನು ಶ್ರೀರಾಮನ ಬಳಿಗೆ ಬಂದು ನಮಸ್ಕರಿಸಿ ಮೌನವಾಗಿ ನಿಂತನು. ರಾಮನು ಅವನನ್ನು ಎಷ್ಟು ಪ್ರಶ್ನಿಸಿದರೂ ಮಾತನಾಡಲಿಲ್ಲ. ಕೊನೆಗೆ ಅವನು ಧೈರ್ಯತಂದುಕೊಂಡು, "ಮಹಾರಾಜಾ! ನನ್ನನ್ನು ಕ್ಷಮಿಸಿ. ನಗರದಲ್ಲಿ ಒಬ್ಬ ಅಗಸರವನೂ ಅವನ ಹೆಂಡತಿಯೂ ಜಗಳವಾಡುತ್ತಿದ್ದರು. ಆ ಅಗಸನು ಹೆಂಡತಿಗೆ, 'ಲೇ, ನಿನ್ನನ್ನು ಸ್ವೀಕರಿಸಲಿಕ್ಕೆ ನಾನೇನು ರಾಮನಲ್ಲ. ಇಷ್ಟು ಕಾಲ ನೀನು ಬೇರೆಯವರ ಮನೆಯಲ್ಲಿದ್ದೆ, ಆದ್ದರಿಂದ ನಿನ್ನನ್ನು ಮನೆಗೆ ಸೇರಿಸಲಾರೆ, ಹೊರಡು,' ಎಂದನು," ಎಂದು ಬಿನ್ನವಿಸಿದನು. ಅವನ ಮಾತು ಬಾಣದಂತೆ ರಾಮನ ಹೃದಯ ನಾಟಿತು. ಆವನು ಚಿಂತೆಗೊಳಗಾದನು.

ಆ ರಾತ್ರಿಯೆಲ್ಲಾ ರಾಮನಿಗೆ ನಿದ್ರೆ ಬರಲಿಲ್ಲ, ಆ ಮಾತೇ ರಾಮನ ಮನಸ್ಸಿನಲ್ಲಿ ಮೇಲಿಂದ ಮೇಲೆ ಬರುತ್ತಿತ್ತು. "ನಾನು ರಾಜ್ಯಭಾರ ಮಾಡಿದ ಒಂದು ಯುಗ ಕಳೆಯಿತು. ಇನ್ನು ಕೆಲವೇ ವರ್ಷ ರಾಜ್ಯಭಾರ ಮಾಡಬೇಕಾಗುವುದು. ಹೌದು! ನಾನು ಜಾನಕಿಯನ್ನು ಬಿಡಬೇಕು. ವೇದಮಾರ್ಗವನ್ನು ಎತ್ತಿ ಹಿಡಿಯಬೇಕು," ಎಂದು ನಿಶ್ಚಯಿಸಿದನು. ಆ ರಾತ್ರಿ ಜಾನಕಿಯೊಂದಿಗೆ ಸಂತೋಷದಿಂದ ಸ್ವಲ್ಪ ಕಾಲ ಕಳೆದು, ಜಾನಕಿಯನ್ನುದ್ದೇಶಿಸಿ ಮುಗುಳ್ನಗುತ್ತಾ, "ಜಾನಕೀ! ನೀನಿನ್ನು ನಿನ್ನ ಪವಿತ್ರಧಾಮಕ್ಕೆ ಹೊರಡು," ಎಂದು ಹೇಳಿದನು. ತಕ್ಷಣವೇ ಜಾನಕಿ ರಾಮನಿಗೆ ನಮಸ್ಕರಿಸಿ ಸೂಕ್ಷ್ಮ ರೂಪದಲ್ಲಿ ವೈಕುಂಠಕ್ಕೆ ಹೋದಳು. ಈ ವಿಷಯ ಚರಾಚರ

ಲೋಕಕ್ಕೆ ತಿಳಿಯದು. ಮಾಯಾ ಸೀತೆ ಮಾತ್ರ ರಾಮನ ಎದುರು ನಿಂತಿದ್ದಳು. ರಾಮನು ಆ ಮಾಯಾ ಸೀತೆಯನ್ನು ನೋಡಿ, "ಸೀತಾ! ಇದುವರೆಗೂ ನೀನು ನನ್ನಿಂದ ಒಂದು ವರವನ್ನೂ ಕೇಳಿಲ್ಲ. ಆದರೂ, ನಿನಗೊಂದು ವರವನ್ನು ಕೊಡುತ್ತೇನೆ, ಕೇಳು," ಎಂದನು. ಅವಳು, "ನಾಥಾ! ಮುನಿ ಆಶ್ರಮಗಳಲ್ಲಿ ವಿಹರಿಸಬೇಕೆಂದು ನನ್ನದೊಂದು ಆಶೆ ಇದೆ," ಎನ್ನಲು, ರಾಮನು, "ಹಾಗೇ ಆಗಲಿ, ನಾಳೆ ಪ್ರಾತಃಕಾಲ ನೀನು ಪ್ರಯಾಣ ಮಾಡುವಿಯಂತೆ," ಎಂದನು.

**ರಾಮ ಸಂಕಲ್ಪ**: ಪ್ರಾತಃಕಾಲವಾಯಿತು. ರಾಮನು ಎಚ್ಚರಗೊಂಡನು. ಯಾಚಕ ಜನರು ರಾಮನ ಗುಣಗಾನಮಾಡುತ್ತಿದ್ದರು. ಸೀತೆಯು ಮುನಿಕನ್ಯೆಯರಿಗೂ ಮುನಿಪತ್ನಿಯರಿಗೂ ಬೇಕಾದ ವಸ್ತ್ರಾದ್ಯಲಂಕಾರಗಳನ್ನು ಮೂಟೆ ಕಟ್ಟಿಕೊಂಡು ಸಿದ್ಧವಾದಳು. ಭರತ, ಲಕ್ಷ್ಮಣ, ಶತ್ರುಘ್ನರು ಬಂದು ರಾಮನ ಚರಣಗಳಿಗೆ ನಮಸ್ಕರಿಸಿದರು. ರಾಮನ ಮುಖ ಉದ್ವೇಗಭರಿತವಾಗಿತ್ತು. ಶರೀರ ಬಿಗಿದಿತ್ತು. ಅವಯವಗಳೆಲ್ಲಾ ಕಂಪಿಸುತ್ತಿದ್ದವು. ಅವನ ವ್ಯಾಕುಲಕ್ಕೆ ಕಾರಣ ತಿಳಿಯದೆ ತಮ್ಮಂದಿರು ಗಡಗಡ ನಡುಗಿದರು. ಕಡೆಗೆ ರಾಮನೇ ವಿಷಯವನ್ನು ತಿಳಿಸಿದನು. ನಿಟ್ಟುಸಿರು ಹುಯ್ಯುತ್ತಾ "ತಮ್ಮಂದಿರೇ! ನನ್ನ ಮಾತಿಗೆ ಅಲ್ಲವೆಂದು ಹೇಳದೆ, ಜಾನಕಿಯನ್ನು ಕರೆದೊಯ್ದು ವನದಲ್ಲಿ ಬಿಟ್ಟು ಬನ್ನಿ," ಎಂದನು. ಆ ಮಾತನ್ನು ಕೇಳಿ ಅವರು ನಿಶ್ಚೇಷ್ಟಿತರಾದರು. ಅವರ ಶರೀರ ಹೃದಯಗಳು ಉರಿದವು, ಅವರು ವ್ಯಾಕುಲಗೊಂಡರು. ಬಾಯಲ್ಲಿ ಮಾತು ಹೊರಡಲಿಲ್ಲ. ಕೈಕಾಲುಗಳು ಅದುರಿದವು.

ಶತ್ರುಘ್ನನು ಕೈ ಜೋಡಿಸಿಕೊಂಡು, "ರಾಮಾ! ನಿಮ್ಮ ಮಾತು ನಮ್ಮ ಹೃದಯಗಳನ್ನು ಭೇದಿಸಿತು. ಜಾನಕಿ ಲೋಕಮಾತೆ, ನೀವು ಲೋಕಪಿತರು. ಸಕಲ ಜೀವಿಗಳ ಹೃದಯಗಳಲ್ಲೂ ನೆಲೆಸಿರುವವರು. ಸಚ್ಚಿದಾನಂದ ಪುರುಷರು. ನೀವು ಯಾವ ಕಾರಣದಿಂದ ಜಾನಕಿಯನ್ನು ಬಿಡುತ್ತಿದ್ದೀರಿ? ತ್ರಿಕರಣ ಶುದ್ಧಿಯಾಗಿ ಆವಳು ನಿತ್ಯ ಪವಿತ್ರಳಲ್ಲವೇ? ಓ ರಾಕ್ಷಸಾಂತಕಾ! ನೀವು ಸರ್ವಜ್ಞರು. ಆಕೆ ಈಗ ಗರ್ಭವತಿ. ಇಂಥ ಸ್ಥಿತಿಯಲ್ಲಿ ಆಕೆಯನ್ನು ಒಂಟಿಯಾಗಿ ಬಿಡುವುದು ಧರ್ಮವೇ?" ಎಂದು ದುಃಖವನ್ನು ತಡೆದುಕೊಳ್ಳಲಾರದೆ, ಗೊಳ್ಳೆಂದು ಅಳುತ್ತಾ ನಿಂತನು. ರಾಮನು, "ತಮ್ಮಾ! ನೀನು ನನ್ನ ಮಾತನ್ನು ಉಲ್ಲಂಘಿಸಿದೆಯಾದರೆ, ನನ್ನ ಪ್ರಾಣ ಈ ಶರೀರದಲ್ಲಿ ನಿಲ್ಲದು, ಮಂಗಳವಾಗಲಿ. ತಮ್ಮಂದಿರೇ! ನನ್ನ ಮಾತಿನ ಪ್ರಕಾರ ಪ್ರಾತಃಕಾಲ ಜಾನಕಿಯನ್ನು ವನಕ್ಕೆ ಕರೆದೊಯ್ದು ಬಿಟ್ಟು ಬನ್ನಿ," ಎಂದವನೆ, ತಲೆತಗ್ಗಿಸಿ ದುಃಖಿಸುವವನಂತೆ ನಟಿಸಿದನು.

ಕರ್ಣ ಕಠೋರವಾದ ರಾಮನ ವಚನಗಳನ್ನು ಕೇಳಿ ಭರತನು, "ಓ ನಾಥಾ! ನಾನು ಬುದ್ಧಿಹೀನ. ಆದರೂ, ನನ್ನ ಬಿನ್ನಪವನ್ನು ಕೇಳು. ನಮ್ಮ ಸೂರ್ಯ ವಂಶಕ್ಕೆ ಲೋಕದಲ್ಲಿ ಹೆಸರು ಪ್ರತಿಷ್ಠೆಗಳಿವೆ. ತಂದೆ ದಶರಥ ಮಹಾರಾಜ, ತಾಯಿ ಕೌಸಲ್ಯೆ ಕೀರ್ತಿಶಾಲಿಗಳು. ನೀವು ಸ್ವಯಂ ತ್ರಿಲೋಕಾಧಿಪತಿಗಳು. ನಿಮ್ಮ ಕೀರ್ತಿ ಲೋಕ ಪ್ರಸಿದ್ಧವಾದುದು. ವೇದಗಳೂ, ಶೇಷನೂ ನಿಮ್ಮ ಕೀರ್ತಿಯನ್ನು ಗಾಯನ ಮಾಡುತ್ತಾರೆ. ಜಾನಕಿ ಸಕಲ ಶುಭಗಳನ್ನೂ ಮಂಗಳವನ್ನೂ ನೀಡುವವಳು. ಅವಳು ಮಹಾ ಪತಿವ್ರತೆ. ಅವಳ ನೆರಳು ಬಿದ್ದ ಮಾತ್ರಕ್ಕೆ ಸ್ತ್ರೀಯರು ಸದ್ಗತಿ ಹೊಂದುವರು. ಅಂಥ ಜಾನಕಿ ನಿಮ್ಮನ್ನು ಬಿಟ್ಟು ವನದಲ್ಲಿ ಇರಬಲ್ಲಳೆ? ಒಂದು ನಿಮಿಷ ನಿಮ್ಮನ್ನಗಲಿ ಜೀವಿಸಬಲ್ಲಳೇ? ಸಕಲ ಗುಣ ಸಂಪನ್ನೆ. ಜ್ಞಾನಸ್ವರೂಪಿಣಿ ಜಾನಕಿ ಒಂಟಿಯಾಗಿ ಜೀವಿಸುವುದು ಅಸಾಧ್ಯ," ಎಂದು ಬಿನ್ನವಿಸಿದನು. ಈ ಪ್ರಕಾರ ಭರತನು ಹೇಳಿದ ಮಾತುಗಳನ್ನು ಕೇಳಿ, ಶ್ರೀರಾಮನು, "ಭರತಾ! ನೀನು ನೀತಿಯುತವಾದ ಮಾತುಗಳನ್ನೇ ಆಡಿದ್ದೀಯೆ. ರಾಜನು, ರಾಜನೀತಿಯ ಪ್ರಕಾರ ಧನವನ್ನೂ ಧರ್ಮವನ್ನೂ ಕಾಪಾಡಬೇಕು. ಪ್ರಜಾಪಾಲನೆಯಲ್ಲಿ ಜನರನ್ನು ಕ್ಷೋಭೆಗೊಳಪಡಿಸಬಾರದು. ಅತ್ಯಾನುರಾಗದಿಂದ ಪ್ರಜೆಗಳನ್ನು ರಕ್ಷಿಸಬೇಕು," ಎಂದು ದೂತ ಹೇಳಿದ ಮಾತುಗಳನ್ನು ತಮ್ಮಂದಿರಿಗೆ ತಿಳಿಸಿದನು. "ತಮ್ಮಂದಿರೇ! ನಮ್ಮ ವಂಶಕ್ಕೆ ದೊಡ್ಡ ಕಳಂಕ ಬಂದಿದೆ. ನಮ್ಮ ವಂಶದಲ್ಲಿ ಅನೇಕ ಜನ ರಾಜರು ಆಗಿ ಹೋಗಿದ್ದಾರೆ. ಅವರು ಒಬ್ಬರಿಗಿಂತೊಬ್ಬರು ಸುಪ್ರಸಿದ್ಧರು. ಅವರ ಕೀರ್ತಿ ಪ್ರತಿಷ್ಠೆಗಳು ಲೋಕ ವಿದಿತ. ಭೂಲೋಕದಲ್ಲಿ ಅವರನ್ನು ತಿಳಿಯದವರೇ ಇಲ್ಲ. ಅವರು ಪ್ರಾಣವನ್ನಾದರೂ ಬಿಡುತ್ತಿದ್ದರೇ ವಿನಾ ಆಡಿದ ಮಾತಿಗೆ ತಪ್ಪಿದವರಲ್ಲ. ನಮ್ಮ ವಂಶಕ್ಕೆ ಕಳಂಕವಿಲ್ಲ. ಕಳಂಕ ತಪ್ಪಿಸಲು ಪ್ರಾಣವನ್ನಾದರೂ ಬಿಡಲು ಸಿದ್ಧನಿಲ್ಲದವನು ನೀಚನು," ಎಂದನು.

ಭರತನು, "ನಾಥಾ! ಜಾನಕಿಗೆ ಲೇಶವಾದರೂ ಕಳಂಕವಿಲ್ಲ. ಅಗ್ನಿಹೋತ್ರದಿಂದ ಜಾನಕಿ ಹೊರಬಂದಿದ್ದಾಳೆ. ಜಾನಕಿಗೆ ಕಳಂಕವಿದೆಯೆಂದು ದೇವತೆಗಳಾಗಲೀ ಮನುಷ್ಯರಾಗಲೀ ಸ್ವಪ್ನದಲ್ಲೂ ಸಹ ಹೇಳರು. ಜಾನಕಿ ಪಾಪಿಷ್ಟಳೆಂದು ತಿಳಿದವರು ರೌರವಾದಿ ನರಕದಲ್ಲಿ ಕೋಟಿವರ್ಷಗಳ ಕಾಲ ಕಲ್ಪಾಂತದವರೆಗೂ ಬಾಧೆ ಅನುಭವಿಸುವರು," ಎಂದು ಆವೇಶದಿಂದ ನುಡಿದಾಗ, ರಾಮನು ತಾಳಿದ ರೌದ್ರರೂಪವನ್ನೂ ಅವನ ಕೋಪವನ್ನೂ ಅವನ ಕೋಪಾರುಣ ನೇತ್ರಗಳನ್ನೂ ನೋಡಿ ಲಕ್ಷ್ಮಣನು ಭರತನ ಹಿಂದೆ ಅವಿತುಕೊಂಡನು. ಲಕ್ಷ್ಮಣನನ್ನುದ್ದೇಶಿಸಿ ರಾಮನು, "ಓ ಲಕ್ಷ್ಮಣಾ! ವಿಶಾದವನ್ನೂ ಮೂರ್ಖತ್ವವನ್ನೂ ಬಿಟ್ಟು, ಜನರು ಆಡಿದ ಒಳ್ಳೆಯ ಮತ್ತು ಕೆಟ್ಟ ಮಾತುಗಳನ್ನು ಅರ್ಥಮಾಡಿಕೊ. ನನ್ನ ಆಜ್ಞೆಯನ್ನು

ಉಲ್ಲಂಘಿಸಿ ಪ್ರತ್ಯುತ್ತರವನ್ನಿತ್ತೆಯಾದರೆ ನಿನ್ನ ಜನ್ಮಾಂತದವರೆಗೂ ನಾನು ಚಿಂತಿಸಬೇಕಾಗುವುದು. ಜಾನಕಿಯನ್ನು ರಥದಲ್ಲಿ ಕೂರಿಸಿಕೊಂಡು ಹೋಗಿ ಗಂಗಾನದಿ ತೀರದಲ್ಲಿ, ಸಾಂದ್ರಾರಣ್ಯದ ನಿರ್ಜನ ಪ್ರದೇಶದಲ್ಲಿ ಅವಳನ್ನು ಬಿಟ್ಟು ಬಾ," ಎಂದು ಆಜ್ಞಾಪಿಸಿದನು. ದುಃಖಗೊಂಡ ಲಕ್ಷ್ಮಣ ನಿರಾಶೆಯಿಂದ ಸಾಯಲು ಸಿದ್ಧನಾಗಿ, ಆಹಾರಗಳನ್ನೂ ಬಟ್ಟೆಬರೆಗಳನ್ನೂ ರಥದಲ್ಲಿಟ್ಟುಕೊಂಡು ಜಾನಕಿಯನ್ನು ಕೂರಿಸಿಕೊಂಡು ಹೊರಟನು. ಲಕ್ಷ್ಮಣಮೂರ್ತಿಯ ಮುಖ ಸಣ್ಣದಾಗಿದುದನ್ನು ನೋಡಿ ಸೀತೆಯ ಮನಸ್ಸು ವ್ಯಾಕುಲಗೊಂಡಿತು. ಮಣಿಯನ್ನು ಕಳೆದುಕೊಂಡ ಸರ್ಪದಂತೆ ಅವಳು ಒಳಗೊಳಗೇ ತಳಮಳಗೊಂಡಳು.

**ಕಾಡುಪಾಲು**: ಅವರು ಗಂಗಾತೀರಕ್ಕೆ ಬಂದರು. ಆ ಕಾರಡವಿಯನ್ನು ನೋಡಿ ಇಬ್ಬರೂ ಭಯಗೊಂಡರು. ಲಕ್ಷ್ಮಣನು ಸಹ ಭಯಪಟ್ಟಿದ್ದನ್ನು ನೋಡಿ ಸೀತೆಯ ಮುಖ ಬಿಳುಪಿಟ್ಟಿತು. ಸೀತೆ ತಾನು ಮಾಯಾ ಸೀತೆಯೆಂದು ತಿಳಿದೂ ಲೋಕಕ್ಕಾಗಿ ನಟನೆ ಮಾಡಲಾರಂಭಿಸಿದಳು. "ಲಕ್ಷ್ಮಣಾ! ಇಲ್ಲಿ ಯಾವ ಮುನಿ ಆಶ್ರಮಗಳೂ ಕಾಣಿಸುತ್ತಿಲ್ಲವಲ್ಲಾ! ನನ್ನನ್ನು ಎಲ್ಲಿಗೆ ಕರೆದೊಯ್ಯುತ್ತಿದ್ದೀಯೆ? ಈ ಅಡವಿಯಲ್ಲಿ ನಾನಾ ವಿಧವಾದ ಕ್ರೂರ ಮೃಗಗಳು, ಸರ್ಪ ಮೊದಲಾದುವು ಸ್ವೇಚ್ಛೆಯಾಗಿ ಸಂಚರಿಸುತ್ತಿವೆಯಲ್ಲಾ! ಈ ಪ್ರದೇಶದಲ್ಲಿ ಜನ ಸಂಚಾರವೇ ಕಾಣಿಸುತ್ತಿಲ್ಲ, ಲಕ್ಷ್ಮಣಾ ನನಗೇಕೋ ಭಯವಾಗುತ್ತಿದೆ," ಎಂದು ಕಳವಳಿಸಿದಳು.

ಲಕ್ಷ್ಮಣನ ಮನಸ್ಸು ಕರಗಿತು. "ರಾಮಚಂದ್ರಾ! ಎಂಥ ಕೆಲಸ ಮಾಡಿಬಿಟ್ಟೆ," ಎಂದು ಮನಸ್ಸಿನಲ್ಲೇ ಕೊರಗಿದನು. ಲಕ್ಷ್ಮಣನ ಕರ್ತವ್ಯ ನಿಶ್ಚಯವನ್ನು ತಿಳಿದು ಆಕಾಶವಾಣಿಯೊಂದು, "ಲಕ್ಷ್ಮಣಾ! ಜಾನಕಿಯನ್ನು ಬಿಟ್ಟು ನೀನು ಅಯೋಧ್ಯೆಗೆ ಹಿಂದಿರುಗು. ಸೌಭಾಗ್ಯವತಿಯಾದ ಸೀತೆ ಜೀವಿಸುವಳು," ಎಂದು ನುಡಿಯಿತು. ಆ ಮಾತನ್ನು ಕೇಳಿ ಲಕ್ಷ್ಮಣನಿಗೆ ಧೈರ್ಯ ಬಂದಿತು. ಅವನು ಸೀತೆಗೆ ನಮಸ್ಕರಿಸಿ, ದುಃಖದಿಂದ, "ತಾಯೀ! ನಾನೇನು ಮಾಡಲಿ, ರಾಮಾಜ್ಞೆಯ ಗೆರೆ ದಾಟಲಾರದವನಾಗಿದ್ದೇನೆ. ನಾನು ಮಹಾ ಕಿರಾತ. ನಿನ್ನನ್ನು ಈ ಕಾರಡವಿಯಲ್ಲಿ ಬಿಟ್ಟು ಬರಬೇಕು ಎಂದು ಅಣ್ಣನ ಆಜ್ಞೆಯಾಗಿದೆ," ಎಂದು ಹೇಳಿ ರಥವನ್ನು ಹಿಂದಕ್ಕೆ ತಿರುಗಿಸಿದನು. ಲಕ್ಷ್ಮಣನ ದೃಷ್ಟಿ ಹಿಂದೆ ಹಿಂದಕ್ಕೇ ಹರಿಯಿತು. ಸೀತೆ, "ಲಕ್ಷ್ಮಣಾ! ನನ್ನನ್ನು ಈ ಅರಣ್ಯದಲ್ಲಿ ಬಿಟ್ಟು ಹೋಗುತ್ತಿರುವೆಯಾ? ನನಗೆ ಯಾರು ದಿಕ್ಕು?" ಎಂದು ಸಾಮಾನ್ಯ ಸ್ತ್ರೀಯಂತೆ ರೋದಿಸಿದಳು. ಅವಳ ಮಾತುಗಳು ಶೂಲದಂತೆ ಕರ್ಣರಂಧ್ರಗಳನ್ನು ಭೇದಿಸುತ್ತಿದ್ದರೂ ಲಕ್ಷ್ಮಣನು ಮನಸ್ಸನ್ನು ಕಲ್ಲುಮಾಡಿಕೊಂಡು ನಗರಕ್ಕೆ ಹಿಂದಿರುಗಿದನು. ಸೀತೆ ಮೂರ್ಛೆ ಹೋದಂತೆ ನಟಿಸಿದಳು.

**ವಾಲ್ಮೀಕಿ ಮಹರ್ಷಿ**: ನಂತರ ಎಚ್ಚರ ತಿಳಿದು, "ಓ ರಾಮಚಂದ್ರಾ! ಹುಟ್ಟಿದಾಗಿನಿಂದಲೂ ನನ್ನ ಜೀವಿತ ದುಃಖದ ಪಾಲಾಯಿತು. ಎಷ್ಟು ದುಃಖ ಬಂದರೂ ನನ್ನ ಪ್ರಾಣ ದೇಹವನ್ನು ಬಿಡದೆ ಇದೆ," ಎಂದು ಸೀತೆ ಅತ್ತಳು. ಆ ಸಮಯದಲ್ಲಿ ಗಂಗಾ ನದಿಯಲ್ಲಿ ಸ್ನಾನ ಮಾಡಿ ಆ ಮಾರ್ಗವಾಗಿ ಆಶ್ರಮಕ್ಕೆ ಹೊಗುತ್ತಿದ್ದ ವಾಲ್ಮೀಕಿ ಮಹಾಮುನಿಗಳು, ಈ ಭಯಂಕರಾರಣ್ಯದಲ್ಲಿ ಸ್ತ್ರೀಯ ಧ್ವನಿ ಕೇಳಿಸುತ್ತಿದೆಯಲ್ಲಾ ಎಂದು ಹುಡುಕುತ್ತಾ ಅವಳಿದ್ದ ಸ್ಥಳಕ್ಕೆ ಬಂದರು. ಸೀತೆ ವಾಲ್ಮೀಕಿ ಮಹರ್ಷಿಯನ್ನು ಗುರುತಿಸಿ ತನ್ನ ವೃತ್ತಾಂತವನ್ನು ಅವರಿಗೆ ತಿಳಿಸಿದಳು. "ಮುನಿರಾಜಾ! ನಾನು ಜನಕ ಚಕ್ರವರ್ತಿಯ ಮಗಳು, ಶ್ರೀರಾಮಚಂದ್ರನ ಪತ್ನಿ. ಶ್ರೀರಾಮನು ನನ್ನನ್ನು ತ್ಯಜಿಸಿದ್ದಾನೆ. ಏಕೆ ತ್ಯಜಿಸಿದನೊ ತಿಳಿಯದು. ವಿಧಿಯ ಕೃತ್ಯವನ್ನು ತಪ್ಪಿಸಿಕೊಳ್ಳಲು ಸಾಧ್ಯವೇ? ಮುನಿವರಾ! ಲಕ್ಷ್ಮಣ ನನ್ನನ್ನು ಕರೆದುಕೊಂಡು ಬಂದು ಇಲ್ಲಿ ಬಿಟ್ಟು ಹೋದನು. ಕಾರಣವೇನೆಂದು ಅವನು ನನಗೆ ಹೇಳಲಿಲ್ಲ," ಎಂದು ಹೇಳಿದಳು. ವಾಲ್ಮೀಕಿ ಮಹಾಮುನಿ ಅವಳನ್ನು ಸಂತೈಸಿ, "ಕುಮಾರೀ! ನಿನ್ನ ತಂದೆ ಮಿಥಿಲಾಧಿಪತಿಯಾದ ಜನಕ ನನ್ನ ಮಿತ್ರ, ಶಿಷ್ಯ. ಅವನಿಗೆ ನನ್ನಲ್ಲಿ ಭಕ್ತಿ ವಿಶ್ವಾಸಗಳುಂಟು. ಸುಕುಮಾರೀ! ನೀನೇನೂ ದುಃಖಿಸಬೇಡ. ನನ್ನ ಆಶ್ರಮವನ್ನು ನಿನ್ನ ತಂದೆಯ ಮನೆಯೆಂದು ತಿಳಿ. ನಿನಗೆ ಶುಭವಾಗುವುದು. ಪುನಃ ನಿನಗೆ ರಾಮನ ಸಂಯೋಗವಾಗುವುದು," ಎಂದು ಹೇಳಿದರು. ಜಾನಕಿಯನ್ನು ತನ್ನ ಮಗಳೆಂದು ಭಾವಿಸಿ, ಅವಳನ್ನು ಗಂಗಾನದಿಯಲ್ಲಿ ಸ್ನಾನ ಮಾಡುವಂತೆ ಆಜ್ಞಾಪಿಸಿದರು. ಅವಳು ಸ್ನಾನ ಮಾಡಿ ಶುಚಿರ್ಭೂತಳಾಗಿ ಬಂದು, ವಾಲ್ಮೀಕಿಗೆ ನಮಸ್ಕರಿಸಿದಳು. ಮುನಿ ಅವಳನ್ನು ಆಶ್ರಮಕ್ಕೆ ಕರೆದೊಯ್ದು ಅನೇಕ ವಿಧವಾಗಿ ಧೈರ್ಯ ಹೇಳಿದರು. ಸೀತೆಯು ಅಂದಿನಿಂದ ರಾಮನ ಧ್ಯಾನ ಮಾಡುತ್ತಾ ಆಶ್ರಮದ ಕಾರ್ಯಕ್ರಮದಲ್ಲಿ ಆಶ್ರಮವಾಸಿಗಳೊಂದಿಗೆ ಸೇರಿ ಶಾಂತವಾಗಿ ಕಾಲ ಕಳೆಯುತ್ತಿದ್ದಳು.

**ನಗರದಲ್ಲಿ ಕೋಲಾಹಲ**: ಇತ್ತ ಲಕ್ಷ್ಮಣನು ಸೀತೆಯ ಚಿಂತೆಯಲ್ಲೇ ಕಣ್ಣುಗಳು ಊದುವಷ್ಟು ಅತ್ತು, ನಗರವನ್ನು ಸೇರಿ, ಆ ವಿಷಾದದ ಸಂಗತಿಯನ್ನು ಮೂವರು ತಾಯಿಯರಿಗೂ ತಿಳಿಸಿದನು. ಅವರು ಗೊಳೋ ಎಂದು ಅತ್ತರು. ಜಾನಕಿಗೆ ದೊಡ್ಡ ಆಪತ್ತು ಸಂಭವಿಸಿತೆಂದು ಹೇಳಿ, ಒಂದೆಡೆ ಅವಳ ಗುಣಗಳನ್ನು ಹೊಗಳುತ್ತಾ ಅವಳಂತಹ ಮಹಾಸಾಧ್ವಿಗೆ ಎಂತಹ ದುರ್ಗತಿ ಸಂಭವಿಸಿತೆಂದೂ ಮತ್ತೊಂದೆಡೆ ಮಗನನ್ನೂ ನಿಂದಿಸುತ್ತಿದ್ದರು. ರಾಜನಗರದಲ್ಲಾಗಲೀ ಅಂತಃಪುರದಲ್ಲಾಗಲೀ ಎಲ್ಲ ಕಡೆಯೂ ರೋದನವು ಕೇಳಿಬರುತ್ತಿತ್ತು. ಸ್ತ್ರೀ, ಬಾಲ, ವೃದ್ಧರೆಲ್ಲರೂ ರಾಮನನ್ನು ನಿಂದಿಸುತ್ತಾ ಅಂತಹ ತಾಯಿಗೆ ಇಂತಹ ಶಿಕ್ಷೆಯೇ ಎಂದು ವಿಚಾರಮಾಡದವರಿಲ್ಲ. ಆ ಕೋಲಾಹಲವನ್ನು ರಾಮನು ಕೇಳಿ ತಮ್ಮಂದಿರೊಡನೆ ಮಂದಿರವನ್ನು ಪ್ರವೇಶಿಸಿ

ಹೊರಗಿನ ಪ್ರಜೆಗಳಿಗೆ ಕಾಣದಂತಿದ್ದನು. ನಂತರ ಅವರನ್ನು ಸಮಾಧಾನಪಡಿಸಿ, ಜ್ಞಾನವನ್ನು ಉಪದೇಶಿಸಿದನು. ಪ್ರಜೆಗಳಿಗೆ ರಾಜನೀತಿ ತಿಳಿಯದು. ಪ್ರಜೆಗಳು ಪ್ರಧಾನರೇ ವಿನಾ ಬಂಧು ಮಿತ್ರರಲ್ಲ. ಪ್ರಜೆಗಳೇ ಬಂಧುಗಳು, ಪ್ರಜೆಗಳೇ ನನ್ನ ಮಿತ್ರರು ಎಂದು, ಅಂತಹ ಗುಣಗಳನ್ನು ಹೊಂದಿರುವವನೇ ಪರಿಪಾಲಕನೆಂದು ಅವರಿಗೆ ಅನೇಕ ವಿಧವಾಗಿ ಸಮಾಧಾನ ಪಡಿಸಿದನು.

**ಮಾತೃ ವಿಯೋಗ**: ಸೀತೆಯ ವಿಯೋಗದಿಂದ ಮೂವರು ತಾಯಿಯರೂ ದುಃಖಿಸಿ ಕೃಶವಾದರು. ಕೊನೆಗೆ ಪ್ರಾಣ ಬಿಟ್ಟರು. ಮೂವರು ತಾಯಿಯರೂ ಯೋಗಾಗ್ನಿಯಿಂದಲೆ ತಮ್ಮ ಶರೀರಗಳನ್ನು ದಹಿಸಿ ಪರಮಪದಕ್ಕೆ ಹೋದರು. ನಾಲ್ವರು ಅಣ್ಣತಮ್ಮಂದಿರೂ ತಾಯಿಯರ ಮರಣಕ್ಕೆ ದುಃಖಿಸಿ, ವೇದೋಕ್ತವಾಗಿ ಅವರಿಗೆ ಉತ್ತರಕ್ರಿಯೆಗಳನ್ನು ಮಾಡಿದರು. ಅನಂತರ ರಾಮ, ಲಕ್ಷ್ಮಣ, ಭರತ, ಶತ್ರುಘ್ನರು ತಮ್ಮ ತಮ್ಮ ಪರಿಪಾಲನಾ ಕರ್ತವ್ಯಗಳನ್ನು ನೋಡಿಕೊಳ್ಳುತ್ತಿದ್ದರು.

**ಯಾಗ ಸಿದ್ಧತೆ**: ಹೀಗಿರುವಲ್ಲಿ, ರಾಮನು ಅಶ್ವಮೇಧ ಯಾಗವೊಂದನ್ನು ಮಾಡ ಬೇಕೆಂದೂ ಅದರಿಂದ ಪ್ರಜೆಗಳ ಸಕಲ ದುಃಖಗಳು ನಶಿಸುವುದೆಂದೂ ನಿಶ್ಚಯಿಸಿ, ಅಂಗದಾದಿಗಳಿಗೆ ವರ್ತಮಾನ ಕಳಿಸಿದನು. ತಮ್ಮಂದಿರು ಮತ್ತು ಮಂತ್ರಿಗಳೊಂ ದಿಗೆ ಗುರುವಿನ ಗೃಹಕ್ಕೆ ತೆರಳಿ, ಗುರುಚರಣಗಳಿಗೆ ನಮಸ್ಕರಿಸಿದರು. ಗುರುವು ಅವರನ್ನಾದರಿಸಿದರು. ಮೃದು ವಚನಗಳಿಂದ ಅವರ ಯೋಗಕ್ಷೇಮವನ್ನು ವಿಚಾರಿ ಸಿದರು. ಪುರಾಣಕಥೆ, ಇತಿಹಾಸಗಳನ್ನು ಗುರುವು ಉಪದೇಶಿಸಿದರು. ಅಷ್ಟರಲ್ಲಿ ರಾಮನು, "ಓ ನಾಥಾ! ನನ್ನ ಮನೋರಥವೊಂದು ಇದೆ. ಅದನ್ನು ತಾವು ಪೂರ್ಣಗೊಳಿಸಬೇಕು," ಎಂದು ನಮಸ್ಕರಿಸಿ, ಬಿನ್ನವಿಸಿಕೊಂಡನು. ಅದೇನೆಂದು ವಸಿಷ್ಠರು ಪ್ರಶ್ನಿಸಲು, "ನಾನೊಂದು ಯಜ್ಞವನ್ನು ಸಂಕಲ್ಪಿಸಿದ್ದೇನೆ. ಅದರಿಂದ ಪುರಜನರು ಸಂತೋಷಪಡುವರು. ಇಂದಿನ ವ್ಯಾಕುಲತೆಯನ್ನು ಹೋಗಲಾಡಿಸಿ ನಗರವನ್ನು ಶಾಂತಪಡಿಸುವುದು. ಅದು ಅಶ್ವಮೇಧಯಾಗ. ಅದನ್ನು ಪ್ರಜೆಗಳು ನೋಡಬಯಸುತ್ತಿದ್ದಾರೆ. ನಿಮಗೆ ಹೆದರಿ, ಭರತನು ಆ ವಿಷಯವನ್ನು ನಿಮ್ಮೊಂದಿಗೆ ಹೇಳಲು ಶಂಕಿಸಿದನು. ಸಮಯ ನೋಡಿ ನಾನೇ ಸ್ವತಃ ಹೇಳಬಯಸಿದೆ. ನಿಮ್ಮ ಆಜ್ಞೆಯನ್ನು ಶಿರಸಾವಹಿಸಿ ಅದರಂತೆ ನಡೆದುಕೊಳ್ಳುವೆವು," ಎಂದನು. ಈ ಪ್ರಕಾರ ರಾಮನು ವಿನಯ ವಿಧೇಯತೆಗಳಿಂದ ಬಿನ್ನವಿಸಿಕೊಂಡ ವಾಕ್ಯಗಳನ್ನು ಗುರುವು ಕೇಳಿ ಸಂತೋಷಿಸಿದರು. "ರಾಮಾ! ನಿನ್ನ ಅಭೀಷ್ಟವು ಸಿದ್ಧಿಸುವುದು. ಭರತಾ! ಏಳು. ಅದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡು," ಎಂದು ವಸಿಷ್ಠರು ಆಡಿದ ಮಾತುಗಳಿಂದ ಅಣ್ಣತಮ್ಮಂದಿರು, ಮಂತ್ರಿಯಾದಿಯಾಗಿ ಎಲ್ಲರೂ ಸಂತೋಷಿಸಿದರು. ಅವರು

ಅನೇಕ ವಿಧವಾಗಿ ಗುರುವನ್ನು ಸ್ತುತಿಸಿದರು. ಅವರ ಚರಣಗಳಿಗೆ ನಮಸ್ಕರಿಸಿ ಬ್ರಾಹ್ಮಣರನೇಕರು ಭರತನ ಜೊತೆ ನಡೆದರು.

ಸುಮಂತನು ಪುರಜನರನ್ನು, ಸೇವಕರನ್ನು ಕರೆಸಿ, ನಗರವನ್ನು, ರಾಜಮಾರ್ಗ ವನ್ನು ಅಂಗಡಿ ಬೀದಿಗಳನ್ನು ಶೃಂಗರಿಸಿರೆಂದು ಆಜ್ಞಾಪಿಸಿದನು. ಅಲ್ಲಲ್ಲಿ ಮಂಟಪ ಗಳನ್ನು ನಿರ್ಮಿಸಿರೆಂದು ಹೇಳಿದನು. ಮಂತ್ರಿಯ ಆಜ್ಞಾನುಸಾರವಾಗಿ ಅವರು ಕೆಲಸಗಳನ್ನು ಅತಿ ಶೀಘ್ರವಾಗಿ ನೆರವೇರಿಸಿದರು. ನಗರವು ಕಳೆಕಳೆಯಾಯಿತು. ಸೇವಕರು ಮತ್ತು ಮಂತ್ರಿಗಳು ರಾಮನ ಹತ್ತಿರ ಬಂದು, "ನಿಮ್ಮ ಆಜ್ಞೆಯ ಪ್ರಕಾರ ಮುನೀಶ್ವರರಿಗೆ ವರ್ತಮಾನವನ್ನು ಕಳಿಸಿದ್ದೇವೆ," ಎಂದರು. ರಾಮನು ಗುರುವಿಗೆ ವಾರ್ತೆಯನ್ನು ತಿಳಿಸಿದನು. "ರಾಮಾ! ಜನಕ ಚಕ್ರವರ್ತಿಗೆ ವಿಷಯವನ್ನು ತಿಳಿಸು. ಅವನು ನಿನ್ನ ಯಜ್ಞಕ್ಕೆ ಕುಟುಂಬ ಸಮೇತರಾಗಿ ದಯಮಾಡಿಸುವನು," ಎಂದು ಮೃದು ಮಧುರವಾಗಿ ವಷಿಷ್ಠರು ತಿಳಿಸಿದರು. ಮುನೀಶ್ವರರಿಗೆ, ಬ್ರಾಹ್ಮಣರಿಗೆ ಮತ್ತು ಮಹರ್ಷಿಗಳಿಗೆ ಶುಭ ಸಂದೇಶವನ್ನು ಬರೆಯಲು ಸಹ ತಿಳಿಸಿದರು.

ಶ್ರೀರಾಮನು ಗುರುವಿನ ಸಹಿತವಾಗಿ ಅಯೋಧ್ಯಾ ನಗರವನ್ನು ನೋಡಲು ಹೊರ ಟನು. ಅವರಿಬ್ಬರೂ ಅಯೋಧ್ಯಾ ನಗರದ ಶೃಂಗಾರವನ್ನು ನೋಡಿ ಸಂತೋಷಿಸಿ ದರು. ಅಷ್ಟರಲ್ಲಿ ಸೇವಕರು ದೇಶದೇಶಗಳಿಗೆ ಹೋಗಿ ಆಯಾ ದೇಶಾಧಿಪತಿಗಳಿಗೆ ಶ್ರೀರಾಮನ ಶುಭ ಸಂದೇಶವನ್ನು ತಲುಪಿಸಿದರು. ಯಾಗಕ್ಕೆ ಜಾಂಬವಂತ, ಅಂಗದ, ವಿಭೀಷಣ, ಸುಗ್ರೀವ, ನಲ, ನೀಲ, ಮೊದಲಾದ ವಾನರ ಪುಂಗವರು ಬಂದರು. ಮುನಿಗಳು ಗುಂಪು ಗುಂಪಾಗಿ ನಗರಕ್ಕೆ ಬಂದರು. ಅವರುಗಳನ್ನು ಯಥೋಚಿತವಾಗಿ ಸ್ವಾಗತಿಸಿ, ಸತ್ಕರಿಸಿದರು. ಅವರಿಗೆ ತಕ್ಕ ವಸತಿಗಳನ್ನು ಏರ್ಪಡಿ ಸಿದರು. ವಿಶ್ವಾಮಿತ್ರರು ಬಂದರು. ಅಗಸ್ತ್ಯರು ಬಂದರು. ರಾಮನು ಅವರನ್ನು ಸ್ವಾಗತಿಸಿ ಸತ್ಕರಿಸಿದನು. ಸೇವಕರು ಅವರಿಗೆ ತಕ್ಕ ಸೌಕರ್ಯಗಳನ್ನು ಏರ್ಪಡಿಸಿ ದರು. ದೇದೀಪ್ಯಮಾನವಾಗಿ ಪ್ರಕಾಶಿಸುತ್ತಿದ್ದ ಯಜ್ಞಶಾಲೆಯನ್ನು ನೋಡಿ ಅವರು ಪ್ರಸನ್ನರಾದರು. ಒಬ್ಬ ಸೇವಕನು ಮಿಥಿಲಾಪುರಕ್ಕೆ ಹೊರಟನು. ಮಿಥಿಲಾಪುರಕ್ಕೆ ಶುಭ ಸಮಾಚಾರವನ್ನು ತೆಗೆದುಕೊಂಡು ಹೋದ ಸೇವಕನನ್ನು ನೋಡಿ ಆ ನಗರವಾಸಿಗಳು ಸಂತೋಷಿಸಿದರು. ಸೇವಕನು ಶುಭಸಮಾಚಾರವನ್ನು ಜನಕ ಚಕ್ರವರ್ತಿಗೆ ಬಿನ್ನವಿಸಿದನು. ವಿಷಯವನ್ನು ಕೇಳಿ ಜನಕನ ಶರೀರವು ಪುಳಕಿಸಿತು; ಆನಂದಬಾಷ್ಪಗಳು ಸುರಿದವು. ಜನಕನು ಸೇವಕನನ್ನು, "ಶ್ರೀರಾಮನು ತಮ್ಮಂದಿ ರೊಂದಿಗೆ ಕ್ಷೇಮವೇ?" ಎಂದು ಕೇಳಿದನು. "ಓ ನಾಥಾ! ಈ ಲೇಖನದಿಂದ ಸರ್ವವೂ ವಿಶದವಾಗುವುದು," ಎಂದು ಸೇವಕನು ನಮಸ್ಕರಿಸಿ, ಲೇಖನವನ್ನು ಚಕ್ರವರ್ತಿಗೆ ಒಪ್ಪಿಸಿದನು. ಜನಕನ ಕಂಠವು ಬಿಗಿದು ಮಾತನಾಡಲಾರದಾದನು.

ಚಕ್ರವರ್ತಿಯ ಅವಸ್ಥೆಯನ್ನು ಯಾರು ಹೇಳಬಲ್ಲರು? ಆ ಲೇಖನವನ್ನು ಚಕ್ರವರ್ತಿ ಹಲವು ಬಾರಿ ಓದಿದನು. ಆತನು ಸಂತೋಷಿಸಿ ಸೇವಕರನ್ನು ಕರೆದು, "ಈ ಶುಭ ಸಮಾಚಾರವನ್ನು ನಗರದಲ್ಲಿಯೂ ಪುರಜನರಿಗೂ ಗ್ರಾಮಗಳಲ್ಲಿಯೂ ಬಿತ್ತರಿಸಿ. ದಶವಿಧ ವಾದ್ಯಗಳನ್ನು ಮೊಳಗಿಸಿ," ಎಂದು ಆಜ್ಞಾಪಿಸಿದನು. ಮಂತ್ರಿಯನ್ನು ಕರೆದು ಶುಭ ಸಂದೇಶವನ್ನು ಆತನ ಕೈಗಿತ್ತನು. ಆತನು ಅದನ್ನು ಪಡೆದು ಕಣ್ಣುಗಳಿಗೊತ್ತಿಕೊಂಡು, ಭಕ್ತಿಪೂರ್ವಕವಾಗಿ ಅದನ್ನು ಓದಿ ಸಂತೋಷಪಟ್ಟನು. ಆತನು ಶ್ರೀರಾಮಚಂದ್ರನನ್ನು ಸ್ಮರಿಸಿ ಭಕ್ತಿ ಶ್ರದ್ಧೆಯಿಂದ ಆನಂದಬಾಷ್ಪಗಳನ್ನು ಸುರಿಸಿದನು. ರಾಜನಗರದಲ್ಲಿ ಜಯ ಜಯ ಶಬ್ದ ಹುಟ್ಟಿತು. ರಾಜ ಬಂಧುಗಳೆಲ್ಲರೂ ಪ್ರಸನ್ನರಾದರು.

ನಗರದಲ್ಲಿ ಪ್ರತಿಮನೆಯಲ್ಲೂ ಮಂಗಳ ಕಳಶಗಳನ್ನು ಇಟ್ಟರು. ರಾಜನು ಅನೇಕ ದಾನಗಳನ್ನು ಮಾಡಿದನು. ಆ ಜನಕ ಮಹಾರಾಜನ ಪಟ್ಟಣವು ಸಕಲ ಸಂತೋಷದಿಂದ ತುಳುಕಾಡುತ್ತಿತ್ತು. ದೇವತೆಗಳು ಜನಕ ಚಕ್ರವರ್ತಿಯನ್ನು ನೋಡಲು ಬಂದರೋ ಎನ್ನುವಂತಿತ್ತು. ಜನಕನು ಅಯೋಧ್ಯಾ ನಗರಕ್ಕೆ ಪ್ರಯಾಣಿಸಿದನು. ದಾರಿಯಲ್ಲಿ ಶತಾನಂದನ ಮನೆಯನ್ನು ದರ್ಶಿಸಿದನು. ಈ ಶುಭ ಸಮಾಚಾರವನ್ನು ತನ್ನ ಗುರುವಿಗೆ ತಿಳಿಸಿದನು. ಆತನು ಕೂಡಾ ಪರಮಾನಂದ ಹೊಂದಿ, ಚತುರಂಗ ಬಲದ ಸಮೇತನಾಗಿ ಶೀಘ್ರವಾಗಿ ಅಯೋಧ್ಯೆಯನ್ನು ಸೇರಿಕೋ ಎಂದು ಆಶೀರ್ವದಿಸಿದನು. ನಗರವನ್ನು ಕಾಪಾಡಲು ಯೋಧರನ್ನು ನಿಯಮಿಸಿದನು. ಒಂದು ಪಲ್ಲಕ್ಕಿಯಲ್ಲಿ ಗುರುವಾದ ಶತಾನಂದರೂ ಮತ್ತೊಂದು ಪಲ್ಲಕ್ಕಿಯಲ್ಲಿ ಜನಕ ಚಕ್ರವರ್ತಿಯೂ ಕುಳಿತು ದಂಡಿನೊಂದಿಗೆ ಹೊರಟಾಗ ಭೂಮಿಯು ಕಂಪಿಸಿತು. ಆ ಅತಿರಥ, ಮಹಾರಥ, ಶ್ರೇಷ್ಠರನ್ನು ಯಾರು ಲೆಕ್ಕಿಸಲು ಸಾಧ್ಯ? ಆದಿಕೂರ್ಮದೊಂದಿಗೆ ಆದಿಶೇಷನು ಕುಗ್ಗಿದನು. ಈ ರೀತಿ ಜನಕ ಚಕ್ರವರ್ತಿ ಮುನಿಗಳೊಂದಿಗೆ ಪ್ರಯಾಣಿಸಿ ಎರಡು ದಿನಗಳಲ್ಲಿ ಅಯೋಧ್ಯಾ ನಗರವನ್ನು ತಲುಪಿದನು.

ಶ್ರೀರಾಮನು ಚಕ್ರವರ್ತಿಯ ಆಗಮನವನ್ನು ಕೇಳಿ ಅವರನ್ನೆದುರುಗೊಳ್ಳಲು ಹೊರಟನು. ಅವರು ಪರಸ್ಪರಾನುರಾಗದಿಂದ ಸೇರಿದರು. ವಿಶಾಲವಾದ ಸ್ಥಳದಲ್ಲಿ ಅವರಿಗೊಂದು ಕುಟೀರವನ್ನು ನಿರ್ಮಿಸಿದ್ದರು. ಅದು ಅತಿ ಸುಂದರವಾಗಿ, ಸರಯೂ ತೀರದಲ್ಲಿ ಒಳ್ಳೆಯ ವನದಲ್ಲಿ ಸ್ವರ್ಗಭವನವೆನ್ನುವಂತಿದ್ದಿತು. ಇತರ ದೇಶದ ರಾಜರುಗಳನ್ನು ಸತ್ಕರಿಸಲು ತನ್ನ ಸಹೋದರರನ್ನು ನಿಯೋಜಿಸಿದನು. ರಾಮನು ಜನಕನ ಹತ್ತಿರ ಬಂದು ನಮಸ್ಕರಿಸಿ ಆತನ ಹತ್ತಿರ ಕುಳಿತನು. ಜನಕನು ಪರಮಾನಂದಭರಿತನಾದನು. ಆತನು ಶ್ರೀರಾಮನ ಶಿರವನ್ನು ಮುದ್ದಾಡಿ, ಮೃದು ಮಧುರವಾಗಿ ಮಾತನಾಡಿದನು. ಶ್ರೀರಾಮನು ಸೂಕ್ತವಾಗಿ ಸಮಾಧಾನಕರವಾದ ಮಾತು

ಗಳನ್ನಾಡಿದನು. ಅವರುಗಳನ್ನು ನೋಡಿಕೊಳ್ಳಲು ಸೇವಕರನ್ನು ನಿಯಮಿಸಿದನು. ನಂತರ ಚಕ್ರವರ್ತಿಯನ್ನು ಸೇವಿಸಲು ಭರತನನ್ನು ನಿಯಮಿಸಿದನು.

ವಸಿಷ್ಠರು ಹತ್ತುಸಾವಿರ ಶಿಷ್ಯರೊಂದಿಗೆ ರಾಮನ ಬಳಿಗೆ ಬಂದು, "ರಾಮ ಚಂದ್ರಾ! ಕೇಳು. ಧರ್ಮಪತ್ನಿಯಿಲ್ಲದೆ ಯಜ್ಞ ಮಾಡಿದರೆ ಸಿದ್ಧಿಯಿಲ್ಲವೆಂದು ವೇದ ಪುರಾಣಗಳೂ ಸಕಲ ಶಾಸ್ತ್ರಗಳೂ ಸಾರುತ್ತವೆ. ಆದ್ದರಿಂದ ಜಾನಕಿಯನ್ನು ಕರೆಸು. ಅವಳು ನೀನು ಮಾಡುವ ಯಜ್ಞಕ್ಕೆ ಅವಶ್ಯಕ," ಎಂದರು. ರಾಮನು, "ಮುನಿರಾಜಾ, ನನ್ನ ಪ್ರತಿಜ್ಞೆಗೆ ಭಂಗ ಬರದಂತೆ, ನನ್ನ ಕುಲಕ್ಕೆ ಅಪಕೀರ್ತಿ ಬರದಂತೆ ನೀವು ಕಾರ್ಯ ನಿರ್ವಹಿಸಿಬೇಕು. ನಾನು ಎರಡನೇ ವಿವಾಹ ಮಾಡಿ ಕೊಳ್ಳುವುದಿಲ್ಲ. ಜಾನಕಿಯನ್ನು ಕರೆಯಿಸುವುದರಿಂದ ಅಪಕೀರ್ತಿ ಬರುವುದು," ಎಂದು ಬಿನ್ನವಿಸಿದನು. ಜಾನಕಿಯನ್ನು ಕರೆಸದೆ ಯಜ್ಞ ಸಾಧ್ಯವಿಲ್ಲವೆಂದು ಎಲ್ಲ ಋಷಿಗಳೂ ಪಟ್ಟುಹಿಡಿದರು. ಸರ್ವಶಾಸ್ತ್ರ ಪಾರಂಗತನಾದ ರಾಮನು, "ಯಜ್ಞದ ಸಲುವಾಗಿ ರತ್ನ ಖಚಿತವಾದ ಬಂಗಾರದ ಸೀತೆಯ ವಿಗ್ರಹವನ್ನು ನಿರ್ಮಿಸ ಬಹುದು, ಸರ್ವ ಶಾಸ್ತ್ರಗಳೂ ಇದನ್ನೊಪ್ಪುತ್ತವೆ. ಇದಕ್ಕೆ ಯಾವ ಅಭ್ಯಂತರವೂ ಇಲ್ಲ," ಎಂದು ಸ್ಪಷ್ಟವಾಗಿ ತಿಳಿಸಿದನು. ಸರ್ವಜ್ಞರಾದ ಮುನಿಗಳೂ ಗುರುಗಳೂ ರಾಮನು ಸಕಲ ಧರ್ಮಸಾರ ಸ್ವರೂಪನು, ಅವನನ್ನು ವಂಚಿಸಲು ಸಾಧ್ಯವೇ ಎಂದು ತಮ್ಮೊಳಗೇ ಆಶ್ಚರ್ಯಪಟ್ಟು ಒಪ್ಪಿದರು. ಸುವರ್ಣ ಸೀತೆಯನ್ನು ಮಾಡಿಸಿ ಸರ್ವಾಭರಣಗಳಿಂದ ಅಲಂಕರಿಸಿದರು. ಆ ಪ್ರತಿರೂಪವನ್ನು ನೋಡಿ ಬಂದವ ರೆಲ್ಲರೂ ನಿಜವಾದ ಸೀತೆಯೆಂದೇ ಭ್ರಮಿಸಿದರು. ಜಾನಕಿಯೇ ಆ ಪ್ರತಿಮೆಯನ್ನು ನೋಡಿದರೂ ಆಶ್ಚರ್ಯಪಡುವಳೆಂದು ಬಾಯ್ತುಂಬಾ ಕೊಂಡಾಡಿದರು.

**ಯಜ್ಞಾಶ್ವ**: ಸುವರ್ಣ ಸಿಂಹಾಸನದ ಮೇಲೆ ವ್ಯಾಘ್ರಾಜಿನವನ್ನು ಹಾಕಿ ರಾಮನು ಅದರ ಮೇಲೆ ಆಸೀನನಾದನು. ಪಕ್ಕದಲ್ಲೇ ಬಂಗಾರದ ಸೀತೆಯನ್ನು ಇರಿಸಿ ಕೊಂಡನು. ಎಲ್ಲರೂ ಆ ದೃಶ್ಯವನ್ನು ನೋಡಿ ಸಾಕ್ಷಾತ್ ಸೀತೆಯೇ ಬಂದಳೆಂದು ಆಶ್ಚರ್ಯಪಟ್ಟರು. ಸಭೆಯೆಲ್ಲಾ ನಮಸ್ಕರಿಸಿತು. ವಸಿಷ್ಠರು ಜನಸಮೂಹವನ್ನು ನೋಡಿ ಸೇವಕರನ್ನು ಕರೆದು, "ಸೇವಕರೇ, ನೀವೀ ಜನರನ್ನು ಯಥಾವಿಧಿಯಾಗಿ ಸತ್ಕರಿಸಿ, ಅವರು ಕೋರಿದ ಪದಾರ್ಥಗಳನ್ನು ಅವರಿಗಿತ್ತು, ಅವರನ್ನು ತೃಪ್ತಿ ಪಡಿಸಿ," ಎಂದು ಆಜ್ಞಾಪಿಸಿದರು. ಸೇವಕರು ಶ್ರೀರಾಮಾಜ್ಞೆಯಂತೆ ಅನೇಕ ವಸತಿ ಗೃಹಗಳನ್ನು ನಿರ್ಮಿಸಿಕೊಟ್ಟರು. ಭರತನು ಅವರವರ ಅಂತಸ್ತಿನಂತೆ ಸಭಿಕರನ್ನು ಉಚಿತಾಸನಗಳಲ್ಲಿ ಕೂರಿಸಿದನು. ಅವರವರ ಭಾಗ್ಯವನ್ನು ಅವರೇ ಕೊಂಡಾಡಿದರು. ಐದುಸಾವಿರ ಮಹಾಯೋಧರೂ ಐದುಸಾವಿರ ವೇದಾಧ್ಯಯನ ಸಂಪನ್ನರೂ ಯಜ್ಞವನ್ನು ರಕ್ಷಿಸುತ್ತಿದ್ದರು.

ಮಾಘ ಶುದ್ಧ ಬಿದಿಗೆಯಂದು ರಾಮನು ಯಜ್ಞ ದೀಕ್ಷೆ ವಹಿಸಿದನು. ವಸಿಷ್ಠರು, "ರಾಜಾ! ಯಜ್ಞಪಶುವನ್ನು ತರಿಸು. ಅದಕ್ಕೆ ವೇದದಲ್ಲಿ ಹೇಳಿರುವ ಲಕ್ಷಣಗಳು ಇವೆಯೋ ನೋಡಬೇಕು," ಎಂದರು. ಲಕ್ಷ್ಮಣನು ಅತ್ಯುತ್ಸಾಹದಿಂದ ಯಜ್ಞಶಾಲೆಗೆ ಹೋಗಿ ಯಜ್ಞಪಶುವನ್ನು ಸಿಂಗರಿಸಿದನು. ಅದರ ಕೊರಳಿಗೆ ರತ್ನಖಚಿತವಾದ ಜೀನು ಕಟ್ಟಿದನು. ಬಿಳಿಯ ಬಣ್ಣದ ಆ ಕುದುರೆಯನ್ನು ನೋಡಿ ಸೂರ್ಯನ ಕುದುರೆ ಸಹಿತ ನಾಚಿತು. ಆ ಕುದುರೆಯನ್ನು ಸ್ವತಃ ಮನ್ಮಥನೇ ಸಿಂಗರಿಸಿದಂತಿತ್ತು. ಸಾಕ್ಷಾತ್ ಸೂರ್ಯನಾರಾಯಣನೇ ಕುದುರೆ ರೂಪವನ್ನು ಧರಿಸಿ ಬಂದಂತೆ ಪ್ರಕಾಶಿಸುತ್ತಿತ್ತು. ನೀಲ ಮಾಣಿಕ್ಯದಿಂದ ಕೂಡಿದ ನವಿಲುಗರಿಯನ್ನು ಅದರ ಶಿರಸ್ಸಿಗೆ ಸಿಕ್ಕಿಸಿದ್ದರು, ನಕ್ಷತ್ರದಂತೆ ಆ ಗರಿ ಥಳಥಳ ಹೊಳೆಯುತ್ತಿತ್ತು. ಬೆಂಕಿಯಂತೆ ಪ್ರಾಕಾಶಿಸುವ ಹಗ್ಗವನ್ನು ಅದರ ಕೊರಳಿಗೆ ಕಟ್ಟಿದರು. ಕುದುರೆಯೊಂದಿಗೆ ಏಳು ಸಾವಿರ ಮಹಾಯೋಧರು, ರಣಧೀರರು, ಶೂರರು ಅಶ್ವಗಳ ಮೇಲೆ ಕುಳಿತು ಲಕ್ಷ್ಮಣನೊಂದಿಗೆ ಹೊರಟು ರಾಮನ ಬಳಿಗೆ ಬಂದರು. ದಿಗ್ವಿಜಯದ ಸಲುವಾಗಿ ರಾಮನು ಕುದುರೆಯನ್ನು ಪೂಜಿಸಿದನು. ಷೋಡಶ ಮಹಾ ದಾನಗಳನ್ನಿತ್ತನು. ಅಭಿಷೇಕ ಮಾಡಿ ಸುವರ್ಣ ಪಟ್ಟವನ್ನು ಅದರ ಹಣೆಗೆ ಕಟ್ಟಿದನು. ಅದರಲ್ಲಿ ಈ ವಿಧವಾಗಿ ಬರೆದಿತ್ತು, "ಅಯೋಧ್ಯಾ ನಗರದಲ್ಲಿ ಒಬ್ಬ ವೀರನಿರುವನು. ಆತನು ಶತ್ರುಸಂಹಾರಕನು. ಆತನನ್ನು ನೋಡಿ ದೇವೇಂದ್ರನು ಸಹಿತ ಭಯಪಡುವನು. ಈ ಕುದುರೆಯು ಆತನ ಯಜ್ಞಪಶುವು. ಬಲವುಳ್ಳವರು ಅದನ್ನು ಹಿಡಿದುಕೊಳ್ಳಿ. ಇಲ್ಲ, ಆ ವೀರನಿಗೆ ನೀವು ಕಪ್ಪ ಸಲ್ಲಿಸಬೇಕು, ಇಲ್ಲದಿದ್ದರೆ ಕಾಡಿಗೆ ಹೋಗಬೇಕು."

**ಲವಣಾಸುರನು**: ಇನವಂಶೋತ್ತಮನಾದ ಶ್ರಿರಾಮನ ಹತ್ತಿರ ಭಾರ್ಗವಾದಿ ಮುನಿಗಳು ಬಂದು ಲವಣಾಸುರನ ವೃತ್ತಾಂತವನ್ನು ಹೇಳಿದರು. ಭಾರ್ಗವಾದಿ ಮುನಿಗಳು ಲವಣಾಸುರನಿಂದ ಯಾಗಕ್ಕೆ ಒದಗಬಹುದಾದ ಅಪಾಯವನ್ನು ರಾಮನಿಗೆ ತಿಳಿಸಿದರು. ಮಹಾಮುನಿಗಳು ಆ ವೃತ್ತಾಂತವನ್ನು ಹೇಳಿ ದುಃಖಿಸಿದರು. ಶ್ರೀರಾಮನು ಅವರ ಮಾತಿಗೆ ಚಿಂತಿಸಿದನು. ಮರುಕ್ಷಣವೇ ರಾಮನು ತನ್ನ ಬತ್ತಳಿಕೆಯನ್ನು ತರಿಸಿ, ಅದರಿಂದ ಅಮೋಘವಾದ ಬಾಣವನ್ನು ತೆಗೆದು ಶತ್ರುಘ್ನನಿಗಿತ್ತನು. "ಎಲೈ ತಮ್ಮನೇ! ನನ್ನ ಮಂತ್ರವನ್ನು ಜಪಿಸಿ ನೀನು ಈ ಬಾಣವನ್ನು ಅವನ ಮೇಲೆ ಪ್ರಯೋಗಿಸು. ಸಕಲ ದೇಶಾಧಿಪತಿಗಳನ್ನು ಜಯಿಸಿ ಬಾ," ಎಂದು ಆಶೀರ್ವದಿಸಿ ಕಳುಹಿಸಿದನು. "ಓ ವಿಭೀಷಣಾ! ಲವಣಾಸುರನ ವೃತ್ತಾಂತವನ್ನು ವಿವರವಾಗಿ ತಿಳಿಸು," ಎಂದು ಕೋರಿದನು. ಆತನು ಕೈ ಜೋಡಿಸಿಕೊಂಡು, "ರಾಮಾ, ನನಗೊಬ್ಬ ಸವತಿ ತಾಯಿ ಇರುವಳು. ಅವಳಿಗೆ ಕುಂಭೀನಸ ಎಂಬ ಮಗಳಿರುವಳು. ಆಕೆಯನ್ನು ರಾವಣನು ಮಧು ಎಂಬ ದಾನವನಿಗಿತ್ತು ವಿವಾಹ

ಮಾಡಿದನು. ಕಾಲಾಂತರದಲ್ಲಿ ಆಕೆಯ ಗರ್ಭದಲ್ಲಿ ಲವಣಾಸುರನು ಹುಟ್ಟಿದನು. ಅವನು ಶಿವನನ್ನು ಕುರಿತು ಘೋರವಾದ ತಪಸ್ಸನ್ನಾಚರಿಸಿದನು. ಓ ನಾಥಾ!, ಶಿವನು ಅವನ ತಪಸ್ಸಿಗೆ ಮೆಚ್ಚಿ ಅವನಿಗೊಂದು ತ್ರಿಶೂಲವನ್ನು ಕೊಟ್ಟನು. 'ಓ ಲವಣಾಸುರನೇ! ಈ ತ್ರಿಶೂಲವನ್ನು ಧರಿಸಿದವನನ್ನು ಯುದ್ಧದಲ್ಲಿ ಸೋಲಿಸುವುದು ದುರ್ಲಭವು,' ಎಂದು ಶಿವನು ಅದರ ಪ್ರಭಾವವನ್ನು ಅವನಿಗೆ ಹೇಳಿದನು. ಅಂದಿನಿಂದ ಅವನನ್ನು ಜಯಿಸುವ ಜೀವಿಗಳು ಲೋಕದಲ್ಲೇ ಕಾಣರು. ಅದರ ಬಲದಿಂದ ಸುರಾಸುರರನ್ನೂ ನರ ನಾಗರನನ್ನೂ ಲಕ್ಷಿಸದೆ, ಇಷ್ಟಾನುಸಾರವಾಗಿ ಸಂಚರಿಸುತ್ತಿದ್ದಾನೆ. ಅವನು ಸಕಲ ಜೀವರನ್ನೂ ಬೆನ್ನಟ್ಟಿ ಓಡಿಸುತ್ತಿರುವನು," ಎಂದು ಈ ಪ್ರಕಾರವಾಗಿ ವಿಭೀಷಣನು ಇದ್ದುದ್ದನ್ನು ಇದ್ದ ಹಾಗೆ ಹೇಳಿದ ವೃತ್ತಾಂತವನ್ನು ಕೇಳಿ ರಾಮನು ನಕ್ಕನು.

ರಾಮನಿಗೆ ತಿಳಿಯದ ವಿಷಯವಿಲ್ಲ. ಆದರೆ, ಮಾಯಾಮಾನುಷ ವೇಷಧಾರಿಯಾಗಿ ಆ ತ್ರಿಶೂಲವನ್ನು ತಾನೇ ಶಿವರೂಪದಲ್ಲಿ ಕೊಟ್ಟಿದ್ದನಾದ್ದರಿಂದ, ತನ್ನೊಳಗೇ ನಕ್ಕು, ಶತ್ರುಘ್ನನನ್ನು ಆದರಿಸಿ, ತನ್ನ ದಿವ್ಯಾಂಶವನ್ನು ಆತನಲ್ಲಿ ಪ್ರವೇಶಗೊಳಿಸಿದನು. ಶ್ರೀರಾಮನ ಆಜ್ಞೆಯ ಪ್ರಕಾರ ಮೂರು ಸಾವಿರ ರಣಭೇರಿಗಳು ಢಣ ಢಣವೆಂದು ಮೊಳಗಿದುವು. ಆ ಶಬ್ದವನ್ನು ಕೇಳಿ ಭೂಮಿ ಕಂಪಿಸಿತು. ಗಜ ತುರಂಗಗಳು ಧ್ವನಿಸಿದುವು. ಸೈನ್ಯವು ಶಂಖಗಳನ್ನು ಊದಿ ಶತ್ರುಘ್ನನ ಜೊತೆಯಲ್ಲಿ ನಡೆದವು. ಲವಣಾಸುರನ ಪಟ್ಟಣಕ್ಕೆ ಮುತ್ತಿಗೆ ಹಾಕಿದರು. ಸೈನ್ಯದ ಶಬ್ದವನ್ನು ಕೇಳಿ, ಲವಣಾಸುರನು ಕೋಪದಿಂದ ಉರಿದು ಅರವತ್ತು ಸಾವಿರ ರಾಕ್ಷಸರೊಡಗೂಡಿ ಗರ್ಜಿಸುತ್ತಾ ಮುನ್ನುಗ್ಗಿದನು. ಅವನು ಅನೇಕ ಮಾಯೆಗಳನ್ನು ಸೃಷ್ಟಿಸಿದರೂ ಅವನ ಸೈನ್ಯವು ಕಕ್ಕಾಬಿಕ್ಕಿಯಾಯಿತು. ಕಡೆಗೆ, ಲವಣಾಸುರನ ಮಕ್ಕಳು ದಾಳಿಮಾಡಿದರು. ಶತ್ರುಘ್ನನ ಮಗನಾದ ಸುಭಾಷನು ಲವಣಾಸುರನ ಪುತ್ರರಿಬ್ಬರನ್ನೂ ವೀರಸ್ವರ್ಗಕ್ಕೆ ಕಳುಹಿಸಿದನು. ಕಡೆಗೆ ಶತ್ರುಘ್ನನು ರಾಮನಾಮ ಸ್ಮರಿಸುತ್ತಾ ರಾಮ ಬಾಣವನ್ನು ಸಂಧಿಸಿ ಪ್ರಯೋಗಿಸಿದನು. ಅದರಿಂದ ಲವಣಾಸುರನು ಗತಿಸಿದನು. ದೇವತೆಗಳು ಜಯ ಜಯವೆಂದು ಶತ್ರುಘ್ನನನ್ನು ಕೊಂಡಾಡಿದರು.

**ಮುನಿಕುಮಾರರು**: ನಂತರ ಶತ್ರುಘ್ನನು ಯಮುನಾ ನದಿಗೆ ನಮಸ್ಕರಿಸಿ, ಚತುರಂಗ ಸೈನ್ಯದೊಡನೆ ಉತ್ಸಾಹದಿಂದ ಹೊರಟನು. ಈ ಪ್ರಕಾರವಾಗಿ ಅವರು ನಾಲ್ಕು ದಿಕ್ಕುಗಳಲ್ಲೂ ವಿಜೃಂಬಿಸಿದರು. ವಾಲ್ಮೀಕಿ ಮಹರ್ಷಿಗಳ ಆಶ್ರಮವನ್ನು ಕಂಡರು. ಆ ಆಶ್ರಮದಲ್ಲಿ ಜಾನಕೀ ಪುತ್ರರಿಬ್ಬರೂ ಸೂರ್ಯನಂತೆ ಪ್ರಚಂಡ ಪರಾಕ್ರಮಗಳಾಗಿದ್ದರು. ಆ ಪುತ್ರರು ಕುದುರೆಯನ್ನು ನೋಡಿ ಅದರ ಲಲಾಟದಲ್ಲಿ ಇರಿಸಿದ್ದ ಪತ್ರವನ್ನು ಓದಿ ಅದನ್ನು ಬಂಧಿಸಿದರು. ಬತ್ತಳಿಕೆಯನ್ನು ನಡುವಿಗೆ

ಕಟ್ಟಿಕೊಂಡು, ಧನುರ್ಬಾಣಗಳನ್ನು ಧರಿಸಿ ಅವರು ಯುದ್ಧಕ್ಕೆ ಸಿದ್ಧರಾದರು. ಆ ಕುದುರೆಯನ್ನು ಸಂರಕ್ಷಿಸುತ್ತಿದ್ದ ಸಹಸ್ರಾದಿ ವೀರರು ಕುಮಾರರ ಬಳಿಗೆ ಬಂದರು. ವೃಕ್ಷಕ್ಕೆ ಬಂಧಿಸಲಾಗಿದ್ದ ಕುದುರೆಯನ್ನು ನೋಡಿ ಅವರು ಕುಮಾರರು, ಬಾಲಕರೆಂದು ತಿಳಿದು ಶಾಂತಿಯಿಂದಿದ್ದರು. "ಎಲೈ ಕುಮಾರರೇ! ನಿಮ್ಮ ತಾಯಿ ತಂದೆಯರು ಧನ್ಯರು. ನೀವು ಆ ಕುದುರೆಯನ್ನು ಬಿಟ್ಟು ನಿಮ್ಮ ಮನೆಗಳಿಗೆ ಹೋಗಿ," ಎಂದರು.

"ಹೇ ವೀರರೇ! ಯುದ್ಧಕ್ಕೆ ಬಂದು ಭಿಕ್ಷವನ್ನು ಕೇಳುವುದು ಉಚಿತವೇ? ಹಾಗೆ ಯಾಚಿಸುವುದರಿಂದ ಕ್ಷತ್ರಿಯ ಕುಲಕ್ಕೆ ಕಳಂಕ ಬರುವುದಲ್ಲವೇ?" ಎಂದು ಮಕ್ಕಳು ಹೀನವಾಗಿ ಮಾತನಾಡುವುದನ್ನು ನೋಡಿ ರಕ್ಷಕ ಭಟರು, "ಓ ಶೂರರೇ! ಕ್ಷತ್ರಿಯ ಕುಲಕ್ಕೆ ಕಳಂಕ ತಂದುಕೊಳ್ಳುವುದು ಒಳ್ಳೆಯದಲ್ಲ. ಜಾಗ್ರತೆಯಾಗಿ ನೋಡಿ ಮಾತನಾಡಿ," ಎಂದು ವೀರ ಮಾತುಗಳನ್ನಾಡಿದರು. ಅದಕ್ಕೆ ಮಕ್ಕಳು ಫಕ್ಕೆಂದು ನಕ್ಕು, "ಅಯ್ಯಾ, ನಿಮ್ಮಂತಹ ಬಲಹೀನರನ್ನು ಕುದುರೆಯನ್ನು ಸಂರಕ್ಷಿಸಲು ಕಳುಹಿಸಿದವರೆಂತಹ ವೀರರೋ! ನಿಮಗೆ ಬಲವಿಲ್ಲದಿದ್ದಲ್ಲಿ ನಿಮ್ಮ ಮನೆಗಳಿಗೆ ಹೋಗಿ," ಎಂದು ಕುಶಲವರು ನುಡಿದ ಕರ್ಣಕಠೋರವಾದ ಮಾತುಗಳನ್ನು ಯೋಧರು ಕೇಳಿ, ಅವರು ಬಾಲಕರೆಂದು ತಿಳಿದೂ ಅವರನ್ನು ಎದುರಿಸಿದರು. ಲವನು ಧನುಸ್ಸನ್ನು ಧರಿಸಿ ಆಡುತ್ತಾ ಹಾಡುತ್ತಾ ಬಾಣಗಳ ಪರಂಪರೆಯನ್ನು ವರ್ಷಿಸಿ, ಆ ವೀರರ ಶರೀರಗಳನ್ನು ಘಾಸಿಮಾಡಿದನು. ಆ ಶೂರರು ನೆಲಕ್ಕೆ ಬಿದ್ದು ಮೂರ್ಛೆ ಹೋದರು. ಕೆಲವರು ಓಡುತ್ತಾ ಶತ್ರುಘ್ನನ ಹತ್ತಿರ ಬಂದು, "ಓ ಮಹಾರಾಜಾ! ಇಬ್ಬರು ಕುಮಾರರು, ಮುನಿಬಾಲಕರು ನಮ್ಮ ಕುದುರೆಯನ್ನು ಬಂಧಿಸಿ, ನಮ್ಮ ಅನೇಕ ಯೋಧರನ್ನು ಸಂಹರಿಸಿದ್ದಾರೆ," ಎಂದು ಮೊರೆಯಿಟ್ಟರು. ಆ ಮಾತಿಗೆ ಶತ್ರುಘ್ನನು ಕೋಪಗೊಂಡು, ಚತುರಂಗ ಬಲದೊಡನೆ ಕುಶಲವರ ಕಡೆಗೆ ನಡೆದನು.

ಅತಿರಥ ಶ್ರೇಷ್ಠರಾದ ಕುವರರನ್ನು ಆತನು ನೋಡಿ ನಾಚಿ, "ಇವರಿಬ್ಬರೂ ಬಾಲರಲ್ಲವೇ! ಇವರೊಂದಿಗೆ ಯುದ್ಧ ಹೇಗೆ ಮಾಡುವುದು?" ಎಂದು ಚಿಂತಿಸಿದನು. "ಎಲೈ ಮುನಿಬಾಲಕರೇ! ನೀವು ಕುದುರೆಯನ್ನು ಬಿಟ್ಟು ಮನೆಗೆ ಹೋಗಿ. ನೀವು ಪೂಜಾರ್ಹರಾದ್ದರಿಂದ ನಿಮ್ಮೊಂದಿಗೆ ಯುದ್ಧಮಾಡಬಾರದು," ಎಂದು ಶತುಘ್ನನು ಅವರಿಗೆ ಬೋಧಿಸಿದನು. "ಓ ರಾಜಾ! ನಿಮ್ಮ ಹೆಸರೇನು? ನಿಮ್ಮ ನಗರ ಯಾವುದು? ನೀವು ಸೈನ್ಯದೊಂದಿಗೆ ಕಾಡಿನಲ್ಲಿ ಏಕೆ ಸಂಚರಿಸುತ್ತಿದ್ದೀರಿ? ಯಾವ ಕಾರಣದಿಂದ ನೀವು ನೀವು ಈ ಕುದುರೆಯನ್ನು ಬಿಟ್ಟಿದ್ದೀರಿ? ಏತಕ್ಕಾಗಿ ಅದರ ಲಲಾಟಕ್ಕೆ ಪಟ್ಟಿಯನ್ನು ಕಟ್ಟಿದ್ದೀರಿ? ಓ ರಾಜಾ! ನಿಮಗೆ ಬಲಪೌರುಷಗಳು

ಇಲ್ಲದಿದ್ದಲ್ಲಿ ಪಟ್ಟವನ್ನು ತೆಗೆದು ಕುದುರೆಯನ್ನು ಬಿಟ್ಟು ಮನೆಗಳಿಗೆ ಹೋಗಿ," ಎಂದು ಈ ವಿಧವಾಗಿ ಕುಶಲವರಾಡಿದ ತೀಕ್ಷ್ಣವಾದ ಮಾತುಗಳಿಗೆ ಶತ್ರುಘ್ನನು ತಲೆಬಾಗಿಸಿದನು. ಶಸ್ತ್ರಾಸ್ತ್ರಗಳನ್ನು ಕಟ್ಟಿರೆಂದು ವೀರರಿಗೆ ಆಜ್ಞಾಪಿಸಿ, ಆತನು ಕಿರುನಗೆಯನ್ನು ಬೀರಿದನು. "ಆಹಾ! ಎಷ್ಟು ಬಲಶಾಲಿ ಈ ರಾಜನು! ಚಪ್ಪಾಳೆಗೆ ಸಿಂಹವು ಭಯಪಡುವುದೇ?" ಎಂದು ಕುಶಲವರು ಫಕ್ಕೆಂದು ನಕ್ಕರು. ಗುರುವಾದ ವಾಲ್ಮೀಕಿಯನ್ನು ಸ್ಮರಿಸಿ ಧನುರ್ಬಾಣಗಳನ್ನು ಧರಿಸಿದರು.

ಕುಶಲವರ ಆತನ ರಥಧ ಮೇಲೆ ಬಾಣಗಳ ಮಳೆಗರಿಸಿ ಆತನ ಶರೀರವನ್ನು ಘಾಸಿಗೊಳಿಸಿದರು. ಆತನ ಯೋಧರು ನೆಲಕ್ಕೆ ಬಿದ್ದು, ಮೂರ್ಛೆ ಹೋದರು. ಆ ಕುಮಾರರು ಒಬ್ಬೊಬ್ಬರನ್ನಾಗಿ ಕರೆದು ಅವರನ್ನು ಸಂಹರಿಸಿದರು. ಕೆಲವು ಹೇಡಿಗಳು ಓಡುತ್ತಾ ಶ್ರೀರಾಮನ ಬಳಿಗೆ ಹೋದರು. ಆ ವೃತ್ತಾಂತವನ್ನೆಲ್ಲಾ ಶ್ರೀರಾಮನಿಗೆ ತಿಳಿಸಿದರು. ಆ ಬಾಲಕರ ಗುಣಗಳನ್ನು ಶೌರ್ಯಪರಾಕ್ರಮಗಳನ್ನು ವರ್ಣಿಸಿದರು. ಯುದ್ಧ ಮಾಡುತ್ತಿರುವವರು ಮುನಿಕುಮಾರರಲ್ಲವೆಂದು ಶ್ರೀರಾಮನಿಗೆ ತಿಳಿದಿದ್ದೂ ಗುಟ್ಟನ್ನು ಹೊರಗೆಡಹದೆ, ಮುನಿಕುಮಾರರೆನ್ನುವ ಭಾವವನ್ನು ಮೇಲೆ ಪ್ರಕಟಿಸುತ್ತಾ ಆ ಮುನಿ ಕುಮಾರರ ಜೊತೆ ಯುದ್ಧಮಾಡುವುದು ಹೇಗೆಂದು ಚಿಂತಿಸಿ, "ಓ ವೀರರೇ! ಆದರೂ ಯುದ್ಧ ಮಾಡುವುದು ತಪ್ಪದು. ನೀವು ಲಕ್ಷ್ಮಣನೊಂದಿಗೆ ಹೊರಡಿ," ಎಂದು ಬಲಾತ್ಕಾರವಾಗಿ ಅವರನ್ನು ಕಳುಹಿಸಿದನು. ಅಷ್ಟೇ ಅಲ್ಲದೆ ಆ ಬಾಲಕರನ್ನು ಬಂಧಿಸಿ ಕರೆದುಕೊಂಡು ಬನ್ನಿ ಎಂದೂ ಅವರು ಮುನಿಕುಮಾರರಾದ್ದರಿಂದ ಯಾವ ವಿಧವಾಗಿಯೂ ಅವರನ್ನು ಕೊಲ್ಲಬಾರದೆಂದೂ ಹೇಳಿದನು.

**ಲಕ್ಷ್ಮಣನು**: ಲಕ್ಷ್ಮಣನು ಚತುರಂಗ ಬಲಸಹಿತ ದಂಡೆತ್ತಿದನು. ಆತನು ಯುದ್ಧ ಭೂಮಿಗೆ ಬಂದನು. ಮೂರ್ಛೆಹೊಂದಿದ್ದ ಆ ಯೋಧರನ್ನು ನೋಡಿದನು. ವಿಸ್ಮಯದಿಂದ, "ಓ ಬಾಲಕರೇ! ಮನೆಗೆ ಓಡಿಹೋಗಿ. ಸೂರ್ಯವಂಶದ ರಾಜರು ದೇವ ಬ್ರಾಹ್ಮಣರನ್ನು ರಕ್ಷಿಸುವವರು. ನೀವು ಬ್ರಾಹ್ಮಣ ಕುಮಾರರು. ನಿಮ್ಮೊಂದಿಗೆ ಹೋರಾಡುವುದು ನಮಗೆ ಶ್ರೇಯಸ್ಸಲ್ಲ. ನೀವು ನನ್ನ ಕಣ್ಣೆದುರು ನಿಲ್ಲದೆ ಹೊರಟು ಹೋಗಿ! ನಿಮ್ಮನ್ನು ನೋಡಿದರೆ ನನ್ನ ಶರೀರವು ಕ್ರೋಧದಿಂದ ಉರಿಯುತ್ತಿದೆ," ಎಂದು ಲಕ್ಷ್ಮಣನು ಹೇಳಿದ ಮಾತುಗಳನ್ನು ಕುಶಲವರು ಕೇಳಿ ಫಕ್ಕೆಂದು ನಕ್ಕರು. "ಓ ರಣಧೀರನೇ! ನಿನ್ನ ತಮ್ಮನ ದುರವಸ್ಥೆಯನ್ನು ನೋಡಿ, ನೀನು ಮನೆಗೆ ಹೊರಟುಹೋಗು," ಎಂದು ಹೇಳಿದರು.

ಆ ಮಾತುಗಳನ್ನು ಕೇಳಿ ಲಕ್ಷ್ಮಣನು ಮೂರ್ಛೆಹೋಗಿದ್ದ ತಮ್ಮನನ್ನು ನೋಡಿ, ಧನುಸ್ಸನ್ನು ಸಂಧಿಸಿದನು. ಅ ಮುನಿಕುಮಾರರೊಂದಿಗೆ ಹೋರಾಡುವುದು ಇನ ಕುಲದ ಆಚಾರಕ್ಕೆ ವಿರುದ್ಧವೆಂದು ಲಕ್ಷ್ಮಣನು ಸಂಕೋಚಪಟ್ಟನು. "ಬಾಲಕರೇ! ನಿಮಗೆ ಬುದ್ಧಿ ಇಲ್ಲ. ನೀವು ಕೇವಲ ಬಾಲಕರು. ನಿಮ್ಮೊಂದಿಗೆ ಹೋರಾಡುವುದ ರಿಂದ ಲಾಭವಿಲ್ಲ. ಆದ್ದರಿಂದ ನಿಮ್ಮ ಸಹಾಯಕರನ್ನು ಕರೆದುಕೊಂಡು ಬನ್ನಿ," ಎಂದು ಲಕ್ಷ್ಮಣನು ಹೇಳುತ್ತಿದ್ದರೂ ಆತನ ಮಾತನ್ನು ಲಕ್ಷಿಸದೇ ಕುಶನು ತೀವ್ರವಾದ ಬಾಣವನ್ನು ಪ್ರಯೋಗಿಸಿದನು. ಆ ಬಾಣಕ್ಕೆ ಭೂಮಿಯು ಕಂಪಿಸಿತು. ಆ ಬಾಣವು ಅಂತರಿಕ್ಷವನ್ನೆಲ್ಲಾ ವ್ಯಾಪಿಸಿತು.

ಸೂರ್ಯಬಿಂಬ ಮರೆಯಾಯಿತು. ಕುಶಲವರ ಪ್ರತಾಪವನ್ನು ಸಹಿಸಲಾರದೆ ಲಕ್ಷ್ಮಣನು ಉಗ್ರನಾಗಿ ಅವರನ್ನು ಎದುರಿಸಿದನು. ಆತನು ರಥವನ್ನು ನಿಲ್ಲಿಸಿ ನಿಶ್ಚಿಂತೆಯಿಂದ ಯದ್ಧಮಾಡಲಾರಂಭಿಸಿದನು. ಕುಶಲವರು ಲಕ್ಷ್ಮಣನ ಶರಗಳನ್ನು ಖಂಡಿಸಿದರು. ಅಣ್ಣತಮ್ಮಂದಿರಿಬ್ಬರೂ ಅತಿ ಚಮತ್ಕಾರವಾಗಿ ಯುದ್ಧ ಮಾಡುತ್ತಿದ್ದರು. ಆಗ ಲಕ್ಷ್ಮಣನು ಒಂದು ಗದೆಯನ್ನು ಮಹಾವೇಗದಿಂದ ಅವರ ಮೇಲೆ ಪ್ರಯೋಗಿಸಿದನು. ಆ ಗದೆ ತಗುಲಿ ಕುಶ ಮೂರ್ಛೆಹೋದನು. ಲವನು ಕೋಪಗೊಂಡು ಲಕ್ಷ್ಮಣನ ವಕ್ಷಸ್ಥಳಕ್ಕೆ ಒಂದು ಬಾಣ ಪ್ರಯೋಗಿಸಿದನು. ಆ ಬಾಣ ತಗುಲಿ ಲಕ್ಷ್ಮಣ ಘಾಸಿಗೊಂಡರೂ ಬಲಶಾಲಿಯಾದ್ದರಿಂದ ನೆಲದ ಮೇಲೆ ಬೀಳಲಿಲ್ಲ. ಆಮೇಲೆ ಲವ ಲಕ್ಷ್ಮಣರು ಮಲ್ಲ ಯುದ್ಧ ಮಾಡಿದರು. ಇಬ್ಬರೂ ಸರಿಸಮವಾಗಿ ಹೋರಾಡಿದರು. ಲವನು ಲಕ್ಷ್ಮಣನಿಗೆ ಪಿಡುಗಿನಂಥ ಗುದ್ದು ಗುದ್ದಿದನು. ಲಕ್ಷ್ಮಣನು ಗುದ್ದಿನಿಂದ ವ್ಯಾಕುಲಗೊಂಡರೂ ಅವನ ಗುದ್ದನ್ನು ಮೆಚ್ಚಿಕೊಂಡನು. ರಾಮನನ್ನು ಸ್ಮರಿಸಿ ಕುಶನ ಮೇಲೆ ಒಂದು ಬಾಣ ಬಿಟ್ಟನು. ಆ ಬಾಣ ತಗುಲಿ ಕುಶ ಮೂರ್ಛೆಹೋದನು. ಕುಶನು ಮೂರ್ಛೆಯಿಂದೆದ್ದು, ವಾಲ್ಮೀಕಿ, ಸೀತೆಯರನ್ನು ಸ್ಮರಿಸಿ ಒಂದು ತೀವ್ರವಾದ ಬಾಣವನ್ನು ಅನುಸಂಧಾನ ಮಾಡಿ ಲಕ್ಷ್ಮಣನ ಮೇಲೆ ಪ್ರಯೋಗಿಸಿದನು. ಲಕ್ಷ್ಮಣನು, ಮೇಘನಾದನ ಮೇಲೆ ಪ್ರಯೋಗಿಸಿದ ಬಾಣಗಳನ್ನೇ ಕುಶಲವರ ಮೇಲೂ ಪ್ರಯೋಗಿಸಿದನಾದರೂ ಅವು ಕುಶಲವರಿಗೆ ಹಗ್ಗದಂತೆ ಕಂಡವು. ಆಗ ಲಕ್ಷ್ಮಣನು, "ಆಹಾ! ಉಪದ್ರವವು ಸೀತಾವಿಯೋಗದಿಂದ ಸಂಭವಿಸಿತು. ನನ್ನ ಶರೀರವನ್ನು ಬಿಟ್ಟ ಹೊರತು ಈ ದುಃಖವು ಹೋಗದು," ಎಂದು ದುಃಖಿಸಿದನು. ಕುಶನು ವಾಲ್ಮೀಕಿ ಉಪದೇಶಿಸಿದ ಬ್ರಹ್ಮಾಸ್ತ್ರವನ್ನು ಲಕ್ಷ್ಮಣನ ಮೇಲೆ ಪ್ರಯೋಗಿಸಿದನು. ಮೂರು ಲೋಕಗಳೂ ಗಡಗಡ ನಡುಗಿದವು. ಲಕ್ಷ್ಮಣನು ಮೂರ್ಛೆ ಹೋದನು. ಆಗ, ದೂತನೊಬ್ಬ ಹೋಗಿ ರಾಮನಿಗೆ ಈ ಘೋರ ವಾರ್ತೆಯನ್ನು ತಿಳಿಸಿದನು. ಭರತನು ಚಿಂತಾ

ಕ್ರಾಂತನಾಗಿ ಕೈಗಳನ್ನು ಜೋಡಿಸಿಕೊಂಡು, "ಓ ನಾಥಾ! ಸೀತೆಯನ್ನು ಕಳಿಸಿದ ಕಾರಣ ನಾವು ಸರಿಯಾದ ಫಲವನ್ನು ಅನುಭವಿಸುತ್ತಿದ್ದೇವೆ," ಎಂದು ಹೇಳಿದನು. ಅಗ ಶ್ರೀರಾಮನು ತಮ್ಮನಿಗೆ, "ಏನು? ನಿನಗೆ ಯುದ್ಧ ಮಾಡಲು ಭಯವಾಗಿ ಈ ವಿಧವಾದ ನೆಪವನ್ನು ಒಡ್ಡುತ್ತಿರುವೆಯಾ?" ಎಂದು ಹೇಳಿ ರಾಮನು, "ನಾನೇ ಯುದ್ಧಕ್ಕೆ ಹೋಗುತ್ತೇನೆ. ನನ್ನ ರಥವನ್ನು ಸಿದ್ಧಗೊಳಿಸಿ, ಯಜ್ಞವನ್ನು ಮುಂದಕ್ಕೆ ಹಾಕಿ! ನಾನು ಹೋಗಿ ಆ ಬಾಲಕರ ಪೂರ್ವೋತ್ತರಗಳನ್ನು ವಿಚಾರಿಸುವೆನು. ಭರತಾ! ನಮ್ಮ ಮಿತ್ರರಿಗೆ ವರ್ತಮಾನ ಕಳಿಸು, ಹನುಮಂತನನ್ನು ಯುದ್ಧಕ್ಕೆ ಕರೆದುಕೊಂಡು ಬಾ," ಎಂದು ಹೇಳಿ, ರಾಮನು ತಾನೇ ಯುದ್ಧ ಭೂಮಿಗೆ ಹೊರಟನು. ಅಲ್ಲಿ ಹರಿದಿದ್ದ ರಕ್ತದ ಕಾಲುವೆಯನ್ನು ನೋಡಿ ಆಶ್ಚರ್ಯಪಟ್ಟನು.

ಹನುಮಂತನೂ ವಾನರ ಯೋಧರೂ ಭರತನೊಂದಿಗೆ ಯುದ್ಧ ಭೂಮಿಗೆ ಬಂದರು. ಆ ಸಮಯಕ್ಕೆ ಕುಶಲವರೂ ರಣಸ್ಥಳಕ್ಕೆ ಬಂದರು. ಅವರನ್ನು ನೋಡಿ ವಾನರ ಯೋಧರು ಭಯಗೊಂಡರು. ಹನುಮಂತನು ಧೈರ್ಯದಿಂದ, "ಬಾಲ ಕರೇ ನಿಮ್ಮಂಥ ಬಲಶಾಲಿ ಮಕ್ಕಳನ್ನು ಪಡೆದ ತಂದೆತಾಯಿಗಳು ಯಾರು? ಅವರು ಧನ್ಯರು," ಎಂದನು. ಆ ಮಾತಿಗೆ ಕುಶಲವರು ಉರಿದು, "ಓ ವಾನರಾ! ನಿನಗೆ ಶಕ್ತಿ ಇಲ್ಲದಿದ್ದರೆ ಹಿಂದೆ ಸರಿ, ಅಧಿಕ ಮಾತನಾಡಬೇಡ," ಎಂದರು. ಅದನ್ನು ಕೇಳಿ ಭರತನು ಪೌರುಷದಿಂದ "ವೀರರೇ! ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸಿ," ಎಂದು ಸೈನ್ಯಕ್ಕೆ ಆಜ್ಞಾಪಿಸಿದನು. ಆಗ ವಾನರರು ಪರ್ವತಗಳನ್ನೂ ವೃಕ್ಷಗಳನ್ನೂ ತಿರುಗಿಸಿ ಎಸೆದರು. ಲವನು ಒಂದು ಬಾಣ ಪ್ರಯೋಗಿಸಿ ಅವುಗಳನ್ನು ಚೂರು ಚೂರು ಮಾಡಿದನು. ಸ್ವಲ್ಪ ಕಾಲದಲ್ಲೇ ರಾಮನ ಚತುರಂಗ ಬಲ ಚದುರಿತು. ರಕ್ತ ಹರಿಯಿತು. ಮಹಾ ಯೋಧರೆಲ್ಲರೂ ಪ್ರಾಣಬಿಟ್ಟರು. ಕಡೆಗೆ ಕುಶಲವರು ಭರತನೂ ಮೂರ್ಛೆ ಹೋಗುವಂತೆ ಮಾಡಿದರು.

ಆಗ, ರಾಮನು ರೌದ್ರಕಾರದಿಂದ ಚತುರಂಗಬಲ ಸಮೇತನಾಗಿ ರಣರಂಗಕ್ಕೆ ಬಂದು, "ಓ ಬಾಲಕರೇ! ನಿಮ್ಮ ತಂದೆತಾಯಿಗಳು ಯಾರು? ಎಲ್ಲಿ ವಾಸಿಸುತ್ತಾರೆ? ನಿಮ್ಮ ದೇಶ ಯಾವುದು? ಬಾಲಕರೇ! ನಿಮ್ಮ ದೇಹ ಬಹು ಕೋಮಲವಾದುದು. ನಿಮ್ಮ ಹೆಸರು ವಂಶಗಳನ್ನು ತಿಳಿಯದೆ ನಾನು ನಿಮ್ಮೊಂದಿಗೆ ಹೋರಾಡೆನು," ಎಂದನು. ಆಗ ಲವನು, "ಓ ರಾಜಾ! ಈ ಮಾತುಗಳಿಂದೇನು ಪ್ರಯೋಜನ? ನಿಮ್ಮ ಅಣ್ಣತಮ್ಮಂದಿರು ನಾಲ್ವರಿಗೂ ಒಂದೇ ಸಂಪ್ರದಾಯವೆಂದು ತಿಳಿಯುತ್ತದೆ. ಧನುರ್ಬಾಣಗಳನ್ನು ಸಂಧಿಸಿ ಯುದ್ಧ ಮಾಡು. ಇಂತಹ ವಿಚಾರಗಳನ್ನು ಕೇಳಲು ಇದು ಮದುವೆಯ ಔತಣವಲ್ಲ," ಎಂದು ನುಡಿದನು. ಆಗ ರಾಮನು, "ಬಾಲಕರೇ ನಿಮ್ಮ ದೇಹಗಳು ಅತಿ ಕೋಮಲವು. ನಿಮ್ಮ ಹೆಸರು ವಂಶಗಳನ್ನು ತಿಳಿದುಕೊಳ್ಳುವ

ವರೆಗೆ ನಾನು ನಿಮ್ಮೊಂದಿಗೆ ಹೋರಾಡುವುದಿಲ್ಲ," ಎಂದು ಹೇಳಿದನು. "ಓ ರಾಜಾ! ನಮ್ಮ ತಾಯಿ ಜನಕ ಚಕ್ರವರ್ತಿಯ ಮಗಳು ಜಾನಕಿ. ವಾಲ್ಮೀಕಿ ಮುನಿ ನಮ್ಮ ಪೋಷಕರು. ನಮ್ಮ ತಂದೆಯ ಹೆಸರೂ ನಮ್ಮ ವಂಶದ ಹೆಸರೂ ನಮಗೆ ತಿಳಿಯದು. ನಾವು ಕುಶಲವರು. ನಾವು ವನವಾಸಿಗಳು," ಎಂದು ಇಬ್ಬರೂ ಹೇಳಿದರು.

ಅವರು ತನ್ನ ಕುಮಾರರೆಂದು ತನಗೆ ಮೊದಲೇ ತಿಳಿದಿದ್ದರೂ ಸಹ ಪ್ರಾಪಂಚಿಕ ವಾಗಿ ಈಗ ತಿಳಿದುಕೊಂಡಂತೆ ನಟಿಸಿ, "ಓ ಕುಮಾರರೇ! ಹಿಂದಿನಿಂದ ನನ್ನ ಸೈನ್ಯವು ಬರುವುದು. ಅವರೊಂದಿಗೆ ಯುದ್ಧವನ್ನು ಮಾಡಿ," ಎಂದು ಹೇಳಿ ಹಿಂದಿರುಗಿ ಮೂರ್ಛೆ ಹೋಗಿದ್ದ ಅಂಗದ, ಜಾಂಬವಂತ, ಹನುಮಂತರನ್ನು ಮೂರ್ಛೆಯಿಂದ ಎಬ್ಬಿಸಿದನು. ಮುಂದೆ ನಡೆಯಲಿರುವುದನ್ನು ಸಾರುವುದಕ್ಕೆ, ಮೂರ್ಛೆ ಹೋಗಿದ್ದ ಲಕ್ಷ್ಮಣ, ಭರತ, ಶತ್ರುಘ್ನರನ್ನು ಎಬ್ಬಿಸಿದನು. ಬಂದ ಸೈನ್ಯದೊಂದಿಗೆ, "ಓ ಸೈನಿಕರೇ, ಕೀರ್ತಿ ಮರ್ಯಾದೆಯನ್ನು ಉಳಿಸುವ ಸಲುವಾಗಿ ಯುದ್ಧವನ್ನು ಮಾಡಿ," ಎಂದನು. ಧನುರ್ಬಾಣಗಳನ್ನು ಹಿಡಿದು ಸೈನ್ಯದೊಂದಿಗೆ ಯುದ್ಧಮಾಡುತ್ತಿದ್ದ ಆ ಬಾಲಕರನ್ನು ನೋಡಿ ಶ್ರೀರಾಮನು ತನ್ನಲ್ಲಿ ತಾನು ಆನಂದಿಸಿದನು.

**ಜಾನಕಿಗೆ ಕಾಣಿಕೆ**: ಒಂದು ಕಡೆ ವಾನರ ವೀರರು ಏನೂ ಮಾಡಲಾರದೆ ಈ ವೀರರನ್ನು ಜಯಿಸುವವರು ಹದಿನಾಲ್ಕು ಲೋಕಗಳಲ್ಲಿಯೂ ಇಲ್ಲವೆಂದು ಅವರಲ್ಲೇ ಯೋಚಿಸುತ್ತಾ ಸುಮ್ಮನಿದ್ದರು. ಇಷ್ಟರಲ್ಲಿ ಕುಶನು ರಾಮನ ಮೇಲೆರಗಿ ದನು. ರಥದಲ್ಲಿದ್ದ ರಾಮನು ಮೂರ್ಛೆಹೊಂದಿದನು. ಕುಶನು ರಥ ಕುದುರೆಗಳ ಮೇಲಿದ್ದ ಅಲಂಕಾರಗಳನ್ನು ತೆಗೆದುಕೊಂಡನು. ಕುಶಲವರು ಹನುಮಂತನನ್ನು ಬಂಧಿಸಿ ಜೊತೆಯಲ್ಲಿ ಕರೆದುಕೊಂಡು ಮನೆಗೆ ಹೊರಟರು. ಸುಂದರವಾದ ವಸ್ತ್ರಗಳನ್ನೂ ಭೂಷಣಗಳನ್ನೂ ಧರಿಸಿ ವಾನರ ಸಮೂಹವನ್ನು ಜೊತೆಯಲ್ಲಿಟ್ಟು ಕೊಂಡು, ಕುದುರೆಗಳೊಂದಿಗೆ ಕುಶಲವರು ಜಾನಕಿಯನ್ನು ಸಮೀಪಿಸಿ, ನಮಿಸಿ, ತಂದ ವಸ್ತುಗಳನ್ನು ಕಾಣಿಕೆಯಾಗಿ ಸಮರ್ಪಿಸಿದರು. ವಾನನರನ್ನು, ಭೂಷಣ ಗಳನ್ನು ಜಾನಕಿಯು ನೋಡಿ ದಿಗ್ಭ್ರಾಂತಿಗೊಂಡಳು.

# ೩೨ ಮುಗಿದ ನಾಟಕ

ಅಷ್ಟರಲ್ಲಿ ವಾಲ್ಮೀಕಿ ಮಹರ್ಷಿಯು ಚಿಂತಾಕ್ರಾಂತನಾಗಿ ಬಂದನು. ಅತನು ಜಾನಕಿಗೆ ನಡೆದ ವೃತ್ತಾಂತವನ್ನು ತಿಳಿಸಿದನು. ಆತನು ಹನುಮಂತ, ಜಾಂಬವಂತರ ಬಂಧನ ಗಳನ್ನು ಬಿಚ್ಚಿ, "ಎಲೈ ಬಾಲಕರೇ! ಎಂಥ ಕೆಲಸ ಮಾಡಿದಿರಿ? ರಾಮ ಲಕ್ಷ್ಮಣ ಭರತ ಶತ್ರುಘ್ನರನ್ನು ಕೆಳಗೆ ಬೀಳಿಸಿ ಬಂದಿರಲ್ಲವೇ?" ಎಂದು ವಿಚಾರಿಸಿದನು. ಆ ಮಾತನ್ನು ಕೇಳಿ, "ಅಯ್ಯೋ ಮಕ್ಕಳೇ, ನಿಮ್ಮಿಂದ ವಂಶಕ್ಕೇ ಕಳಂಕ ಬಂದಿತು. ಇನ್ನು ನಿಧಾನಿಸದೆ ಸಹಗಮನಕ್ಕೆ ಸಿದ್ಧಮಾಡಿ. ನಾನಿನ್ನು ಬದುಕಿರಲಾರೆ," ಎಂದು ಸೀತೆ ಗೋಳಾಡಿದಳು. ವಾಲ್ಮೀಕಿ ಮಹರ್ಷಿ ಸೀತೆಯನ್ನು ಸಮಾಧಾನಪಡಿಸಿ, ಆಕೆಗೆ ಧೈರ್ಯವನ್ನು ಹೇಳಿದರು. ಆತನು ಕುಶಲವರನ್ನು ಕರೆದುಕೊಂಡು ಬಂದು ರಣಸ್ಥಳವನ್ನು ನೋಡಿ ಆಶ್ಚರ್ಯ ಹೊಂದಿದನು.

ಶ್ರೀರಾಮನ ರಥವನ್ನು, ಕುದುರೆಗಳನ್ನು ಗುರುತಿಸಿ, ಆತನ ಚರಣಗಳಿಗೆ ವಾಲ್ಮೀಕಿಯು ನಮಸ್ಕರಿಸಿದನು. ಆತುರದಿಂದ ರಾಮನು ತಟಕ್ಕೆಂದು ಎದ್ದು ಕುಳಿತನು. ಕುಶಲವರು ಆತನ ಎದುರಿನಲ್ಲಿ ನಿಂತಿದ್ದರು. ವಾಲ್ಮೀಕಿ ಮಹರ್ಷಿ ಶ್ರೀರಾಮನಲ್ಲಿ, "ಓ ನಾಥಾ! ನನ್ನ ಜನ್ಮವು ಸಫಲವಾಯಿತು; ನಾನೆಷ್ಟು ಧನ್ಯನು!"" ಎಂದನು. ಲಕ್ಷ್ಮಣನು ಸೀತೆಯನ್ನು ಕಾಡಿನಲ್ಲಿ ಬಿಟ್ಟ ವೃತ್ತಾಂತವನ್ನೂ ಕುಶಲವರ ಜನನವನ್ನೂ ಶ್ರೀರಾಮನಿಗೆ ತಿಳಿಸಿದನು. ಈ ಮಾತನ್ನು ಕೇಳಿ ಶ್ರೀರಾಮನು ಕುಮಾರರನ್ನು ತಬ್ಬಿಕೊಂಡು ಶಿರಸ್ಸನ್ನು ಮುದ್ದಾಡಿದನು. ಅಷ್ಟರಲ್ಲಿ ಮೃತರಾದ ವಾನರರು, ಯೋಧರು, ರಾಮಾನುಗ್ರಹದಿಂದ ಎಚ್ಚರಗೊಂಡರು. ಲಕ್ಷ್ಮಣ ಭರತ ಶತ್ರುಘ್ನರೂ ಸಹ ಆ ಬಾಲಕರನ್ನು ಮುದ್ದಾಡಿದರು. ಲಕ್ಷ್ಮಣನು ಜಾನಕಿಯ ಹತ್ತಿರ ಹೋದನು. ರಾಮನು ಲಕ್ಷ್ಮಣನನ್ನು ಕರೆದು, "ತಮ್ಮಾ! ನನ್ನ ಮಾತನ್ನು ಕೇಳು. ನೀನು ಜಾನಕಿಯನ್ನು ಸಮೀಪಿಸಿ ಶಪಥವನ್ನು ಕುರಿತು ಆಕೆಯ ಉದ್ದೇಶವೇನೆಂದು ತಿಳಿದುಕೊ," ಎಂದು ಹೇಳಿದನು.

**ಸೀತಾದೇವಿಯು ಜನನಿಯ ಮನೆಗೆ ತೆರಳಿದಳು**: ಆತನು ಜಾನಕಿಯನ್ನು ಸಮೀಪಿಸಿ ಆಕೆಯ ಚರಣಗಳಿಗೆ ನಮಸ್ಕರಿಸಿದನು. ಶ್ರೀರಾಮನ ಇಚ್ಛಾನುಸಾರ ಜಾನಕಿ ಶಪಥವನ್ನು ಮಾಡಲು ಸಿದ್ಧವಾಗಿ ಲಕ್ಷ್ಮಣನೊಂದಿಗೆ ರಾಮನ ಸನ್ನಿಧಿಗೆ ಬಂದಳು. ಆಕೆ ಸಭ್ಯರನ್ನು ನೋಡಿ ಸತ್ಯವಾಗಿ ಹೀಗೆ ಪ್ರಮಾಣವನ್ನು ಮಾಡಿದಳು, "ಓ ದೇವತೆಗಳೇ! ಪಂಚಭೂತಗಳೇ! ಮನೋವಾಕ್ಕಾಯಕರ್ಮಗಳಿಂದ ಶ್ರೀರಾಮ ನನ್ನು ಬಿಟ್ಟು ಮತ್ತೊಬ್ಬ ಪುರುಷನನ್ನು ಸ್ವಪ್ನದಲ್ಲೂ ನಾನು ಧ್ಯಾನಿಸಲಿಲ್ಲ. ಓ

ತಾಯಿ! ಭೂದೇವಿ! ನನ್ನನ್ನು ನಿನ್ನಲ್ಲಿ ಐಕ್ಯವಾಗಿಸಿಕೋ," ಎಂದು ಜಾನಕಿ ಪ್ರಾರ್ಥಿಸಿ ಶ್ರೀರಾಮನ ಪಾದಗಳಿಗೆ ನಮಸ್ಕರಿಸಿದಳು. ತಕ್ಷಣವೆ ಪಟಪಟ ಎಂದು ಭೂದೇವಿ ಮೂರ್ತೀಭವಿಸಿ ಕೈಗಳನ್ನು ಚಾಚಿ ಜಾನಕಿಯನ್ನು ಎತ್ತಿಕೊಂಡು ಆಶೀರ್ವದಿಸಿದಳು. "ಜಾನಕಿ ಹುಟ್ಟಿದಂದಿನಿಂದ ಈವತ್ತಿನವರೆಗೆ ನೀನು ದುಃಖ ಪಡದ ದಿನವಿಲ್ಲ. ಎಲ್ಲ ವೇಳೆಯಲ್ಲೂ ನೀನು ಕಣ್ಣೀರನ್ನು ಸುರಿಸುತ್ತಿದ್ದೆ. ಬಾರಮ್ಮ! ನನ್ನ ಮನೆಯಲ್ಲಿ ಸುಖವಾಗಿರು," ಎಂದು ನುಡಿದಳು. ಮರುಕ್ಷಣವೇ ಅವರಿಬ್ಬರೂ ಕಣ್ಮರೆಯಾದರು. ಆಕೆಯ ಖ್ಯಾತಿ ಮೂರುಲೋಕಗಳಿಗೂ ವ್ಯಾಪಿಸಿತು.

**ವೈಕುಂಠಧಾಮ**: ಲಕ್ಷ್ಮಣಾದಿ ಅನುಜರು ಕಣ್ಣಾರೆ ನೋಡುತ್ತಿದ್ದರು. ಅವರು ಕಣ್ಣೀರು ಸುರಿಸಿದರು. ರಾಮನು ಚಿಂತಿಸಿದಂತೆ ನಟನೆ ಮಾಡಿದನು. ಜಾನಕಿ ನನ್ನ ಮನೋವ್ಯಾಪಾರವನ್ನನುಸರಿಸಿ ಹೊರಟಳು. ಆಕೆ ನನ್ನ ಮನಸ್ಸನ್ನು ಗ್ರಹಿಸಿ ಸಂತೋಷಪಡಿಸಿದಳು. ಇನ್ನು ನಾವು ನಮ್ಮ ವೈಕುಂಠಧಾಮಕ್ಕೆ ತೆರಳಬೇಕು ಎಂದು ಚಿಂತಿಸಿ, ದುಃಖಿತನಂತೆ ನಟನೆಮಾಡಿ ತಮ್ಮಂದಿರು, ಕುಮಾರರೊಂದಿಗೆ ಕೂಡಿ ರಾಜಧಾನಿಗೆ ಬಂದು ಯಜ್ಞವನ್ನು ಸಮಾಪ್ತಿ ಮಾಡಿದನು. ಅತನು ಮಾಡಿದ ಷೋಡಶ ಮಹಾದಾನಗಳನ್ನು ಯಾರೂ ವರ್ಣಿಸಲಾರದೆ ಹೋದರು.

ಶ್ರೀರಾಮನು ಜನಕ ಚಕ್ರವರ್ತಿಯನ್ನು ಸತ್ಕರಿಸಿ ಕುಮಾರರನ್ನು ಪರಿಚಯ ಮಾಡಿಸಿದನು. ಜನಕನು ಮೊಮ್ಮಕ್ಕಳನ್ನು ನೋಡಿ ಪರಮಾನಂದಭರಿತನಾದನು. ಆತನು ಮಹಾಜ್ಞಾನಿಯಾದ್ದರಿಂದ, ದಿವ್ಯದೃಷ್ಟಿಯಿಂದ ಸೀತೆಯ ದಿವ್ಯತ್ವವನ್ನು ಗುರುತಿಸಿದವನಾದ್ದರಿಂದ ಜರುಗಿದ್ದಕ್ಕೆ ಲವಲೇಶವೂ ಚಿತ್ತವಿಚಿತ್ತಿಗಳಿಲ್ಲದೆ, ಆಶ್ಚರ್ಯಾದ್ಭುತಗಳನ್ನು ತೋರಿಸದೆ, ಜರುಗಬೇಕಾದದ್ದು ಜರುಗಿದೆ ಎಂದು ಚಲಿಸದ ಮನಸ್ಸಿನಿಂದ, ಭ್ರಮಿಸದ ದೃಷ್ಟಿಯಿಂದ ತನಗೆಂತಹ ಭಾಗ್ಯವು ಲಭಿಸಿತಲ್ಲಾ ಎಂದು ಆನಂದಿಸಿದನು. ಆತನು ಮಿಥಿಲಾಪುರಕ್ಕೆ ಅಮಿತಾನಂದದಿಂದ ತೆರಳಿದನು. ಗುರುಗಳೂ ಬ್ರಾಹ್ಮಣರೂ ರಾಮನ ಇಚ್ಛೆಯ ಪ್ರಕಾರ ರಾಮನ ಸನ್ನಿಧಿಗೆ ಬಂದರು. ಈ ಪ್ರಕಾರ ಯಜ್ಞವನ್ನು ನೋಡಬಂದವರು ತಮ್ಮ ತಮ್ಮ ಮನೆಗಳಿಗೆ ಸಂತೋಷದಿಂದ ತೆರಳಿದರು.

ಆನಂತರ, ರಾಮನು ಕುಮಾರರನ್ನು ಕರೆದು, ಅವರಿಗೆ ರಾಜ ಧರ್ಮಗಳನ್ನು ಉಪದೇಶಿಸಿ ಅವರಿಗೆ ರಾಜ್ಯಪಟ್ಟವನ್ನು ಕಟ್ಟಿದನು. ಭರತನ ಕುಮಾರನಾದ ತಕ್ಷನಿಗೆ ದಕ್ಷಿಣ ರಾಜ್ಯವನ್ನಿತ್ತನು. ಭರತನ ಎರಡನೆಯ ಕುಮಾರನಾದ ಪುಷ್ಕರನಿಗೆ, ಪುಷ್ಕರ ನಗರ ರಾಜ್ಯವನ್ನಿತ್ತನು. ರಾಕ್ಷಸರನ್ನು ಸಂಹರಿಸಿ ಅವರು ನಗರಗಳನ್ನು ಸ್ಥಾಪಿಸಿದರು. ಲಕ್ಷ್ಮಣನ ಕುಮಾರರಾದ ಚಿತ್ರಕೇತು, ಚಿತ್ರಾಂಗದರು ಮಹಾ

ಬಲವಂತರು. ಇವರು ರಣಧೀರರು. ಪಶ್ಚಿಮ ರಾಜ್ಯದಲ್ಲಿ ರಾಕ್ಷಸರನ್ನು ಸಂಹರಿಸಿ ನಗರವನ್ನು ಸ್ಥಾಪಿಸಿದರು. ಬೇರೆ ಬೇರೆ ಹೆಸರುಗಳುಳ್ಳ ಎರಡು ನಗರಗಳನ್ನು ರಾಮನು ಲಕ್ಷ್ಮಣನ ಕುಮಾರರಿಗೆ ಕೊಟ್ಟು ಪಟ್ಟವನ್ನು ಕಟ್ಟಿದನು. ಎಲ್ಲರಿಗೂ ರಾಜಧರ್ಮವನ್ನು ಉಪದೇಶಿಸಿದನು. ಅಯೋಧ್ಯಾ ನಗರವನ್ನು ಕುಶನಿಗಿತ್ತು ಪಟ್ಟವನ್ನು ಕಟ್ಟಿದನು. ಉತ್ತರಖಂಡದ ಭೂಮಿಯು ಸಕಲ ಸಂಪದಗಳಿಗೂ ಮೂಲ. ಅಲ್ಲಿ, ಲವಪುರವನ್ನು[◠] ರಾಜಧಾನಿಯಾಗಿ ಮಾಡಿ, ಅದನ್ನು ಲವನಿಗೆ ಪಟ್ಟಕಟ್ಟಿದನು. ಕಿಷ್ಕಿಂಧಾ ರಾಜ್ಯವನ್ನು ಅಂಗದನಿಗೆ ಕೊಟ್ಟನು.

ಗೋವುಗಳು, ಭೂಮಿಗಳು, ವಸ್ತ್ರಗಳು, ಧನ, ಗೃಹಗಳು ಈ ವಿಧವಾಗಿ ಶ್ರೀರಾಮನು ಅವರವರಿಗೆ ಸಾಕಷ್ಟು ನೀಡಿದನು. ರಾಮನು ಸ್ವಧಾಮಕ್ಕೆ ಹಿಂದಿರುಗುತ್ತಿರುವನೆಂಬ ವಾರ್ತೆಯನ್ನು ಪುರಜನರು ಕೇಳಿ, ಅವನ ಬಳಿಗೆ ಬಂದು, "ನಮ್ಮ ಬಿನ್ನಹಗಳನ್ನು ಆಲಿಸು," ಎಂದು ಪ್ರಾರ್ಥಿಸಿದರು. "ನಮ್ಮನ್ನು ಕೂಡ ತಮ್ಮೊಡನೆ ತಮ್ಮ ಲೋಕಕ್ಕೆ ಒಯ್ಯಿರಿ," ಎಂದು ಪ್ರಾರ್ಥಿಸಿದರು. ರಾಮನು ಅಕ್ಕೆ ಸಮ್ಮತಿಸಿ ಅವರ ಅನುರಾಗಕ್ಕೆ, ಪ್ರಭು ಭಕ್ತಿಗೆ ಸಂತಸಗೊಂಡನು. ಸುಗ್ರೀವ, ಜಾಂಬವಂತ, ವಿಭೀಷಣ, ನಲ, ನೀಲ ಮೊದಲಾದ ದೇವಾಂಶ ಸಂಭೂತರು, ಕೋಟಿಗಟ್ಟಲೆ ವಾನರರು, ಆ ಸಮಯಕ್ಕೆ ಶ್ರೀರಾಮನ ಬಳಿಗೆ ಬಂದರು. ಅವರೆಲ್ಲರನ್ನೂ ಕರೆದು, "ವಿಭೀಷಣ! ನೀನು ಲಂಕಾರಾಜ್ಯವನ್ನು ಪರಿಪಾಲಿಸು. ಅಂತ್ಯದಲ್ಲಿ ನಿನಗೆ ನನ್ನ ಸಾನ್ನಿಧ್ಯ ಲಭಿಸುವುದು," ಎಂದು ಆಶೀರ್ವದಿಸಿದನು.

ಜಾಂಬವಂತ! ದ್ವಾಪರಯುಗಾಂತದವರೆಗೆ ನೀನು ಭೂಲೋಕದಲ್ಲಿರು. ಅಗ ನಾನು, ಕೃಷ್ಣಾವತಾರಿಯಾಗಿ ನಿನ್ನೊಡನೆ ಹೋರಾಡುವೆನು. ಆಗ ನೀನು ನನ್ನನ್ನು ಗುರುತಿಸುವೆ," ಎಂದು ಆಶೀರ್ವದಿಸಿದನು. ತರುವಾಯ, ಲಕ್ಷ್ಮಣನು ಪುರಜನರೊಂದಿಗೆ ಸರಯೂ ತೀರಕ್ಕೆ ಬಂದು ಸೇರಿದನು. ರಾಮನ ಬಲಪಕ್ಕದಲ್ಲಿ ಭರತನೂ ಎಡಪಕ್ಕದಲ್ಲಿ ಶತ್ರುಘ್ನನೂ ಅವರ ಹಿಂದೆ ಮಂತ್ರಿಗಳೂ ಪುರಜನರೂ ಕ್ರಮವಾಗಿ ನಡೆದರು. ರಾಮಲಕ್ಷ್ಮಣರು ಸರಯೂ ನದಿಯನ್ನು ಪ್ರವೇಶಿಸಿದರು. ಭರತನು ರಾಮನಲ್ಲಿ ಲೀನವಾದನು. ಶತ್ರುಘ್ನನು ಜಲವನ್ನು ಸ್ಪರ್ಶಿಸಿ ಪದ್ಮದಲ್ಲಿ ಪ್ರಕಾಶಿಸುತ್ತಾ ಶ್ರೀಪತಿಯಲ್ಲಿ ಲೀನವಾದನು.

ಶ್ರೀರಾಮನು, "ಈ ಪುಣ್ಯಭೂಮಿಗೆ ಬಂದವರೆಲ್ಲರೂ ಪವಿತ್ರವಾದ ಸರಯೂ ನದಿಯಲ್ಲಿ ಸ್ನಾನಮಾಡಿದವರೆಲ್ಲರೂ ನನ್ನನ್ನು ಸೇರುವರು," ಎಂದು ಸ್ವಧಾಮಕ್ಕೆ ತೆರಳುವ ಮುನ್ನ ಆಶೀರ್ವದಿಸಿದನು.

---

[◠] ಈಗಿನ ಲಾಹೋರ್

✍ ಟಿಪ್ಪಣಿ

✍ ಟಿಪ್ಪಣಿ

# ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ (ರೆ)

'ಸುಧಾಮ ಹೌಸ್', ಚಿಕ್ಕಪೇಟೆ, ಬೆಂಗಳೂರು ೫೬೦೦೫೩ ✆ 2226-9694, 2226-8201

## ಪ್ರಕಟಣೆಗಳು

| # | ಶೀರ್ಷಿಕೆ | ₹ | # | ಶೀರ್ಷಿಕೆ | ₹ |
|---|---|---|---|---|---|
| 1 | ಸತ್ಯಂ ಶಿವಂ ಸುಂದರಂ – ಭಾಗ ೧ | 120 | 38 | ಶ್ರೀ ಸಾಯಿ ಸಂಕೀರ್ತನ | 10 |
| 2 | ಸತ್ಯಂ ಶಿವಂ ಸುಂದರಂ – ಭಾಗ ೨ | 72 | 39 | ಶ್ರೀ ಸತ್ಯಸಾಯಿ ಎಜುಕೇರ್ | 10 |
| 3 | ಸತ್ಯಂ ಶಿವಂ ಸುಂದರಂ – ಭಾಗ ೩ | 25 | 40 | ಭಕ್ತರಿಗೆ ಶ್ರೀ ಸತ್ಯಸಾಯಿ ಎಜುಕೇರ್ | 10 |
| 4 | ಸತ್ಯಂ ಶಿವಂ ಸುಂದರಂ – ಭಾಗ ೪ | 26 | 41 | ಬಾಲ ವಿಕಾಸ – ೧ | 35 |
| 5 | ಸತ್ಯಂ ಶಿವಂ ಸುಂದರಂ – ಭಾಗ ೫ | 65 | 42 | ಬಾಲ ವಿಕಾಸ – ೨ | 45 |
| 6 | ಸತ್ಯಂ ಶಿವಂ ಸುಂದರಂ – ಭಾಗ ೬ | 105 | 43 | ಬಾಲ ವಿಕಾಸ – ೩ | 70 |
| 7 | ಸತ್ಯಂ ಶಿವಂ ಸುಂದರಂ – ಭಾಗ ೭ | 130 | 44 | ಬಾಲ ವಿಕಾಸ ೧–೩ರ ಅನುಬಂಧ | 20 |
| 8 | ಶ್ರೀ ಸತ್ಯಸಾಯಿ ವಾಣಿ – ಭಾಗ ೧ | 35 | 45 | ಬಾಲವಿಕಾಸ ಗುರುಗಳ ಕೈಪಿಡಿ | 15 |
| 9 | ಶ್ರೀ ಸತ್ಯಸಾಯಿ ವಾಣಿ – ಭಾಗ ೨ | 35 | 46 | ಈಶ್ವರಮ್ಮ | 40 |
| 10 | ಶ್ರೀ ಸತ್ಯಸಾಯಿ ವಾಣಿ – ಭಾಗ ೩ | 30 | 47 | ಶ್ರೀ ಕೃಷ್ಣ – ಶ್ರೀ ಸತ್ಯಸಾಯಿ | 40 |
| 11 | ಶ್ರೀ ಸತ್ಯಸಾಯಿ ವಾಣಿ – ಭಾಗ ೪ | 46 | 48 | ಸಾಧನಾ, ಅಂತರ್ಮುಖಿ ಯಾತ್ರೆ | 38 |
| 12 | ಶ್ರೀ ಸತ್ಯಸಾಯಿ ವಾಣಿ – ಭಾಗ ೫ | 53 | 49 | ಭರವಸೆಯ ಹೊಂಗಿರಣ | 32 |
| 13 | ಶ್ರೀ ಸತ್ಯಸಾಯಿ ವಾಣಿ – ಭಾಗ ೬ | 25 | 50 | ಶ್ರೀ ಸತ್ಯಸಾಯಿ ಹೃದಯಸ್ಥಾಯಿ | 22 |
| 14 | ಶ್ರೀ ಸತ್ಯಸಾಯಿ ವಾಣಿ – ಭಾಗ ೭ | 30 | 51 | ಪ್ರಶಾಂತಿ ನಿಲಯಂ | 8 |
| 15 | ಶ್ರೀ ಸತ್ಯಸಾಯಿ ವಾಣಿ – ಭಾಗ ೮ | 35 | 52 | ವಾಕ್ಯ–ವಿಭೂತಿ | 10 |
| 16 | ಸತ್ಯಸಾಯಿ ವಾಹಿನಿ | 55 | 53 | ಸ್ವಾಮಿಯೆಡೆಗೆ ತಡೆಯೋಟ | 8 |
| 17 | ವಿದ್ಯಾ ವಾಹಿನಿ | 20 | 54 | ಹೆತ್ತವರ–ಪಾಲಕತ್ವದ ಪಾತ್ರ | 10 |
| 18 | ಜ್ಞಾನ ವಾಹಿನಿ | 15 | 55 | ಶ್ರೀ ಗುರುಚರಣ | 15 |
| 19 | ಉಪನಿಷತ್ ವಾಹಿನಿ | 20 | 56 | ಸಾಯಿತ್ರೀ | 30 |
| 20 | ಧ್ಯಾನ ವಾಹಿನಿ | 20 | 57 | ಶ್ರೀ ಸತ್ಯಸಾಯಿ ಅಷ್ಟೋತ್ತರಶತ | |
| 21 | ಪ್ರೇಮ ವಾಹಿನಿ | 20 | | ರತ್ನಮಾಲೆ | 18 |
| 22 | ಪ್ರಶಾಂತಿ ವಾಹಿನಿ | 20 | 58 | ಜ್ಯೋತಿರ್ಧ್ಯಾನ | 13 |
| 23 | ಪ್ರಶ್ನೋತ್ತರ ವಾಹಿನಿ | 20 | 59 | ಭಗವಲ್ಲೀಲಾ | 35 |
| 24 | ಧರ್ಮ ವಾಹಿನಿ | 25 | 60 | ಚಮತ್ಕಾರ ವಾಣಿ | 15 |
| 25 | ಸಂದೇಹ ನಿವಾರಿಣಿ | 25 | 61 | ಕೋऽಹಂ ? ಸೋऽಹಂ ! | 15 |
| 26 | ಸೂತ್ರ ವಾಹಿನಿ | 20 | 62 | ನೀತಿ ಪಾಠಗಳು | 30 |
| 27 | ಲೀಲಾ ಕೈವಲ್ಯ ವಾಹಿನಿ | 10 | 63 | ಸಂಧ್ಯಾವಂದನ ವಿಧಿ | 10 |
| 28 | ಭಾಗವತ ವಾಹಿನಿ | 60 | 64 | ಭಜನೆಗಳು | 10 |
| 29 | ಗೀತಾ ವಾಹಿನಿ | 50 | 65 | ಶ್ರೀ ಸತ್ಯಸಾಯಿ ಹೃದಯಸ್ಥಾಯಿ | |
| 30 | ರಾಮಕಥಾರಸ ವಾಹಿನಿ | 120 | | (ಸಾರ ಸಂಗ್ರಹ) | 11 |
| 31 | ಶ್ರೀ ಸತ್ಯಸಾಯಿ ಆನಂದದಾಯಿ | 50 | 66 | ಆತ್ಮಾವಲೋಕನ | 10 |
| 32 | ಶ್ರೀ ಸತ್ಯಸಾಯಿ ಆರಾಧನಾ | | 67 | ಅವತಾರ ಘೋಷಣೆ | 12 |
| | ಸ್ತೋತ್ರ ಸೌರಭ | 12 | 68 | ಶ್ರೀ ಸತ್ಯಸಾಯಿ ಪೂಜಾ ವಿಧಿ | 21 |
| 33 | ಶ್ರೀ ಸತ್ಯಸಾಯಿ ಸಂಸ್ಥೆ (ಭಾರತ) – | | 69 | ರಸಪ್ರಶ್ನೆಗಳು ಶ್ರೀ ಸತ್ಯಸಾಯಿ ಬಾಬಾ | 20 |
| | ನಿಯಮ ಮತ್ತು ನಿಬಂಧನೆಗಳು | 40 | 70 | ರಸಪ್ರಶ್ನೆಗಳು ರಾಮಾಯಣ | 16 |
| 34 | ಶ್ರೀ ಸತ್ಯಸಾಯಿ ದೃಷ್ಟಾಂತ ಸೌರಭ | 15 | 71 | ರಸಪ್ರಶ್ನೆಗಳು ಮಹಾಭಾರತ | 17 |
| 35 | ಸೂಕ್ತಿ ಸೌರಭ – ಭಾಗ ೧ | 10 | 72 | ರಸಪ್ರಶ್ನೆಗಳು ಭಾಗವತ | 17 |
| 36 | ಸೂಕ್ತಿ ಸೌರಭ – ಭಾಗ ೨ | 25 | 73 | ರಸಪ್ರಶ್ನೆಗಳು ಭಗವದ್ಗೀತೆ | 9 |
| 37 | ಸಾಯಿ ಭಜನೆಗೆ ಮಾರ್ಗದರ್ಶಿ | | 74 | ತ್ವಮೇವ ಮಾತಾ | 20 |
| | ಸೂತ್ರಗಳು | 10 | | ಮುಂದುವರಿದಿದೆ ... | |

ಪ್ರತಿಗಳ ಲಭ್ಯತೆಯನ್ನು ಸೊಸೈಟಿಯ ಕಛೇರಿಯಲ್ಲಿ ವಿಚಾರಿಸುವುದು.

# ಶ್ರೀ ಸತ್ಯಸಾಯಿ ಪಬ್ಲಿಕೇಷನ್ಸ್ ಸೊಸೈಟಿ (ರೆ)

‘ಸುಧಾಮ ಹೌಸ್’, ಚಿಕ್ಕಪೇಟೆ, ಬೆಂಗಳೂರು ೫೬೦೦೫೩ ✆ 2226-9694, 2226-8201

## ಪ್ರಕಟಣೆಗಳು

| # | ಶೀರ್ಷಿಕೆ | ₹ | # | ಶೀರ್ಷಿಕೆ | ₹ |
|---|---|---|---|---|---|
| 75 | ನನ್ನ ಆಧ್ಯಾತ್ಮಿಕ ದಿನಚರಿ | 10 | 94 | Sri Sathya Sai, The Indweller | 15 |
| 76 | ಉತ್ಕೃಷ್ಟತೆಯೆಡೆಗೆ ನನ್ನ ವಿಕಾಸ | 8 | 95 | Guidelines for Sai Bhajans | 10 |
| 77 | ಅಮರಪುರಿಯ ಆನಂದ ಯಾತ್ರೆ | 10 | 96 | Balavikas - 1 | 35 |
| 78 | ಪರಮ ವೈದ್ಯ | 28 | 97 | Balavikas - 2 | 60 |
| 79 | ಶ್ರೀ ಸತ್ಯಸಾಯಿ ಪರಮಸುಖದಾಯಿ | 45 | 98 | Balavikas - 3 | * |
| 80 | ಯುಗಾವತಾರಿ ಶ್ರೀ ಸತ್ಯಸಾಯಿ | 60 | 99 | Supplement to Balavikas 1 | 10 |
| 81 | ನನ್ನ ನೆಚ್ಚಿನ ಬಾಬಾ | 45 | 100 | Supplement to Balavikas 2 | 10 |
| 82 | ಸೇವೆಯೇ ಸಾಧನೆ | 31 | 101 | Supplement to Balavikas 3 | 10 |
| 83 | ಶ್ರೀ ಸತ್ಯಸಾಯಿ ಗೀತೆ | 36 | 102 | Sri Sathya Sai Educare | 10 |
| 84 | ವಿದ್ಯಾ ಸಂಸ್ಥೆಗಳಲ್ಲಿ ನೈತಿಕ ವಿದ್ಯೆಯ ಅವಶ್ಯಕತೆ | 10 | 103 | Sai Educare for Devotees | 10 |
| 85 | ವೇದ ಮಂಜರಿ | 60 | 104 | Sandhyavandana Vidhi | 10 |
| 86 | ವೇದ ಮಂತ್ರಗಳು (ಬಾಲವಿಕಾಸ ಮಕ್ಕಳಿಗಾಗಿ) | 30 | 105 | Sainama Kirtana Kaliyuga Sadhana | 100 |
| 87 | ಶ್ರೀ ಸತ್ಯಸಾಯಿ ಸಂಸ್ಥೆಗಳ ಮಾರ್ಗದರ್ಶಿ ಸೂತ್ರಗಳು | 25 | 106 | Educare, Veda of Twenty First Century | 60 |
| 88 | ಶ್ರೀ ಸತ್ಯಸಾಯಿ ಮಧುರ ಸ್ಮೃತಿ | 60 | 107 | Namo Namah Sri Guru Padukabyam | 60 |
| 89 | ಭಾರತದ ಸಂತರು | 50 | 108 | Sri Sathya Sai Balvikas: The Pathway to Excellence–2 | * |
| 90 | ಶ್ರೀ ಸತ್ಯಸಾಯಿ ಮುರುಗನ ಕರುಣಾಮೃತ | 40 | 109 | Brindamrutam | 225 |
| 91 | ದಿವ್ಯ ಪಥ ಭಾಗ – ೧ | 50 | 110 | Sri Sathya Sai Madhura Smrithi | 90 |
| 92 | ಹರಿ ಭಜನ ಬಿನಾ | 30 | 111 | Bhagavallila | 35 |
| 93 | ಒಂದು ದಿವ್ಯ ಜೀವನ | 63 | | | |

ಪ್ರತಿಗಳ ಲಭ್ಯತೆಯನ್ನು ಸೊಸೈಟಿಯ ಕಛೇರಿಯಲ್ಲಿ ವಿಚಾರಿಸುವುದು.